*Pandit Teaches the Bible Series*

# Let’s Read the Book of Acts!

## Kannada Edition

Author: T. Pandit

Illustrations: S.B.

Translator: P. Prakash

Layout: Genie Cliff

## About the book

This book is a college level textbook prepared a few years ago for a Bible college in South India.

It can also be used for Bible study groups in local churches and for individual students of the Bible. It was written it with the South Indian Christian context in mind.

T. Pandit has many years of experience as an educationist, a Bible teacher and a college principal, in India as well as in internationally. He is now retired.

S.B. is an artist based in Europe. He works as a graphic designer for an international company.

P. Prakash pastors a church in Karnataka.

July 2018

## Copyright waiver

The authors of this work hereby waive all claim of copyright (economic and moral) in this work and immediately place it in the public domain. It may be used, distorted or destroyed in any manner whatsoever without further attribution or notice to the creators.

The authors of this work would, **however**, object to to any republishing of this work in its entirety for the purposes of financial gain.

ಕನ್ನಡ ಸತ್ಯವೇದ ಮಹಾವಿದ್ಯಾಲಯ ಪಠ್ಯಪುಸ್ತಕ ಸರಣಿ

# ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಓದೋಣ!

***ಮೊದಲ ಕನ್ನಡ ಆವೃತ್ತಿ***


ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಲೇಖಕರು

**ಟಿ. ಪಂಡಿತ್**

ಅನುವಾದಕರು

**ಆರ್. ಪ್ರಕಾಶ್ ನಾಯ್ಕ್**

# Lets Read the Book of Acts! (Kannada Edition)

*by* **T. Pandit**

T. Pandit has many years of experience as an educationist, a Bible teacher and a college principal. He has been closely involved with Kannada Satyaveda College since its beginning in 2006.

Copyright © 2012 by Kannada Satyaveda College
Davangere, India
*e-mail:* ksc.ffpck@gmail.com
*Website:* www.ksc1.webs.com

*Illustrations*
**Mr Sarbasst Braian**

*Cover design & layout*
**Genie Cliff** ⓓJLF.inc

This book has been produced in
few copies for private use.
It is not for sale.

ಎಲ್ಲಾ ಸತ್ಯವೇದ ವಚನಗಳನ್ನು
ನ್ಯೂ ಇಂಡಿಯಾ ಬೈಬಲ್ ವರ್ತನ್‌ನಿಂದ
ತೆಗೆದುಕೊಳ್ಳಲಾಗಿದೆ.

*****

# ಮುನ್ನುಡಿ

ಈ ಮಹಾವಿದ್ಯಾಲಯ ಮಟ್ಟದ ಪಠ್ಯಪುಸ್ತಕವು ದಕ್ಷಿಣ ಭಾರತದಲ್ಲಿನ ಸತ್ಯವೇದ ಮಹಾವಿದ್ಯಾಲಯಗಳಿಗಾಗಿ ಸಿದ್ಧಮಾಡಲ್ಪಟ್ಟಿದೆ. ಈ ಪಠ್ಯಪುಸ್ತಕವು ಕನ್ನಡ ಭಾಷಾಂತರದ ಆವೃತ್ತಿಯಾಗಿದೆ. ಈ ಪಠ್ಯಪುಸ್ತಕವು ಆಂಗ್ಲ ಆವೃತ್ತಿಯಲ್ಲಿಯೂ ಲಭ್ಯವಿದೆ. ಈ ಪಠ್ಯಪುಸ್ತಕವು ಕರ್ನಾಟಕ ರಾಜ್ಯದ ದಾವಣಗೆರೆ ಜಿಲ್ಲೆಯಲ್ಲಿರುವ ಕನ್ನಡ ಸತ್ಯವೇದ ಮಹಾವಿದ್ಯಾಲಯಕ್ಕಾಗಿ ಸಿದ್ಧಮಾಡಲ್ಪಟ್ಟು, ಅದೇ ಮಹಾವಿದ್ಯಾಲಯದಲ್ಲಿ ಬಳಸಲಾಗುತ್ತಿದೆ.

ಹಾಗಾದರೆ ಇದು ಯಾವ ರೀತಿಯ ಪಠ್ಯಪುಸ್ತಕವಾಗಿದೆ?

1. ಇದು ವಾಚಕವಾದದ್ದು: ಅಪೊಸ್ತಲರ ಕೃತ್ಯಗಳ 73 ಕಥೆಗಳನ್ನೂ ವಿಧ್ಯಾರ್ಥಿಗಳು ತಿಳುವಳಿಕೆಯೊಂದಿಗೆ ಓದಬೇಕೆಂದು ಅಪೇಕ್ಷಿಸಲ್ಪಟ್ಟಿದೆ. ವಿಧ್ಯಾರ್ಥಿಗಳು ತಾವು ಓದಿದಂತವುಗಳ ಕುರಿತು ಆಲೋಚಿಸಲು ಮತ್ತು ತಮ್ಮ ಸನ್ನಿವೇಶಗಳಿಗೆ ಅನ್ವಯಿಸಿಕೊಳ್ಳಲು ಈ ಪುಸ್ತಕದಲ್ಲಿರುವ ನೂರಾರು ಪ್ರಶ್ನೆಗಳು ಅವರನ್ನು ಪ್ರೋತ್ಸಾಹಿಸುತ್ತವೆ. ಅದು ಮಾತ್ರವಲ್ಲದೆ ತಮ್ಮ ಸ್ವಂತ ಆಲೋಚನೆಗಳನ್ನು ಮತ್ತು ಆಚಾರಗಳನ್ನು ಆದಿ ಕ್ರೈಸ್ತಸಭೆಯ ಬೆಳಕಿನಲ್ಲಿ ಕಾಣಲು ಅವುಗಳು ಸಹಾಯ ಮಾಡುತ್ತವೆ.
2. ಇದು ಒಂದು ಪಠ್ಯಪುಸ್ತಕವಾಗಿದೆ: ಈ ಪಠ್ಯಪುಸ್ತಕವು ಪಾಶ್ಚಾತ್ಯ ಜಗತ್ತಿನ ಮತ್ತು ಉನ್ನತ ಶಿಕ್ಷಣದ ಜ್ಞಾನವನ್ನು ಹೊಂದದ ಗ್ರಾಮೀಣ ಸತ್ಯವೇದದ ವಿಧ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಬರೆಯಲ್ಪಟ್ಟಿದೆ. ಅದು ಮಾತ್ರವಲ್ಲದೆ, ಈ ಪಠ್ಯಪುಸ್ತಕವು ಅನುಭವರಹಿತ ಮತ್ತು ಬಹುಶಃ ಅಸುರಕ್ಷಿತವುಳ್ಳ ಸತ್ಯವೇದ ಉಪದೇಶಕರನ್ನೂ ಸಹ ಗಮನದಲ್ಲಿರಿಸಿಕೊಂಡು ಬರೆಯಲ್ಪಟ್ಟಿದೆ. ನಾನು ನನ್ನ ಸ್ವಂತ ಪ್ರಶ್ನೆಗಳನ್ನು ಉತ್ತರಿಸಿದ್ದೇನೆ ಮತ್ತು ಸಾಕಷ್ಟು ವಿವರಣೆಯನ್ನು ಸಹ ನೀಡಿದ್ದೇನೆ. ಆದಾಗ್ಯೂ ಇದು ಒಂದು ಸವಾಲನ್ನೊಡ್ಡುವ ಪಠ್ಯಪುಸ್ತಕವಾಗಿದೆ. ಇದರಲ್ಲಿ ಕೇಳಲ್ಪಟ್ಟಿರುವ ಅನೇಕ ಪ್ರಶ್ನೆಗಳು ಉತ್ತರಿಸಲು ಕಠಿಣವಾದ್ದುದ್ದಾಗಿದೆ ಮತ್ತು ಇದರಲ್ಲಿ ಚರ್ಚಿಸಲ್ಪಟ್ಟಿರುವ ಕೆಲವು ವಿಷಯಗಳು ಬಹಳ ಸಂಕೀರ್ಣಮಯವಾದುದ್ದಾಗಿದೆ – ಅಥವಾ ವಿವಾದಾಸ್ಪದವಾದದ್ದೂ ಸಹ ಆಗಿದೆ.
3. ಇದು ಒಂದು ಕೈಪಿಡಿಯಾಗಿದೆ ಮತ್ತು ಸಂಪನ್ಮೂಲವಾಗಿದೆ: ಈ ಪಠ್ಯಪುಸ್ತಕವು ಸತ್ಯವೇದ ಮಹಾವಿದ್ಯಾಲಯದಿಂದ ಪದವೀದರರಾಗಿ ಹೊರಬಂದು ಹಲವು ವರ್ಷಗಳನ್ನು ಕಳೆದ ಸುವಾರ್ತಿಕರು, ಸಭಾಪಾಲಕರುಗಳು ಮತ್ತು ಸತ್ಯವೇದ ಬೋಧಕರಾಗಿರುವವರಿಗೆ ಒಂದು ಸಂಪನ್ಮೂಲವಾಗುವ ರೀತಿಯಲ್ಲಿ ಬರೆಯಲ್ಪಟ್ಟಿದೆ. ಈ ಪುಸ್ತಕದಲ್ಲಿ ರಚಿಸಲ್ಪಟ್ಟ ಹೊರರೇಖೆಗಳನ್ನು ಸತ್ಯವೇದದ ಅಧ್ಯಯನಗಳಿಗಾಗಿ ಮತ್ತು ಸಂದೇಶಗಳಿಗಾಗಿ ಉಪಯೋಗಿಸಬಹುದು ಮತ್ತು ಅಳವಡಿಸಿಕೊಳ್ಳಬಹುದು. ಮುಂಬರುವ ಅನೇಕ ವರ್ಷಗಳಿಗಾಗಿ ಈ ಪುಸ್ತಕದಲ್ಲಿ ಚರ್ಚಿಸಲ್ಪಟ್ಟಿರುವ ಅನೇಕ ವಿಷಯಗಳು ಆಲೋಚನೆಗೂ ಮತ್ತು ಕ್ರಿಯೆಗೂ ಅಂಶಗಳನ್ನು ಒದಗಿಸುತ್ತವೆ. ಈ ಪುಸ್ತಕವು ಕೇವಲ ಹುರುಳಿಲ್ಲದೆ ಒಮ್ಮೆ ಓದಲ್ಪಡುವಂತದ್ದಾಗಿರದೆ, ವಾಚಕನು ಪುನಃ ಇದನ್ನು ಓದುವಂತೆಯೂ ಅದರಿಂದ ಉತ್ತೇಜನ ಹೊಂದುವಂತೆಯೂ ಆಗಬೇಕೆಂಬುದೇ ನನ್ನ ಬಯಕೆಯಾಗಿದೆ.
4. ಇದು ದಕ್ಷಿಣ ಭಾರತದ ಹಿನ್ನಲೆಯುಳ್ಳದ್ದು: ದಕ್ಷಿಣ ಭಾರತದ ವಿದ್ಯಾರ್ಥಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಪುಸ್ತಕವು ಬರೆಯಲ್ಪಟ್ಟಿದೆ. ಇದರಲ್ಲಿನ ವಿಷಯಗಳು ಅಂತರ್ ರಾಷ್ಟ್ರೀಯವಾಗಿರುವದಕ್ಕಿಂತಲೂ ಹೆಚ್ಚಾಗಿ ದಕ್ಷಿಣ ಭಾರತೀಯವಾಗಿದೆ.

5. ಇದು ಪಂಚಾಶತ್ತಮವಾದದ್ದು/ಸುವಾರ್ತಿಕವಾದದ್ದು: ಈ ಪುಸ್ತಕದ ಲೇಖಕನು ತನ್ನ ಉದ್ಯೋಗದ ಹೆಚ್ಚಿನ ವರ್ಷಗಳನ್ನು ಪೆಂತಕೋಸ್ತ ಸೇವೆಗಳಲ್ಲಿ ಒಬ್ಬ ಸತ್ಯವೇದ ಉಪದೇಶಕನಾಗಿಯೂ ಮತ್ತು ಆಡಳಿತಗಾರನಾಗಿಯೂ ಕಳೆದಿರುವ ಮೂರನೇ ತಲೆಮಾರಿನ ಪೆಂತಕೋಸ್ತನಾಗಿದ್ದಾನೆ. ಈ ಪುಸ್ತ ಕವು ಸಿದ್ಧಮಾಡಲ್ಪಟ್ಟ ಸತ್ಯವೇದ ಮಹಾವಿದ್ಯಾಲಯವೂ ಪೆಂತಕೋಸ್ತವಾದದ್ದು. ಆದರೂ ಈ ಪುಸ್ತಕವು ಒಂದು ಸಂಕುಚಿತ ದೃಷ್ಟಿಕೋನದ ಅರ್ಥದಲ್ಲಿ ಪೆಂತಕೋಸ್ತವಾದುದ್ದಾಗಿರಬಾರದೆಂದು ನಾನು ಬಯಸುತ್ತೇನೆ. ಪಠ್ಯವನ್ನು ಪರಿಶೀಲಿಸಿರುವ ಮತ್ತು ಸಮಸ್ಯೆಗಳನ್ನು ಚರ್ಚಿಸಿರುವ ರೀತಿಯು ಸಂಪೂರ್ಣವಾಗಿ ಸುವಾರ್ತಿಕವಾದುದ್ದೆಂದು ನಿರೀಕ್ಷಿಸುತ್ತೇನೆ. ಸತ್ಯವೇದವು ಇಂದು ನಿಜವಾಗಲೂ ನಮಗೆ ದೇವರ ವಾಕ್ಯವಾಗಿದೆ.

ಈ ರೀತಿಯ ಪಠ್ಯಪುಸ್ತಕವನ್ನು ಸಿದ್ಧಗೊಳಿಸಲು ಸಂಪನ್ಮೂಲದ ಅವಶ್ಯಕತೆಯಿದೆ. ಖಂಡಿತವಾಗಲೂ ನಾನು ಅನೇಕ ಸತ್ಯವೇದ ನಿಘಂಟುಗಳ, ಪ್ರಮಾಣಗ್ರಂಥಗಳ ಮತ್ತು ವ್ಯಾಖ್ಯಾನ ಗ್ರಂಥಗಳ ಸಲಹೆಯನ್ನು ಪಡೆದಿದ್ದೇನೆ ಮತ್ತು ಕೆಲವೆಡೆ ಅದನ್ನು ಬಳಸಿದ್ದೇನೆ. ನಿಸ್ಸಂದೇಹವಾಗಿ ನಾನು ಅನೇಕ ಸತ್ಯವೇದ ಶಾಸ್ತ್ರಜ್ಞರ ಹಂಗಿನಲ್ಲಿದ್ದೇನೆ.

ಅಂತಿಮವಾಗಿ, ಈ ಮಹಾವಿದ್ಯಾಲಯ ಪಠ್ಯಪುಸ್ತಕವು ದಕ್ಷಿಣ ಭಾರತದ ಸುವಾರ್ತಿಕರು, ಸಭಾಪಾಲಕರುಗಳು ಮತ್ತು ಸತ್ಯವೇದ ಬೋಧಕರುಗಳಿಗೆ ಉಪಯೋಗಕರವಾಗಿರುವುದೆಂದು ನಾನು ನಿರೀಕ್ಷಿಸುತ್ತೇನೆ. ಅದು ಮಾತ್ರವಲ್ಲದೆ ದೇವರ ವಾಕ್ಯವನ್ನು ಪ್ರಾಮಾಣಿಕವಾಗಿ ಕಲಿಯಲು ಬಯಸುವ ಸಾಧಾರಣ ವಿದ್ಯಾರ್ಥಿಗೂ ಉಪಯೋಗಕರವಾಗಿರುವುದೆಂದು ನಾನು ನಿರೀಕ್ಷಿಸುತ್ತೇನೆ.

ಟಿ. ಪಂಡಿತ
ದಕ್ಷಿಣ ಭಾರತ, ಜೂನ್ 2011

# ವಿಷಯಾನುಕ್ರಮಣಿಕೆ

**ಪೀಠಿಕೆ** **13**

## ನಕ್ಷೆಗಳು

ಪಂಚಾಶತ್ತಮ ದಿನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಜನರ ದೇಶಗಳು 23

ಫಿಲಿಪ್ಪ ಮತ್ತು ಪೇತ್ರನ ಸೇವಾ ಪ್ರಯಾಣಗಳು 25

ಪೌಲನ ಮೊದಲ ಸೇವಾ ಪ್ರಯಾಣ 27

ಪೌಲನ ಎರಡನೆಯ ಸೇವಾ ಪ್ರಯಾಣ 29

ಪೌಲನ ಮೂರನೆಯ ಸೇವಾ ಪ್ರಯಾಣ 31

ರೋಮ್‌ಗೆ ಪೌಲನ ಪ್ರಯಾಣ 33

## ಭಾಗ 1

## ಯೆರೂಸಲೇಮಿನಲ್ಲಿ: ಅ. ಕೃ. 1:1 – 6:7

ಪೀಠಿಕೆ 37

ಪಾಠ 1. ಯೇಸು ಪರಲೋಕಕ್ಕೆ ಏರಿ ಹೋದದ್ದು, 1:1–11 38

ಪಾಠ 2. ಯೂದನ ಬದಲಾಗಿ ಮತ್ತೀಯನ ಆಯ್ಕೆ, 1:12–26 43

ಪಾಠ 3. ಪಂಚಾಶತ್ತಮ ಹಬ್ಬದ ದಿನದಂದು ಪವಿತ್ರಾತ್ಮನ ಆಗಮನ, 2:1–13 46

ಪಾಠ 4. ಜನಸಮೂಹಕ್ಕೆ ಪೇತ್ರನ ಬೋಧನೆ, 2:14–41 52

ಪಾಠ 5. ವಿಶ್ವಾಸಿಗಳ ಅನ್ಯೋನ್ಯತೆ, 2:41–47 56

ಪಾಠ 6. ಪೇತ್ರನು ಹುಟ್ಟು ಕುಂಟನನ್ನು ಗುಣಪಡಿಸಿದ್ದು, 3:1–10 60

ಪಾಠ 7. ನೆರೆದಿದ್ದ ಜನರೊಂದಿಗೆ ಪೇತ್ರನು ಮಾತನಾಡಿದ್ದು, 3:11–26 63

ಪಾಠ 8. ನ್ಯಾಯಸಭೆಯಲ್ಲಿ ಪೇತ್ರ ಮತ್ತು ಯೋಹಾನ, 4:1–22 67

ಪಾಠ 9. ವಿಶ್ವಾಸಿಗಳ ಪ್ರಾರ್ಥನೆ, 4:23–31 71
ಪಾಠ 10. ವಿಶ್ವಾಸಿಗಳು ತಮಗಿದ್ದುದನ್ನು ಹಂಚಿಕೊಂಡದ್ದು, 4:32–37 75
ಪಾಠ 11. ಅನನೀಯ ಮತ್ತು ಸಫೈರ, 5:1–11 78
ಪಾಠ 12. ಅಪೋಸ್ತಲರು ಅನೇಕರನ್ನು ಗುಣಪಡಿಸಿದ್ದು, 5:12–16 80
ಪಾಠ 13. ಅಪೋಸ್ತಲರಿಗಾದ ಹಿಂಸೆ, 5:17–42 82
ಪಾಠ 14. ಏಳು ಜನರ ಆಯ್ಕೆ, 6:1–7 87

## ಭಾಗ 2

## ಸ್ತೆಫನನು, ಫಿಲಿಪ್ಪನು ಮತ್ತು ಪೌಲನು: ಅ. ಕೃ. 6:8 – 9:31

ಪೀಠಿಕೆ 97
ಪಾಠ 15. ಸ್ತೆಫನನ ಬಂಧನ, 6:8–15 98
ಪಾಠ 16. ನ್ಯಾಯಸಭೆಗೆ ಸ್ತೆಫನನ ಉಪನ್ಯಾಸ, 7:1–53 100
ಪಾಠ 17. ಸ್ತೆಫನನ ಮೇಲೆ ಕಲ್ಲೆಸೆದದ್ದು, 7:54–8:1 102
ಪಾಠ 18. ಸಭೆ ಹಿಂಸೆಗೆ ಗುರಿಯಾಗಿ ಸದಸ್ಯರು ಚದುರಿಹೋದದ್ದು, 8:1–3 105
ಪಾಠ 19. ಸಮಾರ್ಯದಲ್ಲಿ ಫಿಲಿಪ್ಪನು, 8:4–8 107
ಪಾಠ 20. ಮಂತ್ರವಾದಿ ಸೀಮೋನ, 8:9–25 112
ಪಾಠ 21. ಫಿಲಿಪ್ಪ ಹಾಗೂ ಇಥಿಯೋಪ್ಯದವನು, 8:26–40 116
ಪಾಠ 22. ಸೌಲನ ಪರಿವರ್ತನೆ, 9:1–19 124
ಪಾಠ 23. ಪೌಲನು ದಮಸ್ಕದಲ್ಲಿ ಹಾಗೂ ಯೆರೂಸಲೇಮಿನಲ್ಲಿ, 9:19–31 129

## ಭಾಗ 3

## ಯೂದಾಯ ಮತ್ತು ಸಿರಿಯಾ: ಅ. ಕೃ. 9:32 – 12:24


ಪೀಠಿಕೆ 135

ಪಾಠ 24. ಐನೇಯನು ಮತ್ತು ದೊರ್ಕಳು, 9:32–43 136

ಪಾಠ 25. ಕೊರ್ನೇಲ್ಯನು ಪೇತ್ರನನ್ನು ಕರೆಕಳುಹಿಸಿದ್ದು, 10:1–8 140

ಪಾಠ 26. ಪೇತ್ರನ ದರ್ಶನ, 10:9–23 142

ಪಾಠ 27. ಕೊರ್ನೇಲ್ಯನ ಮನೆಯಲ್ಲಿ ಪೇತ್ರನು, 10:24–48 145

ಪಾಠ 28. ಪೇತ್ರನು ತನ್ನ ಕೃತಿಯ ಬಗ್ಗೆ ವಿವರಿಸಿದ್ದು, 11:1–18 149

ಪಾಠ 29. ಅಂತಿಯೋಕ್ಯದಲ್ಲಿದ್ದ ಸಭೆ, 11:19–30 153

ಪಾಠ 30. ಅದ್ಭುತವಾದ ರೀತಿಯಲ್ಲಿ ಪೇತ್ರನು ಬಿಡುಗಡೆಯಾದದ್ದು, 12:1–19 160

ಪಾಠ 31. ಹೆರೋದನ ಮರಣ, 12:19–24 165


## ಭಾಗ 4

## ಮೊದಲ ಸೇವಾ ಪ್ರಯಾಣ: ಅ. ಕೃ. 12:25 – 14:28

## ಯೆರೂಸಲೇಮಿನಲ್ಲಿ ಸಮ್ಮೇಳನ: ಅ. ಕೃ. 15:1 – 16:5


ಪೀಠಿಕೆ 169

ಪಾಠ 32. ಬಾರ್ನಬ ಮತ್ತು ಸೌಲರು, 12:25–13:3 170

ಪಾಠ 33. ಸೈಪ್ರಸ್‌ನಲ್ಲಿ, 13:4–12 174

ಪಾಠ 34. ಪಿಸಿದಿಯದ ಅಂತಿಯೋಕ್ಯದಲ್ಲಿ, 13:13–52 178

ಪಾಠ 35. ಇಕೋನಿಯದಲ್ಲಿ, 14:1–7 181

ಪಾಠ 36. ಲುಸ್ತ್ರ ಮತ್ತು ದೆರ್ಬೆಯಲ್ಲಿ, 14:8:21 185

ಪಾಠ 37. ಸಿರಿಯದ ಅಂತಿಯೋಕ್ಯಕ್ಕೆ ಮರುಪ್ರಯಾಣ, 14:21–28 189

ಪಾಠ 38. ಯೆರೂಸಲೇಮಿನಲ್ಲಿ ಸಮ್ಮೇಳನ, 15:1–21 193

ಪಾಠ 39. ಅನ್ಯಜನರಿಂದ ಬಂದ ವಿಶ್ವಾಸಿಗಳಿಗೆ ಸಮ್ಮೇಳನದ ಪತ್ರ, 15:22–34 197

ಪಾಠ 40. ಪೌಲ ಮತ್ತು ಬಾರ್ನಬರ ನಡುವೆ ಭಿನ್ನಾಭಿಪ್ರಾಯ, 15:35–40 200

ಪಾಠ 41. ಪೌಲ ಮತ್ತು ಸೀಲರೊಡನೆ ತಿಮೋಥೆಯನು, 15:40–16:5 203

## ಭಾಗ 5

## ಎರಡನೆಯ ಸೇವಾ ಪ್ರಯಾಣ: ಅ. ಕೃ. 16:6 – 18:22

## ಮೂರನೆಯ ಸೇವಾ ಪ್ರಯಾಣ 1: ಅ. ಕೃ. 18:23 – 19:20

ಪೀಠಿಕೆ 209

ಪಾಠ 42. ಪೌಲನಿಗೆ ಉಂಟಾದ ಮಕೆದೋನಿಯನ ದರ್ಶನ, 16:6–10 210

ಪಾಠ 43. ಫಿಲಿಪ್ಪಿಯಲ್ಲಿ ಲುದ್ಯಳ ಪರಿವರ್ತನೆ, 16:11–15 215

ಪಾಠ 44. ಸೆರೆಮನೆಯಲ್ಲಿ ಪೌಲ ಮತ್ತು ಸೀಲರು, 16:16–40 218

ಪಾಠ 45. ಥೆಸಲೋನಿಕದಲ್ಲಿ, 17:1–10 224

ಪಾಠ 46. ಬೆರೋಯದಲ್ಲಿ, 17:10–15 227

ಪಾಠ 47. ಅಥೆನ್ಸ್‌ನಲ್ಲಿ, 17:16–34 231

ಪಾಠ 48. ಕೊರಿಂಥದಲ್ಲಿ, 18:1–18 237

ಪಾಠ 49. ಪೌಲನು ಸಿರಿಯಾದ ಅಂತಿಯೋಕ್ಯಕ್ಕೆ ಹಿಂತಿರುಗಿದ್ದು, 18:18–22 245

ಪಾಠ 50. ಕೊರಿಂಥ ಮತ್ತು ಎಫೆಸದಲ್ಲಿ ಅಪೊಲ್ಲೋಸನು, 18:23–28 248

ಪಾಠ 51. ಎಫೆಸದಲ್ಲಿ ಪೌಲನು, 19:1–20 253

# ಭಾಗ 6

## ಮೂರನೆಯ ಸೇವಾ ಪ್ರಯಾಣ 2: ಅ. ಕೃ. 19:21 – 21:16

## ಯೆರೂಸಲೇಮಿನಿಂದ ರೋಮ್‌ಗೆ: ಅ. ಕೃ. 21:16 – 28:31


ಪೀಠಿಕೆ 261

ಪಾಠ 52. ಎಫೆಸದಲ್ಲಿ ದಂಗೆ, 19:21–41 262

ಪಾಠ 53. ಮೆಕೆದೋನಿಯ ಮತ್ತು ಗ್ರೀಸ್ ಮಾರ್ಗವಾಗಿ ಪೌಲನ ಪ್ರಯಾಣ, 20:1–6 265

ಪಾಠ 54. ತ್ರೋವದಲ್ಲಿ ಯೂತಿಕನನ್ನು ಮರಣದಿಂದ ಎಬ್ಬಿಸಿದ್ದು, 20:7–12 270

ಪಾಠ 55. ಎಫೆಸದ ಹಿರಿಯರಿಗೆ ಪೌಲನ ಬೀಳ್ಕೊಡುವಿಕೆ, 20:13–38 272

ಪಾಠ 56. ಯೆರೂಸಲೇಮಿಗೆ, 21:1–16 279

ಪಾಠ 57. ಪೌಲನು ಯೆರೂಸಲೇಮನ್ನು ತಲುಪಿದ್ದು, 21:17–26 283

ಪಾಠ 58. ಪೌಲನ ಬಂಧನ, 21:27–36 288

ಪಾಠ 59. ಜನಸಮೂಹಕ್ಕೆ ಪೌಲನ ಪ್ರತಿವಾದ, 21:37–22:21 291

ಪಾಠ 60. ರೋಮನ್ ಪೌರನಾದ ಪೌಲನು, 22:22–29 295

ಪಾಠ 61. ನ್ಯಾಯಸಭೆಯ ಮುಂದೆ, 22:30–23:11 297

ಪಾಠ 62. ಪೌಲನನ್ನು ಕೊಲ್ಲಲು ಒಳಸಂಚು, 23:12–22 301

ಪಾಠ 63. ಸೆಜರೇಯಕ್ಕೆ ಪೌಲನನ್ನು ಕಳುಹಿಸಿದ್ದು, 23:23–35 303

ಪಾಠ 64. ಫೆಲಿಕ್ಸನ ಮುಂದೆ ವಿಚಾರಣೆ, 24:1–27 305

ಪಾಠ 65. ಫೆಸ್ತನ ಮುಂದೆ ವಿಚಾರಣೆ, 25:1–12 309

ಪಾಠ 66. ಫೆಸ್ತನು ಅಗ್ರಿಪ್ಪ ರಾಜನ ಸಲಹೆ ಪಡೆದಿದ್ದು, 25:13–22 312

ಪಾಠ 67. ಅಗ್ರಿಪ್ಪನ ಮುಂದೆ ಪೌಲನು, 25:23–26:32 314

ಪಾಠ 68. ಪೌಲನು ರೋಮಿಗೆ ಪ್ರಯಾಣ ಮಾಡಿದ್ದು, 27:1–12 321

ಪಾಠ 69. ಚಂಡಮಾರುತ, 27:13–26 324

ಪಾಠ 70. ಹಡಗು ಒಡೆದುಹೋದದ್ದು, 27:27–44 327

ಪಾಠ 71. ಮಾಲ್ಟದ ದಡದಲ್ಲಿ, 28:1–10 332

ಪಾಠ 72. ರೋಮನ್ನು ತಲುಪಿದ್ದು, 28:11–10 335

ಪಾಠ 73. ರೋಮ್ ಪಟ್ಟಣದಲ್ಲಿ ಪೌಲನ ಬೋಧನೆ, 28:17–31 338

## ಉತ್ತರಗಳು

ಉ 1. ಯೇಸು ಪರಲೋಕಕ್ಕೆ ಏರಿ ಹೋದದ್ದು, 1:1–11 347

ಉ 2. ಯೂದನ ಬದಲಾಗಿ ಮತ್ತೀಯನ ಆಯ್ಕೆ, 1:12–26 350

ಉ 3. ಪಂಚಾಶತ್ತಮ ಹಬ್ಬದ ದಿನದಂದು ಪವಿತ್ರಾತ್ಮನ ಆಗಮನ, 2:1–13 353

ಉ 4. ಜನಸಮೂಹಕ್ಕೆ ಪೇತ್ರನ ಬೋಧನೆ, 2:14–41 356

ಉ 5. ವಿಶ್ವಾಸಿಗಳ ಅನ್ಯೋನ್ಯತೆ, 2:41–47 358

ಉ 6. ಪೇತ್ರನು ಹುಟ್ಟು ಕುಂಟನನ್ನು ಗುಣಪಡಿಸಿದ್ದು, 3:1–10 360

ಉ 7. ನೆರೆದಿದ್ದ ಜನರೊಂದಿಗೆ ಪೇತ್ರನು ಮಾತನಾಡಿದ್ದು, 3:11–26 362

ಉ 8. ನ್ಯಾಯಸಭೆಯಲ್ಲಿ ಪೇತ್ರ ಮತ್ತು ಯೋಹಾನ, 4:1–22 364

ಉ 9. ವಿಶ್ವಾಸಿಗಳ ಪ್ರಾರ್ಥನೆ, 4:23–31 368

ಉ 10. ವಿಶ್ವಾಸಿಗಳು ತಮಗಿದ್ದುದನ್ನು ಹಂಚಿಕೊಂಡದ್ದು, 4:32–37 372

ಉ 11. ಅನನೀಯ ಮತ್ತು ಸಫೈರ, 5:1–11 375

ಉ 12. ಅಪೋಸ್ತಲರು ಅನೇಕರನ್ನು ಗುಣಪಡಿಸಿದ್ದು, 5:12–16 379

ಉ 13. ಅಪೋಸ್ತಲರಿಗಾದ ಹಿಂಸೆ, 5:17–42 382

ಉ 14. ಏಳು ಜನರ ಆಯ್ಕೆ, 6:1–7 386

ಉ 15. ಸ್ತೆಫನನ ಬಂಧನ, 6:8–15 389

ಉ 16. ನ್ಯಾಯಸಭೆಗೆ ಸ್ತೆಫನನ ಉಪನ್ಯಾಸ, 7:1–53 393

ಉ 17. ಸ್ತೆಫನನ ಮೇಲೆ ಕಲ್ಲೆಸೆದದ್ದು, 7:54–8:1 396

ಉ 18. ಸಭೆ ಹಿಂಸೆಗೆ ಗುರಿಯಾಗಿ ಸದಸ್ಯರು ಚದುರಿಹೋದದ್ದು, 8:1–3 399

ಉ 19. ಸಮಾರ್ಯದಲ್ಲಿ ಫಿಲಿಪ್ಪನು, 8:4–8 401

ಉ 20. ಮಂತ್ರವಾದಿ ಸೀಮೋನ, 8:9–25 403

ಉ 21. ಫಿಲಿಪ್ಪ ಹಾಗೂ ಇಥಿಯೋಪ್ಯದವನು, 8:26–40 409

ಉ 22. ಸೌಲನ ಪರಿವರ್ತನೆ, 9:1–19 411

ಉ 23. ಪೌಲನು ದಮಸ್ಕದಲ್ಲಿ ಹಾಗೂ ಯೆರೂಸಲೇಮಿನಲ್ಲಿ, 9:19–31 415

ಉ 24. ಐನೇಯನು ಮತ್ತು ದೊರ್ಕಳು, 9:32–43 419

ಉ 25. ಕೊರ್ನೇಲ್ಯನು ಪೇತ್ರನನ್ನು ಕರೆಕಳುಹಿಸಿದ್ದು, 10:1–8 421

ಉ 26. ಪೇತ್ರನ ದರ್ಶನ, 10:9–23 423

ಉ 27. ಕೊರ್ನೇಲ್ಯನ ಮನೆಯಲ್ಲಿ ಪೇತ್ರನು, 10:24–48 425

ಉ 28. ಪೇತ್ರನು ತನ್ನ ಕೃತಿಯ ಬಗ್ಗೆ ವಿವರಿಸಿದ್ದು, 11:1–18 429

ಉ 29. ಅಂತಿಯೋಕ್ಯದಲ್ಲಿದ್ದ ಸಭೆ, 11:19–30 432

ಉ 30. ಅದ್ಭುತವಾದ ರೀತಿಯಲ್ಲಿ ಪೇತ್ರನು ಬಿಡುಗಡೆಯಾದದ್ದು, 12:1–19 436

ಉ 31. ಹೆರೋದನ ಮರಣ, 12:19–24 439

ಉ 32. ಬಾರ್ನಬ ಮತ್ತು ಸೌಲರು, 12:25–13:3 440

ಉ 33. ಸೈಪ್ರಸ್‌ನಲ್ಲಿ, 13:4–12 442

ಉ 34. ಪಿಸಿದಿಯದ ಅಂತಿಯೋಕ್ಯದಲ್ಲಿ, 13:13–52 444

ಉ 35. ಇಕೋನಿಯದಲ್ಲಿ, 14:1–7 446

ಉ 36. ಲುಸ್ತ್ರ ಮತ್ತು ದೆರ್ಬೆಯಲ್ಲಿ, 14:8:21 448

ಉ 37. ಸಿರಿಯದ ಅಂತಿಯೋಕ್ಯಕ್ಕೆ ಮರುಪ್ರಯಾಣ, 14:21–28 450

ಉ 38. ಯೆರೂಸಲೇಮಿನಲ್ಲಿ ಸಮ್ಮೇಳನ, 15:1–21 453

ಉ 39. ಅನ್ಯಜನರಿಂದ ಬಂದ ವಿಶ್ವಾಸಿಗಳಿಗೆ ಸಮ್ಮೇಳನದ ಪತ್ರ, 15:22–34 457

ಉ 40. ಪೌಲ ಮತ್ತು ಬಾರ್ನಬರ ನಡುವೆ ಭಿನ್ನಾಭಿಪ್ರಾಯ, 15:35–40 459

ಉ 41. ಪೌಲ ಮತ್ತು ಸೀಲರೊಡನೆ ತಿಮೋಥೆಯನು, 15:40–16:5 461

ಉ 42. ಪೌಲನಿಗೆ ಉಂಟಾದ ಮಕೆದೋನಿಯನ ದರ್ಶನ, 16:6–10 463

ಉ 43. ಫಿಲಿಪ್ಪಿಯಲ್ಲಿ ಲುದ್ಯಳ ಪರಿವರ್ತನೆ, 16:11–15 465

ಉ 44. ಸೆರೆಮನೆಯಲ್ಲಿ ಪೌಲ ಮತ್ತು ಸೀಲರು, 16:16–40 467

ಉ 45. ಥೆಸಲೋನಿಕದಲ್ಲಿ, 17:1–10 471

ಉ 46. ಬೆರೋಯದಲ್ಲಿ, 17:10–15 474

ಉ 47. ಅಥೆನ್ಸ್‌ನಲ್ಲಿ, 17:16–34 477

ಉ 48. ಕೊರಿಂಥದಲ್ಲಿ, 18:1–18 480

ಉ 49. ಪೌಲನು ಸಿರಿಯಾದ ಅಂತಿಯೋಕ್ಯಕ್ಕೆ ಹಿಂತಿರುಗಿದ್ದು, 18:18–22 483

ಉ 50. ಕೊರಿಂಥ ಮತ್ತು ಎಫೆಸದಲ್ಲಿ ಅಪೊಲ್ಲೋಸನು, 18:23–28 484
ಉ 51. ಎಫೆಸದಲ್ಲಿ ಪೌಲನು, 19:1–20 487
ಉ 52. ಎಫೆಸದಲ್ಲಿ ದಂಗೆ, 19:21–41 492
ಉ 53. ಮೆಕೆದೋನಿಯ ಮತ್ತು ಗ್ರೀಸ್ ಮಾರ್ಗವಾಗಿ ಪೌಲನ ಪ್ರಯಾಣ, 20:1–6 495
ಉ 54. ತ್ರೋವದಲ್ಲಿ ಯೂತಿಕನನ್ನು ಮರಣದಿಂದ ಎಬ್ಬಿಸಿದ್ದು, 20:7–12 497
ಉ 55. ಎಫೆಸದ ಹಿರಿಯರಿಗೆ ಪೌಲನ ಬೀಳ್ಕೊಡುವಿಕೆ, 20:13–38 499
ಉ 56. ಯೆರೂಸಲೇಮಿಗೆ, 21:1–16 502
ಉ 57. ಪೌಲನು ಯೆರೂಸಲೇಮನ್ನು ತಲುಪಿದ್ದು, 21:17–26 504
ಉ 58. ಪೌಲನ ಬಂಧನ, 21:27–36 507
ಉ 59. ಜನಸಮೂಹಕ್ಕೆ ಪೌಲನ ಪ್ರತಿವಾದ, 21:37–22:21 508
ಉ 60. ರೋಮನ್ ಪೌರನಾದ ಪೌಲನು, 22:22–29 511
ಉ 61. ನ್ಯಾಯಸಭೆಯ ಮುಂದೆ, 22:30–23:11 512
ಉ 62. ಪೌಲನನ್ನು ಕೊಲ್ಲಲು ಒಳಸಂಚು, 23:12–22 514
ಉ 63. ಸೆಜರೇಯಕ್ಕೆ ಪೌಲನನ್ನು ಕಳುಹಿಸಿದ್ದು, 23:23–35 516
ಉ 64. ಫೆಲಿಕ್ಸನ ಮುಂದೆ ವಿಚಾರಣೆ, 24:1–27 518
ಉ 65. ಫೆಸ್ತನ ಮುಂದೆ ವಿಚಾರಣೆ, 25:1–12 521
ಉ 66. ಫೆಸ್ತನು ಅಗ್ರಿಪ್ಪ ರಾಜನ ಸಲಹೆ ಪಡೆದಿದ್ದು, 25:13–22 523
ಉ 67. ಅಗ್ರಿಪ್ಪನ ಮುಂದೆ ಪೌಲನು, 25:23–26:32 526
ಉ 68. ಪೌಲನು ರೋಮಿಗೆ ಪ್ರಯಾಣ ಮಾಡಿದ್ದು, 27:1–12 530
ಉ 69. ಚಂಡಮಾರುತ, 27:13–26 532
ಉ 70. ಹಡಗು ಒಡೆದುಹೋದದ್ದು, 27:27–44 534
ಉ 71. ಮಾಲ್ಟದ ದಡದಲ್ಲಿ, 28:1–10 536
ಉ 72. ರೋಮನ್ನು ತಲುಪಿದ್ದು, 28:11–10 538
ಉ 73. ರೋಮ್ ಪಟ್ಟಣದಲ್ಲಿ ಪೌಲನ ಬೋಧನೆ, 28:17–31 540

## ಹೆಚ್ಚಿನ ವಾಸ್ತವಾಂಶಗಳು


ಅಪೋಸ್ತಲರ ಕೃತ್ಯಗಳ ಲೇಖಕನಾದ ಲೂಕನು 545

ಅಪೋಸ್ತಲರ ಕೃತ್ಯಗಳ ಸಂದೇಶ 548

ಅಪೋಸ್ತಲರ ಕೃತ್ಯಗಳ ಸಾಹಿತ್ಯ ಪ್ರಕಾರ 550

ಅಪೋಸ್ತಲರ ಕೃತ್ಯಗಳ ದಿನಾಂಕ 552

ಅಪೋಸ್ತಲರ ಕೃತ್ಯಗಳ ರಚನೆ 554

ಅಪೋಸ್ತಲರ ಕೃತ್ಯಗಳ ಕಾಲಾನುಕ್ರಮಣಿಕೆ 557

ಅಪೋಸ್ತಲರ ಕೃತ್ಯಗಳು ಮತ್ತು ಪೌಲನ ಪತ್ರಿಕೆಗಳು 561

ಅಪೋಸ್ತಲರ ಕೃತ್ಯಗಳ ನಂತರ ಪೌಲನ ಜೀವನ 563

ಅಪೋಸ್ತಲರ ಕೃತ್ಯಗಳ ಮೂರು ಪಠ್ಯ ಆವೃತ್ತಿಗಳು 564

ಹೆಲೆನಿಸಮ್ 565

ಯೆಹೂದ್ಯರ ಚದರುವಿಕೆ (ಡಯಾಸ್ಪೊರಾ) 567

ರೋಮನ್ ಸಾಮ್ರಾಜ್ಯ 569

ಪಾಲೆಸ್ತೀನ್ 572

ಅರಸನಾದ ಹೆರೋದನ ಕುಟುಂಬ 575

**ಶಿಕ್ಷಕರಿಗಾಗಿ 579**

**‘ಪೀಠಿಕೆಯ’ ಪ್ರಶ್ನೋತ್ತರಗಳು 593**

**‘ಹೆಚ್ಚಿನ ವಾಸ್ತವಾಂಶಗಳ’ ಪ್ರಶ್ನೋತ್ತರಗಳು 596**

**ಪದಸೂಚಿ 608**

# ಪೀಠಿಕೆ

ಅಪೋಸ್ತಲರ ಕೃತ್ಯಗಳನ್ನು ವಿವರವಾಗಿ ಓದುವುದಕ್ಕಿಂತ ಮುಂಚೆ ಪುಸ್ತಕದ ಹಿನ್ನಲೆಯನ್ನು ಅರಿತುಕೊಳ್ಳುವುದು ಉಪಯುಕ್ತವಾಗಿದೆ. ಹಾಗಾಗಿ ಈ ಪೀಠಿಕೆಯಲ್ಲಿ ಅಪೋಸ್ತಲರ ಕೃತ್ಯಗಳ ಪುಸ್ತಕದ ಕುರಿತಾದ ಮುಂದಿನ ಕೆಲವು ಪ್ರಶ್ನೆಗಳನ್ನು ಉತ್ತರಿಸೋಣ: ಈ ಪುಸ್ತಕವನ್ನು ಬರೆದವರು ಯಾರು? ಈ ಪುಸ್ತಕವು ಯಾವುದರ ಕುರಿತದ್ದಾಗಿದೆ ಮತ್ತು ಯಾರಿಗಾಗಿ ಇದು ಬರೆಯಲ್ಪಟ್ಟಿತು? ಇದು ಯಾವ ರೀತಿಯ ಪುಸ್ತಕ? ಈ ಪುಸ್ತಕವು ಯಾವಾಗ ಬರೆಯಲ್ಪಟ್ಟಿತು? ಈ ಪುಸ್ತಕದ ರಚನೆಯು ಹೇಗಿದೆ? ಈ ಪುಸ್ತಕದ ಐತಿಹಾಸಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯು ಹೇಗಿತ್ತು? ಇದರಲ್ಲಿನ ಕಥೆಗಳು ಯಾವಾಗ ಸಂಭವಿಸಿದವು? ಇಂದು ನಮಗೆ ಅಪೋಸ್ತಲರ ಕೃತ್ಯಗಳ ಪುಸ್ತಕದ ಸಂದೇಶವೇನಾಗಿದೆ?

ನಾವು ಈ ಪಠ್ಯಪುಸ್ತಕದ ಗುರಿ ಉದ್ದೇಶವನ್ನು ಕುರಿತು ಸಹ ಸ್ವಲ್ಪ ವಿವರಿಸಲಿದ್ದೇವೆ.

ಹೆಚ್ಚಿನ ಮಾಹಿತಿ ಮತ್ತು ಟಿಪ್ಪಣಿಗಳು ಪ್ರತಿಯೊಂದು ಅಧ್ಯಾಯದ ***‘ಟಿಪ್ಪಣಿ’***ಯ ಭಾಗದಲ್ಲಿ ಕೊಡಲ್ಪಡುವುದು. ಈ ಪಠ್ಯಪುಸ್ತಕವು ***‘ಹೆಚ್ಚಿನ ವಾಸ್ತವಾಂಶಗಳು’*** ಎಂಬ ಒಂದು ವ್ಯತ್ಯಾಸವಾದ ಭಾಗವನ್ನೂ ಸಹ ಹೊಂದಿದೆ. ಅಲ್ಲಿ ನೀವು ಅಪೋಸ್ತಲರ ಕೃತ್ಯಗಳ ಪುಸ್ತಕದ, ಜನರ, ಇತಿಹಾಸದ, ಸಂಸ್ಕೃತಿಯ, ಮತ್ತು ಧರ್ಮದ ಕುರಿತು ಹೆಚ್ಚಿನ ಮಾಹಿತಿಗಳನ್ನು ಕಾಣಬಹುದು.

## ಅಪೋಸ್ತಲರ ಕೃತ್ಯಗಳನ್ನು ಬರೆದವರು ಯಾರು?

ಅಪೋಸ್ತಲರ ಕೃತ್ಯಗಳ ಲೇಖಕನು ತನ್ನ ಹೆಸರನ್ನು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಆದರೆ ಆತನ ಪೀಠಿಕೆಯಿಂದ ನಮಗೆ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಆತನು ನಮ್ಮ ಸತ್ಯವೇದಗಳಲ್ಲಿ ಲೂಕನ ಸುವಾರ್ತೆ ಎಂದು ಕರೆಯಲ್ಪಡುವ ಹೊಸ ಒಡಂಬಡಿಕೆಯ ಸುವಾರ್ತೆಯನ್ನೂ ಸಹ ಬರೆದಿದ್ದಾನೆ. ಆದರೂ ಸಮಸ್ಯೆಯೇನೆಂದರೆ ಆ ಸುವಾರ್ತೆಯೂ ಸಹ ತನ್ನ ಲೇಖಕನ ಹೆಸರನ್ನು ತಿಳಿಸುವುದಿಲ್ಲ. ಸಭಾ ಇತಿಹಾಸವು ಯಾವಾಗಲೂ ಲೂಕನ ಸುವಾರ್ತೆಯ ಮತ್ತು ಅಪೋಸ್ತಲರ ಕೃತ್ಯಗಳೆರಡರ ಲೇಖಕನು ಲೂಕನೇ ಆಗಿದ್ದಾನೆ ಎಂದು ಘೋಷಿಸಿಕೊಂಡಿದೆ. ಲೂಕನು ಅಪೋಸ್ತಲ ಪೌಲನ ಅತೀ ನಿಕಟ ಸ್ನೇಹಿತನೂ ಮತ್ತು ಜೊತೆ ಪ್ರಯಾಣಿಕನೂ ಸಹ ಆಗಿದ್ದನು. ಈ ಘೋಷಣೆಯನ್ನು ಪ್ರಶ್ನಿಸಲು ಯಾವುದೇ ಒಳ್ಳೆಯ ಕಾರಣಗಳಿಲ್ಲ. ಅಪೋಸ್ತಲರ ಕೃತ್ಯಗಳ ಮತ್ತು ಪೌಲನ ಪತ್ರಿಕೆಗಳನ್ನು ಕೂಲಂಕುಷವಾಗಿ ಓದುವಾಗ ‘ವೈದ್ಯನಾದ ಲೂಕನೇ’ ಆ ಲೇಖಕನೆಂದು ಧೃಢೀಕರಿಸುತ್ತದೆ. ***‘ಹೆಚ್ಚಿನ ವಾಸ್ತವಾಂಶಗಳು’*** ಎಂಬ ಭಾಗದಲ್ಲಿ ***‘ಅಪೋಸ್ತಲರ ಕೃತ್ಯಗಳ ಪುಸ್ತಕದ ಲೇಖಕನು’*** ಎಂಬ ಅಧ್ಯಾಯವನ್ನೂ ಸಹ ನೋಡಿರಿ.

## ಅಪೋಸ್ತಲರ ಕೃತ್ಯಗಳ ಪುಸ್ತಕವು ಯಾವುದರ ಕುರಿತದ್ದಾಗಿದೆ?

ಲೂಕನ ಸುವಾರ್ತೆ ಮತ್ತು ಅಪೋಸ್ತಲರ ಕೃತ್ಯಗಳು ಒಂದಾಗಿವೆ. ಅವುಗಳು ಒಂದೇ ಮುಖ್ಯ ಕಥೆಯು ಭಾಗಗಳಾಗಿವೆ. ಲೂಕನ ಸುವಾರ್ತೆಯು 'ಲೋಕ ರಕ್ಷಕನಾದ ಯೇಸುವಿನ' ಕುರಿತಾಗಿದೆ (ಲೂಕ. 2:30–32; 3:6). ಅಪೋಸ್ತಲರ ಕೃತ್ಯಗಳ ಪುಸ್ತಕವು ಯೇಸುವಿನ ಮೂಲಕವಾದ ರಕ್ಷಣೆಯ ಈ ಸುವಾರ್ತೆಯನ್ನು 'ಭೂಲೋಕದ ಕೊನೆಯ ಮೇರೆಗಳವರೆಗೂ' ಹೇಗೆ ತೆಗೆದುಕೊಂಡು ಹೋಗಲ್ಪಟ್ಟಿತು ಎಂಬುದರ ಕುರಿತಾಗಿದೆ (ಅ. ಕೃ. 1:8).

ಲೂಕನ ಸುವಾರ್ತೆಯ ಪುಸ್ತಕವೂ ಮತ್ತು ಅಪೋಸ್ತಲರ ಕೃತ್ಯಗಳ ಪುಸ್ತಕವೂ ಥೆಯೊಫಿಲನೆಂಬ ಒಬ್ಬ ವ್ಯಕ್ತಿಗೆ ಬರೆಯಲ್ಪಟ್ಟಿದೆ. ಆತನ ಕುರಿತು ನಮಗೆ ಹೆಚ್ಚು ತಿಳಿದಿಲ್ಲ. ಆತನ ಹೆಸರು ಗ್ರೀಕ್ ಹೆಸರಾಗಿದೆ ಮತ್ತು ಲೂಕನು ಆತನನ್ನು 'ಸನ್ಮಾನ್ಯ' ಎಂಬ ಪದದಿಂದ ವಂದಿಸುತ್ತಾನೆ, ಇದು ನಮಗೆ ತಿಳಿಸುವುದೇನೆಂದರೆ, ಆತನು ಒಂದು ಉನ್ನತ ಸ್ಥಾನ ಮತ್ತು ಅಧಿಕಾರ ಹೊಂದಿದ ಒಬ್ಬ ವ್ಯಕ್ತಿಯಾಗಿದ್ದಿರಬಹುದು. ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದಲ್ಲಿರುವ ***'ಅಪೋಸ್ತಲರ ಕೃತ್ಯಗಳ ಪುಸ್ತಕದ ಸಂದೇಶ'***ಎಂಬ ಅಧ್ಯಾಯವನ್ನು ನೋಡಿರಿ.

## ಅಪೋಸ್ತಲರ ಕೃತ್ಯಗಳ ಪುಸ್ತಕವು ಯಾವ ರೀತಿಯ ಪುಸ್ತಕವಾಗಿದೆ?

ಈ ಪ್ರಶ್ನೆಯನ್ನು ಇನ್ನೊಂದು ರೀತಿಯಲ್ಲಿ ಕೇಳುವುದಾದರೆ: ಅಪೋಸ್ತಲರ ಕೃತ್ಯಗಳು ಪುಸ್ತಕದ 'ಸಾಹಿತ್ಯ ಶೈಲಿ' ಎಂತದ್ದು? ಅಥವಾ ಅಪೋಸ್ತಲರ ಕೃತ್ಯಗಳು ಪುಸ್ತಕವು ಯಾವ 'ಪ್ರಕಾರ'ಕ್ಕೆ ಸಂಬಂಧಪಟ್ಟದ್ದು? ಬಹುತೇಕ ಸತ್ಯವೇದ ಶಾಸ್ತ್ರಜ್ಞರು ಅದನ್ನು ಮೊದಲ ಶತಮಾನದ ಗ್ರೀಕ್–ರೋಮನ್ ಸಂಸ್ಕೃತಿಯ ಶೈಲಿಯಲ್ಲಿ ಬರೆಯಲ್ಪಟ್ಟ ಇತಿಹಾಸದ ಬರವಣಿಗೆಯ ಒಂದು ಅತ್ಯುತ್ತಮವಾದ ಮಾದರಿ ಎಂದು ಕಾಣುತ್ತಾರೆ. ಆ ದಿನಗಳಲ್ಲಿ, ಐತಿಹಾಸಿಕ ಪುಸ್ತಕಗಳ ಉದ್ದೇಶವು ಕೇವಲ ಗತಕಾಲದ ಘಟನೆಗಳನ್ನು ದಾಖಲಿಸುವುದು ಮಾತ್ರವಾಗಿರದೆ ವಾಚಕರಿಗೆ ಒಂದು ಸಂದೇಶವನ್ನು ತಿಳಿಸುವ ಉದ್ದೇಶವನ್ನೂ ಹೊಂದಿದ್ದವು. ಈ ಸಂದೇಶವು ಐತಿಹಾಸಿಕ ಘಟನೆಗಳ ಮೇಲೆ ಆಧರಿತವಾಗಿತ್ತು. ಹಾಗಾಗಿ ನಿಸ್ಸಂದೇಹವಾಗಿ ಲೂಕನು ಈ ಪುಸ್ತಕದಲ್ಲಿ ಒಂದು ಸಂದೇಶವನ್ನು ತಿಳಿಸಲು ಬಯಸುತ್ತಾನೆ.

ನಂತರ ಲೂಕನು ಹಳೆ ಒಡಂಬಡಿಕೆಯ ಘಟನೆಗಳಿಂದ ಪ್ರಭಾವಿತನಾಗಿದ್ದನ್ನೂ ಸಹ ನಾವು ನೆನಪಿಸಿಕೊಳ್ಳಬೇಕು. ಹಳೆ ಒಡಂಬಡಿಕೆಯ ಲೇಖಕರ ದೃಷ್ಟಿಕೋನ ಏನಾಗಿತ್ತೆಂದರೆ, ದೇವರು ಇತಿಹಾಸದ ಮೇಲೆ ನಿಯಂತ್ರಣವುಳ್ಳವನಾಗಿದ್ದಾನೆ, ಇಸ್ರಾಯೇಲಿನ ಹಾಗೂ ಸುತ್ತಮುತ್ತಲಿನ ರಾಷ್ಟ್ರಗಳ ಇತಿಹಾಸದ ಮೇಲೆಯೂ ನಿಯಂತ್ರಣವುಳ್ಳವನಾಗಿದ್ದಾನೆ. ಅದೇ ರೀತಿಯಲ್ಲಿ, ಲೂಕನ ದೃಷ್ಟಿಕೋನವೇನೆಂದರೆ, ಆತನು ತಿಳಿಸುವ ಇತಿಹಾಸದ ಎಲ್ಲಾ ದಾಖಲೆಗಳಲ್ಲಿಯೂ ದೇವರು ಕಾರ್ಯಮಾಡುವಾತನಾಗಿದ್ದಾನೆ.

ಇದರ ಪರಿಣಾಮವಾಗಿ, ತನ್ನ ಸಂದೇಶವು ಸ್ಪಷ್ಟವಾಗುವಂತೆ ಲೂಕನು ತನ್ನ ಐತಿಹಾಸಿಕ ವಿಷಯಗಳನ್ನು ಆರಿಸಿ ರೂಪಿಸುತ್ತಾನೆ. ಲೂಕನ ಸಂದೇಶವು – ಪವಿತ್ರಾತ್ಮನು ಸುವಾರ್ತೆಯನ್ನು ಅದರ ಭೌಗೋಳಿಕ ಕೇಂದ್ರಸ್ಥಳವಾದ ಯೆರೂಸಲೇಮಿನಿಂದ ಮತ್ತು ಅದರ ಪೂರ್ಣ ಯೆಹೂದ

ಪ್ರಾರಂಭಗಳಿಂದ ಅನ್ಯಮತದ ವಿಶ್ವಾಸಿಗಳಿಂದ ಕೂಡಿದ ಒಂದು ವಿಶ್ವವ್ಯಾಪಿ ಚಳುವಳಿಯಾಗಿ ಹೇಗೆ ಮಾರ್ಪಡಿಸಿದನು – ಎಂಬುದ್ದರ ಕುರಿತಾಗಿದೆ. ಇದು ಹೊಸ ಭೌಗೋಳಿಕ ಮತ್ತು ಸಾಂಸ್ಕೃತಿಕ ಪ್ರಾಂತ್ಯಗಳಿಗೆ ಸುವಾರ್ತೆಯನ್ನು ತಂದ ಆತ್ಮಭರಿತ ಸಭೆಯ ವಿಸ್ತರಣೆಯ ಕುರಿತಾದ ಸಂದೇಶವಾಗಿದೆ. ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದಲ್ಲಿರುವ ***'ಅಪೋಸ್ತಲರ ಕೃತ್ಯಗಳ ಸಾಹಿತ್ಯ ಪ್ರಕಾರ'*** ಎಂಬ ಅಧ್ಯಾಯವನ್ನೂ ಸಹ ನೋಡಿರಿ.

## ಅಪೋಸ್ತಲರ ಕೃತ್ಯಗಳ ಪುಸ್ತಕವು ಯಾವಾಗ ಬರೆಯಲ್ಪಟ್ಟಿತು?

ಅಪೋಸ್ತಲರ ಕೃತ್ಯಗಳ ಪುಸ್ತಕವು ಯಾವಾಗ ಬರೆಯಲ್ಪಟ್ಟಿತು ಎಂಬುದರ ಕುರಿತು ಸತ್ಯವೇದ ಶಾಸ್ತ್ರಜ್ಞರುಗಳು ತರ್ಕಿಸಿದ್ದಾರೆ. ಆದರೆ ಅವರೆಲ್ಲರೂ ಒಂದು ಅಂಶವನ್ನು ಒಪ್ಪಿಕೊಳ್ಳುತ್ತಾರೆ: ಇದು ಲೂಕನು ಬರೆದ ಸುವಾರ್ತೆಯ ನಂತರ ಬರೆಯಲ್ಪಟ್ಟಿರಬೇಕು. ಹೇಗಿದ್ದರೂ, ಈ ಪುಸ್ತಕದ ದಿನಾಂಕವನ್ನು ಕ್ರಿ.ಶ. 62 ಎಂದು ಸೂಚಿಸಲು (ಸ್ವತಃ ಅಪೋಸ್ತಲರ ಕೃತ್ಯಗಳ ಪುಸ್ತಕವನ್ನೇ ಆಧರಿಸಿ) ಕೆಲವು ಬಲವಾದ ಕಾರಣಗಳಿವೆ, ರೋಮ್‌ನಲ್ಲಿ ಪೌಲನ ಎರಡು ವರ್ಷಗಳ ಸೆರೆವಾಸದ ಕಥೆಯ ಮುಕ್ತಾಯದ ತಕ್ಷಣವೇ ನಡೆದದ್ದು. ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದಲ್ಲಿರುವ ***'ಅಪೋಸ್ತಲರ ಕೃತ್ಯಗಳ ದಿನಾಂಕ'*** ಎಂಬ ಅಧ್ಯಾಯವನ್ನೂ ಸಹ ನೋಡಿರಿ.

## ನಾವು ಅಪೋಸ್ತಲರ ಕೃತ್ಯಗಳ ಪುಸ್ತಕದ ರಚನೆಯನ್ನು ಹೇಗೆ ಅರ್ಥಮಾಡಿಕೊಳ್ಳಬೇಕು?

ಅಪೋಸ್ತಲರ ಕೃತ್ಯಗಳ ಪುಸ್ತಕದ ರಚನೆಯನ್ನು ಅರ್ಥಮಾಡಿಕೊಳ್ಳಲು ಎರಡು ಅತೀ ಸಾಮಾನ್ಯವಾದ ಮಾರ್ಗಗಳುಂಟು:

ಮುಖ್ಯ ಪಾತ್ರ ವಹಿಸುವ ಅಪೋಸ್ತಲನ ಮೇಲೆ ಆಧಾರಿತವಾದ ರಚನೆ: ಈ ಪುಸ್ತಕದ ಮೊದಲನೆಯ ಭಾಗದಲ್ಲಿ ಪೇತ್ರನು ಪ್ರಮುಖ ಪಾತ್ರ ವಹಿಸುತ್ತಿರುವುದನ್ನು ನಾವು ಕಾಣುತ್ತೇವೆ (ಅಧ್ಯಾಯ 1–12), ಮತ್ತು ಎರಡನೆಯ ಭಾಗದಲ್ಲಿ ಪೌಲನು ಪ್ರಮುಖ ಪಾತ್ರ ವಹಿಸುತ್ತಾನೆ (ಅಧ್ಯಾಯ 13–28). ನಾವು ಪೇತ್ರ ಮತ್ತು ಪೌಲನ ಕಥೆಗಳನ್ನು ಹೋಲಿಸುವಾಗ ಅವರಿಬ್ಬರ ನಡುವೆ ಅನೇಕ ಸಮಾಂತರತೆಗಳನ್ನೂ ನಾವು ಕಾಣುತ್ತೇವೆ. ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದಲ್ಲಿರುವ ***'ಅಪೋಸ್ತಲರ ಕೃತ್ಯಗಳ ರಚನೆ'*** ಎಂಬ ಅಧ್ಯಾಯವನ್ನೂ ಸಹ ನೋಡಿರಿ.

ವಚನ 1:8 ರಲ್ಲಿರುವ ಯೇಸುವಿನ ಮಾತುಗಳ ಮೇಲೆ ಆಧಾರಿತವಾದ ರಚನೆ: 'ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬಂದಾಗ ನೀವು ಶಕ್ತಿಯನ್ನು ಪಡೆಯುವಿರಿ. ಆಗ ನೀವು ಯೆರೂಸಲೇಮಿನಲ್ಲಿ, ಯೂದಾಯ ಮತ್ತು ಸಮಾರ್ಯದ ಎಲ್ಲಾ ಕಡೆಗಳಲ್ಲಿಯೂ ಹಾಗೂ ಭೂಲೋಕದ ಕೊನೆಯ ಮೇರೆಗಳವರೆಗೂ ನನಗೆ ಸಾಕ್ಷಿಗಳಾಗುವಿರಿ'. ಅಪೋಸ್ತಲರ ಕೃತ್ಯಗಳ ಮೊದಲ ಏಳು ಅಧ್ಯಾಯಗಳು ಯೆರೂಸಲೇಮಿನಲ್ಲಿ ನಡೆಯುತ್ತವೆ. ನಂತರ ಸುವಾರ್ತೆಯು

ಸಮಾರ್ಯ ಮತ್ತು ಯೂದಾಯಕ್ಕೂ ಹರಡುತ್ತದೆ (ಅಧ್ಯಾಯ 8–12). ಪುಸ್ತಕದ ಉಳಿದ ಭಾಗವು ಆ ಕಾಲದ ಅನ್ಯರ ಪ್ರಪಂಚಕ್ಕೆ ಸುವಾರ್ತೆಯು ಹೇಗೆ ತಲುಪಿತು ಎಂಬುದನ್ನು ವಿವರಿಸುತ್ತದೆ. ಕೊನೆಯ ಅಧ್ಯಾಯದಲ್ಲಿ ಪೌಲನು ರೋಮ್‌ಗೆ ತಲುಪುತ್ತಾನೆ, ರೋಮ್ ಆ ದಿನಗಳಲ್ಲಿ ಪ್ರಪಂಚದ ಕೇಂದ್ರವಾಗಿತ್ತು.

ಆದರೆ ಅಪೋಸ್ತಲರ ಕೃತ್ಯಗಳ ಪುಸ್ತಕದ ರಚನೆಯನ್ನು ಅರ್ಥಮಾಡಿಕೊಳ್ಳಲು ಮೂರನೆಯ ಮಾರ್ಗವೂ ಸಹ ಉಂಟು:

ಹಿಂದಿನ ಅಧ್ಯಾಯಗಳಲ್ಲಿ ಲೂಕನು ವಿವರಿಸಿದ ಸಂಗತಿಗಳನ್ನು ಸಾರಾಂಶಗೊಳಿಸುವ ಆರು ಮುಖ್ಯ ವಚನಗಳ ಮೇಲೆ ಆಧಾರಿತವಾದ ರಚನೆ, ಇಲ್ಲಿಂದ ಕಥೆಯು (ಸುವಾರ್ತೆಯು) ಒಂದು ಹೊಸ ದಿಕ್ಕನ್ನು ತೆಗೆದುಕೊಳ್ಳುತ್ತದೆ. ಈ ರೀತಿಯಾಗಿ, ಲೂಕನು ಸುವಾರ್ತೆಯ ಉಲ್ಲಾಸಭರಿತವಾದ ವಿಸ್ತರಣೆಯ ಆರು ಚಿತ್ರಣಗಳನ್ನು ಬಣ್ಣಿಸುತ್ತಾನೆ. ಈ ಪಠ್ಯಪುಸ್ತಕವು ಈ ರಚನೆಯನ್ನು ಅನುಸರಿಸುತ್ತದೆ – ಪ್ರತಿಯೊಂದು ಭಾಗವು ಸುವಾರ್ತೆಯು ಹೊಸ ದಿಕ್ಕುಗಳಿಗೂ ಹೊಸ ಕ್ಷೇತ್ರ ಮತ್ತು ಹೊಸ ಜನರಿಗೂ ವಿಸ್ತರಿಸಲ್ಪಟ್ಟದ್ದರ ಕುರಿತಾದ ಲೂಕನ ಆರು ಚಿತ್ರಣಗಳಲ್ಲಿ ಒಂದನ್ನು ಹೊಂದಿದೆ. ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದಲ್ಲಿರುವ ***'ಅಪೋಸ್ತಲರ ಕೃತ್ಯಗಳ ರಚನೆ'*** ಎಂಬ ಅಧ್ಯಾಯವನ್ನೂ ಸಹ ನೋಡಿರಿ.

## ಅಪೋಸ್ತಲರ ಕೃತ್ಯಗಳ ಪುಸ್ತಕದ ಐತಿಹಾಸಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆ ಹೇಗಿತ್ತು?

ನಾವು ಅಪೋಸ್ತಲರ ಕೃತ್ಯಗಳ ಪುಸ್ತಕದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನಲೆಗಳ ಕುರಿತು ಸ್ವಲ್ಪ ಮಾಹಿತಿಗಳನ್ನು ತಿಳಿದುಕೊಳ್ಳುವುದಾದರೆ ಅದನ್ನು ಇನ್ನೂ ಉತ್ತಮವಾಗಿ ಅರ್ಥಮಾಡಿಕೊಳ್ಳಬಹುದು ಮತ್ತು ಮೆಚ್ಚಬಹುದು. ನಾವು ಈ ಕೆಳಗಿನ ವಿಷಯಗಳ ಕುರಿತು ತಿಳಿದುಕೊಳ್ಳಬೇಕು:

- ಯೆರೂಸಲೇಮ್, ಸಮಾರ್ಯ ಮತ್ತು ಯುದಾಯದಲ್ಲಿನ ಆದಿಸಭೆಯ ಕಾಲದಲ್ಲಿ ಪ್ಯಾಲೆಸ್ತೀನ್‌ನಲ್ಲಿದ್ದ ಸ್ಥಿತಿಗತಿಗಳ ಕುರಿತು. ಇಲ್ಲಿಂದಲೇ ಎಲ್ಲವೂ ಪ್ರಾರಂಭವಾದದ್ದು.

- ರೋಮ್ ಸಾಮ್ರಾಜ್ಯದಲ್ಲಿದ್ದ ಬಹುಸಂಖ್ಯಾತ ಯೆಹೂದಿಗಳ ಕುರಿತು (ಚದುರಿಸಲ್ಪಟ್ಟವರು ಅಥವಾ *ಡಯಾಸ್ಪೊರಾ*) ತಿಳಿದುಕೊಳ್ಳಬೇಕು. ಸಭೆಯು ಅನ್ಯಜನಗಳ ಮಧ್ಯದಲ್ಲಿ ಹರಡಲ್ಪಡಲಿಕ್ಕೆ ಈ ಜನರು ಪ್ರಮುಖ ಮಾರ್ಗವಾದರು.

- ರೋಮ್ ಸಾಮ್ರಾಜ್ಯದ ಗ್ರೀಕ್ ಸಂಸ್ಕೃತಿಯ (*ಹೆಲೆನಿಸಮ್‌ನ*) ಕುರಿತು ತಿಳಿದುಕೊಳ್ಳಬೇಕು. ಇದು ಆದಿ ಕ್ರೈಸ್ತೀಯ ಚಳುವಳಿಯ ಮತ್ತು ಅದರ ಅದ್ಭುತವಾದ ವಿಸ್ತೀರ್ಣದ ಪೂರ್ವಸ್ಥಿತಿಯಾಗಿತ್ತು.

- ರೋಮ್ ಸಾಮ್ರಾಜ್ಯದಲ್ಲಿದ್ದ ಪರಿಸ್ಥಿತಿಯ ಕುರಿತು ತಿಳಿದುಕೊಳ್ಳಬೇಕು. ಇದು ಸುವಾರ್ತೆಯು ಅತೀ ವೇಗವಾಗಿ ಅನೇಕ ದೇಶ ಮತ್ತು ಜನರಿಗೆ ತಲುಪುವಂತೆ ಸಹಾಯವಾಯಿತು.

## ಅಪೋಸ್ತಲರ ಕೃತ್ಯಗಳ ಪುಸ್ತಕದ ಕಥೆಗಳು ಯಾವಾಗ ಸಂಭವಿಸಿದವು?

ಕೆಲವು ಪ್ರಮುಖ ಸಾಮಾನ್ಯ ಇತಿಹಾಸದ ವ್ಯಕ್ತಿಗಳು ಅಥವಾ ಘಟನೆಗಳು ಅಪೋಸ್ತಲರ ಕೃತ್ಯಗಳಲ್ಲಿ ತಿಳಿಸಲ್ಪಟ್ಟಿವೆ. ಇವುಗಳು ವಿವಿಧ ಅನ್ಯ–ಸತ್ಯವೇದ ಐತಿಹಾಸಿಕ ಮೂಲಗಳ ಮೂಲಕ ಕಾಲದಲ್ಲಿ ಸೇರಿಸಲ್ಪಡಬಹುದು.

- ಅರಸನಾದ 1 ನೇ ಹೆರೋದ ಅಗ್ರಿಪ್ಪನ ಮರಣ (12:23) – ಕ್ರಿ. ಶ. 44
- ಚಕ್ರವರ್ತಿಯಾದ ಕ್ಲಾಡಿಯಸ್ಸನು ಯೆಹೂದ್ಯರನ್ನು ರೋಮ್‌ನಿಂದ ಬಹಿಷ್ಕರಿಸಿದ್ದು (18:1–2) – ಕ್ರಿ. ಶ. 49
- ಗಲ್ಲಿಯೋನನು ಕೊರಿಂಥದ ರಾಜ್ಯಪಾಲನಾದದ್ದು (18:12) – ಕ್ರಿ. ಶ. 51
- ಸೆಜರೇಯದಲ್ಲಿ ರಾಜ್ಯಪಾಲನಾದ ಫೆಲಿಕ್ಸನ ಆಡಳಿತ ಕೊನೆಗೊಂಡದ್ದು ಮತ್ತು ಆತನ ಉತ್ತರಾಧಿಕಾರಿಯಾಗಿ ಫೆಸ್ತನು ರಾಜ್ಯಪಾಲನಾದದ್ದು (24:27) – ಕ್ರಿ. ಶ. 59

ಈ ಕಾಲಗಳ ಸಹಾಯದ ಮೂಲಕ ನಾವು ಅಪೋಸ್ತಲರ ಕೃತ್ಯಗಳ ಪುಸ್ತಕದ ಕಾಲಾನುಕ್ರಮಣಿಕೆಯನ್ನು ಕಟ್ಟಬಹುದು: ಅದು ಕ್ರಿ. ಶ. 30 ರಲ್ಲಿ ಯೇಸುವಿನ ಆರೋಹಣ ಮತ್ತು ಪಂಚಾಶತ್ತಮದ ಮೊದಲ ದಿನದಂದು ಪ್ರಾರಂಭವಾಗಿ ಕ್ರಿ. ಶ. 60–62 ರಲ್ಲಿ ರೋಮ್‌ನಲ್ಲಿ ಪೌಲನ ಬಂಧನದೊಂದಿಗೆ ಮುಕ್ತಾಯಗೊಳ್ಳುತ್ತದೆ.

ಹೇಗಿದ್ದರೂ, ಸತ್ಯವೇದ ಶಾಸ್ತ್ರಜ್ಞರುಗಳು ಅಪೋಸ್ತಲರ ಕೃತ್ಯಗಳ ಕಾಲಾನುಕ್ರಮಣಿಕೆಯ ಪ್ರತಿಯೊಂದು ವಿವರಗಳೊಂದಿಗೆ ಒಪ್ಪಿಕೊಳ್ಳುವುದಿಲ್ಲ. ಉದಾಹರಣೆಗೆ ಎನ್.ಐ.ವಿ. ಸ್ಟಡಿ ಬೈಬಲ್ ಈ ಪಠ್ಯಪುಸ್ತಕದಲ್ಲಿ ಪೌಲನ ಜೀವನದ ಕುರಿತು ನಾವು ಅನುಸರಿಸುವ ಕಾಲಾನುಕ್ರಮಣಿಕೆಗಿಂತ ಒಂದು ವ್ಯತ್ಯಾಸವಾದ ಕಾಲಾನುಕ್ರಮಣಿಕೆಯನ್ನು ಪ್ರಸ್ತುತಪಡಿಸುತ್ತದೆ.

***‘ಹೆಚ್ಚಿನ ವಾಸ್ತವಾಂಶಗಳು’*** ಎಂಬ ಭಾಗದಲ್ಲಿರುವ ***‘ಅಪೋಸ್ತಲರ ಕೃತ್ಯಗಳ ಕಾಲಾನುಕ್ರಮಣಿಕೆ’*** ಎಂಬ ಅಧ್ಯಾಯವನ್ನೂ ಸಹ ನೋಡಿರಿ.

## ಇಂದು ನಮಗೆ ಅಪೋಸ್ತಲರ ಕೃತ್ಯಗಳ ಪುಸ್ತಕವು ನೀಡುವ ಸಂದೇಶವೇನು?

ಅಪೋಸ್ತಲರ ಕೃತ್ಯಗಳ ಪುಸ್ತಕದ ಕುರಿತು ಅನೇಕ ಸತ್ಯವೇದವನ್ನು ನಂಬುವ ಕ್ರೈಸ್ತರ ಗುಂಪುಗಳಲ್ಲಿ ಕಂಡುಬರುವ ಸಾಮಾನ್ಯವಾದ ವಿಚಾರವೇನೆಂದರೆ, ಅವರು ಅದರ ಕಥೆಗಳನ್ನು ಓದಿ ಅವುಗಳನ್ನು ನೇರವಾಗಿ ತಮ್ಮ ಜೀವಿತಕ್ಕೆ ಹಾಗೂ ತಮ್ಮ ಸಭೆಗಳಿಗೆ ಅನ್ವಯಿಸಿಕೊಳ್ಳುತ್ತಾರೆ. ಈ ಪುಸ್ತಕವು ಕೇವಲ ಆದಿ ಸಭೆಯ ಇತಿಹಾಸದ ಕುರಿತು ಮಾತನಾಡುವುದು ಮಾತ್ರವಲ್ಲದೆ, ಎಲ್ಲಾ ಕಾಲದ ಸಭೆಗಳಿಗೂ ಅನುಕರಣೆಗೆ ಯೋಗ್ಯವಾದ ಒಂದು ಮಾದರಿಯನ್ನು ತಿಳಿಸುತ್ತದೆ ಎಂದು ಅರ್ಥಮಾಡಿಕೊಳ್ಳಲ್ಪಟ್ಟಿದೆ.

ಆದರೆ ಲೂಕನು ಆದಿಸಭೆಯ ಕಥೆಯನ್ನು ಹೇಳಿದಾಗ ಎಲ್ಲಾ ಕಾಲದ ಸಭೆಗಳಿಗೂ ಉದ್ದೇಶಪೂರ್ವಕವಾಗಿ ಅನುಕರಣೆಗೆ ಯೋಗ್ಯವಾದ ಒಂದು ಮಾದರಿಯನ್ನು ಮುಂದಿಟ್ಟನೋ? ಆತನು ಹಾಗೆ ಮಾಡಿದ್ದರೆ ಆ ಮಾದರಿಯು ಇಂದು ನಮಗೂ ಅನುಕರಣೆಗೆ ಯೋಗ್ಯವಾಗುತ್ತಿತ್ತು.

ಹಾಗಾಗಿ ಇಂದು ನಮಗೆ ಅಪೋಸ್ತಲರ ಕೃತ್ಯಗಳ ಪುಸ್ತಕವು ನೀಡುವ ಸಂದೇಶವನ್ನು ತಿಳಿದುಕೊಳ್ಳಬೇಕಾದರೆ ಆ ಪುಸ್ತಕದ ಹಿಂದಿನ ಲೂಕನ ಉದ್ದೇಶವನ್ನು ತಿಳಿದುಕೊಳ್ಳಬೇಕು. ಈ ಪುಸ್ತಕವನ್ನು ಬರೆದಾಗ ಥಿಯೊಫಿಲನಿಗೆ – ಮತ್ತು ತನ್ನ ಮನಸ್ಸಿನಲ್ಲಿದ್ದ ಆದಿ ವಿಶ್ವಾಸಿಗಳಿಗೆ – ಲೂಕನು ನೀಡಿದ ಸಂದೇಶವು ಏನಾಗಿತ್ತು?

ನಾವು ಅಪೋಸ್ತಲರ ಕೃತ್ಯಗಳನ್ನು ಸೂಕ್ಷ್ಮವಾಗಿ ಓದುವುದಾದರೆ, ಲೂಕನು ಆದಿಸಭೆಯ ಇತಿಹಾಸವನ್ನು ಅನುಕರಣೆಗಿಂತಲೂ ಹೆಚ್ಚಾಗಿ ವಿವರಣಾತ್ಮಕವಾಗಿ ದಾಖಲಿಸುತ್ತಾನೆ. ಉದಾಹರಣೆಗೆ, ಸಭೆಯ ಸಂಘಟಿಸುವಿಕೆ ಮತ್ತು ಸಭಾ ನಾಯಕರುಗಳ ನೇಮಕವು ಯೆರೂಸಲೇಮಿನಲ್ಲಿದ್ದಂತೆ ಸಿರಿಯಾದ ಅಂತಿಯೋಕ್ಯದಲ್ಲಿ ಅಥವಾ ಲುಸ್ತ್ರ, ಇಕೋನಿಯ ಮತ್ತು ಏಷ್ಯಾ ಮೈನರ್‌ನಲ್ಲಿನ ಪಿಸಿದ್ಯದ ಅಂತಿಯೋಕ್ಯದಲ್ಲಿ ಇರಲಿಲ್ಲ. ಯೆರೂಸಲೇಮಿನ ಸಭೆಯ ವಿಶ್ವಾಸಿಗಳು ಎಲ್ಲವನ್ನೂ ಹುದುವಾಗಿಟ್ಟುಕೊಂಡ ಆಚರಣೆಯನ್ನು ಇತರೆ ಸಭೆಗಳು ಪಾಲಿಸಲಿಲ್ಲವೆಂಬುದು ಇನ್ನೊಂದು ಉದಾಹರಣೆಯಾಗಿದೆ.

ಬದಲಾಗಿ, ಲೂಕನು ಚಿತ್ರಿಸುವ ಆದಿಸಭೆಯ ಇಡೀ ಚಿತ್ರಣದ ಸಂದೇಶವನ್ನು ನಾವು ಅರ್ಥಮಾಡಿಕೊಳ್ಳಬೇಕು. ಅಪೋಸಲರ ಕೃತ್ಯಗಳ ಸಭೆಯು ಪವಿತ್ರಾತ್ಮನಿಂದ ಬಲ ಹೊಂದಿದ ಸಭೆಯಾಗಿದೆ. ಅದು ಸುವಾರ್ತೆಯನ್ನು ಜಯಭರಿತವಾಗಿ ಮತ್ತು ಉಲ್ಲಾಸಭರಿತವಾಗಿ ಅನ್ಯರ ಪ್ರಪಂಚಕ್ಕೆ ಕೊಂಡೊಯ್ದ ಸಭೆಯಾಗಿದೆ. ಇದರ ಪರಿಣಾಮವಾಗಿ, ಜೀವಿತಗಳು ಮತ್ತು ಸಮುದಾಯಗಳು ಮಾರ್ಪಟ್ಟವು. ಅಪೋಸ್ತಲರ ಕೃತ್ಯಗಳಲ್ಲಿ, ಲೂಕನು ಸಾರ್ವತ್ರಿಕ ಸಭೆಗಾಗಿ ಇರುವ ದೇವರ ಯೋಜನೆಯನ್ನು – ದೇವರ ಅನುಕರಣೆಗೆ ಯೋಗ್ಯವಾದ ಮಾದರಿಯನ್ನು – ಪ್ರಸ್ತುತಪಡಿಸುತ್ತಾನೆ: ಅದು ಒಂದು ಜಯಭರಿತವಾದ, ಮುಂದೆ–ಸಾಗುವ ಮತ್ತು ಆತ್ಮಭರಿತವಾದ ಸಭೆಯಾಗಿರಬೇಕು. ಇಂದು ನಮಗೆ ಅಪೋಸ್ತಲರ ಕೃತ್ಯಗಳ ಪುಸ್ತಕವು ನೀಡುವ ಸಂದೇಶವು ಇದೇ ಆಗಿದೆ.

## ‘ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಓದೋಣ!’ ಎಂಬ ಪಠ್ಯಪುಸ್ತಕ

ಈ ಪಠ್ಯಪುಸ್ತಕವು ಒಬ್ಬ ವಿದ್ಯಾರ್ಥಿಯಾದ ಅಥವಾ ಒಬ್ಬ ವಾಚಕನಾದ ನಿಮಗಾಗಿ ಈ ಕೆಳಗಿನ ಗುರಿಗಳನ್ನುಟ್ಟುಕೊಂಡು ಬರೆಯಲಾಗಿದೆ:

- ನೀವು ಅಪೋಸ್ತಲರ ಕೃತ್ಯಗಳಲ್ಲಿರುವ ಎಲ್ಲಾ 73 ಕಥೆಗಳನ್ನು ತಿಳುವಳಿಕೆಯೊಂದಿಗೆ ಓದಬೇಕು.
- ನೀವು ಓದಿದ ಸಂಗತಿಯ ಕುರಿತು ಆಲೋಚಿಸಲು ಮತ್ತು ಒಂದು ಸಮಾರೋಪಕ್ಕೆ ತಲುಪಲು ಎಲ್ಲಾ ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕು.

- ನೀವು ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಚೆನ್ನಾಗಿ ಅರಿತವರಾಗಬೇಕು: ಕಥೆಗಳನ್ನು, ವ್ಯಕ್ತಿಗಳನ್ನು, ಐತಿಹಾಸಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯನ್ನು ಅರಿತವರಾಗಬೇಕು.

- ನೀವು ಅಭ್ಯಸಿಸಿದ ಮತ್ತು ಕಲಿತ ವಿಷಯಗಳನ್ನು ನಿಮ್ಮ ಸ್ವಂತ ಸನ್ನಿವೇಶಗಳಿಗೆ ಅನ್ವಯಿಸಿಕೊಳ್ಳಲು ಮತ್ತು ಹೊಸ ಒಡಂಬಡಿಕೆಯ ಸಭೆಯ ಬೆಳಕಿನಲ್ಲಿ ನಿಮ್ಮ ಸ್ವಂತ ಜೀವಿತಗಳನ್ನು ಮತ್ತು ಆಚಾರಗಳನ್ನು ನೋಡಲು ಪ್ರೋತ್ಸಾಹಿಸಲ್ಪಡಬೇಕು.

- ನೀವು ಅಪೋಸ್ತಲರ ಕೃತ್ಯಗಳ ಪಠ್ಯವನ್ನು ನಿಮ್ಮ ಸ್ವಂತ ಸೇವೆಯಲ್ಲಿ ಉಪಯೋಗಿಸಲು ಪ್ರೇರೇಪಿಸಲ್ಪಡಬೇಕು: ಧ್ಯಾನಗಳಲ್ಲಿ, ಸತ್ಯವೇದ ಅಧ್ಯಯನಗಳಲ್ಲಿ ಮತ್ತು ಪ್ರಸಂಗಗಳಲ್ಲಿ ಉಪಯೋಗಿಸಬೇಕು.

ಈ ಪಠ್ಯಪುಸ್ತಕವನ್ನು ಖಂಡಿತವಾಗಲೂ ಸತ್ಯವೇದದ ಜೊತೆಗೆ ಉಪಯೋಗಿಸಬೇಕು. ಇದರಲ್ಲಿರುವ ಎಲ್ಲಾ ವಚನಗಳು *ಪವಿತ್ರ ಗ್ರಂಥದಿಂದ* ಆರಿಸಿಕೊಳ್ಳಲಾಗಿದೆ.


ಈ ಪಠ್ಯಪುಸ್ತಕದ ಪ್ರಾರಂಭದಲ್ಲಿ ಒದಗಿಸಿರುವ ನಕ್ಷೆಗಳನ್ನು ಆಗಾಗ್ಗೆ ಉಪಯೋಗಿಸಬೇಕೆಂದು ಪ್ರೋತ್ಸಾಹಿಸುತ್ತೇವೆ.

ಈ ಪಠ್ಯಪುಸ್ತಕವು ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಸುಲಭವಾಗಿ ವಿಂಗಡಿಸಬಹುದಾದ 73 ಕಥೆಗಳ ಮೇಲೆ ಆಧಾರಿತವಾಗಿದೆ. ಈ ಪಾಠಗಳನ್ನು ಪಾಠ 1 ರಿಂದ ಪಾಠ 73 ಎಂದು ಅಂಕಿ ಸೂಚಿಸಲಾಗಿದೆ. ಪ್ರತಿಯೊಂದು ಪಾಠವು ಕೆಲವು ಪ್ರಶ್ನೆಗಳನ್ನು ಹೊಂದಿದೆ – ಕೆಲವು ಸುಲಭವಾದದ್ದು, ಇನ್ನೂ ಕೆಲವು ಕಠಿಣವಾದದ್ದು. ಈ ಪ್ರಶ್ನೆಗಳ ಉತ್ತರಗಳನ್ನು ಉತ್ತರಗಳು ಎಂಬ ಭಾಗದಲ್ಲಿ ಕಾಣಬಹುದು. ಈ ಭಾಗದಲ್ಲಿ 73 ಅಧ್ಯಾಯಗಳಿವೆ, ಅವುಗಳನ್ನು ಉ 1 ರಿಂದ ಉ 73 ಎಂದು ಅಂಕಿ ಸೂಚಿಸಲಾಗಿದೆ. ಹಾಗಾಗಿ ಪ್ರತಿಯೊಂದು ಪಾಠಕ್ಕೂ ಉತ್ತರ ('ಉ') ಎಂಬ ಇನ್ನೊಂದು ಅಧ್ಯಾಯವಿದೆ.


ನೀವು ಅಪೋಸ್ತಲರ ಕೃತ್ಯಗಳ ಪಠ್ಯವನ್ನು ನಿಮ್ಮ ಸ್ವಂತ ಸೇವೆಯಲ್ಲಿ ಮತ್ತು ಧ್ಯಾನಗಳಲ್ಲಿ ಉಪಯೋಗಿಸುವಂತೆ ನಿಮ್ಮನ್ನು ಪ್ರೋತ್ಸಾಹಿಸಲು ಬಹುತೇಕ ಪಾಠಗಳು ***'ಉಪದೇಶಿಸು ಮತ್ತು ಬೋಧಿಸು'*** ಎಂಬ ಭಾಗದಿಂದ ಕೊನೆಗೊಳ್ಳುತ್ತದೆ. ಅದರಲ್ಲಿ ನೀವು ಪ್ರಸಂಗಗಳಿಗಾಗಿ ಮತ್ತು ಸತ್ಯವೇದ ಅಧ್ಯಯನಗಳಿಗಾಗಿ ಹೊರರೇಖೆಯನ್ನು ಕಾಣಬಹುದು.

# ನಕ್ಷೆಗಳು


# ಪಂಚಾಶತ್ತಮ ದಿನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಜನರ ದೇಶಗಳು




# ಫಿಲಿಪ್ಪ ಮತ್ತು ಪೇತ್ರನ ಸೇವಾ ಪ್ರಯಾಣಗಳು




# ಪೌಲನ ಮೊದಲ ಸೇವಾ ಪ್ರಯಾಣ




# ಪೌಲನ ಎರಡನೆಯ ಸೇವಾ ಪ್ರಯಾಣ



# ಪೌಲನ ಮೂರನೆಯ ಸೇವಾ ಪ್ರಯಾಣ



# ರೋಮ್‌ಗೆ ಪೌಲನ ಪ್ರಯಾಣ


ರೋಮ್‌ಗೆ ಪೌಲನ ಪ್ರಯಾಣ
ಕ್ರಿ. ಶ. 59–60
ಅ. ಕೃ. 27:1 – 28:16
ಯೆರೂಸಲೇಮ್
ಕೈಸರೇಯ
ಸಿದೋನ್
ಅಂತಿಯೋಕ್ಯ
ತಾರ್ಸ
ಕುಪ್ರ
ಪಂಫುಲ್ಯ
ಮುರ
ಲೂಕಿಯ
ಏಷ್ಯಾ
ಕ್ನಿದ
ಕ್ರೇತ
ಕುರೇನ್
ಅಲೆಕ್ಸಾಂದ್ರಿಯ
Km
ಮಕೆದೋನ್ಯ
ಅಖಾಯ
ಅದ್ರಿಯಾಟಿಕ್ ಸಮುದ್ರ
ಮೆಡಿಟರೇನಿಯನ್ ಸಮುದ್ರ
ಚಂಡಮಾರುತ
ಸಿರಾಕೂಸ್
ರೇಗಿಯ
ಸಿಸಿಲಿ
ಮಾಲ್ಟ
ಹಡಗು ಒಡೆದುಹೋದದ್ದು
ಪುತಿಯೋಲಿ
ಅಪ್ಪಿಯ ಪೇಟೆ
ತ್ರಿಛತ್ರ
ರೋಮ್
ಇಟಲಿ
ಕಾರ್ತೇಜ್

# ಭಾಗ 1

# ಯೆರೂಸಲೇಮಿನಲ್ಲಿ:

# ಅಪೋಸ್ತಲರ ಕೃತ್ಯಗಳು 1:1 – 6:7

**ಪೀಠಿಕೆ**

ಲೂಕನ ಆದಿಸಭೆಯ ಮೊದಲ ಚಿತ್ರಣವು ಸಂಪೂರ್ಣವಾದ ಯೆಹೂದ್ಯ ಪರಿಸರದೊಂದಿಗಿದ್ದ ಯೆರೂಸಲೇಮಿನಲ್ಲಿದ್ದ ಸಭೆಯನ್ನು ಪರಿಚಯಿಸುತ್ತದೆ. ಆತನು ಯೇಸುವಿನ ಆರೋಹಣದೊಂದಿಗೆ ಪ್ರಾರಂಭಿಸಿ ಪಂಚಾಶತ್ತಮದಂದು ಪವಿತ್ರಾತ್ಮನು ಬಂದ ಕುರಿತು ಉಜ್ವಲವಾದ ದಾಖಲೆಯೊಂದಿಗೆ ಮುಂದುವರೆಸುತ್ತಾನೆ. ಪೇತ್ರನ ಹುಟ್ಟು ಕುಂಟನ ಗುಣಪಡಿಸುವಿಕೆಯು ವಿಶ್ವಾಸಿಗಳ ಮತ್ತು ಯೆಹೂದ್ಯರ ನಡುವೆ ಮೊದಲ ಘರ್ಷಣೆಗೆ ನಡೆಸಿತು. ವಿಶ್ವಾಸಿಗಳು ತಮ್ಮ ತಮ್ಮ ಆಸ್ತಿಗಳನ್ನು ಹಂಚಿಕೊಂಡಿದ್ದರಲ್ಲಿ ಅವರ ಅನ್ಯೋನ್ಯತೆಯು ಮಧುರವಾಗಿತ್ತು. ಆದರೆ ಅನನೀಯ ಮತ್ತು ಸಫೈರಳ ಅಪ್ರಮಾಣಿಕತೆಯು ಅವರಿಗೆ ಒಂದು ಎಚ್ಚರಿಕೆಯ ಉದಾಹರಣೆಯಾಗಿತ್ತು. ಲೂಕನು ಸಭೆಯು ಹೇಗೆ ಏಳು ಮಂದಿ ಹಿರಿಯರನ್ನು ನೇಮಿಸುವುದರ ಮೂಲಕ ತನ್ನ ಮೊದಲ ನಾಯಕತ್ವದ ಸಂಕಷ್ಟವನ್ನು ಬಗೆಹರಿಸಿದ ದಾಖಲೆಯೊಂದಿಗೆ ಮುಕ್ತಾಯಗೊಳಿಸುತ್ತಾನೆ.

*ದೇವರ ವಾಕ್ಯವು ಅಭಿವೃದ್ಧಿಯಾಗುತ್ತಾ ಬಂತು. ಯೆರೂಸಲೇಮಿನಲ್ಲಿಯ ಶಿಷ್ಯರ ಸಂಖ್ಯೆ ತ್ವರಿತಗತಿಯಲ್ಲಿ ಹೆಚ್ಚಾಯಿತು. ಯಾಜಕರಲ್ಲಿಯೂ ಅನೇಕ ಜನರು ನಂಬಿಕೆಗೆ ವಿಧೇಯರಾದರು (ಅ. ಕೃ. 6:7).*

# ಪಾಠ 1. ಯೇಸು ಪರಲೋಕಕ್ಕೆ ಏರಿ ಹೋದದ್ದು, 1:1–11

## ಅ) ವಾಕ್ಯಭಾಗ

ಯೇಸು ಕ್ರಿಸ್ತನ ಪುನರುತ್ಥಾನ ಹಾಗೂ ಆರೋಹಣದ ನಡುವೆ ಸಂಭವಿಸಿದ ಸಂಗತಿಗಳ ಸಾರಾಂಶವನ್ನು ಥೆಯೋಫಿಲನಿಗೆ ತಿಳಿಸುವುದರ ಮೂಲಕ ಲೂಕನು ತನ್ನ ಎರಡನೆಯ ಭಾಗವನ್ನು ಪ್ರಾರಂಭಿಸುತ್ತಾನೆ. ಯೇಸು ಕ್ರಿಸ್ತನು ತಾನು ಬದುಕಿರುವುದನ್ನು ಸಾಬೀತುಪಡಿಸಲು ಪುನಃ ಪುನಃ ಅಪೋಸ್ತಲರಿಗೆ ತನ್ನನ್ನು ತೋರ್ಪಡಿಸಿಕೊಂಡು ದೇವರ ರಾಜ್ಯದ ಮತ್ತು ಪವಿತ್ರಾತ್ಮನ ಕುರಿತು ಹೆಚ್ಚಾಗಿ ಅವರಿಗೆ ಬೋಧಿಸಿದನು. ಹೊಸ ಒಡಂಬಡಿಕೆಯಲ್ಲಿ ಯೇಸು ಕ್ರಿಸ್ತನ ಆರೋಹಣದ ಕುರಿತು ಹೆಚ್ಚಿನ ವಿವರವಾದ ದಾಖಲೆಯನ್ನು ತಿಳಿಸುವುದರ ಮೂಲಕ ಈ ವಾಕ್ಯಭಾಗವು ಕೊನೆಗೊಳ್ಳುತ್ತದೆ.

## ಆ) ಟಿಪ್ಪಣಿ

*ನನ್ನ ಮೊದಲನೆಯ ಗ್ರಂಥದಲ್ಲಿ* (ವ 1): ಲೂಕನು ಬರೆದ ಸುವಾರ್ತೆಯ ಪುಸ್ತಕವನ್ನು ಲೂಕನು ಉಲ್ಲೇಖಿಸುತ್ತಾನೆ.

*ಥೆಯೋಫಿಲನೇ* (ವ. 1): ಲೂಕನು ಬರೆದ ಸುವಾರ್ತೆಯ ಪ್ರಾರಂಭದಲ್ಲಿ ಪ್ರಸ್ತಾಪಿಸಲ್ಪಟ್ಟ ವ್ಯಕ್ತಿಯಾದ ಥೆಯೋಫೀಲನು ಬಹುಶಃ ಒಬ್ಬ ರೋಮ್ ಅಧಿಕಾರಿಯಾಗಿದ್ದಿರಬಹುದು ಅಥವಾ ಕನಿಷ್ಟ ಪಕ್ಷ ಶ್ರೀಮಂತಿಕೆಯಲ್ಲಿ ಮತ್ತು ಸ್ಥಾನದಲ್ಲಿ ಉನ್ನತದಲ್ಲಿದ್ದ ವ್ಯಕ್ತಿಯಾಗಿದ್ದಿರಬಹುದು. ಈತನ ಕುರಿತು ಯಾವುದೇ ನಿಖರವಾದ ಮಾಹಿತಿಯು ಲಭ್ಯವಿಲ್ಲ.

*ಅಪೋಸ್ತಲರು* (ವ. 2): ಅಪೋಸ್ತಲರ ಕೃತ್ಯಗಳಲ್ಲಿ 'ಶಿಷ್ಯರು' ಎಂಬ ಪದವನ್ನು ಸಾಮಾನ್ಯವಾಗಿ ವಿಶ್ವಾಸಿಗಳಿಗೆಲ್ಲರಿಗೆ ಉಪಯೋಗಿಸಲ್ಪಟ್ಟಿದೆ ಮತ್ತು 'ಅಪೋಸ್ತಲರು' ಎಂಬ ಪದವನ್ನು ಯೇಸು ಕ್ರಿಸ್ತನ 11 ಜನ ಶಿಷ್ಯರಿಗೂ ಮತ್ತು ಪೌಲ, ಬಾರ್ನಬ ಮತ್ತು ಕರ್ತನ ಸಹೋದರನಾದ ಯಾಕೋಬನಿಗೂ ಉಪಯೋಗಿಸಲ್ಪಟ್ಟಿದೆ.

*ಕರ್ತನೇ ಇಸ್ರಾಯೇಲರ ರಾಜ್ಯವನ್ನು ಈ ಕಾಲದಲ್ಲಿ ಪುನಃ ಸ್ಥಾಪಿಸುವಿಯೋ* (ವ. 6): ಯೇಸು ಕ್ರಿಸ್ತನು ಇಸ್ರಾಯೇಲನ್ನು ರೋಮನ್ನರಿಂದ ಬಿಡಿಸಿ ತನ್ನ ಭೂಲೋಕದ ರಾಜ್ಯವನ್ನು ಸ್ಥಾಪಿಸುವನೆಂದು ಅಪೋಸ್ತಲರು ಇನ್ನೂ ಎದುರುನೋಡುತ್ತಿದ್ದರು.

*ಬಿಳಿ ವಸ್ತ್ರ ಧರಿಸಿದ ಇಬ್ಬರು ಪುರುಷರು* (ವ. 10): ಇಬ್ಬರು ದೇವದೂತರು.

*ಗಲಿಲಾಯದವರೇ* (ವ. 11): ಉಳಿದ ಎಲ್ಲಾ 11 ಜನ ಅಪ್ತೋಸ್ತಲರು ಗಲಿಲಾಯ ಪ್ರಾಂತ್ಯದಿಂದ ಬಂದವರಾಗಿದ್ದರು.

## ಇ) ಪಠ್ಯ ಪ್ರಶ್ನೆಗಳು

1. ಈ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿರಿ: ಯೆರೂಸಲೇಮು, ಯುದಾಯ ಮತ್ತು ಸಮಾರ್ಯ!
2. ಯೇಸು ಕ್ರಿಸ್ತನು ತನ್ನ ಪುನರುತ್ಥಾನ ಮತ್ತು ಎತ್ತಲ್ಪಡುವಿಕೆಯ ಮಧ್ಯದ 40 ದಿವಸಗಳಲ್ಲಿ ಏನನ್ನು ಮಾಡಿದನು?
3. ಯೇಸು ಕ್ರಿಸ್ತನು ಅಪ್ತೋಸ್ತಲರಿಗೆ ಯಾವ ವರಕ್ಕಾಗಿ ಕಾಯ್ದುಕೊಂಡು ಇರ್ರಿ ಎಂದು ತನ್ನ ಶಿಷ್ಯರಿಗೆ ಹೇಳಿದನು? ಹಾಗೆಯೇ ಲೂಕನು. 24:49 ನ್ನೂ ಸಹ ನೋಡಿರಿ.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ನನ್ನ ಮೊದಲ ಗ್ರಂಥದಲ್ಲಿ (ಲೂಕನ ಸುವಾರ್ತೆ) 'ಯೇಸು ಮಾಡುವುದಕ್ಕೂ, ಭೋಧಿಸುವುದಕ್ಕೂ ಪ್ರಾರಂಭಿಸಿದ್ದೆಲ್ಲವನ್ನೂ' ಲೂಕನು ಹೇಳುತ್ತಿರುವುದರ ಅರ್ಥವೇನು?
2. ವ. 6 ರಲ್ಲಿ ಅಪ್ತೋಸ್ತಲರು ಯೇಸುವಿಗೆ ಕೇಳಿದ ಪ್ರಶ್ನೆಯಿಂದ ಅವರು ದೇವರಾಜ್ಯದ ಕುರಿತು ಹೊಂದಿದ ಮೂರು ತಪ್ಪಾದ ತಿಳುವಳಿಕೆಯನ್ನು ಬಯಲುಮಾಡಿದರು. ಇದನ್ನು ವಿವರಿಸಿರಿ.
3. ವ. 8 ರಲ್ಲಿ ತಿಳಿಸಿದ ಯೇಸು ಕ್ರಿಸ್ತನ ಮಾತುಗಳು ಇಡೀ ಅಪ್ತೋಸ್ತಲರ ಕೃತ್ಯಗಳ ಪುಸ್ತಕದ ಹೊರರೇಖೆ ಎಂಬುದಾಗಿ ಯಾವ ದೃಷ್ಟಿಯಲ್ಲಿ ನಾವು ಅದನ್ನು ಹೇಳಬಹುದು?
4. ಲೂಕನು ತನ್ನ ಸುವಾರ್ತೆಯನ್ನು ಯೇಸುವಿನ ಆರೋಹಣದ ಮೂಲಕ ಕೊನೆಗೊಳಿಸುತ್ತಾನೆ. ಲೂಕನ ಎರಡು ಆರೋಹಣದ ಕಥೆಯನ್ನು ಹೋಲಿಸಿರಿ (ಅ. ಕೃ. 1:12 ನ್ನು ನೋಡಿರಿ) ಅವುಗಳ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ತಿಳಿಸಿರಿ. ಉಳಿದ ಮೂರು ಸುವಾರ್ತೆಗಳು ಯೇಸುವಿನ ಆರೋಹಣದ ಕುರಿತು ಏನನ್ನು ಹೇಳುತ್ತವೆ?
5. ದೇವದೂತರು ಅಪ್ತೋಸ್ತಲರಿಗೆ ಅಲ್ಲಿಯೇ ನಿಂತುಕೊಂಡು ಮತ್ತು ಯೇಸು ತಿರುಗಿ ಬರುವನೆಂದು ಆಕಾಶದೆಡೆ ನೋಡುತ್ತಾ ಕಾಯಬೇಡಿರಿ ಎಂದು ಹೇಳಿದರು. ಅವರು ಯಾಕೆ ಈ ರೀತಿಯಾಗಿ ಹೇಳಿದರು? ಮತ್ತು ಯೇಸುವಿನ ಎತ್ತಲ್ಪಡುವಿಕೆಯು ಯಾವ ಘಟನೆಯ ನೇಮವನ್ನು ಒಳಗೊಂಡಿದೆ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಕೆಲವು ವೇಳೆಯಲ್ಲಿ ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡ ತಕ್ಷಣ ಸೇವೆ ಹೋಗಬೇಕೆಂಬ ಬಯಕೆಯುಳ್ಳ ವ್ಯಕ್ತಿಗಳನ್ನು ನಾವು ಸಂಧಿಸುವಾಗ (ದಾಟಿ ಹೋಗುವಾಗ)

ಸಭೆಯ ನಾಯಕರುಗಳಾದ ನಾವು ಅಂತಹ ವ್ಯಕ್ತಿಗಳಿಗೆ ಕ್ರಿಸ್ತನ ವಾಕ್ಯಗಳಾದ (ಅ. ಕೃ. 1:4–5 ನ್ನು) ಆಧಾರ ಮಾಡಿಕೊಂಡು ಹೇಗೆ ನಿಭಾಯಿಸುತ್ತೀರಿ?

2. ನಿಮ್ಮ ಸಭೆಯಲ್ಲಿರುವ ಸಭಾಪಾಲಕರು ಸಂಧಿಸುವ ಪ್ರಸಂಗಿಗಳು ಯೇಸು ಕ್ರಿಸ್ತನ ಎರಡನೇ ಬರೋಣದ ಕುರಿತು ಹೆಚ್ಚಿನ ಸಂಗತಿಗಳನ್ನು ವಿವರವಾಗಿ ತಿಳಿಸುವಂತಹದ್ದು, ಸಾಮಾನ್ಯವಾಗಿದೆಯಾ? ಅಂತಹ ಪ್ರಸಂಗಗಳು ಮತ್ತು ಬೋಧನೆಯ ಕುರಿತು ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದ ವಾಕ್ಯದ 1:7 ಬೆಳಕಿನಲ್ಲಿ ನಿಮ್ಮ ಅಭಿಪ್ರಾಯವೇನು?

## ಊ) ಉಪದೇಶಿಸು ಮತ್ತು ಬೋಧಿಸು!

1. ***‘ದೇವರ ರಾಜ್ಯದ ಸ್ವಭಾವ’*** ಎಂಬ ಶೀರ್ಷಿಕೆಯುಳ್ಳ ಸತ್ಯವೇದ ಅಧ್ಯಯನಕ್ಕಾಗಿ ಅಥವಾ ಸಂದೇಶಕ್ಕಾಗಿ ಅ. ಕೃ. 1:6–8 ನ್ನು ಆಧಾರವಾಗಿ ಬಳಸಬಹುದು.

ಅದರ ಮುಖ್ಯ ಅಂಶಗಳು ಹೀಗಿರಬಹುದು:

1. ಪೀಠಿಕೆ: ಮೂರು ವರ್ಷಗಳಿಗಿಂತಲೂ ಹೆಚ್ಚಿನ ಕಾಲ ಯೇಸುವಿನೊಂದಿಗೆ ನಡೆದು ಆತನ ಮರಣ ಮತ್ತು ಪುನರುತ್ಥಾನವನ್ನು ಪ್ರತ್ಯಕ್ಷವಾಗಿ ಕಂಡ ಆತನ ಶಿಷ್ಯರು ದೇವರ ರಾಜ್ಯದ ಕುರಿತು ಈಗಲೂ ಸರಿಯಾಗಿ ಅರ್ಥಮಾಡಿಕೊಳ್ಳದೆ ಹೋದರು. ಯೇಸು ಪರಲೋಕಾರೋಣ ಆಗುವುದಕ್ಕಿಂತ ಮುಂಚೆ ಅವರು (1:6) ಕೇಳಿದ ಪ್ರಶ್ನೆಯಿಂದ ಇದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಹಾಗಾಗಿ, ಅವರು ಯಾವ ರೀತಿಯಾಗಿ ಅದನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದರು? ಮತ್ತು ದೇವರ ರಾಜ್ಯದ ಕುರಿತು ಇರುವ ಸರಿಯಾದ ತಿಳುವಳಿಕೆ ಏನು?
2. ದೇವರ ರಾಜ್ಯವು ಪ್ರಾಂತ್ಯ ಅಥವಾ ಭೂಸಂಬಂಧವಾಗಿರದೆ ಗುಣದಲ್ಲಿ ಆತ್ಮೀಕವಾದದ್ದು. ಅದು ತನ್ನ ಪ್ರಜೆಗಳ ಮೌಲ್ಯ ಮತ್ತು ಜೀವಿತಗಳನ್ನು ಮಾರ್ಪಡಿಸುವಂತದ್ದಾಗಿದೆ.
3. ದೇವರ ರಾಜ್ಯವು ಒಂದು ಯೆಹೂದ್ಯ ರಾಜ್ಯವಾಗಿ ಇಸ್ರಾಯೇಲಿನ ಪುನಃ ಸ್ಥಾಪನೆಯಾಗಿರದೆ ಅದು ಅಂತರ್‌ರಾಷ್ಟ್ರೀಯವಾದದ್ದಾಗಿದೆ ಮತ್ತು ಅದು ಎಲ್ಲಾ ದೇಶಗಳ ಜನರನ್ನು ಒಳಗೊಂಡದ್ದು, ಯೆಹೂದಿಗಳು ಮಾತ್ರವಲ್ಲದೆ ಅನ್ಯರನ್ನೂ ಸಹ.
4. ಇತಿಹಾಸದಲ್ಲಿ ಯೇಸು ಭೂಮಿಯ ಮೇಲೆ ನಡೆದಾಡಿದಾಗ ದೇವರ ರಾಜ್ಯವು ಸಂಪೂರ್ಣವಾಗಿ ಸ್ಥಾಪಿಸಲ್ಪಡಲಿಲ್ಲ. ಅದು ಆ ದಿನಗಳಲ್ಲಿ ಯೇಸುವಿನೊಂದಿಗೆ ಬಂದಿತು, ಆದರೆ ಅದು ಯೇಸುವಿನ ಮೊದಲ ಮತ್ತು ಎರಡನೆಯ ಬರೋಣದ ಮಧ್ಯದಲ್ಲಿ (ಸಾಸಿವೆ ಕಾಳಿನ ಬೆಳವಣಿಗೆಯಂತೆಯೂ ಮತ್ತು ಇಡೀ ಹಿಟ್ಟನ್ನು ಪೂರ್ಣವಾಗಿ ಹುಳಿ ಮಾಡುವ ಹುಳಿ ಹಿಟ್ಟಿನಂತೆಯೂ, ಮತ್ತಾಯ 13:31–33) ಕ್ರಮೇಣವಾಗಿ ವಿಸ್ತರಿಸಲ್ಪಡುತ್ತಾ ಯೇಸುವಿನ ಬರೋಣದಲ್ಲಿ ಮಹಿಮೆಯಲ್ಲಿ ಪರಿಪೂರ್ಣಗೊಳ್ಳುವುದು.
5. ಹಾಗಾದರೆ ನಮ್ಮ ಕುರಿತು ಏನು?

   1) ನಮ್ಮ ಜೀವಿತಗಳು ದೇವರ ರಾಜ್ಯದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೋ? ಪವಿತ್ರಾತ್ಮನ ಫಲಗಳು ನಾವು ಮಾಡುವಂತಹ ಮತ್ತು ಕೇಳುವಂತಹ ಸಂಗತಿಗಳಲ್ಲಿ ಸ್ಪಷ್ಟವಾಗಿ

ಕಾಣುವಂತೆ ಪವಿತ್ರಾತ್ಮನು ನಮ್ಮ ಜೀವಿತಗಳನ್ನು ನಿಯಂತ್ರಿಸುವಂತೆ ನಾವು ಅನುಮತಿಸುತ್ತೇವೋ (ಗಲಾ. 5:19–26)?

2) ದೇವರ ರಾಜ್ಯದ ಸಾರ್ವತ್ರಿಕತೆಯ ಕುರಿತು ನಾವು ಅರ್ಥಮಾಡಿಕೊಂಡಿದ್ದೇವಾ? ಎಲ್ಲಾ ದೇಶಗಳೂ ಮತ್ತು ಜನರ ಗುಂಪುಗಳೂ ದೇವರ ರಾಜ್ಯದಲ್ಲಿ ಪಾಲುಗಾರರಾಗುವಂತೆ ನಾವು ಮತ್ತು ನಮ್ಮ ಸಭೆಗಳು ಅವರನ್ನು ಸಂಧಿಸುತ್ತಿದ್ದೇವೋ? (ಮತ್ತಾಯ. 28:18–20; ಮತ್ತಾಯ 24:14; ತಿಮೋ. 2:4)?

3) ಈ 'ಸಭಾ ಯುಗದಲ್ಲಿ' ದೇವರ ರಾಜ್ಯದ ವಿಸ್ತರಣೆಗಾಗಿ ನಾವು ಕೆಲಸ ಮಾಡುತ್ತಿದ್ದೇವಾ? ದೇವರ ಶಕ್ತಿಯು ನಮ್ಮ ಮೂಲಕವಾಗಿ ಕಾರ್ಯಮಾಡುವಂತೆಯೂ ಮತ್ತು ನಾವುಗಳು 'ಲೋಕದ ಕಟ್ಟಕಡೆಗೆ' ಯೇಸು ಕ್ರಿಸ್ತನಿಗೆ ಸಾಕ್ಷಿಗಳಾಗಿರುವಂತೆಯೂ ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿಕೊಂಡಿದ್ದೇವೋ (ಲೂಕ. 24:39; ಅ. ಕೃ. 1:4–5,8)?

2. ***'ಆಕಾಶವನ್ನೇ ನೋಡುತ್ತಾ ಇಲ್ಲಿ ಏಕೆ ನಿಂತಿರುವಿರಿ?'*** (ಅ. ಕೃ. 1:11) ಎಂಬ ಶೀರ್ಷಿಕೆಯೊಂದಿಗೆ ಆರೋಹಣ ಕಥೆಯನ್ನು ಇನ್ನೊಂದು ಒಳ್ಳೆಯ ಸತ್ಯವೇದ ಅಧ್ಯಯನಕ್ಕಾಗಿ ಅಥವಾ ಸಂದೇಶಕ್ಕಾಗಿ ಬಳಸಬಹುದು.

ನಿಮ್ಮ ಹೊರರೇಖೆಯು ಹೀಗಿರಬಹುದು:

1. ಯಾಕೆ ಯೇಸು ತನ್ನ ಶಿಷ್ಯರನ್ನು ಬಿಟ್ಟು ಪರಲೋಕಕ್ಕೆ ಹಿಂದಿರುಗಬೇಕಾಯಿತು?

   ಉತ್ತರ: ಯಾಕೆಂದರೆ ತನ್ನ ಕಾರ್ಯವನ್ನು ತನ್ನ ಶಿಷ್ಯರುಗಳ ಮೂಲಕ ಮುಂದುವರೆಸಲು ಪವಿತ್ರಾತ್ಮನನ್ನು ಕಳುಹಿಸಿಕೊಡಲು ಹೋದನು – ಯೋಹಾನ. 15:26; 16:7; ಅ. ಕೃ. 2:33

2. ಶಿಷ್ಯರು ಆಕಾಶದೆಡೆ ನೋಡುತ್ತಾ ನಿಂತುಕೊಳ್ಳಬಾರದೆಂದು ದೇವದೂತರು ಯಾಕೆ ಹೇಳಿದರು? ಉ: ಶಿಷ್ಯರು ಆಕಾಶದೆಡೆ ನೋಡುವುದರಿಂದ ಯೇಸುವನ್ನು ಹಿಂತಿರುಗಿ ಕರೆತರಲಾರರು. ಅವರು ತಮ್ಮ ಸಮಯವನ್ನು ಜ್ಯೋತಿಷ್ಯದಲ್ಲಿ ಕಳೆಯಬಾರದು.

3. ಅದರ ಬದಲಾಗಿ ಶಿಷ್ಯರು

   1) ಯೆರೂಸಲೇಮಿಗೆ ಹಿಂದಿರುಗಿ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನಿಗಾಗಿ ಕಾಯಬೇಕು

   2) ನಂತರ ಅವರು ತಮ್ಮ ಜೀವಿತಗಳನ್ನು ಮುಂದುವರಿಸಿಕೊಂಡು ಹೋಗಬೇಕು ಮತ್ತು ಹೆಚ್ಚು ಹೆಚ್ಚು ಜನರಿಗೆ ಸುವಾರ್ತೆಯನ್ನು ಸಾರುತ್ತಾ ಲೋಕದ ಕಟ್ಟಕಡೆಯವರೆಗೆ ಯೇಸುವಿನ ಸಾಕ್ಷಿಗಳಾಗಿರಬೇಕು

4. 'ನೀವು ನೋಡಿದ ರೀತಿಯಲ್ಲಿಯೇ ಆತನು ಹಿಂತಿರುಗಿ ಬರುವನು' ಎಂದು ದೇವದೂತರು ಹೇಳಿದಾಗ ಏನನ್ನು ಅರ್ಥೈಸಿದರು?

   1) ಯೇಸು ತಿರುಗಿ ವೈಯಕ್ತಿಕವಾಗಿ ತನ್ನ ಮಹಿಮಾ ಶರೀರದೊಂದಿಗೆ ಬರುವನು ಎಂಬುದಾಗಿ

   2) ಯೇಸು ತನ್ನ ಬರೋಣದಲ್ಲಿ ಪ್ರತ್ಯಕ್ಷನಾಗಿ ಮತ್ತು ಮಹಿಮೆ ಹೊಂದಿದವನಾಗಿ ಕಾಣುವನು (ಲೂಕ. 21:27)

3) ಹಳೆ ಒಡಂಬಡಿಕೆಯುದ್ದಕ್ಕೂ ದೇವರ ಮಹಿಮಾ ಪ್ರಸನ್ನತೆಯ ಸಂಕೇತವಾದ ಮತ್ತು ಯೇಸುವನ್ನು ತನ್ನ ಶಿಷ್ಯರ ದೃಷ್ಟಿಯಿಂದ ಮರೆಮಾಡಿದ ಅದೇ ಮೇಘವು ಆತನು ಹೋದಾಗ ಇದ್ದ ರಥದಂತೆ ಆತನು ಬರುವಾಗಲೂ ಇರುವುದು (1 ಥೆಸ. 4:17)

5. ಯೇಸುವಿನ ಆರೋಹಣಕ್ಕೂ ಮತ್ತು ಹಿಂತಿರುಗುವಿಕೆಯ ನಡುವಿನ ವ್ಯತ್ಯಾಸಗಳೇನು?

1) ಆತನ ಆರೋಹಣವು 'ವ್ಯಕ್ತಿಗತ'ವಾದ ಘಟನೆಯಾಗಿತ್ತು, ಆಗ ಆತನ 11 ಜನ ಅಪೊಸ್ತಲರು ಮತ್ತು ಕೆಲವರು ಮಾತ್ರ ಉಪಸ್ಥಿತರಿದ್ದರು. ಆದರೆ ಆತನ ಬರೋಣದಲ್ಲಿ ಎಲ್ಲರ ಕಣ್ಣುಗಳು ಆತನನ್ನು ಕಾಣುವವು (ಪ್ರಕಟನೆ. 1:7). ಇದು ಸಂಪೂರ್ಣವಾಗಿ ಒಂದು ಬಹಿರಂಗ ಘಟನೆಯಾಗಿರುವದು!

2) ಯೇಸು ಪರಲೋಕಕ್ಕೆ ಏರಿಹೋದಾಗ ಒಬ್ಬನೇ ಹೋದನು. ಆದರೆ ಆತನು ಹಿಂತಿರುಗಿ ಬರುವಾಗ ಆತನ ಸಂಗಡ ಕೋಟಿಗಟ್ಟಲೆ ವಿಶ್ವಾಸಿಗಳೊಂದಿಗೆ ಹಾಗೂ ದೇವದೂತರೊಂದಿಗೆ ಬರುವನು (ಲೂಕ. 9:26; 1 ಥೆಸ. 4:14; 2 ಥೆಸ. 1:7)!

3) ಆತನ ಆರೋಹಣವು ಒಂದು ಸ್ಥಳೀಯ ಪ್ರದೇಶದಲ್ಲಿ ಸಂಭವಿಸಿತು, ಅಂದರೆ ಓಲಿವ್ ಗುಡ್ಡಗಳ ಪ್ರದೇಶದಲ್ಲಿ. ಆದರೆ 'ಮಿಂಚು ಒಂದು ಭಾಗದಲ್ಲಿ ಮಿಂಚಿ ಮತ್ತೊಂದು ಭಾಗದಲ್ಲಿ ಹೇಗೆ ಹೊಳೆಯುತ್ತದೆಯೋ' ಹಾಗೆಯೇ ಆತನ ಹಿಂತಿರುಗುವಿಕೆಯು ಇರುವುದು (ಲೂಕ. 17:23–24). ಭೂಲೋಕದ ಎಲ್ಲಾ ಜನರು ಆತನನ್ನು ಕಾಣುವರು!

6. ಹಾಗಾದರೆ ನಮ್ಮ ಕುರಿತು ಏನು?

1) ನಾವು ಆಕಾಶದ ಕಡೆಗೆ ನೋಡುತ್ತಾ ಯೇಸು ಯಾವಾಗ ಹಿಂತಿರುಗುವನೆಂಬ ಊಹಾಪೋಹಗಳಲ್ಲಿ ನಮ್ಮ ಸಮಯವನ್ನು ಕಳೆಯಬಾರದು.

2) ಅದಕ್ಕೆ ಬದಲಾಗಿ ನಾವು ಆತನ ರಾಜ್ಯಕ್ಕಾಗಿ ಆತ್ಮಗಳನ್ನು ಗೆಲ್ಲುತ್ತಾ, ಭೋಧಿಸುತ್ತಾ ಮತ್ತು ಪ್ರಸಂಗಿಸುತ್ತಾ, ನಮ್ಮ ಸುತ್ತಲಿರುವ ಜನರಿಗೆ ಕ್ರಿಸ್ತನ ದಯೆಯನ್ನು ತೋರಿಸುವಂತವರಾಗಿ ಆತನ ಮಹಾ ಆಜ್ಞೆಯನ್ನು ನೆರವೇರಿಸತಕ್ಕದ್ದು (ಮತ್ತಾಯ. 28:18–20).

3) ಆದರೆ ಆತನು ಯಾವ ಸಮಯದಲ್ಲಾದರೂ ಹಿಂತಿರುಗಬಹುದೆಂದು ಎದುರುನೋಡುತ್ತಾ ನಾವು ಆತನ ಬರೋಣಕ್ಕಾಗಿ ಯಾವಾಗಲೂ ಸಿದ್ಧರಾಗಿರಬೇಕು.

4) ನಾವು ಆತನ ಬರೋಣಕ್ಕಾಗಿ ಕಾಯುತ್ತಿರುವಾಗ ದೇವರ ರಾಜ್ಯದ ನಿಯಮಗಳನ್ನು ನಮ್ಮ ಜೀವಿತಗಳು ಬಿಂಬಿಸಬೇಕು. ನಾವು ಈ ಲೋಕಕ್ಕೆ ಸಂಬಂಧಪಟ್ಟವರಲ್ಲ. ಇಲ್ಲ, ಈ ಲೋಕದಲ್ಲಿ ನಾವುಗಳು ಪರದೇಶಸ್ಥರೂ, ಪ್ರವಾಸಿಗಳೂ ಆಗಿದ್ದೇವೆ (1 ಪೇತ್ರ. 2:11).

# ಪಾಠ 2. ಯೂದನ ಬದಲಾಗಿ ಮತ್ತೀಯನ ಆಯ್ಕೆ, 1:12–26

## ಅ) ವಾಕ್ಯಭಾಗ

ಆರೋಹಣದ ನಂತರ ವಿಶ್ವಾಸಿಗಳು ದೇವರು ತಮಗೆ ವಾಗ್ದಾನಮಾಡಿದ ಪವಿತ್ರಾತ್ಮನ ವರಕ್ಕಾಗಿ ಕಾದಿದ್ದು ಪ್ರಾರ್ಥಿಸಲು ಯೆರೂಸಲೇಮಿನಲ್ಲಿ ಕೂಡಿ ಬಂದರು. ಒಂದು ದಿವಸ ಪೇತ್ರನು ವಿಶ್ವಾಸಿಗಳ ಮಧ್ಯದಲ್ಲಿ ಎದ್ದು ಯೇಸುವನ್ನು ಅಲ್ಲಗೆಳೆದು ಅಥವಾ ದ್ರೋಹಮಾಡಿ ಮತ್ತು ಸತ್ತು ಹೋದಂತಹ ಯೂದನ ಸ್ಥಳದಲ್ಲಿ ಬೇರೆಯವರನ್ನು ಆಯ್ಕೆ ಮಾಡಬೇಕೆಂದು ತಿಳಿಸಿದನು. ಹಾಗಾಗಿ ಯೂದನ ಖಾಲಿಯಾದ ಆ ಸ್ಥಳವು ಮತ್ತೀಯನಿಂದ ತುಂಬಲ್ಪಟ್ಟಿತ್ತು.

## ಆ) ಟಿಪ್ಪಣಿ

*ಓಲಿವ್ ಗುಡ್ಡದಿಂದ ಇಳಿದು ಯೆರೂಸಲೇಮಿಗೆ ಅದು ಸಬ್ಬತ್ ದಿನದಲ್ಲಿ ನಡೆಯುವಷ್ಟು ದೂರದಲ್ಲಿತ್ತು* (ವ. 12): ಆರೋಹಣವು ಯೆರೂಸಲೇಮಿನಿಂದ ಸುಮಾರು 1 ಮೈಲು ದೂರದಲ್ಲಿ ಬೇಥಾನ್ಯದ ಕಡೆಗಿದ್ದ ಓಲಿವ್ ಗುಡ್ಡದ ಪೂರ್ವ ದಿಕ್ಕಿನ ಇಳಿಜಾರಿನಲ್ಲಿ ಸಂಭವಿಸಿತು (ಲೂಕ. 24:50). ಒಬ್ಬ ನಂಬಿಗಸ್ತ ಯೆಹೂದ್ಯನು ಸಬ್ಬತ್ ದಿನದಲ್ಲಿ ಇದಕ್ಕಿಂತ ದೂರದ ಪ್ರಯಾಣವನ್ನು ಮಾಡುವುದಿಲ್ಲ.

*ಮಹಿಳೆಯರೊಂದಿಗೆ* (ವ. 14): ಬಹುಶಃ ಇವರು ಯೇಸುವಿನೊಂದಿಗೆ ಸೇವೆ ಮಾಡಿದಂತಹ ಸ್ತ್ರೀಯರು (ಲೂಕ 8:2–3) ಮತ್ತು ಒಂದು ವೇಳೆ ಅಪೋಸ್ತಲರ ಹೆಂಡತಿಯರೂ ಆಗಿರಬಹುದು

*ಸಹೋದರರೇ* (ವ. 14): ಯೆರೂಸಲೇಮಿನ ಸಭಾ ನಾಯಕನೂ ಯೇಸುವಿನ ಸಹೋದರನೂ ಆದ ಯಾಕೋಬನು ಸಹ ಸೇರಿಸಲ್ಪಟ್ಟಿದ್ದಾನೆ. (12:17; 15:13; 21:18)

*ತಮ್ಮ ಭಾಷೆಯಲ್ಲಿ* (ವ. 19): ಅನೇಕ ಆಧುನಿಕ ಆಂಗ್ಲ ಭಾಷಾಂತರಗಳು ವ. 18–19 ನ್ನು ಲೂಕನ ಸಂಪಾದಕೀಯ ಟಿಪ್ಪಣಿಯೆಂದು ಸೂಚಿಸುತ್ತವೆ. ಇದು ಸರಿಯಾದ ಅರ್ಥವನ್ನು ಕೊಡುತ್ತದೆ, ಯಾಕೆಂದರೆ ಪೇತ್ರನು ತನ್ನ ಸ್ವಂತ ಭಾಷೆಯಾದ ಅರಾಮಿಕ್‌ನ್ನು ಸೂಚಿಸಲು ಅವರು 'ತಮ್ಮ ಭಾಷೆಯಲ್ಲಿ' ಎಂಬ ಹೇಳಿಕೆಯನ್ನು ಕೊಡುತ್ತಿದ್ದಿಲ್ಲ.

*ಅನಂತರ ಚೀಟು ಹಾಕಲು* (ವ. 26): ಹಳೆ ಒಡಂಬಡಿಕೆಯಲ್ಲಿ ಚೀಟು ಹಾಕುವುದರ ಕುರಿತು ಅನೇಕ ಬಾರಿ ತಿಳಿಸಲ್ಪಟ್ಟಿದೆ. (ಉದಾಹರಣೆಗೆ: ಯಾಜಕ. 16:8, ಯೆಹೊ. 18:6, 1 ಪೂರ್ವ. 26:8, ನೆಹೆ. 11:1, ಜ್ಞಾನೋಕ್ತಿ. 16:33)

## ಇ) ಪಠ್ಯ ಪ್ರಶ್ನೆಗಳು

1. ಮಾಳಿಗೆಯ ಕೋಣೆಯಲ್ಲಿ ಪ್ರಾರ್ಥನೆಗಾಗಿ ಕೂಡಿಬಂದಂತಹ ವಿಶ್ವಾಸಿಗಳು ಯಾರು? ಮತ್ತು ಒಟ್ಟು ಎಷ್ಟು ಮಂದಿ ವಿಶ್ವಾಸಿಗಳು ಕೂಡಿ ಬಂದಿದ್ದರು?
2. *ಅಕೇಲ್ದಮಾ* ಎಂದರೇನು?
3. ಪೇತ್ರನು ಹಳೆ ಒಡಂಬಡಿಕೆಯ ಯಾವ ಭಾಗವನ್ನು ಉಲ್ಲೇಖಿಸಿದನು? ಆತನು ಯಾಕೆ ಈ ಎರಡು ವಚನಗಳನ್ನು ಉಲ್ಲೇಖಿಸಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಮಾಳಿಗೆ ಮನೆಯ ಕೋಣೆಯಲ್ಲಿ ವಿಶ್ವಾಸಿಗಳು ಯಾಕೆ ಪ್ರಾರ್ಥಿಸಿದರು?
2. ವ. 19 ರಲ್ಲಿರುವ *'ಅವರು ತಮ್ಮ ಭಾಷೆಯಲ್ಲಿ'* ಎಂಬ ಹೇಳಿಕೆಯ ಮಹತ್ವವೇನು?
3. ಯೂದನ ಬದಲಾಗಿ ಮತ್ತೀಯನು ಆಯ್ಕೆಯಾದಾಗ ಅಲ್ಲಿ ಯಾರ್ಯಾರು ಉಪಸ್ಥಿತರಿದ್ದರು? ಇದನ್ನು ಗಮನಿಸುವಾಗ ನಮಗೆ ಯಾಕೆ ಕುತೂಹಲ ಉಂಟಾಗುತ್ತದೆ?
4. ಈ ಕಥೆಯಲ್ಲಿರುವ ಪೇತ್ರನ ಮಾತಿನ ಪ್ರಕಾರ ಒಬ್ಬ ಅಪೋಸ್ತಲನಿಗೆ ಇರತಕ್ಕ ಅರ್ಹತೆಗಳೇನು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ಕಥೆಯು ಸಭೆಯ ಹೊಸ ನಾಯಕನ ಆಯ್ಕೆಯ ಕುರಿತಾಗಿದೆ. ಅದು ಹೇಗೆ ಮಾಡಲ್ಪಟ್ಟಿತ್ತು? ನೀವು ಸಭೆಗಳಲ್ಲಿ ಈ ರೀತಿಯಾದ ಅಭ್ಯಾಸಗಳನ್ನು ಪಾಲಿಸುತ್ತಿದ್ದೀರಾ? ಯಾಕೆ – ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

***ನಿಜವಾದ ಪ್ರಾರ್ಥನೆಗೆ ಆವಶ್ಯವಾದ ಎರಡು ಅಂಶಗಳು*** ಎಂಬ ಶೀರ್ಷಿಕೆಯುಳ್ಳ ಒಂದು ಸಂಕ್ಷಿಪ್ತವಾದ ಸತ್ಯವೇದ ಅಧ್ಯಯನಕ್ಕಾಗಿ ಅಥವಾ ಸಂದೇಶಕ್ಕಾಗಿ ಅ. ಕೃ. 1:12 – 14 ನ್ನು ಉಪಯೋಗಿಸಿ.

ಒಂದು ಹೊರರೇಖೆಯು ಹೀಗಿರಬಹುದು:

1. ಅವರ ಪ್ರಾರ್ಥನೆ ಹೇಗಿತ್ತು?

    1) ಅವರ ಪ್ರಾರ್ಥನೆಯು ಒಗ್ಗಟ್ಟಿನಿಂದ ಕೂಡಿತ್ತು: *'ಅವರೆಲ್ಲರೂ ಒಟ್ಟಾಗಿ ಸೇರಿ ಬಂದರು'* (ವ. 14)

    2) ಅವರ ಪ್ರಾರ್ಥನೆಯು ದೀರ್ಘಮನಸ್ಸುಳ್ಳದ್ದಾಗಿತ್ತು: *'ನಿತ್ಯವು ಪ್ರಾರ್ಥನೆಯಲ್ಲಿ ನಿರತರಾಗಿದ್ದರು'* (ವ. 14)

2. ನಮ್ಮ ಪ್ರಾರ್ಥನೆಯು ಹೇಗಿರಬೇಕು?

1) ಒಗ್ಗಟ್ಟಾಗಿರಬೇಕು, ಐಕ್ಯಮತವುಳ್ಳದ್ದಾಗಿರಬೇಕು, ಸರ್ವಸಮ್ಮತಿಯುಳ್ಳದ್ದಾಗಿರಬೇಕು, ಸಾಮರಸ್ಯವುಳ್ಳದ್ದಾಗಿರಬೇಕು

2) ದೀರ್ಘಮನಸ್ಸುಳ್ಳದ್ದಾಗಿರಬೇಕು, ದೃಢಸಂಕಲ್ಪವುಳ್ಳದ್ದಾಗಿರಬೇಕು, ಉದ್ದೇಶವುಳ್ಳ-ದ್ದಾಗಿರಬೇಕು, ಬದ್ಧತೆಯುಳ್ಳದ್ದಾಗಿರಬೇಕು, ದಣಿಯಕೂಡದು.

ಅದು ಮಾತ್ರವಲ್ಲದೆ: ದಿನನಿತ್ಯವಾಗಿ, ನಿರಂತರವಾಗಿ, ನಿಂತುಹೋಗದೆ ಮುಂದುವರಿಯಬೇಕು

3. ಅವರ ಪ್ರಾರ್ಥನೆಯು ಉತ್ತರಿಸಲ್ಪಟ್ಟಿತೇ?

1) ಹೌದು, ಕೆಲವು ದಿನಗಳ ನಂತರ (ಪಂಚಶತ್ತಮ ದಿನದಂದು) ಪವಿತ್ರಾತ್ಮನು ಅವರ ಮೇಲೆ ಬಂದು ಅವರು ಬಲವಾಗಿ ಸಾಕ್ಷಿಕರಿಸುವಂತೆ ಅವರನ್ನು ತುಂಬಿಸಿದನು.

4. ನಮ್ಮ ಪ್ರಾರ್ಥನೆಗಳು ಉತ್ತರಿಸಲ್ಪಡುವವೋ?

1) ಹೌದು, ನಾವು ಪವಿತ್ರಾತ್ಮನಿಗಾಗಿ ಪ್ರಾರ್ಥಿಸುವಾಗ ಉತ್ತರಿಸಲ್ಪಡುವವು (ಲೂಕ. 11:12)

2) ಹೌದು, ನಾವು ದೇವರ ಚಿತ್ತಾನುಸಾರವಾಗಿ ಪ್ರಾರ್ಥಿಸಿದರೆ ಉತ್ತರಿಸಲ್ಪಡುವವು (1 ಯೋಹಾನ. 5:14)

# ಪಾಠ 3. ಪಂಚಾಶತ್ತಮ ಹಬ್ಬದ ದಿನದಂದು ಪವಿತ್ರಾತ್ಮನ ಆಗಮನ, 2:1–13

## ಅ) ವಾಕ್ಯಭಾಗ

ಪಂಚಾಶತ್ತಮ ದಿನದಂದು ಪವಿತ್ರಾತ್ಮನು ಕಾಣಿಸುವಂತೆಯೂ ಕೇಳಿಸುವಂತೆಯೂ ಆಗಮಿಸಿದನು. ವಿಶ್ವಾಸಿಗಳು ದೇವರ ಮಹಿಮೆಯುಳ್ಳ ಕಾರ್ಯಗಳನ್ನು ಅನೇಕ ಭಾಷೆಗಳಲ್ಲಿ ಘೋಷಿಸುತ್ತಾ ಅನ್ಯಭಾಷೆಗಳಲ್ಲಿ ಮಾತನಾಡಲಿಕ್ಕೆ ಪ್ರಾರಂಭಿಸಿದರು. ಆ ಸಮಯದಲ್ಲಿ ಪಂಚಾಶತ್ತಮ ಹಬ್ಬವನ್ನು ಆಚರಿಸಲಿಕ್ಕೆ ಜಗತ್ತಿನ ಪ್ರತಿಯೊಂದು ಭಾಗಗಳಿಂದ ಯೆರೂಸಲೇಮಿಗೆ ಬಂದಿದ್ದ ಯೆಹೂದ್ಯರ ದೊಡ್ಡ ಜನಸಮೂಹವು ಈ ಘೋಷಣೆಗಳನ್ನು ತಮ್ಮ ತಮ್ಮ ಭಾಷೆಗಳಲ್ಲಿ ಕೇಳಿ ಅತ್ಯಂತ ಆಶ್ಚರ್ಯಚಕಿತರಾದರು. ಹಾಗಾಗಿ ಅವರು 'ಇದರ ಅರ್ಥವೇನು'? ಎಂದು ಒಬ್ಬರಿಗೊಬ್ಬರು ಕೇಳಿಕೊಂಡರು.

## ಆ) ಟಿಪ್ಪಣಿ

*ಪಂಚಾಶತ್ತಮ ಹಬ್ಬದ ದಿನದಂದು* (ವ. 1): 'ಪಂಚಾಶತ್ತಮ' ಎಂಬ ಪದವು ಗ್ರೀಕ್ ಪದದಿಂದ ಬಂದಿದೆ, ಅಂದರೆ '50 ನೇ' ಎಂದರ್ಥ. ಇದು ಪಸ್ಕಹಬ್ಬದ ಸಬ್ಬತ್ ನಂತರ 50 ನೇ ದಿನವನ್ನು ಸೂಚಿಸುತ್ತದೆ. ಇದನ್ನು ಸುಗ್ಗಿಯ ಹಬ್ಬ, ಪ್ರಥಮ ಫಲದ ಹಬ್ಬ ಮತ್ತು ಹಬ್ಬಗಳ ವಾರವೆಂದೂ ಸಹ ಕರೆಯಲಾಗುತ್ತಿತ್ತು. ಈ ಹಬ್ಬಕ್ಕೆ ಎರಡು ರೀತಿಯಾದ ಹಿನ್ನೆಲೆ ಇದೆ: 1) ಕೃಷಿಯ ಹಿನ್ನಲೆ – ಸುಗ್ಗಿಯ ಕೊನೆಯಲ್ಲಿ ಬೆಳೆ ಸಂಗ್ರಹಣದ ಹಬ್ಬದ ಆಚರಣೆ, ಇದು ಪಸ್ಕಹಬ್ಬದಲ್ಲಿ ಪ್ರಾರಂಭವಾಗಿ ಏಳು ವಾರಗಳ ನಂತರ ಕೊನೆಗೊಳ್ಳುತ್ತಿತ್ತು. 2) ಐತಿಹಾಸಿಕ ಹಿನ್ನಲೆ – ಸಿನಾಯಿ ಬೆಟ್ಟದಲ್ಲಿ ದೇವರು ಧರ್ಮಶಾಸ್ತ್ರವನ್ನು ಕೊಟ್ಟ ನೆನಪಿನಾರ್ಥವಾದ ಆಚರಣೆ, ಇದು ಐಗುಪ್ತದಿಂದ ವಿಮೋಚಿಸಲ್ಪಟ್ಟು 50 ದಿನಗಳ ನಂತರ ಸಂಭವಿಸಿತೆಂದು ಅಂದುಕೊಳ್ಳಲ್ಪಟ್ಟಿತ್ತು.

*ಅವರು ತಮ್ಮ ಸ್ವಂತ ಭಾಷೆಯಲ್ಲಿ* (ವ. 7): ಹಬ್ಬಕ್ಕಾಗಿ ಯೆರೂಸಲೇಮಿಗೆ ಬಂದಂತಹ ಯೆಹೂದಿಗಳಿಗೆ (ಆ ಸಮಯದಲ್ಲಿ ಪಾಲೆಸ್ತೀನ್‌ನಲ್ಲಿ ಮಾತನಾಡಲಾಗುತ್ತಿದ್ದ ಭಾಷೆಯಾದ) ಅರಾಮಿಕ್ ಭಾಷೆಯು ಅರ್ಥವಾಗುತ್ತಿತ್ತು. ಆದರೆ ಅವರ ಮಾತೃ ಭಾಷೆಗಳು ಅವರು ವಾಸಿಸುತ್ತಿದ್ದ ಸ್ಥಳದ ಭಾಷೆಗಳಾಗಿದ್ದವು.

*ಪಾರ್ಥಿಯನರು ... ಅರಬೀಯರು* (ವ. 9–11): ಲೂಕನು ಟೈಗ್ರೀಸ್ ನದಿಯ ಪೂರ್ವ ಭಾಗದಿಂದ ಪ್ರಾರಂಭಗೊಂಡು ರೋಮ್‌ನ ಪಶ್ಚಿಮ ಭಾಗದವರೆಗೂ ಇದ್ದ 15 ರಾಷ್ಟ್ರಗಳ, ದೇಶಗಳ ಮತ್ತು ಸ್ಥಳಗಳ ಪಟ್ಟಿಯನ್ನು ಮಾಡುತ್ತಾನೆ. ಯೆರೂಸಲೇಮಿನಲ್ಲಿ ನೆರೆದಿದ್ದ ಜನರು ಅಕ್ಷರಶಃವಾಗಿ 'ಎಲ್ಲಾ ರಾಷ್ಟ್ರಗಳಿಂದ' (ವ. 5) ಬಂದ ಜನರಾಗಿರಲಿಲ್ಲ. (ಉದಾಹರಣೆಗೆ: ಭಾರತ ಅಥವಾ ಪೌರಾತ್ಯ

ರಾಷ್ಟ್ರಗಳಿಂದ ಬಂದಿದ್ದ ಯಾವ ಜನರೂ ಅಲ್ಲಿ ಪ್ರಸ್ತಾಪಿಸಲ್ಪಟ್ಟಿಲ್ಲ). ಸಾಮಾನ್ಯವಾಗಿ ಸತ್ಯವೇದ ಬರಹಗಾರರು ಮಾಡುವ ರೀತಿಯಲ್ಲಿ, ಲೂಕನು ತನ್ನ ಸ್ವಂತ ದಿಗಂತದಿಂದ ಮಾತನಾಡುತ್ತಿದ್ದಾನೆ. ಆತನು ಗ್ರೀಕ್-ರೋಮನ್ ಜಗತ್ತನ್ನೂ ಮತ್ತು ಆ ಕಾಲದಲ್ಲಿ ಯೆಹೂದ್ಯರು ನೆಲೆಸಿದ್ದ ಎಲ್ಲಾ ರಾಷ್ಟ್ರಗಳನ್ನು ಉಲ್ಲೇಖಿಸುತ್ತಾನೆ. ಲೂಕನು ತನ್ನ ಪಟ್ಟಿಯಲ್ಲಿ ಶೇಮ್, ಹಾಮ್, ಯೆಫೆತ್‌ರ ಸಂತತಿಯನ್ನು ಸೇರಿಸುತ್ತಾನೆ. (ಆದಿಕಾಂಡ. 10 ನ್ನು ಹೋಲಿಸಿ). ಆದ್ದರಿಂದ ಪಂಚಾಶತ್ತಮ ದಿನದಂದು ಇಡೀ ಪ್ರಪಂಚದ ಪ್ರತಿನಿಧಿಗಳಾಗಿ ಈ 15 ರಾಷ್ಟ್ರಗಳು ಇದ್ದಾವೆಂಬುದನ್ನು ಲೂಕನು ಸೂಚಿಸುತ್ತಿದ್ದಾನೆ.

## ಇ) ಪಠ್ಯ ಪ್ರಶ್ನೆಗಳು

1. ಪಂಚಾಶತ್ತಮ ದಿನದಂದು ಯಾರ್‍ಯಾರು ಕೂಡಿ ಬಂದಿದ್ದರು ಮತ್ತು ಅವರು ಎಲ್ಲಿ ಕೂಡಿ ಬಂದಿದ್ದರು?
2. ವ. 2-4 ರಲ್ಲಿ ದಾಖಲಾದ ಪವಿತ್ರಾತ್ಮನ ಆಗಮನದ ಮೂರು ರೀತಿಯಾದ ಪ್ರಕಟನೆಗಳಾವವು?
3. 'ಅನ್ಯಭಾಷೆಗಳಲ್ಲಿ' ಮಾತನಾಡಲ್ಪಟ್ಟ ಸಂದೇಶವೇನು?
4. ಸಂದೇಶವನ್ನು ಕೇಳಿದ ಜನರು ಹೇಗೆ ಪ್ರತಿಕ್ರಿಯಿಸಿದರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಯೆಹೂದ್ಯರ ಪಂಚಾಶತ್ತಮ ಹಬ್ಬವು ವಾರಗಳ ಹಬ್ಬ, ಸುಗ್ಗಿಯ ಹಬ್ಬ ಮತ್ತು ಬೆಳೆಯ ಪ್ರಥಮ ಫಲಗಳ ಹಬ್ಬವೆಂದೂ ಸಹ ಕರೆಯಲ್ಪಡುತಿತ್ತು. ಇದು ಯೆಹೂದ್ಯ ವ್ಯವಸಾಯಿಕ ವರ್ಷದ ಅಂತ್ಯವನ್ನು ಆಚರಿಸುತ್ತಿತ್ತು. ಪಂಚಾಶತ್ತಮದ ಮೊದಲ ದಿನದ 'ಸುಗ್ಗಿ' ಯಾವುದು? ಪ್ರಥಮ ಫಲಗಳಾವುವು?
2. ನಂತರದ ಯೆಹೂದತ್ವದಲ್ಲಿ ಪಂಚಾಶತ್ತಮ ಹಬ್ಬವು ಸಿನಾಯಿ ಬೆಟ್ಟದಲ್ಲಿ ದೇವರಿಂದ ಮಾಡಲ್ಪಟ್ಟ ಒಡಂಬಡಿಕೆ ಹಾಗೂ ಧರ್ಮಶಾಸ್ತ್ರ ಕೊಡುವಿಕೆಯೊಂದಿಗೆ ಇದು ಸೇರಲ್ಪಟ್ಟಿತ್ತು. ಲೂಕನು ಸಿನಾಯಿ ಬೆಟ್ಟದ ಘಟನೆಗಳನ್ನು ಮುಕ್ತವಾಗಿ ಪ್ರಸ್ತಾಪಿಸದಿದ್ದರೂ, ಆತನು ಪಂಚಾಶತ್ತಮ ಹಬ್ಬದ ಮೊದಲ ದಿನದ ಕಥೆಯನ್ನು ಹೇಳುವುದರ ಮೂಲಕ ಪರೋಕ್ಷವಾಗಿ ಅದರೆಡೆಗೆ ಗಮನವನ್ನು ಸೆಳೆಯುತ್ತಾನೆ. ಪಂಚಾಶತ್ತಮ ಹಬ್ಬದ ಮೊದಲ ದಿನದ ಕುರಿತು 'ಹೊಸ ಒಡಂಬಡಿಕೆಯ' ಅನ್ವಯಗಳೇನು?
3. ಅನೇಕ ಸತ್ಯವೇದ ಶಾಸ್ತ್ರಜ್ಞರು ಪಂಚಾಶತ್ತಮ ಹಬ್ಬದ ಮೊದಲ ದಿನವನ್ನು 'ಬಾಬೇಲ್ ಗೋಪುರದ' ಬೆಳಕಿನಲ್ಲಿ ಅರ್ಥೈಸಿಕೊಳ್ಳುತ್ತಾರೆ (ಆದಿ. 11:1-9). ಇದು ಸಮಂಜಸವಾದದ್ದೆಂದು ನೀವು ಒಪ್ಪಿಕೊಳ್ಳುವಿರೋ? ಯಾಕೆ ಇದು ಸಮಂಜಸವಾದದ್ದು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ನೀವು ನಿಮ್ಮ ಸಭೆಯಲ್ಲಿ ಪಂಚಾಶತ್ತಮ ದಿನವನ್ನು ಆಚರಿಸುತ್ತೀರಾ? ಯಾಕೆ – ಯಾಕೆ ಇಲ್ಲ? ಒಂದು ವೇಳೆ ಆಚರಿಸುವುದಾದರೆ ಹೇಗೆ ಅದನ್ನು ಆಚರಿಸುವಿರಿ?
2. ಪಂಚಾಶತ್ತಮ ದಿನದಂದು ಯೆಹೂದ್ಯರು 'ಇದರ ಅರ್ಥವೇನು' ಎಂಬ ಪ್ರಶ್ನೆಯನ್ನು ಕೇಳಿದರು? ನಿಮಗೆ ವೈಯಕ್ತಿಕವಾಗಿ 'ಪಂಚಾಶತ್ತಮ' ಯಾವ ಅರ್ಥವನ್ನು ಕೊಡುತ್ತದೆ?
3. ನಿಮ್ಮ ಸ್ವಂತ ಸಭೆಯು ಪಂಚಾಶತ್ತಮದ ಅರ್ಥವನ್ನು ವಿಶ್ವಾಸಿಗಳಿಗೆ ತಿಳಿಸಲು ಸಾಧ್ಯವಾಗಿದೆಯೆಂದು ನೀವು ಆಲೋಚಿಸುತ್ತೀರೋ? ವಿವರಿಸಿ.
4. ನಿಮ್ಮ ಸ್ವಂತ ಸಭೆಯಲ್ಲಿ ಪಂಚಾಶತ್ತಮ ದಿನವನ್ನು ಅರ್ಥಗರ್ಭಿತವಾಗಿ ಹೇಗೆ ಆಚರಿಸಬಹುದು? ವಿವರಣೆ ಕೊಡಿ.

## ಊ) ಉಪದೇಶಿಸು ಮತ್ತು ಬೋಧಿಸು!

ಈ ವಾಕ್ಯಭಾಗವನ್ನು ಎರಡು ಪ್ರಸಂಗಗಳಿಗೆ ಉಪಯೋಗಿಸಬಹುದು:

1. ***'ಪಂಚಾಶತ್ತಮ – ದೇವರ ವಾಗ್ದಾನದ ನೇರವೇರಲ್ಪಡುವಿಕೆ'***

ಈ ಸಂದೇಶಕ್ಕಾಗಿ ಉಪಯೋಗಿಸಲು ಸಹಾಯವಾಗುವಂತಹ ಹಲವು ಅಂಶಗಳು ಈ ಕೆಳಗಿನಂತಿವೆ:

1. ಸ್ನಾನಿಕನಾದ ಯೋಹಾನನ ವಾಗ್ದಾನದ ನೇರವೇರಲ್ಪಡುವಿಕೆ, ಲೂಕ : 3:16
2. ಯೇಸುವಿನ ವಾಗ್ದಾನದ ನೆರವೇರಲ್ಪಡುವಿಕೆ.
   1) ಆತನು ನಿಮ್ಮೊಂದಿಗೆ ಹಾಗೂ ನಿಮ್ಮೊಳಗೆ ನೆಲಸಿರುವನು (ಯೋಹಾನ. 14:17)
   2) ಸಾಕ್ಷಿಕರಿಸಲು ಬಲ (ಅ. ಕೃ. 1:8)
   3) ಬೋಧಿಸು, ನಮಗೆ ನೆನಪಿಗೆ ಮತ್ತು ಮಾರ್ಗದರ್ಶಿಸು (ಯೋಹಾನ. 14:26; 16:13, ಲೂಕ 12:12)
   4) ಯೇಸು ಕ್ರಿಸ್ತನ ಕುರಿತು ಸಾಕ್ಷಿಕರಿಸುವುದು (ಯೋಹಾನ. 15:26)

3. ಹಳೆ ಒಡಂಬಡಿಕೆಯ ವಾಗ್ದಾನದ ನೆರವೇರುವಿಕೆ
   1) ಹೊಸ ಜನರು
   2) ಹೊಸ ಒಡಂಬಡಿಕೆ
   3) ವಿಶ್ವಾಸಿಗಳ ಹೃದಯದಲ್ಲಿ ಧರ್ಮಶಾಸ್ತ್ರದ ನೆರವೇರುವಿಕೆ

4. ನಿಮ್ಮ ಕುರಿತು ಏನು?

1) ದೇವರಿಂದ ಇಂತಹ ಒಳ್ಳೆಯ ವರವನ್ನು ನೀವು ಸ್ವೀಕರಿಸಿದ್ದೀರೋ? ಲೂಕ. 11:13

2) ಆತ್ಮನಿಂದ ನಡೆಸಲ್ಪಟ್ಟು ಮತ್ತು ಆತ್ಮನಿಂದ ನೀವು ಜೀವಿಸುತ್ತೀದ್ದೀರೋ? ಗಲಾತ್ಯ. 5:25, 22–23)

3) ಪೌಲನ ಹಾಗೇ ನಿಮ್ಮ ಜೀವಿತದಲ್ಲಿ ಸಾಕ್ಷೀಕರಿಸಲು ನಿಮಗೆ ಬಲವಿದೆಯೋ? ರೋಮಾ. 15:17–19, 1 ಕೊರಿ. 2:4

2. ***'ಪಂಚಾಶತ್ತಮ ದಿನದ ಮಹತ್ವ ಮತ್ತು ಪ್ರಾಮುಖ್ಯತೆ'***

ಈ ಕೆಳಗಿನ ಅಂಶಗಳನ್ನು ನಿಮ್ಮ ಸಂದೇಶಕ್ಕಾಗಿ ಉಪಯೋಗಿಸಬಹುದು.

1. ಒಂದು ಸುಗ್ಗಿಯ ಹಬ್ಬ: ಪಂಚಾಶತ್ತಮವು ವಾರಗಳ ಹಬ್ಬ, ಸುಗ್ಗಿಯ ಹಬ್ಬ ಮತ್ತು ಬೆಳೆಯ ಪ್ರಥಮ ಫಲಗಳ ಹಬ್ಬವೆಂದೂ ಕರೆಯಲ್ಪಡುತಿತ್ತು. (ಧಾನ್ಯಗಳ) ಸುಗ್ಗಿಯ ಉತ್ಪನ್ನದ ಅಂತ್ಯವಾಗಿ ಆಚರಿಸಲ್ಪಡುತ್ತಿತ್ತು.

   1) ಪಂಚಾಶತ್ತಮದ ಮೊದಲ ದಿನದಂದು 3000 ಜನರು ರಕ್ಷಿಸಲ್ಪಟ್ಟು ದೀಕ್ಷಾಸ್ನಾನ ಮಾಡಿಸಿಕೊಂಡರು. ಅ. ಕೃ. 2:41 – ಇದು ಒಂದು ಪ್ರಥಮ ಫಲ!

   2) ಆ ದಿನ ಮೊದಲುಗೊಂಡು ಪ್ರಪಂಚದಾದ್ಯಂತ ಮೂಲೆ ಮೂಲೆಗಳಿಂದ ಕೋಟಿಗಟ್ಟಲೆ ಜನರು ರಕ್ಷಿಸಲ್ಪಡುತ್ತಿದ್ದಾರೆ – ಇದು ಇನ್ನೂ ಮುಂದುವರೆಯಿತ್ತಿರುವ ದೊಡ್ಡ ಸುಗ್ಗಿ!

2. ಪಂಚಾಶತ್ತಮ ದಿನವು ಹಳೆ ಒಡಂಬಡಿಕೆಯಲ್ಲಿ ದೇವರು ಇಸ್ರಾಯೇಲ ಜನರೊಂದಿಗೆ ಸಿನಾಯಿ ಬೆಟ್ಟದಲ್ಲಿ ಮಾಡಿಕೊಂಡ ಒಡಂಬಡಿಕೆಯ ಜ್ಞಾಪಕಾರ್ಥವಾಗಿಯೂ ಸಹ ಆಚರಿಸಲ್ಪಡುತ್ತಿತ್ತು. ಪಂಚಾಶತ್ತಮ ದಿನವು ದೇವರು ತನ್ನ ಜನರೊಂದಿಗೆ ಮಾಡಿಕೊಂಡ ಹೊಸ ಒಡಂಬಡಿಕೆಯನ್ನು ಮುದ್ರೆ ಹಾಕುವಂತಹದ್ದಾಗಿದೆ. ಇದಕ್ಕೆ 2 ವಿಷಯಾಂಶಗಳು ಹೀಗಿವೆ:

   1) ಹೊಸ ಒಡಂಬಡಿಕೆ

   - ತನ್ನ ಹಳೆ ಒಡಂಬಡಿಕೆಯ ಜನರೊಂದಿಗೆ ದೇವರ ಒಡಂಬಡಿಕೆಯು ಸಿನಾಯಿ ಬೆಟ್ಟದಲ್ಲಿ ಮಾಡಲ್ಪಟ್ಟಿತ್ತು (ವಿಮೋ. 19–20)

   - ತನ್ನ ಹೊಸ ಒಡಂಬಡಿಕೆಯ ಜನರೊಂದಿಗೆ ದೇವರ ಒಡಂಬಡಿಕೆಯು ಯೇಸು ಕ್ರಿಸ್ತನ ಪುನರುತ್ಥಾನದೊಂದಿಗೆ ಮಾಡಲ್ಪಟ್ಟು ಪಂಚಶತ್ತಮದಿನದಂದು ಮುದ್ರಿಸಲ್ಪಟ್ಟಿತ್ತು. 'ಹೊಸ ಒಡಂಬಡಿಕೆಯ ಮೇಲೆ ಮುದ್ರೆಯು ಹಾಕಲ್ಪಟ್ಟಿತ್ತು – ಬರಹದ ಮೂಲಕವಾಗಿ ಅಲ್ಲ, ಆತ್ಮನ ಮೂಲಕ. ಏಕೆಂದರೆ ಬರಹದ ಪತ್ರವು ಮರಣವನ್ನುಂಟುಮಾಡುತ್ತದೆ. ದೇವರಾತ್ಮ ಸಂಬಂಧವಾದದ್ದು ಜೀವವನ್ನುಂಟುಮಾಡುತ್ತದೆ' (2 ಕೊರಿ. 3:6).

2) ಧರ್ಮಶಾಸ್ತ್ರದ ನೆರವೇರಲ್ಪಡುವಿಕೆ

- ಈ ಧರ್ಮಶಾಸ್ತ್ರವು ಸಿನಾಯಿ ಬೆಟ್ಟದಲ್ಲಿ ಕೊಡಲ್ಪಟ್ಟಿತು. (ವಿಮೋ. 19–20)
- ಆತ್ಮನು ಪಂಚಾಶತ್ತಮ ದಿನದಲ್ಲಿ ಕೊಡಲ್ಪಟ್ಟನು. ಶಿಷ್ಯರ ಹೃದಯದಲ್ಲಿನ ಬೆಂಕಿಯ ಆತ್ಮನು ಧರ್ಮಶಾಸ್ತ್ರದ ನೆರವೇರಲ್ಪಡುವಿಕೆ, ಹಳೆ ಒಡಂಬಡಿಕೆಯ ಪ್ರವಾದಿಗಳು ಮುಂದೆ ಹೇಳಿದ ಪ್ರವಾದನೆಯ ಹಾಗೆಯೇ, ಯೆರೆಮೀಯ. 31–31–33, ಯೆಹೆಜ್ಕೇಲನು. 11:19–20; 36:26–28.

3. ಬದಲಾದ ಬಾಬೇಲಿನ ಶಾಪ

1) ಬಾಬೇಲಿನಲ್ಲಿ ಜನರ ಭಾಷೆಯು ಗೊಂದಲಮಯವಾಗಿ ಜನರು ಒಬ್ಬರಿಗೊಬ್ಬರು ಅರ್ಥೈಸಿಕೊಳ್ಳದ ಹಾಗಾಯಿತು. ಆದರೆ ಪಂಚಾಶತ್ತಮದ ಮೊದಲನೇ ದಿನದಂದು ಭಾಷೆಗಳ ಮಧ್ಯದಲ್ಲಿದ್ದ ಅಡ್ಡಿಯು ಅಸಾಧಾರಣವಾಗಿ ಜಯಿಸಲ್ಪಟ್ಟಿತು ಮತ್ತು ಅಪೋಸ್ತಲರು ದೇವರ ಮಹತ್ತನ್ನು ವಿವಿಧ ಭಾಷೆಗಳಲ್ಲಿ ಘೋಷಿಸಿದಾಗ ವಿವಿಧ ದೇಶಗಳಿಂದ ಬಂದಂತಹ ಜನರೆಲ್ಲರೂ ಅವರು ಹೇಳಿದ್ದನ್ನು ಅರ್ಥೈಸಿಕೊಂಡರು.

2) ಬಾಬೇಲ್ ಗೋಪುರದ ಪರಿಣಾಮವಾಗಿ ಜನರೆಲ್ಲರೂ ಭೂ–ಲೋಕದಲ್ಲೆಲ್ಲಾ ಚದುರಿಸಲ್ಪಡುವಂತಾಯಿತು. ಆದರೆ ಈಗ ಕ್ರಿಸ್ತನಲ್ಲಿ ಪ್ರತಿಯೊಂದು ಜನಾಂಗವು ಒಟ್ಟಾಗುವದೆಂಬ ಸೂಚನೆಯಾಗಿ ಪಂಚಾಶತ್ತಮದ ಮೊದಲ ದಿನದಂದು ಯೆರೂಸಲೇಮಿನಲ್ಲಿ 'ಜಗತ್ತಿನ ಪ್ರತಿಯೊಂದು ಜನಾಂಗದಿಂದಲೂ' ಜನರೆಲ್ಲರೂ ಒಟ್ಟಾಗಿ ಕೂಡಿ ಬಂದರು. ಕ್ರಿಸ್ತನ ರಾಜ್ಯದ ಬಹು–ಜನಾಂಗಗಳ, ಬಹು–ರಾಜ್ಯಗಳ, ಬಹು–ಭಾಷಾ ಸ್ವರೂಪವನ್ನು ಬೇರೆ ಯಾವ ಸಂಗತಿಯೂ ಉತ್ತಮವಾಗಿ ನಿದರ್ಶಿಸಲಾಗದು.

3) ಬಾಬೇಲಿನಲ್ಲಿ ಜನರು ಗರ್ವದಿಂದ ತಮ್ಮ ಹೆಸರುಗಳನ್ನು ಪ್ರಖ್ಯಾತಿಗೊಳಿಸಿಕೊಂಡು ಆಕಾಶವನ್ನು ಮುಟ್ಟಬೇಕೆಂದು ಬಯಸಿದ್ದರು. ಆದರೆ ಪಂಚಾಶತ್ತಮದ ಮೊದಲ ದಿನದಂದು, ದೀನರಾದ ತನ್ನ ಶಿಷ್ಯರನ್ನು ತುಂಬಲು ಮತ್ತು ಸಶಕ್ತಗೊಳಿಸಲು ದೇವರಾದ ಪರಿಶುದ್ಧಾತ್ಮನು ಭೂಲೋಕಕ್ಕೆ ಇಳಿದು ಬಂದನು.

4. ನಮ್ಮ ಜೀವಿತಗಳಲ್ಲಿ ಕ್ರೈಸ್ತನ ಪುನರುತ್ಥಾನದ ಈಡೇರುವಿಕೆ. ಪಂಚಾಶತ್ತಮವು ವಾರಗಳ ಹಬ್ಬ, ಸುಗ್ಗಿಯ ಹಬ್ಬ ಮತ್ತು ಬೆಳೆಯ ಪ್ರಥಮ ಫಲಗಳ ಹಬ್ಬವೆಂದೂ ಕರೆಯಲ್ಪಡುತಿತ್ತು. (ಧಾನ್ಯಗಳ) ಸುಗ್ಗಿಯ ಉತ್ಪನ್ನದ ಅಂತ್ಯವಾಗಿ ಆಚರಿಸಲ್ಪಡುತ್ತಿತ್ತು. ಇದು ಪಸ್ಕಹಬ್ಬದ ಏಳು ವಾರಗಳ ಮುಂಚೆ ಪ್ರಾರಂಭಗೊಳ್ಳುತ್ತಿತ್ತು.

1) ಪುನರುತ್ಥಾನದ ಹಬ್ಬದಲ್ಲಿ ನಾವು ಕ್ರೂಜೆಯ ಮೇಲಿನ ಕ್ರಿಸ್ತನ ತ್ಯಾಗಪೂರ್ವ ಮರಣವನ್ನು ಆಚರಿಸುತ್ತೇವೆ. ಆತನು ನಮ್ಮ ಶಾಪ ಪಾಪಗಳನ್ನು ತನ್ನ ಮೇಲೆ ಹಾಕಿಕೊಂಡು ನಮ್ಮ ಸ್ಥಳದಲ್ಲಿ ಧರ್ಮಶಾಸ್ತ್ರದ ಬೇಡಿಕೆಯನ್ನು ಈಡೇರಿಸಿದನು. ಗಲಾತ್ಯ. 3:13–14, ರೋಮಾ. 8:3)

2) ಕ್ರಿಸ್ತನ ರಕ್ಷಿಸುವ ಕಾರ್ಯದ ನೆರವೇರಲ್ಪಡುವಿಕೆಗಾಗಿ ಪವಿತ್ರಾತ್ಮನು ಪಂಚಾಶತ್ತಮ ದಿನದಂದು ಇಳಿದು ಬಂದನು. ಕ್ರಿಸ್ತನು ತನ್ನ ಆತ್ಮನಿಂದ ನಮ್ಮಲ್ಲಿ ವಾಸಿಸಿ ನಮ್ಮ ಜೀವಿತಗಳನ್ನು ಆತ್ಮನ ಮೂಲಕ ನಿಯಂತ್ರಿಸುತ್ತಾನೆ ಗಲಾತ್ಯ. 2:20; ರೋಮಾ. 8:9–11.

# ಪಾಠ 4. ಜನಸಮೂಹಕ್ಕೆ ಪೇತ್ರನ ಬೋಧನೆ, 2:14–41

## ಅ) ವಾಕ್ಯಭಾಗ

ಹನ್ನೆರಡು ಜನ ಅಪೋಸ್ತಲರು ಎದ್ದು ನಿಂತುಕೊಂಡರು ಮತ್ತು ಪೇತ್ರನು ಜನರ ಗೊಂದಲವನ್ನು ಪ್ರಬೋಧಿಸುತ್ತಾ, ತಾವು ಕುಡಿದು ಮತ್ತರಾಗಿಲ್ಲ ಬದಲಾಗಿ ಇದು ಯೋವೇಲನ ಪ್ರವಾದನೆಯ ನೆರವೇರುವಿಕೆಯಾಗಿದೆ ಎಂದು ತಿಳಿಸಿದನು. ನಂತರ ಪೇತ್ರನು ಅಪೋಸ್ತಲರ ಕೃತ್ಯಗಳಲ್ಲಿ ದಾಖಲೆಯಾದ ಮೊದಲ ಧರ್ಮೋಪದೇಶವನ್ನು ಪ್ರಸಂಗಿಸಿದನು ಅಥವಾ ಬೋಧಿಸಿದನು. ಆತನು ಸ್ಪಷ್ಟವಾಗಿ ಯೇಸು ಕ್ರಿಸ್ತನ ಸುವಾರ್ತೆಯನ್ನು ಪ್ರಕಟಿಸಿದನು. ಈ ಬೋಧನೆಯು ಅಲ್ಲಿ ನೆರದಿದ್ದ ಜನರನ್ನು ಆಳವಾಗಿ ಸ್ಪರ್ಷಿಸಿತು. ಆ ದಿನದಲ್ಲಿ ಸುಮಾರು 300 ಜನರು ರಕ್ಷಿಸಲ್ಪಟ್ಟು ದೀಕ್ಷಾಸ್ನಾನ ಮಾಡಿಸಿಕೊಂಡರು.

## ಆ) ಟಿಪ್ಪಣಿ

*ಈಗ ಸಮಯ ಬೆಳಿಗ್ಗೆ ಒಂಭತ್ತು ಗಂಟೆ* (ವ. 15): ಪಂಚಾಶತ್ತಮ ದಿನದಂತಹ ಹಬ್ಬದಂದು, ಯೆಹೂದಿಗಳು 10 ಗಂಟೆಗಿಂತ ಮೊದಲು ಉಪಹಾರ ಸೇವಿಸುವುದಾಗಲೀ ಅಥವಾ ದ್ರಾಕ್ಷಾರಸವನ್ನು ಕುಡಿಯುವಂತಾಗಲಿ ಮಾಡುತ್ತಿದ್ದಿಲ್ಲ. ಹಾಗಾದರೆ ಅವರು ಹೇಗೆ ಮಧ್ಯಪಾನ ಮಾಡಲಿಕ್ಕೆ ಸಾಧ್ಯ?

*ಕರ್ತನು ನನ್ನ ಕರ್ತನಿಗೆ ಹೇಳಿದನು* (ವ. 35): ಕರ್ತನು (ದೇವರು) ನನ್ನ ಕರ್ತನಿಗೆ (ದಾವೀದನ ಕುಮಾರನು, ಮೆಸ್ಸೀಯನಿಗೆ) ಹೇಳಿದನು.

*ಅವರಿಗೆ ಹೃದಯದಲ್ಲಿ ಅಲಗು ನೆಟ್ಟಂತಾಗಿ* (ವ. 37): ಅವರು ಮೊದಲು ಯೇಸು ಕ್ರಿಸ್ತನ ಕುರಿತಾಗಿ ತೋರಿಸಿದ ತಿರಸ್ಕಾರ ಹಾಗೂ ಈಗ ತೋರಿಸುತ್ತಿರುವಂತಹ ವಿಶ್ವಾಸಗಳೆರಡನ್ನೂ ಸೂಚಿಸಿ ವಿವರಿಸುತ್ತಿದೆ.

*ಪವಿತ್ರಾತ್ಮನ ವರಗಳು* (ವ. 38): ನಮ್ಮಲ್ಲಿ ವಾಸಿಸುವಂತಹ ಪವಿತ್ರಾತ್ಮನ ವರದ ವಾಗ್ದಾನವು ಎಲ್ಲಾ ವಿಶ್ವಾಸಿಗಳಿಗೆ ಕೊಡಲ್ಪಟ್ಟಿದ್ದಾನೆ. (ರೋಮಾ. 8:9–11)

## ಇ) ಪಠ್ಯದ ಪ್ರಶ್ನೆಗಳು

1. ಪೇತ್ರನ ಸಂದೇಶವನ್ನು ಕೇಳಿದ ಜನರು ಯಾರು?

2. ಯೋವೇಲನ ಪ್ರವಾದನೆಯು (ವ. 17–18 ರಲ್ಲಿ ದಾಖಲಾದಂತೆ) ದೇವರಾತ್ಮನನ್ನು ಮತ್ತು ಪ್ರವಾದನೆಯನ್ನು ಸ್ವೀಕರಿಸುವಂತಹ ಅನೇಕ ಜನರ ಗುಂಪಿನ ಪಟ್ಟಿಯನ್ನು ಕೊಡುತ್ತದೆ. ಅವರು ಯಾರು?

3. ಪೇತ್ರನ ಪ್ರಸಂಗದ ಕೊನೆಯಲ್ಲಿ ಜನ ಸಮೂಹವು ಅಪೋಸ್ತಲರಿಗೆ ಯಾವ ಪ್ರಶ್ನೆಯನ್ನು ಕೇಳಿದರು? ಮತ್ತು ಪೇತ್ರನು ಅವರಿಗೆ ಏನು ಮಾಡಲು ಹೇಳಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅಪೋಸ್ತಲರ ಕೃತ್ಯಗಳಲ್ಲಿರುವ ಹತ್ತೊಂಭತ್ತು ಬೋಧನೆಗಳಲ್ಲಿ (ಅಥವಾ ಸಂದೇಶಗಳಲ್ಲಿ) ಮೊದಲನೆಯದನ್ನು ಈ ವಾಕ್ಯಭಾಗವು ಹೊಂದಿದೆ – ಅವುಗಳಲ್ಲಿ ಪೇತ್ರನಿಂದ ಎಂಟು, ಯಾಕೋಬ ಮತ್ತು ಸ್ತೆಫನರಿಂದ ತಲಾ ಒಂದು ಮತ್ತು ಪೌಲನಿಂದ ಒಂಭತ್ತು ಕೊಡಲ್ಪಟ್ಟಿವೆ. ಈ ಸಂದೇಶಗಳು ಇಡೀ ಪಠ್ಯದ ನಾಲ್ಕರಲ್ಲಿ ಒಂದು ಭಾಗವಾಗಿದೆ. ಈ ಸಂದೇಶಗಳು ಹೇಳಿದ ಪ್ರತಿಯೊಂದು ಮಾತುಗಳನ್ನು ಪದದಿಂದ ಪದಗಳನ್ನು ದಾಖಲಿಸಲಾಗಿದೆ ಎಂದು ನೀವು ಭಾವಿಸುತ್ತೀರೋ? ಯಾಕೆ – ಯಾಕೆ ಇಲ್ಲ?

2. ಪೇತ್ರನ ಪ್ರಸಂಗವು ಮೂರು ಪ್ರಮುಖ ಭಾಗಗಳನ್ನು ಒಳಗೊಂಡಿದೆ. ಅವು ಯಾವುವು?

3. ಪೇತ್ರನು ಯೋವೇಲನ ಪ್ರವಾದನೆಯನ್ನು ಉಲ್ಲೇಖಿಸುವಾಗ ಮನೋಹರವಾದ ಬದಲಾವಣೆಯನ್ನು ಮಾಡಿದನು (ವ. 17). ಆ ಬದಲಾವಣೆ ಏನಾಗಿತ್ತು ಮತ್ತು ಯಾಕೆ ಪೇತ್ರನು ಪದಗಳನ್ನು ಬದಲಾಯಿಸಿದನು?

4. ಸತ್ಯವೇದದಲ್ಲಿ ತ್ರೈಯೈಕ ಎಂಬ ಪದವು ಎಲ್ಲಿಯೂ ಕಂಡು ಬರುವುದಿಲ್ಲ. ಇದರ ಮಧ್ಯದಲ್ಲಿ ಹೊಸ ಒಡಂಬಡಿಕೆಯಲ್ಲಿ ದೇವತ್ವದ ಮೂರು ವ್ಯಕ್ತಿತ್ವದ ಕುರಿತು ಸ್ಪಷ್ಟವಾಗಿ ಬೋಧಿಸಲಾಗಿದೆ. ಈ ವಾಕ್ಯಭಾಗದಲ್ಲಿ ಎರಡು ವಚನಗಳಿವೆ, ತ್ರೈಯೈಕತ್ವದ ಕಾರ್ಯವು ಒಟ್ಟಾಗಿರುವುದನ್ನು ನಾವು ಅಲ್ಲಿ ನೋಡಬಹುದು. ಆ ವಾಕ್ಯಗಳು ಯಾವುವು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಈ ಸಂದೇಶವು ಅಪೋಸ್ತಲರ ಕೃತ್ಯಗಳಲ್ಲಿ ದಾಖಲಾಗಿರುವ ಮೊಟ್ಟ ಮೊದಲನೆಯ ಸಂದೇಶವಾಗಿದೆ. ಇದು ಹೆಚ್ಚಾಗಿ ಯೇಸು ಕ್ರಿಸ್ತನ ಮೇಲೆ ಕೇಂದ್ರೀಕೃತವಾಗಿದೆ. ನಿಮ್ಮ ಸ್ವಂತ ಸಭೆಯಲ್ಲಿ ಕೇಳಿದ ಇತ್ತೀಚಿನ ಐದು ಸಂದೇಶಗಳನ್ನು ನೆನಪಿಸಲು ಪ್ರಯತ್ನಿಸಿಕೊಳ್ಳಿರಿ, ಅವರು ಎಷ್ಟರ ಮಟ್ಟಿಗೆ ಯೇಸು ಕ್ರಿಸ್ತನನ್ನು ಕೇಂದ್ರಿಕರಿಸಿದರು?

2. ಯೇಸು ಕ್ರಿಸ್ತನ ಪವಿತ್ರಾತ್ಮ ಮತ್ತು ಕ್ಷಮಾಪಣೆಯ ವರಗಳಿಗೆ ಪೇತ್ರನು ಕೆಲವು 'ಷರತ್ತುಗಳನ್ನು' ವಿಧಿಸುವುದನ್ನು ವ. 38 ರಲ್ಲಿ ನಾವು ಕಾಣುತ್ತೇವೆ. ಜನರು ಸುವಾರ್ತೆಯನ್ನು ನಂಬಿ ಸ್ವೀಕರಿಸುವುದರ ಜೊತೆಗೆ 'ಮಾನಸಾಂತರಪಟ್ಟು ದೀಕ್ಷಾಸ್ನಾನ' ಮಾಡಿಸಿಕೊಳ್ಳಬೇಕಾಗಿತ್ತು. ನಿಮ್ಮ ಸ್ವಂತ ಸಭೆಯ ಕುರಿತು ಏನು – ಹೊಸ ವಿಶ್ವಾಸಿಗಳಿಂದ ಎಷ್ಟರ ಮಟ್ಟಿಗೆ ಮಾನಸಾಂತರ

ಮತ್ತು ದೀಕ್ಷಾಸ್ನಾನವನ್ನು ಕೋರುತ್ತೇವೆ? ಇದರ ಕುರಿತು ನಿಮಗೆ ವ್ಯಕ್ತಿಗತವಾದ ಅಭಿಪ್ರಾಯಗಳೇನಾದರೂ ಇವೆಯೋ?

## ಊ) ಉಪದೇಶಿಸು ಮತ್ತು ಬೋಧಿಸು!

ಅ. ಕೃ. 2:22–39 ರಲ್ಲಿರುವ ಯೇಸು ಕ್ರಿಸ್ತನ ಕುರಿತಾದ ಪೇತ್ರನ ಸುವಾರ್ತಾ ಸಂದೇಶವು (2:40–41 ರ ಆಧಾರದ ಮೇಲೆ ಒಂದು ಹೆಚ್ಚಿನ ಅಂಶವನ್ನು ಒಳಗೊಂಡು) ಆರು ಅಂಶಗಳ ರಚನೆಯನ್ನು ಹೊಂದಿದೆ. ನಾವು ಅದನ್ನು ಈ ದಿನ ಸುವಾರ್ತೆಯನ್ನು ಬೋಧಿಸುವಾಗ ಮತ್ತು ಉಪದೇಶಿಸುವಾಗ ಬಳಸಬಹುದು.

1) ಯೇಸು ಕ್ರಿಸ್ತನ ಜೀವನ ಮತ್ತು ಸೇವೆ (2:22): ಯೇಸು, ಅದ್ಭುತಗಳ (ವಿಶೇಷ ಬಲಗಳ), ಮಹತ್ಕಾರ್ಯಗಳ (ಜನರನ್ನು ಬೆರಗುಗೊಳಿಸಿದ ಕಾರ್ಯಗಳ) ಮತ್ತು ಸೂಚಕ ಕಾರ್ಯಗಳ (ಆತ್ಮೀಕವಾದ ಸತ್ಯಗಳನ್ನು ಸಂವಹಿಸಿದ ಕಾರ್ಯಗಳ) ಮೂಲಕ ದೇವರಿಂದ ಕಳುಹಿಸಲ್ಪಟ್ಟ ಮತ್ತು ಅಧಿಕಾರ ಕೊಡಲ್ಪಟ್ಟ ಒಬ್ಬ ಮನುಷ್ಯನಾಗಿದ್ದನು. ದೇವರು ಆತನ ಮೂಲಕ ಬಹಿರಂಗವಾಗಿಯೂ ಸಾರ್ವಜನಿಕವಾಗಿಯೂ ಕಾರ್ಯ ಮಾಡಿದನು.

2) ಯೇಸು ಕ್ರಿಸ್ತನ ಮರಣ (2:23): ಯೇಸು ಕ್ರಿಸ್ತನು ಧರ್ಮಶಾಸ್ತ್ರವಿಲ್ಲದ ದುಷ್ಟರಿಂದ (ಶಿಲುಬೆಗೆ ಜಡಿದು) ಕೊಲ್ಲಲ್ಪಟ್ಟನು, ಆದರೆ ಇದು ದೇವರ ನಿಶ್ಚಿತ ಸಂಕಲ್ಪದಂತೆ ನೆರವೇರಿತು.

3) ಯೇಸು ಕ್ರಿಸ್ತನ ಪುನರುತ್ಥಾನ (2:24–32): ಪ್ರವಾದಿಗಳು ಮುಂತಿಳಿಸಿದಂತೆ (ದಾವೀದನಿಂದ – ಕೀರ್ತನೆ. 16:8–11 ರಲ್ಲಿ ಮುಂತಿಳಿಸಲ್ಪಟ್ಟಿತ್ತು ಮತ್ತು ಪೇತ್ರನು ಇದನ್ನು ಯೇಸುವಿನ ಪುನರುತ್ಥಾನಕ್ಕೆ ಅನ್ವಯಿಸಿದನು) ಮತ್ತು ಅಪೋಸ್ತಲರು ಪ್ರತ್ಯಕ್ಷವಾಗಿ ಕಂಡಂತೆ ಯೇಸು ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು. ಬರೆಯಲ್ಪಟ್ಟ ಪ್ರವಾದಿಗಳ ವಚನಗಳು ಹಾಗೂ ಅಪೋಸ್ತಲರ ನುಡಿಯಲ್ಪಟ್ಟ ಸಾಕ್ಷಿಗಳು ಎರಡೂ ಒಟ್ಟಾಗಿ ಸೇರಿದವು.

4) ಯೇಸು ಕ್ರಿಸ್ತನ ಮಹಿಮಾಕರಣ (2:33–36): ಯೇಸು ದೇವರ ಬಲಗಡೆಗೆ ಕೂರಿಸಲ್ಪಟ್ಟು ಮಹಿಮಾಕರಿಸಲ್ಪಟ್ಟನು. ಪೇತ್ರನು ಕೀರ್ತನೆ. 110:1 ನ್ನು ಉಲ್ಲೇಖಿಸುತ್ತಾ 'ನೀವು ಶಿಲುಬೆಗೇರಿಸಿದ ಈ ಯೇಸುವನ್ನೇ ದೇವರು ಕರ್ತನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆ'ಎಂದು ಹೇಳುತ್ತಾ ಆತನನ್ನು ಅತ್ಯುನ್ನತ ಮಹಿಮೆಯ ಮತ್ತು ಸರ್ವಾಧಿಕಾರದ ಸ್ಥಾನದಲ್ಲಿರಿಸುತ್ತಾ ಈ ಅಂಶವನ್ನು ಬೆಂಬಲಿಸಲುತ್ತಾನೆ. ಯೇಸು ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನನ್ನು ತಂದೆಯಿಂದ ಸ್ವೀಕರಿಸಿ ತನ್ನ ಜನರ ಮೇಲೆ ಈಗಾಗಲೇ ಸುರಿಸಿದ್ದನು.

5) ಯೇಸು ಕ್ರಿಸ್ತನ ರಕ್ಷಣೆ (2:37–39): ಮನಸಾಂತರಪಟ್ಟು, ನಂಬಿ (ವ. 44 ರಲ್ಲಿ ಪೇತ್ರನ ಸಂದೇಶವನ್ನು ಅಂಗೀಕರಿಸಿದವರು 'ವಿಶ್ವಾಸಿಗಳೆಂದು' ಕರೆಯಲ್ಪಟ್ಟದ್ದನ್ನು ಗಮನಿಸಿ), ದೀಕ್ಷಾಸ್ನಾನ ಮಾಡಿಸಿಕೊಳ್ಳುವವರೆಲ್ಲರಿಗೆ ಯೇಸು ಕ್ರಿಸ್ತನು ಕೊಡುವುದೇನೆಂದರೆ:

    - ಕ್ಷಮಾಪಣೆ (ಮುಂಚೆ ಆತನನ್ನು ತಿರಸ್ಕರಿಸಿ ಕ್ರೂಜೆಗೆ ಹಾಕುವುದರೊಂದಿಗೆ ಪಾಲುಗೊಂಡವರಿಗೂ ಸಹ)

- ಮತ್ತು ಆತ್ಮನು (ಆತನು ಅವರಿಗೆ ಹೊಸ ಜನ್ಮವನ್ನು ಕೊಡುವವನೂ, ಅವರಲ್ಲಿ ವಾಸಿಸುವವನೂ, ಅವರ ಜೀವಿತಗಳನ್ನು ಮಾರ್ಪಡಿಸುವವನೂ ಮತ್ತು ಹೊಸ ದೇವಜನರೊಂದಿಗೆ ಅವರನ್ನು ಒಟ್ಟುಗೂಡಿಸುವವನೂ ಆಗಿದ್ದಾನೆ)

6) ಯೇಸು ಕ್ರಿಸ್ತನ ಹೊಸ ಸಮುದಾಯ (2:40–41): ಆತನು ಸುವಾರ್ತೆಯ ಸಂದೇಶವನ್ನು ಸ್ವೀಕರಿಸುವಂತಹ – ಅಂದರೆ, ಪಶ್ಚಾತ್ತಾಪಪಟ್ಟು, ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವಂತಹ – ಜನರನ್ನು ಒಂದು ಹೊಸ ಸಮುದಾಯವನ್ನಾಗಿ ರೂಪಿಸುತ್ತಾನೆ. ಈ ಕಾರಣದಿಂದಲೇ ಪಂಚಾಶತ್ತಮದ ಮೊದಲ ದಿನವನ್ನು 'ಸಭೆಯ ಜನ್ಮದಿನ'ವೆಂದು ಕರೆಯಲಾಗುತ್ತದೆ.

# ಪಾಠ 5. ವಿಶ್ವಾಸಿಗಳ ಅನ್ಯೋನ್ಯತೆ, 2:41–47

## ಅ) ವಾಕ್ಯಭಾಗ

ಲೂಕನು ಯೆರೂಸಲೇಮಿನ ಆದಿಸಭೆಯ ಜೀವನ ಮತ್ತು ಅನ್ಯೋನತೆಯ ಮೇಲೆ ಪಂಚಾಶತ್ತಮದಿನವು ಬೀರಿದ ಪರಿಣಾಮವನ್ನು ವಿವರಿಸುತ್ತಾನೆ. ವಿಶ್ವಾಸಿಗಳು ಜನರೆಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು ಮತ್ತು ಪ್ರತಿದಿನವೂ ಜನರು ರಕ್ಷಣೆ ಹೊಂದುತ್ತಾ ಸಭೆಗೆ ಸೇರಿಸಲ್ಪಡುತ್ತಿದ್ದಂತೆ ಕರ್ತನು ಅವರನ್ನು ಆಶೀರ್ವದಿಸಿದನು.

## ಆ) ಟಿಪ್ಪಣಿ

*ರೊಟ್ಟಿ ಮುರಿಯುವುದರಲ್ಲಿ* (ವ. 42): ಈ ಪದ ಸಮುಚ್ಛಯವು ಈ ವಾಕ್ಯಭಾಗದಲ್ಲಿ ಕರ್ತನ ಭೋಜನವನ್ನು ಉಲ್ಲೇಖಿಸುವಂತೆ ತೋರುತ್ತದೆ. ವ. 46 ರಲ್ಲಿಯೂ ಸಹ ಇದೇ ರೀತಿಯಾದ ಗ್ರೀಕ್ ಭಾಷೆಯ ಪದ ವಿನ್ಯಾಸವನ್ನು ಕಾಣಬಹುದು, ಅಲ್ಲಿ ಅದು ಮನೆಗಳಲ್ಲಿನ ಅನ್ಯೋನತಾ ಊಟವನ್ನು ಉಲ್ಲೇಖಿಸುವಂತೆ ತೋರುತ್ತದೆ. ಈ ಅನ್ಯೋನತಾ ಊಟವು ಬಹುಶಃ ಕರ್ತನ ಭೋಜನದ ನಂತರ ನಡೆಯುತ್ತಿತ್ತು.

## ಇ) ಪಠ್ಯ ಪ್ರಶ್ನೆಗಳು

1. ಯೆರೂಸಲೇಮಿನಲ್ಲಿದ್ದ ಮೊದಲ ವಿಶ್ವಾಸಿಗಳು ಯಾವ ನಾಲ್ಕು ಕಾರ್ಯಚಟುವಟಿಕೆಗಳಲ್ಲಿ ಧೃಢವಾಗಿ ಸಾಗುತ್ತಿದ್ದರು (ವ. 42)?
2. ವ. 46 ರಲ್ಲಿ ದಾಖಲಿಸಿರುವಂತೆ ಯೆರೂಸಲೇಮಿನ ಸಭೆಯ ಕಾರ್ಯಚಟುವಟಿಕೆಗಳ ಎರಡು ಪ್ರಮುಖ ಸ್ಥಳಗಳಾವುವು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗದಲ್ಲಿ ವಿವರಿಸಿರುವಂತೆ ಯೆರೂಸಲೇಮಿನಲ್ಲಿದ್ದ ಆದಿಸಭೆಯಲ್ಲಿನ ಅನ್ಯೊನ್ಯತೆಯು ಹೇಗಿತ್ತು?
2. ಈ ವಾಕ್ಯಭಾಗದಲ್ಲಿ ಯೆರೂಸಲೇಮಿನ ಸಭೆಯ ಜೀವನದ ಕುರಿತು ಸಾರ್ವಜನಿಕರಿಂದ ಬರುತ್ತಿದ್ದ ಪ್ರತಿಕ್ರಿಯೆಯ ಕುರಿತು ಲೂಕನು ಏನು ಬರೆಯುತ್ತಾನೆ?
3. ಯೆರೂಸಲೇಮಿನ ಸಭೆಯಲ್ಲಿ ಬೋಧನೆ ಮಾಡಿದ ಅಪೋಸ್ತಲರು (ವ. 42) ಈಗ ಜೀವಂತವಾಗಿಲ್ಲ. ಹಾಗಾಗಿ ನಮ್ಮ ಸ್ವಂತ ಸಭೆಯಲ್ಲಿ ನಾವು ಹೇಗೆ ಈ 'ಬೋಧನೆಯ ಅಂತರ'ವನ್ನು ತುಂಬಲು ಸಾಧ್ಯ? ಪ್ರತೀ ಪೀಳಿಗೆಯಲ್ಲಿಯೂ ಈ ರೀತಿಯಾದ 'ಅಪೋಸ್ತಲರು' ಇದ್ದಾರೋ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಈ ವಾಕ್ಯಭಾಗದಲ್ಲಿ ಲೂಕನು ಯೆರೂಸಲೇಮಿನ ಆದಿಸಭೆಯ ಜೀವಿತದ ಒಂದು ಅದ್ಭುತವಾದ ಚಿತ್ರಣವನ್ನು ಮುಂದಿಡುತ್ತಾನೆ. ಈ ಚಿತ್ರಣವನ್ನು ನಿಮ್ಮ ಸಭೆಯೊಂದಿಗೆ ಹೋಲಿಸಿರಿ! ಸರಿಹೋಲುವಿಕೆಗಳು? ವ್ಯತ್ಯಾಸಗಳು? ವ್ಯತ್ಯಾಸಗಳಿರಲು ಕಾರಣಗಳೇನಾಗಿರಬಹುದು?
2. ಯೆರೂಸಲೇಮಿನ ಆದಿಸಭೆಯ ಜೀವಿತದ ಯಾವ ಭಾಗವು ವಿಶೇಷವಾದ ರೀತಿಯಲ್ಲಿ ನಿಮಗೆ ಆಕರ್ಷಣೀಯವಾದುದ್ದಾಗಿದೆ? ಯಾಕೆ? ನಮ್ಮ ಸ್ವಂತ ದಕ್ಷಿಣ ಭಾರತದ ಸಭೆಗಳಲ್ಲಿ ಈ ಭಾಗವನ್ನು ಬಲಗೊಳಿಸುವುದು ನಮಗೆ ಅವಶ್ಯಕವಾಗಿದೆಯಾ? ನಾವು ಹೇಗೆ ಇದನ್ನು ಮಾಡಬಹುದು?

## ಊ) ಉಪದೇಶಿಸು ಮತ್ತು ಬೋಧಿಸು!

ಯೆರೂಸಲೇಮಿನ ಆದಿಸಭೆಯ ಜೀವಿತದ ಕುರಿತಾದ ಅ. ಕೃ. 2:42–47 ರಲ್ಲಿರುವ ವಿವರಣೆಯು ಒಂದು ಸತ್ಯವೇದ ಅಧ್ಯಯನಕ್ಕೆ ಅಥವಾ ಸಂದೇಶಕ್ಕೆ ಅತ್ಯುತ್ತಮ ತಳಹದಿಯಾಗಿದೆ. ***'ಆತ್ಮಭರಿತವಾದ ಸಭೆಯ ಗುಣಲಕ್ಷಣಗಳು'*** ಎಂಬ ಶೀರ್ಷಿಕೆಯು ಸೂಕ್ತವಾಗಿರುವುದು. ಈ ಕೆಳಗಿನ ಹೊರರೇಖೆಯನ್ನು ನೀವು ಬಳಸಬಹುದು:

1. ಹಿನ್ನಲೆ: ಪಂಚಾಶತ್ತಮದ ಮೊದಲ ದಿನ, ಜನರ ಗುಂಪನ್ನು ಉದ್ದೇಶಿಸಿ ಪೇತ್ರನು ಮಾಡಿದ ಪ್ರಸಂಗ, 3000 ಜನರು ರಕ್ಷಿಸಲ್ಪಟ್ಟು ದೀಕ್ಷಾಸ್ನಾನವನ್ನು ಹೊಂದಿದರು
2. ಪವಿತ್ರಾತ್ಮನು ಬಂದ ನಂತರ ಯೆರೂಸಲೇಮಿನ ಸಭೆಯ ಜೀವಿತದ 5 ಗುಣಲಕ್ಷಣಗಳು

   1) ಅದು ಕಲಿಯುವಂತಹ ಸಭೆಯಾಗಿತ್ತು (ವ. 42):

      - ಯೇಸು ಕ್ರಿಸ್ತನಿಂದ ನೇಮಿಸಲ್ಪಟ್ಟ ಅಪೋಸ್ತಲರು ಉಪದೇಶಕರಾಗಿದ್ದರು. ಇವರಿಂದ ಉಪದೇಶವನ್ನು ಹೊಂದಲು ಹೊಸದಾಗಿ ರಕ್ಷಿಸಲ್ಪಟ್ಟಂತಹ ಸಾವಿರಾರು ವಿಶ್ವಾಸಿಗಳು ಸಂತೋಷವುಳ್ಳರಾಗಿದ್ದರು. ಈ ಉಪದೇಶಕರ ಬೋಧನೆಗಳು ಹೊಸ ಒಡಂಬಡಿಕೆಯ ರೂಪದಲ್ಲಿ ನಮಗೆ ಕೊಡಲ್ಪಟ್ಟಿದೆ. ಹಾಗಾಗಿ ಒಂದು ಆತ್ಮಭರಿತ ಸಭೆಯು ಇಂದು ಹೊಸ ಒಡಂಬಡಿಕೆಯನ್ನು ಆಸಕ್ತಿಯಿಂದ ಅಭ್ಯಾಸಿಸುವಂತಹ ಹಾಗೂ ಅದಕ್ಕೆ ಮನಃಪೂರ್ವಕವಾಗಿ ಒಪ್ಪಿಸಿಕೊಡುವಂತಹ ಸಭೆಯಾಗಿರಬೇಕು.

   2) ಅದು ಅದ್ಭುತ ಮತ್ತು ಸೂಚಕ ಕಾರ್ಯಗಳು ಪ್ರಕಟಗೊಂಡ ಸಭೆಯಾಗಿತ್ತು (ವ. 43):

      - ಹಾಗಾಗಿ ಈ ದಿನ ಒಂದು ಆತ್ಮಭರಿತವಾದ ಸಭೆಯು ಪವಿತ್ರಾತ್ಮನು ಬಲವಾಗಿ ಕಾರ್ಯಮಾಡುವ ಮತ್ತು ಮೇಲೆ ತಿಳಿಸಿರುವ ಪ್ರಕಟನೆಗಳುಳ್ಳ ಸಭೆಯಾಗಿರಬೇಕು

   3) ಅದು ಪ್ರೀತಿಸುವ ಸಭೆಯಾಗಿತ್ತು (ವ. 42, ವ. 46, 44–45):

      - ವಿಶ್ವಾಸಿಗಳು ಒಬ್ಬರಿಗೊಬ್ಬರು ನಿಕಟವಾದ ಮತ್ತು ಪ್ರತಿನಿತ್ಯ ಅನ್ಯೋನ್ಯತೆ ಉಳ್ಳವರಾಗಿದ್ದರು. ಅವರು ಒಟ್ಟಿಗೆ ಬಹಳ ಸಮಯವನ್ನು ಕಳೆಯುತ್ತಿದ್ದರು. ಅವರು ಒಬ್ಬರ ಅನ್ಯೋನ್ಯತೆಯಲ್ಲಿ ಒಬ್ಬರು ಸಂತೋಷಪಡುತ್ತಿದ್ದರು. ಅವರು ತಮ್ಮ

ಮನೆಗಳಲ್ಲಿ ರೊಟ್ಟಿ ಮುರಿಯುತ್ತಾ ಆನಂದದಿಂದಲೂ ಸರಳ ಹೃದಯದಿಂದಲೂ ಊಟ ಮಾಡುತ್ತಿದ್ದರು.

- ಅವರು ತಮ್ಮ ಸಂಪನ್ಮೂಲಗಳನ್ನು ಹಂಚಿಕೊಂಡರು. ಅವರು ಅವಶ್ಯಕತೆಯಲ್ಲಿರುವವರಿಗೆ ಸಹಾಯಮಾಡುವುದಕ್ಕಾಗಿ ತಮ್ಮ 'ಆಸ್ತಿಪಾಸ್ತಿಯನ್ನೂ' ಸಹ ಮಾರಿದರು. ಅವರಲ್ಲಿ ಕೊರತೆಯುಳ್ಳ ಯಾವನೂ ಇರಲಿಲ್ಲ (4:34).
- ಹಾಗಾಗಿ ಇಂದು ಒಂದು ಆತ್ಮಭರಿತವಾದ ಸಭೆಯು ಪ್ರೀತಿಸುವ ಸಭೆಯಾಗಿರಲೇಬೇಕು!

4) ಅದು ಆರಾಧಿಸುವ ಸಭೆಯಾಗಿತ್ತು. (ವ. 46, 42, 46–47, 3:1):

- ಅವರು ದೇವಾಲಯದಲ್ಲಿ ಸೇರಿ ಅಲ್ಲಿನ ಪ್ರಾರ್ಥನಾ ಸಮಯದಲ್ಲಿ ಪಾಲ್ಗೊಳ್ಳುತ್ತಾ ಸಾಂಪ್ರದಾಯಿಕವಾದ ಆರಾಧನೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು (ವ. 46; 3:1).
- ಹಾಗೆಯೇ ಅವರು ಉಪದೇಶವನ್ನು ಕೇಳುತ್ತಾ, ಪ್ರಾರ್ಥಿಸುತ್ತಾ ಮತ್ತು ಕರ್ತನ ಭೋಜನದಲ್ಲಿ ಪಾಲ್ಗೊಳ್ಳುತ್ತಾ ಅವರ ಮನೆಗಳಲ್ಲಿಯೂ ಒಂದು ರೀತಿಯ ಆರಾಧನೆಯನ್ನು ಹೊಂದಿದ್ದರು (ವ. 42)
- ಅವರ ಆರಾಧನೆ ಮತ್ತು ಅನ್ಯೋನ್ಯತೆಯು ಸಂತೋಷ, ಸ್ತುತಿ ಮತ್ತು ಭಯದಿಂದ ಕೂಡಿತ್ತು ('ದೇವರನ್ನು ಆರಾಧಿಸಲು ಸಂತೋಷ ಮತ್ತು ಪ್ರಾಮಾಣಿಕವಾದ ಹೃದಯವುಳ್ಳವರಾಗಿದ್ದರು' ವ. 46–47).
- ಹಾಗಾಗಿ ಇಂದು ಒಂದು ಆತ್ಮಭರಿತವಾದ ಸಭೆಯು ದೇವರನ್ನು ಆರಾಧಿಸುವ ಸಭೆಯಾಗಿರಲೇಬೇಕು!

5) ಅದು ಪ್ರಾರ್ಥಿಸುವ ಸಭೆಯಾಗಿತ್ತು (ವ. 42; 4:24)

- ಅವರು 'ಪ್ರಾರ್ಥನೆ ಮಾಡುವುದರಲ್ಲಿ ಧೃಢವಾಗಿ ಸಾಗುತ್ತಿದ್ದರು'. ಹಾಗಾಗಿ ಇಂದು ಒಂದು ಆತ್ಮಭರಿತವಾದ ಸಭೆಯು ಪ್ರಾರ್ಥಿಸುವ ಸಭೆಯಾಗಿರಲೇಬೇಕು!

6) ಅದು ಸಾಕ್ಷಿಕರಿಸುವ ಸಭೆಯಾಗಿತ್ತು (ವ. 47)

- ಅಪೊಸ್ತಲರ ಕೃತ್ಯಗಳಲ್ಲಿ ಕಂಡುಬರುವ ಮುಖ್ಯವಾದ ವಿಷಯವೇನೆಂದರೆ ಸೇವೆ ಅಥವಾ ಸುವಾರ್ತಿಕರಣವಾಗಿದೆ, ಅದು ಕ್ರಿಸ್ತೀಯ ನಂಬಿಕೆಯ ನಿರಂತರ ವಿಸ್ತರಣೆಯನ್ನು ಸೂಚಿಸುತ್ತದೆ. 'ರಕ್ಷಣೆ ಹೊಂದಿದವರನ್ನು ಕರ್ತನು ಪ್ರತಿದಿನವೂ ಅವರೊಂದಿಗೆ ಸೇರಿಸುತ್ತಿದ್ದನು.' ಜನರನ್ನು ರಕ್ಷಿಸಿ ತನ್ನ ಸಭೆಗೆ ಸೇರಿಸುವುದು ಕ್ರಿಸ್ತನೇ ಆಗಿದ್ದಾನೆ. ಆದರೆ ವಿಶ್ವಾಸಿಗಳ ಸಾಕ್ಷಿಯೇ ಅದಕ್ಕಿರುವ ಷರತ್ತಾಗಿದೆ.
- ಹೊಸ ಜನರಿಗೆ ಮಾಡಿದ ಈ ಸಾಕ್ಷಿಕರಣ, ಈ ಸುವಾರ್ತಿಕರಣ, ಈ ಸುವಾರ್ತಾ ಸಾರುವಿಕೆಯು ನಿರಂತರ ಕ್ರಿಯೆಯಾಗಿದ್ದಿರಬಹುದು, ಅಂದರೆ ಪ್ರತಿದಿನ ನಡೆದಿದ್ದಿರಬೇಕು ('ಪ್ರತಿದಿನವೂ', 'ರಕ್ಷಣೆ ಹೊಂದಿದವರನ್ನು').

- ಹಾಗಾಗಿ ಇಂದು ಒಂದು ಆತ್ಮಭರಿತವಾದ ಸಭೆಯು ಸಾಕ್ಷಿಕರಿಸುವ, ಸುವಾರ್ತೆ ಸಾರುವ ಮತ್ತು ಸೇವಕರನ್ನು ಕಳುಹಿಸಿಕೊಡುವ ಸಭೆಯಾಗಿರಬೇಕು!

7) ನಮ್ಮ ಸಭೆಯ ಕುರಿತು ಏನು?

- ಕಲಿಯುವುದರಲ್ಲಿ?
- ಅದ್ಭುತ ಮತ್ತು ಸೂಚಕ ಕಾರ್ಯಗಳಲ್ಲಿ?
- ಪ್ರೀತಿಸುವುದರಲ್ಲಿ?
- ಪ್ರಾರ್ಥಿಸುವುದರಲ್ಲಿ?
- ಆರಾಧಿಸುವುದರಲ್ಲಿ?
- ಸಾಕ್ಷಿಕರಿಸುವುದರಲ್ಲಿ?

# ಪಾಠ 6. ಪೇತ್ರನು ಹುಟ್ಟು ಕುಂಟನನ್ನು ಗುಣಪಡಿಸಿದ್ದು, 3:1–10

## ಅ) ವಾಕ್ಯಭಾಗ

ಒಂದು ದಿನ ಮಧ್ಯಾಹ್ನ ಮೂರು ಗಂಟೆಗೆ ಪ್ರಾರ್ಥನೆಗಾಗಿ ಪೇತ್ರ ಹಾಗೂ ಯೋಹಾನರು ದೇವಾಲಯಕ್ಕೆ ಹೋಗುತ್ತಿರುವಾಗ ದೇವಾಲಯದ ದ್ವಾರದ ಬಳಿಯಲ್ಲಿ ಹುಟ್ಟು ಕುಂಟನನ್ನು ಕಂಡರು. ಆ ಮನುಷ್ಯನು ಗುಣ ಹೊಂದಿದನು ಮತ್ತು ಇಂತಹ ಒಂದು ಶಾರೀರಿಕವಾದ ಗುಣಪಡಿಸುವಿಕೆಯ ಅದ್ಭುತ ನಡೆಯಿತೆಂದು ಗ್ರಹಿಸಿ ಜನರೆಲ್ಲರೂ ಆಶ್ಚರ್ಯಭರಿತರಾಗಿ ವಿಸ್ಮಯಗೊಂಡರು.

## ಆ) ಟಿಪ್ಪಣಿ

*ಒಂದು ಮಧ್ಯಾಹ್ನ ಮೂರು ಗಂಟೆಗೆ ಪ್ರಾರ್ಥನೆಯ ಸಮಯದಲ್ಲಿ ಪೇತ್ರ ಮತ್ತು ಯೋಹಾನರು ದೇವಾಲಯಕ್ಕೆ ಹೋದರು* (ವ. 1): ಯೇಸು ಕ್ರಿಸ್ತನ ಹತ್ತಿರದ ಶಿಷ್ಯರ ವೃಂದದವರಲ್ಲಿ ಒಬ್ಬರಾಗಿದ್ದ ಪೇತ್ರ ಮತ್ತು ಯೋಹಾನರು ಈ ಹಂತದಲ್ಲಿ ಯೆರೂಸಲೇಮಿನ ಸಭೆಯ ನಾಯಕರಾಗಿದ್ದಂತೆ ತೋರುತ್ತದೆ. ಯೆರೂಸಲೇಮಿನ ಯೆಹೂದಿಗಳ ಸಭಾಮಂದಿರಗಳಲ್ಲಿ ಪ್ರತಿದಿನ ಮೂರು ಬಾರಿ ನಿತ್ಯ ಪ್ರಾರ್ಥನಾ ಸಮಯವಿರುತ್ತಿತ್ತು: ಮುಂಜಾನೆ 9 ಕ್ಕೆ, ಮಧ್ಯಾಹ್ನ 3 ಕ್ಕೆ (ಇದು ಯಜ್ಞದ ತಕ್ಷಣ ನಡೆಯುವ ಮತ್ತು ದೈವಭಕ್ತಿಯುಳ್ಳ ಒಬ್ಬ ಯೆಹೂದಿಗೆ ಅತೀ ಪ್ರಮುಖ್ಯವಾದ ಪ್ರಾರ್ಥನಾ ಸಮಯವಾಗಿತ್ತು) ಮತ್ತು ಕೊನೆಯಲ್ಲಿ ಸೂರ್ಯಾಸ್ತಕ್ಕೆ.

*ನಜರೇತಿನ ಯೇಸು ಕ್ರಿಸ್ತನ ಹೆಸರಿನಲ್ಲಿ* (ವ. 6): ಈ ಒಂದು ಅದ್ಭುತವು ಪೇತ್ರ ಮತ್ತು ಯೋಹಾನರ ಬಲದಿಂದ ಆಗಲಿಲ್ಲ. ಇದು ಮೆಸ್ಸೀಯನ ಅಧಿಕಾರದಿಂದ ಉಂಟಾಯಿತು.

*ದೇವಾಲಯದೊಳಗೆ* (ವ. 8): ಸುಂದರ ದ್ವಾರವೆಂದು ಕರೆಯಲ್ಪಡುತ್ತಿದ್ದಂತಹ ಮಹಾದ್ವಾರವು ಹಿತ್ತಾಳೆಯಿಂದ ಮಾಡಲ್ಪಟ್ಟು 23 ಮೀ ಎತ್ತರವಿದ್ದು ಅತೀ ದೊಡ್ಡ ಎರಡು ಬಾಗಿಲುಗಳನ್ನು ಹೊಂದಿತ್ತು. ಇದು ಹೊರಗಿನ ಅಂಗಳ ಅಥವಾ ಎಲ್ಲರಿಗೋಸ್ಕರ ತೆರೆಯಲ್ಪಟ್ಟಂತಹ 'ಅನ್ಯರ ಅಂಗಳ'ದ ಮತ್ತು ಎಲ್ಲಾ ಯೆಹೂದಿಗಳಿಗಾಗಿ ತೆರೆಯಲ್ಪಟ್ಟಂತಹ 'ಸ್ತ್ರೀಯರ ಅಂಗಳ'ದ ನಡುವೆ ನೆಲೆಸಿತ್ತು. ಇಲ್ಲಿಂದ ಯೆಹೂದಿ ಪುರುಷರು ದೇವಾಲಯದ ಇನ್ನೊಂದು ಭಾಗವಾದ 'ಇಸ್ರಾಯೇಲರ ಅಂಗಳಕ್ಕೆ' ಸಾಗುತ್ತಿದ್ದರು. ಇದಕ್ಕಿಂತ ಮುಂದೆ ಯಾಜಕರು ಮಾತ್ರ ಮುನ್ನಡೆಯುತ್ತಾ 'ಯಾಜಕರ ಅಂಗಳ'ವನ್ನು ಪ್ರವೇಶಿಸಬಹುದಾಗಿತ್ತು.

## ಇ) ಪಠ್ಯ ಪ್ರಶ್ನೆಗಳು

1. ಪೇತ್ರ ಮತ್ತು ಯೋಹಾನರಿಂದ ಭಿಕ್ಷುಕನು ಏನನ್ನು ಅಪೇಕ್ಷಿಸಿದನು?
2. ಭಿಕ್ಷುಕನು ಗುಣಹೊಂದಿದ ಮೇಲೆ ಯಾವ ರೀತಿಯಾಗಿ ಪ್ರತಿಕ್ರಿಯಿಸಿದನು?
3. ಭಿಕ್ಷುಕನು ಗುಣಹೊಂದಿದ್ದನ್ನು ನೋಡಿದ ಜನರು ಯಾವ ರೀತಿಯಾಗಿ ಪ್ರತಿಕ್ರಿಯಿಸಿದರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೇತ್ರ ಮತ್ತು ಯೋಹಾನರು ಪ್ರಾರ್ಥನೆಗಾಗಿ ಎಲ್ಲಿಗೆ ಹೋದರು? ನಿಮಗೆ ಇದು ಆಶ್ಚರ್ಯಕರವೆನಿಸುತ್ತದೋ? ಯಾಕೆ – ಯಾಕೆ ಇಲ್ಲ?
2. ಪೇತ್ರನು ಭಿಕ್ಷುಕನನ್ನು ಗುಣಪಡಿಸಲಿಕ್ಕಿರುವ ನಂಬಿಕೆಯನ್ನು ಹೇಗೆ ತೋರಿಸಿದನು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ನಿಮ್ಮ ಸೇವೆಯಲ್ಲಿ ಅಥವಾ ನಿಮ್ಮ ಸಭೆಯ ಸೇವೆಯಲ್ಲಿ ಇಂತಹ ನಾಟಕೀಯವಾದ ಶಾರೀರಿಕ ಸೌಖ್ಯವನ್ನು ನೀವು ಅನುಭವಿಸಿದ್ದೀರಾ? ಏನು ಸಂಭವಿಸಿತು? ಅದ್ಭುತವನ್ನು ನೋಡಿದ ಜನರು ಹೇಗೆ ಪ್ರತಿಕ್ರಿಯಿಸಿದರು?
2. ಅದ್ಭುತವಾದ ಶಾರೀರಿಕ ಸೌಖ್ಯವು ಸುವಾರ್ತೆಯನ್ನು ಸಾರುವುದರಲ್ಲಿನ ಒಂದು ಪ್ರಮುಖ ಅಂಶವೋ? ಯಾಕೆ – ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

ಅಪೊಸ್ತಲರ ಮತ್ತು ಸುಂದರ ದ್ವಾರದಲ್ಲಿದ್ದ ಹುಟ್ಟು ಕುಂಟನ ಸೌಖ್ಯತೆಯ ಕುರಿತಾದ ಅ. ಕೃ. 3:1–10 ರಲ್ಲಿ ಕಂಡು ಬರುವ ಕಥೆಯನ್ನು ಒಂದು ಒಳ್ಳೆಯ ಸುವಾರ್ತಾ ಸಂದೇಶವಾಗಿ ಬಳಸಬಹುದು. ನೀವು ಈ ಕೆಳಗಿನ ಹೊರರೇಖೆಯನ್ನು ಬಳಸಬಹುದು:

1. ಹುಟ್ಟು ಕುಂಟನಾದ ಭಿಕ್ಷುಕನ ಸೌಖ್ಯತೆಯ ಕಥೆಯನ್ನು ಸಾರಾಂಶಗೊಳಿಸಿರಿ.
2. ಅಲ್ಲಿ ನೆರೆದಿದ್ದ ಜನರಿಗೆ ಪೇತ್ರನು ಕೊಟ್ಟ ಸಂದೇಶವನ್ನು ಸಾರಾಂಶಗೊಳಿಸಿರಿ.
   1) ಅಪೊಸ್ತಲರ ಬಲವಾಗಲಿ ಅಥವಾ ಭಕ್ತಿಯಾಗಲಿ ಆತನನ್ನು ಗುಣಪಡಿಸಲಿಲ್ಲ (3:12).
   2) ಈ ಅದ್ಭುತದ ಮೂಲಕವಾಗಿ ಯೇಸುವನ್ನು ಮಹಿಮೆಪಡಿಸಿದ್ದು ದೇವರಾಗಿದ್ದಾನೆ (3:13).
   3) ಯೇಸು ಕ್ರಿಸ್ತನ ಶ್ರಮೆ, ಮರಣ ಮತ್ತು ಪುನರುತ್ಥಾನದ ಕುರಿತು ಮುಖ್ಯ ಅಂಶಗಳನ್ನು ನೀಡಿರಿ. ಇನ್ನೂ ಹೆಚ್ಚಿನ ವಾಕ್ಯಭಾಗಗಳನ್ನು ಉಲ್ಲೇಖಿಸಿ.

3. ಇಂದಿಗೂ ಯೇಸು ಕ್ರಿಸ್ತನು ಒಂದೇ ರೀತಿಯಾಗಿದ್ದಾನೆ.

    1) ಯೇಸು ಕ್ರಿಸ್ತನಲ್ಲಿ ರಕ್ಷಣೆಯುಂಟು!

    2) ಯೇಸು ಕ್ರಿಸ್ತನಲ್ಲಿ ಸ್ವಸ್ಥತೆಯುಂಟು!

4. ಜನರು ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿಕೊಳ್ಳುವಂತೆ ಆಹ್ವಾನಿಸಿರಿ.

5. ಯೇಸು ಕ್ರಿಸ್ತನನ್ನು ಜನರು ತಮ್ಮ ಸೌಖ್ಯದಾಯಕನೆಂದು ಸ್ವೀಕರಿಸುವಂತೆ ಆಹ್ವಾನಿಸಿರಿ.

# ಪಾಠ 7. ನೆರೆದಿದ್ದ ಜನರೊಂದಿಗೆ ಪೇತ್ರನು ಮಾತನಾಡಿದ್ದು, 3:11–26

## ಅ) ವಾಕ್ಯಭಾಗ

ಒಬ್ಬ ಹುಟ್ಟು ಕುಂಟನಾದ ಭಿಕ್ಷುಕನು ಗುಣಹೊಂದಿದ್ದನು. ನಡೆದ ಸಂಗತಿಯನ್ನು ದರ್ಶಿಸಲು ಆಶ್ಚರ್ಯಚಕಿತರಾದ ಜನರೆಲ್ಲರೂ 'ಸೊಲೋಮೋನನ ಮಂಟಪ' ಎಂದು ಕರೆಯಲ್ಪಡುತ್ತಿದ್ದ ಯೆರೂಸಲೇಮಿನ ದೇವಾಲಯದ ಒಂದು ಭಾಗಕ್ಕೆ ಬಂದರು. ಪೇತ್ರನು ಯೇಸು ಕ್ರಿಸ್ತನ ಕುರಿತು ಸುವಾರ್ತೆಯನ್ನು ಸಾರಲು ಈ ಒಂದು ಅವಕಾಶವನ್ನು ಉಪಯೋಗಿಸಿಕೊಂಡನು. ಯೇಸು ಕ್ರಿಸ್ತನ ಮೇಲೆ ಇಟ್ಟ ನಂಬಿಕೆಯ ಮೂಲಕವಾಗಿ ಈ ಮನುಷ್ಯನು ಗುಣಹೊಂದಿದ್ದನು.

## ಆ) ಟಿಪ್ಪಣಿ

*ಸೊಲೋಮೋನನ ಮಂಟಪ* (ವ. 11): ಇದು ದೇವಾಲಯದ ಹೊರ ಅಂಗಳಕ್ಕೆ ಸುತ್ತುವರಿದಿದ್ದ ಮೂಡಲ ದಿಕ್ಕಿಗಿರುವ ಒಳಭಾಗದ ಗೋಡೆಯ ಬಳಿಯಲ್ಲಿ ಕಂಬಗಳಿಂದ ಕೂಡಿದ ಮಂಟಪವಾಗಿತ್ತು. ಇದು ಆದಿ ಸಭೆಯು ಕೂಡುತ್ತಿದ್ದಂತಹ ಸ್ಥಳಗಳಲ್ಲಿ ಒಂದಾಗಿದೆ (ನೋಡಿರಿ 5:12).

*ಜೀವದ ಒಡೆಯನನ್ನು* (ವ. 15): ಗ್ರೀಕ್ ಪದದ ಅರ್ಥವು ಹೀಗಿದೆ: 1) ಕರ್ತೃ, ಆರಂಭಿಸುವವ, ಸಂಸ್ಥಾಪಕ' ಅಥವಾ 2) 'ನಾಯಕ, ಆಳ್ವಿಕೆ ಮಾಡುವವ'. ಕನ್ನಡದ ನ್ಯೂ ಇಂಡಿಯಾ ಸತ್ಯವೇದ ಭಾಷಾಂತರವು ಎರಡನೆಯ ಅರ್ಥವನ್ನು ಆಯ್ಕೆಮಾಡಿಕೊಂಡಿದೆ. 'ಜೀವದ ಒಡೆಯನನ್ನು' ನೀವು ಕೊಂದಿರಿ ಎಂಬುದು ಒಂದು ತಾಕುವ ಶಬ್ಧ ಪ್ರಯೋಗವಾಗಿದೆ, ಹೀಗೆ ಹೇಳುವುದರಲ್ಲಿ ಸ್ವತಃ ಜೀವವನ್ನು ಪ್ರಾರಂಭಿಸುವವನಿಂದಲೇ (ಅಥವಾ ಆಳ್ವಿಕೆ ಮಾಡುವವನಿಂದಲೇ) ಜೀವವು ಕಿತ್ತುಕೊಳ್ಳಲ್ಪಟ್ಟಿದೆ.

*ಮಾನಸಾಂತರಪಟ್ಟು, ದೇವರ ಕಡೆಗೆ ತಿರುಗಿಕೊಳ್ಳಿರಿ* (ವ. 19): ಹಳೆಯ ಪಾಪದ ಮಾರ್ಗಕ್ಕಾಗಿ ದುಃಖಿಸುವುದೇ ಪಶ್ಚಾತ್ತಾಪ, ಮನಸ್ಸಿನ ಬದಲಾವಣೆ ಮತ್ತು ನಿಮ್ಮ ಹಳೆ ಜೀವಿತದಿಂದ ಸಂಪೂರ್ಣವಾಗಿ ತಿರುಗಿಕೊಳ್ಳುವುದೇ ಪಶ್ಚಾತ್ತಾಪ. ಹೊಸದಾದ ಮತ್ತು ಬದಲಾದ ಜೀವಿತ ನಡೆಸಲು ದೇವರ ಮೇಲೆ ಭರವಸೆಯನ್ನೂ ನಂಬಿಕೆಯನ್ನೂ ಇರಿಸುವಾಗ ಆಗುವ ಪಶ್ಚಾತ್ತಾಪದ ನಂತರ ಬರುವುದೇ ದೇವರ ಕಡೆಗೆ ತಿರುಗಿಕೊಳ್ಳುವುದು. ಇದರ ಪರಿಣಾಮವಾಗಿ ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ; ಅಳಿಸಿ ಹಾಕಲ್ಪಟ್ಟಿವೆ.

*ಸಂತತಿ* (ವ. 25): ಇಲ್ಲಿನ ಗ್ರೀಕ್ ಪದವು ಏಕವಚನದಲ್ಲಿದೆ, ಕಟ್ಟಕಡೆಗೆ ಕ್ರಿಸ್ತನನ್ನು ಸೂಚಿಸುತ್ತದೆ (ನೋಡಿರಿ ಗಲಾತ್ಯ. 3:16).

## ಇ) ಪಠ್ಯ ಪ್ರಶ್ನೆಗಳು

1. ಪೇತ್ರನು ತನ್ನ ಮಾತುಗಳನ್ನು ನಡೆದ ಅದ್ಭುತಕ್ಕೆ ಯಾವುದು ಕಾರಣವಲ್ಲ ಎನ್ನುವುದರ ಮೂಲಕ ಪ್ರಾರಂಭಿಸುತ್ತಾನೆ. ಆತನು ಏನನ್ನು ಹೇಳುತ್ತಾನೆ?
2. ಹುಟ್ಟು ಕುಂಟನಾದ ಭಿಕ್ಷುಕನ ಸ್ವಸ್ಥತೆಯ ಕುರಿತು ಪೇತ್ರನು ನೀಡುವ ವಿವರಣೆ ಏನು?
3. ತನ್ನ ಶ್ರೋತೃಗಳು ಏನನ್ನು ಮಾಡಬೇಕೆಂದು ಪೇತ್ರನು ತಿಳಿಸುತ್ತಿದ್ದಾನೆ?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೇತ್ರನು ನೆರೆದಿದ್ದ ಜನರನ್ನು ಉದ್ದೇಶಿಸಿ ಆಡಿದ ಮಾತುಗಳ ರಚನೆ ಏನಾಗಿತ್ತು?
2. ವ. 14 ರಲ್ಲಿ ಯೇಸು ಕ್ರಿಸ್ತನು 'ಪವಿತ್ರನು ಮತ್ತು ನೀತಿವಂತನೆಂದು' ವರ್ಣಿಸಲ್ಪಟ್ಟಿದ್ದಾನೆ. ಈ ಪದವಿನ್ಯಾಸವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?
3. ಹುಟ್ಟು ಕುಂಟನಾದ ಭಿಕ್ಷುಕನ ಸ್ವಸ್ಥತೆಯಲ್ಲಿ ನಂಬಿಕೆಯು ವಹಿಸಿದ ಪಾತ್ರವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?
4. ಜನರು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳುವಾಗ ಅದರಿಂದಾಗುವ ಮೂರು ಪರಿಣಾಮಗಳನ್ನು ಪೇತ್ರನು ಪ್ರಸ್ತಾಪಿಸುತ್ತಾನೆ? ಅವು ಯಾವವು?
5. ವ. 21 ರಲ್ಲಿರುವ 'ಎಲ್ಲವನ್ನು ಪುನಃ ಸ್ಥಾಪಿಸುವ' ಎಂಬ ಪದವಿನ್ಯಾಸವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಪೇತ್ರನ ಸಂದೇಶವು ಸಂಪೂರ್ಣವಾಗಿ ಕ್ರಿಸ್ತ–ಕೇಂದ್ರಿತವಾಗಿತ್ತು. ಆತನು ಜನರ ಗಮನವನ್ನು ಸೌಖ್ಯ ಹೊಂದಿದ ಹುಟ್ಟು ಕುಂಟನಾದ ಬಿಕ್ಷುಕನಿಂದಲೂ, ಈ ಅದ್ಭುತದಲ್ಲಿ ಕ್ರಿಸ್ತನಿಂದ ಉಪಯೋಗಿಸಲ್ಪಟ್ಟ ಅಪೋಸ್ತಲರಿಂದಲೂ ಬೇರೆಡೆಗೆ ಸೆಳೆಯುತ್ತಾನೆ. ನೀವು ಇದರಲ್ಲಿ ಪೇತ್ರನ ಮಾದರಿಯನ್ನು ಅನುಸರಿಸುತ್ತೀರೋ – ಕ್ರಿಸ್ತನನ್ನು ಮೇಲಕ್ಕೆತ್ತುವುದರಲ್ಲಿ, ಕ್ರಿಸ್ತನೆಡೆಗೆ ಗಮನ ಸೆಳೆಯುವುದರಲ್ಲಿ? ಅಥವಾ ಅದ್ಭುತವನ್ನೇ ಹೆಚ್ಚಾಗಿ ಕೇಂದ್ರೀಕರಿಸುವಂತೆ, ಗುಣಹೊಂದಿದ ವ್ಯಕ್ತಿಯನ್ನೇ ಹೆಚ್ಚಾಗಿ ಕೇಂದ್ರಿಕರಿಸುವಂತೆ ಅಥವಾ ತಮ್ಮ ಪ್ರಾರ್ಥನೆಯ ಮೂಲಕ ಸ್ವಸ್ಥತೆಯನ್ನುಂಟುಮಾಡಿದ ದೇವರ ಸೇವಕರನ್ನೇ ಹೆಚ್ಚಾಗಿ ಕೇಂದ್ರಿಕರಿಸುವಂತೆ ಶೋಧಿಸಲ್ಪಡುತ್ತೀರೋ?

## ಊ) ಉಪದೇಶಿಸು ಮತ್ತು ಬೋಧಿಸು!

ನೆರೆದಿದ್ದ ಜನರನ್ನು ಉದ್ದೇಶಿಸಿ ಪೇತ್ರನು ಆಡಿದ ಮಾತುಗಳಲ್ಲಿ (ಅ. ಕೃ. 3:12–26) ***ಯೇಸುವಿನ ನಾಮ***ದ ಕುರಿತು ಪೇತ್ರನು ಉಪದೇಶಿಸುತ್ತಾನೆ:

1. ಪೇತ್ರನ್ನು ಯೇಸುವನ್ನು ಹೀಗೆ ವರ್ಣಿಸಿದನು:

   1) ಆತನು *ನಜರೇತಿನ ಯೇಸು ಕ್ರಿಸ್ತನು* (ವ. 6)

      - ಯೇಸು ಕ್ರಿಸ್ತನು ಪಾಲೆಸ್ತೀನ್ ದೇಶದ ನಜರೇತ್ ಎಂಬ ಪಟ್ಟಣದಲ್ಲಿ ಜೀವಿಸಿದ ಒಬ್ಬ ಐತಿಹಾಸಿಕ ವ್ಯಕ್ತಿಯಾಗಿದ್ದನು ಮತ್ತು ಆತನ ಜೀವಿತವು ಅನೇಕ ಸಾಕ್ಷಿಗಳಿಂದ ಪ್ರಮಾಣಿಕರಿಸಲ್ಪಟ್ಟಿದೆ

   2) ಆತನು *ದೇವರ ಸೇವಕನು* (ವ. 13)

      - ಯೆಶಾಯ 52:13–53:12 ರಲ್ಲಿರುವ ಯೆಹೋವನ ಶ್ರಮೆಯನ್ನನುಭವಿಸುವ ಸೇವಕನ ಕುರಿತಾದ ಪ್ರವಾದನೆಯ ನೆರವೇರುವಿಕೆಯಾಗಿ ಯೇಸು ಮೊದಲು ಶ್ರಮೆಯನ್ನನುಭವಿಸಿದನು ನಂತರ ಮಹಿಮೆಯನ್ನು ಹೊಂದಿದನು.

   3) ಆತನು *ಪವಿತ್ರನು ಮತ್ತು ನೀತಿವಂತನು* (ವ. 14)

      - ದೇವರ ದೃಷ್ಟಿಯಲ್ಲಿ ಯೇಸು ಕ್ರಿಸ್ತನು ಪರಿಶುದ್ದನು ಮತ್ತು ಪರಿಪೂರ್ಣನು ಮನುಷ್ಯರ ದೃಷ್ಠಿಯಲ್ಲಿ ಆತನು ನೀತಿವಂತನು ಮತ್ತು ಯಾವ ದೋಷವಿಲ್ಲದವನು.

   3) ಆತನು *ಜೀವದ ಒಡೆಯನು (ಅಥವಾ ಜೀವದ ಕರ್ತೃ)* (ವ. 15)

      - ಯೇಸು ಸ್ವತಃ ತಾನೇ ಯೋಹಾನ 10:10 ರಲ್ಲಿ 'ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿರಬೇಕೆಂದು ಬಂದೆನು' ಎಂದು ಹೇಳಿದ್ದಾನೆ.

   5) ಆತನು *ಮೋಶೆಯು ಮುಂತಿಳಿಸಿದ ಪ್ರವಾದಿ* (ವ. 22)

      - ಮೋಶೆಯ ಒಡಂಬಡಿಕೆಗಿಂತ ಆತನು ತನ್ನ ಸ್ವಂತ ರಕ್ತದಿಂದ ಮಾಡಿದ ಒಡಂಬಡಿಕೆಯು ಶ್ರೇಷ್ಠವಾದದ್ದು (ಮತ್ತಾಯ. 26:28; ಲೂಕನು. 22–20; ''ಬ್ರಿಯ. 7:22)
      - ನಂತರದ ಪ್ರಸಂಗದಲ್ಲಿ ಯೇಸು ಕ್ರಿಸ್ತನು *ಇಸ್ರಾಯೇಲರಿಂದ ತಿರಸ್ಕರಿಸಲ್ಪಟ್ಟ ಮುಖ್ಯವಾದ ಮೂಲೆಗಲ್ಲಾಗಿದ್ದಾನೆ* ಎಂದು ಪೇತ್ರನು ಹೇಳುತ್ತಾನೆ (ಅ. ಕೃ. 4:11). ಆದರೆ ಯಾರ್ಯಾರು ಆತನ ಮೇಲೆ ತಮ್ಮ ಭರವಸೆಯನ್ನು ಇಡುತ್ತಾರೋ ಅವರು ಎಂದಿಗೂ ಆಶಾಭಂಗಪಡುವುದಿಲ್ಲ. ಅವರು ಆತ್ಮೀಕವಾದ ಮನೆಯಾಗಿ ಕಟ್ಟಲ್ಪಡುತ್ತಿದ್ದಾರೆ. ಅವರು ರಾಜವಂಶಸ್ಥರೂ, ದೇವರಿಗೆ ಸಂಬಂಧಪಟ್ಟ ಪರಿಶುದ್ಧ ಜನಾಂಗದವರೂ ಆಗಿದ್ದಾರೆ (1 ಪೇತ್ರ. 2:4–10).

2. ಈ ಶಿರೋನಾಮಗಳು ಯೇಸು ಕ್ರಿಸ್ತನ ಅದ್ವಿತೀಯತೆಯ ಕುರಿತು ಮಾತನಾಡುತ್ತವೆ. ಆತನ 'ಹೆಸರಿನಲ್ಲಿ' ಎಲ್ಲಾ ಸಂಗತಿಗಳು ಸಾರಾಂಶಗೊಂಡಿವೆ – ಮತ್ತು ಈ ಕಾರಣದಿಂದಾಗಿ ಯೇಸುವಿನ ಹೆಸರಿನಲ್ಲಿ ರಕ್ಷಿಸುವ ಬಲವಿದೆ!:

- ಆತನ ಶ್ರಮೆ ಮತ್ತು ಆತನ ಮಹಿಮೆ,
- ಆತನ ಗುಣ ಮತ್ತು ಆತನ ಸೇವೆ,
- ಆತನ ಪ್ರಕಟಣೆ ಮತ್ತು ಆತನ ಬಿಡುಗಡೆ

3. ನಂತರ ಪೇತ್ರನು ತನ್ನ ಶ್ರೋತೃಗಳಿಗೆ ಈ ಸವಾಲುಗಳನ್ನು ಹಾಕುತ್ತಾನೆ:

1) ಅವಶ್ಯಕತೆ

- ಪಶ್ಚಾತ್ತಾಪಪಡುವ ಅವಶ್ಯಕತೆ
- ದೇವರ ಕಡೆಗೆ ತಿರುಗಿಕೊಳ್ಳಬೇಕಾದ ಅವಶ್ಯಕತೆ

2) ಪಾಪ ಕ್ಷಮಾಪಣೆಯನ್ನು ಅನುಭವಿಸುವ ಆಶೀರ್ವಾದ

# ಪಾಠ 8. ನ್ಯಾಯಸಭೆಯಲ್ಲಿ ಪೇತ್ರ ಮತ್ತು ಯೋಹಾನ, 4:1–22

## ಅ) ವಾಕ್ಯಭಾಗ

ಜನರೊಂದಿಗೆ ಯೇಸುವಿನ ಕುರಿತಾಗಿ ಮಾತನಾಡಿದ್ದರಿಂದ ಪೇತ್ರ ಮತ್ತು ಯೋಹಾನರು ಬಂಧನಕ್ಕೊಳಗಾದರು. ಅವರು ಇಡೀ ರಾತ್ರಿ ಸೆರೆಮನೆಯಲ್ಲಿ ಹಾಕಲ್ಪಟ್ಟರು ಮತ್ತು ಮರುದಿವಸ ಸದ್ದುಕಾಯರಿಂದ ವಿಚಾರಣೆಗೊಳಗಾದರು. ವಿಚಾರಣೆಯ ಸಮಯದಲ್ಲಿ ಪೇತ್ರನು ಮತ್ತೊಮ್ಮೆ ಯೇಸು ಕ್ರಿಸ್ತನ ಕುರಿತು ಸುವಾರ್ತೆಯನ್ನು ಸಾರಿದನು. ಈ ಸಮಯದಲ್ಲಿ ಜನರು ತೋರಿದ ಒಳ್ಳೆಯ ಪ್ರತಿಕ್ರಿಯೆಯ ನಿಮಿತ್ತ ನ್ಯಾಯಸಭೆಯು ಅಪೋಸ್ತಲರಿಗೆ ಯಾವುದೇ ಶಿಕ್ಷೆಯನ್ನು ನೀಡದೆ ಎಚ್ಚರಿಕೆ ಕೊಟ್ಟು ಕಳುಹಿಸಿಬಿಟ್ಟರು.

ಈ ವಾಕ್ಯಭಾಗವು ಸತ್ಯವೇದದಲ್ಲಿನ ಜನಪ್ರಿಯ ವಾಕ್ಯಗಳಲ್ಲಿ ಒಂದನ್ನು ಒಳಗೊಂಡಿದೆ. ನಜರೇತಿನ ಯೇಸು ಕ್ರಿಸ್ತನ ಹೆಸರಿನ ಕುರಿತು ಪೇತ್ರನು ಈ ರೀತಿಯಾಗಿ ಹೇಳುತ್ತಾನೆ: 'ರಕ್ಷಣೆಯು ಈತನಿಂದಲೇ ಹೊರತು ಬೇರೆ ಯಾರಿಂದಲೂ ಆಗುವುದಿಲ್ಲ. ಏಕೆಂದರೆ ಆಕಾಶದ ಕೆಳಗೆ ಮನುಷ್ಯರಲ್ಲಿರುವ ಬೇರೆ ಯಾವ ಹೆಸರಿನಿಂದಲೂ ರಕ್ಷಣೆಯಾಗುವುದಿಲ್ಲ'" ಎಂದನು (ವ. 12).

## ಆ) ಟಿಪ್ಪಣಿ

*ಯಾಜಕರೂ ದೇವಾಲಯದ ಕಾವಲುಗಾರರ ದಳಪತಿಯೂ ಸದ್ದುಕಾಯರೂ* (ವ. 1): ಈ ಯಾಜಕರು ಯಾರೆಂದರೆ, ಆ ವಾರ ದೇವಾಲಯದಲ್ಲಿ ಸೇವೆ ಮಾಡಿದಂತವರಾಗಿದ್ದಾರೆ. ದೇವಾಲಯದ ಕಾವಲುಗಾರರ ದಳಪತಿಯು ಉನ್ನತವಾದ ಯಾಜಕ ಕುಟುಂಬಗಳ ಒಬ್ಬ ಸದಸ್ಯನಾಗಿದ್ದನು. ಆತನು ಮಹಾಯಾಜಕನ ನಂತರದ ಸ್ಥಾನದಲ್ಲಿರುವವನಾಗಿದ್ದನು. ಸದ್ದುಕಾಯರು ಶ್ರೀಮಂತ ಕುಲೀನ ಯೆಹೂದಿಗಳಾಗಿದ್ದರು. ಅವರು ರೋಮನ್ ಆಡಳಿತಾಧಿಕಾರಿಗಳೊಂದಿಗೆ ಸೇರಿ ಕಾರ್ಯ ಮಾಡುತ್ತಿದ್ದರು ಮತ್ತು ಅಪೋಸ್ತಲರ ಬೋಧನೆಯು ರಾಜಕೀಯ ಸಮಸ್ಯೆಗಳನ್ನು ತರುವುದೆಂಬ ಭಯವುಳ್ಳವರಾಗಿದ್ದರು. ಇವರು ಯೆರೂಸಲೇಮಿನಲ್ಲಿನ ದೇವಾಲಯವನ್ನು ನಿಯಂತ್ರಿಸುವ ಯಾಜಕರಾಗಿದ್ದರು. ಅವರು ಸತ್ತವರು ಪುನರುತ್ಥಾನವಾಗುವರೆಂದು ನಂಬುತ್ತಿದ್ದಿಲ್ಲ. ಅದಲ್ಲದೆ ಮೆಸ್ಸೀಯನ ಕಾಲವು ಈಗಾಗಲೇ ಬಂದಿತೆಂದು ಘೋಷಿಸಿಕೊಂಡಿದ್ದರು, ಹಾಗಾಗಿ ಅವರು ಮೆಸ್ಸೀಯನಿಗಾಗಿ ಎದುರು ನೋಡುತ್ತಿರಲಿಲ್ಲ.

*ಅಧಿಕಾರಿಗಳು, ಹಿರಿಯರು ಮತ್ತು ಧರ್ಮಶಾಸ್ತ್ರಿಗಳು* (ವ. 5): ಇಸ್ರಾಯೇಲಿನ ಸರ್ವೋಚ್ಚನ್ಯಾಯಾಲಯವಾದ ನ್ಯಾಯಸಭೆಯು ಈ ಮೂರು ಗುಂಪುಗಳನ್ನು ಒಳಗೊಂಡಿತ್ತು.

*ಪ್ರಧಾನಯಾಜಕ ಅನ್ನನೂ ಹಾಗೂ ಪ್ರಧಾನಯಾಜಕನ ಕುಟುಂಬದವರು... ಕಾಯಫ, ಯೋಹಾನ, ಅಲೆಕ್ಸಾಂದ್ರ* (ವ. 6): ಮಹಾಯಾಜಕನು ಸದ್ದುಕಾಯರ ವರ್ಗಕ್ಕೆ ಸಂಬಂಧಪಟ್ಟವನಾಗಿದ್ದು ನ್ಯಾಯಸಭೆಯ ಸಭಾಧ್ಯಕ್ಷನಾಗಿದ್ದನು. ಕ್ರಿ. ಶ. 6–15 ರಲ್ಲಿ ಅನ್ನನು ಮಹಾಯಜಕನಾಗಿದ್ದನು, ಆದರೆ ತದನಂತರವೂ ಯೆಹೂದ್ಯರು ಆತನನ್ನು ಮಹಾಯಾಜಕನೆಂದು ಪರಿಗಣಿಸಿದರು. ಕ್ರಿ. ಶ. 18–36 ರಲ್ಲಿ ಆತನ ಅಳಿಯನಾದ ಕಾಯಫನು ಮಹಾಯಾಜಕನಾದನು. ಆದರೆ ಯೋಹಾನ ಮತ್ತು ಅಲೆಕ್ಸಾಂದ್ರರು ಯಾರೆಂದು ಸ್ಪಷ್ಟವಾಗಿ ತಿಳಿದಿಲ್ಲ.

*ಮೂಲೆಗಲ್ಲು* (ವ. 11): 'ಮುಖ್ಯವಾದ ಮೂಲೆಗಲ್ಲು' ಎಂಬುದು" ಅಕ್ಷರಶಃವಾದ ತರ್ಜುಮೆಯಾಗಿದೆ. ಇದು ಹಿಬ್ರಿಯ ವಿಧವಾದ ಪದವಿನ್ಯಾಸವಾಗಿದ್ದು (ನೋಡಿರಿ ಕೀರ್ತನೆ. 118:22), ಬಾಗಿಲ ಮೇಲೆ ಹಾಕುವ ಮೂಲೆಗಲ್ಲನ್ನು (ಚೌಕಟ್ಟಾಗಿ ಉಪಯೋಗಿಸುವ ದೊಡ್ಡಕಲ್ಲು), ಅಥವಾ ಗೋಡೆಯನ್ನು ನೇರ ಮಾಡಲು ಮತ್ತು ಭದ್ರಪಡಿಸಲು ಉಪಯೋಗಿಸಲ್ಪಡುವ ಒಂದು ದೊಡ್ಡ ಕಲ್ಲನ್ನು ಸೂಚಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ ಆ ಕಲ್ಲು ಯೇಸುವನ್ನೇ ಕುರಿತು ಉಲ್ಲೇಖಿಸುತ್ತದೆ. ಮಾರ್ಕ 12:10 ರಲ್ಲಿ ಮುಖ್ಯವಾದ ಮೂಲೆಗಲ್ಲಾದ ಆ ತಿರಸ್ಕರಿಸಲ್ಪಟ್ಟ ಕಲ್ಲು ತಾನೇ ಎಂದು ಯೇಸು ಹೇಳುತ್ತಾನೆ.

*ವಿದ್ಯೆ ಕಲಿಯದ, ಸಾಮಾನ್ಯರು* (ವ. 13): 'ವಿದ್ಯೆ ಕಲಿಯದವರು'" ಎಂದಾಕ್ಷಣ ಅಪೋಸ್ತಲರು ಅನಕ್ಷರಸ್ತರಾಗಿದ್ದರು ಎಂದರ್ಥವಲ್ಲ, ಬದಲಾಗಿ ಅವರು ರಬ್ಬೀಯ ದೈವಶಾಸ್ತ್ರದಲ್ಲಿ ಸೂಕ್ತ ತರಬೇತಿಯನ್ನು ಹೊಂದಿರಲಿಲ್ಲ. 'ಸಾಮಾನ್ಯರು' ಎಂದರೆ" ಅವರು ವೃತ್ತಿಪರ ರಬ್ಬೀಗಳಾಗಿರಲಿಲ್ಲ – ಸಾಮಾನ್ಯ ಜನರಾಗಿದ್ದರು.

## ಇ) ಪಠ್ಯ ಪ್ರಶ್ನೆಗಳು

1. ವ. 1–4 ನ್ನು ನೋಡಿ ಈ ಪ್ರಶ್ನೆಗಳನ್ನು ಉತ್ತರಿಸಿರಿ:
   1) ಅಧ್ಯಾಯ 3 ರಲ್ಲಿ ಅಪೋಸ್ತಲರು ಜನರ ಗುಂಪುಗಳಿಗೆ ಮಾಡಿದ ಉಪದೇಶದಿಂದ ಬೇಸರಗೊಂಡವರು ಯಾರು?
   2) ಅವರು ಯಾಕೆ ಬೇಸರಗೊಂಡರು?
   3) ಅಪೋಸ್ತಲರ ಉಪದೇಶದ ಪರಿಣಾಮವೇನಾಗಿತ್ತು?
2. ಈ ಕಥೆಯಲ್ಲಿ ಪವಿತ್ರಾತ್ಮನು ಯಾವ ಸನ್ನಿವೇಶ ಹಿನ್ನಲೆಯಲ್ಲಿ ತಿಳಿಸಲ್ಪಟ್ಟಿದ್ದಾನೆ?
3. ನ್ಯಾಯಸಭೆಯ ಸದಸ್ಯರು ಯಾಕೆ ಆಶ್ಚರ್ಯಚಕಿತರಾದರು?
4. ಅಪೋಸ್ತಲರಿಗೆ ನ್ಯಾಯಸಭೆಯವರು ನೀಡಿದ ಎಚ್ಚರಿಕೆ ಏನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗವನ್ನು ನೀವು ಹೇಗೆ ರಚಿಸುತ್ತೀರಿ?
2. 'ಯಾವ ಹೆಸರಿನಿಂದ ಅಥವಾ ಯಾವ ಬಲದಿಂದ ನೀವು ಇದನ್ನು ಮಾಡುತ್ತೀರಿ' ಎಂಬ ನ್ಯಾಯಸಭೆಯವರ ಪ್ರಶ್ನೆಯ ಹಿಂದೆ ಇದ್ದ ಕಾರಣವೇನು? ಈ ಪ್ರಶ್ನೆಗೆ ಪೇತ್ರನು ಹೇಗೆ ಉತ್ತರಿಸಿದನು?
3. ನ್ಯಾಯಸಭೆಯವರು ಅಪೋಸ್ತಲರಿಗೆ ಬರೀ ಎಚ್ಚರಿಕೆಯೊಂದಿಗೆ ಕಳುಹಿಸುವಂತೆ ಮಾಡಿದ ಕಾರ್ಯವೇನು?
4. ಈ ಕಥೆಯಲ್ಲಿ ಪೇತ್ರ ಮತ್ತು ಯೋಹಾನರು ಅಸಾಮಾನ್ಯ ಧೈರ್ಯವನ್ನು ತೋರಿಸಿದರು. ಈ ಧೈರ್ಯವನ್ನು ನಾವು ಹೇಗೆ ಅರ್ಥೈಸಿಕೊಳ್ಳಬಹುದು? ಗಮನಿಸಿ: ಯೇಸು ಕ್ರಿಸ್ತನನ್ನು ಕೊಲ್ಲಿಸುವುದರ ಹಿಂದೆ ನ್ಯಾಯಸಭೆಯವರು ಇದ್ದರು (ಮಾರ್ಕನು. 14:55, 15:1). ಅನ್ನನೂ ಮತ್ತು ಕಾಯಫರು ಆ ಸಮಯದಲ್ಲಿ ಪ್ರಮುಖ ಪಾತ್ರದಾರಿಗಳಾಗಿದ್ದರು (ಯೋಹಾನ–18:12–14).
5. ಈ ಒಂದು ವಾಕ್ಯಭಾಗದಲ್ಲಿ (ಮತ್ತೆ ಅಧ್ಯಾಯ–3 ರಲ್ಲಿರುವ ಎರಡು ವಾಕ್ಯಭಾಗಗಳು) ಇವುಗಳಲ್ಲಿ ಯೇಸು ಕ್ರಿಸ್ತನ ನಾಮ"ವು ಮಧ್ಯಬಿಂದುವಾಗಿದೆ. ಈ ಒಂದು ಪದವಿನ್ಯಾಸವನ್ನು ನಾವು ಹೇಗೆ ಅರ್ಥೈಸಿಕೊಳ್ಳಬಹುದು?

## ಇ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಹುಟ್ಟು ಕುಂಟನಾದ ಭಿಕ್ಷುಕನ ಸ್ವಸ್ಥತೆ ಮತ್ತು ನಂತರ ಸಂಭವಿಸಿದ ಸಂಗತಿಗಳ ಈ ಕಥೆಯಲ್ಲಿ (ಅ. ಕೃ. 3:1 – 4:22) 'ಯೇಸುವಿನ ಹೆಸರು' ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ನಿಮ್ಮಿಂದ (ಅಥವಾ ನಿಮ್ಮ ಸಭಾಪಾಲಕರಿಂದ ಅಥವಾ ನಿಮ್ಮ ಸಭೆಯಿಂದ) 'ಯೇಸುವಿನ ಹೆಸರು' ಹೇಗೆ ಉಪಯೋಗಿಸಲ್ಪಡುತ್ತಿದೆ? ಸೇವೆಯಲ್ಲಿ ಯೇಸುವಿನ ಹೆಸರನ್ನು 'ಸರಿಯಾದ' ಮತ್ತು 'ತಪ್ಪಾದ' ರೀತಿಯಲ್ಲಿ ಉಪಯೋಗಿಸುವದುಂಟೋ?

## ಊ) ಉಪದೇಶಿಸು ಮತ್ತು ಬೋಧಿಸು!

ಅ. ಕೃ. 4:1–22 ರಲ್ಲಿರುವ ***ನ್ಯಾಯಸಭೆಯ ಮುಂದೆ ಪೇತ್ರ ಮತ್ತು ಯೋಹಾನರು*** ಎಂಬ ಕಥೆಯು ಒಂದು ಒಳ್ಳೆಯ ಬೋಧನೆಗೆ ತಳಹದಿಯಾಗಿದೆ. ಈ ಹೊರ ರೇಖೆಯನ್ನು ನೀವು ಬಳಸಬಹುದು:

1. ಹಿನ್ನೆಲೆ: ಹುಟ್ಟುಕುಂಟನಾದ ಭಿಕ್ಷುಕನ ಸ್ವಸ್ಥತೆ, ನೆರೆದ ಜನಸಮೂಹಕ್ಕೆ ಸಾರಿದ ಸುವಾರ್ತೆ
2. ಅಧಿಕಾರಿಗಳಿಂದ ಬಂದ ವಿರೋಧ:
    1) ಅವರು ತಮ್ಮ ಅಧಿಕಾರಕ್ಕೆ ಕಂಟಕ ಬಂತೆಂದುಕೊಂಡರು
    2) ಅವರ ನಂಬಿಕೆ ಮತ್ತು ವಿಶ್ವಾಸಿಗಳಿಗೆ ಕಂಟಕ ಬಂತೆಂದುಕೊಂಡರು

3) ಅವರು ಜನರ ಕುರಿತು ಭಯವುಳ್ಳವರಾಗಿದ್ದರು: ವಿರೋಧ, ಕಾನೂನು ಮತ್ತು ಸುವ್ಯವಸ್ಥೆ ಇತ್ಯಾದಿಗಳ ಕುರಿತು ಭಯವುಳ್ಳವರಾಗಿದ್ದರು.

3. ನ್ಯಾಯಸಭೆಯವರಿಂದ ಬಂದ ಪ್ರಶ್ನೆಗಳಿಗೆ ಪೇತ್ರನ ಪ್ರತಿಕ್ರಿಯೆ:

   1) ಹುಟ್ಟುಕುಂಟನಾದ ಭಿಕ್ಷುಕನ ಸ್ವಸ್ಥತೆಯ 'ಸತ್ಕಾರ್ಯ'ಕ್ಕಾಗಿ ಅಪೋಸ್ತಲರು ದೂಷಿಸಲ್ಪಟ್ಟರು!

   2) ಅಪೋಸ್ತಲರು ತಾವು ಮಾಡಿದ ಕಾರ್ಯಗಳಿಗಾಗಿ ನಾಚಿಕೆಪಡಲಿಲ್ಲ: ಅದ್ಭುತದ ಕುರಿತಾಗಿಯೂ, ಅಥವಾ ಸುವಾರ್ತೆಯನ್ನು ಸಾರಿದ್ದಕ್ಕಾಗಿಯೂ ಅವರು ನಾಚಿಕೆಪಡಲಿಲ್ಲ.

4. ಪೇತ್ರನು ಬೇಗನೆ ಅದ್ಭುತಕಾರ್ಯದ ವಿಷಯದಿಂದ ಯೆಹೂದ್ಯ ನಾಯಕರುಗಳಿಗೆ ಸುವಾರ್ತೆಯನ್ನು ಸಾರುವುದಕ್ಕೆ ಮುಂದಾದನು.

5. ಅಪೋಸ್ತಲರು ತೋರಿದ ಧೈರ್ಯ ಮತ್ತು ದಿಟ್ಟತನ:

   1) ಅವರ ದೀನ ಮತ್ತು 'ವಿದ್ಯೆ ಕಲಿಯದ' ಹಿನ್ನಲೆಯ ಬದಲಾಗಿಯೂ

   2) ಬಲವಾದ ಅಧಿಕಾರಿಗಳ ಎದುರಿಸುವ ಅಪಾಯದ ಪರಿಸ್ಥಿತಿಯ ಬದಲಾಗಿಯೂ

   3) ಅವರು ಯೇಸುವಿನೊಂದಿಗೆ ಇದ್ದು ಆತನ ಪುನರುತ್ಥಾನವನ್ನು ಕಂಡವರಾಗಿದ್ದರು

   4) ಅವರು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟವರಾಗಿದ್ದರು!

   5) ಅವರು ಸುವಾರ್ತೆಯನ್ನು ಸಾರುವ ಕರೆಯನ್ನು ಹೊಂದಿಕೊಂಡಿದ್ದರು

   6) ಹುಟ್ಟುಕುಂಟನಾದ ಭಿಕ್ಷುಕನ ಸ್ವಸ್ಥತೆಯಲ್ಲಿ ಯೇಸು ಅವರನ್ನು ಉಪಯೋಗಿಸಿಕೊಂಡನೆಂದು ಅವರು ಅರಿತವರಾಗಿದ್ದರು

   7) ಮಾನವ ಅಧಿಕಾರಿಗಳಿಗೆ ವಿಧೇಯರಾಗುವುದಕ್ಕಿಂತಲೂ ದೇವರಿಗೆ ವಿಧೇಯರಾಗುವುದು ಬಹಳ ಪ್ರಾಮುಖ್ಯವಾದದ್ದೆಂದು ಅವರು ಅರಿತವರಾಗಿದ್ದರು

6. ಹಾಗಾದರೆ ನಿಮ್ಮ ಕುರಿತು ಏನು?

# ಪಾಠ 9. ವಿಶ್ವಾಸಿಗಳ ಪ್ರಾರ್ಥನೆ, 4:23–31

## ಅ) ವಾಕ್ಯಭಾಗ

ನ್ಯಾಯಸಭೆಯವರು ಪೇತ್ರ ಮತ್ತು ಯೋಹಾನರನ್ನು ಬಿಡುಗಡೆಗೊಳಿಸಿದ ಕೂಡಲೇ ಅವರು ವಿಶ್ವಾಸಿಗಳ ಬಳಿಗೆ ಹೋಗಿ ನಡೆದಿದ್ದನ್ನು ತಿಳಿಸಿದರು. ಆಗ ಸಭೆಯು ಪ್ರಾರ್ಥನೆಯೊಂದಿಗೆ ದೇವರ ಕಡೆಗೆ ತಿರುಗಿತು. ದೇವರು ತನ್ನ ಪ್ರಸನ್ನತೆಯನ್ನು ಪ್ರಕಟಪಡಿಸಿದನು ಮತ್ತು ವಿಶ್ವಾಸಿಗಳು ಪುನಃ ಪವಿತ್ರಾತ್ಮನಿಂದ ತುಂಬಲ್ಪಟ್ಟವರನ್ನಾಗಿ ದೇವರ ವಾಕ್ಯವನ್ನು ಧೈರ್ಯದಿಂದ ಸಾರಿದರು.

## ಆ) ಟಿಪ್ಪಣಿ

*ಆಳುವ ಕರ್ತನೇ* (ವ. 24): ಈ ಗ್ರೀಕ್ ಪದವು ಒಬ್ಬ ಗುಲಾಮನು ತನ್ನ ಯಜಮಾನನಿಗೂ ಮತ್ತು ಒಬ್ಬ ನಾಗರೀಕನು ತನ್ನ ಅಧಿಕಾರಿಗೂ ಉಪಯೋಗಿಸುವ ಪದವಾಗಿದೆ

*ನಮ್ಮ ಪಿತೃವೂ ಆದ ದಾವೀದನು* (ವ. 25): ಇದು ಕೀರ್ತನೆ 2 ನ್ನು ಬರೆದ ದಾವೀದನನ್ನು ಸೂಚಿಸುವಂತದ್ದಾಗಿದೆ. ಈ ಕೀರ್ತನೆಯ ಮೊದಲ ಎರಡು ವಚನಗಳು ಯೇಸುವಿನ ಕುರಿತಾದ ಪ್ರವಾದನೆಗಳಾಗಿ ಉಲ್ಲೇಖಿಸಲ್ಪಡುತ್ತವೆ.

*ಹೆರೋದನು ಹಾಗೂ ಪೊಂತಿಪಿಲಾತನು* (ವ. 27): ಯೇಸು ಕ್ರಿಸ್ತನನ್ನು ಶಿಲುಬೆಗೇರಿಸಿದ ಸಮಯದಲ್ಲಿ ಹೆರೋದನು ಗಲಿಲಾಯ ಮತ್ತು ಪೆರಿಯಾದ ಅಧಿಪತಿಯಾಗಿದ್ದನು, ಮತ್ತು ಪೊಂತಿಪಿಲಾತನು ಯೂದಾಯದ ರೋಮನ್ ಅಧಿಪತಿಯಾಗಿದ್ದನು.

*ಸೇವಕರು* (ವ. 29): ಗ್ರೀಕ್ ಪದದ ನಿಜವಾದ ಅರ್ಥವೇನೆಂದರೆ 'ಗುಲಾಮರು' ಎಂಬುದಾಗಿದೆ.

## ಇ) ಪಠ್ಯ ಪ್ರಶ್ನೆಗಳು

1. ವಿಶ್ವಾಸಿಗಳು ತಮ್ಮ ಪ್ರಾರ್ಥನೆಯಲ್ಲಿ ದೇವರನ್ನು ಏನೆಂದು ಕರೆದರು?
2. ಈ ಪ್ರಾರ್ಥನೆಯಲ್ಲಿ ಕ್ರಿಸ್ತನ ವಿರೋಧವಾಗಿ ಒಳಸಂಚು ಮಾಡಿದ ನಾಲ್ಕು ಒಳಸಂಚುಗಾರರು ಪ್ರಸ್ತಾಪಿಸಲ್ಪಟ್ಟಿದ್ದಾರೆ. ಅವರು ಯಾರು?
3. ಈ ಕಥೆಯಲ್ಲಿ ಕಂಡುಬರುವಂತೆ ವಿಶ್ವಾಸಿಗಳ ಪ್ರಾರ್ಥನೆಯ ಫಲವೇನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ಪ್ರಾರ್ಥನೆಯಲ್ಲಿ ವಿಶ್ವಾಸಿಗಳು ದೇವರ ಮೂರು ಕಾರ್ಯಚಟುವಟಿಕೆಗಳನ್ನು ವರ್ಣಿಸಿದ್ದಾರೆ. ಅವುಗಳು ಯಾವುವು?
2. ಈ ಪ್ರಾರ್ಥನೆಯಲ್ಲಿ ವಿಶ್ವಾಸಿಗಳು ದೇವರಿಂದ ಬಯಸಿದಂತಹ ಬಿನ್ನಹವೇನು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಅ. ಕೃ. 3 ಮತ್ತು 4 ನೇ ಅಧ್ಯಾಯದಲ್ಲಿ ಒಂದು ಅದ್ಭುತವಾದ ಸೌಖ್ಯದ ಮೂಲಕ ಪ್ರಾರಂಭವಾಗಿ ಸಭೆಯು ಇಂತಹ ಅದ್ಭುತಗಳು ಅಧಿಕವಾಗಿ ನಡೆಯುವಂತೆ ಪ್ರಾರ್ಥಿಸುವುದರಲ್ಲಿ ಕಥೆಯು ಕೊನೆಗೊಳ್ಳುವುದನ್ನು ಕಾಣುತ್ತೇವೆ. ಅದ್ಭುತವಾದ ಮತ್ತು ತಕ್ಷಣ ನಡೆಯುವ ಸೌಖ್ಯತೆಯ ಅದ್ಭುತಗಳ ಕುರಿತು ನಿಮ್ಮ ಸ್ವಂತ ಅನುಭವವೇನು? ಸಭೆಯು ಅವುಗಳಿಗಾಗಿ ಪ್ರಾರ್ಥಿಸುವಾಗೆಲ್ಲಾ ಅವುಗಳು ಸಂಭವಿಸುತ್ತವೆಯೋ? ಅಥವಾ ಸಭೆಯು ಅವುಗಳಿಗಾಗಿ ಪ್ರಾರ್ಥಿಸುವಾಗೆಲ್ಲಾ ಅವುಗಳು ಯಾಕೆ ಸಂಭವಿಸುವುದಿಲ್ಲ?
2. ಐತಿಹಾಸಿಕವಾಗಿ, ಸತ್ಯವೇದವನ್ನು ನಂಬುವಂತಹ ಸಭೆಗಳ ಮಧ್ಯದಲ್ಲಿ ಚಮತ್ಕಾರವಾಗಿ ಉಂಟಾಗುವ ಅದ್ಭುತದ ಕುರಿತು ಎರಡು ರೀತಿಯ ವ್ಯತಿರಿಕ್ತವಾದ ನಿಲುವುಗಳಿವೆ:

   1) ಕೆಲವು ಸಭೆಗಳು ಇಂತಹ ಚಮತ್ಕಾರವಾದ ರೀತಿಯ ಸ್ವಸ್ಥತೆಗಳು ಹೊಸ ಒಡಂಬಡಿಕೆಯ ಸಭೆಗಳ ಅವಧಿಯಲ್ಲಿ ಮಾತ್ರ ನಡೆದವು ಎಂದು ಬೋಧಿಸುತ್ತವೆ. ಹೊಸ ಒಡಂಬಡಿಕೆಯ ಅಧಿಕೃತ ಗ್ರಂಥಗಳು ರಚಿಸಲ್ಪಟ್ಟಾಗ ಆ ಸಮಯವು ಮುಕ್ತಾಯವಾಗಿ ದೇವರು ಈ ರೀತಿಯ ಪ್ರಕಟಣೆಗಳನ್ನು ನಿಲ್ಲಿಸಿಬಿಟ್ಟಿದ್ದಾನೆ. ಹಾಗಾಗಿ ಇಂದು ನಾವು ಚಮತ್ಕಾರವಾದ ಅಥವಾ ಆಶ್ಚರ್ಯಕರವಾದ ರೀತಿಯ ಅದ್ಭುತಗಳನ್ನು ನಿರೀಕ್ಷಿಸುವಂತಿಲ್ಲ ಎಂದು ಬೋಧಿಸುತ್ತವೆ.

   2) ಇತರೆ ಸಭೆಗಳು (ಉದಾ. ಅಮೇರಿಕದಲ್ಲಿರುವ ವಿನಿಯರ್ಡ್ ಫೆಲೋಷಿಪ್‌ನ ಜಾನ್ ವಿಂಬರ್ ಎಂಬುವವನು) ಬೋಧಿಸುವುದೇನೆಂದರೆ ಹೊಸ ಒಡಂಬಡಿಕೆ ಸಭೆಯ ದಿನಗಳಲ್ಲಿ ಇಂತಹ ಚಮತ್ಕಾರವಾದ ಸ್ವಸ್ಥತೆಯ ಅದ್ಭುತಗಳು ಪ್ರತಿದಿನ ಸಂಭವಿಸುತ್ತಿದ್ದವು ಮತ್ತು ಆ ದಿನಗಳಲ್ಲಿ ಸಭೆಗಳು ತ್ವರಿತಗತಿಯಲ್ಲಿ ಬೆಳೆಯಲು ಇಂತಹ ಅದ್ಭುತಗಳು ಪ್ರಮುಖ ಕಾರಣವಾಗಿದ್ದವು. ಹಾಗಾಗಿ ಇಂದು ಸಭೆಯಲ್ಲಿನ ಸಾಮಾನ್ಯ ಕ್ರಿಸ್ತೀಯ ಜೀವನದಲ್ಲಿ ಇಂತಹ ರೀತಿಯ ಆಶ್ಚರ್ಯಕರವಾದ ಸ್ವಸ್ಥತೆಯ ಅದ್ಭುತಗಳಿರಲೇಬೇಕು ಇಲ್ಲವಾದರೆ ಸಭೆಯ ಯಾವುದೇ ಗಣನೀಯ ಬೆಳವಣಿಗೆಯನ್ನು ನಾವು ನೋಡಲಿಕ್ಕೆ ಆಗುವುದಿಲ್ಲ ಎಂಬುದಾಗಿ.

   ಈ ಎರಡು ವ್ಯತಿರಿಕ್ತವಾದ ನಿಲುವುಗಳಲ್ಲಿ ನೀವು ಯಾವುದನ್ನು ಒಪ್ಪಿಕೊಳ್ಳುತ್ತೀರಿ? ನಿಮ್ಮ ಕಾರಣಗಳನ್ನು ತಿಳಿಸಿ!
3. ಬಹುಶಃ ಚಮತ್ಕಾರವಾದ ಸ್ವಸ್ಥತೆಯ ಅದ್ಭುತಗಳ ಮತ್ತು ಸಭೆಯ ಬೆಳವಣಿಗೆಯ ಪ್ರಮುಖ ಕಾರಣದ ಕುರಿತು ಮೂರನೇ ನಿಲುವು ಇರಬಹುದೆಂದು ನೀವು ಆಲೋಚಿಸುತ್ತೀರೋ? ದಯವಿಟ್ಟು ವಿವರಿಸಿರಿ!

## ಊ) ಉಪದೇಶಿಸು ಮತ್ತು ಬೋಧಿಸು!

ಅ. ಕೃ. 4:23–31 ನಲ್ಲಿರುವ ಯೆರೂಸಲೇಮಿನ ಸಭೆಯ ಪ್ರಾರ್ಥನೆಯ ಕುರಿತಾದ ಕಥೆಯು ನಮಗೆ ಪ್ರಾರ್ಥನೆಯ ಕುರಿತಾದ ಒಂದು ಒಳ್ಳೆಯ ಪಾಠವಾಗಿದೆ. ***ಹೇಗೆ ಪ್ರಾರ್ಥಿಸಬೇಕು?*** ಎಂಬ ಶೀರ್ಷಿಕೆಯುಳ್ಳ ಸತ್ಯವೇದ ಅಧ್ಯಯನಕ್ಕಾಗಿ ಹೊರರೇಖೆಯು ಈ ರೀತಿಯಾಗಿ ಇರಬಹುದು:

1. ಹಿನ್ನಲೆ: ಹುಟ್ಟುಕುಂಟನಾದ ಭಿಕ್ಷುಕನ ಸ್ವಸ್ಥತೆ. ನ್ಯಾಯಸಭೆಯವರ ಮುಂದೆ ಪೇತ್ರ ಮತ್ತು ಯೋಹಾನರು ಮತ್ತು 'ಯೇಸುವಿನ ನಾಮವನ್ನು ಕುರಿತು ಮಾತನಾಡುವುದಾಗಲಿ ಅಥವಾ ಬೋಧಿಸುವುದಾಗಲಿ" ಮಾಡಬಾರದೆಂಬ' ಬೆದರಿಕೆ (ವ. 18). ಅದಕ್ಕೆ ಅಪೋಸ್ತಲರ ಉತ್ತರ: ದೇವರಿಗಿಂತ ಹೆಚ್ಚಾಗಿ ನಿಮಗೆ ಕಿವಿಗೊಡುವುದು ದೇವರ ದೃಷ್ಟಿಯಲ್ಲಿ ಸರಿಯಾದದ್ದೋ?

2. ನ್ಯಾಯಸಭೆಯಿಂದ ಪೇತ್ರ ಮತ್ತು ಯೋಹಾನರು ಬಿಡುಗಡೆ ಹೊಂದಿದ ತಕ್ಷಣ ಏನು ಸಂಭವಿಸಿತು?

   1) ಅವರು ತಮ್ಮ ಸ್ವಂತ ಜನರ ಬಳಿಗೆ ಹೋಗಿ, ತಮಗೆ ಮುಖ್ಯಯಾಜಕರೂ ಹಿರಿಯರೂ ಹೇಳಿದ್ದಲ್ಲವನ್ನು ವರದಿ ಮಾಡಿದರು" (ವ. 23).

   2) ಒಂದು ಪ್ರಾರ್ಥನಾ ಕೂಟವನ್ನು ನಡೆಸುವದರ ಮೂಲಕ ಸಭೆಯು ಪ್ರತಿಕ್ರಿಯಿಸಿತು (ವ. 24). ಇಲ್ಲಿ ನಾವು ಆದಿ ಸಭೆಯವರ ಅನ್ಯೋನ್ಯತೆಯು ಕಾರ್ಯರೂಪವಾಗಿ ಕಂಡು ಬರುವುದನ್ನು ಕಾಣುತ್ತೇವೆ!

3. ವಿಶ್ವಾಸಿಗಳು ಹೇಗೆ ಪ್ರಾರ್ಥಿಸಿದರು ಮತ್ತು ಅವರು ಯಾವುದರ ಕುರಿತು ಪ್ರಾರ್ಥಿಸಿದರು?

   1) ಅವರು ಮೊಟ್ಟಮೊದಲು ದೇವರನ್ನು 'ಆಳುವ ಕರ್ತನೆಂದು'"(ವ. 24). ನ್ಯಾಯಸಭೆಯವರು ಸುವಾರ್ತೆಯನ್ನು ಸಾರದಂತೆ ನಿಷೇಧಿಸಿ ಅಪೋಸ್ತಲರನ್ನು ಬೆದರಿಸಿ ಕಳುಹಿಸಿದರು. ಆದರೆ ನ್ಯಾಯಸಭೆಯವರ ಅಧಿಕಾರಕ್ಕಿಂತಲೂ ದೇವರ ಅಧಿಕಾರವು ಬಹಳ ಉನ್ನತವಾದದ್ದೆಂದು ಅವರು ತಿಳಿದಿದ್ದರು.

   2) ನಂತರದಲ್ಲಿ ಅವರು ದೇವರನ್ನು ಆತನ ದೈವೀಕ ಆಳ್ವಿಕೆಯ ಕುರಿತು ಆತನಿಗೆ ಸ್ತುತಿ ಸಲ್ಲಿಸಿದರು. 'ಆಳುವ ಕರ್ತನ' ಕುರಿತು ಆದಿಸಭೆಯು ಅರ್ಥಮಾಡಿಕೊಂಡಿದ್ದು ಹೀಗೆ:

      - ಆತನು ಸೃಷ್ಟಿಕರ್ತನಾದ ದೇವರು (ವ. 24)
      - ಆತನು ಪ್ರಕಟಿಸುವ ಕರ್ತನು (ಪವಿತ್ರಾತ್ಮನಿಂದ ಕೀರ್ತನೆ 2 ರಲ್ಲಿ ಅರಸನಾದ ದಾವೀದನ ಮೂಲಕ ಮಾತನಾಡಿದವನೂ ಮತ್ತು ತನ್ನ ಕ್ರಿಸ್ತನನ್ನು ಪ್ರಪಂಚವು ವಿರೋಧಿಸುವದು ಎಂದು ಮುಂತಿಳಿಸಿದವನೂ ಆತನೇ), ವ. 25–26
      - ಆತನು ಇತಿಹಾಸದ ಕರ್ತನು (ಆತನು ಯೇಸು ಕ್ರಿಸ್ತನಿಗೆ ಏನು ಸಂಭವಿಸುವುದೆಂದು ಮುಂಚಿತವಾಗಿಯೇ ನಿರ್ಧರಿಸಿದ್ದನು) ವ. 27–28.

   3) ಅವರು ದೇವರ ಕುರಿತಾದ ತಮ್ಮ ಸ್ಪಷ್ಟವಾದ ಚಿತ್ರಣವನ್ನು ವ್ಯಕ್ತಪಡಿಸಿದ ನಂತರ ಮಾತ್ರ ತಮ್ಮ ಬಿನ್ನಹಗಳನ್ನು ದೇವರಿಗೆ ಸಲ್ಲಿಸಿದರು. ಅವರು ಮೂರ ಬಿನ್ನಹಗಳನ್ನು ಹೊಂದಿದ್ದರು:

- ನ್ಯಾಯಸಭೆಯವರ ಬೆದರಿಕೆಗಳನ್ನು ದೇವರು ಪರಿಗಣಿಸುವಂತೆ (ವ. 29). ಈ ಬೆದರಿಕೆಗಳನ್ನು ತೆಗೆದುಹಾಕುವಂತೆ ಆಗಲಿ ಅಥವಾ ದೇವರು ತಮ್ಮ ಶತ್ರುಗಳನ್ನು ಶಿಕ್ಷಿಸುವಂತೆ ಆಗಲಿ ಅವರು ಕೇಳಿಕೊಳ್ಳಲಿಲ್ಲ. ದೇವರು ಆ ಬೆದರಿಕೆಗಳನ್ನು ನೆನಪಿಸಿಕೊಳ್ಳುವಂತೆ ಮಾತ್ರ ಪ್ರಾರ್ಥಿಸಿದರು.

- ತನ್ನ ಸೇವಕರು (ಅಥವಾ 'ಗುಲಾಮರು') ಬಹು ಧೈರ್ಯದಿಂದ ದೇವರ ವಾಕ್ಯವನ್ನು ಹೇಳಲು ದೇವರು ಬಲಪಡಿಸುವಂತೆ ಬಿನ್ನಹಿಸಿದರು (ವ. 29). ಅಪೋಸ್ತಲರು ಹೆದರಿಕೊಳ್ಳದಂತೆ ಅಥವಾ ಬೆದರಿಕೆಗಳಿಂದ ಹಿಂಜರಿಯದಂತೆ ದೇವರನ್ನು ಕೇಳಿಕೊಂಡರು.

- ದೇವರು ಗುಣಪಡಿಸುವಂತೆಯೂ ಮತ್ತು ಸೂಚಕಕಾರ್ಯಗಳನ್ನು ಅದ್ಭುತಗಳನ್ನೂ ಮಾಡುವಂತೆಯೂ ಬಿನ್ನಹಿಸಿದರು (ವ. 30). ಪ್ರತೀಕಾರದ ಅದ್ಭುತಕ್ಕಾಗಲಿ ಅಥವಾ ನಾಶನಕ್ಕಾಗಲಿ ಅವರು ಕೇಳಿಕೊಳ್ಳಲಿಲ್ಲ. ಅವರು ಕರುಣೆಯ ಅದ್ಭುತಕ್ಕಾಗಿ ದೇವರನ್ನು ಕೇಳಿಕೊಂಡರು.

4. ದೇವರು ಅವರ ಪ್ರಾರ್ಥನೆಗೆ ಹೇಗೆ ಉತ್ತರಿಸಿದನು (ವ. 31)?

   1) ಅವರು ನೆಲೆಸಿದ್ದ ಸ್ಥಳವು ಕಂಪನಗೊಳ್ಳುವಂತೆ ಆತನು ತನ್ನ ಪ್ರಸನ್ನತೆಯನ್ನು ಪ್ರಕಟಪಡಿಸಿದನು.

   2) ಆತನು ಮತ್ತೊಮ್ಮೆ ಎಲ್ಲಾ ವಿಶ್ವಾಸಿಗಳನ್ನು ಪವಿತ್ರಾತ್ಮನಿಂದ ತುಂಬಿಸಿದನು.

   3) ನಿರ್ಭೀತಿಯುಳ್ಳವರಾಗಿ ಸುವಾರ್ತೆಯನ್ನು ಸಾರಲು ಬೇಕಾದ ಧೈರ್ಯವನ್ನು ಅವರಿಗೆ ಕೊಟ್ಟನು.

   4) ಸ್ವಸ್ಥತೆಯ ಅದ್ಭುತಕ್ಕಾಗಿ ಅವರು ಮಾಡಿದ ಬಿನ್ನಹಕ್ಕೆ ಆತನು ಉತ್ತರಕೊಟ್ಟನು (ಇದನ್ನು 5:12–16 ರಲ್ಲಿ ಕಾಣಬಹುದು)

5. ನಮ್ಮ ಕುರಿತು ಏನು? ನಾವು ಈ ಕಥೆಯಿಂದ ಪ್ರಾರ್ಥನೆಯ ಕುರಿತು ಏನನ್ನು ಕಲಿಯುತ್ತೇವೆ?

# ಪಾಠ 10. ವಿಶ್ವಾಸಿಗಳು ತಮಗಿದ್ದುದನ್ನು ಹಂಚಿಕೊಂಡದ್ದು, 4:32–37

## ಅ) ವಾಕ್ಯಭಾಗ

ಯೆರೂಸಲೇಮಿನಲ್ಲಿದ್ದ ಆದಿಸಭೆಯ ಜೀವಿತದ ಇನ್ನೊಂದು 'ಚಿತ್ರಣವನ್ನು' ಲೂಕನು ಮುಂದಿಡುತ್ತಾನೆ: ವಿಶ್ವಾಸಿಗಳ ಮಧ್ಯದಲ್ಲಿ ಕೊರತೆಯುಳ್ಳವರು ಯಾರೂ ಇರಲಿಲ್ಲ. ಸಭೆಯ ಮೇಲೆ ದೇವರ ಕೃಪೆಯು ಇತ್ತು ಮತ್ತು ಅಪೋಸ್ತಲರು ಯೇಸು ಕ್ರಿಸ್ತನ ಪುನರುತ್ಥಾನದ ಕುರಿತು ಎಡಬಿಡದೆ ಸಾಕ್ಷೀಕರಿಸುವವರಾಗಿದ್ದರು. ನಂತರದಲ್ಲಿ ಪೌಲನ ಸಹುದ್ಯೋಗಿಯಾಗಲಿದ್ದ ಬಾರ್ನಬನು ಇಲ್ಲಿ ಪರಿಚಯಿಸಲ್ಪಡುತ್ತಾನೆ.

## ಆ) ಟಿಪ್ಪಣಿ

*ಅಪೋಸ್ತಲರ ಪಾದಗಳ ಬಳಿಯಲ್ಲಿ ಇಡುತ್ತಿದ್ದರು ನಂತರದಲ್ಲಿ ಅದನ್ನು ಅಗತ್ಯವಿದ್ದವರಿಗೆ ತಕ್ಕಂತೆ ಹಂಚುತ್ತಿದ್ದರು* (ವ. 35): ಆಸ್ತಿಗಳನ್ನು ಮಾರಿ ಬಂದ ಹಣವು ಅಪೋಸ್ತಲರಿಗೆ ಕೊಡಲ್ಪಡುತ್ತಿತ್ತು. ನಂತರದಲ್ಲಿ ಅವರು ಅದನ್ನು ಅಗತ್ಯವಿದ್ದವರಿಗೆ ಕೊಡುತ್ತಿದ್ದರು.

*ಸೈಪ್ರಸ್ ಎಂಬಲ್ಲಿ ಹುಟ್ಟಿದ ಒಬ್ಬ ಲೇವಿಯವನು ಇದ್ದನು. ಅವನ ಹೆಸರು ಯೋಸೇಫ್. ಅಪೋಸ್ತಲರು ಅವನನ್ನು 'ಬಾರ್ನಬ' ಎಂದು ಕರೆದರು* (ವ. 36): ಹೊಸ ಒಡಂಬಡಿಕೆಯಲ್ಲಿ ತರುವಾಯದಲ್ಲಿ ಯೋಸೇಫನು ಎಂದು ಉಪಯೋಗಿಸದೆ ಬಾರ್ನಬನು ಎಂಬ ಹೆಸರನ್ನು ಉಪಯೋಗಿಸಲಾಗಿದೆ. ಆತನು ನಂತರದಲ್ಲಿ ಪೌಲನ ಆತ್ಮೀಕ ಸಲಹೆಗಾರನಾದನು (9:27) ಮತ್ತು ಸಿರಿಯಾದ ಅಂತಿಯೋಕ್ಯ ಸಭೆಯ ನಾಯಕನಾದನು, ಇಲ್ಲಿ ಅವನು ಮತ್ತು ಪೌಲನು ಒಟ್ಟಾಗಿ ಸಭಾಪಾಲಕರುಗಳಾಗಿ ಕಾರ್ಯನಿರ್ವಹಿಸಿದರು (11:22–26). ಮೊದಲ ಸುವಾರ್ತಾ ಸೇವೆಯ ಪ್ರಯಾಣದಲ್ಲಿ ಅವರಿಬ್ಬರು ಒಟ್ಟಿಗೆ ಪ್ರಯಾಣಿಸಿದರು (13:2). ಬಾರ್ನಬನು ಒಬ್ಬ ಯೆಹೂದಿಯಾಗಿದ್ದನು ಮತ್ತು ಮೆಡಿಟೆರೆನಿಯನ್ ಸಮುದ್ರದ ಪೂರ್ವದಿಕ್ಕಿನಲ್ಲಿರುವ ರೋಮ್‌ನ ದ್ವೀಪವಾದ ಸೈಪ್ರಸ್‌ನ ವಾಸಿಯೂ ಮತ್ತು 'ಜಮೀನ್ದಾರನೂ' ಆಗಿದ್ದನು. ಆತನು ಲೇವಿಯರ ಗೋತ್ರಕ್ಕೆ ಸಂಬಂಧಪಟ್ಟವನು. ಇವರು ಹಳೆ ಒಡಂಬಡಿಕೆಯ ಕಾಲದಲ್ಲಿ ಧಾರ್ಮಿಕ ಕೆಲಸವನ್ನು ಹೊತ್ತವರಾಗಿದ್ದ ಕಾರಣ ಪಾಲೆಸ್ತೀನಿನಲ್ಲಿ ಯಾವುದೇ ಸ್ವಂತ ಭೂಮಿಯನ್ನು ಪಡೆಯದವರಾಗಿದ್ದರು.

## ಇ) ಪಠ್ಯ ಪ್ರಶ್ನೆಗಳು

1. ಈ ವಾಕ್ಯಭಾಗದ ಪ್ರಾರಂಭದಲ್ಲಿ ವಿಶ್ವಾಸಿಗಳ ನಡವಳಿಕೆಯನ್ನು ಹೇಗೆ ವಿವರಿಸಲಾಗಿದೆ?
2. ಈ ವಾಕ್ಯಭಾಗದಲ್ಲಿ ಅಪೋಸ್ತಲರು ಏನನ್ನು ಮಾಡಿದರು?

3. ಬಾರ್ನಬನು ತನ್ನ ಆಸ್ತಿಯನ್ನು ಏನು ಮಾಡಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅ. ಕೃ. 2:4 ರಲ್ಲಿಯೂ ಮತ್ತು 4:31 ರಲ್ಲಿಯೂ ವಿಶ್ವಾಸಿಗಳು ಪವಿತ್ರಾತ್ಮನಿಂದ ತುಂಬಲ್ಪಟ್ಟರೆಂದು ಲೂಕನು ಬರೆಯುತ್ತಾನೆ. ಈ ಎರಡು ಕಥೆಗಳಲ್ಲಿಯೂ ಪವಿತ್ರಾತ್ಮನ ತುಂಬಲ್ಪಡುವಿಕೆಯ ಪರಿಣಾಮವು ಏಕರೀತಿಯಾಗಿರುವುದು ಬಹಳ ಕುತೂಹಲಕಾರಿಯಾಗಿದೆ. ಹೋಲಿಕೆ ಮಾಡಿರಿ!
2. ಅ. ಕೃ. 2:42–47 ಮತ್ತು 4:32–36 ರಲ್ಲಿರುವ ಆತ್ಮನಿಂದ ತುಂಬಲ್ಪಟ್ಟ ಯೆರೂಸಲೇಮಿನ ಸಭೆಯ ಎರಡು ವಿವರಣೆಗಳನ್ನು ಹೋಲಿಸಿರಿ.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಯೆರೂಸಲೇಮಿನ ಆತ್ಮಭರಿತ ಸಭೆಯ ಕುರಿತಾದ ಲೂಕನ ವಿವರಣೆಯ ಒಂದು ವಿಷಯವು ನಂತರದ ಸಭೆಗಳಿಗೆ ಕಠಿಣವಾಯಿತು: ಅದೇನೆಂದರೆ, ವಿಶ್ವಾಸಿಗಳಲ್ಲಿ ಭೌತಿಕ ಸಂಪನ್ಮೂಲಗಳ ಹಂಚಿಕೊಳ್ಳುವಿಕೆ (ಒಂದು ರೀತಿಯ 'ಕ್ರಿಸ್ತೀಯ ಸಮತಾವಾದ'). ಇದರ ಕುರಿತು ನಿಮ್ಮ ಸಭೆ ಏನನ್ನು ಉಪದೇಶಿಸುತ್ತದೆ? 'ಪ್ರತಿಯೊಂದೂ ಅವರಿಗೆ ಹುದುವಾಗಿತ್ತು' ಎನ್ನುವುದರ ಕುರಿತು ನೀವು ಏನನ್ನು ಆಲೋಚಿಸುತ್ತಿರಿ (2:44)?
2. ಅ. ಕೃ. 2:44–45 ರಲ್ಲಿ ('ವಿಶ್ವಾಸಿಗಳೆಲ್ಲರೂ ಒಟ್ಟಾಗಿದ್ದರು. ಪ್ರತಿಯೊಂದೂ ಅವರಿಗೆ ಹುದುವಾಗಿತ್ತು. ಅವರು ಆಸ್ತಿಪಾಸ್ತಿಯನ್ನು ಮಾರಿ ಅವರವರ ಅವಶ್ಯಕತೆಗೆ ಅನುಸಾರವಾಗಿ ಎಲ್ಲರಿಗೂ ಹಂಚುತ್ತಿದ್ದರು') ಮತ್ತು ಅ. ಕೃ. 4:32 ರಲ್ಲಿ ('ಯಾವನೂ ತನ್ನ ಆಸ್ತಿಯನ್ನು ತನ್ನದೇ ಎಂದು ಹಕ್ಕು ಸಾಧಿಸಲಿಲ್ಲ. ಆದರೆ ಅವರೆಲ್ಲರೂ ತಮಗಿದ್ದದ್ದೆಲ್ಲವನ್ನು ಹುದುವಾಗಿಟ್ಟುಕೊಂಡರು') ದೇವರ ವಾಕ್ಯವು ದಾಖಲಿಸಲ್ಪಟ್ಟಿರುವಂತೆ ತನ್ನ ಸಭೆಯೂ ಅದನ್ನೇ ಪಾಲಿಸಬೇಕೆಂದು ಪವಿತ್ರಾತ್ಮನು ನನಗೆ ತಿಳಿಸುತ್ತಿದ್ದಾನೆ ಎಂದು ಒಬ್ಬ ಯೌವ್ವನಸ್ಥ ಸಭಾಪಾಲಕನು ನಿಮ್ಮ ಸಭೆಯಲ್ಲಿ ಘೋಷಿಸಿಕೊಳ್ಳುತ್ತಾನೆ. ತನ್ನ ಮಾದರಿಯನ್ನು ಹಿಂಬಾಲಿಸದವರು 'ದೇವರ ವಾಕ್ಯಕ್ಕೆ ಅವಿಧೇಯರು' ಮತ್ತು 'ಅಪವಿತ್ರರು ಮತ್ತು ಪ್ರಾಪಂಚಿಕರು' ಎಂದು ದೂಷಿಸುತ್ತಾ ತನ್ನ ಸಹುದ್ಯೋಗಿಗಳ ಮೇಲೆ ತನ್ನ ಆಲೋಚನೆಗಳನ್ನು ಒತ್ತಾಯಪೂರ್ವಕವಾಗಿ ಹೇರುತ್ತಾನೆ. ನೀವು ಇಂತಹ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುವಿರಿ?

## ಊ) ಉಪದೇಶಿಸು ಮತ್ತು ಬೋಧಿಸು!

***ಅವರ ಮಧ್ಯದಲ್ಲಿ ಕೊರತೆಯುಳ್ಳ ಯಾವ ವ್ಯಕ್ತಿಯೂ ಇರಲಿಲ್ಲ*** (ಅ. ಕೃ. 2:34) ಎಂಬ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಈ ಪಾಠದಿಂದ ನೀವು ಕಲಿತಂತಹ ಅಂಶಗಳ ಮೇಲೆ ನಿಮ್ಮ ಅಧ್ಯಯವನ್ನು ಸಿದ್ಧಪಡಿಸಿರಿ. ಕೆಲವು ಸಾಮಾನ್ಯ ಸಲಹೆಗಳು ಹೀಗಿವೆ:

1. ಯೆರೂಸಲೇಮಿನ ಆದಿಸಭೆಯನ್ನು ವರ್ಣಿಸುವುದರ ಮೂಲಕ ಪ್ರಾರಂಭಿಸಬಹುದು.

2. ಸತ್ಯವೇದದ ನಿಯಮಗಳಾದ 'ಅನ್ಯೋನತೆ', 'ಒಬ್ಬನು ಮತ್ತೊಬ್ಬನ ಭಾರವನ್ನು ಹೊತ್ತುಕೊಳ್ಳುವುದರ ಮೂಲಕ ಕ್ರಿಸ್ತನ ಧರ್ಮಶಾಸ್ತ್ರವನ್ನು ನೆರವೇರಿಸುವುದು'" (ಗಲಾತ್ಯ. 6:2), 'ಒಬ್ಬರನ್ನೊಬ್ಬರು ಪ್ರೀತಿಸುವುದು', 'ಒಬ್ಬರಿಗೊಬ್ಬರು ಸಹಾಯಮಾಡುವುದು'" ಮತ್ತು ಇನ್ನಿತರೆ ಅಂಶಗಳನ್ನು ಮುಂದಿಡುವುದರೊಂದಿಗೆ ಮುಂದುವರೆಯಬಹುದು.

3. ಈ ಪಾಠದಿಂದ ಕೆಲವು ಕುತೂಹಲಕಾರಿ ಮತ್ತು ಆಲೋಚನೆಯನ್ನು ಪ್ರಚೋದಿಸುವ ಅಂಶಗಳನ್ನು ನೀವು ಉಪಯೋಗಿಸಬಹುದು.

4. ಇಂದು ನಮ್ಮ ಸಭೆಗಳಲ್ಲಿರುವ 'ಕೊರತೆಯಲ್ಲಿರುವ ಜನರ'" ವಿಷಯವನ್ನು ಹೇಗೆ ಬಗೆಹರಿಸಬಹುದೆಂಬುದಕ್ಕೆ ನಿಮ್ಮ ಅಧ್ಯಯನವು ಕೆಲವು ಸಲಹೆಗಳನ್ನು ಕೊಡುವಂತಾಗಬೇಕು.

# ಪಾಠ 11. ಅನನೀಯ ಮತ್ತು ಸಫ್ಫೈರ, 5:1–11

## ಅ) ವಾಕ್ಯಭಾಗ

ಅನನೀಯ ಮತ್ತು ಸಫ್ಫೈರಳು ಯೆರೂಸಲೇಮಿನ ಆದಿಸಭೆಗೆ ಸಂಬಂಧಪಟ್ಟವರಾಗಿದ್ದರು. ಅವರ ಪಾಪಗಳಿಗಾಗಿ ದೇವರು ಅವರಿಗೆ ಮರಣವನ್ನು ವಿಧಿಸಿದನು. ಅವರು ತಮಗಿದ್ದ ಆಸ್ತಿಯನ್ನು ಮಾರಿ ತಾವು ವಾಗ್ದಾನ ಮಾಡಿದ ರೀತಿಯಲ್ಲಿ ಅದರಿಂದ ಬಂದ ಹಣವನ್ನು ಪೂರ್ತಿಯಾಗಿ ಅಪೋಸ್ತಲರಿಗೆ ಕೊಡದೆ ಹೋದರು. ವಿಶ್ವಾಸಿಗಳು ಅನನೀಯ ಮತ್ತು ಸಫ್ಫೈರಳ ಮರಣವನ್ನು ಕೇಳಿದಾಗ ಭಯದಿಂದ ತುಂಬಲ್ಪಟ್ಟವರಾದರು.

## ಆ) ಟಿಪ್ಪಣಿ

*ಅನನೀಯ... ಸಫ್ಫೈರಳೊಂದಿಗೆ* (ವ. 1): ಈ ಕಥೆಯು ನಂತರ ಬರುವ ಬಾರ್ನಬನ ಒಳ್ಳೆಯ ಮಾದರಿಗೆ ವಿರುದ್ಧವಾದ ಹೋಲಿಕೆಯಾಗಿ ಒಂದು ಕೆಟ್ಟ ಮಾದರಿಯನ್ನು ತೋರಿಸುತ್ತದೆ. ಹೊಸ ಒಡಂಬಡಿಕೆಯ ಬೇರೆ ಯಾವ ಭಾಗದಲ್ಲಿಯೂ ಅನನೀಯ ಮತ್ತು ಸಫ್ಫೈರರ ಕುರಿತು ತಿಳಿಸಲ್ಪಟ್ಟಿಲ್ಲ.

*ತನಗಾಗಿ ಇಟ್ಟುಕೊಂಡು* (ವ. 2): ಇದರ ಗ್ರೀಕ್ ಪದದ ಅರ್ಥವೇನೆಂದರೆ 'ದುರುಪಯೋಗಿಸು, ಲಪಟಾಯಿಸು' ಎಂಬುದಾಗಿ. ಹಳೆ ಒಡಂಬಡಿಕೆಯ ಗ್ರೀಕ್ ಅನುವಾದದಲ್ಲಿ ಯೆಹೊಶುವ 7 ನೇ ಅಧ್ಯಾಯದಲ್ಲಿ ಆಕಾನನ ಕಳ್ಳತನದ ಕುರಿತಾಗಿಯೂ ಇದೇ ಪದ ಬಳಕೆಯಾಗಿದೆ.

*ಸಭೆ* (ವ. 11): ಅಪೋಸ್ತಲರ ಕೃತ್ಯಗಳಲ್ಲಿ ಇದೇ ಮೊದಲ ಬಾರಿಗೆ 'ಸಭೆ' ಎಂಬ ಪದವು ಉಪಯೋಗಿಸಲ್ಪಡುತ್ತಿದೆ. ಈ ಪದವು ಒಂದು ವೇಳೆ ಸ್ಥಳೀಯ ಗುಂಪನ್ನು ಸೂಚಿಸಬಹುದು (ನೋಡಿರಿ. 8:1; 11:22; 12:1) ಅಥವಾ ಸಾರ್ವತ್ರಿಕ ಸಭೆಯನ್ನು ಸೂಚಿಸಬಹುದು (ನೋಡಿರಿ. 20:28). ಇದೇ ಪದವು ಸಾಮಾಜಿಕ ಮತ್ತು ರಾಜಕೀಯವಾದ ಸಭೆಗಳನ್ನು ಸೂಚಿಸಲು ಬಳಸಲಾಗಿದೆ (ನೋಡಿರಿ. 19:32, 41).

## ಇ) ಪಠ್ಯ ಪ್ರಶ್ನೆಗಳು

1. ಅನನೀಯ ಮತ್ತು ಸಫ್ಫೈರಳು ತಮ್ಮ ಆಸ್ತಿಯನ್ನು ಮಾರಿಬಂದ ಹಣವನ್ನು ಏನು ಮಾಡಿದರು?
2. ಬಾರ್ನಬನ ನಡವಳಿಕೆಯನ್ನು (4:36–37) ಅನನೀಯ ಮತ್ತು ಸಫ್ಫೈರಳ ನಡವಳಿಕೆಯೊಂದಿಗೆ ಹೋಲಿಸಿ ನೋಡಿರಿ. ಸಮಾನತೆಗಳು ಮತ್ತು ವ್ಯತ್ಯಾಸಗಳು?
3. ಈ ವಾಕ್ಯಭಾಗದಲ್ಲಿ ಸೈತಾನನ ಕಾರ್ಯಚಟುವಟಿಕೆಯನ್ನು ಹೇಗೆ ವರ್ಣಿಸಲಾಗಿದೆ?

4. ಈ ಘಟನೆಗೆ ಸಭೆಯು ಹೇಗೆ ಪ್ರತಿಕ್ರಿಯೆ ತೋರಿಸಿತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ಕಥೆಯಲ್ಲಿ ದೇವರು ಮೂರು ಸಾರಿ ಮತ್ತು ಮೂರು ವಿವಿಧ ಹೇಳಿಕೆಗಳಲ್ಲಿ ತಿಳಿಸಲ್ಪಟ್ಟಿದ್ದಾನೆ. ಆ ಮೂರು ಹೇಳಿಕೆಗಳಾವುವು? ಈ ವಿವಿಧ ಹೇಳಿಕೆಗಳ ದೈವಶಾಸ್ತ್ರೀಯ ಮಹತ್ವವೇನು?
2. ಅನನೀಯ ಮತ್ತು ಸಫೈರಳನ್ನು ದೇವರು ಯಾಕೆ ಶಿಕ್ಷಿಸಿದನು? ಅವರ ಪಾಪವೇನಾಗಿತ್ತು?
3. ಅನನೀಯ ಮತ್ತು ಸಫೈರಳು ತಮ್ಮ ಪಾಪಗಳಿಗಾಗಿ ದೇವರಿಂದ ಕಠಿಣವಾಗಿ ಶಿಕ್ಷಿಸಲ್ಪಟ್ಟರು. ಈ ಕಥೆಯಿಂದ ದೇವರ ನ್ಯಾಯತೀರ್ಪಿನ ಕುರಿತು ನಾವು ವಿಶ್ವಾಸಿಗಳಾಗಿ ಮತ್ತು ಸಭೆಯಾಗಿ ಇಂದು ಕಲಿಯುವ ಅಂಶವೇನು?
4. ಈ ಕಥೆಯ ಕುರಿತು ನಿಮ್ಮ ಅನಿಸಿಕೆ ಏನು? ಇದು ಸತ್ಯವೇದದಲ್ಲಿ ಸೇರಿಸಲ್ಪಟ್ಟಿದ್ದು ಒಳ್ಳೆಯದೋ? ಯಾಕೆ–ಯಾಕೆ ಇಲ್ಲ?

### ಇ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ಕಥೆಯಲ್ಲಿ ಅನನೀಯ ಮತ್ತು ಸಫೈರರ ಪಾಪದ ಪರಿಣಾಮವಾಗಿ ದೇವರು ತಕ್ಷಣವಾದ ಮತ್ತು ನಾಟಕೀಯವಾದ ರೀತಿಯಲ್ಲಿ ಮರಣ ವಿಧಿಸುತ್ತಾನೆ.

1) ನಿಮ್ಮ ಸಭೆಗಳಲ್ಲಿ ಈ ರೀತಿಯಾದ ಘಟನೆಗಳನ್ನು ನೀವು ಕಂಡಿದ್ದೀರಾ? ದಯವಿಟ್ಟು ಹಂಚಿಕೊಳ್ಳಿ!

2) ಪ್ರತಿನಿತ್ಯ ನಮ್ಮ ಸಭೆಗಳಲ್ಲಿರುವ ಜನರ ಜೀವನಗಳಲ್ಲಿ ಉಂಟಾಗುವ ಪಾಪಗಳ ನಿಮಿತ್ತ ನಾವು ದೇವರಿಂದ ಇಂತಹ ರೀತಿಯ ನಾಟಕೀಯವಾದ ಅಥವಾ ತಕ್ಷಣದ ದೈವೀಕ ಶಿಕ್ಷೆಯನ್ನು ನಿರೀಕ್ಷಿಸುವುದು ಅವಶ್ಯವೆಂದು ನೀವು ಆಲೋಚಿಸುವಿರೋ? ಯಾಕೆ–ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

***'ಹೊಸ ಒಡಂಬಡಿಕೆಯ ಸಭೆಯ ಮೇಲೆ ಸೈತಾನನ ಮೊದಲ ದಾಳಿ'*** ಎಂಬ ಸತ್ಯವೇದ ಅಧ್ಯಯನಕ್ಕಾಗಿ ಈ) 2, ಈ) 3, ಈ) 4 ರ ಪ್ರಶ್ನೆಗಳ ಉತ್ತರಗಳನ್ನು ಉಪಯೋಗಿಸಿರಿ.

# ಪಾಠ 12. ಅಪೋಸ್ತಲರು ಅನೇಕರನ್ನು ಗುಣಪಡಿಸಿದ್ದು, 5:12–16

## ಅ) ವಾಕ್ಯಭಾಗ

ಅಪೋಸ್ತಲರು ಅನೇಕ ಅದ್ಭುತ ಮತ್ತು ಸೂಚಕ ಕಾರ್ಯಗಳನ್ನು ಮಾಡಿದರು. ದುರಾತ್ಮಪೀಡಿತರು ಮತ್ತು ಅಸ್ವಸ್ಥರು ಗುಣ ಹೊಂದಿದರು. ಅನೇಕರು – ಸ್ತ್ರೀಯರು ಹಾಗೂ ಪುರುಷರು – ಸಭೆಗೆ ಸೇರಿಕೊಂಡರು.

## ಆ) ಟಿಪ್ಪಣಿ

*ಒಂದೇ ಮನಸ್ಸುಳ್ಳವರಾಗಿ*" (ವ. 12): ಇದರ ಗ್ರೀಕ್ ಪದವು ಎರಡು ರೀತಿಯಾದ ಅರ್ಥಗಳನ್ನು ಒಳಗೊಂಡಿದೆ. ಕೆಲವು ಅನುವಾದಗಳು (ಆಂಗ್ಲ ಭಾಷೆಯ ಎನ್.ಐ. ವಿ. ಅನುವಾದವು) 'ಒಟ್ಟಾಗಿ' ಎಂಬ ಪದವನ್ನು ಬಳಸುತ್ತವೆ, ಇನ್ನಿತರೆ ಅನುವಾದಗಳು 'ಒಂದೇ ಮನಸ್ಸುಳ್ಳವರಾಗಿ' ಎಂದು ಬಳಸುತ್ತವೆ.

## ಇ) ಪಠ್ಯ ಪ್ರಶ್ನೆಗಳು

1. ಈ ಕಥೆಯಲ್ಲಿ ಅಪೋಸ್ತಲರಿಂದ ಯಾವ ರೀತಿಯಾದ ಅದ್ಭುತ ಮತ್ತು ಸೂಚಕ ಕಾರ್ಯಗಳು ಉಂಟಾದವೆಂದು ದಾಖಲಿಸಲಾಗಿದೆ?
2. ವಿಶ್ವಾಸಿಗಳು ಎಲ್ಲಿ ಕೂಡಿ ಬರುತ್ತಿದ್ದರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಆದಿಸಭೆಯಲ್ಲಿ ಉಂಟಾದ ಅದ್ಭುತ ಮತ್ತು ಸೂಚಕ ಕಾರ್ಯಗಳನ್ನು ನೋಡಿದ ಜನರು ವ್ಯತ್ಯಾಸವಾದ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಅವರು ಹೇಗೆ ಪ್ರತಿಕ್ರಿಯಿಸಿದರು?
2. ವ. 15 'ಇದರ ಪರಿಣಾಮವಾಗಿ' ಎಂಬ ಪದ ವಿನ್ಯಾಸದಿಂದ ಪ್ರಾರಂಭವಾಗುತ್ತದೆ. ಈ ವಾಕ್ಯಭಾಗದಲ್ಲಿ ಯಾವ ಹಿನ್ನಲೆಯನ್ನು ಇದು ಉಲ್ಲೇಖಿಸುತ್ತಿದೆ?
3. ಪೇತ್ರನ ನೆರಳು ಎಂಬ ಮಾಹಿತಿಯನ್ನು ನಾವು ಹೇಗೆ ಅರ್ಥೈಸಿಕೊಳ್ಳಬೇಕು? ಯೇಸುವಿನ ಮತ್ತು ಪೌಲನ ಸೇವೆಯಲ್ಲಿ ಇದೇ ರೀತಿಯ ಘಟನೆಗಳನ್ನು ನೀವು ನೆನಪಿಸಿಕೊಳ್ಳಬಹುದಾ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಈ ವಾಕ್ಯಭಾಗದಲ್ಲಿ ಯೆರೂಸಲೇಮ್ ಸಭೆಯಲ್ಲಿ ಉಂಟಾದ ಅದ್ಭುತ ಮತ್ತು ಸೂಚಕ ಕಾರ್ಯಗಳನ್ನು ನೋಡಿದ ಜನರು ಎರಡು ರೀತಿಯಾದ ವ್ಯತಿರಿಕ್ತವಾದ ಪ್ರತಿಕ್ರಿಯೆಗಳನ್ನು ತೋರ್ಪಡಿಸುತ್ತಿರುವುದನ್ನು ನೋಡಬಹುದು (ಪ್ರಶ್ನೆ ಈ–1 ನ್ನು ನೋಡಿರಿ). ನಿಮ್ಮ ಸಭಾಪಾಲಕರ ಅಥವಾ ನಿಮ್ಮ ಸಭೆಯ ಸೇವೆಗಳಲ್ಲಿ ಇಂತಹದ್ದೇ ರೀತಿಯಾದ ಅನುಭವವನ್ನು ನೀವು ಹೊಂದಿದ್ದೀರೋ?
2. ಪೇತ್ರನ ನೆರಳು ಎಂಬ ಮಾಹಿತಿ – ಪ್ರಶ್ನೆ ಈ–3 ನ್ನು ನೋಡಿರಿ. ನಿಮ್ಮ ಸಭೆಯಲ್ಲಿ ಇದೇ ರೀತಿಯ ಅಭ್ಯಾಸವಿದೆಯೋ? ಯಾಕೆ – ಯಾಕೆ ಇಲ್ಲ?

# ಪಾಠ 13. ಅಪೊಸ್ತಲರಿಗಾದ ಹಿಂಸೆ, 5:17–42

## ಅ) ವಾಕ್ಯಭಾಗ

ಅಪೊಸ್ತಲರ ಯಶಸ್ವಿಯಾದ ಸೇವೆಯನ್ನು ಕಂಡ ಯೆಹೂದಿ ಮುಖಂಡರಿಗೆ ಬೇಸರವಾಯಿತು, ಹಾಗಾಗಿ ಅವರು ಅಪೊಸ್ತಲರನ್ನು ಬಂಧಿಸಿ ರಾತ್ರಿಯಿಡೀ ಸೆರೆಮನೆಯಲ್ಲಿ ಹಾಕಿದರು. ರಾತ್ರಿಯಲ್ಲಿ ಕರ್ತನ ದೂತನೊಬ್ಬನು ಸೆರೆಮನೆಯ ದ್ವಾರಗಳನ್ನು ತೆರೆದು ಅವರನ್ನು ಹೊರಗೆ ನಡೆಸಿಕೊಂಡು, ಈ ಜೀವವಾಕ್ಯಗಳನ್ನು ದೇವಾಲಯದ ಅಂಗಣಗಳಲ್ಲಿ ಜನರಿಗೆ ಬೋಧಿಸಿರಿ"ಎಂದು ಹೇಳಿದನು. ಮೂರನೆಯ ದಿನ ಅಪೊಸ್ತಲರು ನ್ಯಾಯಸಭೆಯ ಮುಂದೆ ವಿಚಾರಣೆಗೆ ಒಳಗಾದರು. ಅಪೊಸ್ತಲರು ಮಹಾಯಾಜಕರ ಮತ್ತು ಇತರೆ ನ್ಯಾಯಸಭೆಯ ಸದಸ್ಯರ ಮುಂದೆ ಯೇಸು ಕ್ರಿಸ್ತನ ಕುರಿತು ಘೋಷಿಸಿದಾಗ ಅದನ್ನು ಕೇಳಿದ ಅವರು ಅತೀಯಾಗಿ ಕೋಪಗೊಂಡು ಅಪೊಸ್ತಲರನ್ನು ಕೊಲ್ಲಬೇಕೆಂದು ನೋಡಿದರು. ಆದರೆ ನ್ಯಾಯಸಭೆಯ ಫರಿಸಾಯ ಸದಸ್ಯನೂ ಸರ್ವರ ಗೌರವಕ್ಕೆ ಪಾತ್ರನೂ ಆಗಿದ್ದ ಗಮಲಿಯೇಲನ ಬುದ್ಧಿಮಾತಿನ ಮೇಲೆ ಅಪೊಸ್ತಲರು ಬಿಡುಗಡೆ ಮಾಡಲ್ಪಟ್ಟರು. ಆದರೆ ಮೊದಲು ಅವರನ್ನು ಕರೆಯಿಸಿ ಛಡಿಗಳಿಂದ ಹೊಡೆಸಿ, ಯೇಸುವಿನ ಹೆಸರಿನಲ್ಲಿ ಮಾತನಾಡಬಾರದೆಂದು ಆಜ್ಞಾಪಿಸಿದರು. ಅಪೊಸ್ತಲರು 'ಯೇಸುವಿನ ನಾಮದ ನಿಮಿತ್ತ ಅವಮಾನಪಡಲು ತಾವು ಯೋಗ್ಯರಾದೆವಲ್ಲಾ' ಎಂದು ಸಂತೋಷಪಡುತ್ತಾ ನ್ಯಾಯಸಭೆಯಿಂದ ಹೊರಗೆ ಹೋದರು ಮತ್ತು ದಿನದಿನವೂ ಅವರು ದೇವಾಲಯದ ಅಂಗಣಗಳಲ್ಲಿ ಮತ್ತು ಮನೆಯಿಂದ ಮನೆಗೆ ಹೋಗಿ ಕ್ರಿಸ್ತ ಯೇಸುವಿನ ವಿಷಯವನ್ನು ಸಾರುವುದರಲ್ಲಿಯೂ ಬೋಧಿಸುವುದರಲ್ಲಿಯೂ ನಿರತರಾಗಿದ್ದರು.

## ಆ) ಟಿಪ್ಪಣಿ

*ಪ್ರಧಾನ ಯಾಜಕನೂ ಅವನ ಬಳಿಯಲ್ಲಿದ್ದ ಸದ್ದುಕಾಯರೆಲ್ಲರೂ* (ವ. 17): ಕಾಯಫನು ಅಧಿಕೃತವಾಗಿ ಪ್ರಧಾನ ಮಹಾಯಾಜಕನಾಗಿದ್ದರೂ ಆತನ ಮಾವನಾದ ಅನ್ನನನ್ನು ನಿಜವಾದ ಪ್ರಧಾನ ಮಹಾಯಾಜಕನೆಂದು ಯೆಹೂದ್ಯರು ಪರಿಗಣಿಸುತ್ತಿದ್ದರು. 'ಸದ್ದುಕಾಯರೆಲ್ಲರೂ'" ಅಂದರೆ ಆತನ ಕುಟುಂಬವನ್ನು ಸೂಚಿಸುವಂತಹದ್ದಾಗಿದೆ. ಅವರು ಸದ್ದುಕಾಯ ಪಕ್ಷಕ್ಕೆ ಸಂಬಂಧಪಟ್ಟವರು ಮತ್ತು ಪಾಲೆಸ್ತೀನಿನಲ್ಲಿದ್ದ ರೋಮ್ ಅಧಿಕಾರಕ್ಕೆ ಬೆಂಬಲವನ್ನು ಸೂಚಿಸುವಂತವರಾಗಿದ್ದರು.

*ನ್ಯಾಯಸಭೆ* (ವ. 21): ನ್ಯಾಯಸಭೆಯು ಯೆಹೂದ್ಯರ ಸರ್ವೋಚ್ಚನ್ಯಾಯಾಲಯವಾಗಿತ್ತು. ಅದು 70 ರಿಂದ 100 ಪುರುಷರನ್ನೊಳಗೊಂಡಿತ್ತು (71 ಅನ್ನುವುದು ಸರಿಯಾದ ಸಂಖ್ಯೆಯಾಗಿತ್ತು). ಅವರು ಅರ್ಧವೃತ್ತದಲ್ಲಿ ಕೂತುಕೊಳ್ಳುತ್ತಿದ್ದರು ಮತ್ತು ಅವರ ಹಿಂಬದಿಯಲ್ಲಿ ಶಿಷ್ಯರ ಮೂರು ಸಾಲುಗಳು ಇರುತ್ತಿದ್ದವು, ಇವರೆಲ್ಲರ ಎದುರು ನ್ಯಾಯಾಲಯದ ಗುಮಾಸ್ತರು ನಿಂತುಕೊಳ್ಳುತ್ತಿದರು.

*ನಮ್ಮನ್ನು ಈ ಮನುಷ್ಯನ ರಕ್ತ ಸುರಿಸಿದ ಅಪರಾಧಿಗಳನ್ನಾಗಿ ಮಾಡಲಿಕ್ಕೆ* (ವ. 28): ಯೆಹೂದ್ಯ ನಾಯಕರುಗಳ ವಿರುದ್ಧವಾಗಿ ಅಪೋಸ್ತಲರು ಮಾಡಿದ ದೋಷಾರೋಪಣೆಯನ್ನು ಮಹಾಯಾಜಕನು ಇಲ್ಲಿ ಸೂಚಿಸುತ್ತಿದ್ದಾನೆ: ಅದೇನೆಂದರೆ ಯೇಸುವನ್ನು ಕೊಂದಿದ್ದಕ್ಕೆ ಅವರೇ ಜವಾಬ್ದಾರರಾಗಿದ್ದರು.

*ಮರ* (ವ. 30): ಈ ಪದವು ಶಿಲುಬೆಯನ್ನು ಸೂಚಿಸುತ್ತದೆ

*ಗಮಲಿಯೇಲ ಎಂಬ ಹೆಸರಿನ ಫರಿಸಾಯ ಹಾಗೂ ಧರ್ಮಶಾಸ್ತ್ರದ ಬೋಧಕನು* (ವ. 34): ಆ ದಿನದಲ್ಲಿ ಗಮಲಿಯೇಲನು ಬಹಳ ಪ್ರಸಿದ್ಧನಾದ ಯೆಹೂದಿ ಉಪದೇಶಕನಾಗಿದ್ದನು. ಈತನು ಒಬ್ಬ ಫರಿಸಾಯನಾಗಿದ್ದನು ಮತ್ತು ಸದ್ದುಕಾಯರ ಪ್ರತಿಸ್ಪರ್ಧಿ ಗುಂಪಿಗೆ ಸೇರಿದವರಾದ ಮಹಾಯಾಜಕ ಕುಟುಂಬದವರಿಗಿಂತ ಈತನು ಸಡಿಲತೆಯುಳ್ಳವನಾಗಿದ್ದನು. ಗಮಲಿಯೇಲನು ಜನರ ಪ್ರೀತಿಗೆ ಪಾತ್ರನಾದವನು ಮತ್ತು ಜ್ಞಾನ, ಪಾಂಡಿತ್ಯ ಮತ್ತು ಮಿತವರ್ತನೆಗೆ ಪ್ರಸಿದ್ಧನಾಗಿದ್ದನು. (ತಾರ್ಸದ ಸೌಲನಾದ) ಪೌಲನು ಆತನ ವಿದ್ಯಾರ್ಥಿಗಳಲ್ಲಿ ಒಬ್ಬನಾಗಿದ್ದನು.

*ಥೈದ* (ವ. 36): ಇತಿಹಾಸದ ಯಾವುದೇ ಇತರೆ ಮೂಲಗಳಿಂದ ಈತನ ಕುರಿತು ತಿಳಿದುಬಂದಿಲ್ಲ.

*ಗಲಿಲಾಯದ ಯೂದ* (ವ. 37): ದೇವರಿಗೆ ಮಾತ್ರ ಕಪ್ಪವನ್ನು ಕೊಡಬೇಕೆಂದು ಪ್ರಚಾರ ಮಾಡುತ್ತಾ ರೋಮ್ ತೆರಿಗೆಯ ವಿರುದ್ಧ ಯೂದನು ಗಲಿಲಾಯದಲ್ಲಿ ಒಂದು ದಂಗೆಯನ್ನು ಪ್ರಾರಂಭಿಸಿದನೆಂದು ಯೆಹೂದ್ಯ ಇತಿಹಾಸಕಾರನಾದ ಯೋಸೇಫಸ್ ಬರೆಯುತ್ತಾನೆ.

*ಜನಗಣತಿಯ ದಿನಗಳಲ್ಲಿ* (ವ. 37): ಈ ಜನಗಣತಿಯು ಕ್ರಿ.ಶ. 6 ರಲ್ಲಿ ನಡೆಯಿತು. ಈ ಜನಗಣತಿಯು ಯೇಸು ಕ್ರಿಸ್ತನ ಜನನದ ಸಮಯದಲ್ಲಿ ಯೋಸೇಫ ಮತ್ತು ಮರಿಯಳು ಬೆತ್ಲೆಹೇಮಿಗೆ ಪ್ರಯಾಣಿಸುವಂತೆ ಮಾಡಿದ ಕುರೇನ್ಯನ ಜನಗಣತಿಯಲ್ಲ (ಲೂಕ 2:2).

*ಛಡಿಗಳಿಂದ ಹೊಡೆಸಿ* (ವ. 40): 'ಯೆಹೂದ್ಯರ ಭಯಂಕರ ಶಿಕ್ಷೆಯಾದ ಮೂವತ್ತೊಂಭತ್ತು' ಛಡಿ ಏಟುಗಳನ್ನು ಅಪೋಸ್ತಲರಿಗೆ ನೀಡಲಾಯಿತು.

## ಇ) ಪಠ್ಯ ಪ್ರಶ್ನೆಗಳು

1. ಅಪೋಸ್ತಲರನ್ನು ಬಂಧಿಸಿದವರಾರು?
2. ಸೆರೆಮನೆಯಿಂದ ಅಪೋಸ್ತಲರು ಹೇಗೆ ಬಿಡುಗಡೆ ಹೊಂದಿದರು?

3. ದೇವಾಲಯದ ಕಾವಲುಗಾರರ ದಳಪತಿಯೂ ಮತ್ತು ಮುಖ್ಯಯಾಜಕರೂ ಯಾಕೆ ಕಳವಳಪಟ್ಟರು (ವ. 24)?

4. ದಳಪತಿಯೂ ಮತ್ತು ಆತನ ಅಧಿಕಾರಿಗಳು ಅಪೋಸ್ತಲರನ್ನು ಎಲ್ಲಿ ಕಂಡುಕೊಂಡರು?

5. ಅಪೋಸ್ತಲರನ್ನು ಪ್ರಶ್ನಿಸಲು ಅಧಿಕಾರಿಗಳು ಅವರನ್ನು ಎಲ್ಲಿಗೆ ಕರೆದುಕೊಂಡು ಹೋದರು?

6. ನ್ಯಾಯಸಭೆಯವರು ಅಪೋಸ್ತಲರಿಗೆ ಏನು ಮಾಡಬೇಕೆಂದು ಬಯಸಿದರು?

7. ನ್ಯಾಯಸಭೆಯವರಿಗೆ ಗಮಲಿಯೇಲನು ನೀಡಿದ ಸಲಹೆ ಏನು?

8. ಅಪೋಸ್ತಲರು ಹೇಗೆ ಶಿಕ್ಷಿಸಲ್ಪಟ್ಟರು?

9. ಅಪೋಸ್ತಲರು ತಮ್ಮ ವಿಚಾರಣೆಯು ಮುಗಿದ ನಂತರ ಯಾಕೆ ಸಂತೋಷವುಳ್ಳವರಾಗಿದ್ದರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗವನ್ನು ನೀವು ಹೇಗೆ ರಚಿಸುತ್ತೀರಿ?

2. ಯೆಹೂದ್ಯ ಮಂಡಳಿಯವರು 'ಮತ್ಸರದಿಂದ ತುಂಬಿದವರಾಗಿ' ಅಪೋಸ್ತಲರ ಮೇಲೆ ಮತ್ತೊಂದು ರೀತಿಯಲ್ಲಿ ದಾಳಿ ಮಾಡಲು ಕಾರಣ ಏನಾಗಿರಬಹುದು?

3. ವ. 21 ರಲ್ಲಿ ಅಪೋಸ್ತಲರು 'ಕಾನೂನು ಬಾಹಿರವಾದದ್ದನ್ನು' ಮಾಡಿದರು. ಅವರು ಮಾಡಿದ್ದೇನು? ಅವರು ಯಾಕೆ ಇದನ್ನು ಮಾಡಿದರು?

4. ನ್ಯಾಯಸಭೆಯವರ ಮುಂದೆ ಅಪೋಸ್ತಲರು ಹೇಗೆ ತಮ್ಮನ್ನು ಸಮರ್ಥಿಸಿಕೊಂಡರು?

5. ಗಮಲಿಯೇಲನು ತನ್ನ ಅಂಶವನ್ನು ಹೇಗೆ ಚರ್ಚೆಮಾಡಿದನು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಅಪೋಸ್ತಲರು ಬಿಡುಗಡೆಯಾಗುವುದಕ್ಕಿಂತ ಮುಂಚೆ ನ್ಯಾಯಸಭೆಯವರಿಂದ ಛಡಿಗಳಿಂದ ಹೊಡೆಸಲ್ಪಟ್ಟರು. ಆದ್ದರಿಂದ 'ಯೇಸುವಿನ ನಾಮದ ನಿಮಿತ್ತ ಅವಮಾನಪಡಲು ತಾವು ಯೋಗ್ಯರಾದೆವಲ್ಲಾ' ಎಂದು ಅಪೋಸ್ತಲರು ಸಂತೋಷಪಟ್ಟರು (ವ. 41).

1. ಈ ವಾಕ್ಯಭಾಗದಲ್ಲಿ ಬಳಸಲಾದ 'ಅವಮಾನ' ಎಂಬ ಪದಬಳಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

2. ದಕ್ಷಿಣ ಭಾರತದ ಹಿನ್ನಲೆಯಲ್ಲಿ ಈ ದಿನ 'ಅವಮಾನ' ಎಂಬ ಪದವು ಏನನ್ನು ಸೂಚಿಸುತ್ತದೆ?

3. ದಕ್ಷಿಣ ಭಾರತದ ಸಭಾನಾಯಕರು ಈ ದಿನ 'ಅವಮಾನ ಹೊಂದುವಾಗ' ಸಂತೋಷದಿಂದ ಪ್ರತಿಕ್ರಿಯಿಸುತ್ತಾರೆಯೇ? ಯಾಕೆ – ಯಾಕೆ ಇಲ್ಲ? ನಿಮ್ಮ ಕುರಿತು ಏನು?

## ಊ) ಉಪದೇಶಿಸು ಮತ್ತು ಬೋಧಿಸು!

ನ್ಯಾಯಸಭೆಯವರ ಮುಂದೆ ಅಪೋಸ್ತಲರು ಮಾಡಿದ ಪ್ರತಿವಾದವು ***'ದೇವರ ಕುರಿತಾದ ಮೂರು ಸತ್ಯಗಳು'*** ಎಂಬ ಒಂದು ಸಣ್ಣ ಪ್ರಸಂಗದ ರೂಪದಲ್ಲಿದೆ (ಅ. ಕೃ. 5:29–32). ನಿಮ್ಮ ಸ್ವಂತ ಬೋಧನೆಗಾಗಿ ನೀವು ಈ ಹೊರರೇಖೆಯನ್ನು ಉಪಯೋಗಿಸಬಹುದು:

1. ಹಿನ್ನಲೆ: ನ್ಯಾಯಸಭೆಯವರ ಮುಂದೆ ಅವಿಧೇಯ ಅಪೋಸ್ತಲರು: 'ನಾವು ಮನುಷ್ಯರಿಗಿಂತ ದೇವರಿಗೆ ವಿಧೇಯರಾಗಬೇಕು!' ನಮ್ಮ ಕುರಿತು ಏನು?
    - ನಾವು ಯಾರಿಗೆ ವಿಧೇಯರಾಗುತ್ತೇವೆ? ಇಹಲೋಕದ ಅಧಿಕಾರಿಗಳಿಗೋ? ಅಥವಾ ದೇವರಿಗೋ?
    - ನಮ್ಮ ಜೀವಿತದಲ್ಲಿ ನಾವು ದೇವರನ್ನು ಮತ್ತು ಆತನ ರಾಜ್ಯವನ್ನು ಮೊಟ್ಟಮೊದಲ ಸ್ಥಾನದಲ್ಲಿ ಇಡುತ್ತಿದ್ದೇವೋ?
2. ದೇವರ ಕುರಿತು ಇರುವ ಮೂರು ಸತ್ಯಗಳು:
    1) ದೇವರು ಯೇಸು ಕ್ರಿಸ್ತನನ್ನು ಮರಣದಿಂದ ಎಬ್ಬಿಸಿದನು. ಆದರೆ ಯೆಹೂದ್ಯ ನಾಯಕರುಗಳು ಆತನನ್ನು ತಿರಸ್ಕರಿಸಿ ಆತನನ್ನು ಕೊಲ್ಲಿಸಿದರು. ನಮ್ಮ ಕುರಿತು ಏನು? ನಾವೂ ಸಹ ಯೇಸುವನ್ನು ತಿರಸ್ಕರಿಸುತ್ತೇವೋ? ಅಥವಾ ನಾವು ಆತನ್ನು ಸ್ವೀಕರಿಸುತ್ತೇವೋ?
    2) ದೇವರು ಯೇಸು ಕ್ರಿಸ್ತನನ್ನು ರಕ್ಷಕನನ್ನಾಗಿಯೂ ಮತ್ತು ರಾಜನನ್ನಾಗಿಯೂ ತನ್ನ ಬಲಗಡೆಯಲ್ಲಿರುವಂತೆ ಉನ್ನತಕ್ಕೇರಿಸಿದನು.
        - ತನ್ನ ಅತ್ಯುನ್ನತವಾದ ಬಲ ಮತ್ತು ಗೌರವದ ಸ್ಥಾನದಿಂದಾಗಿ ಯೇಸು ಪಾಪಕ್ಕಾಗಿ ಪಶ್ಚಾತ್ತಾಪ ಮತ್ತು ಕ್ಷಮಾಪಣೆಯನ್ನು ನೀಡಬಲ್ಲನು. ನಿನ್ನ ಕುರಿತು ಏನು? ಪಾಪ ಮತ್ತು ಮರಣದ ನಿನ್ನ ಹಳೆಯ ಜೀವಿತಕ್ಕಾಗಿ ನೀನು ಪಶ್ಚಾತ್ತಾಪಪಟ್ಟು ಯೇಸುವಿನ ಕಡೆಗೆ ತಿರುಗಿಕೊಂಡು ನಿನ್ನ ಪಾಪಗಳನ್ನು ಆತನು ಕ್ಷಮಿಸುವಂತೆ ನೀನು ಕೇಳಿಕೊಂಡಿದ್ದೀಯೋ?
        - ಅಪೋಸ್ತಲರು ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ಸಾಕ್ಷಿಗಳಾಗಿದ್ದರು. ತಮ್ಮ ಜೀವಿತ ಮತ್ತು ಸೇವೆಯ ಮೂಲಕವಾಗಿಯೂ ಅವರು ಅದರ ಕುರಿತು ಸಾಕ್ಷೀಕರಿಸಿದರು – ತಾವು ಹೋದಲ್ಲೆಲ್ಲಾ ಮತ್ತು ಇತರರನ್ನು ಸಂಧಿಸಿದಾಗಲೆಲ್ಲಾ ಸುವಾರ್ತೆಯನ್ನು ಸಾರಿದರು. ನಮ್ಮ ಕುರಿತು ಏನು?
            - ಯೇಸು ನಮ್ಮ ಜೀವಿತಗಳಲ್ಲಿ ಮಾಡಿರುವ ಸಂಗತಿಗಳ ಕುರಿತು ನಾವು ಸಾಕ್ಷೀಕರಿಸುತ್ತೇವಾ?
            - ನಾವು ಹೋಗುವ ಕಡೆಯಲ್ಲೆಲ್ಲಾ ಸುವಾರ್ತೆಯನ್ನು ಸಾರುತ್ತೇವಾ?
            - ಬಡವ ಮತ್ತು ಶ್ರೀಮಂತ, ಮೇಲ್ದರ್ಜೆಯ ಮತ್ತು ಕೆಳದರ್ಜೆಯ ಎಲ್ಲಾ ಜನರಿಗೂ ಸುವಾರ್ತೆಯನ್ನು ಸಾರುತ್ತಿದ್ದೇವಾ?

3) ಯಾರ್ಯಾರು ಆತನಿಗೆ ವಿಧೇಯರಾಗುತ್ತಾರೋ ಅಂತವರಿಗೆ ದೇವರು ಪವಿತ್ರಾತ್ಮನನ್ನು ಕೊಟ್ಟಿದ್ದಾನೆ.

- ಪವಿತ್ರಾತ್ಮನು ಕ್ರಿಸ್ತನ ಕುರಿತು ಸಾಕ್ಷೀಕರಿಸುತ್ತಾನೆ: ಆತನ ಮರಣ ಮತ್ತು ಪುನರುತ್ಥಾನದ ಕುರಿತು.
- ಪವಿತ್ರಾತ್ಮನು ಕ್ರಿಸ್ತನ ಕುರಿತಾಗಿ ನಮಗೆ ನೆನಪಿಸುತ್ತಾನೆ: ಆತನ ಮಾದರಿಯಾದ ಜೀವಿತ ಮತ್ತು ಬೋಧನೆಯ ಕುರಿತು (ಯೋಹಾ 14:26)
- ಪವಿತ್ರಾತ್ಮನು ಅಪೋಸ್ತಲರಿಗೆ ಕೊಡಲ್ಪಟ್ಟನು (2:4; 4:31)

3. ನಿಮ್ಮ ಕುರಿತು ಏನು?

1) ನಿನ್ನ ಜೀವಿತದಲ್ಲಿ ನೀನು ಪವಿತ್ರಾತ್ಮನನ್ನು ಸ್ವೀಕರಿಸಿದ್ದಿಯೋ?

2) ಪವಿತ್ರಾತ್ಮನ ಬಲದಿಂದ ನೀನು ದೇವರ ವಾಕ್ಯವನ್ನು ಧೈರ್ಯದಿಂದ ಸಾರುತ್ತೀಯೋ?

3) ಪವಿತ್ರಾತ್ಮನ ಶಕ್ತಿಯಿಂದ ನೀನು ಪರಿಶುದ್ಧ ಮತ್ತು ಪವಿತ್ರತೆಯ ಜೀವಿತವನ್ನು ಜೀವಿಸುತ್ತಿದ್ದಿಯೋ?

4. ಪರಿಣಾಮಗಳು: ನ್ಯಾಯಸಭೆಯವರು ಅಪೋಸ್ತಲರ ಮೇಲೆ ರೋಷವುಳ್ಳವರಾಗಿ ಅವರನ್ನು ಕಠಿಣವಾಗಿ ಶಿಕ್ಷಿಸಿದರು. ಇದರ ಬದಲಾಗಿಯೂ:

1) ಅಪೋಸ್ತಲರು ಸಂತೋಷವುಳ್ಳವರಾಗಿ ಹರ್ಷಿಸಿದರು (5:41)

2) ಅಪೋಸ್ತಲರು ನಿರಂತರವಾಗಿ ಜನರಿಗೆ ಬೋಧಿಸುತ್ತಾ ಸುವಾರ್ತೆಯನ್ನು ಸಾರಿದರು (5:42)

5. ನಮ್ಮ ಕುರಿತು ಏನು?

1) ಅಪೋಸ್ತಲರು ಯೇಸು ಕ್ರಿಸ್ತನನ್ನು ಹಿಂಬಾಲಿಸಿದಂತೆಯೇ ನಾವೂ ಹಿಂಬಾಲಿಸುವುದಾಗಿದ್ದರೆ ನಮಗೂ ಶಿಕ್ಷೆ ಮತ್ತು ಅವಮಾನವು ಉಂಟಾಗುವುದೋ?

2) ಯೇಸು ಕ್ರಿಸ್ತನ ನಾಮದ ನಿಮಿತ್ತ ನಾವು 'ಅವಮಾನ' ಹೊಂದಲಿಕ್ಕೆ ಸಿದ್ಧರಿದ್ದೇವೋ?

3) ಅಪಾಯಕಾರಿಯಾದ ವಿರೋಧತ್ವವನ್ನು ಎದುರುಗೊಂಡರೂ ನಾವು ಬೋಧಿಸು–ವುದರಲ್ಲಿಯೂ ಮತ್ತು ಸಾರುವುದರಲ್ಲಿಯೂ ನಿರತರಾಗಿರಲಿಕ್ಕೆ ಮನಸ್ಸುಳ್ಳವರಾಗಿದ್ದೇವೋ?

# ಪಾಠ 14. ಏಳು ಜನರ ಆಯ್ಕೆ, 6:1–7

## ಅ) ವಾಕ್ಯಭಾಗ

ಇದು ಯೆರೂಸಲೇಮಿನ ಆದಿಸಭೆಯಲ್ಲಿ ಉಂಟಾದ ಒಂದು ಸಮಸ್ಯೆಯ ಮತ್ತು ಅದು ಹೇಗೆ ಬಗೆಹರಿಸಲ್ಪಟ್ಟಿತೆಂಬುದರ ಕುರಿತಾದ ಕಥೆಯಾಗಿದೆ. ವಿಶ್ವಾಸಿಗಳಲ್ಲಿ ಒಂದು ಗುಂಪಿನ ಜನರು ಅನುದಿನದ ಉಪಚಾರದಲ್ಲಿ ತಮ್ಮನ್ನು ಪಕ್ಷಪಾತದಿಂದ ಕಾಣಲಾಗುತ್ತಿದೆ ಎಂದು ಭಾವಿಸಿದರು. ಈ ಕಾರ್ಯಕ್ಕಾಗಿ ಸಭೆಯು ಏಳು ಜನರನ್ನು ಆರಿಸಿ ಅವರನ್ನು ನೇಮಿಸುವುದರೊಂದಿಗೆ ಈ ಸಮಸ್ಯೆಯನ್ನು ಬಗೆಹರಿಸಿತು. ಆಗ ಅಪೋಸ್ತಲರು ಪ್ರಾರ್ಥನೆಯಲ್ಲಿಯೂ ಮತ್ತು ಬೋಧಿಸುವದರಲ್ಲಿಯೂ ಹೆಚ್ಚಾದ ಸಮಯವನ್ನು ಕಳೆಯಲು ಸಾಧ್ಯವಾಯಿತು. ಈ ವಾಕ್ಯಭಾಗದ ಕೊನೆಯ ವಚನವು ಅಪೋಸ್ತಲರ ಕೃತ್ಯಗಳ ಪುಸ್ತಕದ ಮೊದಲ ಭಾಗವನ್ನು ಅಂತ್ಯಗೊಳಿಸುತ್ತದೆ. ದೇವರ ವಾಕ್ಯವು ಅಭಿವೃದ್ಧಿಯಾಗುತ್ತಾ ಬಂತು.

## ಆ) ಟಿಪ್ಪಣಿ

*ಆ ದಿನಗಳಲ್ಲಿ* (ವ. 1): ಅಪೋಸ್ತಲರಿಗೆ ಉಂಟಾದ ಹಿಂಸೆಯ ಕುರಿತಾದ ಮುಂಚಿನ ಕಥೆಯ ಮತ್ತು ಏಳು ಜನರ ಆಯ್ಕೆಯ ಕುರಿತಾದ ಈ ಕಥೆಯ ನಡುವಿನ ಸಮಯದ ಅಂತರದ ಕುರಿತು ಲೂಕನು ಏನನ್ನು ಹೇಳುವುದಿಲ್ಲ.

*ಶಿಷ್ಯರ ಸಂಖ್ಯೆ ಹೆಚ್ಚುತ್ತಲೇ ಇತ್ತು* (ವ. 1): ಸಭೆಯು ಎಡಬಿಡದೆ ಬೆಳೆಯುತ್ತಿತ್ತು. ಇದು ಆಡಳಿತದಲ್ಲಿ ಸಮಸ್ಯೆಗೆ ನಡೆಸಿತು. ಈ ಕಥೆಯು ಆ ಸಮಸ್ಯೆಯು ಹೇಗೆ ಬಗೆಹರಿಸಲ್ಪಟ್ಟಿತು ಎಂಬುದರ ಕುರಿತಾಗಿದೆ.

*ಗ್ರೀಕ್ ಮಾತನಾಡುವ ಯೆಹೂದ್ಯರು ಹೀಬ್ರೂ ಭಾಷೆ ಮಾತನಾಡುವ ಯೆಹೂದ್ಯರು* (ವ. 1): ಗ್ರೀಕ್ ಮಾತನಾಡುವ ಯೆಹೂದ್ಯರು ಪ್ಯಾಲೆಸ್ತೀನಿನ ಹೊರಗಡೆ ಜನಿಸಿದವರಾಗಿದ್ದರು ಮತ್ತು ಅವರಿಗೆ ಗ್ರೀಕ್ ಭಾಷೆಯು ಪ್ರಥಮ ಭಾಷೆಯಾಗಿತ್ತು. ಅವರ ಸಂಸ್ಕೃತಿಯು ಯೆಹೂದ್ಯ ಸಂಸ್ಕೃತಿಗಿಂತಲೂ ಹೆಚ್ಚಾಗಿ ಗ್ರೀಕ್ ಸಂಸ್ಕೃತಿ ಆಗಿತ್ತು. ಹಿಬ್ರಿಯ ಮಾತನಾಡುವ ಯೆಹೂದ್ಯರಿಗೆ ಅರಾಮಿಕ್ ಅಥವಾ ಹಿಬ್ರಿಯ ಪ್ರಥಮ ಭಾಷೆಯಾಗಿತ್ತು ಮತ್ತು ಅವರು ತಮ್ಮ ಯೆಹೂದ್ಯ ಸಂಸ್ಕೃತಿ ಮತ್ತು ಆಚಾರಗಳನ್ನು ಕಾಪಾಡಿಕೊಂಡಿದ್ದರು. ಭಾಷೆಯ ವ್ಯತ್ಯಾಸಕ್ಕಿಂತಲೂ ಬಹುಶಃ ಸಾಂಸ್ಕೃತಿಕ ವ್ಯತ್ಯಾಸವು ಹೆಚ್ಚು ಪ್ರಾಮುಖ್ಯವಾದುದ್ದಾಗಿತ್ತು.

*ಆಹಾರ ವಿತರಣೆಗಾಗಿ* (ವ. 1): ಗ್ರೀಕ್ ಪದವು ಹೆಚ್ಚಾಗಿ 'ಸಹಾಯ, ಸೇವೆ, ಉಪಚಾರ'" ಎಂಬ ಸಾಮಾನ್ಯವಾದ ಅರ್ಥವನ್ನು ಹೊಂದಿದೆ ಮತ್ತು ವ. 2 ರಲ್ಲಿ 'ದೇವರ ವಾಕ್ಯವನ್ನು ಬೋಧಿಸುವ ಸೇವೆ'" ಎಂಬ ಪದವಿನ್ಯಾಸದಲ್ಲಿ ಮತ್ತೊಮ್ಮೆ ಮರುಕಳಿಸುತ್ತಿದೆ.

*ಆ ಹನ್ನೆರಡು ಮಂದಿ ಶಿಷ್ಯರು ಗುಂಪನ್ನು ಒಟ್ಟಾಗಿ ಕೂಡಿಸಿ* (ವ. 2): ಇದರ ಅರ್ಥವೇನೆಂದರೆ ಅಪೋಸ್ತಲರು ಎಲ್ಲಾ ವಿಶ್ವಾಸಿಗಳನ್ನು ಒಟ್ಟಾಗಿ ಸೇರಿಸಿದರು ಎಂಬುದಾಗಿದೆ. ಅಪೋಸ್ತಲರ ಕೃತ್ಯಗಳಲ್ಲಿ 'ಶಿಷ್ಯರು' ಎಂದರೆ 'ವಿಶ್ವಾಸಿಗಳು' ಎಂದರ್ಥ. ಈ ವಾಕ್ಯಭಾಗದಲ್ಲಿ ಬಳಸಲ್ಪಟ್ಟ 'ಹನ್ನೆರಡು ಮಂದಿ ಶಿಷ್ಯರು' ಎಂಬ ಪದವು ಯೆರೂಸಲೇಮಿನಲ್ಲಿದ್ದ ಹನ್ನೆರಡು ಅಪೋಸ್ತಲರ ಕುರಿತಾಗಿದೆ.

*ದೇವರ ವಾಕ್ಯ ಬೋಧಿಸುವ ಸೇವೆ* (ವ. 2): ಈ ಪದವಿನ್ಯಾಸವು ದೇವರ ವಾಕ್ಯವನ್ನು ಬೋಧಿಸುವುದು ಮತ್ತು ಉಪದೇಶಿಸುವುದನ್ನು ಸೂಚಿಸುತ್ತದೆ. 'ಸೇವೆ'" ಎಂಬ ಪದವು ಗ್ರೀಕ್ ಪಠ್ಯದಲ್ಲಿ ಕಂಡು ಬರುವುದಿಲ್ಲ.

*ಸಮಯ ಕಳೆಯುತ್ತಾ* (ವ. 2): ಈ ಗ್ರೀಕ್ ಕ್ರಿಯಾಪದವು ಆಂಗ್ಲ ನಾಮಪದವಾದ 'ಡೀಕನ್'ನ ಮೂಲವಾಗಿದೆ, ಅಂದರೆ 'ದಾಸನು' ಅಥವಾ 'ಸೇವಕ' ಎಂದರ್ಥ. ಪೌಲನು 'ಡೀಕನ್'ಗಳ ಕುರಿತು ಫಿಲಿಪ್ಪಿ. 1:1 ಮತ್ತು 1 ತಿಮೊಥಿ. 3:8–13 ರಲ್ಲಿ ಬರೆಯುತ್ತಾನೆ. ಈ ಏಳು ಜನರು ಮೊದಲ 'ಡೀಕನ್‌ಗಳು' ಅಥವಾ ಸಭಾಹಿರಿಯರುಗಳಾಗಿದ್ದರೆಂದು ಕೆಲವು ಸತ್ಯವೇದ ತಜ್ಞರುಗಳು ಯೋಚಿಸುತ್ತಾರೆ. ಈ ಏಳು ಜನರ ತರುವಾಯ 'ಡೀಕನ್‌ಗಳು' ಅಥವಾ ಸಭಾಹಿರಿಯರುಗಳು ನೇಮಿಸಲ್ಪಟ್ಟರು ಎಂದು ಇತರೆ ಸತ್ಯವೇದ ತಜ್ಞರುಗಳು ಯೋಚಿಸುತ್ತಾರೆ. ವ. 28 ರಲ್ಲಿ ಫಿಲಿಪ್ಪನು ಆ 'ಏಳು ಜನರಲ್ಲಿ ಒಬ್ಬ'ನೆಂದು ಉಲ್ಲೇಖಿಸಲ್ಪಟ್ಟಿದ್ದಾನೆ.

*ಸಹೋದರರೇ* (ವ. 3): ಪ್ರಾಚೀನ ಯುಗದಲ್ಲಿ ಬರಹಗಾರರು 'ಸಹೋದರ ಮತ್ತು ಸಹೋದರಿಯರೇ'" ಎಂಬುದಾಗಿ ಬರೆಯುವುದರ ಬಗ್ಗೆ ಚಿಂತಿಸಲಿಲ್ಲ. ಹಾಗಾಗಿ 'ಸಹೋದರರೇ' ಎಂಬ ಪದವು ಯೆರೂಸಲೇಮಿನ ಸಭೆಯಲ್ಲಿದ್ದ ಪುರುಷರನ್ನೂ ಮತ್ತು ಸ್ತ್ರೀಯರನ್ನೂ ಒಳಗೊಂಡಿದೆ.

*ಅವರು ಪೂರ್ಣ ನಂಬಿಕೆಯುಳ್ಳವನೂ ಪವಿತ್ರಾತ್ಮಭರಿತನೂ ಆದ ಸ್ತೆಫನ, ಫಿಲಿಪ್ಪ, ಪ್ರೊಖೋರ, ನಿಕನೋರ, ತಿಮೋನ, ಪರ್ಮೇನ ಮತ್ತು ಯೆಹೂದಿ ಧರ್ಮಕ್ಕೆ ಮತಾಂತರ ಹೊಂದಿದ ಅಂತಿಯೋಕ್ಯದ ನಿಕೊಲಾಯನನ್ನು ಆಯ್ಕೆ ಮಾಡಿದರು* (ವ. 5): ಈ ಎಲ್ಲಾ ಹೆಸರುಗಳು ಗ್ರೀಕ್ ಭಾಷೆಯದ್ದಾಗಿವೆ. ಸ್ತೆಫನನು ಮೊಟ್ಟಮೊದಲ ಕ್ರೈಸ್ತ ರಕ್ತಸಾಕ್ಷಿಯಾದನು ಮತ್ತು ಆತನು ಅಪೋಸ್ತಲರ ಕೃತ್ಯಗಳಲ್ಲಿನ ಮುಂದಿನ ಮೂರು ಕಥೆಗಳ ಪ್ರಮುಖ ಪಾತ್ರಧಾರಿಯಾಗಿದ್ದಾನೆ.

ಫಿಲಿಪ್ಪನು ನಂತರ ಅ. ಕೃ. 8:5–40 ಮತ್ತು 21:8–9 ರಲ್ಲಿ ತಿಳಿಸಲ್ಪಟ್ಟಿದ್ದಾನೆ (ಇಲ್ಲಿ ಆತನು 'ಸುವಾರ್ತಿಕ'ನೆಂದು ಕರೆಯಲ್ಪಡುತ್ತಾನೆ). ಉಳಿದ ಐದು ಜನರು ಇಲ್ಲಿ ಮಾತ್ರ ಸೂಚಿಸಲ್ಪಟ್ಟಿದ್ದಾರೆ.

## ಇ) ಪಠ್ಯ ಪ್ರಶ್ನೆಗಳು

1. ಯೆರೂಸಲೇಮಿನ ಸಭೆಯಲ್ಲಿನ ಒಂದು ಗುಂಪಿನ ಜನರು ಸಂತೋಷವಾಗಿರಲಿಲ್ಲ. ಅವರು ಯಾರು? ಅವರು ಯಾವುದರ ಕುರಿತಾಗಿ ಗುಣಗುಟ್ಟಿದರು?
2. ಹನ್ನೆರಡು ಜನ ಅಪೋಸ್ತಲರು ಯಾವ ನಿರ್ಧಾರವನ್ನು ತೆಗೆದುಕೊಂಡರು?
3. ಏಳು ಜನರ ಅರ್ಹತೆಗಳೇನಾಗಿದ್ದವು?
4. ಈ ಏಳು ಜನರೊಂದಿಗೆ ಅಪೋಸ್ತಲರು ಏನು ಮಾಡಿದರು?
5. ದೇವರ ವಾಕ್ಯವು ಸಾರಲ್ಪಡುತ್ತಾ ವಿಸ್ತರಿಸಲ್ಪಡುತ್ತಿದ್ದ ಸಮಯದಲ್ಲಿ ಒಂದು ವಿಶೇಷವಾದ ಜನರ ಗುಂಪು ನಂಬಿಕೆಯಿಟ್ಟಿತು. ಅವರು ಯಾರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗವನ್ನು ಹೇಗೆ ರಚಿಸಬಹುದು?
2. ವ. 1 ರಲ್ಲಿ ಲೂಕನು ಬರೆಯುವುದೇನೆಂದರೆ 'ಅವರಲ್ಲಿಯ ಗ್ರೀಕ್ ಮಾತನಾಡುವ ಯೆಹೂದ್ಯರು ಹಿಬ್ರಿಯ ಭಾಷೆ ಮಾತನಾಡುವ ಯೆಹೂದ್ಯರ ವಿರುದ್ಧವಾಗಿ ಗೊಣಗುಟ್ಟುತ್ತ ಅನುದಿನದ ಉಪಚಾರದಲ್ಲಿ ನಮ್ಮ ವಿಧವೆಯರನ್ನು ಅಲಕ್ಷ್ಯ ಮಾಡಲಾಗುತ್ತಿದೆ' ಎಂದರು. ವಿಶ್ವಾಸಿಗಳು ತಮ್ಮ ಆಸ್ತಿಗಳನ್ನು ಹಂಚಿಕೊಳ್ಳುತ್ತಿದ್ದ (4:32–37) ಮತ್ತು ಅನನೀಯ ಸಫ್ಫೈರರ (5:1–11) ಕುರಿತಾದ ಇವೆರಡು ಕಥೆಗಳ ಹಿನ್ನಲೆಗಳನ್ನು ಪರಿಗಣಿಸಿದರೆ, ಈ ಗೊಣಗುಟ್ಟುವಿಕೆಯು ಆಳವಾಗಿದ್ದು ಸಭೆಯಲ್ಲಿರುವ ಇನ್ನೊಂದು ಗುಂಪಿನವರ ವಿರುದ್ಧವಾದದ್ದು ಎಂಬುದನ್ನು ನಾವು ಗುರುತಿಸಬಹುದು, ಅದು ಯಾವ ಗುಂಪು?
3. ಯೆರೂಸಲೇಮಿನಲ್ಲಿದ್ದ ಆದಿಸಭೆಯಲ್ಲಿ ವಿವಿಧ ರೀತಿಯ ಸೇವೆಗಳು ಇದ್ದವೆಂದು ಈ ವಾಕ್ಯಭಾಗವು ಪ್ರಕಟಿಸುತ್ತದೆ. ಆ ಸೇವೆಗಳಾವುವು?
4. ಯೆರೂಸಲೇಮಿನ ಆದಿಸಭೆಯಲ್ಲಿ ನಾಯಕತ್ವದ ವಿಸ್ತರಣೆಯನ್ನು ಮಾಡುವ ನಿರ್ಧಾರವನ್ನು ಯಾರು ತೆಗೆದುಕೊಂಡರು? ಮತ್ತು ಅದು ಹೇಗೆ ಮಾಡಲ್ಪಟ್ಟಿತ್ತು?
5. ಆರಿಸಲ್ಪಟ್ಟ ಏಳು ಜನರ ಹೆಸರುಗಳ ಮಹತ್ವವೇನು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಸಭೆಯು ಸಂಖ್ಯೆಯಲ್ಲಿ ಬೆಳೆಯುತ್ತಿದ್ದಂತೆ ಯೆರೂಸಲೇಮಿನ ಆದಿಸಭೆಯ ನಾಯಕರುಗಳು (ಹನ್ನೆರಡು ಶಿಷ್ಯರು) ಆಡಳಿತಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸಬೇಕಾಯಿತು. ದಕ್ಷಿಣ ಭಾರತದಲ್ಲಿ ಸಂಖ್ಯೆಯಲ್ಲಿ ಬೆಳೆಯುತ್ತಿರುವ ಸಭೆಗಳು ಯಾವ ರೀತಿಯಾದ ಆಡಳಿತ ಸಮಸ್ಯೆಗಳನ್ನು ಎದುರಿಸುತ್ತವೆ? ಯೆರೂಸಲೇಮ್ ಸಭೆಯಲ್ಲಿದ್ದಂತಹದ್ದೇ ಆದ ಸಮಸ್ಯೆಗಳೇ ಅಥವಾ ವ್ಯತ್ಯಾಸವಾದಂತವುಗಳೇ? ಅವುಗಳು ಹೇಗೆ ವ್ಯತ್ಯಾಸವಾಗಿವೆ? ಮತ್ತು ಯಾಕೆ ಅವುಗಳು ವ್ಯತ್ಯಾಸವಾಗಿವೆ?

2. ಯೆರೂಸಲೇಮಿನ ಆದಿಸಭೆಯ ನಾಯಕರುಗಳು (ಹನ್ನೆರಡು ಶಿಷ್ಯರು) ಸೇವೆಯಲ್ಲಿ ಹೆಚ್ಚಿನ ಕೆಲಸವನ್ನು ಎದುರಿಸಿದಾಗ ಅವರು ಪ್ರಾಧ್ಯಾನತೆಗಳನ್ನು ಮಾಡಿಕೊಳ್ಳಬೇಕಾಯಿತು. ಅವರು 'ಆಹಾರ ವಿತರಣೆಗಾಗಿ ಸಮಯ ಕಳೆಯುವುದರ' ಬದಲಾಗಿ 'ಪ್ರಾರ್ಥನೆ ಮಾಡುವುದಕ್ಕೂ ಮತ್ತು ದೇವರ ವಾಕ್ಯವನ್ನು ಸಾರುವುದರ ಕಡೆಗೂ' ತಮ್ಮ ಲಕ್ಷ್ಯ ಕೊಡುವಂತೆ ನಿರ್ಧರಿಸಿದರು. ದಕ್ಷಿಣ ಭಾರತದ ಹಿನ್ನೆಲೆಯಲ್ಲಿರುವ ಸಭಾಪಾಲಕರ ಕುರಿತು ಏನು?

   - ಮೊದಲ ಪ್ರಾಶಸ್ತ್ಯದ ಅಗತ್ಯತೆ ಅವರಿಗೆ ಇದೆಯಾ? ದಯವಿಟ್ಟು ವಿವರಿಸಿರಿ
   - ಅವರು ಸರಿಯಾದ ಪ್ರಾಶಸ್ತ್ಯವನ್ನು ಮಾಡುತ್ತಾರೆಯೋ? ದಯವಿಟ್ಟು ವಿವರಿಸಿರಿ

3. ಅಪೋಸ್ತಲರು ಏಳು ಜನರ ಮೇಲೆ ತಮ್ಮ ಹಸ್ತಗಳನ್ನಿಟ್ಟು ಪ್ರಾರ್ಥನೆ ಮಾಡುವುದರ ಮೂಲಕವಾಗಿ ಅವರನ್ನು ಉಪಚಾರದ ಸೇವೆಗಾಗಿ 'ನೇಮಿಸಿದರೆಂದು' ಹೇಳಬಹುದು.

   ನಿಮ್ಮ ಸ್ವಂತಸಭೆಯ ಕುರಿತು ಏನು? ಸಭೆಯಲ್ಲಿರುವ ವಿಧವಿಧವಾದ ಸೇವೆಗಳಿಗೆ ನೇಮಿಸಲ್ಪಟ್ಟ ಜನರಿಗಾಗಿ ಯಾವುದಾದರೂ 'ನೇಮಕದ' ಕಾರ್ಯವಿದೆಯಾ? ಹಾಗೆ ಇರುವುದಾದರೆ

   - 'ನೇಮಕ' ಹೊಂದುವವರು ಯಾರು?
   - ಸಭೆಯಲ್ಲಿರುವ ಉಳಿದ ಸಹಾಯಕರು ಯಾಕೆ 'ನೇಮಿಸಲ್ಪಡುವುದಿಲ್ಲ'?
   - ಅವರು ಹೇಗೆ 'ನೇಮಿಸಲ್ಪಡುತ್ತಾರೆ'?
   - ಅವರನ್ನು 'ನೇಮಿಸುವವರು' ಯಾರು?

4. ಯೆರೂಸಲೇಮಿನ ಸಭೆಯಲ್ಲಿ ಏಳು ಜನರನ್ನು ನೇಮಿಸಲು ಎರಡು ಅರ್ಹತೆಗಳನ್ನು ಹುಡುಕಿದರು: ಅವುಗಳೇನೆಂದರೆ, ಅವರು ಪವಿತ್ರಾತ್ಮಭರಿತರೂ ಮತ್ತು ಜ್ಞಾನವಂತರೂ ಆಗಿರಬೇಕು ಎಂಬುದಾಗಿತ್ತು.

   ನಿಮ್ಮ ಸ್ವಂತ ಸಭೆಯ ಕುರಿತು ಏನು?

   - ನೀವು ಈ ಎರಡು ಅರ್ಹತೆಗಳಿಗೆ ಪ್ರಾಧ್ಯಾನತೆಯನ್ನು ಕೊಡುತ್ತೀರೋ? ಯಾಕೆ-ಯಾಕೆ ಇಲ್ಲ?
   - ನೀವು ಇತರೆ ಪ್ರಮುಖ ಅರ್ಹತೆಗಳನ್ನೂ ಸಹ ಹುಡುಕುತ್ತೀರೋ? ಅವುಗಳು ಯಾವುವು?

5. ಹೊಸ ಒಡಂಬಡಿಕೆಯ ಕಾಲದಲ್ಲಿ ಸಭಾನಾಯಕರುಗಳ ಒಂದು ಗುಂಪು ಹೇಗೆ ನೇಮಿಸಲ್ಪಟ್ಟಿತು ಎನ್ನುವುದರ ಕುರಿತು ಈ ವಾಕ್ಯಭಾಗವು ವಿವರವಾಗಿ ತಿಳಿಸುತ್ತದೆ. ಇಂದು ದಕ್ಷಿಣ ಭಾರತದಲ್ಲಿನ ಸಭೆಯು ಈ ಮಾದರಿಯನ್ನು ಸಂಪೂರ್ಣವಾಗಿ ಅನುಸರಿಸಬೇಕೆಂದು ನೀವು ಬಯಸುತ್ತಿರೋ? ಯಾಕೆ – ಯಾಕೆ ಇಲ್ಲ?

6. ಈ ವಾಕ್ಯಭಾಗದಲ್ಲಿ ಲೂಕನು ಸಭಾ ಕಾರ್ಯದ ಎರಡು ಕ್ಷೇತ್ರಗಳಿಗೂ ಒಂದೇ ಗ್ರೀಕ್ ಪದವನ್ನು ಬಳಸುವುದರಿಂದ ಒಂದು ಪಾಠವನ್ನು ಕಲಿಸುವಂತೆ ತೋರುತ್ತದೆ. ಈ ಪದವು 'ಸೇವೆ'" ಅಥವಾ 'ವಿತರಿಸುವುದು' ಎಂಬುದಾಗಿ ಭಾಷಾಂತರಿಸಲ್ಪಟ್ಟು ಈ ಕೆಳಗಿನ ಎರಡು ಸನ್ನಿವೇಶಗಳಿಗೂ ಉಪಯೋಗಿಸಲ್ಪಟ್ಟಿದೆ:

   - '***ಆಹಾರದ*** ಸೇವೆ ಅಥವಾ ವಿತರಣೆ'" (ವ. 2) ಮತ್ತು
   - '***ವಾಕ್ಯದ*** ಸೇವೆ ಅಥವಾ ವಿತರಣೆ' (ವ. 4)

   ದಕ್ಷಿಣ ಭಾರತದ ಸಭಾಹಿನ್ನಲೆಯಲ್ಲಿ 'ಸೇವೆ' ಎನ್ನುವ ಪದವು ಹಲವು ಬಾರಿ ಉಪಯೋಗಿಸಲ್ಪಟ್ಟಿದೆ.

   - 'ಸೇವೆ' ಎನ್ನುವ ಪದವು ಈ ಮೇಲ್ಕಂಡ ಎರಡು ಸಭಾ ಕಾರ್ಯದ ಕ್ಷೇತ್ರಗಳಲ್ಲಿ ಅತೀ ಹೆಚ್ಚಾಗಿ ಯಾವುದನ್ನು ಸೂಚಿಸುತ್ತದೆ – ಆಹಾರದ ಸೇವೆಯನ್ನೋ ಅಥವಾ ದೇವರ ವಾಕ್ಯದ ಸೇವೆಯನ್ನೋ?
   - ಕ್ರಿಸ್ತೀಯ ಸಾಮಾಜಿಕ ಅಥವಾ ಪ್ರಾಯೋಗಿಕ ಕಾರ್ಯಕ್ಕಾಗಿ 'ಸೇವೆ' ಎನ್ನುವ ಪದವನ್ನು ಬಳಸಲಿಕ್ಕೆ ನಾವು ಯಾಕೆ ಹಿಂದೇಟು ಹಾಕುತ್ತೇವೆ?

ಲೂಕನು ತನ್ನ ಕಥೆಯಲ್ಲಿರುವ ಅಂಶವು ದೇವರ ವಾಕ್ಯದ ಸೇವೆಯು ಆಹಾರದ ಸೇವೆಗಿಂತ ಹೆಚ್ಚಿನದ್ದು ಎಂಬುದಲ್ಲ. ಈ ಎರಡೂ ಸೇವೆಗಳು ಸಭೆಗಳಲ್ಲಿ ಅಗತ್ಯವಾಗಿತ್ತು. ಈ ಎರಡೂ ಸೇವೆಗಳಿಗೆ ಪವಿತ್ರಾತ್ಮಭರಿತರೂ ಮತ್ತು ಜ್ಞಾನವುಳ್ಳ ಜನರೂ ಅವಶ್ಯವಾಗಿದ್ದರು (ವ. 3). ಇಲ್ಲಿರುವ ಅಂಶವೇನೆಂದರೆ, ಕೆಲವರು (ಅಂದರೆ, ಅಪೋಸ್ತಲರು) 'ವಾಕ್ಯದ ಸೇವೆಗಾಗಿ'" ಮತ್ತು "ಇತರರು (ಅಂದರೆ, ಏಳು ಜನರು) 'ಆಹಾರದ ಸೇವೆಗಾಗಿ' ನೇಮಿಸಲ್ಪಟ್ಟಿದ್ದಾರೆ. ಸತ್ಯವೇದ ಶಾಸ್ತ್ರಜ್ಞರಾದ ಸ್ಟಾಟ್‌ರವರು ಇಂದಿನ ಸಭೆಯ ಕುರಿತು ಹೇಳಿರುವುದೇನೆಂದರೆ, ದೇವರು ವ್ಯತ್ಯಾಸವಾದ ಪುರುಷರನ್ನು ಮತ್ತು ಸ್ತ್ರೀಯರನ್ನು ವ್ಯತ್ಯಾಸವಾದ ಸೇವೆಗಳಿಗೆ ಕರೆಯುತ್ತಾನೆ ಎನ್ನುವ ಮೂಲ ಸತ್ಯವೇದ ಅರಿವಿಕೆಯು ನಮಗೆ ಅವಶ್ಯವಾದದ್ದು. ನೀವು ಇದನ್ನು ಒಪ್ಪುತ್ತೀರೋ? ಯಾಕೆ – ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

ಒಂದು ಸಭಾಪಾಲಕರ ಅನ್ಯೋನ್ಯತೆಯ ಕೂಟದಲ್ಲಿ ಅಪೋಸ್ತಲರ ಕೃತ್ಯಗಳ ಪುಸ್ತಕದಿಂದ ಒಂದು ವಸ್ತುವಿಷಯದ ಆಧಾರದ ಮೇಲೆ ಸತ್ಯವೇದ ಅಧ್ಯಯನ ಮಾಡುವಂತೆ ನಿಮ್ಮನ್ನು ಕೇಳಿಕೊಂಡಿದ್ದಾರೆ. ಆಗ ನೀವು 5 ಮತ್ತು 6 ನೇ ಅಧ್ಯಾಯಗಳನ್ನು ಆಧಾರವಾಗಿರಿಸಿಕೊಂಡು ***ಯೆರೂಸಲೇಮ್ ಸಭೆಯ***

***ಮೇಲೆ ಸೈತಾನನ ದಾಳಿ!'*** ಎಂಬ ಶೀರ್ಷಿಕೆಯುಳ್ಳ ಅಧ್ಯಯನವನ್ನು ತೆಗೆದುಕೊಳ್ಳಲು ತೀರ್ಮಾನಿಸುತ್ತೀರಿ.

ನಿಮ್ಮ ಅಧ್ಯಯನದ ಹೊರರೇಖೆಯನ್ನು ಈ ರೀತಿಯಾಗಿ ಸಿದ್ಧಪಡಿಸಿಕೊಳ್ಳಬಹುದು:

1. ಪೀಠಿಕೆ: ಯೆರೂಸಲೇಮಿನ ಸಭೆ – ದೇವರಾತ್ಮಭರಿತವಾದ ಸಭೆ – ಸೈತಾನನ ಎಡಬಿಡದ ದಾಳಿಗಳನ್ನು ಎದುರಿಸಿ ನಿಂತ ಸಭೆ

2. ಸೈತಾನನ ಮೂರು ದಾಳಿಗಳು:

   1) ಸೈತಾನನು ಸಭೆಯನ್ನು ***ಹಿಂಸೆಪಡಿಸುವುದರ*** ಮೂಲಕ ದಾಳಿ ಮಾಡಿದನು (ನ್ಯಾಯಸಭೆಯವರು ಅಪೋಸ್ತಲರನ್ನು ಹಿಂಸಿಸಿದ ಕಥೆ, 5:17–42). ಆದರೆ ಆತನು ಸೋತನು:

      - ಯೇಸುವಿನ ನಾಮದ ನಿಮಿತ್ತ ಅವಮಾನಪಡಲು ತಾವು ಯೋಗ್ಯರಾದೆವಲ್ಲಾ ಎಂದು ಅಪೋಸ್ತಲರು ಸಂತೋಷಪಟ್ಟರು (5:41)

      - ಸುವಾರ್ತೆಯನ್ನು ಸಾರುವುದನ್ನು ಮತ್ತು ಬೋಧಿಸುವುದನ್ನು ಅಪೋಸ್ತಲರು ಎಂದಿಗೂ ನಿಲ್ಲಿಸಲಿಲ್ಲ (5:42)

      - ಇಂದು 'ಹಿಂಸೆಯ' ವಿಷಯದಲ್ಲಿ ಭಾರತದ ಸಭೆಗಳ ಕುರಿತು ಏನು? ಸೈತಾನನು ಯಶಸ್ವಿಯಾಗಿದ್ದಾನೋ? ಅಥವಾ ಆತನ ದಾಳಿಯನ್ನು ಸಭೆಯು ಎದುರಿಸಿ ನಿಂತಿದೆಯೋ?

   2) ಸೈತಾನನು ಸಭೆಯನ್ನು ***ಭ್ರಷ್ಟಗೊಳಿಸಲಿಕ್ಕೆ*** ಪ್ರಯತ್ನಿಸುವುದರಿಂದ ದಾಳಿಮಾಡಿದನು (ಅನನೀಯ ಮತ್ತು ಸಫೈರಳ ಕಥೆ, 5:1–11). ಆದರೆ ಆತನು ಸೋತುಹೋದನು.

      - ಅನನೀಯ ಮತ್ತು ಸಫೈರರು ಬೈಲಿಗೆ ಬಂದರು ಮತ್ತು ಸಭೆಯು ಭ್ರಷ್ಟಾಚಾರದಿಂದ ಶುದ್ಧವಾಯಿತು

      - ವಿಶ್ವಾಸಿಗಳು ಮತ್ತು ಇತರೆ ಜನರೆಲ್ಲರೂ ಸೈತಾನನು ನಿಯಂತ್ರಣದಲ್ಲಿಲ್ಲ ಬದಲಾಗಿ ದೇವರು ನಿಯಂತ್ರಣದಲ್ಲಿದ್ದಾನೆಂದು ಅರಿತುಕೊಂಡರು

      - ಇಂದು 'ಭ್ರಷ್ಟತನ, ಸುಳ್ಳು ಮತ್ತು ಕಪಟತನದಲ್ಲಿ ಜೀವಿಸುವ ವಿಶ್ವಾಸಿಗಳ' ವಿಷಯದಲ್ಲಿ ಭಾರತದಲ್ಲಿರುವ ಸಭೆಗಳ ಕುರಿತು ಏನು? ಸೈತಾನನು ಯಶಸ್ವಿಯಾಗಿದ್ದಾನೋ? ಅಥವಾ ಆತನ ದಾಳಿಯನ್ನು ಸಭೆಯು ಎದುರಿಸಿ ನಿಂತಿದೆಯೋ?

   3) ಸಭೆಯ ನಾಯಕರುಗಳನ್ನು ***ವಿಚಲಿತಗೊಳಿಸಲು*** ಪ್ರಯತ್ನಿಸುವುದರ ಮೂಲಕ ಸೈತಾನನು ದಾಳಿಮಾಡಿದನು (ಏಳು ಜನರ ಆಯ್ಕೆಯ ಕಥೆ, 6:1–7). ಯೆರೂಸಲೇಮ್ ಸಭೆಯ ವಿರುದ್ಧ ಸೈತಾನನು ಮಾಡಿದ ಅತೀ ಚಾಣಕ್ಷತನದ ಅಥವಾ ಚತುರತೆಯ ದಾಳಿ ಇದಾಗಿತ್ತು. ಸೈತಾನನ ಮುಖ್ಯ ಕಾರ್ಯತಂತ್ರವೇನಾಗಿತ್ತೆಂದರೆ:

–ಒಂದು ಗುಂಪಿನ ವಿಶ್ವಾಸಿಗಳು ಸಭೆಯ ಕಾರ್ಯಚಟುವಟಿಕೆಯ ವಿರುದ್ಧ ದೂರನ್ನು ಹೇಳುವುದರಿಂದ ಗೊಂದಲವನ್ನುಂಟು ಮಾಡುವುದಾಗಿರಲಿಲ್ಲ

–ಆದರೆ ಈ ಗೊಂದಲವನ್ನು ಉಪಯೋಗಿಸಿಕೊಂಡು ಅಪೋಸ್ತಲರು ತಮ್ಮ ಮುಖ್ಯ ಕರೆಯಾದ ಪ್ರಾರ್ಥನೆ ಮತ್ತು ದೇವರ ವಾಕ್ಯವನ್ನು ಬೋಧಿಸುವ ಕಾರ್ಯವನ್ನು ಬಿಟ್ಟು ತಮ್ಮ ಸಮಯ ಮತ್ತು ಶಕ್ತಿಯನ್ನು ಸಭೆಯ ಸಾಮಾಜಿಕ ಕಾರ್ಯದಲ್ಲೇ ವ್ಯಯಮಾಡುವಂತೆ ಅವರನ್ನು ಶೋಧಿಸುವುದಾಗಿತ್ತು. ಆದರೆ ಆತನು ಸೋತುಹೋದನು:

- ಈ ಸಮಾಜ ಸೇವೆಗಾಗಿ ಒಂದು ಹೊಸ ನಾಯಕತ್ವವನ್ನು ಆಯ್ಕೆಮಾಡುವಂತೆ ಸಭೆಗೆ ಕೇಳಿಕೊಳ್ಳುವುದರ ಮೂಲಕ ಅಪೋಸ್ತಲರು ಈ ದೂರಿನ ಸಮಸ್ಯೆಯನ್ನು ಬಗೆಹರಿಸಿದರು, 6:3.

- ಅಪೋಸ್ತಲರು ಶೋಧನೆಯನ್ನು ತಪ್ಪಿಸಿಕೊಂಡರು ಮತ್ತು ಸರಿಯಾದ ನಿರ್ಧಾರವನ್ನು ಮಾಡಿದರು: ಅದೇನೆಂದರೆ, ಅವರು ತಮ್ಮ ಗಮನವನ್ನು ಪ್ರಾರ್ಥನೆ ಮತ್ತು ದೇವರ ವಾಕ್ಯದ ಸೇವೆಯ ಕಡೆಗೆ ಹರಿಸಲು ನಿರ್ಧರಿಸಿದರು, 6:4.

- ಈ ಸರಿಯಾದ ತೀರ್ಮಾನದ ಫಲಿತಾಂಶವು ಹೀಗಿತ್ತು: ದೇವರ ವಾಕ್ಯವು ಅಭಿವೃದ್ಧಿಯಾಗುತ್ತಾ ಬಂತು. ಯಾಜಕರಲ್ಲಿಯೂ ಅನೇಕ ಜನರು ನಂಬಿಕೆಗೆ ವಿಧೇಯರಾದರು, 6:7.

- ಇಂದು ಭಾರತದ ಸಭೆಗಳಲ್ಲಿ 'ವಿಚಲಿತಗೊಂಡ ನಾಯಕತ್ವದ' ವಿಷಯದ ಕುರಿತು ಏನು? ಸೈತಾನನು ಯಶಸ್ವಿಯಾಗಿದ್ದಾನೋ? ಅಥವಾ ಆತನ ದಾಳಿಯನ್ನು ಸಭೆಯು ಎದುರಿಸಿ ನಿಂತಿದೆಯೋ?

3. ಉಪಸಂಹಾರ : ಇಂದು ಭಾರತದ ಸಭೆಯು:

1) ಯೆರೂಸಲೇಮಿನ ಸಭೆಯ ಹಾಗೆ ನಮ್ಮ ಸಭೆಗಳು ಪವಿತ್ರಾತ್ಮಭರಿತವಾದವುಗಳೋ?

2) ಈ ಕೆಳಗಿನ ಮೂರು ಕ್ಷೇತ್ರಗಳಲ್ಲಿ ಸೈತಾನನಿಂದ ಉಂಟಾಗುವ ದಾಳಿಯನ್ನು ನಮ್ಮ ಸಭೆಯು ಎದುರಿಸಿ ನಿಂತುಕೊಳ್ಳಲು ಶಕ್ತವಾಗಿದೆಯೋ?

- ಹೊರಗಿನ ಶತ್ರುಗಳಿಂದ ಉಂಟಾಗುವ ಹಿಂಸೆಯಿಂದ?

- ಸಭೆಯ ಒಳಗಡೆ ಉಂಟಾಗುವ ಭ್ರಷ್ಟಾಚಾರದಿಂದ?

- ವಿಚಲಿತಗೊಂಡ ಮತ್ತು ತಮ್ಮ ಮುಖ್ಯ ಸೇವೆಗಳಾದ ಪ್ರಾರ್ಥನೆ ಮತ್ತು ದೇವರ ವಾಕ್ಯದ ಕಡೆಗೆ ಅಲಕ್ಷ್ಯ ತೋರಿಸುವ ನಾಯಕತ್ವದಿಂದ?

# ಭಾಗ 2

# ಸ್ತೆಫನನು, ಫಿಲಿಪ್ಪನು ಮತ್ತು ಪೌಲನು

## ಅ. ಕೃ. 6:8 – 9:31

### ಪೀಠಿಕೆ

ಲೂಕನ ಆದಿಸಭೆಯ ಎರಡನೆಯ ಚಿತ್ರಣವು ಸ್ತೆಫನನ ರಕ್ತಸಾಕ್ಷಿಯಿಂದ ಪ್ರಾರಂಭವಾಗುತ್ತದೆ, ಅದರ ನಂತರ ಸಭೆಯ ಹಿಂಸೆಯೂ ಮತ್ತು ವಿಶ್ವಾಸಿಗಳ ಚದರಿಸುವಿಕೆಯೂ ಮುಂದುವರೆಯುತ್ತದೆ. ಯೂದಾಯಕ್ಕೂ ಸಮಾರ್ಯಕ್ಕೂ ಚದುರಿಸಲ್ಪಡುವುದರಿಂದ ಇದು ಸಭೆಯ ಮೊದಲ ಭೌಗೋಳಿಕ ವಿಸ್ತಾರಕ್ಕೆ ನಡೆಸಿತು, ಸಮಾರ್ಯದಲ್ಲಿ ಫಿಲಿಪ್ಪನು ದೇವರಿಂದ ಒಂದು ಅದ್ಭುತವಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟನು. ಸುವಾರ್ತೆಯು ಗ್ರೀಕ್ ಮಾತನಾಡುವ ಯೆಹೂದ್ಯ ವಿಶ್ವಾಸಿಗಳಿಂದ ಹರಡಿತು. ಲೂಕನು ಪೌಲನ ಪರಿವರ್ತನೆಯ ಒಂದು ದಾಖಲೆಯೊಂದಿಗೆ ಮುಕ್ತಾಯಗೊಳಿಸುತ್ತಾನೆ.

*ಆ ಸಮಯದಲ್ಲಿ ಯೂದಾಯ, ಗಲಿಲಾಯ, ಸಮಾರ್ಯದಲ್ಲೆಲ್ಲಾ ಇದ್ದ ಸಭೆ ಸಮಾಧಾನ ಹೊಂದಿತು. ಸಭೆ ಬಲಗೊಂಡು ಪವಿತ್ರಾತ್ಮನಿಂದ ಧೈರ್ಯಹೊಂದಿ ಸಂಖ್ಯೆಯಲ್ಲಿ ವರ್ಧಿಸುತ್ತಾ ಕರ್ತನ ಭಯದಲ್ಲಿ ಮುನ್ನಡೆಯಿತು.* (9:31)

# ಪಾಠ 15. ಸ್ತೆಫನನ ಬಂಧನ, 6:8–15

## ಅ) ವಾಕ್ಯಭಾಗ

ಮೇಜುಗಳ ಸೇವೆಗಾಗಿ ಆಯ್ಕೆಯಾದ ಏಳು ಜನರಲ್ಲಿ ಸ್ತೆಫನನು ಒಬ್ಬನು (6:5) ಹಾಗೆಯೇ ಯೆರೂಸಲೇಮಿನಲ್ಲಿ ಬಲವುಳ್ಳ ಸುವಾರ್ತಾ ಸೇವೆಯನ್ನು ಮಾಡುತ್ತಿದ್ದನು. ಆದರೆ ಬಿಡುಗಡೆಯಾದ ಪುರುಷರು ಎಂದು ಕರೆಯಲ್ಪಡುತ್ತಿದ್ದ ಸಭಾಮಂದಿರದ ಕೆಲವು ಯೆಹೂದಿ ಸದಸ್ಯರುಗಳಿಂದ ವಿರೋಧ ಉಂಟಾಗಿ ಇವರು ನ್ಯಾಯಸಭೆಯವರ ಮುಂದೆ ಕರೆತಂದು ಅವನೊಂದಿಗೆ ತರ್ಕಿಸುತ್ತಾ ದೇವದೂಷಣೆ ಮಾಡಿದವನೆಂಬುದಾಗಿ ಖಂಡಿಸಿದರು.

## ಆ) ಟಿಪ್ಪಣಿ

*ಬಿಡುಗಡೆಯಾದ ಪುರುಷರು ಎಂದು ಕರೆಯಲ್ಪಡುತ್ತಿದ್ದ ಸಭಾಮಂದಿರದ ಕೆಲವು ಯೆಹೂದಿ ಸದಸ್ಯರು* (ವ. 9): ಬಿಡುಗಡೆಯಾದ ಪುರುಷರು ಗುಲಾಮಗಿರಿಯಿಂದ ಬಿಡುಗಡೆ ಹೊಂದಿದ ಜನರಾಗಿದ್ದರು. ಈ ಸನ್ನಿವೇಷದಲ್ಲಿ ಬಿಡುಗಡೆಯಾದ ಪುರುಷರು ಬಹುಶಃ ಯೆಹೂದಿ ಸೆರೆಯಾಳುಗಳಾಗಿದ್ದು ರೋಮನ್ನರಿಂದ ಇಸ್ರಾಯೇಲಿನಿಂದ ಗಡಿಪಾರುಮಾಡಲ್ಪಟ್ಟವರು, ಆದರೆ ನಂತರ ಬಿಡುಗಡೆ ಮಾಡಲ್ಪಟ್ಟು ತಮ್ಮ ನಾಗರೀಕತ್ವವನ್ನು ತಿರುಗಿ ಹೊಂದಿದರು. ಪೌಲನು ತನ್ನ ತಂದೆಯಿಂದ ರೋಮ್ ನಾಗರೀಕತ್ವವನ್ನು ಹೀಗೆ ಹೊಂದಿರಬಹುದು (ನೋಡಿರಿ. ಅ. ಕೃ. 22:3, 27–28). ಈ ಬಿಡುಗಡೆಯಾದ ಪುರುಷರ ಸಭಾಮಂದಿರವು ರೋಮ್ ಸಾಮ್ರಾಜ್ಯದ ವಿವಿಧ ಭಾಗಗಳಿಂದ ಬಂದಂತಹ (ಉತ್ತರ ಆಫ್ರಿಕಾದ ಸಿರೇನಿಯ ಮತ್ತು ಈಜಿಪ್ಟ್‌ನ ಅಲೆಕ್ಸಾಂದ್ರಿಯ ಎಂಬ ಎರಡು ನಗರಗಳು, ಮತ್ತು ಸಿಲಿಸಿಯ ಹಾಗೂ ಏಷ್ಯಾ ಎಂಬ ಎರಡು ಪ್ರಾಂತ್ಯಗಳು ಪಠ್ಯದಲ್ಲಿ ಸೂಚಿಸಲ್ಪಟ್ಟಿದೆ) ಗ್ರೀಕ್ ಮಾತನಾಡುವ ಯೆಹೂದ್ಯರನ್ನು ಒಳಗೊಂಡಂತೆ ತೋರುತ್ತದೆ. ಅವರು ಧರ್ಮಶಾಸ್ತ್ರದ ನಿಯಮಗಳನ್ನು ಮತ್ತು ದೇವಾಲಯದ ಯಜ್ಞಗಳನ್ನು ಪಾಲಿಸಲು ದೇವರ ಕುರಿತಾದ ಭಕ್ತಿಯ ನಿಮಿತ್ತ ಯೆರೂಸಲೇಮಿಗೆ ಹಿಂತಿರುಗಿದ್ದರು. ಪೌಲನು ಬಹುಶಃ ಈ ಸಭಾಮಂದಿರದ ಒಬ್ಬ ಸದಸ್ಯನಾಗಿದ್ದಿರಬಹುದು (ಆತನು ಸಿಲಿಸಿಯಾದಿಂದ ಬಂದವನಾಗಿದ್ದನು) ಹಾಗಾಗಿ ಇದು ಸ್ತೆಫನನ್ನು ಕಲ್ಲೆಸೆದು ಕೊಲ್ಲುತ್ತಿರುವಾಗ ಅಲ್ಲಿ ಪೌಲನು ಉಪಸ್ಥಿತನಿದ್ದದ್ದನ್ನೂ (7:57; 8:1) ಮತ್ತು ತನ್ನ ಪರಿವರ್ತನೆಯ ಮುಂಚೆ 'ಕರ್ತನ ಶಿಷ್ಯರನ್ನು ಕೊಲೆಮಾಡುವ ಬೆದರಿಕೆಯನ್ನು ಹಾಕುತ್ತಲೇ ಇನ್ನೂ ಮುಂದುವರೆದಿದ್ದು' ಯಾಕೆ ಎಂಬುದನ್ನು ವಿವರಿಸುತ್ತದೆ (9:1).

## ಇ) ಪಠ್ಯದ ಪ್ರಶ್ನೆಗಳು

1. ಸ್ತೆಫನನ್ನು ವಿರೋಧಿಸಿದವರು ಯಾರು?
2. ಸ್ತೆಫನನು ಎಲ್ಲಿಗೆ ಕೊಂಡಯ್ಯಲ್ಪಟ್ಟನು?
3. ಸ್ತೆಫನನ ಮುಖವು ಯಾವ ರೀತಿಯಾಗಿ ಕಂಡಿತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗದಲ್ಲಿಯೂ ಮತ್ತು ಹಿಂದಿನ ವಾಕ್ಯಭಾಗದಲ್ಲಿಯೂ ಸ್ತೆಫನನು ಹೇಗೆ ವರ್ಣಿಸಲ್ಪಟ್ಟಿದ್ದಾನೆ?
2. ಬಿಡುಗಡೆಯಾದ ಪುರುಷರ ಸಭಾಮಂದಿರದ ಸದಸ್ಯರ ಮತ್ತು ಸ್ತೆಫನನ ನಡುವೆ ಏನು ಸಂಭವಿಸಿತು ಎಂಬುದರ ಒಂದು ಪಟ್ಟಿಯನ್ನು ಮಾಡಿರಿ!
3. ಸ್ತೆಫನನ ವಿರುದ್ಧ ಮಾಡಲ್ಪಟ್ಟ ಆಪಾದನೆ ಏನು? ಹೊಸ ಒಡಂಬಡಿಕೆಯಲ್ಲಿ ಇಂತಹದ್ದೇ ರೀತಿಯಾದ ಆಪಾದನೆಯನ್ನು ಬೇರೆ ಯಾರು ಎದುರಿಸಬೇಕಾಯಿತು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಸ್ತೆಫನನು ಜ್ಞಾನ, ನಂಬಿಕೆ, ಕೃಪೆ ಮತ್ತು ಬಲವುಳ್ಳ ವ್ಯಕ್ತಿಯಾಗಿದ್ದನು. ಆತನ ವಿರೋಧಿಗಳು ಆತನೊಂದಿಗೆ ವಾದಿಸಿದಾಗ ಮತ್ತು ಆಪಾದಿಸಿದಾಗ ಆತನ ಜ್ಞಾನವು ಸ್ಪಷ್ಟವಾಗಿ ಕಂಡಿತು. ಆತನು ತಪ್ಪಾದ ಆಪಾದನೆಯನ್ನು ಮತ್ತು ಸಾವನ್ನು ಎದುರಿಸಿದಾಗ ಆತನ ನಂಬಿಕೆಯು ಪರೀಕ್ಷೆಯನ್ನು ಜಯಿಸಿತು. ಆತನ ಕೃಪೆಯು ಆತನ ಕ್ರಿಸ್ತನ ಹೋಲಿಕೆಯ ನಡವಳಿಕೆಯಲ್ಲಿ ಕಂಡಿತು ಮತ್ತು ಅದು ಆತನ ದೇವದೂತ ಸ್ವರೂಪವಾದ ಮುಖದಿಂದ ಪ್ರಕಾಶಿಸಿತು. ಆತನು ಜನರ ಮಧ್ಯದಲ್ಲಿ ಮಾಡಿದ 'ದೊಡ್ಡ ಅದ್ಭುತ ಮತ್ತು ಸೂಚಕ ಕಾರ್ಯಗಳಲ್ಲಿ' ಆತನ ಬಲವು ಸ್ಪಷ್ಟವಾಗಿ ಕಂಡಿತು.

1. ನೀವು ಎಂದಾದರೂ ಸ್ತೆಫನನಂತಿರುವ ಸಹೋದರ ಅಥವಾ ಸಹೋದರಿಯನ್ನು ಭೇಟಿಯಾಗಿದ್ದೀರೋ? ಅವನನ್ನು/ಅವಳನ್ನು ವರ್ಣಿಸಿರಿ!
2. ನೀವು ಸ್ತೆಫನನಂತಾಗಲು ಬಯಸುತ್ತೀರೋ? ಯಾಕೆ? ಆತನ ಹಾಗೆ ನೀನು ಹೇಗೆ ಆಗುತ್ತೀ?

## ಊ) ಉಪದೇಶಿಸು ಮತ್ತು ಬೋಧಿಸು!

***ಸ್ತೆಫನ – ಇಂದಿನ ವಿಶ್ವಾಸಿಗಳಿಗೆ ಒಂದು ಮಾದರಿ!*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನಕ್ಕಾಗಿ ಈ) 1 ಮತ್ತು ಉ) 2 ರ ನಿಮ್ಮ ಉತ್ತರಗಳನ್ನು ಉಪಯೋಗಿಸಿರಿ.

# ಪಾಠ 16. ನ್ಯಾಯಸಭೆಗೆ ಸ್ತೆಫನನ ಉಪನ್ಯಾಸ, 7:1–53

## ಅ) ವಾಕ್ಯಭಾಗ

ನ್ಯಾಯಸಭೆಯವರು ಸ್ತೆಫನನ ವಿರುದ್ಧವಾಗಿ ಮಾಡುತ್ತಿರುವ ಅಪರಾಧ ನಿಜವೋ ಎಂಬುದಾಗಿ ಕೇಳಿದರು. ನೇರವಾಗಿ ಸ್ತೆಫನನು ಪ್ರಶ್ನೆಗೆ ಉತ್ತರವನ್ನು ಕೊಡಲಿಲ್ಲ. ಬದಲಾಗಿ ಇಸ್ರಾಯೇಲರ ಐತಿಹಾಸಿಕ ಹಿನ್ನಲೆಯ ಮಾಹಿತಿಯನ್ನು ಸಂಕ್ಷಿಪ್ತವಾಗಿ ತಿಳಿಸುವುದರ ಮೂಲಕ ತನ್ನ ಪ್ರಸಂಗವು ಹಳೆ ಒಡಂಬಡಿಕೆಗೆ ಅನುಗುಣವಾದದ್ದೆಂದು ತಿಳಿಸುತ್ತಿದ್ದಾನೆ. ಆತನು ದೇವರಿಗೆ ಅಡ್ಡಿಮಾಡಿ ಮತ್ತು ದೇವರ ಧರ್ಮಶಾಸ್ತ್ರಕ್ಕೆ ಅವಿಧೇಯರಾಗಿದ್ದಿರಿ ಎಂದು ನ್ಯಾಯಸಭೆಯವರನ್ನು ಖಂಡಿಸುತ್ತಾ ತನ್ನ ಮಾತನ್ನು ಮುಗಿಸುತ್ತಿದ್ದಾನೆ.

## ಆ) ಟಿಪ್ಪಣಿ

*ಪ್ರಧಾನಯಾಜಕ* (ವ. 1): ಬಹುಶಃ ಕಾಯಿಫನು (4:6 ರ ಟಿಪ್ಪಣಿಯನ್ನೂ ಸಹ ನೋಡಿರಿ)

*ಈ ಸಂಗತಿಗಳು* (ವ. 1): 6:13–14 ನ್ನು ನೋಡಿರಿ

*ಮೆಸೊಪೊಟೇಮಿಯ... ಹಾರಾನಿನಲ್ಲಿ ... ಕಲ್ದಿಯರ* (ವ. 3–4): ಮೆಸೊಪೊಟೇಮಿಯ ಅಂದರೆ 'ನದಿಗಳ (ಯುಫ್ರೇಟಿಸ್ ಮತ್ತು ಟೈಗ್ರೀಸ್) ಮಧ್ಯದಲ್ಲಿರುವ ದೇಶ' ಎಂದರ್ಥ. ಇದು ಪಾಲೆಸ್ತೀನಿನ ಪೂರ್ವದಲ್ಲಿ ನೆಲೆಯಾಗಿತ್ತು. ಅಬ್ರಾಹಾಮನು ಊರ್‌ನಲ್ಲಿ ಜನಿಸಿದನು ಮತ್ತು ನಂತರ ಆತನ ಕುಟುಂಬವು ಹಾರಾನಿನಲ್ಲಿ ನೆಲೆಸಿತು. ಇವೆರಡೂ ಪಟ್ಟಣಗಳು ಮೆಸೊಪೊಟೇಮಿಯದಲ್ಲಿತ್ತು. ಕಲ್ದಿಯ ಜನರು ಮೆಸೊಪೊಟೇಮಿಯದ ದಕ್ಷಿಣಭಾಗದಲ್ಲಿ ನೆಲೆಸಿದ್ದರು.

*ಮಿದ್ಯಾನಿಗೆ ಓಡಿಹೋದನು* (ವ. 29): ಮಿದ್ಯಾನ್ ಮೃತ ಸಮುದ್ರದ ಪೂರ್ವ ಮತ್ತು ದಕ್ಷಿಣ ಭಾಗದ ಭೂಪ್ರದೇಶವಾಗಿತ್ತು. ಮೋಶೆಯ ಸಮಯದಲ್ಲಿ ಇದು ಸೀನಾಯ್ ಪರ್ಯಾಯ ದ್ವೀಪದ ದಕ್ಷಿಣ ಮತ್ತು ಪೂರ್ವಭಾಗಗಳನ್ನು ಆವರಿಸಿತ್ತು.

*ಪ್ರವಾದಿಗಳ ಪುಸ್ತಕದಲ್ಲಿ* (ವ. 42–43): 'ಕಿರಿಯ ಪ್ರವಾದಿಗಳ' ಪುಸ್ತಕವೆಂದು ನಾವು ಈಗ ಕರೆಯುವ ಪ್ರವಾದಿಗಳ ಪುಸ್ತಕಗಳ ಸಂಕಲನವನ್ನು ಸ್ತೆಫನನು ಉಲ್ಲೇಖಿಸುತ್ತಾನೆ. ಈ ಹೇಳಿಕೆಯು ಆಮೋಸ 5:25–27ರ ಗ್ರೀಕ್ ಭಾಷಾಂತರದಿಂದ (ಸೆಪ್ಟಾಜಿಂಟ್‌ನಿಂದ) ತೆಗೆಯಲ್ಪಟ್ಟಿದೆ. *ಮೋಲೆಕ್* ಅಮ್ಮೋನಿಯರಿಂದ ಆರಾಧಿಸಲ್ಪಡುತ್ತಿದ್ದ ಅನ್ಯ ದೇವರಾಗಿತ್ತು, ಅವರು ಅದನ್ನು ಮದ್ಯೋತ್ಸವದೊಂದಿಗೆ ಆರಾಧಿಸುವಾಗ ಮಕ್ಕಳನ್ನು ಬಲಿಕೊಡುತ್ತಿದ್ದರು. *ರೇಫಾ* (ಬಹುಶಃ ಇದು ಶನಿಗ್ರಹಕ್ಕೆ ಇಟ್ಟ ಒಂದು ಹೆಸರಾಗಿರಬಹುದು) ಅರಣ್ಯದಲ್ಲಿ ಇಸ್ರಾಯೇಲರಿಂದ ಆರಾಧಿಸಲ್ಪಟ್ಟ ಅನ್ಯದೇವತೆಯಾಗಿತ್ತು.

*ದೇವದರ್ಶನ ಗುಡಾರ* (ವ. 44): ಸ್ತೆಫನನು ಮರುಭೂಮಿಯಲ್ಲಿನ ಗುಡಾರದ ಕುರಿತು ಉಲ್ಲೇಖಿಸುತ್ತಾನೆ, ಅದರಲ್ಲಿ ಎರಡು ದಶಾಜ್ಞೆಗಳ ಕಲ್ಲಿನ ಹಲಗೆಗಳು ಮತ್ತು ದೇವರ ಒಡಂಬಡಿಕೆಯ ಮಂಜೂಷವು ಇದ್ದವು.

## ಇ) ಪಠ್ಯದ ಪ್ರಶ್ನೆಗಳು

1. ಮಹಾಯಾಜಕನು ಸ್ತೆಫನನಿಗೆ ಏನು ಕೇಳಿದನು?
2. ಸ್ತೆಫನನು ತನ್ನ ಪ್ರಸಂಗದಲ್ಲಿ ಹಳೆ ಒಡಂಬಡಿಕೆಯಲ್ಲಿನ ಯಾವ ಚಿರಪರಿಚಿತನಾದ ವ್ಯಕ್ತಿಯ ಕುರಿತು ಮಾತನಾಡಿದನು?
3. ಸ್ತೆಫನನು ನ್ಯಾಯಸಭೆಯವರ ವಿರುದ್ಧ ಮಾಡಿದ ಐದು ಆರೋಪಣೆಗಳು ಯಾವವು (ವ. 51–23)?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಸ್ತೆಫನನು ಆರೋಪಿಸಲ್ಪಟ್ಟ ಸಂಗತಿಗಳ ಬೆಳಕಿನಲ್ಲಿ ಆತನ ಪ್ರಸಂಗವನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿರಿ: 'ಈ ಮನುಷ್ಯನು ಈ ಪವಿತ್ರ ಸ್ಥಳಕ್ಕೂ ಧರ್ಮಶಾಸ್ತ್ರಕ್ಕೂ ವಿರೋಧವಾಗಿ ಮಾತನಾಡುತ್ತಲೇ ಇದ್ದಾನೆ. ನಜರೇತಿನ ಯೇಸು ಈ ಸ್ಥಳವನ್ನು ನಾಶಮಾಡಿಬಿಡುತ್ತಾನೆಂದು ನಮಗೆ ಒಪ್ಪಿಸಲ್ಪಟ್ಟ ಮೋಶೆಯ ಪದ್ಧತಿಗಳನ್ನು ಬದಲಾಯಿಸುತ್ತಾನೆಂದು ಇವನು ಹೇಳುವುದನ್ನು ನಾವು ಕೇಳಿದ್ದೇವೆ' (6:13–14).
2. ಸ್ತೆಫನನು ನ್ಯಾಯಸಭೆಯವರನ್ನು 'ಸುನ್ನತಿಯಿಲ್ಲದ ಕ್ರೂರಹೃದಯದವರೆಂದು' ಆರೋಪಿಸಿದನು (ವ. 51). ಆತನು ಹೀಗೆ ಹೇಳುವುದರ ಅರ್ಥವೇನು?
3. ಈ ವಾಕ್ಯಭಾಗವು ಸ್ತೆಫನನ ಕುರಿತು ಕನಿಷ್ಟ ಮೂರು ಸಂಗತಿಗಳನ್ನು ಪ್ರಕಟಿಸುತ್ತದೆ. ಅವುಗಳು ಯಾವುವು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ವ 51–53 ರಲ್ಲಿ ಸ್ತೆಫನನು ನ್ಯಾಯಸಭೆಯವರ ವಿರುದ್ಧ ಆರೋಪಿಸಿದ ರೀತಿಯು ಜ್ಞಾನದಾಯಕವಾದದ್ದೆಂದು ನೀವು ಆಲೋಚಿಸುತ್ತಿರೋ. ಯಾಕೆ? ಯಾಕೆ ಇಲ್ಲ?
2. ಒಂದು ವೇಳೆ ನೀವು ಸ್ತೆಫನನ ಸ್ಥಳದಲ್ಲಿ ಇದ್ದಿದ್ದರೆ ಏನು ಮಾಡುತ್ತಿದ್ದಿರಿ?
3. ಸ್ತೆಫನನ ಪರಿಸ್ಥಿತಿಯನ್ನೇ ಎದುರಿಸಿದ ಯಾವುದಾದರೂ ವಿಶ್ವಾಸಿಯು ನಿಮಗೆ ತಿಳಿದಿದೆಯೋ? ಆ ವ್ಯಕ್ತಿಯು ಏನನ್ನು ಮಾಡಿದನು? ಆತನು ಸರಿಯಾದ ಕಾರ್ಯವನ್ನು ಮಾಡಿದನೆಂದು ನೀವು ಆಲೋಚಿಸುತ್ತೀರೋ?

# ಪಾಠ 17. ಸ್ತೆಫನನ ಮೇಲೆ ಕಲ್ಲೆಸೆದದ್ದು, 7:54–8:1

## ಅ) ವಾಕ್ಯಭಾಗ

ಸ್ತೆಫನನ ದೋಷಾರೋಪಣೆಯನ್ನು ಕೇಳಿದ ನ್ಯಾಯಸಭೆಯವರು ರೋಷವುಳ್ಳವರಾದರು. ನಂತರ ಸ್ತೆಫನನು ಪರಲೋಕದ ಕಡೆಗೆ ನೋಡಿ, ದೇವರ ಮಹಿಮೆಯನ್ನೂ, ಯೇಸು ತಂದೆಯ ಬಲಗಡೆಯಲ್ಲಿ ನಿಂತುಕೊಂಡಿರುವುದನ್ನೂ ಕಂಡನು. ಇದನ್ನು ಕೇಳಿದ ನ್ಯಾಯಸಭೆಯವರು ಸ್ತೆಫನನ್ನು ಯೆರೂಸಲೇಮಿನಿಂದ ಹೊರಗೆ ಎಳೆದುಕೊಂಡು ಹೋಗಿ ಅವನ ಮೇಲೆ ಕಲ್ಲೆಸೆದು ಕೊಂದರು. ಸ್ತೆಫನನು ತನ್ನ ಆತ್ಮವನ್ನು ತನ್ನ ಕರ್ತನಾದ ಯೇಸುವಿಗೆ ವಹಿಸಿ ಪ್ರಾಣ ಬಿಟ್ಟನು ಮತ್ತು ತನ್ನನ್ನು ಕೊಂದವರ ಮೇಲೆ ಯೇಸು ಕರುಣೆಯನ್ನು ತೋರುವಂತೆ ಕೇಳಿಕೊಂಡನು.

## ಆ) ಟಿಪ್ಪಣಿ

*ಮನುಷ್ಯ ಪುತ್ರನು* (ವ. 56): ಯೇಸು ತನ್ನ ಕುರಿತಾದ ಈ ಶೀರ್ಷಿಕೆಯನ್ನು ದಾನಿಯೇಲ. 7:13–14ರಲ್ಲಿರುವ ಮೆಸ್ಸೀಯನ ಪ್ರವಾದನೆಯೊಂದಿಗಿನ ತನ್ನ ಸಂಬಂಧವನ್ನು ಒತ್ತಿ ಹೇಳಲು ಉಪಯೋಗಿಸಿದನು. ಸುವಾರ್ತೆಗಳನ್ನು ಹೊರತುಪಡಿಸಿ ಹೊಸ ಒಡಂಬಡಿಕೆಯಲ್ಲಿ ಇದೊಂದೇ ಬಾರಿ ಇದು ಉಪಯೋಗಿಸಲ್ಪಟ್ಟಿದೆ (ಆದರೆ ಪ್ರಕಟನೆ. 1:13; 14:14 ನ್ನೂ ಸಹ ನೋಡಿರಿ).

*ಸೌಲ ಎಂಬ ಹೆಸರಿನ ಒಬ್ಬ ಸೇವಕನು* (ವ. 58): ಇಲ್ಲಿ ಲೂಕನು ತನ್ನ ಪುಸ್ತಕದ ಎರಡನೆಯ ಭಾಗದ ಪ್ರಮುಖ ಪಾತ್ರವನ್ನು ಪರಿಚಯಿಸುತ್ತಿದ್ದಾನೆ, ಆತನು ನಂತರದಲ್ಲಿ ಪೌಲನೆಂದು ಕರೆಯಲ್ಪಟ್ಟ ಅಪೋಸ್ತಲನು.

*ಸೌಲನು ಸ್ತೆಫನನ ಕೊಲೆಗೆ ಸಮ್ಮತಿಸಿದನು* (ವ. 8:1): ಪೌಲನು ತನ್ನ ಸಾಕ್ಷಿಯನ್ನು ಯೆರೂಸಲೇಮಿನಲ್ಲಿ ನೆರೆದಿದ್ದ ಜನರಿಗೆ ತಿಳಿಸುತ್ತಿದ್ದಾಗ ಅಪೋ.22:20 ರಲ್ಲಿ ಇದನ್ನು ಉಲ್ಲೇಖಿಸುತ್ತಾನೆ.

## ಇ) ಪಠ್ಯದ ಪ್ರಶ್ನೆಗಳು

1. ಸ್ತೆಫನನು ಪರಲೋಕದ ಕಡೆಗೆ ನೋಡಿದಾಗ ಏನನ್ನು ಕಂಡನು?
2. ಸ್ತೆಫನನ ಮತ್ತು ಆತನ ಮಾತುಗಳ ಕುರಿತು ನ್ಯಾಯಸಭೆಯವರು ಹೇಗೆ ತಮ್ಮ ರೋಷವನ್ನು ವ್ಯಕ್ತಪಡಿಸಿದರು?
3. ಸ್ತೆಫನನು ಈ ವಾಕ್ಯಭಾಗದಲ್ಲಿ ಎಷ್ಟು ಬಾರಿ ಮಾತನಾಡುತ್ತಾನೆ? ಆತನು ಯಾರೊಂದಿಗೆ ಮಾತನಾಡುತ್ತಾನೆ?
4. ನಾವು ವ. 55–56 ರಲ್ಲಿ ದೇವರನ್ನು ಒಬ್ಬ ತ್ರೈಯೇಕ ದೇವರಾಗಿ ಹೇಗೆ ಕಾಣಬಹುದು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಸ್ತೆಫನನ ಮತ್ತು ಯೇಸುವಿನ ಮರಣದ ನಡುವೆ ಇರುವ ಸಮಾನತೆಗಳು ಯಾವವು?
2. ಸ್ತೆಫನನ ಮೇಲೆ ಕಲ್ಲೆಸೆಯುತ್ತಿರುವಾಗ ಆತನು ಎರಡು ಬಾರಿ ಪ್ರಾರ್ಥಿಸಿದನೆಂದು ಈ ವಾಕ್ಯಭಾಗವು ತಿಳಿಸುತ್ತದೆ. ಈ ಎರಡೂ ಪ್ರಾರ್ಥನೆಗಳು ಕ್ರೂಜೆಯ ಮೇಲೆ ಯೇಸು ಪ್ರಾರ್ಥಿಸಿದ ಪ್ರಾರ್ಥನೆಯನ್ನು ಬಲವಾಗಿ ನೆನಪಿಸುತ್ತವೆ, ನೋಡಿರಿ ಲೂಕ 23. ಸ್ತೆಫನನ ಮತ್ತು ಯೇಸುವಿನ ಪ್ರಾರ್ಥನೆಯ ನಡುವೆ ಇರುವ ವ್ಯತ್ಯಾಸಗಳೇನು?
3. ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ನಡೆಯುತ್ತಿರುವ ಸಂಗತಿಗಳಲ್ಲಿ ಸ್ತೆಫನನ ಕಥೆಯು ಯಾವ ಪ್ರಾಮುಖ್ಯತೆಯನ್ನು ಹೊಂದಿದೆ? ಈ ಪಠ್ಯಪುಸ್ತಕದ 'ಅನುಕ್ರಮಣಿಕೆ' ಮತ್ತು ಅ. ಕೃ. 7:58; 8:1 ನ್ನು ಆಧಾರವಾಗಿರಿಸಿಕೊಂಡು ಈ ಮೇಲಿನ ಪ್ರಶ್ನೆಯನ್ನು ಉತ್ತರಿಸಿ.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಸ್ತೆಫನನು ಮಾಡಿದಂತೆಯೇ ನೀವೂ ಸಹ ನಿಮ್ಮ ನಂಬಿಕೆಯ ಸಲುವಾಗಿ ನಿಮ್ಮ ಪ್ರಾಣ ಕೊಡಲು ಮನಸ್ಸುಳ್ಳವರಾಗಿದ್ದೀರೋ? ಯಾಕೆ – ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

***ಸ್ತೆಫನನು ಮತ್ತು ಆತನ ಸಂದೇಶ*** ಎಂದು ಕರೆಯಲ್ಪಡುವ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಲು ಈ ಅಧ್ಯಾಯವನ್ನು ಮತ್ತು ಹಿಂದಿನ ಎರಡು ಅಧ್ಯಾಯಗಳನ್ನು ಉಪಯೋಗಿಸಿಕೊಳ್ಳಿರಿ.

ಇದು ನಿಮ್ಮ ಹೊರರೇಖೆಯಾಗಿರಲಿ:

1) ಸ್ತೆಫನನು ಯಾರಾಗಿದ್ದನು?

- ಆತನ ಜೀವನ ಮತ್ತು ಸೇವೆಯ ಹಿನ್ನಲೆಯ ಕುರಿತು ಸಂಕ್ಷಿಪ್ತ ಸಾರಾಂಶ
- ಆತನ ಶ್ರಮ ಮತ್ತು ಮರಣದ ಕುರಿತು ಸಂಕ್ಷಿಪ್ತ ವಿವರಣೆ

2) ಆತನ ಸಂದೇಶ ಏನಾಗಿತ್ತು?

- ದೇವರ ಕುರಿತು
- ದೇವಾಲಯ ಮತ್ತು ಯೇಸು ಕ್ರಿಸ್ತನ ಕುರಿತು
- ಧರ್ಮಶಾಸ್ತ್ರ ಮತ್ತು ಯೇಸುವಿನ ಕುರಿತು

3) ಸ್ತೆಫನನಿಂದ ನಾವು ಏನನ್ನು ಕಲಿಯಬಹುದು?

- ನಮ್ಮ ಜೀವನದ ಕುರಿತು
- ನಮ್ಮ ಸಂದೇಶದ ಕುರಿತು

# ಪಾಠ 18. ಸಭೆ ಹಿಂಸೆಗೆ ಗುರಿಯಾಗಿ ಸದಸ್ಯರು ಚದುರಿ–ಹೋದದ್ದು, 8:1–3

## ಅ) ವಾಕ್ಯಭಾಗ

ಸ್ತೆಫನನ ಮರಣದ ಪರಿಣಾಮವಾಗಿ ಯೆರೂಸಲೇಮಿನ ಸಭೆಯ ವಿರುದ್ಧ ಒಂದು ಭಯಂಕರ ಹಿಂಸೆಯು ಪ್ರಾರಂಭವಾಯಿತು. ತದನಂತರ ಅಪೋಸ್ತಲ ಪೌಲನಾದ ಸೌಲನು ಆ ಹಿಂಸಕರಲ್ಲಿ ಒಬ್ಬನಾಗಿದ್ದನು.

## ಆ) ಟಿಪ್ಪಣಿ

*ಆ ದಿನವೇ ಯೆರೂಸಲೇಮಿನ ಸಭೆಗೆ ವಿರೋಧವಾಗಿ ಮಹಾಹಿಂಸೆ ಪ್ರಾರಂಭವಾಯಿತು ...* (ವ. 1): ಈ ವಾಕ್ಯಭಾಗವನ್ನು ಈ ಹೇಳಿಕೆಯೊಂದಿಗೆ ಪ್ರಾರಂಭಿಸುವುದು ಸುಸಂಬದ್ಧವಾಗಿದೆ.

## ಇ) ಪಠ್ಯ ಪ್ರಶ್ನೆಗಳು

1. ಸ್ತೆಫನನ ಮೇಲೆ ಕಲ್ಲೆಸೆದ ನಂತರ ಉಂಟಾದ ತಕ್ಷಣದ ಪರಿಣಾಮವೇನು?
2. ವಿಶ್ವಾಸಿಗಳು ಎಲ್ಲಿಗೆ ಹೋದರು?
3. ಈ ವಾಕ್ಯಭಾಗದಲ್ಲಿ ಸೌಲನ ಕುರಿತು ನಾವು ಏನು ಕಲಿಯುತ್ತೇವೆ?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಲೂಕನು ಇದಕ್ಕೆ ಮೊದಲು ಅಪೋಸ್ತಲರ ಕೃತ್ಯಗಳಲ್ಲಿ 'ಯೂದಾಯ ಮತ್ತು ಸಮಾರ್ಯವನ್ನು' ಯಾವುದಕ್ಕೆ ಸಂಬಂಧಿಸಿ ಪ್ರಸ್ತಾಪಿಸಿದ್ದಾನೆ? ಈ ವಾಸ್ತವಾಂಶವನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬೇಕು?
2. ವಿಶ್ವಾಸಿಗಳು ಚದುರಿಹೋದಾಗ ಅಪೋಸ್ತಲರು ಯೆರೂಸಲೇಮಿನಲ್ಲಿಯೇ ಯಾಕೆ ಉಳಿದುಕೊಂಡರೆಂದು ನೀವು ಆಲೋಚಿಸುತ್ತೀರಿ?
3. ಸ್ತೆಫನನನ್ನು ಹೂಣಿಟ್ಟ ಜನರ ಹಿನ್ನಲೆ ಏನಾಗಿರಬಹುದು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಯೆರೂಸಲೇಮಿನ ವಿಶ್ವಾಸಿಗಳು ಯೂದಾಯ ಮತ್ತು ಸಮಾರ್ಯದಲ್ಲಿ ಸಾಕ್ಷೀಕರಿಸುವುದರ ಕುರಿತು ಯೇಸು ಹೇಳಿದ ಮಾತುಗಳನ್ನು ಯಾಕೆ ನೆನಪಿಸಿಕೊಳ್ಳಲಿಲ್ಲ? ಬದಲಾಗಿ ಅವರು ಒಂದು

ಹಿಂಸೆಯ ಮೂಲಕ ಯೆರೂಸಲೇಮನ್ನು ಬಿಟ್ಟುಹೋಗುವಂತೆ ಒತ್ತಾಯಿಸಲ್ಪಟ್ಟರು. ಈ ದುಃಖಕರ ವಾಸ್ತವಾಂಶದ ಕುರಿತು ಆಲೋಚಿಸಿರಿ.

ನಂತರ ನಿಮ್ಮ ಸ್ವಂತ ಪರಿಸ್ಥಿತಿಯ ಕುರಿತು ಆಲೋಚಿಸಿರಿ. ಮತ್ತಾಯ 28:19–20 ರಲ್ಲಿ ಹೇಳಲ್ಪಟ್ಟ ಯೇಸುವಿನ ಮಹಾ ಆದೇಶವನ್ನು ಪಾಲಿಸಲು ನೀವು (ಮತ್ತು ನಿಮ್ಮ ಸಭೆಯವರು) ನೆನಪಿಸಿಕೊಳ್ಳುತ್ತೀರೋ: 'ಆದ್ದರಿಂದ ನೀವು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ. ಅವರಿಗೆ ತಂದೆಯ, ಮಗನ ಮತ್ತು ಪರಿಶುದ್ಧಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ, ನಾನು ನಿಮಗೆ ಆಜ್ಞಾಪಿಸಿದ್ದೆಲ್ಲವನ್ನು ಕೈಕೊಳ್ಳುವ ಹಾಗೆ ಅವರಿಗೆ ಬೋಧಿಸಿರಿ'? ನೀವು ನೆನಪಿಸಿಕೊಳ್ಳುವುದಾದರೆ – ಅದನ್ನು ಹೇಗೆ ಮಾಡುತ್ತೀರೆಂಬುದನ್ನು ಇತರರೊಂದಿಗೆ ಹಂಚಿಕೊಳ್ಳಿರಿ! ನೀವು ನೆನಪಿಸಿಕೊಳ್ಳುವುದಿಲ್ಲವಾದರೆ – ಯಾಕೆ ಅದನ್ನು ಮಾಡುವುದಿಲ್ಲವೆಂಬುದಕ್ಕೆ ಕಾರಣಗಳನ್ನು ಕೊಡಿರಿ!

2. ದೇವರ ರಾಜ್ಯವು ವಿಸ್ತರಿಸಲ್ಪಡಲು ಮತ್ತು ಹೊಸ ಜನರನ್ನು ಸುವಾರ್ತೆಯೊಂದಿಗೆ ತಲುಪಲು – ಇದೇ ರೀತಿಯ ಹಿಂಸೆ ಮತ್ತು ಚದುರುವಿಕೆಯು ಇಂದು ದಕ್ಷಿಣ ಭಾರತದಲ್ಲಿಯೂ ನಡೆಯಬಹುದೆಂದು ನೀವು ಆಲೋಚಿಸುತ್ತೀರೋ? ಯಾಕೆ – ಯಾಕೆ ಇಲ್ಲ?

# ಪಾಠ 19. ಸಮಾರ್ಯದಲ್ಲಿ ಫಿಲಿಪ್ಪನು, 8:4–8

## ಅ) ವಾಕ್ಯಭಾಗ

ಯೆರೂಸಲೇಮಿನಲ್ಲಿ ಹಿಂಸೆಯು ಪ್ರಾರಂಭವಾದಾಗ ಚದುರಿಹೋದ ಜನರ ಮಧ್ಯದಲ್ಲಿ ಫಿಲಿಪ್ಪನು ವಾಸವಾಗಿದ್ದನು. ಆತನು ಸಮಾರ್ಯ ಎಂಬ ಪಟ್ಟಣಕ್ಕೆ ಬಂದು ಅಲ್ಲಿ ಸುವಾರ್ತೆಯನ್ನು ಸಾರಿದನು. ಆತನ ಸೇವೆಯಲ್ಲಿ ಅದ್ಭುತಕರವಾದ ಸೂಚಕಕಾರ್ಯಗಳು ನಡೆದವು ಮತ್ತು ಅನೇಕರು ಆತನು ಹೇಳುವುದಕ್ಕೆ ಕಿವಿಗೊಟ್ಟರು.

## ಆ) ಟಿಪ್ಪಣಿ

*ವಾಕ್ಯವನ್ನು ಬೋಧಿಸಿದರು* (ವ. 4): 'ಬೋಧಿಸು' ಎಂಬ ಗ್ರೀಕ್ ಭಾಷಾಂತರವು ಆಂಗ್ಲ ಪದವಾದ 'ಸುವಾರ್ತೀಕರಿಸು' ಅಂದರೆ 'ಶುಭ ಸಂದೇಶವನ್ನು ಸಾರು' ಎಂಬ ಪದಕ್ಕೆ ಸಮಾನವಾಗಿದೆ. ಹಾಗಾಗಿ ಚದುರಿಹೋದ ವಿಶ್ವಾಸಿಗಳು ಯೂದಾಯ ಮತ್ತು ಸಮಾರ್ಯದಲ್ಲಿನ ಜನರಿಗೆ '(ಯೇಸುವಿನ ಕುರಿತಾದ) ಶುಭ ಸಂದೇಶವನ್ನು ಸಾರಿದರು'. ಹೊಸ ಒಡಂಬಡಿಕೆಯಲ್ಲಿ ಈ ಶುಭ ಸಂದೇಶವು ಎಲ್ಲಾ ಕಡೆಯಲ್ಲಿ ಯೇಸು ಕ್ರಿಸ್ತನ ಕುರಿತಾದ ಮರಣ, ಪುನರುತ್ಥಾನ ಮತ್ತು ಅದರ ಸಾಕ್ಷಿಯ ಮತ್ತು ಅದರ ಪರಿಣಾಮವಾಗಿ ಬರುವ ದೇವರೊಂದಿಗಿನ ಮಾನವನ ಸಂಬಂಧದ ಕುರಿತು ಉಲ್ಲೇಖಿಸುತ್ತದೆ.

*ಕ್ರಿಸ್ತನ ಸಂದೇಶ ಸಾರಿದರು* (ವ. 5): ಇಲ್ಲಿ ಲೂಕನು 'ಸಾರು ಅಥವಾ ಹೇಳು' ಎಂಬ ಇನ್ನೊಂದು ಗ್ರೀಕ್ ಪದಬಳಕೆ ಮಾಡುತ್ತಾನೆ. ಈ ಸಂದೇಶವು ಮಹತ್ವವುಳ್ಳದ್ದು ಮತ್ತು ತ್ವರಿತವಾದದ್ದು ಮತ್ತು ಶ್ರೋತೃಗಳು ಅದನ್ನು ಅಂಗೀಕರಿಸತಕ್ಕದ್ದು ಇಲ್ಲವಾದಲ್ಲಿ ಅದರ ಪರಿಣಾಮವನ್ನು ಎದುರಿಸತಕ್ಕದ್ದು ಎಂದು ಈ ಪದವು ಸೂಚಿಸುತ್ತದೆ.

## ಇ) ಪಠ್ಯ ಪ್ರಶ್ನೆಗಳು

1. ಫಿಲಿಪ್ಪನು ಕ್ರಿಸ್ತನ ಕುರಿತು ಎಲ್ಲಿ ಸಾರಿದನು?
2. ಫಿಲಿಪ್ಪನ ಸೇವೆಯು ಹೇಗಿತ್ತು?
3. ಫಿಲಿಪ್ಪನ ಸೇವೆಯ ಫಲವೇನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಆದಿಸಭೆಯಲ್ಲಿ ಫಿಲಿಪ್ಪ ಮತ್ತು ಸ್ತೆಫನರ ನಡುವೆ ಇದ್ದ ಸಂಬಂಧವೇನಾಗಿತ್ತು?

2. ಅಪೋಸ್ತಲರ ಕೃತ್ಯಗಳ ಪುಸ್ತಕದ ಈ ಎರಡನೆಯ ಭಾಗದಲ್ಲಿನ ಮೂರು ಮುಖ್ಯ ಪಾತ್ರದಾರಿಗಳಲ್ಲಿ ಫಿಲಿಪ್ಪ ಮತ್ತು ಸ್ತೆಫನರು ಇಬ್ಬರಾಗಿದ್ದರು (ಮೂರನೆಯವನು ಸೌಲನು). ಲೂಕನು ಫಿಲಿಪ್ಪ ಮತ್ತು ಸ್ತೆಫನರನ್ನು ಒಂದು ಜೋಡಿಯಾಗಿ ಕಂಡಂತೆ ತೋರುತ್ತದೆ. ಅವರ ನಡುವೆ ಇರುವ ಸಮಾನತೆಗಳ ಒಂದು ಪಟ್ಟಿಯನ್ನು ಮಾಡಿರಿ!

3. ಫಿಲಿಪ್ಪನ ಜೀವನ ಮತ್ತು ಸೇವೆಯ ಕುರಿತು ಲೂಕನು ತನ್ನ ಮಾಹಿತಿಯನ್ನು ಹೇಗೆ ಸಂಗ್ರಹಿಸಿದನೆಂದು ನೀವು ಆಲೋಚಿಸುತ್ತೀರಿ? ಈ ಪ್ರಶ್ನೆಯ ಉತ್ತರಕ್ಕೆ ಲೂಕ. 1:3, ಅ. ಕೃ. 21:8 ಮತ್ತು 27:1 ರಲ್ಲಿ ಕೆಲವು ಸುಳಿವುಗಳನ್ನು ಕಾಣಬಹುದು.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಯೆರೂಸಲೇಮಿನಲ್ಲಿದ್ದ ವಿಶ್ವಾಸಿಗಳು ಹಿಂಸಿಸಲ್ಪಟ್ಟು ಚದುರಿಹೋದಾಗ ಅವರು ಬಚ್ಚಿಟ್ಟುಕೊಳ್ಳಲಿಲ್ಲ ಅಥವಾ ಬಾಯಿ ಮುಚ್ಚಿಕೊಳ್ಳಲಿಲ್ಲ. ಅವರು ಹೋದಲ್ಲೆಲ್ಲಾ ಸುವಾರ್ತೀಕರಿಸಿದರು, ಅಂದರೆ ಯೇಸುವಿನ ಮತ್ತು ಆತನ ರಕ್ಷಣೆಯ ಕುರಿತಾದ ಸುವಾರ್ತೆಯನ್ನು ಸಾರಿದರು.

ನೀವು ಇಂತಹ ಪರಿಸ್ಥಿತಿಯಲ್ಲಿ ಹೇಗೆ ಪ್ರತಿಕ್ರಿಯಿಸುವಿರಿ? ನೀವು ಬಚ್ಚಿಟ್ಟುಕೊಂಡು ಮೌನವಾಗಿಬಿಡುವಿರೋ? ಅಥವಾ ನೀವು ಹೋದಲ್ಲೆಲ್ಲಾ ಧೈರ್ಯವಾಗಿ ಯೇಸುವಿನ ಕುರಿತಾದ ಸಂದೇಶವನ್ನು ಸಾರುತ್ತೀರೋ? ನಿಮ್ಮ ಆಲೋಚನೆ ಏನು? ದಯಮಾಡಿ ಹಂಚಿಕೊಳ್ಳಿರಿ!

## ಊ) ಉಪದೇಶಿಸು ಮತ್ತು ಬೋಧಿಸು!

1. ಈ ಅಧ್ಯಾಯದಲ್ಲಿರುವ ಪ್ರಶ್ನೆಗಳ ಉತ್ತರವನ್ನು ಬಳಸಿಕೊಂಡು ***ಸ್ತೆಫನನು ಮತ್ತು ಫಿಲಿಪ್ಪನು*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಮಾಡಿರಿ. ನಿಮ್ಮ ಹೊರರೇಖೆಯು ಈ ರೀತಿಯಾಗಿರಲಿ:

   1) ಅವರ ಹಿನ್ನಲೆ:

      - ಅವರ ಗುಣಸ್ವಭಾವ (6:3, 5)
      - ಯೆರೂಸಲೇಮಿನ ಸಭೆಯಲ್ಲಿ ಅವರ ಪಾತ್ರ (6:2, 6)

   2) ಅವರ ಸೇವೆಗಳು:

      - ಸ್ತೆಫನನ ಸೇವೆ (6:8)
      - ಸಮಾರ್ಯದಲ್ಲಿ ಫಿಲಿಪ್ಪನ ಸೇವೆ (8:4–8)
      - ಸೇವೆಯಲ್ಲಿ ಅವರ ಧೈರ್ಯ

3) ಅವರ ಅಂತ್ಯ:

- ಸ್ತೆಫನನ ಅಂತ್ಯ (7:54–60)
- ಫಿಲಿಪ್ಪನ ಅಂತ್ಯ (21:8–9)

4) ಕ್ರೈಸ್ತತ್ವಕ್ಕೆ, ಸಭೆಗೆ ಮತ್ತು ಅದರ ವ್ಯಾಪ್ತಿಗೆ ಅವರ ಕೊಡುಗೆಗಳು:

- ಸ್ತೆಫನನ ಕೊಡುಗೆ: ಯೇಸುವಿನ ಮತ್ತು ಆಲಯ, ಧರ್ಮಶಾಸ್ತ್ರ ಮತ್ತು ಮೆಸ್ಸೀಯನ ಕುರಿತಾದ ಆತನ ಬೋಧನೆಗಳ ಕುರಿತು ಸ್ತೆಫನನ ತಿಳುವಳಿಕೆ ('ನ್ಯಾಯಸಭೆಯವರಿಗೆ ಸ್ತೆಫನನ ಉಪನ್ಯಾಸ' ಎಂಬ ಅಧ್ಯಾಯವನ್ನು ನೋಡಿರಿ ಮತ್ತು ಈ) 1 ರ ಪ್ರಶ್ನೆಯ ಉತ್ತರವನ್ನೂ ಗಮನಿಸಿರಿ).
- ಫಿಲಿಪ್ಪನ ಕೊಡುಗೆ: ತಿರಸ್ಕರಿಸಲ್ಪಟ್ಟ ಸಮಾರ್ಯದ ಜನರಿಗೆ ಸುವಾರ್ತೀಕರಿಸಿದ ಆತನ ಧೈರ್ಯದ ಕೆಲಸ.

5) ಫಿಲಿಪ್ಪ ಮತ್ತು ಸ್ತೆಫನರಿಂದ ನಾವು ಏನನ್ನು ಕಲಿಯುತ್ತೇವೆ?

- ನಮ್ಮ ಜೀವಿತಕ್ಕಾಗಿ ಮತ್ತು ಸಾಕ್ಷಿಗಾಗಿ
- ನಮ್ಮ ಸೇವೆಗಾಗಿ

2. ಅ. ಕೃ. 8:1–8 ರ ಆಧಾರದ ಮೇಲೆ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಅದಕ್ಕೆ ***ಸೈತಾನನ ಸೋಲು*** ಎಂಬ ಶೀರ್ಷಿಕೆಯನ್ನು ಕೊಡಿರಿ. ನೀವು ಈ ಹೊರರೇಖೆಯನ್ನು ಬಳಸಬಹುದು:

1) ಯೆರೂಸಲೇಮಿನಲ್ಲಿ ಅಮೋಘವಾದ ಸಭೆಯ ಬೆಳವಣಿಗೆ (ಅ. ಕೃ. 2:41, 47; 4:4; 5:41)

2) ಸೈತಾನನು ಇದರಿಂದ ಖಂಡಿತವಾಗಲೂ ಕೋಪಗೊಂಡಿರಬೇಕು. ಹಾಗಾಗಿ ಆತನು ಏನು ಮಾಡಿದ?

- ಆತನು ಸ್ತೆಫನನ್ನು ಕೊಲ್ಲಿಸಿ ಯೆರೂಸಲೇಮ್ ಸಭೆಯಲ್ಲಿ ಒಂದು ಮಹಾಹಿಂಸೆಯನ್ನು ತಂದನು (7:57–60; 8:1).

  ಇದು ಸೈತಾನನಿಗೆ ಒಂದು ಜಯವಾಗಿ ಕಂಡಿತು: ಈಗ ಸಭೆಯು ಒಡೆಯಲ್ಪಡುವುದು ಮತ್ತು ಸುವಾರ್ತೆಯ ಸಾರೋಣವು ಮೌನವಾಗುವುದು!

  ಆದರೆ ನಿಜವಾಗಲೂ ಹಾಗೆ ಆಯಿತೋ?

- ಆತನು ತನಗಾಗಿ ಕೆಲಸ ಮಾಡಲು ಸೌಲನನ್ನು ನೇಮಿಸಿದ (8:3).

  ಇದು ಸೈತಾನನಿಗೆ ಒಂದು ಜಯವಾಗಿ ಕಂಡಿತು: ಈಗ ತನಗಾಗಿ ತನ್ನ ದುಷ್ಕೃತ್ಯಗಳನ್ನು ನಡೆಸಲು – ಅಂದರೆ, ಎಲ್ಲೆಡೆಯಲ್ಲೂ ವಿಶ್ವಾಸಿಗಳನ್ನು ಹಿಂಸಿಸುತ್ತಾ ಅವರನ್ನು ಮನೆಗಳಿಂದ ಹೊರಕ್ಕೆ ಎಳಕೊಂಡು ಬಂದು ಸೆರೆಮನೆಗೆ ಹಾಕಿಸಿ ಕೊಲ್ಲುವ – ಒಬ್ಬ 'ಛಲವುಳ್ಳ ಕಾರ್ಯಕರ್ತನಿದ್ದನು'.

  ಆದರೆ ಸೈತಾನನು ಯೋಜಿಸಿಕೊಂಡಂತೆ ನಿಜವಾಗಲೂ ಹಾಗೆ ಆಯಿತೋ?

- ವಿಶ್ವಾಸಿಗಳು ಯೆರೂಸಲೇಮನ್ನು ಬಿಟ್ಟುಹೋಗುವಂತೆ ಆತನು ಒತ್ತಾಯಿಸಿದನು. ಸಭೆಯು ಚದುರಿಸಲ್ಪಟ್ಟಿತ್ತು (8:1).

  ಇದು ಸೈತಾನನಿಗೆ ಒಂದು ಜಯವಾಗಿ ಕಂಡಿತು: ಈಗ ಯೆರೂಸಲೇಮಿನಲ್ಲಿದ್ದ ದೊಡ್ಡ ಸಭೆಯ ರಚನೆಯು ಒಡೆಯಲ್ಪಡುವುದು ಮತ್ತು ವಿಶ್ವಾಸಿಗಳು ಒಬ್ಬರಿಂದೊಬ್ಬರು ಪ್ರತ್ಯೇಕಿಸಲ್ಪಟ್ಟು ಸುವಾರ್ತೆಯನ್ನು ಸಾರುವುದರ ಬಗ್ಗೆ ಭರವಸೆಯನ್ನು ಕಳೆದುಕೊಳ್ಳುವರು!

  ಆದರೆ ನಿಜವಾಗಲೂ ಹಾಗೆ ಆಯಿತೋ?

3) ಹಾಗಾದರೆ ನಿಜವಾಗಲೂ ***ಆಗಿದ್ದೇನು***?

- ವಿಶ್ವಾಸಿಗಳು ನಿರುತ್ಸಾಹಗೊಳ್ಳಲೂ ಇಲ್ಲ ಅಥವಾ ನಿಶ್ಯಬ್ಧರಾಗಲೂ ಇಲ್ಲ! ಅವರು ಯೆರೂಸಲೇಮನ್ನು ಬಿಟ್ಟು ಹೊರಟಾಗ ದೇವರು ಅವರೊಂದಿಗೆ ಹೋದನು. ಪವಿತ್ರಾತ್ಮನ ಬಲವು ಅವರೊಂದಿಗಿತ್ತು.

- ವಿಶ್ವಾಸಿಗಳು ಹೋದಲ್ಲೆಲ್ಲಾ ಸುವಾರ್ತೆಯನ್ನು ಸಾರಿದರು! ಪ್ರತಿಯೊಂದು ಸ್ಥಳಗಳಲ್ಲಿ ಹೊಸ ಸಭೆಗಳು ಸ್ಥಾಪಿಸಲ್ಪಟ್ಟವು.

- ಸೌಲನು ದಮಸ್ಕದ ರಸ್ತೆಯಲ್ಲಿ ಯೇಸು ಕ್ರಿಸ್ತನನ್ನು ಸಂಧಿಸಿದನು (ಅಧ್ಯಾಯ 9) ಮತ್ತು ಆತನು ದೇವರ ಒಬ್ಬ 'ಛಲವುಳ್ಳ ಕಾರ್ಯಕರ್ತನಾದನು'. ಆತನು ಪೌಲನಾಗಿ ರೋಮ್ ಸಾಮ್ರಾಜ್ಯದಾದ್ಯಂತ ಸುವಾರ್ತೆಯನ್ನು ಸಾರಿದನು ಮತ್ತು ಅನೇಕ ಪ್ರಾಂತ್ಯಗಳಲ್ಲಿ ಸಭೆಗಳನ್ನು ಸ್ಥಾಪಿಸಿದನು. ಆತನು ಪೌಲನಾಗಿ ನಮ್ಮ ಬಳಿಯಲ್ಲಿರುವ ಹೊಸ ಒಡಂಬಡಿಕೆಯಲ್ಲಿನ 13 ಪತ್ರಿಕೆಗಳನ್ನು ಬರೆದು ಒಬ್ಬ ದೊಡ್ಡ ದೈವಶಾಸ್ತ್ರಜ್ಞನಾದನು.

- ಈಗ ವಿಶ್ವಾಸಿಗಳು ಒಂದು 'ಹೊಸ"ಚದುರಿಸಲ್ಪಟ್ಟ ಜನರಾದರು' – ಈ ಪ್ರಪಂಚದ ರಾಷ್ಟ್ರಗಳ ಮಧ್ಯದಲ್ಲಿ ದೇವರ ಹೊಸ ಜನರಾದರು. ಯೆರೂಸಲೇಮಿನ ಸಭೆಯಲ್ಲಿನ ಹಿಂಸೆ ಮತ್ತು ಯೆರೂಸಲೇಮ್ ಸಭೆಯಲ್ಲಿನ ಚದುರಿಸಲ್ಪಡುವಿಕೆಯು ವಿಶ್ವವ್ಯಾಪ್ತಿ ಸಭೆಯ ಪ್ರಾರಂಭವಾಗಿತ್ತು.

4) ಉಪಸಂಹಾರ: ಸೈತಾನನು ಎಂದಿಗೂ ದೇವರ ಮತ್ತು ಆತನ ಜನರ ಮೇಲೆ ಜಯವನ್ನು ಸಾಧಿಸಲು ಸಾಧ್ಯವಿಲ್ಲ. ಸೈತಾನನು ಜಯಿಸುತ್ತಿರುವಂತೆ ಕಂಡಾಗ್ಯೂ, ಭಾರತದಲ್ಲಿರುವ ಸಭೆಯು ಅಸಾಧ್ಯವಾದ ಪರಿಸ್ಥಿತಿಯನ್ನು ಎದುರಿಸುವ ರೀತಿಯಾಗಿ ಕಂಡಾಗ್ಯೂ – ಸೈತಾನನು ಕೊನೆಯಲ್ಲಿ ಸೋಲುವನೆಂದು ನಮಗೆ ಗೊತ್ತಿದೆ. ದೇವರು ಮತ್ತು ಆತನ ನಿತ್ಯ ರಾಜ್ಯವು ಕೊನೆಯಲ್ಲಿ ಜಯಶಾಲಿಯಾಗುವುದು.

# ಪಾಠ 20. ಮಂತ್ರವಾದಿ ಸೀಮೋನ, 8:9–25

## ಅ) ವಾಕ್ಯಭಾಗ

ಫಿಲಿಪ್ಪನು ಸಮಾರ್ಯ ಪಟ್ಟಣದಲ್ಲಿ ಸೇವೆ ಮಾಡುತ್ತಿರುವಾಗ ಸೀಮೋನ ಎಂಬ ಒಬ್ಬ ಮಂತ್ರವಾದಿಯು ದೇವರಾಜ್ಯದ ಕುರಿತಾದ ಶುಭಸಂದೇಶವನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದನು. ಆತನು ಫಿಲಿಪ್ಪನನ್ನು ಬಹಳವಾಗಿ ಮೆಚ್ಚುವವನಾದನು. ಅಪೊಸ್ತಲರಾದ ಪೇತ್ರ ಮತ್ತು ಯೋಹಾನರು ಯೆರೂಸಲೇಮಿನಿಂದ ಸಮಾರ್ಯಕ್ಕೆ ಬಂದಾಗ, ಅವರು ಹೊಸ ವಿಶ್ವಾಸಿಗಳ ಮೇಲೆ ತಮ್ಮ ಕೈಗಳನ್ನು ಇಟ್ಟು ಪ್ರಾರ್ಥಿಸಿದರು ಆಗ ಅವರೆಲ್ಲರೂ ಪವಿತ್ರಾತ್ಮನನ್ನು ಹೊಂದಿಕೊಂಡರು. ಇದರಿಂದ ಪ್ರಭಾವಿತನಾದ ಮಂತ್ರವಾದಿ ಸಿಮೋನನು ಅಪೋಸ್ತಲರಿಗೆ ಹಣ ಕೊಟ್ಟು ತನಗೂ ಇಂತಹ ಸಾಮರ್ಥ್ಯ ಕೊಡಬೇಕೆಂಬುದಾಗಿ ಕೇಳಿಕೊಂಡನು. ಪೇತ್ರನು ಸೀಮೋನನನ್ನು ಕಟುವಾಗಿ ಗದರಿಸಿದನು. ಸಮಾರ್ಯದಲ್ಲಿ ಕೆಲವು ದಿನಗಳವರೆಗೆ ಸೇವೆಯನ್ನು ಮಾಡಿ ಪೇತ್ರ ಮತ್ತು ಯೋಹಾನರು ಯೆರೂಸಲೇಮಿಗೆ ಹಿಂತಿರುಗಿದರು.

## ಆ) ಟಿಪ್ಪಣಿ

*ಸೀಮೋನ* (ವ. 9): ಆದಿ ಕ್ರೈಸ್ತೀಯ ಸಾಹಿತ್ಯದಲ್ಲಿ ಈ ಸೀಮೋನನು 'ಮಂತ್ರವಾದಿ ಸೀಮೋನ' ಎಂಬುದಾಗಿ ಕರೆಯಲ್ಪಟ್ಟಿದ್ದಾನೆ, ಅದರಲ್ಲಿ ಆತನು ಜ್ಞಾನಬೋಧನೆಯ 'ಪಿತಾಮಹಾ'ನೆಂದೂ ಮತ್ತು ದುರ್ಬೋಧಕನೆಂದೂ ವರ್ಣಿಸಲ್ಪಟ್ಟಿದ್ದಾನೆ.

*ಅವರಲ್ಲಿ ಯಾರ ಮೇಲೆಯೂ ಪವಿತ್ರಾತ್ಮ ಬಂದಿರಲಿಲ್ಲ* (ವ. 16): ಸಮಾರ್ಯದ ವಿಶ್ವಾಸಿಗಳು ಫಿಲಿಪ್ಪನು ಸಾರಿದ ಸುವಾರ್ತೆಯ ಸಂದೇಶವನ್ನು ನಂಬಿದ್ದರು ಮತ್ತು ಅವರು ಫಿಲಿಪ್ಪನಿಂದ ದೀಕ್ಷಾಸ್ನಾನವನ್ನು ಸಹ ಮಾಡಿಸಿಕೊಂಡಿದ್ದರು. ಅದರ ಅರ್ಥ, ಅವರು 'ಆತ್ಮನಿಂದ ಹುಟ್ಟಿದವರಾಗಿದ್ದರು' (ಯೋಹಾನ 3:5–8) ಮತ್ತು ಅವರು ಕ್ರಿಸ್ತನಿಗೆ ಸಂಬಂಧಪಟ್ಟವರಾಗಿದ್ದರು. ಹಾಗಾಗಿ ಅವರು ಈಗಾಗಲೇ 'ಕ್ರಿಸ್ತನ ಆತ್ಮವನ್ನು'" ಹೊಂದಿದ್ದರು (ರೋಮಾ. 8:9). ಆದರೆ ಪೇತ್ರ ಮತ್ತು ಯೋಹಾನರು ಬರುವುದಕ್ಕಿಂತ ಮುಂಚೆ ಅವರು ನೀರಿನಿಂದ ದೀಕ್ಷಾಸ್ನಾನ ಹೊಂದಿದ್ದರೇ ಹೊರತು 'ಪವಿತ್ರಾತ್ಮನಿಂದ ದೀಕ್ಷಾಸ್ನಾನ' ಹೊಂದಿರಲಿಲ್ಲ (ಅ. ಕೃ. 1:5; 11:16). ಬೇರೆ ಪದಗಳಲ್ಲಿ ಹೇಳಬೇಕಾದರೆ, ಅವರು ಅದುವರೆಗೆ 'ಪವಿತ್ರಾತ್ಮನಿಂದ ತುಂಬಲ್ಪಟ್ಟವರಾಗಿರಲಿಲ್ಲ (ಅ. ಕೃ. 2:4, 9:17).

ಈ ವಾಕ್ಯಭಾಗದಲ್ಲಿ ಎರಡು ಪದವಿನ್ಯಾಸವು ಉಪಯೋಗಿಸಲ್ಪಟ್ಟಿದೆ – 'ಪವಿತ್ರಾತ್ಮನು ಒಬ್ಬ ವ್ಯಕ್ತಿಯ ಮೇಲೆ ಬರುತ್ತಾನೆ', ವ. 16" (ಅ. ಕೃ. 1:8; 10:44; 11:15; ಮತ್ತು 19:6 ನ್ನು ಸಹ ನೋಡಿರಿ) ಮತ್ತು 'ಒಬ್ಬ ವ್ಯಕ್ತಿ ಪವಿತ್ರಾತ್ಮನನ್ನು ಹೊಂದಿಕೊಳ್ಳುವನು', ವ. 15 ಮತ್ತು 17 (10:47 ಮತ್ತು ಯೋಹಾನ. 7:39 ನ್ನು ಸಹ ನೋಡಿರಿ, ಅಲ್ಲಿ 'ಹೊಂದುವುದು' ಮತ್ತು 'ಕೊಡಲ್ಪಡುವುದು'' ಎಂಬ ಎರಡೂ ಪದಗಳು ಉಪಯೋಗಿಸಲ್ಪಟ್ಟಿವೆ) – ಇವುಗಳು ಅಪೋಸ್ತಲರ

ಕೃತ್ಯಗಳಲ್ಲಿ ಉಪಯೋಗಿಸಲ್ಪಟ್ಟಿರುವ ಈ ಕೆಳಗಿನ ಮೂರು ಪದವಿನ್ಯಾಸಗಳಿಗೆ ಸಮನಾರ್ಥಕವಾಗಿವೆ. 'ಒಬ್ಬ ವ್ಯಕ್ತಿಯು ಪವಿತ್ರಾತ್ಮನಿಂದ ದೀಕ್ಷಾಸ್ನಾನ ಹೊಂದುವನು' ಅ. ಕೃ. 1:5; 'ಒಬ್ಬ ವ್ಯಕ್ತಿಯು ಪವಿತ್ರಾತ್ಮನಿಂದ ತುಂಬಲ್ಪಡುವುದು', ಅ. ಕೃ. 1:5; 'ಒಬ್ಬ ವ್ಯಕ್ತಿಯು ಪವಿತ್ರಾತ್ಮನಿಂದ ತುಂಬಲ್ಪಡುವನು' ಅ. ಕೃ. 9:17; ಮತ್ತು 'ಒಬ್ಬ ವ್ಯಕ್ತಿಯ ಮೇಲೆ ಪವಿತ್ರಾತ್ಮನು ಸುರಿಸಲ್ಪಡುವನು' ಅ. ಕೃ. 10:45 (2:33 ನ್ನು ಸಹ ನೋಡಿರಿ).

ಕೊನೆಯದಾಗಿ, 'ಪವಿತ್ರಾತ್ಮನಿಂದ ತುಂಬಲ್ಪಡುವುದು' ಎಂಬ ಪದವಿನ್ಯಾಸವು ಅಪೊಸ್ತಲರ ಕೃತ್ಯಗಳಲ್ಲಿ ಸಾಮಾನ್ಯ ರೀತಿಯಲ್ಲೂ ಬಳಸಲಾಗಿದೆ ಎಂಬುದನ್ನು ನಾವು ಗಮನಿಸಬೇಕು: ಅ. ಕೃ. 4:8 ರಲ್ಲಿ ಪೇತ್ರನು ನ್ಯಾಯಸಭೆಯವರನ್ನು ಉದ್ದೇಶಿಸಿ ಮಾತನಾಡಿದಾಗ 'ಪವಿತ್ರಾತ್ಮನಿಂದ ತುಂಬಲ್ಪಟ್ಟವನಾಗಿದ್ದನು'. ಯೆರೂಸಲೇಮಿನಲ್ಲಿ ವಿಶ್ವಾಸಿಗಳು ತಮ್ಮ ಪ್ರಾರ್ಥನೆಯನ್ನು ಮುಗಿಸಿದಾಗ 'ಅವರೆಲ್ಲರೂ ಪವಿತ್ರಾತ್ಮನಿಂದ ತುಂಬಲ್ಪಟ್ಟವರಾಗಿ ಧೈರ್ಯದಿಂದ ದೇವರ ವಾಕ್ಯವನ್ನು ಸಾರತೊಡಗಿದರು' (4:31). ಪೌಲನು ಸೈಪ್ರೊಸ್‌ನಲ್ಲಿ ಎಲುಮನೆಂಬ ಮಂತ್ರವಾದಿಯನ್ನು ಗದರಿಸಿದಾಗ 'ಪವಿತ್ರಾತ್ಮನಿಂದ ತುಂಬಲ್ಪಟ್ಟವನಾಗಿದ್ದನು' (13:9). ಪಿಸಿದಿಯದ ಅಂತಿಯೋಕ್ಯದಲ್ಲಿ 'ಶಿಷ್ಯರು ಬಹಳ ಸಂತೋಷದಿಂದಲೂ ಪವಿತ್ರಾತ್ಮನಿಂದಲೂ ತುಂಬಿದವರಾದರು' (13:52).

## ಇ) ಪಠ್ಯದ ಪ್ರಶ್ನೆಗಳು

1. ಸೀಮೋನನು ತಾನೊಬ್ಬ ಮಹಾವ್ಯಕ್ತಿಯೆಂದು ಯಾಕೆ ಹೊಗಳಿಕೊಳ್ಳುತ್ತಿದ್ದನು?
2. ಸೀಮೋನನು ಫಿಲಿಪ್ಪನನ್ನು ಎಲ್ಲಾ ಕಡೆಯಲ್ಲೂ ಯಾಕೆ ಹಿಂಬಾಲಿಸಿದನು?
3. ಸಮಾರ್ಯದ ವಿಶ್ವಾಸಿಗಳ ಮೇಲೆ ಪೇತ್ರ ಮತ್ತು ಯೋಹಾನರು ತಮ್ಮ ಕೈಗಳನ್ನು ಇಟ್ಟಾಗ ಏನು ಸಂಭವಿಸಿತು?
4. ಸೀಮೋನನು ಅಪೊಸ್ತಲರಿಗೆ ಹಣವನ್ನು ಯಾಕೆ ಕೊಡಲು ಹೋದನು?
5. ಈ ಕಥೆಯಲ್ಲಿ ಸೀಮೋನನು ಅಪೊಸ್ತಲರಿಗೆ ಕೊನೆಯದಾಗಿ ಸಲ್ಲಿಸಿದ ಬೇಡಿಕೆ ಏನು?
6. ಪೇತ್ರ ಮತ್ತು ಯೋಹಾನರು ಸಮಾರ್ಯವನ್ನು ಬಿಟ್ಟು ಯೆರೂಸಲೇಮಿಗೆ ಹಿಂತಿರುಗುವುದಕ್ಕಿಂತ ಮುಂಚೆ ಏನು ಮಾಡಿದರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಪೇತ್ರ ಮತ್ತು ಯೋಹಾನರನ್ನು ಯಾಕೆ ಸಮಾರ್ಯಕ್ಕೆ ಕಳುಹಿಸಿದರೆಂದು ನೀವು ಭಾವಿಸುತ್ತೀರಿ?
2. ಸಮಾರ್ಯದ ವಿಶ್ವಾಸಿಗಳಿಗೆ ಪವಿತ್ರಾತ್ಮನು ಕೊಡಲ್ಪಟ್ಟಾಗ ಸೀಮೋನನನು ವಾಸ್ತವವಾಗಿ ಏನು ನೋಡಿದನೆಂಬುದರ ಕುರಿತು ಲೂಕನು ಏನನ್ನೂ ತಿಳಿಸುತ್ತಿಲ್ಲ (ವ. 18). ಸೀಮೋನನು ಏನು ನೋಡಿರಬಹುದೆಂದು ನೀವು ಭಾವಿಸುತ್ತೀರಿ? ನಿಮ್ಮ ಉತ್ತರವನ್ನು ವಿವರಿಸಿರಿ!

3. ಅಪೊಸ್ತಲರ ಕೃತ್ಯಗಳಲ್ಲಿ ಲೂಕನು ಬಳಸುವ 'ಪವಿತ್ರಾತ್ಮನ ದೀಕ್ಷಾಸ್ನಾನದ' ಕುರಿತಾದ ಐದು ಪದವಿನ್ಯಾಸಗಳನ್ನು ಓದಿರಿ. (ಮೇಲಿರುವ ಟಿಪ್ಪಣಿಗಳನ್ನು ನೋಡಿರಿ)
4. ಸೀಮೋನನ ನಂಬಿಕೆಯು ನಿಜವಾದದ್ದೋ? ಇದರ ಪರವಾಗಿ ಈ ವಾಕ್ಯಭಾಗದಲ್ಲಿ ಏನು ಹೇಳಲ್ಪಟ್ಟಿದೆ? ಇದರ ವಿರೋಧವಾಗಿ ಏನು ಹೇಳಲ್ಪಟ್ಟಿದೆ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಬ್ರದರನ್ ಮತ್ತು ಬ್ಯಾಪ್ಟಿಸ್ಟ್ ವಿಶ್ವಾಸಿಗಳ ಕುರಿತು ಕೆಲವು ಪೆಂತಕೋಸ್ತ್ ವಿಶ್ವಾಸಿಗಳು ಈ ರೀತಿಯಾಗಿ ಹೇಳುವ ಪ್ರವೃತ್ತಿಲ್ಲಿದ್ದಾರೆ: 'ಅವರು ಪವಿತ್ರಾತ್ಮನನ್ನು ನಂಬುವುದಿಲ್ಲ! ಪೆಂತಕೋಸ್ತರಾದ ನಾವು ಮಾತ್ರ ಪವಿತ್ರಾತ್ಮನನ್ನು ನಂಬುತ್ತೇವೆ!'

1. ಸ್ವತಃ ನೀವು ಅಥವಾ ನಿಮ್ಮ ಸಭೆಯಲ್ಲಿರುವ ಜನರು ಈ ರೀತಿಯಾಗಿ ಆಲೋಚಿಸುತ್ತಾರೋ ಅಥವಾ ಹೇಳುತ್ತಾರೋ?
2. ಈ ವಾಕ್ಯಭಾಗದಲ್ಲಿರುವ ದೇವರ ವಾಕ್ಯದ ನಮ್ಮ ಅಧ್ಯಯನದ ಬೆಳಕಿನಲ್ಲಿ ಈ ರೀತಿಯಾಗಿ ಮಾತನಾಡುವುದು ಸೂಕ್ತವೆಂದು ನೀವು ಆಲೋಚಿಸುತ್ತೀರೋ? ಯಾಕೆ – ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

ಅ. ಕೃ. 8:1–25 ರ ಆಧಾರದ ಮೇಲೆ 'ಫಿಲಿಪ್ಪನು ಸಮಾರ್ಯದಲ್ಲಿ' ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಈ ಹೊರರೇಖೆಯನ್ನು ನೀವು ಉಪಯೋಗಿಸಬಹುದು:

1. ಫಿಲಿಪ್ಪನ ಹಿನ್ನಲೆ (ಅ. ಕೃ. :1–6) ಮತ್ತು ಆತನು ಯಾಕೆ ಯೆರೂಸಲೇಮನ್ನು ಬಿಟ್ಟನು (8:1)
2. ಸಮಾರ್ಯದಲ್ಲಿನ ಒಂದು ಪಟ್ಟಣದಲ್ಲಿ ಫಿಲಿಪ್ಪನ ಸೇವೆ
   1) ಆತನು ಕ್ರಿಸ್ತನನ್ನು ಸಾರಿದನು (ವ. 5)
   2) ಆತನು ಅದ್ಭುತ ಮತ್ತು ಸೂಚಕ ಕಾರ್ಯಗಳನ್ನು ಮಾಡಿದನು (ವ. 6–7)
3. ಫಿಲಿಪ್ಪನ ಸೇವೆಯ ಫಲಗಳು: ಜನರು ಸಂತೋಷಪಟ್ಟರು (ವ. 8). ಯಾಕೆ?
   1) ಅವರು ಅಶುದ್ಧಾತ್ಮಗಳಿಂದ ಬಿಡುಗಡೆ ಹೊಂದಿದರು (ವ. 7)
   2) ಅವರು ಸೌಖ್ಯ ಹೊಂದಿದರು (ವ. 7)
   3) ಅವರು ದೇವರ ರಾಜ್ಯದ ಕುರಿತಾದ ಸುವಾರ್ತಾ ಸಂದೇಶವನ್ನು ಅಂಗೀಕರಿಸಿದರು (ವ. 12)
   4) ಅವರು ಯೇಸುವಿನ ನಾಮದಲ್ಲಿ ನಂಬಿಕೆಯಿಟ್ಟು ರಕ್ಷಣೆ ಹೊಂದಿದರು (ವ. 12). ಇದರ ಪರಿಣಾಮವಾಗಿ:

- ಜನರು ದೀಕ್ಷಾಸ್ನಾನವನ್ನು ಹೊಂದಿದರು (ವ. 12)
- ಒಬ್ಬ ಪ್ರಖ್ಯಾತಿಯುಳ್ಳ ವ್ಯಕ್ತಿಯಾಗಿದ್ದಂತಹ ಮಂತ್ರವಾದಿಯಾದ ಸೀಮೋನನು ಸಹ ನಂಬಿಕೆ ಇಟ್ಟು ದೀಕ್ಷಾಸ್ನಾನ ಮಾಡಿಸಿಕೊಂಡು ಫಿಲಿಪ್ಪನನ್ನು ಹಿಂಬಾಲಿಸಿದನು (ವ. 9–13)

4. ಫಿಲಿಪ್ಪನ ಸೇವೆಯಲ್ಲಿದ್ದ ಬಲಹೀನತೆಗಳು:

   1) ವಿಶ್ವಾಸಿಗಳು ಪವಿತ್ರಾತ್ಮನಿಂದ ದೀಕ್ಷಾಸ್ನಾನವನ್ನು ಹೊಂದಿರಲಿಲ್ಲ (ವ. 15–16)

   2) ಮಂತ್ರವಾದಿಯಾದ ಸೀಮೋನನ ಜೀವಿತವು ಪರಿವರ್ತನೆಯಾಗಲಿಲ್ಲ. ಆತನು ಇನ್ನೂ ಪ್ರಾಪಂಚಿಕ ಮನಸ್ಸನ್ನು ಹೊಂದಿದ್ದನು (ವ. 13,18–23)

5. ಫಿಲಿಪ್ಪನ ಸೇವೆಯಲ್ಲಿದ್ದ ಬಲಹೀನತೆಗಳಿಗೆ ಪರಿಹಾರ: ಅನುಭವಸ್ಥರಾದ ಅಪೋಸ್ತಲರು (ಪೇತ್ರ ಮತ್ತು ಯೋಹಾನರು) ಆತನ ಸಹಾಯಕ್ಕಾಗಿ ಕಳುಹಿಸಲ್ಪಟ್ಟರು:

   1) ವಿಶ್ವಾಸಿಗಳು ಪವಿತ್ರಾತ್ಮನಿಂದ ದೀಕ್ಷಾಸ್ನಾನವನ್ನು ಹೊಂದುವಂತೆ ಅವರು ಪ್ರಾರ್ಥಿಸಿದರು (ವ. 15–18)

   2) ಅವರು ಮಂತ್ರವಾದಿಯಾದ ಸೀಮೋನನ ಸಮಸ್ಯೆಯನ್ನು ಬಗೆಹರಿಸಿದರು (ವ. 18–24)

   3) ಅವರು ಬೋಧಿಸುವುದರೊಂದಿಗೂ ಮತ್ತು ಉಪದೇಶಿಸುವುದರೊಂದಿಗೂ ಫಿಲಿಪ್ಪನ ಸೇವೆಯನ್ನು ವಿಸ್ತರಿಸಿದರು (ವ. 23)

   4) ಅವರು ಅದೇ ಪ್ರಾಂತ್ಯದಲ್ಲಿದ್ದ ಹೊಸ ಸ್ಥಳಗಳಲ್ಲಿ ಸುವಾರ್ತೆಯನ್ನು ಸಾರಿದರು (ವ. 25)

6. ನಮ್ಮ ಸ್ವಂತ ಸೇವೆಗಾಗಿ ಫಿಲಿಪ್ಪನ ಸೇವೆಯಿಂದ ನಾವು ಏನನ್ನು ಕಲಿಯಬಹುದು?

# ಪಾಠ 21. ಫಿಲಿಪ್ಪ ಹಾಗೂ ಇಥಿಯೋಪ್ಯದವನು, 8:26–40

## ಅ) ವಾಕ್ಯಭಾಗ

ದೇವದೂತನೊಬ್ಬನು ಫಿಲಿಪ್ಪನಿಗೆ ಯೆರೂಸಲೇಮಿನಿಂದ ಗಾಜಕ್ಕೆ ಹೋಗುವ ಅರಣ್ಯ ಮಾರ್ಗದಲ್ಲಿ ಹೋಗಬೇಕೆಂದು ಹೇಳಿದನು. ಅಲ್ಲಿ ಆತನು ಇಥಿಯೋಪ್ಯದ ಕಂಚುಕಿಯನ್ನು ಭೇಟಿಯಾದನು, ಆ ಕಂಚುಕಿಯು ಒಬ್ಬ ಹಣಕಾಸಿನ ಮುಖ್ಯ ಅಧಿಕಾರಿಯಾಗಿದ್ದು ಯೆರೂಸಲೇಮಿನಿಂದ ತನ್ನ ಮನೆಗೆ ರಥದಲ್ಲಿ ಹಿಂತಿರುಗುತ್ತಿದ್ದನು. ಆತನು ಯೆರೂಸಲೇಮಿನ ದೇವಾಲಯದಲ್ಲಿ ದೇವರನ್ನು ಆರಾಧಿಸಿದ್ದನು. ಆತನು ಪ್ರಯಾಣಿಸುತ್ತಿದ್ದಾಗ ಹಳೆ ಒಡಂಬಡಿಕೆಯಿಂದ ಯೆಶಾಯನ ಪ್ರವಾದನಾ ಗ್ರಂಥವನ್ನು ಓದುತ್ತಿದ್ದನು. 'ನೀನು ಓದುತ್ತಿರುವುದು ನಿನಗೆ ಅರ್ಥವಾಗುತ್ತಿದೆಯೇ?' ಎಂದು ಫಿಲಿಪ್ಪನು ಕೇಳಿದನು. ನಂತರ ಇಥಿಯೋಪ್ಯದವನು ಫಿಲಿಪ್ಪನಿಗೆ ತನ್ನ ರಥದಲ್ಲಿ ಕುಳಿತುಕೊಳ್ಳಲು ಆಹ್ವಾನಿಸಿ ಯೆಶಾಯನ ಗ್ರಂಥದ 53 ನೇ ಅಧ್ಯಾಯದ ವಾಕ್ಯಭಾಗವನ್ನು ವಿವರಿಸುವಂತೆ ಕೇಳಿಕೊಂಡನು. ಫಿಲಿಪ್ಪನು ಆ ವಾಕ್ಯಭಾಗದಿಂದ ಪ್ರಾರಂಭಿಸಿ ಇಥಿಯೋಪ್ಯದವನಿಗೆ ಯೇಸು ಕ್ರಿಸ್ತನ ಕುರಿತಾದ ಸುವಾರ್ತೆಯನ್ನು ಸಾರಿದನು. ಅವರು ನೀರು ಇರುವ ಸ್ಥಳಕ್ಕೆ ಬಂದಾಗ ಇಥಿಯೋಪ್ಯದವನು ತಾನು ದೀಕ್ಷಾಸ್ನಾನವನ್ನು ಹೊಂದಬಹುದೋ ಎಂದು ಕೇಳಿಕೊಂಡನು. ಫಿಲಿಪ್ಪನು ಆತನಿಗೆ ದೀಕ್ಷಾಸ್ನಾನವನ್ನು ಮಾಡಿಸಿದನು. ಇಥಿಯೋಪ್ಯದವನು ಸಂತೋಷದಿಂದ ತನ್ನ ಪ್ರಯಾಣವನ್ನು ಮುಂದುವರೆಸಿದನು. ಫಿಲಿಪ್ಪನು ಅನೇಕ ಸ್ಥಳಗಳಲ್ಲಿ ಸುವಾರ್ತೆಯನ್ನು ಸಾರಿ ನಂತರ ಸೆಜರೇಯಕ್ಕೆ ಹೋದನು.

## ಆ) ಟಿಪ್ಪಣಿ

*ದೇವದೂತನೊಬ್ಬ* (ವ. 26): ಅಪೋಸ್ತಲರ ಕೃತ್ಯಗಳಲ್ಲಿ ಒಬ್ಬ ವ್ಯಕ್ತಿಗೆ ದೇವದೂತನೊಬ್ಬನು ಪ್ರತ್ಯಕ್ಷನಾಗುತ್ತಿರುವುದು ಇದು ಎರಡನೆಯ ಬಾರಿಯಾಗಿದೆ. ಮೊದಲನೆಯ ಬಾರಿಯು 5:19 ರಲ್ಲಿ ಯೆರೂಸಲೇಮಿನ ಸೆರೆಮನೆಯಲ್ಲಿದ್ದ ಅಪೋಸ್ತಲರನ್ನು ದೇವದೂತನು ಬಿಡುಗಡೆಗೊಳಿಸಿದಾಗ ನಡೆದಿತ್ತು.

*ಅದು ಯೆರೂಸಲೇಮಿನಿಂದ ಗಾಜಕ್ಕೆ ಹೋಗುವ ಮಾರ್ಗ* (ವ. 26): ಫಿಲಿಷ್ಟಿಯರ ಐದು ಪಟ್ಟಣಗಳಲ್ಲಿ ಗಾಜವು ದಕ್ಷಿಣದ ತುದಿಯಲ್ಲಿತ್ತು. ಯೆರೂಸಲೇಮಿನಿಂದ ಗಾಜಕ್ಕೆ 100 ಕಿ.ಮೀ. ದೂರದ ಅಂತರವಿತ್ತು. ಈ ರಸ್ತೆಯು ನಿರಂತರವಾಗಿ ಉಪಯೋಗಿಸಲ್ಪಡುತ್ತಿತ್ತು, ಯಾಕೆಂದರೆ ಅದು ದಕ್ಷಿಣಕ್ಕೆ ಈಜಿಪ್ಟಿಗೆ ಮುಂದುವರೆಯುತ್ತಾ ಆಫ್ರಿಕಾ ಖಂಡದ ಉಳಿದ ಭಾಗಕ್ಕೂ ತಲುಪುತ್ತಿತ್ತು.

*ಇಥಿಯೋಪ್ಯದ ಕಂಚುಕಿ* (ವ. 27): ಇಥಿಯೋಪ್ಯವು ಆ ದಿನಗಳಲ್ಲಿ ಐಗುಪ್ತ್ಯದ ದಕ್ಷಿಣ ಪ್ರಾಂತ್ಯದ ಹೆಸರಾಗಿತ್ತು ಮತ್ತು ಅದು ಆಧುನಿಕ ಸುಡಾನ್‌ನನ್ನೂ ಮತ್ತು ಬಹುಶಃ ಆಧುನಿಕ ಇಥಿಯೋಪ್ಯದ ಭಾಗಗಳನ್ನೂ ಒಳಗೊಂಡಿತ್ತು. ನಿಯರ್ ಈಸ್ಟರ್ನ್‌ನ ಅನೇಕ ದೇಶಗಳಲ್ಲಿ ನಪುಂಸಕರನ್ನಾಗಿ

ಮಾಡುವುದು ಸಾಮಾನ್ಯವಾಗಿತ್ತು (ಕನ್ನಡ ತರ್ಜುಮೆಯು 'ಕಂಚುಕಿ' ಎಂಬ ಪದವನ್ನು ಬಳಸುತ್ತದೆ) ಮತ್ತು ಕಂಚುಕಿಯರು ಅಂತಃಪುರಗಳ ಮತ್ತು ಅಧಿಪತಿಗಳ ನಿಕಟ ಸ್ನೇಹಿತರುಗಳ ಮೇಲ್ವಿಚಾರಕರಾಗಿದ್ದರು. ಅವರು ಆಗಾಗ್ಗೆ ಸರ್ಕಾರದ ಉನ್ನತ ಹುದ್ದೆಗಳನ್ನು ಹೊಂದುತ್ತಿದ್ದರು. ಹಳೆ ಒಡಂಬಡಿಕೆಯು ಮನುಷ್ಯರ ಅಥವಾ ಪ್ರಾಣಿಗಳ ಜನನ ಇಂದ್ರಿಯವನ್ನು ಕತ್ತರಿಸುವುದನ್ನು ನಿಷೇಧಿಸುತ್ತದೆ (ಧರ್ಮೋ. 23:1). ಆದರೆ ದೇವರ ಮುಂಬರಲಿರುವ ರಾಜ್ಯದಲ್ಲಿ ನಪುಂಸಕರು ಸಹ ಸೇರಿಕೊಳ್ಳುವರು ಎಂದು ಯೆಶಾಯನು ಪ್ರವಾದಿಸಿದನು (ಯೆಶಾ. 56:3–5). ನಂಬಿ ದೀಕ್ಷಾಸ್ನಾನವನ್ನು ಹೊಂದಿದ ಅ. ಕೃ. 8 ರಲ್ಲಿರುವ ಈ ಇಥಿಯೋಪ್ಯದ ಕಂಚುಕಿಯ ಕಥೆಯು ಈ ಪ್ರವಾದನೆಯ ನೆರವೇರುವಿಕೆಯಾಗಿದೆ.

*ಇಥಿಯೋಪ್ಯದ ರಾಣಿ ಕಂದಾಕೆಯು* (ವ. 27): *ಕಂದಾಕೆ* ಎನ್ನುವುದು ವೈಯಕ್ತಿಕ ಹೆಸರಲ್ಲ, ಬದಲಾಗಿ ಇಥಿಯೋಪ್ಯದ ತಾಯಿ ರಾಣಿಯ ಸಾಂಪ್ರದಾಯಿಕವಾದ ಶೀರ್ಷಿಕೆಯಾಗಿದೆ. ಆಕೆಯು ಧಾರ್ಮಿಕ ವಿಚಾರಗಳಲ್ಲಿ ತಮ್ಮನ್ನೇ ತಾವು ಸಮರ್ಪಿಸಿಕೊಂಡು ಆಳುತ್ತಿದ್ದ ಅರಸರುಗಳ ಜಾತ್ಯಾತೀತ ಕರ್ತವ್ಯಗಳ ಕುರಿತು ಜವಾಬ್ದಾರಿ ಹೊತ್ತವಳಾಗಿದ್ದಳು.

*ಈ ಮನುಷ್ಯನು ಆರಾಧನೆಗಾಗಿ ಯೆರೂಸಲೇಮಿಗೆ ಹೋಗಿದ್ದನು* (ವ. 27): ಇಥಿಯೋಪ್ಯದ ಕಂಚುಕಿಯ ಧಾರ್ಮಿಕ ನಿಲುವಿನ ಬಗ್ಗೆ ಸತ್ಯವೇದ ಶಾಸ್ತ್ರಜ್ಞರು ಏಕಮತವುಳ್ಳವರಾಗಿಲ್ಲ. ಜಾನ್ ಸ್ಟಾಟ್‌ರವರು ಹೇಳುವುದೇನೆಂದರೆ, 'ಆತನು ಅನ್ಯನಾಗಿರುವುದು ಅಸಂಭವನೀಯವಾಗಿ ತೋರುತ್ತದೆ, ಯಾಕೆಂದರೆ ಲೂಕನು ಆತನನ್ನು ರಕ್ಷಣೆ ಹೊಂದಿದ ಮೊದಲ ಅನ್ಯನೆಂದು ಬಿಂಬಿಸುತ್ತಿಲ್ಲ; ಆ ಸ್ಥಾನವನ್ನು ಕೊರ್ನೇಲ್ಯನಿಗಾಗಿ ಕಾದಿರಿಸುತ್ತಾನೆ'. ಎನ್.ಐ.ವಿ ಸ್ಟಡಿ ಬೈಬಲ್ ಹೇಳುವುದೇನೆಂದರೆ 'ಇಥಿಯೋಪ್ಯದವನು ಒಬ್ಬ ದೈವಭಯವುಳ್ಳ ಅನ್ಯನಾಗಿದ್ದನು', ಅಂದರೆ ಆತನು ಯೆಹೂದ್ಯ ಧರ್ಮಕ್ಕೆ ಮತಾಂತರವಾದವನಲ್ಲ ಎಂದರ್ಥ.

*ಆ ಮನುಷ್ಯನು ಓದುತ್ತಿರುವುದನ್ನು ಕೇಳಿಸಿಕೊಂಡು* (ವ. 30): ಆ ದಿನಗಳಲ್ಲಿ ಜನರು ಯಾವಾಗಲೂ ಜೋರಾಗಿ ಓದುತ್ತಿದ್ದರು.

ವ. 32–33: ಈ ಉಲ್ಲೇಖನವು ಯೆಶಾಯ 53:7–8 ರಿಂದ ತೆಗೆಯಲ್ಪಟ್ಟಿದೆ. ಇಥಿಯೋಪ್ಯದವನು ಹಳೆ ಒಡಂಬಡಿಕೆಯ ಗ್ರೀಕ್ ಭಾಷಾಂತರದ ಸುರುಳಿಯನ್ನು ಓದುತ್ತಿದ್ದನು.

*ಪ್ರವಾದಿ ಇಲ್ಲಿ ಯಾರ ಬಗ್ಗೆ ಮಾತನಾಡುತ್ತಿದ್ದಾನೆ, ತನ್ನನ್ನು ಕುರಿತೋ ಅಥವಾ ಬೇರೆಯವರನ್ನು ಕುರಿತೋ?* (ವ. 34): ಯೆಹೂದ್ಯ ಶಾಸ್ತ್ರಜ್ಞರು ಈಗಾಗಲೇ ಈ ಪ್ರಶ್ನೆಯನ್ನು ಮೂರು ರೀತಿಯಲ್ಲಿ ಉತ್ತರಿಸಿದ್ದರು. ಕೆಲವರು ಆ ಸೇವಕನು ಇಸ್ರಾಯೇಲ್ ರಾಷ್ಟ್ರವೆಂದು ಘೋಷಿಸಿದರು. ಇನ್ನೂ ಕೆಲವರು ಆ ಸೇವಕನು ಯೆಶಾಯನೆಂದು ಘೋಷಿಸಿದರು. ಇನ್ನೂ ಕೆಲವರು ಆತನು ಮೆಸ್ಸೀಯನು ಎಂದು ಘೋಷಿಸಿದರು, ಆದರೆ ಅವರ ಅರ್ಥ ವಿವರಣೆಯು ಮೆಸ್ಸೀಯನು ಶ್ರಮೆಯನ್ನು

ಅನುಭವಿಸುವ ಎಲ್ಲಾ ಸಲಹೆಯನ್ನು ತಪ್ಪಿಸಿಕೊಳ್ಳುತ್ತಿತ್ತು ಯೇಸುವಿನ ಬೋಧನೆಯಲ್ಲಿ ಮಾತ್ರ ಈ ಆಲೋಚನೆಗಳು – ಅಂದರೆ, ಶ್ರಮೆ ಮತ್ತು ರಕ್ಷಕನು – ಎಂಬವುಗಳು ಮೊಟ್ಟಮೊದಲ ಬಾರಿಗೆ ಒಟ್ಟಾಗಿ ಬಂದವು ಮತ್ತು ಯೆಶಾಯ 53 ನೇ ಅಧ್ಯಾಯವು ಶ್ರಮೆಯನ್ನನುಭವಿಸುವ ಮೆಸ್ಸೀಯನ ಕುರಿತಾಗಿದೆ ಎಂದು ಅರ್ಥವಿವರಿಸಲ್ಪಟ್ಟಿತು. (ನೋಡಿರಿ ಲೂಕ. 22:37). ಯೇಸುವಿನಿಂದ ಆತನ ಶಿಷ್ಯರೂ ಆತನ ಮರಣ ಮತ್ತು ಪುನರುತ್ಥಾನವನ್ನು ಕುರಿತು ವಾಕ್ಯಗಳಲ್ಲಿ ಹುಡುಕಬೇಕಾದಾಗ ಈ ವಾಕ್ಯಭಾಗವನ್ನು ಒಂದು ಕೀಲಿ ಕೈಯಾಗಿ ಉಪಯೋಗಿಸಲು ಕಲಿತುಕೊಂಡರು.

*ಅವರು ನೀರಿದ್ದ ಸ್ಥಳಕ್ಕೆ ಬಂದರು* (ವ. 36): ಈ ಅರಣ್ಯ ಮಾರ್ಗದುದ್ದಕ್ಕೂ ಅನೇಕ ನೀರು ಇರುವ ಸ್ಥಳಗಳು ಇದ್ದವು.

ವ. 37 ಇಂಗ್ಲೀಷ್‌ನ NIV ಪಠ್ಯದಲ್ಲಿ (ಕೆಳಗಿನ ಟಿಪ್ಪಣಿಯಲ್ಲಿ ಮಾತ್ರ) ಕಂಡು ಬರುತ್ತದೆ ಮತ್ತು ಕನ್ನಡದ NIBV ಭಾಷಾಂತರದಲ್ಲೂ ಸೇರಿಸಲ್ಪಟ್ಟಿದೆ. ಆದಿಯ ದೀಕ್ಷಾಸ್ನಾನದ ಸೂತ್ರಗಳಾಗಿ ತೋರುವ ಈ ಎರಡು ವಾಕ್ಯಗಳು ಹಳೆಯ ಮತ್ತು ಉತ್ತಮವಾದ ಗ್ರೀಕ್ ಮೂಲಪ್ರತಿಗಳಲ್ಲಿ ಕಂಡು ಬಂದಿಲ್ಲ. ಹಾಗಾಗಿ ಅವುಗಳು ನಂತರದಲ್ಲಿ ಸೇರಿಸಲ್ಪಟ್ಟಿವೆ ಎಂದು ಅನೇಕ ಸತ್ಯವೇದ ಶಾಸ್ತ್ರಜ್ಞರು ಆಲೋಚಿಸುತ್ತಾರೆ.

*ಆಜೋತ* (ವ. 40): ಈ ಪಟ್ಟಣವು ಹಳೆ ಒಡಂಬಡಿಕೆಯಲ್ಲಿ ಆಶ್ದೋದ್ ಎಂದು ಕರೆಯಲ್ಪಟ್ಟಿದೆ ಮತ್ತು ಫಿಲಿಷ್ಟಿಯರ ಐದು ಪಟ್ಟಣಗಳಲ್ಲಿ ಇದು ಒಂದಾಗಿತ್ತು. ಇದು ಗಾಜಾದಿಂದ 30 ಕಿ.ಮೀ. ಮತ್ತು ಸೆಜರೇಯದಿಂದ 100 ಕಿ.ಮೀ. ದೂರವಿತ್ತು.

*ಸೆಜರೇಯ* (ವ. 40): ಈ ಪಟ್ಟಣವು ಹೆರೋದ ಮಹಾರಾಜನಿಂದ ಬಹಳ ಪ್ರಮಾಣದ ವೆಚ್ಚದಿಂದ ಕಟ್ಟಲ್ಪಟ್ಟಿತ್ತು (ಈತನು ಯೇಸು ಕ್ರಿಸ್ತನು ಜನಿಸಿದಾಗ ಪಾಲೆಸ್ತೀನನ್ನು ಆಳುತ್ತಿದ್ದನು) ಮತ್ತು ಚಕ್ರವರ್ತಿ ಔಗುಸ್ತನಿಗೆ ಗೌರವಾರ್ಪಿತವಾಗಿ ಈ ಹೆಸರಿಡಲಾಯಿತು. ಇದು ಮೆಡಿಟೆರೇನಿಯನ್ನಿನ ಕರಾವಳಿಯ ತೀರದಲ್ಲಿ ಸಮಾರ್ಯ ಪಟ್ಟಣದ ಸುಮಾರು 40 ಕಿ.ಮೀ. ವಾಯುವ್ಯಕ್ಕೆ ನೆಲೆಸಿತ್ತು. ಹೆರೋದನು ಅಲ್ಲಿ ಒಂದು ಭವ್ಯ ಬಂದರನ್ನೂ ಸಹ ನಿರ್ಮಿಸಿದನು. ಇದು ರೋಮನ್ ಸೈನಿಕ ದಳದ ಕೇಂದ್ರಸ್ಥಾನವಾಗಿತ್ತು ಮತ್ತು ಅಧಿಪತಿಗಳ ನಿವಾಸ ಸ್ಥಳವಾಗಿತ್ತು. ಇದು ಕೊರ್ನೇಲ್ಯನ ಮನೆಯೂ ಸಹ ಆಗಿತ್ತು. (ಅ. ಕೃ. 10) ಮತ್ತು ಸುವಾರ್ತಿಕನಾದ ಫಿಲಿಪ್ಪನ ಮನೆಯೂ ಸಹ ಆಗಿತ್ತು (21:8–9 ನ್ನೂ ಸಹ ನೋಡಿರಿ). ಪೌಲನು ಇಲ್ಲಿ ಎರಡು ವರ್ಷಗಳ ಕಾಲ ಸೆರೆಮನೆವಾಸಿಯಾಗಿದ್ದು ಇಲ್ಲಿಂದಲೇ ಅಗ್ರಿಪ್ಪ ರಾಜನ ಮುಂದೆ ಬೋಧಿಸಿದನು (23:31–26:32). ಪಾಲೆಸ್ತೀನಿನ ಅರಸರುಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದಲ್ಲಿನ ***'ಹೆರೋದ ರಾಜನ ಕುಟುಂಬ'*** ಎಂಬ ಅಧ್ಯಾಯವನ್ನು ಓದಿರಿ.

## ಇ) ಪಠ್ಯದ ಪ್ರಶ್ನೆಗಳು

1. ಫಿಲಿಪ್ಪನು ಯೆರೂಸಲೇಮಿನ ಮತ್ತು ಗಾಜಾದ ಮಧ್ಯದಲ್ಲಿದ್ದ ಅರಣ್ಯ ರಸ್ತೆಯ ಕಡೆಗೆ ಯಾಕೆ ಹೋದನು?
2. ವ. 27–28 ರಲ್ಲಿ ಇಥಿಯೋಪ್ಯನ ಕುರಿತು ನಾವು ಏನನ್ನು ಕಲಿಯುತ್ತೇವೆ?
3. ಫಿಲಿಪ್ಪನಿಗೆ ರಥದ ಹತ್ತಿರ ಹೋಗಲು ಯಾರು ಹೇಳಿದರು?
4. ಇಥಿಯೋಪ್ಯನು ಯಾವ ಪಠ್ಯವನ್ನು ಓದುತ್ತಿದ್ದನು?
5. ವ. 36 ಮತ್ತು ವ. 38–39 ರಲ್ಲಿ 'ದೀಕ್ಷಾಸ್ನಾನದ ಕೂಟವು' ಹೇಗೆ ವಿವರಿಸಲ್ಪಟ್ಟಿದೆ?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಸಮಾರ್ಯದಲ್ಲಿ ಫಿಲಿಪ್ಪನು ಯಶಸ್ಸಿನ ಸೇವೆಯನ್ನು ಹೊಂದಿದ್ದನು, ಮತ್ತು ತಕ್ಷಣ ದೇವದೂತನು ಆತನಿಗೆ ದೇಶವನ್ನು ಬಿಟ್ಟು, ಪಟ್ಟಣದಿಂದ ಮತ್ತು ಜನರಿಂದ ದೂರವಿರುವ ಅರಣ್ಯ ಪ್ರದೇಶದ ಕಡೆಗೆ ಹೋಗು ಎಂದು ಹೇಳಿದನು. ಆತನಿಗೆ ಹೇಗೆ ಅನ್ನಿಸಿರಬಹುದೆಂದು ನೀವು ಆಲೋಚಿಸುತ್ತೀರಿ? ನಿಮಗೆ ಹೇಗೆ ಅನ್ನಿಸಬಹುದು?
2. ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ಜನರು ಸುವಾರ್ತೆಯನ್ನು ಸ್ವೀಕರಿಸಿದರ ಕುರಿತು ಇರುವ ಇಲ್ಲಿಯವರೆಗಿನ ಎಲ್ಲಾ ಕಥೆಗಳಲ್ಲಿ ಈ ಕಥೆಯು ಯಾವ ರೀತಿಯಲ್ಲಿ ವ್ಯತ್ಯಾಸಕರವಾಗಿದೆ?
3. ಇಥಿಯೋಪ್ಯದ ಕಂಚುಕಿಯ ಧಾರ್ಮಿಕ ನಿಲುವಿನ ಬಗ್ಗೆ ಸತ್ಯವೇದ ಶಾಸ್ತ್ರಜ್ಞರು ಏಕಮತವುಳ್ಳವರಾಗಿಲ್ಲ (ಮೇಲೆ ವ. 27 ರ ಚರ್ಚೆಯನ್ನು ನೋಡಿರಿ). ನಿಮ್ಮ ಆಲೋಚನೆ ಏನು? ನಿಮ್ಮ ಅಭಿಪ್ರಾಯಕ್ಕೆ ಕಾರಣಗಳನ್ನು ಕೊಡಿರಿ!
4. ಈ ಕಥೆಯಲ್ಲಿ ಇಥಿಯೋಪ್ಯದವನಿಗೆ ದೇವರು ಎರಡು ವರಗಳನ್ನು ಕೊಟ್ಟನೆಂದೂ ಮತ್ತು ದೇವರು ಸಭೆಯ ಇತಿಹಾಸದಾದ್ಯಂತ ತನ್ನ ಜನರಿಗೆ ಇದೇ ವರಗಳನ್ನು ಕೊಟ್ಟಿದ್ದಾನೆಂದೂ ಒಬ್ಬ ಸತ್ಯವೇದ ಶಾಸ್ತ್ರಜ್ಞರು ಹೇಳುತ್ತಾರೆ. ಇವೆರಡು ವರಗಳು ಏನಾಗಿರಬಹುದು?
5. ಅ. ಕೃ. 8 ನೇ ಅಧ್ಯಾಯದಲ್ಲಿರುವ ಫಿಲಿಪ್ಪನು ಮತ್ತು ಆತನ ಸೇವೆಯ ಎರಡು ಕಥೆಗಳಾದ – ಸಮಾರ್ಯದಲ್ಲಿ ಆತನ ಸೇವೆ (ವ. 4–25) ಮತ್ತು ಇಥಿಯೋಪ್ಯದವನಿಗೆ ಆತನ ಸೇವೆ (ವ. 26–40) ಎಂಬ ಎರಡೂ ಕಥೆಗಳನ್ನು ಹೋಲಿಕೆ ಮಾಡಿರಿ. ಸಮಾನತೆಗಳು ಯಾವವು? ವ್ಯತ್ಯಾಸಗಳು ಯಾವವು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಅ. ಕೃ. 8 ನೇ ಅಧ್ಯಾಯದಲ್ಲಿ ಫಿಲಿಪ್ಪನು ಸಮಾರ್ಯದಲ್ಲಿ 'ಸಾಮೂಹಿಕ ಸುವಾರ್ತಾ ಸೇವೆಯಲ್ಲಿಯೂ' ಮತ್ತು ಅರಣ್ಯ ರಸ್ತೆಯಲ್ಲಿ 'ವೈಯಕ್ತಿಕ ಸುವಾರ್ತಾ ಸೇವೆಯಲ್ಲಿಯೂ' ತನ್ನನ್ನೇ ತಾನು ತೊಡಗಸಿಕೊಂಡಿದ್ದನು. ಇಂದು ಅನೇಕ ಜನರು ರೇಡಿಯೋ, ದೂರದರ್ಶನ ಮತ್ತು

ಸುವಾರ್ತಾ ಕೂಟಗಳ ಮೂಲಕವಾದ 'ಸಾಮೂಹಿಕ ಸುವಾರ್ತಾ ಸೇವೆಯು' ಸುವಾರ್ತೆಯನ್ನು ಹರಡಲು ಅತೀ ಪರಿಣಾಮಕಾರಿಯಾದದ್ದಾಗಿದೆ ಎಂದು ಘೋಷಿಸುತ್ತಾರೆ, ಅದೇ ಸಮಯದಲ್ಲಿ ಇನ್ನೂ ಕೆಲವರು 'ವೈಯಕ್ತಿಕ ಸುವಾರ್ತಾ ಸೇವೆಯು' ಅತೀ ಪರಿಣಾಮಕಾರಿಯಾದದ್ದಾಗಿದೆ ಎಂದು ಘೋಷಿಸುತ್ತಾರೆ. ನಿಮ್ಮ ಅನುಭವವೇನು? ನಿಮ್ಮ ಸಭೆಯು ಯಾವುದಕ್ಕೆ ಹೆಚ್ಚಿನ ಪ್ರಾಧ್ಯಾನತೆಯನ್ನು ಕೊಡುತ್ತದೆ – 'ಸಾಮೂಹಿಕ ಸುವಾರ್ತಾ ಸೇವೆಗೋ ಅಥವಾ ವೈಯಕ್ತಿಕ ಸುವಾರ್ತಾ ಸೇವೆಗೋ? ಯಾಕೆ?

## ಊ) ಉಪದೇಶಿಸು ಮತ್ತು ಬೋಧಿಸು!

ಅ. ಕೃ. 8:26–40 ರ ಆಧಾರದ ಮೇಲೆ ಎರಡು ಸತ್ಯವೇದ ಅಧ್ಯಯನಗಳನ್ನು ಅಥವಾ ಎರಡು ಸಂದೇಶಗಳನ್ನು ಸಿದ್ಧಪಡಿಸಿರಿ, ಮೊದಲನೆಯದರಲ್ಲಿ ನೀವು ಫಿಲಿಪ್ಪನನ್ನು ಕೇಂದ್ರೀಕರಿಸಿರಿ. ಅದನ್ನು ***ಫಿಲಿಪ್ಪನು – ಪವಿತ್ರಾತ್ಮನಿಂದ ನಡೆಸಲ್ಪಟ್ಟ ಒಬ್ಬ ಮನುಷ್ಯ*** ಎಂದು ನೀವು ಕರೆಯಬಹುದು. ಎರಡನೆಯದರಲ್ಲಿ ನೀವು ಇಥಿಯೋಪ್ಯದ ಕಂಚುಕಿಯನ್ನು ಕೇಂದ್ರೀಕರಿಸಿರಿ. ಅದನ್ನು ***ಇಥಿಯೋಪ್ಯದವನು ಮತ್ತು ಸುವಾರ್ತೆ*** ಎಂದು ನೀವು ಕರೆಯಬಹುದು.

1. ***ಫಿಲಿಪ್ಪನು – ಪವಿತ್ರಾತ್ಮನಿಂದ ನಡೆಸಲ್ಪಟ್ಟ ಒಬ್ಬ ಮನುಷ್ಯ*** ಎಂಬುದಕ್ಕೆ ನಿಮ್ಮ ಹೊರರೇಖೆಯು ಹೀಗಿರಬಹುದು:

   1. ಫಿಲಿಪ್ಪನ ಹಿನ್ನಲೆ

      1) ಯೆರೂಸಲೇಮಿನಲ್ಲಿದ್ದ ಏಳು ಜನರಲ್ಲಿ ಈತನು ಒಬ್ಬನಾಗಿದ್ದನು (ಅ. ಕೃ. 6:1–6). ಅದರ ಅರ್ಥವೇನೆಂದರೆ, ಫಿಲಿಪ್ಪನು 'ಪವಿತ್ರಾತ್ಮಭರಿತನೂ ಮತ್ತು ಜ್ಞಾನವಂತನೂ' ಆಗಿದ್ದನು (6:3), ಸಭೆಯಲ್ಲಿನ ಸಾಮಾಜಿಕ ಸೇವೆಯ ಜವಾಬ್ದಾರಿಯನ್ನು ಹೊತ್ತ ವ್ಯಕ್ತಿಯಾಗಿದ್ದನು (6:3), ಅಪೋಸ್ತಲರಿಂದ ನೇಮಿಸಲ್ಪಟ್ಟವನಾಗಿದ್ದನು (6:6), ಬಹುಶಃ ಹೆಲಿನಿಸ್ಟಿಕ್ ಹಿನ್ನಲೆಯುಳ್ಳವನಾಗಿದ್ದನು (ಕನಿಷ್ಟ ಪಕ್ಷ ಆತನ ಹೆಸರು ಗ್ರೀಕ್ ಮೂಲದಾಗಿತ್ತು).

      2) ಆತನು ಸಮಾರ್ಯದಿಂದ ಸೇವಾ ಅನುಭವವುಳ್ಳವನಾಗಿದ್ದನು (ಅ. ಕೃ. 8:4–25):

         - ಆತನು ಒಬ್ಬ ಧೈರ್ಯಶಾಲಿಯಾದ ಸುವಾರ್ತಿಕನಾಗಿದ್ದನು (ಅ. ಕೃ. 8:4–25):
         - ಆತನು 'ಬಲವುಳ್ಳ ಸೇವೆಯಲ್ಲಿ' ಪಾಲ್ಗೊಂಡಿದ್ದನು (8:6–7: ಅದ್ಭುತವಾದ ಸೂಚಕ ಕಾರ್ಯಗಳು, ಅಶುದ್ಧಾತ್ಮಗಳು ಹೊರಗೋಡಿದವು, ರೋಗಿಗಳು ಗುಣವಾದರು).

- ಆತನು ಒಬ್ಬ ಯಶಸ್ವಿಯಾದ ಮತ್ತು ಪ್ರಖ್ಯಾತಿಯಾದ ಸುವಾರ್ತಿಕನಾಗಿದ್ದನು (8:8–13) ಜನರು ಸಂತೋಷಪಟ್ಟರು, ಜನರು ದೀಕ್ಷಾಸ್ನಾನವನ್ನು ಹೊಂದಿದರು, ಮಂತ್ರವಾದಿಯಾದ ಸೀಮೋನನು ಸಹ ಅವನನ್ನು ಮೆಚ್ಚಿದನು.

3) ಅಪೋಸ್ತಲರಾದ ಪೇತ್ರ ಮತ್ತು ಯೋಹಾನರು ಆತನಿಗೆ ಈ ಕೆಳಗಿನವುಗಳ ಕುರಿತು ಉಪದೇಶಿಸಿದರು:

- ಹೊಸ ವಿಶ್ವಾಸಿಗಳು ಪವಿತ್ರಾತ್ಮನಿಂದ ದೀಕ್ಷಾಸ್ನಾನ ಹೊಂದುವುದರ ಪ್ರಾಮುಖ್ಯತೆ (8:14–17)

- ಯಥಾರ್ಥವಾದ ಮತ್ತು ಪರಿವರ್ತನೆ ಹೊಂದಿದ ವಿಶ್ವಾಸಿಗಳ ಪ್ರಾಮುಖ್ಯತೆ (8:8–24) ಮತ್ತು

- ಒಳ್ಳೆಯ ಬೋಧನೆಯ ಪ್ರಾಮುಖ್ಯತೆ (8:25)

2. ಈ ವಾಕ್ಯಭಾಗದಲ್ಲಿ ಫಿಲಿಪ್ಪನು ಹೇಗೆ ಪವಿತ್ರಾತ್ಮನಿಂದ ನಡೆಸಲ್ಪಟ್ಟನು:

1) ಪವಿತ್ರಾತ್ಮನು – ದೇವದೂತನ ಮೂಲಕ – ಆತನು ಎಲ್ಲಿಗೆ ಹೋಗಬೇಕೆಂಬುದನ್ನು ಹೇಳಿದನು (8:26): (ಪೇತ್ರ ಮತ್ತು ಯೋಹಾನರು ಸಮಾರ್ಯದ ಅನೇಕ ಹಳ್ಳಿಗಳಲ್ಲಿ ಸುವಾರ್ತೆಯನ್ನು ಸಾರಿದ ನಂತರ ಫಿಲಿಪ್ಪನೂ ಅವರೊಂದಿಗೆ ಯೆರೂಸಲೇಮಿಗೆ ಬಂದಿದ್ದಿರಬಹುದು, ನಂತರ ಬಹುಶಃ ಯೆರೂಸಲೇಮಿನಿಂದ 8:25) ಗಾಜಕ್ಕೆ ಹೋಗುವ ಅರಣ್ಯಮಾರ್ಗದ ಕಡೆಗೆ ದಕ್ಷಿಣಕ್ಕೆ ಹೋಗಬೇಕೆಂದು ತಿಳಿಸಲ್ಪಟ್ಟನು.

2) ಆತನು ಏನು ಮಾಡಬೇಕೆಂಬುದನ್ನು ಪವಿತ್ರಾತ್ಮನು ಹೇಳಿದನು (8:29): ತನ್ನ ರಥದಲ್ಲಿ ಪ್ರಯಾಣಿಸುತ್ತಿದ್ದ ಇಥಿಯೋಪ್ಯದ ಕಂಚುಕಿಯ ಹತ್ತಿರ ಸಮೀಪಿಸುವಂತೆ ಹೇಳಲ್ಪಟ್ಟನು.

3) ಪವಿತ್ರಾತ್ಮನು – ಪ್ರವಾದಿಯಾದ ಯೆಶಾಯನ ಮಾತುಗಳ ಮೂಲಕ – ಇಥಿಯೋಪ್ಯದ ಕಂಚುಕಿಗೆ ಸುವಾರ್ತೆಯನ್ನು ಸಾರಲು ಜ್ಞಾನವನ್ನು ಕೊಟ್ಟನು (8:30–35).

4) ಪವಿತ್ರಾತ್ಮನು – ಇಥಿಯೋಪ್ಯದ ಕಂಚುಕಿಯ ಶಾರೀರಿಕ ಸ್ಥಿತಿ ಮತ್ತು ಮೋಶೆಯ ಧರ್ಮಶಾಸ್ತ್ರದ ನಿಷೇಧಾಜ್ಞೆಯ (ಧರ್ಮೋ. 23:1) ಬದಲಾಗಿಯೂ – ಆತನಿಗೆ ದೀಕ್ಷಾಸ್ನಾನ ಮಾಡಿಸಲು ಧೈರ್ಯವನ್ನು ಕೊಟ್ಟನು (8:36–39).

5) ಪವಿತ್ರಾತ್ಮನು ಆತನಿಗೆ ಹೊಸ ಸ್ಥಳಕ್ಕೆ ಸುವಾರ್ತೆಯನ್ನು ಸಾರಲು ನಡೆಸಿದನು (8:39–40).

3. ನಾವು ಫಿಲಿಪ್ಪನಿಂದಲೂ ಮತ್ತು ಆತನು ಪವಿತ್ರಾತ್ಮನಿಂದ ಉಪಯೋಗಿಸಲ್ಪಟ್ಟು ಮಾರ್ಗದರ್ಶಿಸಲ್ಪಟ್ಟ ರೀತಿಯಿಂದಲೂ ಏನನ್ನು ಕಲಿಯುತ್ತೇವೆ?

1) ಎಲ್ಲಿಗೆ ಹೋಗಬೇಕು

2) ಏನನ್ನು ಮಾಡಬೇಕು

3) ಸತ್ಯವೇದದ ಸಂದೇಶವನ್ನು ಅರ್ಥಮಾಡಿಕೊಳ್ಳುವಂತೆ

4) ಸತ್ಯವೇದದ ಸಂದೇಶವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವಂತೆ

5) ವ್ಯತ್ಯಾಸವಾಗಿರಲು, ನಂಬಿಕೆಯಲ್ಲಿ ಹೊಸ ಹೆಜ್ಜೆಗಳನ್ನು ತೆಗೆದುಕೊಳ್ಳಲು ಬೇಕಾದ ಧೈರ್ಯ

2. ***ಇಥಿಯೋಪ್ಯದವನು ಮತ್ತು ಸುವಾರ್ತೆ*** ಎಂಬುದಕ್ಕೆ ನಿಮ್ಮ ಹೊರರೇಖೆಯು ಹೀಗಿರಬಹುದು:

1. ಇಥಿಯೋಪ್ಯದವನ ಹಿನ್ನಲೆ (ನೀವು ಈ ಪಾಠದಲ್ಲಿನ ಮಾಹಿತಿಯನ್ನು ಉಪಯೋಗಿಸಬಹುದು – ವಿಶೇಷವಾಗಿ ಇ) 2 ಮತ್ತು ಇ) 3 ರ ಪ್ರಶ್ನೆಗಳ ಉತ್ತರಗಳನ್ನು ಬಳಸಬಹುದು)

2. ಇಥಿಯೋಪ್ಯದವನಿಗೆ ಸುವಾರ್ತೆಯು ಹೇಗೆ ತಲುಪಿತು?

1) ದೇವರು ಆತನನ್ನು ಮುಂಗಡವಾಗಿ ಸಿದ್ಧಪಡಿಸಿದ್ದನು

- ಆತನು ಈಗಾಗಲೇ ಒಬ್ಬ ದೈವಭಯವುಳ್ಳ ವ್ಯಕ್ತಿಯಾಗಿದ್ದನು, ಅದರ ಅರ್ಥವೇನೆಂದರೆ, ಆತನು ಹಳೆ ಒಡಂಬಡಿಕೆಯ ದೇವರಲ್ಲಿ ನಂಬಿಕೆಯಿಟ್ಟಿದ್ದನು ಮತ್ತು ಮೋಶೆಯ ನೈತಿಕ ಧರ್ಮಶಾಸ್ತ್ರವನ್ನು ಹಿಂಬಾಲಿಸಲು ಬಯಸಿದ್ದನು.
- ಆತನು ಈಗಾಗಲೇ ತನ್ನ ಬಳಿಯಲ್ಲಿ ಹಳೆ ಒಡಂಬಡಿಕೆಯ ಸಂದೇಶದ ಕೇಂದ್ರ ಭಾಗವಾದ ಯೆಶಾಯನ ಗ್ರಂಥವನ್ನು ಹೊಂದಿದ್ದನು.
- ಆತನು ಹಂಬಲಿಸುವ ಹೃದಯವುಳ್ಳವನಾಗಿದ್ದನು, ಆತನು ಹೆಚ್ಚಾಗಿ ತಿಳಿದುಕೊಳ್ಳಲು ಬಯಸಿದನು ಮತ್ತು ಆತನು ತನ್ನ 'ಸತ್ಯವೇದವನ್ನು' ಓದುತ್ತಿದ್ದನು.

2) ಫಿಲಿಪ್ಪನಲ್ಲಿ ದೇವರು ಆತನಿಗಾಗಿ ಒಬ್ಬ ಸಹಾಯಕನನ್ನು ಸಿದ್ಧಗೊಳಿಸಿದ್ದನು:

- ಫಿಲಿಪ್ಪನು ತನ್ನ ಮುಂಚಿನ ಅನುಭವದಿಂದ ಈ ಒಂದು ಕಾರ್ಯಕ್ಕಾಗಿ ಸಿದ್ಧನಾಗಿದ್ದನು
- ಫಿಲಿಪ್ಪನು ಇಥಿಯೋಪ್ಯನ ಬಳಿಗೆ ಪವಿತ್ರಾತ್ಮನಿಂದ ಕಳುಹಿಸಲ್ಪಟ್ಟವನಾಗಿದ್ದನು
- ಫಿಲಿಪ್ಪನು ಒಬ್ಬ ಸುವಾರ್ತಿಕನ ಹೃದಯವುಳ್ಳವನಾಗಿದ್ದನು ಮತ್ತು ರಥದಲ್ಲಿ ಇಥಿಯೋಪ್ಯದವನಿಗೆ ಸೇವೆ ಮಾಡಲು ಮನಸ್ಸುಳ್ಳವನಾಗಿದ್ದನು

- ಫಿಲಿಪ್ಪನು ಇಥಿಯೋಪ್ಯದವನ ಒಬ್ಬ ಸತ್ಯವೇದ ಉಪದೇಶಕನಾಗಿ ಪವಿತ್ರಾತ್ಮನಿಂದ ಉಪಯೋಗಿಸಲ್ಪಟ್ಟನು: ಆತನು ಕಂಚುಕಿಗೆ ಸತ್ಯವೇದವನ್ನು ತೆರೆದುಕೊಟ್ಟನು,

ದೇವರ ವಾಕ್ಯವನ್ನು ವಿವರಿಸಿದನು ಮತ್ತು ಒಂದು ಸಂಪೂರ್ಣವಾದ ಸನ್ನಿವೇಶಕ್ಕೆ ಸತ್ಯವೇದದ ಉಪದೇಶಗಳನ್ನು ಅನ್ವಯಿಸಿದನು.

3. ಇಥಿಯೋಪ್ಯದವನು ಸುವಾರ್ತೆಯನ್ನು ಕೇಳಿದಾಗ ಏನು ಸಂಭವಿಸಿತು?

1) ಆತನು ಯೇಸು ಕ್ರಿಸ್ತನು ನಿಜವಾಗಲೂ ಯಾರು ಎಂಬುದನ್ನು ಅರ್ಥಮಾಡಿಕೊಂಡನು.

2) ಆತನು ಯೇಸು ಕ್ರಿಸ್ತನನ್ನು ತನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡನು.

3) ಆತನು ದೀಕ್ಷಾಸ್ನಾನ ಮಾಡಿಸಲು ಕೇಳಿಕೊಂಡನು, ಮತ್ತು ಫಿಲಿಪ್ಪನು ದೀಕ್ಷಾಸ್ನಾನ ಮಾಡಿಸಲು ಮನಸ್ಸುಳ್ಳವನಾಗಿದ್ದನು.

4) ಆತನು 'ಸಂತೋಷಭರಿತನಾಗಿ ತನ್ನ ಮಾರ್ಗದೆಡೆಗೆ ಹೋದನು' (ವ. 39). ಯಾಕೆ?

- ಯಾಕೆಂದರೆ ಆತನು ತನ್ನ ಹೃದಯದಲ್ಲಿ ರಕ್ಷಣೆಯ ಸಂತೋಷವುಳ್ಳವನಾಗಿದ್ದನು.
- ಯಾಕೆಂದರೆ ಆತನು ಈಗ ದೇವರ ರಾಜ್ಯದ ಒಬ್ಬ ಸದಸ್ಯನಾಗಿ ಅಂಗೀಕಾರ ಹೊಂದಿದ್ದನು – ಆತನ ಶಾರೀರಿಕ ಸ್ಥಿತಿಯ ಹೊರತಾಗಿಯೂ

4. ಈ ಕಥೆಯಿಂದ ನಮ್ಮ ಸ್ವಂತ ಜೀವಿತಕ್ಕೆ ನಾವು ಏನನ್ನು ಕಲಿಯುತ್ತೇವೆ?

1) ನಾವು ಸೇವೆ ಮಾಡುತ್ತಿರುವ ಜನರ ಜೀವಿತಗಳಲ್ಲಿ ಮತ್ತು ಪರಿಸ್ಥಿತಿಗಳಲ್ಲಿ ಪವಿತ್ರಾತ್ಮನು ಮಾಡುವ ಸಿದ್ಧತಾ ಕಾರ್ಯವನ್ನು ನಾವು ಗುರುತಿಸುತ್ತೇವೋ?

2) **ನಮ್ಮನ್ನು** ಸೇವೆಗಾಗಿ ಸಿದ್ಧಗೊಳಿಸಲು ನಾವು ಪವಿತ್ರಾತ್ಮನಿಗೆ ಅನುಮತಿಸುತ್ತೇವೋ?

3) ಫಿಲಿಪ್ಪನಂತೆ ನಾವು ಸುವಾರ್ತೆಗೆ ನಂಬಿಗಸ್ತರಾದ ಸೇವಕರಾಗಿದ್ದೇವೋ?

- ಸ್ವತಃ ನಾವು ಸುವಾರ್ತೆಯನ್ನು ಸಾಕಷ್ಟು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದೇವೋ?
- ಜನರು ತಮ್ಮ ಜೀವಿತಗಳಿಗಾಗಿ ದೇವರ ಚಿತ್ತದ ಒಂದು ಆಳವಾದ ಜ್ಞಾನವನ್ನು ಹೊಂದುವಂತೆ ಅವರನ್ನು ಮಾರ್ಗದರ್ಶಿಸಲು ಮತ್ತು ಉಪದೇಶಿಸಲು ಸ್ವತಃ ನಾವು ಸತ್ಯವೇದದ ಸ್ಪಷ್ಟ ಜ್ಞಾನ ಹೊಂದಿದ್ದೇವೋ?
- ಹೊಸ ಸನ್ನಿವೇಶಗಳಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳಲು ಪವಿತ್ರಾತ್ಮನು ನಮ್ಮನ್ನು ಮಾರ್ಗದರ್ಶಿಸುವಂತೆ ನಾವು ಆತನನ್ನು ಅನುಮತಿಸುತ್ತೇವೋ?
- ನಾವು ಸೇವೆ ಮಾಡುವ ಜನರ ಜೀವಿತಗಳಲ್ಲಿ 'ಸಂತೋಷವನ್ನು' ಕಾಣುತ್ತೇವೋ? ನಮ್ಮ ಸೇವೆಯ ಪರಿಣಾಮವಾಗಿ ಜನರು ದೇವರ ರಾಜ್ಯಕ್ಕೆ ಸೇರುವಂತೆ ಬಿಡುಗಡೆ ಹೊಂದುತ್ತಿದ್ದಾರೋ ಅಥವಾ ಜನರು ದೇವರ ರಾಜ್ಯದಿಂದ ಬಾಧಿಸಲ್ಪಡುತ್ತಿದ್ದಾರೋ?

# ಪಾಠ 22. ಸೌಲನ ಪರಿವರ್ತನೆ, 9:1–19

## ಅ) ವಾಕ್ಯಭಾಗ

ಸೌಲನು ಯೂದಾಯದ ಹೊರಗೂ ಕ್ರೈಸ್ತ ನಂಬಿಕೆಯು ಹರಡುವುದನ್ನು ತಡೆಯಬೇಕೆಂದಿದ್ದನು. ಹಾಗಾಗಿ ಆತನು ದಮಸ್ಕದಲ್ಲಿನ ಸಭಾಮಂದಿರಗಳಿಗೆ ಕೊಡಲು ಪರಿಚಯದ ಪತ್ರಗಳನ್ನು ಮಹಾಯಾಜಕನಿಂದ ಕೇಳಿದನು. ಆತನು ಅಲ್ಲಿ ಕಾಣುವ ಯಾವುದೇ ವಿಶ್ವಾಸಿಯನ್ನು ನ್ಯಾಯವಿಚಾರಣೆಗಾಗಿಯೂ ಮತ್ತು ದಂಡನೆಗಾಗಿಯೂ ತಿರುಗಿ ಯೆರೂಸಲೇಮಿಗೆ ಕರೆತರಬೇಕೆಂದಿದ್ದನು. ಆದರೆ ಆತನು ದಮಸ್ಕವನ್ನು ಸಮೀಪಿಸುತ್ತಿರುವಾಗ ಯೇಸು ಆತನಿಗೆ ಒಂದು ನಾಟಕೀಯವಾದ ರೀತಿಯಲ್ಲಿ ತನ್ನನ್ನು ಪ್ರಕಟಪಡಿಸಿಕೊಂಡನು. ಆತನೊಂದಿಗೆ ಪ್ರಯಾಣಮಾಡುತ್ತಿದ್ದವರು ಆತನನ್ನು ದಮಸ್ಕದೊಳಗೆ ನಡೆಸಿದರು, ಅಲ್ಲಿ ಆತನು ಉಪವಾಸ ಮತ್ತು ಪ್ರಾರ್ಥನೆಯಲ್ಲಿ ಮೂರು ದಿನಗಳನ್ನು ಕಳೆದನು. ಒಂದು ದರ್ಶನದಲ್ಲಿ ಯೇಸು ಅನನೀಯ ಎಂಬ ಒಬ್ಬ ವಿಶ್ವಾಸಿಯನ್ನು ಕರೆದು ಸೌಲನ ಬಳಿಗೆ ಹೋಗಿ ಆತನೊಟ್ಟಿಗೆ ಮಾತನಾಡಬೇಕೆಂದು ಹೇಳಿದನು. ಸೌಲನು ಪುನಃ ದೃಷ್ಟಿಯನ್ನು ಪಡಕೊಂಡನು ಮತ್ತು ದೀಕ್ಷಾಸ್ನಾನ ಹೊಂದಿದನು. ಅನನೀಯನ ಪ್ರವಾದನಾ ಸಂದೇಶದ ಮೂಲಕ ದೇವರು ಆತನನ್ನು ಅನ್ಯರಿಗೂ ಯೆಹೂದ್ಯರಿಗೂ ಒಬ್ಬ ಸೇವಕನಾಗುವಂತೆ ಕರೆದನು.

## ಆ) ಟಿಪ್ಪಣಿ

ಸೌಲನ ಪರಿವರ್ತನೆಯು ಅಪೋಸ್ತಲರ ಕೃತ್ಯಗಳಲ್ಲಿ ಮೂರು ಬಾರಿ ದಾಖಲಿಸಲ್ಪಟ್ಟಿದೆ. ಲೂಕನು ಇದಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ಕೊಡುತ್ತಾನೆಂದು ಇದು ತೋರಿಸುತ್ತದೆ. ಅಧ್ಯಾಯ 9 ರಲ್ಲಿ ಏನು ಸಂಭವಿಸಿತು ಎಂಬುದನ್ನು ಲೂಕನು ತನ್ನ ಸ್ವಂತ ಪದಗಳಲ್ಲಿ ವಿವರಿಸುತ್ತಿದ್ದಾನೆ. ವಚನ 22:3–16 ರಲ್ಲಿ ಪೌಲನು ಯೆರೂಸಲೇಮಿನಲ್ಲಿ ಬಂಧಿಸಲ್ಪಟ್ಟಾಗ ಅಲ್ಲಿ ನೆರೆದಿದ್ದ ಜನರಿಗೆ ತನ್ನ ಸಾಕ್ಷಿಯನ್ನು ಕೊಡುತ್ತಿದ್ದಾನೆ ಮತ್ತು 26:9–18 ರಲ್ಲಿ ಪೌಲನು ಸೆಜರೆಯಾದಲ್ಲಿ ತನ್ನ ಬಂಧನದ ಅಂತ್ಯದಲ್ಲಿ ಅರಸನಾದ ಅಗ್ರಿಪ್ಪನ ಮುಂದೆ ಸಾಕ್ಷಿಕರಿಸುತ್ತಿದ್ದಾನೆ. ಈ ಮೂರು ಕಥೆಗಳು ಏಕ ರೀತಿಯಲ್ಲಿ ಇಲ್ಲ ಮತ್ತು ಇವೆಲ್ಲವು ಒಟ್ಟಾಗಿ ಪೌಲನ ಪರಿವರ್ತನೆಯ ಕುರಿತು ಒಂದು ಸಂಪೂರ್ಣ ವಿವರಣೆಯನ್ನು ನೀಡುತ್ತವೆ.

*ಶಿಷ್ಯರು* (ವ. 1): ಸಾಮಾನ್ಯವಾಗಿ ಲೂಕನು ವಿಶ್ವಾಸಿಗಳಿಗೆ *ಶಿಷ್ಯರು* ಎಂಬ ಪದವನ್ನು ಉಪಯೋಗಿಸುತ್ತಾನೆ. ವ. 10 ನ್ನು ಸಹ ನೋಡಿರಿ, ಅಲ್ಲಿ ಅನನೀಯನು ಒಬ್ಬ ಶಿಷ್ಯನೆಂದು ಕರೆಯಲ್ಪಟ್ಟಿದ್ದಾನೆ.

*ದಮಸ್ಕ* (ವ. 2): ದಮಸ್ಕವು ರೋಮ್ ಪ್ರಾಂತ್ಯದ ಸಿರಿಯಾದಲ್ಲಿನ ಪ್ರಮುಖ ಪಟ್ಟಣವಾಗಿತ್ತು ಮತ್ತು ಯೆಹೂದ್ಯರ ಒಂದು ದೊಡ್ಡ ಜನಸಂಖ್ಯೆಯನ್ನು ಹೊಂದಿತ್ತು. ಯೆರೂಸಲೇಮಿನ

ಉತ್ತರಭಾಗಕ್ಕೆ 240 ಕಿ.ಮೀ.ನಲ್ಲಿ ನೆಲೆಸಿತ್ತು ಮತ್ತು ಅಲ್ಲಿಗೆ ತಲುಪಲು ಸೌಲನಿಗೆ ಸುಮಾರು ಒಂದು ವಾರದ ಪ್ರಯಾಣವು ಹಿಡಿಯಿತು. ಮಹಾಯಾಜಕರು ಮತ್ತು ನ್ಯಾಯಸಭೆಯವರಿಗೆ ಯೂದಾಯದ ಹೊರಗಿನ ಪ್ರಾಂತ್ಯಗಳ ಮೇಲೆ ಯಾವುದೇ ಕಾನೂನಿನ ಅಧಿಕಾರವಿರಲಿಲ್ಲ, ಆದರೆ ಚದುರಿಸಲ್ಪಟ್ಟ ಯೆಹೂದ್ಯರ ಮೇಲೆ ಸ್ವಲ್ಪಮಟ್ಟಿನ ನೈತಿಕ ಅಧಿಕಾರವನ್ನು ಹೊಂದಿದ್ದರು.

*ಕರ್ತನೇ, ನೀನು ಯಾರು?* (ವ. 5): ಪರಿಸಾಯನೂ ಮತ್ತು ಒಬ್ಬ ಯೆಹೂದಿ ರಬ್ಬಿಯೂ ಆದ ಸೌಲನು, ಪರಲೋಕದಿಂದ ಬಂದ ಇಂತಹ ಒಂದು ಶಬ್ಧವನ್ನು ಕೇಳಿದಾಗ ಇದು ದೇವರ ಸ್ವರವೇ ಎಂದು ಅರ್ಥೈಸಿಕೊಂಡನು. ಅರಾಮಿಕ್ ಭಾಷಾಶೈಲಿಯಲ್ಲಿ ಪುನರಾವರ್ತಿಸಿದ ಸೌಲನ ಹೆಸರು ಮತ್ತು ಪ್ರಕಾಶಮಾನವಾದ ಆ ಬೆಳಕು ತಾನು ದೇವರ ಪ್ರಸನ್ನತೆಯಲ್ಲಿದ್ದೇನೆಂಬುದನ್ನು ಆತನಿಗೆ ಸೂಚಿಸಿದವು.

*ಅನನೀಯ* (ವ. 10): ಅನನೀಯ ಎಂಬುದು ಒಂದು ಸಾಮಾನ್ಯ ಯೆಹೂದ್ಯ ಹೆಸರಾಗಿದೆ. ಅಪೋಸ್ತಲರ ಕೃತ್ಯಗಳಲ್ಲಿ ಇಂತಹದ್ದೇ ಹೆಸರುಳ್ಳ ಇಬ್ಬರು ಇತರೆ ವ್ಯಕ್ತಿಗಳು ಪ್ರಸ್ತಾಪಿಸಲ್ಪಟ್ಟಿದ್ದಾರೆ (5:1; 23:2). ಈ ಅನನೀಯನು ಪೌಲನ ಪರಿವರ್ತನೆಯ ಕಥೆಯಲ್ಲಿ ಮಾತ್ರ ಕಂಡುಬರುತ್ತಾನೆ.

*ತಾರ್ಸದ ಸೌಲನೆಂಬುವನು* (ವ. 11): ಪೌಲನೆಂದು ತನ್ನನ್ನು ನಂತರದಲ್ಲಿ ಕರೆದುಕೊಂಡ ಸೌಲನು, ರೋಮ್ ಪ್ರಾಂತ್ಯದ ಸಿಲಿಸಿಯಾದ ರಾಜಧಾನಿಯಾಗಿದ್ದ ತಾರ್ಸಸ್ ಎಂಬ ಪಟ್ಟಣದಲ್ಲಿ ಜನಿಸಿದನು. ಗಮಲಿಯೇಲನೆಂಬ ಪ್ರಖ್ಯಾತಿಯಾದ ಧರ್ಮಶಾಸ್ತ್ರದ ಗುರುವಿನ ಅಡಿಯಲ್ಲಿ ತರಬೇತಿಹೊಂದಲು ಬಹುಶಃ 13 ವರ್ಷ ವಯಸ್ಸಿನವನಾದಾಗ ಯೆರೂಸಲೇಮಿಗೆ ಬಂದಿದ್ದನು (ನೋಡಿರಿ 22:3).

*ನಿನಗೆ ದರ್ಶನ ಕೊಟ್ಟ ಕರ್ತನಾದ ಯೇಸು* (ವ. 17): ದಮಸ್ಕದ ರಸ್ತೆಯಲ್ಲಿ ಸೌಲನು ಹೊಂದಿದ ಅನುಭವವು ಕೇವಲ ಒಂದು ದರ್ಶನ ಮಾತ್ರವಾಗಿರಲಿಲ್ಲ. ಪುನರಾತ್ಥಾನನಾದ ಯೇಸುವೇ ಆತನಿಗೆ ಕಾಣಿಸಿಕೊಂಡಿದ್ದನು. 1 ಕೊರಿ. 9:1 ಮತ್ತು 15:8 ನ್ನು ನೋಡಿರಿ, ಅಲ್ಲಿ ಯೇಸು ವಾಸ್ತವಿಕವಾಗಿ ತನಗೆ ಪ್ರತ್ಯಕ್ಷನಾದುದ್ದರ ಆಧಾರದ ಮೇಲೆ ತಾನು ಒಬ್ಬ ಕ್ರಿಸ್ತನ ಅಪೋಸ್ತಲನೆಂದು ಘೋಷಿಸಿಕೊಳ್ಳುತ್ತಾನೆ.

*ಪವಿತ್ರಾತ್ಮಭರಿತನಾಗುವಂತೆಯೂ* (ವ. 17): ಸೌಲನು ಯಾವ ರೀತಿಯಾಗಿ ಪವಿತ್ರಾತ್ಮಭರಿತನಾದನು ಎಂಬುವ ಯಾವುದೇ ವಿವರಣೆಯನ್ನು ಲೂಕನು ದಾಖಲಿಸುತ್ತಿಲ್ಲ. ಆದರೆ ಪೌಲನು ಕೊರಿಂಥದ ಇತರೆ ವಿಶ್ವಾಸಿಗಳಿಗಿಂತಲೂ ಹೆಚ್ಚಾಗಿ ಅನ್ಯಭಾಷೆಯಲ್ಲಿ ಮಾತನಾಡಿದನು ಎಂದು 1 ಕೊರಿ. 14:18 ರಿಂದ ನಮಗೆ ತಿಳಿದುಬರುತ್ತದೆ.

## ಇ) ಪಠ್ಯದ ಪ್ರಶ್ನೆಗಳು

1. ಪೌಲನು ದಮಸ್ಕದಲ್ಲಿರುವ ವಿಶ್ವಾಸಿಗಳನ್ನು ಹಿಂಸಿಸಲು ಅಪ್ಪಣೆಯ ಪತ್ರವನ್ನು ಹೇಗೆ ಪಡೆದನು?
2. ಪೌಲನು ದಮಸ್ಕ ಪಟ್ಟಣವನ್ನು ಹೇಗೆ ಪ್ರವೇಶಿಸಿದನು?
3. ಪೌಲನನ್ನು ಎಲ್ಲಿ ಹುಡುಕಬೇಕೆಂದು ಅನನೀಯನು ಹೇಗೆ ತಿಳುಕೊಂಡನು?
4. ಪೌಲನನ್ನು ಕಂಡಾಗ ಅನನೀಯನು ಆತನನ್ನು ಏನೆಂದು ಕರೆಯುತ್ತಾನೆ?
5. ಪೌಲನು ದಮಸ್ಕದ ರಸ್ತೆಯಲ್ಲಿ ಉಂಟಾದ ಅನುಭವದ ನಂತರ ಮೂರು ದಿವಸ ಉಪವಾಸವಿದ್ದು ಪ್ರಾರ್ಥಿಸಿದನು. ಆತನು ಪುನಃ ಆಹಾರ ಸೇವಿಸುವುದಕ್ಕಿಂತ ಮುಂಚೆ ಏನನ್ನು ಮಾಡಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಸೌಲನು ಯೇಸುವನ್ನು ಯಾವ ರೀತಿಯಾಗಿ ಹಿಂಸಿಸುತ್ತಿದ್ದನು (ವ. 4)?
2. ನಾವು ಈ ಕಥೆಯನ್ನು ಗಮನವಿಟ್ಟು ಓದುವುದಾದರೆ, ಸೌಲನು ಒಂದಕ್ಕಿಂತ ಹೆಚ್ಚು ಬಾರಿ ಕರ್ತನ ಅನುಭವವನ್ನು ಹೊಂದಿದ್ದನ್ನು ನಾವು ಕಾಣಬಹುದು. ಆತನ ಅನುಭವಗಳನ್ನು ಗುರುತಿಸಿ ಪಟ್ಟಿಮಾಡಿರಿ.
3. ಈ ವಾಕ್ಯಭಾಗದಲ್ಲಿ ಲೂಕನು 'ವಿಶ್ವಾಸಿಗಳ' ಕುರಿತಾಗಿ ನಾಲ್ಕು ವ್ಯತ್ಯಾಸವಾದ ಪದವಿನ್ಯಾಸಗಳನ್ನು ಬಳಸುತ್ತಿದ್ದಾನೆ. ಅವುಗಳು ಯಾವುವು? ಈ ಪದವಿನ್ಯಾಸಗಳ ಅರ್ಥಗಳಲ್ಲಿ ಯಾವುದಾದರೂ ವ್ಯತ್ಯಾಸವಿದೆ ಎಂದು ನೀವು ಆಲೋಚಿಸುತ್ತಿರೋ?
4. ದೇವರು ಸೌಲನ ಭವಿಷ್ಯದ ಕುರಿತು ಅನನೀಯನಿಗೆ ಏನನ್ನು ಪ್ರಕಟಿಸಿದನು? ಈ ಸಂಗತಿಗಳು ನಿಜವಾಗಿಯೂ ಆತನ ಜೀವತದಲ್ಲಿ ಸಂಭವಿಸಿದವೋ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಪೌಲನ ಪರಿವರ್ತನೆಯ ಕಥೆಯು ಅತೀ ನಾಟಕೀಯವಾದದ್ದು. ಇದನ್ನು ನಾವು ಒಂದು ಮಾದರಿಯಾದ ಕಥೆಯನ್ನಾಗಿ ನಾವು ಓದಬೇಕೆಂದು ಲೂಕನು ಬಯಸುತ್ತಾನೆ ಎಂದು ನೀವು ಭಾವಿಸುತ್ತಿರೋ? ಅಥವಾ ಈ ಕಥೆಯ ಕೆಲವು ಭಾಗಗಳು ಅದ್ವಿತೀಯವಾಗಿ ಪೌಲನಿಗೆ ಮಾತ್ರವಾದದ್ದು – ಮತ್ತು ಈ ಕಥೆಯ ಇನ್ನೂ ಕೆಲವು ಭಾಗಗಳು ಸಾಧಾರಣವಾಗಿ ಎಲ್ಲಾ ಪರಿವರ್ತನೆಗಳಿಗೆ ಸಂಬಂಧಪಟ್ಟದ್ದು ಎಂದು ನಾವು ಪರಿಗಣಿಸಬೇಕೋ? ವಿವರಿಸಿರಿ!

2. ಈ ಕಥೆಯಲ್ಲಿ ಅನನೀಯನು ದೇವರಿಂದ ಒಂದು ಅದ್ಭುತವಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟನು. ಆದರೆ ಆತನು ಹೊಸ ಒಡಂಬಡಿಕೆಯ ಇತರೆ ಯಾವುದೇ ಸನ್ನಿವೇಶದಲ್ಲೂ ತಿಳಿಸಲ್ಪಡದವನಾಗಿದ್ದು ಒಬ್ಬ ಅಪ್ರಖ್ಯಾತಿಯಾದ ವ್ಯಕ್ತಿಯಾಗಿದ್ದಾನೆ. ಇಂತಹ

ಜನರನ್ನು ನಿಮ್ಮ ಸಭೆಗಳಲ್ಲಿ ನೀವು ಕಂಡಿದ್ದೀರೋ – ದೇವರಿಂದ ನಿಜವಾಗಿಯೂ ಉಪಯೋಗಿಸಲ್ಪಟ್ಟು ಜನರಿಂದ ಎಂದಿಗೂ ಗುರುತಿಸಲ್ಪಡದ ಅಥವಾ ನೆನಸಲ್ಪಡದವರು? ದಯಮಾಡಿ ಹಂಚಿಕೊಳ್ಳಿರಿ! ಇಂತಹ ರೀತಿಯ ಜನರು – ಅನನೀಯನಂತಹ ಜನರು – ನಮಗೆ ಹೇಗೆ ಮಾದರಿಯಾಗಿದ್ದಾರೆ?

## ಊ) ಉಪದೇಶಿಸು ಮತ್ತು ಬೋಧಿಸು!

ಅನನೀಯನ ಕುರಿತು ಒಂದು ಪ್ರಸಂಗವನ್ನು ಅಥವಾ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಅ. ಕೃ. 22:1–16 ರಲ್ಲಿರುವ ವಾಕ್ಯಭಾಗವನ್ನೂ ಉಪಯೋಗಿಸಬಹುದು. ***ಅನನೀಯ – ಹೊಸ ಒಡಂಬಡಿಕೆಯ ಮರೆಯಲ್ಪಟ್ಟ ನಾಯಕ*** ಎಂಬ ಶೀರ್ಷಿಕೆಯನ್ನು ನೀವು ಬಳಸಿ ಈ ಹೊರರೇಖೆಯನ್ನು ಉಪಯೋಗಿಸಬಹುದು:

1. ಅನನೀಯನು ಯಾರು?

    1) ಆತನು ಧರ್ಮಶಾಸ್ತ್ರವನ್ನು ಪಾಲಿಸುವ ಒಬ್ಬ ಭಕ್ತನಾಗಿದ್ದನು – ಹಾಗಾಗಿ ದಮಸ್ಕದಲ್ಲಿರುವ ಎಲ್ಲಾ ಯೆಹೂದ್ಯರು ಆತನನ್ನು ಗೌರವಿಸುತ್ತಿದ್ದರು (22:13)

    2) ಆತನು ಕರ್ತನೊಂದಿಗೆ ನಿಕಟ ಸಂಪರ್ಕದಲ್ಲಿದ್ದ ವ್ಯಕ್ತಿಯಾಗಿದ್ದನು – ಹಾಗಾಗಿ ಯೇಸು ಆತನನ್ನು ದರ್ಶನದಲ್ಲಿ ಮಾತನಾಡಿಸಿದನು (9:10)

    3) ಆತನು ಒಬ್ಬ ಶಿಷ್ಯನಾಗಿದ್ದನು – ಹಾಗಾಗಿ ಆತನು ದೇವರಿಗೆ ವಿಧೇಯನಾಗಿದ್ದನು (9:10, 7)

    4) ಆತನು ಸಾಮಾನ್ಯಜ್ಞಾನವುಳ್ಳ ವ್ಯಕ್ತಿಯಾಗಿದ್ದನು – ಹಾಗಾಗಿ ಹೆಚ್ಚಿನ ಸ್ಪಷ್ಟತೆಗಳಿಲ್ಲದೆ ಆತನು ದೇವರ ಆಜ್ಞೆಗೆ ವಿಧೇಯನಾಗಲಿಲ್ಲ (9:13–14)

    5) ಆತನು ಕರ್ತನ ಮಾತುಗಳ ಮೇಲೆ ಭರವಸವಿಟ್ಟನು – ಹಾಗಾಗಿ ಆತನು ಸೌಲನ ಕುಖ್ಯಾತಿಯ ಹೊರತಾಗಿಯೂ ಆತನ ಬಳಿಗೆ ಹೋದನು (9:17)

2. ಅನನೀಯನು ಕರ್ತನಿಂದ ಹೇಗೆ ಉಪಯೋಗಿಸಲ್ಪಟ್ಟನು?

    1) ಆತನು ದೇವರ ಸಂದೇಶವನ್ನು ಸೌಲನ ಹತ್ತಿರ ಕೊಂಡೊಯ್ದನು (9:15; 22:14–16)

    2) ಆತನು ಸೌಲನ ಮೇಲೆ ತನ್ನ ಕೈಗಳನ್ನಿಟ್ಟು ಆತನನ್ನು ತನ್ನ ಕುರುಡುತನದಿಂದ ವಾಸಿಮಾಡಿದನು (9:17–18; 22:13)

    3) ಆತನು ಸೌಲನಿಗೆ ದೀಕ್ಷಾಸ್ನಾನ ಮಾಡಿಸಿದನು (9:18; 22:16)

    4) ಬಹುಶ: ಆತನು ಸೌಲನಿಗಾಗಿ ಅಡಿಗೆಯನ್ನು ಸಹ ಮಾಡಿದನು (9:19)

    5) ಆತನು ಸೌಲನಿಗೆ ಉತ್ತೇಜನದ ಮಾತುಗಳನ್ನು ಆಡಿದನು (22:16)

3. ಆದರೆ ಅನನೀಯನ ಕುರಿತಾದ ಒಂದು ಅಮೋಘವಾದ ಸಂಗತಿ ಏನು?

- ಸಭೆಯ ಹಿಂಸಕನೆಂದು ಕುಖ್ಯಾತಿಯಾದ ಸೌಲನನ್ನು (9:1–2, 22:4–5) ಕ್ರಿಸ್ತನಲ್ಲಿ ಒಬ್ಬ ಸಹೋದರನಂತೆ ಅಂಗೀಕರಿಸಲು (9:17) ಮತ್ತು ದಮಸ್ಕದಲ್ಲಿರುವ ವಿಶ್ವಾಸಿಗಳಿಗೆ ಆತನನ್ನು ಪರಿಚಯಿಸಲು ಮನಸ್ಸುಳ್ಳವನಾಗಿದ್ದನು.

4. ಹಾಗಾದರೆ ಅನನೀಯನ ಮಾದರಿಯಿಂದ ನಾವೇನು ಕಲಿಯುತ್ತೇವೆ?

1) ನಾವು ಒಂದು ಗೌರವಾರ್ಹ ಜೀವತವನ್ನು ಜೀವಿಸುವಾಗ ಅದು ಸಭೆಗೆ ಒಂದು ಘನತೆಯನ್ನು ತರವಂತಹದ್ದಾಗಿದೆ – ಅವಿಶ್ವಾಸಿಗಳ ಮುಂದೆಯೂ ಸಹ ಘನತೆಯನ್ನು ತರುತ್ತದೆ.

2) ದೇವರೊಂದಿಗೆ ನಿಕಟವಾಗಿ ಜೀವಿಸುವಾಗ ಆತನು ತನ್ನ ಚಿತ್ತವನ್ನು ನಮಗೆ ಪ್ರಕಟಿಸಿ ನಮ್ಮನ್ನು ಉಪಯೋಗಿಸುತ್ತಾನೆ.

3) ನಮಗಾಗಿ ದೇವರ ಚಿತ್ತವನ್ನು ಸಂಪೂರ್ಣವಾಗಿ ಸ್ಪಷ್ಟಪಡಿಸಿಕೊಳ್ಳಲು ದೇವರನ್ನೇ ಪ್ರಶ್ನಿಸುವಂತೆ ಆತನು ಕೊಟ್ಟ ಸಾಮಾನ್ಯ ಜ್ಞಾನವನ್ನು ಉಪಯೋಗಿಸಿಕೊಳ್ಳಬೇಕು.

4) ದೇವರು ನಮ್ಮನ್ನು ವಿವಿಧ ಸೇವೆಗಳಲ್ಲಿ ಮತ್ತು ವಿವಿಧ ರೀತಿಯಲ್ಲಿ ಉಪಯೋಗಿಸುವಂತೆ ಆತನನ್ನು ಅನುಮತಿಸಬೇಕು: ದೇವರ ವಾಕ್ಯಗಳನ್ನು ಹೇಳುವುದರಲ್ಲಿ, ಪ್ರವಾದಿಸುವುದರಲ್ಲಿ, ಅಸ್ವಸ್ಥರನ್ನು ಗುಣಪಡಿಸುವುದರಲ್ಲಿ, ದೀಕ್ಷಾಸ್ನಾನಮಾಡಿಸುವುದರಲ್ಲಿ, ಊಟ ಸಿದ್ಧಪಡಿಸುವುದರಲ್ಲಿ ಮತ್ತು ಇತರ ಕಾರ್ಯಗಳಲ್ಲಿ, ನಮ್ಮನ್ನು ನಾವೇ ಕ್ರಿಸ್ತೀಯ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರಲ್ಲಿ.

5) ಸಭೆಯ ಹಿಂಸಕರನ್ನೂ, ಕೊಲೆಪಾತಕರನ್ನೂ ಮತ್ತು ವೈರಿಗಳನ್ನೂ ಪರಿವರ್ತಿಸಲು ದೇವರಿಗೆ ಶಕ್ತಿಯಿದೆ ಎಂದು ನಂಬಬೇಕು.

6) ಯಾವುದೇ ಹಿನ್ನಲೆಯುಳ್ಳವರಾಗಿದ್ದರೂ ದೇವರು ಅಂಗೀಕರಿಸುವವರನ್ನು ನಾವು ಅಂಗೀಕರಿಸಬೇಕು:

- ಅವರನ್ನು ನಾವು 'ಸಹೋದರ ಮತ್ತು ಸಹೋದರಿ' ಎಂದು ಕರೆಯಲು ಮತ್ತು ನಮ್ಮ ಪಟ್ಟಣದಲ್ಲಿಯೂ ಹಳ್ಳಿಗಳಲ್ಲಿಯೂ ಇರುವ ಇತರೆ ವಿಶ್ವಾಸಿಗಳಿಗೆ ಅವರನ್ನು ಪರಿಚಯಿಸಲು ಮನಸ್ಸುಳ್ಳವರಾಗಿರಬೇಕು.

- ಸಭೆಯ ಮತ್ತು ಅದರ ಸೇವೆಗಳಲ್ಲಿ ಅವರು ಪಾಲ್ಗೊಳ್ಳಲು ಅವರಿಗೆ ಅವಕಾಶಮಾಡಿಕೊಡಬೇಕು.

# ಪಾಠ 23. ಪೌಲನು ದಮಸ್ಕದಲ್ಲಿ ಹಾಗೂ ಯೆರೂಸಲೇಮಿನಲ್ಲಿ, 9:19–31

## ಅ) ವಾಕ್ಯಭಾಗ

ದಮಸ್ಕದಲ್ಲಿರುವ ದಂಗುಬಡಿದ ಯೆಹೂದ್ಯರ ಮಧ್ಯದಲ್ಲಿ ಸೌಲನು ತನ್ನನ್ನು ಒಂದು ಬಲವಾದ ಬೋಧನಾ ಸೇವೆಯಲ್ಲಿ ತೊಡಗಿಸಿಕೊಂಡನು. ಸ್ವಲ್ಪ ಸಮಯದ ಬಳಿಕ ಯೆಹೂದ್ಯರು ಆತನನ್ನು ಕೊಲ್ಲಬೇಕೆಂದು ರಹಸ್ಯವಾಗಿ ಯೋಜಿಸಿದರು. ಆದರೆ ಸೌಲನ ಅನುಯಾಯಿಗಳು ಆತನನ್ನು ರಕ್ಷಿಸಿದರು. ಅವರು ರಾತ್ರಿಯಲ್ಲಿ ಅವನನ್ನು ಕರೆದುಕೊಂಡು ಹೋಗಿ, ಬುಟ್ಟಿಯಲ್ಲಿ ಕುಳ್ಳರಿಸಿ, ಗೋಡೆಯ ಕಿಟಿಕಿಯ ಮುಖಾಂತರ ಹೊರಗೆ ಕೆಳಗಿಳಿಸಿದರು. ಸೌಲನು ಯೆರೂಸಲೇಮಿಗೆ ಹೋದನು, ಆದರೆ ಪ್ರಾರಂಭದಲ್ಲಿ ಅಲ್ಲಿರುವ ವಿಶ್ವಾಸಿಗಳು ಆತನನ್ನು ಸ್ವೀಕರಿಸಲಿಲ್ಲ. ಆತನ ಜೀವಿತವು ನಿಜವಾಗಲೂ ಪರಿವರ್ತನೆಯಾಗಿದೆ ಎಂದು ಅವರು ನಂಬಲಿಲ್ಲ. ಆದರೆ ಬಾರ್ನಬನು ಅಪೊಸ್ತಲರಿಗೆ ಆತನನ್ನು ಪರಿಚಯಿಸಿದನು. ನಂತರ ಸೌಲನು ತನ್ನ ಸೇವೆಯನ್ನು ಯೆರೂಸಲೇಮಿನಲ್ಲಿನ ಗ್ರೀಕ್ ಮಾತನಾಡುವ ಯೆಹೂದ್ಯರ ಮಧ್ಯದಲ್ಲಿ ಪ್ರಾರಂಭಿಸಿದನು. ಆದರೆ ಅವರು ಆತನನ್ನು ಕೊಲ್ಲಲು ಪ್ರಯತ್ನಿಸಿದಾಗ ವಿಶ್ವಾಸಿಗಳು ಆತನನ್ನು ಸೆಜರೇಯಕ್ಕೆ ಕರೆದುಕೊಂಡು ಹೋದರು, ಅಲ್ಲಿಂದ ಸೌಲನು ತನ್ನ ಸ್ವಂತ ಪಟ್ಟಣವಾದ ತಾರ್ಸಕ್ಕೆ ತನ್ನ ಪ್ರಯಾಣವನ್ನು ಮುಂದುವರೆಸಿದನು. ಈ ವಾಕ್ಯಭಾಗದ ಕೊನೆಯ ವಚನವು ಅಪೊಸ್ತಲರ ಕೃತ್ಯಗಳ ಪುಸ್ತಕದ ಎರಡನೆಯ ಭಾಗವನ್ನು ಮುಕ್ತಾಯಗೊಳಿಸುತ್ತದೆ: ಆ ಸಮಯದಲ್ಲಿ ಯೂದಾಯ, ಗಲಿಲಾಯ ಮತ್ತು ಸಮಾರ್ಯದಲ್ಲೆಲ್ಲಾ ಇದ್ದ ಸಭೆ ಸಮಾಧಾನ ಹೊಂದಿತು. ಸಭೆ ಬಲಗೊಂಡು ಪವಿತ್ರಾತ್ಮನಿಂದ ಧೈರ್ಯ ಹೊಂದಿ ಸಂಖ್ಯೆಯಲ್ಲಿ ವರ್ಧಿಸುತ್ತಾ, ಕರ್ತನ ಭಯದಲ್ಲಿ ಮುನ್ನಡೆಯಿತು.

## ಆ) ಟಿಪ್ಪಣಿ

*ಬಾರ್ನಬನು* (ವ. 27): ಲೂಕನು ಬಾರ್ನಬನ ಕುರಿತು ಮೊಟ್ಟಮೊದಲಿಗೆ 4:36 ರಲ್ಲಿ ಪ್ರಸ್ತಾಪಿಸುತ್ತಾನೆ. ನಂತರ ಪೌಲ ಮತ್ತು ಬಾರ್ನಬರು ಅಂತಿಯೋಕ್ಯದಲ್ಲಿ ಸಭಾಪಾಲಕರುಗಳಾಗಿಯೂ ಮತ್ತು ಮೊದಲ ಸೇವಾ ಪ್ರಯಾಣದಲ್ಲಿಯೂ ನಿಕಟವಾದ ಸಹುದ್ಯೋಗಿಗಳಾದರು.

*ಸೆಜರೇಯ* (ವ. 30): ಈ ಪಟ್ಟಣದ ಕುರಿತು ಹೆಚ್ಚಿನ ಮಾಹಿತಿಗಾಗಿ 8:40 ರ ಟಿಪ್ಪಣಿಯನ್ನು ನೋಡಿರಿ.

## ಇ) ಪಠ್ಯ ಪ್ರಶ್ನೆಗಳು

1. ಸೌಲನು ದಮಸ್ಕದಲ್ಲಿ ಕೊಲ್ಲಲ್ಪಡಬೇಕೆಂಬ ಒಳಸಂಚಿನಿಂದ ಹೇಗೆ ರಕ್ಷಿಸಲ್ಪಟ್ಟನು?
2. ಪ್ರಾರಂಭದಲ್ಲಿ ಸೌಲನ ಕುರಿತು ಯೆರೂಸಲೇಮಿನ ವಿಶ್ವಾಸಿಗಳು ಯಾಕೆ ಭಯಪಟ್ಟರು?
3. ಬಾರ್ನಬನು ಯೆರೂಸಲೇಮಿನಲ್ಲಿ ಸೌಲನಿಗೆ ಹೇಗೆ ಸಹಾಯ ಮಾಡಿದನು?
4. ವ. 31 ರಲ್ಲಿರುವ ಯೂದಾಯ, ಗಲಿಲಾಯ ಮತ್ತು ಸಮರ್ಯಾದಲ್ಲಿರುವ ಸಭೆಗಳ ಕುರಿತು ಲೂಕನು ಹೇಳುತ್ತಿರುವ 5 ಅಂಶಗಳಾವುವು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಯೆರೂಸಲೇಮಿನಲ್ಲಿರುವ ಗ್ರೀಕ್ ಮಾತನಾಡುವ ಯೆಹೂದ್ಯರಿಗೂ ಮತ್ತು ದಮಸ್ಕದಲ್ಲಿರುವ ಯೆಹೂದ್ಯರಿಗೂ ಸೌಲನ ಸಂದೇಶ ಏನಾಗಿತ್ತು? ಈ ಸಂದೇಶವು ಯಾಕೆ ಆಶ್ಚರ್ಯಕರವಾಗಿತ್ತು? ವಿವರಿಸಿ?
2. ಈ ವಾಕ್ಯಭಾಗವನ್ನು 2 ಕೊರಿ. 11:32–33 ಮತ್ತು ಗಲಾತ್ಯ. 1:15–21 ರೊಂದಿಗೆ ಹೋಲಿಸಿರಿ. ಸೌಲನು ದಮಸ್ಕದಲ್ಲಿ ಮತ್ತು ಯೆರೂಸಲೇಮಿನಲ್ಲಿ ಉಳಿದುಕೊಂಡದ್ದರ ಕುರಿತು ಸಿಗುವ ಹೆಚ್ಚಿನ ಮಾಹಿತಿಗಳು ಏನು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಸೌಲನು ಪರಿವರ್ತನೆಯಾದ ನಂತರ ಬಾರ್ನಬನ ಸಹಾಯವಿಲ್ಲದೆ ಯೆರೂಸಲೇಮಿಗೆ ಮೊಟ್ಟಮೊದಲಿಗೆ ಭೇಟಿಕೊಟ್ಟಿದ್ದರೆ ಅದು ವಿಪತ್ತನ್ನು ತರುವುದಾಗಿತ್ತು – ಮತ್ತು ಆತನ ಜೀವತವು ಒಂದು ವ್ಯತ್ಯಾಸವಾದ ಹಾದಿ ಹಿಡಿಯುತ್ತಿತ್ತು. ಹೇಗೆ?
2. ಯೆರೂಸಲೇಮಿನಲ್ಲಿ ಸೌಲನಿಗೆ ಬಾರ್ನಬನು ಮಾಡಿದಂತಹದ್ದನ್ನು ಯಾವುದಾದರೂ ವಿಶ್ವಾಸಿಯು ಮಾಡಿದ್ದು ನಿಮಗೆ ತಿಳಿದಿದೆಯೋ? ದಯವಿಟ್ಟು ಹಂಚಿಕೊಳ್ಳಿರಿ!

## ಊ) ಉಪದೇಶಿಸು ಮತ್ತು ಬೋಧಿಸು!

1. ಸೌಲನ ಕುರಿತಾದ ***ನಿಜವಾಗಲೂ ಪರಿವರ್ತನೆಯಾದದ್ದು!*** ಎಂಬ ಶಿರೋನಾಮದೊಂದಿಗೆ ಒಂದು ಸತ್ಯವೇದ ಅಧ್ಯಯನ ಅಥವಾ ಸಂದೇಶವನ್ನು ಸಿದ್ಧಪಡಿಸಿರಿ. ನಿಮ್ಮ ಹೊರರೇಖೆಯು ಹೀಗಿರತಕ್ಕದ್ದು:

1. ತನ್ನ ಪರಿವರ್ತನೆಯ ಮುಂಚೆ ಸೌಲನು:
   1) ಆತನು ಯೇಸುವನ್ನು ದೇವಕುಮಾರನೆಂದೂ ಮತ್ತು ರಕ್ಷಕನೆಂದೂ ಒಪ್ಪಿಕೊಳ್ಳಲಿಲ್ಲ.
   2) ಆತನು ಸುವಾರ್ತೆಗೆ ವಿರೋಧಿಯಾದನು, ವಿಶ್ವಾಸಿಗಳನ್ನು ಹಿಂಸಿಸಿದನು.

2. ಸೌಲನ ಪರಿವರ್ತನೆ:

1) ದಮಸ್ಕದ ರಸ್ತೆಯಲ್ಲಿ ಯೇಸು ಆತನಿಗೆ ಪ್ರತ್ಯಕ್ಷನಾದನು.
2) ಹಳೆ ಒಡಂಬಡಿಕೆಯ ಪ್ರವಾದಿಗಳಿಂದ ಮುಂಚಿತವಾಗಿಯೇ ಹೇಳಲ್ಪಟ್ಟಂತೆ ಯೇಸುವು ಕರ್ತನೂ ಮತ್ತು ರಕ್ಷಕನೂ ಆಗಿದ್ದಾನೆಂದು ಸೌಲನು ಸ್ಪಷ್ಟವಾಗಿ ಗ್ರಹಿಸಿಕೊಂಡನು.
3) ಸೌಲನು ತನ್ನ ಕುರುಡುತನದಿಂದ ಸ್ವಸ್ಥನಾದನು.
4) ಸೌಲನು ದೀಕ್ಷಾಸ್ನಾನ ತೆಗೆದುಕೊಂಡನು ಮತ್ತು ಪವಿತ್ರಾತ್ಮನಿಂದ ತುಂಬಲ್ಪಟ್ಟನು.
5) ಯೆಹೂದ್ಯರ ಮತ್ತು ಅನ್ಯರ ನಡುವೆ ಸುವಾರ್ತೆಯನ್ನು ಸಾರಲು ಯೇಸು ಕ್ರಿಸ್ತನು ಆತನನ್ನು ಕರೆದನು.

3. ಪರಿವರ್ತನೆಗೊಂಡ ನಂತರದಲ್ಲಿ ಸೌಲನು: ಆತನ ಜೀವತವು ಸಂಪೂರ್ಣವಾಗಿ ಬದಲಾಯಿತು!

1) ಆತನು ಒಬ್ಬ ವಿಶ್ವಾಸಿಯಾದನು ಮತ್ತು ದಮಸ್ಕದಲ್ಲಿ ಹಾಗೂ ಯೆರೂಸಲೇಮಿನಲ್ಲಿದ್ದ ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ಸೇರಿದನು.
2) ವಿಶ್ವಾಸಿಗಳನ್ನು ಹಿಂಸಿಸುವವನು ಸುವಾರ್ತೆಯನ್ನು ಪ್ರಚುರಪಡಿಸುವವನಾದನು.
3) ಆತನು ಏನನ್ನು ಪ್ರಚುರಪಡಿಸಿದನು?

   - ಯೇಸು ಕ್ರಿಸ್ತನು ದೇವಕುಮಾರನೆಂದು ಪ್ರಚುರಪಡಿಸಿದನು (9:20): ಆತನು ದೇವರಾಗಿದ್ದು ಪಾಪಿಯಾದ ಮನುಷ್ಯನಿಗೆ ರಕ್ಷಣೆ ತರುವುದಕ್ಕಾಗಿ ಮನುಷ್ಯನಾದನು.
   - ಯೇಸು ವಾಗ್ದಾನ ಮಾಡಲ್ಪಟ್ಟ ರಕ್ಷಕನೆಂದು ಪ್ರಚುರಪಡಿಸಿದನು (9:22)
   - ಯೇಸುವಿನ ನಾಮ ಮಾತ್ರ ಪ್ರಸಿದ್ಧಿಗೆ ಬರಬೇಕೆಂದು ಪ್ರಚುರಪಡಿಸಿದನು (9:27): ಬೇರೆ ಯಾವ ನಾಮದಲ್ಲಿ ರಕ್ಷಣೆಯಿಲ್ಲ!

4. ನಿಮ್ಮ ಕುರಿತು ಏನು? ನೀವು ನಿಜವಾಗಿಯೂ ಪರಿವರ್ತನೆ ಹೊಂದಿದ್ದೀರಾ?

1) ಯೇಸು ಕ್ರಿಸ್ತನನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡಿದ್ದಿರೋ?
2) ನಿಮ್ಮ ಜೀವತವು ಬದಲಾಗಿದೆಯೋ?
3) ದೇವಜನರೊಂದಿಗೆ, ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ನಿಮ್ಮನ್ನು ನೀವು ಗುರುತಿಸಿಕೊಳ್ಳುತ್ತೀರೋ?
4) ಯೇಸು ಕ್ರಿಸ್ತನು ಯಾರೆಂದು ನೀವು ನಿಜವಾಗಲೂ ಅರ್ಥಮಾಡಿಕೊಂಡಿದ್ದಿರೋ?
5) ನೀವು ಪವಿತ್ರಾತ್ಮಭರಿತರಾಗಿ ನಿಮ್ಮ ಸುತ್ತಲು ಇರುವ ಜನರೆಲ್ಲರೂ ಸುವಾರ್ತೆಯನ್ನು ಸಾರುತ್ತಾ, ಯೇಸುವಿನ ಕುರಿತು ಸಾಕ್ಷಕರಿಸುತ್ತಿದ್ದೀರೋ?

2. 9:31 ರ ಆಧಾರದಿಂದ ***ಯೂದಾಯ, ಗಲಿಲಾಯ ಮತ್ತು ಸಮರ್ಯಾದ ಸಭೆಗಳು*** ಎಂಬ ಶಿರೋನಾಮದೊಂದಿಗೆ ಒಂದು ಸತ್ಯವೇದ ಅಧ್ಯಯನ ಅಥವಾ ಸಂದೇಶವನ್ನು ಸಿದ್ಧಪಡಿಸಿರಿ. ನಿಮ್ಮ ಹೊರರೇಖೆಯು ಹೀಗಿರತಕ್ಕದ್ದು:

1. ಲೂಕನು ತಿಳಿಸುತ್ತಿರುವ ಸಭೆಯ ಕುರಿತಾದ ಐದು ಅಂಶಗಳು (ಪ್ರಶ್ನೆ ಇ. 4 ರ ಉತ್ತರವನ್ನು ಉಪಯೋಗಿಸಿರಿ).

   1) ಸಮಾಧಾನದ ಸಮಯ

   2) ಮೂರು ಕ್ಷೇತ್ರಗಳಲ್ಲಿ ಪವಿತ್ರಾತ್ಮನ ಉತ್ತೇಜನ:

      - ವಿಶ್ವಾಸಿಗಳು ತಮ್ಮ ನಂಬಿಕೆ ಮತ್ತು ಸೇವೆಗಳಲ್ಲಿ ಬಲಗೊಂಡರು.
      - ಜನರು ರಕ್ಷಿಸಲ್ಪಡುತ್ತಾ ಸಭೆಯು ಸಂಖ್ಯೆಯಲ್ಲಿ ಬೆಳೆಯಿತು.
      - ವಿಶ್ವಾಸಿಗಳು ದೇವರ ಭಯದಲ್ಲಿ ಜೀವಿಸುತ್ತಿದ್ದಂತೆ, ಸಭೆಯ ಆತ್ಮೀಕ ಜೀವತವು ಬೆಳವಣಿಗೆ ಹೊಂದಿತು.

2. ಈ ಅಂಶಗಳನ್ನು ನಿಮ್ಮ ಸ್ವಂತ ಸಭೆಗಳಿಗೆ ಅನ್ವಯಿಸಿಕೊಳ್ಳಿರಿ. ಈ ಮೂರು ಕ್ಷೇತ್ರಗಳಲ್ಲಿ ನೀವು ಪವಿತ್ರಾತ್ಮನಿಂದ ಉತ್ತೇಜನವನ್ನು ಹೊಂದಿದ್ದೀರೋ?

   1) ಬಲವಾದ ನಂಬಿಕೆ ಮತ್ತು ಸೇವೆ.

   1) ಸಂಖ್ಯೆಯಲ್ಲಿ ಬೆಳೆಯುವುದು, ಅನೇಕ ಜನರು ರಕ್ಷಿಸಲ್ಪಡುವುದು.

   2) ನೀವು ದೇವರ ಭಯದಲ್ಲಿ ಜೀವಿಸುತ್ತಿದ್ದಂತೆ ನಿಮ್ಮ ಆತ್ಮೀಕ ಜೀವತವು ಅಭಿವೃದ್ಧಿಯಾಗುವುದು.

# ಭಾಗ 3

# ಯೂದಾಯ ಮತ್ತು ಸಿರಿಯಾ:

# ಅ. ಕೃ. 9:32 – 12:24

**ಪೀಠಿಕೆ**

ಲೂಕನ ಆದಿಸಭೆಯ ಮೂರನೆಯ ಚಿತ್ರಣವು ಅನ್ಯಜನರೆಡೆಗಿನ ಅದರ ಮೊದಲ ವಿಸ್ತರಣೆಯನ್ನು ವಿವರಿಸುತ್ತದೆ. ಕೊರ್ನೇಲ್ಯನ ಮನೆಗೆ ಪೇತ್ರನು ಕೊಟ್ಟ ನಾಟಕೀಯ ಭೇಟಿಯು ಅಪೋಸ್ತಲರುಗಳ ಕಣ್ಣುಗಳನ್ನು ಸುವಾರ್ತೆಯ ಸಾರ್ವತ್ರಿಕತೆಗೆ ತೆರೆಯಿತು – ದೇವರ ರಕ್ಷಣೆಯು ಅನ್ಯರಿಗೂ ಲಭ್ಯವಿದೆ! ಸುವಾರ್ತೆಯು ರೋಮನ್ ಪ್ರಾಂತವಾದ ಸಿರಿಯಾದ ಅತೀ ದೊಡ್ಡ ಪಟ್ಟಣವಾದ ಅಂತಿಯೋಕ್ಯದ ಗ್ರೀಕರಿಗೆ ತಲುಪಲ್ಪಟ್ಟಾಗ ಇದು ಹೆಚ್ಚು ಸ್ಪಷ್ಟವಾಯಿತು. ಅನೇಕರು ನಂಬಿಕೆಯಿಟ್ಟು ಕರ್ತನ ಕಡೆಗೆ ತಿರುಗಿಕೊಂಡರು. ಯೂದಾಯದಲ್ಲಿ, ಅರಸನಾದ ಹೆರೋದ ಅಗ್ರಿಪ್ಪನು ಹನ್ನೆರಡು ಶಿಷ್ಯರಲ್ಲಿ ಒಬ್ಬನಾದ ಯಾಕೋಬನನ್ನು ಕತ್ತಿಯಿಂದ ಕೊಲ್ಲಿಸಿದನು. ಪೇತ್ರನು, ಹೇಗಿದ್ದರೂ, ಅದ್ಭುತಕರವಾಗಿ ಸೆರೆಯಿಂದ ಬಿಡುಗಡೆ ಹೊಂದಿ ಮರೆಯಾಗಿ ಹೋದನು.

*ದೇವರ ವಾಕ್ಯವಾದರೋ ವೃದ್ಧಿಯಾಗುತ್ತಾ ಪ್ರಸಾರಗೊಂಡಿತು.* (ಅ. ಕೃ. 12:24)

# ಪಾಠ 24. ಐನೇಯನು ಮತ್ತು ದೊರ್ಕಳು, 9:32–43

## ಅ) ವಾಕ್ಯಭಾಗ

ಆದಿಸಭೆಯಲ್ಲಿ ನಡೆದ ಘಟನೆಗಳ ತನ್ನ ದಾಖಲೆಯಲ್ಲಿ ಈಗ ಲೂಕನು ಪೇತ್ರನ ಕಡೆಗೆ ತಿರುಗುತ್ತಾನೆ. ಪೇತ್ರನು ಲುದ್ದದಲ್ಲಿ ಎಂಟು ವರ್ಷಗಳ ಕಾಲ ಪಾರ್ಶ್ವವಾಯು ರೋಗದಿಂದ ನರಳುತ್ತಿದ್ದಂತಹ ಐನೇಯ ಎಂಬ ಹೆಸರಿನ ವ್ಯಕ್ತಿಯನ್ನು ಗುಣಪಡಿಸಿದನು. ಆ ಸ್ವಸ್ಥತೆಯನ್ನು ನೋಡಿದ ಎಲ್ಲಾ ಜನರು ಕರ್ತನ ಕಡೆಗೆ ತಿರುಗಿಕೊಂಡರು. ನಂತರ ಪೇತ್ರನು ಯೊಪ್ಪಕ್ಕೆ ಕರೆಯಲ್ಪಟ್ಟನು, ಅಲ್ಲಿ ದೈವಭಕ್ತಳಾದ ತಬಿಥಾ ಎಂಬ ಸ್ತ್ರೀಯು ಆ ಸಮಯದಲ್ಲಿ ಮರಣ ಹೊಂದಿದ್ದಳು. ಪೇತ್ರನು ಆಕೆಯನ್ನು ಪುನಃ ಜೀವಕ್ಕೆ ಕರೆದನು. ಈ ಅದ್ಭುತವನ್ನು ಕೇಳಿದ ಅನೇಕ ಜನರು ಕರ್ತನನ್ನು ನಂಬಿದರು.

## ಆ) ಟಿಪ್ಪಣಿ

*ಲುದ್ದ* (ವ. 32): ಇದು ಯೆರೂಸಲೇಮ್ ಮತ್ತು ಯೊಪ್ಪದ ನಡುವಿನ ರಸ್ತೆಯ ಉತ್ತರದಲ್ಲಿ ಕೆಲವು ಕಿಲೋಮೀಟರ್ ದೂರವಿದ್ದ ಒಂದು ಪಟ್ಟಣವಾಗಿತ್ತು.

*ಶಾರೋನಿನ* (ವ. 35): ಬಹುಶಃ ಇದು ಲುದ್ದದ ಸಮೀಪದಲ್ಲಿದ್ದ ಒಂದು ಹಳ್ಳಿಯನ್ನು ಸೂಚಿಸುತ್ತಿರಬಹುದು. *ಶಾರೋನ್* ಎಂಬುದು ಯೊಪ್ಪ ಮತ್ತು ಕರ್ಮೇಲ್ ಬೆಟ್ಟದ ನಡುವಿನ ಮೆಡಿಟೆರೇನಿಯನ್ ತೀರಪ್ರದೇಶದಲ್ಲಿದಂತಹ ಫಲವತ್ತಾದ ಪ್ರದೇಶದ ಹೆಸರೂ ಸಹ ಆಗಿದೆ.

*ಯೊಪ್ಪ* (ವ. 36): ಯೊಪ್ಪವು ಯೂದಾಯದ ಪ್ರಮುಖ ಬಂದರು ತಾಣವಾಗಿತ್ತು, ಇದು ಯೆರೂಸಲೇಮಿನಿಂದ 60 ಕಿ.ಮೀ. ದೂರದಲ್ಲಿತ್ತು. ಯೊಪ್ಪ ಮತ್ತು ಲುದ್ದದ ನಡುವಿನ ದೂರ 20 ಕಿ.ಮೀ. ಆಗಿತ್ತು.

*ತಬಿಥಾ* (ವ. 36): *ತಬಿಥಾ* ಅರಾಮಿಕ್ ಹೆಸರಾಗಿದೆ ಮತ್ತು *ದೊರ್ಕಳು* ಗ್ರೀಕ್ ಹೆಸರಾಗಿದೆ. ಈ ಎರಡೂ ಪದಗಳ ಅರ್ಥ 'ಜಿಂಕೆ'.

*ಆಕೆಯ ಶವಕ್ಕೆ ಸ್ನಾನಮಾಡಿಸಿ, ಅದನ್ನು ಮೇಲೆ ಮಾಳಿಗೆಯ ಕೋಣೆಯಲ್ಲಿಟ್ಟರು* (ವ. 37): ಅಂತಿಮಸಂಸ್ಕಾರದ ಸಿದ್ಧತೆಯಾಗಿ ಯೆಹೂದ್ಯರು ಹಾಗೂ ಗ್ರೀಕರು ಸತ್ತಂತಹ ವ್ಯಕ್ತಿಯ ದೇಹವನ್ನು ಸ್ನಾನಮಾಡಿಸುತ್ತಿದ್ದರು. ಯೆರೂಸಲೇಮಿನಲ್ಲಿ ಒಬ್ಬ ವ್ಯಕ್ತಿಯು ಸತ್ತರೆ, ಆ ದಿನವೇ ಆತನ ಶವಸಂಸ್ಕಾರವನ್ನು ಮಾಡಬೇಕಾಗಿತ್ತು, ಆದರೆ ಹಳ್ಳಿಗಳಲ್ಲಿ ಮೂರು ದಿವಸಗಳು ಕಾದು ನಂತರ ಶವಸಂಸ್ಕಾರಮಾಡಬಹುದಾಗಿತ್ತು. ಅಂತಹ ಒಂದು ಸನ್ನಿವೇಶದಲ್ಲಿ ಶವವನ್ನು ಮಾಳಿಗೆಯ ಕೊಣೆಯಲ್ಲಿ ಇಡುತ್ತಿದ್ದರು.

*ಸಿಮೋನ್ ಎಂಬ ಹೆಸರಿನ ಚರ್ಮಕಾರ* (ವ. 43): ಚರ್ಮಕಾರರು ಸತ್ತಪ್ರಾಣಿಗಳಿಂದ ಚರ್ಮವನ್ನು ತೆಗೆಯುವಂತರಾಗಿದ್ದರು, ಅದರ ಅರ್ಥ ಯೆಹೂದ್ಯರ ಧರ್ಮಶಾಸ್ತ್ರದ ಪ್ರಕಾರ ಆತನು ಅಶುದ್ಧನಾಗಿದ್ದನು. ಬಹುಶ: ಈ ಕಾರಣದಿಂದಲೇ ಸೀಮೋನನ ಮನೆಯು ಪಟ್ಟದಿಂದ ದೂರವಾಗಿ ಸಮುದ್ರ ತೀರದಲ್ಲಿತ್ತು (10:6 ನ್ನು ನೋಡಿರಿ). ಆತನೊಂದಿಗೆ ತಂಗಲು ಪೇತ್ರನು ಮಾಡಿದ ತೀರ್ಮಾನವು ಆತನು ಯೆಹೂದ್ಯ ಸಂಸ್ಕರಣಾ ಪದ್ಧತಿಯನ್ನು ನಿರ್ಲಕ್ಷಿಸಲು ಮನಸ್ಸುಳ್ಳವನಾಗಿದ್ದನೆಂದು ತೋರಿಸುತ್ತದೆ. ಹಾಗಾಗಿ ದೇವರು ಆತನನ್ನು ಮುಂದಿನ ಕಾರ್ಯಕ್ಕಾಗಿ ಸಿದ್ಧಪಡಿಸುತ್ತಿದ್ದನು – ಅದೇನೆಂದರೆ ಅನ್ಯರಾದ ಕೊರ್ನೇಲ್ಯ ಮತ್ತು ಆತನ ಮನೆಯವರಿಗೆ ಸುವಾರ್ತೆಯನ್ನು ಸಾರುವುದಕ್ಕಾಗಿ ಸಿದ್ಧಪಡಿಸುತ್ತಿದ್ದನು.

## ಇ) ಪಠ್ಯ ಪ್ರಶ್ನೆಗಳು

1. ಪೇತ್ರನು ಲುದ್ದಕ್ಕೆ ಯಾಕೆ ಪ್ರಯಾಣಿಸಿದನು?
2. ತಬಿಥಳು ಒಬ್ಬ 'ದೈವಭಕ್ತಳೆಂದು' ನಾವು ಹೇಗೆ ಹೇಳಬಹುದು?
3. ಐನೇಯನ ಸ್ವಸ್ಥತೆಯ ಮತ್ತು ತಬಿಥಾಳನ್ನು ಮರಣದಿಂದ ಎಬ್ಬಿಸಿದ ಕಾರ್ಯದಿಂದ ಉಂಟಾದ ಪರಿಣಾಮವೇನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಯೊಪ್ಪದ ವಿಶ್ವಾಸಿಗಳು ಪೇತ್ರನ ಬಳಿಗೆ ಕಳುಹಿಸಿ 'ಕೂಡಲೇ ಬರಬೇಕು' ಎಂದು ಆತನನ್ನು ಯಾಕೆ ಕೇಳಿಕೊಂಡರೆಂದು ನೀವು ಆಲೋಚಿಸುತ್ತಿರಿ?
2. ಲೂಕನು ಅಪೋಸ್ತಲರ ಕೃತ್ಯಗಳ ತನ್ನ ಪೀಠಿಕೆಯಲ್ಲಿ, ತಾನು ತನ್ನ ಸುವಾರ್ತೆಯಲ್ಲಿ 'ಯೇಸು ಮಾಡುವುದಕ್ಕೂ ಮತ್ತು ಬೋಧಿಸುವುದಕ್ಕೂ *ಪ್ರಾರಂಭಿಸಿದ್ದೆಲ್ಲವನ್ನೂ*' ಬರೆದಿದ್ದೇನೆ ಎಂದು ಹೇಳುತ್ತಾನೆ. ಇದು ಸೂಚಿಸುವುದೇನೆಂದರೆ ಅಪೋಸ್ತಲರ ಕೃತ್ಯಗಳ ಪುಸ್ತಕವು ಯೇಸು ಮಾಡುವುದಕ್ಕೂ ಮತ್ತು ಭೋದಿಸುವುದಕ್ಕೂ ಪ್ರಾರಂಭಿಸಿದ ಕಾರ್ಯವನ್ನು ಪವಿತ್ರಾತ್ಮನ ಬಲದಿಂದ ತನ್ನ ಅಪೋಸ್ತಲರ ಮೂಲಕ ಆತನು *ಮುಂದುವರೆಸಿದ್ದರ* ಕುರಿತಾಗಿದೆ . ಈ ವಾಕ್ಯಭಾಗದಲ್ಲಿ ಕಂಡುಬರುವ ಎರಡು ಅದ್ಭುತಕಾರ್ಯದ ಕಥೆಗಳು ಲೂಕನ ಸುವಾರ್ತೆಯಲ್ಲಿರುವ ಯೇಸು ಮಾಡಿದ ಎರಡು ಅದ್ಭುತಗಳನ್ನು ನಮ್ಮ ನೆನಪಿಗೆ ತರುತ್ತವೆ. ಲೂಕ 5:17–26 ರಲ್ಲಿ ಯೇಸು ಒಬ್ಬ ಪಾರ್ಶ್ವವಾಯು ರೋಗಿಯನ್ನು ಗುಣಪಡಿಸುತ್ತಾನೆ ಮತ್ತು ಲೂಕ 8:40–42, 49–56 ರಲ್ಲಿ ಯೇಸು ಯಾಯಿರನ ಸತ್ತು ಹೋಗಿದ್ದ ಮಗಳನ್ನು ಬದುಕಿಸುತ್ತಾನೆ.

   ಈ ಕಥೆಗಳನ್ನು ಹೋಲಿಸಿರಿ. ಯೇಸು ಮಾಡುವುದಕ್ಕೆ *ಪ್ರಾರಂಭಿಸಿದ್ದನ್ನು* ಅಪೋಸ್ತಲನಾದ ಪೇತ್ರನು *ಮುಂದುವರೆಸಿದನು* ಎಂಬುದನ್ನು ತೋರಿಸುವ ಯಾವುದಾದರೂ ಅಚ್ಚೊತ್ತುವ ಸಮಾನತೆಗಳನ್ನು ನೀವು ಕಾಣುತ್ತೀರೋ?

## ಊ) ಉಪದೇಶಿಸು ಮತ್ತು ಬೋಧಿಸು!

ಈ) 2 ರ ಪ್ರಶ್ನೆ ಮತ್ತು ಉತ್ತರಗಳನ್ನು ಹಾಗೂ ಇನ್ನೂ ಕೆಲವು ಅಂಶಗಳನ್ನು ಬಳಸಿಕೊಂಡು ಒಂದು ಸತ್ಯವೇದ ಅಧ್ಯಯನವನ್ನು ಅಥವಾ ಸಂದೇಶವನ್ನು ಸಿದ್ಧಪಡಿಸಿರಿ. ***ಯೇಸು ಪ್ರಾರಂಭಿಸಿದನು – ಪೇತ್ರನು ಮುಂದುವರೆಸಿದನು*** ಎಂಬ ಶಿರೋನಾಮವನ್ನು ಅದಕ್ಕೆ ಕೊಡಿರಿ. ಇದು ನಿಮ್ಮ ಹೊರರೇಖೆಯಾಗಿರಬಹುದು:

1. ಪೀಠಿಕೆ:

   1) ಅ. ಕೃ. 1:1–2 ರಲ್ಲಿ ಲೂಕನ ಘೋಷಣೆ: ಆತನ ಸುವಾರ್ತೆಯು ಯೇಸು ಕಾರ್ಯ ಮಾಡಿದ್ದರ ಮತ್ತು ಬೋಧಿಸಿದ್ದರ ಕುರಿತಾಗಿದೆ. ಅಪೋಸ್ತಲರ ಕೃತ್ಯಗಳು ಯೇಸು ತನ್ನ ಸಭೆಯ ಮೂಲಕವಾಗಿ ತಾನು ಕಾರ್ಯ ಮಾಡುವುದನ್ನು ಮತ್ತು ಬೋಧಿಸುವುದನ್ನು ಮುಂದುವರೆಸುವುದರ ಕುರಿತಾಗಿದೆ.

   2) ಹಾಗಾದರೆ ಯೇಸು ಹೇಗೆ ‘ ಮುಂದುವರೆಸಿದನು’ ?

      - ಆತನು 12 ಜನ ಅಪೋಸ್ತಲರನ್ನು ತನ್ನೊಂದಿಗಿರಲು ಆಯ್ಕೆಮಾಡಿಕೊಂಡನು (ಲೂಕ. 6:3), ತನ್ನನ್ನು ಗಮನಿಸಿ ತನ್ನಿಂದ ಕಲಿತುಕೊಳ್ಳಲು ಅವರನ್ನು ಆರಿಸಿಕೊಂಡನು (ಯೇಸು ಕಾರ್ಯ ಮಾಡಿದ್ದರ ಮತ್ತು ಬೋಧಿಸಿದ್ದರ ಕುರಿತು ಸುವಾರ್ತೆಗಳಲ್ಲಿ ದಾಖಲಿಸಲ್ಪಟ್ಟಿದೆ).

      - ಆತನಲ್ಲಿ ಯಾರು ನಂಬಿಕೆಯಿಡುತ್ತಾರೋ ಅವರು ಆತನು ಮಾಡಿದ ಹಾಗೆ ಮಾಡುವರು ಮತ್ತು ಅದಕ್ಕಿಂತ ಹೆಚ್ಚಿನದ್ದನ್ನು ಮಾಡುವರೆಂದು ಮುಂಚಿತವಾಗಿಯೇ ತಿಳಿಸಿದನು (ಯೋಹಾನ 14:14).

      - ಆತನು ಪವಿತ್ರಾತ್ಮನ ಬಲವನ್ನು ಅವರಿಗೆ ವಾಗ್ದಾನಮಾಡಿದನು (ಲೂಕ. 24:45 – 49; ಅ. ಕೃ. 1:8)

        – ಪಂಚಾಶತ್ತಮದ ಮೊದಲ ದಿನದಂದು ಈ ಪವಿತ್ರಾತ್ಮನ ವಾಗ್ದಾನವು ನೆರವೇರಲ್ಪಟ್ಟಿತು. (ಅ. ಕೃ. 2:1–4, 2:33)

2. ಲೂಕನ ಸುವಾರ್ತೆಯಲ್ಲಿ ದಾಖಲಿಸಲ್ಪಟ್ಟ ಯೇಸುವಿನ ಎರಡು ಅದ್ಭುತ ಕಾರ್ಯಗಳು:

   1) ಪಾರ್ಶ್ವವಾಯು ರೋಗಿಯ ಸ್ವಸ್ಥತೆ (ಲೂಕ. 5:17–26)

   2) ಯಾಯಿರನ ಮಗಳನ್ನು ಜೀವಂತವಾಗಿ ಎಬ್ಬಿಸಿದ್ದು (ಲೂಕ. 8:40–42, 49–56)

3. ಅಪೋಸ್ತಲರ ಕೃತ್ಯಗಳಲ್ಲಿ ದಾಖಲಿಸಲ್ಪಟ್ಟಂತೆ ಪೇತ್ರನು ಮಾಡಿದ ಸಮಾನವಾದ ಅದ್ಭುತಗಳು:

   1) ಲುದ್ದದಲ್ಲಿ ಐನೇಯನೆಂಬ ಪಾರ್ಶ್ವವಾಯು ರೋಗಿಯ ಸ್ವಸ್ಥತೆ (ಅ. ಕೃ. 9:23–35)

2) ಯೊಪ್ಪದಲ್ಲಿ ತಬಿಥಾಳನ್ನು ಮರಣದಿಂದ ಎಬ್ಬಿಸಿದ್ದು (ಅ. ಕೃ. 9:36–42)

4. ಐನೇಯ ಮತ್ತು ತಬಿಥಾಳ ಕಥೆಯಲ್ಲಿ ಯೇಸು ಹೇಗೆ ಕೇಂದ್ರದಲ್ಲಿದ್ದಾನೆಂದು ನೋಡೋಣ:

1) ಈ ಅದ್ಭುತಗಳು ಯೇಸುವಿನ ಮಾದರಿಯನ್ನು ಹಿಂಬಾಲಿಸುತ್ತವೆ: ಯೇಸು ಮಾಡಿದ್ದನ್ನೇ ಪೇತ್ರನು ಮಾಡಿದ.

2) ಈ ಅದ್ಭುತಗಳು ಯೇಸುವಿನ ನಾಮದಲ್ಲಿ ಮತ್ತು ಯೇಸುವಿನ ಬಲದಲ್ಲಿ ನೆರವೇರಿದವು; ಪೇತ್ರನಿಂದಲ್ಲ ಅಥವಾ ಪೇತ್ರನ ಹೆಸರಿನಿಂದಲೂ ಅಲ್ಲ.

- ಐನೇಯನಿಗೆ ಪೇತ್ರನು ಹೇಳಿದ್ದು, 'ಯೇಸು ಕ್ರಿಸ್ತನು ನಿನ್ನನ್ನು ಗುಣಪಡಿಸುತ್ತಾನೆ'!
- ತಬಿಥಾಳ ವಿಷಯದಲ್ಲಿ ಪೇತ್ರನು ತನ್ನ ಮೊಣಕಾಲನ್ನೂರಿ (ಯೇಸುವಿಗೆ) ಪ್ರಾರ್ಥಿಸಿದನು.

1) ಈ ಅದ್ಭುತಗಳು ಯೇಸುವಿಗೆ ಮಹಿಮೆಯನ್ನು ಸಲ್ಲಿಸಿದವು; ಪೇತ್ರನಿಗಲ್ಲ.

2) ಈ ಅದ್ಭುತಗಳು ಜನರು ಯೇಸುವಿನ ಹಿಂಬಾಲಕರಾಗುವುಂತೆ ಕಾರಣವಾಯಿತೇ ಹೊರತು; ಪೇತ್ರನ ಹಿಂಬಾಲಕರಾಗುವಂತೆ ಅಲ್ಲ.

- ಐನೇಯನ ಕಥೆಯಲ್ಲಿ ಆ ಪ್ರದೇಶದಲ್ಲಿ ವಾಸವಾಗಿದ್ದವರೆಲ್ಲರೂ ದೇವರ ಕಡೆಗೆ ತಿರುಗಿಕೊಂಡರು.
- ತಬಿಥಾಳ ಕಥೆಯಲ್ಲಿ ಬಹಳ ಜನರು ದೇವರಲ್ಲಿ ನಂಬಿಕೆ ಇಟ್ಟರು.

5. ಇಂದು ನಮ್ಮ ಸಭೆಯ ಕುರಿತು ಏನು?

1) ನಾವು ವಾಗ್ದಾನವನ್ನು ಪಡೆದಿದ್ದೇವೋ – ಅಂದರೆ, ನಮ್ಮ ಜೀವಿತ ಮತ್ತು ಸೇವೆಯಲ್ಲಿ ಪವಿತ್ರಾತ್ಮನ ಬಲವನ್ನು ಪಡೆದಿದ್ದೇವೋ?

2) ಯೇಸು ಪ್ರಾರಂಭಿಸಿದ ಕಾರ್ಯಗಳನ್ನು ನಾವು ಮುಂದುವರೆಸುತ್ತಿದ್ದೇವೋ?

3) ನಮ್ಮ ಉಪದೇಶಗಳಲ್ಲಿ ಮತ್ತು ಬೋಧನೆಗಳಲ್ಲಿ ಯೇಸುವನ್ನು ಕೇಂದ್ರಿಕರಿಸುತ್ತೇವೋ?

4) ನಮ್ಮ ಸೇವೆಯ ಮೂಲಕ ಅದ್ಭುತ ನಡೆಯುವಾಗ ನಾವು ಯೇಸುವಿಗೆ ಮಹಿಮೆಯನ್ನು ಸಲ್ಲಿಸುತ್ತೇವೋ?

5) ನಮ್ಮ ಸೇವೆಯ ಮೂಲಕ ಹೆಚ್ಚು ಹೆಚ್ಚು ಜನರು ಯೇಸುವಿನ ಹಿಂಬಾಲಕರಾಗುವುದನ್ನು (ಆತನ ಕಡೆಗೆ ತಿರುಗಿಕೊಂಡು ಆತನನ್ನು ನಂಬುವುದನ್ನು) ನಾವು ಕಾಣುತ್ತಿದ್ದೇವೋ?

# ಪಾಠ 25. ಕೊರ್ನೇಲ್ಯನು ಪೇತ್ರನನ್ನು ಕರೆಕಳುಹಿಸಿದ್ದು, 10:1–8

## ಅ) ವಾಕ್ಯಭಾಗ

ಸೆಜರೇಯದಲ್ಲಿ ಕೊರ್ನೇಲ್ಯನೆಂಬ ರೋಮ್ ಅಧಿಕಾರಿಯಿದ್ದನು. ಆತನು ದೇವರಿಗೆ ಭಯಪಡುವ ಮತ್ತು ಭಕ್ತಿವಂತ ಅನ್ಯನಾಗಿದ್ದನು. ಒಂದು ಮಧ್ಯಾಹ್ನದಲ್ಲಿ ಆತನು ಪ್ರಾರ್ಥಿಸುತ್ತಿದ್ದಾಗ ಒಬ್ಬ ದೇವದೂತನು ಪ್ರತ್ಯಕ್ಷನಾಗಿ ನೀನು ಯೊಪ್ಪಕ್ಕೆ ಜನರನ್ನು ಕಳುಹಿಸಿ ಚರ್ಮಕಾರನಾದ ಸೀಮೋನನ ಮನೆಯಲ್ಲಿ ತಂಗಿರುವ ಪೇತ್ರನನ್ನು ಕರೆದುಕೊಂಡು ಬರಲು ಹೇಳು ಎಂದು ಹೇಳಿದನು. ತಕ್ಷಣವೇ ಕೊರ್ನೇಲ್ಯನು ತನ್ನ ಇಬ್ಬರು ಆಳುಗಳನ್ನು ಮತ್ತು ಒಬ್ಬ ಸಿಪಾಯಿಯನ್ನು ಕರೆದು ಯೊಪ್ಪಕ್ಕೆ ಕಳುಹಿಸಿದನು.

## ಆ) ಟಿಪ್ಪಣಿ

ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ಕೊರ್ನೇಲ್ಯನ ಪರಿವರ್ತನೆಯ ಕಥೆಯು ಬಹಳ ಪ್ರಾಮುಖ್ಯವಾದ ಕಥೆಯಾಗಿದೆ. ಇದು ಎರಡು ಸಾರಿ ಹೇಳಲ್ಪಟ್ಟಿದೆ: ಅಧ್ಯಾಯ 10 ರಲ್ಲಿ ಮೊದಲ ಬಾರಿಗೆ ಲೂಕನ ಸ್ವಂತ ವಿವರಣೆಯಲ್ಲಿ; ಎರಡನೆಯ ಬಾರಿ ಅಧ್ಯಾಯ 11 ರಲ್ಲಿ ಪೇತ್ರನು ತನ್ನ ಕೃತಿಯನ್ನು ಯೆರೂಸಲೇಮಿನ ಸಭೆಯವರ ಮುಂದೆ ಪ್ರತಿವಾದಿಸಿದಾಗ. ಕೆಲವು ವರ್ಷಗಳ ನಂತರ ಇದು ಪುನಃ ಪೇತ್ರ ಮತ್ತು ಯಾಕೋಬರಿಂದಲೂ ಯೆರೂಸಲೇಮಿನ ನ್ಯಾಯಸಭೆಯಲ್ಲಿ ಉಲ್ಲೇಖಿಸಲ್ಪಟ್ಟಿತ್ತು (15:7–9, 13–18).

*ಸೆಜರೇಯ* (ವ. 1): 8:40 ರ ಟಿಪ್ಪಣಿನ್ನು ನೋಡಿರಿ. ಸೆಜರೇಯದಿಂದ ಯೊಪ್ಪವು 50 ಕಿ.ಮೀ. ದೂರವಿತ್ತು. ಅದು ಸುಮಾರು ಒಂದು ದಿನದ ಪ್ರಯಾಣದಷ್ಟಾಗಿತ್ತು.

*ಕೊರ್ನೇಲ್ಯನು ಇಟಲಿಯ ದಳ ಎಂದು ಕರೆಯಲ್ಪಡುವ ದಳಕ್ಕೆ ಅವನು ಶತಾಧಿಪತಿ* (ವ. 1): ಕೊರ್ನೇಲ್ಯನು (ಲ್ಯಾಟಿನ್ ಹೆಸರು) ಒಬ್ಬ ಶತಾಧಿಪತಿಯಾಗಿದ್ದನು. ಆತನು ಒಬ್ಬ ರೋಮ್ ಅಧಿಕಾರಿಯಾಗಿದ್ದು ಕನಿಷ್ಠ 100 ಜನ ಸೈನಿಕತಂಡದ ಅಧಿಪತಿಯಾಗಿದ್ದನು. ರೋಮನ್ ಪ್ರಾಂತವಾದ ಯೂದಾಯದ ರಾಜಧಾನಿ ಸೆಜರೇಯದಲ್ಲಿದ್ದ 'ಇಟಲಿಯ ದಳ' ಎಂಬ ಪಡೆಯ ಸೇನಾಧಿಕಾರಿಯಾಗಿದ್ದನು. ರೋಮನ್ ಸಾಮ್ರಾಜ್ಯದ ಸೈನ್ಯದಲ್ಲಿ ಶತಾಧಿಪತಿಗಳು ಬಹಳ ಜಾಗ್ರತೆಯಿಂದ ನೇಮಿಸಲ್ಪಡುತ್ತಿದ್ದರು ಮತ್ತು ಅವರು ಸೈನ್ಯದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು.

*ದೇವರಿಗೆ ಭಯಪಡುವವನು* (ವ. 2): ಈ ಪದವು ಸಂಪೂರ್ಣವಾಗಿ ಯೆಹೂದ್ಯರ ನಂಬಿಕೆಗೆ ಪರಿವರ್ತನೆಯಾಗದಿದ್ದರೂ ಇಸ್ರಾಯೇಲರ ದೇವರನ್ನು ನಂಬುತ್ತಿದ್ದ ಮತ್ತು ಯೆಹೂದ್ಯರ ನೈತಿಕ ಬೋಧನೆಗಳನ್ನು ಗೌರವಿಸುತ್ತಿದ್ದ ವ್ಯಕ್ತಿಗೆ ಬಳಸಲ್ಪಡುತ್ತಿತ್ತು.

*ಮಧ್ಯಾಹ್ನ ಸುಮಾರು ಮೂರು ಗಂಟೆಯ ಸಮಯ* (ವ. 3): ಇದು ಯೆಹೂದ್ಯರ ಪ್ರಾರ್ಥನೆಯ ಸಮಯವಾಗಿದೆ ಮತ್ತು ಯೆಹೂದ್ಯರ ಆಚರಣೆಗಳನ್ನು ಕೊರ್ನೇಲ್ಯನು ಪಾಲಿಸುತ್ತಿದ್ದುದ್ದನ್ನು ಇದು ತೋರಿಸುತ್ತದೆ.

*ಜ್ಞಾಪಕಾರ್ಥ ಅರ್ಪಣೆಗಳಾಗಿ* (ವ. 4): ಇದು ಹಳೆ ಒಡಂಬಡಿಕೆಯ ಧಾನ್ಯ ಸಮರ್ಪಣೆಯ ಒಂದು ಭಾಗವಾಗಿದೆ, ಯಾಜಕ 2;1–2 ನ್ನು ನೋಡಿರಿ. ಇದರ ರೂಪಕಾಲಂಕಾರಿಕ ಅರ್ಥವೇನೆಂದರೆ, ಕೊರ್ನೇಲ್ಯನು ಬಡವರ ಕುರಿತು ವಹಿಸುತ್ತಿದ್ದ ಕಾಳಜಿಯು ದೇವರಿಗೆ ಮೆಚ್ಚಿಕೆಯಾಗಿತ್ತು ಮತ್ತು ಆತನನ್ನು ರಕ್ಷಣೆಗೆ ನಡೆಸಲು ಬಯಸಿದನು.

## ಇ) ಪಠ್ಯ ಪ್ರಶ್ನೆಗಳು

1. ಈ ಪಠ್ಯದಲ್ಲಿ ಕೊರ್ನೇಲ್ಯನ ಕುರಿತು ನಾವು ಏನನ್ನು ಕಲಿಯುತ್ತೇವೆ?
2. ಕೊರ್ನೇಲ್ಯನು ಏನು ಮಾಡಬೇಕೆಂದು ದೇವದೂತನು ತಿಳಿಸಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

ಕೊರ್ನೇಲ್ಯನ ಮಾನಸಾಂತರದ ಕಥೆಯು 'ಅಪೊಸ್ತಲರ ಕೃತ್ಯಗಳಲ್ಲಿ ಒಂದು ಪ್ರಾಮುಖ್ಯವಾದ ಕಥೆಯಾಗಿದೆ' ಎಂದು ನೀವು ಯಾಕೆ ಆಲೋಚಿಸುತ್ತೀರಿ?

# ಪಾಠ 26. ಪೇತ್ರನ ದರ್ಶನ, 10:9–23

## ಅ) ವಾಕ್ಯಭಾಗ

ಲೂಕನು ತನ್ನ ದೃಶ್ಯಾವಳಿಯನ್ನು ಸೆಜರೇಯದಲ್ಲಿನ ಕೊರ್ನೇಲ್ಯಯನ ಮನೆಯಿಂದ ಯೊಪ್ಪದಲ್ಲಿನ ಚರ್ಮಕಾರನಾದ ಸೀಮೋನನ ಮನೆಯ ಕಡೆಗೆ ಬದಲಾಯಿಸುತ್ತಾನೆ. ಅಲ್ಲಿ ಪೇತ್ರನು ಪ್ರಾರ್ಥನೆಗಾಗಿ ಮಾಳಿಗೆಯ ಮೇಲೆ ಹೋದನು. ಊಟ ಸಿದ್ಧವಾಗುತ್ತಿರುವಾಗ ಆತನಿಗೆ ದರ್ಶನವುಂಟಾಗಿ ಪರಲೋಕದಿಂದ ಒಂದು ಜೋಳಿಗೆಯಂತಿರುವುದು ಭೂಮಿಯ ಮೇಲೆ ಕೆಳಗಿಳಿಸಲ್ಪಡುವುದನ್ನು ಕಂಡನು. ಅದು ಎಲ್ಲಾ ಜಾತಿಯ ಪ್ರಾಣಿಗಳನ್ನೊಳಗೊಂಡಿತ್ತು. ಒಂದು ಸ್ವರವು ಪೇತ್ರನಿಗೆ ಕೊಂದು ತಿನ್ನಲು ಹೇಳಿತು. ಪೇತ್ರನು ತಿರಸ್ಕರಿಸಿದನು, ಯಾಕೆಂದರೆ ಯೆಹೂದ್ಯರ ಸಂಸ್ಕಾರದ ಪ್ರಕಾರವಾಗಿ ಅಶುದ್ಧವಾದ ಪ್ರಾಣಿಗಳು ಆ ಜೋಳಿಗೆಯಲ್ಲಿ ತುಂಬಿದ್ದವು. ಆ ಸ್ವರವು ಪುನಃ ಆಜ್ಞಾಪಿಸಿತು. ಈ ರೀತಿಯಾಗಿ ಮೂರು ಬಾರಿ ಆಯಿತು. ಪೇತ್ರನು ಈ ದರ್ಶನದ ಅರ್ಥವನ್ನು ಆಲೋಚಿಸುತ್ತಿರುವಾಗ ಕೊರ್ನೇಲ್ಯನಿಂದ ಕಳುಹಿಸಲ್ಪಟ್ಟ ಸಂದೇಶಕರು ಬಂದರು. ಪವಿತ್ರಾತ್ಮನು ಆತನಿಗೆ ಅವರೊಂದಿಗೆ ಹೋಗಲು ಹೇಳಿದನು. ಆ ಸಂದೇಶಕರು ತಮ್ಮ ಭೇಟಿಯ ಕುರಿತು ವಿವರಿಸಿದರು ಮತ್ತು ಪೇತ್ರನು ಅವರಿಗೆ ತನ್ನ ಅತಿಥಿಗಳಾಗಿ ರಾತ್ರಿಯಲ್ಲಿ ತಂಗುವಂತೆ ಆಹ್ವಾನಿಸಿದನು. ಮರುದಿನ ಪೇತ್ರನು ಕೆಲವು ವಿಶ್ವಾಸಿಗಳೊಂದಿಗೆ ಆ ಸಂದೇಶಕರೊಡನೆ ಯೊಪ್ಪವನ್ನು ಬಿಟ್ಟುಹೋದನು.

## ಆ) ಟಿಪ್ಪಣಿ

*ಎಲ್ಲಾ ಜಾತಿಯ ನಾಲ್ಕು ಕಾಲಿನ ಪ್ರಾಣಿಗಳು, ಭೂಮಿಯ ಮೇಲೆ ಹರಿದಾಡುವ ಕ್ರಿಮೀಕೀಟಗಳು, ಹಾರಾಡುವ ಪಕ್ಷಿಗಳು* (ವ. 12): ಈ ಜೋಳಿಗೆಯು ಧರ್ಮಶಾಸ್ತ್ರದಲ್ಲಿ ಘೋಷಿಸಲ್ಪಟ್ಟ ಶುದ್ಧ ಮತ್ತು ಆಶುದ್ಧ ಪ್ರಾಣಿಗಳಿಂದ ಕೂಡಿತ್ತು. (ಯಾಜಕ. 11 ನ್ನು ನೋಡಿರಿ). ಇದು ವ. 14 ರಲ್ಲಿರುವ ಪೇತ್ರನ ಪ್ರತಿಕ್ರಿಯೆಯನ್ನು ವಿವರಿಸುತ್ತದೆ.

*ಹಿಂಜರಿಯಬೇಡ* (ವ. 20): ಈ ಗ್ರೀಕ್ ಪದವಿನ್ಯಾಸವು ಒಂದಕ್ಕಿಂತ ಹೆಚ್ಚು ಅರ್ಥಗಳನ್ನೊಳಗೊಂಡಿದೆ. ಅದರಲ್ಲಿ ಒಂದು ಅರ್ಥವು 'ಭೇದಭಾವ ಮಾಡದಿರು' ಎಂಬುದಾಗಿದೆ. ಹಾಗಾಗಿ ಬಹುಶಃ ಪವಿತ್ರಾತ್ಮನು ಪೇತ್ರನಿಗೆ ಹೀಗೆ ಹೇಳಿದ್ದಿರಬಹುದು, 'ಅನ್ಯರು ಮತ್ತು ಯೆಹೂದ್ಯರೆಂದು ಭೇದಭಾವ ಮಾಡದೆ ಅವರೊಂದಿಗೆ ಹೋಗು'. ಮಾಳಿಗೆಯ ಮೇಲೆ ಉಂಟಾದ ದರ್ಶನದಲ್ಲಿ ಪೇತ್ರನಿಗೆ ಊಟಗಳ ಮಧ್ಯದಲ್ಲಿ ಶುದ್ಧ ಮತ್ತು ಅಶುದ್ಧವೆಂದು ಭೇದಮಾಡಬೇಡ ಎಂದು ಧ್ವನಿಯಾಯಿತು. ಈಗ ಪವಿತ್ರಾತ್ಮನು ಪೇತ್ರನಿಗೆ ಯೆಹೂದ್ಯರು (ಶುದ್ಧರು) ಮತ್ತು ಅನ್ಯರು (ಅಶುದ್ಧರು) ಎಂಬ ಯೆಹೂದ್ಯರ ಭೇದಭಾವವನ್ನು ಪಾಲಿಸಬೇಡವೆಂದು ಹೇಳಿದನು.

*ಪೇತ್ರನು ಅವರನ್ನು ತನ್ನ ಅತಿಥಿಗಳಾಗಿರಲು ಮನೆಯೊಳಗೆ ಕರೆದನು* (ವ. 23): ಪೇತ್ರನು ಈಗಾಗಲೇ ದರ್ಶನದ ಅರ್ಥವನ್ನು ಗ್ರಹಿಸಿಕೊಂಡದ್ದನ್ನು ಇದು ತೋರಿಸುತ್ತದೆ. ಯೆಹೂದ್ಯರು ಈ ರೀತಿಯಲ್ಲಿ ಅನ್ಯರನ್ನು ಅತಿಥಿಗಳನ್ನಾಗಿ ಆಹ್ವಾನಿಸಲು ಅನುಮತಿಯಿರಲಿಲ್ಲ. ಆದರೆ ಆತನು ಆ ಅನ್ಯ ಸಂದರ್ಶಕರನ್ನು (ಯೆಹೂದ್ಯ ಸಂಪ್ರದಾಯದ ಪ್ರಕಾರ ಸಂಸ್ಕಾರಬದ್ಧವಾಗಿ ಅಶುದ್ಧ ಜನರನ್ನು) ಒಂದು ರಾತ್ರಿಯ ಕಾಲ ತನ್ನೊಂದಿಗೆ (ಸಂಸ್ಕಾರಬದ್ಧವಾಗಿ ಶುದ್ಧ ವ್ಯಕ್ತಿಯೊಂದಿಗೆ) ಉಳಿದುಕೊಳ್ಳಲು ಆಹ್ವಾನಿಸಿದನು.

*ಕೆಲವು ಸಹೋದರರು* (ವ. 23): ವಿಶಾಲವಾದ ಹಿನ್ನಲೆಯಿಂದ ಅವರು ಆರು ಜನರೆಂದು ನಾವು ತಿಳಿದುಕೊಳ್ಳಬಹುದು (11:12), ಮತ್ತು ಅವರು ಯೆಹೂದ್ಯ ಹಿನ್ನಲೆಯಿಂದ ಬಂದವರಾಗಿದ್ದರು (10:45).

## ಇ) ಪಠ್ಯ ಪ್ರಶ್ನೆಗಳು

1. ಪೇತ್ರನು ಯಾಕೆ ಮಾಳಿಗೆಯ ಮೇಲೆ ಹೋದನು?
2. ಪೇತ್ರನು ದರ್ಶನವನ್ನು ನೋಡಿದ ಮೇಲೆ ಏನು ಮಾಡಿದನು?
3. ಪವಿತ್ರಾತ್ಮನು ಪೇತ್ರನಿಗೆ ಮೂರು ಜನ ಸಂದರ್ಶಕರ ಕುರಿತು ತಿಳಿಸಿದನು. ಅವರನ್ನು ಕಳುಹಿಸಿಕೊಟ್ಟವರು ಯಾರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಮಾಳಿಗೆಯ ಮೇಲೆ ಉಂಟಾದ ದರ್ಶನದ ಮೂಲಕವಾಗಿ ದೇವರು ಪೇತ್ರನಿಗೆ ಕಲಿಸಿದ ಪಾಠವೇನು?
2. ದೇವರು ತಕ್ಕ ಸಮಯದಲ್ಲಿ ಪೇತ್ರ ಮತ್ತು ಕೊರ್ನೇಲ್ಯರ ನಡುವೆ ಅನೇಕ ಘಟನೆಗಳು ನಡೆಯುವಂತೆ ಪರಿಪೂರ್ಣವಾಗಿ ಕಾರ್ಯಮಾಡಿದ್ದರ ಕುರಿತು ಈ ವಾಕ್ಯಭಾಗದಲ್ಲಿ ಕಾಣುತ್ತೇವೆ. ದೇವರು ತಕ್ಕ ಸಮಯದಲ್ಲಿ ಹೇಗೆ ಕಾರ್ಯಮಾಡಿದನು?

### ಉ) ಹಂಚಿಕೊಳ್ಳವುದು ಮತ್ತು ಅನ್ವಯಿಸಿಕೊಳ್ಳವುದು

ಸನ್ನಿವೇಶಕ್ಕೆ ಹೊರತುಪಡಿಸಿ ಸತ್ಯವೇದ ವಾಕ್ಯಗಳನ್ನು ಅರ್ಥವಿವರಿಸುವುದರ ಅಪಾಯಗಳ ಒಂದು ಉದಾಹರಣೆಯನ್ನಾಗಿ ಈ ವಾಕ್ಯಭಾಗವನ್ನು ಬಳಸಿಕೊಳ್ಳಬಹುದು. 11–15 ವಚನಗಳನ್ನು ಮಾತ್ರ ಓದಿರಿ. ನಂತರ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿರಿ:

1) ಆ ದೊಡ್ಡ ಜೋಳಿಗೆಯು ಯಾವುದರಿಂದ ಕೂಡಿತ್ತು (ವ. 11)?

2) ಪರಲೋಕದಿಂದ ಕೇಳಿಸಿದ ಸ್ವರವು ಪೇತ್ರನಿಗೆ ಏನು ಮಾಡಲು ಹೇಳಿತು (ವ. 13)?

3) ಪೇತ್ರನು ಪರಲೋಕದಿಂದ ಕೇಳಿಸಿದ ಸ್ವರಕ್ಕೆ ವಿಧೇಯನಾಗಲು ಯಾಕೆ ತಿರಸ್ಕರಿಸಿದನು (ವ. 14)?

4) ಪೇತ್ರನು ಹೊಂದಿದ ಗದರಿಕೆ ಏನು (ವ. 15)?

5) ಹಾಗಾದರೆ ಈ ದರ್ಶನದ ಮೂಲಕವಾಗಿ ಪೇತ್ರನು ದೇವರಿಂದ ಯಾವ ಪಾಠವನ್ನು ಕಲಿತನು?

ನೀವು ಒಂದು ವೇಳೆ ಈ ಅಭ್ಯಾಸವನ್ನು ಸರಿಯಾಗಿ ಮಾಡಿರುವುದಾದರೆ ಕೊನೆಯ ಪ್ರಶ್ನೆಗೆ ನಿಮ್ಮ ಉತ್ತರವು ಒಂದು ರೀತಿಯಲ್ಲಿ ಹೀಗಿರಬೇಕು: ಈ ದರ್ಶನದ ಮೂಲಕವಾಗಿ ದೇವರು ಪೇತ್ರನಿಗೆ ಎಲ್ಲ ವಿಧವಾದ ಪ್ರಾಣಿಗಳನ್ನೂ, ಹರಿದಾಡುವ ಸರೀಸೃಪಗಳನ್ನೂ ಮತ್ತು ಪಕ್ಷಿಗಳನ್ನೂ ತಿನ್ನಬೇಕೆಂದು ಹೇಳಿದನು.

ಆದರೆ ಈ ವಾಕ್ಯಭಾಗದ ವಿಶಾಲವಾದ ಸನ್ನಿವೇಶ ಹಿನ್ನಲೆಯು ತಿಳಿಸುವುದೇನೆಂದರೆ, ದೇವರು ಪೇತ್ರನಿಗೆ ಈ ದರ್ಶನದ ಮೂಲಕವಾಗಿ ಕಲಿಸಿದ ಪಾಠವು ಆಹಾರದ ಬದಲಾಗಿರದೆ ಜನರ ಬಗ್ಗೆಯಾಗಿತ್ತು.

ಸನ್ನಿವೇಶಕ್ಕೆ ಹೊರತುಪಡಿಸಿ ದೇವರ ವಾಕ್ಯವನ್ನು ಅರ್ಥವಿವರಿಸುವುದು ದೇವರ ಸಂದೇಶದ ಕುರಿತು ಒಂದು ತಪ್ಪು ತಿಳುವಳಿಕೆಗೆ ನಡೆಸುತ್ತದೆ ಎನ್ನುವುದಕ್ಕೆ ನಿಮ್ಮ ಸ್ವಂತ ಜೀವಿತದಿಂದ ಅಥವಾ ನಿಮ್ಮ ಸಭೆಯಿಂದ ಇದೇ ರೀತಿಯ ಇತರೆ ಉದಾಹರಣೆಗಳಿವೆಯೋ? ಆಲೋಚಿಸಿರಿ, ಹಂಚಿಕೊಳ್ಳಿರಿ ಮತ್ತು ಚರ್ಚಿಸಿರಿ!

# ಪಾಠ 27. ಕೊರ್ನೇಲ್ಯನ ಮನೆಯಲ್ಲಿ ಪೇತ್ರನು, 10:24–48

## ಅ) ವಾಕ್ಯಭಾಗ

ಸೆಜರೇಯದಲ್ಲಿರುವ ಕೊರ್ನೇಲ್ಯನ ಮನೆಯಲ್ಲಿ ಅನೇಕರು ಕೂಡಿಬಂದಿದ್ದು ಪೇತ್ರನ ಬರೋಣಕ್ಕಾಗಿ ಕಾಯುತ್ತಿದ್ದರು. ಕೊರ್ನೇಲ್ಯನು ಪೇತ್ರನನ್ನು ಭಕ್ತಿಪೂರ್ವಕವಾಗಿ ವಂದಿಸಿದನು ಮತ್ತು ಒಬ್ಬ ಅನ್ಯನ ಮನೆಯನ್ನು ತಾನು ಸಂದರ್ಶಿಸುವುದು ಎಂಥಾ ವಿಚಿತ್ರವೆಂಬುದನ್ನು ಪೇತ್ರನು ಆತನಿಗೆ ತಿಳಿಸಿದನು. ಕೊರ್ನೇಲ್ಯನು ಪೇತ್ರನನ್ನು ಕರೆಕಳುಹಿಸಿದ್ದರ ಕಾರಣವನ್ನೂ ಮತ್ತು ತಾವು ದೇವರ ಸನ್ನಿಧಿಯಲ್ಲಿದ್ದೇವೆಂಬುದನ್ನೂ ವಿವರಿಸಿದ ನಂತರ ಪೇತ್ರನು ಮಾತನಾಡಲು ಪ್ರಾರಂಭಿಸಿದನು. ಪೇತ್ರನು ಸುವಾರ್ತೆಯ ಸಂದೇಶವನ್ನು ಹೇಳುತ್ತಿರುವಾಗಲೇ ಕೇಳುವವರ ಮೇಲೆ ಪವಿತ್ರಾತ್ಮನು ಇಳಿದು ಬಂದನು, ಅವರು ಅನ್ಯಭಾಷೆಗಳಿಂದ ಮಾತನಾಡಿ ದೇವರನ್ನು ಸುತ್ತಿಸಿದರು. ಇದನ್ನು ಕೇಳಿ ಕಂಡ ಪೇತ್ರನು ಅವರಿಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಆದೇಶಿಸಿದನು.

## ಆ) ಟಿಪ್ಪಣಿ

*ದೇವರು ನನಗೆ ತೋರಿಸಿಕೊಟ್ಟಿದ್ದಾನೆ* (ವ. 28): ದರ್ಶನದ ಮೂಲಕ ದೇವರು ಕೊಟ್ಟ ಸಂದೇಶವನ್ನು ಪೇತ್ರನು ಅರ್ಥಮಾಡಿಕೊಂಡಿದ್ದನು: ಯೆಹೂದ್ಯರು ಮತ್ತು ಅನ್ಯರ ನಡುವಿನ ಹಳೆಯ ಸಂಪ್ರದಾಯದ ಅಡ್ಡಿಯು ಕ್ರಿಸ್ತನಲ್ಲಿ ತೆಗೆದು ಹಾಕಲ್ಪಟ್ಟಿತ್ತು. ಎಫೆಸ. 2:11–16 ರಲ್ಲಿ ಪೌಲನು ಇದರ ಕುರಿತಾಗಿ ಬರೆಯುತ್ತಾನೆ.

*ಹೊಳೆಯುತ್ತಿರುವ ಉಡುಪು ಧರಿಸಿದ್ದ ಒಬ್ಬನು* (ವ. 30): ಇದು ಮನುಷ್ಯನ ರೂಪದಲ್ಲಿ ಪ್ರತ್ಯಕ್ಷನಾಗುವ ದೇವದೂತನನ್ನು ವರ್ಣಿಸುವ ಒಂದು ಸಾಮಾನ್ಯ ವಿಧವಾಗಿದೆ.

*ಸಮಾಧಾನದ ಶುಭಸಮಾಚಾರ* (ವ. 36): ಇದು ದೇವರ ಮತ್ತು ಮನುಷ್ಯರ ನಡುವೆ ಇರುವ ಸಮಾಧಾನ ಮತ್ತು ಸಂಧಾನವನ್ನು ಸೂಚಿಸಿವಂತದ್ದಾಗಿದೆ.

*ಆತನನ್ನು ಮರದ ಕಂಬಕ್ಕೆ ತೂಗು ಹಾಕಿ* (ವ. 39): ಪೇತ್ರನು ಕ್ರಿಸ್ತನ ಮತ್ತು ಕ್ರೂಜೆಯ ಕುರಿತು (ಪೇತ್ರನು. 2:24 ನ್ನು ನೋಡಿರಿ) ತನ್ನ ಪ್ರಸಂಗದಲ್ಲಿ ಎರಡನೆಯ ಬಾರಿ ಈ ಪದವಿನ್ಯಾಸವನ್ನು ಉಪಯೊಗಿಸುತ್ತಿದ್ದಾನೆ (5:30 ನ್ನು ನೋಡಿರಿ). ಹೀಗೆ ಮಾಡುವುದರ ಮೂಲಕ, ಪೇತ್ರನು ತನ್ನ ಕೇಳುಗರಿಗೆ ಧರ್ಮೋ. 21:23 ನ್ನು ನೆನಪಿಸುತ್ತಿದ್ದಾನೆ, ಅಲ್ಲಿ '(ಮರದ ಮೇಲೆ) ತೂಗಾಡುವವನು ದೇವರಿಂದ ಶಾಪಗ್ರಸ್ತನಾಗಿದ್ದಾನೆ' ಎಂದು ಬರೆದದೆ. ಯೇಸು ನಮ್ಮ ಶಾಪವನ್ನು ತಾನು ಶಿಲುಬೆಯ ಮೇಲೆ ಹೊತ್ತನು. ಆತನು ನಮಗೆ ಕ್ಷಮಾಪಣೆ ಉಂಟಾಗಬೇಕೆಂತಲೂ ಮತ್ತು ನಿತ್ಯಜೀವ ಸಿಗಬೇಕೆಂತಲೂ ನಮ್ಮ ಶಾಪಗಳಿಗಾಗಿ ತಾನು ಸತ್ತನು.

*ಆತನೊಂದಿಗೆ ಊಟ, ಪಾನ ಮಾಡಿದ ನಮಗೆ* (ವ. 41): ಯೇಸು ಕ್ರಿಸ್ತನು ತನ್ನ ಶಿಷ್ಯರೊಂದಿಗೆ ಊಟಮಾಡಿದ್ದು ಮತ್ತು ಕುಡಿದದ್ದು ತನ್ನ ದೈಹಿಕ ಪುನರುತ್ಥಾನದ ಒಂದು ಸಾಕ್ಷ್ಯಾಧಾರವಾಗಿದೆ.

## ಇ) ಪಠ್ಯ ಪ್ರಶ್ನೆಗಳು

1. ಕೊರ್ನೇಲ್ಯನು ಪೇತ್ರನನ್ನು ಹೇಗೆ ಸ್ವಾಗತಿಸಿದನು?
2. ಈ ಸಭೆಯು ದಿನದ ಯಾವ ಸಮಯದಲ್ಲಿ ಕೂಡಿತ್ತು?
3. ಪೇತ್ರನು 'ನಾವು ಇದಕ್ಕೆ ಸಾಕ್ಷಿಗಳು' ಎಂದು ಹೇಳಿದನು. ಆತನು ಯಾವುದಕ್ಕೆ ಸಾಕ್ಷಿಯಾಗಿದ್ದನು?
4. ಪೇತ್ರನು ತನ್ನ ಸಂದೇಶವನ್ನು ಇನ್ನೂ ಹೇಳುತ್ತಿರುವಾಗಲೇ ಕೊರ್ನೇಲ್ಯ ಮತ್ತು ಆತನ ಮನೆಯವರಿಗೆ ಏನು ಸಂಭವಿಸಿತು?
5. ಕೊರ್ನೇಲ್ಯನು, ಆತನ ಕುಟುಂಬದವರು ಮತ್ತು ಸ್ನೇಹಿತರು ದೀಕ್ಷಾಸ್ನಾನ ತೆಗೆದುಕೊಳ್ಳಬೇಕೆಂದು ಆಜ್ಞಾಪಿಸುವಂತೆ ಪೇತ್ರನು ನಿರ್ಧರಿಸಲು ಉಂಟಾದ ಕಾರ್ಯವೇನು?
6. ಸಭೆ ಮುಕ್ತಾಯವಾದ ನಂತರ ಪೇತ್ರನು ಏನು ಮಾಡಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೇತ್ರನು ತನ್ನನ್ನು ತಾನು ಆ ರೀತಿಯಲ್ಲಿ ಯಾಕೆ ಪರಿಚಯಿಸಿಕೊಂಡನೆಂದು ನೀವು ಆಲೋಚಿಸುತ್ತೀರಿ?
2. 'ನಾಲ್ಕು ದಿನಗಳ ಹಿಂದೆ ಈ ಸಮಯದಲ್ಲಿ ನಾನು ನನ್ನ ಮನೆಯಲ್ಲಿದ್ದುಕೊಂಡು ಪ್ರಾರ್ಥನೆ ಮಾಡುತ್ತಿದ್ದಾಗ' ಎಂದು ಕೊರ್ನೇಲ್ಯನು ಹೇಳಿದನು. ಈ ನಾಲ್ಕು ದಿನಗಳಲ್ಲಿ ಪ್ರತಿದಿನವೂ ಏನು ಸಂಭವಿಸಿತೆಂಬುದನ್ನು ನೀವು ನೆನಪಿಸಿಕೊಳ್ಳಿರಿ!
3. 'ದೇವರು ಪಕ್ಷಪಾತಿಯಲ್ಲವೆಂದು ಈಗ ನನಗೆ ಮನದಟ್ಟಾಗಿದೆ, ದೇವರು ಪ್ರತಿಯೊಂದು ಜನಾಂಗದಲ್ಲಿಯೂ ತನಗೆ ಭಯಪಡುವ ಮತ್ತು ನೀತಿಯಾದದ್ದನ್ನು ಮಾಡುವ ಜನರನ್ನು ಸ್ವೀಕರಿಸುತ್ತಾನೆ' ಎಂದು ಪೇತ್ರನು ಹೇಳಿದನು. ಆ ಮೂಲಕ ಆತನು ಅರ್ಥೈಸಿದ್ದೇನು? ಮತ್ತು ಆತನು ಏನನ್ನು ***ಅರ್ಥೈಸಲಿಲ್ಲ***?
4. ಪವಿತ್ರಾತ್ಮನ ವರವು ಜನರ ಮೇಲೆ ಬರುವುದನ್ನು ನೋಡಿ ಪೇತ್ರನೊಂದಿಗೆ ಸುನ್ನತಿಯಾದ ವಿಶ್ವಾಸಿಗಳು ಯಾಕೆ ಆಶ್ಚರ್ಯಪಟ್ಟರು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಭಾರತದ ಹಳ್ಳಿಗಳಲ್ಲಿ ಸುವಾರ್ತಾ ಕೂಟದ ನಂತರ ಜನರು ಬಂದು ನನ್ನನ್ನು ವಂದಿಸುವಾಗ ನೆಲದ ಮೇಲೆ ಬಿದ್ದು ನನ್ನ ಪಾದವನ್ನು ಮುಟ್ಟಿ ನಮಸ್ಕರಿಸುವುದನ್ನು ನಾನು ಆಗಾಗ್ಗೆ ಅನುಭವಸಿದ್ದೇನೆ.

ನಿಮಗೂ ಇಂತಹ ಅನುಭವವಾಗಿದೆಯೋ? ದಯವಿಟ್ಟು ಹಂಚಿಕೊಳ್ಳಿರಿ! ನಂತರ ಈ ಪ್ರಶ್ನೆಗಳನ್ನು ಚರ್ಚಿಸಿರಿ:

1. ಜನರು ಯಾಕೆ ಹೀಗೆ ಮಾಡುತ್ತಾರೆಂದು ನೀವು ಆಲೋಚಿಸುತ್ತೀರಿ?

2. ಅವರು ಹಾಗೆ ಮಾಡುವುದು ಸರಿಯೋ? ಯಾಕೆ – ಯಾಕೆ ಇಲ್ಲ?

3. ಜನರು ಈ ರೀತಿಯಾಗಿ ನಿಮಗೆ ಮಾಡುವಾಗ, ***ನಿಮಗೆ*** ಹೇಗನ್ನಿಸುತ್ತದೆ?

4. ಈ ರೀತಿಯ ಸನ್ನಿವೇಶಗಳಲ್ಲಿ ನಾವು ಹೇಗೆ ವರ್ತಿಸಬೇಕು?

## ಊ) ಉಪದೇಶಿಸು ಮತ್ತು ಬೋಧಿಸು!

ಈ ವಾಕ್ಯಭಾಗದಲ್ಲಿ ಲೂಕನು ಕೊರ್ನೇಲ್ಯನ ಮನೆಯಲ್ಲಿ ನೆರೆದಿದ್ದ ಅನ್ಯಜನರಿಗೆ ಪೇತ್ರನು ಹೇಳಿದ ಸಂದೇಶದ ಸಾರಂಶವನ್ನು ದಾಖಲಿಸುತ್ತಿದ್ದಾನೆ. ಬಹುಶಃ ಕೇಳುವವರಲ್ಲಿ ಬಹು ಜನ 'ದೇವರಲ್ಲಿ ಭಯಭಕ್ತಿಯುಳ್ಳವರೂ', ಇಸ್ರಾಯೇಲಿನ ದೇವರನ್ನು ನಂಬಿ ಪ್ರಾರ್ಥಿಸುವವರೂ ಮತ್ತು ಯೆಹೂದ್ಯರ ನೈತಿಕ ನಿಯಮಗಳನ್ನು ಪಾಲಿಸಲು ಪ್ರಯತ್ನಿಸುವವರೂ ಆಗಿದ್ದರು. ಪೇತ್ರನ ಪ್ರಸಂಗವು ಯಾಕೆ ಹಳೆ ಒಡಂಬಡಿಕೆಯ ಉಲ್ಲೇಖನಗಳನ್ನು ಹೊಂದಿತ್ತೆಂಬುದನ್ನು ಇದು ವಿವರಿಸುತ್ತದೆ.

ನೀವು ಪೇತ್ರನ 'ಪ್ರಸಂಗದ ಹೊರರೇಖೆಯನ್ನು' ಬಳಸಿ, ಹಳೆ ಒಡಂಬಡಿಕೆಯ ಪ್ರವಾದನೆಗಳ ಮೇಲೆ ಹೆಚ್ಚು ಒತ್ತುಕೊಡದೆ ಯೇಸು ಕ್ರಿಸ್ತನ ಸೇವೆ ಮತ್ತು ಸುವಾರ್ತೆಯ ಸಾರ್ವತ್ರಿಕತೆಯ ಮೇಲೆ ಒತ್ತುಕೊಡುತ್ತಾ ನಿಮ್ಮ ಸ್ವಂತ ಪರಸ್ಥಿತಿಗೆ ಅದನ್ನು ಅನ್ವಯಿಸಿರಿ. ನಿಮ್ಮ ಸಂದೇಶವನ್ನು ***'ಪ್ರತಿಯೊಬ್ಬರಿಗೂ ರಕ್ಷಣೆ'*** ಎಂದು ಕರೆಯಬಹುದು ಮತ್ತು ಕೆಳಗಿನ ಹೊರರೇಖೆಯನ್ನು ಬಳಸಬಹುದು:

1. ಮೂರು ಅಂಶಗಳಲ್ಲಿ ಸುವಾರ್ತೆ:
   1) ಯೇಸುವಿನ ಜೀವನ ಮತ್ತು ಸೇವೆ (36–39 ನ್ನು ನೋಡಿರಿ)
   2) ಶಿಲುಬೆಯ ಮೇಲೆ ಯೇಸುವಿನ ಮರಣ (ವ. 39 ನ್ನು ನೋಡಿರಿ)
   3) ಯೇಸುವಿನ ಪುನರುತ್ಥಾನ (ವ. 40–41 ನ್ನು ನೋಡಿರಿ)

2. ಯೇಸು ಪೇತ್ರನಿಗೂ ಮತ್ತು ತನ್ನ ಇತರೆ ಶಿಷ್ಯರಿಗೂ ಕೊಟ್ಟ ಆಜ್ಞೆ: ಸುವಾರ್ತೆಯನ್ನು ಸಾರಿರಿ!
   - ಇಂದು ನಾವು ಯೇಸುವಿನ ಶಿಷ್ಯರಾಗಿದ್ದೇವೆ, ಹಾಗಾಗಿ ನಾವು ಆತನ ಆಜ್ಞೆಯನ್ನು ಹಿಂಬಾಲಿಸಬೇಕು ಮತ್ತು ಎಲ್ಲಾ ಜನರಿಗೆ ಸುವಾರ್ತೆಯನ್ನು ಸಾರಬೇಕು.

3. ಈ ಸುವಾರ್ತೆಯ ಸಾರ್ವತ್ರಿಕವಾದದ್ದು, ಯಾಕೆಂದರೆ ಯೇಸು ಕ್ರಿಸ್ತನು ಪ್ರತಿಯೊಬ್ಬರಿಗೂ, ಜೀವಂತವಾಗಿರುವವರಿಗೂ ಮತ್ತು ಸತ್ತವರಿಗೂ, ನ್ಯಾಯತೀರಿಸಲು ಒಂದು ದಿನ ಹಿಂತಿರುಗಿ ಬರುವನು (ವ. 42 ನ್ನು ನೋಡಿರಿ)

4. ಹಾಗಾಗಿ ನ್ಯಾಯತೀರ್ಪಿನ ದಿನವನ್ನು ಧೈರ್ಯದಿಂದ ಎದುರುಗೊಳ್ಳಲು ನಾವು ಏನು ಮಾಡಬೇಕು?

   1) ರಕ್ಷಣೆಯು ಯೇಸು ಕ್ರಿಸ್ತನಿಂದ ಮಾತ್ರ (ಅ. ಕೃ. 4:12) ಸಾಧ್ಯವೆಂದು ಸತ್ಯವೇದವು (ಹಳೆ ಒಡಂಬಡಿಕೆಯಲ್ಲಿಯೂ, ವ. 43 ನ್ನು ನೋಡಿರಿ, ಮತ್ತು ಹೊಸ ಒಡಂಬಡಿಕೆಯಲ್ಲಿಯೂ) ಹೇಳುತ್ತದೆ. ನಾವು ಯೇಸುವಿನ ಮೇಲೆ ನಂಬಿಕೆಯಿಡಬೇಕು ಮತ್ತು ಆತನ ಕ್ಷಮಾಪಣೆಯನ್ನು ಅಂಗೀಕರಿಸಬೇಕು (ವ. 43), ಆಗ ಮಾತ್ರ ನಾವು ರಕ್ಷಣೆಯನ್ನು ಅನುಭವಿಸಿ ನ್ಯಾಯತೀರ್ಪಿನ ದಿನವನ್ನು ಧೈರ್ಯದಿಂದ ಏದುರಿಸಲು ಸಾಧ್ಯ.

   2) ನಾವೆಲ್ಲರೂ ಪಾಪಿಗಳು ಮತ್ತು ಪವಿತ್ರ ದೇವರ ಮಾನದಂಡಕ್ಕೆ ಸರಿಯಾಗಿ ನಮಗೆ ಜೀವಿಸಲು ಸಾಧ್ಯವಿಲ್ಲ (ರೋಮಾ. 3:23–25). ಆದರೆ ಯೇಸುವಿನ ಮತ್ತು ಶಿಲುಬೆಯ ಮೇಲೆ ಆತನು ಹೊಂದಿದ ಮರಣದಿಂದ ನಾವು ನೀತಿವಂತರಾಗಿದ್ದೇವೆ ಮತ್ತು ಮರಣ ಹಾಗೂ ಪಾಪದ ಬಂಧನದಿಂದ ನಾವು ಬಿಡಿಸಲ್ಪಟ್ಟಿದ್ದೇವೆ.

      - ನಿಮ್ಮ ವೈಯಕ್ತಿಕ ಸಾಕ್ಷಿಯನ್ನು ಹೇಳಿರಿ: ಇದನ್ನು ನಾನು ಸ್ವತಃ ಅನುಭವಿಸಿದ್ದೇನೆ, ಹಾಗಾಗಿ ಇದು ಸತ್ಯವೆಂದು ನನಗೆ ತಿಳಿದದೆ!

5. ನಿಜವಾದ ಒಳ್ಳೆಯ ಸಂದೇಶವೇನೆಂದರೆ, ಈ ಸುವಾರ್ತೆಯು ಕೆಲವು ಮೀಸಲಾದ ಜನರಿಗೆ ಮಾತ್ರವಲ್ಲ. ಇದು ಒಂದು ವಿದೇಶಿಯ ಸುವಾರ್ತೆ ಅಲ್ಲ. ಇದು ಎಲ್ಲರಿಗೂ ಇರುವ ಸಾರ್ವತ್ರಿಕವಾದ ಸುವಾರ್ತೆಯಾಗಿದೆ – ನಮ್ಮ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಭೌಗೋಳಿಕ ಹಿನ್ನಲೆಗಳು ಏನೇ ಆಗಿದ್ದರೂ ಇದು ಎಲ್ಲರಿಗಾಗಿದೆ.

6. ಆಹ್ವಾನ!

# ಪಾಠ 28. ಪೇತ್ರನು ತನ್ನ ಕೃತಿಯ ಬಗ್ಗೆ ವಿವರಿಸಿದ್ದು, 11:1–18

## ಅ) ವಾಕ್ಯಭಾಗ

ಪೇತ್ರನು ಯೆರೂಸಲೇಮಿನಲ್ಲಿನ ತನ್ನ ತಾಯಿ ಸಭೆಗೆ ಹಿಂತಿರುಗಿದಾಗ, ಆತನು ಸೆಜರೇಯದಲ್ಲಿ ಕೊರ್ನೇಲ್ಯನ ಮನೆಯಲ್ಲಿ ಮಾಡಿದ ಕಾರ್ಯವನ್ನು ಪ್ರಶ್ನಿಸಲಾಯಿತು. ಪೇತ್ರನು ಅಲ್ಲಿ ಸಂಭವಿಸಿದಂತಹ ಪ್ರತಿಯೊಂದು ಕಾರ್ಯಗಳನ್ನು ವಿವರವಾಗಿ ತಿಳಿಸಿದನು. ಯೆರೂಸಲೇಮಿನ ವಿಶ್ವಾಸಿಗಳು ಇದನ್ನು ಕೇಳಿದಾಗ ಅವರು ಸಂತೋಷಪಟ್ಟರು ಮತ್ತು ದೇವರ ರಕ್ಷಣೆಯು ಅನ್ಯಜನರನ್ನೂ ಒಳಗೊಂಡಿದೆ ಎಂದು ಖಚಿತಪಟ್ಟುಕೊಂಡರು.

## ಆ) ಟಿಪ್ಪಣಿ

*ಸುನ್ನತಿಯಾದವರು* (ವ. 2): ಲೂಕನು ಸುನ್ನತಿಯನ್ನು ಹೊಂದಿದ ಪುರುಷ ವಿಶ್ವಾಸಿಗಳನ್ನು ಸೂಚಿಸುತ್ತಿದ್ದಾನೆ. ಯೆರೂಸಲೇಮಿನ ಸಭೆಯಲ್ಲಿರುವ ಪ್ರತಿಯೊಬ್ಬ ಪುರುಷ ವಿಶ್ವಾಸಿಗಳು ಯೆಹೂದ್ಯ ಮೂಲದವರಾಗಿದ್ದರಿಂದ ಸುನ್ನತಿಯನ್ನು ಹೊಂದಿದವರಾಗಿದ್ದರು. ಹಾಗಾಗಿ ಇಡೀ ಸಭೆಯು ಪೇತ್ರನನ್ನು ಟೀಕಿಸಿತು.

*ಸುನ್ನತಿಯಿಲ್ಲದ ಪುರುಷರು* (ವ. 3): ಯೆಹೂದ್ಯರು ಅನ್ಯಜನರ ಮನೆಯನ್ನು ಪ್ರವೇಶಿಸುವುದು ಮತ್ತು ಅನ್ಯರೊಂದಿಗೆ ಊಟ ಮಾಡುವುದು ನಿಷೇಧಿಸಲ್ಪಡಲು ಕಾರಣವೇನೆಂದರೆ, ಅನ್ಯರು ಯೆಹೂದ್ಯರ ಶುದ್ಧ ಮತ್ತು ಅಶುದ್ಧ ಆಹಾರದ ನಿಯಮಗಳನ್ನು ಪಾಲಿಸುತ್ತಿದ್ದಿಲ್ಲ. ಅದಲ್ಲದೆ ಅವರು ಯೆಹೂದ್ಯರ ನಿಯಮಗಳನ್ನು ಉಲ್ಲಂಘಿಸುವ ರೀತಿಯಲ್ಲಿ ಆಹಾರವನ್ನು ತಯಾರಿಸುತ್ತಿದ್ದರು.

*ಅನ್ಯರಿಗೂ ಸಹ ದೇವರು ಜೀವಕ್ಕಾಗಿ ಮಾನಸಾಂತರವನ್ನು ಕೊಟ್ಟಿರುವನಲ್ಲವೇ* (ವ. 18): ರೋಮಾ. 10:12–13 ರಲ್ಲಿರುವ ಪೌಲನ ಮಾತುಗಳನ್ನು ಹೋಲಿಸಿರಿ: 'ಯೆಹೂದ್ಯನಿಗೂ ಗ್ರೀಕರಿಗೂ ಯಾವ ವ್ಯತ್ಯಾಸವೂ ಇಲ್ಲ. ಎಲ್ಲರ ಕರ್ತನಾಗಿರುವಾತನು ಆತನನ್ನು ಕರೆಯುವವರೆಲ್ಲರನ್ನು ಹೇರಳವಾಗಿ ಆಶೀರ್ವದಿಸುತ್ತಾನೆ. ಏಕೆಂದರೆ 'ಕರ್ತನ ಹೆಸರನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆ ಆಗುವುದು'.

## ಇ) ಪಠ್ಯದ ಪ್ರಶ್ನೆಗಳು

1. ಯೆರೂಸಲೇಮಿನಲ್ಲಿದ್ದ ವಿಶ್ವಾಸಿಗಳು ಪೇತ್ರನ ವಿರುದ್ಧ ಏನನ್ನು ಆಪಾದಿಸಿದರು?

2. ವ. 14 ರಲ್ಲಿ ಒಂದು ಚಿಕ್ಕ ಮಾಹಿತಿಯಿದೆ, ಅದು ಅಧ್ಯಾಯ 10 ರಲ್ಲಿ ಕೊರ್ನೇಲ್ಯನನ್ನು ದೇವದೂತನು ಸಂಧಿಸಿದ ದಾಖಲೆಯಲ್ಲಿ ಸೇರ್ಪಡೆಯಾಗಿಲ್ಲ (10:4–6 ಮತ್ತು 10:3–32 ನ್ನು ನೋಡಿರಿ). ಅದು ಏನು?

3. ವ. 5–17 ರಲ್ಲಿ ಪೇತ್ರನ ಮಾತುಗಳಲ್ಲಿರುವ 'ಘಟನೆಯ ಕಾಲಾನುಕ್ರಮಣಿಕೆಯ' ಪಟ್ಟಿಮಾಡಿರಿ!

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪ್ರಶ್ನೆ ಇ) 3 ರಲ್ಲಿ ವ. 5–17 ರಲ್ಲಿ ಪೇತ್ರನ ಮಾತುಗಳಲ್ಲಿರುವ 'ಘಟನೆಯ ಕಾಲಾನುಕ್ರಮಣಿಕೆಯ' ಪಟ್ಟಿಯನ್ನು ಮಾಡಿದ್ದೀರಿ. ಅಧ್ಯಾಯ 10 ರಲ್ಲಿರುವ ಲೂಕನ ದಾಖಲೆಗಿಂತ ಇದು ಯಾವ ರೀತಿಯಲ್ಲಿ ವ್ಯತ್ಯಾಸಕರವಾಗಿದೆ?

2. ಪೇತ್ರನು ಯೆರೂಸಲೇಮಿನ ಸಭೆಗೆ ಯಾವುದೋ ಒಂದು ಸಂಗತಿಯನ್ನು ಹೇಳಿರಬೇಕು, ಆದರೆ ಅದನ್ನು ಲೂಕನು ವ. 17 ರಲ್ಲಿ ಪ್ರಸ್ತಾಪಿಸಿಲ್ಲ. ಅದು ಏನು?

3. ವ. 16–17 ನ್ನು (ಪೇತ್ರನು ತನ್ನ ಸ್ವಂತ ಮಾತಿನಲ್ಲಿ ತಿಳಿಸಿದ ವರದಿ) 10:47–48 ರೊಂದಿಗೆ (ಪೇತ್ರನು ಏನು ಹೇಳಿದನೆಂಬುದರ ಕುರಿತು ಲೂಕನ ದಾಖಲೆ) ಹೋಲಿಸಿರಿ. ಪ್ರಮುಖವಾದ ವ್ಯತ್ಯಾಸವೇನು? ಈ ವ್ಯತ್ಯಾಸಕ್ಕೆ ಕಾರಣವೇನಾಗಿರಬಹುದು?

4. ವ. 18 ರಲ್ಲಿ ದಾಖಲಾಗಿರುವ 'ಅನ್ಯರಿಗೂ ಸಹ ದೇವರು ಜೀವಕ್ಕಾಗಿ ಮಾನಸಾಂತರವನ್ನು ಕೊಟ್ಟಿರುವನಲ್ಲವೇ?' ಎಂಬ ಉಪಸಂಹಾರಕ್ಕೆ ಯೆರೂಸಲೇಮಿನ ಸಭೆಯು ಹೇಗೆ ಬಂದಿತು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಆದಿಸಭೆಯ ಸಮಯದಲ್ಲಿ ಪಾಲೆಸ್ತೀನಿನಲ್ಲಿ ಯೆಹೂದ್ಯರ ಮತ್ತು ಅನ್ಯರ ನಡುವೆ ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಬಹಳ ಬೇಧವಿತ್ತು. ಒಬ್ಬರಿಗೊಬ್ಬರು ನಿಕಟವಾದ ಸಂಬಂಧವನ್ನು ಹೊಂದಿಕೊಳ್ಳಲು ಅವರಿಗೆ ಸಾಧ್ಯವಿರಲಿಲ್ಲ: ಒಬ್ಬರ ಮನೆಯನ್ನು ಇನ್ನೊಬ್ಬರು ಸಂಧಿಸುತ್ತಿರಲಿಲ್ಲ; ಒಟ್ಟಿಗೆ ಊಟಮಾಡುತ್ತಿರಲಿಲ್ಲ ಕುಡಿಯುತ್ತಿರಲಿಲ್ಲ.

   ಇದು ನನಗೆ ದಕ್ಷಿಣ ಭಾರತವನ್ನು ನೆನಪಿಸುತ್ತದೆ. ಇಂದಿಗೂ ಸಹ ಕಟ್ಟುನಿಟ್ಟಾದ ಬ್ರಾಹ್ಮಣರು ವಿಶ್ವಾಸಿಗಳ ಮನೆಯಲ್ಲಿ ಊಟ ಮಾಡಲಿಕ್ಕೆ ತಿರಸ್ಕರಿಸುತ್ತಾರೆ. ವಿಶ್ವಾಸಿಗಳಾದ ನಾವು ಇಂತಹ ಜನರೊಂದಿಗೆ ಅವರಿಗೆ ನೋವಾಗದಂತೆ ಅಥವಾ ಅವರು ಭಯಪಟ್ಟು ಓಡಿಹೋಗದಂತೆ ಹೇಗೆ ಸುವಾರ್ತೆಯನ್ನು ಹಂಚಿಕೊಳ್ಳಬಹುದು?

2. ದೇವರ ರಕ್ಷಣೆಯು ಅನ್ಯಜನರನ್ನೂ ಒಳಗೊಂಡಿದೆ ಎಂಬುದನ್ನು ಪೇತ್ರನಿಗೆ (ಮತ್ತು ಯೆರೂಸಲೇಮಿನ ಸಭೆಗೆ) ಅರ್ಥಮಾಡಿಸಲು ದೇವರು ಹೇಗೆ ನಾಲ್ಕು ಭಾರಿ ಮಧ್ಯಸ್ತಿಕೆ ವಹಿಸಬೇಕಾಯಿತೆಂಬುದನ್ನು ನಾವು ಪೇತ್ರ ಮತ್ತು ಕೊರ್ನೇಲ್ಯನ ಕಥೆಯಲ್ಲಿ ನೋಡಿದ್ದೇವೆ.

ದೇವರು (ಹೊಸ ಜನರ ಗುಂಪುಗಳಿಗೆ, ಹೊಸ ಸ್ಥಳಗಳಿಗೆ, ಸಾಮಾಜಿಕವಾಗಿ ಅಥವಾ ಸಾಂಸ್ಕೃತಿಕವಾಗಿ 'ಅಸ್ಪೃಶ್ಯತೆಯಲ್ಲಿರುವ' ಕುಟುಂಬಕ್ಕಾಗಿ, 'ಸಭೆಯನ್ನು ಹಿಂಸಿಸುವ ವ್ಯಕ್ತಿಗೆ' ತಲುಪಬೇಕೆಂದು ಬಯಸುವ) ತನ್ನ ಸುವಾರ್ತೆಯ ವಿಸ್ತರಣೆಯನ್ನು ನಿಮಗೆ ಅರ್ಥಮಾಡಿಸುವುದಕ್ಕಾಗಿ ವಿಶೇಷವಾದ ರೀತಿಯಲ್ಲಿ (ಕನಸಿನ ಮೂಲಕ, ದರ್ಶನಗಳ ಮೂಲಕ ಅಥವಾ ಪ್ರವಾದನೆಯ ಮೂಲಕ) ಮಧ್ಯಸ್ತಿಕೆ ವಹಿಸಿದ್ದನ್ನು ನೀವು ಅನುಭವಿಸಿದ್ದೀರಾ? ನಿಮ್ಮ ಜೀವಿತದಿಂದ (ಅಥವಾ ನಿಮ್ಮ ಸಭೆಯ ಜೀವಿತದಿಂದ) ನೀವು ಯಾವುದಾದರೂ ಉದಾಹರಣೆಯನ್ನು ಹೊಂದಿದ್ದೀರಾ?

## ಊ) ಉಪದೇಶಿಸು ಮತ್ತು ಬೋಧಿಸು!

1. ಈ) 3 ಮತ್ತು ಈ) 4 ರ ಪ್ರಶ್ನೆಗಳ ಉತ್ತರದ ಆಧಾರದ ಮೇಲೆ ಒಂದು ಪ್ರಸಂಗವನ್ನು ಸಿದ್ಧಪಡಿಸಿರಿ. ದಕ್ಷಿಣ ಭಾರತದಲ್ಲಿ ಜರುಗಿದ ಕೆಲವು ಘಟನೆಗಳನ್ನೂ ಸಹ ನೀವು ಸೇರಿಸುವುದಾದರೆ ಒಳ್ಳೆಯದ್ದು (ಉ – 2 ನ್ನು ನೋಡಿರಿ). ***ದೇವರ ಶ್ರೇಷ್ಟ ರಕ್ಷಣೆಯ ಯೋಜನೆಯನ್ನು ನಾವು ಅರ್ಥಮಾಡಿಕೊಳ್ಳಲೇಬೇಕು!***" ಎಂಬ ಶಿರೋನಾಮವನ್ನು ನೀವು ಅದಕ್ಕೆ ಕೊಡಬಹುದು.

2. ಅ. ಕೃ. 10 ಮತ್ತು 11 ರಲ್ಲಿರುವ ಪೇತ್ರ ಮತ್ತು ಕೋರ್ನೇಲ್ಯರ ಕುರಿತಾದಂತಹ ಲೂಕನ ಕಥೆಯ ಧಾರ್ಮಿಕ ಮತ್ತು ಸಾಂಸ್ಕೃತಿಕವಾದ ಹಿನ್ನಲೆಯು ಇಂದಿನ ನಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕವಾದ ಹಿನ್ನಲೆಗಿಂತ ಬಹಳ ವ್ಯತ್ಯಾಸವಾದಂತದ್ದಾಗಿದೆ. ದಕ್ಷಿಣ ಭಾರತದಲ್ಲಿ ಯಾವ ಯೆಹೂದ್ಯರೂ ಇಲ್ಲ! ನಮ್ಮ ಸಭೆಯಲ್ಲಿ ಸುನ್ನತಿಯ ವಿಚಾರವು ಒಂದು ಸಮಸ್ಯೆಯಾಗಿಲ್ಲ! ಅನ್ಯರನ್ನು ದೀಕ್ಷಾಸ್ನಾನ ಮಾಡಿಸುವುದರಲ್ಲಿ ನಮಗೆ ಯಾವ ತೊಂದರೆಯೂ ಇಲ್ಲ! ಹಾಗಾಗಿ ***ನಾವು*** ಈ ಕಥೆಯಿಂದ ಏನನ್ನು ಕಲಿಯಬಹುದು?

   ಅ. ಕೃ. 10 ಮತ್ತು 11 ರ ಆಧಾರದ ಮೇಲೆ ***ಕೊರ್ನೇಲ್ಯನ ಕಥೆಯಿಂದ ಎರಡು ಪಾಠಗಳು***" ಎಂಬ ಶಿರೋನಾಮದೊಂದಿಗೆ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನೀವು ಈ ಹೊರ ರೇಖೆಯನ್ನು ಉಪಯೋಗಿಸಬಹುದು:

   1. ಹಿನ್ನಲೆ: ಕೋರ್ನೇಲ್ಯನ ಕಥೆಯ ಸಾರಾಂಶ (ಅ. ಕೃ. 10 ಮತ್ತು 11)
   2. ಪಾಠ – 1: ಸಭೆಯು ಒಂದೇ!
      1) ದೇವರು ಯೆಹೂದ್ಯರು ಮತ್ತು ಅನ್ಯರ ನಡುವೆ ಯಾವುದೇ ಪಕ್ಷಪಾತವನ್ನು ಮಾಡಲಿಲ್ಲ
      2) ದಕ್ಷಿಣ ಭಾರತದಲ್ಲಿರುವ ನಮ್ಮ ಸಭೆಗಳ ಕುರಿತು ಏನು?
         - ಭಾಷೆಯ ತಾರತಮ್ಯ
         - ಸಾಮಾಜಿಕ ಪಕ್ಷಪಾತ
           - ಶ್ರೀಮಂತ – ಬಡವ

- ಪ್ರಭಾವಶಾಲಿ – ದುರ್ಬಲ
- ಮೇಲುಜಾತಿ – ಕೀಳುಜಾತಿ
- ಪುರುಷ – ಮಹಿಳೆ
- ವೃದ್ಧ – ಯೌವ್ವನಸ್ಥ

3. ಪಾಠ 2: ರಕ್ಷಣೆ ಹೊಂದಲು ಒಂದೇ ಒಂದು ಮಾರ್ಗ!

1) ಕೊರ್ನೇಲ್ಯನು ಒಬ್ಬ ಒಳ್ಳೆಯ ವ್ಯಕ್ತಿಯಾಗಿದ್ದನು: ಒಬ್ಬ ಭಕ್ತಿವಂತನು, ದೇವರಿಗೆ ಭಯಪಡುವವನು ಮತ್ತು ಇಸ್ರಾಯೇಲರ ಒಬ್ಬನೇ ನಿಜ ದೇವರಲ್ಲಿ ನಂಬಿಕೆಯಿಟ್ಟಿದ್ದ ಧಾರಾಳನಾದ ರೋಮನ್ನನು. ಆದರೂ ಆತನು ಯೇಸು ಕ್ರಿಸ್ತನ ಕುರಿತು ಕೇಳಿ ತನ್ನ ಜೀವಿತದಲ್ಲಿ ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವುದು ಅವಶ್ಯವಾಗಿತ್ತು.

2) ಇಂದು ದಕ್ಷಿಣ ಭಾರತದಲ್ಲಿರುವ ಸಭೆಗಳ ಕುರಿತು ಏನು?

- ಒಬ್ಬ ಮನುಷ್ಯನು ಒಳ್ಳೆಯವನಾಗಿದ್ದರೆ, ದೇವರ–ಭಯವುಳ್ಳವನಾಗಿದ್ದರೆ, ಧಾರಾಳನಾಗಿದ್ದರೆ, 'ಪವಿತ್ರವಾಗಿ' ಜೀವಿಸುತ್ತಾ ಒಬ್ಬನೇ ಪರಮಾತ್ಮನ ಮೇಲೆ ನಂಬಿಕೆಯಿಟ್ಟರೆ ಸಾಕು ಆತನು ಯಾವುದೇ ಧರ್ಮದವನಾದರೂ ದೇವರು ಅವನನ್ನು ಅಂಗೀಕರಿಸುವನು ಎಂದು ಅನೇಕರು ನಂಬುತ್ತಾರೆ.
- ನಮ್ಮ ಸಭೆಯು (ಅಥವಾ ಸ್ವತಃ ನಾವು ವೈಯಕ್ತಿಕವಾಗಿ) ಇಂತಹ ಸುಳ್ಳು ಬೋಧನೆಗೆ ಬಿದ್ದು ಹೋಗಿದ್ದೇವೋ?

3) ಸತ್ಯವೇದವು ಸ್ಪಷ್ಟವಾಗಿದೆ: ದೇವರ ಬಳಿ ಬರಲು ಯೇಸು ಕ್ರಿಸ್ತನೊಬ್ಬನೇ ಮಾರ್ಗ. ಬೇರೆ ಯಾವ ಹೆಸರಿನಲ್ಲಿಯೂ ರಕ್ಷಣೆಯಿಲ್ಲ.

4. ಉಪಸಂಹಾರ: ಈ ಎರಡು ಪಾಠಗಳಿಂದ ನಾವು ಏನನ್ನು ಕಲಿಯಬಹುದು?

1) ನಮ್ಮ ವ್ಯಕ್ತಿಗತವಾದ ಜೀವಿತ ಮತ್ತು ಸೇವೆಗಾಗಿ

2) ನಮ್ಮ ಸಭೆಯ ಜೀವಿತ ಮತ್ತು ಸೇವೆಗಾಗಿ

# ಪಾಠ 29. ಅಂತಿಯೋಕ್ಯದಲ್ಲಿದ್ದ ಸಭೆ, 11:19–30

## ಅ) ವಾಕ್ಯಭಾಗ

ಸುವಾರ್ತೆಯು ಅಂತಿಯೋಕ್ಯದ ಒಂದು ದೊಡ್ಡ ಮತ್ತು ಪ್ರಮುಖ ಪಟ್ಟಣವಾದ ಸಿರಿಯಾಗೆ ತಲುಪಿತು. ದೇವರು ಸೇವೆಯನ್ನು ಆಶೀರ್ವದಿಸಿದನು ಮತ್ತು ಜನರ ಒಂದು ದೊಡ್ಡ ಸಂಖ್ಯೆಯು – ಅನ್ಯರೂ ಮತ್ತು ಯೆಹೂದ್ಯರೂ – ನಂಬಿದರು ಮತ್ತು ಸಭೆಗೆ ಸೇರಿಸಲ್ಪಟ್ಟರು. ಸಭೆಯಲ್ಲಿ ಸಭಾಪಾಲಕರಾಗಿಯೂ ಉಪದೇಶಕರಾಗಿಯೂ ಕೆಲಸ ಮಾಡಲು ಬಾರ್ನಬನು ಯೆರೂಸಲೇಮಿನಿಂದ ಬಂದನು – ನಂತರ ಸೌಲನು ತಾರ್ಸದಿಂದ ಬಂದನು, ಅಲ್ಲಿ ವಿಶ್ವಾಸಿಗಳು ಮೊಟ್ಟಮೊದಲ ಬಾರಿಗೆ 'ಕ್ರೈಸ್ತರು' ಎಂದು ಕರೆಯಲ್ಪಟ್ಟರು. ರೋಮ್ ಸಾಮ್ರಾಜ್ಯದಾದ್ಯಂತ ಭೀಕರ ಕ್ಷಾಮ ಹರಡುವುದೆಂಬ ಪ್ರವಾದನೆಗೆ ಪ್ರತಿಕ್ರಿಯೆಯಾಗಿ ಯೂದಾಯದಲ್ಲಿರುವ ಕೊರತೆಯಲ್ಲಿದ್ದ ಸಹೋದರರಿಗೆ ಇಲ್ಲಿನ ವಿಶ್ವಾಸಿಗಳು ಸಹಾಯ ಮಾಡಿದರು.

## ಆ) ಟಿಪ್ಪಣಿ

*ಫೊಯಿನಿಕೆ* (ವ. 19): ಈ ದೇಶವು ಪಾಲೆಸ್ತೀನಿನ ಉತ್ತರ ದಿಕ್ಕಿನಲ್ಲಿದ್ದ ಮೆಡಿಟೆರೇನಿಯನ್ ತೀರದಲ್ಲಿ ನೆಲೆಯಾಗಿತ್ತು.

*ಸೈಪ್ರಸ್* (ವ. 19): 4:36 ರ ಟಿಪ್ಪಣಿಯನ್ನು ನೋಡಿರಿ.

*ಅಂತಿಯೋಕ್ಯ* (ವ. 19): ಸಿರಿಯಾದಲ್ಲಿನ ಅಂತೀಯೋಕ್ಯವು, ರೋಮ್ ಪ್ರಾಂತ್ಯದ ಸಿರಿಯಾದ ರಾಜಧಾನಿಯಾಗಿತ್ತು, ಅದು ಮೂರು ಲಕ್ಷ ಜನರನ್ನೊಳಗೊಂಡಿದ್ದು ರೋಮ್ ಸಾಮ್ರಾಜ್ಯದಲ್ಲಿಯೇ ಮೂರನೇಯ ಅತೀ ದೊಡ್ಡ ಪಟ್ಟಣವಾಗಿತ್ತು. ಅದು ಗ್ರೀಕರನ್ನು, ರೋಮನ್ನರನ್ನು, ಯೆಹೂದ್ಯರನ್ನು ಮತ್ತು ಪೌರಾತ್ಯದೇಶದ (ಪರ್ಷಿಯಾ, ಭಾರತ ಮತ್ತು ಚೀನಾದ) ಜನರನ್ನೊಳಗೊಂಡ ಒಂದು ಅಂತರ್–ರಾಷ್ಟ್ರೀಯ ಜನಸಂಖ್ಯೆಯನ್ನು ಹೊಂದಿತ್ತು. ಇದು ಮೆಡಿಟೆರೇನಿಯನ್ ತೀರದಿಂದ 25 ಕಿ.ಮೀ. ರಷ್ಟು ದೂರದಲ್ಲಿ ನೆಲೆಯಾಗಿದ್ದು ಒಂದು ಪ್ರಾಮುಖ್ಯವಾದ ವಾಣಿಜ್ಯದ ಕೇಂದ್ರವಾಗಿತ್ತು.

*ಸಿರೇನಿಯ* (ವ. 20): ಉತ್ತರ ಆಫ್ರಿಕಾದಲ್ಲಿನ ರೋಮ್ ಪ್ರಾಂತ್ಯದ ಕರಾವಳಿ ರಾಜಧಾನಿಯಾಗಿತ್ತು.

*ಕರ್ತನ ಹಸ್ತವು ಅವರೊಂದಿಗಿತ್ತು* (ವ. 21): ಈ ರೂಪಾಲಂಕಾರದ ಅರ್ಥವೇನೆಂದರೆ, ಅವರು ಮಾಡುತ್ತಿದ್ದುದ್ದನ್ನು ದೇವರು ಮೆಚ್ಚಿ ಆಶೀರ್ವದಿಸಿದನು ಎಂಬುದಾಗಿದೆ.

*ಬಾರ್ನಬನು* (ವ. 22): 4:36 ರ ಟಿಪ್ಪಣಿಯನ್ನು ನೊಡಿರಿ.

*ತಾರ್ಸ್* (ವ. 25): 9:11 ರ ಟಿಪ್ಪಣಿಯನ್ನು ನೋಡಿರಿ.

*ಅಗಬ* (ವ. 28): ಈ ಪ್ರವಾದಿಯು 21:10–11 ರಲ್ಲಿಯೂ ಸಹ ಪ್ರಸ್ತಾಪಿಸಲ್ಪಟ್ಟಿದ್ದಾನೆ, ಅಲ್ಲಿ ಆತನು ಪೌಲನ ಬಂಧನವನ್ನು ಮುಂಚಿತವಾಗಿ ತಿಳಿಸಿದನು.

*ಕ್ಲೌದ್ಯ* (ವ. 28): ಕ್ಲೌದ್ಯನು ಕ್ರಿ.ಶ. 41–54 ರಲ್ಲಿ ರೋಮ್ ಚಕ್ರವರ್ತಿಯಾಗಿದ್ದನು.

*ಹಿರಿಯರು* (ವ. 30): ಅಪೋಸ್ತಲರ ಕೃತ್ಯಗಳಲ್ಲಿ ಮೊದಲ ಬಾರಿಗೆ ಇಲ್ಲಿ ಸಭಾಹಿರಿಯರನ್ನು ತಿಳಿಸಲಾಗಿದೆ. ಇವರು ಯಾರು ಎಂಬುದರ ಕುರಿತಾಗಲಿ ಮತ್ತು ಯಾಕೆ ಅಪೋಸ್ತಲರು ಅವರ ದೇಣಿಗೆಯನ್ನು ಸ್ವೀಕರಿಸಲಿಲ್ಲ ಎಂಬುದರ ಕುರಿತಾಗಲಿ ಲೂಕನು ಏನನ್ನೂ ತಿಳಿಸುತ್ತಿಲ್ಲ.

## ಇ) ಪಠ್ಯದ ಪ್ರಶ್ನೆಗಳು

1. ಈ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿರಿ: ಫೊಯಿನಿಕೆ, ಸೈಪ್ರಸ್, (ಸಿರಿಯಾದ) ಅಂತಿಯೋಕ್ಯ ಮತ್ತು ಸಿರೇನಿಯ!
2. ಅಂತಿಯೋಕ್ಯಕ್ಕೆ ಮೊದಲ ವಿಶ್ವಾಸಿಗಳ ಬರೋಣದ ಐತಿಹಾಸಿಕ ಹಿನ್ನಲೆ ಏನು?
3. ಈ ವಾಕ್ಯಭಾಗದಲ್ಲಿ ಬಾರ್ನಬನು ಯಾವ ರೀತಿಯಲ್ಲಿ ವರ್ಣಿಸಲ್ಪಟ್ಟಿದ್ದಾನೆ?
4. ಬಾರ್ನಬನು ಯಾಕೆ ತಾರ್ಸಕ್ಕೆ ಪ್ರಯಾಣಿಸಿದನು?
5. ಅಂತಿಯೋಕ್ಯದಲ್ಲಿ ಬಾರ್ನಬ ಮತ್ತು ಸೌಲರು ಯಾವ ರೀತಿಯ ಕಾರ್ಯವನ್ನು ಮಾಡಿದರು?
6. ಅಂತಿಯೋಕ್ಯದಲ್ಲಿರುವ ವಿಶ್ವಾಸಿಗಳು ಒಂದು ಹೊಸ ಹೆಸರಿನಿಂದ ಕರೆಯಲ್ಪಟ್ಟರು? ಆ ಹೆಸರೇನು?
7. ಯೂದಾಯದ ವಿಶ್ವಾಸಿಗಳಿಗೆ ಅಂತಿಯೋಕ್ಯದ ವಿಶ್ವಾಸಿಗಳು ಯಾಕೆ ಸಹಾಯವನ್ನು ಮಾಡಿದರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗದಿಂದ ಒಂದು ಮುಖ್ಯ ಪದವನ್ನು ಆರಿಸಿಕೊಳ್ಳಿರಿ! ನೀವು ಯಾಕೆ ಅದನ್ನು ಆರಿಸಿಕೊಂಡಿರಿ?

2. ಬಾರ್ನಬನು ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೆ ಯಾಕೆ ಕಳುಹಿಸಲ್ಪಟ್ಟನೆಂದು ನೀವು ಭಾವಿಸುತ್ತೀರಿ?
3. ಬಾರ್ನಬನು ಅಂತಿಯೋಕ್ಯಕ್ಕೆ ಬಂದಾಗ 'ದೇವರ ಕೃಪೆಯನ್ನು' ಕಂಡನು (ವ. 23). ಆತನು ವಾಸ್ತವಿಕವಾಗಿ ಕಂಡದ್ದೇನು?
4. ಲೂಕನು ತನ್ನ ಕಥೆಯಲ್ಲಿ ಅಗಬನ ಪ್ರವಾದನೆಯನ್ನು ಯಾಕೆ ಸೇರಿಸಿದನೆಂದು ನೀವು ಆಲೋಚಿಸುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಅಂತಿಯೋಕ್ಯ ಸಭೆಯ ಮೇಲೆ ದೇವರ ಕೃಪೆಯು ಇದ್ದುದ್ದಕ್ಕೆ ಪುರಾವೆಯು ಅನೇಕ ಜನರು ದೇವರನ್ನು ನಂಬಿ ಆತನ ಕಡೆಗೆ ತಿರುಗಿಕೊಂಡಿದ್ದೇ ಆಗಿದೆ. ಇಂದು ದಕ್ಷಿಣ ಭಾರತದ ಸಭೆಗಳ ಸೇವೆಯ ಮೇಲೆ ದೇವರ ಕೃಪೆಯಿದೆ ಎಂಬುದಕ್ಕೆ ನಾವು ಯಾವ ಪುರಾವೆಯನ್ನು ಕಾಣುತ್ತೇವೆ?

1. ಅನೇಕ ಜನರು ದೇವರ ಕಡೆಗೆ ತಿರುಗಿಕೊಳ್ಳುವುದು ಬಹಳ ಪ್ರಾಮುಖ್ಯವಾದದ್ದೆಂದು ನಾವು ಆಲೋಚಿಸುತ್ತೇವೋ?
2. ಅಥವಾ ಈಗಾಗಲೇ ನಾವು ಹೊಂದಿರುವ ವಿಶ್ವಾಸಿಗಳ ಆತ್ಮಿಕ ಬೆಳವಣಿಗೆಯ ಕಡೆಗೆ ಗಮನಹರಿಸುವುದು ಹೆಚ್ಚು ಪ್ರಾಮುಖ್ಯವಾದದ್ದೆಂದು ನಾವು ಆಲೋಚಿಸುತ್ತೇವೋ?
3. ಅಥವಾ ಈ ಎರಡೂ ಸಂಗತಿಗಳು ಸಮವಾಗಿ ಪ್ರಾಮುಖ್ಯವಾದದ್ದೆಂದು ನಾವು ಆಲೋಚಿಸುತ್ತೇವೋ. ಹಾಗಿದ್ದಲ್ಲಿ: 'ಅದ್ಭುತವಾದ ಸಭಾ ಬೆಳವಣಿಗೆ' ಮತ್ತು 'ಅದ್ಭುತವಾದ ಆತ್ಮಿಕ ಬೆಳವಣಿಗೆ' ಇವುಗಳ ನಡುವೆ ನಾವು ಹೇಗೆ ಸಮತೋಲನವನ್ನು ಕಂಡುಕೊಳ್ಳಬಹುದು?

## ಊ) ಉಪದೇಶಿಸು ಮತ್ತು ಬೋಧಿಸು!

1. ಪ್ರಶ್ನೆ ಇ) 3 ರ ಉತ್ತರವನ್ನು ಬಳಸಿಕೊಂಡು ಸುವಾರ್ತಾ ಸೇವಕರಿಗಾಗಿ ***ಅಂತಿಯೋಕ್ಯದಲ್ಲಿ ಒಬ್ಬ ಮಹಾ ಸಭಾಪಾಲಕನು*** ಎಂಬ ಶಿರೋನಾಮವುಳ್ಳ ಅಂತಿಯೋಕ್ಯದಲ್ಲಿದ್ದ ಬಾರ್ನಬನ ಕುರಿತಾದ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನೀವು ಈ ಹೊರರೇಖೆಯನ್ನು ಬಳಸಬಹುದು:

   1. ಪೀಠಿಕೆ

      1) ಅಂತಿಯೋಕ್ಯದಲ್ಲಿರುವ ಸಭೆ (ವ. 19–21)

      2) ಬಾರ್ನಬನು ಅಂತಿಯೋಕ್ಯಕ್ಕೆ ಬಂದಿದ್ದು (ವ. 22)

   2. ಅಂತಿಯೋಕ್ಯದಲ್ಲಿ ಬಾರ್ನಬನು:

      1) ಅಲ್ಲಿ ನಡೆಯುತ್ತಿದ್ದ ಸೇವೆಯ ಬಗ್ಗೆ ಸಂತೋಷಿಸಿದ್ದು (ವ. 23)

2) ಪ್ರೋತ್ಸಾಹಿಸುವ ಮತ್ತು ಬೋಧಿಸುವ ಸಭಾಪಾಲಕನು (ವ. 23), ಆತನು ಸಭೆಯಲ್ಲಿ ಬಹಳ ವರ್ಷಗಳ ಕಾಲ ಒಬ್ಬ ಸಭಾಪಾಲಕನಾಗಿ ಸಮಯವನ್ನು ಕಳೆದಾತನು.

3) ಸತ್ಪುರುಷನೂ, ಪವಿತ್ರಾತ್ಮಭರಿತನೂ ಮತ್ತು ಪೂರ್ಣ ನಂಬಿಕೆಯುಳ್ಳವನೂ ಆಗಿದ್ದನು (ವ. 24)

4) ದೇವರಿಂದ ಉಪಯೋಗಿಸಲ್ಪಟ್ಟ ವ್ಯಕ್ತಿ: ಆತನ ಸೇವೆಯ ಸಮಯದಲ್ಲಿ ಅನೇಕರು ಸಭೆಗೆ ಸೇರಿಸಲ್ಪಟ್ಟರು. (ವ. 24)

5) ನೈಜತೆಯುಳ್ಳವನು ಮತ್ತು ನಿಸ್ವಾರ್ಥಿಯಾದ ಸಭಾಪಾಲಕನು: ಸೇವೆಯು ಹೆಚ್ಚು ಅಭಿವೃದ್ಧಿ ಹೊಂದಬೇಕಾಗಿದ್ದರೆ ಜೊತೆ-ಸಭಾಪಾಲಕನಾಗಿರಲು ಸೌಲನು ಬಹಳ ಅಗತ್ಯನೆಂದು ಆತನು ಅರಿತಿದ್ದನು. ಹಾಗಾಗಿ ಆತನು ಅಂತಿಯೋಕ್ಯಕ್ಕೆ ಸೌಲನನ್ನು ಕರೆದುಕೊಂಡು ಬರುವುದಕ್ಕಾಗಿ ತಾರ್ಸಕ್ಕೆ ಹೊರಟುಹೋದನು (ವ. 25–26). ಸೂಚನೆ: ಸೌಲನು ಮೊದಲು ದಮಸ್ಕ ಮತ್ತು ಅರೇಬಿಯದಲ್ಲಿ ನಂತರ ತನ್ನ ಸ್ವಂತ ದೇಶವಾದ ಸಿಲಿಸಿಯಾದಲ್ಲಿ 10 ವರ್ಷಕ್ಕಿಂತಲೂ ಹೆಚ್ಚಿನ ಕಾಲದ ಸೇವಾ ಅನುಭವವುಳ್ಳವನಾಗಿದ್ದನು.

6) ಒಂದು ವರ್ಷದ ಕಾಲ ಆತನು ಸೌಲನೊಂದಿಗೆ ಒಟ್ಟಾಗಿ ಸಭೆಯಲ್ಲಿ ಬೋಧಿಸುತ್ತಾ ಒಬ್ಬ ಒಳ್ಳೆಯ ಮತ್ತು ನಂಬಿಗಸ್ತ ಸಹಕಾರಿಯಾಗಿದ್ದನು (ವ. 25)

7) ದೇವರು ಸೇವೆಯನ್ನು ಆಶೀರ್ವದಿಸಿದನು ಇದರಿಂದ ಸಭೆಗೆ ಅನೇಕ ಜನರು ಸೇರಿಕೊಂಡರು (ವ. 26)

8) ಆತನು ಸಭೆಯನ್ನು ಸಾಮಾಜಿಕ ಕ್ರಿಯೆಯಲ್ಲೂ ನಡೆಸಿದ ಒಬ್ಬ ಸಭಾಪಾಲಕನು (ವ. 29–30)

3. ಬಾರ್ನಬನು – ಸುವಾರ್ತಾ ಸೇವಕರಾದ ನಮಗೆ ಒಂದು ಮಾದರಿಯಾಗಿದ್ದಾನೆ.

1) ಸತ್ಪುರುಷನು: ಆತನ ಸುತ್ತಲಿರುವ ಜನರಿಗೆ ಇಷ್ಟವುಳ್ಳವನು ಮತ್ತು ಮೆಚ್ಚುಗೆಗೆ ಪಾತ್ರನಾದವನು.

2) ಪವಿತ್ರಾತ್ಮಭರಿತನು ಮತ್ತು ಪೂರ್ಣ ನಂಬಿಕೆಯುಳ್ಳವನು: ಸೇವೆಗಾಗಿ ದೇವರಿಂದ ಉಪಯೋಗಿಸಲ್ಪಟ್ಟವನು.

3) ಸಕಾರಾತ್ಮಕವುಳ್ಳವನು, ಪ್ರೋತ್ಸಾಹಿಸುವನು ; ಸಹ ಕೆಲಸಗಾರರು ಸೇವೆಯಲ್ಲಿ ಒಳ್ಳೆಯ ಕೆಲಸ ಮಾಡುವಾಗ ಮತ್ತು ಯಶಸ್ವಿಯಾಗುವುದನ್ನು ನೋಡುವಾಗ ಸಂತೋಷ ಪಡುವವನಾಗಿದ್ದನು.

4) ನೈಜತೆಯುಳ್ಳವನು ಮತ್ತು ನಿಸ್ವಾರ್ಥಿ:

- ಜೊತೆ-ಕೆಲಸದವರ ಅಗತ್ಯತೆಯನ್ನು ಅರಿತಿದ್ದ
- ಸರಿಯಾದ ಜೊತೆ-ಕೆಲಸಗಾರನನ್ನು ಹುಡುಕುವ ಮನಸ್ಸುಳ್ಳವನಾಗಿದ್ದನು.

- ಒಬ್ಬ ಸರಿಯಾದ ಮತ್ತು ಅನುಭವವುಳ್ಳ ಜೊತೆ-ಕೆಲಸಗಾರನನ್ನು ಕಂಡುಕೊಳ್ಳುವುದಕ್ಕಾಗಿ ಒಂದು ಮೈಲು ದೂರ ಹೋಗಬೇಕಾದರೂ ಹಿಂದೇಟು ಹಾಕುತ್ತಿದ್ದಿಲ್ಲ (ಬಾರ್ನಬನು ತಾರ್ಸಕ್ಕೆ ಪ್ರಯಾಣಿಸಿದನು!)

5) ಒಬ್ಬ ಸಹಕಾರಿ – ಯಜಮಾನನಲ್ಲ

6) ದೇವರ ಆಶೀರ್ವಾದದಲ್ಲಿ ಸೇವೆಮಾಡುವ ಒಬ್ಬ ಸುವಾರ್ತಾ ಸೇವಕ:

- ನಿರಂತರವಾಗಿ ಸಭೆಗೆ ಜನರು ಕೂಡಿಕೊಳ್ಳುವುದನ್ನು ಕಾಣುವುದು
- ವಿಶ್ವಾಸಿಗಳು ಬೆಳೆದು ಅಭಿವೃದ್ಧಿ ಹೊಂದುವುದನ್ನು ಕಾಣುವುದು
  - ಕರ್ತನ ಜ್ಞಾನದಲ್ಲಿ ಬೆಳೆಯುವುದು
  - ಅವರ ಆತ್ಮಿಕ ಜೀವಿತಗಳಲ್ಲಿ ಬೆಳೆಯುವುದು
  - ಅಗತ್ಯತೆಯಲ್ಲಿರುವ ಸಹೋದರರ ಕುರಿತು ಅವರಿಗಿರುವ ಕಾಳಜಿಯಲ್ಲಿ ಬೆಳೆಯುವುದು

2. ಅ. ಕೃ. 11:19–30 ರ ಆಧಾರದ ಮೇಲೆ ***ಅಂತಿಯೋಕ್ಯದ ಸಭೆ*** ಎಂದು ಕರೆಯಲ್ಪಡುವ ಸತ್ಯವೇದ ಅಧ್ಯಯನದ ಹೊರರೇಖೆ ಹೀಗಿದೆ.

1. ಪೀಠಿಕೆ:

1) ಅಪೋಸ್ತಲರ ಕೃತ್ಯಗಳಲ್ಲಿ ಇಲ್ಲಿಯವರೆಗೆ, ಲೂಕನು ಸಭೆಯು ಯೆರೂಸಲೇಮಿನಲ್ಲಿ (ಎಲ್ಲಾ ಯೆಹೂದ್ಯ ಮೂಲದ ವಿಶ್ವಾಸಿಗಳು) ಹೇಗೆ ಪ್ರಾರಂಭವಾಗಿ, ಸಮಾರ್ಯಕ್ಕೆ ('ಅರೆ-ಯೆಹೂದ್ಯ' ಮೂಲದ ವಿಶ್ವಾಸಿಗಳು) ಮತ್ತು ಯೂದಾಯಕ್ಕೆ (ಯೆಹೂದ್ಯ ಹಿನ್ನಲೆಯ ವಿಶ್ವಾಸಿಗಳು ಮತ್ತು ಮೊದಲ ಅನ್ಯ ಹಿನ್ನಲೆಯ ವಿಶ್ವಾಸಿಗಳಾದ ಕೊರ್ನೇಲ್ಯನ ಮನೆಯವರು) ವಿಸ್ತರಿಸಲ್ಪಟ್ಟಿತು ಎಂಬುದರ ಕುರಿತು ತಿಳಿಸುತ್ತಾನೆ. ಈಗ ಸುವಾರ್ತೆಯು ಸಿರಿಯಾದ ಅಂತಿಯೋಕ್ಯದ ಉತ್ತರ ಭಾಗದವರೆಗೂ ಒಂದು ದೊಡ್ಡ ವೃತ್ತಾಕಾರದಲ್ಲಿ ವಿಸ್ತರಿಸಲ್ಪಡುತ್ತಿದೆ. ಅಲ್ಲಿ ಒಂದು ಹೊಸ ಸಂಗತಿಯು ನಡೆಯಿತು.

2) ಅಂತಿಯೋಕ್ಯ ಪಟ್ಟಣದ ಕುರಿತು ಸಂಕ್ಷಿಪ್ತ ಮಾಹಿತಿ (ವ. 19 ರ ಟಿಪ್ಪಣಿಯನ್ನು ನೋಡಿರಿ)

2. ಅಂತಿಯೋಕ್ಯದಲ್ಲಿದ್ದ ಸಭೆ:

1) ಸ್ತೆಫನನ ಮರಣದ ನಂತರ ಯೆರೂಸಲೇಮಿನಿಂದ ಚದುರಿದ ವಿಶ್ವಾಸಿಗಳಲ್ಲಿ ಉತ್ತರದಿಂದ ಸಿರಿಯಾಕ್ಕೆ ಪ್ರಯಾಣಿಸಿದ ಅನಾಮಿಕ ಸುವಾರ್ತಿಕರುಗಳಿಂದ ಇದು ಸ್ಥಾಪಿಸಲ್ಪಟ್ಟಿತು.

2) ಆದರೆ ಈ ಸುವಾರ್ತಿಕರುಗಳು ಅಂತರ್-ರಾಷ್ಟ್ರೀಯ ಹಿನ್ನಲೆಯನ್ನು ಹೊಂದಿದ್ದರು. ಅವರು ಸೈಪ್ರಸ್ ಮತ್ತು ಸಿರೇನಿಯದಿಂದ ಬಂದ ಯೆಹೂದ್ಯ ವಿಶ್ವಾಸಿಗಳಾಗಿದ್ದರು,

ಅವರ ಮಾತೃಭಾಷೆಯು ಗ್ರೀಕ್ ಆಗಿದ್ದು, ಗ್ರೀಕ್–ರೋಮನ್ ಸಂಸ್ಕೃತಿಯೊಂದಿಗೆ ಸಮಸ್ಯೆ ಹೊಂದಿರಲಿಲ್ಲ.

3) ಸೇವೆಯ ಕುರಿತು ಒಂದು ಹೊಸ ತಿಳುವಳಿಕೆ: ಗ್ರೀಕ್ ಮಾತನಾಡುವ ಚದುರಿಸಲ್ಪಟ್ಟ ಯೆಹೂದ್ಯರೊಂದಿಗೆ ಗ್ರೀಕ್ ಮಾತನಾಡುವ ಅನ್ಯರನ್ನೂ ತಲುಪಲಿಕ್ಕೆ ಪ್ರಯತ್ನಿಸಿತು.

4) ಗುಂಪು ನಾಯಕತ್ವ: ಮೊದಲ ಸುವಾರ್ತಿಕರುಗಳಾದ, ಸಭಾಪಾಲಕ ಬಾರ್ನಬನು, ನಂತರದಲ್ಲಿ ಕರೆತಂದ ಜೊತೆಕೆಲಸದವನೂ ಸಭಾಪಾಲಕನೂ ಆದ ಸೌಲನು ಹಾಗೂ ಇತರೆ 'ಪ್ರವಾದಿಗಳು ಮತ್ತು ಬೋಧಕರು' (13:1).

3. ಅಂತಿಯೋಕ್ಯದಲ್ಲಿ ಉಂಟಾದ ಸೇವೆಯ ಫಲಿತಾಂಶ:

1) ಬಹಳಷ್ಟು ಜನರು ದೇವರಲ್ಲಿ ನಂಬಿಕೆಯನ್ನಿಟ್ಟು ಆತನ ಕಡೆಗೆ ತಿರುಗಿಕೊಂಡರು (ವ. 21–24)

2) ವಿಶ್ವಾಸಿಗಳೆಲ್ಲರೂ ಕರ್ತನಿಗೆ ಹೃದಯಪೂರ್ವಕವಾಗಿ ಭಯಭಕ್ತಿಯುಳ್ಳವ–ರಾಗಿರಬೇಕೆಂದು ಅವರನ್ನು ಪ್ರೋತ್ಸಾಹಿಸಿದನು (ವ. 23)

3) ವಿಶ್ವಾಸಿಗಳು ಬಾರ್ನಬ ಮತ್ತು ಸೌಲರಿಂದ ಕ್ರಮವಾಗಿ ಉಪದೇಶ ಹೊಂದಿದರು. ಅವರು ಕ್ರಿಸ್ತನ ಕುರಿತಾಗಿ ಉಪದೇಶಿಸಿರಬೇಕು; ಆತನ ಜೀವನ, ಮರಣ, ಪುನರುತ್ಥಾನ, ಮಹಿಮಾಕರಣ, ಆತ್ಮನ ಸುರುಸುವಿಕೆ, ವರ್ತಮಾನದ ಆಳ್ವಿಕೆ ಮತ್ತು ಭವಿಷ್ಯದಲ್ಲಿನ ಹಿಂತಿರುಗುವಿಕೆಯ ವಾಸ್ತವಾಂಶ ಮತ್ತು ಪ್ರಾಮುಖ್ಯತೆಯನ್ನು ಉಪದೇಶಿಸಿರಬೇಕು. ಹಾಗಾಗಿ ಇಲ್ಲಿನ ವಿಶ್ವಾಸಿಗಳು ಮೊಟ್ಟಮೊದಲ ಬಾರಿಗೆ 'ಕ್ರೈಸ್ತರೆಂದು' ಕರೆಯಲ್ಪಟ್ಟರು!

4) ವಿಶ್ವಾಸಿಗಳು ಸಾಮಾಜಿಕ ಜವಾಬ್ದಾರಿಕೆಗಳನ್ನು ಭುಜದ ಮೇಲೆ ಹೊತ್ತುಕೊಳ್ಳುವಂತೆ ಕಲಿಸಲ್ಪಟ್ಟರು: ಪ್ರತಿಯೊಬ್ಬ ವಿಶ್ವಾಸಿಗಳು 'ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ' – ಯೂದಾಯದಲ್ಲಿನ ಬರಪೀಡಿತ ಸಭೆಗೆ ಸಹಾಯ ಒದಗಿಸಿದರು (ವ. 29).

4. ಈ ಅಂತಿಯೋಕ್ಯ ಸಭೆಯ ಈ ವಿವರಣೆಯಿಂದ ನಮ್ಮ ದಕ್ಷಿಣ ಭಾರತದಲ್ಲಿರುವ ಸಭೆಗಳು ಏನನ್ನು ಕಲಿಯಬಹುದು?

1) ನಾವು ಹೊಸ ಭೌಗೋಳಿಕ ಪ್ರದೇಶಗಳನ್ನು ಸುವಾರ್ತೆಯೊಂದಿಗೆ ತಲುಪಲೇಬೇಕು!

2) ನಾವು ಹೊಸ ಸಾಂಸ್ಕೃತಿಕ ಪ್ರದೇಶಗಳನ್ನು (ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಭಾಷಾಶಾಸ್ತ್ರೀಯವಾಗಿ) ಸುವಾರ್ತೆಯೊಂದಿಗೆ ತಲುಪಲೇಬೇಕು!

3) ನಮ್ಮ ವಿಶ್ವಾಸಿಗಳು ಕರ್ತನಿಗೆ ಹೃದಯಪೂರ್ವಕವಾಗಿ ಭಯಭಕ್ತಿಯುಳ್ಳವ–ರಾಗಿರಬೇಕೆಂದು ಅವರನ್ನು ಪ್ರೋತ್ಸಾಹಿಸಬೇಕು!

4) ವಿವಿಧ ಸೇವಾ ಅಗತ್ಯತೆಗಳಿಗಾಗಿ ನೆರವು ನೀಡುವ ನಾಯಕರುಗಳನ್ನು/ ಸಭಾಪಾಲಕರುಗಳನ್ನು ನಾವು ಹೊಂದಿರಲೇಬೇಕು!

5) ನಾವು ನಮ್ಮ ವಿಶ್ವಾಸಿಗಳಿಗೆ ಕ್ರಿಸ್ತನ ಕುರಿತು ಕ್ರಮಬದ್ಧವಾಗಿ ಕಲಿಸಬೇಕು!

6) ನಮ್ಮ ವಿಶ್ವಾಸಿಗಳು ಆತ್ಮೀಕ ಪರಿಪೂರ್ಣತೆಯನ್ನು ತಲುಪುವಂತೆಯೂ ಮತ್ತು ಕೊರತೆಯಲ್ಲಿರುವ ಸಹೋದರರ ಅಗತ್ಯ ವಸ್ತುಗಳಿಗಾಗಿ ತ್ಯಾಗಮಾಡುವುದನ್ನೂ ಸಹ ಕಲಿಸಬೇಕು!

# ಪಾಠ 30. ಅದ್ಭುತವಾದ ರೀತಿಯಲ್ಲಿ ಪೇತ್ರನು ಬಿಡುಗಡೆಯಾದದ್ದು, 12:1–19

## ಅ) ವಾಕ್ಯಭಾಗ

ಅಧ್ಯಾಯ 12 ರಲ್ಲಿ ಲೂಕನು ಅಂತಿಯೋಕ್ಯ ಸಭೆಯನ್ನು ಕೈಬಿಟ್ಟು ಎರಡು ಕಥೆಗಳನ್ನು ಒಂದಕ್ಕೊಂದು ಸಂಬಂಧಿಸಲು ಯೂದಾಯದ ಅರಸನಾದ ಹೆರೋದನ ಕುರಿತು ವಿವರಿಸುತ್ತಿದ್ದಾನೆ. ಮೊದಲ ಕಥೆಯು ಯೇರೂಸಲೇಮಿನ ಸಭೆಯನ್ನು ಹೆರೋದನು ಹಿಂಸೆಪಡಿಸಿದರ ಕುರಿತಾಗಿದೆ. ಆತನು ಯೇಸುವಿನ ಶಿಷ್ಯರಲೊಬ್ಬನಾದ ಯಾಕೋಬನನ್ನು ಖಡ್ಗದಿಂದ ಕೊಲ್ಲಿಸಿದನು. ನಂತರ ಪೇತ್ರನನ್ನು ಪಸ್ಕಹಬ್ಬವಾದ ನಂತರ ಕೊಲ್ಲಿಸುವುದಕ್ಕಾಗಿ ಸೆರೆಮನೆಯಲ್ಲಿ ಹಾಕಿಸಿದನು. ಆದರೆ ರಾತ್ರಿಯಲ್ಲಿ ಪೇತ್ರನು ದೇವದೂತನ ಸಹಾಯದಿಂದ ಬಿಡುಗಡೆ ಹೊಂದಿದನು. ಆತನು ಕಣ್ಮರೆಯಾಗಿ ಹೋಗುವುದಕ್ಕಿಂತ ಮುಂಚೆ ಕೆಲವು ವಿಶ್ವಾಸಿಗಳು ಮನೆಯಲ್ಲಿ ಪ್ರಾರ್ಥನೆಗಾಗಿ ಕೂಡಿ ಬಂದಿದ್ದನ್ನು ಕಂಡನು ಮತ್ತು ತಾನು ಬಿಡುಗಡೆ ಹೊಂದಿದ್ದನ್ನು ಮತ್ತು ಜೀವದಿಂದಿರುವುದನ್ನು ಅವರಿಗೆ ತಿಳಿಸಿದನು.

## ಆ) ಟಿಪ್ಪಣಿ

*ಸುಮಾರು ಅದೇ ಸಮಯದಲ್ಲಿ* (ವ. 1): ಸತ್ಯವೇದ ತಜ್ಞರುಗಳು ಅಧ್ಯಾಯ 11 ಮತ್ತು 12 ರ ಕಾಲಾನುಕ್ರಮಣಿಕೆಯನ್ನು ಒಪ್ಪಿಕೊಳ್ಳುವುದಿಲ್ಲ. ಈ ಪಠ್ಯಪುಸ್ತಕದಲ್ಲಿ ಎರಡು ಕಥೆಗಳ ಕಾಲವನ್ನು ನಿರ್ಧರಿಸಲಾಗಿದೆ (ಹೆರೋದನು ಕ್ರಿ.ಶ. 44 ರಲ್ಲಿ ಸತ್ತಿದ್ದು ನಮಗೆ ತಿಳಿದಿದೆ) ಅಧ್ಯಾಯ 12 ರಲ್ಲಿರುವ 'ಅದೇ ಸಮಯದಲ್ಲಿ' ಅಂತಿಯೋಕ್ಯ ಸಭೆಯು ಸ್ಥಾಪಿಸಲ್ಪಟ್ಟಿತ್ತು (ಅಂದರೆ, ಕ್ರಿ.ಶ. 43 ರಲ್ಲಿ) ಮತ್ತು ಬಾರ್ನಬನು ಅಂತಿಯೋಕ್ಯಕ್ಕೆ ಬಂದಿದ್ದು ಮತ್ತು ಅಗಬನು ಕ್ಷಾಮದ ಕುರಿತು ಪ್ರವಾದಿಸಿದ್ದು (ಬಹುಶಃ ಅದರ ನಂತರದ ವರ್ಷದಲ್ಲಿ). ಪರಿಣಾಮವಾಗಿ, ಅಂತಿಯೋಕ್ಯದಲ್ಲಿ ಸೌಲನ ಸೇವೆಯು (11:22–25, ಕ್ರಿ.ಶ. 47–48 ಎಂದು ನಾವು ಸೂಚಿಸುತ್ತೇವೆ), ಭೀಕರ ಕ್ಷಾಮವು (ಕ್ರಿ.ಶ. 46–48), ಮತ್ತು ಬಾರ್ನಬ ಸೌಲರು ಅಂತಿಯೋಕ್ಯದಿಂದ ಯೂದಾಯಕ್ಕೆ ಕಾಣಿಕೆಗಳನ್ನು ತೆಗೆದುಕೊಂಡು ಹೋದದ್ದು ಮತ್ತು ನಂತರದಲ್ಲಿ ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೆ ಜೊತೆಯಲ್ಲಿ ಮಾರ್ಕನೆನಿಸಿಕೊಳ್ಳುವ ಯೋಹಾನನನ್ನು ಕರೆದುಕೊಂಡು ಬಂದಿದ್ದು (11:28–30 ಮತ್ತು 12:25, ಕ್ರಿ.ಶ. 47 ಅಥವಾ 48 ಎಂದು ನಾವು ಸೂಚಿಸುತ್ತೇವೆ) 12:1–23 ರ ಘಟನೆಗಳ ನಂತರ ಸಂಭವಿಸಿತು.

*ಅರಸನಾದ ಹೆರೋದನು* (ವ. 1): 1 ನೇ ಹೆರೋದ ಅಗ್ರಿಪ್ಪನು (ಯೇಸು ಜನಿಸಿದಾಗ ಆಳುತ್ತಿದ್ದ) ಹೆರೋದ್ ದ ಗ್ರೇಟ್‌ನ ಮೊಮ್ಮಗನಾಗಿದ್ದನು ಮತ್ತು ಈತನು (ಸ್ನಾನಿಕನಾದ ಯೋಹಾನನ್ನು ಶಿರಚ್ಛೇದನ ಮಾಡಿಸಿದ ಮತ್ತು ಯೇಸುವನ್ನು ನ್ಯಾಯವಿಚಾರಿಸಿದ) ಹೆರೋದ ಅಂತಿಪಸ್‌ನ ಸೋದರಳಿಯನಾಗಿದ್ದನು. ಈ ಸಮಯದಲ್ಲಿ ಆತನು ಯೂದಾಯ, ಸಮಾರ್ಯ, ಗಲಿಲಾಯ ಮತ್ತು

ಕೆಲವು ನೆರೆಯ ಪ್ರಾಂತ್ಯಗಳಿಗೆ ರಾಜನಾಗಿದ್ದನು. ಆತನು ಕ್ರಿ.ಶ. 44 ರಲ್ಲಿ ಮರಣ ಹೊಂದಿದನು (12:21–23 ನ್ನು ನೋಡಿರಿ). ಪಾಲೆಸ್ತೀನಿನ ರಾಜರುಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದ ***'ಅರಸನಾದ ಹೆರೋದನ ಕುಟುಂಬ'*** ಎಂಬ ಅಧ್ಯಾಯವನ್ನು ಓದಿರಿ.

*ಯೋಹಾನನ ಸಹೋದರ ಯಾಕೋಬನನ್ನು ಖಡ್ಗದಿಂದ ಕೊಲ್ಲಿಸಿದನು* (ವ. 2): ಯೇಸುವಿನ ಹನ್ನೆರಡು ಶಿಷ್ಯರುಗಳಲ್ಲಿ ಒಬ್ಬನಾದ (ಮತ್ತು ಸುವಾರ್ತೆಯನ್ನು ಬರೆದ ಯೋಹಾನನ ಸಹೋದರನಾದ) ಯಾಕೋಬನು ಶಿರಚ್ಛೇದನ ಮಾಡಲ್ಪಟ್ಟನು.

*ಹುಳಿಯಿಲ್ಲದ ರೊಟ್ಟಿಗಳ ಹಬ್ಬ* (ವ. 3): ಇದು ಪಸ್ಕಹಬ್ಬದ ಇನ್ನೊಂದು ಹೆಸರಾಗಿತ್ತು (ವ. 4 ನ್ನು ನೋಡಿರಿ), ಈ ಸಮಯದಲ್ಲಿ ಯೆಹೂದ್ಯರ ಮನೆಗಳಲ್ಲಿ ಹುಳಿ ಹಾಕಿದ ರೊಟ್ಟಿಯು ನಿಷೇಧಿಸಲ್ಪಟ್ಟಿತ್ತು. ಈ ವಾರದಲ್ಲಿ ಯೆಹೂದ್ಯರ ಕಾನೂನು ಯಾವುದೇ ನ್ಯಾಯವಿಚಾರಣೆಯನ್ನು ಅನುಮತಿಸುತ್ತಿದ್ದಿಲ್ಲ. ಹಾಗಾಗಿ ಹೆರೋದನು ಪಸ್ಕಹಬ್ಬವು ಮುಗಿಯಲೆಂದು ಕಾಯುತ್ತಾ ಪೇತ್ರನನ್ನು ಸೆರೆಮನೆಯಲ್ಲಿ (ಬಹುಶಃ ದೇವಾಲಯದ ವಾಯುವ್ಯದ ಅಂಚಿನಲ್ಲಿದ್ದ ಅಂಟೋನಿಯ ಗೋಪುರದಲ್ಲಿ) ಹಾಕಿಸಿದನು.

*ಮರಿಯಳು* (ವ. 12): ಹೊಸ ಒಡಂಬಡಿಕೆಯಲ್ಲಿ ಮರಿಯಳು ಎಂದು ಕರೆಯಲ್ಪಡುವವರು ಅನೇಕರಿದ್ದಾರೆ. ಈ ಮರಿಯಳು ಮಾರ್ಕನೆನಿಸಿಕೊಳ್ಳುವ ಯೋಹಾನನ ತಾಯಿಯಾಗಿದ್ದಳು (ವ. 24, 15:37, 39 ನ್ನು ನೋಡಿರಿ) ಮತ್ತು ಬಾರ್ನಬನ ಸಹೋದರಿ (ಕೊಲೊಸ್ಸೆ. 4:10 ನ್ನು ನೋಡಿರಿ).

*ರೋದೆ* (ವ. 13): ಹೊಸ ಒಡಂಬಡಿಕೆಯಲ್ಲಿ ಇದೊಂದೇ ಬಾರಿ ರೋದೆಯ ಕುರಿತು ತಿಳಿಸಲಾಗಿದೆ. ಈಕೆಯು ಮಾರ್ಕನೆನಿಸಿಕೊಳ್ಳುವ ಯೋಹಾನನ ತಾಯಿಯಾದ ಮರಿಯಳ ಸೇವಕಿ ಅಥವಾ ಗುಲಾಮಳಾಗಿದ್ದಿರಬಹುದು.

*ಅದು ಅವನ ದೂತನೇ ಆಗಿರಬೇಕು* (ವ. 15): ಅವರು ಅದನ್ನು ಪೇತ್ರನ ರೂಪ ಮತ್ತು ಸ್ವರವನ್ನು ತಾಳಿದ ಪೇತ್ರನ ಸಂರಕ್ಷಕದೂತನೆಂದು ಅಂದುಕೊಂಡರು.

ಯಾಕೋಬ (ವ. 17): ಯೇಸುವಿನ ತಮ್ಮನಾದ ಯಾಕೋಬನು ಈ ಸಮಯದಲ್ಲಿ ಯೆರೂಸಲೇಮಿನ ಸಭೆಯ ಮುಖ್ಯ ನಾಯಕನಾಗಿದ್ದಂತೆ ತೋರುತ್ತದೆ.

## ಇ) ಪಠ್ಯ ಪ್ರಶ್ನೆಗಳು

1. ಅರಸನಾದ ಹೆರೋದನು ಪೇತ್ರನನ್ನು ಯಾಕೆ ಬಂಧಿಸಿದನು?
2. ಪೇತ್ರನು ಸೆರೆಮನೆಯಲ್ಲಿರುವಾಗ ಸಭೆಯು ಏನು ಮಾಡಿತು?
3. ದೇವದೂತನು ಬಂದು ಪೇತ್ರನನ್ನು ಸೆರೆಮನೆಯಿಂದ ಹೊರಗೆ ನಡೆಸಿದಾಗ, ಏನಾಗುತ್ತಿದೆ ಎಂಬುದರ ಕುರಿತು ಆತನು ಮೊದಲು ಆಲೋಚಿಸಿದ್ದೇನು?
4. ಪೇತ್ರನು ತಾನು ಬಿಡುಗಡೆ ಹೊಂದಿದ ಮನುಷ್ಯನೆಂದು ಯಾವಾಗ ಅರಿತುಕೊಂಡನು?
5. ರೋದೆಯು ಮೊದಲಿಗೆ ಏಕೆ ಬಾಗಿಲನ್ನು ತೆರೆಯಲಿಲ್ಲ?
6. ಪೇತ್ರನಿಗೂ ಮತ್ತು ಆತನನ್ನು ಕಾಯುತ್ತಿದ್ದ ಕಾವಲುಗಾರರಿಗೂ ಏನಾಯಿತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೇತ್ರನು ಯಾಕೆ ಮರಿಯಳ ಮನೆಗೆ ಹೋದನು? ಆತನು ಅಲ್ಲಿಗೆ ಹೋಗಬೇಕೆಂಬುದು ಆತನಿಗೆ ಹೇಗೆ ತಿಳಿದಿತ್ತು?
2. ವಿಶ್ವಾಸಿಗಳು ಬಾಗಿಲ ಹತ್ತಿರ ಬಂದಿರುವುದು ಪೇತ್ರನಲ್ಲ ಬದಲಾಗಿ ಆತನ ದೂತನೆಂದು ಯಾಕೆ ಆಲೋಚಿಸಿದರು?
3. ಸ್ಪಷ್ಟವಾಗಿ ಕಾಣುವಂತೆ ಪೇತ್ರನು ಸೆರೆಮನೆಯಿಂದ ಬಿಡುಗಡೆ ಹೊಂದುವನೆಂದು ವಿಶ್ವಾಸಿಗಳು ನಂಬದೇ ಇದ್ದುದ್ದರಿಂದ ಅವರು ಯಾವುದರ ಕುರಿತು ಪ್ರಾರ್ಥಿಸುತ್ತಿದ್ದರು ಎಂದು ನೀವು ಆಲೋಚಿಸುತ್ತಿರಿ?
4. ಪೇತ್ರನು ಸಂಭವಿಸಿದ್ದೆಲ್ಲವನ್ನೂ 'ಯಾಕೋಬನಿಗೂ ಹಾಗೂ ಸಹೋದರರಿಗೂ' ತಿಳಿಸಬೇಕೆಂದು ವಿಶ್ವಾಸಿಗಳಿಗೆ ಯಾಕೆ ಹೇಳಿದನೆಂದು ನೀವು ಆಲೋಚಿಸುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಈ ಕಥೆಯಲ್ಲಿ ದೇವರು ನಿಜವಾಗಲೂ ಪೇತ್ರನ ಜೀವಿತವನ್ನು ರಕ್ಷಿಸುತ್ತಾನೆ ಎಂಬ ನಂಬಿಕೆಯಿಲ್ಲದೆ ಸಭೆಯು ಆತನಿಗಾಗಿ ಪ್ರಾರ್ಥಿಸುವುದು ಕಂಡುಬರುತ್ತದೆ. ಕೆಲವೊಮ್ಮೆ ಈ ರೀತಿಯಲ್ಲಿ ನಮ್ಮ ಸಭೆಯಲ್ಲಿ ಯಾವಾಗಲಾದರೂ ಆಗಿದೆಯೋ – ನಿಜವಾಗಲೂ ಆಗಬಹುದೆಂಬ ನಂಬಿಕೆಯಿಲ್ಲದೆ ಕೆಲವು ಸಂಗತಿಗಳಿಗಾಗಿ ಪ್ರಾರ್ಥಿಸುವುದು? ಇಂತಹ ಕೆಲವು ಉದಾಹರಣೆಗಳು ನಿಮಗೆ ಗೊತ್ತಿದ್ದರೆ ಅವುಗಳನ್ನು ಹಂಚಿಕೊಳ್ಳಿರಿ!
2. ನಿಮಗೆ ಉತ್ತರ ಸಿಗಬಹುದೆಂಬ ಅನುಮಾನವಿದ್ದಾಗ್ಯೂ ದೇವರ ಮುಂದೆ ಕೆಲವು ಗಂಭೀರವಾದ ಸಂಗತಿಗಳನ್ನು ಪ್ರಾರ್ಥನೆಯಲ್ಲಿ ತರುವುದು ತಪ್ಪು ಎಂದು ನೀವು ಆಲೋಚಿಸುತ್ತೀರೋ? ಯಾಕೆ – ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

1. ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ***ಅದ್ಭುತವಾದ ರೀತಿಯಲ್ಲಿ ಪೇತ್ರನು ಬಿಡುಗಡೆಯಾದದ್ದು*** ಒಂದು ಅಮೋಘವಾದ ಕಥೆಯಾಗಿದೆ. ಈ ವಾಕ್ಯಭಾಗವನ್ನು ಆಧರಿಸಿ ಯೌವ್ವನಸ್ಥ ಗುಂಪಿನವರಿಗೆ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಲು ನಿಮ್ಮನ್ನು ಕೋರಲಾಗಿದೆ. ಈ ಕಥೆಯಲ್ಲಿ ಯಾವ ಅಂಶವನ್ನು ***ನೀವು*** ಹೆಚ್ಚಾಗಿ ಕೇಂದ್ರೀಕರಿಸುವಿರಿ?

2. ನಾನು ***"ನಿರೀಕ್ಷೆಯಿಲ್ಲದ ಪರಿಸ್ಥಿತಿಗಳ ಮೇಲೆ ದೇವರ ನಿಯಂತ್ರಣ!'*** ಎಂಬ ಭಾಗದ ಮೇಲೆ ಕೇಂದ್ರೀಕರಿಸುವೆ. ನಾನು ಪ್ರಸ್ತಾಪಿಸುವ ಕೆಲವು ಅಂಶಗಳು ಇಲ್ಲಿ ತಿಳಿಸಲ್ಪಟ್ಟಿವೆ. ಬಹುಶಃ ಅವುಗಳನ್ನು ಸತ್ಯವೇದ ಅಧ್ಯಯನದ ಒಂದು ಹೊರರೇಖೆಯನ್ನಾಗಿಯೂ ಉಪಯೋಗಿಸಿಕೊಳ್ಳಬಹುದು:

   1. ಪೇತ್ರನ ಪರಿಸ್ಥಿತಿಯು ನಿಜವಾಗಿಯೂ ನಿರೀಕ್ಷೆಯಿಲ್ಲದ್ದಾಗಿತ್ತು:

      1) ಯಾಕೋಬನು ಆಗ ತಾನೇ ಕೊಲ್ಲಲ್ಪಟ್ಟಿದ್ದನು.

      2) ಅರಸನಾದ ಹೆರೋದನು ಪೇತ್ರನನ್ನೂ ಸಹ ಕೊಲ್ಲಬೇಕೆಂಬುದು ನಿಶ್ಚಯಿಸಿಕೊಂಡಿದ್ದನು. ಇದು ಯೆಹೂದ್ಯ ನಾಯಕರುಗಳನ್ನು ಇನ್ನೂ ಮೆಚ್ಚಿಸುವಂತದ್ದಾಗಿತ್ತು.

      3) ಪೇತ್ರನ ಸೆರೆಮನೆಯು ಬಹಳ ಭದ್ರವಾಗಿ ಕಾಯಲಾಗಿತ್ತು. ಆತನನ್ನು 16 ಸೈನಿಕರು ಕಾಯುತ್ತಿದ್ದರು. ಆತನು ರಾತ್ರಿಯಲ್ಲಿ ಮಲಗಿರುವಾಗ ಇಬ್ಬರು ಸೈನಿಕರೊಂದಿಗೆ ಸರಪಣಿಗಳಿಂದ ಬಂಧಿಸಲ್ಪಟ್ಟಿರಬೇಕಾಗಿತ್ತು. ಸೆರೆಮನೆಯ ಕದಗಳು ಭದ್ರವಾಗಿ ಬೀಗ ಹಾಕಲಾಗಿತ್ತು.

      4) ಅರಸನಾದ ಹೆರೋದನು ಪ್ರಬಲ ರೋಮ್ ಸಾಮ್ರಾಜ್ಯವನ್ನು ಪ್ರತಿನಿಧಿಸುತ್ತಿದ್ದನು. ಆತನ ವಿರುದ್ಧ ಪೇತ್ರನು ಮತ್ತು ಸಭೆಯು ಏನು ಮಾಡಲು ಸಾಧ್ಯ?

   2. ಈ ನಿರೀಕ್ಷೆಯಿಲ್ಲದ ಪರಿಸ್ಥಿತಿಯಲ್ಲಿ ಪೇತ್ರನು ಏನು ಮಾಡಿದನು?

      1) ಆತನು ಕರ್ತನ ಮೇಲೆ ಭರವಸೆಯಿಟ್ಟನು. ಹಾಗಾಗಿ ಸೈನಿಕರ ನಡುವೆ ನಿದ್ರಿಸಿದನು.

      2) ಆದರೆ ದೇವರು ತನ್ನನ್ನು ಬಿಡಿಸುವದಿಲ್ಲವೆಂದು ಅನುಮಾನಪಟ್ಟನು. ಹಾಗಾಗಿ ದೇವದೂತನು ಸೆರೆಮನೆಯಿಂದ ಆತನನ್ನು ಬಿಡಿಸುತ್ತಿದ್ದ ಸಮಯವೆಲ್ಲಾ ತಾನು ಕನಸನ್ನು ಕಾಣುತ್ತಿದ್ದೇನೆ ಎಂಬುದಾಗಿ ಅಂದುಕೊಂಡನು.

   3. ಈ ನಿರೀಕ್ಷೆಯಿಲ್ಲದ ಪರಿಸ್ಥಿತಿಯಲ್ಲಿ ಸಭೆಯು ಏನನ್ನು ಮಾಡಿತು?

      1) ಅವರು ಅತ್ಯಾಸಕ್ತಿಯಿಂದ ದೇವರಿಗೆ ಪ್ರಾರ್ಥಿಸಿದರು.

      2) ಆದರೆ ಅವರು ತಮ್ಮ ಪ್ರಾರ್ಥನೆಯನ್ನು ದೇವರು ಕೇಳಿ ಪೇತ್ರನನ್ನು ವಾಸ್ತವಿಕವಾಗಿ ಸೆರೆಮನೆಯಿಂದ ಬಿಡಿಸುವನೆಂದು ನಂಬಲಿಲ್ಲ. ಪೇತ್ರನು ಅರಸನಾದ ಹೆರೋದ ಖಡ್ಗದಿಂದ ರಕ್ಷಿಸಲ್ಪಡುವುದರ ಕುರಿತು ಸಂದೇಹಪಟ್ಟರು.

4. ಈ ನಿರೀಕ್ಷೆಯಿಲ್ಲದ ಪರಿಸ್ಥಿತಿಯಲ್ಲಿ ಕರ್ತನು ಏನನ್ನು ಮಾಡಿದನು?

   1) ಅನುಮಾನಪಡುತ್ತಿರುವ ಪೇತ್ರನನ್ನು ಸೆರೆಮನೆಯಿಂದ ಬಿಡಿಸಲು ಆತನು ತನ್ನ ದೂತನನ್ನು ಕಳುಹಿಸಿಕೊಟ್ಟನು.

   2) ಆತನು ಪೇತ್ರನನ್ನು ಖಡ್ಗದಿಂದ ರಕ್ಷಿಸಿ ಸೆರೆಮನೆಯಿಂದ ಬಿಡುಗಡೆ ಮಾಡುವುದರ ಮೂಲಕ ಅನುಮಾನಪಟ್ಟು ಪ್ರಾರ್ಥಿಸುತ್ತಿದ್ದ ಸಭೆಗೆ ಉತ್ತರವನ್ನು ಕಲ್ಪಿಸಿದನು.

   3) ಯಾರೊಬ್ಬನೂ, ಸ್ವತಃ ಮಹಾರಾಜ ಹೆರೋದನೂ ಕಂಡುಹಿಡಿಯಲಾಗದಂತೆ ಪೇತ್ರನಿಗೆ 'ಬೇರೊಂದು ಸ್ಥಳಕ್ಕೆ ಹೋಗುವಂತೆ' ಆತನು ಜ್ಞಾನವನ್ನು ನೀಡಿದನು.

5. ಉಪಸಂಹಾರ:

   1) ಕರ್ತನು ನಿಜವಾಗಲೂ ನಿರೀಕ್ಷೆಯಿಲ್ಲದ ಪರಿಸ್ಥಿತಿಗಳನ್ನು ನೋಡಿಕೊಂಡನು. ಆತನು ಪೇತ್ರನನ್ನು ಬಿಡುಗಡೆ ಮಾಡಿ ಆತನ ಜೀವಿತವನ್ನು ರಕ್ಷಿಸಿದನು.

   2) ಸ್ವತಃ ನಮ್ಮ 'ನಿರೀಕ್ಷೆಯಿಲ್ಲದ ಪರಿಸ್ಥಿತಿಗಳ' ಕುರಿತು ಏನು? ಅವುಗಳ ಕುರಿತು ನಾವು ಏನನ್ನು ಮಾಡಬೇಕು?

      - ಅವುಗಳಿಗಾಗಿ ನಾವು ಪ್ರಾರ್ಥಿಸಬೇಕು!

      - ಅಂತಹ ಪರಿಸ್ಥಿತಿಗಳಲ್ಲಿ ನಾವು ದೇವರ ಮೇಲೆ ಭರವಸೆಯಿಡಬೇಕು! ಆತನ ಚಿತ್ತ ನೆರವೇರುವಂತೆ ನಾವು ಅನುಮತಿಸಬೇಕು:

        – ಯಾಕೋಬನ ಸನ್ನಿವೇಶದಲ್ಲಿ: ಆತನು ಕೊಲ್ಲಲ್ಪಟ್ಟನು ಮತ್ತು ಹಾಗಾಗಿ ಯೇಸುವಿನ ಶಿಷ್ಯರಲ್ಲಿ ಈತನು ಮೊದಲ ರಕ್ತಸಾಕ್ಷಿಯಾದನು.

        – ಪೇತ್ರನ ಸನ್ನಿವೇಶದಲ್ಲಿ: ಆತನು ಬಿಡುಗಡೆ ಹೊಂದಿದನು ಮತ್ತು ಹಾಗಾಗಿ ದೇವರು ಆತನಿಗೆ ಇನ್ನೂ 20 ವರ್ಷಗಳ ಕಾಲದ ಫಲಭರಿತ ಸೇವೆಯನ್ನು ಅನುಗ್ರಹಿಸಿದನು.

# ಪಾಠ 31. ಹೆರೋದನ ಮರಣ, 12:19–24

## ಅ) ವಾಕ್ಯಭಾಗ

ಅರಸನಾದ ಹೆರೋದನ ಕುರಿತಾದಂತಹ ಲೂಕನ ಎರಡನೆಯ ಕಥೆಯು ತನ್ನ ರಾಜಧಾನಿಯಾದ ಸೆಜರೇಯದಲ್ಲಿ ನಡೆಯುತ್ತದೆ. ಅಲ್ಲಿನ ಒಂದು ಹಬ್ಬದಲ್ಲಿ ಜನರೆಲ್ಲರೂ ಹೆರೋದನನ್ನು ದೇವರೆಂದು ಹೊಗಳಿದರು. ಆತನು ಅದನ್ನು ಅಲ್ಲಗಳೆಯಲಿಲ್ಲವಾದ್ದರಿಂದ ದೇವರು ಆತನನ್ನು ಒಂದು ಭಯಂಕರವಾದ ಮರಣದಿಂದ ಶಿಕ್ಷಿಸಿದನು. ಈ ವಾಕ್ಯಭಾಗದ ಕೊನೆಯ ವಚನವು ಈ ಪುಸ್ತಕದ ಮೂರನೆಯ ಭಾಗವನ್ನು ಅಂತ್ಯಗೊಳಿಸುತ್ತದೆ: ದೇವರ ವಾಕ್ಯವಾದರೋ ವೃದ್ಧಿಯಾಗುತ್ತಾ ಪ್ರಸಾರಗೊಂಡಿತು.

## ಆ) ಟಿಪ್ಪಣಿ

*ಟೈರ್ ಮತ್ತು ಸಿದೋನ್* (ವ. 20): ಇವುಗಳು ಪಾಲೆಸ್ತೀನಿನ ಉತ್ತರದ ಮೆಡಿಟೆರೇನಿಯನ್ ಕರಾವಳಿಯಲ್ಲಿನ ಫಿಯೋನಿಕೆಯ ಅತೀ ಪ್ರಮುಖ ಪಟ್ಟಣಗಳಾಗಿದ್ದವು. ಇವುಗಳು ತಮ್ಮ ಆಹಾರ ಸಾಮಾಗ್ರಿಗಾಗಿ ಗಲಿಲಾಯದ ಧಾನ್ಯದ ಮೇಲೆ ಅವಲಂಭಿತವಾಗಿದ್ದವು.

*ಬ್ಲಾಸ್ತನು* (ವ. 20): ಈತನ ಕುರಿತು ಹೊಸ ಒಡಂಬಡಿಕೆಯಲ್ಲಿ ಬೇರೆ ಎಲ್ಲಿಯೂ ತಿಳಿಸಲ್ಪಟ್ಟಿಲ್ಲ.

*ನೇಮಕವಾದ ದಿನದಿಂದ* (ವ. 21): ಐತಿಹಾಸಿಕ ಮೂಲಗಳ ಆಧಾರದ ಪ್ರಕಾರ ಇದು ರೋಮ್ ಚಕ್ರವರ್ತಿಗಳಿಗೆ ಸನ್ಮಾನಿಸುವ ಹಬ್ಬವಾಗಿತ್ತು.

## ಇ) ಪಠ್ಯದ ಪ್ರಶ್ನೆಗಳು

1. ಈ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿರಿ: ಸೆಜರೇಯ, ಟೈರ್ ಮತ್ತು ಸಿದೋನ್!
2. ಅರಸನಾದ ಹೆರೋದನು ಸಂಧಾನಮಾಡಿಕೊಳ್ಳುವಂತೆ ಟೈರ್ ಮತ್ತು ಸಿದೋನಿನ ಜನರು ಯಾಕೆ ಕೇಳಿಕೊಂಡರು?
3. ಅರಸನಾದ ಹೆರೋದನು ಹೇಗೆ ಸತ್ತನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಟೈರ್ ಮತ್ತು ಸಿದೋನಿನ ಜನರಿಗೆ ಬ್ಲಾಸ್ತನ ಸಹಾಯ ಯಾಕೆ ಅವಶ್ಯಕವಾಗಿತ್ತೆಂದು ನೀವು ಆಲೋಚಿಸುತ್ತೀರಿ?

2. ಅರಸನಾದ ಹೆರೋದನ ಭಯಂಕರವಾದ ಮರಣಕ್ಕೆ ಕಾರಣವೇನು?

3. ಅಧ್ಯಾಯ 12:1–24 ರಲ್ಲಿ ಲೂಕನು ಒಬ್ಬ ಕುಶಲ ಬರಹಗಾರನೆಂದು ನಾವು ನೋಡುತ್ತೇವೆ. ಆತನು ಎರಡು ಶಕ್ತಿಗಳನ್ನು ವ್ಯತ್ಯಾಸವಾಗಿ ಹೋಲಿಸುತ್ತಾನೆ: ಅರಸನಾದ ಹೆರೋದನಿಂದ ಪ್ರತಿನಿಧಿಸಲ್ಪಟ್ಟ ಪ್ರಾಪಂಚಿಕ ಶಕ್ತಿ ಮತ್ತು ಸಭೆಯಿಂದ ಪ್ರತಿನಿಧಿಸಲ್ಪಟ್ಟ ದೇವರ ರಾಜ್ಯ. ಅಧ್ಯಾಯದ ಪ್ರಾರಂಭದಲ್ಲಿನ ಈ ಶಕ್ತಿಗಳ ಪರಿಸ್ಥಿತಿಯನ್ನು ಅಧ್ಯಾಯದ ಅದರ ಅಂತ್ಯದಲ್ಲಿನ ಪರಿಸ್ಥಿತಿಗೆ ಹೋಲಿಸಿರಿ!

# ಭಾಗ 4

# ಮೊದಲ ಸೇವಾ ಪ್ರಯಾಣ:

# ಅ. ಕೃ. 12:25 – 14:28

# ಯೆರೂಸಲೇಮಿನಲ್ಲಿ ಸಮ್ಮೇಳನ:

# ಅ. ಕೃ. 15:1 – 16:5

**ಪೀಠಿಕೆ**

ಆದಿಸಭೆಯ ಲೂಕನ ನಾಲ್ಕನೆಯ ಚಿತ್ರಣವು ಅನ್ಯಲೋಕಕ್ಕೆ ಸುವಾರ್ತೆಯ ಮೊದಲ ಭೌಗೋಳಿಕ ವಿಸ್ತರಣೆಯನ್ನು ವಿವರಿಸುತ್ತದೆ. ಬಾರ್ನಬ ಮತ್ತು ಪೌಲರು ಸೈಪ್ರಸ್, ಪಂಫಿಲ್ಯ ಮತ್ತು ಪಿಸಿದ್ಯಕ್ಕೆ ಒಂದು ಸೇವಾ ಪ್ರಯಾಣಕ್ಕಾಗಿ ಕಳುಹಿಸಲ್ಪಟ್ಟು ಅಂತಿಯೋಕ್ಯದಲ್ಲಿನ ಸಭೆಯು ಸುವಾರ್ತಾ ಸೇವಾಕಾರ್ಯದ ಒಂದು ತಳಹದಿಯಾಯಿತು. ಹೊಸ ಸಭೆಗಳು ಸ್ಥಾಪನೆಯಾದವು. ಅನ್ಯರ ಮತ್ತು ಸುನ್ನತಿಯ ಸಮಸ್ಯೆಯನ್ನು ಯೆರೂಸಲೇಮಿನಲ್ಲಿನ ಒಂದು ಸಮ್ಮೇಳನವು ಬಗೆಹರಿಸಿತು: ರಕ್ಷಣೆಹೊಂದಲು ಅನ್ಯರು ಸುನ್ನತಿ ಹೊಂದುವ ಅವಶ್ಯಕತೆಯಿಲ್ಲ. ಅನ್ಯ ಸಭೆಗಳು ಈ ನಿರ್ಧಾರದಿಂದ ಸಂತೋಷಗೊಂಡರು.

*ಹೀಗೆ ಸಭೆಗಳು ವಿಶ್ವಾಸದಲ್ಲಿ ಬಲಗೊಂಡು ಸಂಖ್ಯೆಯಲ್ಲಿ ಅನುದಿನ ಹೆಚ್ಚುತ್ತಾ ಬಂದವು* (16:5).

# ಪಾಠ 32. ಬಾರ್ನಬ ಮತ್ತು ಸೌಲರು, 12:25–13:3

## ಅ) ವಾಕ್ಯಭಾಗ

ಸೌಲ ಮತ್ತು ಬಾರ್ನಬರು ಯೂದಾಯದ ಬರಪೀಡಿತ ಕ್ರೈಸ್ತ ಸಹೋದರರಿಗಾಗಿ ಒಂದು ಉಡುಗೊರೆಯನ್ನು ಯೆರೂಸಲೇಮಿನಲ್ಲಿ ಹಸ್ತಾಂತರಿಸಿ ಅಲ್ಲಿಂದ ಹಿಂತಿರುಗಿದರು. ಅವರು ಮಾರ್ಕನೆಂಬ ಯೋಹಾನನನ್ನು ತಮ್ಮೊಂದಿಗೆ ಅಂತಿಯೋಕ್ಯಕ್ಕೆ ಹಿಂತಿರುಗಿ ಕರೆದುಕೊಂಡು ಬಂದರು. ಅಲ್ಲಿರುವ ಸಭೆಯು ಐದು ಜನ ಸಭಾಪಾಲಕರ ಗುಂಪಿನ ತಂಡವನ್ನು ಹೊಂದಿತ್ತು (ಲೂಕನು ಅವರನ್ನು ಪ್ರವಾದಿಗಳು ಮತ್ತು ಉಪದೇಶಕರೆಂದು ಕರೆಯುತ್ತಾನೆ). ಸಭೆಯು ಉಪವಾಸವಿದ್ದು ಆರಾಧಿಸುತ್ತಿದ್ದಾಗ, ಪವಿತ್ರಾತ್ಮನು ಈ ಎರಡೂ ಸಭಾಪಾಲಕರುಗಳನ್ನೂ, ಅಂದರೆ ಬಾರ್ನಬನನ್ನೂ ಸೌಲನನ್ನೂ, ತಾನು ಕರೆದಿರುವ ಕಾರ್ಯಕ್ಕಾಗಿ ಪ್ರತ್ಯೇಕಿಸಲು ತಿಳಿಸಿದನು. ಉಪವಾಸ ಪ್ರಾರ್ಥನೆಯ ನಂತರ ಅವರು ಬಾರ್ನಬ ಮತ್ತು ಸೌಲರ ಮೇಲೆ ಕೈಗಳನ್ನಿಟ್ಟು ಕಳುಹಿಸಿಕೊಟ್ಟರು.

## ಆ) ಟಿಪ್ಪಣಿ

*ಮಾರ್ಕ ಎಂದು ಕರೆಯಲ್ಪಡುತ್ತಿದ್ದ ಯೋಹಾನನು* (ವ. 25): ಈತನು ಬಾರ್ನಬನ ಹತ್ತಿರ ಸಂಬಂಧಿಯಾಗಿದ್ದನು, ಸಭಾ ಇತಿಹಾಸದ ಪ್ರಕಾರ ನಂತರ ಆತನು ಮಾರ್ಕನ ಸುವಾರ್ತೆಯನ್ನು ಬರೆದನು.

*ಪೌಲ* (ವ. 1, 2): ಗ್ರೀಕ್ ಪಠ್ಯದಲ್ಲಿ ಸೌಲ ಎಂದು ಇದೆ.

*ಬಾರ್ನಬನು* (ವ. 1): 4:36–37 ಮತ್ತು 11:22–26 ನ್ನು ನೋಡಿರಿ.

*ನಿಗರ ಎಂದು ಕರೆಯಲ್ಪಡುವ ಸಿಮೆಯೋನ* (ವ. 1): ಸಿಮೆಯೋನ ಎಂಬುದು ಒಂದು ಹಿಬ್ರಿಯ ಹೆಸರು, ಮತ್ತು ಲ್ಯಾಟಿನ್‌ನಲ್ಲಿ 'ನಿಗರ' ಅಂದರೆ 'ಕಪ್ಪು' ಎಂದರ್ಥ. ಹಾಗಾಗಿ ಬಹುಶಃ ಆತನು ಆಫ್ರಿಕಾದವನಾಗಿರಬೇಕು, ಆತನು ವಿಶ್ವಾಸಿಯಾಗುವುದಕ್ಕಿಂತ ಮುಂಚೆ ಯೆಹೂದಿ ಧರ್ಮಕ್ಕೆ ಮತಾಂತರ ಹೊಂದಿದ್ದನು.

*ಸಿರೇನಿಯದ ಲೂಕ್ಯ* (ವ. 1): ಲೂಕ್ಯ ಎಂಬುದು ಲ್ಯಾಟೀನ್ ಹೆಸರು. ಸಿರೇನಿಯವು ಮೆಡಿಟೆರೇನಿಯನ್ ಕರವಾಳಿಯ ಉತ್ತರ ಆಫ್ರಿಕಾದಲ್ಲಿದ್ದ ರೋಮ್ ಪ್ರಾಂತ್ಯದ ರಾಜಧಾನಿಯಾಗಿತ್ತು.

*ಮೆನಹೇನ* (ವ. 1): ಮೆನಹೇನ ಎಂಬುದು ಹಿಬ್ರಿಯ ಹೆಸರು. ಆತನು ಪಾಲೆಸ್ತೀನಿನಲ್ಲಿದ್ದ ಹೆರೋದನ ರಾಜಕುಟುಂಬಕ್ಕೆ ಬಹಳ ಹತ್ತಿರದವನಾಗಿರಬೇಕು.

## ಇ) ಪಠ್ಯ ಪ್ರಶ್ನೆಗಳು

1. ಅಂತಿಯೋಕ್ಯ ಸಭೆಯಲ್ಲಿ ಎಷ್ಟು ಜನ 'ಉಪದೇಶಕರು ಮತ್ತು ಪ್ರವಾದಿಗಳಿದ್ದರು'?
2. ಈ ಪಠ್ಯದಲ್ಲಿ 'ಉಪವಾಸವು' ಎರಡು ಸಲ ತಿಳಿಸಲ್ಪಟ್ಟಿದೆ. 'ಉಪವಾಸದೊಂದಿಗೆ' ಸಭೆಯ ಬೇರೆ ಯಾವ ಕಾರ್ಯಗಳು ಸಂಬಂಧ ಹೊಂದಿದ್ದವು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅಂತಿಯೋಕ್ಯ ಸಭೆಯ ಮತ್ತು ಪಟ್ಟಣದ ಜನಾಂಗೀಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಅಂತಿಯೋಕ್ಯ ಸಭೆಯ ನಾಯಕತ್ವವು ಯಾವ ರೀತಿಯಲ್ಲಿ ಪ್ರತಿಬಿಂಬಿಸಿತು?
2. ಬಾರ್ನಬ ಮತ್ತು ಸೌಲರನ್ನು ಸುವಾರ್ತಿಕರೆಂದು ಆದೇಶಿಸಿದವರು ಯಾರು? ಪವಿತ್ರಾತ್ಮನೋ ಅಥವಾ ಸಭೆಯೋ? ವ. 4 ನ್ನು ಸಹ ನೋಡಿರಿ!

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಈ ಪಠ್ಯದಲ್ಲಿ ಅವರು 'ಉಪವಾಸವಿದ್ದು ಆರಾಧಿಸುತ್ತಿದ್ದಾಗ' ಮತ್ತು 'ಉಪವಾಸವಿದ್ದು ಪ್ರಾರ್ಥಿಸುತ್ತಿದ್ದಾಗ'" ಪವಿತ್ರಾತ್ಮನು ತನ್ನ ಚಿತ್ತವನ್ನು ಸಭೆಗೆ ಪ್ರಕಟಿಸಿದನು. ಆದರೆ ಇದು ನಿಖರವಾಗಿ ಹೇಗೆ ಜರುಗಿತೆಂದು ಲೂಕನು ತಿಳಿಸುತ್ತಿಲ್ಲ. ಅದು ಪ್ರವಾದಿಗಳಲ್ಲೊಬ್ಬನಿಂದ ಬಂದ ಪ್ರವಾದನೆಯ ಮೂಲಕವೋ? ಅಥವಾ ಉಪದೇಶಕನೊಬ್ಬನ ಸತ್ಯವೇದದ ಅಧ್ಯಯನ ಮೂಲಕವೋ? ಅಥವಾ ಅವರು (5 ಜನ ನಾಯಕರುಗಳು ಮಾತ್ರವಲ್ಲ, ಇಡೀ ಸಭೆಯು) ಉಪವಾಸವಿದ್ದು ಆರಾಧಿಸುತ್ತಾ ಪ್ರಾರ್ಥಿಸುತ್ತಿದ್ದಾಗ ಒಂದು ರೀತಿಯ 'ಆಂತರ್ಯ ಮನವರಿಕೆಯ' ಮೂಲಕವೋ? ನೀವು ಏನನ್ನು ಆಲೋಚಿಸುತ್ತೀರಿ?
2. **ನಿಮ್ಮ** ಸಭೆಗೆ ಪವಿತ್ರಾತ್ಮನು ತನ್ನ ಚಿತ್ತವನ್ನು ಹೇಗೆ ಪ್ರಕಟಿಸುತ್ತಾನೆ? ನಿಮ್ಮ ಸಭೆಯನ್ನು ಹೊಸ ಸೇವೆಗೆ, ಹೊಸ ಜನರ ಕಡೆಗೆ, ಹೊಸ ಪ್ರಾಂತ್ಯಗಳಿಗೆ ಪವಿತ್ರಾತ್ಮನು ನಡೆಸಿದ್ದರ ಅನುಭವವನ್ನು ಹಂಚಿಕೊಳ್ಳಿರಿ!

## ಊ) ಉಪದೇಶಿಸು ಮತ್ತು ಬೋಧಿಸು!

ಅಂತಿಯೋಕ್ಯ ಸಭೆಯ ಕುರಿತು ನೀವು ತಿಳಿದುಕೊಂಡಿರುವ ವಿಷಯದ ಆಧಾರದ ಮೇಲೆ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನೀವು ಅದನ್ನು ***ಅಂತಿಯೋಕ್ಯ – ಒಂದು ಅಂತರ್ ರಾಷ್ಟ್ರೀಯ ಸಭೆ*** ಎಂಬುದಾಗಿ ಕರೆಯಬಹುದು ಮತ್ತು ಈ ಕೆಳಗಿನ ಹೊರ ರೇಖೆಯನ್ನು ಉಪಯೋಗಿಸಬಹುದು:

1. ಪೀಠಿಕೆ: ಅಪೊಸ್ತಲರ ಕೃತ್ಯಗಳು ಪುಸ್ತಕದ ಕುರಿತು ಮತ್ತು ಯೆರೂಸಲೇಮಿನಿಂದ, ಯೂದಾಯ ಮತ್ತು ಸಮಾರ್ಯವನ್ನು ಹಾದು ಸಿರಿಯಾದ ಅಂತಿಯೋಕ್ಯದವರೆಗೂ ಸುವಾರ್ತೆಯ ವಿಸ್ತರಣೆಯ ಕುರಿತು ಕೆಲವು ಮಾತುಗಳು.

2. ಅಂತಿಯೋಕ್ಯ – ಒಂದು ಅಂತರ್‌ರಾಷ್ಟ್ರೀಯ ನಗರ (11:19–30 ರ ಟಿಪ್ಪಣಿಯನ್ನು ನೋಡಿರಿ)

3. ಅಂತಿಯೋಕ್ಯದಲ್ಲಿರುವ ಸಭೆ – ಒಂದು ಅಂತರ್‌ರಾಷ್ಟ್ರೀಯ ಸಭೆ:
   1) ಅಂತರ್–ರಾಷ್ಟ್ರೀಯ ಸುವಾರ್ತಿಕರು ಸುವಾರ್ತೆಯನ್ನು ಅಲ್ಲಿಗೆ ತಂದರು
   2) ಹೊಸ ಒಡಂಬಡಿಕೆಯಲ್ಲಿನ ಮೊದಲ ಸಭೆಯೂ ಯೆಹೂದ್ಯರಲ್ಲದ ಸದಸ್ಯರನ್ನು ಒಳಗೊಂಡಿತ್ತು

4. ಅಂತಿಯೋಕ್ಯದಲ್ಲಿರುವ ಸಭೆ – ಒಂದು ಅಂತರ್‌ರಾಷ್ಟ್ರೀಯ ನಾಯಕತ್ವ:
   1) ಬಾರ್ನಬ ಮತ್ತು ಸೌಲರು ಚದುರಿಸಲ್ಪಟ್ಟ ಹೆಲೆನಿಸ್ಟಿಕ್ ಯೆಹೂದ್ಯರಾಗಿದ್ದರು. ಅವರಿಬ್ಬರೂ ಬಹಳ ವರ್ಷಗಳ ಕಾಲ ಯೆರೂಸಲೇಮಿನಲ್ಲಿ ಜೀವಿಸುತ್ತಿದ್ದರು.
   2) ನಿಗರ ಸಿಮೆಯೋನನು ಒಬ್ಬ ಕಪ್ಪು ಆಫ್ರಿಕಾದವನಾಗಿದ್ದನು, ಆತನು ಬಹುಶಃ ವಿಶ್ವಾಸಿಯಾಗುವುದಕ್ಕಿಂತ ಮುಂಚೆ ಯೆಹೂದ್ಯಮತಕ್ಕೆ ಮತಾಂತರವಾದವನು.
   3) ಸಿರೇನಿಯದ ಲೂಕ್ಯನು ಕ್ರೈಸ್ತನಾಗುವುದಕ್ಕಿಂತ ಮುಂಚೆ ಆಫ್ರಿಕಾದಿಂದ ಬಂದ ಒಬ್ಬ ರೋಮನ್ ಅನ್ಯನಾಗಿದ್ದನು.
   4) ಮೆನಹೇನನು ಪಾಲೆಸ್ತೀನಿನಿಂದ ಬಂದ ಯೆಹೂದ್ಯನಾಗಿದ್ದನು ಮತ್ತು ಹೆರೋದನ ರಾಜಕುಟುಂಬಕ್ಕೆ ಬಹಳ ಹತ್ತಿರದವನು.

5) ಅಂತಿಯೋಕ್ಯದಲ್ಲಿರುವ ಸಭೆ – ಒಂದು ಅಂತರ್‌ರಾಷ್ಟ್ರೀಯ ಸೇವೆ:
   1) ಪವಿತ್ರಾತ್ಮನು ಬಾರ್ನಬ ಮತ್ತು ಸೌಲರನ್ನು ಒಂದು ವಿಶೇಷ ಕಾರ್ಯಕ್ಕಾಗಿ ಪ್ರತ್ಯೇಕಿಸುವಂತೆ ತಿಳಿಸಿದನು.
   2) ಇನ್ನೂ ಹೆಚ್ಚಿನ ದೈವಿಕ ಮಾರ್ಗದರ್ಶನವನ್ನು ಹೊಂದಲು ಸಭೆಯು ಉಪವಾಸವಿದ್ದು ಪ್ರಾರ್ಥಿಸಿತು.

3) ಈ ಹೊಸ ಸೇವೆಗಾಗಿ ಬಾರ್ನಬ ಮತ್ತು ಸೌಲರನ್ನು ಕಳುಹಿಸಿಕೊಡಲು ಸಭೆಯು ಮನಸ್ಸುಳ್ಳದ್ದಾಗಿತ್ತು.

ಸಭೆಯು ಬಾರ್ನಬ ಮತ್ತು ಸೌಲರನ್ನು ಸೇವೆಗೆ ನೇಮಿಸಿ ಕಳುಹಿಸುವುದರ ಮೂಲಕ ಕೊನೆಯಲ್ಲಿ ಸುವಾರ್ತೆಯು ರೋಮನ್ ಸಾಮ್ರಾಜ್ಯದ (ಮತ್ತು ಅನ್ಯಲೋಕದ) ರಾಜಧಾನಿಯಾದ ರೋಮ್‌ನಲ್ಲಿ ಇದ್ದ ಚಕ್ರವರ್ತಿಗೂ ತಲುಪುವಂತೆ ಮಾಡಿತು.

6) ಅಂತಿಯೋಕ್ಯ ಸಭೆಯಿಂದ ನಾವು ಏನನ್ನು ಕಲಿಯಬಹುದು?

1) ನಾವು ಎಲ್ಲಾ ವಿಧದ ಜನರನ್ನು ಸ್ವೀಕರಿಸುವ ಒಂದು ತೆರೆದ ಸಭೆಯಾಗಿರಬೇಕು!

2) ನಾವು ಸಭೆಯ ಸದಸ್ಯತ್ವವನ್ನು ಪ್ರತಿಬಿಂಬಿಸುವ ನಾಯಕತ್ವವನ್ನು ಹೊಂದಿರಬೇಕು!

3) ಪವಿತ್ರಾತ್ಮನು ಸೇವೆಗಾಗಿ ಹೊಸ ದರ್ಶನಗಳನ್ನು ಕೊಡುವಂತೆಯೂ, ಸೇವೆಯಲ್ಲಿ ನಮ್ಮನ್ನು ನಡೆಸುವಂತೆಯೂ, ಮತ್ತು ನವೀನ ರೀತಿಯ ಸೇವೆಗಳಿಗೆ ನಮ್ಮನ್ನು ನಡೆಸಲು ತೆರೆದುಕೊಡುವವರಾಗಿರಬೇಕು!

4) ಹೊಸ ಜನರ ಗುಂಪುಗಳಿಗೂ ಮತ್ತು ಹೊಸ ಭೌಗೋಳಿಕ ಪ್ರದೇಶಗಳಿಗೂ ಸುವಾರ್ತೆಯನ್ನು ಸಾರಲು ನಮ್ಮ ಸಭೆಯಿಂದ ಜನರನ್ನು ಕಳುಹಿಸಿಕೊಡಬೇಕು!

# ಪಾಠ 33. ಸೈಪ್ರಸ್‌ನಲ್ಲಿ, 13:4–12

## ಅ) ವಾಕ್ಯಭಾಗ

ಪೌಲ ಮತ್ತು ಬಾರ್ನಬರು ಮೊದಲ ಸೇವಾ ಪ್ರಯಾಣಕ್ಕಾಗಿ ಹೊರಟರು. ಅವರು ತಮ್ಮ ಸಹಾಯಕ್ಕಾಗಿ ಬಾರ್ನಬನ ಹತ್ತಿರ ಸಂಬಂಧಿಯಾದ ಮಾರ್ಕನೆನಿಸಿಕೊಳ್ಳುವ ಯೋಹಾನನನ್ನು ಜೊತೆಗೆ ಕರೆದುಕೊಂಡು ಹೋದರು. ಸಿರಿಯಾದ ಅಂತಿಯೋಕ್ಯದಿಂದ ಅವರು ಸೆಲೂಕ್ಯಕ್ಕೆ ಸುಮಾರು 25 ಕಿ.ಮೀ.ರಷ್ಟು ದೂರ ಪ್ರಯಾಣ ಬೆಳೆಸಿದರು, ಅಲ್ಲಿಂದ ಅವರು ಹಡಗಿನಲ್ಲಿ ಸೈಪ್ರಸ್ ದ್ವೀಪಕ್ಕೆ ಹೋದರು. ಅಲ್ಲಿ ಮೂರು ಸಂಗತಿಗಳು ಸಂಭವಿಸಿದವು. ಅವರು ಯೆಹೂದ್ಯ ಸಭಾಮಂದಿರಗಳಲ್ಲಿ ಸುವಾರ್ತೆಯನ್ನು ಸಾರಿದರು. ಅವರು ಬಾರ್ ಯೇಸು ಮತ್ತು ಎಲುಮನೆಂಬ ಒಬ್ಬ ಯೆಹೂದ್ಯ ಮಂತ್ರವಾದಿಯನ್ನು ಎದುರುಗೊಂಡರು. ಅವರ ಸುವಾರ್ತಾ ಸೇವೆಯು ಸೈಪ್ರಸ್‌ನ ಚಕ್ರವರ್ತಿಯಾದ ಸೆರ್ಗ್ಯಪೌಲನ ರಕ್ಷಣೆಗೆ ನಡೆಸಿತು. ಪೌಲನು *ಸೌಲ* ಎಂಬ ತನ್ನ ಹಿಬ್ರಿಯ ಹೆಸರಿನ ಬದಲಾಗಿ *ಪೌಲ* ಎಂಬ ತನ್ನ ರೋಮನ್ ಹೆಸರನ್ನು ಈಗ ಬಳಸಲು ಪ್ರಾರಂಭಿಸಿದನೆಂದು ಲೂಕನು ತಿಳಿಸುತ್ತಾನೆ.

## ಆ) ಟಿಪ್ಪಣಿ

*ಸೌಲ–ಪೌಲ:* ಆ ದಿನಗಳಲ್ಲಿ ಯೆಹೂದ್ಯರು ಹಿಬ್ರಿಯ ಹೆಸರಿನೊಂದಿಗೆ ಗ್ರೀಕ್ ಅಥವಾ ರೋಮನ್ ಹೆಸರುಗಳನ್ನೂ ಹೊಂದಿಕೊಳ್ಳುವುದು ಸಹಜವಾಗಿತ್ತು. ಅವರ ಸಹಾಯಕ್ಕಾಗಿ ಹೋದ ಮಾರ್ಕನೆನಿಸಿಕೊಳ್ಳುವ ಯೋಹಾನನೂ (ಯೋಹಾನನೆಂಬುದು ಹಿಬ್ರಿಯ ಹೆಸರು, ಮಾರ್ಕನೆಂಬುದು ರೋಮನ್ ಹೆಸರು) ಸಹ ಎರಡು ಹೆಸರುಗಳನ್ನು ಹೊಂದಿದ್ದನು. ಪೌಲ ಅಂದರೆ 'ಸಣ್ಣ' (ಗಿಡ್ಡ) ಎಂದರ್ಥ.

*ಸೈಪ್ರಸ್‌ಗೆ:* ಅವರು ಮೊದಲು ಸೈಪ್ರಸಿಗೆ ಯಾಕೆ ಹೋದರೆಂದು ನಮಗೆ ತಿಳಿದಿಲ್ಲ. ಬಹುಶಃ ಈ ದ್ವೀಪವು ಬಾರ್ನಬನ ಹುಟ್ಟು ಸ್ಥಳವಾಗಿದ್ದರಿಂದ ಹೋಗಿರಬಹುದು (4:36). ಸಲಮೀಸಿನಿಂದ ರಾಜಧಾನಿಯಾದ ಪಾಫೋಸ್‌ಗೆ ಪ್ರಯಾಣವು 150 ಕಿ.ಮೀ.ರಷ್ಟು ದೂರವಾಗಿತ್ತು.

## ಇ) ಪಠ್ಯದ ಪ್ರಶ್ನೆಗಳು

1. ನಕ್ಷೆಯಲ್ಲಿ ಈ ಸ್ಥಳಗಳನ್ನು ಗುರುತಿಸಿರಿ: ಸಿರಿಯಾದ ಅಂತಿಯೋಕ್ಯ, ಸೆಲ್ಯೂಕ್ಯ, ಸೈಪ್ರಸ್, ಸಲಮೀಸ್ ಮತ್ತು ಪಾಫೋಸ್!
2. ಬಾರ್ ಯೇಸು ಹಾಗೂ ಸೆರ್ಗ್ಯಪೌಲನ ನಡುವೆ ಇದ್ದ ಸಂಬಂಧವೇನು?
3. ಬಾರ್ ಯೇಸುವನ್ನು ಪೌಲನು ಯಾಕೆ ಗದರಿಸುತ್ತಾನೆ?

4. ರಾಜ್ಯಪಾಲನು ನಂಬಿಕೆಯಿಟ್ಟಿದ್ದಕ್ಕೆ ಲೂಕನು ಎರಡು ಕಾರಣಗಳನ್ನು ತಿಳಿಸುತ್ತಾನೆ. ಅವುಗಳು ಯಾವುವು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅನೇಕ ಪ್ರಸಂಗಿಗಳು ಈ ರೀತಿಯಾಗಿ ಹೇಳಿದ್ದಾರೆ: 'ದಮಸ್ಕದ ರಸ್ತೆಯಲ್ಲಿ ಸೌಲನು ಪೌಲನಾದನು; ಆತನು ಯೇಸುವನ್ನು ಸಂಧಿಸಿದ್ದರಿಂದ ಆತನ ಜೀವನವು ಬದಲಾಯಿತು'. ಈ ಹೇಳಿಕೆಯ ಕುರಿತು ನೀವು ಏನು ಯೋಚಿಸುತ್ತೀರಿ?
2. ಅಪೋಸ್ತಲರ ಕೃತ್ಯಗಳಲ್ಲಿ ಈ ಹಿಂದೆ ಅಪೋಸ್ತಲನಾದ ಪೇತ್ರನೂ ಸಹ ಒಬ್ಬ ಮಂತ್ರವಾದಿಯನ್ನು ಎದುರುಗೊಂಡನು. ಯಾವ ಸನ್ನಿವೇಶದಲ್ಲಿ ಆತನನ್ನು ಎದುರುಗೊಂಡನು ಮತ್ತು ಅಲ್ಲಿ ಏನು ಸಂಭವಿಸಿತು?
3. ಸೆರ್ಗ್ಯಪೌಲನು ಬಹುಶಃ ಮೊಟ್ಟಮೊದಲ ಪೂರ್ಣ ಅನ್ಯ ವಿಶ್ವಾಸಿಯಾಗಿದ್ದನು. ಆದರೆ ಅಪೋಸ್ತಲರ ಕೃತ್ಯಗಳಲ್ಲಿ ಅನ್ಯಮತದಿಂದ ಬಂದ ಇಬ್ಬರು ವ್ಯಕ್ತಿಗಳ ಕುರಿತಾಗಿ ಈಗಾಗಲೇ ತಿಳಿಸಲಾಗಿದೆ (ಇಥಿಯೋಪ್ಯದ ಕಂಚುಕಿ ಮತ್ತು ಕೊರ್ನೇಲ್ಯನು). ಹಾಗಾದರೆ ಇಲ್ಲಿರುವ ವ್ಯತ್ಯಾಸವೇನು? ಈ ಕಥೆಯಲ್ಲಿರುವ ಪೌಲನ ಸೇವೆಯಲ್ಲಿರುವ ಹೊಸ ಅಂಶವೇನು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಬಾರ್ ಯೇಸುವಿನಂತಹ ಮಂತ್ರವಾದಿಯನ್ನು ನೀವು ಎಂದಾದರೂ ಸಂಧಿಸಿದ್ದೀರಾ? ಏನು ಸಂಭವಿಸಿತು?
2. ನಿಮ್ಮ ವ್ಯಕ್ತಿಗತ ಜೀವಿತದಲ್ಲಿ ಮತ್ತು ಸೇವೆಯಲ್ಲಿ ದುಷ್ಟ ಶಕ್ತಿಗಳನ್ನು ಎದುರುಗೊಳ್ಳುವಾಗ ನೀವು ಏನು ಮಾಡುವಿರಿ?
3. ಈ ಕಥೆಯಲ್ಲಿ ಚಕ್ರವರ್ತಿಯು ರಕ್ಷಿಸಲ್ಪಡಲು ಎರಡು ಅಂಶಗಳು ಸಹಾಯವಾಗುವುದನ್ನು ನಾವು ಕಾಣುತ್ತೇವೆ – ಅವು ಯಾವುವೆಂದರೆ, ಯೇಸುವಿನ ಕುರಿತಾದ ಬೋಧನೆ ಮತ್ತು ಅದ್ಭುತ. ನಿಮ್ಮ ಜೀವಿತ ಮತ್ತು ಸೇವೆಯಲ್ಲಿ ಇಂತಹದ್ದೇ ರೀತಿಯಾದ ಸಂಗತಿಯನ್ನು ನೀವು ಅನುಭವಿಸಿದ್ದೀರಾ? ದಯಮಾಡಿ ಹಂಚಿಕೊಳ್ಳಿರಿ! ಈ ಸಂಯೋಜನೆಯನ್ನು (ಸ್ಪಷ್ಟವಾಗಿ ಸುವಾರ್ತೆಯನ್ನು ಸಾರುವುದನ್ನು ಮತ್ತು ಅದ್ಭುತ ಮಾಡುವಂತದ್ದನ್ನು) ನಮ್ಮ ಸೇವೆಯಲ್ಲಿ ನಾವು ಅಳವಡಿಸಿಕೊಳ್ಳಬೇಕೋ? ಯಾಕೆ – ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

ಈ ವಾಕ್ಯಭಾಗವನ್ನು ಆಧರಿಸಿ ಒಂದು ಕುಟುಂಬ ಪ್ರಾರ್ಥನೆಯಲ್ಲಿ ಚಿಕ್ಕದೊಂದು ಸತ್ಯವೇದ ಅಧ್ಯಯನ ನಡೆಸಲು ನಿಮಗೆ ತಿಳಿಸಲಾಗಿದೆ. ಇದು ನಿಮ್ಮ ಹೊರರೇಖೆಯಾಗಬಹುದು:

1. ನಿಮ್ಮ ಗುಂಪಿನಲ್ಲಿರುವ ಒಬ್ಬರಿಗೆ ಈ ವಾಕ್ಯಭಾಗವನ್ನು ಓದುವಂತೆ ಹೇಳಿರಿ.

2. ಒಂದು ಸಂಕ್ಷಿಪ್ತವಾದ ಪೀಠಿಕೆಯನ್ನು ಕೊಡಿರಿ: 'ಈ ಕಥೆಯು ಪೌಲನ ಮೊದಲ ಸೇವಾ ಪ್ರಯಾಣದ ಸಂದರ್ಭದಲ್ಲಿ ಉಂಟಾದ ಒಂದು ಘಟನೆಯಾಗಿದೆ. ಆದಿಸಭೆಯಲ್ಲಿ ಸುವಾರ್ತೆಯು ಹೇಗೆ ಹರಡಿತು ಎಂಬುದನ್ನು ಈ ಕಥೆಯು ತಿಳಿಸುವುದರಿಂದ ಇದು ಪ್ರಾಮುಖ್ಯವಾದ ಕಥೆಯಾಗಿದೆ.'

3. ನಿಮ್ಮ ಅಧ್ಯಯನ: 'ನಾನು ಈ ಕಥೆಯಲ್ಲಿ ಮೂರು ಪ್ರಮುಖವಾದ ಅಂಶಗಳನ್ನು ಒತ್ತಿ ಹೇಳಲು ಬಯಸುತ್ತೇನೆ'.

1) ಪವಿತ್ರಾತ್ಮನ ಪಾತ್ರ

- ಬಾರ್ನಬ ಮತ್ತು ಪೌಲರು ಪವಿತ್ರಾತ್ಮನಿಂದ ಕಳುಹಿಸಲ್ಪಟ್ಟರು (ವ. 4)
- ಪವಿತ್ರಾತ್ಮನ ಬಲದಿಂದ ಪೌಲನು ದುರಾತ್ಮನನ್ನು ಎದುರಿಸಿದನು (ವ. 9)
- (ಸ್ಪಷ್ಟವಾಗಿ ಪ್ರಸ್ತಾಪಿಸಲ್ಪಡದಿದ್ದರೂ) ಪವಿತ್ರಾತ್ಮನು ಚಕ್ರವರ್ತಿಯ ಜೀವಿತದಲ್ಲಿ ಕಾರ್ಯಮಾಡಿದನು: ಆತನು ದೇವರ ವಾಕ್ಯವನ್ನು ಕೇಳಲು ಬಯಸಿದನು (ವ. 7) ಮತ್ತು ಆತನು ನಂಬಿದನು (ವ. 12)

2) ಪೌಲ ಮತ್ತು ಬಾರ್ನಬರು ವ್ಯತ್ಯಾಸಕರವಾದ ಪರಿಸ್ಥಿತಿಗಳಲ್ಲಿ ಸೇವೆ ಮಾಡಿದರು.

- ಅವರು ಸಭಾಮಂದಿರಗಳಲ್ಲಿ ದೇವರ ವಾಕ್ಯವನ್ನು ಪ್ರಸಿದ್ಧಪಡಿಸಿದರು (ವ. 5), ಅಲ್ಲಿ ಹಳೆ ಒಡಂಬಡಿಕೆಯ ಬೋಧನೆಯನ್ನು ತಿಳಿದಂತಹ ಜನರಿದ್ದರು. ಅವರು ಸಿದ್ಧವಾಗಿದ್ದರು.
- ಅವರು ಸುವಾರ್ತೆಯ ಹರಡುವಿಕೆಗೆ ಅಡ್ಡಿಯಾಗಿದ್ದ ದುಷ್ಟ ಶಕ್ತಿಗಳನ್ನು ಎದುರಿಸಲು ಭಯಪಡಲಿಲ್ಲ (ವ. 8–11): ಮಂತ್ರವಾದಿಯನ್ನು ಗದರಿಸಿದ್ದು.
- ಅವರು ಆ ಪ್ರಾಂತ್ಯದಲ್ಲಿಯೇ ಬಹು ಬಲಶಾಲಿಯಾದ ವ್ಯಕ್ತಿಗೆ ದೇವರ ವಾಕ್ಯವನ್ನು ಸಾರಿದರು (ವ. 12). ಸೆರ್ಗ್ಯಪೌಲನು ರೋಮ್ ಚಕ್ರವರ್ತಿಯ ಪರವಾಗಿ ಸೈಪ್ರಸನ್ನು ಆಳುತ್ತಿದ್ದನು.
- ಅವರು ಜನರ ಗುಂಪುಗಳಿಗೆ ಮಾತನಾಡಿದರು (ಸಭಾಮಂದಿರಗಳಲ್ಲಿ), ಹಾಗೂ ವ್ಯಕ್ತಿಗತವಾಗಿಯೂ ಮಾತನಾಡಿದರು (ಅಧಿಪತಿಗೆ)

3) ಸೇವೆಯಲ್ಲಿ ಪ್ರಸಂಗ ಮತ್ತು ಅದ್ಭುತಗಳು ಹೇಗೆ ಒಂದಕ್ಕೊಂದು ಸಂಬಂಧವಾಗಿದೆ?

- ಅಧಿಪತಿಯು ಅದ್ಭುತವನ್ನು ನೋಡಿದಾಗ ಯೇಸುವಿನ ಮೇಲೆ ನಂಬಿಕೆಯಿಟ್ಟದ್ದನ್ನೂ ಮತ್ತು ಆತನ ಬೋಧನೆಯನ್ನು ಸ್ವೀಕರಿಸುವುದನ್ನೂ ಈ ಕಥೆಯಲ್ಲಿ ನಾವು ಕಾಣುತ್ತೇವೆ.

- ಅಪೋಸ್ತಲರ ಕೃತ್ಯಗಳಲ್ಲಿ ಕೇವಲ ಅದ್ಭುತದ ಪರಿಣಾಮವಾಗಿ ಮಾತ್ರ ಜನರು ನಂಬಿಕೆಯಿಟ್ಟಿದ್ದರ ಕುರಿತು ಇನ್ನೂ ಯಾವುದಾದರೂ ಕಥೆಯನ್ನು ನಾವು ಕಾಣುತ್ತೇವೋ? ನನಗೆ ಯಾವುದೂ ಕಂಡುಬಂದಿಲ್ಲ!

- ಅಪೋಸ್ತಲರ ಕೃತ್ಯಗಳಲ್ಲಿ ಕೇವಲ ಯೇಸುವಿನ ಬೋಧನೆಯ ಪರಿಣಾಮವಾಗಿ ಮಾತ್ರ ಜನರು ನಂಬಿಕೆಯಿಟ್ಟಿದ್ದರ ಕುರಿತು ಇನ್ನೂ ಯಾವುದಾದರೂ ಕಥೆಯನ್ನು ನಾವು ಕಾಣುತ್ತೇವೋ? ಹೌದು, ಐಥಿಯೋಪ್ಯದೇಶದ ಕಂಚುಕಿಯನ್ನು ನೆನೆಸಿಕೊಳ್ಳಿರಿ.

- ಉಪಸಂಹಾರ: ಸುವಾರ್ತೆ ಸಾರುವುದು ಅತೀ ಪ್ರಾಮುಖ್ಯವಾದದ್ದು. ಅದ್ಭುತಗಳು ಮಾತ್ರ ಸಾಲದು. ಆದರೆ ಅದ್ಭುತ ಮತ್ತು ಸೂಚಕ ಕಾರ್ಯಗಳ ಮೂಲಕ ಯೇಸುವಿನ ಕುರಿತಾದ ಸಂದೇಶವು ಧೃಢೀಕರಿಸಲ್ಪಡುವುದು – ಶ್ರೇಷ್ಟ ಸಂಗತಿ! (14:3)

4. ಅನ್ವಯಿಸುವಿಕೆ: ಹಾಗಾದರೆ ನಿಮ್ಮ ಕುರಿತು ಏನು?

- ನಿಮ್ಮ ಜೀವಿತವು ನಿಜವಾಗಲೂ ಪವಿತ್ರಾತ್ಮನಿಂದ ನಿಯಂತ್ರಿಸಲ್ಪಡುತ್ತಿದೆ ಎಂದು ನೀವು ಹೇಳಲು ಸಾಧ್ಯವೋ? ನಿಮ್ಮ ಪ್ರತಿನಿತ್ಯದ ಜೀವಿತದಲ್ಲಿ? ನಿಮ್ಮ ಸೇವೆಯಲ್ಲಿ? ಈ ಲೋಕದ ದುಷ್ಟ ಶಕ್ತಿಗಳನ್ನು ನೀನು ಎದುರಿಸುವಾಗ?

- ಯೇಸುವಿನ ಸಂದೇಶದ ಬಲವನ್ನು ನೀವು ಅರಿತಿದ್ದೀರೋ? ಈ ಸಂದೇಶವು ನಿಮ್ಮ ವೈಯಕ್ತಿಕ ಮತ್ತು ಕೌಟುಂಬಿಕ ಜೀವನವನ್ನು ಮಾರ್ಪಡಿಸಲು ಸಾಧ್ಯವುಳ್ಳದ್ದೆಂದು ಅರಿತಿದ್ದೀರೋ?

# ಪಾಠ 34. ಪಿಸಿದಿಯದ ಅಂತಿಯೋಕ್ಯದಲ್ಲಿ, 13:13–52

## ಅ) ವಾಕ್ಯಭಾಗ

ಅಪೋಸ್ತಲರು ಸೈಪ್ರಸ್‌ನಿಂದ ವಾಯುವ್ಯಕ್ಕೆ ಹಡಗು ಪ್ರಯಾಣ ಮಾಡುತ್ತಾ ಮುಖ್ಯ ನೆಲಕ್ಕೆ ಬಂದರು. ಮೊದಲು ಅವರು ಪಂಫಿಲ್ಯ ಸೀಮೆಗೆ ಸೇರಿದ ಪೆರ್ಗೆಗೆ ಬಂದು ನಂತರ ಉತ್ತರಕ್ಕೆ 180 ಕಿ.ಮೀ. ರಷ್ಟು ದೂರದಲ್ಲಿದ್ದ ಪಿಸಿದಿಯದ ಅಂತಿಯೋಕ್ಯ ಎಂಬ ಪ್ರಮುಖ ಪಟ್ಟಣಕ್ಕೆ ತಮ್ಮ ಪ್ರಯಾಣವನ್ನು ಮುಂದುವರೆಸಿದರು. ಅವರು ಅಲ್ಲಿಗೆ ತಲುಪಲು ಎತ್ತರವುಳ್ಳ ಟಾರಸ್ ಪರ್ವತಗಳನ್ನು ದಾಟಬೇಕಾಯಿತು. ಅವರು ಪಿಸಿದಿಯದ ಅಂತಿಯೋಕ್ಯದಲ್ಲಿ ಸಭಾಮಂದಿರಕ್ಕೆ ಹೋದರು. ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಗ್ರಂಥಗಳ ಪಾರಾಯಣವಾದ ನಂತರ ಪೌಲನು ಮಾತನಾಡಬೇಕೆಂದು ಕೇಳಿಕೊಂಡರು. ಪೌಲನು ತನ್ನ ಪ್ರಸಂಗವನ್ನು ಇಸ್ರಾಯೇಲ್ ಜನರಿಂದ ದಾವೀದನವರೆಗಿನ ಒಂದು ಐತಿಹಾಸಿಕ ದಾಖಲೆಯಿಂದ ಪ್ರಾರಂಭಿಸಿದನು. ದೇವರು ತಾನು ವಾಗ್ದಾನ ಮಾಡಿದಂತೆ ದಾವೀದನ ಸಂತತಿಯಿಂದ ಇಸ್ರಾಯೇಲರಿಗೆ ರಕ್ಷಕನಾದ ಯೇಸುವನ್ನು ಕೊಟ್ಟನು. ನಂತರ ಪೌಲನು ಯೆರೂಸಲೇಮಿನ ಜನರು ಯೇಸುವಿಗೆ ಮರಣದಂಡನೆ ವಿಧಿಸಲು ಹೇಗೆ ಏರ್ಪಾಡು ಮಾಡಿದರೆಂಬುದನ್ನು ವಿವರಿಸಿದನು. ಆತನು ಶಿಲುಬೆಗೇರಿಸಲ್ಪಟ್ಟನು ಮತ್ತು ಹೂಣಲ್ಪಟ್ಟನು, ಆದರೆ ದೇವರು ಹಳೆ ಒಡಂಬಡಿಕೆಯಲ್ಲಿ ತಾನು ವಾಗ್ದಾನ ಮಾಡಿದಂತೆಯೇ ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು. ಯೇಸುವಿನ ಮೂಲಕ ಈಗ ಪಾಪ ಕ್ಷಮಾಪಣೆಯು ಸಾರಲ್ಪಡುತ್ತಿದೆ ಮತ್ತು ಆತನ ಮೂಲಕ ನಂಬುವವರೆಲ್ಲರೂ ನೀತಿವಂತರೆಂದು ನಿರ್ಣಯಿಸಲ್ಪಡುವರು. ಪೌಲನ ಪ್ರಸಂಗವನ್ನು ಕೇಳಿದ ಜನರು, ಅನ್ಯರೂ ಮತ್ತು ಯೆಹೂದ್ಯರೂ, ಆತನ ಸಂದೇಶದಲ್ಲಿ ಆಸಕ್ತಿಯುಳ್ಳವರಾಗಿ ಪುನಃ ಮುಂದಿನ ಸಬ್ಬತ್ ದಿನದಲ್ಲಿ ಬರಬೇಕೆಂಬುದಾಗಿ ಆತನನ್ನು ಕೇಳಿಕೊಂಡರು. ಆ ದಿನ ಆತನ ಪ್ರಸಂಗವನ್ನು ಕೇಳಲು ಬಹಳ ಜನರು ಸೇರಿಬಂದರು. ಆದರೆ ಯೆಹೂದ್ಯರು ಹೊಟ್ಟೆಕಿಚ್ಚುಪಟ್ಟು ಪೌಲನನ್ನು ವಿರೋಧಿಸಿದರು. ನಂತರ ಅಪೋಸ್ತಲರು ಅನ್ಯರ ಕಡೆಗೆ ತಿರುಗಿದರು, ಅಲ್ಲಿ ಅನೇಕ ಅನ್ಯ ಜನರು ಸಂತೋಷಪಟ್ಟು ಕರ್ತನನ್ನು ನಂಬಿದರು. ಆದರೆ ಯೆಹೂದ್ಯರು ಆ ಪ್ರಾಂತ್ಯದಲ್ಲಿ ಹಿಂಸೆಯನ್ನು ಪ್ರಾರಂಭಿಸಿ ಅಪೋಸ್ತಲರನ್ನು ಆ ಪ್ರಾಂತ್ಯದಿಂದ ಕಳುಹಿಸಿಬಿಟ್ಟರು. 'ಶಿಷ್ಯರು ಬಹಳ ಸಂತೋಷದಿಂದಲೂ ಪವಿತ್ರಾತ್ಮನಿಂದಲೂ ತುಂಬಿದವರಾದರು' ಎಂಬ ವಚನದಿಂದ ಈ ವಾಕ್ಯಭಾಗವು ಕೊನೆಗೊಳ್ಳುತ್ತದೆ.

## ಆ) ಟಿಪ್ಪಣಿ

*ದೇವರ ವಾಕ್ಯವನ್ನು ನಾವು ಮೊದಲು ನಿಮಗೆ ಹೇಳುವುದು ಅವಶ್ಯವಾಗಿತ್ತು* (ವ. 46): ಸುವಾರ್ತೆಯು ಮೊದಲು ಯೆಹೂದ್ಯರಿಂದ ಬಂದದ್ದರಿಂದ ಅದನ್ನು ಮೊದಲು ಅವರು ಕೇಳುವುದು ಅವರ ಹಕ್ಕಾಗಿತ್ತು (ರೋಮಾ. 1:16 ರೊಂದಿಗೆ ಹೋಲಿಸಿರಿ). ಸ್ವತಃ ತಾನೇ ಯೆಹೂದ್ಯನಾದ ಪೌಲನು ತನ್ನ ಜನರಿಗಾಗಿ ಒಂದು ವಿಶೇಷವಾದ ಭಾರವನ್ನು ಹೊಂದಿದ್ದನು (ರೋಮಾ. 10:1 ನ್ನು ಹೋಲಿಸಿರಿ). ಇದೇ ಒಂದು ಕಾರಣಕ್ಕಾಗಿ ಆತನು ಮೊದಲು ಸುವಾರ್ತೆಯನ್ನು ಸಾರುವುದಕ್ಕೆ ಸಭಾಮಂದಿರಕ್ಕೆ ಹೋದನು (ವ. 14).

*ನಿತ್ಯಜೀವಕ್ಕೆ ನೇಮಿಸಲ್ಪಟ್ಟವರೆಲ್ಲರೂ ವಿಶ್ವಾಸವನ್ನಿಟ್ಟರು* (ವ. 48): ಒಬ್ಬ ವ್ಯಕ್ತಿ ನಿತ್ಯಜೀವವನ್ನು ಹೇಗೆ ಹೊಂದುತ್ತಾನೆ ಅಥವಾ ಹೊಂದುವುದಿಲ್ಲ ಎಂಬುದರ ಕುರಿತು ಎರಡು ಅಂಶಗಳಿವೆ – 'ದೈವಿಕ ನೇಮಕ'" ಮತ್ತು 'ಮಾನವ ನಂಬಿಕೆ'." ಈ ವಾಕ್ಯಭಾಗದಲ್ಲಿ 'ದೈವಿಕ ನೇಮಕ' ಅಥವಾ ದೇವರ ಪಾತ್ರವು ಒತ್ತಿ ಹೇಳಲ್ಪಟ್ಟಿದೆ. ವ. 46 ರಲ್ಲಿ 'ಮಾನವ ನಂಬಿಕೆ' ಅಥವಾ ಜನರ ಅಂಗೀಕಾರದ ಪಾತ್ರವು ಒತ್ತಿ ಹೇಳಲ್ಪಟ್ಟಿದೆ: 'ನೀವು ಅದನ್ನು (ದೇವರ ವಾಕ್ಯವನ್ನು) ತಳ್ಳಿಬಿಟ್ಟಿದ್ದರಿಂದಲೂ...

*ಶಿಷ್ಯರು ಬಹಳ ಸಂತೋಷದಿಂದಲೂ ಪವಿತ್ರಾತ್ಮನಿಂದಲೂ ತುಂಬಿದವರಾದರು* (ವ. 52): ಅಪೊಸ್ತಲರ ಕೃತ್ಯಗಳಲ್ಲಿ ಪವಿತ್ರಾತ್ಮನು ಒಂದು ಪ್ರಮುಖ ಪಾತ್ರವನ್ನು ವಹಿಸುತ್ತಾನೆ, 4:8; 4:31; 13:9 ನ್ನು ಹೋಲಿಸಿರಿ. ಗಲಾತ್ಯ 5:22 ರಲ್ಲಿ ಪೌಲನು 'ಸಂತೋಷವನ್ನು'" ಪವಿತ್ರಾತ್ಮನ ಫಲವಾಗಿ ಪ್ರಸ್ತಾಪಿಸುತ್ತಾನೆ.

## ಇ) ಪಠ್ಯದ ಪ್ರಶ್ನೆಗಳು

1. ಈ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿರಿ: ಪೆರ್ಗೆ ಮತ್ತು ಪಿಸಿದಿಯದ ಅಂತಿಯೋಕ್ಯ! ಹಾಗೆಯೇ ಸತ್ಯವೇದದ ಭೂಪಟ ಪುಸ್ತಕದಲ್ಲಿ ಟಾರಸ್ ಪರ್ವತಗಳನ್ನು ಗುರುತಿಸಲು ಪ್ರಯತ್ನಿಸಿರಿ!
2. ಪೆರ್ಗೆಯಲ್ಲಿ ಏನು ಸಂಭವಿಸಿತು?
3. ಪೌಲನು ತನ್ನ ಪ್ರಸಂಗದಲ್ಲಿ ಹಳೆ ಒಡಂಬಡಿಕೆಯ ಯಾವ ಭಾಗವನ್ನು ಉಲ್ಲೇಖಿಸುತ್ತಾನೆ?
4. ಕ್ರೈಸ್ತ ಇತಿಹಾಸದಲ್ಲಿನ ಒಂದು ತಿರುವನ್ನು ಸೂಚಿಸುವ ಒಂದು ಹೇಳಿಕೆಯನ್ನು ವ. 46 ರಲ್ಲಿ ಕಾಣುತ್ತೇವೆ? ಆ ಹೇಳಿಕೆ ಯಾವುದು?
5. ಪಿಸಿದ್ಯದ ಅಂತಿಯೋಕ್ಯದಲ್ಲಿ ಅಪೊಸ್ತಲರು ಮಾಡಿದ ಸೇವೆಯ ಪ್ರತಿಫಲವೇನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪಿಸಿದ್ಯದ ಅಂತಿಯೋಕ್ಯ ಸಭಾಮಂದಿರದಲ್ಲಿ ಪೌಲನು ಮಾತನಾಡಬೇಕೆಂದು ಯಾಕೆ ಕೇಳಿಕೊಂಡರು?
2. ಈ ವಾಕ್ಯಭಾಗದಲ್ಲಿ ಲೂಕನು ಪೌಲನ ಒಂದು ಪ್ರಸಂಗವನ್ನು ದಾಖಲಿಸುತ್ತಾನೆ. ಸುವಾರ್ತೆಯ ಕುರಿತು ಜನರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸುವಂತೆ ಮಾಡಿದಂತಹ ಈ ಪ್ರಸಂಗವು ಪರಿಣಾಮಕಾರಿಯಾದುದ್ದಾಗಿದೆ (ವ. 42–44). ಇದನ್ನು ಬರೆದುಕೊಂಡು ನಿಮ್ಮ ಸೇವೆಯಲ್ಲಿ ಬಳಸುವುದು ಒಳ್ಳೆಯ ಆಲೋಚನೆಯೋ? ಯಾಕೆ – ಯಾಕೆ ಇಲ್ಲ?
3. 'ಅನ್ಯಜನರು ಇದನ್ನು ಕೇಳಿ ಹರ್ಷಗೊಂಡು ಕರ್ತನ ವಾಕ್ಯವನ್ನು ಮಹಿಮೆಪಡಿಸಿದರು' (ವ. 48) ಎಂಬ ಹೇಳಿಕೆಯ ಅರ್ಥ ಏನೆಂದು ನೀವು ಆಲೋಚಿಸುತ್ತೀರಿ?

4. ‘ಶಿಷ್ಯರು ಬಹಳ ಸಂತೋಷದಿಂದಲೂ ಪವಿತ್ರಾತ್ಮನಿಂದಲೂ ತುಂಬಿದವರಾದರು’” ಎಂಬ ಮಾತಿನಿಂದ ಈ ವಾಕ್ಯಭಾಗವು ಕೊನೆಗೊಳ್ಳುತ್ತದೆ. ಇಲ್ಲಿ ‘ಶಿಷ್ಯರೆಂದರೆ’ ಯಾರು? ಕೆಲವು ವಿಮರ್ಶಕರು ಅದು ‘ಪೌಲ ಮತ್ತು ಬಾರ್ನಬರೆಂದು’ ಅಭಿಪ್ರಾಯಪಟ್ಟರೆ, ಇನ್ನೂ ಕೆಲವು ವಿಮರ್ಶಕರು ಅದು ‘ಪಿಸಿದ್ಯದ ಅಂತಿಯೋಕ್ಯದ ವಿಶ್ವಾಸಿಗಳೆಂದು’ ಅಭಿಪ್ರಾಯಪಡುತ್ತಾರೆ. ನಿಮ್ಮ ಅಭಿಪ್ರಾಯವೇನು ಮತ್ತು ಯಾಕೆ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಇಂದು ದಕ್ಷಿಣ ಭಾರತದಲ್ಲಿ ಅನೇಕ ಜನರು ಸುವಾರ್ತೆಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆ. ನಿಮ್ಮ ಸ್ಥಳದಲ್ಲಿ ಅಥವಾ ಪ್ರಾಂತ್ಯದಲ್ಲಿ ಇಂತಹದ್ದೇ ರೀತಿಯಾದ ಯಾವುದಾದರೂ ಅನುಭವವನ್ನು ಹೊಂದಿದ್ದೀರಾ? ಈ ರೀತಿಯಾದ ಸಕಾರಾತ್ಮಕ ಅಭಿಪ್ರಾಯ ಬರಲು ಕಾರಣಗಳೇನು?

2. ಈ ವಾಕ್ಯಭಾಗದಲ್ಲಿ ಯೆಹೂದ್ಯರು ಅಪೋಸ್ತಲರನ್ನು ವಿರೋಧಿಸಲು ಮತ್ತು ಹಿಂಸೆಯನ್ನು ಪ್ರಾರಂಭಿಸಿಲು ‘ಅಸೂಯೆ’” ಪ್ರಮುಖವಾದ ಕಾರಣವೆಂದು ತಿಳಿಸಲ್ಪಟ್ಟಿದೆ. ಇಂದು ದಕ್ಷಿಣ ಭಾರತದಲ್ಲಿ ಸಭಾಪಾಲಕರುಗಳನ್ನು ಮತ್ತು ಸುವಾರ್ತಿಕರನ್ನು ಮೂಲಭೂತವಾದಿಗಳು ವಿರೋಧಿಸಲು ‘ಅಸೂಯೆ’ ಒಂದು ಕಾರಣವಾಗಿರಬಹುದೋ? ಅಥವಾ ಬೇರೆ ಕಾರಣಗಳು ಇವೆಯೋ? ನಿಮ್ಮ ಅನುಭವ ಹಾಗೂ ಆಲೋಚನೆಗಳನ್ನು ಚರ್ಚಿಸಿರಿ ಮತ್ತು ಹಂಚಿಕೊಳ್ಳಿರಿ!

## ಊ) ಉಪದೇಶಿಸು ಮತ್ತು ಬೋಧಿಸು!

1. ಈ ವಾಕ್ಯಭಾಗದಲ್ಲಿರುವ ಪೌಲನ ಸಂದೇಶದವನ್ನು 1 ಕೊರಿ. 15:3–5 ರಲ್ಲಿರುವ ಆತನ ಸುವಾರ್ತೆಯ ಸಾರಾಂಶದೊಂದಿಗೆ ಹೋಲಿಸಿರಿ! ಈ ಪ್ರಮುಖವಾದ ನಾಲ್ಕು ಅಂಶಗಳನ್ನು ಗುರುತಿಸಲು ನಿಮಗೆ ಸಾಧ್ಯವಾಗಬೇಕು:

   ಯೇಸು

   - ದೇವರ ವಾಕ್ಯದ ಪ್ರಕಾರ ನಮ್ಮ ಪಾಪಗಳಿಗಾಗಿ ಸತ್ತನು
   - ಹೂಣಲ್ಪಟ್ಟನು
   - ಎಬ್ಬಿಸಲ್ಪಟ್ಟನು
   - ಕಾಣಿಸಿಕೊಂಡನು

   ಈ ನಾಲ್ಕು ಅಂಶಗಳ ಆಧಾರದ ಮೇಲೆ ಒಂದು ಪ್ರಸಂಗವನ್ನು ಸಿದ್ಧಪಡಿಸಿರಿ!

# ಪಾಠ 35. ಇಕೋನಿಯದಲ್ಲಿ, 14:1–7

## ಅ) ವಾಕ್ಯಭಾಗ

ಪಿಸಿದ್ಯದ ಅಂತಿಯೋಕ್ಯದಿಂದ 180 ಕಿ.ಮೀ. ದೂರ ಇರುವ ಇಕೋನಿಯದಲ್ಲಿ ಪೌಲ ಮತ್ತು ಬಾರ್ನಬರ ಸೇವೆಯು ಯಶಸ್ವಿಯಾಯಿತು, ಆದಾಗ್ಯೂ ಕಷ್ಟಗಳಿಂದ ಕೂಡಿದ್ದಾಗಿತ್ತು. ಎಂದಿನಂತೆ ಅವರು ಮೊದಲು ಯೆಹೂದ್ಯರ ಸಭಾಮಂದಿರಗಳಲ್ಲಿ ಬೋಧಿಸಿದರು ಮತ್ತು ಅನೇಕ ಜನರು ನಂಬಿದರು. ಆದರೆ ನಂತರ ಅವರನ್ನು ಕೊಲ್ಲಬೇಕೆಂಬ ಸಂಚು ಮಾಡಲ್ಪಟ್ಟಾಗ ಅವರು ಇಕೋನಿಯವನ್ನು ಬಿಟ್ಟು ಹೋಗಲು ನಿರ್ಧರಿಸಿದರು.

## ಆ) ಟಿಪ್ಪಣಿ

*ಅಪೊಸ್ತಲರು* (ವ. 4): ಬಾರ್ನಬನು ಮೊಟ್ಟಮೊದಲ ಬಾರಿಗೆ ಅಪೊಸ್ತಲನು ಎಂಬುದಾಗಿ ಇಲ್ಲಿ ಕರೆಯಲ್ಪಡುತ್ತಿದ್ದಾನೆ (ವ. 14 ನ್ನು ಸಹ ನೋಡಿರಿ). ಹೊಸ ಒಡಂಬಡಿಕೆಯಲ್ಲಿ 'ಅಪೊಸ್ತಲ' ಎಂಬ ಪದವು ಎರಡು ವ್ಯತ್ಯಾಸಕರವಾದ ಅರ್ಥಗಳಲ್ಲಿ ಬಳಸಲ್ಪಟ್ಟಿದೆ. ಮೊದಲನೆಯದಾಗಿ ಅದು 'ಕ್ರಿಸ್ತನ ಅಪೊಸ್ತಲರ', ಅಂದರೆ, ಪುನರುತ್ಥಾನದ ಸಾಕ್ಷಿಗಳಾಗಿರುವಂತೆ ಯೇಸುವಿನಿಂದ ನೇಮಿಸಲ್ಪಟ್ಟ 12 ಜನರ, ಕುರಿತು ಉಲ್ಲೇಖಿಸುತ್ತದೆ; ಪೌಲನು ನಂತರ ಈ ಗುಂಪಿನಲ್ಲಿ ಸೇರಿಸಲ್ಪಟ್ಟನು. ಎರಡನೆಯದಾಗಿ, ಅದು 'ಸಭೆಗಳ ಅಪೊಸ್ತಲರ' ಅಥವಾ ಇಂದು ನಾವು ಕರೆಯುವಂತಹ 'ಮಿಷನರಿಗಳ' ಕುರಿತು ಉಲ್ಲೇಖಿಸುತ್ತದೆ; ಈ ಗುಂಪಿನಲ್ಲಿ ಬಾರ್ನಬ ಮತ್ತು ಎಪಫ್ರೋದಿತನನ್ನು ನಾವು ಕಾಣಬಹುದು (ಫಿಲಿಪ್ಪಿ. 2:25).

*ಅವರ ಮೇಲೆ ಕಲ್ಲೆಸೆಯಬೇಕೆಂದು* (ವ. 5): ದೇವದೂಷಕರನ್ನು ಕಲ್ಲೆಸೆದು ಕೊಲ್ಲುವುದು ಯೆಹೂದ್ಯರ ಮರಣದಂಡನೆಯ ಪದ್ಧತಿಯಾಗಿತ್ತು. ಹಾಗಾಗಿ ಬಹುಶಃ ನಂಬದ ಯೆಹೂದ್ಯರು ಅಪೊಸ್ತಲರ ಬೋಧನೆಯನ್ನು ದೇವದೂಷಣೆಯೆಂದು ಭಾವಿಸಿರಬಹುದು. ಇಲ್ಲವಾದರೆ ಗಲಬೆಯ ಸಮಯದಲ್ಲಿ ಜನರ ದೊಂಬಿಯು ಅಪೊಸ್ತಲರನ್ನು ಕೊಲ್ಲಬೇಕೆಂಬುದಾಗಿಯೂ ಅವರು ಬಯಸಿದ್ದಿರಬಹುದು.

*ಲುಕವೋನಿಯದ ಪಟ್ಟಣಗಳಾದ ಲುಸ್ತ್ರ ಮತ್ತು ದೆರ್ಬೆ* (ವ. 6): ಲುಕವೋನಿಯವು ಟಾರಸ್ ಪರ್ವತಗಳ ಉತ್ತರದಲ್ಲಿ ಮತ್ತು ಪಿಸಿದ್ಯದ ಪೂರ್ವದಲ್ಲಿದ್ದ ಒಂದು ಜಿಲ್ಲೆಯಾಗಿತ್ತು. ಅದು ಗಲಾತ್ಯದ ರೋಮ್ ಪ್ರಾಂತ್ಯದ ಒಂದು ಭಾಗವಾಗಿತ್ತು. ಲುಸ್ತ್ರವು ರೋಮನ್ನರ ವಾಸಸ್ಥಳವಾಗಿತ್ತು ಮತ್ತು ಬಹುಶಃ ತಿಮೋಥಿಯ ಸ್ವಂತ ಊರಾಗಿತ್ತು (13:4); ಇದು ಇಕೋನಿಯದಿಂದ 30 ಕಿ.ಮೀ. ದೂರದಲ್ಲಿತ್ತು. ದೆರ್ಬೆಯು ಲುಸ್ತ್ರದಿಂದ 100 ಕಿ.ಮೀ. ದೂರದಲ್ಲಿತ್ತು ಮತ್ತು ಅದು ಗಾಯನ ಸ್ವಂತ

ಊರಾಗಿತ್ತು (20:4). ಆ ದಿನಗಳಲ್ಲಿ ಈ ಎರಡೂ ಪಟ್ಟಣಗಳು ಚಿಕ್ಕದಾಗಿದ್ದವು ಮತ್ತು ಪ್ರಾಮುಖ್ಯತೆಗಳಿಲ್ಲದ್ದಾಗಿದ್ದವು.

## ಇ) ಪಠ್ಯದ ಪ್ರಶ್ನೆಗಳು

1. ನಕ್ಷೆಯಲ್ಲಿ ಈ ಸ್ಥಳಗಳನ್ನು ಗುರುತಿಸಿರಿ, ಇಕೋನಿಯ, ಲುಸ್ತ್ರ ಮತ್ತು ದೆರ್ಬೆ!
2. ಇಕೋನಿಯದ ಸಭಾಮಂದಿರದಲ್ಲಿ ಪೌಲ ಮತ್ತು ಬಾರ್ನಬರು ಪ್ರಸಂಗಿಸಿದಾಗ ಎಂತಹ ರೀತಿಯ ಜನರು ನಂಬಿದರು?
3. ಕೆಲವು ಯೆಹೂದ್ಯರು ಯಾಕೆ ನಂಬಲಿಲ್ಲ?
4. ಅಪೋಸ್ತಲರು ಇಕೋನಿಯದಿಂದ ಓಡಿಹೋದ ಮೇಲೆ ಏನು ಮಾಡಿದರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲ ಮತ್ತು ಬಾರ್ನಬರು ಇಕೋನಿಯದಲ್ಲಿ ಯಾಕೆ 'ಬಹಳ ಸಮಯವನ್ನು' (ವ. 3) ಕಳೆಯಬೇಕಾಯಿತು?
2. ಇಕೋನಿಯದಲ್ಲಿನ ಅಪೋಸ್ತಲರ ಸೇವೆಯಲ್ಲಿ ಉಂಟಾದ 'ಅದ್ಭುತ ಮತ್ತು ಸೂಚಕ ಕಾರ್ಯಗಳ' ಪಾತ್ರವೇನು?
3. ಅಪೋಸ್ತಲರು ಇಕೋನಿಯದಿಂದ ಯಾಕೆ ಓಡಿ ಹೋದರು? ಅವರು ಸರಿಯಾದ ಕಾರ್ಯವನ್ನು ಮಾಡಿದರೋ? ಅವರು ಅಲ್ಲಿಯೇ ತಂಗಿದ್ದರೆ ಉತ್ತಮವಾಗಿರುತ್ತಿತ್ತಲ್ಲವೋ? ಯಾಕೆ – ಯಾಕೆ ಇಲ್ಲ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಸುವಾರ್ತೆಯ ಕುರಿತು ಇಕೋನಿಯದಲ್ಲಿ ಮಿಶ್ರಪ್ರತಿಕ್ರಿಯೆ ತೋರಿಬಂತು. ಪ್ರಾರಂಭದಲ್ಲಿ 'ಬಹುಸಂಖ್ಯೆಯಲ್ಲಿ ಯೆಹೂದ್ಯರೂ ಅನ್ಯಜನರೂ ವಿಶ್ವಾಸವನ್ನಿಟ್ಟರು'. ಆದರೆ ಕೆಲವು ಯೆಹೂದ್ಯರು 'ನಂಬಲು ನಿರಾಕರಿಸಿದರು' ಮತ್ತು ಅನ್ಯಜನರ ಮನಸ್ಸಿನಲ್ಲಿ ವಿಷದ ಬೀಜವನ್ನು ಬಿತ್ತಿದ್ದರು. ನಂತರ ನಾವು ಎರಡು ಗುಂಪುಗಳುಂಟಾಗುವ ಸನ್ನಿವೇಶವನ್ನು ಕಾಣುತ್ತೇವೆ: ಯೆಹೂದ್ಯರೊಂದಿಗೆ ಸೇರಿದ ನಂಬದೆ ಇರುವ ಗುಂಪು ಮತ್ತು ಅಪೋಸ್ತಲರೊಂದಿಗೆ ಸೇರಿದ ನಂಬುವವರ ಗುಂಪು. ನೀವು ನಿಮ್ಮ ಜೀವಿತ ಮತ್ತು ಸೇವೆಯಲ್ಲಿ ಇಂತಹ ಮಿಶ್ರ ಪ್ರತಿಕ್ರಿಯೆಯನ್ನು ಅನುಭವಿಸಿದ್ದೀರಾ? ಹಂಚಿಕೊಳ್ಳಿರಿ! ಇಂದು ದಕ್ಷಿಣ ಭಾರತದಲ್ಲಿ ಈ ರೀತಿಯ ಮಿಶ್ರಪ್ರತಿಕ್ರಿಯೆಗೆ ಕಾರಣಗಳೇನು?

## ಊ) ಉಪದೇಶಿಸು ಮತ್ತು ಬೋಧಿಸು!

ಈ ವಾಕ್ಯಭಾಗವನ್ನು ***ಸುವಾರ್ತೆಗೆ ಪ್ರತಿಕ್ರಿಯೆ*** ಎಂಬ ಶಿರೋನಾಮವುಳ್ಳ ಒಂದು ಸತ್ಯವೇದ ಅಧ್ಯಯನ ಅಥವಾ ಪ್ರಸಂಗಕ್ಕಾಗಿ ಬಳಸಬಹುದು. ಅದಕ್ಕಾಗಿ ಇಲ್ಲಿ ಕೆಲವು ಅಂಶಗಳು ತಿಳಿಸಲ್ಪಟ್ಟಿವೆ:

1. ಸುವಾರ್ತೆಯು ಎಲ್ಲರಿಗಾಗಿ ಇದೆ:

    1) ಇಕೋನಿಯದಲ್ಲಿ ಯೆಹೂದ್ಯರೂ ಮತ್ತು ಅನ್ಯರೂ ನಂಬಿದರು.

    2) ಇಂದು ಸುವಾರ್ತಾ ಸಂದೇಶವು ಎಲ್ಲಾ ವಿಧದ ಜನರಿಗೆ ಯುಕ್ತವಾಗಿದೆ: ಅವರ ಕೌಟುಂಬಿಕ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಹಿನ್ನಲೆ ಯಾವುದೇ ಆಗಿದ್ದರೂ ಸಹ.

2. ಯೇಸುವಿನ ಸಂದೇಶವು ಎಲ್ಲಾ ವಿಧದ ಜನರಿಗೆ ಯಾಕೆ ಶುಭ ಸಂದೇಶವಾಗಿದೆ?

    1) ನಾವೆಲ್ಲರೂ ಪಾಪಿಗಳಾಗಿದ್ದೇವೆ ಹಾಗೂ ರಕ್ಷಣೆಯ ಅಗತ್ಯತೆಯಲ್ಲಿದ್ದೇವೆ. ಯೇಸುವಿನ ಮೂಲಕ ಮಾತ್ರ ನಾವು ಈ ರಕ್ಷಣೆಯನ್ನು ಕಂಡುಕೊಳ್ಳಲು ಸಾಧ್ಯ

    2) ನಾವು ದೇವರಿಂದ ಸೃಷ್ಟಿಸಲ್ಪಟ್ಟವರಾಗಿದ್ದೇವೆ ಮತ್ತು ನಮ್ಮ ಜೀವಿತದಲ್ಲಿ ಆತನು ವಿಶೇಷವಾದ ಉದ್ಧೇಶವನ್ನು ಹೊಂದಿದ್ದಾನೆ. ಈ ಉದ್ಧೇಶವನ್ನು ನಾವು ಹೊಂದಬೇಕಾದರೆ ನಮ್ಮ ಜೀವಿತವು ಯೇಸುಕ್ರಿಸ್ತನೊಂದಿಗಿರಬೇಕು.

3. ಇಕೋನಿಯದಲ್ಲಿ ಜನರು ಸುವಾರ್ತೆಗೆ ವ್ಯತ್ಯಾಸವಾದ ರೀತಿಗಳಲ್ಲಿ ಪ್ರತಿಕ್ರಿಯಿಸಿದರು:

    1) ಅನೇಕ ಯೆಹೂದ್ಯರು ಮತ್ತು ಅನ್ಯರು ನಂಬಿದರು.

    2) ಕೆಲವು ಯೆಹೂದ್ಯರು ಸುವಾರ್ತೆಗೆ ಅವಿಧೇಯರಾದರು; ಯೇಸುವಿನ ಕುರಿತಾದಂತಹ ಸಂದೇಶವನ್ನು ಅವರು ನಂಬಲು ತಿರಸ್ಕರಿಸಿದರು. ಇದು ಅವರ ಸ್ವಂತ ಆಯ್ಕೆಯಾಗಿತ್ತು! ಮತ್ತು ತಪ್ಪಾದ ಆಯ್ಕೆಯಾಗಿತ್ತು!

    3) ಆ ಅವಿಧೇಯರಾದ ಯೆಹೂದ್ಯರು ಈಗಾಗಲೇ ವಿಶ್ವಾಸಿಗಳಾಗಿದ್ದವರ ಕೆಲವು ಅನ್ಯಜನರ ಮನಸ್ಸಿನಲ್ಲಿ ವಿಷದ ಬೀಜವನ್ನು ಬಿತ್ತಿದರು. ನಂತರ ಅವರು ಅಪೋಸ್ತಲರನ್ನು ನೋವುಂಟುಮಾಡಲು ಮತ್ತು ಅವರನ್ನು ಕೊಲ್ಲಲು ಬಯಸಿದ ಒಂದು ಗುಂಪನ್ನು ಅವರ ವಿರುದ್ಧವಾಗಿ ಸೃಷ್ಟಿಸಿದರು.

    4) ಹಾಗಾಗಿ ಇಕೋನಿಯದಲ್ಲಿ ಸುವಾರ್ತೆಗೆ ಎರಡು ರೀತಿಯಾದ ಪ್ರತಿಕ್ರಿಯೆಯನ್ನು ನಾವು ಕಾಣಬಹುದು:

        - ನಂಬಿದವರು. ಅವರು ಅಪೋಸ್ತಲರ ಕಡೆಗೆ ಇದ್ದುಕೊಂಡು ಆ ಪ್ರಾಂತ್ಯದಲ್ಲಿನ ಸೇವೆಗೆ ಪ್ರೋತ್ಸಾಹಿಸಿದರು.

        - ನಂಬಲೊಲ್ಲದವರು. ಇವರು ಸುವಾರ್ತೆಗೆ ಅವಿಧೇಯರಾದರು. ಅವರು ತೊಂದರೆಪಡಿಸುವವರ ಕಡೆಗೆ ಇದ್ದರು. ಅವರು ಅಪೋಸ್ತಲರಿಗೆ ವಿರೋಧವಾಗಿದ್ದು

ಅವರಿಗೆ ನೋವುಂಟುಮಾಡಿ ಕೊಲ್ಲಬೇಕೆಂದು ಪ್ರಯತ್ನಿಸಿದರು. ಅವರು ಆ ಪ್ರಾಂತ್ಯದಲ್ಲಿನ ಸೇವೆಯನ್ನು ನಿಲ್ಲಿಸಲು ಪ್ರಯತ್ನಿಸಿದರು. ಪ್ರಾರಂಭದಲ್ಲಿ ಅವರು ಯಶಸ್ವಿಯಾದಂತೆ ಕಂಡರು: ಅಪೋಸ್ತಲರು ಓಡಿಹೋದರು. ಆದರೆ, ನಿಶ್ಚಯವಾಗಿಯೂ, ಅವರು ಕೊನೆಯವರೆಗೆ ಯಶಸ್ವಿಯಾಗಲಿಲ್ಲ. ಸಭೆಯು ಸ್ಥಾಪಿಸಲ್ಪಟ್ಟು ಸುವಾರ್ತೆಯು ಆ ಪ್ರಾಂತ್ಯದಲ್ಲಿನ ಅನೇಕ ಸ್ಥಳಗಳಲ್ಲಿ ಸಾರಲ್ಪಟ್ಟಿತು. ದೇವರ ವಿರುದ್ಧವಾಗಿ ಕಾರ್ಯ ಮಾಡುವಂತಹದ್ದು ವ್ಯರ್ಥವಾದದ್ದು!

4. ಹಾಗಾದರೆ ನಿನ್ನ ಕುರಿತು ಏನು? ಯೇಸು ಕ್ರಿಸ್ತನ ಕುರಿತಾದ ಸಂದೇಶಕ್ಕೆ ಅಂದರೆ ಸುವಾರ್ತೆಗೆ ನಿನ್ನ ಪ್ರತಿಕ್ರಿಯೆ ಹೇಗಿದೆ?

   1) ನೀನು ಅವಿಧೇಯನಾಗಿದ್ದೀಯೋ? ಯೇಸುವಿನ ಮೇಲೆ ನಂಬಿಕೆಯಿಡುವುದರ ಮೂಲಕವಾಗಿ ಸಿಗುವ ಅದ್ಭುತವಾದ ರಕ್ಷಣೆಯ ಕೊಡುಗೆಗೆ 'ನಾ ಒಲ್ಲೆ' ಎಂದು ಹೇಳುತ್ತೀಯೋ? ಹಾಗಿದ್ದಲ್ಲಿ ನೀನು ಒಂದು ಕೆಟ್ಟ ಆಯ್ಕೆಯನ್ನು ಮಾಡಿದ್ದೀ!

   2) ನೀನು ದೇವರ ಸೇವಕರಿಗೆ ಹಾಗೂ ಸುವಾರ್ತೆಗೆ ವೈರಿಯಾಗಿದ್ದು ತೊಂದರೆಪಡಿಸುವವನಾಗಿದ್ದೀಯೋ? ನಿಮ್ಮ ಪ್ರಾಂತ್ಯದಲ್ಲಿ ನಡೆಯುವ ದೇವರ ಸೇವೆಯ ವಿರುದ್ಧವಾಗಿ ನಿಮ್ಮ ಸ್ನೇಹಿತರನ್ನೂ, ನೆರೆಹೊರೆಯವರನ್ನೂ ಮತ್ತು ಕುಟುಂಬದವರನ್ನೂ ಎತ್ತಿ ಕಟ್ಟುತ್ತೀಯೋ? ಹಾಗಿದ್ದಲ್ಲಿ ನೀನು ತುಂಬಾ ಅಪಾಯಕಾರಿಯಾದ ಆಯ್ಕೆಯನ್ನು ಮಾಡಿದ್ದೀ! ದೇವರನ್ನು ವಿರೋಧಿಸುವಂತಹದ್ದು ತುಂಬಾ ಅಪಾಯಕಾರಿಯಾದದ್ದು!

ಅಥವಾ ನೀನು ಸುವಾರ್ತೆಗೆ ವಿಧೇಯನಾಗಿದ್ದೀಯೋ? ನೀನು ಸುವಾರ್ತಾ ಸಂದೇಶಕ್ಕೆ 'ಹೌದು ನನಗೆ ಬೇಕು' ಎಂದು ಹೇಳುತ್ತೀಯೋ? ನೀನು ಯೇಸು ಕ್ರಿಸ್ತನನ್ನು ನಿನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡು ಒಬ್ಬ ವಿಶ್ವಾಸಿಯಾಗಬೇಕೋ? ಹಾಗಿದ್ದಲ್ಲಿ ನೀನು ಒಂದು ಬುದ್ಧಿವಂತಿಕೆಯ ನಿರ್ಧಾರವನ್ನು ಮಾಡಿದ್ದೀ! ಮತ್ತು ದೇವರು ನಿನ್ನನ್ನು ಈ ಲೋಕದಲ್ಲಿಯೂ ಮತ್ತು ನಿತ್ಯತ್ವದಲ್ಲಿಯೂ ಖಂಡಿತವಾಗಿ ಆಶೀರ್ವದಿಸುವನು!

# ಪಾಠ 36. ಲುಸ್ತ್ರ ಮತ್ತು ದೆರ್ಬೆಯಲ್ಲಿ, 14:8:21

## ಅ) ವಾಕ್ಯಭಾಗ

ಲುಸ್ತ್ರದಲ್ಲಿ ಪೌಲನು ಹುಟ್ಟು ಕುಂಟನಾಗಿದ್ದ ಒಬ್ಬ ಮನುಷ್ಯನನ್ನು ಗುಣಪಡಿಸಿದನು. ಈ ಅದ್ಭುತವನ್ನು ಜನರು ಕಂಡಾಗ, ತಮ್ಮ 'ಜ಼ೂಸ್' ಮತ್ತು 'ಹರ್ಮಿಸ್' ದೇವರುಗಳು ಮನುಷ್ಯರ ರೂಪದಲ್ಲಿ ಬಾರ್ನಬ ಮತ್ತು ಪೌಲರ ಮೂಲಕ ತಮ್ಮ ಬಳಿಗೆ ಬಂದವೆಂದು ಅಂದುಕೊಂಡರು. ಹಾಗಾಗಿ ಸ್ಥಳೀಯ ಅರ್ಚಕನು ಅವರಿಗಾಗಿ ಬಲಿಯನ್ನು ಅರ್ಪಿಸಲು ಸಿದ್ಧಮಾಡತೊಡಗಿದನು. ಆದರೆ ಅಲ್ಲಿ ನಡೆಯುತ್ತಿರುವುದನ್ನು ಅರಿತಂತಹ ಅಪೋಸ್ತಲರು ಬಹಳ ಬೇಸರಗೊಂಡರು. ಪೌಲನು ಜನರನ್ನು ಉದ್ಧೇಶಿಸಿ ಪ್ರಸಂಗಿಸಿದನು ಮತ್ತು ಕೊನೆಯಲ್ಲಿ ಬಲಿಕೊಡುವುದನ್ನು ನಿಲ್ಲಿಸುವುದರಲ್ಲಿ ಯಶಸ್ವಿಯಾದನು. ನಂತರ ಪಿಸಿದಿಯದ ಅಂತಿಯೋಕ್ಯದಿಂದ ಮತ್ತು ಇಕೋನಿಯದಿಂದ 'ನಂಬಿಕೆಯಿಲ್ಲದ' ಯೆಹೂದ್ಯರು ಬಂದು ಜನರು ಪೌಲನ ಮೇಲೆ ಕಲ್ಲೆಸೆಯುವಂತೆ ಮನವೊಲಿಸಿದರು. ಪೌಲನ ಮೇಲೆ ಕಲ್ಲೆಸೆದು ಅವನು ಸತ್ತನೆಂದು ಭಾವಿಸಿ ಅವನನ್ನು ಊರ ಹೊರಗೆ ಎಳೆದು ಹಾಕಿದರು. ವಿಶ್ವಾಸಿಗಳು ಅವನನ್ನು ನೋಡಲು ಬಂದಾಗ ಅವನು ಎದ್ದು ಲುಸ್ತ್ರಕ್ಕೆ ಹಿಂದಿರುಗಿ ಹೋದನು. ಮರುದಿವಸ ಅಪೋಸ್ತಲರು ಲುಸ್ತ್ರವನ್ನು ಬಿಟ್ಟು ದೆರ್ಬೆಗೆ ಹೊರಟು ಹೋದರು (100 ಕಿ.ಮೀ.ರಷ್ಟು ಪ್ರಯಾಣಿಸಿದರು), ಅಲ್ಲಿ ಅವರು ಸುವಾರ್ತೆಯನ್ನು ಸಾರಿದರು ಮತ್ತು ಅನೇಕರು ಕ್ರಿಸ್ತನನ್ನು ಅಂಗೀಕರಿಸಿಕೊಂಡರು.

## ಆ) ಟಿಪ್ಪಣಿ

*ಜೆಯುಸ್... ಹೆರ್ಮೆಸ್* (ವ. 12): ಇವುಗಳು ಗ್ರೀಕರ ಅದ್ವೈತವಾದದಲ್ಲಿನ ಎರಡು ಚಿರಪರಿಚಿತ ದೇವರುಗಳಾಗಿದ್ದಾರೆ. ಆಕಾಶ ಮತ್ತು ಪರಿಸರಗಳ ದೇವರಾದ ಜೆಯುಸ್‌ನು/ಜ಼ೂಸ್‌ನು ಎಲ್ಲವನ್ನು ಕಾಯುವ ಮತ್ತು ಆಳುವ ದೇವರಾಗಿದ್ದನು. ಪ್ರಯಾಣಿಕರ, ವ್ಯಾಪಾರಸ್ತರ ಮತ್ತು ಸಂದೇಶ ರವಾನಿಸುವವರ ಆಶ್ರಯದಾತನಾದ ಹೆರ್ಮೆಸ್‌ನು/ಹರ್ಮಿಸ್‌ನು ಈತನ ಮಗನಾಗಿದ್ದು ವಾಕ್ಚಾತುರ್ಯತೆಯ ದೇವರಾಗಿದ್ದನು. ಲುಸ್ತ್ರದ ಜನರು ಅಪೋಸ್ತಲರನ್ನು ಆರಾಧಿಸಲು ಉತ್ಸುಕರಾಗಿದ್ದಕ್ಕೆ ಒಂದು ಕಾರಣವಿದೆ, ಅದೇನೆಂದರೆ, ಒಮ್ಮೆ ಜ಼ೂಸ್ ಮತ್ತು ಹರ್ಮಿಸರು ನರಮಾನವರ ವೇಷ ಧರಿಸಿಕೊಂಡು ಆ ಪ್ರಾಂತ್ಯದ ಜನರನ್ನು ಸಂಧಿಸಲು ಬಂದಿದ್ದರೆಂದು ಒಂದು ಪ್ರಖ್ಯಾತಿಯಾದ ದಂತಕಥೆಯಿತ್ತು. ಅವರು ಒಂದು ಸಾವಿರ ಮನೆಗಳನ್ನು ಸಂಧಿಸಿದರೂ ಯಾರೂ ಅವರನ್ನು ಗುರುತಿಸಲಿಲ್ಲ ಮತ್ತು ಮನೆಯೊಳಗೆ ಆಹ್ವಾನಿಸಲಿಲ್ಲ. ಆದರೆ ಒಂದು ಬಡ ವೃದ್ಧ ದಂಪತಿಗಳು ತಮ್ಮ ಮನೆಯೊಳಗೆ ಅವರನ್ನು ಆಹ್ವಾನಿಸಿ ಊಟ ಕೊಟ್ಟರು. ಹಾಗಾಗಿ ಈ ದೇವರುಗಳು ವೃದ್ಧ ದಂಪತಿಗಳಿಗೆ ಪ್ರತಿಫಲ ಕೊಟ್ಟು ಉಳಿದ ಎಲ್ಲಾ ಮನೆಗಳನ್ನು ಪ್ರವಾಹದಿಂದ ನಾಶಮಾಡಿದವು.

*ತಮ್ಮ ಬಟ್ಟೆಗಳನ್ನು ಹರಿದುಕೊಂಡರು* (ವ. 14): ಇದು ತಾನು ನಿಜವಾಗಲೂ ಬೇಸರಗೊಂಡಿದ್ದೇನೆ ಎಂದು ವ್ಯಕ್ತಪಡಿಸುವ ಒಂದು ಯೆಹೂದ್ಯ ಪದ್ಧತಿಯಾಗಿತ್ತು.

*ವ್ಯರ್ಥವಾದ ಸಂಗತಿಗಳನ್ನು* (ವ. 15): ಹಳೆ ಒಡಂಬಡಿಕೆಯಲ್ಲಿ 'ವ್ಯರ್ಥವಾದ' ಎಂಬ ಪದವು ಅನ್ಯದೇಶದ ದೇವರುಗಳನ್ನು ಸೂಚಿಸಲು ಆಗಾಗ್ಗೆ ಉಪಯೋಗಿಸಲ್ಪಟ್ಟಿದೆ.

*ಪೌಲನ ಮೇಲೆ ಕಲ್ಲೆಸೆಯಲು* (ವ. 19): 2 ಕೊರಿ. 11:25 ರಲ್ಲಿನ ತನ್ನ ಸಾಕ್ಷಿಯಲ್ಲಿ ಪೌಲನು ಬಹುಶಃ ಈ ಘಟನೆಯನ್ನು ಸೂಚಿಸುತ್ತಿದ್ದಾನೆ.

## ಇ) ಪಠ್ಯ ಪ್ರಶ್ನೆಗಳು

1. ನಕ್ಷೆಯಲ್ಲಿ ಈ ಸ್ಥಳಗಳನ್ನು ಗುರುತಿಸಿರಿ: ಲುಸ್ತ್ರ ಮತ್ತು ದೆರ್ಬೆ!
2. ಲುಸ್ತ್ರದ ಜನರು ಕೂಗಿದ ಮಾತುಗಳು ಅಪೋಸ್ತಲರಿಗೆ ಯಾಕೆ ಅರ್ಥವಾಗಲಿಲ್ಲ?
3. ಲುಸ್ತ್ರದ ಜನರು ಕೇಳಿದ ಸಂದೇಶದ ಒಂದು ಭಾಗದ ಸಾರಾಂಶವನ್ನು ನಾವು ಯಾವ ವಾಕ್ಯಭಾಗದಲ್ಲಿ ಕಾಣುತ್ತೇವೆ?
4. ದೆರ್ಬೆಯಲ್ಲಿ ಏನು ಸಂಭವಿಸಿತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಲುಸ್ತ್ರದಲ್ಲಿ ಪೌಲನು ಒಬ್ಬ ಹುಟ್ಟು ಕುಂಟನನ್ನು ವಾಸಿಮಾಡಿದನು. ಈ ಅದ್ಭುತವು ದೂರದ ಘಟನೆಯಾಗಿದೆ – ಅಂದರೆ, ಇದು ಸುವಾರ್ತೆಯನ್ನು ಸಾರುವುದರೊಂದಿಗೆ ನೇರವಾಗಿ ಸಂಬಂಧಿತವಾಗಿಲ್ಲ. ಈ ಹೇಳಿಕೆಯು ಸರಿಯಾದುದ್ದೋ?
2. ಲುಸ್ತ್ರದ ಜನರು ಬಾರ್ನಬನು ಜ್ಯೂಸನೆಂದೂ ಮತ್ತು ಪೌಲನು ಹರ್ಮಿಸನೆಂದೂ ಯಾಕೆ ಭಾವಿಸಿದರೆಂದು ನೀವು ಆಲೋಚಿಸುತ್ತೀರಿ? ಅವರು ಬಾರ್ನಬನು ಹರ್ಮಿಸನೆಂದೂ ಪೌಲನು ಜ್ಯೂಸನೆಂದೂ ಯಾಕೆ ಭಾವಿಸಲಿಲ್ಲ?
3. ವ. 15–17 ರಲ್ಲಿರುವ ಪೌಲನ ಪ್ರಸಂಗದ ಒಂದು ಭಾಗದ ಸಾರಾಂಶವು ಯಾಕೆ ನಮಗೆ ಅತೀ ಕುತೂಹಲಕಾರಿಯಾಗಿದೆ – ಮತ್ತು ಪ್ರಾಮುಖ್ಯವಾದುದ್ದಾಗಿದೆ?
4. ಪೌಲ ಮತ್ತು ಬಾರ್ನಬರು ಪಿಸಿದಿಯದ ಅಂತಿಯೋಕ್ಯದಲ್ಲಿ, ಇಕೋನಿಯದಲ್ಲಿ ಮತ್ತು ಲುಸ್ತ್ರದಲ್ಲಿ ಹಿಂಸೆ ಮತ್ತು ಕಷ್ಟಗಳನ್ನು ಅನುಭವಿಸಿದರು, 13:50; 14:2 ಮತ್ತು 14:19 ನ್ನು ನೋಡಿರಿ. ಈ ಮೂರು ಸನ್ನಿವೇಶಗಳಲ್ಲಿರುವ ಸಾಮಾನ್ಯ ಅಂಶವೇನು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. 'ದೇವರ ಸೇವಕರು' ಹಳ್ಳಿ ಜನರಿಂದ 'ಆರಾಧಿಸಲ್ಪಟ್ಟದ್ದನ್ನು' ನೀವು ಎಂದಾದರೂ ಕಂಡಿದ್ದೀರಾ ಅಥವಾ ಅನುಭವಿಸಿದ್ದೀರಾ? ನಿಮ್ಮ ಗುಂಪಿನಲ್ಲಿರುವ ಇತರರಿಗೆ ಏನು ಸಂಭವಿಸಿತೆಂಬುದನ್ನು

ತಿಳಿಸಿರಿ? ಈ ರೀತಿಯ ರೂಢಿಯ ಕುರಿತು ನೀವು ಏನನ್ನು ಆಲೋಚಿಸುತ್ತೀರಿ? ನಮ್ಮ ಸೇವೆಯಲ್ಲಿ ಅದ್ಭುತ ಮತ್ತು ಸೂಚಕ ಕಾರ್ಯಗಳು ಸಂಭವಿಸುವಾಗ ಅದಕ್ಕೆ ಮಹಿಮೆಯನ್ನು ನಾವು ತೆಗೆದುಕೊಳ್ಳದೆ ದೇವರಿಗೆ ಅದನ್ನು ಸಲ್ಲಿಸುವಂತೆ ನಾವು ಏನು ಮಾಡಬಹುದು?

2. ಪಿಸಿದ್ಯದ ಅಂತಿಯೋಕ್ಯ, ಇಕೋನಿಯ ಮತ್ತು ಲುಸ್ತ್ರದಲ್ಲಿ ಅಪೋಸ್ತಲರು ಎದುರಿಸಿದ ತೊಂದರೆಗಳ ಹಿಂದೆ ಇತರೆ ಜನರು ತಮ್ಮ ಪರವಾಗಿ ಕೆಟ್ಟ ಕೆಲಸವನ್ನು ಮಾಡುವಂತೆ ಪ್ರೇರಣೆಮಾಡಿದ ಜನರಿದ್ದರು. ಇಂದು ದಕ್ಷಿಣ ಭಾರತದಲ್ಲಿ ನಡೆಯುವ ಹಿಂಸೆಯ ಹಿಂದೆ ಈ ರೀತಿಯ ಪ್ರೇರಕರು ಇರುವುದನ್ನು ನೀವು ಕಾಣುತ್ತೀರೋ? ವಿವರಿಸಿರಿ! ಇಂತಹ ಪ್ರೇರಕರೊಂದಿಗೆ ಹೇಗೆ ವ್ಯವಹರಿಸುತ್ತೀರಿ?

## ಊ) ಉಪದೇಶಿಸು ಮತ್ತು ಬೋಧಿಸು!

ಪಿಸಿದ್ಯದ ಅಂತಿಯೋಕ್ಯದಲ್ಲಿ ಪೌಲನು ಸಾರಿದ ಸಂದೇಶಕ್ಕಿಂತಲೂ ಈ ವಾಕ್ಯಭಾಗದಲ್ಲಿರುವ ಲುಸ್ತ್ರದಲ್ಲಿನ ಸಂದೇಶವು ಬಹಳ ವ್ಯತ್ಯಾಸಕರವಾಗಿದ್ದಿರಬಹುದು. ಲುಸ್ತ್ರದಲ್ಲಿ ಆತನು ಹಳೆ ಒಡಂಬಡಿಕೆಯ ಯಾವ ವಾಕ್ಯ ಭಾಗವನ್ನೂ ಉಲ್ಲೇಖಿಸಲಿಲ್ಲ ಮತ್ತು ಇಸ್ರಾಯೇಲರ ಇತಿಹಾಸದ ಕುರಿತೂ ಏನೂ ಹೇಳಲಿಲ್ಲ. ಪಿಸಿದ್ಯದ ಅಂತಿಯೋಕ್ಯದಲ್ಲಿ ತನ್ನ ಶ್ರೋತೃಗಳ ಗಮನ ಸೆಳೆಯಲು ಇಸ್ರಾಯೇಲ್ ಜನರ ಇತಿಹಾಸದ ಕುರಿತು ಒಂದು ಸಾರಾಂಶವನ್ನು ತಿಳಿಸಿದನು ಮತ್ತು ಯೇಸು ಕ್ರಿಸ್ತನ ಕುರಿತಾದಂತಹ ತನ್ನ ಭೋಧನೆಯನ್ನು ಬಲಪಡಿಸುವುದಕ್ಕಾಗಿ ಹಳೆ ಒಡಂಬಡಿಕೆಯಲ್ಲಿರುವ ಮೆಸ್ಸೀಯನ ಕುರಿತಾದ ಉಲ್ಲೇಖನಗಳನ್ನು ಮಾಡಿದನು.

ಲುಸ್ತ್ರದಲ್ಲಿ ಪೌಲನು ತನ್ನ ಶ್ರೋತೃಗಳ ಗಮನ ಸೆಳೆಯಲು ಅವರು ಕಂಡು ತಿಳಿದ ಅವರ ಸುತ್ತಲಿರುವ ಸ್ವಾಭಾವಿಕ ಪ್ರಪಂಚದ ಕುರಿತು ಮಾತನಾಡುತ್ತಾನೆ. ಅವರು ವ್ಯರ್ಥವಾದ ವಿಗ್ರಹಗಳನ್ನು ಬಿಟ್ಟು ಜೀವಸ್ವರೂಪನಾದ ಸತ್ಯದೇವರ ಕಡೆಗೆ ತಿರುಗಿಕೊಳ್ಳುವಂತೆ ಆತನು ಅವರಲ್ಲಿ ಬೇಡಿಕೊಂಡನು. ಈ ಜೀವಸ್ವರೂಪನಾದ ದೇವರು ಭೂಮಿ, ಆಕಾಶ ಮತ್ತು ಸಮುದ್ರವನ್ನು ಹಾಗೂ ಅದರಲ್ಲಿರುವ ಸಮಸ್ತವನ್ನು ಉಂಟುಮಾಡಿದವನೆಂದು ಆತನು ಹೇಳಿದನು. ಆತನು ಹಿಂದಿನ ಕಾಲದಲ್ಲಿ 'ಆಯಾ ಜನಾಂಗಗಳು ತಮ್ಮ ತಮ್ಮ ಮಾರ್ಗಗಳಲ್ಲಿಯೇ ನಡೆಯುವಂತೆ ಬಿಟ್ಟುಬಿಟ್ಟನು' (16), ಆದರೂ ಆತನು 'ತನ್ನ ಬಗ್ಗೆ ಸಾಕ್ಷಿಕೊಡದೆ ಇರಲಿಲ್ಲ' (ವ. 17). 'ಆಕಾಶದಿಂದ ಮಳೆಯನ್ನು' 'ಸಕಾಲದಲ್ಲಿ ಬೆಳೆಯನ್ನು' ದಯಾಪಾಲಿಸಿ 'ಆಹಾರ ಕೊಟ್ಟು' ಜನರ ಹೃದಯಗಳನ್ನು 'ಆನಂದದಿಂದ ತುಂಬಿಸಿ' ತನ್ನ 'ಕರುಣೆಯ' ಕುರಿತು ಆತನು ಎಂದೆಂದಿಗೂ ಸಾಕ್ಷಿ ನೀಡಿದ್ದಾನೆ.

ಹಾಗಾಗಿ ಪೌಲನು ಜನರಿಗೆ ಸಂದೇಶವನ್ನು ಸಾರುವಾಗ ಜನರಿಗೆ ತಕ್ಕಂತೆ ಅದನ್ನು ಸಾರಿದನು. ಆದರೆ ಖಂಡಿತವಾಗಲೂ ಆತನ ಪ್ರಸಂಗಗಳಲ್ಲಿ ಒಂದು ವಿಷಯವು ಎಂದಿಗೂ ಬದಲಾಗಲಿಲ್ಲ. ಆತನು ಯಾವಾಗಲೂ ಯೇಸು ಕ್ರಿಸ್ತನ ಕುರಿತಾದ ಶುಭಸಂದೇಶವನ್ನು ತಿಳಿಸುತ್ತಿದ್ದನು. ಅಪೋಸ್ತಲರ ಕೃತ್ಯಗಳಲ್ಲಿ ಲೂಕನು ಇದರ ಕುರಿತು ವ್ಯತ್ಯಾಸವಾದ ಹೇಳಿಕೆಗಳನ್ನು ಉಪಯೋಗಿಸುತ್ತಾನೆ: 'ದೇವರ

ವಾಕ್ಯ', 'ರಕ್ಷಣೆಯ ಸಂದೇಶ', 'ಆತನ ಕೃಪೆಯ ಸಂದೇಶ' ಮತ್ತು 'ಶುಭವಾರ್ತೆ' (ಅಥವಾ ಸುವಾರ್ತೆ).

***ಮನೆ ಕೆಲಸ:*** ಸತ್ಯವೇದ ಅಥವಾ ಯೇಸುವಿನ ಕುರಿತು ಯಾವುದೇ ರೀತಿಯ ಅರಿವಿಲ್ಲದ ದಕ್ಷಿಣ ಭಾರತದಲ್ಲಿನ ಅನಕ್ಷರಸ್ಥ ಹಳ್ಳಿ ಜನರಿಗಾಗಿ ಒಂದು ***ಸುವಾರ್ತಾ ಸಂದೇಶವನ್ನು*** ಸಿದ್ಧಪಡಿಸಿರಿ! ನಿಮ್ಮ ಸೇವೆಯಲ್ಲಿ ಈ ಸಂದೇಶವನ್ನು ಉಪಯೋಗಿಸಿಕೊಳ್ಳಿರಿ!

ನಿಮ್ಮ ಹೊರರೇಖೆಯು ಹೀಗಿರಬಹುದು:

1. ಜನರು ಅರ್ಥಮಾಡಿಕೊಳ್ಳಲಾಗುವ ಮತ್ತು ಸಂಬಂಧಿಸಿಕೊಳ್ಳಲಾಗುವ ವಿಷಯದೊಂದಿಗೆ ಪ್ರಾರಂಭಿಸಿರಿ, ಉದಾಹರಣೆಗೆ (ಈ ಕೆಳಗಿನ ಅಂಶಗಳಲ್ಲಿ ಯಾವುದಾದರೂ ಒಂದನ್ನು ಉಪಯೋಗಿಸಿಕೊಳ್ಳಿರಿ!)

    - ದೇವರು ಸೃಷ್ಟಿಕರ್ತನು ಮತ್ತು ಒದಗಿಸುವವನು, ಅಥವಾ
    - ದೇವರು ಪರಾಕ್ರಮಿ, ಆತನು ನಮ್ಮ ಜೀವಿತಗಳನ್ನು ಒಳಗೊಂಡು ಎಲ್ಲವನ್ನೂ ನಿಯಂತ್ರಿಸುವವನು, ಅಥವಾ
    - ಮನುಷ್ಯನು ಸಂತೃಪ್ತಿಗಾಗಿ, ಗುಣಕ್ಕಾಗಿ, ಬಿಡುಗಡೆಗಾಗಿ, ಶಾಂತಿಗಾಗಿ, ಜೀವಿತದ ಉದ್ದೇಶಕ್ಕಾಗಿ ಹಂಬಲವುಳ್ಳವನಾಗಿದ್ದಾನೆ.

2. ನಂತರ ಯೇಸು ಕ್ರಿಸ್ತನ ಕುರಿತಾದ ಶುಭವಾರ್ತೆಯನ್ನು ಸ್ಪಷ್ಟವಾದ ಮತ್ತು ಅರ್ಥಮಾಡಿಕೊಳ್ಳಲಾಗುವ ರೀತಿಯಲ್ಲಿ ವಿವರಿಸಿರಿ: ಆತನು ಯಾರು, ಆತನ ಮರಣ ಮತ್ತು ಪುನರುತ್ಥಾನ, ಆತನ ಶ್ರೇಷ್ಟತೆ, ಇತ್ಯಾದಿಗಳ ಕುರಿತು ವಿವರಿಸಿರಿ.

3. ಅಂತಿಮವಾಗಿ ಸಂದೇಶ ಕೇಳಿಸಿಕೊಂಡವರು ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸುವಂತೆ ಆಹ್ವಾನಿಸಿರಿ.

# ಪಾಠ 37. ಸಿರಿಯದ ಅಂತಿಯೋಕ್ಯಕ್ಕೆ ಮರುಪ್ರಯಾಣ, 14:21–28

## ಅ) ವಾಕ್ಯಭಾಗ

ದೆರ್ಬೆಯು ಪೌಲ ಮತ್ತು ಬಾರ್ನಬರ ಮೊದಲ ಸೇವಾ ಪ್ರಯಾಣದ ಕೊನೆಯ ಸ್ಥಳವಾಗಿತ್ತು, ಆದರೆ ಇದು ಪ್ರಯಾಣದ ಕೊನೆಯಾಗಿರಲಿಲ್ಲ. ಅವರು ಹಿಂತಿರುಗುವಾಗ ಲುಕವೋನಿಯ ಮತ್ತು ಪಿಸಿದ್ಯದ ಪ್ರಾಂತ್ಯಗಳಾದ ಲುಸ್ತ್ರ, ಇಕೋನಿಯ ಮತ್ತು ಪಿಸಿದ್ಯದ ಅಂತಿಯೋಕ್ಯಗಳಲ್ಲಿ ತಾವು ಸ್ಥಾಪಿಸಿದಂತಹ ಸಭೆಗಳಿಗೆ ಪುನಃ ಭೇಟಿಕೊಟ್ಟರು. ಅವರು ಪ್ರತಿಯೊಂದು ಸಭೆಗಳಲ್ಲಿ ಹಿರಿಯರನ್ನು ನೇಮಿಸಿದರು ಮತ್ತು ವಿಶ್ವಾಸಿಗಳನ್ನು ಬಲಪಡಿಸಿ ಪ್ರೋತ್ಸಾಹಿಸಿದರು. ಅವರು ಸಿರಿಯಾಕ್ಕೆ ಹಿಂತಿರುಗಲು ಹಡಗನ್ನು ಹತ್ತುವುದಕ್ಕಿಂತ ಮುಂಚೆ ಪುನಃ ಟಾರಸ್ ಪರ್ವತಗಳನ್ನು ದಾಟಿ ಪಂಫಿಲ್ಯದಲ್ಲಿನ ಪೆರ್ಗೆಯಲ್ಲಿ ಸುವಾರ್ತೆಯನ್ನು ಸಾರಿದರು. ಅವರು ಎರಡು ವರ್ಷಗಳ ಕಾಲ ಪ್ರಯಾಣದಲ್ಲಿದ್ದಾಗ ಏನೇನು ಸಂಭವಿಸಿದ್ದವೋ ಅವುಗಳ ವರದಿಯನ್ನು ಅಂತಿಯೋಕ್ಯದಲ್ಲಿದ್ದ ತಮ್ಮ ಸ್ವಂತ ಸಭೆಗೆ ಸಲ್ಲಿಸಿದರು.

## ಆ) ಟಿಪ್ಪಣಿ

*ದೇವರ ರಾಜ್ಯದಲ್ಲಿ ಪ್ರವೇಶಿಸಲು ನಾವು ಅನೇಕ ಸಂಕಟಗಳನ್ನು ಅನುಭವಿಸಬೇಕು* (ವ. 22): ಪೌಲನ ಮೊದಲ ಸೇವಾ ಪ್ರಯಾಣವು ಅನೇಕ ವಿಧವಾದ ಕಷ್ಟಗಳಿಂದ ಕೂಡಿತ್ತು. ಅನೇಕ ವರ್ಷಗಳ ನಂತರ ತಿಮೋಥಿಗೆ ಆತನು ಈ ರೀತಿಯಾಗಿ ಬರೆಯುತ್ತಾನೆ: 'ನಿಜವಾಗಿಯೂ ಕ್ರಿಸ್ತ ಯೇಸುವಿನಲ್ಲಿ ಭಕ್ತಿಯುಳ್ಳವರಾಗಿ ಜೀವಿಸುವುದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು' (2 ತಿಮೋ. 3:12)

*ಪೆರ್ಗೆ* (ವ. 25): ಇದು ಪಂಫಿಲ್ಯದ ರಾಜಧಾನಿಯಾಗಿತ್ತು. ಅಪೋಸ್ತಲರು ಮುಂಚೆ ಪೆರ್ಗೆಯಲ್ಲಿದ್ದರು, ಆದರೆ ಆ ಸಮಯದಲ್ಲಿ ಅದನ್ನು ಕೇವಲ ದಾಟಿ ಹೋಗಿದ್ದರು. ಈ ಬಾರಿ ಅವರು ಅಲ್ಲಿ ತಂಗಿದ್ದು ಸೇವೆಯನ್ನು ಮಾಡಿದರು.

*ದೇವರು ತಮ್ಮ ಮುಖಾಂತರವಾಗಿ ಮಾಡಿದ್ದನ್ನೂ* (ವ. 27): ಗ್ರೀಕ್ ಪಠ್ಯವು ('ಮುಖಾಂತರವಾಗಿ' ಎಂಬುದರ ಬದಲಾಗಿ) 'ಅವರ ಜೊತೆಯಲ್ಲಿ/ಅವರೊಂದಿಗೆ' ಎಂಬುದನ್ನು ಹೊಂದಿದೆ.

*ಆತನು ಅನ್ಯ ಜನರಿಗೂ ವಿಶ್ವಾಸದ ದ್ವಾರವನ್ನು ತೆರೆದಿರುವುದನ್ನು* (ವ. 27): ಇದರ ಅರ್ಥವೇನೆಂದರೆ, ದೇವರು ಅನ್ಯಜನರನ್ನೂ ಸಹ ನಂಬಿಕೆಯಲ್ಲಿ ತಂದನೆಂದು. ಪೌಲನ ಮೊದಲ ಸೇವಾ ಪ್ರಯಾಣದ ಐತಿಹಾಸಿಕ ಮಹತ್ವವೇನೆಂದರೆ ಅನ್ಯಜನರು ಸುವಾರ್ತೆಯನ್ನು ಮೊಟ್ಟಮೊದಲ ಬಾರಿಗೆ ಕ್ರಮಬದ್ಧವಾದ ರೀತಿಯಲ್ಲಿ ಕೇಳಿದರು. ಜನರು ಅತೀ ದೊಡ್ಡ ಸಂಖ್ಯೆಯಲ್ಲಿ ನಂಬಿಕೆಯಿಟ್ಟರು. ಇದು ಒಂದು ಹೊಸ ಸಂಗತಿಯಾಗಿತ್ತು ಮತ್ತು ಇದು ಆಧಿಸಭೆಯಲ್ಲಿ

ಕ್ರಾಂತಿಯನ್ನು ತಂದಿತು! ನಾವು 15 ನೇ ಅಧ್ಯಾಯದಲ್ಲಿ ನೋಡಲಿಕ್ಕಿರುವಂತೆ ಇದು ಆದಿಸಭೆಯಲ್ಲಿ ಸಮಸ್ಯೆಗೂ ಸಹ ಕಾರಣವಾಯಿತು.

*ಬಹುಕಾಲ* (ವ. 28): ಪೌಲ ಮತ್ತು ಬಾರ್ನಬರು ಅಂತಿಯೋಕ್ಯದಲ್ಲಿ ಒಂದು ವರ್ಷಕ್ಕಿಂತ ಹೆಚ್ಚು ಕಾಲ ತಂಗಿದ್ದರು.

## ಇ) ಪಠ್ಯ ಪ್ರಶ್ನೆಗಳು

1. ನಕ್ಷೆಯಲ್ಲಿ ಈ ಸ್ಥಳಗಳನ್ನು ಗುರುತಿಸಿರಿ: ದೆರ್ಬೆ, ಲುಸ್ತ್ರ, ಇಕೋನಿಯ, ಪಿಸಿದ್ಯದ ಅಂತಿಯೋಕ್ಯ, ಪೆರ್ಗೆ, ಅತ್ತಾಲಿಯ ಮತ್ತು ಸಿರಿಯಾದ ಅಂತಿಯೋಕ್ಯ!
2. ಅಪೋಸ್ತಲರು ಹಿಂತಿರುಗಿ ಬರುವಾಗ ಲುಸ್ತ್ರ, ಇಕೋನಿಯ ಮತ್ತು ಪಿಸಿದ್ಯದ ಅಂತಿಯೋಕ್ಯದಲ್ಲಿ ಮಾಡಿದ ಸಂಗತಿಗಳ ಕುರಿತು ಒಂದು ಪಟ್ಟಿಯನ್ನು ಮಾಡಿರಿ!
3. ಅಪೋಸ್ತಲರು ಸಿರಿಯಾದ ಅಂತಿಯೋಕ್ಯದಲ್ಲಿದ್ದ ತಮ್ಮ 'ತಾಯಿ ಸಭೆಗೆ' ಹಿಂತಿರುಗಿದಾಗ ಮಾಡಿದ ಸಂಗತಿಗಳ ಕುರಿತು ಒಂದು ಪಟ್ಟಿಯನ್ನು ಮಾಡಿರಿ!
4. 'ಹೆಚ್ಚಿನ ವಾಸ್ತವಾಂಶಗಳು' ಎಂಬ ಭಾಗದಲ್ಲಿರುವ 'ಅಪೋಸ್ತಲರ ಕೃತ್ಯಗಳ ಕಾಲಾನುಕ್ರಮಣಿಕೆ'ಯನ್ನು ನೋಡಿರಿ: ಯಾವ ವರ್ಷಗಳಲ್ಲಿ ಪೌಲನ ಮೊದಲ ಸೇವಾ ಪ್ರಯಾಣವು ಕೈಗೊಳ್ಳಲ್ಪಟ್ಟಿತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅಪೋಸ್ತಲರು ಹೊಸ ವಿಶ್ವಾಸಿಗಳನ್ನು ಬಲಪಡಿಸಿ ಪ್ರೋತ್ಸಾಹಿಸಿದ್ದನ್ನು ಲೂಕನು ಈ ಕೆಳಗಿನ ವಚನದಲ್ಲಿ ಸಾರಾಂಶಗೊಳಿಸುತ್ತಾನೆ: 'ದೇವರ ರಾಜ್ಯದಲ್ಲಿ ಪ್ರವೇಶಿಸಲು ನಾವು ಅನೇಕ ಸಂಕಟಗಳನ್ನು ಅನುಭವಿಸಬೇಕು' (ವ. 22). ನೀವು ಈ ರೀತಿಯಾದ ಪ್ರೋತ್ಸಾಹಿಸುವಿಕೆ ಮತ್ತು ಬಲಗೊಳಿಸುವಿಕೆಯನ್ನು ಒಪ್ಪಿಕೊಳ್ಳುತ್ತೀರೋ? ಯಾಕೆ – ಯಾಕೆ ಇಲ್ಲ? ಚರ್ಚಿಸಿರಿ ಮತ್ತು ವಾದದಲ್ಲಿನ ಉತ್ತಮ ಪರ ಮತ್ತು ವಿರೋಧದ ಅಂಶಗಳನ್ನು ಬರೆಯಿರಿ!
2. 'ದೇವರ ರಾಜ್ಯದಲ್ಲಿ ಪ್ರವೇಶಿಸಲು ನಾವು ಅನೇಕ ಸಂಕಟಗಳನ್ನು ಅನುಭವಿಸಬೇಕು' ಎಂಬ ಈ ಹೇಳಿಕೆಯನ್ನು ನೀವು ಹೇಗೆ ವಿವರಿಸುತ್ತೀರಿ? ಯೇಸು ಕ್ರಿಸ್ತನನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡಾಗ ನಾವು ದೇವರ ರಾಜ್ಯವನ್ನು ಪ್ರವೇಶಿಸುವುದಿಲ್ಲವೋ (ಯೋಹಾನ. 3:5 ನ್ನು ನೋಡಿರಿ)?
3. ಅಪೋಸ್ತಲರು ಪ್ರತಿಯೊಂದು ಸಭೆಗಳಲ್ಲಿ ಹಿರಿಯರನ್ನು ನೇಮಿಸಿದರು (ವ. 23). ಅವರು ಯಾಕೆ ಸಭಾಪಾಲಕರುಗಳನ್ನು ನೇಮಿಸಲಿಲ್ಲ? ಅಪೋಸ್ತಲರು ಈ ಸಭೆಗಳನ್ನು ಬಿಟ್ಟುಹೋದ ಮೇಲೆ ಯಾರು ಬೋಧಿಸಿದರು ಮತ್ತು ಪ್ರಸಂಗಿಸಿದರು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಈ) 1 ರಲ್ಲಿರುವ ನಿಮ್ಮ ಅಂಶಗಳನ್ನು ಪುನಃ ನೋಡಿರಿ! ಹೊಸ ವಿಶ್ವಾಸಿಗಳನ್ನು ನಿಮ್ಮ ಸಭಾಪಾಲಕರು (ಮತ್ತು ಸ್ವತಃ ನೀವು) ಹೇಗೆ 'ಪ್ರೋತ್ಸಾಹಿಸಿ ಬಲಪಡಿಸುತ್ತೀರಿ'? ಪೌಲ ಮತ್ತು ಬಾರ್ನಬರ ಸಭಾ ಸೇವೆಯ ಕ್ಷೇತ್ರದಿಂದ ನೀವು ಏನನ್ನು ಕಲಿಯುತ್ತೀರಿ?

2. ಒಂದು ಹೊಸ ಸಭೆಯನ್ನು ಸ್ಥಾಪಿಸುವುದು:

   1) ಒಂದು ಹೊಸ ಸಭೆಯನ್ನು ಸ್ಥಾಪಿಸಲು ಎಷ್ಟು ಸಮಯ ಬೇಕಾಗುತ್ತದೆ? ಪೌಲ ಮತ್ತು ಬಾರ್ನಬರು ತಮ್ಮ ಸೇವಾ ಪ್ರಯಾಣಗಳ ಅವಧಿಯಲ್ಲಿ ಮಾಡಿದ ಸುವಾರ್ತಾ ಸೇವೆಯನ್ನು ದಕ್ಷಿಣ ಭಾರತದಲ್ಲಿನ ನಿಮ್ಮ ಸ್ವಂತ ಅನುಭವದೊಂದಿಗೆ ಹೋಲಿಸಿರಿ!

   2) ಇಂದು ದಕ್ಷಿಣ ಭಾರತದಲ್ಲಿರುವ ಪರಿಸ್ಥಿತಿ ಸನ್ನಿವೇಶವು ಅಂದಿನ ರೋಮನ್ ಅನ್ಯ ಜಗತ್ತಿನ ಪರಿಸ್ಥಿತಿ ಸನ್ನಿವೇಶಕ್ಕಿಂತ ಹೇಗೆ *ವ್ಯತ್ಯಾಸಕರವಾಗಿದೆ*?

   3) ಇಂದು ದಕ್ಷಿಣ ಭಾರತದಲ್ಲಿರುವ ಪರಿಸ್ಥಿತಿ ಸನ್ನಿವೇಶವು ಅಂದಿನ ರೋಮನ್ ಅನ್ಯ ಜಗತ್ತಿನ ಪರಿಸ್ಥಿತಿ ಸನ್ನಿವೇಶದೊಂದಿಗೆ ಹೇಗೆ *ಸಮಾನವಾಗಿದೆ*?

3. ಹೊಸ ಒಡಂಬಡಿಕೆಯ ಸಭೆಗಳಲ್ಲಿ ಒಂದು ಸಾಮೂಹಿಕ ನಾಯಕತ್ವವಿತ್ತೆಂಬುದು ವ. 23 ರಿಂದ ಬಹಳ ಸ್ಪಷ್ಟವಾಗುತ್ತದೆ (ಸಿರಿಯಾದ ಅಂತಿಯೋಕ್ಯ ಸಭೆಯ ಕುರಿತು 15:35 ನ್ನು ಸಹ ನೋಡಿರಿ).

   1) ದಕ್ಷಿಣ ಭಾರತದಲ್ಲಿರುವ ಯಾವುದಾದರೂ ಸಭೆಯು ಸಾಮೂಹಿಕ ನಾಯಕತ್ವವನ್ನು ಹೊಂದಿರುವುದನ್ನು ನೀವು ಕಂಡಿದ್ದಿರೋ? ನಿಮಗೆ ಗೊತ್ತಿದ್ದರೆ, ಅದು ಹೇಗೆ ರಚಿಸಲ್ಪಟ್ಟಿದೆ ಮತ್ತು ಕಾರ್ಯಮಾಡುತ್ತಿದೆ ಎಂಬುದರ ಕುರಿತು ವಿವರಿಸಿರಿ!

   2) ದಕ್ಷಿಣ ಭಾರತದ ಸಭೆಗಳಲ್ಲಿ ಸಾಮೂಹಿಕ ನಾಯಕತ್ವವನ್ನು ಹೊಂದಿರುವ ಸಭೆಗಳ ಹೆಚ್ಚು ಉದಾಹರಣೆಗಳು ಯಾಕೆ ಕಂಡುಬರುವುದಿಲ್ಲ?

   3) ದಕ್ಷಿಣ ಭಾರತದಲ್ಲಿ 'ಒಬ್ಬ ಸಭಾಪಾಲಕನು ಸಭೆಯನ್ನು ಆಳುವಂತಹದ್ದು'' ಪ್ರಧಾನವಾಗಿ ಕಂಡುಬರಲು ಕಾರಣವೇನಾಗಿರಬಹುದು?

   4) ದಕ್ಷಿಣ ಭಾರತದಲ್ಲಿ ಹೊಸದಾಗಿ ಸ್ಥಾಪಿಸಲ್ಪಡುವ ಸಭೆಯಲ್ಲಿ ಸಾಮೂಹಿಕ ನಾಯಕತ್ವ ಇರಲಿಕ್ಕೆ ಸಾಧ್ಯವಿದೆ ಎಂಬುದಾಗಿ ನೀವು ಆಲೋಚಿಸುತ್ತೀರೋ? ಯಾಕೆ – ಯಾಕೆ ಇಲ್ಲ?

   5) ನಿಮ್ಮ ಸಭೆಯಲ್ಲಿ ಸಾಮೂಹಿಕ ನಾಯಕತ್ವವನ್ನು ಹೊಂದಲು ಪ್ರಯತ್ನಿಸುವ ಮನಸ್ಸುಳ್ಳವರಾಗಿದ್ದೀರೋ?

## ಊ) ಉಪದೇಶಿಸು ಮತ್ತು ಬೋಧಿಸು!

1. ಒಬ್ಬ ದೇವರ ಸೇವಕನ ಕಾರ್ಯಗಳ ಕುರಿತಾದ ಒಂದು ಸತ್ಯವೇದ ಅಧ್ಯಯನಕ್ಕಾಗಿ ಇ. 2 ರ ಪ್ರಶ್ನೆಯ ನಿಮ್ಮ ಉತ್ತರವನ್ನು ಬಳಸಿಕೊಳ್ಳಿರಿ. ಊ) 3 ನ್ನೂ ಸಹ ನೋಡಿರಿ!

2. ನಿಮ್ಮನ್ನು ಕಳುಹಿಸಿದ ಮತ್ತು ನಿಮಗೆ ಸಹಾಯ ಮಾಡುತ್ತಿರುವ ಸಭೆಗೆ ಹೇಗೆ ಜವಾಬುದಾರಿಯಾದ ಸುವಾರ್ತಿಕನಾಗಿ (ಅಥವಾ ಮುಂಚೂಣಿ ಸೇವಕನಾಗಿ) ಹೇಗೆ ಇರುವುದು ಎಂಬುದರ ಕುರಿತಾದ ಒಂದು ಸತ್ಯವೇದ ಅಧ್ಯಯನಕ್ಕಾಗಿ ಇ. 3 ರ ಪ್ರಶ್ನೆಯ ನಿಮ್ಮ ಉತ್ತರವನ್ನು ಬಳಸಿಕೊಳ್ಳಿರಿ.

3. 14:21–25 ನ್ನು ಆಧರಿಸಿ ಸಭಾ ಸ್ಥಾಪಕರಿಗಾಗಿ ಮತ್ತು ಸುವಾರ್ತಿಕರಿಗಾಗಿ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಅಧ್ಯಯನವನ್ನು ***ಪೌಲನ ಸೇವಾ ಕಾರ್ಯತಂತ್ರಗಳ ಕಿರುನೋಟಗಳು'*** ಎಂದು ಕರೆಯಬಹುದು. ಈ ಕೆಳಗಿನ ಅಂಶಗಳನ್ನು ನಿಮ್ಮ ಹೊರ ರೇಖೆಯನ್ನಾಗಿ ಉಪಯೋಗಿಸಿಕೊಳ್ಳಬಹುದು:

   1) ಸುವಾರ್ತೆಯನ್ನು ಸಾರುವುದು

   2) ವಿಶ್ವಾಸಿಗಳನ್ನಾಗಿ ಮಾಡುವುದು

   3) ನಾಯಕರನ್ನು ನೇಮಿಸುವುದು

   4) ದೇವರ ಮೇಲೆ ಭರವಸೆಯಿಡುವುದು

   5) ಮುಂದೆ ಸಾಗುವುದು

# ಪಾಠ 38. ಯೆರೂಸಲೇಮಿನಲ್ಲಿ ಸಮ್ಮೇಳನ, 15:1–21

## ಅ) ವಾಕ್ಯಭಾಗ

ಸಿರಿಯಾದ ಅಂತಿಯೋಕ್ಯದಲ್ಲಿ ಪೌಲ ಮತ್ತು ಬಾರ್ನಬರು ಮಾಡಿದ ಸೇವೆಯ ಪ್ರತಿಫಲವಾಗಿ, ಅನೇಕ ಅನ್ಯಜನರು ಸುವಾರ್ತೆಯನ್ನು ಅಂಗೀಕರಿಸಿ, ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿಕೊಂಡು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡು ಸಭೆಯ ಸದಸ್ಯರಾದರು. ಅವರು ಸುನ್ನತಿಯಿಲ್ಲದವರಾಗಿದ್ದು ಯೆಹೂದ್ಯರ ನಿಯಮ ಮತ್ತು ರೂಢಿ ಸಂಪ್ರದಾಯಗಳನ್ನು ಪಾಲಿಸದವರಾಗಿದ್ದರು. ಆದರೆ ಯೆಹೂದ್ಯ ಹಿನ್ನಲೆಯಿಂದ ಬಂದ ಕೆಲವು ವಿಶ್ವಾಸಿಗಳು ಇದು ತಪ್ಪಾದದ್ದು ಎಂದು ಹೇಳಿದರು: ಒಬ್ಬ ಅನ್ಯನು ಮೊದಲು ಸುನ್ನತಿ ಹೊಂದುವುದರ ಮೂಲಕ ಯೆಹೂದ್ಯನಾಗಬೇಕು, ಆಗ ಮಾತ್ರ ಕ್ರಿಸ್ತನಲ್ಲಿ ನಂಬಿಕೆಯ ಮೂಲಕ ಆತನು ರಕ್ಷಣೆ ಹೊಂದಲು ಸಾಧ್ಯ. ಇದು ಸಭೆಯಲ್ಲಿ ಒಂದು ದೊಡ್ಡ ವಿವಾದಕ್ಕೆ ಕಾರಣವಾಯಿತು. ಈ ವಾಕ್ಯಭಾಗವು ಆ ವಿವಾದದ ಮತ್ತು ಅದನ್ನು ಹೇಗೆ ಬಗೆಹರಿಸಿದರೆಂಬುದರ ಕುರಿತೂ ಆಗಿದೆ.

## ಆ) ಟಿಪ್ಪಣಿ

*ಕೆಲವು ಜನರು ಯೂದಾಯದಿಂದ ಅಂತಿಯೋಕ್ಯಕ್ಕೆ ಬಂದು* (ವ. 1): ಬಹುಶಃ ಈ ಜನರು 'ಫರಿಸಾಯರ ಮತಕ್ಕೆ ಸೇರಿದ' ಗುಂಪಿನವರಾಗಿರಲೇಬೇಕು (ವ. 5). ಅವರು ಯೆಹೂದ್ಯ ಧರ್ಮಶಾಸ್ತ್ರಪಾಲಕರಾಗಿದ್ದರು, ಒಬ್ಬ ವ್ಯಕ್ತಿ ರಕ್ಷಣೆ ಹೊಂದಬೇಕಾದರೆ ಮೊದಲು ಆತನು ಒಬ್ಬ ಯೆಹೂದ್ಯನಾಗಬೇಕು, ಅಂದರೆ ಆತನು ಸುನ್ನತಿ ಹೊಂದಬೇಕೆಂತಲೂ ಮತ್ತು ಮೋಶೆಯ ಧರ್ಮಶಾಸ್ತ್ರವನ್ನು ಅನುಸರಿಸಬೇಕೆಂತಲೂ ಅವರು ಒತ್ತಿ ಹೇಳುತ್ತಿದ್ದರು.

*ನೊಗವನ್ನು* (ವ. 10): ಇದು ಮೋಶೆಯ ಧರ್ಮಶಾಸ್ತ್ರದ ಕುರಿತಾದ ಒಂದು ರೂಪಾಲಂಕಾರವಾಗಿದೆ.

*ಯಾಕೋಬನು* (ವ. 13): ಈತನು ಯೇಸು ಕ್ರಿಸ್ತನ ಸಹೋದರನು. ಆತನು ನಂತರ ಆದಿಸಭೆಯಲ್ಲಿ 'ನ್ಯಾಯವಂತನಾದ ಯಾಕೋಬ'ನೆಂದು ಕರೆಯಲ್ಪಟ್ಟನು. ಈ ಸಮಯದಲ್ಲಿ ಯಾಕೋಬನು ಒಬ್ಬ ನಾಯಕನಾಗಿದ್ದನು, ಬಹುಶಃ ಯೆರೂಸಲೇಮಿನ ಸಭೆಯ ಪ್ರಮುಖ ನಾಯಕನಾಗಿದ್ದನು. ಈ ಸನ್ನಿವೇಶದಲ್ಲಿ ನಿರ್ಧಾರವನ್ನು ಕೈಗೊಂಡವನು ಆತನೇ.

*ದೇವರ ಕಡೆಗೆ ತಿರುಗಿಕೊಂಡು ಬರುತ್ತಿರುವ ಅನ್ಯಜನರಿಗೆ ನಾವು ಕಠಿಣವಾಗುವಂತೆ ಮಾಡಬಾರದು* (ವ. 19): ಅನ್ಯರು ಸುನ್ನತಿ ಹೊಂದುವ ಅವಶ್ಯಕತೆ ಇರಲಿಲ್ಲ. ಆದರೆ ಅವರು ಯೆಹೂದ್ಯರಿಗೆ ಮನನೋಯಿಸಬಾರದೆಂಬ ಉದ್ದೇಶಗಳಿಂದ (ವ. 21) ನಾಲ್ಕು ಷರತ್ತುಗಳನ್ನು ಆಚರಣೆಯಲ್ಲಿಟ್ಟುಕೊಳ್ಳುವುದಕ್ಕಾಗಿ ವಿಧಿಸಲಾಯಿತು (ವ. 20).

## ಇ) ಪಠ್ಯದ ಪ್ರಶ್ನೆಗಳು

1. ಈ ಪಠ್ಯವನ್ನು ಉಪವಿಭಾಗಗಳಾಗಿ ವಿಂಗಡಿಸಬಹುದಾಗಿದೆ. ನೀವು ಅದನ್ನು ಹೇಗೆ ವಿಂಗಡಿಸುತ್ತೀರಿ?
2. ಯೆಹೂದ್ಯ ಧರ್ಮಶಾಸ್ತ್ರಪಾಲಕರ ನಿಲುವು ಏನಾಗಿತ್ತು (ವ. 1 ಮತ್ತು 5)?
3. ಪೇತ್ರನ ನಿಲುವು ಏನಾಗಿತ್ತು? ಆ ದೃಷ್ಟಿಕೋನಕ್ಕೆ ಆತನು ಹೇಗೆ ತಲುಪಿದನು?
4. ಯಾಕೋಬನ ನಿರ್ಧಾರವು ಯಾವುದರ ಮೇಲೆ ಆಧಾರಿತವಾಗಿತ್ತು ಮತ್ತು ಆತನ ಉಪಸಂಹಾರ ಏನಾಗಿತ್ತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅನ್ಯ ವಿಶ್ವಾಸಿಗಳ ಸುನ್ನತಿಯ ವಿಚಾರದ ಕುರಿತಾಗಿ ಪೌಲ ಮತ್ತು ಬಾರ್ನಬರ ನಿಲುವು ಏನಾಗಿತ್ತು?
2. ಪೌಲ ಮತ್ತು ಬಾರ್ನಬರು ಯೆರೂಸಲೇಮಿನಲ್ಲಿ ತಮ್ಮ ವಿಚಾರವನ್ನು ಹೇಗೆ ಮಂಡಿಸಿದರು?
3. ಅಂತಿಯೋಕ್ಯ ಸಭೆಯು ಈ ವಿಚಾರವನ್ನು ಯೆರೂಸಲೇಮಿನಲ್ಲಿದ್ದ ಅಪೋಸ್ತಲರ ಮತ್ತು ಹಿರಿಯರ ಬಳಿಗೆ ಏಕೆ ಕೊಂಡೊಯ್ಯಿತೆಂದು ನೀವು ಆಲೋಚಿಸುತ್ತೀರಿ? ಅವರು ತಮ್ಮಿಷ್ಟಕ್ಕೆ ತಾವು ಯಾಕೆ ಅದನ್ನು ಬಗೆಹರಿಸಲಿಲ್ಲ?
4. ಪ್ರಮುಖ ವಿವಾದಾಂಶವು ಸ್ಪಷ್ಟವಾಗಿ ನಿರ್ಧರಿಸಲ್ಪಟ್ಟಿತು (ಅನ್ಯವಿಶ್ವಾಸಿಗಳು ಸುನ್ನತಿಯನ್ನು ಹೊಂದುವ ಅಗತ್ಯತೆಯಿಲ್ಲ ಎಂಬುದು). ಆದರೆ ಈ ನಾಲ್ಕು ಷರತ್ತುಗಳನ್ನು (ವಿಗ್ರಹಗಳಿಗೆ ಅರ್ಪಿತವಾದ ಅಪವಿತ್ರ ಆಹಾರದಿಂದಲೂ ಅನೈತಿಕತೆಯಿಂದಲೂ ದೂರವಿರುವುದು, ರಕ್ತವನ್ನೂ ಕುತ್ತಿಗೆ ಹಿಸುಕಿ ಕೊಂದ ಪ್ರಾಣಿಯನ್ನೂ ಭುಜಿಸದಿರುವುದು) ನಾವು ಹೇಗೆ ಅರ್ಥೈಸಿಕೊಳ್ಳಬಹುದು? ಇವುಗಳು ವಿಶ್ವಾಸಿಗಳು ಪಾಲಿಸತಕ್ಕ ಯೆಹೂದ್ಯ ನಿಯಮಗಳಲ್ಲವೋ? ಹಾಗಿದ್ದಲ್ಲಿ, ಯಾವುದೇ ಕ್ರಿಯೆಗಳಿಂದಲ್ಲದೇ 'ಯೇಸುವಿನ ಮೇಲೆ ನಂಬಿಕೆಯಿಡುವುದರಿಂದ ಮಾತ್ರ ರಕ್ಷಣೆ ಉಂಟಾಗುವುದು' ಎಂಬ ಮೂಲಭೂತವಾದ ಕ್ರಿಸ್ತೀಯ ಸಿದ್ಧಾಂತವು ಏನಾಯಿತು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಇಂದು ದಕ್ಷಿಣ ಭಾರತದಲ್ಲಿರುವ ನಮ್ಮ ಸಭೆಗಳಲ್ಲಿ ಸಿದ್ಧಾಂತಗಳ ಮತ್ತು ನೀತಿತತ್ವಗಳ ಕುರಿತಾದ ವಿವಾದಗಳನ್ನು ನಾವು ಹೇಗೆ ಬಗೆಹರಿಸುತ್ತೇವೆ? ಸಭೆಯಲ್ಲಿನ ಘರ್ಷಣೆಯ ಬಗೆಹರಿಸುವಿಕೆಯ ಕುರಿತು ಅ. ಕೃ. 15 ರಿಂದ ನಾವು ಏನನ್ನು ಕಲಿಯುತ್ತೇವೆ?
2. ಅ. ಕೃ. 15:19–22 ರಲ್ಲಿರುವ ಯಾಕೋಬನ ತೀರ್ಪಿನ ಕುರಿತಾದ ಸತ್ಯವೇದ ಅಧ್ಯಯನವನ್ನು ಅಥವಾ ಸಂದೇಶವನ್ನು ನೀವು ಎಂದಾದರೂ ಕೇಳಿದ್ದೀರಾ? ಆ ಸಂದೇಶವು ಏನಾಗಿತ್ತು? ಅವರು ಹೇಳಿದ್ದನ್ನು ನೀವು ಒಪ್ಪಿಕೊಳ್ಳುತ್ತೀರೋ? ಯಾಕೆ – ಯಾಕೆ ಇಲ್ಲ?

3. ಈ ಕೆಳಗಿನವುಗಳ ಕುರಿತು ನಿಮ್ಮ ಸಭೆಯ ನಿಲುವೇನು:

- ಸುನ್ನತಿ
- ಊಟದ ಮೇಲಿರುವಂತಹ ನಿರ್ಬಂಧ – ಏನನ್ನು ತಿನ್ನಬೇಕು ಅಥವಾ ಏನನ್ನು ತಿನ್ನಬಾರದು
- ಮದುವೆಯ ಸಂಬಂಧಗಳು – ಸೋದರ ಮಗ/ಮಗಳಿನ ನಡುವಿನ ಸಂಬಂಧ, ಚಿಕ್ಕಪ್ಪ/ದೊಡ್ಡಪ್ಪ ಅಥವಾ ಚಿಕ್ಕಮ್ಮ/ದೊಡ್ಡಮ್ಮನೊಂದಿಗಿನ ಸಂಬಂಧ (ಯಾಜಕ. 18:11–13)

## ಊ) ಉಪದೇಶಿಸು ಮತ್ತು ಬೋಧಿಸು!

ಅ. ಕೃ. 15:1–21 ರ ಆಧಾರದ ಮೇಲೆ ಸಭಾ ನಾಯಕರುಗಳಿಗಾಗಿ ಒಂದು ಸತ್ಯವೇದ ಅಧ್ಯಯನವನ್ನು ಮಾಡಲು ನಿಮ್ಮನ್ನು ಕೇಳಿಕೊಂಡಿದ್ದಾರೆ. ಹಿರಿಯ ಸಭಾಪಾಲಕರಿಗೆ ಮನನೋಯಿಸಲು ಅಥವಾ ಯಾವುದೇ ವಿವಾದವನ್ನು ಉಂಟುಮಾಡಲು ನಿಮಗೆ ಮನಸ್ಸಿಲ್ಲ. ಹಾಗಾದರೆ ನೀವು ಯಾವುದರ ಕುರಿತು ಮಾತನಾಡಬಹುದು?

ನಾನು ಈ ಕೆಳಗಿನ ವಿಷಯಗಳ ಕುರಿತು ಸತ್ಯವೇದ ಅಧ್ಯಯವನ್ನು ನಡೆಸುವೆ:

ಅಧ್ಯಯನ 1: ***ಸಭೆಯಲ್ಲಿ ಐಕ್ಯತೆಯ ಪ್ರಾಮುಖ್ಯತೆ***

1) ಕ್ರಿಸ್ತೀಯ ಐಕ್ಯತೆಯ ಪ್ರಾಮುಖ್ಯತೆ (ಯೋಹಾನ. 17:20–21 ರಲ್ಲಿ ಯೇಸು).
2) ಅನ್ಯರಿಗೆ ಸುನ್ನತಿಯನ್ನು ಮಾಡಿಸುವ ವಿಚಾರದಲ್ಲಿ ಆದಿಸಭೆಯು ವಿಭಾಗವಾಗುವ ಸನ್ನಿವೇಶವು ಎದುರಾಗಿತ್ತು.
3) ಈ ವಿಚಾರವು ಸ್ಥಳೀಯ ಸಭೆಯಲ್ಲಿ (ಅಂತಿಯೋಕ್ಯದಲ್ಲಿ) ಒಂದು ಘರ್ಷಣೆಗೆ ಕಾರಣವಾಯಿತು.
4) ಅಂತಿಯೋಕ್ಯದಲ್ಲಿದ್ದ ನಾಯಕರು ಈ ವಿವಾದವನ್ನು ಇತರೆ ಸಭೆಯ (ಯೆರೂಸಲೇಮಿನ) ಅನುಭವವುಳ್ಳ ನಾಯಕರ ಸಲಹೆಯ ಮೂಲಕ ಬಗೆಹರಿಸಲು ನಿರ್ಧರಿಸಿದರು.
5) ಅವರು ನಂಬಿಗಸ್ತರಾದ ಮತ್ತು ಸೈದ್ಧಾಂತಿಕವಾಗಿ ಸ್ವಸ್ಥಬೋಧನೆಯುಳ್ಳ ನಾಯಕರುಗಳು (ಪೌಲ, ಬಾರ್ನಬ ಮತ್ತು ಇತರರು) ಅಂತಿಯೋಕ್ಯ ಸಭೆಯನ್ನು ಪ್ರತಿನಿಧಿಸುವಂತೆ ಕಳುಹಿಸಿಕೊಟ್ಟರು.
6) ಯೆರೂಸಲೇಮಿನ ಸಮ್ಮೇಳನದಲ್ಲಿ ಎರಡೂ ಕಡೆಯವರು ಪ್ರತಿನಿಧಿಸಲ್ಪಟ್ಟಿದ್ದರು ಮತ್ತು ತಮ್ಮ ನಿಲುವುಗಳನ್ನು ವಿವರಿಸುವಂತೆ ಅನುವು ಮಾಡಿಕೊಡಲಾಯಿತು.
7) ಕೊನೆಗೆ ಕೈಗೊಳ್ಳಲ್ಪಟ್ಟ ನಿರ್ಧಾರವು ದೇವರ ಕಾರ್ಯಗಳ ಮತ್ತು ಆತನ ವಾಕ್ಯಗಳ ಮೇಲೆ ಆಧಾರಿತವಾದುದ್ದಾಗಿತ್ತು. ಅತಿರೇಖ ದೃಷ್ಟಿಕೋನಗಳು (ಯೆಹೂದ್ಯ ಧರ್ಮದ ಹಿಂಬಾಲಕರ) ನಿರ್ಧಾರದ ಮೇಲೆ ಪ್ರಭಾವ ತರುವಂತೆ ಅನುಮತಿಸಲ್ಪಡಲಿಲ್ಲ.

8) ನಿರ್ಧಾರವನ್ನು ಯಾರೂ ಪ್ರತಿರೋಧಿಸಲಿಲ್ಲ. ಐಕ್ಯತೆಯು ಕಾಪಾಡಲ್ಪಟ್ಟಿತು.

9) ಅನ್ವಯಿಸುವಿಕೆ: ಇಂದು ದಕ್ಷಿಣ ಭಾರತದಲ್ಲಿ ನಾವು ಅಳವಡಿಸಿಕೊಳ್ಳಬಹುದಾದ ಯಾವ ಅಂಶವನ್ನು ಈ ಕಥೆಯಿಂದ ಕಲಿಯುತ್ತೇವೆ?

ಅಧ್ಯಯನ 2: ***ದೇವರ ವಾಕ್ಯ ಮತ್ತು ಅನುಭವ***

1) ಯಾಕೋಬನು ದೇವರ ಸೇವಕರುಗಳ (ಪೌಲ, ಬಾರ್ನಬ ಮತ್ತು ಪೇತ್ರರ) ಅನುಭವದ ಮತ್ತು ದೇವರ ವಾಕ್ಯದ ಆಧಾರದ ಮೇಲೆ ತನ್ನ ತೀರ್ಪನ್ನು ಮಾಡಿದನು.

2) ಇದರ ಕುರಿತು ಸತ್ಯವೇದದಿಂದ ಮತ್ತು ಸಭಾ ಇತಿಹಾಸದಿಂದ ಇತರೆ ಉದಾಹರಣೆಗಳನ್ನು ತಿಳಿಸಿರಿ.

3) ಇಂದು ನಮಗೆ ಇದೊಂದು ಮಾನ್ಯ ಪ್ರಕ್ರಿಯೆಯಾಗಿದೆ!

ಅಧ್ಯಯನ 3: ***ರಕ್ಷಣೆಯು ನಂಬಿಕೆಯಿಂದಲೋ ಅಥವಾ ಕ್ರಿಯೆಗಳಿಂದಲೋ***

1) ವ. 7–11 ರಲ್ಲಿನ ಪೇತ್ರನ ಹೇಳಿಕೆಯೊಂದಿಗೆ ಪ್ರಾರಂಭಿಸಿರಿ.

2) ನಾವು ನಂಬಿಕೆಯಿಂದ ರಕ್ಷಣೆ ಹೊಂದಿದ್ದೇವೆಯೇ ಹೊರತು ಯಾವುದೇ ಕ್ರಿಯೆಗಳಿಂದಲ್ಲ ಎಂಬುದಕ್ಕೆ ಪೌಲನ ಪತ್ರಿಕೆಗಳಿಂದ ಉದಾಹರಣೆಗಳನ್ನು ತೆಗೆದುಕೊಳ್ಳಿರಿ (ಮತ್ತು ನೀವು ಬಯಸಿದರೆ ಹೊಸ ಒಡಂಬಡಿಕೆಯ ಇತರೆ ಪತ್ಯಗಳನ್ನೂ ಸೇರಿಸಿಕೊಳ್ಳಿರಿ).

3) ದಕ್ಷಿಣ ಭಾರತದ ಹಿನ್ನಲೆಯಲ್ಲಿ ನಂಬಿಕೆಗಿಂತಲೂ ಹೆಚ್ಚಾಗಿ ಕ್ರಿಯೆಗಳ ಮೇಲೆ ಒತ್ತು ನೀಡುವಂತಹ ಶೋಧನೆಯು ವಿಶ್ವಾಸಿಗಳಿಗೆ ಯಾಕೆ ಉಂಟಾಗುತ್ತದೆ ಎಂಬುದಕ್ಕೆ ಉದಾಹರಣೆಯನ್ನು ತೆಗೆದುಕೊಳ್ಳಿರಿ.

4) ಸತ್ಯವನ್ನು ತಿಳಿಸುವುದರ ಮೂಲಕ ಮುಕ್ತಾಯಗೊಳಿಸಿರಿ!

# ಪಾಠ 39. ಅನ್ಯಜನರಿಂದ ಬಂದ ವಿಶ್ವಾಸಿಗಳಿಗೆ ಸಮ್ಮೇಳನದ ಪತ್ರ, 15:22–34

## ಅ) ವಾಕ್ಯಭಾಗ

ಅಪೋಸ್ತಲರು ಮತ್ತು ಹಿರಿಯರು ಹಾಗೂ ಇಡೀ ಸಭೆಯು ಯಾಕೋಬನೊಂದಿಗೆ ಒಪ್ಪಿಕೊಂಡಿತು. ಆತನು ತನ್ನ ತೀರ್ಪನ್ನು ಅಪೋಸ್ತಲರ (ಪೇತ್ರ, ಪೌಲ ಮತ್ತು ಬಾರ್ನಬರ) ಅನುಭವಗಳ ಮೇಲೆಯೂ ಮತ್ತು ಹಳೆ ಒಡಂಬಡಿಕೆಯ ಪ್ರವಾದನೆಯ ಮೇಲೆಯೂ ಆಧರಿಸಿದ್ದನು ಮತ್ತು ಅವರೆಲ್ಲರೂ ಮನದಟ್ಟುಮಾಡಿಕೊಂಡಿದ್ದೇನೆಂದರೆ: ಅನ್ಯ ವಿಶ್ವಾಸಿಗಳು ಸುನ್ನತಿಯನ್ನು ಮಾಡಿಸಿಕೊಳ್ಳುವ ಅಗತ್ಯತೆಯಿಲ್ಲ. 'ನಾಲ್ಕು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅನ್ಯ ಕ್ರೈಸ್ತರ ಲಂಘನದ ಯಾಕೋಬನ ಪ್ರಸ್ತಾಪವು ಪರಸ್ಪರ ಸಹನೆ ಮತ್ತು ಅನ್ಯೋನ್ಯತೆಯನ್ನು ಪ್ರೋತ್ಸಾಹಿಸಲು ಒಂದು ಜ್ಞಾನವುಳ್ಳ ನಿಯಮವಾಗಿ ತೋರಿತು' (ಜಾನ್ ಸ್ಟಾಟ್). ಇಬ್ಬರು ನಂಬಿಗಸ್ತ ನಾಯಕರುಗಳಾದ ಯೂದ ಮತ್ತು ಸೀಲರ ಮೂಲಕ ಒಂದು ಪತ್ರವು ಅಂತಿಯೋಕ್ಯ, ಸಿರಿಯಾ ಮತ್ತು ಸಿಲಿಸಿಯದಲ್ಲಿದ್ದ ಅನ್ಯ ಸಹೋದರರ ಬಳಿಗೆ ಕಳುಹಿಸಲ್ಪಟ್ಟಿತು. ಅವರೊಂದಿಗೆ ಪೌಲ ಮತ್ತು ಬಾರ್ನಬರೂ ಪ್ರಯಾಣಿಸಿದರು. ಅಂತಿಯೋಕ್ಯ ಸಭೆಯಲ್ಲಿ ಪತ್ರವು ಓದಲ್ಪಟ್ಟು ಉತ್ತಮವಾಗಿ ಸ್ವೀಕರಿಸಲ್ಪಟ್ಟಿತು. ಯೂದ ಮತ್ತು ಸೀಲರು ಕೆಲವು ದಿವಸಗಳವರೆಗೆ ಅಂತಿಯೋಕ್ಯದಲ್ಲಿಯೇ ತಂಗಿದ್ದುಕೊಂಡು ಅಲ್ಲಿನ ಸಭೆಯನ್ನು ಬಲಪಡಿಸಿದರು.

## ಆ) ಟಿಪ್ಪಣಿ

*ಅಪೋಸ್ತಲರು ಮತ್ತು ಹಿರಿಯರು ಇಡೀ ಸಭೆಯ ಸಮ್ಮತಿ ಪಡೆದು* (ವ. 22): ಸಂದೇಶ ರವಾನಿಸುವವರ ಆಯ್ಕೆಯಲ್ಲಿಯೂ (ವ. 23) ಮತ್ತು ಪತ್ರದಲ್ಲಿದ್ದ ವಿಷಯದಲ್ಲಿಯೂ (ವ. 23–29) ಸರ್ವಾನುಮತದ ಒಪ್ಪಿಗೆಯಿತ್ತೆಂದು ಸ್ಪಷ್ಟವಾಗಿ ಕಾಣುತ್ತದೆ.

*ಅಂತಿಯೋಕ್ಯ, ಸಿರಿಯಾ ಮತ್ತು ಸಿಲಿಸಿಯಾದಲ್ಲಿ ವಾಸಿಸುವ ಅನ್ಯವಿಶ್ವಾಸಿಗಳಿಗೆ* (ವ. 23): ಈ ಪತ್ರದಲ್ಲಿದ್ದ ನಿರ್ಧಾರಗಳು ಲುಸ್ತ್ರ, ಇಕೋನಿಯ ಮತ್ತು ಇತರೆ ಸ್ಥಳಗಳಿಗೂ ರವಾನಿಸಲ್ಪಟ್ಟಿದ್ದನ್ನು ನಾವು ನಂತರ ಕಾಣುತ್ತೇವೆ (16:4).

*ಸೀಲ* (ವ. 22): ಹೊಸ ಒಡಂಬಡಿಕೆಯಲ್ಲಿ ಇದೇ ಮೊದಲ ಬಾರಿಗೆ ಸೀಲನು ಪ್ರಸ್ತಾಪಿಸಲ್ಪಟ್ಟಿದ್ದಾನೆ. ಆತನು ಯೆರೂಸಲೇಮ್ ಸಭೆಯಲ್ಲಿ ಒಬ್ಬ ನಾಯಕನಾಗಿದ್ದನು (ವ. 22) ಮತ್ತು ಒಬ್ಬ ಪ್ರವಾದಿಯಾಗಿದ್ದನು. ಸೀಲನು ನಂತರ ಪೌಲನೊಂದಿಗೆ ಆತನ ಎರಡನೆಯ ಮತ್ತು ಮೂರನೆಯ ಸೇವಾ ಪ್ರಯಾಣದಲ್ಲಿ ಸಹಭಾಗಿಯಾದನು. ಪೌಲ ಮತ್ತು ತಿಮೊಥಿಯ ಜೊತೆಗೂಡಿ ಆತನು 1 ಮತ್ತು 2 ನೆಯ ಥೆಸಲೋನಿಕ ಪತ್ರಿಕೆಗಳನ್ನು ಬರೆದನು. ಪೇತ್ರನು ಆತನನ್ನು 'ನಂಬಿಗಸ್ತನಾದ ಸಹೋದರನೆಂದು' ಕರೆದನು (1 ಪೇತ್ರ. 5:12). ಆತನು ತನ್ನ ಹೆಸರಿನ ಲ್ಯಾಟಿನ್ ಮಾದರಿಯಾದ

‘ಸಿಲ್ವನು’ ಎಂಬ ಹೆಸರನ್ನೂ ಹೊಂದಿದ್ದನು ಮತ್ತು ಆತನು ರೋಮ್‌ನ ಪ್ರಜೆಯಾಗಿದ್ದನು (16:37–38).

*ಯೂದ (ಬಾರ್ಸಬನೆಂದು ಕರೆಯಲ್ಪಡುವವನು)* (ವ. 22): ಈತನು ಈ ಕಥೆಯಲ್ಲಿ ಮಾತ್ರ ಸೂಚಿಸಲ್ಪಟ್ಟಿದ್ದಾನೆ.

*ಸ್ವತಃ ಪ್ರವಾದಿಗಳಾಗಿದ್ದುದರಿಂದ* (ವ. 32): ಸಹೋದರರನ್ನು ಬಲಪಡಿಸಿ ಅವರನ್ನು ಪ್ರೋತ್ಸಾಹಿಸುವುದು ಆದಿಸಭೆಯಲ್ಲಿದ್ದ ಪ್ರವಾದಿಗಳ ಒಂದು ಕೆಲಸವಾಗಿತ್ತೆಂದು ಈ ಸನ್ನಿವೇಶವು ತೋರ್ಪಡಿಸುತ್ತದೆ.

ಅತ್ಯುತ್ತಮವಾದ ಮೂಲಪ್ರತಿಗಳಲ್ಲಿ ವ. 34 ಕಂಡು ಬರುವುದಿಲ್ಲ. ಇದು ವ. 33 ರಲ್ಲಿರುವ ಹೇಳಿಕೆಗೆ ತದ್ವಿರೋಧವಾಗಿದೆ.

## ಇ) ಪಠ್ಯ ಪ್ರಶ್ನೆಗಳು

1. ಅಂತಿಯೋಕ್ಯಕ್ಕೆ ಬಂದಿದ್ದ ಯೆಹೂದ್ಯ ಧರ್ಮಶಾಸ್ತ್ರಪಾಲಕರ ಕುರಿತು ಆ ಪತ್ರವು ಏನನ್ನು ಹೇಳಿತು?
2. ಯೆರೂಸಲೇಮಿನಲ್ಲಿ ಅಪೋಸ್ತಲರಿಂದ ಮತ್ತು ಹಿರಿಯರಿಂದ ಮಾಡಲ್ಪಟ್ಟ ನಿರ್ಧಾರವು ಅನ್ಯಸಭೆಗಳಿಗೆ ಎರಡು ವ್ಯತ್ಯಾಸಕರವಾದ ವಿಧಾನಗಳಿಂದ ತಲುಪಿಸಲಾಯಿತು, ಅವುಗಳಾವುವು?
3. ಆ ಪತ್ರಕ್ಕೆ ಅಂತಿಯೋಕ್ಯ ಸಭೆಯು ಹೇಗೆ ಪ್ರತಿಕ್ರಿಯಿಸಿತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ‘ಪವಿತ್ರಾತ್ಮನಿಗೂ ನಮಗೂ ಒಳ್ಳೆಯದೆಂದು ತೋಚಿತು’ ಎಂಬ ಹೇಳಿಕೆಯ ಅರ್ಥವೇನಾಗಿರಬಹುದು (ವ. 28)?
2. ಯೆರೂಸಲೇಮಿನಲ್ಲಿ ಯಾಕೋಬನು ಮಾಡಿದ ತೀರ್ಪಿನ ಹಾಗೂ ಅನ್ಯಸಭೆಗಳಿಗೆ ಕಳುಹಿಸಲ್ಪಟ್ಟ ಪತ್ರದಲ್ಲಿನ ಸಂದೇಶದ ನಡುವೆ ಇರುವ ಮುಖ್ಯವಾದ ವ್ಯತ್ಯಾಸವೇನು? ಈ ವ್ಯತ್ಯಾಸದ ಹಿಂದೆ ಯಾವುದಾದರೂ ಕಾರಣವಿದ್ದಿರಬಹುದೆಂದು ನೀವು ಆಲೋಚಿಸುತ್ತೀರೋ?
3. ಅಂತಿಯೋಕ್ಯದಲ್ಲಿನ ಸಭೆಯನ್ನು ಪ್ರೋತ್ಸಾಹಿಸಿ ಬಲಪಡಿಸಲು ಯೂದ ಮತ್ತು ಸೀಲರಿಗೆ ಹೇಗೆ ಸಾಧ್ಯವಾಯಿತು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ನಿಮ್ಮ ಸಭೆಯಲ್ಲಿ ನೀವು ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳುತ್ತೀರಿ? ನಿಮ್ಮ ನಿರ್ಧಾರಗಳಲ್ಲಿ ಪವಿತ್ರಾತ್ಮನು ಹೇಗೆ ಮತ್ತು ಎಷ್ಟರಮಟ್ಟಿಗೆ ಭಾಗಿಯಾಗಿದ್ದಾನೆ!
2. ನಿಮ್ಮ ಸಭೆಯನ್ನು ಪ್ರೋತ್ಸಾಹಿಸಲು ಮತ್ತು ಬಲಗೊಳಿಸಲು ಯೂದ ಮತ್ತು ಸೀಲರಂತಹ ವ್ಯಕ್ತಿಗಳಿದ್ದಾರಾ? ನಮ್ಮ ಸಭೆಗಳಲ್ಲಿ ಇಂತಹ ಜನರನ್ನು ಹೆಚ್ಚಾಗಿ ಪಡಕೊಳ್ಳಲು ನಾವು ಏನನ್ನು ಮಾಡಬಹುದು?

## ಊ) ಉಪದೇಶಿಸು ಮತ್ತು ಬೋಧಿಸು!

ಯೂದ ಮತ್ತು ಸೀಲರು ಅಂತಿಯೋಕ್ಯ ಸಭೆಯನ್ನು ಬಲಗೊಳಿಸಿ ಪ್ರೋತ್ಸಾಹಿಸಲು ಹೇಗೆ ಸಾಧ್ಯವಾಯಿತೆಂಬುದರ ಕುರಿತು ನೀವು ಈ ವಾಕ್ಯಭಾಗದ (ವ. 22, 27, 30–33) ಕೆಲವು ಭಾಗಗಳನ್ನು ಒಂದು ಸತ್ಯವೇದ ಅಧ್ಯಯನಕ್ಕಾಗಿ ಬಳಸಿಕೊಳ್ಳಬಹುದು. ಈ) 3 ರ ಉತ್ತರದಲ್ಲಿರುವ ನಾಲ್ಕು ಅಂಶಗಳು ನಿಮಗೆ ಒಂದು ರಚನೆಯನ್ನು ಕೊಡುತ್ತವೆ. ನೀವು ನಿಮ್ಮ ಸ್ವಂತ ಸಭೆಯ ಸನ್ನಿವೇಶ ಹಿನ್ನಲೆಗೆ ಅವುಗಳನ್ನು ಅನ್ವಯಿಸುತ್ತಾ ಮುಕ್ತಾಯಗೊಳಿಸಿರಿ.

# ಪಾಠ 40. ಪೌಲ ಮತ್ತು ಬಾರ್ನಬರ ನಡುವೆ ಭಿನ್ನಾಭಿಪ್ರಾಯ, 15:35–40

## ಅ) ವಾಕ್ಯಭಾಗ

ಪೌಲ ಮತ್ತು ಬಾರ್ನಬರು ತಮ್ಮ ಮುಂಚಿನ ಸೇವಾ ಪ್ರಯಾಣದ ಅವಧಿಯಲ್ಲಿ ಸ್ಥಾಪಿಸಿದಂತಹ ಸಭೆಗಳಿಗೆ ಮರು ಭೇಟಿ ನೀಡಲು ಯೋಜಿಸಿಕೊಂಡರು. ಆದರೆ ಅವರು ಮಾರ್ಕನೆನಿಸಿಕೊಳ್ಳುವ ಯೋಹಾನನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುವುದರ ಕುರಿತು ಒಮ್ಮತವಾಗಲಿಲ್ಲ. ಕೊನೆಯಲ್ಲಿ ಪೌಲ ಮತ್ತು ಬಾರ್ನಬರು ಪ್ರತ್ಯೇಕವಾಗಿ ಹೊರಟರು: ಬಾರ್ನಬನು ತನ್ನೊಂದಿಗೆ ಮಾರ್ಕನೆಂಬ ಯೋಹಾನನನ್ನು ಕರೆದುಕೊಂಡು ಹೋದನು, ಪೌಲನು ಸೀಲನನ್ನು ತನ್ನ ಜೊತೆಪ್ರಯಾಣಿಕನನ್ನಾಗಿ ಆರಿಸಿಕೊಂಡನು.

## ಆ) ಟಿಪ್ಪಣಿ

*ನಾವು ಕರ್ತನ ವಾಕ್ಯವನ್ನು ಸಾರಿದ ಎಲ್ಲಾ ಪಟ್ಟಣಗಳಿಗೆ* (ವ. 36): ಮೊದಲ ಸೇವಾ ಪ್ರಯಾಣದ ಅವಧಿಯಲ್ಲಿನ ಪಟ್ಟಣಗಳು

*ಒಬ್ಬರಿಂದೊಬ್ಬರು ಪ್ರತ್ಯೇಕವಾಗಿ ಹೋಗಬೇಕಾಯಿತು* (ವ. 39): ಅಪೋಸ್ತಲರ ಕೃತ್ಯಗಳಲ್ಲಿ ಮಾರ್ಕ ಮತ್ತು ಬಾರ್ನಬರು ಪುನಃ ಎಲ್ಲಿಯೂ ತಿಳಿಸಲ್ಪಟ್ಟಿಲ್ಲ. ಕಥೆಯ ಮುಂದುವರಿದ ಭಾಗವು ಪೌಲ ಮತ್ತು ಆತನ ಜೊತೆಗಾರರ ಕುರಿತು ಇರುವಂತಹದ್ದಾಗಿದೆ.

## ಇ) ಪಠ್ಯ ಪ್ರಶ್ನೆಗಳು

1. ಪೌಲ ಮತ್ತು ಬಾರ್ನಬರು ತಮ್ಮ ಮುಂದಿನ ಸೇವಾ ಪ್ರಯಾಣಕ್ಕಾಗಿ ಹೊರಡುವುದಕ್ಕಿಂತ ಮುಂಚೆ ಅಂತಿಯೋಕ್ಯದಲ್ಲಿದ್ದು ಏನು ಮಾಡಿದರು?
2. ಎರಡನೆಯ ಸೇವಾ ಪ್ರಯಾಣಕ್ಕೆ ಮೊದಲ ಹೆಜ್ಜೆಯನ್ನು ತೆಗೆದುಕೊಂಡವರು ಯಾರು ಮತ್ತು ಅದರ ಹಿಂದಿನ ಕಾರಣವೇನಾಗಿತ್ತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಬಾರ್ನಬನು ಮಾರ್ಕನೆನಿಸಿಕೊಳ್ಳುವ ಯೋಹಾನನನ್ನು ತನ್ನ ಜೊತೆಪ್ರಯಾಣಿಕನನ್ನಾಗಿ ಯಾಕೆ ಆರಿಸಿಕೊಂಡನೆಂದು ನೀವು ಆಲೋಚಿಸುತ್ತೀರಿ?

2. ಪೌಲನು ಸೀಲನನ್ನು ತನ್ನ ಜೊತೆಪ್ರಯಾಣಿಕನನ್ನಾಗಿ ಯಾಕೆ ಆರಿಸಿಕೊಂಡನೆಂದು ನೀವು ಆಲೋಚಿಸುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಒಬ್ಬ ದೇವರ ಸೇವಕನು ಸರಿಯಾದ ಸಹುದ್ಯೋಗಿಗಳನ್ನು ಆಯ್ಕೆಮಾಡಿಕೊಳ್ಳುವುದು ಅತೀ ಪ್ರಾಮುಖ್ಯವಾದದ್ದು. ಪೌಲನು ತನ್ನ ಎರಡನೆಯ ಸೇವಾ ಪ್ರಯಾಣಕ್ಕೆ ಸೀಲನನ್ನು ತನ್ನ ಜೊತೆಪ್ರಯಾಣಿಕನನ್ನಾಗಿ ಯಾಕೆ ಆರಿಸಿಕೊಂಡನೆಂಬುದಕ್ಕೆ ಈ) 2 ರ ಉತ್ತರದಿಂದ ಹಲವಾರು ಉತ್ತಮ ಕಾರಣಗಳನ್ನು ನೀವು ಕಾಣಬಹುದು. ನಿಮ್ಮ ಸಭೆಯಲ್ಲಿರುವ ಸಭಾಪಾಲಕರು ತಮ್ಮ ಜೊತೆ ಕೆಲಸಗಾರರನ್ನು ಹೇಗೆ ಆರಿಸಿಕೊಳ್ಳುತ್ತಾರೆ? ಒಬ್ಬ ಜೊತೆ ಕೆಲಸಗಾರನನ್ನು ಆಯ್ಕೆಮಾಡಲು ಇರುವ ಪ್ರಮುಖ ಅವಶ್ಯಕತೆಗಳೇನು?

## ಊ) ಉಪದೇಶಿಸು ಮತ್ತು ಬೋಧಿಸು!

ಮಾರ್ಕನೆನಿಸಿಕೊಳ್ಳುವ ಯೋಹಾನನ ಕುರಿತಾಗಿ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಅಧ್ಯಯನಕ್ಕೆ ***ಎರಡನೆಯ ಅವಕಾಶ*** ಎಂಬ ಶೀರ್ಷಿಕೆಯನ್ನು ಕೊಡಿರಿ. ಮಾರ್ಕನೆನಿಸಿಕೊಳ್ಳುವ ಯೋಹಾನನನು ಈ ಕೆಳಗಿನ ಹೊಸ ಒಡಂಬಡಿಕೆಯ ವಚನಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ: ಅ. ಕೃ. 12:12, 25, 13:5, 3, 15:37, 39, ಕೊಲೊಸ್ಸೆ. 4:10; 2 ತಿಮೋ. 4:1; ಫಿಲೋ. 24:1, 1 ಪೇತ್ರ. 5:13. ಆತನು ಮಾರ್ಕನು ಬರೆದ ಸುವಾರ್ತೆಯ ಬರಹಗಾರನಾಗಿರಲಿಕ್ಕೂ ಸಾಧ್ಯತೆಯಿದೆ. ನಿಮ್ಮ ಸತ್ಯವೇದ ಅಧ್ಯಯನಕ್ಕೆ ಈ ಕೆಳಗಿನ ಪ್ರಶ್ನೆಗಳ ಉತ್ತರಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿರಿ:

1) ಪೌಲ ಮತ್ತು ಬಾರ್ನಬರು ತಮ್ಮ ಎರಡನೆಯ ಸೇವಾ ಪ್ರಯಾಣಕ್ಕಾಗಿ ಮಾರ್ಕನೆನಿಸಿಕೊಳ್ಳುವ ಯೋಹಾನನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಲು ಯಾಕೆ ಭಿನ್ನಾಭಿಪ್ರಾಯಪಟ್ಟರು?
2) ಪೌಲನು ಬಾರ್ನಬನ ಆಲೋಚನೆಗೆ ಸಮ್ಮತಿಸಿದ್ದರೆ ಏನಾಗುತಿತ್ತು?
3) ಹತ್ತು ವರ್ಷಗಳ ನಂತರ ಪೌಲ ಮತ್ತು ಮಾರ್ಕನೆನಿಸಿಕೊಳ್ಳುವ ಯೋಹಾನರ ನಡುವೆ ಎಂತಹ ಸಂಬಂಧವಿತ್ತು?
4) ಮಾರ್ಕನೆನಿಸಿಕೊಳ್ಳುವ ಯೋಹಾನ ಮತ್ತು ಪೇತ್ರರು ಬಹುಶಃ ಹೇಗೆ ಒಬ್ಬರಿಗೊಬ್ಬರು ಪರಿಚಯವಾಗಿರಬಹುದು?
5) ಪೇತ್ರ ಮತ್ತು ಮಾರ್ಕನೆನಿಸಿಕೊಳ್ಳುವ ಯೋಹಾನರ ನಡುವಿನ ಸ್ನೇಹವು ಯಾವುದಕ್ಕೆ ನಡೆಸಿತು?
6) ಬಾರ್ನಬನು ಮಾರ್ಕನೆನಿಸಿಕೊಳ್ಳುವ ಯೋಹಾನನಿಗೆ ಎರಡನೆಯ ಅವಕಾಶವನ್ನು ಕೊಟ್ಟಿದ್ದು ಸರಿಯಾದದ್ದೋ?

7) ನಾವು ಏನು ಮಾಡತಕ್ಕದ್ದು? ನಾವು ಇತರರಿಗೆ ಎರಡನೆಯ ಅವಕಾಶವನ್ನು ಯಾವಾಗ ಕೊಡಬೇಕು? ನಾವು ಇತರರಿಗೆ ಎರಡನೆಯ ಅವಕಾಶವನ್ನು ಯಾವಾಗಲೂ ಕೊಡುತ್ತಿರಬೇಕೋ?

# ಪಾಠ 41. ಪೌಲ ಮತ್ತು ಸೀಲರೊಡನೆ ತಿಮೋಥೆಯನು, 15:40–16:5

## ಅ) ವಾಕ್ಯಭಾಗ

ಪೌಲ ಮತ್ತು ಸೀಲರು ಸಿರಿಯದ ಅಂತಿಯೋಕ್ಯದಿಂದ ಉತ್ತರಕ್ಕೆ ಪ್ರಯಾಣಿಸಿದರು. ನಂತರ ಪೌಲನು ತನ್ನ ಮೊದಲ ಸೇವಾ ಪ್ರಯಾಣದ ಸಂದರ್ಭದಲ್ಲಿ ಸ್ಥಾಪಿಸಿದ ಸಭೆಗಳನ್ನು ಸಂದರ್ಶಿಸಲು ಅವರು ಪಶ್ಚಿಮಕ್ಕೆ ತಿರುಗಿಕೊಂಡರು: ದೆರ್ಬೆ, ಲುಸ್ತ್ರ ಮತ್ತು ಇಕೋನಿಯಗಳು ಪ್ರಸ್ತಾಪಿಸಲ್ಪಟ್ಟಿವೆ. ಲುಸ್ತ್ರದಲ್ಲಿ ಪೌಲನು ತನ್ನ ತಂಡಕ್ಕೆ ತಿಮೋಥಿ ಎಂಬ ಒಬ್ಬ ಹೊಸ ವ್ಯಕ್ತಿಯನ್ನು ಸೇರಿಸಿಕೊಂಡನು. ಅನ್ಯವಿಶ್ವಾಸಿಗಳು ಅನುಸರಿಸುವುದಕ್ಕಾಗಿ ಯೆರೂಸಲೇಮಿನಲ್ಲಿ ಅಪೋಸ್ತಲರು, ಹಿರಿಯರು ತೀರ್ಮಾನಿಸಿದ ನಿಯಮಗಳು ಸಂಖ್ಯೆಯಲ್ಲಿ ಬೆಳೆಯುತ್ತಿದ್ದ ಸಭೆಗಳಿಗೆ ರವಾನಿಸಲ್ಪಟ್ಟವು.

## ಆ) ಟಿಪ್ಪಣಿ

*ತಿಮೋಥಿ* (ವ. 1): ಹೊಸ ಒಡಂಬಡಿಕೆಯಲ್ಲಿ ಇದೇ ಮೊದಲ ಬಾರಿಗೆ ತಿಮೋಥಿಯನು ಪ್ರಸ್ತಾಪಿಸಲ್ಪಟ್ಟಿದ್ದಾನೆ. ಈ ಸಂದರ್ಭದಲ್ಲಿ ಆತನು ಒಬ್ಬ ಯೌವ್ವನಸ್ಥನಾಗಿದ್ದಿರಬಹುದು, ಬಹುಶಃ ಹದಿಹರೆಯ ವಯಸ್ಕನಾಗಿದ್ದಿರಬಹುದು. ಇದು ನಮಗೆ ಹೇಗೆ ಗೊತ್ತು? 1 ತಿಮೋ. 4:12 ರಲ್ಲಿ (15 ವರ್ಷಗಳ ನಂತರ ಬರೆಯಲ್ಪಟ್ಟಾಗ) ಪೌಲನು ಆತನನ್ನು ಇನ್ನೂ 'ಯೌವನಸ್ಥನೆಂದೇ' ಕರೆಯುತ್ತಾನೆ. ತಿಮೋಥಿಯು ಪೌಲನಿಗೆ ನಿಕಟವಾದ ಜೊತೆ ಸೇವಕನಾಗಿ ಆತನ ಎರಡನೆಯ ಮತ್ತು ಮೂರನೆಯ ಸೇವಾ ಪ್ರಯಾಣದಲ್ಲಿ ಆತನೊಂದಿಗಿದ್ದನು. ಪೌಲನು ಈ ಅವಧಿಯಲ್ಲಿ ತನ್ನಿಂದ ಬರೆಯಲ್ಪಟ್ಟ ಪತ್ರಿಕೆಗಳಲ್ಲಿ ಆತನ ಕುರಿತು ಪ್ರಸ್ತಾಪಿಸುತ್ತಾನೆ (1 ಥೆಸ. 1:1; 3:2, 6; 2 ಥೆಸ. 1:1; 1 ಕೊರಿ. 4:17, 16:10; 2 ಕೊರಿ. 1:1, 19; ರೋಮಾ. 16:21). ನಂತರ ಪೌಲನು ತನ್ನ ಸೆರೆಮನೆಯ ಪತ್ರಿಕೆಗಳಲ್ಲಿ ಆತನ ಕುರಿತು ಉಲ್ಲೇಖಿಸುತ್ತಾನೆ (ಫಿಲಿಪ್ಪಿ. 1:1; 2:19, 22; ಕೊಲೊಸ್ಸೆ. 1:1; ಫಿಲೋ. 1). ಕೊನೆಯಲ್ಲಿ ಪೌಲನು ತನ್ನ ಎರಡು ಸಭಾಪಾಲನಾ ಪತ್ರಿಕೆಗಳನ್ನು ಆತನಿಗೆ ಬರೆಯುತ್ತಿದ್ದಾನೆ. ಹಿಬ್ರಿಯರಿಗೆ ಬರೆದ ಪತ್ರಿಕೆಯಲ್ಲೂ ತಿಮೋಥಿಯು ಪ್ರಸ್ತಾಪಿಸಲ್ಪಟ್ಟಿದ್ದಾನೆ (13:23).

*ಅವನಿಗೆ ಸುನ್ನತಿ ಮಾಡಿಸಿದನು* (ವ. 3): ಪೌಲನು ತಿಮೋಥಿಯನ್ನು ತನ್ನ ಪ್ರಯಾಣದಲ್ಲಿ ಜೊತೆ ಸೇವಕನನ್ನಾಗಿ ಸೇರಿಸಿಕೊಳ್ಳುವುದಕ್ಕಿಂತ ಮುಂಚೆ ಸುನ್ನತಿ ಮಾಡಿಸಿದನು. ಇ) 4 ಮತ್ತು ಈ) 2 ರ ಅಡಿಯಲ್ಲಿ ಇನ್ನೂ ಹೆಚ್ಚಿನ ಅಂಶಗಳನ್ನು ನೋಡಿರಿ!

*ಯೆರೂಸಲೇಮಿನಲ್ಲಿದ್ದ ಅಪೋಸ್ತಲರು, ಹಿರಿಯರು ತೀರ್ಮಾನಿಸಿದ ನಿಯಮಗಳನ್ನು* (ವ. 4): ಇದು ಅನ್ಯವಿಶ್ವಾಸಿಗಳು ಹೇಗೆ ನಡೆದುಕೊಳ್ಳಬೇಕೆಂಬುದರ ಕುರಿತಾಗಿ ಯೆರೂಸಲೇಮಿನ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಧಾರವನ್ನು ಉಲ್ಲೇಖಿಸುತ್ತದೆ (ಅ. ಕೃ. 15 ನ್ನು ನೋಡಿರಿ). ಪೌಲನ ಸೇವೆಗೆ

ಸಂಬಂಧಿಸಿದಂತೆ ಇದೇ ಕೊನೆಯ ಬಾರಿಗೆ ಈ ನಿಯಮಗಳು ಇಲ್ಲಿ ಉಲ್ಲೇಖಿಸಲ್ಪಟ್ಟಿದೆ (ಆದರೆ 21:25 ರಲ್ಲಿ ಯಾಕೋಬನು ಮತ್ತು ಹಿರಿಯರು ಇದನ್ನು ಪುನಃ ಉಲ್ಲೇಖಿಸುತ್ತಾರೆ). ಪೌಲನು ಅದನ್ನು ತನ್ನ ಪತ್ರಿಕೆಗಳಲ್ಲಿ ಎಲ್ಲಿಯೂ ಪ್ರಸ್ತಾಪಿಸಲಿಲ್ಲ.

## ಇ) ಪಠ್ಯ ಪ್ರಶ್ನೆಗಳು

1. ನಕ್ಷೆಯಲ್ಲಿ ಈ ಸ್ಥಳಗಳನ್ನು ಗುರುತಿಸಿರಿ: ಸಿರಿಯಾದ ಅಂತಿಯೋಕ್ಯ, ದೆರ್ಬೆ, ಲುಸ್ತ್ರ ಮತ್ತು ಇಕೋನಿಯ!
2. ಹೊಸದಾಗಿ ಸ್ಥಾಪಿಸಲ್ಪಟ್ಟ ಸಭೆಗಳು ಹೇಗೆ ವಿವರಿಸಲ್ಪಟ್ಟಿವೆ?
3. ನಾವು ಈ ವಾಕ್ಯಭಾಗದಿಂದ ತಿಮೋಥಿಯ ಕುರಿತು ಯಾವ ಮಾಹಿತಿಗಳನ್ನು ಪಡೆದುಕೊಳ್ಳುತ್ತೇವೆ?
4. ಈ ವಾಕ್ಯಭಾಗದ ಪ್ರಕಾರ ಪೌಲನು ತಿಮೋಥಿಗೆ ಯಾಕೆ ಸುನ್ನತಿ ಮಾಡಿಸಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. 'ಪೌಲನು ಸಹೋದರರಿಂದ ಕರ್ತನ ಕೃಪೆಗೆ ಒಪ್ಪಿಸಲ್ಪಟ್ಟನು' ಎಂಬ ಹೇಳಿಕೆಯ ಮೂಲಕ ಲೂಕನು ಏನನ್ನು ಅರ್ಥೈಸುತ್ತಿದ್ದಾನೆ (ವ. 40)?
2. ತಿಮೋಥಿಗೆ ಪೌಲನು ಯಾಕೆ ಸುನ್ನತಿ ಮಾಡಿಸಿದನು? ಈ ಪ್ರಶ್ನೆಯ ಉತ್ತರಕ್ಕೆ ಸತ್ಯವೇದ ಶಾಸ್ತ್ರಜ್ಞರು ಒಪ್ಪಿಕೊಳ್ಳುವುದಿಲ್ಲ. ಈ ಪ್ರಶ್ನೆಯನ್ನು ನೀವು ಹೇಗೆ ಉತ್ತರಿಸುತ್ತೀರಿ?
3. ತಿಮೋಥಿಗೆ ಸುನ್ನತಿ ಮಾಡಿಸುವ ಪೌಲನ ನಿರ್ಧಾರವನ್ನು ಅನ್ಯವಿಶ್ವಾಸಿಗಳ ಕುರಿತು ಯೆರೂಸಲೇಮ್ ಸಮ್ಮೇಳನದಲ್ಲಿ ತೆಗೆದುಕೊಳ್ಳಲ್ಪಟ್ಟ ನಾಲ್ಕು ನಿರ್ಧಾರಗಳೊಂದಿಗೆ ಹೋಲಿಸಿರಿ (ಅ. ಕೃ. 15). ಇವೆರಡೂ ಸನ್ನಿವೇಶಗಳು ಒಂದೇ ಸುವಾರ್ತಿಕ ತತ್ವಗಳನ್ನು ವಿವರಿಸುತ್ತವೆ ಎಂದು ನೀವು ಆಲೋಚಿಸುತ್ತೀರೋ? ಅಥವಾ ಇವೆರಡೂ ಸಂಪೂರ್ಣವಾಗಿ ವ್ಯತ್ಯಾಸವಾದವುಗಳೋ? ನಿಮ್ಮ ಕಾರಣಗಳನ್ನು ತಿಳಿಸಿರಿ!

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ) 3 ರ ಪ್ರಶ್ನೆಯ ಉತ್ತರದ ಕಡೆಗೆ ಹಿಂತಿರುಗಿರಿ. ಇಂದು ದಕ್ಷಿಣ ಭಾರತದ ಸಭೆಗಳು ಇದೇ ರೀತಿಯ ಅಡ್ಡಿಗಳನ್ನು ತೆಗೆದುಹಾಕಲು ಸಾಧ್ಯವಾಗುವ ಯಾವುದಾದರೂ ಉದಾಹರಣೆಗಳನ್ನು ನೀವು ಆಲೋಚಿಸಬಲ್ಲಿರೋ? ಅನೇಕ ಉದಾಹರಣೆಗಳನ್ನು ಕೊಡಿರಿ! ಈ ರೀತಿಯ ಅಡ್ಡಿಗಳನ್ನು ತೆಗೆದುಹಾಕಲು ನಮ್ಮ ಸಭೆಗಳಿಗೆ ನಿಜವಾಗಲೂ ಸಾಧ್ಯವೋ? ಯಾಕೆ? ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

***ದಕ್ಷಿಣ ಭಾರತದ ಹಿನ್ನಲೆಯಲ್ಲಿ ಸುವಾರ್ತೆಯನ್ನು ಸಾರಲು ಇರುವ ಸಾಂಸ್ಕೃತಿಕ ಅಡ್ಡಿಗಳು*** ಎಂಬ ವಿಷಯದ ಕುರಿತು ಸಭಾನಾಯಕರುಗಳ ಒಂದು ವಿಚಾರಗೋಷ್ಠಿಯಲ್ಲಿ ನೀವು ಸಂಕ್ಷಿಪ್ತವಾಗಿ ಮಾತನಾಡಬೇಕೆಂದು ನಿಮ್ಮನ್ನು ಕೇಳಿಕೊಳ್ಳಲಾಗಿದೆ.

ಈ ವಿಷಯವು ಬಹಳ ಕಠಿಣವಾದದ್ದು (ಮತ್ತು ಬಹಳ ಸೂಕ್ಷ್ಮವಾದದ್ದು!). ಹಾಗಾಗಿ ನೀವು ***ಹೇಳಬೇಕೆಂಬ*** (ಮತ್ತು ***ಹೇಗೆ*** ಹೇಳಬೇಕೆಂಬ) ಸಂಗತಿಗಳನ್ನು ವಿಚಾರಗೋಷ್ಠಿಯಲ್ಲಿ ಭಾಗವಹಿಸುವವರ – ಹಿನ್ನಲೆ ಮತ್ತು ಇಂತಹ ವಿಷಯಗಳ ಕುರಿತು ಆಲೋಚಿಸಲು ಅವರು ತೋರಿಸುವ ಆಸಕ್ತಿಯ – ಮೇಲೆ ಆಧರಿಸಿರಿ. ಈ ಕೆಳಗಿನ ಐದು ಅಂಶಗಳ ಕುರಿತು ನೀವು ಮಾತನಾಡಲು ನಾನು ಸಲಹೆ ಕೊಡುತ್ತೇನೆ:

1. ಸಂಸ್ಕೃತಿಯ 5 ಪ್ರಮುಖ ಅಂಶಗಳು

   - ಭಾಷೆ
   - ಆಹಾರ
   - ಉಡುಪು
   - ಸಂಗೀತ, ಕಲೆ ಮತ್ತು ಸಾಹಿತ್ಯ
   - ಬೇರೆ ಜನರೊಂದಿಗೆ ಮಾಡುವ ವಹಿವಾಟು, ವರ್ತನೆ

2. ಅವಿಶ್ವಾಸಿಗಳಿಗೆ ಸುವಾರ್ತೆಯನ್ನು ಸಾರುವಾಗ ಈ ಕ್ಷೇತ್ರಗಳಲ್ಲಿ ನಿಮಗೆ ಎದುರಾಗುವ ಅಡ್ಡಿಗಳ ಕುರಿತು ಪ್ರತಿಯೊಂದಕ್ಕೂ ಒಂದೊಂದು ಉದಾಹರಣೆಗಳನ್ನು ಕೊಡಿರಿ. ಉದಾಹರಣೆಗೆ:

   - ಭಾಷೆ: ಅನೇಕ 'ಕ್ರಿಸ್ತೀಯ ಹೇಳಿಕೆಗಳು'" ಸ್ಥಳೀಯ ಜನರಿಂದ ಸಂಪೂರ್ಣವಾಗಿ ತಪ್ಪಾಗಿ ಅರ್ಥೈಸಲ್ಪಡಬಹುದು.
   - ಆಹಾರ: ವಿಶ್ವಾಸಿಗಳು ಊಟ ಮಾಡುವ ಮಾಂಸಹಾರವು ಕೆಲವು ಗುಂಪಿನ ಜನರನ್ನು ಕೆಣಕಬಹುದು.
   - ಉಡುಪು: ವಿಶ್ವಾಸಿಗಳು ಹಳ್ಳಿಗಳಲ್ಲಿ ಆಧುನಿಕ ಪಾಶ್ಚಾತ್ಯಾ ಉಡುಪುಗಳನ್ನು ಹಾಕಿಕೊಳ್ಳುವುದು (ಹೆಂಗಸರು ಸಣ್ಣ ಅಂಗಿಗಳನ್ನು ಧರಿಸಿಕೊಳ್ಳುವಂತದ್ದು, ಇತ್ಯಾದಿ) ಅನೇಕ ಜನರನ್ನು ಕೆಣಕಬಹುದು. ಕ್ರೈಸ್ತರು ನೀತಿಗೆಟ್ಟವರು ಎಂಬುದಾಗಿ ಜನರು ಹೇಳಬಹುದು.

- ಸಂಗೀತ, ಕಲೆ ಮತ್ತು ಸಾಹಿತ್ಯ: ಹಳ್ಳಿಗಳಲ್ಲಿ ಪಾಶ್ಚಿಮಾತ್ಯ ಶೈಲಿಯನ್ನು ಅಥವಾ 'ದೊಡ್ಡ ಪಟ್ಟಣದ' ಸಂಸ್ಕೃತಿಯನ್ನು ಬಿಂಬಿಸುವ ಒಂದು ಒಳ್ಳೆಯ ಕ್ರೈಸ್ತ ಸಿನಿಮಾವನ್ನು ತೋರಿಸುವುದರಿಂದ ಜನರನ್ನು ಗೊಂದಲಕ್ಕೆ ಈಡು ಮಾಡಬಹುದು.

- ಬೇರೆಯವರೊಂದಿಗೆ ಮಾಡುವ ವಹಿವಾಟು, ವರ್ತನೆ: ಪುರುಷರು ಸ್ತ್ರೀಯರ ಕೈಗಳನ್ನು ಕುಲಕುವಾಗ ತಪ್ಪು ಕಲ್ಪನೆಗಳು ಹುಟ್ಟಬಹುದು.

3. ನಾವು ಸುವಾರ್ತೆ ಸಾರುವುದನ್ನು ಅವಿಶ್ವಾಸಿಗಳು ಕೇಳುವಾಗ ನಮ್ಮ ಸಭೆಗಳು ಸ್ಪಷ್ಟವಾಗಿ ಅವರನ್ನು ಗೊಂದಲಪಡಿಸುವ ಅಥವಾ ಕೆಣಕುವ ಒಂದು ಸಾಂಸ್ಕೃತಿಕ ಹೇಳಿಕೆಯನ್ನು ಈ ಪ್ರತಿಯೊಂದು ಕ್ಷೇತ್ರಗಳಿಂದ ಗುರುತಿಸಿರಿ.

4. ಈ ಸಾಂಸ್ಕೃತಿಕ ಅಡ್ಡಿಗಳನ್ನು ನಾವು ತೆಗೆದುಹಾಕಲು ಸಾಧ್ಯವೋ ಎಂಬುದಾಗಿ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದವರೊಂದಿಗೆ ಚರ್ಚಿಸಿರಿ. ಯಾಕೆ? ಯಾಕೆ ಇಲ್ಲ? ಅವುಗಳನ್ನು ಹೇಗೆ ತೆಗೆದುಹಾಕಬಹುದು?

5. 1 ಕೊರಿ. 9:22 ರಲ್ಲಿರುವ 'ಬಲವಿಲ್ಲದವರನ್ನು ಸಂಪಾದಿಸುವುದಕ್ಕಾಗಿ ಬಲವಿಲ್ಲದವರಿಗೆ ಬಲವಿಲ್ಲದವನಾದೆನು'" ಎಂಬ ಪೌಲನ ಮಾತಿನೊಂದಿಗೆ ನಿಮ್ಮ ಮಾತನ್ನು ಕೊನೆಗೊಳಿಸಿರಿ.

# ಭಾಗ 5

# ಎರಡನೆಯ ಸೇವಾ ಪ್ರಯಾಣ:

# ಅ. ಕೃ. 16:6 – 18:22

# ಮೂರನೆಯ ಸೇವಾ ಪ್ರಯಾಣ 1:

# ಅ. ಕೃ. 18:23 – 19:20

**ಪೀಠಿಕೆ**

ಆದಿಸಭೆಯ ಲೂಕನ ಐದನೆಯ ಚಿತ್ರಣವು ಅನ್ಯಲೋಕಕ್ಕೆ ಸುವಾರ್ತೆಯು ಇನ್ನೂ ಪಶ್ಚಿಮಕ್ಕೆ ಸಾಗಿದ ಭೌಗೋಳಿಕ ವಿಸ್ತರಣೆಯ ದಾಖಲೆಯಾಗಿದೆ. ಪೌಲನು ತನ್ನ ಎರಡನೆಯ ಸೇವಾ ಪ್ರಯಾಣದಲ್ಲಿ ತನಗೆ ಸಹಾಯ ಮಾಡುವಂತೆ ಬೇಡಿಕೊಂಡ ಒಬ್ಬ ಮೆಕೆದೋನಿಯನ ದರ್ಶನವನ್ನು ಕಾಣುತ್ತಾನೆ. ಹಾಗಾಗಿ ಪೌಲ, ಸೀಲ ಮತ್ತು ಅವರ ಸಂಗಡಿಗರು ಇಂದು ಯೂರೋಪ್ ಎಂದು ಕರೆಯಲ್ಪಡುವ ಖಂಡಕ್ಕೆ ಹಡಗುಪ್ರಯಾಣ ಮಾಡಿದರು. ಮೆಕೆದೋನಿಯ ಮತ್ತು ಅಖಾಯದಲ್ಲಿ ಸಭೆಗಳು ಸ್ಥಾಪಿಸಲ್ಪಟ್ಟವು. ಪೌಲನು ತನ್ನ ಮೂರನೆಯ ಸೇವಾ ಪ್ರಯಾಣದಲ್ಲಿ ರೋಮನ್ ಪ್ರಾಂತವಾದ ಏಷ್ಯಾದ ರಾಜಧಾನಿಯಾದ ಎಫೆಸದಲ್ಲಿ ಎರಡು ವರ್ಷಗಳ ಕಾಲ ಒಂದು 'ಸತ್ಯವೇದ ಶಾಲೆಯನ್ನು' ನಡೆಸಿದನು.

*ಹೀಗೆ ಕರ್ತನ ವಾಕ್ಯವು ವಿಸ್ತಾರವಾಗಿ ಹರಡುತ್ತಾ ಪ್ರಬಲವಾಯಿತು* (ಅ. ಕೃ. 19:20).

# ಪಾಠ 42. ಪೌಲನಿಗೆ ಉಂಟಾದ ಮಕೆದೋನಿಯನ ದರ್ಶನ, 16:6–10

## ಅ) ವಾಕ್ಯಭಾಗ

ಇದು ಮಾರ್ಗದರ್ಶನದ ಕುರಿತಾದ ಕಥೆಯಾಗಿದೆ. ಹಿಂದಿನ ವಾಕ್ಯಭಾಗದಲ್ಲಿ ಪೌಲ ಮತ್ತು ಆತನ ಸಂಗಡಿಗರು ಸೇವೆಯಲ್ಲಿ ಬಹಳ ಚಟುವಟಿಕೆಯುಳ್ಳವರಾಗಿ ಪಾಲ್ಗೊಂಡಿದ್ದರು. ಈಗ ಪವಿತ್ರಾತ್ಮನು ಏಷ್ಯಾ ಪ್ರಾಂತ್ಯದಲ್ಲಿ ಸುವಾರ್ತೆ *ಸಾರಬಾರದೆಂದೂ* ಬಿಥೂನಿಯವನ್ನು *ಪ್ರವೇಶಿಸಬಾರದೆಂದೂ* ತಿಳಿಸಿದನು. ಕೊನೆಗೆ ಪೌಲನು ಮೆಕದೋನಿಯದವನ ದರ್ಶನದ ಮೂಲಕ ಮೆಕದೋನಿಯಕ್ಕೆ ದಾಟಿ ಹೋಗಿ ಅಲ್ಲಿ ಸುವಾರ್ತೆಯನ್ನು ಸಾರುವಂತೆ ಕರೆಯಲ್ಪಟ್ಟನು.

## ಆ) ಟಿಪ್ಪಣಿ

*ಪೌಲನು ಮತ್ತು ಆತನ ಜೊತೆಯವರು* (ವ. 6): ತಿಮೋಥಿ ಮತ್ತು ಸೀಲರು ಪೌಲನ ಸಂಗಡಿಗರಾಗಿದ್ದರು.

*ಫ್ರಿಗಯ ಹಾಗೂ ಗಲಾತ್ಯ ಪ್ರದೇಶಗಳ* (ವ. 6): ಈ ಹೆಸರುಗಳ ಮೂಲಕ ಲೂಕನು ಯಾವುದರ ಕುರಿತಾಗಿ ಉಲ್ಲೇಖಿಸುತ್ತಾನೆಂದು ಸ್ಪಷ್ಟವಾಗಿಲ್ಲ. ಈ ಸಮಯದಲ್ಲಿ ಹಳೆಯ ದೇಶ ಮತ್ತು ಪ್ರಾಂತ್ಯವಾದ ಫ್ರಿಗಯವು ರೋಮನ್ ಪ್ರಾಂತ್ಯಗಳಾದ ಏಷ್ಯಾ ಮತ್ತು ಗಲಾತ್ಯದ ನಡುವೆ ವಿಭಾಗವಾಗಿತ್ತು. ಈ ಸಮಯದಲ್ಲಿ ಗಲಾತ್ಯ ಪ್ರಾಂತ್ಯವು ವಿಸ್ತಾರವಾದ ರೋಮನ್ ಪ್ರಾಂತ್ಯವಾದ ಗಲಾತ್ಯದಲ್ಲಿ ಒಳಗೊಂಡಿತ್ತು (ಒಂದು ಒಳ್ಳೆಯ ಸತ್ಯವೇದ ನಕಾಶೆಯು ಇದನ್ನು ತೋರಿಸಬಲ್ಲದು). ಜಾನ್ ಸ್ಟಾಟ್‌ರವರು ಈ ಹೇಳಿಕೆಯನ್ನು 'ಗಲಾತ್ಯ ಪ್ರಾಂತ್ಯದ ಫ್ರಿಗಯ ಪ್ರದೇಶವೆಂದು' ಅರ್ಥೈಸುತ್ತಾರೆ, ಇದು ಭೌಗೋಳಿಕವಾಗಿ ಸರಿಯಾದ ಅರ್ಥವನ್ನು ನೀಡುತ್ತದೆ.

*ಏಷ್ಯಾ ಪ್ರಾಂತ್ಯ* (ವ. 6): ಹೊಸ ಒಡಂಬಡಿಕೆಯ ದಿನಗಳಲ್ಲಿ ಏಷ್ಯಾ ಪ್ರಾಂತ್ಯವು ಮೂಸಿಯದ, ಲೂದ್ಯಾದ ಮತ್ತು ಪಶ್ಚಿಮ ಫ್ರಿಗಯಾದ ಹಳೆಯ ಪ್ರಾಂತ್ಯಗಳನ್ನು ಒಳಗೊಂಡಿತ್ತು.

*ಮೂಸಿಯಾ* (ವ. 7): ಈ ಪ್ರಾಂತ್ಯವು ರೋಮನ್ ಪ್ರಾಂತ್ಯವಾದ ಏಷ್ಯಾದ ವಾಯುವ್ಯ ಭಾಗವಾಗಿತ್ತು. ತ್ರೋವವು ಮಾಸಿಯಾದಲ್ಲಿತ್ತು.

*ಬಿಥೂನಿಯ* (ವ. 7): ಬಿಥೂನಿಯ – ಪೋಂಥಸ್ ಎಂಬುದು ಕಪ್ಪು ಸಮುದ್ರದ ದಕ್ಷಿಣ ತೀರದಲ್ಲಿದ್ದ ರೋಮನ್ ಪ್ರಾಂತ್ಯದ ಹೆಸರಾಗಿತ್ತು.

*ಯೇಸುವಿನ ಆತ್ಮ* (ವ. 7): ಈ ಪದವೂ ಮತ್ತು ವ. 6 ರಲ್ಲಿರುವ ‘ಪವಿತ್ರಾತ್ಮನು’ ಎಂಬ ಪದವು ಒಂದೇ ಅರ್ಥವನ್ನು ಸೂಚಿಸುತ್ತದೆ.

*ತ್ರೋವ* (ವ. 8): ಇದು ರೋಮನ್ ನಿವಾಸ ಸ್ಥಳವಾಗಿದ್ದು ಒಂದು ಪ್ರಮುಖವಾದ ಬಂದರು ಸಹ ಆಗಿತ್ತು, ಇಲ್ಲಿಂದ ಅನೇಕ ಹಡಗುಗಳು ಪಶ್ಚಿಮದಲ್ಲಿದ್ದ ಮೆಕೆದೋನಿಯಕ್ಕೂ ಮತ್ತು ದಕ್ಷಿಣದಲ್ಲಿದ್ದ ಏಷ್ಯಾ ಮೈನರ್‌ನ ಕರಾವಳಿಗೂ ಪ್ರಯಾಣಿಸುತ್ತಿದ್ದವು. ಪೌಲನು ತನ್ನ ಮೂರನೆಯ ಸೇವಾ ಪ್ರಯಾಣದಲ್ಲಿದ್ದಾಗ ಎರಡು ಬಾರಿ ತ್ರೋವಕ್ಕೆ ಹಿಂತಿರುಗಿದನು. ಮೊದಲ ಬಾರಿ ಹಿಂತಿರುಗಿದ್ದು ಎಫೆಸದಲ್ಲಿನ ತನ್ನ ಅನೇಕ ದಿನಗಳ ಸೇವೆಯ ನಂತರ (2 ಕೊರಿ. 2:12). ಎರಡನೆಯ ಬಾರಿ ಆತನು ಅಲ್ಲಿ ಸ್ಥಾಪಿಸಲ್ಪಟ್ಟಿದ್ದ ಸಭೆಯಲ್ಲಿ ಬೋಧಿಸಿದನು (ಅ. ಕೃ. 20:5–12)

*ಮೆಕದೋನಿಯ* (ವ. 9): ಇದು ಒಂದು ರೋಮ್ ಪ್ರಾಂತ್ಯವಾಗಿತ್ತು ಮತ್ತು ಗ್ರೀಕ್ ಪರ್ಯಾಯ ದ್ವೀಪದ ಉತ್ತರ ಭಾಗದಲ್ಲಿ ಸ್ಥಾಪಿಸಲ್ಪಟ್ಟಿತ್ತು.

## ಇ) ಪಠ್ಯ ಪ್ರಶ್ನೆಗಳು

1. ಈ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿರಿ: ಫ್ರಿಗಿಯಾ, ಗಲಾತ್ಯ, ಮೂಸಿಯಾ, ಬಿಥೂನಿಯ, ತ್ರೋವ ಮತ್ತು ಮೆಕೆದೋನಿಯ!
2. ವ. 6 ರಲ್ಲಿ ಪವಿತ್ರಾತ್ಮನ ಕಾರ್ಯವೇನು?
3. ವ. 7 ರಲ್ಲಿ ಪವಿತ್ರಾತ್ಮನ ಕಾರ್ಯವೇನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ವ. 6–7 ರಲ್ಲಿ ಪವಿತ್ರಾತ್ಮನು ಮಾಡಿದ ಕಾರ್ಯದ ಕುರಿತು ಓದುತ್ತೇವೆ. ಆದರೆ ಪವಿತ್ರಾತ್ಮನು ಹೇಗೆ ಕಾರ್ಯಮಾಡಿದನೆಂಬುದರ ಕುರಿತು ಯಾವ ಸಂಗತಿಯೂ ಹೇಳಲ್ಪಟ್ಟಿಲ್ಲ. ಈ ಸನ್ನಿವೇಶಗಳಲ್ಲಿ ಪವಿತ್ರಾತ್ಮನು ಹೇಗೆ ಕಾರ್ಯಮಾಡಿದ್ದಿರಬಹುದೆಂದು ನೀವು ಆಲೋಚಿಸುತ್ತೀರಿ? ಇದರ ಕುರಿತು ಚರ್ಚಿಸಿರಿ.
2. ಮೆಕೆದೋನಿಯದವನ ದರ್ಶನಕ್ಕೆ ಪೌಲನು ಹೇಗೆ ಪ್ರತಿಕ್ರಿಯಿಸಿದನು?
3. ವ. 10 ರಲ್ಲಿರುವ ಭಾಷೆಯು ಆಶ್ಚರ್ಯಕರವಾದದ್ದು: ‘ದೇವರು ನಮ್ಮನ್ನು ಕರೆಯುತ್ತಿದ್ದಾನೆ’. ಇದರ ಮಹತ್ವವೇನು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ಕಥೆಯಲ್ಲಿ ಪೌಲ ಮತ್ತು ಆತನ ಸಂಗಡಿಗರು ದೇವರಿಂದ ಹೇಗೆ ಸಕಾರಾತ್ಮಕವಾಗಿಯೂ ನಕಾರಾತ್ಮಕವಾಗಿಯೂ ಉಪಯೋಗಿಸಲ್ಪಟ್ಟರೆಂದು ನಾವು ನೋಡುತ್ತೇವೆ: ಅವರು ಎಲ್ಲಿ ಬೋಧಿಸಬಾರದು. ಅವರು ಎಲ್ಲಿಗೆ ಹೋಗಬಾರದು. ಅವರು ಎಲ್ಲಿಗೆ ಹೋಗಿ ಬೋಧಿಸಬೇಕು. ಕಳೆದ ದಿನಗಳಲ್ಲಿ ದೇವರು ನಿಮ್ಮನ್ನು ಮತ್ತು ನಿಮ್ಮ ಸಭೆಯನ್ನು ಅಥವಾ ನಿಮ್ಮ ಸೇವೆಯನ್ನು – ನಕಾರಾತ್ಮಕವಾಗಿಯೂ ಸಕಾರಾತ್ಮಕವಾಗಿಯೂ – ಹೇಗೆ ನಡೆಸಿದನೆಂದು ಹಂಚಿಕೊಳ್ಳಿರಿ.

## ಊ) ಉಪದೇಶಿಸು ಮತ್ತು ಬೋಧಿಸು!

1. ಅ. ಕೃ. 16:6–10 ರ ಆಧಾರದ ಮೇಲೆ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಅಭ್ಯಾಸದ ಶೀರ್ಷಿಕೆಯು ***ಸೇವೆಯಲ್ಲಿ ದ್ವಿಗುಣಮಾರ್ಗದರ್ಶನ*** ಎಂಬುದಾಗಿರಲಿ. ದೈವಿಕ ಮಾರ್ಗದರ್ಶನವು ಸಕಾರಾತ್ಮಕವಾಗಿಯೂ ನಕಾರಾತ್ಮಕವಾಗಿಯೂ ಇರಲು ಹೇಗೆ ಸಾಧ್ಯವೆಂಬುದನ್ನು ವಿವರಿಸಿರಿ. ಈ ಪ್ರಶ್ನೆಗಳ ಉತ್ತರಗಳನ್ನು ನಿಮ್ಮ ಅಧ್ಯಯನಕ್ಕಾಗಿ ಉಪಯೋಗಿಸಿರಿ:

    1) ಹಿನ್ನಲೆ: ಪೌಲ ಮತ್ತು ಆತನ ಸ್ನೇಹಿತರು ಇದಕ್ಕಿಂತ ಮುಂಚೆ (ಮೊದಲ ಸೇವಾ ಪ್ರಯಾಣದ ಸಂದರ್ಭದಲ್ಲಿ ಮತ್ತು ಎರಡನೆಯ ಸೇವಾ ಪ್ರಯಾಣದ ಪ್ರಾರಂಭದಲ್ಲಿ) ದೇವರ ಮಾರ್ಗದರ್ಶನವನ್ನು ಹೇಗೆ ಅನುಭವಿಸಿದರು?

    2) ಪೌಲ ಮತ್ತು ಆತನ ಸಂಗಡಿಗರು ಈಗ ಏಷ್ಯಾದಲ್ಲಿ ಸುವಾರ್ತೆಯನ್ನು ಸಾರಲು ನಿರ್ಧರಿಸಿದಾಗ ಮತ್ತು ಬಿಥೂನಿಯಕ್ಕೆ ಸುವಾರ್ತೆಯೊಂದಿಗೆ ಪ್ರವೇಶಿಸಬೇಕೆಂದಿರುವಾಗ ಏನು ಸಂಭವಿಸಿತು?

    3) ಅವರು ಏನನ್ನು *ಮಾಡಬಾರದೆಂದು* ಮತ್ತು ಎಲ್ಲಿಗೆ *ಹೋಗಬಾರದೆಂಬುದರ* ಕುರಿತು ದೇವರು ಅವರೊಂದಿಗೆ ಯಾವ ರೀತಿಯಲ್ಲಿ ಮಾತನಾಡಿರಬಹುದು?

    4) ಈ 'ನಕಾರಾತ್ಮಕವಾದ' ಮಾರ್ಗದರ್ಶನಕ್ಕೆ ಅವರು ಹೇಗೆ ಪ್ರತಿಕ್ರಿಯಿಸಿದರು?

    5) ದೇವರು ಪೌಲನೊಂದಿಗೆ ತ್ರೋವದಲ್ಲಿ ಹೇಗೆ ಮಾತನಾಡಿದನು?

    6) ಪೌಲನು ತ್ರೋವದಲ್ಲಿ ಸ್ವೀಕರಿಸಿದ ದೇವರ ಮಾರ್ಗದರ್ಶನದ ಕುರಿತು ಏನು ಮಾಡಿದನು?

    7) ಐತಿಹಾಸಿಕ ಉದಾಹರಣೆಗಳು: ಈ ರೀತಿಯಾದ 'ದ್ವಿಗುಣಮಾರ್ಗದರ್ಶನವನ್ನು' ಅನುಭವಿಸಿ ಅದಕ್ಕೆ ವಿಧೇಯರಾದ ದೇವರ ಮನುಷ್ಯರುಗಳು ನಿಮಗೆ ತಿಳಿದಿದ್ದಾರೋ?

    8) ಭಾರತೀಯರ ಉದಾಹರಣೆಗಳು: ಈ ರೀತಿಯಾದ ದ್ವಿಗುಣಮಾರ್ಗದರ್ಶನವನ್ನು" ಪಡೆದ ಭಾರತದಲ್ಲಿನ ದೇವರ ಸೇವೆಯ ಕುರಿತು ನಿಮಗೆ ಯಾವುದಾದರೂ ಉದಾಹರಣೆಗಳು ತಿಳಿದಿದೆಯೋ ಮತ್ತು ಅದರಿಂದಾದ ಪರಿಣಾಮಗಳೇನು? ಅಥವಾ ನೀವು ಹಂಚಿಕೊಳ್ಳಲು ಯಾವುದಾದರೂ ವೈಯಕ್ತಿಕ ಅನುಭವವನ್ನು ಹೊಂದಿದ್ದೀರೋ?

9) ಅನ್ವಯಿಸುವಿಕೆ: ದೇವರ ಮಾರ್ಗದರ್ಶನವು 'ಸಕಾರಾತ್ಮಕವಾಗಿದ್ದರೂ' ಅಥವಾ 'ನಕಾರಾತ್ಮಕವಾಗಿದ್ದರೂ' ಅದಕ್ಕೆ ನಾವು ವಿಧೇಯರಾಗುವುದು ಯಾಕೆ ಪ್ರಾಮುಖ್ಯವಾದುದ್ದಾಗಿದೆ?

2. ***ಸೇವೆಯಲ್ಲಿ ದ್ವಿಗುಣಮಾರ್ಗದರ್ಶನ*** ಎಂಬ ನಿಮ್ಮ ಸತ್ಯವೇದ ಅಧ್ಯಯನಕ್ಕೆ ಉಪಯೋಗಿಸಬಹುದಾದಂತಹ ಕೆಲವು ಅಂಶಗಳು ಇಲ್ಲಿವೆ:

1) ಹಿನ್ನಲೆ: ಪೌಲ ಮತ್ತು ಆತನ ಸಂಗಡಿಗರು ಮೊದಲನೆಯ ಸೇವಾ ಪ್ರಯಾಣದಲ್ಲಿ ಉಂಟಾದ ಯಶಸ್ಸಿನ ಸೇವೆಯನ್ನು ಹಿಂತಿರುಗಿ ನೋಡಬಹುದಾಗಿತ್ತು (ಹಿಂಸೆ ಮತ್ತು ವಿರೋಧಗಳ ಮಧ್ಯದಲ್ಲಿ ಸುವಾರ್ತೆಯು ಸಾರಲ್ಪಟ್ಟಿತ್ತು; ಸಭೆಗಳು ಸ್ಥಾಪಿಸಲ್ಪಟ್ಟಿದ್ದವು, ಕ್ರಮಪಡಿಸಲ್ಪಟ್ಟಿದ್ದವು ಮತ್ತು ಬಲ ಹೊಂದಿದ್ದವು) ಮಾರ್ಗಗಳು ತೆರೆಯಲ್ಪಟ್ಟಿದ್ದವು. ಅದ್ಭುತ ಮತ್ತು ಸೂಚಕ ಕಾರ್ಯಗಳ ಮೂಲಕವಾಗಿ ಪವಿತ್ರಾತ್ಮನು ಅವರೊಂದಿಗಿದ್ದನು. ಸುವಾರ್ತೆಯು ಫಲವನ್ನು ಕೊಟ್ಟಿತ್ತು ಅನ್ಯರು ಸುವಾರ್ತೆಗೆ ಒಂದು ಅದ್ಭುತವಾದ ರೀತಿಯಲ್ಲಿ ಪ್ರತಿಕ್ರಿಯಿಸಿದ್ದರು.

2) ಆದರೆ ಈ ಕಥೆಯಲ್ಲಿ ಪರಿಸ್ಥಿತಿಯು ತಕ್ಷಣವಾಗಿ ಬದಲಾಗುತ್ತದೆ. ಈಗ ಪವಿತ್ರಾತ್ಮನು ಅವರಿಗೆ ಏಷ್ಯಾದಲ್ಲಿ ಸುವಾರ್ತೆಯನ್ನು *ಸಾರಬೇಡಿರಿ* ಮತ್ತು ಬಿಥೂನಿಯದಲ್ಲಿ ಸೇವೆಯನ್ನು *ಪ್ರಾರಂಭಿಸಬೇಡಿರಿ* ಎಂದು ಹೇಳುತ್ತಿದ್ದಾನೆ.

3) ಈ. 1 ರ ಪ್ರಶ್ನೆಯ ಉತ್ತರವನ್ನು ನೋಡಿರಿ.

4) ಈ ನಕಾರಾತ್ಮಕವಾದ ಸಂಗತಿಗಳು ನಡೆಯುವಾಗ ಪೌಲ ಮತ್ತು ಆತನ ಸಂಗಡಿಗರು ನಕಾರಾತ್ಮಕವಾಗಿ ಪ್ರತಿಕ್ರಿಯಿಸಲಿಲ್ಲ. ಅವರು ದೇವರನ್ನು ಪ್ರಶ್ನಿಸಲಿಲ್ಲ. ಅವರು ಪವಿತ್ರಾತ್ಮನ ನಿಷೇಧಕ ಮತ್ತು ಒತ್ತಾಯಪೂರ್ವಕ ಮಾರ್ಗದರ್ಶನಕ್ಕೆ ಅವಿಧೇಯರಾಗಲಿಲ್ಲ. ಯಾಕೆ ಈ ಸಂಗತಿಗಳು ಉಂಟಾಯಿತೆಂದು ಅವರು ಆಶ್ಚರ್ಯಚಕಿತರಾಗಿರಬಹುದು ಮತ್ತು ಅವರು ಹತಾಶರಾಗಿರಬಹುದು. ಅದೊಂದು ನಕಾರಾತ್ಮಕವಾದ ಮಾರ್ಗದರ್ಶನವಾಗಿದ್ದಾಗ್ಯೂ ಅವರು ದೇವರ ಮಾರ್ಗದರ್ಶನಕ್ಕೆ ವಿಧೇಯರಾದರು.

5) ತ್ರೋವದಲ್ಲಿ ದೇವರು ಪೌಲನೊಂದಿಗೆ ರಾತ್ರಿ ವೇಳೆ ಒಂದು ದರ್ಶನದಲ್ಲಿ ಮಾತನಾಡಿದನು. ಪೌಲನು ಕೊನೆಗೆ 'ಸಕಾರಾತ್ಮಕವಾದ' ದೈವಿಕ ಮಾರ್ಗದರ್ಶನವನ್ನು ಅನುಭವಿಸಿದನು!

6) ಈ. 2 ರ ಪ್ರಶ್ನೆಗೆ ಉತ್ತರವನ್ನು ನೋಡಿರಿ.

7) 'ದ್ವಿಗುಣಮಾರ್ಗದರ್ಶನಕ್ಕೆ'" ಎರಡು ಐತಿಹಾಸಿಕ ಉದಾಹರಣೆಗಳು: ವಿಲಿಯಂ ಕೇರಿಯವರು ಫೆಸಿಫಿಕ್ ಸಮುದ್ರದ ಕೆಲವು ದ್ವೀಪರಾಷ್ಟ್ರಗಳಿಗೆ ಹೋಗಲು ಬಯಸಿದ್ದರು, ಆದರೆ ದೇವರು ಅವರನ್ನು ಭಾರತಕ್ಕೆ ನಡೆಸಿದನು ಮತ್ತು ಅವರು ದೇವರ ರಾಜ್ಯದಲ್ಲಿ ಅದ್ಭುತವಾಗಿ ಉಪಯೋಗಿಸಲ್ಪಟ್ಟರು. ಡೇವಿಡ್ ಲಿವಿಂಗ್‌ಸ್ಟನ್‌ರವರು ಚೀನಾಕ್ಕೆ ಹೋಗಲು ಪ್ರಯತ್ನಿಸಿದರು, ಆದರೆ ಅದಕ್ಕೆ ಬದಲಾಗಿ ದೇವರು ಅವರನ್ನು ಆಫ್ರಿಕಾಗೆ ಕಳುಹಿಸಿದನು. ಈ ಇಬ್ಬರೂ ಪುರುಷರು ತಮ್ಮ ಸ್ವಂತ ಯೋಜನೆಗಳನ್ನು ಹೊಂದಿದ್ದರು – ಆದರೆ ಅವರ ಜೀವಿತಕ್ಕಾಗಿ ದೇವರು ಬೇರೆ ಯೋಜನೆಗಳನ್ನು ಹೊಂದಿದ್ದನು – ಮತ್ತು ಅವರು ದೇವರ

ಕರೆಯುವಿಕೆಗೆ ವಿಧೇಯರಾಗಿದ್ದರು. ನೀವು ವಿಲಿಯಂ ಕೇರಿ ಮತ್ತು ಲಿವಿಂಗ್‌ಸ್ಟನ್‌ರವರ ಕುರಿತು ಹೆಚ್ಚಿನ ಸಂಗತಿಗಳನ್ನು ಓದಿರಿ ಮತ್ತು ಅವರ ಜೀವಿತಗಳಲ್ಲಿನ 'ದ್ವಿಗುಣಮಾರ್ಗದರ್ಶನದ' ಕುರಿತು ಮತ್ತು ಅವರ ಸೇವೆಗಳ ಮುಖಾಂತರ ನಂತರ ಏನು ಸಂಭವಿಸಿತೆಂಬುದನ್ನು ಕುರಿತು ಹಂಚಿಕೊಳ್ಳಿರಿ.

8) ನೀವು ನಿಮ್ಮ ಸ್ವಂತ ಭಾರತೀಯ ಉದಾಹರಣೆಗಳನ್ನು ಹಂಚಿಕೊಳ್ಳಿರಿ!

9) ದೇವರ ಮಾರ್ಗದರ್ಶನಕ್ಕೆ ನಾವು ವಿಧೇಯರಾಗುವಾಗ ಮಾತ್ರ – ಅದು ನಕಾರಾತ್ಮಕವಾಗಿರಲಿ ಅಥವಾ ಸಕಾರಾತ್ಮಕವಾಗಿರಲಿ – ನಮಗಾಗಿ (ನಮ್ಮ ಜೀವಿತಕ್ಕಾಗಿ ಮತ್ತು ಸೇವೆಗಾಗಿ) ಇರುವ ದೇವರ ಯೋಜನೆಗಳು ನೆರವೇರಲ್ಪಡುತ್ತವೆ. ಪೌಲ ಮತ್ತು ಆತನ ಸಂಗಡಿಗರು ಏಷ್ಯಾದಲ್ಲಿ ಬೋಧಿಸದೆಯೂ ಮತ್ತು ಬಿಥೂನಿಯವನ್ನು ಪ್ರವೇಶಿಸದೆಯೂ ಇದ್ದುದ್ದರಿಂದ ದೇವರು ಅವರನ್ನು ಮೆಕದೋನಿಯಕ್ಕಾಗಿ ಕರೆದಾಗ ಅವರು ಅಲ್ಲಿಗೆ ಹೋಗಲು ಲಭ್ಯವಿದ್ದರು. ಅವರು ಮೆಕದೋನಿಯಕ್ಕೆ ಹೋಗಲು ಲಭ್ಯವಿದ್ದುದ್ದರಿಂದ ಸುವಾರ್ತೆಯು ಯೂರೋಪಿನಲ್ಲಿ ಕಾಲಿಟ್ಟಿತು ಮತ್ತು ಇದರ ಪರಿಣಾಮವಾಗಿ, ಸುವಾರ್ತೆಯು ಯುರೋಪಿನಾದ್ಯಂತ ಅದ್ಭುತವಾಗಿ ಹರಡಿತು. ಆಧುನಿಕ ಸೇವಾ ಚಳುವಳಿಗೆ ಯೂರೋಪ್ ಹೇಗೆ ಮೂಲ ಸ್ಥಳವಾಯಿತೆಂಬುದನ್ನೂ ಮತ್ತು ಅದರ ಮೂಲಕ ಪ್ರಪಂಚದ ಮೂಲೆ ಮೂಲೆಗೆ ಸುವಾರ್ತೆಯು ಹೇಗೆ ಕೊಂಡೊಯ್ಯಲ್ಪಟ್ಟಿತೆಂದೂ ಇತಿಹಾಸ ತೋರಿಸುತ್ತದೆ.

# ಪಾಠ 43. ಫಿಲಿಪ್ಪಿಯಲ್ಲಿ ಲುದ್ಯಳ ಪರಿವರ್ತನೆ, 16:11–15

## ಅ) ವಾಕ್ಯಭಾಗ

ಪೌಲನು ಮತ್ತು ಆತನ ಸಂಗಡಿಗರು ಮೆಕೆದೋನಿಯದ ಫಿಲಿಪ್ಪದಲ್ಲಿ ಸೇವೆಯನ್ನು ಮಾಡುತ್ತಾ ಇಂದು ಕರೆಯಲ್ಪಡುವ ಯೂರೋಪಿಗೆ ಸುವಾರ್ತೆಯನ್ನು ತಂದರು. ಅಲ್ಲಿನ ಮೊದಲ ವಿಶ್ವಾಸಿಗಳು ಏಷ್ಯಾ ಪ್ರಾಂತ್ಯದ ಒಬ್ಬ ಜವಳಿ ವ್ಯಾಪಾರಸ್ಥಳಾದ ಲುದ್ಯಳು ಹಾಗೂ ಆಕೆಯ ಕುಟುಂಬಸ್ಥರಾಗಿದ್ದರು.

## ಆ) ಟಿಪ್ಪಣಿ

*ನಾವು* (ವ. 11): ಲೂಕನು ಈಗ ಪೌಲ, ಸೀಲ ಮತ್ತು ತಿಮೋಥಿಯರೊಂದಿಗೆ ಪ್ರಯಾಣಿಸುತ್ತಿದ್ದಾನೆ.

*ಫಿಲಿಪ್ಪಿ* (ವ. 12): ಫಿಲಿಪ್ಪಿಯು ಪೂರ್ವ ಮೆಕೆದೋನಿಯದ ಒಂದು ಪಟ್ಟಣವಾಗಿತ್ತು. ಅದು ತನ್ನದೇ ಸರ್ಕಾರವನ್ನು ಹೊಂದಿದ್ದ ರೋಮನ್ನರ ನಿವಾಸ ಸ್ಥಳವಾಗಿದ್ದು ನೆಯಾಪೋಲಿ ಎಂಬ ತನ್ನ ಬಂದರಿನಿಂದ 15 ಕಿ.ಮೀ ದೂರದಲ್ಲಿತ್ತು. ಅಲ್ಲಿ ಅನೇಕ ರೋಮನ್ ನಿವೃತ್ತ ಸೈನಿಕರು ವಾಸವಾಗಿದ್ದರು.

*ಪ್ರಾರ್ಥನೆಯ ಸ್ಥಳ* (ವ. 13): ಫಿಲಿಪ್ಪಿಯಲ್ಲಿ ಹೆಚ್ಚು ಯೆಹೂದ್ಯರಿಲ್ಲದ್ದರಿಂದ ಅಲ್ಲಿ ಯಾವ ಸಭಾಮಂದಿರವೂ ಇರಲಿಲ್ಲ. ಒಂದು ಸಭಾಮಂದಿರವನ್ನು ಸ್ಥಾಪಿಸಲು ಕನಿಷ್ಠ ಪಕ್ಷ 10 ಜನ ಯೆಹೂದ್ಯ ಪುರುಷರು ಇರಬೇಕಾಗಿತ್ತು. ಇದಕ್ಕೆ ಬದಲಾಗಿ ಯೆಹೂದ್ಯರೂ ಮತ್ತು ದೈವಭಯವುಳ್ಳ ಅನ್ಯರು ತಮ್ಮ ವಾರದ ಕೂಟಕ್ಕಾಗಿ ಪಟ್ಟಣದಿಂದ ದೂರದಲ್ಲಿದ್ದ ಒಂದು ಸ್ಥಳಕ್ಕೆ ಕೂಡಿ ಬರುತ್ತಿದ್ದರು. ಈ ಪ್ರಾರ್ಥನಾ ಸ್ಥಳವು ಸ್ಥಳೀಯ ನದಿಯ ಕಾಲುವೆಯ ಸಮೀಪದಲ್ಲಿ ನೆಲೆಸಿರುವುದು ಸರ್ವೆಸಾಮಾನ್ಯವಾಗಿತ್ತು. ಈ ಕಥೆಯ ಪ್ರಕಾರ ಸಬ್ಬತ್ ದಿನದ ಪ್ರಾರ್ಥನಾ ಕೂಟಕ್ಕಾಗಿ ಬಂದಂತವರೆಲ್ಲರೂ ಸ್ತ್ರೀಯರಾಗಿದ್ದರು.

*ಲುದ್ಯಳು .. ಥುವತ್ತೈರ ಊರಿನವಳೂ* (ವ. 14): ಥುವತ್ತೈರವು ಬಟ್ಟೆಗೆ ಬಣ್ಣ ಹಾಕುವುದರಲ್ಲಿ ಪ್ರಖ್ಯಾತಿ ಹೊಂದಿತ್ತು, ವಿಶೇಷವಾಗಿ ಕಡು ಕೆಂಪು ಮತ್ತು ಕೆನ್ನೀಲಿ ಬಣ್ಣಗಳಿಗೆ ಪ್ರಖ್ಯಾತಿಯಾಗಿತ್ತು. ಅದು ರೋಮನ್ ಪ್ರಾಂತ್ಯವಾದ ಏಷ್ಯಾದಲ್ಲಿನ ಲುದ್ಯ ಪ್ರಾಂತ್ಯದಲ್ಲಿ ನೆಲೆಸಿತ್ತು. ಬಹುಶಃ *ಲುದ್ಯ* ಎಂಬುವ ಈ ಸ್ತ್ರೀಯ ಹೆಸರು 'ವ್ಯವಹಾರಿಕ ಹೆಸರಾಗಿರಬಹುದು' ಅಥವಾ ಆಕೆಯ ಊರಿನ ಹೆಸರನ್ನು ಆಕೆಗೆ ಇಟ್ಟಿರಬಹುದು.

## ಇ) ಪಠ್ಯ ಪ್ರಶ್ನೆಗಳು

1. ಈ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿರಿ: ತ್ರೋವ, ಸಮೋಥ್ರ, ನೆಯಾಪೊಲಿ, ಫಿಲಿಪ್ಪಿ ಮತ್ತು ಮೆಕೆದೋನಿಯ!
2. ಪೌಲ ಮತ್ತು ಆತನ ಸ್ನೇಹಿತರು ಯಾಕೆ ನದಿಯ ಬಳಿಗೆ ಹೋದರು?
3. ಲುದ್ಯಳ ಮತ್ತು ಆಕೆಯ ಹಿನ್ನಲೆಯ ಕುರಿತು ಲೂಕನು ನಮಗೆ ಏನನ್ನು ತಿಳಿಸುತ್ತಾನೆ?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ವ. 14 ರಲ್ಲಿ ಲುದ್ಯಳ ಪರಿವರ್ತನೆಯನ್ನು ಲೂಕನು ಹೇಗೆ ವಿವರಿಸುತ್ತಾನೆ? ಈ ವಿವರಣೆಯ ಅನ್ವಯಗಳನ್ನು ಚರ್ಚಿಸಿರಿ!
2. ಹೊಸ ಒಡಂಬಡಿಕೆಯ ಸಮಯದ ದೀಕ್ಷಾಸ್ನಾನದ ಕುರಿತು ಈ ವಾಕ್ಯಭಾಗದಿಂದ ನಾವು ಏನನ್ನು ಕಲಿಯುತ್ತೇವೆ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ಕಥೆಯಲ್ಲಿ ಸಂಭವಿಸಿದ್ದನ್ನು ದಕ್ಷಿಣ ಭಾರತದಲ್ಲಿನ ನಿಮ್ಮ ಸ್ವಂತ ಪರಿಸ್ಥಿತಿಯೊಂದಿಗೆ ಹೋಲಿಸಿರಿ. ಈ ಕೆಳಗಿನ ಅಂಶಗಳನ್ನೂ ಸಹ ಸೇರಿಸಿಕೊಳ್ಳಿರಿ:

- ಪೌಲನಂತೆ ಜನರೊಂದಿಗೆ 'ಮಾತನಾಡಿ' ಸುವಾರ್ತೆಯನ್ನು ಹಂಚುವವರು ಸಾಕಷ್ಟು ಇದ್ದಾರೋ?
- ನಾವು 'ಒಟ್ಟಾಗಿ ಸೇರುವ ಸ್ಥಳಗಳು' ಎಲ್ಲಿವೆ?
- ಜನರು ಅರ್ಥಮಾಡಿಕೊಳ್ಳುವಂತೆಯೂ ಮತ್ತು ಸಕಾರಾತ್ಮಕವಾಗಿ ಪ್ರತಿಕ್ರಿಯಿಸು–ವಂತೆಯೂ ನಮ್ಮ ಸಂದೇಶವು ಸ್ಪಷ್ಟವಾಗಿದೆಯೋ?
- ನಾವು ಸುವಾರ್ತಾ ಸಂದೇಶವನ್ನು ಸಾರುವಾಗ ಪವಿತ್ರಾತ್ಮನ ಮಾರ್ಗದರ್ಶನವನ್ನು ಅನುಭವಿಸುತ್ತಿದ್ದೇವೋ? ಹೇಗೆ?
- ನಾವು ಪ್ರಸಂಗಿಸುವ ಸುವಾರ್ತಾ ಸಂದೇಶವನ್ನು ಜನರು ಅರ್ಥೈಸಿಕೊಂಡು ಸ್ವೀಕರಿಸುವಂತೆ ಅವರ ಹೃದಯ ಮನಸ್ಸುಗಳನ್ನು ಪವಿತ್ರಾತ್ಮನು ಜ್ಞಾನೋದಯ–ಗೊಳಿಸುವ ಕಾರ್ಯವನ್ನು ನಾವು ಅನುಭವಿಸುತ್ತೇವೋ? ಹೇಗೆ?
- ದೀಕ್ಷಾಸ್ನಾನದ ವಿಚಾರದ ಕುರಿತಾಗಿ ನಾವು ಹೇಗೆ ಬಗೆಹರಿಸುತ್ತೇವೆ? ನಾವು ಹೊಸ ಒಡಂಬಡಿಕೆಯ ಮಾದರಿಯನ್ನು ಎಷ್ಟರ ಮಟ್ಟಿಗೆ ಪಾಲಿಸುತ್ತಿದ್ದೇವೆ? ಪೌಲನ ಪರಿಸ್ಥಿತಿಗಿಂತ ನಮ್ಮ ಪರಿಸ್ಥಿತಿಯು ಯಾವ ವಿಧದಲ್ಲಿ ವ್ಯತ್ಯಾಸವಾಗಿದೆ ಮತ್ತು ಈ ವ್ಯತ್ಯಾಸವು ನಮ್ಮ ಆಚಾರಗಳ ಮೇಲೆ ಹೇಗೆ ಪರಿಣಾಮ ಬೀರಿದೆ?

- ಜನರು ಸುವಾರ್ತೆಯನ್ನು ಅಂಗೀಕರಿಸಿಕೊಂಡು ದೀಕ್ಷಾಸ್ನಾನವನ್ನು ಹೊಂದುತ್ತಿರುವುದರ ಪರಿಣಾಮವಾಗಿ ಅವರ ಜೀವಿತಗಳು ಬದಲಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೋ? ಬದಲಾವಣೆ ಹೊಂದಿದ ಜೀವಿತಗಳ ಉದಾಹರಣೆಗಳನ್ನು ಕೊಡಿರಿ!

## ಊ) ಉಪದೇಶಿಸು ಮತ್ತು ಬೋಧಿಸು!

ರಕ್ಷಣೆ ಮತ್ತು ದೀಕ್ಷಾಸ್ನಾನದ ಕುರಿತು ಸಂದೇಶವನ್ನು ಸಾರಲು ಅಥವಾ ಸತ್ಯವೇದ ಅಧ್ಯಯನ ಮಾಡಲು ಈ ವಾಕ್ಯಭಾಗವು ಒಳ್ಳೆಯ ಪಠ್ಯವಾಗಿದೆ. ಇದಕ್ಕೆ ನೀವು ಈ) 1 ಮತ್ತು ಈ) 2 ರ ಪ್ರಶ್ನೆಯ ಉತ್ತರಗಳನ್ನು ಉಪಯೋಗಿಸಬಹುದು. ಆದರೆ ನಿಮ್ಮ ದಕ್ಷಿಣ ಭಾರತದ ಸ್ವಂತ ಸನ್ನಿವೇಶಕ್ಕೆ ತಕ್ಕಂತೆ ಅಳವಡಿಸಿಕೊಳ್ಳಲು ಒಂದು ಅಥವಾ ಎರಡು ಅಂಶಗಳನ್ನು ಕೊನೆಯ ಭಾಗದಲ್ಲಿ ಸೇರಿಸುವುದು ಅವಶ್ಯಕವಾಗಿದೆ (ಉದಾಹರಣೆಗೆ ಮೇಲಿನ ಭಾಗದಿಂದ ಕೆಲವು ಅಂಶಗಳನ್ನು ತೆಗೆದುಕೊಳ್ಳಿರಿ).

# ಪಾಠ 44. ಸೆರೆಮನೆಯಲ್ಲಿ ಪೌಲ ಮತ್ತು ಸೀಲರು, 16:16–40

## ಅ) ವಾಕ್ಯಭಾಗ

ಫಿಲಿಪ್ಪಿಯಲ್ಲಿ ಪೌಲನ ಸೇವೆಯ ಮೂಲಕವಾಗಿ ಭವಿಷ್ಯ ನುಡಿಯುವ ದುರಾತ್ಮ ಹೊಂದಿದ್ದ ಬಾಲಕಿಯು ಬಿಡುಗಡೆ ಹೊಂದಿದಳು. ಈ ಬಾಲಕಿಯಿಂದ ಪಡೆಯುತ್ತಿದ್ದ ಆದಾಯವನ್ನು ಕಳಕೊಂಡ ಆಕೆಯ ಯಜಮಾನರುಗಳಿಗೆ ಇದು ಕೋಪವನ್ನೆಬ್ಬಿಸಿತು. ಹಾಗಾಗಿ ಅವರು ಪೌಲ ಮತ್ತು ಸೀಲರನ್ನು ಹಿಡಿದು ಸಾರ್ವಜನಿಕ ನ್ಯಾಯಸ್ಥಾನದಲ್ಲಿದ್ದ ಅಧಿಕಾರಿಗಳ ಮುಂದೆ ವಿಚಾರಣೆಗಾಗಿ ಎಳೆದುಕೊಂಡು ಹೋದರು ಮತ್ತು ಕಾನೂನು ಬಾಹಿರ ಆಚರಣೆಯನ್ನು ಹಬ್ಬಿಸುತ್ತಿದ್ದಾರೆ ಮತ್ತು ಪಟ್ಟಣದಲ್ಲಿ ಗಲಿಬಿಲಿಯನ್ನುಂಟು ಮಾಡುತ್ತಿದ್ದಾರೆಂದು ಆಪಾದಿಸಿದರು. ಪೌಲ, ಸೀಲರ ಬಟ್ಟೆಗಳನ್ನು ಕಿತ್ತು ಹಾಕಿಸಿ ಛಡಿ ಏಟುಗಳಿಂದ ಬಹಳವಾಗಿ ಥಳಿಸಿ ಸೆರೆಮನೆಗೆ ಹಾಕಲಾಯಿತು. ಅವರು ರಾತ್ರಿಯಲ್ಲಿ ಪ್ರಾರ್ಥಿಸುತ್ತಾ ಮತ್ತು ಸ್ತುತಿಸುತ್ತಾ ಇದ್ದಾಗ ಫಕ್ಕನೆ ಭೀಕರವಾದ ಭೂಕಂಪವಾಗಿ ಸೆರೆಮನೆಯ ಅಸ್ತಿವಾರವು ಕದಲಿತು, ತಕ್ಷಣವೇ ಸೆರೆಮನೆಯ ಎಲ್ಲಾ ಬಾಗಿಲುಗಳು ತೆರೆದವು. ಖೈದಿಗಳ ಸರಪಣಿಗಳು ಸಡಿಲಗೊಂಡವು. ಸೆರೆಮನೆಯ ಅಧಿಕಾರಿ ಎಚ್ಚೆತ್ತನು ಮತ್ತು ಖೈದಿಗಳು ತಪ್ಪಿಸಿಕೊಂಡು ಹೋದರೆಂದು ಅಂದುಕೊಂಡನು. ಪೌಲನು ಆತನನ್ನು ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ತಡೆದನು ಮತ್ತು ಆತನಿಗೆ ಸುವಾರ್ತೆಯನ್ನು ಸಾರಿದನು. ಆ ರಾತ್ರಿಯಲ್ಲಿ ಸೆರೆಮನೆಯ ಅಧಿಕಾರಿ ಮತ್ತು ಆತನ ಕುಟುಂಬದವರು ರಕ್ಷಿಸಲ್ಪಟ್ಟು ದೀಕ್ಷಾಸ್ನಾನವನ್ನು ಹೊಂದಿದರು. ಮುಂಜಾನೆಯಲ್ಲಿ ನ್ಯಾಯಾಧಿಪತಿಗಳು ಪೌಲ ಮತ್ತು ಸೀಲರು ಬಿಡುಗಡೆ ಹೊಂದಬೇಕೆಂಬ ಸಂದೇಶವನ್ನು ರವಾನಿಸಿದರು. ಪೌಲನು ಸಂದೇಶ ರವಾನಕರಿಗೆ ತಾನು ಮತ್ತು ಸೀಲನು ರೋಮನ್ ಪ್ರಜೆಗಳಾಗಿದ್ದು ತಮ್ಮೊಂದಿಗೆ ಅನುಚಿತವಾಗಿ ವರ್ತಿಸಲಾಗಿದೆ ಎಂದು ತಿಳಿಸಿದನು. ಇದು ನ್ಯಾಯಾಧಿಪತಿಗಳಿಗೆ ಗಾಬರಿ ಉಂಟುಮಾಡಿತು. ಅವರು ತಾವೇ ಸೆರೆಮನೆಗೆ ಬಂದು ಪೌಲ ಮತ್ತು ಸೀಲರನ್ನು ಬಿಡುಗಡೆಮಾಡಿ ಸಮಾಧಾನದಿಂದ ಪಟ್ಟಣವನ್ನು ಬಿಟ್ಟು ಹೋಗುವಂತೆ ಕೇಳಿಕೊಂಡರು. ಅಪೋಸ್ತಲರು ಪಟ್ಟಣವನ್ನು ಬಿಡುವುದಕ್ಕಿಂತ ಮುಂಚೆ ಫಿಲಿಪ್ಪಿಯಲ್ಲಿದ್ದ ವಿಶ್ವಾಸಿಗಳಿಗೆ ವಿದಾಯ ತಿಳಿಸಿದರು.

## ಆ) ಟಿಪ್ಪಣಿ

*ಯಜಮಾನ* (ವ. 16): ಗ್ರೀಕ್ ಪದವು 'ಯಜಮಾನರು' ಎಂಬ ಬಹುವಚನವನ್ನು ಹೊಂದಿದೆ.

*ನಮ್ಮ ಹಿಂದೆಯೇ* (ವ. 17): ಈ ಸನ್ನಿವೇಶಗಳಲ್ಲಿ ಲೂಕನು ಸಹ ಅವರೊಂದಿಗಿದ್ದನು. ಆದರೆ ಪೌಲ ಮತ್ತು ಸೀಲರು ಮಾತ್ರ ಮಾರುಕಟ್ಟೆಯ ಸ್ಥಳಕ್ಕೆ ಎಳೆದುಕೊಂಡು ಹೋಗಲ್ಪಟ್ಟರು (ವ. 19). ನಂತರ ಪೌಲ ಮತ್ತು ಸೀಲರು ಪಟ್ಟಣವನ್ನು ಬಿಟ್ಟುಹೋದಾಗ (ವ. 40) ಲೂಕನು ಫಿಲಿಪ್ಪಿಯಲ್ಲಿಯೇ ಉಳಿದುಕೊಂಡಿರಬಹುದು. ಪೌಲನ ಮೂರನೆಯ ಸೇವಾ ಪ್ರಯಾಣದ ಕೊನೆಯಲ್ಲಿ ಮಾತ್ರ ಲೂಕನು ಪುನಃ ಕಾಣಿಸಿಕೊಳ್ಳುತ್ತಾನೆ. ಆ ಸಂದರ್ಭದಲ್ಲಿ ಪೌಲ ಮತ್ತು ಆತನ ಸಂಗಡಿಗರು (ಲೂಕನನ್ನು ಸೇರಿಸಿ) ಫಿಲಿಪ್ಪಿಯಿಂದ ತ್ರೋವದ ಮಾರ್ಗವಾಗಿ ಯೆರೂಸಲೇಮಿಗೆ (ಅ. ಕೃ. 20:6)

ಪ್ರಯಾಣಿಸುತ್ತಿದ್ದರು. ಫಿಲಿಪ್ಪಿಯು ಲೂಕನ ಸ್ವಂತ ಸ್ಥಳವಾಗಿರುವ ಸಾಧ್ಯತೆಯಿದೆ, ಅಲ್ಲಿ ಆತನು ತನ್ನ ವೈದ್ಯಕೀಯ ವೃತ್ತಿಯನ್ನು ನಡೆಸುತ್ತಿದ್ದನು.

*ಮಹೋನ್ನತನಾದ ದೇವರು* (ವ. 17): ಈ ಹೇಳಿಕೆಯನ್ನು ಆ ದಿನಗಳಲ್ಲಿ ಯೆಹೂದ್ಯರು ತಮ್ಮ ದೇವರ ಕುರಿತು ಬಳಸುತ್ತಿದ್ದರು, ಅದಲ್ಲದೆ ಇದನ್ನು ಅನ್ಯರಾದ ಗ್ರೀಕರು ತಮ್ಮ ದೇವರಾದ 'ಜ್ಯೂಸ್'ನ ಕುರಿತೂ ಬಳಸುತ್ತಿದ್ದರು.

*ರಕ್ಷಣೆಯ ಮಾರ್ಗವನ್ನು* (ವ. 17): ಅನ್ಯರ ಮಧ್ಯದಲ್ಲೂ ಸಹ ಆ ದಿನಗಳಲ್ಲಿ ರಕ್ಷಣೆಯು ಒಂದು ಜನಪ್ರಿಯ ವಿಷಯವಾಗಿತ್ತು. ಈ ಕಥೆಯಲ್ಲಿ ಪೌಲ ಮತ್ತು ಸೀಲರು ನಿಜವಾದ ದೇವರ ಸಂದೇಶಕರೆಂದು ದುರಾತ್ಮವು ಗುರುತಿಸಿರಬೇಕು. ಯೇಸುವಿಗೆ ತನ್ನ ಸೇವೆಯಲ್ಲಿಯೂ ಇದೇ ರೀತಿಯಾದುದ್ದನ್ನು ಲೂಕನು ತನ್ನ ಸುವಾರ್ತೆಯಲ್ಲಿ ದಾಖಲಿಸುತ್ತಾನೆ (ಲೂಕ. 8:27–28). ಅಲ್ಲಿಯೂ ಸಹ ದೇವರ ಕುರಿತು ಇದೇ ಹೇಳಿಕೆಯನ್ನು ಬಳಸಲಾಗಿದೆ.

*ಸಾರ್ವಜನಿಕ ನ್ಯಾಯಸ್ಥಾನ* (ವ. 19): ಆಂಗ್ಲ ಭಾಷಾಂತರದಲ್ಲಿ ಮಾರುಕಟ್ಟೆ ಎಂದು ಇದೆ. ಒಂದು ಗ್ರೀಕ್ ಪಟ್ಟಣದಲ್ಲಿ *ಅಗೋರಾ* ಎನ್ನುವುದು ಕೇವಲ ಮಾರುಕಟ್ಟೆಯಾಗಿರದೆ ಸಾರ್ವಜನಿಕ ಜೀವನದ ಕೇಂದ್ರ ಸ್ಥಳವಾಗಿರುತ್ತಿತ್ತು ಮತ್ತು ಇಲ್ಲಿ ಸಾರ್ವಜನಿಕ ನ್ಯಾಯವಿಚಾರಣೆಯು ನಡೆಯುತ್ತಿತ್ತು.

*ಯೆಹೂದ್ಯರಾಗಿರುವ ಇವರು ನಮ್ಮ ಪಟ್ಟಣದಲ್ಲಿ ಬಹು ಗಲಿಬಿಲಿ ಮಾಡುತ್ತಿದ್ದಾರೆ. ರೋಮ್‌ನವರಾದ ನಾವು ಸ್ವೀಕರಿಸಲೂ ಇಲ್ಲವೇ ಅನುಸರಿಸಲೂ ಆಗದಂತಹ ಆಚಾರಗಳನ್ನು ಪ್ರಕಟಿಸುತ್ತಿದ್ದಾರೆ* (ವ. 20–21): ಪೌಲ ಮತ್ತು ಸೀಲರ ವಿರುದ್ಧವಾಗಿ ಬಾಲಕಿಯ ಯಜಮಾನರು ಮಾಡಿದ ಆಪಾದನೆಯು ಬಹಳ ಗಂಭೀರವಾಗಿತ್ತು (ಅದೇನೆಂದರೆ ವಿದೇಶಿ ಧರ್ಮವನ್ನು ಪರಿಚಯಿಸುವುದು ಮತ್ತು ಗಲಬೆ ಎಬ್ಬಿಸುವುದು).

*ಯಾವ ನ್ಯಾಯವಿಚಾರಣೆ ಮಾಡದೇ* (ವ. 37): ಒಬ್ಬ ರೋಮನ್ ಪ್ರಜೆಯನ್ನು ಬಹಿರಂಗವಾಗಿ ಛಡಿಯಿಂದ ಹೊಡೆಸುವುದು ಕಾನೂನು ಬಾಹಿರವಾಗಿತ್ತು. ಯಾವುದೇ ನ್ಯಾಯವಿಚಾರಣೆ ಮಾಡದೇ ಅವರನ್ನು ಛಡಿಯಿಂದ ಹೊಡೆಸುವುದು ಇನ್ನೂ ಕೆಟ್ಟದಾಗಿತ್ತು.

## ಇ) ಪಠ್ಯ ಪ್ರಶ್ನೆಗಳು

1. ಬಾಲಕಿಯೊಳಗಿಂದ ದುರಾತ್ಮವು ಹೊರಗೆ ಬರುವಂತೆ ಪೌಲನು ಯಾಕೆ ಆಜ್ಞಾಪಿಸಿದನು?

2. ಪೌಲ ಮತ್ತು ಸೀಲರ ಬಗ್ಗೆ ಬಾಲಕಿಯ ಯಜಮಾನರು ಯಾಕೆ ಕೋಪಗೊಂಡರು? ಆದರೆ ಅವರು ಸಾರ್ವಜನಿಕ ನ್ಯಾಯಸ್ಥಾನದಲ್ಲಿದ್ದ ನ್ಯಾಯಾಧಿಪತಿಗಳ ಮುಂದೆ ಅಪೋಸ್ತಲರ ಕುರಿತು ಏನನ್ನು ಆಪಾದಿಸಿದರು?

3. ನ್ಯಾಯಾಧಿಪತಿಯು ಪೌಲ ಮತ್ತು ಸೀಲರೊಂದಿಗೆ ಹೇಗೆ ವರ್ತಿಸಿದನು?

4. ಸೆರೆಮನೆಯ ಅಧಿಕಾರಿಯು ಯಾಕೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದನು?

5. ಸೆರೆಮನೆಯ ಅಧಿಕಾರಿಯು ಮಧ್ಯರಾತ್ರಿಯಲ್ಲಿ ಪೌಲ ಮತ್ತು ಸೀಲರಿಗೆ ಏಕೆ ಊಟವನ್ನು ಕೊಟ್ಟನು?

6. ನ್ಯಾಯಾಧಿಪತಿಗಳು ಏನು ಮಾಡಿದರೆಂದು ಪೌಲನು ಆಪಾದಿಸಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅಪೋಸ್ತಲರು ಫಿಲಿಪ್ಪಿಯಲ್ಲಿ ಸೇವೆ ಮಾಡಿದ ಸಂದರ್ಭದಲ್ಲಿ ಮೂರು ಜನರು ವಿಶೇಷವಾದ ರೀತಿಯಲ್ಲಿ ಸುವಾರ್ತೆಯಿಂದ ಸ್ಪರ್ಷಿಸಲ್ಪಟ್ಟರು. ಅವರು ಯಾರು ಮತ್ತು ಅವರಿಗೆ ಏನು ಸಂಭವಿಸಿತು?

2. ಪೌಲ ಮತ್ತು ಸೀಲರಿಗೆ ವಿರೋಧವಾಗಿ ಜನಸಮೂಹವು ಯಾಕೆ ಕೂಡಿಕೊಂಡಿತೆಂದು ನೀವು ಭಾವಿಸುತ್ತೀರಿ (ವ. 22)?

3. 'ಸೆರೆಮನೆಯಲ್ಲಿ ಇತರೆ ಖೈದಿಗಳು ಯಾಕೆ ಅಪೋಸ್ತಲರನ್ನು ಆಲಿಸುತ್ತಿದ್ದರೆಂದು' ನೀವು ಆಲೋಚಿಸುತ್ತೀರಿ?

4. ಅದೇ ರಾತ್ರಿಯಲ್ಲಿ ಸೆರೆಮನೆ ಅಧಿಕಾರಿ ಮತ್ತು 'ಆತನ ಇಡೀ ಕುಟುಂಬವು' ಯಾಕೆ ದೀಕ್ಷಾಸ್ನಾನವನ್ನು ಹೊಂದಿದರು?

5. ನ್ಯಾಯಾಧಿಪತಿಗಳೇ ಸ್ವತಃ ಸೆರೆಮನೆಗೆ ಬಂದು ಅಪೋಸ್ತಲರನ್ನು ಬಿಡುಗಡೆ ಮಾಡಬೇಕೆಂದು ಪೌಲನು ಯಾಕೆ ಕೇಳಿಕೊಂಡನೆಂದುದು ನೀವು ಆಲೋಚಿಸುತ್ತೀರಿ?

6. ವ. 40 ರಲ್ಲಿ ಹೇಳಲ್ಪಟ್ಟಿರುವುದೇನೆಂದರೆ, ಪೌಲ ಮತ್ತು ಸೀಲರು ಸೆರೆಮನೆಯಿಂದ ಹೊರಗೆ ಬಂದ ಮೇಲೆ 'ಲುದ್ಯಳ ಮನೆಗೆ ಹೋಗಿ ಅಲ್ಲಿ ಸಹೋದರರನ್ನು ಭೇಟಿಯಾಗಿ ಅವರನ್ನು ಪ್ರೋತ್ಸಾಹಿಸಿದರು. ಅಪೊಸ್ತಲರು ಸಹೋದರಿಯರನ್ನು ಭೇಟಿಯಾಗಿ ಅವರನ್ನು ಯಾಕೆ ಪ್ರೋತ್ಸಾಹಿಸಲಿಲ್ಲ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. 'ಭವಿಷ್ಯ ಹೇಳುವ ದುರಾತ್ಮನಿಂದ' ಬಾಲಕಿಯು ಬಿಡುಗಡೆ ಹೊಂದಿದಾಗ ಅವಳ ಜೀವಿತವು ಬದಲಾಯಿತು. ಅಪೋಸ್ತಲರನ್ನು ಭೇಟಿಯಾಗುವ ಮುಂಚಿನ ಮತ್ತು ನಂತರದ ಆಕೆಯ ಜೀವನವನ್ನು ಆಲೋಚಿಸಿರಿ. ಮುಂಚೆ ಅವಳ ಜೀವನ ಹೇಗಿತ್ತು ಮತ್ತು ನಂತರದಲ್ಲಿ ಅವಳ

ಜೀವನ ಹೇಗಿತ್ತು? ಈ ಬಾಲಕಿಯ ಜೀವಿತಕ್ಕೆ ಹೋಲುವ ಯಾವುದಾದರೂ ವ್ಯಕ್ತಿಗಳನ್ನು ನೀವು ನಿಮ್ಮ ಸಭೆಯಲ್ಲಿ ಅಥವಾ ನಿಮ್ಮ ಸೇವೆಯಲ್ಲಿ ಕಂಡಿದ್ದೀರೋ?

2. ಸೆರೆಮನೆಯ ಅಧಿಕಾರಿಗೆ ಅದು ನಾಟಕೀಯ ರಾತ್ರಿಯಾಗಿತ್ತು. ಮೊದಲು ಆತನು ಕೆಲವು ಅಪರಿಚಿತ ಖೈದಿಗಳೊಂದಿಗೆ ವ್ಯವಹರಿಸಬೇಕಾಗಿತ್ತು. ನಂತರ ಆತನು ಆತ್ಮಹತ್ಯೆಯ ಅಂಚಿನಲ್ಲಿದ್ದನು. ನಂತರ ಆತನು ಸುವಾರ್ತೆಯ ಸಂದೇಶವನ್ನು ಕೇಳಿ ದೀಕ್ಷಾಸ್ನಾನ ಹೊಂದಿದನು ಮತ್ತು ಆತನೊಂದಿಗೆ ತನ್ನ ಇಡೀ ಕುಟುಂಬದ ಜೀವನವು ಬದಲಾಯಿತು. ಈ ರೀತಿಯ ನಾಟಕೀಯವಾದ ರೀತಿಯಲ್ಲಿ ವ್ಯಕ್ತಿಗಳು ರಕ್ಷಣೆ ಹೊಂದಿದ್ದನ್ನು ನಿಮ್ಮ ಸ್ವಂತ ಸೇವೆಯಲ್ಲಾಗಲೀ ಅಥವಾ ನಿಮ್ಮ ಸಭೆಯಲ್ಲಾಗಲಿ ನೀವು ಕಂಡಿದ್ದೀರಾ? ನಿಮ್ಮ ಸ್ವಂತ ರಕ್ಷಣೆಯ ಅನುಭವ ಹೇಗಿತ್ತು?

3. ಸೆರೆಮನೆಯ ಅಧಿಕಾರಿ ಮತ್ತು ಆತನ ಕುಟುಂಬದವರು ಕ್ರಿಸ್ತೀಯ ಸುವಾರ್ತೆಯ ಕುರಿತು ಯಾವುದೇ ಅನುಭವ ಅಥವಾ ಪರಿಚಯವಿಲ್ಲದ ಅನ್ಯರಾಗಿದ್ದರು. ಆದರೂ ಪೌಲ ಮತ್ತು ಸೀಲರು ಅದೇ ರಾತ್ರಿಯಲ್ಲಿ ಅವರಿಗುಂಟಾದ ರಕ್ಷಣೆಯ ಅನುಭವಕ್ಕೆ ದೀಕ್ಷಾಸ್ನಾನವನ್ನು ಕೊಡಲಿಕ್ಕೆ ಹಿಂದೇಟು ಹಾಕಲಿಲ್ಲ. ನೀವಾಗಲೀ ಅಥವಾ ನಿಮ್ಮ ಸಭಾಪಾಲಕರಾಗಲಿ ಹೀಗೆ ಮಾಡುತ್ತಿದ್ದರೋ? ಯಾಕೆ – ಯಾಕೆ ಇಲ್ಲ?

4. ಪೌಲ ಮತ್ತು ಸೀಲರನ್ನು ಛಡಿ ಏಟುಗಳಿಂದ ಹೊಡೆದು ಕಾಲುಗಳಿಗೆ ಸರಪಣಿ ಜಡಿದು ಸೆರೆಮನೆಯ ಒಳಗಿನ ಕೋಣೆಯಲ್ಲಿ ಹಾಕಿದರು. ಆದಾಗ್ಯೂ ಅವರು ರಾತ್ರಿಯಲ್ಲಿ ದೇವರಿಗೆ ಸ್ತುತಿಗೀತೆಯನ್ನು ಹಾಡಿದರು. ಇದು ಹೇಗೆ ಸಾಧ್ಯವಾಯಿತು? ನೀವು (ಅಥವಾ ನಿಮ್ಮ ಸಭಾಪಾಲಕರು ಅಥವಾ ಸ್ನೇಹಿತರು) ಈ ರೀತಿಯ ಸನ್ನಿವೇಶವನ್ನು ಎದುರಿಸಿದ್ದೀರೋ? ಇಂತಹ ಸಂದರ್ಭದಲ್ಲಿ ನೀವು ದೇವರಿಗೆ ಸ್ತುತಿಗೀತೆಯನ್ನು ಹಾಡಿದಿರೋ?

5. ಫಿಲಿಪ್ಪಿಯಲ್ಲಿದ್ದ ಕೆಲವು ಮೊದಲ ವಿಶ್ವಾಸಿಗಳ ಕುರಿತು ಲೂಕನು ಕೊಡುವಂತಹ ಚಿತ್ರಣವನ್ನು ನಿಮ್ಮ ಸ್ವಂತ ಸಭೆಯ ಸದಸ್ಯರ ರಚನೆಯೊಂದಿಗೆ ಹೋಲಿಸಿರಿ. ಒಂದು ಯೆಹೂದ್ಯ ಕುಟುಂಬದ ಹಿರಿಯನು ದೇವರು ತನ್ನನ್ನು ಅನ್ಯನನ್ನಾಗಿಯೂ, ಸ್ತ್ರೀಯನ್ನಾಗಿಯೂ ಅಥವಾ ಗುಲಾಮನನ್ನಾಗಿಯೂ ಮಾಡದಿದ್ದುದ್ದಕ್ಕೆ ಪ್ರತೀ ದಿವಸ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದನು. ಆದಾಗ್ಯೂ ಒಬ್ಬ ಅನ್ಯ ಸ್ತ್ರೀ, ಅನ್ಯ ದಾಸಿ ಮತ್ತು ಅನ್ಯ ಸೆರೆಮನೆಯ ಅಧಿಕಾರಿ ಫಿಲಿಪ್ಪಿಯ ಸಭೆಯ ಮೂರು 'ಸ್ಥಾಪನಾ ಸದಸ್ಯರುಗಳಾಗಿದ್ದರು' ಅಥವಾ 'ಪ್ರಥಮ ಫಲಗಳಾಗಿದ್ದರು'. ಪೌಲನು ಗಲಾತ್ಯದವರಿಗೆ ಬರೆದ ಈ ಕೆಳಗಿನ ವಾಕ್ಯವನ್ನು ಇದು ನಿದರ್ಶಿಸುತ್ತದೆ. ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಮಕ್ಕಳಾಗಿದ್ದೀರಿ. ಹೇಗೆಂದರೆ, ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ. ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯೆಹೂದ್ಯನು ಗ್ರೀಕನು ಎಂದೂ, ದಾಸನು ಸ್ವತಂತ್ರನು ಎಂದೂ, ಗಂಡು ಹೆಣ್ಣು ಎಂದೂ ಬೇಧವಿಲ್ಲ (ಗಲಾತ್ಯ. 3:26–28). ನಿಮ್ಮ ಸ್ವಂತ ಸಭೆಯ ಕುರಿತು ಏನು? ಅದು ಈ ಹೊಸ ಒಡಂಬಡಿಕೆಯ ನಿಯಮವನ್ನು ನಿದರ್ಶಿಸುತ್ತದೋ? ಹೇಗೆ ವಿವರಿಸಿ!

## ಊ) ಉಪದೇಶಿಸು ಮತ್ತು ಬೋಧಿಸು!

ಫಿಲಿಪ್ಪಿಯಲ್ಲಿದ್ದ ಸೆರೆಮನೆಯ ಅಧಿಕಾರಿಯ ಕುರಿತು ಸುವಾರ್ತಾ ಸಂದೇಶವನ್ನು ಸಿದ್ಧಪಡಿಸಿರಿ, ನಿಮ್ಮ ಶೀರ್ಷಿಕೆಯು ***ಫಿಲಿಪ್ಪಿಯಲ್ಲಿ ಒಂದು ರಾತ್ರಿ ಮತ್ತು ನಾಲ್ಕು ಅದ್ಭುತಗಳು*** ಎಂದು ಇರಲಿ.

1) *ಪೀಠಿಕೆ* – ಫಿಲಿಪ್ಪಿಯಲ್ಲಿ ಪೌಲ ಮತ್ತು ಸೀಲರು: ಲುದ್ಯಳ, ಗುಲಾಮ ಬಾಲಕಿಯ ಮತ್ತು ಅಪೋಸ್ತಲರನ್ನು ಸೆರೆಮನೆಗೆ ಹೇಗೆ ತಂದರು ಎಂಬುದರ ಕುರಿತು ಸಂಕ್ಷಿಪ್ತವಾದ ಮಾಹಿತಿ ಕೊಡಿರಿ.

2) *ಆ ರಾತ್ರಿಯ ಮೊದಲ ಅದ್ಭುತ* – ದೇವರ ಸೇವಕರ ಅದ್ಭುತ: ಸೆರೆಮನೆಯ ಅಧಿಕಾರಿಯು ತಾನು ಮಲಗುವ ಮೊದಲು ಎಲ್ಲಾ ಸೆರೆಯ ಖೈದಿಗಳು ಭದ್ರವಾಗಿ ಕಟ್ಟಲ್ಪಟ್ಟಿರುವುದನ್ನು ಖಚಿತಪಡಿಸಿಕೊಳ್ಳುತ್ತಿದ್ದನು. ಸೆರೆಮನೆಯಲ್ಲಿ ಆರಾಧನಾ ಕೂಟ!

3) *ಆ ರಾತ್ರಿಯ ಎರಡನೆಯ ಅದ್ಭುತ* – ಭೂಕಂಪದ ಅದ್ಭುತ: ಬಾಗಿಲುಗಳು ತೆರೆಯಲ್ಪಟ್ಟವು ಮತ್ತು ಸರಪಳಿಗಳಿಂದ ಸಡಿಲಗೊಂಡ ಖೈದಿಗಳು. ಸೆರೆಮನೆಯ ಅಧಿಕಾರಿ ಎಚ್ಚೆತ್ತುಕೊಂಡು, ಸೆರೆಮನೆಯ ಬಾಗಿಲುಗಳು ತೆರೆದಿರುವುದನ್ನು ಕಂಡು ಸೆರೆಯಾಳುಗಳು ತಪ್ಪಿಸಿಕೊಂಡು ಹೋಗಿರಬಹುದೆಂದು ಭಾವಿಸಿ, ತನ್ನ ಖಡ್ಗವನ್ನು ಹಿರಿದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿದ್ದನು.

4) *ಆ ರಾತ್ರಿಯ ಮೂರನೆಯ ಅದ್ಭುತ* – ಸೆರೆಮನೆಯ ಅಧಿಕಾರಿಯ ಮತ್ತು ಆತನ ಕುಟುಂಬದವರ ರಕ್ಷಣೆ: ಸೆರೆಮನೆಯ ಅಧಿಕಾರಿಯ ಆತ್ಮಹತ್ಯೆಯ ಯತ್ನವನ್ನು ಪೌಲನು ತಡೆದನು. ಸೆರೆಮನೆಯ ಅಧಿಕಾರಿಯು ಜೀವಿತದ ಬಹು ಪ್ರಾಮುಖ್ಯವಾದ ಪ್ರಶ್ನೆಯನ್ನು ಕೇಳಿದನು: 'ಮಹನೀಯರೆ ನಾನು ರಕ್ಷಣೆ ಹೊಂದಲು ಏನು ಮಾಡಬೇಕು?' ಪೌಲನು ಮೊದಲು ಸಂಕ್ಷಿಪ್ತವಾದ ಉತ್ತರವನ್ನು ಕೊಟ್ಟನು. 'ಕರ್ತನಾದ ಯೇಸುವಿನಲ್ಲಿ ವಿಶ್ವಾಸವನ್ನಿಡು, ನೀನು ರಕ್ಷಣೆ ಹೊಂದುವಿ' ಎಂದು ಹೇಳಿದನು. ನಂತರ ಅಪೋಸ್ತಲರು ಸೆರೆಮನೆಯ ಅಧಿಕಾರಿಗೂ ಆತನ ಮನೆಯವರಿಗೂ ಸುವಾರ್ತೆಯನ್ನು ವಿವರಿಸಿದರು.

5) *ಸುವಾರ್ತಾ ಸಂದೇಶ* – ಯೇಸು ಕ್ರಿಸ್ತನ ಮೂಲಕವಿರುವ ರಕ್ಷಣೆಯ ಶುಭವಾರ್ತೆಯ ಪ್ರಮುಖ ಅಂಶಗಳನ್ನು ವಿವರಿಸಿರಿ. ಅಕ್ರೈಸ್ತ ಶ್ರೋತೃಗಳು ಅರ್ಥಮಾಡಿಕೊಳ್ಳಬಲ್ಲ ಸರಳ ಭಾಷೆಯನ್ನು ಉಪಯೋಗಿಸಿರಿ.

6) *ಆ ರಾತ್ರಿಯ ನಾಲ್ಕನೆಯ ಅದ್ಭುತ* – ಬದಲಾದ ಜೀವಿತಗಳು: ಸೆರೆಮನೆಯ ಅಧಿಕಾರಿ ಹಾಗೂ ಆತನ ಕುಟುಂಬದವರು ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡರು. ಇದರ ನೇರ ಪರಿಣಾಮವಾಗಿ ಎರಡು ಸಂಗತಿಗಳು ಉಂಟಾದವು:

- ಅವರು ಅದೇ ರಾತ್ರಿಯಲ್ಲಿ ದೀಕ್ಷಾಸ್ನಾನವನ್ನು ಹೊಂದಿದರು. ಇದರ ಅರ್ಥವೇನೆಂದರೆ, ಸುವಾರ್ತಾ ಸಂದೇಶವು ('ಕರ್ತನ ಸುವಾರ್ತೆಯು' ವ. 32) ದೀಕ್ಷಾಸ್ನಾನದ ಕುರಿತು ಕೆಲವು ವಿಷಯಗಳನ್ನು ಒಳಗೊಂಡಿರಲೇಬೇಕು.
- ಅವರ ಮನೋಭಾವನೆಗಳು ಬದಲಾದವು. ಅವರು ಅಪೋಸ್ತಲರ ಗಾಯಗಳನ್ನು ತೊಳೆದರು ಮತ್ತು ಅವರಿಗೆ ಊಟವನ್ನು ಬಡಿಸಿದರು.

7) *ಉಪಸಂಹಾರ:* ಯೇಸು ಕ್ರಿಸ್ತನನ್ನು ಸ್ವೀಕರಿಸಿ ವರ್ತಮಾನಕ್ಕೂ ಮತ್ತು ನಿತ್ಯತ್ವಕ್ಕೂ ಜೀವನದಲ್ಲಿ ಬದಲಾವಣೆ ಕಾಣಲು ಆಹ್ವಾನ!

# ಪಾಠ 45. ಥೆಸಲೋನಿಕದಲ್ಲಿ, 17:1–10

## ಅ) ವಾಕ್ಯಭಾಗ

ಪೌಲ ಮತ್ತು ಸೀಲರ ಪ್ರಯಾಣದ ಮುಂದಿನ ತಂಗುದಾಣವು ಮೆಕದೋನಿಯದ ರಾಜಧಾನಿಯಾದ ಥೆಸಲೋನಿಕವಾಗಿತ್ತು. ಅಪೋಸ್ತಲರು ಮೊದಲಿಗೆ ಸಭಾಮಂದಿರದಲ್ಲಿ ಮಾತನಾಡಿದರು ಮತ್ತು ಅನೇಕ ಜನರು ಸುವಾರ್ತೆಗೆ ಒಳ್ಳೆಯ ಪ್ರತಿಕ್ರಿಯೆಯನ್ನು ತೋರಿಸಿದರು. ತಕ್ಷಣ ಕೆಲವು ಯೆಹೂದ್ಯರು ಅಸೂಯೆಪಟ್ಟು ಗಲಬೆಯನ್ನು ಎಬ್ಬಿಸಿದರು. ಅಪೋಸ್ತಲರು ರೋಮ್ ಚಕ್ರವರ್ತಿಯ ವಿರುದ್ಧ ರಾಜದ್ರೋಹ ಮಾಡಿದ್ದಾರೆಂಬ ಆಪಾದನೆಗೆ ಒಳಗಾದರು ಮತ್ತು ಅವರು ರಾತ್ರಿಯಲ್ಲಿ ಪಟ್ಟಣವನ್ನು ಬಿಡಬೇಕಾಯಿತು.

## ಆ) ಟಿಪ್ಪಣಿ

*ಅವರು ಅಂಫಿಪೊಲಿಸ್ ಮತ್ತು ಅಪೋಲ್ಲೋನಿಯ ಮಾರ್ಗವಾಗಿ ಥೆಸಲೋನಿಕಕ್ಕೆ ಬಂದರು* (ವ. 1): ಈ ಮೂರು ಪಟ್ಟಣಗಳು ಪೂರ್ವದಿಂದ ಪಶ್ಚಿಮಕ್ಕೆ ಸಾಗುವ ಎಗ್ನೇಷಿಯನ್ ಹೆದ್ದಾರಿಯ ಬಳಿಯಲ್ಲಿ ನೆಲೆಸಿದ್ದವು, ಇಂದು ಅದು ಗ್ರೀಸ್‌ನ ಉತ್ತರ ಭಾಗವೆಂದು ಕರೆಯಲ್ಪಡುತ್ತದೆ. ಫಿಲಿಪ್ಪಿಯಿಂದ ಥೆಸಲೋನಿಕಕ್ಕೆ 160 ಕಿ.ಮೀ.ರಷ್ಟು ದೂರವಿತ್ತು. ಈ ಅಂತರವು 3–4 ದಿನಗಳಲ್ಲಿ ತಲುಪುವಂತಹದ್ದಾಗಿತ್ತು. ಥೆಸಲೋನಿಕವು ಮೆಕೆದೋನಿಯದ ರಾಜಧಾನಿಯಾಗಿದ್ದು 2 ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆಯುಳ್ಳ ಪ್ರಮುಖ ಬಂದರಾಗಿತ್ತು. ಅದು ಯೆಹೂದ್ಯರ ನಿವಾಸ ಸ್ಥಳವನ್ನೂ ಮತ್ತು ಒಂದು ಸಭಾಮಂದಿರವನ್ನೂ ಹೊಂದಿತ್ತು.

*ಯಾಸೋನನ ಮನೆ* (ವ. 5): ದಂಗೆಕೋರರು ಯಾಸೋನನ ಮನೆಯ ಮೇಲೆ ದಾಳಿ ಮಾಡಲು ಕಾರಣವೇನೆಂದರೆ ಪೌಲ ಮತ್ತು ಸೀಲರು ಅಲ್ಲಿ ತಂಗಿದ್ದರು.

*ಅವರು ಯೇಸು ಎಂಬ ಬೇರೊಬ್ಬ ಅರಸನಿದ್ದಾನೆ ಎಂದು ಹೇಳುತ್ತಾ ಚಕ್ರವರ್ತಿಯ ವಿರುದ್ಧವಾಗಿ ನಡೆಯುತ್ತಾರೆ* (ವ. 7): ಚಕ್ರವರ್ತಿಗೆ ವಿರುದ್ಧವಾಗಿ ಪ್ರತಿಸ್ಪರ್ಧಿಯನ್ನು ಪ್ರೋತ್ಸಾಹಿಸುವಂತಹದ್ದು ರಾಜದ್ರೋಹವಾಗಿತ್ತು. ಇದು ರೋಮನ್ನರಿಗೆ ಗಂಭೀರವಾದ ಆಪಾದನೆಯಾಗಿತ್ತು. ಪೌಲ ಮತ್ತು ಸೀಲರು ಅಪರಾಧಿಗಳೆಂದು ಸಾಬೀತಾಗಿದ್ದರೆ ಅವರಿಗೆ ಮರಣದಂಡನೆಯ ತೀರ್ಪು ಉಂಟಾಗುತ್ತಿತ್ತು. ಯೆಹೂದ್ಯರಿಗೆ ದೇವದೂಷಣೆ ಮಾಡುವಂತಹದ್ದು ದೊಡ್ಡ ಆಪಾದನೆಯಾಗಿತ್ತು.

## ಇ) ಪಠ್ಯ ಪ್ರಶ್ನೆಗಳು

1. ನಕ್ಷೆಯಲ್ಲಿ ಈ ಸ್ಥಳಗಳನ್ನು ಗುರುತಿಸಿರಿ: ತ್ರೋವ, ಅಂಫಿಪೊಲಿಸ್, ಅಪೋಲ್ಲೋನಿಯ, ಥೆಸಲೋನಿಕ ಮತ್ತು ಮೆಕೆದೋನಿಯ!

2. ಥೆಸಲೋನಿಕದಲ್ಲಿದ್ದ ಯೆಹೂದ್ಯರಿಗೆ ಪೌಲನು ಸಾರಿದ ಸಂದೇಶದಲ್ಲಿದ್ದ ಮೂರು ಪ್ರಮುಖ ಅಂಶಗಳಾವುವು?
3. ಪ್ರಾರಂಭದ ವಾರಗಳಲ್ಲಿ ಪೌಲನ ಸೇವೆಯ ಫಲವೇನಾಗಿತ್ತು?
4. ಪಟ್ಟಣದಲ್ಲಿ ಯಾಕೆ ಗಲಬೆಯುಂಟಾಗಿತ್ತು?
5. ಅಪೋಸ್ತಲರ ವಿರುದ್ಧ ಮಾಡಲ್ಪಟ್ಟ ಆಪಾದನೆ ಏನು?
6. ಈ ಆಪಾದನೆಗೆ ಪಟ್ಟಣದ ಅಧಿಕಾರಿಗಳು ಹೇಗೆ ಪ್ರತಿಕ್ರಿಯಿಸಿದರು?
7. ಗಲಬೆಯ ತಕ್ಷಣ ಪೌಲ ಮತ್ತು ಸೀಲರಿಗೆ ಏನು ಸಂಭವಿಸಿತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನು ಥೆಸಲೋನಿಕದಲ್ಲಿ ಮೊದಲ ಬಾರಿಗೆ ಬಂದಾಗ ಸತತವಾಗಿ ಮೂರು ಸಬ್ಬತ್ ದಿನಗಳಂದು ಸಭಾಮಂದಿರಕ್ಕೆ ಹೋಗಿ ಮಾತನಾಡಿದನು. ಆತನು ತನ್ನ ಸಂದೇಶವನ್ನು ಯಾವುದರ ಮೇಲೆ ಆಧರಿಸಿದನು? ಮತ್ತು ಯಾಕೆ?
2. ಪೌಲ ಮತ್ತು ಸೀಲರು ಥೆಸಲೋನಿಕದಲ್ಲಿ ಎಷ್ಟು ಕಾಲ ನೆಲೆಸಿದರೆಂದು ನೀವು ಆಲೋಚಿಸುತ್ತೀರಿ? ನಿಮ್ಮ ಉತ್ತರಕ್ಕೆ ಕಾರಣಗಳನ್ನು ಕೊಡಿರಿ!
3. ಥೆಸಲೋನಿಕದಲ್ಲಿನ ಮೊದಲ ವಿಶ್ವಾಸಿಗಳು ಯಾರು? ಅವರ ಹಿನ್ನಲೆ ಏನಾಗಿತ್ತೆಂದು ನೀವು ಆಲೋಚಿಸುತ್ತೀರಿ?
4. ಯಾಸೋನನಿಂದಲೂ ಮತ್ತಿತರರಿಂದಲೂ ಜಾಮೀನು ಪಡೆದು ಅವರನ್ನು ಬಿಡುಗಡೆಮಾಡಿದರು (ವ. 9). ಇದಕ್ಕೆ ಕಾರಣಗಳೇನಾಗಿರಬಹುದು? ಮತ್ತು ಇದರಿಂದ ಭವಿಷ್ಯದಲ್ಲಿ ಉಂಟಾದ ಪರಿಣಾಮಗಳೇನಾಗಿರಬಹುದು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಯಾಸೋನನಿಂದಲೂ ಮತ್ತು ಇತರರಿಂದಲೂ ಜಾಮೀನು ಪಡೆದುಕೊಳ್ಳುವುದರ ಮೂಲಕವಾಗಿ ಅಧಿಕಾರಿಗಳು ಥೆಸಲೋನಿಕದಲ್ಲಿದ್ದ ಸಭೆ ಮತ್ತು ಅದರ ಕಾರ್ಯಚಟುವಟಿಕೆಗಳ ಮೇಲೆ ತಮ್ಮ ನಿಯಂತ್ರಣವನ್ನು ಸಾಧಿಸಿದರು (ಮತ್ತು ಬಹುಶಃ ಪೌಲನು ಹಿಂತಿರುಗಿ ಬರುವುದನ್ನೂ ತಡೆದರು). ಅಧಿಕಾರಿಗಳು ನಿಮ್ಮ ಮೇಲೆ ನಿಯಂತ್ರಣವನ್ನು ಸಾಧಿಸಿದ ಅನುಭವವನ್ನು ನೀವು ಅಥವಾ ನಿಮ್ಮ ಸಭೆಯು ಹೊಂದಿದೆಯೋ? ಏನು ಸಂಭವಿಸಿತೆಂಬುದನ್ನು ವಿವರಿಸಿ ಮತ್ತು ಅದು ಸಭೆಯ ಕಾರ್ಯಚಟುವಟಿಕೆಯ ಮೇಲೆ ಯಾವ ರೀತಿಯಾಗಿ ಪರಿಣಾಮ ಬೀರಿತು. ಇದರ ಕುರಿತಾಗಿ ನೀವು ಏನನ್ನು ಮಾಡಿದಿರಿ?

2. ಥೆಸಲೋನಿಕದ ಸಭೆಯ ಕಥೆಯು ಸರ್ವೆಸಾಮಾನ್ಯವಾದ ಪರಿಸ್ಥಿತಿಯನ್ನು ನಿದರ್ಶಿಸುತ್ತದೆ. ಸುವಾರ್ತೆಯು ಸಾರಲ್ಪಟ್ಟಾಗ ಜನರು ತಮ್ಮ ಹಳೆಯ ಜೀವಿತಗಳನ್ನು ತ್ಯಜಿಸುವುದರೊಂದಿಗೆ ಪ್ರತಿಕ್ರಿಯೆ ತೋರಿಸುತ್ತಾರೆ. ಥೆಸಲೋನಿಕದಲ್ಲಿ ಕೆಲವರು ಸಭಾಮಂದಿರಗಳನ್ನು ತೊರೆದು ಸಭೆಯನ್ನು ಸೇರಿಕೊಂಡರು. ಇತರರು ತಮ್ಮ ಗ್ರೀಕ್ ದೇವರುಗಳು ಮತ್ತು ವಿಗ್ರಹಗಳನ್ನು ಆರಾಧಿಸುವುದನ್ನು ತ್ಯಜಿಸಿ ಒಬ್ಬನೇ ಸತ್ಯದೇವರನ್ನು ಆರಾಧಿಸಲು ಪ್ರಾರಂಭಿಸಿದರು. ಅವರೆಲ್ಲರೂ ಯೇಸುವನ್ನು ರಾಜಾಧಿರಾಜನೆಂದು ಗೌರವಿಸಿ ರೋಮ್ ಚಕ್ರವರ್ತಿಯ ಸ್ಥಾನದ ಮೇಲೆ ಆತನನ್ನು ಇರಿಸಿದರು. ಹಾಗಾಗಿ ಮುಖಂಡರು ಮತ್ತು ಸಾರ್ವಜನಿಕರು ಅಸೂಯೆಪಟ್ಟು ಕೋಪಗೊಂಡರು ಮತ್ತು ಈ ಕ್ರೈಸ್ತರು ದೇಶದ ಕಾನೂನನ್ನು ಮುರಿದು 'ದೇಶದಲ್ಲಿ ಗಲಬೆಯುಂಟಾಗಲು' ಕಾರಣರಾಗಿದ್ದಾರೆಂದು ಹೇಳಿಕೊಳ್ಳುತ್ತಿದ್ದರು. ನಂತರ ಅವರು ಗಲಬೆ ಎಬ್ಬಿಸಿ ಕ್ರೈಸ್ತರನ್ನು ದೂಷಿಸಲು ಪ್ರಾರಂಭಿಸಿದರು!

ದಕ್ಷಿಣ ಭಾರತದ ಸನ್ನಿವೇಶ ಹಿನ್ನಲೆಯಲ್ಲಿ ಇದೇ ರೀತಿಯ ಸಂಗತಿಗಳು ಸಂಭವಿಸುತ್ತವೋ? ನಿಮ್ಮ ಸ್ವಂತ ಅನುಭವವನ್ನು ಹಂಚಿಕೊಳ್ಳಿರಿ!

ಧಾರ್ಮಿಕ ಮುಖಂಡರು ಮತ್ತು ರಾಜಕೀಯ ನಾಯಕರುಗಳು ಹೊಟ್ಟೆಕಿಚ್ಚಿನಿಂದ ಕೋಪಗೊಂಡು ಗಲಬೆ ಎಬ್ಬಿಸಿ ಕ್ರೈಸ್ತರು 'ಕಾನೂನು ಬಾಹಿರ ಚಟುವಟಿಕೆ ಮಾಡುತ್ತಿದ್ದಾರೆಂದು' ದೂಷಿಸುವಾಗ ದಕ್ಷಿಣ ಭಾರತದಲ್ಲಿರುವ ವಿಶ್ವಾಸಿಗಳು ಹೇಗೆ ಪ್ರತಿಕ್ರಿಯಿಸಬೇಕೆಂದು ನೀವು ಆಲೋಚಿಸುತ್ತೀರಿ?

# ಪಾಠ 46. ಬೆರೋಯದಲ್ಲಿ, 17:10–15

## ಅ) ವಾಕ್ಯಭಾಗ

ಪೌಲ ಮತ್ತು ಸೀಲರು ಥೆಸಲೋನಿಕವನ್ನು ಬಹಳ ಅವಸರದಿಂದ ಬಿಟ್ಟುಹೋಗಬೇಕಾಯಿತು. ಅವರು ಬೆರೋಯಕ್ಕೆ ಬಂದಾಗ ಯೆಹೂದ್ಯರ ಸಭಾಮಂದಿರಕ್ಕೆ ಸುವಾರ್ತೆಯನ್ನು ಸಾರಲು ಹೋದರು. ಅಲ್ಲಿದ್ದ ಜನರು ಬಹಳ ಆಸಕ್ತಿಯಿಂದ ಕೇಳುವವರಾಗಿದ್ದರು ಮತ್ತು ಪೌಲನು ಮಾತನಾಡುತ್ತಿರುವುದು ನಿಜವಾದದ್ದೋ ಎಂದು ದೇವರ ವಾಕ್ಯವನ್ನು ಧ್ಯಾನಿಸುತ್ತಿದ್ದರು. ಅನೇಕ ಜನರು ನಂಬಿದರು. ಆದರೆ ಥೆಸಲೋನಿದಲ್ಲಿದ್ದ ಯೆಹೂದ್ಯರು ಇದನ್ನು ಕೇಳಿ ಬೆರೋಯಕ್ಕೆ ಬಂದು ಅಪೋಸ್ತಲರ ವಿರುದ್ಧವಾಗಿ ಜನಸಮೂಹವನ್ನು ಪ್ರಚೋದಿಸಿ ಗಲಬೆಯೆಬ್ಬಿಸಿದರು. ಹಾಗಾಗಿ ಪೌಲನು ಪುನಃ ಅಲ್ಲಿನ ಸೇವೆಯನ್ನು ಅವಸರದಿಂದ ಬಿಟ್ಟು ಹೋಗಬೇಕಾಗಿತ್ತು.

## ಆ) ಟಿಪ್ಪಣಿ

*ಬೆರೋಯ* (ವ. 10): ಥೆಸಲೋನಿಕದಿಂದ ಬೆರೋಯವು 80 ಕಿ.ಮೀ.ರಷ್ಟು ದೂರವಿದ್ದಿತ್ತು. ರೋಮನ್ನರ ಅಡಿಯಲ್ಲಿ ಅದು ಮೆಕೆದೋನಿಯ ರಾಷ್ಟ್ರಸಂಘದ ಪ್ರಧಾನ ಕಛೇರಿಯಾಗಿ ಮತ್ತು ಸಾಮ್ರಾಜ್ಯಶಾಹಿಯಾಗಿ ಮಾರ್ಪಟ್ಟಿತು. ಹೊಸ ಒಡಂಬಡಿಕೆಯ ದಿನಗಳಲ್ಲಿ ಇದು ಒಂದು ಜನಭರಿತವಾದ ಮತ್ತು ಸಮೃದ್ಧಿಯಿಂದ ಕೂಡಿದ್ದ ಪಟ್ಟಣವಾಗಿತ್ತು.

*ಸಮುದ್ರತೀರಕ್ಕೆ* (ವ. 14): ಬೆರೋಯವು ಸಮುದ್ರ ತೀರದಿಂದ 30 ಕಿ.ಮೀ ದೂರದಲ್ಲಿತ್ತು. ಅಲ್ಲಿಂದ ಪೌಲನು ಅಥೆನ್ಸ್‌ಗೆ ಹಡಗಿನ ಮೂಲಕವೋ ಅಥವಾ ದಕ್ಷಿಣಕ್ಕೆ ಹೋಗುವ ಪ್ರಮುಖ ಹೆದ್ದಾರಿಯ ಮೂಲಕವೋ ಪ್ರಯಾಣಿಸಿರಬಹುದು. ಅದರ ಅಂತರವು 550 ಕಿ.ಮೀ.ರಷ್ಟಿತ್ತು.

## ಇ) ಪಠ್ಯ ಪ್ರಶ್ನೆಗಳು

1. ಈ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿ; ಬೆರೋಯ ಮತ್ತು ಅಥೆನ್ಸ್!
2. ಪೌಲ ಮತ್ತು ಸೀಲರು ಬೆರೋಯಕ್ಕೆ ಬಂದಾಗ ಅವರು ಮೊದಲು ಎಲ್ಲಿಗೆ ಹೋದರು?
3. ಪೌಲನ ಬೋಧನೆಯನ್ನು ಬೆರೋಯದವರು ಸ್ವೀಕರಿಸಿದ ರೀತಿಯನ್ನು ಚಿತ್ರಿಸಿರಿ!
4. ಬೆರೋಯದಲ್ಲಿ ಪೌಲನು ಮಾಡಿದ ಸೇವೆಯ ಫಲವೇನು?
5. ಪೌಲನು ಬೆರೋಯವನ್ನು ತತ್‌ಕ್ಷಣದಲ್ಲಿ ಯಾಕೆ ಬಿಟ್ಟುಹೋಗಬೇಕಾಗಿತ್ತು?
6. ಸೀಲ ಮತ್ತು ತಿಮೋಥಿಗೆ ಏನು ಸಂಭವಿಸಿತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನು ಥೆಸಲೋನಿಕದಲ್ಲಿ ಮತ್ತು ಬೆರೋಯದಲ್ಲಿ ಮಾಡಿದ ಸೇವೆಗಳ ನಡುವೆ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳೇನು?
2. ಥೆಸಲೋನಿಕದಲ್ಲಿ ಗಲಬೆಯುಂಟಾದಾಗ ಪೌಲ ಮತ್ತು ಸೀಲರಿಬ್ಬರೂ ಆ ಸ್ಥಳವನ್ನು ಬಿಟ್ಟು ಹೋಗಬೇಕಾಯಿತು. ಆದರೆ ಬೆರೋಯದಲ್ಲಿ ಸಮಸ್ಯೆಯುಂಟಾದಾಗ ಪೌಲನು ಮಾತ್ರ ಬಿಟ್ಟುಹೋಗಬೇಕಾಯಿತು. ಈ ವ್ಯತ್ಯಾಸಕ್ಕೆ ಕಾರಣವೇನಾಗಿರಬಹುದು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಅನೇಕ ದೇಶಗಳಲ್ಲಿ ಪೆಂತಕೋಸ್ತ ಸಭೆಯವರು ಮತ್ತು ಇತರೆ ವಿಶ್ವಾಸಿಗಳು ಸತ್ಯವೇದ ಶಾಲೆಗಳ ಮತ್ತು ಸತ್ಯವೇದ ಕಾಲೇಜುಗಳ ವಿರುದ್ಧವಾಗಿ ಮಾತನಾಡುವಂತಹದ್ದು ಬಹಳ ದುಃಖಕರವಾದ ವಿಚಾರವಾಗಿದೆ. ಅವರು ಮೂರು ರೀತಿಯಾದ ವಾದಗಳನ್ನು ಉಪಯೋಗಿಸುತ್ತಾರೆ.

- ಕೆಲವರು ಈ ರೀತಿಯಾಗಿ ವಾದಿಸುತ್ತಾರೆ: 'ಸತ್ಯವೇದ ಶಾಲೆಗೆ ಜನರನ್ನು ಕಳುಹಿಸುವಂತಹದ್ದು ಕಾಲ ಹರಣವಾಗಿದೆ. ಅದರ ಬದಲಾಗಿ ಅವರು ಹೊರಟು ಹೋಗಿ ಸುವಾರ್ತೆಯನ್ನು ಸಾರಬಹುದು. ಯೇಸು ಅತೀ ಬೇಗನೆ ಹಿಂತಿರುಗಿ ಬರಲಿದ್ದಾನೆ, ಆ ದಿನ ಬರುವುದಕ್ಕೂ ಮುನ್ನ ಎಷ್ಟು ಸಾಧ್ಯವೋ ಅಷ್ಟು ಆತ್ಮಗಳನ್ನು ನಾವು ಗೆಲ್ಲಬೇಕು. ನಮ್ಮ ಯೌವ್ವನಸ್ಥರು ಸತ್ಯವೇದ ಶಾಲೆಯಲ್ಲಿ ಅಭ್ಯಾಸಿಸುತ್ತಿರುವಾಗ ಜನರು ತಮ್ಮ ಪಾಪಗಳಲ್ಲಿ ಸಾಯುತ್ತಿದ್ದಾರೆ'.
- ಇತರರು ಈ ರೀತಿಯಾಗಿ ವಾದಿಸುತ್ತಾರೆ: 'ಸತ್ಯವೇದ ಶಾಲೆಗಳ ಅಥವಾ ಸತ್ಯವೇದ ಕಾಲೇಜುಗಳ ಅಗತ್ಯವಿಲ್ಲ. ಪಠ್ಯಪುಸ್ತಕಗಳು ಅನವಶ್ಯಕವಾಗಿವೆ. ಸತ್ಯವೇದವನ್ನು ಓದಿದರಷ್ಟೇ ಸಾಕು. ನಿನ್ನಷ್ಟಕ್ಕೆ ನೀನೇ ಅದನ್ನು ಮಾಡಬಹುದು. ಸತ್ಯವೇದವೇ ಸಾಕಷ್ಟು ಸ್ಪಷ್ಟವಾಗಿದೆ. ಬೇರೆ ಯಾವುದೇ ಸಂಗತಿಗಳ ಅಗತ್ಯವಿಲ್ಲ'.
- ಇನ್ನೂ ಕೆಲವರು ಈ ರೀತಿಯಾಗಿ ವಾದಿಸುತ್ತಾರೆ: 'ಸತ್ಯವೇದ ಶಾಲೆಗಳು ಮತ್ತು ಸತ್ಯವೇದ ಕಾಲೇಜುಗಳು ಅಪಾಯಕಾರಿಯಾಗಿದೆ. ನಮ್ಮ ಯೌವ್ವನಸ್ಥರನ್ನು ಅಲ್ಲಿಗೆ ಕಳುಹಿಸುವುದಾದರೆ ಅವರು ಗೊಂದಲಕ್ಕೆ ಒಳಗಾಗಿ ತಮ್ಮ ನಂಬಿಕೆಯನ್ನೂ ಸಹ ಕಳಕೊಳ್ಳಬಹುದು. ಸತ್ಯವೇದ ಕಾಲೇಜಿನ ಉಪನ್ಯಾಸಕರು ವೈಚಾರಿಕತೆಯುಳ್ಳವರು ಅವರು ನಮ್ಮ ಯೌವನಸ್ಥರ ಮನಸ್ಸನ್ನು ಮಾರ್ಪಡಿಸಬಹುದು'.

ಸತ್ಯವೇದ ಶಾಲೆಗಳಿಗೆ ಅಥವಾ ಸತ್ಯವೇದ ಕಾಲೇಜುಗಳಿಗೆ ಯೌವ್ವನಸ್ಥರನ್ನು ಕಳುಹಿಸುವುದರ ಕುರಿತು ನಿಮ್ಮ ಸಭಾಪಾಲಕರ, ನಿಮ್ಮ ಸಭೆಯ ಮತ್ತು ನಿಮ್ಮ ಪಂಗಡದ ಮನೋಭಾವನೆ ಹೇಗಿದೆ? ಅವರು ಅದರ ಪರವಾಗಿದ್ದಾರೋ ಅಥವಾ ವಿರೋಧವಾಗಿದ್ದಾರೋ? ಅವರು ಮೇಲಿನ ಯಾವುದಾದರೂ ವಾದ ಮಾಡುತ್ತಾರೋ?

## ಊ) ಉಪದೇಶಿಸು ಮತ್ತು ಬೋಧಿಸು!

ನಿಮ್ಮ ಸಭೆಯಲ್ಲಿರುವ ಹಿರಿಯರಿಗಾಗಿ ಮತ್ತು ಇತರೆ ನಾಯಕರುಗಳಿಗಾಗಿ ಸತ್ಯವೇದ ಅಧ್ಯಯನ ಮಾಡಲು ಅ. ಕೃ. 17:10–12 ನ್ನು ಉಪಯೋಗಿಸಿಕೊಳ್ಳಿರಿ. ಈ ಅಧ್ಯಯನದ ಉದ್ದೇಶವೇನೆಂದರೆ ಅವರು ಸತ್ಯವೇದ ಶಾಲೆ ಮತ್ತು ಕಾಲೇಜಿಗೆ ಯೌವನಸ್ಥರನ್ನು – ಪುರುಷರನ್ನು ಮತ್ತು ಸ್ತ್ರೀಯರನ್ನು – ಕಳುಹಿಸುವಂತೆ ಪ್ರೋತ್ಸಾಹ ಮಾಡುವುದಾಗಿದೆ. ಈ ಹಿಂದೆ ಅವರು ಮನಸ್ಸಿಲ್ಲದವರಾಗಿದ್ದರು.

***ಅ. ಕೃ. 17:10–12 – ಬೆರೋಯದವರ ಮಾದರಿ*** ಎಂಬುದಾಗಿ ನಿಮ್ಮ ಅಧ್ಯಯನವನ್ನು ಕರೆಯಬಹುದು. ನಿಮ್ಮ ಅಧ್ಯಯನವು ಈ ಕೆಳಗಿನ ಪ್ರಮುಖ ಅಂಶಗಳನ್ನು ಒಳಗೊಂಡಿರಲಿ:

1. ಹಿನ್ನಲೆ: ನಮ್ಮ ಸಭೆಯಿಂದ ಯೌವನಸ್ಥರನ್ನು ನಾವು ಯಾಕೆ ಸತ್ಯವೇದ ಶಾಲೆಗೆ ಮತ್ತು ಸತ್ಯವೇದ ಕಾಲೇಜಿಗೆ ಕಳುಹಿಸುವುದಿಲ್ಲ. ನಮ್ಮ ಕಾರಣಗಳು ಏನಾಗಿರಬಹುದು?
    - ಕಾಲ ಹರಣ (ಮೇಲಿರುವ ***ಉ*** ಅಂಶವನ್ನು ನೋಡಿರಿ)
    - ಅವಶ್ಯವಿಲ್ಲ (ಮೇಲಿರುವ ***ಉ*** ಅಂಶವನ್ನು ನೋಡಿರಿ)
    - ಅಪಾಯಕಾರಿ (ಮೇಲಿರುವ ***ಉ*** ಅಂಶವನ್ನು ನೋಡಿರಿ)
    - ಸತ್ಯವೇದ ಅಧ್ಯಯನವನ್ನು ಮುಗಿಸಿಕೊಂಡು ಸತ್ಯವೇದದ ಜ್ಞಾನವನ್ನು ಹೊಂದಿ ಹಿಂತಿರುಗುವ ವಿದ್ಯಾರ್ಥಿಗಳ ಕುರಿತು ಸಭಾಪಾಲಕರಿಗೆ (ಮತ್ತು ಇತರ ನಾಯಕರುಗಳಿಗೆ) ಹೆದರಿಕೆಯುಂಟಾಗುತ್ತದೆ.
    - ಕಳುಹಿಸಲು ನಮ್ಮಲ್ಲಿ ತಕ್ಕ ಯೌವನಸ್ಥರುಗಳಿಲ್ಲ.
    - ಶುಲ್ಕ ಮತ್ತು ಇತರೆ ವೆಚ್ಚವನ್ನು ಪಾವತಿಸಲು ನಮ್ಮಲ್ಲಿ ಹಣವಿಲ್ಲ. ನಮ್ಮ ಸಭೆಯಲ್ಲಿ ಬೇರೆ ಕಾರ್ಯಚಟುವಟಿಕೆಗಳಿಗಾಗಿ ನಾವು ಪ್ರಾಧಾನ್ಯತೆಕೊಡಬೇಕಾಗಿದೆ.
    - ಬೇರೆ ಕಾರಣಗಳು
2. ಬೆರೋಯದವರು: ಅವರು ಸುಸಂಸ್ಕೃತರಾಗಿದ್ದರು. ಈ ನಡತೆಯು ಅವರಲ್ಲಿ ಹೇಗೆ ಬಂದಿತು?
    - ಅವರು ಪೌಲನ ಸಂದೇಶವನ್ನು ಬಹಳ ಆಸಕ್ತಿಯಿಂದ ಸ್ವೀಕರಿಸಿದರು.
    - ಪೌಲನು ಮಾತನಾಡುತ್ತಿರುವುದು ಸತ್ಯವಾದದ್ದೋ ಎಂಬುದನ್ನು ಧರ್ಮಶಾಸ್ತ್ರದಲ್ಲಿ ಪರೀಕ್ಷಿಸಿದರು.
    - ಅವರು ಪ್ರತಿನಿತ್ಯ ಧರ್ಮಶಾಸ್ತ್ರವನ್ನು ಅಭ್ಯಾಸಿಸುತ್ತಿದ್ದರು.
    - ಅವರು ದೇವರ ವಾಕ್ಯಕ್ಕೆ ಪ್ರತಿಕ್ರಿಯಿಸಿ ನಂಬಿದರು.
3. ಉಪಸಂಹಾರ: ಬೆರೋಯದವರು ದೇವರ ವಾಕ್ಯವನ್ನು ಆಸಕ್ತಿಯಿಂದ ಆಳವಾಗಿ, ಕ್ರಮಬದ್ಧವಾಗಿ ಮತ್ತು ಎಡಬಿಡದೆ ಅಭ್ಯಾಸಿಸುವ ಅಗತ್ಯತೆಯನ್ನು ಅರ್ಥಮಾಡಿಕೊಂಡಿದ್ದರು!

4. ನಮ್ಮ ಸಭೆಯಲ್ಲಿ ನಾವು ಬೆರೋಯದವರ ಹಾಗೆ ಇದ್ದೇವೋ? ನಮ್ಮನ್ನು ನಾವು ಪರೀಕ್ಷಿಸಿಕೊಳ್ಳಲು ಈ ಮೂರು ಪ್ರಮುಖ ಪ್ರಶ್ನೆಗಳಿಗೆ ಯಥಾರ್ಥವಾದ ಉತ್ತರಗಳನ್ನು ಕೊಡೋಣ:

   - ಬೆರೋಯದವರಂತೆ ನಾವು ನಮ್ಮ ಸಭೆಯಲ್ಲಿ ದೇವರ ವಾಕ್ಯವನ್ನು ಗಂಭೀರವಾಗಿ ಪರಿಗಣಿಸುತ್ತೇವೋ?
   - ಆಸಕ್ತಿಯಿಂದ ಆಳವಾಗಿ, ಕ್ರಮಬದ್ಧವಾಗಿ ಮತ್ತು ಎಡಬಿಡದೆ ದೇವರ ವಾಕ್ಯವನ್ನು ಅಭ್ಯಾಸಿಸಲು ಯೌವ್ವನಸ್ಥರಿಗೆ (ಪುರುಷರಿಗೂ ಮತ್ತು ಮಹಿಳೆಯರಿಗೂ) ನಮ್ಮ ಸಭೆಯಲ್ಲಿ ಸಾಕಷ್ಟು ಅವಕಾಶಗಳನ್ನು ನೀಡಿದ್ದೇವೋ?
   - ನಮ್ಮ ಕಾಲದ ಸಮಸ್ಯೆಗಳನ್ನೂ, ಆಕರ್ಷಕ ಕ್ರೈಸ್ತ ಪತ್ರಿಕೆಗಳ ಮತ್ತು ಪುಸ್ತಕಗಳ ಮತ್ತು ಡಿವಿಡಿ, ಕ್ಯಾಸೆಟ್, ಟಿವಿ ಕಾರ್ಯಕ್ರಮಗಳ ಮೂಲಕ ನಮ್ಮ ಮೇಲೆ ದಾಳಿಮಾಡುವ ವಿಚಿತ್ರವಾದ ಮತ್ತು ಕೆಲವೊಮ್ಮೆ ಸುಳ್ಳಾದ ಬೋಧನೆಗಳನ್ನೂ ಎದುರಿಸಲು ಸಾಕಷ್ಟು ಸತ್ಯವೇದ ಜ್ಞಾನವನ್ನು ನಮ್ಮ ಸಭೆಯ ಸದಸ್ಯರು ಹೊಂದಿದ್ದಾರೋ?

5. ಒಂದು ವೇಳೆ ಈ ಯಾವುದಾದರೂ ಪ್ರಶ್ನೆಗೆ ನಮ್ಮ ಉತ್ತರವು ‘ ಇಲ್ಲ’ ಎಂಬುದಾಗಿ ಇರುವುದಾದರೆ ನಾವು ಅದರ ಕುರಿತಾಗಿ ಏನನ್ನಾದರೂ ಮಾಡಬೇಕು!

   - ನಮ್ಮ ಸಭೆಯಿಂದ ಪುರುಷರನ್ನೂ ಮಹಿಳೆಯರನ್ನೂ ಸತ್ಯವೇದ ಶಾಲೆ ಮತ್ತು ಸತ್ಯವೇದ ಕಾಲೇಜಿಗೆ ಕಳುಹಿಸಬೇಕು!
   - ನಾವು ಕಳುಹಿಸಲು ಯೋಗ್ಯರಾದ ವ್ಯಕ್ತಿಗಳನ್ನು – ಪುರುಷರನ್ನೂ ಮಹಿಳೆಯರನ್ನೂ – ಗುರುತಿಸಬೇಕು!
   - ಅವರು ದೇವರ ವಾಕ್ಯವನ್ನು ಕಲಿಯುವಾಗ ನಾವು ಅವರ ಶುಲ್ಕವನ್ನು ಭರಿಸಬೇಕು, ಅವರನ್ನು ಪ್ರೋತ್ಸಾಹಿಸಿ ಬಲಪಡಿಸಿ ಅವರಿಗಾಗಿ ಪ್ರಾರ್ಥಿಸಬೇಕು!

# ಪಾಠ 47. ಅಥೆನ್ಸ್‌ನಲ್ಲಿ, 17:16–34

## ಅ) ವಾಕ್ಯಭಾಗ

ಪೌಲನು ತನ್ನ ಸಹುದ್ಯೋಗಿಗಳಾದ ಸೀಲ ಮತ್ತು ತಿಮೋಥಿಯರಿಲ್ಲದೆ ತತ್ವಜ್ಞಾನಿಗಳು ಮತ್ತು ವಿಗ್ರಹಾರಾಧಕರುಗಳಿಂದ ಕೂಡಿದ ಅಥೆನ್ಸ್ ಎಂಬ ಪಟ್ಟಣಕ್ಕೆ ಬಂದಿದ್ದನು. ಆತನು ದೈವಭಯವುಳ್ಳ ಗ್ರೀಕ್‌ರೊಂದಿಗೆ ಸಭಾಮಂದಿರದಲ್ಲಿಯೂ ಮತ್ತು ತತ್ವಜ್ಞಾನಿಗಳೊಂದಿಗೆ ಮಾರುಕಟ್ಟೆಯಲ್ಲಿಯೂ ಮಾತನಾಡುತ್ತಾ ಅಲ್ಲಿ ತನ್ನ ಸಮಯವನ್ನು ಕಳೆದನು. ಆತನು ಯೇಸುವಿನ ಮತ್ತು ಪುನರುತ್ಥಾನದ ಕುರಿತು ತಿಳಿಸಿದಾಗ ಅದು ತತ್ವಜ್ಞಾನಿಗಳಿಗೆ ಅರ್ಥವಾಗಲಿಲ್ಲ. ಆಗ ಅವರು ಅವನನ್ನು ಅರಿಯೊಪಾಗ ಎಂಬ ಸಭೆಗೆ ಕರೆತಂದರು, ಈ ಸಭೆಯವರು ತಾವು ಧಾರ್ಮಿಕ ಮತ್ತು ತತ್ವಶಾಸ್ತ್ರೀಯ ಉಪದೇಶಗಳ ಸಂರಕ್ಷಕರೆಂದು ಪರಿಗಣಿಸಿದ್ದರು. ಅವರು ಪೌಲನನ್ನು ಪ್ರಶ್ನಿಸಿದಾಗ ಆತನು ಒಂದು ಸಂದೇಶವನ್ನು ಸಾರುವುದರ ಮೂಲಕವಾಗಿ ಉತ್ತರಿಸಿದನು. ಆದರೆ ಆತನು ಯೇಸುವಿನ ಮತ್ತು ಆತನ ಪುನರುತ್ಥಾನದ ಕುರಿತು ಪ್ರಸ್ತಾಪಿಸಿದ ತಕ್ಷಣ ನೆರೆದಿದ್ದ ಸಭೆಯು ಆತನಿಗೆ ಅಡ್ಡಿಪಡಿಸಿತು. ಪೌಲನು ಅಥೆನ್ಸ್‌ನಲ್ಲಿ ಮಾಡಿದ ಸೇವೆಯ ಪರಿಣಾಮವಾಗಿ ಕೆಲವು ಜನರು ನಂಬಿದರು.

## ಆ) ಟಿಪ್ಪಣಿ

*ಅಥೆನ್ಸ್* (ವ. 16): ಪೌಲನು ಸಂಧಿಸುವುದಕ್ಕಿಂತ ಕೆಲವು ನೂರಾರು ವರ್ಷಗಳ ಮುಂಚೆ ಅಥೆನ್ಸ್ ಗ್ರೀಕ್ ರಾಜ್ಯದಲ್ಲಿನ ಅಟ್ಟಿಕಾ ಎಂಬ ಪ್ರಾಂತ್ಯದ ಪ್ರಸಿದ್ಧ ರಾಜಧಾನಿಯಾಗಿತ್ತು. ಈ ಪಟ್ಟಣಕ್ಕೆ ಅದರ ಆಶ್ರಯದಾತ ದೇವತೆಯಾದ ಅಥೆನಳ ಹೆಸರನ್ನು ಇಟ್ಟಿದ್ದರು. ಇದು ಅಕ್ರೊಪೊಲಿಸ್ ಎಂದು ಕರೆಯಲ್ಪಡುವ ಗುಡ್ಡಗಳಿಂದ ಆವರಿಸಲ್ಪಟ್ಟ ಸ್ಥಳವಾಗಿತ್ತು. ಇದು ಕನಿಷ್ಠ ಪಕ್ಷ 2 ½ ಲಕ್ಷ ಜನಸಂಖ್ಯೆಯನ್ನು ಹೊಂದಿತ್ತು ಮತ್ತು ಸಮುದ್ರದಿಂದ 8 ಕಿ.ಮೀ. ದೂರದಲ್ಲಿತ್ತು. ಹೊಸ ಒಡಂಬಡಿಕೆಯ ಕಾಲದಲ್ಲಿ ಅಥೆನ್ಸ್ ತನ್ನ ಮಹಿಮೆಯನ್ನು ಕಳಕೊಂಡಿತ್ತು. ಆದರೂ ಅದು ಸುಂದರವಾದ ದೇವಾಲಯಗಳು ಮತ್ತು ಸಾರ್ವಜನಿಕ ಕಟ್ಟಡಗಳುಳ್ಳ ಸಾಂಸ್ಕೃತಿಕ ಮಹತ್ವ ಹೊಂದಿದ್ದ ಒಂದು ನಗರವಾಗಿತ್ತು. ಇದು ಗ್ರೀಕ್ ಕಲೆ, ವಿಜ್ಞಾನ ಮತ್ತು ತತ್ವಶಾಸ್ತ್ರಗಳ ನೆಲೆಯಾಗಿತ್ತು ಹಾಗೂ ಅತೀ ಪ್ರಮುಖವಾದ ವಿಶ್ವವಿದ್ಯಾಲಯ ನಗರವಾಗಿತ್ತು. ಅದು ರಾಜಕೀಯವಾಗಿ ವಶವಾಗಿದ್ದರೂ ತನ್ನನ್ನು ವಶಪಡಿಸಿಕೊಂಡವರನ್ನು ತನ್ನ ಕಲಿಕೆ ಮತ್ತು ಸಂಸ್ಕೃತಿಯ ಮೂಲಕ ಅದು ವಶಪಡಿಸಿಕೊಂಡಿತ್ತು.

*ಎಪಿಕೂರಿಯರು ಹಾಗೂ ಸ್ತೋಯಿಕ್ ತತ್ವಜ್ಞಾನಿಗಳು* (ವ. 18): ಎಪಿಕೂರಿಯರು ಪೌಲನ ಕಾಲಕ್ಕಿಂತ 300 ವರ್ಷಗಳ ಮುಂಚೆ ಎಪಿಕೂರಸ್ ಎಂಬುವವನಿಂದ ಸ್ಥಾಪಿಸಲ್ಪಟ್ಟಿದ್ದ ತತ್ವಜ್ಞಾನಿ ಶಾಲೆಗೆ ಸಂಬಂಧಪಟ್ಟವರಾಗಿದ್ದರು. ಈ ತತ್ವಶಾಸ್ತ್ರವು ನಾಸ್ತಿಕತ್ವವಾಗಿತ್ತು ಮತ್ತು ಒಂದು ಸುಖಕರ ಮತ್ತು ಸರಳ ಜೀವನವನ್ನೇ ತಮ್ಮ ಉನ್ನತ ಗುರಿನ್ನಾಗಿಟ್ಟುಕೊಳ್ಳಬೇಕೆಂದು ಜನರಿಗೆ ಉಪದೇಶಿಸಿತು. ಸ್ತೋಯಿಕರು ಪೌಲನ ಕಾಲಕ್ಕಿಂತ ಸುಮಾರು ನೂರು ವರ್ಷಗಳ ಮುಂಚೆ ಜೆನೋ ಎಂಬ ಗ್ರೀಕ್ ತತ್ವಜ್ಞಾನಿಯಿಂದ ಸ್ಥಾಪಿಸಲ್ಪಟ್ಟ ಒಂದು ತತ್ವಜ್ಞಾನದ ಶಾಲೆಯಾಗಿತ್ತು. ಮನುಷ್ಯನ ಸಂತೋಷವು

ತನ್ನನ್ನು ವಿಶ್ವದ ಗತಿಯೊಂದಿಗೆ ಹೊಂದಿಸಿಕೊಳ್ಳುವುದರಲ್ಲಿ ಅಡಕವಾಗಿದೆ ಎಂಬುದು ಜ಼ಿನೋನ ಉಪದೇಶವಾಗಿತ್ತು. ಅವರು ಬಾಹ್ಯ ಸಂಗತಿಗಳಿಂದ ವಿಮುಕ್ತರಾಗುವಂತೆ ಕೆಡುಕನ್ನು ಅಲಕ್ಷ್ಯಿಸಲು ತರಬೇತಿ ಹೊಂದುತ್ತಿದ್ದರು. ಭೌತವಾದ, ಅದ್ವೈತವಾದ, ಅದೃಷ್ಟವಾದ ಮತ್ತು ಗರ್ವ ಈ ತತ್ವಶಾಸ್ತ್ರದ ಮುಖ್ಯ ಗುಣಲಕ್ಷಣಗಳಾಗಿವೆ.

*ಅರಿಯೊಪಾಗ* (ವ. 19): ಇದು ಅಕ್ರೊಪೊಲಿಸ್‌ನ ಪಶ್ಚಿಮದಲ್ಲಿದ್ದ ಮತ್ತು ಮಾರುಕಟ್ಟೆಯ ದಕ್ಷಿಣದಲ್ಲಿದ್ದ ಎತ್ತರವಾದ ಬಂಡೆಯ ಹೆಸರಾಗಿತ್ತು. ಪೌಲನ ಸಮಯಕ್ಕಿಂತ ಮುಂಚೆ ಅಲ್ಲಿ ನ್ಯಾಯಾಂಗದ ಸಭೆಯು ಸೇರುತ್ತಿತ್ತು. ಹೊಸ ಒಡಂಬಡಿಕೆಯ ಸಮಯದಲ್ಲಿ ಅರಿಯೊಪಾಗವು ಧಾರ್ಮಿಕ ಮತ್ತು ತತ್ವಜ್ಞಾನದ ವಿಚಾರಗಳ ಕುರಿತು ಮಾತ್ರ ವ್ಯವಹರಿಸುವ ಸಭೆಯಾಗಿತ್ತು. ಅವರು ಮಾರುಕಟ್ಟೆಯ ವಾಯುವ್ಯ ದಿಕ್ಕಿನ ಅಂಚಿನಲ್ಲಿ ಸೇರುತ್ತಿದ್ದರು.

*ನಿಮ್ಮ ಕವಿಗಳಲ್ಲಿ ಕೆಲವರು* (ವ. 28): ಈ ವಚನವು ಎರಡು ಉಲ್ಲೇಖನಗಳನ್ನೊಳಗೊಂಡಿದೆ. ಮೊದಲನೆಯದು (ನಾವು ಜೀವಿಸುವುದೂ, ಚಲಿಸುವುದೂ, ಇರುವುದೂ ದೇವರಲ್ಲಿಯೇ) ಎಪಿಮೆನಿಡೆಸ್ ಎಂಬ ಕ್ರೇಟದ ಕವಿಯಿಂದ ಬಂದಂತದ್ದಾಗಿದೆ (ಸುಮಾರು ಕ್ರಿ.ಪೂ. 600 ರಲ್ಲಿ). ಎರಡನೆಯದು (ನಾವು ನಿಜಕ್ಕೂ ದೇವರ ಮಕ್ಕಳೇ) ಸಿಲಿಸಿಯಾದವನಾದ ಅರಾತಸ್‌ನ ಕವಿತೆಯಲ್ಲಿಯೂ ಮತ್ತು ಕ್ಲಿಂಥೆಸ್‌ನ ಕವಿತೆಯಲ್ಲಿಯೂ ಕಂಡುಬರುತ್ತವೆ (ಇವರಿಬ್ಬರೂ ಸುಮಾರು ಕ್ರಿ.ಪೂ. 300 ರಲ್ಲಿ ಜೀವಿಸಿದವರು). ಈ ಕವಿತೆಗಳಲ್ಲಿ ಬರುವ 'ಆತನಲ್ಲಿ' ಮತ್ತು 'ಆತನ' ಎಂಬ ಪದಗಳು ಗ್ರೀಕ್ ದೇವನಾದ ಜ಼ೂಸ್‌ನನ್ನು ಉಲ್ಲೇಖಿಸುತ್ತದೆ. 1 ಕೊರಿ. 15:33 ಮತ್ತು ತೀತನು. 1:12 ರಲ್ಲಿಯೂ ಪೌಲನು ಗ್ರೀಕ್ ಕವಿಗಳನ್ನು ಉಲ್ಲೇಖಿಸುತ್ತಾನೆ.

*ಸತ್ತವರ ಪುನರುತ್ಥಾನದ* (ವ. 32): ಬಹುತೇಕ ಗ್ರೀಕರು ಮಾನವ ಆತ್ಮದ ಅಮರತ್ವವನ್ನು ನಂಬುತ್ತಿದ್ದರು, ಆದರೂ ಮಾನವ ಶರೀರದ ಪುನರುತ್ಥಾನವನ್ನು ನಂಬುತ್ತಿದ್ದಿಲ್ಲ.

*ದಿಯೊನಿಸಿಯನು ಮತ್ತು ದಾಮರಿ* (ವ. 34): ಈ ಇಬ್ಬರು ವ್ಯಕ್ತಿಗಳ ಕುರಿತು ಹೊಸ ಒಡಂಬಡಿಕೆಯಲ್ಲಿ ಬೇರೆಲ್ಲೂ ಪ್ರಸ್ತಾಪಿಸಲ್ಪಟ್ಟಿಲ್ಲ.

## ಇ) ಪಠ್ಯ ಪ್ರಶ್ನೆಗಳು

1. ನಕ್ಷೆಯಲ್ಲಿ ಅಥೆನ್ಸ್‌ನ್ನು ಗುರುತಿಸಿರಿ!
2. ಅಥೆನ್ಸ್‌ಗೆ ಯಾರು ಬರಬೇಕೆಂಬುದಾಗಿ ಪೌಲನು ಕಾಯುತ್ತಿದ್ದನು?
3. ಪೌಲನು ಅಥೆನ್ಸ್‌ನಲ್ಲಿ ಸಮಯ ಕಳೆದಾಗ ಯಾಕೆ ಸಂಕಟಪಟ್ಟನು?
4. ಪೌಲನು ಅಥೆನ್ಸ್‌ನಲ್ಲಿ ಹೇಗೆ ಸೇವೆ ಮಾಡಿದನು?

5. ಲೂಕನು ಅಥೆನಿಯರನ್ನು ಯಾವ ರೀತಿಯಾಗಿ ವರ್ಣಿಸುತ್ತಾನೆ?
6. ಪೌಲನು ಅರಿಯೊಪಾಗದ ಸಭೆಗೆ ಯಾಕೆ ಕರೆದೊಯ್ಯಲ್ಪಟ್ಟನು?
7. ಪೌಲನು ತನ್ನ ಸಂದೇಶದಲ್ಲಿ ಯೇಸು ಕ್ರಿಸ್ತನ ನಾಮವನ್ನು ಸೂಚಿಸುತ್ತಿಲ್ಲ. ಅದರ ಬದಲಾಗಿ ಯಾವ ಪದವಿನ್ಯಾಸವನ್ನು ಉಪಯೋಗಿಸುತ್ತಾನೆ?
8. ಪೌಲನ ಸಂದೇಶವನ್ನು ಆಲಿಸುತ್ತಿದ್ದವರು ಯಾವ ಸಂದರ್ಭದಲ್ಲಿ ಆತನಿಗೆ ಅಡ್ಡಿಮಾಡಿದರು?
9. ಪೌಲನ ಸಂದೇಶಕ್ಕೆ ಜನರು ವ್ಯತ್ಯಾಸವಾದ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಹೇಗೆ?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅರಿಯೊಪಾಗದ ಸಭೆಯಲ್ಲಿ ಪೌಲನು ತನ್ನ ಸಂದೇಶವನ್ನು ಹೇಗೆ ಪ್ರಾರಂಭಿಸಿದನು? ನಿಮ್ಮ ಅಭಿಪ್ರಾಯದಲ್ಲಿ, ಇದು ಒಳ್ಳೆಯ ಪ್ರಾರಂಭವಾಗಿತ್ತೋ ಅಥವಾ ಕೆಟ್ಟ ಪ್ರಾರಂಭವಾಗಿತ್ತೋ? ಯಾಕೆ?
2. ಪೌಲನು ತನ್ನ ಸಂದೇಶದಲ್ಲಿ ಅಕ್ರೈಸ್ತ ಗ್ರೀಕ್ ಕವಿಗಳನ್ನು ಉಲ್ಲೇಖಿಸುತ್ತಾನೆ. ಪೌಲನ ಕುರಿತು ಅದು ನಮಗೆ ಏನನ್ನು ತಿಳಿಸುತ್ತದೆ? ಆತನು ಮಾಡಿದ್ದನ್ನು ನೀವು ಮೆಚ್ಚುತ್ತೀರೋ? ಯಾಕೆ – ಯಾಕೆ ಇಲ್ಲ?
3. ಅಥೆನಿಯರು ಅನ್ಯ ದೇವರುಗಳ ಮೇಲೆ ಇಟ್ಟಿದ್ದ ನಂಬಿಕೆಯ ವಿರುದ್ಧ ಪೌಲನು ಹೇಗೆ ದಾಳಿ ಮಾಡಿದನು? ನಿಮ್ಮ ದಕ್ಷಿಣ ಭಾರತದ ಹಿನ್ನಲೆಯಲ್ಲಿ ನೀವು ಇದೇ ರೀತಿಯಾಗಿ ಎಂದಾದರೂ ಮಾಡುತ್ತೀರೋ? ಯಾಕೆ – ಯಾಕೆ ಇಲ್ಲ?
4. ಅಥೆನ್ಸ್‌ನಲ್ಲಿ ಪೌಲನು ಮಾಡಿದ ಸೇವೆಯನ್ನು ನೀವು ಹೇಗೆ ಮೌಲ್ಯಮಾಪನ ಮಾಡುತ್ತೀರಿ? ಅದು ಯಶಸ್ವಿಯಾಯಿತೋ ಇಲ್ಲವೋ? ನಿಮ್ಮ ಕಾರಣಗಳನ್ನು ಕೊಡಿರಿ!

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಪೌಲನು ಮೊಟ್ಟ ಮೊದಲ ಬಾರಿಗೆ ಅಥೆನ್ಸ್‌ಗೆ ಬಂದಿದ್ದನು. ಇದು ಪ್ರಪಂಚದಾದ್ಯಂತ ಪ್ರಸಿದ್ಧಿಯಾಗಿದ್ದ ಪಟ್ಟಣವಾಗಿತ್ತು, ಅದರ ದೇವಾಲಯಗಳಿಗೆ, ವಿಗ್ರಹಗಳಿಗೆ, ಸ್ಮಾರಕಗಳಿಗೆ ಮತ್ತು ಇತರ ಕಲಾಕೃತಿಗಳಿಗೆ, ಮಹಾವಿದ್ಯಾಲಯಗಳಿಗೆ, ಕವಿಗಳಿಗೆ, ಮತ್ತು ತತ್ವಶಾಸ್ತ್ರಿಗಳಿಗೆ ಅದು ಪ್ರಸಿದ್ಧಿಯಾಗಿತ್ತು. ಆತನು ಇವೆಲ್ಲವುಗಳಿಗೆ ಹೇಗೆ ಪ್ರತಿಕ್ರಿಯಿಸಿದನು?
    - ಆತನು ಏನನ್ನು ನೋಡಿದನು? ವಿಗ್ರಹಗಳಿಂದ ತುಂಬಿಕೊಂಡಿದ್ದ ಪಟ್ಟಣವನ್ನು ಆತನು ನೋಡಿದನು!
    - ಆತನಿಗೆ ಹೇಗನ್ನಿಸಿತು? ಆತನಿಗೆ ಸಂಕಟವಾಯಿತು, ಬಹುಶಃ ಕೋಪವೂ ಬಂದಿರಬಹುದು!

- ಆತನು ಏನು ಮಾಡಿದನು? ಆತನು ಪ್ರತಿದಿವಸ ಮಾರುಕಟ್ಟೆಯಲ್ಲಿಯೂ ಸುವಾರ್ತೆಯನ್ನು ಸಾರಿದನು!

ಈ ಅಂಶಗಳಿಗೆ ಸಂಬಂಧಿಸಿದಂತೆ ಅಥವಾ ಭಾರತದಲ್ಲಿರುವ ಒಂದು ಪ್ರಸಿದ್ಧ ಪಟ್ಟಣವನ್ನು ನೀವು ಸಂಧಿಸುವಾಗ – ನಿಮ್ಮ ಸೇವೆಗಾಗಿ ಪೌಲನಿಂದ ನೀವು ಏನನ್ನು ಕಲಿಯುತ್ತೀರಿ?

2. ಅಥೆನಿಯರಿಗೆ ಸಾರಿದ ಸಂದೇಶದಲ್ಲಿ ಪೌಲನು ಹಳೆ ಒಡಂಬಡಿಕೆಯನ್ನು ಉಲ್ಲೇಖಿಸುತ್ತಿಲ್ಲ. ಅದಕ್ಕೆ ಬದಲಾಗಿ ಆತನು ಅಕ್ರೈಸ್ತ ಗ್ರೀಕ್ ಕವಿಗಳ ಎರಡು ಹೇಳಿಕೆಗಳನ್ನು ಉಲ್ಲೇಖಿಸುತ್ತಾನೆ. ನೀವು ಉಪದೇಶಿಸುವಾಗ ಮತ್ತು ಬೋಧಿಸುವಾಗ ಅಕ್ರೈಸ್ತ ಸಾಹಿತ್ಯಗಳನ್ನು ಎಂದಾದರು ಉಪಯೋಗಿಸುತ್ತೀರೋ? ಉಪಯೋಗಿಸುವುದಾಗಿದ್ದರೆ, ಯಾವ ವಿಧವಾದ ಸಾಹಿತ್ಯವನ್ನು ಉಪಯೋಗಿಸುವಿರಿ? ನಿಮ್ಮ ಸಂಸ್ಥೆಯಲ್ಲಿರುವ ಅಥವಾ ಪಂಗಡದಲ್ಲಿರುವ ಸಭಾಪಾಲಕರು ಮತ್ತು ಸತ್ಯವೇದ ಶಿಕ್ಷಕರ ಕುರಿತು ಏನು – ಅವರು ಅಕ್ರೈಸ್ತ ಸಾಹಿತ್ಯವನ್ನು ಉಲ್ಲೇಖಿಸುತ್ತಾರೋ? ಒಂದು ವೇಳೆ ಒಬ್ಬ ಅತಿಥಿ ಬೋಧಕರು ನಿಮ್ಮ ಸಭೆಯಲ್ಲಿ ಉಪಯೋಗಿಸಿದರೆ – ನೀವು ಮತ್ತು ನಿಮ ಸಭೆಯ ಜನರು ಹೇಗೆ ಭಾವಿಸುತ್ತೀರಿ?

3. ಕ್ರೈಸ್ತ ನಂಬಿಕೆಯ ಒಂದು ಮೂಲ ಅಂಶವಾದ – ದೇಹದ ಪುನರುತ್ಥಾನದ ಸಿದ್ಧಾಂತದವನ್ನು – ಅಥೆನ್ಸ್‌ನ ಜನರು (ತತ್ವಜ್ಞಾನಿಗಳೂ ಹಾಗೂ ಅರಿಯೊಪಾಗ ಸಭೆಯೂ) ಅರ್ಥಮಾಡಿಕೊಳ್ಳಲು ಅಥವಾ ಸ್ವೀಕರಿಸಲು ಕಷ್ಟಪಟ್ಟರು. ನಿಮ್ಮ ಸ್ವಂತ ದಕ್ಷಿಣ ಭಾರತದ ಹಿನ್ನಲೆಯಲ್ಲಿ ನೀವು ಇಂತಹದ್ದೇ ರೀತಿಯ ಅನುಭವವನ್ನು ಹೊಂದಿದ್ದೀರೋ? ಅಕ್ರೈಸ್ತರಿಗೆ ಸ್ವಲ್ಪವೂ ಅರ್ಥವಾಗದ ಅಥವಾ ಅವರು ಆಕ್ಷೇಪಿಸುವ ಯಾವುದಾದರೂ ಪ್ರಮುಖ ಅಂಶವು ಕ್ರೈಸ್ತ ನಂಬಿಕೆಯಲ್ಲಿ ಇದೆಯೋ? ನಿಮ್ಮ ಶ್ರೋತೃಗಳು ಅಡ್ಡಿಪಡಿಸದಂತೆ ನೀವು ಅದನ್ನು ಹೇಗೆ ಅವರಿಗೆ ವಿವರಿಸುವಿರಿ?

## ಊ) ಉಪದೇಶಿಸು ಮತ್ತು ಬೋಧಿಸು!

1. ಈ ವಾಕ್ಯಭಾಗದಲ್ಲಿ ಲೂಕನು ಪೌಲನ ಮೂರನೆಯ ಸಂದೇಶದ ಸಾರಾಂಶವನ್ನು ತಿಳಿಸುತ್ತಾನೆ. ಮೊದಲನೆಯ ಸಂದೇಶವನ್ನು ಪೌಲನು ಪಿಸಿದ್ಯದ ಅಂತಿಯೋಕ್ಯದಲ್ಲಿ ಯೆಹೂದ್ಯರಿಗೂ ಮತ್ತು ದೈವಭಯವುಳ್ಳವರಿಗೂ ಮಾತನಾಡಿದ್ದನ್ನು ಅಧ್ಯಾಯ 13 ರಲ್ಲಿ ಕಾಣುತ್ತೇವೆ. ಎರಡನೆಯದನ್ನು ಪೌಲನು ಲುಸ್ತ್ರದಲ್ಲಿ ಅನಕ್ಷರಸ್ಥ ಅನ್ಯರೊಂದಿಗೆ ಮಾತನಾಡಿದ್ದನ್ನು ಅಧ್ಯಾಯ 14 ರಲ್ಲಿ ಕಾಣುತ್ತೇವೆ. ಈಗ ಅಧ್ಯಾಯ 17 ರಲ್ಲಿ ಪೌಲನ ಶ್ರೋತೃಗಳು ಉನ್ನತ ವ್ಯಾಸಂಗ ಮಾಡಿದ ಗ್ರೀಕ್ (ಅನ್ಯ) ತತ್ವಜ್ಞಾನಿಗಳಾಗಿದ್ದರು. ಈ ಮೂರು ಸಂದೇಶಗಳ ನಡುವೆ ಹೋಲಿಕೆ ಮಾಡುವುದಾದರೆ ಅವುಗಳನ್ನು ಹೇಳಿದ ರೀತಿ ಮತ್ತು ಅವುಗಳ ಅಂಶವು ಸಂಪೂರ್ಣವಾಗಿ ವ್ಯತ್ಯಾಸವಾಗಿರುವುದನ್ನು ಕಾಣಬಹುದು. ಇದರಿಂದ ನಾವೂ ಸಹ ನಮ್ಮ ಶ್ರೋತೃಗಳ ಹಿನ್ನಲೆಗೆ ತಕ್ಕಂತೆ ನಮ್ಮ ಸತ್ಯವೇದ ಅಧ್ಯಯನ ಮತ್ತು ನಮ್ಮ ಸಂದೇಶಗಳನ್ನು ರೂಪಿಸುವುದನ್ನು ಕಲಿಯುತ್ತೇವೆ.

2. ***ಅಥೆನ್ಸ್‌ನಲ್ಲಿ ಪೌಲನ ಸಂದೇಶವು*** ದೇವರ ಕುರಿತಾದ ಮತ್ತು ಯೇಸುವಿನ ಸುವಾರ್ತೆಯ ಕಡೆಗೆ ನಡೆಸುವ ಸಂದೇಶವಾಗಿದೆ. ಇದು ಈ ಕೆಳಗಿನ ***ರಚನೆಯನ್ನು*** ಹೊಂದಿದೆ:

1) ***ಶ್ರೋತೃಗಳಿಗೆ ಸಂಬಂಧಿಸುವ ಅಂಶ***

- ಅವರು ಅತೀ ಧಾರ್ಮಿಕ ಜನರಾಗಿದ್ದರು. ಪೌಲನು ಕಾಣದ ದೇವರಿಗೆ ಎಂಬ ಯಜ್ಞವೇದಿಯನ್ನೂ ಸಹ ಕಂಡಿದ್ದನು (ಇದು ಪೌಲನ ಸಂದೇಶದ 'ಪಥ್ಯವಾಯಿತು!'). ಅಥೆನಿಯರಿಗೆ ಪೌಲನು ಪ್ರಚುರ ಪಡಿಸಲಿಕ್ಕಿದ್ದ ದೇವರು ಈತನಾಗಿದ್ದನು, ಆತನ ಕುರಿತು ಅವರು ಅರಿಯದವರಾಗಿದ್ದರು.

2) ***ದೇವರು – ವಿಶ್ವದ ಸೃಷ್ಟಿಕರ್ತ***

- ಆತನು ವ್ಯಕ್ತಿಗತವಾದ ದೇವರು. ಆದಾಗ್ಯೂ ಆತನು ದೇವಾಲಯದಲ್ಲಿ ವಾಸಿಸದ ಅಲೌಕಿಕ ದೇವರಾಗಿದ್ದಾನೆ. ಈ ಅಂಶವು ಪೌಲನ ಶ್ರೋತೃಗಳಾಗಿದ್ದ ಎಪಿಕೂರಿಯರ ಹಾಗೂ ಸ್ತೋಯಿಕರ ತತ್ವಜ್ಞಾನ ಶಾಲೆಯನ್ನು ಸ್ಪಷ್ಟವಾಗಿ ವಿರೋಧಿಸಿತು.

3) ***ದೇವರು – ಜೀವದ ಪಾಲಕನು***

- ಆತನು ನಮಗೆ ಜೀವವನ್ನು ಮತ್ತು ಶ್ವಾಸವನ್ನು ಹಾಗೂ ಎಲ್ಲವನ್ನೂ ನೀಡುತ್ತಾನೆ. ಈ ಅಂಶವನ್ನು ಧೃಢಪಡಿಸಲು ಪೌಲನು ಗ್ರೀಕ್ ಕವಿಯ ಹೇಳಿಕೆಯನ್ನು ಉಲ್ಲೇಖಿಸುತ್ತಾನೆ.

4) ***ದೇವರು – ಎಲ್ಲಾ ರಾಷ್ಟ್ರಗಳ ಒಡೆಯನು***

- ಆದಾಮನೊಂದಿಗೆ ಪ್ರಾರಂಭಿಸಿ ಆತನು ಎಲ್ಲಾ ದೇಶಗಳನ್ನು ಉಂಟುಮಾಡಿದನು ಮತ್ತು ಅವರಿಗೆ ಭೂಮಿಯ ಮೇಲೂ ಮತ್ತು ಇತಿಹಾಸದಲ್ಲೂ ಸ್ಥಳವನ್ನು ಕೊಟ್ಟನು. ಹಾಗಾಗಿ ನಾವು ಆತನನ್ನು ಹುಡುಕಿದರೆ ನಾವು ಆತನನ್ನು ಕಂಡುಕೊಳ್ಳಬಹುದು.

5) ***ದೇವರು – ಮಾನವನ ತಂದೆ***

- ಪೌಲನು ಈ ಅಂಶವನ್ನು ಬೆಂಬಲಿಸುವುದಕ್ಕಾಗಿ ಮತ್ತೊಬ್ಬ ಗ್ರೀಕ್ ಕವಿಯನ್ನು ಉಲ್ಲೇಖಿಸುತ್ತಾನೆ. ಹಾಗಾಗಿ ಅಥೆನಿಯರು ಆತನನ್ನು ಚಿನ್ನ ಅಥವಾ ಬೆಳ್ಳಿ ಅಥವಾ ಕಲ್ಲುಗಳಿಂದ ಮಾಡಲ್ಪಟ್ಟಂತಹ ನಿರ್ಜೀವ ವಸ್ತುವಾಗಿ ಹೇಗೆ ಆಲೋಚಿಸಲು ಸಾಧ್ಯ? ದೇವರ ಸ್ವರೂಪಗಳನ್ನು ಮಾಡಿ ವಿಗ್ರಹಗಳನ್ನು ಆರಾಧಿಸುವಂತಹದ್ದು ಅಕ್ಷಮ್ಯವಾದದ್ದು. ಇಂಥ ಅಜ್ಞಾನ ಕಾಲವನ್ನು ಹಿಂದಿನ ಕಾಲದಲ್ಲಿ ದೇವರು ಗಮನಕ್ಕೆ ತಂದುಕೊಳ್ಳಲಿಲ್ಲ, ಆದರೆ ಈಗ ನಾವು ಮಾನಸಾಂತರಪಡುವಂತೆ ಆತನು ಆಜ್ಞಾಪಿಸುತ್ತಾನೆ.

6) ***ದೇವರು – ವಿಶ್ವದ ನ್ಯಾಯಾಧಿಪತಿ***

- ಅಥೆನಿಯರ ಧರ್ಮವು ಅಜ್ಞಾನದ ಮೇಲೆ ಆಧಾರವಾಗಿತ್ತು. ಈ ಅಜ್ಞಾನಕ್ಕೆ ನ್ಯಾಯಾತೀರ್ಪಾಗಬೇಕು. ಈ ನ್ಯಾಯತೀರ್ಪು ಇಡೀ ಪ್ರಪಂಚವನ್ನು ಒಳಗೊಳ್ಳುತ್ತದೆ. ಈ ನ್ಯಾಯತೀರ್ಪು ನ್ಯಾಯವಾದದ್ದಾಗಿರುತ್ತದೆ ಮತ್ತು ಈ ನ್ಯಾಯತೀರ್ಪು ನಿಶ್ಚಯವಾಗಿದೆ – ಆ ದಿನವೂ ಮತ್ತು ಆ ನ್ಯಾಯಾಧೀಶನು ಈಗಾಗಲೇ ನೇಮಕಗೊಂಡಿದೆ.

7) ***ಯೇಸುವಿನ ಕುರಿತಾದ ಸುವಾರ್ತೆ***

- ಈ ನೇಮಿಸಲ್ಪಟ್ಟ ನ್ಯಾಯಾಧೀಶನು ಯಾರು? ಆತನು ಯೇಸು ಕ್ರಿಸ್ತನಾಗಿದ್ದಾನೆ! ಆತನ ಸಂದೇಶದ ಈ ಹಂತದಲ್ಲಿ ಪೌಲನು ಅಥೆನಿಯರಿಗೆ (ಪಠ್ಯದಲ್ಲಿ ಲೂಕನು ಇದನ್ನು ಸೂಚಿಸದಿದ್ದರೂ) ಯೇಸು ಕ್ರಿಸ್ತನ (ಆತನ ಶ್ರಮೆ, ಮರಣ, ಮತ್ತು ಪುನರುತ್ಥಾನದ) ಕುರಿತಾದಂತಹ ಸುವಾರ್ತೆಯನ್ನು ತಿಳಿಸಿರಬೇಕು. ಯಾಕೆಂದರೆ ಅವರು 'ಪುನರುತ್ಥಾನ' ಎಂಬ ಪದವನ್ನು ಕೇಳಿದ ತಕ್ಷಣವೇ ಆತನಿಗೆ ಅಡ್ಡಿಪಡಿಸಿದರು.

ಈ ಸಂದೇಶದ ಹೊರರೇಖೆಯನ್ನು ನಿಮ್ಮ ಸ್ವಂತ ದಕ್ಷಿಣ ಭಾರತದ ಶ್ರೋತೃಗಳಿಗೆ ತಕ್ಕಂತೆ ರೂಪಿಸಿ ಉಪಯೋಗಿಸಬಹುದು.

# ಪಾಠ 48. ಕೊರಿಂಥದಲ್ಲಿ, 18:1–18

## ಅ) ವಾಕ್ಯಭಾಗ

ಪೌಲನು ಅಥೆನ್ಸ್‌ನಿಂದ ರಸ್ತೆಯ ಮೂಲಕವಾಗಿ ಅಥವಾ ಹಡಗಿನ ಮೂಲಕವಾಗಿ ಕೊರಿಂಥಕ್ಕೆ ಪ್ರಯಾಣಿಸಿದನು. ಪೌಲನು ಕೊರಿಂಥದಲ್ಲಿ ತಂಗಿದ್ದು ಅಕ್ವಿಲ ಮತ್ತು ಪ್ರಿಸ್ಕಿಲರೊಂದಿಗೆ ಕೆಲಸ ಮಾಡಿದನು. ಅವರು ಯೆಹೂದ್ಯ ವಿಶ್ವಾಸಿಗಳಾಗಿದ್ದು ಚಕ್ರವರ್ತಿಯಾದ ಕ್ಲಾಡಿಯಸ್‌ನ ಆಜ್ಞೆಯ ಮೇರೆಗೆ ರೋಮ್‌ನಿಂದ ಬಹಿಷ್ಕರಿಸಲ್ಪಟ್ಟಿದ್ದರು. ಅವರು ಗುಡಾರ ಮಾಡುವ ಕೆಲಸ ಮಾಡುವವರಾಗಿದ್ದರು. ಆತನು ಸಬ್ಬತ್ ದಿನದಂದು ಸಭಾಮಂದಿರಗಳಲ್ಲಿ ಮಾತನಾಡಿದನು. ನಂತರ ಸೀಲ ಮತ್ತು ತಿಮೋಥಿಯರು ಮೆಕೆದೋನಿಯದಿಂದ ಬಂದರು. ನಂತರ ಪೌಲನು 'ಸುವಾರ್ತಾ ವಾಕ್ಯವನ್ನು ಬೋಧಿಸುವುದರಲ್ಲಿಯೇ ತನ್ನನ್ನು ತಾನೇ ಸಂಪೂರ್ಣವಾಗಿ ಒಪ್ಪಿಸಿಕೊಟ್ಟನು'. ಯೆಹೂದ್ಯರು ಆತನನ್ನು ವಿರೋಧಿಸಿದಾಗ ಆತನು ಅನ್ಯರ ಕಡೆಗೆ ತಿರುಗಿದನು. ಅನೇಕ ಜನರು ಸುವಾರ್ತೆಯಲ್ಲಿ ವಿಶ್ವಾಸವನ್ನಿಟ್ಟು ದೀಕ್ಷಾಸ್ನಾನ ಪಡೆದುಕೊಂಡರು. ಅಂತವರಲ್ಲಿ ಸಭಾಮಂದಿರದ ನಾಯಕನಾದ ಕ್ರಿಸ್ಪನೂ ಮತ್ತು ಆತನ ಕುಟುಂಬದವರೂ ಸಹ ಆಗಿದ್ದಾರೆ. ವಿಶ್ವಾಸಿಗಳು ತೀತಯುಸ್ತ ಎಂಬುವನ ಮನೆಯಲ್ಲಿ ಕೂಡಿ ಬರುತ್ತಿದ್ದರು. ಒಂದು ರಾತ್ರಿ ಯೇಸು ಪೌಲನಿಗೆ ದರ್ಶನದಲ್ಲಿ ಕಾಣಿಸಿಕೊಂಡು ಆತನನ್ನು ಬಲಪಡಿಸಿ ಉತ್ತೇಜಿಸಿದನು. ಒಂದೂವರೆ ವರ್ಷಗಳ ನಂತರ ಗಲ್ಲಿಯೋನ ಎಂಬ ಹೊಸ ರೋಮನ್ ರಾಜ್ಯಪಾಲನು ನೇಮಿಸಲ್ಪಟ್ಟಾಗ ಯೆಹೂದ್ಯರು ಪೌಲನ ಸೇವೆಯನ್ನು ತಡೆಯಲು ತೀರ್ಮಾನ ಮಾಡಿಕೊಂಡು ಆತನನ್ನು ನ್ಯಾಯಸ್ಥಾನಕ್ಕೆ ಕರೆದುಕೊಂಡು ಹೋದರು. ಆದರೆ ಗಲ್ಲಿಯೋನನು ಅವರ ಆಪಾದನೆಯನ್ನು ತನ್ನ ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ, ಇದು ಸುವಾರ್ತೆಯು ಕಾನೂನು ಬಾಹಿರವಾದದ್ದೆಂದು ಆತನು ಪರಿಗಣಿಸಲಿಲ್ಲವೆಂಬುದನ್ನು ತೋರಿಸುತ್ತದೆ. ಪೌಲನು ಕೊರಿಂಥದಲ್ಲಿ ಇನ್ನೂ ಕೆಲವು ದಿನಗಳ ಕಾಲ ತಂಗಿದ್ದನು.

## ಆ) ಟಿಪ್ಪಣಿ

*ಕೊರಿಂಥ* (ವ. 1): ಒಂದು ವೇಳೆ ಪೌಲನು ಅಥೆನ್ಸ್‌ನಿಂದ ರಸ್ತೆ ಮಾರ್ಗವಾಗಿ ಪ್ರಯಾಣಿಸಿದ್ದರೆ ಅದರ ಅಂತರವು 80 ಕಿ.ಮೀ.ರಷ್ಟಿತ್ತು. ಆತನು (ಅಥೆನ್ಸ್‌ನ ಬಂದರಾದ) ಪೀರಿಯಸ್‌ನಿಂದ (ಕೊರಿಂಥದ ಮೂಡಣ ಬಂದರಾದ) ಕೆಂಖ್ರೆಯಗೆ ಸಮುದ್ರದ ಮಾರ್ಗವಾಗಿಯೂ ಪ್ರಯಾಣಿಸಿರಬಹುದು. ಕೊರಿಂಥವು ರೋಮನ್ ಸಾಮ್ರಾಜ್ಯದ ಅತೀ ದೊಡ್ಡ ಪಟ್ಟಣಗಳಲ್ಲಿ ಒಂದಾಗಿದ್ದು, 2 ½ ಲಕ್ಷ ಸ್ವತಂತ್ರರ ಮತ್ತು 4 ಲಕ್ಷ ಗುಲಾಮರ ಜನಸಂಖ್ಯೆ ಹೊಂದಿತ್ತು. ಕೊರಿಂಥವು ಬಹುಶಃ ಗ್ರೀಸ್‌ನ ಅತೀ ಪ್ರಮುಖ ಪಟ್ಟಣವಾಗಿತ್ತು ಮತ್ತು ಅದರ (ಎರಡು ಬಂದರುಗಳನ್ನು ಹೊಂದಿದ್ದು) ವಾಣಿಜ್ಯ ವಹಿವಾಟಿಗೆ, (ತತ್ವಶಾಸ್ತ್ರ ಮತ್ತು ಜ್ಞಾನ ಕೇಂದ್ರಿತವಾಗಿದ್ದು) ಅದರ ಸಂಸ್ಕೃತಿಗೆ, (ಪ್ರೇಮ ದೇವತೆಯಾದ ಅಫ್ರೋಡೈಟ್‌ನ ದೇವಾಲಯವನ್ನೊಳಗೊಂಡು ಅನೇಕ ದೇವಾಲಯಗಳಿದ್ದು) ಅದರ ಧರ್ಮಕ್ಕೆ ಮತ್ತು (ಅಫ್ರೋಡೈಟ್ ದೇವಾಲಯದಲ್ಲಿ 1000

ದೇವದಾಸಿಯರುಗಳಿದ್ದು) ಅದರ ಅನೈತಿಕತೆಗೆ ಪ್ರಸಿದ್ಧವಾಗಿತ್ತು. ಈ ಪಟ್ಟಣವು ರೋಮನ್ನರು, ಗ್ರೀಕರು, ಮತ್ತು ಯೆಹೂದ್ಯರಿಂದ (ಸಭಾ ಮಂದಿರವನ್ನು ಹೊಂದಿದ್ದವರು) ಕೂಡಿತ್ತು.

*ಅಕ್ವಿಲ... ಪೊಂತ... ಇಟಲಿ... ಪ್ರಿಸ್ಕಿಲ... ಕ್ಲಾಡಿಯಸ್... ರೋಮ್* (ವ. 2): ಅಕ್ವಿಲ ಮತ್ತು ಪ್ರಿಸ್ಕಿಲರು (ಪ್ರಿಸ್ಕ ಎಂದು ಸಹ ಕರೆಯಲ್ಪಟ್ಟಿದ್ದಾರೆ) ಪೌಲನ ನಿಕಟ ಸ್ನೇಹಿತರೂ ಮತ್ತು ಸಹುದ್ಯೋಗಿಗಳೂ ಆದರು. ಅವರು ಅಪೋಸ್ತಲರ ಕೃತ್ಯಗಳಲ್ಲಿ ಮತ್ತು ಪೌಲನ ಪತ್ರಿಕೆಗಳಲ್ಲಿ ಅನೇಕ ಬಾರಿ ಪ್ರಸ್ತಾಪಿಸಲ್ಪಟ್ಟಿದ್ದಾರೆ. ಪೊಂತವು ಕಪ್ಪು ಸಮುದ್ರದ ದಕ್ಷಿಣಕ್ಕಿದ್ದ ಏಷ್ಯಾ ಮೈನರ್‌ನ ಒಂದು ರೋಮನ್ ಪ್ರಾಂತ್ಯವಾಗಿತ್ತು. ಇಟಲಿಯಲ್ಲಿದ್ದ ರೋಮ್ ಪಟ್ಟಣವು ರೋಮ್ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ರೋಮ್ ಚಕ್ರವರ್ತಿಯಾದ ಕ್ಲಾಡಿಯಸ್‌ನು ಕ್ರಿ.ಶ. 41–54 ರಲ್ಲಿ ಆಳ್ವಿಕೆ ಮಾಡಿದನು. ಆತನು ಕ್ರಿ.ಶ. 49 ರಲ್ಲಿ ಎಲ್ಲಾ ಯೆಹೂದ್ಯರಿಗೆ ಮತ್ತು ಕ್ರೈಸ್ತರಿಗೆ ಬಹಿಷ್ಕಾರ ಹಾಕಿದನು. ನಂತರ ಅವರು ಹಿಂತಿರುಗಲು ಅವಕಾಶ ಮಾಡಲ್ಪಟ್ಟಿತು.

*ಗುಡಾರ ಮಾಡುವವರು* (ವ. 3): ತಮ್ಮ ಗಂಡು ಮಕ್ಕಳಿಗೆ ಕೈ ಕೆಲಸದ ತರಬೇತಿ ಕೊಡುವುದು ಯೆಹೂದ್ಯರ ಆಚಾರವಾಗಿತ್ತು. ಗುಡಾರ ಮಾಡುವವರು ತಡಿ ಮತ್ತು ಗುಡಾರಗಳನ್ನೊಳಗೊಂಡು ಎಲ್ಲಾ ರೀತಿಯ ಚರ್ಮದ ಉತ್ಪನ್ನಗಳನ್ನು ತಯಾರಿಸುತ್ತಿದ್ದರು. ಹಾಗಾಗಿ ಪೌಲನು ತನ್ನ ಜೀವನಕ್ಕಾಗಿ ಸ್ವಂತ ಕೈಯಿಂದ ಕೆಲಸ ಮಾಡುವುದರ ಕುರಿತು ನಾಚಿಕೆಪಡಲಿಲ್ಲ.

*ಮೆಕದೋನಿಯದಿಂದ ಸೀಲ ಮತ್ತು ತಿಮೋಥಿ ಬಂದ ತರುವಾಯ* (ವ. 5): ಪೌಲನು ತನ್ನ ಜೊತೆ ಕೆಲಸಗಾರರು ತನ್ನನ್ನು ಅಥೆನ್ಸ್‌ನಲ್ಲಿ ಭೇಟಿಯಾಗುವಂತೆ ಹೇಳಿದ್ದನು. ಕನಿಷ್ಟ ಪಕ್ಷ ತಿಮೋಥಿಯು ಅದನ್ನು ಮಾಡಿರಬಹುದು, ಯಾಕೆಂದರೆ ಆತನು ಅಥೆನ್ಸ್‌ನಿಂದ ಥೆಸಲೋನಿಕಕ್ಕೆ ಹಿಂತಿರುಗಿ ಹೋಗಿ ಅಲ್ಲಿರುವ ವಿಶ್ವಾಸಿಗಳ ಸ್ಥಿತಿಯನ್ನು ಪರಿಶೀಲಿಸಿಕೊಂಡು ಬಂದನು (1 ಥೆಸ. 3:1). ಬಹುಶಃ ಅವರು ಮೆಕದೋನಿಯ ಸಭೆಯಿಂದ ಹಣವನ್ನು ತಂದಿದ್ದರು.

*ತೀತಯುಸ್ತ* (ವ. 7): ತೀತಿಯನು ಎಂಬುದು ಒಂದು ಸಾಮಾನ್ಯವಾ ರೋಮನ್ ಹೆಸರಾಗಿದೆ, ಹಾಗಾಗಿ ಆತನು ದೈವಭಯವುಳ್ಳ ರೋಮನ್ನನ್ನಾಗಿರಬೇಕು.

*ಸಭಾಮಂದಿರದ ನಾಯಕ ಕ್ರಿಸ್ಪ* (ವ. 8): ಸಭಾಮಂದಿರದ ನಾಯಕನು ಸಭಾಮಂದಿರದಲ್ಲಿ ಎಲ್ಲವನ್ನೂ ಕ್ರಮವಾಗಿ ನೋಡಿಕೊಳ್ಳುವ, ಕೂಟವನ್ನು ಸಿದ್ಧಪಡಿಸಿ ಧರ್ಮಶಾಸ್ತ್ರ ಪಾರಾಯಣ ಮಾಡುವವರನ್ನು ಮತ್ತು ಸಂದೇಶಕರನ್ನು ಕರೆಯುವ ಜವಾಬ್ದಾರಿಯುಳ್ಳವನಾಗಿದ್ದನು. 1 ಕೊರಿ. 1:14 ರಲ್ಲಿ ಪೌಲನು ಕ್ರಿಸ್ಪನಿಗೆ ದೀಕ್ಷಾಸ್ನಾನ ಕೊಟ್ಟನೆಂದು ಪ್ರಸ್ತಾಪಿಸುತ್ತಾನೆ.

*ವಿಶ್ವಾಸವನ್ನಿಟ್ಟು ದೀಕ್ಷಾಸ್ನಾನ ಪಡೆದುಕೊಂಡರು* (ವ. 8): ಮೂಲ ಪತ್ಯದ ವ್ಯಾಕರಣವು ಸೂಚಿಸುವುದೇನೆಂದರೆ, ಇದು ಒಂದು ಪ್ರಕ್ರಿಯೆಯಾಗಿತ್ತು, ಒಂದು ಕಾಲಾವಧಿಯಲ್ಲಿ ನಡೆದದ್ದು.

*ಧರ್ಮಶಾಸ್ತ್ರಕ್ಕೆ ವಿರುದ್ಧವಾದ* (ವ. 13): ಯೆಹೂದ ಧರ್ಮವು ರೋಮನ್ ಕಾನೂನಿಂದ ಮಾನ್ಯತೆ ಪಡೆದಂತದ್ದಾಗಿತ್ತು, ಆದರೆ ಪೌಲನು ಮಾನ್ಯತೆ ಪಡೆಯದ ಧರ್ಮವನ್ನು ಪ್ರಚುರಪಡಿಸುತ್ತಿದ್ದಾನೆಂದು ಯೆಹೂದ್ಯರು ಆಪಾದಿಸಿದರು.

*ಗಲ್ಲಿಯೋನ ಎಂಬುವನು ಅಖಾಯದ ರಾಜ್ಯಪಾಲನಾಗಿದ್ದಾಗ* (ವ. 12): ಪ್ರಸಿದ್ಧ ತತ್ವಜ್ಞಾನಿಯಾದ ಸೆನೆಕನ ಸಹೋದರನಾದ ಗಲ್ಲಿಯೋನನು ಒಂದು ಪ್ರಾಚೀನ ಶಾಸನದಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ. ಈತನು ಕ್ರಿ.ಶ. 51–52 ರಲ್ಲಿ ಅಖಾಯದ ರಾಜ್ಯಪಾಲನಾಗಿ ನೇಮಕಗೊಂಡನು, ಇದು ಪೌಲನ ಸೇವಾ ಪ್ರಯಾಣದ ಕಾಲವನ್ನು ತಿಳಿಯಲು ಸತ್ಯವೇದ ಶಾಸ್ತ್ರಜ್ಞರಿಗೆ ಬಹಳ ಉಪಯುಕ್ತವಾಗಿದೆ.

*ಸೊಸ್ಥೆನನು* (ವ. 17): ಈತನು ಸಭಾಮಂದಿರದ ಅಧಿಕಾರಿಯಾದ ಕ್ರಿಸ್ಪನ ನಂತರ ಬಂದ ಉತ್ತರಾಧಿಕಾರಿಯಾಗಿರಬೇಕು. ಬಹುಶಃ ಈತನು ನಂತರ ವಿಶ್ವಾಸಿಯಾಗಿರಬೇಕು, ಯಾಕೆಂದರೆ 1 ಕೊರಿ. 1:1 ರಲ್ಲಿ ಇದೇ ಹೆಸರುಳ್ಳ ಒಬ್ಬ ವ್ಯಕ್ತಿಯ ಕುರಿತು ಪ್ರಸ್ತಾಪಿಸಲ್ಪಟ್ಟಿದೆ.

*ಇನ್ನೂ ಕೆಲವು ದಿನ ಪೌಲನು ಅಲ್ಲಿಯೇ ಉಳಿದುಕೊಂಡನು* (ವ. 18): ಹಾಗಾಗಿ ಬಹುಶಃ ಪೌಲನು ಕೊರಿಂಥದಲ್ಲಿ ಸುಮಾರು ಎರಡು ವರ್ಷಗಳ ಕಾಲ ತಂಗಿದ್ದನು.

## ಇ) ಪತ್ಯ ಪ್ರಶ್ನೆಗಳು

1. ನಕ್ಷೆಯಲ್ಲಿ ಕೊರಿಂಥವನ್ನು ಗುರುತಿಸಿರಿ!
2. ಅಕ್ವಿಲ ಮತ್ತು ಪ್ರಿಸ್ಕಿಲರು ಯಾರು? ಪೌಲನು ಯಾಕೆ ಅವರೊಂದಿಗೆ ತಂಗಿದ್ದನು?
3. 'ಇಂದಿನಿಂದ ನಾನು ಅನ್ಯ ಜನರ ಬಳಿಗೆ ಹೋಗುತ್ತೇನೆ' ಎಂದು ಪೌಲನು ಯಾಕೆ ಹೇಳಿದನು?
4. ಕ್ರಿಸ್ಪನು ಯಾರು? ಅವನಿಗೆ ಏನು ಸಂಭವಿಸಿತು?
5. ಯೆಹೂದ್ಯರು ಗಲ್ಲಿಯೋನನ ಮುಂದೆ ಪೌಲನ ವಿರುದ್ಧವಾಗಿ ತಂದಿದ್ದ ಆಪಾದನೆ ಏನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ತಿಮೋಥಿ ಮತ್ತು ಸೀಲರು ಮೆಕೆದೋನಿಯದಿಂದ ಬಂದಾಗ ಪೌಲನಲ್ಲಿಯೂ ಆತನ ಸೇವೆಯಲ್ಲಿಯೂ ಉಂಟಾದ ಬದಲಾವಣೆ ಏನು?

2. ಯೇಸು ಪೌಲನಿಗೆ ದರ್ಶನದಲ್ಲಿ ಯಾಕೆ ಕಾಣಿಸಿಕೊಂಡನೆಂದು ನೀವು ಆಲೋಚಿಸುತ್ತೀರಿ?

3. ಪೌಲನ ವಿರುದ್ಧವಾಗಿ ಯೆಹೂದ್ಯರು ಮಾಡಿದ ಆಪಾದನೆಗೆ ಗಲ್ಲಿಯೋನನು ಹೇಗೆ ಪ್ರತಿಕ್ರಿಯಿಸಿದನು? ಗಲ್ಲಿಯೋನನ ನಿರ್ಧಾರವು ಕೊರಿಂಥ ಮತ್ತು ಅಖಾಯದಲ್ಲಿನ ಸೇವೆಯ ಭವಿಷ್ಯದ ಮೇಲೆ ಹೇಗೆ ಪರಿಣಾಮ ಬೀರಬಹುದಿತ್ತು?

4. ಸೊಸ್ಥೆನನು ಯಾರು? ಆತನನ್ನು ಯಾರು ಹೊಡೆದರೆಂದು ನೀವು ಆಲೋಚಿಸುತ್ತೀರಿ? ಅವರು ಯಾಕೆ ಅವನನ್ನು ಹೊಡೆದರು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ಕಥೆಯಲ್ಲಿಯೂ (ಮತ್ತು ಪೌಲನ ಪತ್ರಿಕೆಗಳಲ್ಲಿಯೂ) ಪೌಲನು ತನ್ನ ಜೀವನಕ್ಕಾಗಿ ಸ್ವಂತ ಕೈಗಳಿಂದ ಕೆಲಸ ಮಾಡಲು ನಾಚಿಕೊಳ್ಳಲಿಲ್ಲವೆಂಬುದು ಸ್ಪಷ್ಟವಾಗಿ ಕಾಣುತ್ತದೆ. ಆದರೆ ಯಾಕೆ ದಕ್ಷಿಣ ಭಾರತದಲ್ಲಿ ಕೆಲವು ಸುವಾರ್ತಿಕರು ಮಾತ್ರ ಪೌಲನ ಈ ಮಾದರಿಯನ್ನು ಅನುಸರಿಸಲು ಮನಸ್ಸುಳ್ಳವರಾಗಿರುವುದನ್ನು ನಾವು ಕಾಣುತ್ತೇವೆ? ನೀವು ಒಬ್ಬ ಸುವಾರ್ತಿಕನಾಗಿ ಸ್ವಂತ ವ್ಯಾಪಾರದ ಅಥವಾ ಸರಕಾರಿ ಕೆಲಸದ ಮೂಲಕ ನಿಮ್ಮ ಸ್ವಂತ ಖರ್ಚನ್ನು ನೋಡಿಕೊಳ್ಳಲು ಮನಸ್ಸುಳ್ಳವರಾಗಿದ್ದೀರೋ? ಯಾಕೆ? ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

ಯೇಸು ಪೌಲನಿಗೆ ರಾತ್ರಿಯಲ್ಲಿ ದರ್ಶನದಲ್ಲಿ ಪ್ರತ್ಯಕ್ಷನಾದ ಕಥೆಯನ್ನು (ವ. 9–10) ***ಭಯಪಡಬೇಡ!*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನಕ್ಕಾಗಿ ಬಳಸಿರಿ. ನಿಮ್ಮ ಹೊರರೇಖೆಯು ಹೀಗಿರಬಹುದು:

1) ಹಿನ್ನಲೆಯ ಕುರಿತು ಕೆಲವು ಮಾತುಗಳು (ಕೊರಿಂಥದಲ್ಲಿ ಪೌಲನು)

- ಪೌಲನು ಸಭಾಮಂದಿರದಲ್ಲಿ ಮಾತನಾಡಿದನು
- ಯೆಹೂದ್ಯರು ಆತನ ಸೇವೆಯನ್ನು ವಿರೋಧಿಸಿದರು
- ತೀತಯುಸ್ತನ ಮನೆಯಲ್ಲಿ ಪೌಲನು ಮಾತನಾಡಿದನು
- ಸೇವೆಯ ಫಲ: ಕೆಲವು ಯೆಹೂದ್ಯರು ವಿಶ್ವಾಸವನ್ನಿಟ್ಟು ದೀಕ್ಷಾಸ್ನಾನ ಹೊಂದಿದರು (ಕ್ರಿಸ್ಪ ಮತ್ತು ಆತನ ಕುಟುಂಬದವರು ಹಾಗೂ ಬಹುಶಃ ಇತರರು). ಅನೇಕ ಅನ್ಯ ಮತಸ್ಥರು ರಕ್ಷಿಸಲ್ಪಟ್ಟು ದೀಕ್ಷಾಸ್ನಾನವನ್ನು ಹೊಂದಿದರು.

2) ರಾತ್ರಿಯ ದರ್ಶನ

- ಯೇಸು ಪೌಲನಿಗೆ ಹೇಳಿದ ಸಂಗತಿ – ‘ಭಯಪಡಬೇಡ’ ಎಂಬ ಮಾತಿನ ಮೇಲೆ ಹೆಚ್ಚು ಒತ್ತು ನೀಡಿರಿ.

3) ಯೇಸುವಿನಿಂದ ಪೌಲನು ಈ ಮಾತುಗಳನ್ನು ಕೇಳುವ ಅವಶ್ಯಕತೆ ಏನಿತ್ತು?

- ಕೊರಿಂಥದಲ್ಲಿ ಯೆಹೂದ್ಯರು ಈಗಾಗಲೇ ಆತನನ್ನು ವಿರೋಧಿಸಿದ್ದರು ಮತ್ತು ಈ ವಿರೋಧವು ಇನ್ನೂ ಹೆಚ್ಚಾಗಬಹುದೆಂದು ಪೌಲನು ನಿರೀಕ್ಷಿಸಿಕೊಂಡಿದ್ದನು. ನಿಜವಾಗಿಯೂ ಪರಿಸ್ಥಿತಿಯು ಬೆದರಿಸುವಂತಿತ್ತು. ಪೌಲನು ಹೆದರಲಿಕ್ಕೆ ಎಲ್ಲಾ ರೀತಿಯ ಕಾರಣಗಳಿದ್ದವು.

- ಇದರ ಜೊತೆಗೆ, ಪೌಲನು ಮೆಕದೋನಿಯದ ಮೂರು ಪಟ್ಟಣಗಳಲ್ಲಿ ಇತ್ತೀಚಿಗೆ ಕೆಟ್ಟ ಅನುಭವಗಳನ್ನು ಹೊಂದಿದ್ದನು

  - ಪೌಲ ಮತ್ತು ಸೀಲರಿಬ್ಬರು ಫಿಲಿಪ್ಪಿಯಲ್ಲಿ ಛಡಿಯಿಂದ ಥಳಿಸಲ್ಪಟ್ಟು ಸೆರೆಮನೆಯಲ್ಲಿ ಹಾಕಲ್ಪಟ್ಟರು.

  - ಪೌಲ ಮತ್ತು ಸೀಲರಿಬ್ಬರು ಹಿಂಸೆಯ ನಿಮಿತ್ತದಿಂದಾಗಿ ಮಧ್ಯರಾತ್ರಿಯಲ್ಲಿಯೇ ಥೆಸಲೋನಿಕವನ್ನು ಬಿಟ್ಟುಹೋಗಬೇಕಾಯಿತು.

  - ಆತನು ಹಿಂಸೆಯ ನಿಮಿತ್ತ ಬೆರೋಯವನ್ನು ತಕ್ಷಣದಲ್ಲಿ ಬಿಟ್ಟು ಹೋಗಬೇಕಾಯಿತು.

4) ನಿಮ್ಮ ಕುರಿತು ಏನು? ಯೇಸುವಿನಿಂದ ಉತ್ತೇಜನದ ಮಾತುಗಳು ನಿಮಗೆ ಬೇಕೋ?

- ನೀವು ಹಿಂಸೆಯನ್ನು ಎದುರಿಸುತ್ತಿದ್ದೀರೋ?

- ನಿಮ್ಮ ದಿನನಿತ್ಯದ ಜೀವಿತದಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದೀರೋ?

- ಭವಿಷ್ಯದ ಕುರಿತು ನೀವು ಭಯಪಡುತ್ತಿದ್ದೀರೋ?

5) ಯೇಸು ನಿನ್ನೊಂದಿಗೆ ಮಾತನಾಡಲು ಇಂದು ಇಲ್ಲಿದ್ದಾನೆ!

- ಆತನಿಗೆ ನಿನ್ನ ಪರಿಸ್ಥಿತಿ ತಿಳಿದಿದೆ!

- ಇಂದು ಆತನು ನಿಮಗೆ ಹೇಳುವುದೇನೆಂದರೆ ‘ಭಯಪಡಬೇಡ’!

ಸುವಾರ್ತಾ ಸೇವಕರಿಗಾಗಿ ***ಮಾತನಾಡುತ್ತಲೇ ಇರು – ನನಗಾಗಿ ಈ ಪಟ್ಟಣದಲ್ಲಿ ಅನೇಕ ಜನರಿದ್ದಾರೆ!*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಲು ಈ ಪಠ್ಯವನ್ನು ಉಪಯೋಗಿಸಿಕೊಳ್ಳಬಹುದು. ನಿಮ್ಮ ಹೊರರೇಖೆಯು ಹೀಗಿರಬಹುದು:

1) ಹಿನ್ನಲೆಯ ಕುರಿತು ಕೆಲವು ಮಾತುಗಳು (ಕೊರಿಂಥದಲ್ಲಿ ಪೌಲನು)

- ಪೌಲನು ಸಭಾಮಂದಿರದಲ್ಲಿ ಮಾತನಾಡಿದನು
- ಯೆಹೂದ್ಯರು ಆತನ ಸೇವೆಯನ್ನು ವಿರೋಧಿಸಿದರು
- ತೀತಯುಸ್ತನ ಮನೆಯಲ್ಲಿ ಪೌಲನು ಮಾತನಾಡಿದನು
- ಸೇವೆಯ ಫಲ: ಕೆಲವು ಯೆಹೂದ್ಯರು ವಿಶ್ವಾಸವನ್ನಿಟ್ಟು ದೀಕ್ಷಾಸ್ನಾನ ಹೊಂದಿದರು (ಕ್ರಿಸ್ಪ ಮತ್ತು ಆತನ ಕುಟುಂಬದವರು ಹಾಗೂ ಬಹುಶಃ ಇತರರು). ಅನೇಕ ಅನ್ಯ ಮತಸ್ಥರು ರಕ್ಷಿಸಲ್ಪಟ್ಟು ದೀಕ್ಷಾಸ್ನಾನವನ್ನು ಹೊಂದಿದರು.

2) ರಾತ್ರಿಯ ದರ್ಶನ

- ಯೇಸು ಪೌಲನಿಗೆ ಹೇಳಿದ ಸಂಗತಿ – 'ಭಯಪಡಬೇಡ' ಎಂಬ ಮಾತಿನ ಮೇಲೆ ಹೆಚ್ಚು ಒತ್ತು ನೀಡಿರಿ.

3) 'ಮಾತನಾಡುತ್ತಲೇ ಇರು' ಎಂಬ ಮಾತನ್ನು ಪೌಲನು ಕೇಳುವ ಅಗತ್ಯತೆ ಏನಿತ್ತು?

- ಬಹುಶಃ ಆತನು ಯೆಹೂದ್ಯರಿಂದುಂಟಾದ ವಿರೋಧದ ಕುರಿತು ಭಯಪಟ್ಟಿರಬಹುದು.
- ಬಹುಶಃ ತಾನು ಕೊರಿಂಥದಲ್ಲಿ ಸಾಕಷ್ಟು ಕೆಲಸ ಮಾಡಿದ್ದೇನೆಂದು ಆತನು ಆಲೋಚಿಸಿದ್ದಿರಬಹುದು. ಈಗಾಗಲೇ ಅನೇಕ ಕೊರಿಂಥದವರು ಸುವಾರ್ತೆಗಳನ್ನು ಕೇಳಿ ನಂಬಿ, ದೀಕ್ಷಾಸ್ನಾನವನ್ನು ಹೊಂದಿದ್ದರು. ಈಗ ಆ ಸ್ಥಳವನ್ನು ಬಿಟ್ಟು ಹೋಗುವ ಸಮಯವಾಗಿತ್ತು.
- ಬಹುಶಃ ಆತನು ಬಹಳ ಕೆಲಸ ಮಾಡಿ ದಣಿದಿರಬಹುದು. ಆತನು ಮೊದಲು ಸಭಾಮಂದಿರದಲ್ಲೂ ಮತ್ತು ನಂತರ ತೀತಯುಸ್ತನ ಮನೆಯಲ್ಲಿ ಶ್ರಮಪಟ್ಟು ಅನೇಕ ದಿವಸ ಕೆಲಸ ಮಾಡಿದ್ದನು. ತನ್ನ ಎಲ್ಲಾ ಬಲ ಮತ್ತು ಉತ್ಸಾಹ ಇಂಗಿಹೋಗಿದೆ ಎಂದು ಆತನು ಭಾವಿಸಿದನು. ಆತನು ಇನ್ನೂ ಮಾತನಾಡಲು ಬಯಸಲಿಲ್ಲ. ಆತನು ಸಾಕೆಂದುಕೊಂಡನು.

4) *ಯೇಸು* ಯಾಕೆ ಪೌಲನಿಗೆ ದರ್ಶನದ ಮೂಲಕವಾಗಿ 'ಮಾತನಾಡುತ್ತಲೇ ಇರು' ಎಂದು ಹೇಳಿದನು?

- ಯೇಸು ಪೌಲನನ್ನು ಪ್ರೋತ್ಸಾಹಿಸಲು ಬಯಸಿದನು: ವಿರೋಧದ ಕುರಿತು ಪೌಲನು ಭಯಪಡುವ ಯಾವ ಅಗತ್ಯತೆ ಇರಲಿಲ್ಲ.

- ಯೇಸು ಪೌಲನಿಗೆ ಭರವಸೆಯನ್ನು ಕೊಡಲು ಬಯಸಿದನು: ಉದ್ವಿಗ್ನ ಪರಿಸ್ಥಿತಿಯಲ್ಲಿಯ ಹೊರತಾಗಿಯೂ – ಆತನ ಮೇಲೆ ಯಾರೂ ದಾಳಿಮಾಡಲಾರರು.

- ಯೇಸು ಪೌಲನಿಗೆ ಕೊರಿಂಥದಲ್ಲಿ ಇನ್ನೂ ಹೆಚ್ಚಿನ ಕೆಲಸವಿದೆ ಎಂಬುದನ್ನು ನೆನಪಿಸಲು ಬಯಸಿದನು.

- ಹೌದು, ಅನೇಕರು ಈಗಾಗಲೇ ರಕ್ಷಿಸಲ್ಪಟ್ಟು ದೀಕ್ಷಾಸ್ನಾನವನ್ನು ಹೊಂದಿದ್ದರು, ಆದರೆ ಸುಗ್ಗಿಯು ಇನ್ನೂ ಸಂಪೂರ್ಣಗೊಂಡಿರಲಿಲ್ಲ
  - ಯೇಸು ಆ ಪಟ್ಟಣದಲ್ಲಿ ಇನ್ನೂ ಅನೇಕರನ್ನು ಹೊಂದಿದ್ದನು.
  - ಇನ್ನೂ ಅನೇಕರು ಸುವಾರ್ತೆಯನ್ನು ಕೇಳಲು ಕಾಯುತ್ತಿದ್ದರು.
  - ಪೌಲನು ಕೊರಿಂಥವನ್ನು ಬಿಟ್ಟು ಹೋಗುವ – ಅಥವಾ ಮಾತನಾಡುವುದನ್ನು ನಿಲ್ಲಿಸುವ ಸಮಯವು ಇನ್ನೂ ಬಂದಿರಲಿಲ್ಲ.

5) ನಿನ್ನ ಕುರಿತು ಏನು?

- ಯೇಸುವಿನ ಕುರಿತು ಮಾತನಾಡುವುದನ್ನು ನಿಲ್ಲಿಸಬೇಕೆಂದು ನಿಮಗೆ ಅನ್ನಿಸುತ್ತಿದೆಯೋ?
  - ನೀವು ಭಯಪಡುತ್ತಿದ್ದೀರೋ?
  - ನೀವು ನಿರುತ್ಸಾಹ ಹೊಂದಿದ್ದೀರೋ?
  - ನೀವು ಬಹಳ ಕೆಲಸ ಮಾಡಿ ದಣಿದಿದ್ದೀರೋ?

- ಯೇಸುವನ್ನು ಸೇವಿಸುವುದನ್ನು ನಿಲ್ಲಿಸಿಬಿಡಬೇಕೆಂದು ನಿಮಗೆ ಅನ್ನಿಸುತ್ತಿದೆಯೋ?
  - ನೀವು ಸಾಕಷ್ಟು ಕೆಲಸ ಮಾಡಿದ್ದೀರೆಂದು ನಿಮಗೆ ಅನ್ನಿಸುತ್ತಿದೆಯೋ?
  - ಇಲ್ಲಿಗೆ ಬಿಟ್ಟು ಮುಂದೆ ಸಾಗಬೇಕೆಂದು ನಿಮಗೆ ಅನ್ನಿಸುತ್ತಿದೆಯೋ?

- ಆದರೆ ಬಹುಶಃ ಯೇಸು ಇಂದು ನಿಮಗೆ ಹೇಳುವುದೇನೆಂದರೆ

- ‘ಮಾತನಾಡುತ್ತಲೇ ಇರು’

- ‘ನಿನ್ನ ಪಟ್ಟಣದಲ್ಲಿ ನನಗಾಗಿ ಬಹಳ ಜನರಿದ್ದಾರೆ’

# ಪಾಠ 49. ಪೌಲನು ಸಿರಿಯಾದ ಅಂತಿಯೋಕ್ಯಕ್ಕೆ ಹಿಂತಿರುಗಿದ್ದು, 18:18–22

## ಅ) ವಾಕ್ಯಭಾಗ

ಗಲ್ಲಿಯೋನನೊಂದಿಗಿನ ಘಟನೆಯ ನಂತರ ಕೆಲವು ಸಮಯದ ತರುವಾಯ ಪೌಲನು ಕೊರಿಂಥವನ್ನು ಬಿಟ್ಟು ಹೋದನು. ತಾನು ಹೊತ್ತ ಹರಕೆಯನ್ನು ಪೂರೈಸಿದ ಸಂಕೇತವಾಗಿ ಆತನು ಕೆಂಖ್ರೆ ಎಂಬ ಸ್ಥಳದಲ್ಲಿ ತಲೆ ಕೂದಲನ್ನು ಕ್ಷೌರ ಮಾಡಿಸಿಕೊಂಡನು. ಅಕ್ವಿಲ ಮತ್ತು ಪ್ರಿಸ್ಕಿಲರು ಪೌಲನೊಂದಿಗೆ ಹಡಗಿನಲ್ಲಿ ಎಫೆಸಕ್ಕೆ ಪ್ರಯಾಣ ಮಾಡಿದರು, ಮತ್ತು ಅವರು ಅಲ್ಲಿಯೇ ಉಳಿದುಕೊಂಡರು. ಪೌಲನು ಸೆಜೆರೇಯಕ್ಕೆ ಹಡಗು ಪ್ರಯಾಣ ಮಾಡುವುದಕ್ಕಿಂತ ಮುಂಚೆ ಸ್ವಲ್ಪ ಕಾಲ ಸಭಾಮಂದಿರದಲ್ಲಿ ಸೇವೆ ಮಾಡಿದನು, ಆತನು ನಂತರದ ಕಾಲದಲ್ಲಿ ಎಫೆಸಕ್ಕೆ ಹಿಂದಿರುಗುವೆನೆಂಬ ನಿರೀಕ್ಷೆಯೊಂದಿಗೆ ಆ ಸ್ಥಳವನ್ನು ಬಿಟ್ಟುಹೋದನು. ಪೌಲನು ಸೆಜರೇಯದಿಂದ ಯೆರೂಸಲೇಮಿಗೆ ನಂತರ ಅಲ್ಲಿಂದ ಅಂತಿಯೋಕ್ಯಕ್ಕೆ ಹೊರಟು ಹೋದನು. ಆತನ ಎರಡನೆಯ ಸೇವಾ ಪ್ರಯಾಣವು ಪೂರ್ಣಗೊಂಡಿತು.

## ಆ) ಟಿಪ್ಪಣಿ

*ಪ್ರಿಸ್ಕಿಲ ಮತ್ತು ಅಕ್ವಿಲರು ಅವನ ಜೊತೆಯಲ್ಲಿ ಹೊರಟರು* (ವ. 18): ಈ ವಾಕ್ಯ ಮೊದಲುಗೊಂಡು ಅಪೊಸ್ತಲರ ಕೃತ್ಯಗಳಲ್ಲಿ ತನ್ನ ಗಂಡನ ಹೆಸರಿಗಿಂತ ಮುಂಚೆ ಪ್ರಿಸ್ಕಿಲಳ ಹೆಸರು ಸೂಚಿಸಲ್ಪಟಿರುವುದನ್ನು ಗಮನಿಸುವಂತಹದ್ದು ಕುತೂಹಲಕಾರಿಯಾಗಿದೆ. ಬಹುಶಃ ಆಕೆಯು ಸೇವೆಯಲ್ಲಿ ಬಹಳವಾಗಿ ತನ್ನನ್ನು ತೊಡಗಿಸಿಕೊಂಡಿದ್ದಳು. ಸೀಲನು ಅಪೊಸ್ತಲರ ಕೃತ್ಯಗಳಲ್ಲಿ ಉಳಿದ ಭಾಗದಲ್ಲಿ ಎಲ್ಲಿಯೂ ಪ್ರಸ್ತಾಪಿಸಲ್ಪಟ್ಟಿಲ್ಲ.

*ಕೆಂಖ್ರೆಯ* (ವ. 17): ಇದು ಪಟ್ಟಣದಿಂದ 11 ಕಿ.ಮೀ. ದೂರದಲ್ಲಿದ್ದ ಕೊರಿಂಥದ ಪೂರ್ವ ಬಂದರಾಗಿತ್ತು.

*ಹೊತ್ತ ಹರಕೆ* (ವ. 18): ಬಹುಶಃ ಇದೊಂದು ತಾತ್ಕಾಲಿಕವಾದ ನಾಜೀರ ವ್ರತವಾಗಿತ್ತು (ಅರಣ್ಯಕಾಂಡ. 6:1–21 ನ್ನು ನೋಡಿರಿ). ಅಪಾಯದಿಂದ ಬಿಡಿಸಿದ್ದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಲು ಅಥವಾ ಸಂರಕ್ಷಣೆಗಾಗಿ ದೇವರಿಗೆ ಬೇಡಿಕೊಳ್ಳಲು ಯೆಹೂದ್ಯರು ಆಗಾಗ್ಗೆ ಹರಕೆ ಮಾಡಿಕೊಳ್ಳುತ್ತಿದ್ದರು. ತಲೆಯನ್ನು ಬೋಳಿಸಿಕೊಳ್ಳುವಂತಹದ್ದು ವ್ರತವನ್ನು ಪೂರ್ಣವಾಗಿ ಕೈಗೊಂಡಿದ್ದರ ಸಂಕೇತವಾಗಿದೆ. ಮೊದಲು ಕೂದಲನ್ನು ಕತ್ತರಿಸುತ್ತಿದ್ದರು, ನಂತರ ಅದನ್ನು ಸುಡುತ್ತಿದ್ದರು.

*ಎಫೆಸಕ್ಕೆ* (ವ. 19): ಇದು ರೋಮನ್ ಪ್ರಾಂತ್ಯವಾಗಿದ್ದ ಏಷ್ಯಾದ ರಾಜಧಾನಿಯಾಗಿತ್ತು. ಇದಕ್ಕೆ ಮುಂಚೆ 'ಪವಿತ್ರಾತ್ಮನು ಪೌಲ ಮತ್ತು ಆತನ ಸಂಗಡಿಗರನ್ನು ಏಷ್ಯಾ ಪ್ರಾಂತ್ಯದಲ್ಲಿ ಸುವಾರ್ತೆ ಸಾರಬಾರದೆಂದು ತಡೆದಿದ್ದನು' (16:6). ಪೌಲನು ತನ್ನ ಮೂರನೆಯ ಸೇವಾ ಪ್ರಯಾಣದ ಅವಧಿಯಲ್ಲಿ ಏಫೆಸಕ್ಕೆ ಹಿಂತಿರುಗಿದನು.

(ವ. 21): ಅಪೋಸ್ತಲರ ಕೃತ್ಯಗಳ 'ಪಾಶ್ಚಿಮಾತ್ಯ ಪಠ್ಯವು' ಈ ವಚನದಲ್ಲಿ ಕೆಲವು ಹೆಚ್ಚಿನ ಮಾಹಿತಿಗಳನ್ನು ಹೊಂದಿದೆ: 'ಏನೇ ಆದರೂ ನಾನು ಯೆರೂಸಲೇಮಿನಲ್ಲಿ ನಡೆಯುವ ಹಬ್ಬಕ್ಕೆ ಹೋಗಲೇಬೇಕು'" ಎಂಬುದು, ಇದು ಪಸ್ಕಹಬ್ಬವನ್ನು ಉಲ್ಲೇಖಿಸುತ್ತಿರಬಹುದು. ಅಪೋಸ್ತಲರ ಕೃತ್ಯಗಳ ಪುಸ್ತಕದ ವಿವಿಧ ಪಠ್ಯ ಪರಿಷ್ಕರಣೆಗಳ ಕುರಿತು ಹೆಚ್ಚಿನ ಮಾಹಿತಿಯನ್ನು ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದ ***'ಅಪೋಸ್ತಲರ ಕೃತ್ಯಗಳ ಮೂರು ಪಠ್ಯ ಪರಿಷ್ಕರಣೆಗಳು'*** ಎಂಬ ಅಧ್ಯಾಯದಲ್ಲಿ ಕಾಣಬಹುದು.

*ಅನಂತರ ಅವನು ಸೆಜರೇಯವನ್ನು ಸೇರಿದಾಗ, ಅಲ್ಲಿದ್ದ ಸಭೆಯನ್ನು ವಂದಿಸಿ ಅಂತಿಯೋಕ್ಯಕ್ಕೆ ಹೊರಟು ಹೋದನು* (ವ. 22): ಸೆಜರೇಯದ ಕುರಿತು ಅ. ಕೃ. 8:40 ಮತ್ತು 10:1 ನ್ನು ನೋಡಿರಿ. ಸೆಜರೇಯದಿಂದ ಯೆರೂಸಲೇಮಿಗೆ 100 ಕಿ.ಮೀ.ರಷ್ಟು ಅಂತರವಿತ್ತು.

## ಇ) ಪಠ್ಯ ಪ್ರಶ್ನೆಗಳು

1. ಕೆಂಖ್ರೆ, ಎಫೆಸ, ಸೆಜರೇಯ, ಯೆರೂಸಲೇಮ್ ಮತ್ತು ಅಂತಿಯೋಕ್ಯ ಇವುಗಳನ್ನು ನಕ್ಷೆಯಲ್ಲಿ ಗುರುತಿಸಿರಿ!
2. ಪ್ರಿಸ್ಕಿಲ ಮತ್ತು ಅಕ್ವಿಲರು ಪೌಲನೊಂದಿಗೆ ಸಿರಿಯಾದ ಅಂತಿಯೋಕ್ಯದವರೆಗೆ ಪ್ರಯಾಣಿಸಲಿಲ್ಲ. ಪೌಲನು ಅವರನ್ನು ಎಲ್ಲಿ ಬಿಟ್ಟು ಹೋದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಕೊರಿಂಥದಲ್ಲಿ ಪೌಲನು ತಾತ್ಕಾಲಿಕವಾದ ನಾಜೀರ ವ್ರತವನ್ನು ಹೊತ್ತುಕೊಳ್ಳಲು ಕಾರಣವೇನಾಗಿರಬಹುದು?
2. ಕೊರಿಂಥಕ್ಕೆ ವಿರೋಧವಾಗಿ ಹೋಲಿಸುವಾಗ, ಪೌಲನು ಎಫೆಸದಲ್ಲಿದ್ದ ಯೆಹೂದ್ಯರಿಂದ ಹೃತ್ಪೂರ್ವಕ ಸ್ವಾಗತವನ್ನು ಹೊಂದಿದನು. ಇದಕ್ಕೆ ಯಾವುದಾದರೂ ವಿಶೇಷವಾದ ಕಾರಣಗಳಿರಬಹುದಾ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಪೌಲನು ದಮಸ್ಕಕ್ಕೆ ಹೋಗುವ ರಸ್ತೆಯಲ್ಲಿ ಯೇಸುವನ್ನು ಭೇಟಿಯಾಗಿ ಒಬ್ಬ ವಿಶ್ವಾಸಿಯೂ ಮತ್ತು ಅಪೋಸ್ತಲನೂ ಆದನು. ಇದರ ಹೊರತಾಗಿಯೂ ಆತನು ಅನೇಕ ಯೆಹೂದ್ಯ ಆಚಾರಗಳನ್ನು ಪಾಲಿಸುತ್ತಿದ್ದನೆಂದು ತೋರುತ್ತದೆ, ಉದಾಹರಣೆಗೆ ಈ ಕಥೆಯಲ್ಲಿರುವ ನಾಜೀರ ವ್ರತ. ನಿಮ್ಮ, ನಿಮ್ಮ ಸಭಾಪಾಲಕನ ಹಾಗೂ ನಿಮ್ಮ ಸಭೆಯಲ್ಲಿರುವ ವಿಶ್ವಾಸಿಗಳ ಕುರಿತು ಏನು – ನೀವು ಈಗಲೂ ಕೆಲವು ಹಿಂದೂ ಸಂಪ್ರದಾಯಗಳನ್ನು ಪಾಲಿಸುತ್ತಿದ್ದೀರೋ? ಅವುಗಳನ್ನು ವಿವರಿಸಿರಿ!

2. ಯಾವುದೇ ಹಳೆ ಸಂಪ್ರದಾಯಗಳನ್ನು ನಾವು ಪಾಲಿಸಬಾರದು ಮತ್ತು ಎಲ್ಲಾ ಸಾಂಸ್ಕೃತಿಕ ಆಚಾರಗಳು ದೇವರ ವಾಕ್ಯಕ್ಕೆ ವಿರೋಧವಾದದ್ದು ಎಂದು ಹೇಳುವ ವಿಶ್ವಾಸಿಗಳನ್ನು ನೀವು ಎಂದಾದರೂ ಭೇಟಿಯಾಗಿದ್ದೀರೋ? ಅವರು ಯಾಕೆ ಹಾಗೆ ಹೇಳಿರಬಹುದೆಂದು ನೀವು ಆಲೋಚಿಸುತ್ತೀರಿ? ಅವರೊಂದಿಗೆ ನೀವು ಒಪ್ಪಿಕೊಳ್ಳುತ್ತೀರೋ? ಯಾಕೆ? ಯಾಕೆ ಇಲ್ಲ?

# ಪಾಠ 50. ಕೊರಿಂಥ ಮತ್ತು ಎಫೆಸದಲ್ಲಿ ಅಪೊಲ್ಲೋಸನು (18:23–28)

## ಅ) ವಾಕ್ಯಭಾಗ

ಪೌಲನು ತನ್ನ ಮೂರನೆಯ ಸೇವಾ ಪ್ರಯಾಣಕ್ಕೆ ಹೊರಡುವುದಕ್ಕಿಂತ ಮುಂಚೆ ತನ್ನ ತಾಯಿ ಸಭೆಯಾದ ಸಿರಿಯಾದ ಅಂತಿಯೋಕ್ಯದಲ್ಲಿ ಕೆಲವು ದಿವಸಗಳು ತಂಗಿದ್ದನು. ಅದೇ ಸಮಯದಲ್ಲಿ, ಅಪೊಲ್ಲೋಸನೆಂಬ ಒಬ್ಬ ಯೆಹೂದಿ ಮೂಲದ ಬೋಧಕನೂ ಮತ್ತು ಉಪದೇಶಕನೂ ಎಫೆಸಕ್ಕೆ ಬಂದನು, ಆತನು ಅಲ್ಲಿ ಯೇಸುವಿನ ಕುರಿತಾಗಿ ಬಹಳ ಆಸಕ್ತಿಯಿಂದ ಮಾತನಾಡುತ್ತಿದ್ದನು. ಪೌಲನು ಎಫೆಸದಲ್ಲಿಯೇ ಬಿಟ್ಟು ಹೋಗಿದ್ದ ಪ್ರಿಸ್ಕಿಲ ಮತ್ತು ಅಕ್ವಿಲರು ಆತನನ್ನು ಸಂಧಿಸಿ 'ದೇವರ ಮಾರ್ಗದ' ಕುರಿತಾಗಿ ಇನ್ನೂ ಹೆಚ್ಚಿನ ರೀತಿಯಲ್ಲಿ ಆತನಿಗೆ ವಿವರಿಸಿದರು. ನಂತರ ಅಪೊಲ್ಲೋಸನು ಸಭೆಯವರ ಶಿಫಾರಸ್ಸಿನ ಮೇಲೆ ಎಫೆಸವನ್ನು ಬಿಟ್ಟು ಅಖಾಯದ ಪ್ರಾಂತ್ಯದಲ್ಲಿದ್ದ ಕೊರಿಂಥಕ್ಕೆ ಹೋದನು.

## ಆ) ಟಿಪ್ಪಣಿ

*ಅಂತಿಯೋಕ್ಯದಲ್ಲಿ ಸ್ವಲ್ಪ ಸಮಯ ಕಳೆದ ನಂತರ* (ವ. 23): ಪೌಲನು ಕ್ರಿ.ಶ. 52 ರಲ್ಲಿ ಯೆರೂಸಲೇಮಿನಲ್ಲಿ ನಡೆದ ಪಸ್ಕ ಹಬ್ಬದ ನಂತರ ಅಂತಿಯೋಕ್ಯದಲ್ಲಿ ಸುಮಾರು 9 ತಿಂಗಳುಗಳ ಕಾಲ ತಂಗಿದ್ದನು. ಕ್ರಿ.ಶ. 53 ರ ವಸಂತ ಕಾಲದಲ್ಲಿ ಬಹುಶಃ ಆತನು ತನ್ನ ಮೂರನೆಯ ಸೇವಾ ಪ್ರಯಾಣಕ್ಕೆ ಹೊರಟಿರಬಹುದು, ಅದು ಸುಮಾರು ನಾಲ್ಕು ವರ್ಷಗಳ ನಂತರ ಕೊನೆಗೊಂಡಿತು.

*ಅಲೆಕ್ಸಾಂಡ್ರಿಯಾದ ನಿವಾಸಿಯಾದ ಅಪೊಲ್ಲೋಸನು* (ವ. 24): ಹೊಸ ಒಡಂಬಡಿಕೆಯಲ್ಲಿ *ಅಪೊಲ್ಲೋಸನು* ಇದೇ ಮೊದಲ ಬಾರಿಗೆ ಪ್ರಸ್ತಾಪಿಸಲ್ಪಟ್ಟಿದ್ದಾನೆ ಮತ್ತು ಈ ವಾಕ್ಯಭಾಗದಲ್ಲಿ ಮಾತ್ರ ಆತನ ಹಿನ್ನಲೆಯ ಕುರಿತು ತಿಳಿಸಲ್ಪಟ್ಟಿದೆ. *ಅಲೆಕ್ಸಾಂಡ್ರಿಯವು* ಈಜಿಪ್ಟಿನಲ್ಲಿ ನೆಲೆಯಾಗಿತ್ತು. ಇದು ರೋಮನ್ ಸಾಮ್ರಾಜ್ಯದಲ್ಲಿ ಎರಡನೆಯ ಅತೀ ದೊಡ್ಡ ಪಟ್ಟಣವಾಗಿದ್ದು ಯೆಹೂದ್ಯರಿಂದಲೂ, ಗ್ರೀಕರಿಂದಲೂ ಮತ್ತು ಈಜಿಪ್ಟಿನವರಿಂದಲೂ ಕೂಡಿತ್ತು. ಅಲೆಕ್ಸಾಂಡ್ರಿಯವು ಒಂದು ಪ್ರಮುಖವಾದ ನಾವೆಗಳ ತಾಣವಾಗಿದ್ದು ಒಂದು ಬಂದರನ್ನು ಹೊಂದಿತ್ತು, ಇಲ್ಲಿಂದ ದವಸಧಾನ್ಯಗಳು ಹಡಗಿನ ಮೂಲಕವಾಗಿ ರೋಮ್‌ಗೆ ಕಳುಹಿಸಲ್ಪಡುತ್ತಿತ್ತು. ಇದು ಒಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವೂ ಸಹ ಆಗಿದ್ದು ಇದರ ವಿಶ್ವವಿದ್ಯಾಲಯವು ಬಹಳ ಪ್ರಸಿದ್ಧವಾಗಿತ್ತು. ಅಲೆಕ್ಸಾಂಡ್ರಿಯವು ಇಡೀ ಪ್ರಪಂಚದಲ್ಲಿಯೇ ಅತೀ ದೊಡ್ಡ ಗ್ರಂಥಾಲಯವನ್ನು ಹೊಂದಿತ್ತು, ಅದು ಬಹುಶಃ 10 ಲಕ್ಷ ಪುಸ್ತಕ ಮತ್ತು ಸುರುಳಿಗಳನ್ನು ಹೊಂದಿತ್ತು. ಯೆಹೂದ್ಯ ಜನಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿದ್ದು ಬಹಳ ಪ್ರಭಾವಶಾಲಿಗಳಾಗಿದ್ದರು. ಇಲ್ಲಿ ಕ್ರಿಸ್ತನಿಗಿಂತ 200 ವರ್ಷಗಳ ಮುಂಚೆ ಹಳೆ ಒಡಂಬಡಿಕೆಯು ಗ್ರೀಕ್ ಭಾಷೆಯಲ್ಲಿ ತರ್ಜುಮೆಗೊಂಡಿತ್ತು.

*ಪ್ರಿಸ್ಕಿಲ ಮತ್ತು ಅಕ್ವಿಲ* (ವ. 26): 18:2 ಮತ್ತು 18:8 ನ್ನು ನೋಡಿರಿ!

*ಅಖಾಯ* (27): ಅಖಾಯವು ರೋಮನ್ ಪ್ರಾಂತ್ಯವಾಗಿತ್ತು ಮತ್ತು ಗ್ರೀಸ್‌ನ ದಕ್ಷಿಣ ಭಾಗವನ್ನು ಒಳಗೊಂಡಿತ್ತು. *ಕೊರಿಂಥವು* ಇದರ ರಾಜಧಾನಿಯಾಗಿತ್ತು (19:1 ನ್ನು ಸಹ ನೋಡಿರಿ).

## ಇ) ಪಠ್ಯ ಪ್ರಶ್ನೆಗಳು

1. ಇವುಗಳನ್ನು ನಕ್ಷೆಯಲ್ಲಿ ಗುರುತಿಸಿರಿ: ಸಿರಿಯಾದ ಅಂತಿಯೋಕ್ಯ, ಗಲಾತ್ಯ ಮತ್ತು ಫ್ರಿಗಿಯ!
2. ಪೌಲನು ಗಲಾತ್ಯ ಮತ್ತು ಫ್ರಿಗಿಯದ ಮೂಲಕವಾಗಿ ಪ್ರಯಾಣಿಸುವಾಗ ಏನು ಮಾಡಿದನು?
3. ಅಕ್ವಿಲ ಮತ್ತು ಪ್ರಿಸ್ಕಿಲರು ಅಪೊಲ್ಲೋಸನನ್ನು ತಮ್ಮ ಮನೆಗೆ ಯಾಕೆ ಆಹ್ವಾನಿಸಿದರು?
4. ಅಪೊಲ್ಲೋಸನು ಎಫೆಸದಲ್ಲಿ ಕೆಲವು ಕಾಲ ಕಳೆದ ನಂತರ ಎಲ್ಲಿಗೆ ಹೋದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನು ಅಂತಿಯೋಕ್ಯದಲ್ಲಿ 'ಸ್ವಲ್ಪ ಸಮಯ ಕಳೆದಾಗ' ಏನು ಮಾಡಿರಬಹುದೆಂದು ನೀವು ಆಲೋಚಿಸುತ್ತೀರಿ?
2. ವ. 24–26 ರಿಂದ ನಾವು ಅಪೊಲ್ಲೋಸನ ಮತ್ತು ಆತನ ಹಿನ್ನಲೆಯ ಕುರಿತು ಏನನ್ನು ಕಲಿಯುತ್ತೇವೆ?
3. ಪ್ರಿಸ್ಕಿಲ ಮತ್ತು ಅಕ್ವಿಲರು ಅಪೊಲ್ಲೋಸನಿಗೆ ದೇವರ ಮಾರ್ಗವನ್ನು ಇನ್ನೂ ನಿಖರವಾಗಿ ವಿವರಿಸಿದರು (ವ. 26). ಅವರು ಆತನಿಗೆ ಏನನ್ನು ವಿವರಿಸಿರಬಹುದೆಂದು ನೀವು ಆಲೋಚಿಸುತ್ತೀರಿ?
4. ಅಪೊಲ್ಲೋಸನು ಯಾವ ವಿಧದಲ್ಲಿ ಕೊರಿಂಥದಲ್ಲಿನ ಸೇವೆಗೆ ಸಹಾಯಮಾಡಿದನು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಸತ್ಯವೇದ ಉಪದೇಶಕರು ಮತ್ತು ಸುವಾರ್ತಿಕರು ನಿಮ್ಮ ಸಭೆಗೆ ಬಂದು ಸೈದ್ಧಾಂತಿಕವಾಗಿ ಸ್ವಸ್ಥವಲ್ಲದ ಅಥವಾ ತಪ್ಪಾದ ಸಂಗತಿಗಳನ್ನು ಹೇಳಿರಬಹುದು. ನೀವು (ನಿಮ್ಮ ಸಭಾಪಾಲಕರು, ನಿಮ್ಮ ಸಭಾಹಿರಿಯರು) ಅವರೊಂದಿಗೆ ಹೇಗೆ ವ್ಯವಹರಿಸಿದಿರಿ?
2. ಅಪೊಲ್ಲೋಸನು ಎಫೆಸದಲ್ಲಿ ನಿಖರವಲ್ಲದ – ಅಥವಾ ಕನಿಷ್ಟ ಪಕ್ಷ ಅಪೂರ್ಣವಾದ ಸಂಗತಿಗಳನ್ನು ಮಾತನಾಡುತ್ತಿದ್ದುದ್ದನ್ನು ಕೇಳಿದಾಗ ಅಕ್ವಿಲ ಮತ್ತು ಪ್ರಿಸ್ಕಿಲರು ಆತನೊಂದಿಗೆ ಹೇಗೆ ವ್ಯವಹರಿಸಿದರು? ಅಕ್ವಿಲ ಮತ್ತು ಪ್ರಿಸ್ಕಿಲರಿಂದ ನಾವು ಏನನ್ನು ಕಲಿಯುತ್ತೇವೆ?

## ಊ) ಉಪದೇಶಿಸು ಮತ್ತು ಬೋಧಿಸು!

ಈ ವಾಕ್ಯಭಾಗದ ಆಧಾರದ ಮೇಲೆ ***ಅಪೊಲ್ಲೋಸನು – ಸೇವೆಗಾಗಿ ಸಿದ್ಧನಾಗಿದ್ದ ಒಬ್ಬ ಮನುಷ್ಯನು*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಅಥವಾ ಒಂದು ಸಂದೇಶವನ್ನು ಸಿದ್ಧಪಡಿಸಿರಿ! ನಿಮ್ಮ ಹೊರರೇಖೆಯು ಹೀಗಿರಬಹುದು:

1. ಪೀಠಿಕೆ

    1) ಪ್ರಿಸ್ಕಿಲ ಮತ್ತು ಅಕ್ವಿಲರು ಪೌಲನ ಎರಡನೆಯ ಸೇವಾ ಪ್ರಯಾಣದ ಅಂತ್ಯದಲ್ಲಿ ಆತನಿಂದ ಎಫೆಸದಲ್ಲಿ ತಂಗುವಂತೆ ಹಿಂಬಿಡಲ್ಪಟ್ಟರು (18:19). ಅವರು ಅಪೊಲ್ಲೋಸನಿಗೆ ಮಾರ್ಗದರ್ಶಿಸಬೇಕೆಂದು ಮತ್ತು ತರಬೇತುಗೊಳಿಸಬೇಕೆಂದು ದೇವರು ಬಯಸಿದಾಗ ಅವರು 'ಅದೇ ಸ್ಥಳದಲ್ಲಿ' ಇದ್ದರು!

    2) ಎಫೆಸ ಪಟ್ಟಣ (18:19 ಮತ್ತು 19:1 ಕ್ಕಾಗಿ ಟಿಪ್ಪಣಿ): ಕೆಲವು ಸಾಮಾನ್ಯ ಮಾಹಿತಿಗಳನ್ನು ತಿಳಿಸಿರಿ.

2. ಅಪೊಲ್ಲೋಸನು ಯಾರು? 18:24–25 ಮತ್ತು ಈ. 2 ರ ಉತ್ತರವನ್ನು ನೋಡಿರಿ:

    1) ಅಲೆಕ್ಸಾಂದ್ರಿಯದಿಂದ ಬಂದ ಒಬ್ಬ ಯೆಹೂದ್ಯನು

    2) ಹಳೆ ಒಡಂಬಡಿಕೆಯ ವಾಕ್ಯಗಳ ಕುರಿತು ಉತ್ತಮ ಜ್ಞಾನಹೊಂದಿದವನು

    3) ಒಬ್ಬ ಒಳ್ಳೆಯ ಭಾಷಣಗಾರ ಮತ್ತು ವಾಕ್ಚಾತುರ್ಯತೆಯಲ್ಲಿ ತರಬೇತಿ ಹೊಂದಿದವನು

    4) ಸುವಾರ್ತೆಯನ್ನು ಸಾರಲು ಮನಸ್ಸುಳ್ಳ ಹಾಗೂ ಧೈರ್ಯವುಳ್ಳ ಒಬ್ಬ ವಿಶ್ವಾಸಿ

    5) ಆದರೆ ಕ್ರೈಸ್ತ ನಂಬಿಕೆಯ, ಸಭೆಯ ಹಾಗೂ ಕ್ರಿಸ್ತೀಯ ಜೀವನ ಶೈಲಿಯ ಕುರಿತು ಅಲ್ಪ ತಿಳುವಳಿಕೆಯುಳ್ಳವನಾಗಿದ್ದನು

3. ದೇವರು ಅಪೊಲ್ಲೋಸನನ್ನು ಸೇವೆಗಾಗಿ ಹೇಗೆ ಸಿದ್ಧಗೊಳಿಸಿದನು?

    1) ಹಂತ 1: ಅಲೆಕ್ಸಾಂದ್ರಿಯದಲ್ಲಿನ ಆತನ ಹಿನ್ನಲೆ ಮತ್ತು ತರಬೇತಿಯ ಮೂಲಕ

        - ಆತನ ಸಾಂಸ್ಕೃತಿಕ ಹಿನ್ನಲೆ: ಒಬ್ಬ ಚದುರಿಹೋಗಿದ್ದ ಯೆಹೂದ್ಯನು
        - ಆತನ ಶೈಕ್ಷಣಿಕ ಹಿನ್ನಲೆ: ಹಳೆ ಒಡಂಬಡಿಕೆಯ ಜ್ಞಾನ, ವಾಕ್ಚಾತುರ್ಯತೆ
        - ಆತನ ವ್ಯಕ್ತಿತ್ವ: ಧೈರ್ಯ, ಆಸಕ್ತಿ
        - ಆತನ ರಕ್ಷಣಾ ಅನುಭವ
        - ಸುವಾರ್ತೆಯ ಕುರಿತು ಆತನ ಜ್ಞಾನ (ಆ ಜ್ಞಾನವು ಅಲ್ಪವಾಗಿದ್ದಾಗ್ಯೂ)

2) ಹಂತ 2: ಜ್ಞಾನವುಳ್ಳ ವಿಶ್ವಾಸಿಗಳ ಮೂಲಕ ವೈಯಕ್ತಿಕ ‘ಮನೆ ಪಾಠ’ –ಬಹುಶಃ ಈ ರೀತಿಯ ವಿಷಯಗಳ ಕುರಿತಾಗಿರಬಹುದು:

- ಪವಿತ್ರಾತ್ಮನ ವರ
- ಲೋಕದ ಕಟ್ಟಕಡೆಯವರೆಗೆ ಎಲ್ಲಾ ಜನರಿಗೂ ಸುವಾರ್ತೆಯನ್ನು ಸಾರಬೇಕಾದ ಸಭೆಯ ಗುರಿ ಉದ್ದೇಶ
- ದೀಕ್ಷಾಸ್ನಾನ ಮತ್ತು ಸಭಾ ಜೀವನ
- ಹೇಗೆ ದೇವರಿಗೆ ಮೆಚ್ಚುಗೆಯಾದ ಜೀವನವನ್ನು ಜೀವಿಸುವುದು – ಆತ್ಮನಲ್ಲಿ ನಡೆಯುವುದು
- ದೇವರ ರಾಜ್ಯ ಮತ್ತು ಯೇಸುವಿನ ಎರಡನೆಯ ಬರೋಣ

4. ದೇವರು ಅಪೊಲ್ಲೋಸನನ್ನು ಹೇಗೆ ಉಪಯೋಗಿಸಿಕೊಂಡನು?

1) ಎಫೆಸದಲ್ಲಿ ಒಬ್ಬ ಸುವಾರ್ತಿಕನಾಗಿ (18:25–26)

2) ಕೊರಿಂಥದಲ್ಲಿ ಸುವಾರ್ತೆಯ ಒಬ್ಬ ತರ್ಕ ಮಾಡುವವನಾಗಿಯೂ ಪ್ರತಿಪಾದಕನಾಗಿಯೂ (18:27–28)

3) ಕೊರಿಂಥದಲ್ಲಿ ಒಬ್ಬ ಸತ್ಯವೇದ ಉಪದೇಶಕನಾಗಿಯೂ ಸಭಾಪಾಲಕನಾಗಿಯೂ (1 ಕೊರಿ. 3:4)

5. ಅಪೊಲ್ಲೋಸನ ಕುರಿತಾದ ಲೂಕನ ಕಥೆಯಿಂದ ನಾವು ಏನನ್ನು ಕಲಿತುಕೊಳ್ಳಬಹುದು?

1) ನಾವು ಆದ್ಯ ತರಬೇತಿ ಹೊಂದಿರಬೇಕು!

- ಸತ್ಯವೇದವನ್ನು ಕ್ರಮವಾಗಿ ಅಭ್ಯಸಿಸಲು ಮತ್ತು ಕ್ರೈಸ್ತ ಸಿದ್ಧಾಂತದಲ್ಲಿ ಒಂದು ಒಳ್ಳೆಯ ಅಸ್ತಿವಾರವನ್ನು ಹೊಂದಲು ಒಂದು ಸತ್ಯವೇದ ಮಹಾವಿದ್ಯಾಲಯವನ್ನು ಸೇರಿಕೊಳ್ಳಿರಿ!
- ನಿಮ್ಮ ವೈಯಕ್ತಿಕ ಧ್ಯಾನವನ್ನು ಕ್ರಮವಾಗಿ ಪಾಲಿಸಿರಿ: ಸತ್ಯವೇದವನ್ನು ಓದಿರಿ, ದೇವರ ವಾಕ್ಯವನ್ನು ಧ್ಯಾನಿಸಿರಿ ಮತ್ತು ಪ್ರಾರ್ಥನೆಯಲ್ಲಿ ಸಮಯ ಕಳೆಯಿರಿ!

2) ದೇವರು ಆತನ ಸೇವಕರ ಮೂಲಕ ನಮ್ಮನ್ನು ರೂಪಿಸಲು ಆತನಿಗೆ ತೆರೆದುಕೊಡಬೇಕು!

- ಸತ್ಯವೇದ ಮತ್ತು ಕ್ರೈಸ್ತ ಸಿದ್ಧಾಂತಗಳಲ್ಲಿ ನಿಮಗಿಂತಲೂ ಹೆಚ್ಚು ಜ್ಞಾನವುಳ್ಳ ದೇವರ ಸೇವಕರಿಂದ – ಮತ್ತು ವೃದ್ಧ ಹಾಗೂ ಅನುಭವಸ್ಥ ವಿಶ್ವಾಸಿಗಳಿಂದ – ದೀನತೆಯೊಂದಿಗೆ ಉಪದೇಶ ಹೊಂದಿರಿ!

- ನಿಮ್ಮ ಸಭೆಯಲ್ಲಿ ‘ ಭಕ್ತರು’ ಮಾದರಿಗಳಾಗಿರಲಿ!
- ನಮ್ಮ ಸಭೆಗಳಲ್ಲಿ ನಮಗೆ ಪ್ರಿಸ್ಕಿಲ ಮತ್ತು ಅಕ್ವಿಲರಂತವರು ಬೇಕಾಗಿದ್ದಾರೆ!
- ಸತ್ಯವೇದ ಮತ್ತು ಕ್ರೈಸ್ತ ಸಿದ್ಧಾಂತಗಳ ಕುರಿತು ಉತ್ತಮ ಜ್ಞಾನವುಳ್ಳವರು
- ವಿಶ್ವಾಸಿಗಳಿಗೂ ಮತ್ತು ದೇವರ ಸೇವಕರಿಗೂ ಉತ್ತಮ ಮಾದರಿಯಾಗಿರುವಂತ ಜನರು
- ಅಗತ್ಯವಿದ್ದಲ್ಲಿ ದೇವರ ಸೇವಕರನ್ನೂ ಬೋಧಿಸಲು, ತಿದ್ದಲು ಮತ್ತು ಪ್ರೋತ್ಸಾಹಿಸಲು ಜ್ಞಾನವುಳ್ಳ ಜನರು
- ಹೊಸ ಸನ್ನಿವೇಶಗಳಲ್ಲಿ ನಮ್ಮನ್ನು ದೇವರು ನಡೆಸುವಾಗ ನಾವು ಅದಕ್ಕೆ ಸೂಕ್ಷ್ಮವಾಗಿರಬೇಕು!

3) ದೇವರು **ನಿಮ್ಮನ್ನು** ಎಲ್ಲಿ ಉಪಯೋಗಿಸಿಕೊಳ್ಳಲು ಬಯಸುತ್ತಾನೆ?

- ನಿಮ್ಮ ‘ ಅಲೆಕ್ಸಾಂದ್ರಿಯದಲ್ಲಿ’ – ನಿಮ್ಮ ಸ್ವಂತ ಊರಿನಲ್ಲಿ?
- ನಿಮ್ಮ ‘ ಎಫೆಸದಲ್ಲಿ’ – ನೀವು ಶಿಕ್ಷಣ ಮಾಡುತ್ತಿರುವ ಅಥವಾ ಕೆಲಸ ಮಾಡುತ್ತಿರುವ ಪಟ್ಟಣದಲ್ಲಿ?
- ನಿಮ್ಮ ‘ ಕೊರಿಂಥದಲ್ಲಿ’ – ದೂರದಲ್ಲಿರುವ ಒಂದು ಸ್ಥಳದಲ್ಲಿ?

4) ***ನೀವು*** ಏನು ಮಾಡಬೇಕೆಂದು ದೇವರು ಬಯಸುತ್ತಾನೆ?

- ಸುವಾರ್ತಾ ಸೇವೆ?
- ಒಬ್ಬ ಸತ್ಯವೇದ ಬೋಧಕನಾಗಿ ಅಥವಾ ಒಬ್ಬ ಸಭಾಪಾಲಕನಾಗಿ ಉಪನ್ಯಾಸಕ ಸೇವೆ?
- ಮಕ್ಕಳ ಅಥವಾ ಯೌವ್ವನಸ್ಥರ ನಡುವೆ ಸೇವೆ?
- ಪ್ರಾರ್ಥನಾ ಸೇವೆ?
- ಸಂಗೀತ ಸೇವೆ?
- ಪೂರ್ಣ ಕಾಲಾವಧಿ ಅಥವಾ ಅರೆ–ಕಾಲಾವಧಿ ಸಭೆಯಲ್ಲಿ ಕಾರ್ಯರೂಪ ಸೇವೆ?
- ‘ಸುವಾರ್ತೆಯ ಪ್ರತಿಪಾದಕನಾಗಲು’ – ಅಕ್ರೈಸ್ತರೊಂದಿಗೆ ಕ್ರೈಸ್ತ ನಂಬಿಕೆಯ ಸತ್ಯದ ಕುರಿತು ತರ್ಕಿಸುವುದು?

# ಪಾಠ 51. ಎಫೆಸದಲ್ಲಿ ಪೌಲನು, 19:1–20

## ಅ) ವಾಕ್ಯಭಾಗ

ಪೌಲನು ತನ್ನ ಮೂರನೆಯ ಸೇವಾ ಪ್ರಯಾಣದಲ್ಲಿ ಎಫೆಸವನ್ನು ತಲುಪಿದಾಗ ಆತನು ಕ್ರೈಸ್ತ ನಂಬಿಕೆಯ ಕುರಿತು ಬಹಳ ಗೊಂದಲದಿಂದ ಕೂಡಿದ್ದ 12 ಜನ ಪುರುಷರನ್ನು ಭೇಟಿಯಾದನು. ಹಾಗಾಗಿ ಆತನು ಅವರಿಗೆ ಯೇಸುವಿನ ಕುರಿತು ಬೋಧಿಸಿ ಅವರಿಗೆ ದೀಕ್ಷಾಸ್ನಾನ ಕೊಟ್ಟನು. ನಂತರ ಆತನು ಅವರ ಮೇಲೆ ತನ್ನ ಹಸ್ತಗಳನ್ನಿಡಲು ಪವಿತ್ರಾತ್ಮನು ಅವರ ಮೇಲೆ ಬಂದನು, ಅವರು ಅನ್ಯಭಾಷೆಗಳಲ್ಲಿ ಮಾತನಾಡಿದರು ಮತ್ತು ಪ್ರವಾದಿಸಿದರು. ಎಫೆಸದಲ್ಲಿ ಪೌಲನು ಮೊದಲು ಮೂರು ತಿಂಗಳುಗಳ ಕಾಲ ಸಭಾಮಂದಿರದಲ್ಲಿ ಮಾತನಾಡಿದನು. ಆದರೆ ಅಲ್ಲಿ ವಿರೋಧತೆಯನ್ನು ಎದುರಿಸಿದಾಗ, ಆಗ ಆತನು ಒಂದು ತರ್ಕಶಾಲೆಗೆ ಹೋಗಿ ಎರಡು ವರ್ಷಗಳ ಕಾಲ ಮಾತನಾಡುತ್ತಾ ಅವರೊಂದಿಗೆ ಚರ್ಚಿಸಿದನು. ಇದರ ಪರಿಣಾಮವಾಗಿ ಏಷ್ಯಾ ಪ್ರಾಂತ್ಯದಾದ್ಯಂತ ಅನ್ಯರಿಗೂ ಯೆಹೂದ್ಯರಿಗೂ ಸುವಾರ್ತೆಯು ಸಾರಲ್ಪಟ್ಟಿತು. ದೇವರು ಪೌಲನ ಮೂಲಕ ಅಸಾಧಾರಣವಾದ ಅದ್ಭುತಗಳನ್ನೂ ಮಾಡಿದನು. ಸ್ಕೇವ ಎಂಬ ಯಾಜಕನ 7 ಜನ ಗಂಡು ಮಕ್ಕಳು ಪೌಲನನ್ನು ಅನುಕರಿಸಲು ಯತ್ನಿಸಿದರು, ಆದರೆ ಅವರು ದುರಾತ್ಮಗಳಿಂದ ಅಡಗಿಸಲ್ಪಟ್ಟರು. ಇದನ್ನು ನೋಡಿದ ಅನೇಕ ಜನರು ದೇವರ ಕಡೆಗೆ ತಿರುಗಿಕೊಂಡರು. ಮಂತ್ರವಾದಿಗಳೂ ಸಹ ನಂಬಿದರು, ಅವರು ಬೆಂಕಿ ಹೊತ್ತಿಸಿ ತಮ್ಮ ಮಾಂತ್ರಿಕ ಸೂತ್ರಗಳುಳ್ಳ ಗ್ರಂಥಗಳನ್ನು ಅದರಲ್ಲಿ ಸುಟ್ಟು ಹಾಕಿದರು. ಈ ವಾಕ್ಯಭಾಗದ ಕೊನೆಯ ವಚನವು ಅಪೊಸ್ತಲರ ಕೃತ್ಯಗಳು ಪುಸ್ತಕದ ಐದನೆಯ ಭಾಗವನ್ನು ಮುಕ್ತಾಯಗೊಳಿಸುತ್ತದೆ: ಹೀಗೆ ಕರ್ತನ ವಾಕ್ಯವು ವಿಸ್ತಾರವಾಗಿ ಹರಡುತ್ತಾ ಪ್ರಬಲವಾಯಿತು.

## ಆ) ಟಿಪ್ಪಣಿ

*ಎಫೆಸ* (ವ. 1): *ಎಫೆಸವು* ರೋಮನ್ ಪ್ರಾಂತ್ಯವಾದ ಏಷ್ಯಾದ ರಾಜಧಾನಿಯಾಗಿದ್ದು ರೋಮ್ ಸಾಮ್ರಾಜ್ಯದಲ್ಲಿಯೇ ಅತೀ ದೊಡ್ಡದಾದ ಮತ್ತು ಅತೀ ಪ್ರಸಿದ್ಧವಾದ ಪಟ್ಟಣಗಳಲ್ಲಿ ಒಂದಾಗಿತ್ತು. ಪೌಲನ ಕಾಲದಲ್ಲಿ ಅದರ ಬಂದರುಗಳಲ್ಲಿ ಕೆಸರು ಹೆಚ್ಚಾಗುತ್ತಿದ್ದರಿಂದ ಅದರ ಪ್ರಸಿದ್ಧತೆಯು ಇಳಿಮುಖವಾಗತೊಡಗಿತ್ತು. ಅಲ್ಲಿನ ಚಿತ್ರಮಂದಿರವು ಪ್ರಪಂಚದಲ್ಲಿಯೇ ಅತೀ ದೊಡ್ಡದಾಗಿದ್ದು 50,000 ಜನ ಪ್ರೇಕ್ಷಕರು ಕೂತುಕೊಳ್ಳುವ ಸೌಲಭ್ಯ ಹೊಂದಿತ್ತು. *ಅರ್ತೆಮಿ* (ರೋಮನ್ನರಿಂದ ಡಯಾನ ಎಂದು ಕರೆಯಲ್ಪಡುತ್ತಿದ್ದ) ದೇವತೆಗೆ ಕಟ್ಟಲ್ಪಟ್ಟಿದ್ದ ದೇವಾಲಯಕ್ಕೆ ಎಫೆಸವು ಬಹಳ ಪ್ರಸಿದ್ಧಿಯಾಗಿತ್ತು. ಇದು ಪ್ರಪಂಚದ ಪ್ರಾಚೀನ ಏಳು ಅದ್ಭುತಗಳಲ್ಲಿ ಒಂದಾಗಿತ್ತು, ಹಾಗಾಗಿ ಎಫೆಸವು ಒಂದು ಪುಣ್ಯ ಕ್ಷೇತ್ರವಾಗಿ ಮಾರ್ಪಟ್ಟಿತ್ತು. ಎಲ್ಲಾ ಯಾತ್ರಿಕರು ಮತ್ತು ಪ್ರಯಾಣಿಕರು ಅಲ್ಲಿಂದ ಒಂದು ನೆನಪಿನ ಕಾಣಿಕೆಯನ್ನು (ಒಂದು ಬೆಳ್ಳಿಯ ಗುಡಿಯನ್ನು ಅಥವಾ 'ಪರಲೋಕದಿಂದ ಕೆಳಗೆ ಬಿದ್ದ' ದೇವತೆಯನ್ನು ಪ್ರತಿನಿಧಿಸುವ ಉಲ್ಕೆಯ ಕಲ್ಲಿನ ಸಣ್ಣ ಮಾದರಿಗಳನ್ನು) ಕೊಂಡುಕೊಳ್ಳಲು ಬಯಸುತ್ತಿದ್ದರು. ಈ ನೆನಪಿನ ಕಾಣಿಕೆಯ ವ್ಯಾಪಾರವು ಅನೇಕ ಅಕ್ಕಸಾಲಿಗರಿಗೆ ಲಾಭದಾಯಕವಾಗಿತ್ತು ಮತ್ತು ಇದು ಎಫೆಸವನ್ನು ಒಂದು ಶ್ರೀಮಂತ ಪಟ್ಟಣವನ್ನಾಗಿ ಮಾಡಿತು (ನೋಡಿರಿ ವ. 23–24).

*ಇಲ್ಲ ಪವಿತ್ರಾತ್ಮನು ಇದ್ದಾನೆಂಬುದನ್ನು ನಾವು ಕೇಳಿಯೇ ಇಲ್ಲ* (ವ. 2): ಈ 12 ಜನ ಎಫೆಸದವರು ಸ್ನಾನಿಕನಾದ ಯೋಹಾನನ ದೀಕ್ಷಾಸ್ನಾನವನ್ನು ಹೊಂದಿದವರಾಗಿದ್ದರಿಂದ (ಮತ್ತು ಈ ಹಿನ್ನಲೆಯಲ್ಲಿ ಅವರು ಯೋಹಾನನ ಸಂದೇಶವನ್ನು ಮತ್ತು ಪವಿತ್ರಾತ್ಮನ ಕುರಿತು ಹಳೆ ಒಡಂಬಡಿಕೆಯ ಉಲ್ಲೇಖನಗಳನ್ನು ಕೇಳಿರಬೇಕು) ಪವಿತ್ರಾತ್ಮನ ಕುರಿತು ಕನಿಷ್ಠ ಪಕ್ಷ ಕೇಳಿರಲೇಬೇಕು. 'ಅವರು ಪವಿತ್ರಾತ್ಮನನ್ನು ಸ್ವೀಕರಿಸಿದರೋ' ಎಂಬುದು ಪೌಲನು ಅವರಿಗೆ ಕೇಳಿದ ಪ್ರಶ್ನೆಯಾಗಿತ್ತು. ಹಾಗಾಗಿ ಬಹುಶಃ ಪವಿತ್ರಾತ್ಮನು ಕೊಡಲ್ಪಟ್ಟಿರುವುದರ ಕುರಿತು ಅವರಿಗೆ ತಿಳಿದಿರಲಿಲ್ಲವೆಂಬುದಾಗಿ ನಾವು ಅವರ ಉತ್ತರವನ್ನು ಅರ್ಥಮಾಡಿಕೊಳ್ಳಬೇಕು. ಪೌಲನು ಅವರನ್ನು ಸಂಧಿಸಿದ ತಕ್ಷಣವೇ ಕ್ರೈಸ್ತ ನಂಬಿಕೆಯ ಕುರಿತಾದ ಅವರ ತಿಳುವಳಿಕೆಯಲ್ಲಿ ಪ್ರಾಮುಖ್ಯವಾದ ಸಂಗತಿಯು ಇಲ್ಲದ್ದನ್ನು ಗ್ರಹಿಸಿದನು.

*ತುರನ್ನನ ತರ್ಕಶಾಲೆ* (ವ. 9): *ತುರನ್ನನ* ಕುರಿತಾಗಲೀ ಅಥವಾ ಆತನ ತರ್ಕಶಾಲೆಯ ಕುರಿತಾಗಲೀ ಬೇರೆ ಯಾವುದೇ ಉಲ್ಲೇಖನಗಳು ಇಲ್ಲ. ಆದರೆ ಆತನು ಬಹುಶಃ ಒಬ್ಬ ತತ್ವಜ್ಞಾನಿಯಾಗಿದ್ದು ತನ್ನ ಉಪನ್ಯಾಸ ಮಾಡಲು ಒಂದು ರೀತಿಯ ಶಾಲೆಯನ್ನು ಹೊಂದಿದ್ದನು.

*ಯೆಹೂದಿ ಮುಖ್ಯ ಯಾಜಕ ಸ್ಕೇವ* (ವ. 14): ಈ ಹೆಸರಿನ ಯಾಜಕನ ಕುರಿತು ಏನೂ ತಿಳಿದುಬಂದಿಲ್ಲ. ಆತನು ಎಫೆಸದಲ್ಲಿರುವ ಜನರನ್ನು ಮೆಚ್ಚಿಸಲು ತನ್ನಷ್ಟಕ್ಕೆ ತಾನೇ ಈ ಶಿರೋನಾಮವನ್ನು ಇಟ್ಟುಕೊಂಡಿರುವ ಸಾಧ್ಯತೆಯುಂಟು.

*ಗ್ರಂಥಗಳು* (ವ. 19): ಈ ಗ್ರಂಥಗಳು ಮಾಂತ್ರಿಕ ಸೂತ್ರಗಳನ್ನು ಮತ್ತು ಗುಪ್ತವಾದ ವಶೀಕರಣಗಳನ್ನು ಒಳಗೊಂಡಿತ್ತು. ಹೊಸ ಒಡಂಬಡಿಕೆಯ ದಿನಗಳಲ್ಲಿ ಮಾಟಮಂತ್ರಕ್ಕೆ ಕೇಂದ್ರ ಸ್ಥಳವಾಗಿದ್ದ ಎಫೆಸದಲ್ಲಿ ಇಂತಹ ಸುರುಳಿಗಳು ಕಂಡುಬಂದಿವೆ.

*ಐವತ್ತು ಸಾವಿರ ಬೆಳ್ಳಿ ನಾಣ್ಯಗಳು* (ವ. 19): ಒಂದು ನಾಣ್ಯವು ಒಂದು ದಿನ ಕೂಲಿಯ ಮೌಲ್ಯತೆಯನ್ನು ಹೊಂದಿತ್ತು. ಈ ದುಬಾರಿ ಬೆಲೆಯು ಪುಸ್ತಕದ ಗುಣಮಟ್ಟದ ನಿಮಿತ್ತವಾಗಿರಲಿಲ್ಲ, ಬದಲಾಗಿ ಅವುಗಳಲ್ಲಿನ ಮಂತ್ರಗಳು ಬಹಳ ಬಲವಾದದ್ದು ಮತ್ತು ಅಮೂಲ್ಯವಾದದ್ದೆಂದು ಜನರು ನಂಬಿದ್ದರಿಂದ ಅಷ್ಟು ದುಬಾರಿಯಾಗಿದ್ದವು.

## ಇ) ಪಠ್ಯ ಪ್ರಶ್ನೆಗಳು

1. ಪೌಲನು ಎಫೆಸದ 12 ಜನರ ಮೇಲೆ ತನ್ನ ಕೈಗಳನ್ನು ಇಟ್ಟು ಪ್ರಾರ್ಥಿಸುವುದಕ್ಕಿಂತ ಮುಂಚೆ ಅವರಿಗೆ ಏನು ಮಾಡಿದನು?
2. ಆ ಹನ್ನೆರಡು ಪುರುಷರ ಮೇಲೆ ಪೌಲನು ತನ್ನ ಕೈಗಳನ್ನಿಟ್ಟಾಗ ಏನು ಸಂಭವಿಸಿತು?

3. ಪೌಲನು ಎಫೆಸದ ಸಭಾಮಂದಿರದಲ್ಲಿ ತನ್ನ ಸೇವೆಯನ್ನು ಯಾಕೆ ನಿಲ್ಲಿಸಿದನು?

4. ಪೌಲನು ತುರನ್ನನ ತರ್ಕಶಾಲೆಯಲ್ಲಿ ಮಾಡಿದ ಚರ್ಚೆಗಳ ಫಲವೇನಾಗಿತ್ತು?

5. ಯೇಸುವಿನ ನಾಮದಲ್ಲಿ ದೆವ್ವಗಳನ್ನು ಬಿಡಿಸಲು ಹೋದ ಯೆಹೂದ್ಯ ಪುರುಷರಿಗೆ ಏನು ಸಂಭವಿಸಿತು? ಅವರು ಯಾಕೆ ಸೋತು ಹೋದರು?

6. ಎಫೆಸದಲ್ಲಿ ಬಹಳ ಬೆಲೆಬಾಳುವ ಅನೇಕ ಗ್ರಂಥಗಳನ್ನು ಯಾಕೆ ಸುಟ್ಟುಹಾಕಿದರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗದ ರಚನೆ ಹೇಗಿದೆ?

2. ಪೌಲನು ಎಫೆಸಕ್ಕೆ ಬಂದಾಗ ಆತನು ಸಂಧಿಸಿದ ಹನ್ನೆರಡು ಜನರು ವಿಶ್ವಾಸಿಗಳಾಗಿದ್ದರೋ ಇಲ್ಲವೋ? ನಿಮ್ಮ ನಿಲುವಿಗೆ ಕಾರಣಗಳನ್ನು ಕೊಡಿರಿ!

3. ಆ ಹನ್ನೆರಡು ಜನರು ಈಗಾಗಲೇ ದೀಕ್ಷಾಸ್ನಾನ ಹೊಂದಿದ್ದರು. ಹಾಗಾದರೆ ಪೌಲನು ಮತ್ತೊಮ್ಮೆ ಅವರಿಗೆ ಯಾಕೆ ದೀಕ್ಷಾಸ್ನಾನ ಮಾಡಿಸಿದನು?

4. ಅನೇಕ ಚಿರಪರಿಚಿತ ಪೆಂತಕೋಸ್ತರಲ್ಲದ ಸತ್ಯವೇದ ಶಾಸ್ತ್ರಜ್ಞರು (ಉದಾ: ಎಫ್. ಎಫ್. ಬ್ರೂಸ್ ಮತ್ತು ಜಾನ್ ಸ್ಟಾಟ್‌ರವರು) ಘೋಷಿಸುವುದೇನೆಂದರೆ, ಎಫೆಸದ ಆ ಹನ್ನೆರಡು ಜನರ ಮೇಲೆ ಪವಿತ್ರಾತ್ಮನು ಬಂದಿದ್ದರ ಕುರಿತಾದ ಈ ಕಥೆಯು 'ಪವಿತ್ರಾತ್ಮನ ದೀಕ್ಷಾಸ್ನಾನವು' ವ್ಯತ್ಯಾಸವಾದ 'ಎರಡನೇಯ ಅನುಭವ'ವಾಗಿರದೆ ಒಬ್ಬನು ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವಾಗಲೇ ಪಡೆಯುವ ಅನುಭವವೆಂದು ಸಾಬೀತುಪಡಿಸುತ್ತದೆ. ನೀವು ಅವರೊಂದಿಗೆ ಒಪ್ಪಿಕೊಳ್ಳುತ್ತೀರೋ? ಯಾಕೆ – ಯಾಕೆ ಇಲ್ಲ?

5. ಭಾರತ ದೇಶದಲ್ಲಿ 'ದೀಕ್ಷಾಸ್ನಾನದ ಸೂತ್ರದ' ಕುರಿತು ವಿಶ್ವಾಸಿಗಳ ನಡುವೆ ಒಂದು ದೊಡ್ಡ ಚರ್ಚೆಯಿದೆ: ನಾವು 'ಯೇಸುವಿನ ಹೆಸರಿನಲ್ಲಿ ಮಾತ್ರ' ದೀಕ್ಷಾಸ್ನಾನ ಕೊಡಬೇಕೋ ಅಥವಾ 'ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ' ದೀಕ್ಷಾಸ್ನಾನ ಕೊಡಬೇಕೋ? ಈ ಪಠ್ಯದಲ್ಲಿ (ವ. 5) ಪೌಲನು ಆ ಹನ್ನೆರಡು ಜನರನ್ನು 'ಯೇಸುವಿನ ಹೆಸರಿನಲ್ಲಿ' ದೀಕ್ಷಾಸ್ನಾನ ಮಾಡಿಸಿದನು. ಇದು 'ಯೇಸುವಿನ ಹೆಸರಿನಲ್ಲಿ ಮಾತ್ರ' ಎಂಬ ದೃಷ್ಟಿಕೋನವನ್ನು ಪುಷ್ಟೀಕರಿಸುತ್ತದೋ? ನಿಮ್ಮ ಉತ್ತರಕ್ಕೆ ಕಾರಣಗಳನ್ನು ಕೊಡಿರಿ!

6. ವ. 11–12 ನ್ನು 5:15–16 ರೊಂದಿಗೆ ಹೋಲಿಸಿರಿ! ಈ ಎರಡೂ ವಾಕ್ಯಭಾಗಗಳು ಯಾಕೆ ಏಕರೀತಿಯಾಗಿವೆ ಎಂದು ನೀವು ಆಲೋಚಿಸುತ್ತೀರಿ?

7. ಈ ವಾಕ್ಯಭಾಗದ ಕೊನೆಯ ವಚನವು ಲೂಕನು ಚಿತ್ರಿಸುತ್ತಿರುವ ಸುವಾರ್ತೆಯ ಮಹಿಮೆಯುಳ್ಳ ವಿಸ್ತರಣೆಯ ಐದನೆಯ ಚಿತ್ರಣವನ್ನು ಮುಕ್ತಾಯಗೊಳಿಸುತ್ತದೆ.

   1) ಈ ಐದನೆಯ ಚಿತ್ರಣವನ್ನು ಲೂಕನು ಯಾವ ವಚನದಲ್ಲಿ ಚಿತ್ರಿಸಲು ಪ್ರಾರಂಭಿಸಿದನು?

   2) ಈ ಐದನೆಯ ಚಿತ್ರಣದಲ್ಲಿ ಏನು ಸಂಭವಿಸಿದೆ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಒಬ್ಬ ವ್ಯಕ್ತಿಗೆ 'ಮರುದೀಕ್ಷಾಸ್ನಾನ' ಕೊಡುವುದರ ಕುರಿತು ನಿಮ್ಮ ಸಭೆಯಲ್ಲಿ ನೀವು ಎಂದಾದರೂ ಚರ್ಚಿಸಿದ್ದೀರಾ? 'ಮರುದೀಕ್ಷಾಸ್ನಾನವನ್ನು' ಪರಿಗಣಿಸಬಹುದಾದ ವ್ಯತ್ಯಾಸವಾದ ಸನ್ನಿವೇಶಗಳ ಕುರಿತು ಚರ್ಚಿಸಿರಿ!

2. ಎಫೆಸದಲ್ಲಿನ ಪೌಲನ 'ಸತ್ಯವೇದ ಮಹಾವಿದ್ಯಾಲಯ':

    - ಪೌಲನು ತುರನ್ನನ ತರ್ಕಶಾಲೆಯಲ್ಲಿ ಎರಡು ವರ್ಷಗಳ ಕಾಲ ಸತ್ಯವೇದ ಮಹಾವಿದ್ಯಾಲಯವನ್ನು ನಡೆಸಿದನೆಂದು ಹೇಳಬಹುದಾಗಿದೆ. ಹೇಗೆಂದು ವಿವರಿಸಿರಿ! ಈ ಸತ್ಯವೇದ ಮಹಾವಿದ್ಯಾಲಯದ ಪರಿಣಾಮವೇನಾಗಿತ್ತು?

    - ನಮ್ಮ ಸ್ವಂತ ಸತ್ಯವೇದ ಮಹಾವಿದ್ಯಾಲಯದ ಕುರಿತು ಏನು? ಪೌಲನು ಪಡೆದ ಫಲವನ್ನು ನಾವು ಪಡೆಯಬೇಕಾದರೆ ಏನು ಮಾಡಬೇಕಾಗಿದೆ?

3. ಸ್ಕೇವನ ಏಳು ಜನ ಮಕ್ಕಳಿಗೆ ಸಂಭವಿಸಿದ ಸಂಗತಿಯು ಅತ್ಯಂತ ನಾಟಕೀಯ ರೀತಿಯಾದ ಕಥೆಯಾಗಿದೆ. ನೀವು ಇದೇ ರೀತಿಯ ಅನುಭವಗಳನ್ನು ಹೊಂದಿದ್ದೀರೋ? ಈ ಕಥೆಯಿಂದ ನಾವು ಏನನ್ನು ಕಲಿಯಬಹುದು?

4. ಎಫೆಸದಲ್ಲಿ ಗ್ರಂಥಗಳನ್ನು ಸುಟ್ಟು ಹಾಕಿದ ಕಥೆಯು (ವ. 19) ಇತಿಹಾಸದಾದ್ಯಂತ ಕ್ರೈಸ್ತರಿಂದ ಒಂದು ಹಿಂಬಾಲಿಸತಕ್ಕ ಮಾದರಿಯಾಗಿ ಉಪಯೋಗಿಸಿಕೊಳ್ಳಲಾಗಿದೆ.

    1) ನಿಮ್ಮ ಮತ್ತು ನಿಮ್ಮ ಸಭೆಯ ಕುರಿತು ಏನು? ವಿಶ್ವಾಸಿಗಳಾದ ನಾವು ನಮ್ಮ ಜೀವಿತಗಳ ಮೇಲೆ ಪ್ರಭಾವ ಬೀರುವ ಕೆಟ್ಟ ಮತ್ತು ಹಾನಿಕಾರಕ ವಸ್ತುಗಳಿಂದ ಮುಕ್ತರಾಗಬೇಕು ಎಂಬುದನ್ನು ಪ್ರದರ್ಶಿಸಲು ನೀವು ಎಂದಾದರೂ 'ಪುಸ್ತಕಗಳನ್ನು ಸುಡುವ' (ಅಥವಾ ಸಂಗೀತ ಧ್ವನಿ ಮುದ್ರಣ, ಸಿ.ಡಿ./ಡಿ.ವಿ.ಡಿ.ಗಳನ್ನು ಅಥವಾ ಚಲನಚಿತ್ರದ ರೀಲ್‌ಗಳನ್ನು ಸುಡುವ) ಕಾರ್ಯಕ್ರಮವನ್ನು ಆಯೋಜಿಸಿದ್ದೀರೋ (ಅಥವಾ ಅದರಲ್ಲಿ ಪಾಲ್ಗೊಂಡಿದ್ದೀರೋ)? ನೀವು ಅದನ್ನು ಹೇಗೆ ಮಾಡಿದಿರಿ ಮತ್ತು ಏನು ಸಂಭವಿಸಿತೆಂಬುದನ್ನು ಹಂಚಿಕೊಳ್ಳಿರಿ!

    2) ನಮ್ಮ ಕ್ರೈಸ್ತ ನಂಬಿಕೆಯನ್ನು ಮತ್ತು ಇಹಲೋಕದ ಪ್ರಭಾವಗಳನ್ನು ನಾವು ವಿರೋಧಿಸುವುದನ್ನು ವ್ಯಕ್ತಪಡಿಸಲು ಇದೊಂದು ಒಳ್ಳೆಯ (ಮತ್ತು ಸತ್ಯವೇದಾನುಸಾರವಾದ) ಮಾರ್ಗವೆಂದು ನೀವು ಆಲೋಚಿಸುತ್ತೀರೋ? ಯಾಕೆ – ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

ವಚನ 2 ರ ಟಿಪ್ಪಣಿಯ ಮತ್ತು ಈ) 1, ಈ) 2, ಮತ್ತು ಈ) 3 ರ ಉತ್ತರಗಳನ್ನು ಉಪಯೋಗಿಸಿಕೊಂಡು ***ಪವಿತ್ರಾತ್ಮನು ಮತ್ತು ಎಫೆಸದ ಹನ್ನೆರಡು ಪುರುಷರು***" ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಅಧ್ಯಯನವು ಕನಿಷ್ಠ ಪಕ್ಷ ಈ ಮೂರು ಪ್ರಮುಖ ಅಂಶಗಳನ್ನೊಳಗೊಂಡಿರಬೇಕೆಂದು ನಾನು ಸಲಹೆ ಕೊಡುತ್ತೇನೆ:

1) ನಾವು ಯೇಸು ಕ್ರಿಸ್ತನನ್ನು ಮತ್ತು ಆತನ ರಕ್ಷಣೆಯನ್ನು ಸ್ವೀಕರಿಸುವಾಗ ಪವಿತ್ರಾತ್ಮನ ಪಾತ್ರ: ನಾವು ಆತ್ಮನಿಂದ ಹುಟ್ಟಲ್ಪಡುತ್ತೇವೆ ಮತ್ತು ಪವಿತ್ರಾತ್ಮನು ನಮ್ಮೊಳಗೆ ವಾಸಿಸುತ್ತಾನೆ.

2) ನಮ್ಮ ಕ್ರಿಸ್ತೀಯ ಜೀವಿತದಲ್ಲಿ ಪವಿತ್ರಾತ್ಮನ ಪಾತ್ರ: ಪವಿತ್ರಾತ್ಮನು ನಮ್ಮನ್ನು ಮಾರ್ಗದರ್ಶಿಸುತ್ತಾನೆ ಮತ್ತು ಕ್ರಿಸ್ತನ ಸ್ವಾರೂಪ್ಯಕ್ಕೆ ನಮ್ಮನ್ನು ರೂಪಿಸುತ್ತಾನೆ. ನಾವು ಆತ್ಮನಲ್ಲಿ ನಡೆಯುವಾಗ ಪವಿತ್ರಾತ್ಮನು ನಮ್ಮಲ್ಲಿ ತನ್ನ ಫಲಗಳನ್ನುಂಟುಮಾಡುತ್ತಾನೆ.

3) ನಮ್ಮ ಸೇವೆಯಲ್ಲಿ ಪವಿತ್ರಾತ್ಮನ ಪಾತ್ರ: ಪವಿತ್ರಾತ್ಮನು ನಾವು ಸುವಾರ್ತೆಯನ್ನು ಸಾರಲು ಬೇಕಾದ ಧೈರ್ಯ ಮತ್ತು ಬಲವನ್ನು ಕೊಡುತ್ತಾನೆ ಮತ್ತು ನಮ್ಮನ್ನು ತನ್ನ ಬಲದಿಂದ ತುಂಬಿಸುತ್ತಾನೆ.

# ಭಾಗ 6

# ಮೂರನೆಯ ಸೇವಾ ಪ್ರಯಾಣ 2:

# ಅ. ಕೃ. 19:21 – 21:16

# ಯೆರೂಸಲೇಮಿನಿಂದ ರೋಮ್‌ಗೆ:

# ಅ. ಕೃ. 21:16 – 28:31

## ಪೀಠಿಕೆ

ಆದಿಸಭೆಯ ಕುರಿತಾದ ಲೂಕನ ಆರನೆಯ ಮತ್ತು ಕೊನೆಯ ಚಿತ್ರಣವು ಎಫೆಸದ ದಂಗೆಯೊಂದಿಗೆ ಪ್ರಾರಂಭವಾಗುತ್ತದೆ. ಇದರ ಪರಿಣಾಮವಾಗಿ, ಪೌಲ ಮತ್ತು ಆತನ ಸಂಗಡಿಗರು ಏಷ್ಯಾವನ್ನು ಬಿಟ್ಟು ಮಕೆದೋನಿಯ ಮತ್ತು ಅಖಾಯದ ಸಭೆಗಳನ್ನು ಪುನಃ ಸಂಧಿಸಲು ಹೊರಟರು. ಪೌಲನ ಮೂರನೆಯ ಸೇವಾ ಪ್ರಯಾಣವು ಯೆರೂಸಲೇಮಿನಲ್ಲಿ ಕೊನೆಗೊಳ್ಳುತ್ತದೆ, ಅಲ್ಲಿ ಆತನು ಬಂಧಿಸಲ್ಪಡುತ್ತಾನೆ. ರೋಮನ್ ಪ್ರಾಂತ್ಯವಾದ ಯೂದಾಯದ ರಾಜಧಾನಿಯಾದ ಸೆಜರೇಯದಲ್ಲಿ ಎರಡು ವರ್ಷಗಳ ಕಾಲ ಸಂಕಷ್ಟ ಮತ್ತು ಸೆರೆವಾಸವನ್ನು ಅನುಭವಿಸಿದ ನಂತರ ಪೌಲನು ಕೊನೆಯಲ್ಲಿ ಒಬ್ಬ ಸೆರೆಯಾಳಾಗಿ ರೋಮ್‌ಗೆ ಕೊಂಡೊಯ್ಯಲ್ಪಡುತ್ತಾನೆ. ರೋಮನ್ ಸಾಮ್ರಾಜ್ಯದ ರಾಜಧಾನಿಯಾದ ರೋಮ್‌ನಲ್ಲಿ ಪೌಲನು ಸುವಾರ್ತೆಯನ್ನು ಸಾರುವುದರೊಂದಿಗೆ ಲೂಕನು ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಮುಕ್ತಾಯಗೊಳಿಸುತ್ತಾನೆ.

*ಅವನು ಧೈರ್ಯದಿಂದ ಯಾವ ಅಡ್ಡಿ ಆತಂಕಗಳಿಲ್ಲದೇ ದೇವರ ಸಾಮ್ರಾಜ್ಯವನ್ನು ಪ್ರಕಟಿಸುತ್ತಾ ಕರ್ತನಾದ ಯೇಸು ಕ್ರಿಸ್ತನ ವಿಷಯವಾಗಿ ಉಪದೇಶಮಾಡುತ್ತಾ ಇದ್ದನು* (ಅ. ಕೃ. 28:31).

# ಪಾಠ 52. ಎಫೆಸದಲ್ಲಿ ದಂಗೆ, 19:21–41

## ಅ) ವಾಕ್ಯಭಾಗ

ಎಫೆಸದಲ್ಲಿ ದೆಮೆತ್ರಿಯ ಎಂಬ ಒಬ್ಬ ಅಕ್ಕಸಾಲಿಗನು ಮತ್ತು ಆತನ ಕಾರ್ಮಿಕರು ಪೌಲನ ವಿರುದ್ಧ ದೊಂಬಿ ಎಬ್ಬಿಸಿದರು. ಪೌಲನು ಜನರನ್ನು ಹಾದಿ ತಪ್ಪಿಸಿ, ಅರ್ತೆಮಿ ದೇವಿಯ ಮೇಲೆ ಅವಿಶ್ವಾಸ ಹುಟ್ಟಿಸಿ, ತಮ್ಮ ವ್ಯವಹಾರವನ್ನು ಹಾಳು ಮಾಡುತ್ತಿದ್ದಾನೆಂದು ಅವರು ದೂಷಿಸಿದರು. ಒಂದು ದೊಡ್ಡ ದೊಂಬಿಯು 'ಎಫೆಸದ ಅರ್ತೆಮಿ ದೇವಿಯೇ ಮಹಾದೇವಿ!' ಎಂದು ಆರ್ಭಟಿಸುತ್ತಾ ಕ್ರೀಡಾಂಗಣದ ಒಳಗೆ ನುಗ್ಗಿದರು. ಪೌಲನು ಕ್ರೀಡಾಂಗಣದ ಒಳಗೆ ಹೋಗಿ ಜನರ ಮುಂದೆ ತನ್ನ ಪರವಾಗಿ ಪ್ರತಿವಾದಿಸಬೇಕೆಂದಿದ್ದಾಗ ಆತನ ಸ್ನೇಹಿತರು ಆತನನ್ನು ಹೋಗದಂತೆ ತಡೆದರು. ಕೊನೆಯಲ್ಲಿ ಪಟ್ಟಣದ ಒಬ್ಬ ಅಧಿಕಾರಿಯು ಗಲಭೆಯನ್ನು ಶಾಂತಗೊಳಿಸಿ ಜನ ಸಮೂಹವನ್ನು ಚದುರಿಸಲು ಯಶಸ್ವಿಯಾದನು.

## ಆ) ಟಿಪ್ಪಣಿ

*ತನ್ನ ಇಬ್ಬರು ಸಹಾಯಕರಾದ ತಿಮೋಥಿ ಮತ್ತು ಎರಸ್ತನನ್ನು ಮಕೆದೋನಿಯಕ್ಕೆ ಕಳುಹಿಸಿ:* *ತಿಮೋಥಿಯ* ಕುರಿತು 16:1 ರ ಟಿಪ್ಪಣಿಯನ್ನು ನೋಡಿರಿ. *ಎರಸ್ತನು* ಹೊಸ ಒಡಂಬಡಿಕೆಯ ಇನ್ನೂ ಎರಡು ವಾಕ್ಯಭಾಗಗಳಲ್ಲಿ ಸೂಚಿಸಲ್ಪಟ್ಟಿದ್ದಾನೆ. ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ (ಎಫೆಸವನ್ನು ಬಿಟ್ಟ ಸ್ವಲ್ಪ ಸಮಯದ ನಂತರ ಕೊರಿಂಥದಿಂದ ಪೌಲನು ಈ ಪತ್ರಿಕೆಯನ್ನು ಬರೆದನು), ಆತನು ಎರಸ್ತನನ್ನು 'ಈ ಪಟ್ಟಣದ ಖಜಾಂಚಿ' ಎಂದು ಕರೆಯುತ್ತಾನೆ (ರೋಮಾ. 16:23). ಹಾಗಾಗಿ ಎರಸ್ತನು ಕೊರಿಂಥದಲ್ಲಿ ಒಂದು ಉನ್ನತವಾದ ಹುದ್ದೆಯಲ್ಲಿದ್ದನು. ಆತನ ಹೆಸರು ಕೊರಿಂಥದಲ್ಲಿರುವ ಒಂದು ಶಿಲಾಲೇಖನದಲ್ಲಿಯೂ ಕಂಡು ಬರುತ್ತದೆ, ಅದರಲ್ಲಿ ಆತನು ಕ್ರೀಡಾಂಗಣದ ಹತ್ತಿರ ಬರುವ ಅಂಗಳದ ಕಲ್ಲು ಹಾಸಿನ ದಾರಿಗೆ ಶಿಲಾನ್ಯಾಸವನ್ನು ಮಾಡಿದನೆಂದು ಹೇಳುತ್ತದೆ. 2 ತಿಮೋಥಿ. 4:20 ರಲ್ಲಿ ಪೌಲನು ಕೊರಿಂಥದೊಂದಿಗೆ ಸಂಬಂಧಿಸಿ ಮತ್ತೊಮ್ಮೆ *ಎರಸ್ತನ* ಕುರಿತು ಪ್ರಸ್ತಾಪಿಸುತ್ತಾನೆ. *ಮೆಕೆದೋನಿಯದ* ಕುರಿತು 16:9 ರ ಟಿಪ್ಪಣಿಯನ್ನು ನೋಡಿರಿ.

*ದೆಮೆತ್ರಿಯ ಎಂಬ ಒಬ್ಬ ಅಕ್ಕಸಾಲಿಗನು ಅರ್ತೆಮಿ ದೇವಿಯ ಬೆಳ್ಳಿಯ ಮೂರ್ತಿಗಳನ್ನು ಮಾಡುವವನಾಗಿದ್ದನು* (ವ. 24): *ದೆಮೆತ್ರಿಯನು* ಬಹುಶಃ ಎಫೆಸದಲ್ಲಿ ಅಕ್ಕಸಾಲಿಗರ ಸಂಘದ ಅಧ್ಯಕ್ಷನಾಗಿದ್ದಿರಬಹುದು. ಅವರು ಅರ್ತೆಮಿ ದೇವಿಯ ಸಣ್ಣ ಗುಡಿಗಳನ್ನು ಮತ್ತು ಸಣ್ಣ ವಿಗ್ರಹಗಳನ್ನು ತಯಾರಿಸಿ ಯಾತ್ರಿಕರಿಗೂ ಮತ್ತು ಪ್ರಯಾಣಿಕರಿಗೂ ಅವುಗಳನ್ನು ಮಾರುತ್ತಿದ್ದರು. ಎಫೆಸದಲ್ಲಿನ *ಅರ್ತೆಮಿಯು* ಫಲವತ್ತತೆಯ ದೇವತೆಯಾಗಿದ್ದಳು ಮತ್ತು ಅತೀ ಪ್ರಸಿದ್ಧವಾಗಿದ್ದಳು. ಅನೇಕ ಸೂಳೆಯರು ಆಕೆಯ ದೇವಾಲಯದೊಂದಿಗೆ ಸಂಪರ್ಕವನ್ನು ಹೊಂದಿದ್ದರು. ಆ ದೇವಾಲಯವು 130 ಮೀಟರ್ ಉದ್ದ ಮತ್ತು 67 ಮೀ ಅಗಲವಿದ್ದು, 19 ಮೀ ಉದ್ದನೆಯ 127 ಬಿಳಿ ಕಲ್ಲಿನ ಸ್ಥಂಬಗಳನ್ನು ಹೊಂದಿತ್ತು. ಎಫೆಸದ ಕುರಿತು ಹೆಚ್ಚಿನ ಮಾಹಿತಿಗಾಗಿ 19:1 ರ ಟಿಪ್ಪಣಿಯನ್ನು ನೋಡಿರಿ.

*ಗಾಯ ಮತ್ತು ಆರಿಸ್ತಾರ್ಕ* (ವ. 29): ಗಾಯ ಎಂಬುದು ರೋಮನ್ನರ ಸಾಮಾನ್ಯವಾಗಿ ಹೆಸರಾಗಿತ್ತು ಮತ್ತು ಹೊಸ ಒಡಂಬಡಿಕೆಯಲ್ಲಿ ಇದೇ ಹೆಸರುಳ್ಳ ಬೇರೆಯವರೂ ಇದ್ದಾರೆ. ಆರಿಸ್ತಾರ್ಕನು ಮೆಕೆದೋನಿಯಲ್ಲಿನ ಥೆಸಲೋನಿಕದ ಮೂಲನಿವಾಸಿಯಾಗಿದ್ದನು. ಆತನು ನಂತರ ಪೌಲನೊಂದಿಗೆ ಕೊರಿಂಥದಿಂದ ಯೆರೂಸಲೇಮಿಗೆ (20:2–4) ಮತ್ತು ನಂತರ ಯೆರೂಸಲೇಮಿನಿಂದ ರೋಮ್‌ಗೆ ಪ್ರಯಾಣಿಸಿದನು (27:12), ಆತನು ರೋಮ್‌ನಲ್ಲಿ ಪೌಲನ ಜೊತೆ ಸೆರೆಯಾಳಾದನು (ಕೊಲೊಸ್ಸೆ. 4:10).

*ಅಧಿಕಾರಿಗಳು* (ವ. 31): ಈ ಅಧಿಕಾರಿಗಳು ಪ್ರಾಂತ್ಯದಲ್ಲಿ ಚಕ್ರವರ್ತಿಯ ಆರಾಧನೆಯನ್ನು ಪ್ರಾರಂಭಿಸಿದ ಒಂದು ಸಭೆಗೆ ಸಂಬಂಧಪಟ್ಟವರಾಗಿದ್ದರು. ಅವರು ಶ್ರೀಮಂತ ಮತ್ತು ಪ್ರಭಾವಶಾಲಿಗಳಾದ ಜನರಾಗಿದ್ದರು. ಹಾಗಾಗಿ ಪೌಲನು ಇಂತಹ ಪ್ರಭಾವವುಳ್ಳ ಸ್ನೇಹಿತರನ್ನೂ ಹೊಂದಿದ್ದನು.

*ಅಲೆಕ್ಸಾಂದ್ರ* (ವ. 33): ಈತನು ಒಬ್ಬ ಯೆಹೂದ್ಯನಾಗಿದ್ದನು. ಇದರ ಹೊರತು ಈತನ ಕುರಿತು ಯಾವುದೇ ಹೆಚ್ಚಿನ ಮಾಹಿತಿ ಇಲ್ಲ.

*ಪಟ್ಟಣದ ಅಧಿಕಾರಿ* (ವ. 35): ಈತನು ಪಟ್ಟಣದಲ್ಲಿಯೇ ಅತೀ ಪ್ರಾಮುಖ್ಯ ಅಧಿಕಾರಿಯಾಗಿದ್ದನು ಮತ್ತು ಈತನು ಎಫೆಸದ ಮತ್ತು ರೋಮನ್ ಅಧಿಕಾರಿಗಳ ನಡುವೆ ಸಂಪರ್ಕ ಕಲ್ಪಿಸುವ ವ್ಯಕ್ತಿಯಾಗಿದ್ದನು. ಈತನು ಸಭೆಯ ಪ್ರಧಾನ ಕಾರ್ಯದರ್ಶಿಯಾಗಿದ್ದನು.

## ಇ) ಪಠ್ಯ ಪ್ರಶ್ನೆಗಳು

1. ಈ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿರಿ: ಎಫೆಸ, ಮೆಕೆದೋನಿಯ ಮತ್ತು ಕೊರಿಂಥ!
2. ದೆಮೆತ್ರಿಯನು ಯಾರು?
3. ಜನರು ಉಗ್ರರಾಗುವಂತೆ ಮಾಡಿದ ಸಂಗತಿ ಏನು?
4. ಪೌಲನು ಜನರ ಗುಂಪಿನೊಂದಿಗೆ ಮಾತನಾಡಲು ಯಾಕೆ ಕ್ರೀಡಾಂಗಣಕ್ಕೆ ಹೋಗಲಿಲ್ಲ?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನನ್ನು ಆಪಾದಿಸಲು ದೆಮೆತ್ರಿಯನು ಯಾವ ವಾದವನ್ನು ಉಪಯೋಗಿಸಿದನು?
2. ದೆಮೆತ್ರಿಯನ ಆಪಾದನೆಯು ನ್ಯಾಯವಾದದ್ದೆಂದು ನೀವು ಆಲೋಚಿಸುತ್ತೀರೋ? ಯಾಕೆ – ಯಾಕೆ ಇಲ್ಲ?
3. ಪಟ್ಟಣದ ಅಧಿಕಾರಿಯು ಜನರ ಗುಂಪನ್ನು ಸುಮ್ಮನಾಗಿಸಲು ಯಾವ ವಾದವನ್ನು ಉಪಯೋಗಿಸಿದನು?
4. ಆತನ ವಾದವು ಸರಿಯಾದದ್ದೆಂದು ನೀವು ಆಲೋಚಿಸುತ್ತೀರೋ? ಯಾಕೆ – ಯಾಕೆ ಇಲ್ಲ?

5. ಈ ಕಥೆಯಲ್ಲಿ ಪೌಲನ ಪಾತ್ರವೇನು? ಆತನು ಮಾಡಿದ್ದು ಸರಿಯೆಂದು ನೀವು ಆಲೋಚಿಸುತ್ತೀರೋ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಎಫೆಸದಲ್ಲಿ ಉಂಟಾದ ಗಲಭೆಯಂತಹ ಗಲಭೆಯನ್ನು ನೀವು ಎಂದಾದರೂ ಕಂಡಿದ್ದೀರೋ? ಅದು ಉದ್ಭವಿಸುವಂತೆ ಮಾಡಿದ ಸಂಗತಿಯೇನು? ಅದು ಹೇಗೆ ಶಾಂತಗೊಂಡಿತು?
2. ದೆಮೆತ್ರಿಯನು ಪೌಲನ ವಿರುದ್ಧವಾಗಿ ಮಾಡಿದ ಆಪಾದನೆಗಳಲ್ಲಿ ಒಂದು ಆತನು ಕೈಯಿಂದ ಮಾಡಿದ ಮೂರ್ತಿಗಳು ದೇವರುಗಳಲ್ಲ ಎಂದು ಘೋಷಿಸಿದನು ಎಂಬುದಾಗಿದೆ (ವ. 26). ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿರಿ ಮತ್ತು ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿರಿ:
    - ನೀವು ವಿಗ್ರಹಗಳ ವಿರುದ್ದ ಮಾತನಾಡಿದಿರೆಂದು ನಿಮ್ಮ ಸ್ಥಳದಲ್ಲಿರುವ ಅಕ್ರೈಸ್ತರು ನಿಮ್ಮನ್ನು ಎಂದಾದರೂ ಆಪಾದಿಸಿದ್ದಾರೋ?
    - ಈ ಆಪಾದನೆಗಳು ನಿಜವಾದುದ್ದೋ – ಅಥವಾ ಜನರನ್ನು ಬೇಸರಪಡಿಸಬಾರದೆಂಬ ಉದ್ದೇಶದಿಂದ ವಿಗ್ರಹಾರಾಧನೆಯ ವಿಚಾರವನ್ನೇ ನೀವು ದೂರವಿರಿಸುತ್ತೀರೋ?
    - ವಿಗ್ರಹಾರಾಧನೆಯ ವಿಚಾರವನ್ನು ವಿಶ್ವಾಸಿಗಳು ದೂರವಿರಿಸುವುದು ಸರಿಯಾದದ್ದೋ?
    - ವಿಶ್ವಾಸಿಗಳು ವಿರೋಧ ಮತ್ತು ಸಮಸ್ಯೆಗಳಿಗೆ ಭಯಪಡುವುದರಿಂದ ವಿಗ್ರಹಾರಾಧನೆಯ ಕುರಿತು ಮಾತನಾಡುವುದನ್ನು ದೂರವಿರಿಸುತ್ತಾರೋ?

# ಪಾಠ 53. ಮೆಕೆದೋನಿಯ ಮತ್ತು ಗ್ರೀಸ್ ಮಾರ್ಗವಾಗಿ ಪೌಲನ ಪ್ರಯಾಣ, 20:1–6

## ಅ) ವಾಕ್ಯಭಾಗ

ಪೌಲನು ಸಹಚರರ ಒಂದು ದೊಡ್ಡ ಗುಂಪಿನೊಂದಿಗೆ ಎಫೆಸದಿಂದ ಮೆಕೆದೋನಿಯದ ಮಾರ್ಗವಾಗಿ ಪ್ರಯಾಣಿಸುತ್ತಾ ಅಖಾಯದಲ್ಲಿನ ಕೊರಿಂಥಕ್ಕೆ ತಲುಪಿ ಮತ್ತೆ ಅಲ್ಲಿಂದ ಹಿಂತಿರುಗಿದನು. ಅವರು ಪೌಲನು ಕೆಲವು ವರ್ಷಗಳ ಹಿಂದೆ ತನ್ನ ಎರಡನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ಸ್ಥಾಪಿಸಿದಂತಹ ಸಭೆಗಳಿಗೆ ಭೇಟಿಕೊಟ್ಟರು. ನಂತರ ಅವರು ಫಿಲಿಪ್ಪಿಯಿಂದ (ಅಥವಾ ಅದರ ನಿಯಾಪೊಲಿಸ್ ಎಂಬ ಬಂದರಿನಿಂದ) ಏಷ್ಯಾದ ತ್ರೋವಕ್ಕೆ ಸಮುದ್ರಮಾರ್ಗವಾಗಿ ಪ್ರಯಾಣಿಸಿದರು.

## ಆ) ಟಿಪ್ಪಣಿ

*ಪೌಲನು ... ಮಕೆದೋನಿಯಕ್ಕೆ ಪ್ರಯಾಣ ಮಾಡಿದನು. ಆತನು ಆ ಪ್ರದೇಶದಲ್ಲೆಲ್ಲಾ ... ಪ್ರಯಾಣ ಮಾಡಿ ಗ್ರೀಸ್ ತಲುಪಿದನು* (ವ. 1–2): ಹೊಸ ಒಡಂಬಡಿಕೆಯ ಕಾಲದಲ್ಲಿ ಆಧುನಿಕ ಗ್ರೀಸ್ ಎರಡು ರೋಮ್ ಪ್ರಾಂತ್ಯಗಳಾಗಿ ವಿಂಗಡಿಸಲ್ಪಟ್ಟಿತ್ತು: ಉತ್ತರದಲ್ಲಿದ್ದ ಮಕೆದೋನಿಯ (ಇದರ ರಾಜಧಾನಿ ಥೆಸಲೋನಿಕವಾಗಿತ್ತು) ಮತ್ತು ದಕ್ಷಿಣದಲ್ಲಿದ್ದ ಅಖಾಯ (ಕೊರಿಂಥವು ಇದರ ರಾಜಧಾನಿಯಾಗಿತ್ತು). ಈ ವಾಕ್ಯಭಾಗದಲ್ಲಿ ಲೂಕನು ಬಳಸುತ್ತಿರುವ ಗ್ರೀಸ್ ರೋಮನ್ ಪ್ರಾಂತ್ಯವಾದ *ಅಖಾಯವಾಗಿದೆ*. ಪೌಲನು ಚಳಿಗಾಲವನ್ನು ('ಮೂರು ತಿಂಗಳು', ವ. 3) ಅಲ್ಲಿ ಕಳೆದನು; ಚಳಿಗಾಲದಲ್ಲಿ ಹವಾಮಾನವು ತೀವ್ರವಾಗಿರುತ್ತಿತ್ತು ಮತ್ತು ಹಡಗುಗಳು ಸತತವಾಗಿ ಸಾಗುತ್ತಿದ್ದಿಲ್ಲ.

*ಸೋಪತ್ರನು ... ಅರಿಸ್ತಾರ್ಕ ಮತ್ತು ಸೆಕುಂದ ... ಗಾಯ ತಿಮೋಥಿ ... ತುಖಿಕ ಹಾಗೂ ತ್ರೋಫಿಮ* (ವ. 4): ಲೂಕನು ಪೌಲನೊಂದಿಗೆ ಪ್ರಯಾಣಿಸಿದ ಆತನ ಸಹಚರರ ಹೆಸರುಗಳನ್ನು ಸೂಕ್ಷ್ಮವಾಗಿ ದಾಖಲಿಸುತ್ತಿದ್ದಾನೆ, ಯಾಕೆಂದರೆ ಬಹುಶಃ ಅವರು ಪೌಲನೊಂದಿಗೆ ಪ್ರಯಾಣಿಸುವುದಕ್ಕಾಗಿ ಹಾಗೂ ಯೆರೂಸಲೇಮಿನ ಸಭೆಯಲ್ಲಿದ್ದ ಬಡಜನರಿಗೆ ಸಹಾಯ ಮಾಡುವುದಕ್ಕಾಗಿ ಸಂಗ್ರಹಿಸಲ್ಪಟ್ಟ ಕಾಣಿಕೆಯನ್ನು ಅರ್ಪಿಸುವುದಕ್ಕಾಗಿ ತಮ್ಮ ತಮ್ಮ ಸಭೆಗಳಿಂದ ನೇಮಿಸಲ್ಪಟ್ಟ ಅಧಿಕೃತ ಪ್ರತಿನಿಧಿಗಳಾಗಿದ್ದರು (ರೋಮಾ. 15:25–27 ನ್ನು ನೋಡಿರಿ). ಲೂಕನೂ ಸಹ ಪೌಲನೊಂದಿಗೆ ಪ್ರಯಾಣಿಸುತ್ತಿದ್ದನು (ವ. 5). ಸೋಪತ್ರನು ರೋಮಾ. 16:21 ರಲ್ಲಿ ಸೋಸಿಪತ್ರನೆಂದು ಕರೆಯುಲ್ಪಟ್ಟಿದ್ದಾನೆ. ಸೆಕುಂದನ ಕುರಿತು ಬೇರೆ ಎಲ್ಲಿಯೂ ತಿಳಿಸಲ್ಪಟ್ಟಿಲ್ಲ. (ದೆರ್ಬೆಯ) ಗಾಯನು ಬಹುಶಃ 19–29 ರಲ್ಲಿ ತಿಳಿಸಲ್ಪಟ್ಟಿರುವ ಗಾಯನಲ್ಲ (ಈತನು ಮೆಕೆದೋನಿಯದವನಾಗಿದ್ದನು). ಅರಿಸ್ತಾರ್ಕನ ಕುರಿತು 19:29 ರ ಟಿಪ್ಪಣಿಯನ್ನು ನೋಡಿರಿ. ತಿಮೋಥಿಯ ಕುರಿತು 16:1 ರ ಟಿಪ್ಪಣಿಯನ್ನು ನೋಡಿರಿ. (ಬಹುಶಃ ಎಫೆಸದ ನಿವಾಸಿಯಾಗಿದ್ದ) ಏಷ್ಯಾ ಪ್ರಾಂತ್ಯದ ತುಖಿಕನು ಪೌಲನ ನಿಕಟವಾದ ಸ್ನೇಹಿತನಾಗಿದ್ದನು ಮತ್ತು ಅಮೂಲ್ಯ ಸಹಾಯಕನಾಗಿದ್ದನು. ಈತನು ಪೌಲನು ರೋಮ್‌ನಲ್ಲಿ ಮೊದಲ ಬಾರಿಗೆ ಸೆರೆವಾಸಿಯಾದಾಗ ಆತನ ಸಂಗಡ ಇದ್ದನು ಮತ್ತು ಎಫೆಸದವರಿಗೂ (ಎಫೆಸ. 6:21) ಕೊಲೊಸ್ಸೆಯವರಿಗೂ (ಕೊಲೊಸ್ಸೆ. 4:7–9) ಆತನ ಪತ್ರಿಕೆಗಳನ್ನು

ತೆಗೆದುಕೊಂಡು ಹೋದನು. ಈತನು ಪೌಲನು ರೋಮ್‌ನಲ್ಲಿ ಎರಡನೆಯ ಬಾರಿ ಸೆರೆವಾಸಿಯಾದಾಗಲೂ ಆತನ ಜೊತೆಯಲ್ಲಿದ್ದನು ಮತ್ತು ರೋಮ್‌ನಿಂದ ಎಫೆಸಕ್ಕೆ ಪೌಲನಿಂದ ಕಳುಹಿಸಲ್ಪಟ್ಟನು (2 ತಿಮೋಥಿ. 4:12). ಈತನ ಕುರಿತು ಪೌಲನಿಗೆ ಒಳ್ಳೆಯ ಅಭಿಪ್ರಾಯವಿತ್ತು. ಮತ್ತು ಪೌಲನು ಈತನನ್ನು 'ಪ್ರಿಯಸಹೋದರ ಮತ್ತು ಕರ್ತನಲ್ಲಿ ನಂಬಿಗಸ್ತನಾದ ಸೇವಕನು' ಎಂದೂ (ಎಫೆಸ. 6:21) ಮತ್ತು 'ಪ್ರಿಯ ಸಹೋದರನೂ ನಂಬಿಗಸ್ತ ಸೇವಕನೂ ಮತ್ತು ಕರ್ತನಲ್ಲಿ ಜೊತೆಯ ದಾಸನೂ (ಕೊಲೊಸ್ಸೆ. 4:7) ಎಂದೂ ಕರೆದನು. ತ್ರೋಫಿಮನು ಎಫೆಸದವನಾಗಿದ್ದನು. ಆತನು ನಂತರ ಯೆರೂಸಲೇಮಿನಲ್ಲಿ ಕೋಲಾಹಲವೆದ್ದು ಪೌಲನು ಬಂಧಿಸಲ್ಪಡುವುದಕ್ಕೆ ನಿರ್ದೋಷಿಯಾದ ಕಾರಣಕರ್ತನಾದನು (21:29). ಈತನು 2 ತಿಮೋಥಿ. 4:20 ರಲ್ಲಿಯೂ ತಿಳಿಸಲ್ಪಟ್ಟಿದ್ದಾನೆ, ಹಾಗಾಗಿ ಈತನು ಪೌಲನೊಂದಿಗೆ ಅನೇಕ ವರ್ಷಗಳವರೆಗೂ ಸಂಪರ್ಕದಲ್ಲಿದ್ದನು.

*ತ್ರೋವ* (ವ. 5): 16:8 ರ ಟಿಪ್ಪಣಿಯನ್ನು ನೋಡಿರಿ.

*ಫಿಲಿಪ್ಪಿ* (ವ. 6): 16:12 ರ ಟಿಪ್ಪಣಿಯನ್ನು ನೋಡಿರಿ. ಅವರು ಫಿಲಿಪ್ಪಿಯ ನಿಯಾಪೊಲಿಸ್ ಎಂಬ ಬಂದರಿನಿಂದ 15 ಕಿ.ಮೀ. ದೂರ ಪ್ರಯಾಣಿಸಿರಬೇಕು.

*ಹುಳಿಯಿಲ್ಲದ ರೊಟ್ಟಿಯ ಹಬ್ಬ* (ವ. 6): ಈ ಹಬ್ಬವು ಪಸ್ಕಹಬ್ಬದೊಂದಿಗೆ ಪ್ರಾರಂಭಗೊಂಡು ಒಂದು ವಾರದವರೆಗೂ ನಡೆಯುತ್ತಿತ್ತು. ಈ ಸಮಯವನ್ನು ಪೌಲನು ಫಿಲಿಪ್ಪಿಯಲ್ಲಿ ಕಳೆದನು. 12:3 ರ ಟಿಪ್ಪಣಿಯನ್ನೂ ಸಹ ನೋಡಿರಿ.

## ಇ) ಪಠ್ಯ ಪ್ರಶ್ನೆಗಳು

1. ಈ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿರಿ: ಮೆಕೆದೋನಿಯ, ಅಖಾಯ, ಸಿರಿಯಾ ಮತ್ತು ತ್ರೋವ!
2. ಪೌಲನು ಮೆಕೆದೋನಿಯದ ಮೂಲಕ ಪ್ರಯಾಣಿಸಿದಾಗ ಏನು ಮಾಡಿದನು?
3. ಈ ವಾಕ್ಯಭಾಗದಲ್ಲಿರುವಂತೆ ಪೌಲನು ತನ್ನ ಪ್ರಯಾಣದ ಸಂದರ್ಭದಲ್ಲಿ ಮೆಕೆದೋನಿಯಕ್ಕೆ ಎರಡು ಬಾರಿ ಯಾಕೆ ಭೇಟಿ ಕೊಟ್ಟನು?
4. ಲೂಕನು ತ್ರೋವಕ್ಕೆ ಹೇಗೆ ಪ್ರಯಾಣಿಸಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನು ಎಫೆಸವನ್ನು ಬಿಡುವುದಕ್ಕಿಂತ ಮುಂಚೆ ಅಲ್ಲಿ ಮೂರು ವರ್ಷಗಳನ್ನು ಕಳೆದಿದ್ದನು. ಈ ವರ್ಷಗಳಲ್ಲಿ ಆತನು ತನ್ನ ಕೆಲವು ಪತ್ರಿಕೆಗಳನ್ನು ಬರೆದನು. ***ಹೆಚ್ಚಿನ ವಾಸ್ತವಾಂಶಗಳು*** ಎಂಬ ಭಾಗದಲ್ಲಿರುವ ***ಅಪೋಸ್ತಲರ ಕೃತ್ಯಗಳ ಪುಸ್ತಕ ಮತ್ತು ಪೌಲನ ಪತ್ರಿಕೆಗಳು*** ಎಂಬ ಅಧ್ಯಾಯವನ್ನು ಓದಿರಿ, ನಂತರ ಈ ಪ್ರಶ್ನೆಯನ್ನು ಉತ್ತರಿಸಿರಿ: ಪೌಲನು ಎಫೆಸದಿಂದ ಯಾವ ಪತ್ರಿಕೆಗಳನ್ನು ಬರೆದನು?

2. ಪೌಲನು ಕೊರಿಂಥದಲ್ಲಿ ಮೂರು ತಿಂಗಳುಗಳನ್ನು ಕಳೆದನು (ವ. 3). ಈ ಅವಧಿಯಲ್ಲಿ ಆತನು ಒಂದು ಪತ್ರಿಕೆಯನ್ನು ಬರೆದನು. ಅದು ಯಾವುದು (ನಿಮಗೆ ಗೊತ್ತಿಲ್ಲದಿದ್ದರೆ ***ಹೆಚ್ಚಿನ ವಾಸ್ತವಾಂಶಗಳು*** ಎಂಬ ಭಾಗದಲ್ಲಿರುವ ***ಅಪೋಸ್ತಲರ ಕೃತ್ಯಗಳ ಪುಸ್ತಕ ಮತ್ತು ಪೌಲನ ಪತ್ರಿಕೆಗಳು*** ಎಂಬ ಅಧ್ಯಾಯವನ್ನು ಓದಿರಿ).
3. ಈ ವಾಕ್ಯಭಾಗದಲ್ಲಿ ಪೌಲನು ಮಕೆದೋನಿಯ ಮತ್ತು ಅಖಾಯಕ್ಕೆ ಮರು ಭೇಟಿ ನೀಡುತ್ತಿದ್ದಾನೆ, ಆತನು ತನ್ನ ಎರಡನೆಯ ಸೇವಾ ಪ್ರಯಾಣದ ಪ್ರಾರಂಭದಲ್ಲಿ ಇಲ್ಲಿ ಹೆಚ್ಚಿನ ಸಮಯವನ್ನು ಕಳೆದನು.

   1) ಪೌಲನು ತನ್ನ ಎರಡನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ***ಮೆಕೆದೋನಿಯದ*** ಯಾವ ಸ್ಥಳಗಳಲ್ಲಿ ಸೇವೆಮಾಡಿದನು?

   2) ಪೌಲನು ತನ್ನ ಎರಡನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ***ಅಖಾಯದ*** ಯಾವ ಸ್ಥಳಗಳಲ್ಲಿ ಸೇವೆಮಾಡಿದನು?

4. ಒಬ್ಬ ವ್ಯಕ್ತಿಯು (ಲೂಕನು ಅಲ್ಲ!) ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ಪ್ರಸ್ತಾಪಿಸಲ್ಪಟ್ಟೇ ಇಲ್ಲ, ಆದರೂ ಈ ವಾಕ್ಯಭಾಗದಲ್ಲಿರುವ ಪೌಲನ ಪ್ರಯಾಣದಲ್ಲಿ ಆತನು ಅತೀ ಪ್ರಮುಖವಾದ ಪಾತ್ರವನ್ನು ವಹಿಸಿದನು.
   - ಆ ವ್ಯಕ್ತಿ ಯಾರೆಂದು ನೀವು ಗುರುತಿಸಬಲ್ಲಿರೋ?
   - ನೀವು ಸೋತು ಹೋದಿರೋ? ಹಾಗಾದರೆ ಈ ವಾಕ್ಯಗಳನ್ನು ನೋಡಿರಿ: 2 ಕೊರಿ. 7:5–7; 7:13–16; 8:1–7!

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಪೌಲನು ಸಭೆಯ ಹೇರಳವಾದ ಹಣವನ್ನು ತಾನೊಬ್ಬನೇ ನಿಬಾಯಿಸದಂತೆ ಜಾಗರೂಕನಾಗಿದ್ದನು. ಈ ಕಥೆಯಲ್ಲಿ ಇದು ಎದ್ದು ಕಾಣುತ್ತದೆ. ಆತನು ಬೇರೆ ಬೇರೆ ಸಭೆಗಳಿಂದ ಬಂದ ಪ್ರತಿನಿಧಿಗಳ ಒಂದು ಗುಂಪನ್ನು ತನ್ನೊಂದಿಗೆ ಕರೆದುಕೊಂಡು ಅಖಾಯ ಮತ್ತು ಮಕೆದೋನಿಯದಿಂದ ಮತ್ತು ನಂತರ ಏಷ್ಯಾದ ಮಾರ್ಗವಾಗಿ ಯೆರೂಸಲೇಮಿಗೆ ಪ್ರಯಾಣಿಸಿದನು. ಹೀಗೆ ಮಾಡಿದ್ದು ಭದ್ರತೆಯ ಕಾರಣದಿಂದ ಮಾತ್ರವಲ್ಲ. ಆದರೆ ವಾಸ್ತವಿಕವಾಗಿ ಹೇಳಬೇಕಾದರೆ, ಆತನ ಸಂಗಡ ಅನೇಕ ಸಭೆಗಳ ಪ್ರತಿನಿಧಿಗಳು ತನ್ನ ಸಹಚರರಾಗಿ ಪ್ರಯಾಣಿಸಿದ ಸಂಗತಿಯು ಅನ್ಯವಿಶ್ವಾಸಿಗಳ ಸಭೆಗಳಿಂದ ಸಂಗ್ರಹಿಸಲ್ಪಟ್ಟ ಹಣವು ಪೂರ್ಣ ಪಾರದರ್ಶಕತೆಯೊಂದಿಗೆ ನಿರ್ವಹಿಸಲ್ಪಟ್ಟಿತೆಂಬುದನ್ನು ತೋರಿಸುತ್ತದೆ.

1. ನಿಮ್ಮ ಸಭೆಗಳಲ್ಲಿ ಸಭೆಯ ಹಣವು ಹೇಗೆ ನಿರ್ವಹಿಸಲ್ಪಡುತ್ತಿದೆ? ಅಲ್ಲಿ ಎಲ್ಲವೂ ಪಾರದರ್ಶಕವಾಗಿದೆಯೋ? ಅಥವಾ ವಿಶ್ವಾಸಿಗಳಿಗೆ ಯಾವುದೇ ಹೊಣೆಗಾರಿಕೆಯನ್ನು ತೋರಿಸದೆ – ಸಭಾಪಾಲಕನೇ ಎಲ್ಲಾ ಕಾಣಿಕೆಯನ್ನು ನಿರ್ವಹಿಸುತ್ತಿದ್ದಾನೋ?
2. ಸಭೆಯ ಹಣವನ್ನು ಹೇಗೆ ನಿರ್ವಹಿಸಬೇಕೆಂಬುದರ ಕುರಿತು ಈ ವಾಕ್ಯಭಾಗದಲ್ಲಿ ಪೌಲನಿಂದ ನಾವು ಏನನ್ನು ಕಲಿಯುತ್ತೇವೆ?

## ಊ) ಉಪದೇಶಿಸು ಮತ್ತು ಬೋಧಿಸು!

ಅನೇಕ ಸತ್ಯವೇದ ವಾಚಕರಿಗೆ ಹೊಸ ಹೊಡಂಬಡಿಕೆಯಲ್ಲಿರುವ ತುಖಿಕನು 'ಅಪರಿಚಿತ' ವ್ಯಕ್ತಿಯಾಗಿದ್ದಾನೆ. ಆದರೆ ಆತನು ಪೌಲನ ಆತ್ಮೀಯ ಸ್ನೇಹಿತನಾಗಿದ್ದನು ಮತ್ತು ಹತ್ತು ವರ್ಷಗಳ ಕಾಲ ಆತನ ಜೊತೆ ಕೆಲಸದವನಾಗಿದ್ದನು. ವ. 4 ರ ಟಿಪ್ಪಣಿಯನ್ನು ನೋಡಿರಿ.

ಇವುಗಳು ಹೊಸ ಒಡಂಬಡಿಕೆಯಲ್ಲಿ ಆತನ ಕುರಿತು ಇರುವ ವಾಕ್ಯಭಾಗಗಳಾಗಿವೆ:

- ಆತನು ಮೊದಲು ಅ. ಕೃ. 20:4 ರಲ್ಲಿ ಸೂಚಿಸಲ್ಪಟ್ಟಿದ್ದಾನೆ, ಅಲ್ಲಿ ಆತನು ಪೌಲ ಮತ್ತು ಇತರೆ ಸಹೋದರರೊಂದಿಗೆ ಎಫೆಸದಿಂದ ಮಕೆದೋನಿಯ ಮತ್ತು ಗ್ರೀಸ್ ಮಾರ್ಗವಾಗಿ ತ್ರೋವಕ್ಕೆ ಪ್ರಯಾಣಿಸಿದನೆಂದು ತಿಳಿಸಲಾಗಿದೆ (ಬಹುಶಃ ಕ್ರಿ. ಶ. 56–57). ಆತನು ಅನ್ಯರ ಸಭೆಗಳಿಂದ ಯೆರೂಸಲೇಮಿನ ಸಭೆಯಲ್ಲಿದ್ದ ಬಡವರಿಗಾಗಿ ಪೌಲನೊಂದಿಗೆ ಸೇರಿ ಹಣವನ್ನು ಸಂಗ್ರಹಿಸಿದಾಗ, ಆತನು ಪೌಲನೊಂದಿಗೆ ಎಲ್ಲಾ ಕಡೆಯಲ್ಲಿಯೂ ಪ್ರಯಾಣಿಸಿರಬೇಕು.
- ಆತನ ಕುರಿತಾದ ನಂತರದ ವಾಕ್ಯಭಾಗವು ರೋಮ್‌ನಲ್ಲಿ ಪೌಲನು ಮೊದಲ ಬಾರಿಗೆ ಸೆರೆಯಾಳಾದ ಭಾಗದಲ್ಲಿ ಕಾಣಿಸುತ್ತದೆ (ಕ್ರಿ.ಶ. 60–62), ಆಗ ಆತನು ಪೌಲನ ಪತ್ರಿಕೆಗಳನ್ನು ಎಫೆಸದವರಿಗೆ (ಎಫೆಸ. 6:21) ಮತ್ತು ಕೊಲೊಸ್ಸೆಯವರಿಗೆ (ಕೊಲೊಸ್ಸೆ. 4:7–9) ತೆಗೆದುಕೊಂಡು ಹೋದ ಪೌಲನ 'ಓಲೇಕಾರನಾದನು'. ಆತನು ತನ್ನ ಧಣಿಯಾದ ಫಿಲೋಮೋನನ ಬಳಿಗೆ ಕೊಲೊಸ್ಸೆಗೆ ಹಿಂತಿರುಗುತ್ತಿದ್ದ ಒನೆಸಿಮನೊಂದಿಗೆ ಪ್ರಯಾಣಿಸಿದನು, (ಹಾಗಾಗಿ ಆತನು ಫಿಲೋಮೋನನ ಪತ್ರಿಕೆಯನ್ನೂ ತೆಗೆದುಕೊಂಡು ಹೋಗಿರಬೇಕು).
- ಕೆಲವು ಸಮಯದ ನಂತರ ಕ್ರೇಟ ದ್ವೀಪದಲ್ಲಿ ಸೇವೆ ಮಾಡುತ್ತಿದ್ದ ತೀತನ ಬಳಿಗೆ ಈತನನ್ನಾಗಲಿ (ತುಖಿಕ) ಅಥವಾ ಅರ್ತೆಮನನ್ನಾಗಲಿ ಕಳುಹಿಸಬೇಕೆಂದು ಪೌಲನು ಯೋಜಿಸಿದನು (ತೀತನು. 3:12).
- ಆತನ ಕುರಿತಾದ ಕೊನೆಯ ಉಲ್ಲೇಖನವು 2 ತಿಮೋ. 4:12 ರಲ್ಲಿ ಕಂಡುಬರುತ್ತದೆ, ಅಲ್ಲಿ ಪೌಲನು ತಿಮೋಥಿಗೆ ಬರೆಯುತ್ತಾ ತುಖಿಕನನ್ನು ಎಫೆಸಕ್ಕೆ ಕಳುಹಿಸಿದನೆಂದು ತಿಳಿಸುತ್ತಿದ್ದಾನೆ, ಬಹುಶಃ ಆತನಿಗೆ ಅಲ್ಲಿನ ಸೇವೆಯಲ್ಲಿ ಸಹಾಯಮಾಡುವುದಕ್ಕಾಗಿ ಕಳುಹಿಸಿಕೊಟ್ಟಿರಬಹುದು. ಇದು ಪೌಲನು ನಿರೋ ಚಕ್ರವರ್ತಿಯ ಅಡಿಯಲ್ಲಿ ಉಂಟಾದ ಹಿಂಸೆಯಲ್ಲಿ (ಬಹುಶಃ ಕ್ರಿ.ಶ. 66 ರಲ್ಲಿ) ಪೌಲನು ಮರಣ ದಂಡನೆಯನ್ನು ಹೊಂದುವುದಕ್ಕಿಂತ ಸ್ವಲ್ಪ ಸಮಯ ಮುಂಚೆ ರೋಮ್‌ನಲ್ಲಿ ಎರಡನೆಯ ಬಾರಿ ಸೆರೆಯಾಳಾದಾಗ ನಡೆದ ಸಂಗತಿ.

***ಪೌಲನ ಜೊತೆ ಸೇವಕನಾದ ತುಖಿಕನು*** ಎಂಬ ಶೀರ್ಷಿಕೆಯುಳ್ಳ ಸತ್ಯವೇದ ಅಧ್ಯಯನವನ್ನು ಸಭಾಪಾಲಕರಿಗೂ ಮತ್ತು ಇತರೆ ಸಭಾ ನಾಯಕರುಗಳಿಗಾಗಿಯೂ ಸಿದ್ಧಪಡಿಸಿರಿ.

1. ನಿಮ್ಮ ಅಧ್ಯಯನದಲ್ಲಿ ಉಪಯೋಗಿಸಬಹುದಾದಂತಹ ಕೆಲವು ಮುಖ್ಯ ಪದಗಳು ಇಲ್ಲಿವೆ:

- ಹಿನ್ನಲೆ: ಆತನು ಏಷ್ಯಾದವನಾಗಿದ್ದನು, ಬಹುಶಃ ಎಫೆಸದಿಂದ ಬಂದವನು: ಆತನು ಬಹುಶಃ ಪೌಲನು ಎಫೆಸದಲ್ಲಿ ಹೆಚ್ಚಿನ ಸಮಯವನ್ನು ಕಳೆದ ಅವಧಿಯಲ್ಲಿ ಆತನನ್ನು ಪರಿಚಯಮಾಡಿಕೊಂಡಿರಬಹುದು (ಅ. ಕೃ. 19), ಹಾಗಾಗಿ ಬಹುಶಃ ಎಫೆಸದಲ್ಲಿ ಉಂಟಾದ ಗಲಭೆಯನ್ನು ಆತನು ಕಂಡಿರಬಹುದು.
- ನಂಬಿಗಸ್ತನು: ಆತನು ಪೌಲನೊಂದಿಗೆ ಹತ್ತು ವರ್ಷಗಳ ಅವಧಿಯವರೆಗೂ ಜೊತೆಯಲ್ಲಿದ್ದನು, ಹಿಂಸೆಯ ಮತ್ತು ಸೆರೆವಾಸದ ಸಮಯದಲ್ಲಿಯೂ ಆತನು ಪೌಲನಿಗೆ ನಂಬಿಗಸ್ತನಾಗಿದ್ದನು (ರೋಮ್‌ನಲ್ಲಿ ಪೌಲನು ಎರಡು ಬಾರಿ ಸೆರೆಮನೆವಾಸಿಯಾದನು), ಪೌಲನು ಆತನನ್ನು ನಂಬಿಗಸ್ತನೆಂದು ಕರೆಯುತ್ತಾನೆ (ಕೊಲೊಸ್ಸೆ. 4:7, ಎಫೆಸ. 6:21).
- ನಂಬಲರ್ಹನು: ಆತನು ಯೆರೂಸಲೇಮಿನ ಸಭೆಯಲ್ಲಿದ್ದ ಬಡವರಿಗೆ ಸಹಾಯಮಾಡುವುದಕ್ಕಾಗಿ ಅನ್ಯಸಭೆಗಳಿಂದ ಹಣವನ್ನು ಸಂಗ್ರಹಿಸುವುದರಲ್ಲಿಯೂ ಮತ್ತು ಅದನ್ನು ರವಾನಿಸಿವುದರಲ್ಲಿಯೂ ಪೌಲನಿಗೆ ಸಹಾಯಕನಾಗಿದ್ದನು. ಆತನು ಪೌಲನ ಪತ್ರಿಕೆಗಳನ್ನು ರೋಮ್‌ನಿಂದ ಏಷ್ಯಾಗೆ (ಎಫೆಸದವರಿಗೆ, ಕೊಲೊಸ್ಸೆಯವರಿಗೆ, ಫಿಲೋಮೋನನಿಗೆ) ತೆಗೆದುಕೊಂಡು ಹೋದನು, ಪೌಲನು ಕ್ರೇಟ ದ್ವೀಪದಲ್ಲಿನ (ತೀತನು. 3:12) ಮತ್ತು ಎಫೆಸದಲ್ಲಿನ (1 ತಿಮೋ. 4:12) ಸೇವೆಗಾಗಿಯೂ ಆತನನ್ನು ನಂಬಿದನು. ಪೌಲನು ತನ್ನ ಪರಿಸ್ಥಿತಿಯ ಕುರಿತಾಗಿರುವ ಎಲ್ಲಾ ಸಂದೇಶವನ್ನು ತೆಗೆದುಕೊಂಡು ಹೋಗಲಿಕ್ಕೂ ಆತನ ಮೇಲೆ ಭರವಸೆ ಇಟ್ಟನು (ಕೊಲೊಸ್ಸೆ. 4:7).
- ಆತನು ಕರ್ತನ ನಿಜವಾದ ಸೇವಕನಾಗಿದ್ದನು: ಪೌಲನು ಆತನನ್ನು 'ಪ್ರಿಯ ಸಹೋದರನೂ ನಂಬಿಗಸ್ತ ಸೇವಕನೂ ಮತ್ತು ಕರ್ತನಲ್ಲಿ ಜೊತೆಯ ದಾಸನು' ಎಂದು ಕರೆಯುತ್ತಾನೆ (ಕೊಲೊಸ್ಸೆ. 4:7), ಪೌಲನು ಆತನನ್ನು ಎಲ್ಲಿ ಕಳುಹಿಸಿದರೂ ಅಲ್ಲಿ ಸೇವೆ ಮಾಡುವ ಮನಸ್ಸುಳ್ಳವನಾಗಿದ್ದನು (ಏಷ್ಯಾಗೆ ಪತ್ರಿಕೆಗಳನ್ನು ಕೊಂಡೊಯ್ಯುವುದರಲ್ಲಿ, ಕ್ರೇಟ ದ್ವೀಪದಲ್ಲಿನ ಮತ್ತು ಎಫೆಸದಲ್ಲಿನ ಸೇವೆಯ ವಿಷಯದಲ್ಲಿ).
- ಆತನು ಕಷ್ಟಗಳನ್ನು ಅನುಭವಿಸುವುದಕ್ಕೆ ಮನಸ್ಸುಳ್ಳವನಾಗಿದ್ದನು: ಬಹುಶಃ ಎಫೆಸದಲ್ಲಿನ ದಂಗೆಯನ್ನು ಎದುರಿಸಿದ್ದನು. ಪೌಲನೊಂದಿಗೆ ಅಪಾಯವಾದ ಮತ್ತು ಉದ್ದನೆಯ ಸಮುದ್ರ ಮತ್ತು ಭೂ ಪ್ರಯಾಣಗಳನ್ನು ಮಾಡಿದನು.
- ಆತನಿಗೆ ಒಂದು ಸುಂದರವಾದ ವ್ಯಕ್ತಿತ್ವವಿತ್ತು: ಪೌಲನು ಆತನನ್ನು 'ಪ್ರಿಯ ಸಹೋದರನೆಂದು' ಕರೆಯುತ್ತಾನೆ (ಎಫೆಸ. 6:21, ಕೊಲೊಸ್ಸೆ. 4:7).

2. ನಂತರ ಇಂದಿನ ದಕ್ಷಿಣ ಭಾರತದ ದೇವರ ಸೇವಕರಿಗೂ ಸನ್ನಿವೇಶ ಹಿನ್ನಲೆಗೆ ತಕ್ಕಂತೆ ಮತ್ತು ನಿಮ್ಮ ಸ್ವಂತ ಸಭೆಯ ಪರಿಸ್ಥಿತಿಗೆ ತಕ್ಕಂತೆ ಇದನ್ನು ಅನ್ವಯಿಸಿಕೊಳ್ಳಿರಿ. ನೀವು ಈ ಮೇಲಿನ ಆರು ಅಂಶಗಳನ್ನು ಉಪಯೋಗಿಸಬಹುದು.

# ಪಾಠ 54. ತ್ರೋವದಲ್ಲಿ ಯೂತಿಕನನ್ನು ಮರಣದಿಂದ ಎಬ್ಬಿಸಿದ್ದು, 20:7–12

## ಅ) ವಾಕ್ಯಭಾಗ

ಪಂಚಾಶತ್ತಮ ಹಬ್ಬಕ್ಕೆ ಮೊದಲು ಯೆರೂಸಲೇಮನ್ನು ತಲುಪಬೇಕೆಂಬ ಅವಸರದಲ್ಲಿದ್ದಾಗ್ಯೂ ಪೌಲನು ತ್ರೋವದಲ್ಲಿ ಒಂದು ವಾರವನ್ನು ಕಳೆದನು (ವ. 16). ಬಹುಶಃ ಆತನು ಹೊರಡುವುದಕ್ಕಿಂತ ಮುಂಚೆ ಭಾನುವಾರದ ಆರಾಧನೆಯಲ್ಲಿ ಪಾಲ್ಗೊಂಡು ಸಭೆಯಲ್ಲಿ ಮಾತನಾಡಬೇಕೆಂದು ಬಯಸಿದ್ದಿರಬಹುದು. ಪೌಲನು ಎಷ್ಟು ಹೊತ್ತು ಮಾತನಾಡಿದನೆಂದರೆ ಯೂತಿಕನೆಂಬ ಒಬ್ಬ ಯೌವ್ವನಸ್ಥನಿಗೆ ಗಾಢ ನಿದ್ರೆ ಹತ್ತಿತು. ಆತನು ಮೂರನೇ ಅಂತಸ್ತಿನಿಂದ ಕೆಳಕ್ಕೆ ಬಿದ್ದು ಸತ್ತು ಹೋದನು. ಆದರೆ ಪೌಲನು ಆತನನ್ನು ಜೀವದಿಂದ ಎಬ್ಬಿಸಿದನು. ಅನಂತರ ಆರಾಧನೆಯು ಬೆಳಗಾಗುವವರೆಗೆ ಮುಂದುವರೆಯಿತು.

## ಆ) ಟಿಪ್ಪಣಿ

*ವಾರದ ಮೊದಲನೆಯ ದಿನ ನಾವು ರೊಟ್ಟಿಮುರಿಯಲು ಒಂದಾಗಿ ಕೂಡಿಬಂದೆವು* (ವ. 7): ಭಾನುವಾರವು ವಾರದ ಮೊದಲನೆಯ ದಿನವಾಗಿತ್ತು. *ರೊಟ್ಟಿ ಮುರಿಯುವುದು* ಕರ್ತನ ಭೋಜನವನ್ನು ಸೂಚಿಸುತ್ತದೆ.

*ಯೂತಿಕನು* (ವ. 9): ಹೊಸ ಒಡಂಬಡಿಕೆಯಲ್ಲಿ ಇಲ್ಲಿ ಮಾತ್ರ ಈತನ ಹೆಸರು ಸೂಚಿಸಲ್ಪಟ್ಟಿದೆ.

## ಇ) ಪಠ್ಯ ಪ್ರಶ್ನೆಗಳು

1. ನಕ್ಷೆಯಲ್ಲಿ ತ್ರೋವವನ್ನು ಗುರುತಿಸಿರಿ!
2. ಈ ಕಥೆಯಲ್ಲಿರುವ ತ್ರೋವದಲ್ಲಿನ ಸಭೆಯು ಭಾನುವಾರದ ಆರಾಧನೆಯನ್ನು ದಿನದ ಯಾವ ಹೊತ್ತಿನಲ್ಲಿ ನಡೆಸಿದರು?
3. ಯೂತಿಕನು ಹೇಗೆ ಸತ್ತನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ಕಥೆಯಲ್ಲಿ (ವ. 9 ರಲ್ಲಿ) 'ಯೂತಿಕನನ್ನು ಎತ್ತಿಕೊಂಡಾಗ ಅವನು ಸತ್ತೇ ಹೋಗಿದ್ದನು'" ಎಂದು ಲೂಕನು ಬರೆಯುತ್ತಾನೆ, ಆದರೆ ಪೌಲನು 'ಅವನ ಜೀವ ಅವನಲ್ಲಿದೆ!' ಎಂದನು. ಈ ತದ್ವಿರೋಧತೆಯನ್ನು ನೀವು ಹೇಗೆ ವಿವರಿಸುತ್ತೀರಿ?

2. ಅಪೋಸ್ತಲರ ಕೃತ್ಯಗಳಲ್ಲಿ ಲೂಕನು ಪೇತ್ರನ ಮತ್ತು ಪೌಲನ ಸೇವೆಗಳ ನಡುವೆ ಅನೇಕ ಸಮಾಂತರತೆಯನ್ನು ಚಿತ್ರಿಸುತ್ತಿದ್ದಾನೆ. ಒಬ್ಬ ಮನುಷ್ಯನನ್ನು ಮರಣದಿಂದ ಎಬ್ಬಿಸಿದ್ದರ ಬಗ್ಗೆ ಏನು ಬರೆದಿದೆ? ಪೇತ್ರನು ಯಾರನ್ನು ಮತ್ತು ಎಲ್ಲಿ ಮರಣದಿಂದ ಎಬ್ಬಿಸಿದನು?

3. ಹೊಸ ಒಡಂಬಡಿಕೆಯ ಕಾಲದಲ್ಲಿದ್ದ ಭಾನುವಾರದ ಆರಾಧನೆಯ ಕುರಿತು ಈ ಕಥೆಯಿಂದ ನಾವು ಏನನ್ನು ಕಲಿಯುತ್ತೇವೆ?

## ಊ) ಉಪದೇಶಿಸು ಮತ್ತು ಬೋಧಿಸು!

ತ್ರೋವದಲ್ಲಿನ ಸಭೆಯು ತನ್ನ ವಾರದ ಆರಾಧನೆಯನ್ನು ಭಾನುವಾರದ ಸಂಜೆಯಲ್ಲಿ ವಿಶ್ವಾಸಿಗಳು ತಮ್ಮ ಹಗಲಿನ ಎಲ್ಲಾ ಕೆಲಸಗಳನ್ನು ಮುಗಿಸಿಕೊಂಡು ಬಂದಾಗ ನಡೆಸುತ್ತಿತ್ತು.

1) ದಕ್ಷಿಣ ಭಾರತದ ಹಿನ್ನಲೆಯಲ್ಲಿ ಸಭೆಯು ಭಾನುವಾರದಂದು ಮಾತ್ರ ಆರಾಧನೆಗಾಗಿ ಕೂಡಿಬರಬೇಕೆಂದು ನೀವು ಆಲೋಚಿಸುತ್ತಿರೋ? ಅಥವಾ ವಾರದ ಬೇರೆ ದಿನದಲ್ಲಿ ಕೂಡುವುದೂ ಒಳ್ಳೆಯದೋ? ಯಾಕೆ – ಯಾಕೆ ಇಲ್ಲಾ?

2) ನಿಮ್ಮ ಸಭೆಯು ವಾರದ ಆರಾಧನೆಗಾಗಿ ದಿನದ ಯಾವ ಸಮಯದಲ್ಲಾದರೂ ಸೇರಿ ಬರುತ್ತದೋ ಅಥವಾ ಆರಾಧನೆಯು ಭಾನುವಾರ ಮುಂಜಾನೆಯೇ ನಡೆಯಬೇಕೆಂಬ ಸಂಪ್ರದಾಯವನ್ನು ನೀವು ಪಾಲಿಸುತ್ತೀರೋ? ಯಾಕೆ?

# ಪಾಠ 55. ಎಫೆಸದ ಹಿರಿಯರಿಗೆ ಪೌಲನ ಬೀಳ್ಕೊಡುವಿಕೆ, 20:13–38

## ಅ) ವಾಕ್ಯಭಾಗ

ಪೌಲನು ಯೆರೂಸಲೇಮಿಗೆ ಪ್ರಯಾಣಿಸುತ್ತಿದ್ದಾಗ ಮಿಲೇತದಲ್ಲಿ ಇಳುಕೊಂಡನು, ಅಲ್ಲಿ ಆತನು ಎಫೆಸ ಸಭೆಯ ಹಿರಿಯರನ್ನು ಭೇಟಿಯಾದನು. ಮೊದಲು ಪೌಲನು ಅವರೊಂದಿಗೆ ತನ್ನ ಹಿಂದಿನ ಸೇವೆಯ ಕುರಿತಾಗಿ ಮಾತನಾಡಿದನು. ನಂತರ ಆತನು ಅವರಿಗೆ ದೇವರು ತನ್ನ ರಕ್ತದಿಂದ ಕೊಂಡು ಕೊಂಡ ಸಭೆಗೆ ನೀವು ಕುರುಬರಾಗಿರುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಮಂದೆಯಲ್ಲಿ ಮೇಲ್ವಿಚಾರಕರನ್ನಾಗಿ ಇಟ್ಟಿರುವುದರಿಂದ, ನಿಮ್ಮ ವಿಷಯದಲ್ಲಿಯೂ ಇಡೀ ಮಂದೆಯ ವಿಷಯದಲ್ಲಿಯೂ ಎಚ್ಚರವಾಗಿರಿ ಎಂದು ಬೇಡಿದನು. ಕೊನೆಯಲ್ಲಿ ಪೌಲನು ಅವರನ್ನು ಕರ್ತನಿಗೂ ಆತನ ಕೃಪಾವಾಕ್ಯಕ್ಕೂ ಒಪ್ಪಿಸಿಕೊಟ್ಟನು. ಪ್ರಾರ್ಥನೆಯ ಸಮಯದ ನಂತರ, ಹಿರಿಯರು ಪೌಲನಿಗೆ ಬೀಳ್ಕೊಟ್ಟು ಅವನೊಂದಿಗೆ ಹಡಗಿನವರೆಗೂ ಹೋದರು.

## ಆ) ಟಿಪ್ಪಣಿ

*ಮಿಲೇತ* (ವ. 15): ಮಿಲೇತವು ಎಫೆಸದ ದಕ್ಷಿಣಕ್ಕೆ 50 ಕಿ.ಮೀ. ದೂರದಲ್ಲಿ ನೆಲೆಯಾಗಿತ್ತು. ಒಬ್ಬ ಸಂದೇಶಕನು ಎಫೆಸಕ್ಕೆ ಪ್ರಯಾಣಿಸಿ ಅಲ್ಲಿನ ಸಭಾ ಹಿರಿಯರನ್ನು ಮಿಲೇತಕ್ಕೆ ಕರೆತರಲು ಮೂರು ದಿನಗಳ ಕಾಲ ಹಿಡಿಯಿತು.

*ಸಭೆಯ ಹಿರಿಯರು* (ವ. 17): ಪೌಲನು ವ. 28 ರಲ್ಲಿ ಇದೇ ಗುಂಪಿನ ಜನರನ್ನು *ಮೇಲ್ವಿಚಾರಕರೆಂದೂ* ಮತ್ತು *ಕುರುಬರೆಂದೂ* (ಅಥವಾ *ಸಭಾಪಾಲಕರೆಂದೂ*) ಕರೆಯುತ್ತಾನೆ. ಈ ಪದವು ಬಹುವಚನದಲ್ಲಿದೆ, ಇದು ಎಫೆಸದ ಸಭೆಯು ಸಭಾಪಾಲಕರ ತಂಡವನ್ನೇ ಹೊಂದಿತ್ತೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಅದು ಸಭೆಯ ಮೇಲೆ ಒಬ್ಬ ಸಭಾಪಾಲಕನು ಎಲ್ಲಾ ಪಾತ್ರವನ್ನು ನಿರ್ವಹಿಸುವಂತಹ ಏಕ–ನಾಯಕತ್ವವನ್ನು ಹೊಂದಿರಲಿಲ್ಲ. ಅದು ಒಬ್ಬ ನಾಯಕನ ಅಡಿಯಲ್ಲಿ ಅನೇಕ ಸಹ–ನಾಯಕರುಗಳು ಇರುವಂತಹ ಪ್ರಭುತ್ವವನ್ನೂ ಹೊಂದಿರಲಿಲ್ಲ.

*ಅವರು ಬಂದ ಮೇಲೆ ಆತನು ಅವರಿಗೆ ಹೀಗೆಂದನು* (ವ. 18): ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ವಿಶ್ವಾಸಿಗಳನ್ನು ಉದ್ದೇಶಿಸಿ ಮಾತನಾಡಿದ ಮಾತುಗಳು ಇದೊಂದೇ ಆಗಿದೆ. ಉಳಿದ ಎಲ್ಲಾ ಮಾತುಗಳು ಸುವಾರ್ತಾ ಸಂದೇಶದ ಮಾತುಗಳಾಗಿವೆ (ಯೆಹೂದ್ಯರನ್ನು ಅಥವಾ ಅನ್ಯರನ್ನು ಉದ್ದೇಶಿಸಿ ಮಾತನಾಡಿದ್ದು) ಅಥವಾ ಪ್ರತಿವಾದದ ಮಾತುಗಳಾಗಿವೆ (ನ್ಯಾಯಸಭೆಯವರ ಮುಂದೆ ಅಥವಾ ಯೆಹೂದ್ಯರ ಅಥವಾ ರೋಮ್ ಅಧಿಕಾರಿಗಳ ಮುಂದೆ ಮಾತನಾಡಿದ್ದು).

*ನಿಮ್ಮಲ್ಲಿ ಯಾರೂ ನನ್ನ ಮುಖವನ್ನು ಇನ್ನೊಮ್ಮೆ ಕಾಣಲಾರಿರಿ* (ವ. 25): ಇದನ್ನು ದೇವರಿಂದ ಬಂದ ಒಂದು ಸಂದೇಶವೆಂದು ಅರ್ಥಮಾಡಿಕೊಳ್ಳಬಾರದು. ಇದು ಸಂಭವಿಸಬಹುದೆಂದು ಪೌಲನು ನಿರೀಕ್ಷಿಸಿದ್ದನು. ಪೌಲನು ರೋಮ್‌ನಲ್ಲಿನ ತನ್ನ ಮೊದಲ ಸೆರೆವಾಸದ ನಂತರ – ಎಫೆಸಕ್ಕೆ ಕೆಲವು ವರ್ಷಗಳಾದ ಮೇಲೆ ಹಿಂತಿರುಗಿರಬಹುದು (ನೋಡಿರಿ. 1 ತಿಮೊ. 1:3 ಮತ್ತು 2 ತಿಮೊ. 4:20).

*ನನ್ನ ಹಸ್ತಗಳೇ ನನ್ನ ಅಗತ್ಯಗಳನ್ನು ಪೂರೈಸಿದವು* (ವ. 34): ಪೌಲನು ಎಫೆಸದ ಸಭೆಯಿಂದ ಯಾವುದೇ ಹಣಸಹಾಯವನ್ನು ಸ್ವೀಕರಿಸಿರಲಿಲ್ಲ. ಥೆಸಲೋನಿಕದಲ್ಲಿ (1 ಥೆಸ. 2:9) ಮತ್ತು ಕೊರಿಂಥದಲ್ಲಿ (ಅ. ಕೃ. 18:3) ತಾನೇ ಸ್ವಂತ ಕೈಗಳಿಂದ ಗುಡಾರ ಕೆಲಸವನ್ನು ಮಾಡಿ ತನ್ನ ಅಗತ್ಯತೆಗಳನ್ನು ಪೂರೈಸಿಕೊಂಡಿದ್ದನು.

*'ತೆಗೆದುಕೊಳ್ಳುವುದಕ್ಕಿಂತ ಕೊಡುವುದೇ ಹೆಚ್ಚಿನ ಭಾಗ್ಯ' ಎಂದು ಕರ್ತನಾದ ಯೇಸುವೇ ಹೇಳಿದ ಮಾತುಗಳನ್ನು ಜ್ಞಾಪಕಮಾಡಿಕೊಂಡು* (ವ. 35): ಯೇಸುವಿನ ಈ ಮಾತುಗಳು ಯಾವುದೇ ಸುವಾರ್ತೆಗಳಲ್ಲಿ ಕಂಡು ಬರುವುದಿಲ್ಲ, ಆದರೆ ಎಫೆಸದವರಿಗೆ ಇದು ಚಿರಪರಿಚಿತವಾಗಿದ್ದಿರಬಹುದು.

## ಇ) ಪಠ್ಯ ಪ್ರಶ್ನೆಗಳು

1. ವಚನ 13–15 ರಲ್ಲಿ ದಾಖಲಾಗಿರುವ ಪೌಲನ ಪ್ರಯಾಣವನ್ನು ನಕ್ಷೆಯಲ್ಲಿ ಗುರುತಿಸಿರಿ!
2. ಈ ಬಾರಿ ಪೌಲನು ಎಫೆಸಕ್ಕೆ ಭೇಟಿ ಕೊಡಬಾರದೆಂದು ಯಾಕೆ ನಿರ್ಧರಿಸಿದನು?
3. ಪೌಲನು ಮಿಲೇತದಲ್ಲಿ ಯಾರನ್ನು ಭೇಟಿಮಾಡಿದನು?
4. ಪವಿತ್ರಾತ್ಮನು ಪ್ರತಿಯೊಂದು ಪಟ್ಟಣಗಳಲ್ಲಿ ಪೌಲನಿಗೆ ಏನೆಂದು ಎಚ್ಚರಿಸಿದನು?
5. ಹಣ ಮತ್ತು ಬಟ್ಟೆಯ ಕುರಿತು ಪೌಲನಿಗಿದ್ದ ಮನೋಭಾವನೆ ಏನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ವಚನ 18–21, 24, 27 ಮತ್ತು 33–36 ರಲ್ಲಿ ಪೌಲನ ಸಾಕ್ಷಿಯಲ್ಲಿರುವ ಅಂಶಗಳಾವುವು?
2. ವಚನ 28–31 ರಲ್ಲಿ ಪೌಲನು ಎಫೆಸದ ಸಭಾಪಾಲಕರನ್ನು ಉದ್ದೇಶಿಸಿ ಹೇಳಿದ ಮಾತುಗಳಲ್ಲಿರುವ ಅಂಶಗಳಾವುವು?
3. ಪೌಲನು ಯೆರೂಸಲೇಮಿನ ಕಡೆಗೆ ಪ್ರಯಾಣಿಸುತ್ತಿದ್ದಾಗ, ಸೆರೆಮನೆಯೂ ಬಾಧೆಯೂ ತನಗಾಗಿ ಕಾದಿವೆಯೆಂದು ಪ್ರತಿಯೊಂದು ಪಟ್ಟಣದಲ್ಲಿ ಪವಿತ್ರಾತ್ಮನು ಆತನಿಗೆ (ಬಹುಶಃ ಪ್ರವಾದನೆಗಳ ಮೂಲಕ) ತಿಳಿಸುತ್ತಿದ್ದನು (ವ. 23). ಆದರೆ ಅದೇ ಸಮಯದಲ್ಲಿ ಪೌಲನಿಗೆ ಪವಿತ್ರಾತ್ಮನು ಯೆರೂಸಲೇಮಿಗೆ ಹೋಗುವಂತೆ ಒತ್ತಾಯಿಸುತ್ತಿದ್ದನು (ವ. 22). ಪೌಲನ ಪರಿಸ್ಥಿತಿಗಳಲ್ಲಿ ಪವಿತ್ರಾತ್ಮನು ಮಾಡಿದ ಚಟುವಟಿಕೆಗಳನ್ನು ನಾವು ಹೇಗೆ ಅರ್ಥೈಸಿಕೊಳ್ಳತಕ್ಕದ್ದು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಪೌಲನು ಯೆರೂಸಲೇಮಿನಲ್ಲಿ "ಸೆರೆಮನೆ ಮತ್ತು ಭಾದೆಯನ್ನು ಅನುಭವಿಸುವನೆಂದು ಪದೇ ಪದೇ ಪ್ರವಾದನೆಗಳಾದಾಗ್ಯೂ ಆತನು ಅಲ್ಲಿಗೆ ಹೋದನು (ವ. 23). ನೀವು ಇಂತಹದ್ದೇ ರೀತಿಯಾದ ಪರಿಸ್ಥಿತಿಯಲ್ಲಿ ಇದೇ ರೀತಿಯಾಗಿ ಮಾಡಲು ಮನಸ್ಸುಳ್ಳವರಾಗಿದ್ದಿರೋ? ಯಾಕೆ – ಯಾಕೆ ಇಲ್ಲ?
2. ಈ ವಾಕ್ಯಭಾಗದಲ್ಲಿ ಪೌಲನು ಎಫೆಸದ ಸಭೆಯ ಹಿರಿಯರಿಗೆ ತನ್ನ ಸೇವೆಯ ಬಗ್ಗೆ ತನ್ನ ಮನೋಭಾವನೆಗಳ ಕುರಿತು ಸಾಕ್ಷಿಕರಿಸುತ್ತಿದ್ದಾನೆ.

1) ಇಂದು ದಕ್ಷಿಣ ಭಾರತದಲ್ಲಿ ನಮ್ಮ ಸಭಾನಾಯಕರುಗಳು ಯಾವ ಕ್ಷೇತ್ರದಲ್ಲಿ ತಮ್ಮ ಸೇವೆಯ ಬಗ್ಗೆ ಇರುವ ಮನೋಭಾವನೆಗಳಲ್ಲಿ 'ಪೌಲನನ್ನು ಅನುಕರಿಸುತ್ತಿದ್ದಾರೆ'?

2) ಇಂದು ದಕ್ಷಿಣ ಭಾರತದಲ್ಲಿ ನಮ್ಮ ಸಭಾನಾಯಕರುಗಳು ಯಾವ ಕ್ಷೇತ್ರದಲ್ಲಿ ತಮ್ಮ ಸೇವೆಯ ಬಗ್ಗೆ ಇರುವ ಮನೋಭಾವನೆಗಳಲ್ಲಿ 'ಪೌಲನನ್ನು ಅನುಕರಿಸಲು' ***ಸೋತು ಹೋಗಿದ್ದಾರೆ***? ಅವರ ಸೋಲಿಗೆ ಏನು ಕಾರಣಗಳಿರಬಹುದು?

3. ಈ ವಾಕ್ಯಭಾಗದಲ್ಲಿ ಪೌಲನು ಎಫೆಸ ಸಭೆಯ ಸಭಾನಾಯಕರುಗಳಿಗೆ ಅವರ ಕೆಲಸಗಳನ್ನು ನೆನಪಿಸುತ್ತಿದ್ದಾನೆ:

1) ಇಂದು ದಕ್ಷಿಣ ಭಾರತದ ಸಭಾನಾಯಕರುಗಳು ಈ ಕೆಲಸಗಳಲ್ಲಿ ಯಾವುದರಲ್ಲಿ ***ಉತ್ತಮರಾಗಿದ್ದಾರೆ***?

2) ಇಂದು ದಕ್ಷಿಣ ಭಾರತದ ಸಭಾನಾಯಕರುಗಳು ಈ ಕೆಲಸಗಳಲ್ಲಿ ಯಾವುದರಲ್ಲಿ ***ಉತ್ತಮರಾಗಿಲ್ಲ***? ಇದಕ್ಕೆ ಕಾರಣಗಳೇನಿರಬಹುದು?

3) ಇಂದು ದಕ್ಷಿಣ ಭಾರತದ ಸಭಾನಾಯಕರು/ಸಭಾಪಾಲಕರು/ಮೇಲ್ವಿಚಾರಕರು/ಹಿರಿಯರು ಉತ್ತಮರಾಗಿರುವ (ಪೌಲನು ತನ್ನ ಮಾತಿನಲ್ಲಿ ತಿಳಿಸದೆ ಇರುವ) ಬೇರೆ ***ಯಾವುದಾದರು*** ಪ್ರಮುಖ ಕೆಲಸಗಳು ಇವೆಯೋ? ದಯವಿಟ್ಟು ವಿವರಿಸಿರಿ!

## ಊ) ಉಪದೇಶಿಸು ಮತ್ತು ಬೋಧಿಸು!

1. ***ನಾವು ಪೌಲನನ್ನು ಅನುಕರಿಸೋಣ*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸುವಾರ್ತಾ ಕೆಲಸಗಾರರಿಗಾಗಿ ಸಿದ್ಧಪಡಿಸಿರಿ. ನಿಮ್ಮ ಹೊರರೇಖೆಯು ಹೀಗಿರಲಿ:

1. ಪೀಠಿಕೆ:

1) ತನ್ನ ವಾಚಕರು ತನ್ನನ್ನು ಅನುಕರಿಸಬೇಕೆಂದು ಪೌಲನು ನಿರೀಕ್ಷಿಸಿದನು:

- 1 ಕೊರಿ. 4:16 – ಆದ್ದರಿಂದ ನೀವು ನನ್ನನ್ನು ಅನುಸರಿಸುವವರಾಗಿರಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ
- 1 ಕೊರಿ. 11:1 – ನಾನು ಕ್ರಿಸ್ತನ ಆದರ್ಶವನ್ನು ಅನುಸರಿಸುವಂತೆಯೇ ನೀವೂ ನನ್ನ ಆದರ್ಶವನ್ನು ಅನುಸರಿಸಿರಿ
- 1 ಥೆಸ. 1:6 – ನಮ್ಮನ್ನು ಕರ್ತನನ್ನು ಅನುಸರಿಸುವವರಾಗಿದ್ದೀರಿ
- ಫಿಲಿಪ್ಪಿ. 3:17 – ಸಹೋದರರೇ, ನೀವು ನನ್ನನ್ನು ಅನುಸರಿಸುವವರಾಗಿರಿ. ನಾವು ನಿಮಗೆ ತೋರಿಸಿದ ಆದರ್ಶದ ಪ್ರಕಾರ ನಡೆದುಕೊಳ್ಳುವವರನ್ನು ಗಮನಿಸಿರಿ
- 2 ಥೆಸ. 3:7 – ನೀವು ನಮ್ಮನ್ನು ಅನುಸರಿಸಿ ಹೇಗೆ ನಡೆಯಬೇಕೆಂದು ನೀವೇ ಬಲ್ಲಿರಿ

2) ಪೌಲನು ಬೀಳ್ಕೊಡುವ ಸಂದರ್ಭದಲ್ಲಿ ಎಫೆಸದ ಹಿರಿಯರೊಂದಿಗೆ ಮಾತನಾಡಿದ ಮಾತುಗಳು:

- ಅ. ಕೃ. 20:17–21 ನ್ನು ಓದಿರಿ
- ಈ ವಾಕ್ಯಭಾಗವು ಪೌಲನು ತನ್ನ ಬೀಳ್ಕೊಡುವಿಕೆಯ ಸಂದರ್ಭದಲ್ಲಿ ತನ್ನ ಸಾಕ್ಷಿಯಿಂದ ಪ್ರಾರಂಭಿಸಿದ ಮಾತುಗಳನ್ನು ಒಳಗೊಂಡಿದೆ
- ಪೌಲನ ಸಾಕ್ಷಿಯು ಏಷ್ಯಾದಲ್ಲಿನ ತನ್ನ ಸೇವೆಯ ಕೆಲವು ಪ್ರಮುಖ ಅಂಶಗಳನ್ನು ತಿಳಿಸುವಂತಹದ್ದಾಗಿದೆ. ಎಫೆಸದ ಹಿರಿಯರಿಗೆ ಇವುಗಳು ಮಾದರಿಯಾಗಿದ್ದವು!

2. ಪೌಲನ ಸಾಕ್ಷಿಯಲ್ಲಿರುವ ಪ್ರಮುಖ ಅಂಶಗಳು:

1) ಪೌಲನು ತಾನು ಜೀವಿಸುವ ಕ್ರಮದಲ್ಲಿ ಮಾದರಿಯಾಗಿದ್ದನು (ವ. 18)

2) ಪೌಲನು ದೀನತೆಯ ಸೇವೆಗೆ ಮಾದರಿಯಾಗಿದ್ದನು; ಆತನು ಕಣ್ಣೀರಿನಿಂದಲೂ ಕರ್ತನ ಸೇವೆ ಮಾಡಿದನು (ವ. 19)

3) ಪೌಲನು ಯೆಹೂದ್ಯರ ಹಿಂಸೆ ಮತ್ತು ಬೆದರಿಕೆಗಳನ್ನು ಸಹಿಸಿಕೊಳ್ಳುವುದರಲ್ಲಿ ಒಂದು ಮಾದರಿಯಾಗಿದ್ದನು (ವ. 19)

4) ಪೌಲನು ದೇವರ ವಾಕ್ಯವನ್ನು ಸಾರುವುದರಲ್ಲಿ ಮಾದರಿಯಾಗಿದ್ದನು:

- ಆತನು ಪ್ರಯೋಜನಕರವಾದ ಸಂಗತಿಯನ್ನು ಉಪದೇಶಿಸಿ ಬೋಧಿಸಿದನು (ವ. 20)
- ಆತನು ಬಹಿರಂಗವಾಗಿಯೂ ಮತ್ತು ಮನೆಗಳಲ್ಲಿಯೂ; ಎಲ್ಲಾ ಕಡೆಯಲ್ಲಿಯೂ ಉಪದೇಶಿಸಿದನು ಮತ್ತು ಬೋಧಿಸಿದನು (ವ. 20)
- ಆತನು ಗ್ರೀಕರಿಗೂ ಮತ್ತು ಯೆಹೂದ್ಯರಿಗೂ; ಪ್ರತಿಯೊಬ್ಬರಿಗೂ ಸುವಾರ್ತೆಯನ್ನು ಸಾರಿದನು (ವ. 21)

5) ಪೌಲನ ಸುವಾರ್ತಾ ಸಂದೇಶವು ಒಂದು ಮಾದರಿಯಾಗಿತ್ತು. ಅದರ ಎರಡು ಪ್ರಮುಖ ಅಂಶಗಳು:

- ಪಶ್ಚಾತ್ತಾಪದಿಂದ ದೇವರ ಕಡೆಗೆ ತಿರುಗಿಕೊಳ್ಳಿರಿ: ಇದು ನೀವು ಹೇಗೆ ಜೀವಿಸುತ್ತೀರಿ ಎಂಬುದಕ್ಕೆ ಸಂಬಂಧಪಟ್ಟಿದೆ!
- ಕರ್ತನಾದ ಯೇಸುವಿನಲ್ಲಿ ನಂಬಿಕೆ ಇಡಿರಿ: ಇದು ನೀವು ಯಾರ ಮೇಲೆ ನಂಬಿಕೆ ಇಟ್ಟಿದ್ದೀರಿ ಎಂಬುದಕ್ಕೆ ಸಂಬಂಧಪಟ್ಟಿದೆ!

3. ಇಂದು ಸುವಾರ್ತಾ ಕೆಲಸಗಾರರಾದ ದಕ್ಷಿಣ ಭಾರತದಲ್ಲಿರುವ ನಮಗೆ ಕೆಲವು ಪ್ರಶ್ನೆಗಳು:

1) ನಾವು ಜೀವಿಸುತ್ತಿರುವ ನಮ್ಮ ಜೀವನವು ವಿಶ್ವಾಸಿಗಳಿಗೂ ಮತ್ತು ಸಭಾಹಿರಿಯರಿಗೂ ಒಂದು ಮಾದರಿಯಾಗಿದೆಯೋ?

2) ನಮ್ಮ ಸೇವೆಯು ದೀನತೆಯ ಗುಣಲಕ್ಷಣಗಳನ್ನು ಹೊಂದಿದೆಯೋ?

3) ಇತರೆ ವಿಶ್ವಾಸಿಗಳಿಗೆ ಒಂದು ಮಾದರಿಯಾಗುವಂತೆ ನಾವು ಹಿಂಸೆಯನ್ನು ಮತ್ತು ಬೆದರಿಕೆಯನ್ನು ಅನುಭವಿಸಲು ಸಿದ್ಧರಿದ್ದೇವೋ?

4) ನಾವು ಉಪಯುಕ್ತ ಅಂಶಗಳ ಮೇಲೆ ನಮ್ಮ ಸಂದೇಶ ಮತ್ತು ಬೋಧನೆಗಳನ್ನು ಕೇಂದ್ರೀಕರಿಸುವುದು ಇತರೆ ಬೋಧಕರುಗಳಿಗೆ ಒಂದು ಮಾದರಿಯಾಗಿದೆಯೋ? ನಾವು ಪ್ರಧಾನವಾದ ಮತ್ತು ಮುಖ್ಯವಾದ ಸತ್ಯವೇದ ಸಿದ್ಧಾಂತಗಳ ಮೇಲೆ ನಮ್ಮ ಸಂದೇಶವನ್ನು ಆಧರಿಸುತ್ತೇವೋ?

5) ನಾವು ಅಕ್ರೈಸ್ತರಿಗೆ ಸುವಾರ್ತೆಯನ್ನು ಸಾರುವ ವಿಧಾನವು ಇತರೆ ಸುವಾರ್ತಿಕರಿಗೆ ಒಂದು ಮಾದರಿಯಾಗಿದೆಯೋ?

- ಜನರ ಜೀವಿತಗಳು ಬದಲಾಗುತ್ತಿದೆಯೋ?
- ಅವರು ಯೇಸುವಿನ ಕುರಿತಾದ ಸತ್ಯತೆಗಳನ್ನು ಅರ್ಥಮಾಡಿಕೊಳ್ಳುತ್ತಾರೋ:
  - ದೇವರು ಮನುಷ್ಯನಾಗಿದ್ದು
  - ಆತನ ಮರಣ ಮತ್ತು ಪುನರುತ್ಥಾನ
  - ಆತನ ಎತ್ತಲ್ಪಡುವಿಕೆ ಮತ್ತು ಪವಿತ್ರಾತ್ಮನ ಸುರಿಸುವಿಕೆ
  - ಆತನ ಎರಡನೆಯ ಬರೋಣ

2. ಸಭಾಪಾಲಕರಿಗಾಗಿ ಮತ್ತು ಸಭಾಹಿರಿಯರಿಗಾಗಿ 20:28 – 32 ರ ಆಧಾರದ ಮೇಲೆ ***ಎಚ್ಚರವಾಗಿರು!*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಮಾಹಿತಿಗಾಗಿ ಆ) ಅಂಶದಲ್ಲಿರುವ ಟಿಪ್ಪಣಿಗಳನ್ನು ಮತ್ತು ಇ) ಮತ್ತು ಈ) ಪ್ರಶ್ನೆಗಳನ್ನು ಉಪಯೋಗಿಸಿಕೊಳ್ಳಿರಿ. ಇದು ನಮ್ಮ ಹೊರ ರೇಖೆಯಾಗಿರಲಿ:

1. ಪೀಠಿಕೆ:

1) ಹಿನ್ನಲೆ: ಎಫೆಸದಲ್ಲಿ ಪೌಲನ ಮುಂಚಿನ ಹೆಚ್ಚು ಕಡಿಮೆ ಮೂರು ವರ್ಷಗಳ ಸೇವೆ (ವ. 18–24, 31–35)

2) ಪರಿಸ್ಥಿತಿ: ಮಿಲೇತದಲ್ಲಿ ಪೌಲನ 'ವಿದಾಯದ' ಮಾತುಗಳು. ಆತನು ಅವರನ್ನು ಪುನಃ ಎಂದಿಗೂ ಕಾಣಲು ಸಾಧ್ಯವಿಲ್ಲ ಎಂದುಕೊಂಡನು (ವ. 25, 38)

2. ಎಫೆಸದ ಸಭಾಪಾಲಕರಿಗೆ ಪೌಲನ ಸಂದೇಶ

1) ನಿಮ್ಮ ವಿಷಯದಲ್ಲಿ ಎಚ್ಚರವಾಗಿರಿ (ವ. 28, 31)!

- ಅವರ ಕರೆಯುವಿಕೆ: ಅವರು ಪವಿತ್ರಾತ್ಮನಿಂದ ಆತನ ಉದ್ದೇಶಗಳಿಗಾಗಿ ಸಭೆಯ ಪಾಲಕರಾಗಿ ನೇಮಿಸಲ್ಪಟ್ಟಿದ್ದರೇ ಹೊರತು ಅವರ ಉದ್ದೇಶಗಳಿಗಾಗಿ ಅಲ್ಲ. ಅವರು ದೇವರ ಮುಂದೆ ತಮ್ಮ ಕರೆಗಾಗಿ ತಾವೇ ಜವಾಬ್ದಾರರಾಗಿದ್ದಾರೆ! ಮಂದೆಯು

(ಸಭೆಯು) ದೇವರದೇ ಹೊರತು ತಮ್ಮದಲ್ಲ ಎಂಬುದನ್ನು ಅವರು ನೆನಪಿಸಿಕೊಳ್ಳಬೇಕು (ವ. 28)!

- ಮೇಲ್ವಿಚಾರಕರಾಗಿ (ವ. 28)
- ಪೌಲನಂತೆ ಸುವಾರ್ತೆಯನ್ನು ಸಾರುವವರು ( ವ. 21, 24)
- ಪೌಲನಂತೆ, ದೇವರ ವಾಕ್ಯವನ್ನು ಬೋಧಿಸುವವರು (ವ. 20, 27, 31)

- ಅವರ ಸಿದ್ಧಾಂತ: ಅವರು ದೇವರ ಸಂಪೂರ್ಣ ಚಿತ್ತವನ್ನು ತಿಳಿದಿದ್ದರು (ವ. 27). ಇದನ್ನು ಪೌಲನು ಅವರಿಗೆ ಬೋಧಿಸಿದ್ದನು ಮತ್ತು ಈ ಜ್ಞಾನವು ಜವಾಬ್ದಾರಿಕೆಯನ್ನು ಹೊಂದಿತ್ತು. ಅವರು ನಂಬಲರ್ಹ ಸಂದೇಶವು ಬೋಧಿಸಲ್ಪಟ್ಟಂತೆಯೇ ಅದನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕಾಗಿತ್ತು, ಹಾಗೆ ಮಾಡುವುದರಿಂದ ಅವರು ಇತರರನ್ನು ಸ್ವಸ್ಥಬೋಧನೆಯಿಂದ ಪ್ರೋತ್ಸಾಹಿಸುವುದಕ್ಕೂ ಮತ್ತು ಅದನ್ನು ವಿರೋಧಿಸುವವರನ್ನು ಒಪ್ಪುವಂತೆ ಮಾಡುವುದಕ್ಕೂ ಶಕ್ತರಾಗುವರು (ತೀತನು. 1:9). ಅವರು 'ಸತ್ಯವನ್ನು ವಕ್ರಮಾಡಕೂಡದು' (ವ. 30). ಅವರು ಸತ್ಯವಾಕ್ಯವನ್ನು ಸರಿಯಾಗಿ ಕೈಗೊಳ್ಳುವವರಾಗಿರಬೇಕು (2 ತಿಮೋ. 2:15).
- ಅವರ ಜೀವನ ಶೈಲಿ: ಅವರು ದೀನತೆಯಿಂದಲೂ, ಸರಳತೆಯಿಂದಲೂ ಮತ್ತು ಸೇವಾ ಮನೋಭಾವನೆಯಿಂದಲೂ ಹೇಗೆ ಜೀವಿಸಬೇಕೆಂಬುದನ್ನು ಅರಿತವರಾಗಿದ್ದರು – ಪೌಲನು ಅವರ ಮಾದರಿಯಾಗಿದ್ದನು (ವ. 18–19, 34–35)!
- ಅವರ ಗುರಿ: ಪೌಲನಂತೆ ಅವರು ತಮ್ಮ ಓಟವನ್ನು ಮುಗಿಸುವುದರ ಮತ್ತು ಅವರ ಕಾರ್ಯವನ್ನು ಪೂರ್ಣಗೊಳಿಸುವುದರ ಮೇಲೆ ಗಮನವನ್ನು ಕೇಂದ್ರಿಕರಿಸಲೇಬೇಕು (ವ. 24).

2) ನಿಮ್ಮ ಮಂದೆಯ ವಿಷಯದಲ್ಲಿಯೂ ಎಚ್ಚರವಾಗಿರಿ (ವ. 28)!

- ಅವರು ಮೇಲ್ವಿಚಾರಕರಾಗಿದ್ದರು:
  - ಅವರು ನಾಯಕರುಗಳಾಗಿ ತಮ್ಮ ಜವಾಬ್ದಾರಿಗಳಿಗೆ ತಕ್ಕಂತೆ ಜೀವಿಸಲೇಬೇಕು!
  - ಅವರು ಮಂದೆಗೆ ಮಾದರಿಯಾಗಿರಲೇಬೇಕು!
- ಅವರು ದೇವರ ಮಂದೆಗೆ ಕುರುಬರಾಗಿದ್ದರು/ಸಭಾಪಾಲಕರಾಗಿದ್ದರು: ಅವರು ಮೂರು ಕಾರ್ಯಗಳನ್ನು ಹೊಂದಿದ್ದರು:
  - ಕುರಿಗಳನ್ನು ಮೇಯಿಸುವುದು: ಅಂದರೆ ದೇವರ ವಾಕ್ಯವನ್ನು ಸಂಪೂರ್ಣವಾಗಿ ಮತ್ತು ಸಮತೋಲನವಾಗಿ ವಿಶ್ವಾಸಿಗಳಿಗೆ ಬೋಧಿಸುವುದು. ಕುರಿಗಳು/ಸಭೆಯು ಚೆನ್ನಾಗಿ ಪೋಷಿಸಲ್ಪಡಬೇಕು!
  - ಕುರಿಗಳನ್ನು ಮಾರ್ಗದರ್ಶಿಸುವುದು: ಅಂದರೆ ವಿಶ್ವಾಸಿಗಳು ಕ್ರೈಸ್ತರಾಗಿ ತಮ್ಮ ಜೀವಿತವನ್ನು ಹೇಗೆ ಜೀವಿಸಬೇಕೆಂಬುದನ್ನು ತೋರಿಸಿಕೊಡುವುದು ಮತ್ತು

ಜೀವಿತದಲ್ಲಿ ಉಂಟಾಗುವ ಶೋಧನೆ ಮತ್ತು ಕಷ್ಟಗಳಲ್ಲಿ ಅವರನ್ನು ಮಾರ್ಗದರ್ಶಿಸುವುದು.

- ಕುರಿಗಳನ್ನು ಕಾಯುವುದು ಮತ್ತು ಸಂರಕ್ಷಿಸುವುದು: ಅಂದರೆ ವಿಶ್ವಾಸಿಗಳನ್ನು ಸುಳ್ಳು ಬೋಧಕರಿಂದಲೂ ಮತ್ತು ಅಪಾಯಕರ ಬೋಧನೆಗಳಿಂದಲೂ ಸಂರಕ್ಷಿಸುವುದು.

  ಸಭೆಯ ಹೊರಗಿನಿಂದ 'ತೋಳಗಳು' (ವಂಚಿಸುವ ಸುಳ್ಳಾದ ಸ್ವಾರ್ಥ ನಾಯಕರು) ಸಭೆಯೊಳಗೆ ಬರುತ್ತವೆ (ವ. 29)!

  ಸಭೆಯ ಒಳಗಿನಿಂದಲೂ 'ತೋಳಗಳು' (ವಂಚಿಸುವ ಸುಳ್ಳಾದ ಸ್ವಾರ್ಥ ನಾಯಕರು) ಬರುತ್ತವೆ ಮತ್ತು ಸಭೆಯನ್ನು ಒಡೆಯುತ್ತವೆ (ವ. 30)!

3. ಎಫೆಸದ ಸಭಾನಾಯಕರುಗಳಿಗೆ ಪೌಲನು ಸಾರಿದ ಸಂದೇಶವು ಇಂದು ದಕ್ಷಿಣ ಭಾರತದ ಸಭಾಪಾಲಕರಾದ ನಮಗೂ ಅನ್ವಯಿಸುತ್ತದೆ!

# ಪಾಠ 56. ಯೆರೂಸಲೇಮಿಗೆ, 21:1–16

## ಅ) ವಾಕ್ಯಭಾಗ

ಮಿಲೇತದಿಂದ ಪೌಲ ಮತ್ತು ಆತನ ಸಂಗಡಿಗರು ತಮ್ಮ ಹಡಗಿನ ಪ್ರಯಾಣವನ್ನು ಮುಂದುವರೆಸಿ ಸೆಜರೇಯಾಕ್ಕೆ ಬಂದರು. ಅವರು ಮಾರ್ಗದಲ್ಲಿ ಟೈರ್ ಎಂಬಲ್ಲಿ ಒಂದು ವಾರಗಳ ಕಾಲ ಮತ್ತು ಪ್ತೊಲೊಮಾಯ ಎಂಬಲ್ಲಿ ಒಂದು ದಿನದ ಕಾಲ ಉಳಿದುಕೊಂಡರು. ಅವರು ಸೆಜರೇಯಾದಲ್ಲಿ ಸುವಾರ್ತಿಕನಾದ ಫಿಲಿಪ್ಪನ ಮನೆಯಲ್ಲಿ ಕೆಲವು ದಿನಗಳ ಕಾಲ ತಂಗಿದ್ದರು. ಅಲ್ಲಿ ಅಗಬ ಎಂಬ ಹೆಸರಿನ ಒಬ್ಬ ಪ್ರವಾದಿಯು ಯೆರೂಸಲೇಮಿನಲ್ಲಿ ಪೌಲನು ಬಂಧಿಸಲ್ಪಡುವನೆಂದು ಪ್ರವಾದಿಸಿದನು. ಹಾಗಾಗಿ ಪೌಲನು ಯೆರೂಸಲೇಮಿಗೆ ಹೋಗಬಾರದೆಂದು ಎಲ್ಲರೂ ಆತನನ್ನು ಬೇಡಿಕೊಂಡರು. ಆದರೆ ಪೌಲನು ತಾನು ಬಂಧಿತನಾಗಲು ಮಾತ್ರವಲ್ಲ ಯೇಸುವಿನ ಹೆಸರಿನ ನಿಮಿತ್ತ ಸಾಯಲೂ ಸಿದ್ಧನಿದ್ದೇನೆ ಎಂದು ಉತ್ತರಿಸಿದನು.

## ಆ) ಟಿಪ್ಪಣಿ

*ಫೆನಿಷಿಯ ... ಸಿರಿಯ ... ಟೈರ್* (ವ. 3): ಟೈರ್ ಫೆನಿಷಿಯದ ಮುಖ್ಯ ಪಟ್ಟಣವಾಗಿತ್ತು, ಅದು ಹೊಸ ಒಡಂಬಡಿಕೆಯ ಕಾಲದಲ್ಲಿ ರೋಮನ್ ಪ್ರಾಂತ್ಯವಾದ ಸಿರಿಯಾಕ್ಕೆ ಸಂಬಂಧಪಟ್ಟಿತ್ತು. ಟೈರ್ ಪಟ್ಟಣವು ವ್ಯಾಪಾರ ಮತ್ತು ವಾಣಿಜ್ಯದ ಕೇಂದ್ರ ಸ್ಥಳವಾಗಿತ್ತು.

*ಪ್ತೊಲೊಮಾಯ* (ವ. 7): ಇದು ಕರ್ಮೆಲ್ ಪರ್ವತದ ಹತ್ತಿರವಿದ್ದ ಬಂದರು ತಾಣವಾಗಿತ್ತು. ಇದು ಟೈರ್‌ನ ದಕ್ಷಿಣಕ್ಕೆ 50 ಕಿ.ಮೀ. ದೂರದಲ್ಲಿ ಮತ್ತು ಸಿರಿಯಾದ ಉತ್ತರಕ್ಕೆ 55 ಕಿ.ಮೀ. ದೂರದಲ್ಲಿ ನೆಲೆಯಾಗಿತ್ತು.

*ಸೆಜರೇಯ* (ವ. 8): ಇದು ಯೂದಾಯದ ರಾಜಧಾನಿಯಾಗಿತ್ತು ಮತ್ತು ಯೆರೂಸಲೇಮಿನ ಬಂದರು ತಾಣವಾಗಿತ್ತು. 8:40 ರ ಟಿಪ್ಪಣಿಯನ್ನೂ ಸಹ ನೋಡಿರಿ.

*ಏಳು ಜನರಲ್ಲಿ ಒಬ್ಬನಾದ ಫಿಲಿಪ್ಪನೆಂಬ ಸುವಾರ್ತಿಕ* (ವ. 8): ಲೂಕನು 8:40 ರಲ್ಲಿ ಫಿಲಿಪ್ಪನ ಕುರಿತು ತಿಳಿಸಿದ್ದನು, ಆಗ ಫಿಲಿಪ್ಪನು 20 ವರ್ಷಗಳ ಹಿಂದೆ ಸೆಜರೇಯಕ್ಕೆ ಬಂದಿದ್ದನು. ಬಹುಶಃ ಈ ಸಮಯದಲ್ಲಿ ಫಿಲಿಪ್ಪನು ಸಮಾರ್ಯದಲ್ಲಿ ಉಂಟಾದ ಉಜ್ಜೀವನ ಮತ್ತು ಇಥಿಯೋಪ್ಯದ ಕಂಚುಕಿಯೊಂದಿಗೆ ಹೊಂದಿದ ಅನುಭವದ ಕುರಿತು ಲೂಕನಿಗೆ ಹೇಳಿರಬಹುದು (ಅ. ಕೃ. 8).

*ಅಗಬ ಎಂಬ ಹೆಸರಿನ ಒಬ್ಬ ಪ್ರವಾದಿ ಯೂದಾಯದಿಂದ ಬಂದನು* (ವ. 10): ಲೂಕನು ಇದೇ ಪ್ರವಾದಿಯನ್ನು 11:28 ರಲ್ಲಿ ತಿಳಿಸುತ್ತಿದ್ದಾನೆ, ಅಲ್ಲಿ ಆತನು ಭಯಂಕರವಾದ ಬರಗಾಲದ ಕುರಿತು ಪ್ರವಾದಿಸಿದ್ದನು. ರಾಜಕೀಯವಾಗಿ ಸೆಜರೇಯವು ರೋಮನ್ ಪ್ರಾಂತ್ಯವಾದ ಯೂದಾಯದ ರಾಜಧಾನಿಯಾಗಿತ್ತು, ಆದರೆ ಬಹುಸಂಖ್ಯೆ ಅನ್ಯರನ್ನು ಹೊಂದಿದ್ದ ಪಟ್ಟವಾಗಿದ್ದರಿಂದ ಅನೇಕ ಯೆಹೂದ್ಯರು ಅದು ತಮ್ಮ ನಾಡಿನ ಒಂದು ಭಾಗವೆಂಬ ಭಾವನೆಯನ್ನು ಹೊಂದಿರಲಿಲ್ಲ.

*ಯೆರೂಸಲೇಮಿಗೆ ಹೋದೆವು* (ವ. 15): ಸೆಜರೆಯಕ್ಕೂ ಮತ್ತು ಯೆರೂಸಲೇಮಿಗೂ ನಡುವೆ 100 ಕಿ.ಮೀ. ರಷ್ಟು ಅಂತರವಿತ್ತು ಮತ್ತು ಕುದುರೆ ಸವಾರಿ ಮಾಡುವುದಾದರೆ ಪ್ರಯಾಣವು ಎರಡು ದಿವಸಗಳ ಕಾಲ ಹಿಡಿಯುತ್ತಿತ್ತು.

*ಮ್ನಾಸೋನ* (ವ. 1): ಈತನು ಹೊಸ ಒಡಂಬಡಿಕೆಯಲ್ಲಿ ಇಲ್ಲಿ ಮಾತ್ರ ತಿಳಿಸಲ್ಪಟ್ಟಿದ್ದಾನೆ. ಈತನು ಬಾರ್ನಬನಂತೆ, ಸೈಪ್ರಸ್‌ನಿಂದ ಬಂದ ಒಬ್ಬ ಯೊಹ್ಯೂದ್ಯನಾಗಿದ್ದನು ಮತ್ತು ಯೆರೂಸಲೇಮಿನ ಆದಿಸಭೆಯ ಸದಸ್ಯನಾಗಿದ್ದನು. ಪಂಚಾಶತ್ತಮದ ಸಮಯದಂದು ಪೌಲ ಮತ್ತು ಆತನ ಸಂಗಡಿಗರು (ಸುಮಾರು 9 ಜನರು) ಈತನ ಮನೆಯಲ್ಲಿ ಅನುಕೂಲಕರವಾಗಿ ಉಳಿದುಕೊಂಡದ್ದರಿಂದ ಈತನು ಯೆರೂಸಲೇಮಿನಲ್ಲಿ ಒಂದು ದೊಡ್ಡ ಮನೆಯನ್ನು ಹೊಂದಿದ್ದಿರಬೇಕು.

## ಇ) ಪಠ್ಯ ಪ್ರಶ್ನೆಗಳು

1. ವ. 1–8 ರಲ್ಲಿ ದಾಖಲಾಗಿರುವಂತೆ ಪೌಲನ ಪ್ರಯಾಣವನ್ನು ನಕ್ಷೆಯಲ್ಲಿ ಗುರುತಿಸುತ್ತಾ ಹೋಗಿರಿ!
2. ಪೌಲನು ಮತ್ತು ಆತನ ಸಂಗಡಿಗರು ಟೈರ್‌ನಲ್ಲಿ ಎಷ್ಟು ದಿನಗಳ ಕಾಲ ಉಳಿದುಕೊಂಡರು ಮತ್ತು ಅಲ್ಲಿ ಏನು ಸಂಭವಿಸಿತು?
3. ಪೌಲನೊಂದಿಗೆ ಯೆರೂಸಲೇಮಿನವರೆಗೂ ಯಾರು ಹೋದರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಹಿಂದಿನ ಕಥೆಯಲ್ಲಿ (20:16 ನ್ನು ನೋಡಿರಿ), ಪೌಲನು ಪಂಚಾಶತ್ತಮ ಹಬ್ಬಕ್ಕೆ ಯೆರೂಸಲೇಮನ್ನು ತಲುಪಬೇಕೆಂಬ ಅವಸರದಲ್ಲಿದ್ದ ನಿಮಿತ್ತ ಎಫೆಸಕ್ಕೆ ಭೇಟಿ ಕೊಡಲಿಲ್ಲ. ಆದರೆ ಈ ವಾಕ್ಯಭಾಗದಲ್ಲಿ ಪೌಲನು ಟೈರ್‌ನಲ್ಲಿ ಏಳು ದಿನಗಳ ಕಾಲ ಮತ್ತು ಸೆಜರೇಯದಲ್ಲಿ ಕೆಲವು ದಿನಗಳ ಕಾಲ ಉಳಿದುಕೊಂಡನೆಂದು ನಾವು ಓದುತ್ತೇವೆ. ಹಾಗಾಗಿ ಈಗ ಅವನಿಗೆ ಯಾವ ಅವಸರವಿದ್ದಂತೆ ಕಾಣುತ್ತಿಲ್ಲ! ಈ ವ್ಯತ್ಯಾಸವನ್ನು ನಾವು ಹೇಗೆ ವಿವರಿಸಬಹುದು?

2. ನಾವು ಅಧ್ಯಾಯ 20:22 ಮತ್ತು 21:4 ನ್ನು ಹೋಲಿಸುವಾಗ ಅಲ್ಲಿ ಪವಿತ್ರಾತ್ಮನು ಪೌಲನಿಗೆ ಯೆರೂಸಲೇಮಿಗೆ ಹೋಗುವುದರ ಕುರಿತು ಹೇಳುವ ಸಂಗತಿಯಲ್ಲಿ ಒಂದು ತದ್ವಿರೋಧತೆ ಇರುವುದನ್ನು ಕಾಣುತ್ತೇವೆ. 20:22 ರಲ್ಲಿ ತಾನು ಯೆರೂಸಲೇಮಿಗೆ ಹೋಗುವಂತೆ ಪವಿತ್ರಾತ್ಮನು ಒತ್ತಾಯಿಸುತ್ತಿದ್ದಾನೆಂದು ಪೌಲನು ಹೇಳುತ್ತಿದ್ದಾನೆ. 21:4 ರಲ್ಲಿ ಪೌಲನು ಯೆರೂಸಲೇಮಿಗೆ ಹೋಗಬಾರದೆಂದು ಟೈರ್‌ನ ವಿಶ್ವಾಸಿಗಳು ಪವಿತ್ರಾತ್ಮನ ಮೂಲಕ ಬೇಡಿಕೊಂಡರೆಂದು ಲೂಕನು ಬರೆಯುತ್ತಿದ್ದಾನೆ. ಪವಿತ್ರಾತ್ಮನ ಈ ಕಾದಾಟವುಳ್ಳ ಸಂದೇಶವನ್ನು ನಾವು ಹೇಗೆ ಅರ್ಥೈಸಿಕೊಳ್ಳಬಹುದಾಗಿದೆ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಈ ವಾಕ್ಯಭಾಗದ ಒಂದು ಅಂಶವು ಹೊಸ ಒಡಂಬಡಿಕೆಯ ಕಾಲದಲ್ಲಿದ್ದ ಕ್ರಿಸ್ತೀಯ ಅನ್ಯೋನ್ಯತೆಯಾಗಿದೆ. ಪೌಲ ಮತ್ತು ಆತನ ಸಂಗಡಿಗರು ಇದನ್ನು ಈ ಸ್ಥಳಗಳಲ್ಲಿ ಅನುಭವಿಸಿದರು: ಟೈರ್‌ನಲ್ಲಿ (ಅಲ್ಲಿ ಅವರು ಏಳು ದಿನಗಳ ಕಾಲ ಉಳಿದುಕೊಂಡಿದ್ದರು), ಪ್ತೊಲೊಮಾಯದಲ್ಲಿ (ಅವರು ಅಲ್ಲಿನ ವಿಶ್ವಾಸಿಗಳನ್ನು ವಂದಿಸಿ ಒಂದು ರಾತ್ರಿ ಉಳಿದುಕೊಂಡಿದ್ದರು), ಸೆಜರೇಯದಲ್ಲಿ (ಸುವಾರ್ತಿಕನಾದ ಫಿಲಿಪ್ಪಿನ ಮನೆಯಲ್ಲಿ ಕೆಲವು ದಿನಗಳು ಉಳಿದುಕೊಂಡಿದ್ದರು), ಮತ್ತು ಯೆರೂಸಲೇಮಿನಲ್ಲಿ (ಪಂಚಾಶತ್ತಮಹಬ್ಬದ ಸಂದರ್ಭದಲ್ಲಿ ಮ್ನಾಸೋನನ ಮನೆಯಲ್ಲಿ ಉಳಿದುಕೊಂಡಿದ್ದರು ಮತ್ತು ಸಭೆಯಿಂದ ಪ್ರೀತಿಯ ಆಹ್ವಾನವನ್ನು ಸ್ವೀಕರಿಸಿದರು).

   ಇಂದು ನೀವು ದಕ್ಷಿಣ ಭಾರತದಲ್ಲಿ ಇಂತಹ ರೀತಿಯ ಕ್ರಿಸ್ತೀಯ ಅನ್ಯೋನ್ಯತೆ ಮತ್ತು ಅತಿಥಿ ಸತ್ಕಾರವನ್ನು ಕಾಣುತ್ತೀರೋ? ಹೇಗೆ – ಅಥವಾ ಯಾಕೆ ಇಲ್ಲ?

2. ಪೌಲನಿಗೆ ಯೆರೂಸಲೇಮಿನಲ್ಲಿ ಸಂಭವಿಸಲಿದ್ದ ಸಂಗತಿಯ ಕುರಿತು ಅಗಬನ ಪ್ರವಾದನೆಯನ್ನು ಕೇಳಿದ ಲೂಕ ಮತ್ತು ಸೆಜರೇಯದ ಇತರ ವಿಶ್ವಾಸಿಗಳು, ಆತನು ಅಲ್ಲಿ ಹೋಗದಂತೆ ಅವನನ್ನು ಬೇಡಿಕೊಂಡರು (ವ. 12). ಇದು ಪೌಲನಿಗೆ ಬೇಸರವನ್ನುಂಟುಮಾಡಿತ್ತು ಮತ್ತು ಅವರಿಗೆ ಆತನು, 'ನೀವೇಕೆ ಅತ್ತು ನನ್ನ ಹೃದಯ ಒಡೆಯುತ್ತೀರಿ? ಬಂಧಿತನಾಗಲಷ್ಟೇ ಅಲ್ಲ ನಮ್ಮ ಕರ್ತನಾದ ಯೇಸುವಿನ ಹೆಸರಿನ ನಿಮಿತ್ತ ಯೆರೂಸಲೇಮಿನಲ್ಲಿ ನಾನು ಸಾಯಲಿಕ್ಕೂ ಸಿದ್ಧನಾಗಿದ್ದೇನೆ!' ಎಂದು ಹೇಳಿದನು (ವ. 13).

   1) ನೀವು ಪೌಲನಂತಹ ವಿಶ್ವಾಸಿಗಳನ್ನು – ಸುವಾರ್ತೆಗಾಗಿ ಹಿಂಸೆಯನ್ನು ಅನುಭವಿಸಿ ಸಾಯಲಿಕ್ಕೂ ಸಿದ್ಧರಿರುವ ಜನರನ್ನು – ಎಂದಾದರೂ ಭೇಟಿಯಾಗಿದ್ದಿರೋ? ಅವರ ಕುರಿತಾದ ಕಥೆಗಳನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ!

   2) ನಿಮ್ಮ ಕುರಿತು ಏನು?

3. ಈ ವಾಕ್ಯಭಾಗದಲ್ಲಿ (ಮತ್ತು ಹಿಂದಿನ ವಾಕ್ಯಭಾಗದಲ್ಲಿಯೂ, 20:23) ಪ್ರವಾದನೆಯು ಅತೀ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಸುವಾರ್ತಿಕನಾದ ಫಿಲಿಪ್ಪನು ನಾಲ್ಕು ಜನ ಹೆಣ್ಣು ಮಕ್ಕಳನ್ನು ಹೊಂದಿದ್ದನು, ಅವರು ಪ್ರವಾದಿನಿಯರಾಗಿದ್ದರು. ಪ್ರವಾದಿಯಾದ ಅಗಬನು ನಾಟ್ಯರೂಪವಾಗಿ ತಮ್ಮ ಪ್ರವಾದನೆಗಳನ್ನು ತಿಳಿಸಿದ ಹಳೆ ಒಡಂಬಡಿಕೆ ಪ್ರವಾದಿಗಳ ಮಾದರಿಯನ್ನು ಅನುಸರಿಸಿದನು (ಉದಾಹರಣೆಗೆ, 1 ಅರಸು. 11:29–31 ರಲ್ಲಿ ಅಹೀಯನೆಂಬ ಪ್ರವಾದಿ, ಯೆಶಾಯ. 20:3–4 ರಲ್ಲಿ ಯೆಶಾಯನು ಮತ್ತು ಯೆಹೆಜ್ಕೇಲನು. 4:1–9 ರಲ್ಲಿ ಯೆಹೆಜ್ಕೇಲನು).

   1) ನಿಮ್ಮ ಸಭೆಯಲ್ಲಿ ಪ್ರವಾದನೆಯು ಯಾವ ಪಾತ್ರವನ್ನು ವಹಿಸುತ್ತದೆ? ಉದಾಹರಣೆಗಳನ್ನು ಕೊಡಿರಿ!

2) ಸೆಜರೇಯದಲ್ಲಿ ಅಗಬನು ತನ್ನ ಪ್ರವಾದನೆಯನ್ನು ‘ನಾಟ್ಯರೂಪವಾಗಿ ತಿಳಿಸಿದಂತೆ’ ನಿಮ್ಮ ಸಭೆಗಳಲ್ಲಿ ಆದದ್ದನ್ನು ನೀವು ಎಂದಾದರೂ ಕಂಡಿದ್ದಿರೋ? ನೀವು ಕಂಡಿದ್ದರೆ, ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ!

3) ಇಂದು ದಕ್ಷಿಣ ಭಾರತದಲ್ಲಿನ ಸಭೆಗಳಲ್ಲಿ ಹೆಚ್ಚು ಪ್ರವಾದನೆಗಳ ಅಗತ್ಯತೆ ಇದೆ ಎಂದು ನೀವು ಆಲೋಚಿಸುತ್ತಿರೋ? ಯಾಕೆ – ಯಾಕೆ ಇಲ್ಲ?

# ಪಾಠ 57. ಪೌಲನು ಯೆರೂಸಲೇಮನ್ನು ತಲುಪಿದ್ದು, 21:17–26

## ಅ) ವಾಕ್ಯಭಾಗ

ಪೌಲ ಮತ್ತು ಆತನ ಸಂಗಡಿಗರು ಯೆರೂಸಲೇಮನ್ನು ತಲುಪಿದ ತಕ್ಷಣ ಸಭೆಯವರು ಅವರನ್ನು ಸಂತೋಷದಿಂದ ಸ್ವಾಗತಿಸಿದರು. ಪೌಲನು ಅನ್ಯರ ಮಧ್ಯದಲ್ಲಿ ಮಾಡಿದ ಸೇವೆಗಾಗಿ ಯಾಕೋಬನು ಮತ್ತು ಇತರೆ ನಾಯಕರು ದೇವರನ್ನು ಕೊಂಡಾಡಿದರು. ಆದರೆ ಯೆಹೂದ್ಯ ಕ್ರೈಸ್ತರು ಪೌಲನ ಮತ್ತು ಹಳೆ ಒಡಂಬಡಿಕೆಯ ಧರ್ಮಶಾಸ್ತ್ರದ ಯೆಹೂದ್ಯ ಆಚರಣೆಗಳ ಕುರಿತಾದ ಆತನ ಬೋಧನೆಯ ವಿರುದ್ಧ ಮಾಡುತ್ತಿದ್ದ ಆಪಾದನೆಗಳ ಕುರಿತು ಯಾಕೋಬನು ಚಿಂತಿಸುತ್ತಿದ್ದನು. ಹಾಗಾಗಿ ಆತನು ಪೌಲನಿಗೆ ಹರಕೆ ಹೊತ್ತ ನಾಲ್ವರು ಪುರುಷರನ್ನು ಕರೆದುಕೊಂಡು ಹೋಗಿ ಅವರೊಂದಿಗೆ ಶುದ್ಧಿ ಮಾಡಿಕೊಂಡು ಅವರ ಖರ್ಚನ್ನು ನೀನೇ ಭರಿಸು ಎಂದು ಹೇಳಿದನು. ಆಗ ನಿನ್ನ ವಿಷಯದಲ್ಲಿ ಕೇಳಿರುವ ಸಂಗತಿಗಳು ನಿಜವಲ್ಲ ಎಂದು ಇದರಿಂದ ತಿಳಿಯುವುದು. ಅದಕ್ಕೆ ಪೌಲನು ಒಪ್ಪಿಕೊಂಡು ಹಾಗೆಯೇ ಮಾಡಿದನು.

## ಆ) ಟಿಪ್ಪಣಿ

*ಯಾಕೋಬನು* (ವ. 18): *ಯಾಕೋಬನು* ಯೇಸುವಿನ ತಮ್ಮನಾಗಿದ್ದನು ಮತ್ತು ಯೆರೂಸಲೇಮಿನ ಸಭೆಯ ನಾಯಕನಾಗಿದ್ದನು. 12:17 ಮತ್ತು 15:13 ರ ಟಿಪ್ಪಣಿಯನ್ನು ನೋಡಿರಿ.

*ಆದ್ದರಿಂದ ನಾವು ನಿನಗೆ ಹೇಳುವಂತೆ ಮಾಡು, ಹರಕೆ ಹೊತ್ತ ನಾಲ್ವರು ನಮ್ಮಲ್ಲಿ ಇದ್ದಾರೆ, ನೀನು ಇವರನ್ನು ಕರೆದುಕೊಂಡು ಹೋಗಿ ಅವರೊಂದಿಗೆ ಶುದ್ಧಿಮಾಡಿಕೊಂಡು, ಅವರು ಕ್ಷೌರ ಮಾಡಿಸಿಕೊಳ್ಳುವ ಖರ್ಚನ್ನು ನೀನೇ ಪೂರೈಸು* (ವ. 23–24): ಹೊಸ ಒಡಂಬಡಿಕೆಯ ಕಾಲದಲ್ಲಿ ಅರಣ್ಯಕಾಂಡ 6 ರಲ್ಲಿ ಹೇಳಲ್ಪಟ್ಟಂತಹ ತಾತ್ಕಾಲಿಕವಾದ ನಾಜೀರ ವ್ರತವನ್ನು ಹೊತ್ತುಕೊಳ್ಳುವಂತಹದ್ದು ಯೆಹೂದ್ಯರಿಗೆ (ಯೆಹೂದ್ಯ ಹಿನ್ನಲೆಯಿಂದ ಬಂದ ವಿಶ್ವಾಸಿಗಳಿಗೆ) ಸರ್ವೆ ಸಾಮಾನ್ಯವಾಗಿತ್ತು. ಹರಕೆಹೊತ್ತ ಅವಧಿಯಲ್ಲಿ ಅವರು ಕೂದಲನ್ನು ಕತ್ತರಿಸಿಕೊಳ್ಳುವಂತಿದ್ದಿಲ್ಲ. ಒಂದು ವೇಳೆ ಅವರು ಹರಕೆಯ ಸಮಯದಲ್ಲಿ ಆಚಾರಬದ್ಧವಾಗಿ ಅಶುದ್ಧವಾದರೆ (ಉದಾಹರಣೆಗೆ ಅವರು ಒಂದು ಹೆಣದ ಸಮೀಪಕ್ಕೆ ಬಂದರೆ), ಅವರು ದೇವಾಲಯದಲ್ಲಿ ಶುದ್ಧೀಕರಣದ ಸಂಸ್ಕಾರಕ್ಕೆ ಒಳಪಡಬೇಕಾಗಿತ್ತು ಮತ್ತು ಅವರು ತಮ್ಮ ತಲೆ ಬೋಳಿಸಿಕೊಳ್ಳಬೇಕಾಗಿತ್ತು. ವಚನ 26 ರಲ್ಲಿ ಪೌಲನು ಆ ನಾಲ್ವರೊಂದಿಗೆ ಹೋಗಿ ಅವರೊಂದಿಗೆ ತನ್ನನ್ನೂ ಶುದ್ಧೀಕರಿಸಿಕೊಂಡನು (ಬಹುಶಃ ತನ್ನ ಪ್ರಯಾಣದ ಸಂದರ್ಭದಲ್ಲಿ ಆಚಾರಬದ್ಧವಾಗಿ ಅಶುದ್ಧನಾಗಿದ್ದರಬಹುದು). ಆತನು ಅವರ ಶುದ್ಧಾಚಾರ ಮುಗಿಯುವ ದಿನದ ಬಗ್ಗೆಯೂ ಮತ್ತು ಅವರ ಅರ್ಪಣೆಯ ಬಗ್ಗೆಯೂ ನಿರ್ಧರಿಸಿದನು, ಐದು ಜನರಿಗಾಗಿ ಇದನ್ನು ಮಾಡಬೇಕಾದುದ್ದರಿಂದ ಬಹಳ ಹಣವನ್ನು ವೆಚ್ಚಮಾಡಬೇಕಾಗಿತ್ತು. ಕೆಲವು ದಿನಗಳ ನಂತರ ಪೌಲನು ದೇವಾಲಯದಲ್ಲಿ ಸೆರೆಯಾದಾಗ ಆತನು ಆಚಾರಬದ್ಧವಾಗಿ ಶುದ್ಧಿಯಾಗಿದ್ದನು (24:18).

*ಅನ್ಯಜನರಿಂದ ಬಂದ ವಿಶ್ವಾಸಿಗಳಿಗಾದರೋ, ಅವರು ವಿಗ್ರಹಗಳಿಗೆ ನೈವೇದ್ಯ ಅರ್ಪಿಸಿದ ಆಹಾರವನ್ನಾಗಲಿ, ರಕ್ತವನ್ನಾಗಲಿ, ಕುತ್ತಿಗೆ ಹಿಸುಕಿ ಕೊಂದದ್ದನ್ನಾಗಲಿ ಭುಜಿಸಬಾರದೆಂದೂ, ಜಾರತ್ವದಿಂದ ದೂರವಿರಬೇಕೆಂದೂ ... ತಿಳಿಸಿದ್ದೇವೆ* (ವ. 25): ಯಾಕೋಬನು ಯೆರೂಸಲೇಮಿನ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಧಾರದ ಪತ್ರವನ್ನು ಉಲ್ಲೇಖಿಸುತ್ತಿದ್ದಾನೆ. 15:1–34 ರ ಟಿಪ್ಪಣಿ ಮತ್ತು ಪ್ರಶ್ನೆಗಳನ್ನು ನೋಡಿರಿ.

## ಇ) ಪಠ್ಯ ಪ್ರಶ್ನೆಗಳು

1. ಪೌಲನು ತಾನು ಅನ್ಯರ ಮಧ್ಯದಲ್ಲಿ ಮಾಡಿದ ಸೇವೆಯ ಕುರಿತು ಯಾರಿಗೆ ವರದಿ ಸಲ್ಲಿಸಿದನು?
2. ಯೆರೂಸಲೇಮಿನ ಸಭೆಯ ನಾಯಕರು ಯಾಕೆ ದೇವರನ್ನು ಕೊಂಡಾಡಿದರು?
3. ವ. 20 ರಲ್ಲಿ ಯೆರೂಸಲೇಮಿನಲ್ಲಿದ್ದ ಯೆಹೂದ್ಯ ವಿಶ್ವಾಸಿಗಳ ಕುರಿತು ನಾವು ಏನನ್ನು ಕಲಿಯುತ್ತೇವೆ?
4. ಪೌಲನು ದೇವಾಲಯದಲ್ಲಿ ಏನನ್ನು ಮಾಡಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಯೆರೂಸಲೇಮಿನ ಸಭೆಯವರು ಪೌಲ ಮತ್ತು ಆತನ ಸಂಗಡಿಗರನ್ನು ಯಾಕೆ ಅಷ್ಟು 'ಸಂತೋಷದಿಂದ' ಸ್ವೀಕರಿಸಿದರೆಂದು" ನೀವು ಆಲೋಚಿಸುತ್ತೀರಿ (ವ. 17)?
2. ಯೆಹೂದ್ಯ ವಿಶ್ವಾಸಿಗಳು ಪೌಲನ ವಿರುದ್ಧ ಮಾಡಿದ ಆಪಾದನೆ ಏನು? ಅವರ ಆಪಾದನೆಗಳಲ್ಲಿ ಯಾವುದೇ ಸತ್ಯಾಂಶವಿತ್ತೆಂಬುದಾಗಿ ನೀವು ಆಲೋಚಿಸುತ್ತೀರೋ?
3. ನಾಲ್ಕು ಜನ ಪುರುಷರ ಶುದ್ಧೀಕರಣದ ಸಂಸ್ಕಾರದಲ್ಲಿ ಪೌಲನೂ ಸೇರಿಕೊಳ್ಳುವಂತೆ ಯಾಕೋಬನು ಯಾಕೆ ಕೇಳಿಕೊಂಡನು?
4. ಯಾಕೋಬನು ಕೇಳಿಕೊಂಡಿದ್ದನ್ನು ಮಾಡಲು ಪೌಲನು ಯಾಕೆ ಒಪ್ಪಿಕೊಂಡನೆಂದು ನೀವು ಭಾವಿಸುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಯಾಕೋಬನು ಕೇಳಿಕೊಂಡಂತೆ ಪೌಲನು ಮಾಡಲು ಒಪ್ಪಿಕೊಂಡನು. ಆತನು ಆ ನಾಲ್ಕು ಪುರುಷರೊಂದಿಗೆ ತನ್ನನ್ನೂ ಶುದ್ಧಿಮಾಡಿಕೊಂಡನು ಮತ್ತು ಅವರ ಶುದ್ಧೀಕರಣದ ಅರ್ಪಣೆಯ ವೆಚ್ಚವನ್ನು ತಾನೇ ಭರಿಸಲು ಒಪ್ಪಿಕೊಂಡನು. ಆತನು ಮಾಡಲೇಬೇಕೆಂಬ ನಿರ್ಬಂಧದಿಂದ ಅದನ್ನು ಮಾಡಲಿಲ್ಲ. ಆತನು ಸಾಂಪ್ರದಾಯಿಕ ಯೆಹೂದ್ಯ ಕ್ರೈಸ್ತರ ಭಾವನೆಗಳಿಗೆ ದಕ್ಕೆಯನ್ನುಂಟು ಮಾಡಬಾರದೆಂದು ಅದನ್ನು ಮಾಡಿದನು.

1. ದಕ್ಷಿಣ ಭಾರತದ ಸಭೆಯ ಹಿನ್ನಲೆಯಲ್ಲಿ ಇಂತಹದ್ದೇ ರೀತಿಯ ಯಾವುದಾದರೂ ಪರಿಸ್ಥಿತಿಗಳಿರುವುದನ್ನು ನೀವು ಆಲೋಚಿಸಬಲ್ಲಿರೋ?

2. ಇಂತಹ ಪರಸ್ಥಿತಿಯಲ್ಲಿ ಪೌಲನು ಯೆರೂಸಲೇಮಿನಲ್ಲಿ ಮಾಡಿದಂತೆಯೇ ನೀವು ಮಾಡಲು ಮನಸ್ಸುಳ್ಳವರಾಗಿದ್ದೀರೋ – ನಿಮ್ಮ ಸಾಂಪ್ರದಾಯಿಕ ಕ್ರೈಸ್ತ ಸಹೋದರರ ಭಾವನೆಗಳಿಗೆ ಧಕ್ಕೆಯಾಗದಂತೆ ನೀವು ಶ್ರಮಿಸಲು ಸಿದ್ಧರಿದ್ದೀರೋ?

## ಊ) ಉಪದೇಶಿಸು ಮತ್ತು ಬೋಧಿಸು!

ಈ ವಾಕ್ಯಭಾಗವನ್ನು ಕ್ರೈಸ್ತ ಸಿದ್ಧಾಂತ ಮತ್ತು ಸಂಪ್ರದಾಯವನ್ನು ಪಾಲಿಸುವುದರ ಕುರಿತಾದ – ಅಥವಾ 'ಬಲಹೀನ ಸಹೋದರರನ್ನು' ಪರಿಗಣಿಸುವುದರ ಕುರಿತಾದ – ಒಂದು ಸತ್ಯವೇದ ಅಧ್ಯಯನಕ್ಕಾಗಿ ಉಪಯೋಗಿಸಬಹುದು. ಅದನ್ನು ***ಯಾಕೋಬನು ಮತ್ತು ಪೌಲನು*** ಎಂದು ಕರೆಯಬಹುದು, ಅದರ ಹೊರರೇಖೆಯು ಹೀಗಿರಬಹುದು:

1. ಪೀಠಿಕೆ: ಆದಿಸಭೆಯಲ್ಲಿ ಯೆಹೂದ್ಯ ಮೂಲದ ವಿಶ್ವಾಸಿಗಳ ಮತ್ತು ಅನ್ಯ ಮೂಲದ ವಿಶ್ವಾಸಿಗಳ ನಡುವೆ ಇದ್ದ ದೊಡ್ಡ ಘರ್ಷಣೆ. ಯಾಕೋಬನು ಒಬ್ಬರನ್ನು ಪ್ರತಿನಿಧಿಸಿದರೆ ಪೌಲನು ಮತ್ತೊಬ್ಬರನ್ನು ಪ್ರತಿನಿಧಿಸಿದನು. ಅ. ಕೃ. 21:17–26 ರಲ್ಲಿರುವ ಕಥೆಯನ್ನು ಓದಿರಿ.
2. ಎರಡು ಪ್ರತಿನಿಧಿಗಳು:
   1) ಯಾಕೋಬನು: ಈತನು ಪಾಲೆಸ್ತೀನಿನಿಂದ ಬಂದ ಯೆಹೂದ್ಯನಾಗಿದ್ದನು. ಈತನು ಯೆರೂಸಲೇಮ್ ಸಭೆಯ ನಾಯಕನಾಗಿದ್ದನು. ಈತನು ಯೆಹೂದ್ಯ ಸಂಪ್ರದಾಯವನ್ನು ಪಾಲಿಸುತ್ತಿದ್ದ ಮತ್ತು 'ಧರ್ಮಶಾಸ್ತ್ರದ ಅಭಿಮಾನಿಗಳಾದ' ಯೆಹೂದ್ಯ ಕ್ರೈಸ್ತರನ್ನು ಪ್ರತಿನಿಧಿಸಿದನು (ವ. 20).
   2) ಪೌಲನು: ಈತನು ಚದುರಿಸಲ್ಪಟ್ಟ ಯೆಹೂದ್ಯರ ಗುಂಪಿನಿಂದ ಬಂದ ಯೆಹೂದ್ಯನಾಗಿದ್ದನು. ಈತನು ಅನ್ಯರಿಗೆ ಅಪೊಸ್ತಲನಾಗಿದ್ದನು. ಈತನು ಯೆಹೂದ್ಯ ಸಂಪ್ರದಾಯಗಳನ್ನು ಪಾಲಿಸದ ಅನ್ಯ ಕ್ರೈಸ್ತರನ್ನು ಪ್ರತಿನಿಧಿಸಿದನು.

3. ಅವರು ಸಮ್ಮತಿ ಸೂಚಿಸಿದ ಸಂಗತಿಗಳು:
   - ರಕ್ಷಣೆಯ ಮಾರ್ಗ. ರಕ್ಷಣೆಯು ಯೇಸು ಕ್ರಿಸ್ತನಿಂದಲೇ ಹೊರತು ಧರ್ಮಶಾಸ್ತ್ರದಿಂದಲ್ಲ ಎಂಬುದನ್ನು ಯಾಕೋಬ ಮತ್ತು ಪೌಲರಿಬ್ಬರೂ ಒಪ್ಪಿಕೊಂಡರು.
     - ಹಾಗಾಗಿ ಸಮಸ್ಯೆ ಬಂದದ್ದು ರಕ್ಷಣೆಯ ಕುರಿತು ಅಲ್ಲ ಬದಲಾಗಿ ಶಿಷ್ಯತ್ವದ ಕುರಿತು ಮತ್ತು ವಿಶ್ವಾಸಿಗಳು ಮಾಡಬೇಕಾದುದ್ದರ ಕುರಿತು.
   - ಅನ್ಯ ವಿಶ್ವಾಸಿಗಳಿಗೆ ಸುನ್ನತಿಯ ಕುರಿತು ಪೌಲನ ಬೋಧನೆ. ಅನ್ಯ ಜನಾಂಗದಿಂದ ಬಂದಂತಹ ವಿಶ್ವಾಸಿಗಳು ಸುನ್ನತಿ ಮಾಡಿಸಿಕೊಳ್ಳುವ ಅವಶ್ಯವಿಲ್ಲವೆಂದು ಪೌಲ ಮತ್ತು ಯಾಕೋಬ (ಯೆರೂಸಲೇಮಿನ ಸಮ್ಮೇಳನದಲ್ಲಿ ತೆಗೆದುಕೊಂಡ ತೀರ್ಮಾನವನ್ನು ತಾನೇ ಉಲ್ಲೇಖಿಸಿದನು) ಇಬ್ಬರೂ ಒಪ್ಪಿಕೊಂಡರು.
     - ಆದರೆ ಸಮಸ್ಯೆ ಬಂದದ್ದು ಪೌಲನು ಅನ್ಯರ ನಡುವೆ ವಾಸಿಸಿದ ಯೆಹೂದ್ಯರಿಗೆ, ಅಂದರೆ ಚದುರಿಸಲ್ಪಟ್ಟ ಯೆಹೂದ್ಯರಿಗೆ ಬೋಧಿಸಿದಂತಹ ಸಂಗತಿಯ ಕುರಿತು.

- ಹಳೆ ಒಡಂಬಡಿಕೆಯ ನೈತಿಕ ನಿಯಮಗಳು. ದೇವಜನರೆಲ್ಲರೂ ದೇವರ ಆಜ್ಞೆಗೆ ಅನುಸಾರವಾಗಿ ಪರಿಶುದ್ಧರಾಗಿ ಜೀವಿಸಲೇಬೇಕೆಂದು ಯಾಕೋಬ ಮತ್ತು ಪೌಲರಿಬ್ಬರೂ ಒಪ್ಪಿಕೊಂಡರು.
  - ಆದರೆ ಸಮಸ್ಯೆ ಬಂದದ್ದು ಯೆಹೂದ್ಯ ಆಚಾರ ಮತ್ತು ಸಂಪ್ರದಾಯಕ್ಕೆ ಸಂಬಂಧಪಟ್ಟದ್ದಾಗಿತ್ತು. ಪೌಲನು ಅನ್ಯಜನರ ಮಧ್ಯದಲ್ಲಿ ವಾಸವಾಗಿದ್ದ ಯೆಹೂದ್ಯರು ಸುನ್ನತಿಮಾಡಿಸಿಕೊಳ್ಳಬಾರದು ಮತ್ತು ಯೆಹೂದ್ಯ ಆಚರಣೆಗಳನ್ನು ಅನುಸರಿಸಬಾರದೆಂದು ಬೋಧಿಸುತ್ತಿದ್ದಾನೆಂಬ ಗಾಳಿಸುದ್ದಿ ಹರಡಲ್ಪಟ್ಟಿತ್ತು.

4. ಪೌಲನು ಏನು ಮಾಡಬೇಕೆಂದು ಯಾಕೋಬನು ಕೇಳಿಕೊಂಡನು? – ಹರಕೆಹೊತ್ತ ನಾಲ್ಕು ಜನರೊಂದಿಗೆ ಆತನು ಸೇರಿಕೊಂಡು ಅವರನ್ನು ಕರೆದುಕೊಂಡು ಹೋಗಿ ಅವರೊಡನೆ ತನ್ನನ್ನು ಶುದ್ಧಿಮಾಡಿಕೊಳ್ಳುವುದರ ಮತ್ತು ಅವರ ಖರ್ಚು ವೆಚ್ಚವನ್ನು ತಾನೇ ಭರಿಸುವುದರ ಮೂಲಕ ಆತನು ಯೆಹೂದ್ಯ ಆಚರಣೆಗಳ ವಿರುದ್ಧವಲ್ಲ ಎಂಬುದನ್ನು ಸಾಬೀತುಪಡಿಸಬೇಕೆಂದು ಹೇಳಿದನು (ವ. 23–24).
   - ಆದರೆ ಅನ್ಯವಿಶ್ವಾಸಿಗಳು ಯಾವ ಯೆಹೂದ್ಯ ಆಚರಣೆಯನ್ನು ಪಾಲಿಸಬೇಕೆಂಬುದರ ಕುರಿತು ಚರ್ಚಿಸುವ ಅವಶ್ಯವಿಲ್ಲವೆಂದು ಯಾಕೋಬನು ತನಗೂ ಮತ್ತು ಪೌಲನಿಗೂ ನೆನಪಿಸಿದನು, ಯಾಕೆಂದರೆ ಈಗಾಗಲೇ ಯೆರೂಸಲೇಮಿನ ಸಮ್ಮೇಳನದಲ್ಲಿ ಅವುಗಳ ಕುರಿತು ನಿರ್ಧರಿಸಲ್ಪಟ್ಟಿತ್ತು (ವ. 25).
   - ಮತ್ತು ಯಾಕೋಬನು ನೆನೆಪಿಸಿದ ಅನ್ಯರು ಪಾಲಿಸಬೇಕಿದ್ದ ಸಾಂಸ್ಕೃತಿಕ ವಿಷಯಗಳ ಕುರಿತು ಪೌಲನು ಚರ್ಚಿಸಲಿಲ್ಲ. ಅದಲ್ಲದೆ ಆತನು ತನ್ನ ಪತ್ರಿಕೆಗಳಲ್ಲಿ ಎಲ್ಲಿಯೂ ಇದನ್ನು ಪ್ರಸ್ತಾಪಿಸಲಿಲ್ಲ, ಅನ್ಯವಿಶ್ವಾಸಿಗಳು ಈ ಸಂಗತಿಗಳನ್ನು ಪಾಲಿಸುವರೋ ಇಲ್ಲವೋ ಎನ್ನುವುದು ಆತನಿಗೆ ಅಷ್ಟು ಪ್ರಾಮುಖ್ಯವಾಗಿ ಕಾಣಲಿಲ್ಲವೆಂಬಂತೆ ತೋರುತ್ತದೆ.

5. ಯಾಕೋಬನ ಮನವಿಗೆ ಪೌಲನು ಯಾಕೆ ಒಪ್ಪಿಕೊಂಡನು?
   - ಸಾಂಪ್ರದಾಯಿಕ ಯೆಹೂದ್ಯರ ಭಾವನೆಗಳಿಗೆ ಧಕ್ಕೆ ತರಬಾರದೆಂಬ ಉದ್ದೇಶದಿಂದ ಯಾಕೋಬನು ಕೇಳಿಕೊಂಡಿದ್ದನ್ನು ಆತನು ಮಾಡಲು ಒಪ್ಪಿಕೊಂಡನು.
   - ಆತನು ಮಾಡಲೇಬೇಕೆಂಬ ನಿರ್ಬಂಧದಿಂದ ಅದನ್ನು ಮಾಡಲಿಲ್ಲ, ಬದಲಾಗಿ ಅದು ಕ್ರೈಸ್ತ ನಂಬಿಕೆಯ ಒಂದು ಭಾಗವಾಗಿದ್ದರಿಂದ ಅದನ್ನು ಮಾಡಿದನು.
   - ಬಲಹೀನನಾದ ಸಹೋದರನಿಗಾಗಿ ಶ್ರಮೆಯನ್ನು ತೆಗೆದುಕೊಳ್ಳಲು ಆತನು ಮನಸ್ಸುಳ್ಳವನಾಗಿದ್ದನು (ರೋಮಾ. 15:1 ಮತ್ತು 1 ಕೊರಿ. 8:9 ನ್ನು ಹೋಲಿಸಿರಿ).

6. ಈ ವಾಕ್ಯಭಾಗದಿಂದ ನಾವು ಏನನ್ನು ಕಲಿಯುತ್ತೇವೆ?
   - ನಾವು ಸಂಪ್ರದಾಯ/ಸಂಸ್ಕೃತಿ ಮತ್ತು ಸಿದ್ಧಾಂತಗಳ ನಡುವಿನ ವ್ಯತ್ಯಾಸವನ್ನು ತಿಳಿಯಬೇಕು:

- ನಮ್ಮ ಸಾಂಸ್ಕೃತಿಕ ಹಿನ್ನಲೆ ಮತ್ತು ಸಂಪ್ರದಾಯಗಳು ಯಾವುದೇ ಆಗಿದ್ದರೂ – ಯೇಸುವಿನ ಮೂಲಕ ಮಾತ್ರ ರಕ್ಷಣೆಯೆಂಬ ಸಿದ್ಧಾಂತವನ್ನು ಎಲ್ಲಾ ವಿಶ್ವಾಸಿಗಳು ಒಪ್ಪಿಕೊಳ್ಳಲೇಬೇಕು.
- ನಮ್ಮ ಸಾಂಸ್ಕೃತಿಕ ಹಿನ್ನಲೆ ಮತ್ತು ಸಂಪ್ರದಾಯಗಳು ಯಾವುದೇ ಆಗಿದ್ದರೂ – ತನ್ನ ಜನರು ತನ್ನ ಪರಿಶುದ್ಧತೆಯನ್ನು ಪ್ರತಿಬಿಂಬಿಸುವಂತೆ ಅವರೂ ಪರಿಶುದ್ಧವಾದ ಜೀವಿತಗಳನ್ನು ಜೀವಿಸಲೇಬೇಕೆಂಬ ದೇವರ ಆಜ್ಞೆಯನ್ನು ಪ್ರತಿಯೊಬ್ಬ ವಿಶ್ವಾಸಿಗಳು ಒಪ್ಪಿಕೊಳ್ಳಲೇಬೇಕು.
- ವಿವಿಧ ಸಂಸ್ಕೃತಿಯ ಹಿನ್ನಲೆಯಿಂದ ಬಂದ ವಿಶ್ವಾಸಿಗಳ ಸಾಂಸ್ಕೃತಿಕ ಸಂಗತಿಗಳು (ಊಟದ ವಿನ್ಯಾಸ ಮತ್ತು ಉಡುಪಿನ ವಿನ್ಯಾಸ) ವ್ಯತ್ಯಾಸವಾಗಿರುತ್ತವೆ. ಯಾವ ಸಾಂಸ್ಕೃತಿಕ ಸಂಗತಿಯನ್ನು ಸ್ವೀಕರಿಸಬೇಕು ಮತ್ತು ಯಾವ ಸಾಂಸ್ಕೃತಿಕ ಸಂಗತಿಯನ್ನು ಸ್ವೀಕರಿಸಬಾರದೆಂಬುದರ ಕುರಿತು ವಿಶ್ವಾಸಿಗಳು ಆಗಾಗ್ಗೆ ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ.

• ನಾವು ನಮ್ಮ 'ಬಲಹೀನ ಸಹೋದರರನನ್ನು'" ನೋಯಿಸದೇ ಇರುವಂತೆ 'ಶ್ರಮೆಪಡಲು' ಮನಸ್ಸುಳ್ಳವರಾಗಿರಬೇಕು. ನಾವು ಇತರರಿಗೆ ವಿಘ್ನವಾಗಬಾರದು (1 ಕೊರಿ. 8:9).

# ಪಾಠ 58. ಪೌಲನ ಬಂಧನ, 21:27–36

## ಅ) ವಾಕ್ಯಭಾಗ

ಏಳು ದಿನಗಳ ಶುದ್ಧೀಕರಣವು ಕೊನೆಗೊಂಡಾಗ ಪೌಲನು ದೇವಾಲಯಕ್ಕೆ ಹೋದನು. ಏಷ್ಯಾ ಪ್ರಾಂತ್ಯದ ಕೆಲವು ಯೆಹೂದ್ಯರು ದೇವಾಲಯದಲ್ಲಿ ಪೌಲನನ್ನು ಗುರುತಿಸಿ ಆತನ ವಿರುದ್ಧ ಒಂದು ದೊಡ್ಡ ಜನಸಮೂಹವನ್ನು ಕೂಡಿಸಿ ಈತನು ದೇವದೂಷಣೆ ಮಾಡಿ ದೇವಾಲಯವನ್ನು ಅಪವಿತ್ರಗೊಳಿಸಿದ್ದಾನೆಂದು ಆಪಾದಿಸಿದರು. ಜನಸಮೂಹವು ಪೌಲನನ್ನು ಕೊಲ್ಲಬೇಕೆಂದು ಪ್ರಯತ್ನಿಸುತ್ತಿರಲು ರೋಮನ್ ಸೈನಿಕರು ಮಧ್ಯ ಪ್ರವೇಶಿಸಿ ಪೌಲನನ್ನು ಬಂಧಿಸಿದರು.

## ಆ) ಟಿಪ್ಪಣಿ

*ಏಳು ದಿನಗಳು* (ವ. 27): ಶುದ್ಧೀಕರಣಕ್ಕೆ ಬೇಕಾದ ದಿನಗಳು (ಹಿಂದಿನ ವಾಕ್ಯಭಾಗವನ್ನು ನೋಡಿರಿ).

*ಗ್ರೀಕರನ್ನು ದೇವಾಲಯದೊಳಗೆ ಕರೆದುಕೊಂಡು ಬಂದು* (ವ. 28): ಅನ್ಯಜನರು ದೇವಾಲಯದ ಹೊರಗಿನ ಅಂಗಳವಾದ ಅನ್ಯರ ಅಂಗಳವನ್ನು ಮಾತ್ರ ಪ್ರವೇಶಿಸಲು ಅನುಮತಿ ಇತ್ತು. ಇಸ್ರಾಯೇಲರ ಅಂಗಳದಿಂದ ಈ ಅಂಗಳವನ್ನು 140 ಸೆಂ.ಮೀ. ಕಲ್ಲಿನ ಗೋಡೆಯು ಬೇರ್ಪಡಿಸಿತ್ತು. ಈ ಗೋಡೆಯ ಮೇಲೆ ಗ್ರೀಕ್ ಭಾಷೆಯಲ್ಲಿ ಅನ್ಯರು ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ ಮತ್ತು ಪ್ರವೇಶಿಸಿದರೆ ಮರಣದಂಡನೆ ವಿಧಿಸಲಾಗುವುದುದೆಂದು ಕೆತ್ತಿದ್ದರು.

ತ್ರೋಫಿಮ (ವ. 29): ಈತನು ಎಫೆಸದಿಂದ ಬಂದ ಅನ್ಯ ವಿಶ್ವಾಸಿಯಾಗಿದ್ದನು. 20:4 ರ ಟಿಪ್ಪಣಿಯನ್ನು ಸಹ ನೋಡಿರಿ.

*ನಮ್ಮ ಧರ್ಮಶಾಸ್ತ್ರಕ್ಕೂ ಈ ಸ್ಥಳಕ್ಕೂ ವಿರೋಧವಾಗಿ ಎಲ್ಲಾ ಜನರಿಗೆ ಬೋಧಿಸುತ್ತಿರುವ* (ವ. 28): ಹೆಚ್ಚುಕಡಿಮೆ 25 ವರ್ಷಗಳ ಹಿಂದೆ ಸ್ತೆಫನನ ವಿರುದ್ಧ (6:13–14, ಮತ್ತು ಅದಕ್ಕಿಂತ ಮುಂಚೆ ಯೇಸುವಿನ ವಿರುದ್ಧ) ಯೆಹೂದ್ಯರು ಮಾಡಿದ ಆಪಾದನೆಯನ್ನು ಹೋಲಿಸಿರಿ. ಯೆರೂಸಲೇಮಿನ ದೇವಾಲಯ ಮತ್ತು ಮೋಶೆಯ ಧರ್ಮಶಾಸ್ತ್ರದ ವಿರುದ್ಧ ಮಾತನಾಡುವುದು ಬಹಳ ಗಂಭೀರವಾದ ಅಪರಾಧವಾಗಿತ್ತು. ಯೆಹೂದ್ಯರಿಗೆ ತಮ್ಮ ದೇವಾಲಯ ಮತ್ತು ಧರ್ಮಶಾಸ್ತ್ರಕ್ಕಿಂತ ಪವಿತ್ರವಾದದ್ದು ಮತ್ತೊಂದಿಲ್ಲ. ದೇವಾಲಯವು ದೇವರ ಪ್ರಸನ್ನತೆಯಿರುವ ಪರಿಶುದ್ಧ ಸ್ಥಳವಾಗಿತ್ತು ಮತ್ತು ಧರ್ಮಶಾಸ್ತ್ರವು ದೇವರ ಮನಸ್ಸು ಮತ್ತು ಚಿತ್ತದ ಪ್ರಕಟಣೆಯಾಗಿತ್ತು. ಇದರ ಪರಿಣಾಮವಾಗಿ ಪೌಲ, ಸ್ತೆಫನ ಮತ್ತು ಯೇಸು ಕ್ರಿಸ್ತನು ದೇವರನ್ನೇ ದೂಷಿಸಿದರು ಎಂಬ ಆಪಾದನೆಗೆ ಒಳಗಾದರು.

*ರೋಮ್ ಸಹಸ್ರಾಧಿಪತಿ* (ವ. 31): ಈತನ ಹೆಸರು ಕ್ಲಾಡಿಯಸ್ ಲೂಸಿಯಸ್ (23:26) ಮತ್ತು ಈತನು ದೇವಾಲಯದ ವಾಯುವ್ಯ ದಿಕ್ಕಿನಲ್ಲಿದ್ದ ಅಂಟೋನಿಯ ಗೋಪುರದಲ್ಲಿ ಕಾವಲಿರಿಸಲ್ಪಟ್ಟ ರೋಮನ್ ದಳದ ಮೇಲಾಧಿಕಾರಿಯಾಗಿದ್ದನು.

*ಸೈನಿಕರನ್ನು ಮತ್ತು ಶತಾಧಿಪತಿಗಳನ್ನು* (ವ. 32): ಒಬ್ಬ ಅಧಿಕಾರಿಯ ಅಡಿಯಲ್ಲಿ 100 ಜನ ಸೈನಿಕರಿದ್ದರಿಂದ ಸಹಸ್ರಾಧಿಪತಿಯು ಕನಿಷ್ಠ ಪಕ್ಷ 200 ಜನ ಸೈನಿಕರನ್ನು ಕರೆತಂದಿರಬಹುದು.

## ಇ) ಪಠ್ಯ ಪ್ರಶ್ನೆಗಳು

1. ಜನಸಮೂಹವನ್ನು ಪ್ರೇರೇಪಿಸಿ ದೇವಾಲಯದಲ್ಲಿ ಪೌಲನನ್ನು ಹಿಡಿದುಕೊಳ್ಳುವಂತೆ ಮಾಡಿದ ಜನರು ಯಾರು?
2. ಪೌಲನನ್ನು ಬಂಧಿಸಿದವರು ಯಾರು ಮತ್ತು ಆತನು ಸೇನಾಪಾಳ್ಯಕ್ಕೆ ಯಾಕೆ ಕೊಂಡೊಯ್ಯಲ್ಪಟ್ಟನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಆ ಸಮಯದಲ್ಲಿ ಏಷ್ಯಾ ಪ್ರಾಂತ್ಯದ ಯೆಹೂದ್ಯರು ಯೆರೂಸಲೇಮಿಗೆ ಯಾಕೆ ಬಂದಿದ್ದರೆಂದು ನೀವು ಆಲೋಚಿಸುತ್ತೀರಿ?
2. ಪೌಲನ ವಿರುದ್ಧ ಮಾಡಲ್ಪಟ್ಟ ಆಪಾದನೆಗಳೇನು?
3. ಆ ಆಪಾದನೆಗಳು ನಿಜವಾದದ್ದೆಂದು ನೀವು ಆಲೋಚಿಸುತ್ತೀರೋ? ವಿವರಿಸಿರಿ!

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ಕಥೆಯಲ್ಲಿ ಪೌಲನನ್ನು ಆಪಾದಿಸಿ, ಹೊಡೆದು ಸಾಯಿಸಲು ಪ್ರಯತ್ನಿಸಿದವರು ಯೆಹೂದ್ಯರಾಗಿದ್ದರು (ಧಾರ್ಮಿಕ ಜನರು). ಅವರ ಆಪಾದನೆಗಳು ತಪ್ಪು ತಿಳುವಳಿಕೆಗಳ ಮತ್ತು ಸುಳ್ಳಿನ ಮೇಲೆ ಆಧಾರಿತವಾಗಿತ್ತು. ಪೌಲನ ಜೀವವನ್ನು ಉಳಿಸಿದ್ದು ರೋಮನ್ ಸಹಸ್ರಾಧಿಪತಿಯಾಗಿದ್ದನು (ಸರ್ಕಾರದ ಪ್ರತಿನಿಧಿ) – ಆತನು ಈ ಪ್ರಕ್ರಿಯೆಯಲ್ಲಿ ಆತನನ್ನು ಬಂಧಿಸಿ ಸರಪಣಿಗಳಿಂದ ಕಟ್ಟಬೇಕಾಗಿ ಬಂದರೂ ಆತನ ಜೀವ ಉಳಿಸಿದನು. ಆ ಸಹಸ್ರಾಧಿಪತಿಯು ಪೌಲನ ಕುರಿತು ಸತ್ಯಾಂಶವನ್ನು ತಿಳುಕೊಳ್ಳಲು ಪ್ರಯತ್ನಿಸುತ್ತಾನೆ – ಆದರೆ ಧಾರ್ಮಿಕ ಜನಸಮೂಹದಿಂದ ಸ್ಪಷ್ಟವಾದ ಉತ್ತರವನ್ನು ಪಡೆಯಲು ಆಗಲಿಲ್ಲ.

1. ಇದು ಭಾರತ ದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ನಿಮಗೆ ನೆನಪಿಸುತ್ತದೋ? ನಿಮ್ಮ ಕಥೆಗಳನ್ನು ಹಂಚಿಕೊಳ್ಳಿರಿ!
    - ಭಾರತದ ವಿಶ್ವಾಸಿಗಳು ಧಾರ್ಮಿಕ ಜನರ ಗುಂಪಿನಿಂದ ಆಪಾದಿಸಲ್ಪಟ್ಟು ದಾಳಿ ಮಾಡಲ್ಪಟ್ಟಿದ್ದಾರೆ. ಆದರೆ ಕೆಲವು ಸರ್ಕಾರದ ಪ್ರತಿನಿಧಿಗಳಿಂದ ವಿಶ್ವಾಸಿಗಳು ಸಂರಕ್ಷಿಸಲ್ಪಟ್ಟು ಅವರ ಜೀವ ಉಳುಕೊಂಡಿದೆ.

- ಭಾರತದ ವಿಶ್ವಾಸಿಗಳ ವಿರುದ್ಧ ಮಾಡಲ್ಪಟ್ಟಿರುವ ಆಪಾದನೆಗಳು ತಪ್ಪು ತಿಳುವಳಿಕೆ ಮತ್ತು ಸುಳ್ಳಿನ ಮೇಲೆ ಆಧಾರಿತವಾಗಿದೆ. ಸರ್ಕಾರದ ಪ್ರತಿನಿಧಿಗಳು ಸತ್ಯವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ – ಆದರೆ ಧಾರ್ಮಿಕ ಜನಸಮೂಹದಿಂದ ಸ್ಪಷ್ಟವಾದ ಉತ್ತರವನ್ನು ಪಡೆಯಲು ಆಗುವುದಿಲ್ಲ.

2. ಅಥವಾ ಭಾರತದಲ್ಲಿರುವ ಪರಿಸ್ಥಿತಿಯು ಸಂಪೂರ್ಣವಾಗಿ ವ್ಯತ್ಯಾಸವಾದದ್ದು ಮತ್ತು ಪೌಲನ ಪರಿಸ್ಥಿತಿಯೊಂದಿಗೆ ಅದನ್ನು ಹೋಲಿಸಲು ಸಾಧ್ಯವಿಲ್ಲವೆಂಬುದಾಗಿ ನೀವು ಆಲೋಚಿಸುತ್ತೀರೋ? ವಿವರಿಸಿರಿ!

# ಪಾಠ 59. ಜನಸಮೂಹಕ್ಕೆ ಪೌಲನ ಪ್ರತಿವಾದ, 21:37–22:21

## ಅ) ವಾಕ್ಯಭಾಗ

ಆತನು ರೋಮನ್ ಸೇನಾಪಾಳ್ಯದೊಳಗೆ ಒಯ್ಯಲ್ಪಡುತ್ತಿರುವಾಗ ಪೌಲನು ಸಹಸ್ರಾಧಿಪತಿಗೆ ತಾನು ಜನರ ಗುಂಪಿನೊಂದಿಗೆ ಮಾತನಾಡಲು ಅಪ್ಪಣೆಯನ್ನು ಕೇಳಿದನು. ತನ್ನ ಭಾಷಣದಲ್ಲಿ ಪೌಲನು ತನ್ನ ಕೌಟುಂಬಿಕ ಹಿನ್ನಲೆ, ಧಾರ್ಮಿಕ ತರಬೇತಿ ಮತ್ತು ದಮಸ್ಕದ ರಸ್ತೆಯಲ್ಲಿ ಉಂಟಾದ ತನ್ನ ಪರಿವರ್ತನೆಯ ಅನುಭವಗಳನ್ನು ಸೂಚಿಸಿ ಮಾತನಾಡಿದನು. ನಂತರ ದೇವರು ತನ್ನನ್ನು ದೂರದಲ್ಲಿ ಅನ್ಯರ ಮಧ್ಯದಲ್ಲಿ ಹೋಗಲು ಹೇಗೆ ಕರೆದನು ಎಂಬುದರ ಕುರಿತು ವಿವರಿಸಿದನು.

## ಆ) ಟಿಪ್ಪಣಿ

*ದಂಗೆಯೆಬ್ಬಿಸಿದ ಈಜಿಪ್ಟಿನವನು* (ವ. 38): ಯೆಹೂದ್ಯ ಇತಿಹಾಸಕಾರನಾದ ಜೋಸೆಫಸ್ ಎಂಬುವನು ಕೆಲವು ವರ್ಷಗಳ ಹಿಂದೆ ರೋಮನ್ನರಿಂದ ಶಾಂತಗೊಳಿಸಲ್ಪಟ್ಟ ಒಬ್ಬ ಈಜಿಪ್ಟಿನ ಸುಳ್ಳು ಪ್ರವಾದಿ ಮತ್ತು ಉಗ್ರಗಾಮಿಯ ದಂಗೆಯ ಕುರಿತು ತಿಳಿಸುತ್ತಾನೆ. ಆದರೆ ಆ ಈಜಿಪ್ಟಿನವನು ತಪ್ಪಿಸಿಕೊಂಡಿದ್ದನು. ಹಾಗಾಗಿ ಪೌಲನೇ ಆ ಈಜಿಪ್ಟಿನವನೆಂದು ಭಾವಿಸಿದನು.

*ಹಿಬ್ರಿಯ* (ವ. 40, 2): ಹೊಸ ಒಡಂಬಡಿಕೆಯ ಕಾಲದಲ್ಲಿ ಈ ಪಠ್ಯದಲ್ಲಿರುವ ಗ್ರೀಕ್ ಪದವು ಹಿಬ್ರಿಯ ಮತ್ತು ಅರಾಮಿಕ್ ಭಾಷೆಗಳೆರಡಕ್ಕೂ ಉಪಯೋಗಿಸಲ್ಪಟ್ಟಿದೆ. ಪೌಲನು ಬಹುಶಃ ಅರಾಮಿಕ್ ಭಾಷೆಯಲ್ಲಿ ಮಾತನಾಡಿರಬಹುದು, ಯಾಕೆಂದರೆ ಇದು ಪಾಲೆಸ್ತೀನಿನ ಯೆಹೂದ್ಯರ ಮಧ್ಯದಲ್ಲಿ ಸಾಮಾನ್ಯವಾಗಿ ಬಳಸಲ್ಪಡುವ ಭಾಷೆಯಾಗಿತ್ತು.

ಅಂಟೋನಿಯ ಗೋಪುರಕ್ಕೆ ನಡೆಸುವ ಮೆಟ್ಟಿಲುಗಳ ಮೇಲೆ ಪೌಲನು ದೇವಾಲಯದ ಅಂಗಳದಲ್ಲಿದ್ದ ಯೆಹೂದ್ಯ ಜನಸಮೂಹವನ್ನು ಉದ್ದೇಶಿಸಿ, ತನ್ನ ಜೀವನ, ತನ್ನ ಪರಿವರ್ತನೆ ಮತ್ತು ಅನ್ಯರ ಮಧ್ಯದಲ್ಲಿ ತಾನು ಸಾಕ್ಷಿಕರಿಸಲು ಯೇಸುವಿನ ಕರೆಯುವಿಕೆಯ ಕುರಿತಾದಂತಹ ತನ್ನ ಸಾಕ್ಷಿಯನ್ನು ಹೇಳಿದನು (22:1–21). ಪೌಲನ ಮಾನಸಾಂತರದ ಅನುಭವದ ಕುರಿತು ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ಲೂಕನು ದಾಖಲಿಸುತ್ತಿರುವುದು ಇದು ಎರಡನೆಯ ಬಾರಿಯಾಗಿದೆ. ಆತನು ಅಧ್ಯಾಯ 26 ರಲ್ಲಿ ಪೌಲನು ಅಗ್ರಿಪ್ಪ ರಾಜನ ಮುಂದೆ ಮಾತನಾಡುವಾಗ ಮೂರನೆಯ ಬಾರಿ ದಾಖಲಿಸುತ್ತಾನೆ. 9:1–19 ರ ಟಿಪ್ಪಣಿಯನ್ನು ಸಹ ನೋಡಿರಿ.

*ತಾರ್ಸ* (ವ. 39, 3): ತಾರ್ಸವು ರೋಮನ್ ಪ್ರಾಂತ್ಯವಾದ ಸಿಲಿಸಿಯದ ರಾಜಧಾನಿಯಾಗಿತ್ತು ಮತ್ತು ಹೊಸ ಒಡಂಬಡಿಕೆಯ ಕಾಲದಲ್ಲಿ ಇದರ ಜನಸಂಖ್ಯೆ 5 ಲಕ್ಷವಾಗಿತ್ತು. ಇದು ಮೆಡಿಟೆರೇನಿಯನ್ ಸಮುದ್ರದಿಂದ 15 ಕಿ.ಮೀ. ದೂರದಲ್ಲಿದ್ದ ಒಂದು ನದಿಯ ಬಳಿ ಸ್ಥಾಪಿತಸಲ್ಪಟ್ಟಿತ್ತು ಮತ್ತು ಇದು ಟಾರಸ್ ಪರ್ವತ ಶ್ರೇಣಿಗಳ ದಕ್ಷಿಣಕ್ಕೆ 40 ಕಿ.ಮೀ. ದೂರದಲ್ಲಿತ್ತು. ತಾರ್ಸದಿಂದ ಸಿರಿಯಾಕ್ಕೆ ಹೋಗುವ ರಸ್ತೆಯು ಸಿಲಿಸಿಯ ದ್ವಾರವನ್ನು ಹಾದು ಹೋಗುವಂತಿತ್ತು, ಅದು ಪರ್ವತಗಳ ನಡುವೆ

ಇದ್ದ ಒಂದೇ ಮುಖ್ಯ ಮಾರ್ಗವಾಗಿತ್ತು. ತಾರ್ಸವು ಪ್ರಾಮುಖ್ಯವಾದ ವಾಣಿಜ್ಯ ಕೇಂದ್ರವಾಗಿತ್ತು, ಅದು ಮಾತ್ರವಲ್ಲದೆ ಒಂದು ತತ್ವಶಾಸ್ತ್ರದ ಶಾಲೆ ಮತ್ತು ಪ್ರಖ್ಯಾತಿಯಾದ ವಿಶ್ವವಿದ್ಯಾಲಯವನ್ನು ಹೊಂದಿದ್ದು ಅದು ಒಂದು ವಿಧ್ಯಾಭ್ಯಾಸದ ಪಟ್ಟಣವೂ ಸಹ ಆಗಿತ್ತು.

*ಗಮಲಿಯೇಲ* (ವ. 3): ಈತನು ಹೊಸ ಒಡಂಬಡಿಕೆಯ ಕಾಲದಲ್ಲಿ ಅತೀ ಗೌರವವುಳ್ಳ ಯೆಹೂದ್ಯ ರಬ್ಬೀ ಆಗಿದ್ದನು. 5:34 ರ ಟಿಪ್ಪಣಿಯನ್ನೂ ಸಹ ನೋಡಿರಿ.

*ಆದರೆ ನನ್ನ ಕೂಡ ಮಾತನಾಡುತ್ತಿದ್ದ ಸ್ವರವು ಅವರಿಗೆ ಕೇಳಿಸಲಿಲ್ಲ* (ವ. 9): ಪೌಲನ ಜೊತೆಯಿದ್ದವರು ಶಬ್ಧವನ್ನು ಕೇಳಿದರು (9:7), ಆದರೆ ಆ ಸ್ವರವು ಏನು ಹೇಳಿತೆಂದು ಅವರಿಗೆ ಅರ್ಥವಾಗಲಿಲ್ಲ.

*ಅನನೀಯ* (ವ. 12): 9:10 ರ ಟಿಪ್ಪಣಿಯನ್ನು ನೋಡಿರಿ.

*ನೀತಿವಂತನನ್ನು ನೋಡುವುದಕ್ಕಾಗಿಯೂ* (ವ. 14): ಈ ಹೇಳಿಕೆಯು ಯೇಸು ಕ್ರಿಸ್ತನ ಕುರಿತು ಉಲ್ಲೇಖಿಸಲ್ಪಟ್ಟಿದೆ. ಪೌಲನಿಗೆ ತನ್ನನ್ನು ಪ್ರಕಟಪಡಿಸಿಕೊಂಡು ಆತನನ್ನು ಅನ್ಯರಿಗಾಗಿ ಒಬ್ಬ ಅಪೋಸ್ತಲನನ್ನಾಗಿ ಮಾಡಿದವನು ಪುನರುತ್ಥಾನ ಹೊಂದಿದ ಯೇಸುವೇ (ವ. 21, 26:15–18 ಮತ್ತು 1 ಕೊರಿ. 9:1 ನ್ನೂ ಸಹ ನೋಡಿರಿ).

## ಇ) ಪಠ್ಯ ಪ್ರಶ್ನೆಗಳು

1. ಈ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿರಿ ಯೆರೂಸಲೇಮ್, ತಾರ್ಸ ಮತ್ತು ದಮಸ್ಕ!
2. ಪೌಲನು ಜನಸಮೂಹದೊಂದಿಗೆ ಮಾತನಾಡಲು ಅಪ್ಪಣೆಯನ್ನು ಕೇಳಿದಾಗ ಸಹಸ್ರಾಧಿಪತಿಯು ಯಾಕೆ ಆಶ್ಚರ್ಯಪಟ್ಟನು?
3. ಪೌಲನು ಯಾರೆಂದು ಸಹಸ್ರಾಧಿಪತಿಯು ಭಾವಿಸಿದ್ದನು?
4. ಅನನೀಯನನ್ನು ಪೌಲನು ಹೇಗೆ ವರ್ಣಿಸಿದನು?
5. ಕರ್ತನು ಪೌಲನಿಗೆ ದೇವಾಲಯದಲ್ಲಿ ಏನೆಂದು ಹೇಳಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ರೋಮನ್ ಸಹಸ್ರಾಧಿಪತಿಗೆ ಪೌಲನು ತನ್ನ ಕೌಟುಂಬಿಕ ಹಿನ್ನಲೆಯ ಕುರಿತು ಯಾವ ಮಾಹಿತಿಯನ್ನು ನೀಡಿದನು? ಮತ್ತು ಜನಸಮೂಹದ ಮುಂದೆ ತನ್ನ ಸಾಕ್ಷಿಯಲ್ಲಿ ಯಾವ ಮಾಹಿತಿಯನ್ನು ನೀಡಿದನು? ಈ ವ್ಯತ್ಯಾಸಗಳಿಗೆ ಕಾರಣವೇನಿರಬಹುದು?

2. ನಾವು ನಮ್ಮ ವೈಯಕ್ತಿಕ ಸಾಕ್ಷಿಯನ್ನು ಹಂಚಿಕೊಳ್ಳುವಾಗ ಸಾಮಾನ್ಯವಾಗಿ ನಾವು ಹೇಳುವುದನ್ನು (ಮತ್ತು ಹೇಳುವ ರೀತಿಯನ್ನು) ನಮ್ಮ ಶ್ರೋತೃಗಳಿಗೆ ತಕ್ಕಂತೆ ಮರುರೂಪಿಸುತ್ತೇವೆ. ದೇವಾಲಯದ ಅಂಗಳದಲ್ಲಿ ಪೌಲನು ಸಾಕ್ಷಿಕರಿಸಿದಾಗ ಯಾವ ರೀತಿಯಲ್ಲಿ ಯೆಹೂದ್ಯರ ಜನಸಮೂಹಕ್ಕೆ ಅದನ್ನು ಮರುರೂಪಿಸಿದ್ದನ್ನು ನಾವು ಕಾಣುತ್ತೇವೆ?

3. ಪೌಲನು ಪರಿವರ್ತನೆಯಾದ ನಂತರ ಮೊದಲ ಬಾರಿಗೆ ಯೆರೂಸಲೇಮನ್ನು ಭೇಟಿ ನೀಡಿದ ಕುರಿತಾದ ಅಪೊಸ್ತಲರ ಕೃತ್ಯಗಳಲ್ಲಿರುವ ಎರಡು ಕಥೆಗಳನ್ನು ನಾವು ಹೋಲಿಸಿ ನೋಡುವಾಗ (ವ. 17–18 ಮತ್ತು 9:26–30 ನ್ನು ನೋಡಿರಿ), ಅವುಗಳು ವ್ಯತ್ಯಾಸವಾಗಿರುವುದನ್ನು ನಾವು ಕಾಣಬಹುದು. ಅವುಗಳ ನಡುವಿನ ಪ್ರಮುಖವಾದ ವ್ಯತ್ಯಾಸಗಳೇನು ಮತ್ತು ನೀವು ಅವುಗಳನ್ನು ಹೇಗೆ ವಿವರಿಸುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ದೇವಾಲಯದಲ್ಲಿ ಪೌಲನಿಗುಂಟಾದ ದರ್ಶನವು (ವ. 17–21) ಒಂದು ಸೂಕ್ಷ್ಮವಾದ ಅಧ್ಯಯನಕ್ಕೆ ಯೋಗ್ಯವಾದುದ್ದಾಗಿದೆ. ಪೌಲನು ದೇವಾಲಯದಲ್ಲಿ ಪ್ರಾರ್ಥಿಸುತ್ತಿದ್ದನು. ಆತನು ಪ್ರಾರ್ಥಿಸುತ್ತಿದ್ದಾಗ ಆತ್ಮಪರವಶನಾದನು ಮತ್ತು ಕರ್ತನು ತನ್ನೊಂದಿಗೆ ಮಾತನಾಡುತ್ತಿರುವುದನ್ನು ಕಂಡನು. ಆತನು ತಕ್ಷಣವೇ ಯೆರೂಸಲೇಮನ್ನು ಬಿಟ್ಟು ಹೋಗಬೇಕೆಂದು ಯೇಸು ಆತನಿಗೆ ಹೇಳಿದನು, ಯಾಕೆಂದರೆ ಅಲ್ಲಿದ್ದ ಯೆಹೂದ್ಯರು ಆತನು ಹೇಳಲಿಕ್ಕಿದ್ದ ಸುವಾರ್ತೆಯನ್ನು ಸ್ವೀಕರಿಸುತ್ತಿರಲಿಲ್ಲ. ಆದರೆ ಪೌಲನು ಕರ್ತನೊಂದಿಗೆ ತರ್ಕ ಮಾಡಿದನು. ತಾನು ಹಿಂಸಕನಾಗಿದ್ದ ಹಿನ್ನಲೆಯುಳ್ಳವನಾದ್ದರಿಂದ, ಯೆರೂಸಲೇಮಿನಲ್ಲಿರುವ ಯೆಹೂದ್ಯರಿಗೆ ಸುವಾರ್ತೆಯನ್ನು ಸಾರಲು ತಾನು ಬಹಳ ಸೂಕ್ತವಾದ ವ್ಯಕ್ತಿಯೆಂಬುದು ಪೌಲನ ವಾದವಾಗಿತ್ತು. ಆತನು ಸ್ತೆಫನನನ್ನು ಕಲ್ಲೆಸೆಯುವ ಸಮಯದಲ್ಲಿಯೂ ಆ ಸ್ಥಳದಲ್ಲಿ ಇದ್ದವನು. ನಂತರ ಕರ್ತನು ಪೌಲನಿಗೆ, 'ಹೋಗು, ನಾನು ಅನ್ಯಜನರ ಬಳಿಗೆ ನಿನ್ನನ್ನು ದೂರಪ್ರದೇಶಗಳಿಗೆ ಕಳುಹಿಸುವೆನು' ಎಂದನು.

1. ಪೌಲನು ಪ್ರಾರ್ಥಿಸುತ್ತಿರುವಾಗ ದರ್ಶನವನ್ನು ಕಂಡನು. ಆಗ ಯೇಸು ತನ್ನನ್ನು ಆತನಿಗೆ ಪ್ರಕಟಪಡಿಸಿ ಆತನ ಭವಿಷ್ಯದ ಸೇವೆಯ ಕುರಿತು ಆತನನ್ನು ನಿರ್ದೇಶಿಸಿದನು. ನಿಮ್ಮ ಕುರಿತು ಏನು? ನೀವು ಪ್ರಾರ್ಥನೆಯಲ್ಲಿ ಸಮಯವನ್ನು ಕಳೆಯುವಾಗ, ದೇವರು ತನ್ನನ್ನು ನಿಮಗೆ ಪ್ರಕಟಪಡಿಸಿಕೊಂಡು ಒಂದು ವಿಶೇಷವಾದ ರೀತಿಯಲ್ಲಿ ತನ್ನ ಚಿತ್ತವನ್ನು ನೀವು ಅರಿತುಕೊಳ್ಳುವಂತೆ ಮಾಡಿದ್ದಾನೋ? ನಿಮ್ಮ ಸಾಕ್ಷಿಯನ್ನು ಹಂಚಿಕೊಳ್ಳಿರಿ!

2. ಪೌಲನು ಕರ್ತನೊಂದಿಗೆ ತರ್ಕಮಾಡಿದನು! ಆತನು ಯೇಸು ತನಗೆ ಕೊಟ್ಟ ಸಂದೇಶವನ್ನು ತಕ್ಷಣವೇ ಸ್ವೀಕರಿಸಿಕೊಳ್ಳಲಿಲ್ಲ. ಅದಕ್ಕೆ ಬದಲಾಗಿ ಆತನು ತನ್ನ ಆಕ್ಷೇಪಣೆಯನ್ನು ದೇವರಿಗೆ ಸ್ಪಷ್ಟವಾಗಿ ತಿಳಿಸಿದನು. ನಿಮ್ಮ ಕುರಿತು ಏನು? ಕರ್ತನು ನಿನಗೆ ಮಾರ್ಗದರ್ಶಿಸುವಾಗ ಅದನ್ನು ಪ್ರಶ್ನಿಸುತ್ತಾ ಎಂದಾದರೂ ಆತನೊಂದಿಗೆ ತರ್ಕ ಮಾಡಿದ್ದೀರೋ? ನಿಮ್ಮ ಸಾಕ್ಷಿಯನ್ನು ಹಂಚಿಕೊಳ್ಳಿರಿ!

3. ಕೊನೆಯಲ್ಲಿ ಪೌಲನು ಯೇಸುವಿನ ನಿರ್ದೇಶನಗಳನ್ನು ಸ್ವೀಕರಿಸಿ ದೂರ ಪ್ರದೇಶದಲ್ಲಿದ್ದ ಅನ್ಯರ ಮಧ್ಯದಲ್ಲಿ ಸುವಾರ್ತೆಯನ್ನು ಸಾರಲು ಯೆರೂಸಲೇಮನ್ನು ಬಿಟ್ಟುಹೋದನು. ಆತನು ಕೊನೆಯಲ್ಲಿ ವಿಧೇಯನಾದನು – ಆ ವಿಧೇಯತೆಯು ಹಿಂಸೆ ಮತ್ತು ಸಂಕಷ್ಟಕ್ಕೆ ನಡೆಸಿದಾಗ್ಯೂ ವಿಧೇಯನಾದನು. ನಿಮ್ಮ ಕುರಿತು ಏನು? ನಿಮ್ಮ ಜೀವತದಲ್ಲಿ ದೇವರ ಚಿತ್ತಕ್ಕೆ ಸರಿಯಾಗಿ ಪರಿಪೂರ್ಣವಾದ ಯೋಜನೆಯಲ್ಲಿದ್ದೇನೆ ಎಂದು ನೀವು ಭಾವಿಸುತ್ತೀರೋ? ಸಮಸ್ಯೆ ಮತ್ತು ಸಂಕಷ್ಟಗಳ ಬದಲಾಗಿಯೂ – ನೀವು ದೇವರ ಕರೆಯುವಿಕೆಗೆ ವಿಧೇಯರಾಗಿದ್ದೀರೋ? ನಿಮ್ಮ ಸಾಕ್ಷಿಯನ್ನು ಹಂಚಿಕೊಳ್ಳಿರಿ!

### ಊ) ಉಪದೇಶಿಸು ಮತ್ತು ಬೋಧಿಸು!

ಅ. ಕೃ. 22:6–16 ರ ಆಧಾರದ ಮೇಲೆ ***ಕರ್ತನೇ, ನಾನೇನು ಮಾಡಬೇಕು?*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಹೊರರೇಖೆ ಈ ರೀತಿಯಾಗಿರಬಹುದು:

1. ಸಂಕ್ಷಿಪ್ತವಾದ ಪೀಠಿಕೆ: ಪೌಲನು ಮತ್ತು ದಮಸ್ಕದ ರಸ್ತೆಯಲ್ಲಿ ಆತನಿಗೆ ಉಂಟಾದ ಪರಿವರ್ತನೆ
2. ಯೇಸು ಕ್ರಿಸ್ತನಿಗೆ ಪೌಲನ ಪ್ರಶ್ನೆ: 'ಕರ್ತನೇ, ನಾನೇನು ಮಾಡಬೇಕು?'
3. ಪೌಲನಿಗೆ ಯೇಸು ಕ್ರಿಸ್ತನ ಎರಡು ಉತ್ತರಗಳು:
   1) ದೇವಜನರ ಬಳಿಗೆ ಹೋಗು! ಅವರು ನಿನಗೆ ಸಹಾಯಮಾಡುವರು! ನೀನು ಸಭೆಯ ಒಂದು ಭಾಗವಾಗಬೇಕು!
      - ಅಲ್ಲಿ ನೀನು ನಿನ್ನ ಕುರುಡುತನದಿಂದ ಸ್ವಸ್ಥತೆಯನ್ನು ಹೊಂದಿಕೊಳ್ಳುವಿ! ಸಭೆಯಲ್ಲಿ ಶಾರೀರಿಕ ಸ್ವಸ್ಥತೆಯಿದೆ!
      - ಅಲ್ಲಿ ನೀನು ಆತ್ಮೀಕವಾದ ದೃಷ್ಟಿಕೋನವನ್ನು ಹೊಂದಿಕೊಳ್ಳುವಿ! ಅಲ್ಲಿ ನೀನು ದೇವರ ಮತ್ತು ಆತನ ವಾಕ್ಯಗಳ ಕುರಿತು ಬೋಧಿಸಲ್ಪಡುವಿ! ಅಲ್ಲಿ ನೀನು ದೇವರಿಗೆ ಮೆಚ್ಚಿಕೆಯಾದ ಜೀವನವನ್ನು ಹೇಗೆ ಜೀವಿಸಬಹುದು ಎಂಬುದನ್ನು ಕಲಿತುಕೊಳ್ಳುವಿ!
      - ಅಲ್ಲಿ ನೀನು ನಿನ್ನ ಕೆಲಸವನ್ನು ಹೊಂದಿಕೊಳ್ಳುವಿ! ಅಲ್ಲಿ ನೀನು ನಿನ್ನ ಉಳಿದ ಜೀವಮಾನದ ಕುರಿತು ದೇವರ ಯೋಜನೆಯನ್ನು ತಿಳಿದುಕೊಳ್ಳುವಿ!
   2) ಎದ್ದೇಳು! ತಡಮಾಡಬೇಡ!
      - ಯೇಸುವಿನ ನಾಮವನ್ನು ಕರೆ! ಆತನನ್ನು ನಿನ್ನ ಸ್ವಂತ ರಕ್ಷಕನಾಗಿ ಸ್ವೀಕರಿಸು!
      - ದೀಕ್ಷಾಸ್ನಾನವನ್ನು ಹೊಂದು!
      - ಸಭೆಗೆ ಸೇರಿಕೋ – ಅದು ನಿನ್ನ ಆತ್ಮೀಕ ಮನೆಯಾಗಿದೆ!

# ಪಾಠ 60. ರೋಮನ್ ಪೌರನಾದ ಪೌಲನು, 22:22–29

## ಅ) ವಾಕ್ಯಭಾಗ

ಆತನನ್ನು ಕೊಲ್ಲಿರಿ ಎಂದು ಯೆಹೂದ್ಯ ಜನಸಮೂಹವು ಕೂಗುತ್ತಾ ಅವರು ಪೌಲನ ಸಾಕ್ಷಿಯನ್ನು ಅಡ್ಡಿಪಡಿಸಿದರು. ರೋಮನ್ ಸಹಸ್ರಾಧಿಪತಿಯು ಪೌಲನನ್ನು ಕೋಟೆಯೊಳಗೆ ಒಯ್ದು ಕೊರಡೆಗಳಿಂದ ಹೊಡೆದು ವಿಚಾರಿಸಬೇಕೆಂದು ಆಜ್ಞಾಪಿಸಿದನು. ಅವರು ಕೊರಡೆಗಳಿಂದ ಹೊಡೆಯಲು ಸಿದ್ಧಗೊಳ್ಳುತ್ತಿರುವಾಗ ಪೌಲನು ತಾನೊಬ್ಬ ರೋಮನ್ ಪ್ರಜೆ ಎಂಬುದನ್ನು ಬಹಿರಂಗಪಡಿಸಿದನು. ಇದನ್ನು ಕೇಳಿದ ಸಹಸ್ರಾಧಿಪತಿಯು ಭಯಪಟ್ಟನು.

## ಆ) ಟಿಪ್ಪಣಿ

*ಕೊರಡೆಗಳಿಂದ ಹೊಡೆದು* (ವ. 24): ಫಿಲಿಪ್ಪಿಯಲ್ಲಿ ಪೌಲ ಮತ್ತು ಸೀಲರನ್ನು ಛಡಿಏಟುಗಳಿಂದ ಹೊಡೆದರು (16:22–24). ಈ ಬಾರಿ ಯೆರೂಸಲೇಮಿನಲ್ಲಿ ಕೊರಡೆಗಳಿಂದ (ಚರ್ಮದ ಪಟ್ಟಿಯಿಂದ ಮಾಡಲ್ಪಟ್ಟ ಚಾವಟಿ, ಅದರ ತುದಿಯಲ್ಲಿ ಎಲುಬಿನ ಅಥವಾ ಕಬ್ಬಿಣದ ಚೂರುಗಳನ್ನು ಕಟ್ಟಿರುತ್ತಿದ್ದರು) ಹೊಡೆಯಬೇಕೆಂದು ಸಹಸ್ರಾಧಿಪತಿಯು ಯೋಜಿಸಿದನು. ಇದು ಗುಲಾಮರು ಮತ್ತು ವಿದೇಶಿಯರು ತಪ್ಪೊಪ್ಪಿಕೊಳ್ಳುವಂತೆ ಒತ್ತಾಯಿಸಲು ಬಳಸಲಾಗುತ್ತಿದ್ದ ಚಿತ್ರಹಿಂಸೆಯ ಒಂದು ಭಯಂಕರ ಉಪಕರಣವಾಗಿತ್ತು. ಒಬ್ಬ ಮನುಷ್ಯನು ಕೊರಡೆಗಳಿಂದ ಹೊಡೆಯಲ್ಪಡುವಾಗ ಆತನು ಸುಲಭವಾಗಿ ಸಾಯಬಹುದಾಗಿತ್ತು. ಒಬ್ಬ ರೋಮನ್ ಪ್ರಜೆಯನ್ನು ಕೊರಡೆಗಳಿಂದ ಹೊಡೆಯುವ (ಅಥವಾ ಇತರೆ ಯಾವುದೇ ಕೀಳುಮಟ್ಟದ ಶಿಕ್ಷೆಗಳನ್ನು ವಿಧಿಸುವ, ಉದಾಹರಣೆಗೆ ಕ್ರೂಜೆಗೆ ಹಾಕುವಂತಹ) ಅನುಮತಿ ಇರಲಿಲ್ಲ (ವ. 25 ನ್ನು ನೋಡಿರಿ).

*ಪೌರತ್ವ* (ವ. 28): ರೋಮನ್ ಪೌರತ್ವವನ್ನು ಹೊಂದಲು ನಾಲ್ಕು ಮಾರ್ಗಗಳಿದ್ದವು: 1) ಒಬ್ಬನು ಯಾವುದಾದರೂ ಪ್ರಾಮುಖ್ಯವಾದ ಕಛೇರಿಯಲ್ಲಿದ್ದರೆ ಅದನ್ನು ಹಕ್ಕಿನಿಂದ ಹೊಂದಬಹುದು, 2) ಒಬ್ಬನು ರೋಮ್ ಸಾಮ್ರಾಜ್ಯಕ್ಕೆ ಅತ್ಯುತ್ತಮ ಸೇವೆ ಸಲ್ಲಿಸಿದ್ದಕ್ಕೆ ಬಹುಮಾನವಾಗಿ ಅದನ್ನು ಪಡೆಯಬಹುದಾಗಿತ್ತು, 3) ರೋಮನ್ ಆಡಳಿತದಲ್ಲಿದ್ದ ಯಾವುದಾದರೂ ಭ್ರಷ್ಟ ಅಧಿಕಾರಿಗೆ ದೊಡ್ಡ ಬೆಲೆಯ ಲಂಚವನ್ನು ಕೊಟ್ಟು ಅದನ್ನು ಪಡೆಯಬಹುದು (ಆ ಸಹಸ್ರಾಧಿಪತಿಯೂ ಇದನ್ನೇ ಮಾಡಿರಬಹುದು – ಆತನ ಹೆಸರು ಲೂಸಿಯಸ್, 23:26 ಮತ್ತು 24:22 ನ್ನು ನೊಡಿರಿ, ಆತನು ಒಬ್ಬ ಗ್ರೀಕ್ ಮೂಲದವನೆಂದು ಅದು ವ್ಯಕ್ತಪಡಿಸುತ್ತದೆ ಮತ್ತು ಕ್ಲಾಡಿಯಸ್ ಎಂಬ ಆತನ ಇನ್ನೊಂದು ಹೆಸರು ಚಕ್ರವರ್ತಿಯಾದ ಕ್ಲಾಡಿಯಸ್‌ನ ಆಡಳಿತದ ಅಡಿಯಲ್ಲಿ ತನ್ನ ರೋಮನ್ ಪೌರತ್ವವನ್ನು ಹೊಂದಿದನೆಂದು ತಿಳಿಸುತ್ತದೆ), 4) ಇಲ್ಲವಾದರೆ, ಒಬ್ಬನು ಪೌಲನಂತೆ ರೋಮನ್ ಪ್ರಜೆಗಳ ಕುಟುಂಬದಲ್ಲಿ ಜನಿಸಬಹುದಿತ್ತು. ಪೌಲನ ಕುಟುಂಬವು ಹೇಗೆ ರೋಮನ್ ಪೌರತ್ವವನ್ನು ಹೊಂದಿಕೊಂಡಿತೆಂಬುದು ತಿಳಿದಿಲ್ಲ.

## ಇ) ಪಠ್ಯ ಪ್ರಶ್ನೆಗಳು

1. ಸಹಸ್ರಾಧಿಪತಿಯು ಪೌಲನನ್ನು ಕೊರಡೆಗಳಿಂದ ಹೊಡೆದು ವಿಚಾರಿಸಬೇಕೆಂದು ಯಾಕೆ ಆಜ್ಞಾಪಿಸಿದನು?
2. ಪೌಲನ ರೋಮನ್ ಪೌರತ್ವದ ಮಾಹಿತಿಯನ್ನು ತಿಳಿದ ಶತಾಧಿಪತಿಯು ಏನು ಮಾಡಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನ ಸಾಕ್ಷಿಯನ್ನು ಕೇಳಿದಾಗ ಯೆಹೂದ್ಯರ ಗುಂಪು ರೋಷವುಳ್ಳವರಾಗಿ, 'ಇಂಥವನನ್ನು ಭೂಲೋಕದಿಂದ ತೊಲಗಿಸಿರಿ! ಇವನು ಜೀವಿಸುವುದಕ್ಕೆ ಯೋಗ್ಯನಲ್ಲ!' ಎಂದು ಕೂಗಿದರು. ಅವರ ಈ ತೀಕ್ಷ್ಣವಾದ ಪ್ರತಿಕ್ರಿಯೆಗೆ ಕಾರಣವೇನಾಗಿರಬಹುದು?
2. ಪೌಲನು ತಾನೊಬ್ಬ ರೋಮನ್ ಪೌರನೆಂಬುದನ್ನು ಸಹಸ್ರಾಧಿಪತಿಗೆ ತಕ್ಷಣವೇ ತಿಳಿಸಲಿಲ್ಲ. ಅದಕ್ಕೆ ಕಾರಣವೇನಾಗಿರಬಹುದು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಪೌಲನು ತಾನೊಬ್ಬ ರೋಮನ್ ಪೌರನೆಂಬುದನ್ನು ಶತಾಧಿಪತಿಗೆ ತಿಳಿಸುವುದರ ಮೂಲಕ ಕೊರಡೆಗಳಿಂದ ಹೊಡೆಸಿಕೊಳ್ಳುವದನ್ನು (ಅಂದರೆ, ತನ್ನನ್ನು ಕೊಲ್ಲಬಹುದಾದ ಶಿಕ್ಷೆಯಿಂದ ಅಥವಾ ಜೀವನವೆಲ್ಲಾ ಅಂಗಹೀನನ್ನಾಗಿ ಮಾಡಬಹುದಾದ ಶಿಕ್ಷೆಯಿಂದ) ತಪ್ಪಿಸಿಕೊಂಡನು.

1. ಪೌಲನು ಈ ರೀತಿಯಾಗಿ ತನ್ನ 'ಶಿಫಾರಸ್ಸನ್ನು' ಉಪಯೋಗಿಸಿಕೊಂಡಿದ್ದು ಸರಿಯಾದದ್ದೋ? ಅಥವಾ ಆತನು ಕರ್ತನಿಗಾಗಿ ಸುಮ್ಮನೆ ಶಿಕ್ಷೆಯನ್ನು ಅನುಭವಿಸಬೇಕಿತ್ತೋ? ನೀವು ಪೌಲನ ಸ್ಥಳದಲ್ಲಿದ್ದಿದ್ದರೆ ಏನು ಮಾಡುತ್ತಿದ್ದಿರಿ? ಹಂಚಿಕೊಳ್ಳಿರಿ!
2. ಇಕ್ಕಟ್ಟಾದ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ನೀವು 'ಶಿಫಾರಸ್ಸುಗಳನ್ನು' ಉಪಯೋಗಿಸಿದ್ದರ ಕುರಿತು ನಿಮ್ಮ ಸ್ವಂತ ಅನುಭವವನ್ನು ಹಂಚಿಕೊಳ್ಳಿರಿ! ಉದಾಹರಣೆಗೆ ನಿಮಗೆ ತಿಳಿದಿರುವ ಪ್ರಭಾವಶಾಲಿಯಾದ ವ್ಯಕ್ತಿಯ ಹೆಸರನ್ನು ಹೇಳುವುದರ ಮೂಲಕ ಅಥವಾ ನಿಮ್ಮ ಕೌಟುಂಬಿಕ ಹಿನ್ನಲೆ, ನಿಮ್ಮ ವಿದ್ಯಾಭ್ಯಾಸದ ಅರ್ಹತೆ, ಸಮಾಜದಲ್ಲಿ ನಿಮಗಿರುವ ಸ್ಥಾನಮಾನವನ್ನು ಹೇಳುವುದರ ಮೂಲಕ?

# ಪಾಠ 61. ನ್ಯಾಯಸಭೆಯ ಮುಂದೆ, 22:30–23:11

## ಅ) ವಾಕ್ಯಭಾಗ

ಮರುದಿನ ಸಹಸ್ರಾಧಿಪತಿಯು ಯೆಹೂದ್ಯ ನಾಯಕರುಗಳಿಗೆ, ಸದ್ದುಕಾಯರನ್ನೂ ಮತ್ತು ಫರಿಸಾಯರನ್ನೂ ಒಳಗೊಂಡು, ಒಂದು ಸಭೆಗಾಗಿ ಕೂಡಿಬರಬೇಕೆಂದು ಅಪ್ಪಣೆ ಮಾಡಿದನು ಮತ್ತು ನಂತರ ಆತನು ಪೌಲನನ್ನು ತಂದು ಅವರ ಎದುರಿನಲ್ಲಿ ನಿಲ್ಲಿಸಿದನು. ಪೌಲನು ಮಾತನಾಡಲು ಪ್ರಾರಂಭಿಸಿದನು, ಆಗ ಪ್ರಧಾನ ಯಾಜಕನು ಕೋಪಗೊಂಡು ಪೌಲನ ಬಳಿ ನಿಂತಿದ್ದವರಿಗೆ ಅವನ ಬಾಯಿಗೆ ಹೊಡೆಯಬೇಕೆಂದು ಆಜ್ಞಾಪಿಸಿದನು. ಪೌಲನು ಆತನನ್ನು ಗದರಿಸಿದನು, ಆದರೆ ಪ್ರಧಾನಯಾಜಕನನ್ನು ಅವಮಾನಪಡಿಸಬಾರದೆಂದು ಹೇಳಲ್ಪಟ್ಟನು. ಪೌಲನು ಪುನರುತ್ಥಾನದ ಕುರಿತು ಮಾತನಾಡಲು ಪ್ರಾರಂಭಿಸಿದಾಗ, ಯೆಹೂದ್ಯರ ಎರಡು ಗುಂಪುಗಳ ನಡುವೆ ಒಂದು ವಿವಾದವು ಎದ್ದಿತು. ಪರಿಸ್ಥಿತಿಯು ಎಷ್ಟು ಹಿಂಸಾತ್ಮಕವಾಯಿತೆಂದರೆ ಸಹಸ್ರಾಧಿಪತಿಯು ಪೌಲನನ್ನು ಬಿಡಿಸಿ ಕೋಟೆಯೊಳಗೆ ಕರೆತಂದನು. ರಾತ್ರಿ ವೇಳೆಯಲ್ಲಿ ಪೌಲನು ಯೇಸುವಿನ ಉತ್ತೇಜನಪೂರ್ವ ದರ್ಶನವನ್ನು ಕಂಡನು.

## ಆ) ಟಿಪ್ಪಣಿ

*ನ್ಯಾಯಸಭೆಯೂ* (ವ. 30) 5:21 ರ ಟಿಪ್ಪಣಿಯನ್ನು ನೋಡಿರಿ.

*ಅನನೀಯನು* (ವ. 2): ಅನನೀಯನು ಕ್ರಿ.ಶ. 47–59 ರಲ್ಲಿ ಪ್ರಧಾನಯಾಜಕನಾಗಿದ್ದು ತನ್ನ ಕ್ರೂರತನ ಮತ್ತು ಬ್ರಷ್ಟತನಕ್ಕೆ ಪ್ರಸಿದ್ಧಿಯಾಗಿದ್ದನು. ಕೆಲವು ವರ್ಷಗಳ ನಂತರ ಉಂಟಾದ ಯೆಹೂದ್ಯರ ದಂಗೆಯ ಸಂದರ್ಭದಲ್ಲಿ, ಅನನೀಯನು ತನ್ನ ಸ್ವಂತ ಜನರಿಂದಲೇ ಕೊಲ್ಲಲ್ಪಟ್ಟನು.

*ಸುಣ್ಣಬಳಿದ ಗೋಡೆಯೇ* (ವ. 3): ಇದು 'ನೀನೊಬ್ಬ ಕಪಟಿ' ಎಂಬ ಅರ್ಥ ಕಲ್ಪಿಸುವ ಅವಮಾನಕರವಾದ ಹೇಳಿಕೆಯಾಗಿದೆ.

*ಸಹೋದರರೇ, ಪ್ರಧಾನಯಾಜಕನೆಂಬುದು ನನಗೆ ತಿಳಿಯಲಿಲ್ಲ* (ವ. 5): ಪೌಲನ ಮಾತುಗಳನ್ನು ವ್ಯತ್ಯಾಸವಾದ ರೀತಿಗಳಲ್ಲಿ ಅರ್ಥವಿವರಿಸಬಹುದು. ಪೌಲನು ಅಲ್ಲಿ ವ್ಯಂಗ್ಯವನ್ನು ಉಪಯೋಗಿಸಿದನೆಂದು ನಾನು ಆಲೋಚಿಸುತ್ತೇನೆ, ಅಂದರೆ ಒಬ್ಬ ನಿಜವಾದ ಪ್ರಧಾನಯಾಜಕನು ನ್ಯಾಯಸಭೆಯ ಮುಂದೆ ನಿಂತಿರುವ ಒಬ್ಬ ವ್ಯಕ್ತಿಯ ಬಾಯಿಯ ಮೇಲೆ ಹೊಡೆಯಲು ಆಜ್ಞಾಪಿಸುವುದರ ಮೂಲಕ ಧರ್ಮಶಾಸ್ತ್ರವನ್ನು ಉಲ್ಲಂಘಿಸುವುದಿಲ್ಲವೆಂದು ಅರ್ಥೈಸಿದನು.

*ಸದ್ದುಕಾಯರು ... ಫರಿಸಾಯರು* (ವ. 6): ಸದ್ದುಕಾಯರು ಪುನರುತ್ಥಾನ, ದೇವದೂತರು ಮತ್ತು ಆತ್ಮಗಳಲ್ಲಿ ನಂಬಿಕೆಯಿಡದವರಾಗಿದ್ದರು. 4:1 ಮತ್ತು 5:34 ರ ಟಿಪ್ಪಣಿಯನ್ನೂ ನೋಡಿರಿ. ಫರಿಸಾಯರು ಯೆಹೂದ ಧರ್ಮನಿಷ್ಠ ಮತ್ತು ಪ್ರತ್ಯೇಕಿಸಲ್ಪಟ್ಟ ಗುಂಪಿನವರಾಗಿದ್ದರು, ಇವರು

ಮೋಶೆಯ ಧರ್ಮಶಾಸ್ತ್ರವನ್ನು ಮತ್ತು ಬರವಣಿಗೆಯಲ್ಲಿಲ್ಲದ 'ಹಿರಿಯರ ಸಂಪ್ರದಾಯಗಳನ್ನು' ಕಟ್ಟುನಿಟ್ಟಾಗಿ ಪಾಲಿಸುವವರಾಗಿದ್ದರು.

## ಇ) ಪಠ್ಯ ಪ್ರಶ್ನೆಗಳು

1. ಸಹಸ್ರಾಧಿಪತಿಯು ಪೌಲನನ್ನು ಯಾಕೆ ಮಹಾಯಾಜಕನ ಮತ್ತು ನ್ಯಾಯಸಭೆಯವರ ಮುಂದೆ ಕರೆತಂದನು?
2. ಫರಿಸಾಯರು ಮತ್ತು ಸದ್ದುಕಾಯರು ಹೊಡೆದಾಡುವಂತೆ ಮಾಡಿದ ಸಂಗತಿ ಏನು?
3. ಮರುದಿನ ರಾತ್ರಿ ಯೇಸು ಪೌಲನಿಗೆ ದರ್ಶನದಲ್ಲಿ ಏನು ಹೇಳಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅನನೀಯನು ಬಳಿಯಲ್ಲಿ ನಿಂತಿದ್ದವರಿಗೆ ಪೌಲನ ಬಾಯಿಯ ಮೇಲೆ ಹೊಡೆಯಲು ಆಜ್ಞಾಪಿಸುವಷ್ಟು ಕೋಪ ಯಾಕೆ ಮಾಡಿಕೊಂಡನೆಂದು ನೀವು ಭಾವಿಸುತ್ತೀರಿ?
2. ಪೌಲನು ಈಗ ಒಬ್ಬ ವಿಶ್ವಾಸಿಯಾಗಿದ್ದಾಗ್ಯೂ ತಾನೊಬ್ಬ ಫರಿಸಾಯನೆಂದು ಹೇಳಿಕೊಂಡಿದ್ದು ಸರಿಯಾದದ್ದೋ?
3. ಸಹಸ್ರಾಧಿಪತಿಯು ಪೌಲನನ್ನು ಪುನಃ ಕೋಟೆಯೊಳಗೆ ಕರೆದುಕೊಂಡು ಹೋದಾಗ ಆತನಿಗೆ ಹೇಗನ್ನಿಸಿರಬಹುದೆಂದು ನೀವು ಆಲೋಚಿಸುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ಕಥೆಯಲ್ಲಿ ಪೌಲನು ಸದ್ದುಕಾಯರ ಮತ್ತು ಫರಿಸಾಯರ ನಡುವಿನ ವ್ಯತ್ಯಾಸವನ್ನು ಬಳಸಿ ಅವರಿಬ್ಬರ ನಡುವೆ ಜಗಳ ಎಬ್ಬಿಸಿದನು, ಆ ಜಗಳವು ವಿಚಾರಣೆಯನ್ನು ಕೊನೆಗಾಣಿಸಿತು. ಪೌಲನು ಇದನ್ನು ಉದ್ದೇಶಪೂರ್ವಕವಾಗಿ ಮಾಡಿದನೆಂದು ಲೂಕನು ತಿಳಿಸುತ್ತಿರುವಂತೆ ಕಾಣುತ್ತದೆ (ವ. 6). ಆ ಗಲಭೆಯ ಪರಿಣಾಮವಾಗಿ ಪೌಲನು ಮತ್ತೊಮ್ಮೆ ಸೆರೆಯಾದನು.

1. (ಪರಿಣಾಮಗಳನ್ನು ಪರಿಗಣಿಸುವುದಾದರೆ) ಪೌಲನು ಮಾಡಿದಂತಹ ಕಾರ್ಯವು ಜಾಣ್ಮೆಯುಳ್ಳದ್ದೆಂದು ನೀವು ಆಲೋಚಿಸುತ್ತೀರೋ? ಯಾಕೆ – ಯಾಕೆ ಇಲ್ಲ?
2. ಪೌಲನು ಒಬ್ಬ ಅಪೊಸ್ತಲನಾಗಿ ಮತ್ತು ಒಬ್ಬ ದೊಡ್ಡ ಸಭಾನಾಯಕನಾಗಿ ಹೀಗೆ ಮಾಡಿದ್ದು ಸೂಕ್ತವಾದ್ದದೆಂದು ನೀವು ಆಲೋಚಿಸುತ್ತೀರೋ? ಯಾಕೆ – ಯಾಕೆ ಇಲ್ಲ?
3. ನಿಮ್ಮ (ಅಥವಾ ನಿಮ್ಮ ಸಭಾಪಾಲಕರ ಅಥವಾ ಸಭಾಹಿರಿಯರ) ಕುರಿತು ಏನು? ನೀವು ಎಂದಾದರೂ 'ಶತ್ರುಗಳ ಗುಂಪಿನಲ್ಲಿ' ಗೊಂದಲವನ್ನುಂಟುಮಾಡಲು ಉದ್ದೇಶಪೂರ್ವಕವಾಗಿ ಕೆಲವು ಸಂಗತಿಗಳನ್ನು ಹೇಳಿದ ಪರಿಸ್ಥಿತಿಯನ್ನು ಅನುಭವಿಸಿದ್ದೀರೋ? ನಿಮ್ಮ ಕಥೆಯನ್ನು ಹಂಚಿಕೊಳ್ಳಿರಿ!

4. ದಕ್ಷಿಣ ಭಾರತದಲ್ಲಿರುವ ವಿಶ್ವಾಸಿಗಳು ಹೀಗೆ ಮಾಡುವುದು ಒಳ್ಳೆಯ ಸಂಗತಿಯೋ? ಇದು ಅತೀ ಅಪಾಯಕರವಾದುದ್ದೋ? ಹೀಗೆ ಮಾಡುವಂತಹದ್ದು ಅನೈತಿಕವಾದುದ್ದೋ (ಅಥವಾ ಪ್ರಾಪಂಚಿಕವಾದುದ್ದೋ)? ಯಾಕೆ – ಯಾಕೆ ಇಲ್ಲ?

## ಊ) ಉಪದೇಶಿಸು ಮತ್ತು ಬೋಧಿಸು!

ಅ. ಕೃ. 23:11 ನ್ನು ಆಧರಿಸಿ ***ಆದರಣೆಯ ಮಾತುಗಳು*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಹೊರರೇಖೆಯು ಈ ರೀತಿಯಾಗಿರಲಿ (1 ನೇ ಅಂಶದ ಮೇಲೆ ಹೆಚ್ಚಿನ ಸಮಯವನ್ನು ಕಳೆಯಬೇಡಿರಿ, 2–4 ನೇ ಅಂಶಗಳ ಮೇಲೆ ಹೆಚ್ಚು ಒತ್ತುನೀಡಿರಿ!):

1. ಹಿನ್ನಲೆ:
   1) ಪೌಲನು ಯೆರೂಸಲೇಮಿನಲ್ಲಿ ಅನ್ಯಸಭೆಗಳಿಂದ ಸಂಗ್ರಹಿಸಲ್ಪಟ್ಟ ಉದಾರವಾದ ಪ್ರೀತಿಯ ಕಾಣಿಕೆಯನ್ನು ಯೆರೂಸಲೇಮಿನ ಸಭೆಯಲ್ಲಿದ್ದ ಬಡವರ ಸಹಾಯಕ್ಕಾಗಿ ತಂದಿದ್ದಾನೆ ಮತ್ತು ಅನ್ಯರ ಮಧ್ಯದಲ್ಲಿ ಮಾಡಿದ ಸೇವೆಯ ಅದ್ಭುತವಾದ ವರದಿಯನ್ನು ಸಭಾನಾಯಕರುಗಳ ಮುಂದೆ ಸಲ್ಲಿಸುತ್ತಿದ್ದಾನೆ.

   2) ಚದುರಿಹೋಗಿದ್ದ ಯೆಹೂದ್ಯ ವಿಶ್ವಾಸಿಗಳನ್ನು ಮೋಶೆಯ ಧರ್ಮಶಾಸ್ತ್ರದಿಂದಲೂ ಮತ್ತು ಯೆಹೂದ್ಯ ಸಂಪ್ರದಾಯದಿಂದಲೂ ದೂರ ನಡೆಸಿದ್ದಾನೆ ಎಂದು ಆಪಾದಿಸುತ್ತಾ ಯೆಹೂದ್ಯ ವಿಶ್ವಾಸಿಗಳು ಪೌಲನ ಮೇಲೆ ಕೋಪವುಳ್ಳವರಾಗಿದ್ದಾರೆ.

      - ಆದರೆ ಪೌಲನು ತಾನೇ ಶುದ್ಧಾಚಾರಕ್ಕೆ ಒಳಗಾಗಿ ಮತ್ತು ತನ್ನೊಂದಿಗಿದ್ದ ನಾಲ್ಕು ಪುರುಷರ ಶುದ್ಧೀಕರಣದ ವೆಚ್ಚವನ್ನು ತಾನೇ ಭರಿಸುವುದರ ಮೂಲಕ ತಾನು ಯೆಹೂದ್ಯ ಆಚಾರಗಳಿಗೆ ನಂಬಿಗಸ್ತನಾಗಿದ್ದನೆಂಬುದನ್ನು ತೋರಿಸಿಕೊಟ್ಟನು.

   3) ಪೌಲನ ಮೇಲೆ ಯೆಹೂದ್ಯರು ಕೋಪಗೊಂಡರು,

      - ದೇವಾಲಯದೊಳಗೆ ತ್ರೋಫಿಮನನ್ನು ಕರೆತಂದು ಅದನ್ನು ಅಪವಿತ್ರಗೊಳಿಸಿದ್ದಾನೆಂದು ಆಪಾದಿಸಿದರು: ಆದರೆ ಈ ಆಪಾದನೆಯು ಸಂಪೂರ್ಣವಾಗಿ ಸುಳ್ಳಾದದ್ದು!

      - ಯೆಹೂದ್ಯರ, ಮೋಶೆಯ ಧರ್ಮಶಾಸ್ತ್ರದ ಮತ್ತು ದೇವಾಲಯದ ವಿರುದ್ಧ ದೂಷಣೆ ಮಾಡಿದನೆಂದು ಆಪಾದಿಸಿದರು: ಆದರೆ ಈ ಅಪಾದನೆಯು ತಪ್ಪು ತಿಳುವಳಿಕೆಯಿಂದ ಉಂಟಾದದ್ದು!

   4) ಯೆಹೂದ್ಯ ಜನಸಮೂಹವು ಪೌಲನನ್ನು ಕೊಲ್ಲಬೇಕೆಂದು ಪ್ರಯತ್ನಿಸಿತು – ಆದರೆ ರೋಮನ್ ಸಹಸ್ರಾಧಿಪತಿಯಾದ ಕ್ಲಾಡಿಯಸ್ ಲೂಸಿಯಸ್‌ನು ಎರಡು ಬಾರಿ ಆತನನ್ನು ಪಾರು ಮಾಡಿದನು, ಆದರೂ ಕೊನೆಯಲ್ಲಿ ಆತನನ್ನು ಸೆರೆಯಲ್ಲಿರಿಸಬೇಕಾಯಿತು!

   5) ಯೆಹೂದ್ಯ ನಾಯಕರುಗಳು (ಸದ್ದುಕಾಯರು ಮತ್ತು ಫರಿಸಾಯರು) ತಮ್ಮ ಜಗಳದ ಮಧ್ಯದಲ್ಲಿ ಪೌಲನನ್ನು ಹರಿದು ತುಂಡು ಮಾಡಬೇಕೆಂದು ಪ್ರಯತ್ನಿಸಿದರು (23:10) – ಆದರೆ ಆತನು ಮತ್ತೊಮ್ಮೆ ರೋಮನ್ ಸಹಸ್ರಾಧಿಪತಿಯಿಂದ ರಕ್ಷಿಸಲ್ಪಟ್ಟನು.

2. ಹಾಗಾಗಿ ಪೌಲನು ಈಗ ದೇವಾಲಯದ ಅಂಗಳದ ವಾಯುವ್ಯ ದಿಕ್ಕಿನಲ್ಲಿದ್ದ ಅಂಟೋನಿಯ ಗೋಪುರದಲ್ಲಿ ಪುನಃ ಬಂಧಿಯಾಗಿದ್ದಾನೆ. ಆತನು ಯಾವ ರೀತಿಯ ಅನುಭವಪಟ್ಟಿರಬಹುದು?
   1) ತನ್ನ ಜೀವಕ್ಕಾಗಿ ಭಯ: ಯೆರೂಸಲೇಮಿನಿಂದ ಆತನು ಜೀವಂತವಾಗಿ ತಪ್ಪಿಸಿಕೊಂಡು ಹೋಗಲು ಯಾವುದಾದರೂ ನಿರೀಕ್ಷೆ ಇದೆಯೋ?
   2) ತನ್ನ ಭವಿಷ್ಯದ ಕುರಿತು ಆತಂಕ:
      - ಅನ್ಯರ ಮಧ್ಯದಲ್ಲಿನ ಆತನ ಸೇವೆಯ ಕುರಿತು ಏನು?
      - ರೋಮ್‌ನಲ್ಲಿ ಸುವಾರ್ತೆ ಸಾರಬೇಕೆಂಬ ಆತನ ಯೋಜನೆಯ ಕುರಿತು ಏನು (ರೋಮಾ. 1:15)?

3. ಆದರೆ ಯೇಸು ಕ್ರಿಸ್ತನು ರಾತ್ರಿಯಲ್ಲಿ ಆತನಿಗೆ ದರ್ಶನದಲ್ಲಿ ಕಾಣಿಸಿಕೊಂಡನು (23:11)!
   1) ಆತನು ಪ್ರೋತ್ಸಾಹದ ಮಾತುಗಳನ್ನು ಆಡಿದನು!
   2) ಆತನು ಪೌಲನಿಗೆ ಒಂದು ಭವಿಷ್ಯದ ಸೇವೆಯಿದೆ ಎಂಬುದನ್ನು ಪ್ರಕಟಿಸಿದನು!
   3) ಆತನು ಪೌಲನು ರೋಮ್‌ನಲ್ಲಿ ಸುವಾರ್ತೆಯನ್ನು ಸಾರುವನೆಂದು ಪ್ರಕಟಿಸಿದನು!

4. ಹಾಗಾದರೆ ನಿಮ್ಮ ಕುರಿತು ಏನು?
   1) ನಿಮ್ಮ ಪರಿಸ್ಥಿತಿ ಹೇಗಿದೆ?
   2) ಯೇಸು ನಿನ್ನ ಹತ್ತಿರದಲ್ಲೇ ಇದ್ದು ಆದರಣೆಯ ಮಾತುಗಳನ್ನು ಆಡುವಾತನಾಗಿದ್ದಾನೆ!

# ಪಾಠ 62. ಪೌಲನನ್ನು ಕೊಲ್ಲಲು ಒಳಸಂಚು, 23:12–22

## ಅ) ವಾಕ್ಯಭಾಗ

ಮರುದಿನ 40 ಕ್ಕಿಂತಲೂ ಹೆಚ್ಚು ಜನ ಯೆಹೂದ್ಯ ಪುರುಷರ ಒಂದು ಗುಂಪು ಪೌಲನನ್ನು ಕೊಲ್ಲುವ ಶಪಥಮಾಡಿಕೊಂಡರು. ಅವರ ಒಳಸಂಚಿಗೆ ಹಿರಿಯರೂ ಮತ್ತು ಮಹಾಯಾಜಕರೂ ಸಮ್ಮತಿ ಸೂಚಿಸಿದರು. ಆದರೆ ಪೌಲನ ಸೋದರಿಯ ಮಗನು ಈ ಒಳಸಂಚನ್ನು ತಿಳಿಯಲು ಅವನು ರೋಮನ್ನರ ಸೇನಾಪಾಳ್ಯಕ್ಕೆ ಹೋಗಿ ಪೌಲನಿಗೆ ತಿಳಿಸಿದನು. ಆ ಯುವಕನು ಸಹಸ್ರಾಧಿಪತಿಯ ಬಳಿಯಲ್ಲಿ ಕೊಂಡೊಯ್ಯಲ್ಪಟ್ಟನು, ಆ ಸಹಸ್ರಾಧಿಪತಿಯು ಆತನು ಹೇಳುವುದನ್ನು ಗಮನವಿಟ್ಟು ಕೇಳಿದನು.

## ಆ) ಟಿಪ್ಪಣಿ

*ಪೌಲನ ಸೋದರಿಯ ಮಗನು* (ವ. 16): ಹೊಸ ಒಡಂಬಡಿಕೆಯ ಇದೊಂದೇ ವಾಕ್ಯಭಾಗದಲ್ಲಿ ಪೌಲನ ಸಹೋದರಿ ಮತ್ತು ಆಕೆಯ ಮಗನ ಕುರಿತು ತಿಳಿಸಲಾಗಿದೆ.

## ಇ) ಪಠ್ಯ ಪ್ರಶ್ನೆಗಳು

1. ಪೌಲನನ್ನು ಕೊಲ್ಲುವ ಒಳಸಂಚಿನಲ್ಲಿ ಯಾರ್‍ಯಾರು ಪಾಲ್ಗೊಂಡಿದ್ದರು?
2. ಅವರ ಒಳಸಂಚು ಏನಾಗಿತ್ತು?
3. ಈ ಒಳಸಂಚನ್ನು ಯಾವಾಗ ಕಾರ್ಯರೂಪಕ್ಕೆ ತರಬೇಕೆಂದಿದ್ದರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನ ಸಹೋದರಿಯ ಮಗನು ಈ ಒಳಸಂಚನ್ನು ಹೇಗೆ ಕೇಳಿಸಿಕೊಂಡನೆಂದು ನೀವು ಆಲೋಚಿಸುತ್ತೀರಿ?
2. ಈ ಒಳಸಂಚು ಯಶಸ್ವಿಯಾಗಲು ಸಾಧ್ಯವಾದದ್ದೆಂದು ನೀವು ಆಲೋಚಿಸುತ್ತೀರೋ? ಯಾಕೆ – ಯಾಕೆ ಇಲ್ಲ?
3. ಈ ವಿಷಯವನ್ನು ತನಗೆ ವರದಿಮಾಡಿದ್ದರ ಕುರಿತು ಯಾರಿಗೂ ಹೇಳಬಾರದೆಂದು ಆ ಯುವಕನಿಗೆ ಸಹಸ್ರಾಧಿಪತಿಯು ಯಾಕೆ ಹೇಳಿ ಕಳುಹಿಸಿದನೆಂದು ನೀವು ಆಲೋಚಿಸುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ವಾಕ್ಯಭಾಗದಲ್ಲಿ ಒಬ್ಬ ಯುವಕನು, ಅಂದರೆ ಪೌಲನ ಸಹೋದರಿಯ ಮಗನು, ಅತೀ ಪ್ರಾಮುಖ್ಯವಾದ ಪಾತ್ರವನ್ನು ವಹಿಸುತ್ತಾನೆ:

1. ಆ ಯುವಕನು ಪೌಲನನ್ನು ಕೊಲ್ಲಬೇಕೆಂಬ ಒಳಸಂಚನ್ನು ಕೇಳಿದಾಗ ಯಾವ ರೀತಿಯಾದ ಅನುಭವಪಟ್ಟಿರಬೇಕೆಂಬದನ್ನು ಚರ್ಚಿಸಿರಿ! ಅದಲ್ಲದೆ ಆತನು ರೋಮನ್ನರ ಸೇನಾಪಾಳ್ಯದಲ್ಲಿ ಸೆರೆಯಾಗಿದ್ದ ಪೌಲನನ್ನು ಭೇಟಿಯಾಗಲು ಎಂತಹ ಸಮಸ್ಯೆಗಳನ್ನು ಎದುರಿಸಿರಬಹುದೆಂದು ಚರ್ಚಿಸಿರಿ! ಮತ್ತು ಆತನು ಈ ಒಳಸಂಚನ್ನು ತಿಳಿಸಲು ರೋಮನ್ ಸಹಸ್ರಾಧಿಪತಿಯಾಗಿದ್ದ ಕ್ಲಾಡಿಯಸ್ ಲೂಸಿಯಸ್‌ನ ಬಳಿಗೆ ಕೊಂಡೊಯ್ಯಲ್ಪಟ್ಟಾಗ ಆತನು ಯಾವ ರೀತಿಯಾದ ಅನುಭವಪಟ್ಟಿರಬೇಕೆಂಬದನ್ನು ನೀವು ಆಲೋಚಿಸುತ್ತೀರಿ? ಮತ್ತು ಆನಂತರ ಪೌಲನಿಗೆ ಏನು ಸಂಭವಿಸಿತೆಂಬುದರ ಕುರಿತು ಮಾಹಿತಿಯನ್ನು ಕೇಳಲು ಆತನು ಕಾಯುತ್ತಿರುವಾಗ ಯಾವ ರೀತಿಯಾದ ಆಲೋಚನೆಗಳು ಮತ್ತು ಭಾವನೆಗಳು ಆತನಲ್ಲಿ ಬಂದಿರಬಹುದು – ಪೌಲನು ಕೊಲ್ಲಲ್ಪಟ್ಟನೋ ಅಥವಾ ಇನ್ನೂ ಜೀವಂತವಾಗಿದ್ದಾನೋ ಎಂಬ ಆಲೋಚನೆಗಳು?
2. ಈ ನಾಟಕೀಯವಾದಂತಹ ಕಥೆಯಲ್ಲಿನ ಯೌವ್ವನಸ್ಥನ ಮತ್ತು ಆತನ ಸಾಹಸಗಳ ಕುರಿತು ಒಂದು ಕಿರುನಾಟಕವನ್ನು ಬರೆಯಿರಿ, ಅಭ್ಯಸಿಸಿರಿ ಮತ್ತು ಅಭಿನಯಿಸಿರಿ?

# ಪಾಠ 63. ಸೆಜರೇಯಕ್ಕೆ ಪೌಲನನ್ನು ಕಳುಹಿಸಿದ್ದು, 23:23–35

## ಅ) ವಾಕ್ಯಭಾಗ

ಅದೇ ರಾತ್ರಿ ರೋಮನ್ ಸಹಸ್ರಾಧಿಪತಿಯು ಪೌಲನನ್ನು ಇಬ್ಬರು ಶತಾಧಿಪತಿಗಳು ಮತ್ತು ಒಂದು ದೊಡ್ಡ ಸೈನ್ಯದ ದಂಡಿನೊಂದಿಗೆ ರಾಜ್ಯಪಾಲನಾದ ಫೆಲಿಕ್ಸನ ಬಳಿಗೆ ಕಳುಹಿಸಿದನು, ಮತ್ತು ಪೌಲನ ವಿಚಾರವನ್ನು ರಾಜ್ಯಪಾಲನಿಗೆ ವಿವರಿಸುತ್ತಾ ಒಂದು ಪತ್ರವನ್ನು ಬರೆದು ಜೊತೆಯಲ್ಲಿ ಕಳುಹಿಸಿದನು. ರಾಜ್ಯಪಾಲನು ಆ ಪತ್ರವನ್ನು ಓದಿ ಪೌಲನನ್ನು ತನ್ನ ವಶದಲ್ಲಿ ತೆಗೆದುಕೊಂಡು ಆತನನ್ನು ಅರಮನೆಯಲ್ಲಿ ಕಾವಲಲ್ಲಿಡಬೇಕೆಂದು ಆಜ್ಞಾಪಿಸಿದನು.

## ಆ) ಟಿಪ್ಪಣಿ

*ರಾಜ್ಯಪಾಲನಾದ ಫೆಲಿಕ್ಸನು* (ವ. 24): ಫೆಲಿಕ್ಸನ ಸಹೋದರನು ಚಕ್ರವರ್ತಿಯಾದ ಕ್ಲಾಡಿಯಸ್‌ನ ಅಚ್ಚುಮೆಚ್ಚಿನ ಮಂತ್ರಿಯಾಗಿದ್ದರಿಂದ ಆತನಿಗೆ ಒಲುಮೆಯಾಗಿ ಚಕ್ರವರ್ತಿಯು ಕ್ರಿ. ಶ. 52 ರಲ್ಲಿ ಫೆಲಿಕ್ಸನನ್ನು ಯೂದಾಯ ಪ್ರಾಂತ್ಯದ ರಾಜ್ಯಪಾಲನನ್ನಾಗಿ ನೇಮಿಸಿದನು. ಈ ಸಹೋದರರಿಬ್ಬರೂ ಬಿಡುಗಡೆ ಹೊಂದಿದ ಗುಲಾಮರಾಗಿದ್ದರು, ನಂತರ ಅವರಿಬ್ಬರೂ ರೋಮನ್ ಸರ್ಕಾರದಲ್ಲಿ ಉನ್ನತ ಅಧಿಕಾರಿಗಳಾದರು. ಫೆಲಿಕ್ಸನು ತನ್ನ ಕ್ರೂರತನ ಮತ್ತು ಅನೈತಿಕ ಜೀವನಕ್ಕೆ ಪ್ರಸಿದ್ಧನಾಗಿದ್ದನು. ಆತನು ರಾಜನಾದ 2 ನೇ ಅಗ್ರಿಪ್ಪನ ಸಹೋದರಿಯಾದ ಮತ್ತು ಸಮೀಪದ ಚಿಕ್ಕ ರಾಜ್ಯದ ಅರಸನ ಹೆಂಡತಿಯಾದ ದ್ರುಸಿಲ್ಲಳನ್ನು ಮೋಹಿಸಿ ಮದುವೆಯಾಗುವುದರ ಮೂಲಕ ರಾಜ್ಯಪಾಲನಾಗಿ ತನ್ನ ವೃತ್ತಿಜೀವನವನ್ನು ಪ್ರಾರಂಭಿಸಿದನು. ಆಕೆಯು ಭಾಗಶಃ ಯೆಹೂದ್ಯಳಾಗಿದ್ದರಿಂದ ಫೆಲಿಕ್ಸನು ಯೆಹೂದ್ಯ ಆಚಾರ ಮತ್ತು ಜೀವನ ಶೈಲಿಯ ಕುರಿತು ಅನೇಕ ಸಂಗತಿಗಳನ್ನು ಕಲಿತಿದ್ದನು. 24:22–27 ನ್ನೂ ಸಹ ನೋಡಿರಿ. ಪಾಲೆಸ್ತೀನಿನ ರಾಜರು ಮತ್ತು ರಾಜ್ಯಪಾಲರುಗಳ ಕುರಿತು ಇನ್ನೂ ಹೆಚ್ಚಿನ ಮಾಹಿತಿಯನ್ನು ತಿಳಿಯಲು ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದಲ್ಲಿರುವ ***'ಅರಸನಾದ ಹೆರೋದನ ಕುಟುಂಬ'*** ಮತ್ತು ***'ಪಾಲೆಸ್ತೀನ್'*** ಎಂಬ ಅಧ್ಯಾಯಗಳನ್ನು ಓದಿರಿ.

*ಅವರಿಗೆ ಒಂದು ಪತ್ರವನ್ನು ಹೀಗೆ ಬರೆದುಕೊಟ್ಟನು* (ವ. 25): ಈ ಪತ್ರವು ಆ ದಿನದ ಬರವಣಿಗೆ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಅದು ಪತ್ರ ಕಳುಹಿಸುವವನ ಹೆಸರಿನಿಂದ ಪ್ರಾರಂಭಗೊಳ್ಳುತ್ತದೆ: *ಕ್ಲಾಡಿಯಸ್ ಲೂಸಿಯಸ್‌ನು* ಯೆರೂಸಲೇಮಿನಲ್ಲಿದ್ದ ರೋಮನ್ ಸಹಸ್ರಾಧಿಪತಿಯಾಗಿದ್ದನು. ಲೂಕನು ಪೌಲನೊಂದಿಗೆ ಸೆಜರೇಯದಲ್ಲಿದ್ದಾಗ ಈ ಪತ್ರವನ್ನು ನಕಲು ಮಾಡಿಕೊಂಡನೋ ಏನೋ ನಮಗೆ ಗೊತ್ತಿಲ್ಲ (ಅಧ್ಯಾಯ 24 ರಲ್ಲಿ ದಾಖಲಾಗಿರುವಂತೆ ಪೌಲನ ವಿಚಾರಣೆಯ ಸಂಧರ್ಬದಲ್ಲಿ ಇದನ್ನು ಬಹಿರಂಗವಾಗಿ ಓದಿರುವ ಸಾಧ್ಯತೆಯೂ ಸಹ ಇದೆ) – ಅಥವಾ *ಪತ್ರವನ್ನು ಹೀಗೆ ಬರೆದುಕೊಟ್ಟನು* ಎಂಬುದರ ಅರ್ಥ ನಮ್ಮ ಪಠ್ಯದಲ್ಲಿ ಮೂಲ ಪತ್ರದ ಸಾರಾಂಶ ಮಾತ್ರ ಇದೆ ಎಂದಾಗಿರಬಹುದು.

*ಅಂತಿಪತ್ರಿ* (ವ. 31): ಇದು ಯೂದಾಯ ಮತ್ತು ಸಮಾರ್ಯದ ನಡುವೆ ಇದ್ದ ಸೈನಿಕ ಠಾಣೆಯಾಗಿತ್ತು. ಇದು ಯೆರೂಸಲೇಮಿನಿಂದ 50 ಕಿ.ಮೀ. ಮತ್ತು ಸೆಜರೇಯದಿಂದ 40 ಕಿ.ಮೀ. ದೂರದಲ್ಲಿತ್ತು.

*ಸೆಜರೇಯ* (ವ. 33): ಇದು ರೋಮನ್ ಪ್ರಾಂತ್ಯವಾದ ಯೂದಾಯದ ಮೇಲೆ ನೇಮಿಸಲ್ಪಟ್ಟ ರಾಜ್ಯಪಾಲನ ಪ್ರಧಾನ ಕಛೇರಿಯಾಗಿತ್ತು. 8:40 ರ ಟಿಪ್ಪಣಿಯನ್ನೂ ಸಹ ನೋಡಿರಿ.

*ಪೌಲನನ್ನು ಹೆರೋದನ ಅರಮನೆಯಲ್ಲಿ ಕಾವಲಲ್ಲಿಟ್ಟರು* (ವ. 35): ಹೆರೋದ ಮಹಾರಾಜನು ಕಟ್ಟಿದ್ದ ಅರಮನೆಯು ಈ ಸಮಯದಲ್ಲಿ ಯೂದಾಯದ ರೋಮನ್ ಆಡಳಿತದ ಪ್ರಧಾನ ಕಛೇರಿಯಾಗಿಯೂ ಮತ್ತು ರಾಜ್ಯಪಾಲನ ವಾಸಸ್ಥಳವಾಗಿಯೂ ಉಪಯೋಗಿಸಲ್ಪಡುತ್ತಿತ್ತು. ಬಹುಶಃ ಪೌಲನು ಅಲ್ಲಿ ಎರಡು ವರ್ಷಗಳ ಕಾಲ ಸೆರೆಯಾಳಾಗಿ ಇಡಲ್ಪಟ್ಟಿದ್ದಾಗ ಆತನು ಒಬ್ಬ ರೋಮನ್ ಪ್ರಜೆಯಾಗಿದ್ದಿದ್ದರಿಂದಲೂ ಮತ್ತು ಆತನ ವಿರುದ್ಧ ಯಾವುದೇ ಆರೋಪಣೆಗಳು ಇಲ್ಲದ್ದರಿಂದಲೂ ಉತ್ತಮವಾಗಿ ಉಪಚರಿಸಲ್ಪಟ್ಟನು.

## ಇ) ಪಠ್ಯ ಪ್ರಶ್ನೆಗಳು

1. ಪೌಲನನ್ನು ರಾತ್ರಿವೇಳೆಯಲ್ಲಿ ಯೆರೂಸಲೇಮಿನಿಂದ ಕರೆದುಕೊಂಡು ಹೋದ ಸೇನಾಪಡೆಯನ್ನು ಲೂಕನು ಹೇಗೆ ವರ್ಣಿಸುತ್ತಾನೆ?
2. ಕ್ಲಾಡಿಯಸ್ ಲೂಸಿಯಸ್‌ನ ಪತ್ರವನ್ನು ಮತ್ತೊಮ್ಮೆ ನೋಡಿರಿ! ಆತನು ತನ್ನ ಪತ್ರದಲ್ಲಿ ತನ್ನ ಕುರಿತು ಎಷ್ಟು ಬಾರಿ ಉಲ್ಲೇಖಿಸಿದ್ದಾನೆ?
3. ಫೆಲಿಕ್ಸನ ಮತ್ತು ಆತನ ಪ್ರಧಾನ ಕಛೇರಿಯ ಕುರಿತು ಮೇಲಿನ ಟಿಪ್ಪಣಿಯಲ್ಲಿ ನೀವು ಏನನ್ನು ಕಲಿಯುತ್ತೀರಿ?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ರೋಮನ್ ಸಹಸ್ರಾಧಿಪತಿಯು ಪೌಲನೊಂದಿಗೆ ಅಷ್ಟು ದೊಡ್ಡ ಸೇನಾಪಡೆಯನ್ನು ಯಾಕೆ ಕಳುಹಿಸಿಕೊಟ್ಟನೆಂದು ನೀವು ಆಲೋಚಿಸುತ್ತೀರಿ?
2. ಕ್ಲಾಡಿಯಾಸ್ ಲೂಸಿಯಸ್‌ನು ರಾಜ್ಯಪಾಲನಾದ ಫೆಲಿಕ್ಸನಿಗೆ ಬರೆದ ಪತ್ರವನ್ನು (ವ. 25–30) ಲೂಕನು 21:30–23:22 ರಲ್ಲಿ ದಾಖಲಿಸಿರುವ ನೈಜ ಘಟನೆಗಳೊಂದಿಗೆ ಹೋಲಿಸಿರಿ. ಕ್ಲಾಡಿಯಸ್ ಲೂಸಿಯಸ್‌ನು ಕೆಲವು ಬದಲಾವಣೆಗಳನ್ನು ಮಾಡಿರುವುದನ್ನು ನೀವು ಕಾಣುವಿರಿ!

    1) ಆತನು ಬದಲಾಯಿಸಿದ ಅಂಶಗಳಾವುವು?

    2) ಆತನು ಈ ರೀತಿಯಾದ ಪತ್ರವನ್ನು ಯಾಕೆ ಬರೆದನೆಂದು ನೀವು ಆಲೋಚಿಸುತ್ತೀರಿ?

# ಪಾಠ 64. ಫೆಲಿಕ್ಸನ ಮುಂದೆ ವಿಚಾರಣೆ, 24:1–27

## ಅ) ವಾಕ್ಯಭಾಗ

ಐದು ದಿನಗಳ ನಂತರ ಪೌಲನು ರಾಜ್ಯಪಾಲನಾದ ಫೆಲಿಕ್ಸನ ಮುಂದೆ ನ್ಯಾಯವಿಚಾರಣೆಗೆ ತರಲ್ಪಟ್ಟನು. ಅಷ್ಟರೊಳಗಾಗಿ ಆತನ ವಿರುದ್ಧವಾಗಿ ಆರೋಪಣೆಗಳನ್ನು ಸಲ್ಲಿಸಲು ಪ್ರಧಾನ ಯಾಜಕನಾದ ಅನನೀಯನು ಮತ್ತು ಕೆಲವು ಹಿರಿಯರು ತೆರ್ತುಲ ಎಂಬ ಒಬ್ಬ ವಕೀಲನೊಂದಿಗೆ ಯೆರೂಸಲೇಮಿನಿಂದ ಬಂದರು. ಫೆಲಿಕ್ಸನೇ ಪೌಲನನ್ನು ಪ್ರಶ್ನಿಸುವುದರ ಮೂಲಕ ಆ ಆರೋಪಣೆಗಳೆಲ್ಲವೂ ಸತ್ಯವಾದುದ್ದೆಂದು ಕಂಡುಕೊಳ್ಳುವಂತೆ ತೆರ್ತುಲನು ಸಲಹೆ ಸೂಚಿಸುತ್ತಾ ತನ್ನ ಮಾತುಗಳನ್ನು ಮುಗಿಸಿದನು. ಬದಲಾಗಿ ಪೌಲನು ಮಾತನಾಡಬೇಕೆಂದು ಫೆಲಿಕ್ಸನು ಸೂಚಿಸಿದನು. ಪೌಲನು ತನ್ನ ವಿರುದ್ಧವಾದ ಆಪಾದನೆಗಳು ನಿಜವಲ್ಲದ್ದರಿಂದ ಅವುಗಳು ಸಾಬೀತಾಗಲಿಲ್ಲ ಎಂದು ಹೇಳಿದನು. ಆದರೆ ತಾನು ಕ್ರೈಸ್ತ ನಂಬಿಕೆಯನ್ನು ಹಿಂಬಾಲಿಸುವುದರ ಮೂಲಕ ಯೆಹೂದ್ಯರ ದೇವರನ್ನು ಆರಾಧಿಸುವವನು ಮತ್ತು ಹಳೆ ಒಡಂಬಡಿಕೆಯನ್ನು ನಂಬುವವನು, ಹಾಗೂ ಪುನರುತ್ಥಾನಕ್ಕಾಗಿ ಎದುರು ನೋಡುತ್ತಿರುವವನೆಂದು ಪೌಲನು ಹೇಳಿದನು. ಆತನ ಮನಸಾಕ್ಷಿಯು ದೇವರ ಹಾಗೂ ಮನುಷ್ಯರ ಮುಂದೆ ಶುದ್ಧವಾಗಿತ್ತು. ಆತನು ನಿರ್ದೋಷಿಯಾಗಿದ್ದನು ಮತ್ತು ಆರೋಪಗಳನ್ನು ಸಾಬೀತುಪಡಿಸಬೇಕಾದದ್ದು ಯೆಹೂದ್ಯ ನಾಯಕರಿಗೆ ಬಿಟ್ಟದ್ದು. ಫೆಲಿಕ್ಸನು ವಿಚಾರಣೆಯನ್ನು ಮುಂದೂಡಿ ಪೌಲನನ್ನು ಕಾವಲಲ್ಲಿರಿಸಬೇಕೆಂದು ಆಜ್ಞಾಪಿಸಿದನು. ನಂತರದ ಎರಡು ವರ್ಷಗಳ ಅವಧಿಯಲ್ಲಿ ಫೆಲಿಕ್ಸನು ಕ್ರೈಸ್ತ ನಂಬಿಕೆಯ ಕುರಿತು ಕೇಳಲು ಪೌಲನನ್ನು ಆಗಾಗ್ಗೆ ಕರೆಕಳುಹಿಸಿದನು. ನಂತರ ಫೆಲಿಕ್ಸನ ಬದಲಾಗಿ ಪೊರ್ಕಿಯಸ್ ಫೆಸ್ತನು ರಾಜ್ಯಪಾಲನಾಗಿ ನೇಮಕಗೊಂಡನು.

## ಆ) ಟಿಪ್ಪಣಿ

*ಅನನೀಯನು* (ವ. 1): 23:2 ರ ಟಿಪ್ಪಣಿಯನ್ನು ನೋಡಿರಿ.

*ತೆರ್ತುಲನು ಎಂಬ ವಕೀಲನನ್ನು* (ವ. 1): ಈ ವಾಕ್ಯಭಾಗದಲ್ಲಿ ಮಾತ್ರ ತೆರ್ತುಲನ ಕುರಿತು ತಿಳಿಸಲ್ಪಟ್ಟಿದೆ, ಹಾಗಾಗಿ ಆತನ ಕುರಿತು ನಮಗೆ ಹೆಚ್ಚಿನ ಮಾಹಿತಿಯಿಲ್ಲ. ಆತನ ಹೆಸರು ಲ್ಯಾಟಿನ್ ಭಾಷೆಯದ್ದು, ಆದರೆ ಆತನು ಪೌಲನಂತೆ ಚದುರಿಸಲ್ಪಟ್ಟ ಯೆಹೂದ್ಯರಿಂದ ಬಂದವನಾಗಿದ್ದು ಗ್ರೀಕ್ ಭಾಷೆ ಮಾತನಾಡುವವನಾಗಿದ್ದಿರಬಹುದು. ನ್ಯಾಯವಿಚಾರಣೆಯು ಬಹುಶಃ ಲ್ಯಾಟಿನ್ ಭಾಷೆಯಲ್ಲಿ ನಡೆದಿರಬಹುದು, ಆದರೆ ಅಲ್ಲಿ ಉಪಸ್ಥಿತರಿದ್ದ ಅನನೀಯ ಮತ್ತು ಇತರೆ ಯೆಹೂದ್ಯ ನಾಯಕರುಗಳನ್ನು ಪರಿಗಣಿಸಿ ರಾಜ್ಯಪಾಲನು ಗ್ರೀಕ್‌ನಲ್ಲಿ ಮಾತನಾಡುವ ಅವಕಾಶ ಮಾಡಿಕೊಟ್ಟಿರುವ ಸಾಧ್ಯತೆಯಿದೆ. ತೆರ್ತುಲನು ವೃತ್ತಿಪರವಾಗಿ ವಾಕ್ಪಟುವಾಗಿದ್ದನು (ಇದು ಗ್ರೀಕ್ ಪಠ್ಯದಲ್ಲಿ ಬಳಸಿರುವ ಪದವಾಗಿದೆ) ಮತ್ತು ಆತನ ಭಾಷಣವು (ಲೂಕನು ಅದರ ಸಂಕ್ಷಿಪ್ತ ದಾಖಲೆಯನ್ನು ಮಾತ್ರ ತಿಳಿಸುತ್ತಾನೆ) ಮೂರು ಸಾಂಪ್ರದಾಯಿಕ ಭಾಗಗಳನ್ನು ಒಳಗೊಂಡಿದೆ: ಮುಖಸ್ತುತಿಯ ಪ್ರಾರಂಭ,

ಆರೋಪಣೆಗಳ ಹೇಳಿಕೆ ಮತ್ತು ಅದನ್ನು ಉತ್ತೇಜಿಸುವ ಸಾಕ್ಷ್ಯಾಧಾರಗಳು (ಈ ಸನ್ನಿವೇಶದಲ್ಲಿ ಅತೀ ಬಲಹೀನವಾದ ಸಾಕ್ಷ್ಯಾಧಾರಗಳನ್ನು ತಂದಿದ್ದರು).

*ತೊಂದರೆಕೊಡುವವನಾಗಿದ್ದಾನೆಂತಲೂ ... ನಜರೇತಿನವರ ಪಂಗಡಕ್ಕೆ ಇವನು ನಾಯಕನೆಂದೂ* (ವ. 5): ತೊಂದರೆಗಳನ್ನು ಸೃಷ್ಟಿಸುವುದು (ಈ ಗ್ರೀಕ್ ಪದದ ವಾಸ್ತವಿಕವಾದ ಅರ್ಥವೇನೆಂದರೆ 'ಪಿಡುಗು, ಮಾರಿ' ಎಂಬುದಾಗಿದೆ) ಮತ್ತು ರೋಮನ್ ಸಾಮ್ರಾಜ್ಯದಲ್ಲಿ ಒಡಕನ್ನು ತರುವುದು ಚಕ್ರವರ್ತಿಯ ವಿರುದ್ಧವಾದ ರಾಜದ್ರೋಹ ಎಂದು ಪರಿಗಣಿಸಲಾಗುತ್ತಿತ್ತು. ಸರ್ಕಾರದಿಂದ ಮಾನ್ಯತೆ ಪಡೆಯದ ಒಂದು ಧಾರ್ಮಿಕ ಪಂಗಡದ ನಾಯಕನಾಗುವದೂ ಕಾನೂನು ಬಾಹಿರವಾದ ಚಟುವಟಿಕೆಯಾಗಿತ್ತು. ಕ್ರೈಸ್ತರ ಕುರಿತು ಹೊಸ ಒಡಂಬಡಿಕೆಯಲ್ಲಿ ಇದೊಂದೇ ಬಾರಿ 'ನಜರೇತಿನವರ ಪಂಗಡ' ಎಂಬ ಹೇಳಿಕೆಯು ಉಪಯೋಗಿಸಲ್ಪಟ್ಟಿದೆ.

ವ. 7 ಗ್ರೀಕ್ ಮೂಲಪ್ರತಿಯಲ್ಲಿ ಕಂಡುಬಂದಿಲ್ಲ ಮತ್ತು ಇಂಗ್ಲೀಷ್ ಭಾಷಾಂತರದಲ್ಲಿಯೂ ಸಹ ಸೇರಿಸಲ್ಪಟ್ಟಿಲ್ಲ, ಆದರೆ ಅದು ಇಂಗ್ಲೀಷಿನ ಎನ್.ಐ.ವಿ. ಭಾಷಾಂತರದಲ್ಲಿ ಅಡಿ ಟಿಪ್ಪಣಿಯಲ್ಲಿ ತಿಳಿಸಲ್ಪಟ್ಟಿದೆ.

*ಮಾರ್ಗದ* (ವ. 14): ಲೂಕನು ಕ್ರೈಸ್ತ ನಂಬಿಕೆಯ ಕುರಿತಾದ ಈ ವಿಶೇಷ ಪದವಿನ್ಯಾಸವನ್ನು 9:2 19:9, 23, 24:22 ರಲ್ಲಿಯೂ ಉಪಯೋಗಿಸುತ್ತಿದ್ದಾನೆ.

*ಈ ಮಾರ್ಗದ ವಿಷಯದ ಬಗ್ಗೆ ಬಹುಸೂಕ್ಷ್ಮವಾಗಿ ತಿಳಿದುಕೊಂಡಿದ್ದ* (ವ. 23) ಫೆಲಿಕ್ಸನು ಆರು ವರ್ಷಗಳವರೆಗೆ (ಸಮಾರ್ಯವನ್ನು ಸೇರಿಸಿ) ಯೂದಾಯದ ರಾಜ್ಯಪಾಲನಾಗಿದ್ದನು. ಆತನು ಈ ಸಮಯದಲ್ಲಿ ಕ್ರೈಸ್ತ ನಂಬಿಕೆ ಮತ್ತು ಸಭೆಯ ಕುರಿತು ಬಹಳಷ್ಟು ವಿಷಯಗಳನ್ನು ಕೇಳಿರಬೇಕು.

*ದ್ರುಸಿಲ್ಲ* (ವ. 24): ದ್ರುಸಿಲ್ಲಳ ಕುರಿತು ಹೆಚ್ಚಿನ ಮಾಹಿತಿಗಾಗಿ 23:24 ರ ಟಿಪ್ಪಣಿಯನ್ನು ನೋಡಿರಿ.

*ಫೆಲಿಕ್ಸನ ಬದಲಾಗಿ ಪೊರ್ಸಿಯ ಫೆಸ್ತನು ರಾಜ್ಯಪಾಲನಾದನು* (ವ. 27): ಫೆಲಿಕ್ಸನು ತಾನು ಯುದಾಯದಲ್ಲಿ ರಾಜ್ಯಪಾಲನಾಗಿದ್ದಾಗ ನಡೆದ ದುರಾಡಳಿತ ಮತ್ತು ಇತರೆ ಸಮಸ್ಯೆಗಳ ಕುರಿತು ಉತ್ತರಿಸಲು ಕ್ರಿ.ಶ. 59 ರಲ್ಲಿ ಪುನಃ ರೋಮ್‌ಗೆ ಹಿಂತಿರುಗುವಂತೆ ಕರೆಯಲ್ಪಟ್ಟನು. ಈತನ ಉತ್ತರಾಧಿಕಾರಿಯಾದ ಫೆಸ್ತನು ಕ್ರಿ.ಶ. 62 ರಲ್ಲಿ ಅಧಿಕಾರದಲ್ಲಿರುವಾಗಲೇ ಮರಣ ಹೊಂದಿದನು. ಫೆಸ್ತನು ಯೂದಾಯಕ್ಕೆ ಬರುವುದಕ್ಕಿಂತ ಮುಂಚೆ ಆತನ ಕುರಿತು ಯಾವುದೇ ಮಾಹಿತಿ ಇಲ್ಲ. ಆದರೆ ಫೆಸ್ತನು ತನ್ನ ಪೂರ್ವಾಧಿಕಾರಿಗಿಂತ ಉತ್ತಮನಾಗಿದ್ದನು. ಆತನು ಒಬ್ಬ ಪ್ರಾಮಾಣಿಕವಾದ ಮತ್ತು ಸಮರ್ಥ ಆಡಳಿತಗಾರನೆಂದು ವರ್ಣಿಸಲ್ಪಟ್ಟಿದ್ದಾನೆ. ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದಲ್ಲಿರುವ ***'ರೋಮನ್ ಸಾಮ್ರಾಜ್ಯ'*** ಎಂಬ ಅಧ್ಯಾಯವನ್ನೂ ನೋಡಿರಿ.

## ಇ) ಪಠ್ಯ ಪ್ರಶ್ನೆಗಳು

1. ತೆರ್ತುಲನು ರಾಜ್ಯಪಾಲನಾದ ಫೆಲಿಕ್ಸನ ಮುಂದೆ ಪೌಲನ ವಿರುದ್ಧವಾಗಿ ಮಾಡಿದ ಆಪಾದನೆಗಳೇನು?
2. ಪೌಲನು ತನ್ನ ಪ್ರತಿವಾದದಲ್ಲಿ ಯೆರೂಸಲೇಮಿಗೆ ಭೇಟಿಕೊಟ್ಟ ಕಾರಣಗಳನ್ನು ತಿಳಿಸುತ್ತಾನೆ? ಆ ಕಾರಣಗಳೇನು?
3. ಪೌಲನ ಪ್ರಕರಣದ ತೀರ್ಪನ್ನು ತಿಳಿಸಲು ಮುಂದೂಡಿದ್ದಕ್ಕೆ ಫೆಲಿಕ್ಸನು ಯಾವ ಕಾರಣವನ್ನು ಕೊಟ್ಟನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನ ಪ್ರತಿವಾದದ ರಚನೆಯನ್ನು ವಿಶ್ಲೇಷಿಸಿರಿ!
2. ಫೆಲಿಕ್ಸನು ಪೌಲನನ್ನು ಎರಡು ವರ್ಷಗಳ ಕಾಲ ಸೆರೆಯಲ್ಲಿ ಇಡುವುದಕ್ಕೆ ಯಾವ ಕಾರಣಗಳಿರಬಹುದೆಂದು ನೀವು ಆಲೋಚಿಸುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ನೀವು ನಿಮ್ಮ ನಂಬಿಕೆಯ ಅಥವಾ ನಿಮ್ಮ ಸೇವೆಯ ಪರಿಣಾಮವಾಗಿ ಎಂದಾದರೂ ವಿಚಾರಣೆಗೆ ಒಳಗಾಗಿದ್ದೀರೋ? ಆ ಆಪಾದನೆಗಳು ಏನು? ಅವುಗಳು ನಿಜವಾಗಿದ್ದವೋ ಸುಳ್ಳಾಗಿದ್ದವೋ? ನೀವು ಅವುಗಳನ್ನು ಹೇಗೆ ಬಗೆಹರಿಸಿದಿರಿ? ನ್ಯಾಯಾಧೀಶರು ಹೇಗೆ ನಡೆದುಕೊಂಡರು (ಗೌರವಾರ್ಹವಾಗಿ ನಡಕೊಂಡರೋ? ಲಂಚವನ್ನು ನಿರೀಕ್ಷಿಸಿದರೋ? ಪೂರ್ವಕಲ್ಪಿತ ಅಭಿಪ್ರಾಯ ಹೊಂದಿದ್ದರೋ?) ನಿಮ್ಮ ಅನುಭವವನ್ನು ಹಂಚಿಕೊಳ್ಳಿರಿ.

## ಊ) ಉಪದೇಶಿಸು ಮತ್ತು ಬೋಧಿಸು!

ಅಪೋಸ್ತಲರ ಕೃತ್ಯಗಳು ಅಧ್ಯಾಯ 24 ನ್ನು ಆಧರಿಸಿ ***ಫೆಲಿಕ್ಸನ ಮುಂದೆ ಪೌಲನ ನ್ಯಾಯವಿಚಾರಣೆ*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಹೊರರೇಖೆಯು ಹೀಗಿರಬಹುದು:

1. ಹಿನ್ನಲೆ: ಈ ಕಥೆಗಿಂತ ಮುಂಚೆ ಸಂಭವಿಸಿದ ಸಂಗತಿ (ಸಂಕ್ಷಿಪ್ತವಾಗಿ!)
2. ಮೂರು ಗುಂಪುಗಳು (ಸಂಕ್ಷಿಪ್ತವಾದ ಮಾಹಿತಿ ಮಾತ್ರ!):
    - ಆಪಾದಕರು: ಅನನೀಯನು ಮತ್ತು ತೆರ್ತುಲನೆಂಬ ತಮ್ಮ ವಕೀಲನೊಂದಿಗೆ ಹಿರಿಯರು
    - ಪ್ರತಿವಾದಿ: ಪೌಲನು
    - ನ್ಯಾಯಾಧೀಶ: ರಾಜ್ಯಪಾಲನಾದ ಫೆಲಿಕ್ಸನು

3. ಪ್ರಕರಣ

- ಪೌಲನ ವಿರುದ್ಧ ಮೂರು ಆಪಾದನೆಗಳು (ಪ್ರಶ್ನೆ ಇ. 1 ರ ಉತ್ತರವನ್ನು ನೊಡಿರಿ)
- ಪೌಲನ ಪ್ರತಿವಾದ (ಪ್ರಶ್ನೆ ಈ. 1 ರ ಉತ್ತರವನ್ನು ನೋಡಿರಿ).
- ತೀರ್ಪು (ಪ್ರಶ್ನೆ ಇ. 3 ಮತ್ತು ಈ. 2 ರ ಉತ್ತರಗಳನ್ನು ನೋಡಿರಿ). ಆದರೆ ಪೌಲನ ಪ್ರಕರಣದಲ್ಲಿ ಫೆಲಿಕ್ಸನು ಯಾವ ತೀರ್ಪನ್ನೂ ಹೊರಡಿಸಲಿಲ್ಲ.

4. ಈ ಪ್ರಕರಣದ ನಮ್ಮ ಉಪಸಂಹಾರಗಳು:

- ಆಪಾದಕರು: ಸುಳ್ಳು ಆರೋಪಗಳು
- ಪ್ರತಿವಾದಿ: ಪ್ರಾಮಾಣಿಕ, ಧೈರ್ಯಶಾಲಿ, ತನ್ನ ಪ್ರತಿವಾದವನ್ನು ಮನದಟ್ಟುಮಾಡಿಸಿಕೊಟ್ಟನು, ನಿರ್ದೋಷಿ, ದೇವರ ಹಾಗೂ ಮನುಷ್ಯರ ಮುಂದೆ ತನ್ನ ಮನಸಾಕ್ಷಿಯನ್ನು ಶುದ್ಧವಾಗಿಟ್ಟುಕೊಂಡಿದ್ದನು (ವ. 16)
- ನ್ಯಾಯಾಧೀಶ: ನಿರ್ಧಾರ ತೆಗೆದುಕೊಳ್ಳಲು ಭಯಪಟ್ಟನು, ಲಂಚವನ್ನು ಅಪೇಕ್ಷಿಸಿದನು, ಯೆಹೂದ್ಯರನ್ನು ಅಸಂತೋಷಪಡಿಸಲು ಹೆದರಿದನು – ಆದರೆ ಪೌಲನಿಗೆ ದಯೆತೋರಿಸಿದನು (ಆತನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟನು, ನಂಬಿಕೆಯಲ್ಲಿ ಆಸಕ್ತಿಯುಳ್ಳವನಾಗಿದ್ದನು, ಪೌಲನಿಗೆ ಬಂಧನದಲ್ಲಿ ಸ್ವಾತಂತ್ರ್ಯವಿರುವಂತೆ ನೋಡಿಕೊಂಡನು)

5. ಈ ಕಥೆಯಿಂದ ನಾವು ಏನನ್ನು ಕಲಿಯುತ್ತೇವೆ? – ನಾವು ಆಪಾದಕರಂತೆಯಾಗಲಿ ಅಥವಾ ನ್ಯಾಯಾಧೀಶನಂತೆಯಾಗಲಿ ಇರಬಾರದು – ಬದಲಾಗಿ ಪೌಲನಂತಿರಬೇಕು!

- ನಾವು ಪ್ರಾಮಾಣಿಕರಾಗಿರಬೇಕು ಮತ್ತು ನಮ್ಮ ಪ್ರತಿವಾದವನ್ನು ಮನದಟ್ಟುಮಾಡಿಸಬೇಕು – ನಮ್ಮ ನಂಬಿಕೆಯ ಸಲುವಾಗಿ ನಾವು ವಿಚಾರಣೆಗೆ ಗುರಿಯಾಗಿದ್ದೇವೋ ಇಲ್ಲವೋ ಎಂಬುದನ್ನು ಮನದಟ್ಟುಮಾಡಿಸಬೇಕು!
- ದೇವರ ಹಾಗೂ ಮನುಷ್ಯರ ಮುಂದೆ ನಮ್ಮ ಮನಸಾಕ್ಷಿಯನ್ನು ಶುದ್ಧವಾಗಿಟ್ಟುಕೊಳ್ಳಲು ನಾವು ಯಾವಾಗಲೂ ಹೋರಾಡಬೇಕು!
- ಅತೀ ಉನ್ನತವಾದ ಧಾರ್ಮಿಕ ಅಥವಾ ಲೌಕಿಕ ಅಧಿಕಾರಿಗಳ ಮುಂದೆಯೂ – ನಮ್ಮ ನಂಬಿಕೆಗಾಗಿ ನಾವು ಯಾವಾಗಲೂ ನಿಂತುಕೊಳ್ಳಬೇಕು!

# ಪಾಠ 65. ಫೆಸ್ತನ ಮುಂದೆ ವಿಚಾರಣೆ, 25:1–12

## ಅ) ವಾಕ್ಯಭಾಗ

ಫೆಸ್ತನು ಯೂದಾಯ ಪ್ರಾಂತ್ಯದ ರಾಜ್ಯಪಾಲನಾದ ತಕ್ಷಣವೇ ಆತನು ಯೆಹೂದ್ಯ ಮುಖಂಡರನ್ನು ಭೇಟಿಮಾಡುವ ಸಲುವಾಗಿ ಯೆರೂಸಲೇಮಿಗೆ ಪ್ರಯಾಣಿಸಿದನು. ಅವರು ಪೌಲನ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಆತನಿಗೆ ನೆನಪಿಸಿ ಪೌಲನನ್ನು ಯೆರೂಸಲೇಮಿನಲ್ಲಿ ವಿಚಾರಣೆಗೆ ಒಳಪಡಿಸಬೇಕೆಂದು ಆತನನ್ನು ಕೇಳಿಕೊಂಡರು. ಆದರೆ ಫೆಸ್ತನು ಪೌಲನ ಪ್ರಕರಣವನ್ನು ಸೆಜರೇಯದಲ್ಲಿ ಮರುಪರಿಶೀಲಿಸುವೆನೆಂದು ಮತ್ತು ಅವರು ಅಲ್ಲಿಗೆ ಬಂದು ಆತನ ವಿರುದ್ಧವಾಗಿ ದೂರುಗಳನ್ನು ಸಲ್ಲಿಸಬೇಕೆಂದು ಹೇಳಿದನು. ಯೆಹೂದ್ಯರು ಪೌಲನ ವಿರುದ್ಧವಾಗಿ ಅನೇಕ ಗಂಭೀರವಾದ ಆಪಾದನೆಗಳನ್ನು ಮಾಡಿದರು, ಆದರೆ ಅವರು ಅವುಗಳನ್ನು ಸಾಬೀತುಪಡಿಸಲು ಆಗಲಿಲ್ಲ. ಪೌಲನು ತನ್ನ ವಿರುದ್ಧವಾಗಿ ಮಾಡಲ್ಪಟ್ಟ ಧಾರ್ಮಿಕ ಹಾಗೂ ಲೌಕಿಕ ಆಪಾದನೆಗಳಲ್ಲಿ ತಾನು ನಿರಪರಾಧಿ ಎಂದು ತಿಳಿಸಿದನು. ನಂತರ ಫೆಸ್ತನು ಪೌಲನ ವಿಚಾರಣೆಯನ್ನು ಯೆರೂಸಲೇಮಿಗೆ ವರ್ಗಾಯಿಸಿದನು. ಇದನ್ನು ಪೌಲನು ತಿರಸ್ಕರಿಸಿದನು. ಇದಕ್ಕೆ ಬದಲಾಗಿ ಪೌಲನು ಚಕ್ರವರ್ತಿಗೆ ಮನವಿ ಸಲ್ಲಿಸಿದನು.

## ಆ) ಟಿಪ್ಪಣಿ

*ಸೆಜರೇಯದಿಂದ ಯೆರೂಸಲೇಮಿಗೆ* (ವ. 1): ಅಂತರವು 100 ಕಿ.ಮೀ. ಇತ್ತು ಮತ್ತು ಪ್ರಯಾಣವು ಎರಡು ದಿನಗಳ ಕಾಲವನ್ನು ತೆಗೆದುಕೊಳ್ಳುತ್ತಿತ್ತು.

*ಮುಖ್ಯ ಯಾಜಕರು ಹಾಗೂ ಯೆಹೂದಿ ನಾಯಕರು* (ವ. 2): ಲೂಕನು ನ್ಯಾಯಸಭೆಯ ಸದಸ್ಯರನ್ನು ಉಲ್ಲೇಖಿಸುತ್ತಿದ್ದಾನೆ.

*'ಯೆಹೂದ್ಯರ ಧರ್ಮಶಾಸ್ತ್ರಕ್ಕಾಗಲಿ, ದೇವಾಲಯಕ್ಕಾಗಲಿ, ಚಕ್ರವರ್ತಿಗಾಗಲಿ ವಿರೋಧವಾಗಿ ನಾನು ಯಾವ ತಪ್ಪನ್ನೂ ಮಾಡಿಲ್ಲ'* (ವ. 8): ಇಲ್ಲಿ ಪೌಲನು ತನ್ನ ವಿರುದ್ಧ ಮಾಡಿದ ಆಪಾದನೆಗಳಲ್ಲಿ ತಾನು ನಿರ್ದೋಷಿ ಎಂದು ಮತ್ತೊಮ್ಮೆ ಹೇಳುತ್ತಿದ್ದಾನೆ. ಆತನು ಯೆಹೂದ್ಯರ ಧರ್ಮಶಾಸ್ತ್ರವನ್ನು ಉಲ್ಲಂಘಿಸಿರಲಿಲ್ಲ – ಅಥವಾ ಅದರ ವಿರುದ್ಧವಾಗಿ – ಮಾತನಾಡಿರಲಿಲ್ಲ. ಆತನು ದೇವಾಲಯವನ್ನು ಅಪವಿತ್ರಗೊಳಿಸಿರಲಿಲ್ಲ. ಆತನು ಯಾವುದೇ ಕಾನೂನು ಬಾಹಿರವಾದ ಧರ್ಮವನ್ನು ಪ್ರಚುರಪಡಿಸಿರಲಿಲ್ಲ ಅಥವಾ ಗಲಭೆ ಎಬ್ಬಿಸಿರಲಿಲ್ಲ. ಪೌಲನ ವಿರುದ್ಧವಾದ ಪ್ರಕರಣದಲ್ಲಿ ಇದೇ ಮೊದಲನೇ ಬಾರಿಗೆ ಚಕ್ರವರ್ತಿಯ ಕುರಿತು ಸೂಚಿಸಲಾಗಿದೆ.

*ನಾನು ಚಕ್ರವರ್ತಿಗೇ ಮನವಿ ಮಾಡಿಕೊಳ್ಳುತ್ತೇನೆ* (ವ. 11): ಒಬ್ಬ ರೋಮನ್ ಪ್ರಜೆಯಾಗಿ ತನ್ನ ವಿಚಾರಣೆಯು ರೋಮನ್ ಚಕ್ರವರ್ತಿಯ ಮುಂದೆಯೇ ನಡೆಸಲ್ಪಡಬೇಕೆಂದು ಕೇಳುವ ಹಕ್ಕು ಪೌಲನಿಗೆ ಇತ್ತು. ಈ ಸಮಯದಲ್ಲಿ ರೋಮ್ ಸಾಮ್ರಾಜ್ಯವನ್ನು ಆಳುತ್ತಿದ್ದ ನಿರೋ ಚಕ್ರವರ್ತಿಯು ಕ್ರಿ.ಶ. 54 ರಿಂದ 68 ರವರೆಗೆ ಆಳ್ವಿಕೆಮಾಡಿದನು.

## ಇ) ಪಠ್ಯ ಪ್ರಶ್ನೆಗಳು

1. ನ್ಯಾಯಸಭೆಯವರು ಫೆಸ್ತನಿಗೆ ಯಾವ ಮನವಿಯನ್ನು ಮಾಡಿದರು?
2. ಈ ಮನವಿಗೆ ಕಾರಣ ಏನಾಗಿತ್ತು?
3. ಪೌಲನ ವಿರುದ್ಧವಾದ ನ್ಯಾಯವಿಚಾರಣೆಯು ಎಲ್ಲಿ ನಡೆಯಿತು?
4. ಪೌಲನು ಯೆರೂಸಲೇಮಿನಲ್ಲಿ ನ್ಯಾಯವಿಚಾರಣೆಗೆ ಒಳಗಾಗಲು ಆತನಿಗೆ ಮನಸ್ಸಿದೆಯೋ ಎಂದು ಫೆಸ್ತನು ಯಾಕೆ ಕೇಳಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಫೆಸ್ತನು ತಾನು ರಾಜ್ಯಪಾಲನಾದ ನಂತರ ತಕ್ಷಣವೇ ಯೆರೂಸಲೇಮಿಗೆ ಹೋಗಲು ಕಾರಣವೇನಿರಬಹುದು?
2. ಫೆಸ್ತನು ಯೆರೂಸಲೇಮನ್ನು ತಲುಪಿದ ತಕ್ಷಣವೇ ಯೆಹೂದ್ಯ ಮುಖಂಡರು ಆತನ ಮುಂದೆ ಪೌಲನ ವಿರುದ್ಧವಾಗಿ ದೂರನ್ನು ಮಂಡಿಸಿದರು. ಈ ವಾಸ್ತವಾಂಶದಿಂದ ನಾವು ಏನನ್ನು ಕಲಿಯುತ್ತೇವೆ?
3. ಪೌಲನು ಯೆರೂಸಲೇಮಿನಲ್ಲಿ ನ್ಯಾಯವಿಚಾರಣೆಗೆ ಒಳಗಾಗಬೇಕೆಂಬ ಫೆಸ್ತನ ಸಲಹೆಯನ್ನು ಆತನು ಯಾಕೆ ತಿರಸ್ಕರಿಸಿರಬಹುದೆಂದು ನೀವು ಆಲೋಚಿಸುತ್ತೀರಿ?
4. ಈ ಕಥೆಯಿಂದ ನಾವು ಫೆಸ್ತನ ಕುರಿತಾಗಿ ಯಾವ ಚಿತ್ರಣವನ್ನು ಪಡೆಯುತ್ತೇವೆ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ಕಥೆಯಲ್ಲಿ ಪೌಲನು ಒಂದು ಅತೀ ಕುಯುಕ್ತಿಯುಳ್ಳ ಪರಸ್ಥಿತಿಯನ್ನು ಎದುರಿಸಿದನು. ಆತನ ವಿರುದ್ಧವಾಗಿ ಮಾಡಲ್ಪಟ್ಟ ಆಪಾದನೆಗಳು – ಸಾಬೀತು ಆಗದಿದ್ದಾಗ್ಯೂ – ಗಂಭೀರವಾದ ಆಪಾದನೆಗಳಾಗಿದ್ದವು. ಈ ಎಲ್ಲಾ ಆಪಾದನೆಗಳಲ್ಲಿ ಪೌಲನು ನಿರ್ದೋಷಿಯಾಗಿದ್ದನು. ಆದರೆ ತನ್ನ ಪ್ರಕರಣವು – ಯೆಹೂದ್ಯ ನಾಯಕರುಗಳು ಮನವಿ ಮಾಡಿಕೊಂಡಂತೆ ಮತ್ತು ರಾಜ್ಯಪಾಲನಾದ ಫೆಸ್ತನು ಸಲಹೆ ಕೊಟ್ಟಂತೆ – ಸೆಜರೇಯದಿಂದ ಯೆರೂಸಲೇಮಿಗೆ ವರ್ಗಾಯಿಸಲ್ಪಟ್ಟರೆ ತನ್ನ ಜೀವಕ್ಕೆ ಅಪಾಯ ಖಂಡಿತ ಎಂಬುದು ಸಹ ಆತನಿಗೆ ತಿಳಿದಿತ್ತು. ಹಾಗಾಗಿ ಆತನು ಯೆರೂಸಲೇಮಿನಲ್ಲಿ ನ್ಯಾಯವಿಚಾರಣೆಯ ಅಪಾಯವನ್ನು ಹೊತ್ತುಕೊಳ್ಳುವ ಬದಲಾಗಿ ಅಥವಾ ಫೆಸ್ತನು ಸರಿಯಾದದ್ದನ್ನು ಮಾಡಿ ಸೆಜರೇಯದಲ್ಲಿ ತನ್ನನ್ನು ದೋಷಮುಕ್ತಗೊಳಿಸುವನೆಂದು ನಿರೀಕ್ಷಿಸುವುದರ ಬದಲಾಗಿ – ರೋಮ್ ಚಕ್ರವರ್ತಿಗೆ ಮನವಿ ಮಾಡಿಕೊಳ್ಳುವುದರ ಮೂಲಕ ಸುರಕ್ಷಿತವಾದ ಮಾರ್ಗವನ್ನು ಆಯ್ದುಕೊಂಡನು.

1. ಪೌಲನು ಸರಿಯಾದುದ್ದನ್ನು ಮಾಡಿದನೆಂದು ನೀವು ಆಲೋಚಿಸುತ್ತೀರೋ? ನಿಮ್ಮ ಕಾರಣಗಳನ್ನು ತಿಳಿಸಿರಿ!

2. ನೀವು ಪೌಲನ ಪರಿಸ್ಥಿತಿಯಲ್ಲಿ ಇದ್ದಿದ್ದರೆ ಏನು ಮಾಡುತ್ತಿದ್ದಿರಿ? ನಿಮ್ಮ ನಿರ್ಧಾರದ ಕಾರಣಗಳನ್ನು ತಿಳಿಸಿರಿ!

3. ನೀವು ಎಂದಾದರೂ ಪೌಲನು ಎದುರಿಸಿದಂತಹ ಪರಿಸ್ಥಿತಿಯನ್ನು ಹಾದು ಹೋಗಿದ್ದೀರೋ? ದಯವಿಟ್ಟು ಹಂಚಿಕೊಳ್ಳಿರಿ! (ಒಂದು ವೇಳೆ ಯೆರೂಸಲೇಮಿಗೆ ನ್ಯಾಯವಿಚಾರಣೆಯು ವರ್ಗಾಯಿಸಲ್ಪಟ್ಟಿದ್ದರೆ ಪೌಲನು ಅಪಾಯವನ್ನು ಹೊತ್ತುಕೊಳ್ಳುತ್ತಿದ್ದಂತೆ) ನೀವು ಅಪಾಯವನ್ನು ಹೊತ್ತುಕೊಂಡಿರೋ? (ಒಂದು ವೇಳೆ ರಾಜ್ಯಪಾಲನಾದ ಫೆಸ್ತನು ತನ್ನನ್ನು ದೋಷಮುಕ್ತಗೊಳಿಸುವಂತೆ ಕೇಳಿಕೊಳ್ಳುವುದರ ಮೂಲಕ ಪೌಲನು ಮಾಡಿರಬಹುದಾದಂತೆ) ನೀವು ಸರಿಯಾದ ತೀರ್ಮಾನಗಳು ತೆಗೆದುಕೊಳ್ಳಲ್ಪಡುವುದು ಎಂದು ನಿರೀಕ್ಷಿಸಿದಿರೋ? ಅಥವಾ (ಪೌಲನು ಚಕ್ರವರ್ತಿಗೆ ಮನವಿ ಮಾಡಿದಂತೆ) ನೀವು ಸುರಕ್ಷಿತವಾದ ಮಾರ್ಗವನ್ನು ಆರಿಸಿಕೊಂಡಿರೋ?

# ಪಾಠ 66. ಫೆಸ್ತನು ಅಗ್ರಿಪ್ಪ ರಾಜನ ಸಲಹೆ ಪಡೆದಿದ್ದು, 25:13–22

## ಅ) ವಾಕ್ಯಭಾಗ

ರೋಮ್ ಪ್ರಾಂತ್ಯವಾದ ಯುದಾಯದ ನೂತನ ರಾಜ್ಯಪಾಲನಾಗಿ ಫೆಸ್ತನು ಅಧಿಕಾರ ಸ್ವೀಕರಿಸಿಕೊಂಡಾಗ ಆತನನ್ನು ಅಭಿನಂದಿಸಲು ರಾಜನಾದ ಅಗ್ರಿಪ್ಪನು ಮತ್ತು ತನ್ನ ಸಹೋದರಿಯಾದ (ಬಹುಷಃ ತನ್ನ ಹೆಂಡತಿಯೂ ಸಹ ಆದ) ಬೆರ್ನಿಸಳೊಂದಿಗೆ ಸೆಜರೇಯಕ್ಕೆ ಬಂದನು. ಈ ಭೇಟಿಯ ಸಮಯದಲ್ಲಿ ಫೆಸ್ತನು ಪೌಲನ ಕುರಿತಾಗಿ ಅಗ್ರಿಪ್ಪನೊಂದಿಗೆ ಚರ್ಚಿಸಿದನು. ರಾಜನಾದ ಅಗ್ರಿಪ್ಪನು ಪೌಲನ ಕುರಿತು ಕುತೂಹಲವುಳ್ಳವನಾಗಿ ಆತನನ್ನು ಭೇಟಿಮಾಡಲು ಸಾಧ್ಯವೋ ಎಂದು ಕೇಳಿದನು.

## ಆ) ಟಿಪ್ಪಣಿ

*ರಾಜನಾದ ಅಗ್ರಿಪ್ಪ* (ವ. 1): ರಾಜನಾದ 2 ನೇ ಅಗ್ರಿಪ್ಪನು ರಾಜನಾದ 1 ನೇ ಹೆರೋದ ಅಗ್ರಿಪ್ಪನ ಮಗನಾಗಿದ್ದನು (12:1–24 ನ್ನು ನೋಡಿರಿ, ಅಲ್ಲಿ ಆತನು ಅರಸನಾದ ಹೆರೋದನೆಂದು ಕರೆಯಲ್ಪಟ್ಟಿದ್ದಾನೆ). ತನ್ನ ಸ್ನೇಹಿತರೂ ಹಾಗೂ ರೋಮನ್ ಚಕ್ರವರ್ತಿಗಳೂ ಆದ ಕಲಿಗುಲ ಮತ್ತು ಕ್ಲಾಡಿಯಸ್‌ರಿಂದ ಬೆಂಬಲಿಸಲ್ಪಟ್ಟು 1 ನೇ ಅಗ್ರಿಪ್ಪನು ಇಡೀ ಪಾಲೆಸ್ತೀನಿನ ರಾಜನಾದನು. ಕ್ರಿ.ಶ. 44 ರಲ್ಲಿ ಆತನು ಮರಣವನ್ನು ಹೊಂದಿದಾಗ ಆತನ ಮಗನು (2 ನೇ ಅಗ್ರಿಪ್ಪನು) ಕೇವಲ 17 ವರ್ಷದ ಪ್ರಾಯದವನಾಗಿದ್ದರಿಂದ ಪಾಲೆಸ್ತೀನಿನ ಆಳ್ವಿಕೆಯು ರೋಮನ್ ರಾಜ್ಯಪಾಲರುಗಳಿಗೆ ವರ್ಗಾಯಿಸಲ್ಪಟ್ಟಿತು. ಕೆಲವು ವರ್ಷಗಳ ನಂತರ, 2 ನೇ ಅಗ್ರಿಪ್ಪನು ಕ್ರಮೇಣವಾಗಿ ಗಲಿಲಾಯ ಮತ್ತು ಇತರೆ ಪ್ರಾಂತ್ಯಗಳ ಮೇಲೆ ರಾಜನಾಗಿ ಅಧಿಕಾರ ಸ್ವೀಕರಿಸಿದನು. ಚಕ್ರವರ್ತಿ ಕ್ಲಾಡಿಯಸ್‌ನು ಈತನಿಗೆ ಯೆರೂಸಲೇಮಿನ ದೇವಾಲಯದ ಮೇಲೆಯೂ ಮಹಾಯಾಜಕರನ್ನು ನೇಮಿಸುವುದರಲ್ಲಿಯೂ ಅಧಿಕಾರವನ್ನು ವಹಿಸಿದ್ದರಿಂದ ಈತನು ಬಹಳ ಪ್ರಭಾವಶಾಲಿಯಾದ ವ್ಯಕ್ತಿಯಾಗಿದ್ದನು.

*ಬೆರ್ನಿಸಳು* (ವ. 1): ಈಕೆಯು ರಾಜನಾದ 2 ನೇ ಅಗ್ರಿಪ್ಪನ ಹಿರಿಯ ಸಹೋದರಿಯಾಗಿದ್ದಳು. ಈಕೆಯು ತನ್ನ ಸಹೋದರನೊಂದಿಗೆ ಹಾದರ ಇಟ್ಟುಕೊಂಡಿದ್ದಳೆಂದು ಗಾಳಿ ಸುದ್ದಿಯುಂಟು.

*ಫೆಸ್ತನನ್ನು ಅಭಿನಂದಿಸಲು* (ವ. 1): ಅಗ್ರಿಪ್ಪ ರಾಜನು ಆ ದಿನಗಳ ಆಚರಣೆಗಳಿಗೆ ಅನುಸಾರವಾಗಿ ಹೊಸದಾಗಿ ನೇಮಕಗೊಂಡ ರಾಜ್ಯಪಾಲನನ್ನು ಭೇಟಿಮಾಡಿದನು. ಇದು ಎರಡೂ ಪಕ್ಷದವರು ಒಳ್ಳೆಯ ಸಂಬಂಧವನ್ನಿಟ್ಟುಕೊಳ್ಳಲು ಸಹಾಯಕರವಾಗುತ್ತಿತ್ತು.

## ಇ) ಪಠ್ಯ ಪ್ರಶ್ನೆಗಳು

1. ರಾಜನಾದ ಅಗ್ರಿಪ್ಪನು ಮತ್ತು ಬೆರ್ನಿಸಳು ಸೆಜರೇಯಕ್ಕೆ ಯಾಕೆ ಬಂದರು?
2. ಫೆಸ್ತನು ಪೌಲನ ಪ್ರಕರಣವನ್ನು ಅಗ್ರಿಪ್ಪ ರಾಜನ ಮುಂದೆ ಹೇಗೆ ಮಂಡಿಸಿದನು?
3. ಪೌಲನ ಪ್ರಕರಣದ ಕುರಿತಾದ ಫೆಸ್ತನ ವಿವರಣೆಗೆ ಅಗ್ರಿಪ್ಪನ ಪ್ರತಿಕ್ರಿಯೆ ಹೇಗಿತ್ತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅಗ್ರಿಪ್ಪ ರಾಜನ ಮುಂದೆ ಪೌಲನ ಕುರಿತಾಗಿ ಮಂಡಿಸಲ್ಪಟ್ಟ ಪ್ರಕರಣವು ಹಿಂದಿನ ವಾಕ್ಯಭಾಗದಲ್ಲಿ ಕಂಡುಬರುವ ಲೂಕನ ದಾಖಲೆಗಿಂತ (ವ. 1–12) ಗಣನೀಯವಾಗಿ ವ್ಯತ್ಯಾಸವಾಗಿದೆ. ಇದರಲ್ಲಿರುವ ಮುಖ್ಯ ವ್ಯತ್ಯಾಸಗಳೇನು?
2. ಫೆಸ್ತನು ಪೌಲನ ಪ್ರಕರಣವನ್ನು ಈ ರೀತಿಯಾಗಿ ಯಾಕೆ ಮಂಡಿಸಿದನೆಂದು ನೀವು ಆಲೋಚಿಸುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಫೆಸ್ತನು ಪೌಲನ ಪ್ರಕರಣವನ್ನು ಅಗ್ರಿಪ್ಪನ ಮುಂದೆ ಹೇಗೆ ಮಂಡಿಸಿದನೆಂಬದನ್ನು ಚರ್ಚಿಸಿರಿ (ಇ 2 ಮತ್ತು ಈ 1 ರ ಉತ್ತರಗಳನ್ನು ನೋಡಿರಿ)!

1. ಫೆಸ್ತನು ಪೌಲನ ಪ್ರಕರಣವನ್ನು ಈ ರೀತಿಯಾಗಿ 'ಪರಿಷ್ಕರಿಸಿದ್ದು' ಸರಿಯೋ? ಯಾಕೆ – ಯಾಕೆ ಇಲ್ಲ?
2. ನಿಮ್ಮ ಕುರಿತು ಏನು? ನೀವು ಕೆಲವೊಮ್ಮೆ ಸತ್ಯದ 'ಪರಿಷ್ಕರಿಸಲ್ಪಟ್ಟ' ಆವೃತ್ತಿಗಳನ್ನು ಮಂಡಿಸುತ್ತೀರೋ? ಹಾಗೆ ಮಾಡಲಿಕ್ಕೆ ಕಾರಣವೇನು? ಕ್ರೈಸ್ತರು ಈ ರೀತಿಯಾಗಿ ಮಾಡುವಂತಹದ್ದು ಸರಿಯಾದದ್ದೋ? ಯಾಕೆ – ಯಾಕೆ ಇಲ್ಲ?

# ಪಾಠ 67. ಅಗ್ರಿಪ್ಪನ ಮುಂದೆ ಪೌಲನು, 25:23–26:32

## ಅ) ವಾಕ್ಯಭಾಗ

ಮರುದಿನ ಪೌಲನು ರಾಜನಾದ ಅಗ್ರಿಪ್ಪನ, ರಾಜ್ಯಪಾಲನಾದ ಫೆಸ್ತನ ಮತ್ತು ಸೆಜರೇಯಾದ ಗಣ್ಯವ್ಯಕ್ತಿಗಳ ಮುಂದೆ ಕರೆ ತರಲ್ಪಟ್ಟನು. ಪೌಲನ ಕುರಿತಾಗಿ ಫೆಸ್ತನು ಪರಿಚಯದ ಮಾತುಗಳನ್ನಾಡಿದ ನಂತರ ರಾಜನಾದ ಅಗ್ರಿಪ್ಪನು ಪೌಲನಿಗೆ ಮಾತನಾಡುವಂತೆ ಅಪ್ಪಣೆ ಮಾಡಿದನು. ಆತನು ತನ್ನ ಫರಿಸಾಯ ಧಾರ್ಮಿಕತೆಯ ಹಿನ್ನಲೆಯ ಮತ್ತು ದೇವರ ವಾಗ್ದಾನಗಳ ಮೇಲೆ ತನಗಿರುವ ನಿರೀಕ್ಷೆಯ ಕುರಿತು ಮಾತನಾಡಿದನು, ಈ ನಿರೀಕ್ಷೆಯೇ ಯೆಹೂದ್ಯರು ಆತನ ವಿರುದ್ಧ ದೂರುಗಳನ್ನು ಸಲ್ಲಿಸುವಂತೆ ಮಾಡಿತ್ತು. ನಂತರ ಪೌಲನು ದಮಸ್ಕದ ರಸ್ತೆಯಲ್ಲಿ ತನಗೆ ಉಂಟಾದ ಮಾನಸಾಂತರದ ಕುರಿತು ಮತ್ತು ಅನ್ಯರಿಗೆ ಸುವಾರ್ತೆಯನ್ನು ಸಾರುವ ತನ್ನ ಕರೆಯ ಕುರಿತು ತಿಳಿಸಿದನು. 'ಅಲ್ಪಕಾಲವಾಗಲಿ ದೀರ್ಘಕಾಲದಲ್ಲಾಗಲಿ ನೀವಷ್ಟೇ (ರಾಜನಾದ ಅಗ್ರಿಪ್ಪ) ಅಲ್ಲ, ನನ್ನ ಮಾತುಗಳನ್ನು ಇಂದು ಆಲಿಸುತ್ತಿರುವ ಪ್ರತಿಯೊಬ್ಬರೂ ಈ ಬೇಡಿಗಳನ್ನು ಹೊರತು ನನ್ನಂತೆಯೇ (ಕ್ರಿಸ್ತನಲ್ಲಿ ಒಬ್ಬ ವಿಶ್ವಾಸಿ) ಆಗಬೇಕೆಂದು ದೇವರನ್ನು ಪ್ರಾರ್ಥಿಸುತ್ತೇನೆ' (ವ. 29) ಎಂದು ಹೇಳುವುದರ ಮೂಲಕ ತನ್ನ ಮಾತನ್ನು ಕೊನೆಗೊಳಿಸುತಾನೆ. ಅಗ್ರಿಪ್ಪನು ಮತ್ತು ರಾಜ್ಯಪಾಲನಾದ ಫೆಸ್ತನು ಪೌಲನು ನಿರ್ದೋಷಿಯೆಂದು ಒಪ್ಪಿಕೊಂಡರು ಮತ್ತು ಆತನು ಚಕ್ರವರ್ತಿಗೆ ಮನವಿಮಾಡಿಕೊಳ್ಳದೆ ಹೋಗಿದ್ದರೆ ಆತನನ್ನು ಬಿಡುಗಡೆ ಮಾಡಬಹುದಿತ್ತು ಎಂದುಕೊಂಡರು (ವ. 32).

## ಆ) ಟಿಪ್ಪಣಿ

*ಆಸ್ಥಾನವನ್ನು* (ವ. 23): ಇದು ಈ ವೈಭವದ ಸಂದರ್ಭಕ್ಕಾಗಿಯೇ ಸಿದ್ಧಗೊಳಿಸಲ್ಪಟ್ಟಿದ್ದ ಒಂದು ಒಂದು ಸಭಾಂಗಣವಾಗಿತ್ತು. ಈ ಸಂದರ್ಭದಲ್ಲಿ ರಾಜನಾದ ಅಗ್ರಿಪ್ಪನು, ಆತನ ಸಹೋದರಿಯಾದ ಬೆರ್ನಿಸಳು, ರೋಮನ್ ಪ್ರಾಂತ್ಯವಾದ ಯೂದಾಯದ ರಾಜ್ಯಪಾಲನಾದ ಫೆಸ್ತನು, ಸೆಜರೇಯ ಪ್ರಾಂತ್ಯದಲ್ಲಿದ್ದ ರೋಮನ್ ಸೈನ್ಯಾಧಿಕಾರಿಗಳು ಮತ್ತು ಪಟ್ಟಣದಿಂದ ಬಂದ ಪ್ರಮುಖ ಗಣ್ಯವ್ಯಕ್ತಿಗಳು ಅಲ್ಲಿ ಉಪಸ್ಥಿತರಿದ್ದರು. ಈ ನ್ಯಾಯವಿಚಾರಣೆಯು ನ್ಯಾಯಾಲಯದಲ್ಲಿ ನಡೆಯಲಿಲ್ಲ, ಯಾಕೆಂದರೆ ಆ ಸಂದರ್ಭವು ಒಂದು ನ್ಯಾಯವಿಚಾರಣೆಯ ಸಂಧರ್ಭವಾಗಿರಲಿಲ್ಲ.

*ಸೈನ್ಯಾಧಿಕಾರಿಗಳೊಂದಿಗೂ* (ವ. 23): ರೋಮನ್ನರು ಸೆಜರೇಯದಲ್ಲಿ ಐದು ಸೇನಾದಳವನ್ನು ಇರಿಸಿದ್ದರು. ಈ ಸಂದರ್ಭದಲ್ಲಿ ಅವರ ಸೈನ್ಯಾಧಿಕಾರಿಗಳು ಅಲ್ಲಿ ಹಾಜರಿದ್ದರು.

*ಇವನ ಬಗ್ಗೆ ಖಚಿತವಾಗಿ ತಮಗೆ ಬರೆಯಲು ನನಗೇನು ಇಲ್ಲದಿರುವುದರಿಂದ* (ವ. 26): ಫೆಸ್ತನು ಪೌಲನ ಪ್ರಕರಣದ ಮತ್ತು ಆತನ ವಿರುದ್ಧವಾದ ಆಪಾದನೆಗಳ ಕುರಿತು ಒಂದು ವರದಿಯನ್ನು ಪೌಲನೊಂದಿಗೆ ರೋಮ್‌ಗೆ ಕಳುಹಿಸಬೇಕಾಗಿತ್ತು (ವ. 27 ನ್ನು ಸಹ ನೋಡಿರಿ). ಅಗ್ರಿಪ್ಪನು ಈ ವರದಿಯ ವಸ್ತುವಿಷಯದ ಕುರಿತಾಗಿ ತನಗೆ ಸಹಾಯಮಾಡಬಹುದೆಂದು ಫೆಸ್ತನು ನಿರೀಕ್ಷಿಸಿದನು.

*ಅಗ್ರಿಪ್ಪ ರಾಜನೇ ಇವನನ್ನು ತಮ್ಮ ಮುಂದೆ ತಂದಿದ್ದೇನೆ, ಹೀಗೆ ಈ ವಿಚಾರಣೆಯ ಮೂಲಕ ಬರೆಯಲು ನನಗೇನಾದರೂ ಸಿಕ್ಕಬಹುದು* (ವ. 26): ಇದು ಪೌಲನ ಪ್ರಕರಣದ ಔಪಚಾರಿಕವಾದ ನ್ಯಾಯವಿಚಾರಣೆಯಾಗಿರಲಿಲ್ಲ. ಇದು ಅಗ್ರಿಪ್ಪ ರಾಜನ ಕುತೂಹಲವನ್ನು ತೃಪ್ತಿಪಡಿಸುವುದಕ್ಕಾಗಿ ಮಾಡಲ್ಪಟ್ಟ ವಿಶೇಷವಾದ ವಿಚಾರಣೆಯಾಗಿತ್ತು. ಅದೇ ಸಮಯದಲ್ಲಿ ತನ್ನ ವರದಿಯಲ್ಲಿ ಅಗ್ರಿಪ್ಪ ರಾಜನ ಸಹಾಯವನ್ನು ಪಡೆದುಕೊಳ್ಳಲು ಫೆಸ್ತನು ಬಯಸಿದನು. ಬಹುಶಃ ಅಗ್ರಿಪ್ಪ ರಾಜನು ಯೆಹೂದ್ಯರ ವಿಚಾರದಲ್ಲಿ ನಿಪುಣನಾಗಿದ್ದಾನೆಂದು ಫೆಸ್ತನು ಆಲೋಚಿಸಿದ್ದಿರಬಹುದು: ಅಗ್ರಿಪ್ಪನು ಮುಂಚೆ ಯೆಹೂದ್ಯ ಧರ್ಮಕ್ಕೆ ಮತಾಂತರಗೊಂಡಿದ್ದ ಹೆರೋದನ ಕುಟುಂಬದಿಂದ ಬಂದವನಾಗಿದ್ದನು. ಆತನಿಗೆ ಯೆರೂಸಲೇಮಿನಲ್ಲಿ ಒಂದು ಅರಮನೆಯಿತ್ತು ಮತ್ತು ರೋಮನ್ ಚಕ್ರವರ್ತಿಯು ದೇವಾಲಯದ ವಿಚಾರದಲ್ಲಿಯೂ ಮತ್ತು ಮಹಾಯಾಜಕರನ್ನು ನೇಮಕಮಾಡುವ ವಿಚಾರದಲ್ಲಿಯೂ ಆತನಿಗೆ ಅಧಿಕಾರ ವಹಿಸಿಕೊಟ್ಟಿದ್ದನು.

*ನಿನ್ನ ಪರವಾಗಿ ಮಾತನಾಡಲು ನಿನಗೆ ಅಪ್ಪಣೆಯಿದೆ* (ವ. 1): ಒಬ್ಬ ಅತಿಥಿಯಾಗಿ ಮತ್ತು ಫೆಸ್ತನು ತನಗೆ ವಿಚಾರಣೆ ನಡೆಸುವ ಕೆಲಸ ಒಪ್ಪಿಸಿದ್ದರಿಂದ ಅಗ್ರಿಪ್ಪನು ಪೌಲನನ್ನು ಮಾತನಾಡಲಿಕ್ಕೆ ಆಹ್ವಾನಿಸಿದನು. ಹಾಗಾಗಿ ಪೌಲನು ತನ್ನ ಕೈಯೆತ್ತಿ ನೆರೆದಿದ್ದ ಎಲ್ಲಾ ಜನರ ಗಮನವನ್ನು ಸೆಳೆದನು (ವ. 1). ಪೌಲನು ತನ್ನ ಭಾಷಣದಲ್ಲಿ ಅಗ್ರಿಪ್ಪ ರಾಜನನ್ನು ಉದ್ದೇಶಿಸಿ ಮಾತನಾಡಿದನು (ವ. 2).

*ಅಗ್ರಿಪ್ಪ ರಾಜರೇ ಯೆಹೂದ್ಯರು ಮಾಡಿದ ಎಲ್ಲಾ ಆಪಾದನೆಗಳಿಗೆ ವಿರುದ್ಧವಾಗಿ ಇಂದು ನನ್ನ ಪ್ರತಿವಾದ ಮಾಡಲು ತಮ್ಮ ಎದುರಿನಲ್ಲಿರುವುದು ನನ್ನ ಭಾಗ್ಯವೆಂದೇ ತಿಳಿಯುತ್ತೇನೆ. ಯೆಹೂದ್ಯರ ಎಲ್ಲಾ ಆಚಾರ ವಿಚಾರಗಳನ್ನು ವಾದವಿವಾದಗಳನ್ನು ತಾವು ಚೆನ್ನಾಗಿ ತಿಳಿದಿದ್ದೀರಿ. ಆದ್ದರಿಂದ ತಾವು ತಾಳ್ಮೆಯಿಂದ ಆಲಿಸಬೇಕೆಂದು ಕೇಳಿಕೊಳ್ಳುತ್ತೇನೆ* (ವ. 2–3): ಪೌಲನು ಅಗ್ರಿಪ್ಪ ರಾಜನನ್ನು ಹೊಗಳುವುದರ ಮೂಲಕ ತನ್ನ ದಿನದ ವಾಕ್ಚಾತುರ್ಯದ ಶೈಲಿಯಲ್ಲಿ ತನ್ನ ಭಾಷಣವನ್ನು ಪ್ರಾರಂಭಿಸಿದನು. ಆದರೆ ಪೌಲನ ಹೊಗಳುವಿಕೆಯು ಯುಕ್ತವಾಗಿತ್ತು, ಯಾಕೆಂದರೆ ಅಗ್ರಿಪ್ಪನು ಯೆಹೂದ್ಯರ ವಿಚಾರದಲ್ಲಿ ನಿಪುಣನೆಂದು ರೋಮನ್ ಅಧಿಕಾರಿಗಳಿಂದ ಪರಿಗಣಿಸಲ್ಪಟ್ಟಿದ್ದನು. ಇದು ಒಂದು ಔಪಚಾರಿಕವಾದ ವಿಚಾರಣೆಯಾಗಿರಲಿಲ್ಲ, ಹಾಗಾಗಿ 'ಪ್ರತಿವಾದ' ಎಂಬ ಪದವನ್ನು ಸಾಮಾನ್ಯವಾದ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕು.

*ನನ್ನ ಸ್ವಂತ ದೇಶದಲ್ಲಿ* (ವ. 4): ಪೌಲನು ರೋಮ್ ಸಾಮ್ರಾಜ್ಯದ ಸಿಲಿಸಿಯದಲ್ಲಿನ ತಾರ್ಸಸ್ ಪಟ್ಟಣದವನಾಗಿದ್ದನು.

*ನನ್ನ ನಿರೀಕ್ಷೆ* (ವ 6): ಪೌಲನು ಮಾತನಾಡಿದ ನಿರೀಕ್ಷೆಯು ಕೇವಲ ಪುನರುತ್ಥಾನದ ಕುರಿತಾಗಿರಲಿಲ್ಲ. ಈ ನಿರೀಕ್ಷೆಯು ಮೆಸ್ಸಿಯನ ಬರೋಣ ಮತ್ತು ದೇವರ ರಾಜ್ಯವನ್ನು ಸಹ ಒಳಗೊಂಡಿದೆ. ಇದರಲ್ಲಿ ಸತ್ತವರ ಪುನರುತ್ಥಾನವೂ ಸಹ ಒಂದು ಭಾಗವಾಗಿದೆ.

*ಸತ್ತವರನ್ನು ದೇವರು ಎಬ್ಬಿಸುತ್ತಾನೆಂಬುದನ್ನು ನಂಬಲು ಅಸಾಧ್ಯವೆಂದು ನೀವು ತೀರ್ಮಾನಿಸುವುದು ಏಕೆ?* (ವ. 8): ಪೌಲನು ಈ ಪ್ರಶ್ನೆಯೊಂದಿಗೆ ಎಲ್ಲಾ ಪ್ರೋಕ್ಷಕರ ಕಡೆಗೆ ತಿರುಗಿದನು. ರೋಮನ್ನರು ಖಂಡಿತವಾಗಿಯೂ ಪುನರುತ್ಥಾನದಲ್ಲಿ ನಂಬಿಕೆಯಿಟ್ಟಿರಲಿಲ್ಲ. ಅಗ್ರಿಪ್ಪನು ಒಬ್ಬ ಯೆಹೂದ್ಯನಾಗಿದ್ದನು, ಆದರೆ ಆತನು ಸದ್ದುಕಾಯರ ಪಂಗಡಕ್ಕೆ ಸೇರಿದವನಾಗಿದ್ದರಿಂದ, ಬಹುಶಃ ಆತನು ಯೇಸು ಕ್ರಿಸ್ತನ

ಪುನರುತ್ಥಾನವನ್ನು ಮತ್ತು ಸಾಮಾನ್ಯವಾಗಿ ಸತ್ತವರು ಹೊಂದುವ ಪುನರುತ್ಥಾನವನ್ನೇ ತಿರಸ್ಕರಿಸುವವನಾಗಿದ್ದನು.

*ಅವರಿಗೆ ವಿರುದ್ಧವಾಗಿ ಮತ ಚಲಾಯಿಸಿದೆನು* (ವ 10): ಪೌಲನು ಯೆರೂಸಲೇಮಿನಲ್ಲಿನ ನ್ಯಾಯಸಭೆಯ ಒಬ್ಬ ಸದಸ್ಯನಾಗಿದ್ದದ್ದು ಅಸಂಭವನೀಯವಾಗಿದೆ (ಯಾಕೆಂದರೆ ಆತನು ಯೌವ್ವನಸ್ಥನಾಗಿದ್ದನು ಮತ್ತು ಒಂದು ಕುಲೀನ ಕುಟುಂಬದಲ್ಲಿ ಜನಿಸಿರಲಿಲ್ಲ). ಬಹುಶಃ ಈ ನ್ಯಾಯಸಭೆಯವರು ವಾಸ್ತವಿಕವಾಗಿ ಕ್ರೈಸ್ತರ ವಿರುದ್ಧವಾಗಿ ಮತ ಚಲಾಯಿಸಿರಬಹುದು. ಬಹುಶಃ ಪೌಲನು ಕ್ರೈಸ್ತರ ವಿರುದ್ಧ ಹಿಂಸೆಯನ್ನುಂಟುಮಾಡಿದ ನಿಯೋಗದ ಒಬ್ಬ ಸದಸ್ಯನಾಗಿದ್ದನು (ವ. 12 ನ್ನು ಹೋಲಿಸಿರಿ), ಮತ್ತು ಆತನು ಇಲ್ಲಿ ಅವರ ವಿರುದ್ಧವಾಗಿ ಮತ ಚಲಾಯಿಸಿರಬಹುದು.

*ಅವರು ದೇವದೂಷಣೆ ಮಾಡುವಂತೆ ಒತ್ತಾಯ ಮಾಡಿದೆ* (ವ. 11): ಈ ಒಂದು ಹೇಳಿಕೆಯ ಮೂಲಕ ಪೌಲನು ಬಹುಶಃ ತಾನು ಕ್ರೈಸ್ತರನ್ನು ತಮ್ಮ ರಕ್ಷಕನಾದ ಯೇಸುವನ್ನು ಅಲ್ಲಗಳೆಯುವಂತೆ ಮತ್ತು ಆತನ ಹೆಸರನ್ನು ಶಪಿಸುವಂತೆ ಅವರನ್ನು ಒತ್ತಾಯಿಸಿದನೆಂದು ಅರ್ಥೈಸುತ್ತಿರಬಹುದು.

ವ. 12–18: ಇದು ಪೌಲನು ದಮಸ್ಕದ ರಸ್ತೆಯಲ್ಲಿ ತಾನು ಹೊಂದಿದ ರಕ್ಷಣೆಯ ಅನುಭವದ ಕುರಿತಾದ ಮೂರನೆಯ ದಾಖಲೆಯಾಗಿದೆ. ಇತರೆ ದಾಖಲೆಗಳನ್ನು ಅಧ್ಯಾಯ 9 ಮತ್ತು 22 ರಲ್ಲಿ ಕಾಣಬಹುದು.

*ಸೌಲನೇ, ಸೌಲನೇ ... ಎಂದು ಹಿಬ್ರಿಯ ಭಾಷೆಯಲ್ಲಿ* (ವ. 14): ಆ ವಾಣಿಯು ಪೌಲನೊಂದಿಗೆ ಆತನ ಹಿಬ್ರಿಯ/ಅರಾಮಿಕ್ ಮೂಲದ ಹೆಸರನ್ನು ಬಳಸಿಕೊಳ್ಳುತ್ತಾ ಅರಾಮಿಕ್ ಭಾಷೆಯಲ್ಲಿ ಮಾತನಾಡಿತು (21:40 ರ ಟಿಪ್ಪಣಿಯನ್ನು ನೋಡಿರಿ).

*ಮುಳ್ಳುಗೋಲನ್ನು ಒದೆಯುವುದರಿಂದ* (ವ. 14): ಈ ಗ್ರೀಕ್ ನಾಣ್ಣುಡಿಯ ಸಾಮಾನ್ಯ ಅರ್ಥವೇನೆಂದರೆ, ಒಬ್ಬನು ತನ್ನ ನಿಯತಿಯ ವಿರುದ್ಧವಾಗಿ ಹೋರಾಡುವುದು ಮೂರ್ಖತನವಾದದ್ದು. ಎತ್ತು ಮುಳ್ಳುಗೋಲನ್ನು ಒದೆಯುವುದರಿಂದ ತನಗೇ ನೋವು ಮಾಡಿಕೊಳ್ಳುವುದು. ಹಾಗಾಗಿ ಪ್ರತಿಭಟಿಸುವುದು ನಿಷ್ಪ್ರಯೋಜಕವಾದದ್ದು.

## ಇ) ಪಠ್ಯ ಪ್ರಶ್ನೆಗಳು

1. ಫೆಸ್ತನು ಪೌಲನನ್ನು ನೆರೆದಿದ್ದ ಶ್ರೋತೃಗಳಿಗೆ ಹೇಗೆ ಪರಿಚಯಿಸಿದನು?
2. ಪೌಲನು ತನ್ನ ಭಾಷಣದಲ್ಲಿ ಯಾರನ್ನು ಉದ್ದೇಶಿಸಿ ಮಾತನಾಡಿದನು?
3. ಪೌಲನು ಯಾವ ಅಧಿಕಾರದಿಂದ ದಮಸ್ಕಕ್ಕೆ ಪ್ರಯಾಣಿಸಿದನು?
4. ವಚನ 17–18 ರಲ್ಲಿ ವರ್ಣಿಸಲ್ಪಟ್ಟಿರುವಂತೆ ಪೌಲನು ಹೇಗೆ ಆದೇಶಿಸಲ್ಪಟ್ಟನು?
5. 'ಈ ಪರಲೋಕದ ದರ್ಶನಕ್ಕೆ ನಾನು ಅವಿಧೇಯನಾಗಲಿಲ್ಲ' (ವ. 19) ಎಂದು ಹೇಳುವುದರ ಮೂಲಕ ಪೌಲನು ಏನನ್ನು ಅರ್ಥೈಸಿದನು?
6. ಪೌಲನ ಭಾಷಣವನ್ನು ಅಡ್ಡಿಪಡಿಸಿದವರು ಯಾರು? ಆತನು ಯಾಕೆ ಪೌಲನನ್ನು ಅಡ್ಡಿಪಡಿಸಿದನು?
7. ಪೌಲನ ವಿರುದ್ಧವಾಗಿ ಮಾಡಲ್ಪಟ್ಟ ಆಪಾದನೆಗಳ ಕುರಿತು ಅಗ್ರಿಪ್ಪನ ಸಮಾರೋಪ ಏನಾಗಿತ್ತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಫೆಸ್ತನು ಪೌಲನ ಪ್ರಕರಣದ ವಿಚಾರಣೆಯನ್ನು ಅಗ್ರಿಪ್ಪ ರಾಜನ ಮುಂದೆ ಯಾಕೆ ಏರ್ಪಡಿಸಿದನು, ಮತ್ತು ಈ ವಿಚಾರಣೆಯ ಸುತ್ತಲು ಯಾವ ರೀತಿಯಾದ ಪರಿಸ್ಥಿತಿಗಳಿದ್ದವು?
2. ಪೌಲನು ತನ್ನ ಮಾತನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ಯಾಕೆ ಎಲ್ಲರ ಮುಂದೆ ಕೈಯೆತ್ತಿದನು?
3. ಪೌಲನ ಮಾತುಗಳನ್ನು ಹೇಗೆ (ವ. 2–23) ರಚಿಸಬಹುದು?
4. ಪೌಲನು ತಾನು 'ನಮ್ಮ ಧರ್ಮದ ನಿಷ್ಠಾವಂತ ಪಂಗಡಕ್ಕೆ ತಕ್ಕಂತೆ ನಾನು ಫರಿಸಾಯನಾಗಿ ಜೀವಿಸಿದೆನೆಂಬುದನ್ನು' (ವ. 5) ಯಾಕೆ ಹೇಳಿರಬಹುದೆಂದು ನೀವು ಆಲೋಚಿಸುತ್ತೀರಿ?
5. 22:3–16 ಮತ್ತು 26:2–23 ರಲ್ಲಿರುವ ಪೌಲನ ಸಾಕ್ಷಿಗಳನ್ನು ಹೋಲಿಸಿರಿ. ಅವುಗಳ ನಡುವೆ ಇರುವ ಪ್ರಮುಖವಾದ ಮೂರು ವ್ಯತ್ಯಾಸಗಳಾವುವು? ಈ ವ್ಯತ್ಯಾಸಗಳಿಗೆ ಕಾರಣಗಳೇನಿರಬಹುದೆಂದು ನೀವು ಆಲೋಚಿಸುತ್ತೀರಿ?
6. 'ಅಲ್ಪಸಮಯದಲ್ಲಿಯೇ ನನ್ನನ್ನು ಕ್ರೈಸ್ತನನ್ನಾಗಿ ಮಾಡಬೇಕೆಂದು ಒಡಂಬಡಿಸುತ್ತಿದ್ದೀ' ಎಂದು ಅಗ್ರಿಪ್ಪನು ಪೌಲನಿಗೆ ಹೇಳಿದ ಮಾತನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ಕಥೆಯಲ್ಲಿ ಪೌಲನು ಬೇಡಿಗಳಿಂದ ಬಂಧಿತನಾಗಿ ದೇಶದ ಉನ್ನತ ಅಧಿಕಾರಿಗಳ ಮುಂದೆ ನಿಂತಿರುವುದನ್ನು ಕಾಣುತ್ತೇವೆ, ಆತನು ಎರಡು ವರ್ಷಗಳಿಂದ ತನ್ನನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದ (ಸಾಧ್ಯವಾದರೆ ಕಾನೂನಿನ ಚೌಕಟ್ಟಿನಲ್ಲಿ ರೋಮನ್ ಅಧಿಕಾರಿಗಳ ಮೂಲಕ, ಇಲ್ಲವಾದರೆ ಕಾನೂನು ಬಾಹಿರವಾಗಿ ಹೊಂಚು ಹಾಕಿ ಕೊಲ್ಲಬೇಕೆಂದಿದ್ದರು) ಯೆಹೂದ್ಯರ ಎಲ್ಲಾ ಆಪಾದನೆಗಳ ವಿರುದ್ಧ ತನ್ನ ಪ್ರತಿವಾದವನ್ನು ಮಂಡಿಸುತ್ತಿದ್ದಾನೆ (ವ. 2).

1. 'ಪೌಲನು – ನಮಗೆ ಒಂದು ಮಾದರಿ' ಎಂಬ ದೃಷ್ಟಿಕೋನದಿಂದ ಈ ಕಥೆಯನ್ನು ಇನ್ನೊಮ್ಮೆ ಓದಿರಿ!
    - ಆತನು ಹೇಗೆ ವರ್ತಿಸಿದನು?
    - ಆತನು ತನ್ನ ಪ್ರತಿವಾದವನ್ನು ಹೇಗೆ ಮಂಡಿಸಿದನು?
    - ಆತನು ಯಾವುದರ ಕುರಿತು ಮಾತನಾಡಿದನು?
    - ಆತನು – ಒಬ್ಬ ಅನೈತಿಕ ಯೆಹೂದ್ಯ ರಾಜನಿಗೂ ಮತ್ತು ಒಬ್ಬ ಅಜ್ಞಾನಿಯಾದ ಅನ್ಯ ರಾಜ್ಯಪಾಲನಿಗೂ – ಹೇಗೆ ಸುವಾರ್ತಾ ಸಂದೇಶವನ್ನು ಸಾರಿದನು?
    - ಆತನು ತನ್ನ ಮಾತುಗಳನ್ನು ಕೇಳಿಸಿಕೊಂಡವರ ಮೇಲೆ ಕೊನೆಗೆ ಯಾವ ಪ್ರಭಾವವನ್ನು ಬೀರಿದನು?
2. ಪೌಲನ ಉದಾಹರಣೆಯನ್ನು ನಾವು ಹೇಗೆ ನಮ್ಮ ಸ್ವಂತ ಪರಿಸ್ಥಿತಿಗೆ ಅನ್ವಯಿಸಿಕೊಳ್ಳಬಹುದು?

## ಊ) ಉಪದೇಶಿಸು ಮತ್ತು ಬೋಧಿಸು!

ಅ. ಕೃ. 26:16–20 ರ ಆಧಾರದ ಮೇಲೆ *‘ಪೌಲನಿಗೆ ಯೇಸುವಿನ ಆದೇಶ’* ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಹೊರರೇಖೆಯು ಹೀಗಿರಬಹುದು:

1. ಪೀಠಿಕೆ**:**

    - ಅಗ್ರಿಪ್ಪ ರಾಜನ ಮುಂದೆ ಪೌಲನ ಪ್ರತಿವಾದ (ಸಂಕ್ಷಿಪ್ತವಾಗಿ)
    - ದಮಸ್ಕದ ರಸ್ತೆಯಲ್ಲಿ ಪೌಲನಿಗೆ ಉಂಟಾದ ರಕ್ಷಣೆಯ ಅನುಭವ ಕುರಿತು ಸಾಕ್ಷಿಕರಿಸಿದ್ದು (ಸಂಕ್ಷಿಪ್ತವಾಗಿ)

2. ಯೇಸು ಕ್ರಿಸ್ತನು ಪೌಲನಿಗೆ ಕೊಟ್ಟ ಆದೇಶವು ಮೂರು ಕ್ರಿಯಾಪದಗಳ ಮೇಲೆ ಆಧಾರಿತವಾಗಿತ್ತು:

    1) ‘ನಿನ್ನನ್ನು ಸೇವಕನನ್ನಾಗಿ ಮತ್ತು ಸಾಕ್ಷಿಯನ್ನಾಗಿ ನೇಮಿಸಲೂ *ನಾನು ನಿನಗೆ ಕಾಣಿಸಿಕೊಂಡಿದ್ದೇನೆ’* (ವ. 16):

    - ಪೌಲನು ಯೇಸು ಕ್ರಿಸ್ತನನ್ನು ವೈಯಕ್ತಿಕವಾಗಿ ಸಂಧಿಸಿದನು.
    - ಪೌಲನು ತನ್ನ ಸೇವಕನಾಗಿಯೂ ಮತ್ತು ಸಾಕ್ಷಿಯಾಗಿಯೂ ಆಗಲು ಯೇಸುವಿನಿಂದ ವೈಯಕ್ತಿಕವಾಗಿ ಕರೆಯಲ್ಪಟ್ಟನು.

    2) ‘ನಾನು ನಿನ್ನ ಸ್ವಂತ ಜನರಿಂದಲೂ ಅನ್ಯಜನರಿಂದಲೂ *ನಿನ್ನನ್ನು ಕಾಪಾಡಿ’* (ವ. 17):

    - ಪೌಲನು ಸಮಸ್ಯೆ ಮತ್ತು ಕಷ್ಟಗಳಿಂದ ರಕ್ಷಿಸಲ್ಪಡುವನೆಂದು ಇದರ ಅರ್ಥವಾಗಿರಲಿಲ್ಲ.
    - ಆದರೆ ದೇವರು ತನಗೆ ನೇಮಿಸಿದ ಸೇವೆಯು ಪೂರ್ಣಗೊಳ್ಳುವವರೆಗೆ ಪೌಲನ ಸಾಕ್ಷಿಯು ಮೌನವಾಗುವುದಿಲ್ಲ ಎಂಬುದು ಇದರ ಅರ್ಥ.
    - ಯೇಸು ಪೌಲನನ್ನು ‘ಕಾಪಾಡುತ್ತೇನೆ’ ಎಂದು ಹೇಳುವುದರ ಅರ್ಥವೇನೆಂದರೆ, ಆತನು ಸುವಾರ್ತೆ ಸಾರುವುದನ್ನು ಯಾರಿಂದಲೂ ಅಥವಾ ಯಾವುದರಿಂದಲೂ ತಡೆಯಲು ಸಾಧ್ಯವಿಲ್ಲವೆಂಬುದು.

    3) *‘ನಾನು ನಿನ್ನನ್ನು ಕಳುಹಿಸುತ್ತಿದ್ದೇನೆ’* (ವ. 18):

    - ಪೌಲನು ತನ್ನ ಸ್ವಂತ ಜನರಾದ ಯೆಹೂದ್ಯರ ಬಳಿಗೆ ಕಳುಹಿಸಲ್ಪಟ್ಟನು.
    - ಪೌಲನು ಅನ್ಯರ ಬಳಿಗೂ ಸಹ ಕಳುಹಿಸಲ್ಪಟ್ಟನು.

3. ಪೌಲನ ಕೆಲಸವು ಈ ಕೆಳಗಿನ ಸಂಗತಿಗಳನ್ನು ಒಳಗೊಂಡಿತ್ತು:

    - ಅವರ ಕಣ್ಣುಗಳನ್ನು ತೆರೆಯುವುದು (ವ. 18).
    - ಅವರನ್ನು ಕತ್ತಲೆಯಿಂದ ಬೆಳಕಿನ ಕಡೆಗೆ ತಿರುಗಿಸುವುದು (ವ. 18).

- ಅವರನ್ನು ಸೈತಾನನ ಅಧಿಕಾರದಿಂದ ದೇವರ ಕಡೆಗೆ ತಿರುಗಿಸುವುದು – ಮತ್ತು ಇದರ ಪರಿಣಾಮವಾಗಿ ಅವರು ಪಾಪ ಕ್ಷಮಾಪಣೆಯನ್ನು ಹೊಂದುವರು ಮತ್ತು ಕ್ರಿಸ್ತನಲ್ಲಿ ಶುದ್ಧೀಕರಣ ಹೊಂದಿದವರ ಮಧ್ಯದಲ್ಲಿ ಹಕ್ಕುಬಾಧ್ಯತೆಯನ್ನು ಪಡೆಯುವರು (ವ. 18).

4. ಪರಲೋಕದಿಂದ ಬಂದ ದರ್ಶನಕ್ಕೆ ಪೌಲನು ಅವಿಧೇಯನಾಗಲಿಲ್ಲ (ವ. 19):

- ಆತನು ಘೋಷಿಸಿದನು (ವ. 20):
  - ಯೆರೂಸಲೇಮ್‌ನಲ್ಲಿಯೂ, ಯುದಾಯದಲ್ಲಿಯೂ ಮತ್ತು ದಮಸ್ಕದಲ್ಲಿಯೂ ರೋಮ್ ಸಾಮ್ರಾಜ್ಯದಾದ್ಯಂತ ಎಲ್ಲಾ ಯೆಹೂದ್ಯರಿಗೆ ಘೋಷಿಸಿದನು.
  - ರೋಮ್ ಸಾಮ್ರಾಜ್ಯದಾದ್ಯಂತ ಎಲ್ಲಾ ಅನ್ಯರಿಗೂ ಘೋಷಿಸಿದನು.
- ಆತನ ಸಂದೇಶವು ಸ್ಪಷ್ಟವಾಗಿತ್ತು (ವ. 20):
  - ಅವರು ಪಶ್ಚಾತ್ತಾಪಪಟ್ಟು ತಮ್ಮ ಹಳೆಯ ಜೀವಿತದಿಂದ ತಿರುಗಿಕೊಳ್ಳಬೇಕು.
  - ಅವರು ದೇವರ ಕಡೆಗೆ ತಿರುಗಿಕೊಳ್ಳಬೇಕು.
  - ಅವರ ಕೃತ್ಯಗಳು ಅವರ ಪಶ್ಚಾತ್ತಾಪವನ್ನು ಮತ್ತು ದೇವರೊಂದಿಗಿನ ಹೊಸ ಜೀವನವನ್ನು ತೋರಿಸಬೇಕು.

5. ನಿಮ್ಮ ಕುರಿತು ಏನು?

- ಯೇಸು ನಿನಗೆ ಪ್ರತ್ಯಕ್ಷನಾಗಿ ಆತನನ್ನು ಸೇವಿಸಲು ನಿಮ್ಮನ್ನು ಕರೆದಿದ್ದಾನೋ?
- ಯೇಸು ನಿನ್ನನ್ನು ಕಾಪಾಡಿದ್ದಾನೋ – ನಿಮ್ಮ ಸಂಗಡ ಇದ್ದು ಸುವಾರ್ತೆ ಸಾರುವುದನ್ನು ಸಂರಕ್ಷಿಸಿದ್ದಾನೋ?
- ಯೇಸುವನ್ನು ಸೇವಿಸುವ ನಿಮ್ಮ ಕರೆಯುವಿಕೆಗೆ ನೀವು ವಿಧೇಯರಾಗಿದ್ದೀರೋ?
- ಜನರ ಜೀವಿತಗಳು ಮಾರ್ಪಡುವಂತೆ ನಿಮ್ಮ ಸಂದೇಶವು ಸ್ಪಷ್ಟವಾಗಿದೆಯೋ?

ಅ. ಕೃ. 26:22–23, 27 ರ ಆಧಾರದ ಮೇಲೆ ‘*ಅಗ್ರಿಪ್ಪ ರಾಜರೇ, ನೀವು ಪ್ರವಾದಿಗಳನ್ನು ನಂಬುತ್ತೀರೋ?* ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಇದು ನಿಮ್ಮ ಹೊರರೇಖೆಯಾಗಿರಲಿ:

1. ಪೀಠಿಕೆ: ಅಗ್ರಿಪ್ಪ ರಾಜನ ಮುಂದೆ ಪೌಲನ ಪ್ರತಿವಾದ
2. ಪೌಲನು ಏನು ಸಂಭವಿಸುತ್ತದೆಯೆಂದು ಮೋಶೆ ಮತ್ತು ಪ್ರವಾದಿಗಳು ಹೇಳಿದ್ದಕ್ಕಿಂತ ಹೆಚ್ಚಾಗಿ ಏನನ್ನೂ ಹೇಳಲಿಲ್ಲ (ವ. 22).
   1) ಹಳೆ ಒಡಂಬಡಿಕೆಯು ಹೊಸ ಒಡಂಬಡಿಕೆಯ ಮೂರು ಘಟನೆಗಳನ್ನು ಮುಂತಿಳಿಸಿತ್ತು (ವ. 23):

- ಕ್ರಿಸ್ತನು ಶ್ರಮೆಯನ್ನನುಭವಿಸುವನು.

- ಕ್ರಿಸ್ತನು ಸತ್ತವರೊಳಗಿಂದ ಎದ್ದು ಬರುವವರಲ್ಲಿ ಮೊದಲನೆಯನಾಗುವನು.
- ಕ್ರಿಸ್ತನು ತನ್ನ ಸ್ವಂತ ಜನರಿಗೂ ಮತ್ತು ಅನ್ಯರಿಗೂ ಬೆಳಕನ್ನು ಪ್ರಕಟಿಸುವನು.

2) ಕ್ರಿಸ್ತನು ಯೆಶಾಯದಲ್ಲಿರುವ ಕರ್ತನ 'ಶ್ರಮೆಯನ್ನನುಭವಿಸುವ ಸೇವಕನು'. ಆತನು

- ನಮ್ಮ ಪಾಪಗಳಿಗಾಗಿ ಶ್ರಮೆಯನ್ನು ಅನುಭವಿಸಿ ಸಾಯುವನು (ಯೆಶಾಯ 53:4–9).
- ಪುನರುತ್ಥಾನ ಹೊಂದಿ ಉನ್ನತದಲ್ಲಿ ಏರಿಸಲ್ಪಡುವನು (ಯೆಶಾಯ 52:13; 53:12).
- ಅನ್ಯರಿಗೆ ಬೆಳಕನ್ನು ಪ್ರಕಟಿಸುವನು (ಯೆಶಾಯ 42:6; 49:6).

3) ಸುವಾರ್ತೆಯು ಯೇಸು ಕ್ರಿಸ್ತನು ಮಾಡಿದ ಮೂರು ಕಾರ್ಯಗಳ ಮೇಲೆ ಕೇಂದ್ರೀಕೃತವಾಗಿದೆ:

- ಶಿಲುಬೆಯಲ್ಲಿ ಆತನು ಸಾಯುವುದರ ಮೂಲಕ ಪ್ರಾಯಶ್ಚಿತ್ತ ಯಜ್ಞವಾದನು
- ಆತನು ಮರಣದಿಂದ ಪುನರುತ್ಥಾನ ಹೊಂದಿದನು
- ರಾಷ್ಟ್ರಗಳಿಗೆ ತನ್ನ ರಕ್ಷಣಾ ಬಲವನ್ನು (ಯಾರ ಮೇಲೆ ಆತನು ತನ್ನ ಪವಿತ್ರಾತ್ಮನನ್ನು ಸುರಿಸಿದ್ದಾನೆಯೋ ಅವರ ಮೂಲಕ) ಸಾರುವುದು.

3. ಪೌಲನ ಪ್ರಶ್ನೆಗೆ ಅಗ್ರಿಪ್ಪ ರಾಜನ ಉತ್ತರ:

- ಆತನು ಅದಕ್ಕೆ ಉತ್ತರಿಸಲೇ ಇಲ್ಲ. ಅದಕ್ಕೆ ಬದಲಾಗಿ ಆತನು ಪೌಲನ ಪ್ರಶ್ನೆಗೆ ಪ್ರತಿಯಾಗಿ ತನ್ನ ಪ್ರಶ್ನೆಯನ್ನು ಕೇಳಿದನು (ವ. 28).
- ಆತನು ಸುವಾರ್ತೆಯನ್ನು ಅಂಗೀಕರಿಸಲಿಲ್ಲ. ಅಗ್ರಿಪ್ಪ ರಾಜನು ಎಂದಿಗೂ ಒಬ್ಬ ಕ್ರೈಸ್ತನಾಗಲಿಲ್ಲ ಎಂಬುದನ್ನು ನಾವು ಐತಿಹಾಸಿಕ ಮೂಲಗಳಿಂದ ತಿಳಿಯಬಹುದು.

4. ಪೌಲನ ಪ್ರಶ್ನೆಗೆ ನಿಮ್ಮ ಉತ್ತರ: ಹಳೆ ಒಡಂಬಡಿಕೆಯ ಪ್ರವಾದನಾ ಸಂದೇಶವನ್ನು ನೀವು ನಂಬುತ್ತೀರೋ?

- ನೀವು ಯೇಸು ಕ್ರಿಸ್ತನನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದ್ದೀರೋ? ನೀವು ದೇವರೊಂದಿಗೆ ಸಮಾಧಾನ ಹೊಂದಿದ್ದೀರೋ?
- ನೀವು ಯೇಸು ಕ್ರಿಸ್ತನ ಶಾರೀರಿಕ ಪುನರುತ್ಥಾನವನ್ನು ನಂಬುತ್ತೀರೋ? ನಮ್ಮ ಕ್ರೈಸ್ತ ನಂಬಿಕೆಗೂ ಮತ್ತು ಕ್ರೈಸ್ತ ಜೀವಿತಕ್ಕೂ ಯೇಸು ಕ್ರಿಸ್ತನ ಪುನರುತ್ಥಾನವು ಕೇಂದ್ರವಾಗಿದೆ ಎಂದು ನೀವು ಅರ್ಥಮಾಡಿಕೊಂಡಿದ್ದೀರೋ (ಉದಾಹರಣೆಗೆ ನೋಡಿರಿ 1 ಕೊರಿ. 15:1–2, 12–24).
- ನೀವು ದೇವರ ಮಹಾ ರಕ್ಷಣೆಯ ಯೋಜನೆಯ ಒಂದು ಭಾಗವಾಗಿದ್ದೀರೋ? ನೀವು ಯೇಸುವಿನ ರಕ್ಷಣಾ ಬಲವನ್ನು ರಾಷ್ಟ್ರಗಳಿಗೆ ಘೋಷಿಸುವಂತೆ ನಿಮ್ಮ ಮೇಲೆ ಪವಿತ್ರಾತ್ಮನು ಸುರಿಸಲ್ಪಟ್ಟಿದ್ದಾನೋ?

# ಪಾಠ 68. ಪೌಲನು ರೋಮಿಗೆ ಪ್ರಯಾಣ ಮಾಡಿದ್ದು, 27:1–12

## ಅ) ವಾಕ್ಯಭಾಗ

ಪೌಲನನ್ನು ಮತ್ತು ಇತರೆ ಖೈದಿಗಳನ್ನು ರೋಮನ್ ಶತಾಧಿಪತಿಯಾದ ಜೂಲ್ಯನ ಕೈಗೆ ಒಪ್ಪಿಸಿದರು. ಆತನು ಅವರನ್ನು ರೋಮ್‌ಗೆ ಕರೆದೊಯ್ಯಬೇಕಾಗಿತ್ತು. ಥೆಸಲೋನಿಕದಿಂದ ಬಂದ ಅರಿಸ್ತಾರ್ಕನೆಂಬ ಒಬ್ಬ ವಿಶ್ವಾಸಿಯು ಹಾಗೂ ಲೂಕನು ಅವರೊಂದಿಗೆ ಸೇರಿಕೊಂಡರು. ಅವರು ತಮ್ಮ ಹಡಗಿನ ಪ್ರಯಾಣವನ್ನು ಪ್ರಾರಂಭಿಸಿ ಸೆಜರೆಯದಿಂದ ಸಿದೋನ್‌ಗೆ ಬಂದರು, ಅಲ್ಲಿಂದ ಲೂಸಿಯಾದ ಮುರ ಎಂಬಲ್ಲಿಗೆ ಬಂದು ಅಲ್ಲಿ ರೋಮ್‌ಗೆ ಹೋಗುವ ಹಡಗನ್ನು ಹತ್ತಿದರು. ಆದರೆ ಬೀಸುತ್ತಿದ್ದ ಗಾಳಿಯಿಂದ ಅವರು ತೊಂದರೆಗೆ ಈಡಾದರು ಮತ್ತು ಅವರ ಪ್ರಯಾಣವು ನಿಧಾನ ಗತಿಯಲ್ಲಿ ಸಾಗಿತು. ಕೊನೆಯಲ್ಲಿ ಅವರು 'ಚಂದ ರೇವುಗಳು' ಎಂದು ಕರೆಯಲ್ಪಡುವ ಕ್ರೇಟ ದ್ವೀಪದ ಕರಾವಳಿಗೆ ತಲುಪಿದರು. ಈಗ ಅವರು ಚಳಿಗಾಲವನ್ನು ಅಲ್ಲಿಯೇ ಕಳೆಯಬೇಕೋ ಅಥವಾ ಅನುಕೂಲಕರವಾದ ಬಂದರನ್ನು ಹೊಂದಿದ್ದ ಫೆನಿಕ್ಸ್‌ಗೆ ತಮ್ಮ ಪ್ರಯಾಣ ಬೆಳೆಸಬೇಕೋ ಎಂಬುದನ್ನು ನಿರ್ಧರಿಸಬೇಕಾಗಿತ್ತು.

## ಆ) ಟಿಪ್ಪಣಿ

*ನಾವು ಸಮುದ್ರ ಪ್ರಯಾಣ ಮಾಡಬೇಕೆಂದು* (ವ. 1): ಇದು ಅಪೋಸ್ತಲರ ಕೃತ್ಯಗಳಲ್ಲಿ 'ನಾವು' ಎಂದು ಹೇಳುವ ಕೊನೆಯ ನಾಲ್ಕು ಕಥೆಗಳ ಪ್ರಾರಂಭವಾಗಿದೆ. ಸೆಜರೆಯಾದಲ್ಲಿ ಪೌಲನು ಎರಡು ವರ್ಷಗಳ ಕಾಲ ಬಂಧಿಯಲ್ಲಿದ್ದಾಗ ಬಹುಶಃ ಲೂಕನು ತನ್ನ ಎರಡು ಪುಸ್ತಕಗಳಿಗಾಗಿ (ಸುವಾರ್ತೆ ಮತ್ತು ಅಪೋಸ್ತಲರ ಕೃತ್ಯಗಳು) ಮಾಹಿತಿಯನ್ನು ಸಂಗ್ರಹಿಸುತ್ತಾ ಪಾಲೆಸ್ತೀನಿನ ಜನರನ್ನು ಸಂಧಿಸುತ್ತಿದ್ದನು. ಈಗ ಆತನು ಹಡಗಿನ ಪ್ರಯಾಣಕ್ಕಾಗಿ ಸಿದ್ಧರಾದವರೊಂದಿಗೆ ಸೇರಿಕೊಳ್ಳುತ್ತಿದ್ದಾನೆ.

*ಜೂಲ್ಯನೆಂಬ ಹೆಸರಿನ ಒಬ್ಬ ಶತಾಧಿಪತಿ* (ವ. 1): ಈ ಒಂದು ಕಥೆಯಲ್ಲಿ ಮಾತ್ರ ಈ ರೋಮನ್ ಶತಾಧಿಪತಿಯು ತಿಳಿಸಲ್ಪಟ್ಟಿದ್ದಾನೆ. ಈತನು ಖೈದಿಗಳನ್ನು ರೋಮ್‌ಗೆ ಸಾಗಿಸುವ ಅಧಿಕಾರ ಹೊತ್ತವನಾಗಿದ್ದನು. ಈತನಿಗೆ ಸಹಾಯಕವಾಗಿ ಸೈನಿಕರ ಒಂದು ದಂಡು ನೇಮಿಸಲ್ಪಟ್ಟಿತ್ತು (ವ. 31–32, 42 ನ್ನು ನೋಡಿರಿ).

*ಅದ್ರಮಿತಿಯದಿಂದ ಬಂದ ಹಡಗು* (ವ. 2): ಇದು ಏಷ್ಯಾ ಪ್ರಾಂತ್ಯದ ಪಶ್ಚಿಮ ಕರಾವಳಿಯಲ್ಲಿರುವ ತ್ರೋವದ ದಕ್ಷಿಣ ಬಂದರು ಆಗಿತ್ತು. ಏಷ್ಯಾದ ಕರಾವಳಿಯಲ್ಲಿ ಹಡಗು ನಿಲ್ಲಿಸಲ್ಪಟ್ಟ ಒಂದು ಸ್ಥಳದಲ್ಲಿ ಜೂಲ್ಯನು ತನ್ನ ಖೈದಿಗಳ ಗುಂಪನ್ನು ರೋಮ್‌ಗೆ ಪ್ರಯಾಣಿಸುತ್ತಿದ್ದ ಒಂದು ಹಡಗಿನಲ್ಲಿ ಹತ್ತಿಸಬೇಕೆಂದು ಆಲೋಚಿಸಿದ್ದನು.

*ಅರಿಸ್ತಾರ್ಕನು* (ವ. 2): 19:29 ರ ಟಿಪ್ಪಣಿಯನ್ನು ನೋಡಿರಿ.

*ಸಿದೋನ್* (ವ. 3): ಸಿದೋನ್ ಸೆಜರೇಯದ ಉತ್ತರ ಭಾಗದಿಂದ 110 ಕಿ.ಮೀ. ದೂರದಲ್ಲಿ ನೆಲೆಯಾಗಿತ್ತು. 12:20 ರ ಟಿಪ್ಪಣಿಯನ್ನು ಸಹ ನೋಡಿರಿ.

*ಲೂಸಿಯಾದ ಮುರ* (ವ. 5): ರೋಮನ್ನರ ಅಡಿಯಲ್ಲಿ ಮುರ ಲೂಸಿಯಾ ಪ್ರಾಂತ್ಯದ ರಾಜಧಾನಿಯಾಗಿತ್ತು. ಇದು ವ್ಯಾಪಾರ ವಹಿವಾಟಿಗೆ ಪ್ರಮುಖ ಕೇಂದ್ರವಾಗಿತ್ತು ಮತ್ತು ದವಸಧಾನ್ಯಗಳನ್ನು ಶೇಖರಿಸಿಡುವ ಪಟ್ಟಣವಾಗಿತ್ತು. ಸಿದೋನ್‌ನಿಂದ ಮುರಕ್ಕೆ ಪ್ರಯಾಣಿಸಲು 10–15 ದಿನಗಳಷ್ಟು ಸಮಯ ಹಿಡಿಯುತ್ತಿತ್ತು. ಜೂಲ್ಯನು ಇಲ್ಲಿ ಹಡಗುಗಳನ್ನು ಬದಲಾಯಿಸಿ ನೇರವಾಗಿ ರೋಮ್‌ಗೆ ಪ್ರಯಾಣಿಸುವ ಹಡಗನ್ನು ಹತ್ತಬೇಕೆಂದು ತೀರ್ಮಾನಿಸಿದನು.

*ಅಲೆಕ್ಸಾಂದ್ರಿಯದ ಹಡಗು* (ವ. 6): ಇದು ಈಜಿಪ್ಟಿನ ಅಲೆಕ್ಸಾಂದ್ರಿಯದಿಂದ ಗೋಧಿಯನ್ನು ಹೊತ್ತು ರೋಮ್‌ಗೆ ಪ್ರಯಾಣಿಸುತ್ತಿದ್ದ ಹಡಗಾಗಿತ್ತು (ನೋಡಿರಿ ವ. 38).

*ಕ್ನೀಡ* (ವ. 7): ಇದು ಏಷ್ಯಾದ ಪಶ್ಚಿಮದ ತುತ್ತತುದಿಯಲ್ಲಿದ್ದ ಪ್ರಾಂತ್ಯವಾಗಿತ್ತು. ಇದು ಮುರದಿಂದ 270 ಕಿ.ಮೀ. ದೂರದಲ್ಲಿ ನೆಲೆಯಾಗಿತ್ತು ಮತ್ತು ಅಲ್ಲಿಗೆ ತಲುಪಲು 10 ರಿಂದ 15 ದಿನಗಳ ಕಾಲ ಪ್ರಯಾಣಿಸಬೇಕಾಗಿತ್ತು.

*ಕ್ರೇಟ* (ವ. 7): ಇದು ಒಂದು 260 ಕಿ.ಮೀ. ಉದ್ದವನ್ನು ಹೊಂದಿದ್ದ ದ್ವೀಪವಾಗಿತ್ತು. ಇದರ ದಕ್ಷಿಣಕ್ಕೆ ಪ್ರಯಾಣಿಸುವುದಾದರೆ ಬೀಸುವ ಗಾಳಿಯಿಂದ ಸುರಕ್ಷತೆ ಸಿಗುತ್ತಿತ್ತು.

*ಉಪವಾಸದ ದಿನವು ಸಹ ಮುಗಿದುಹೋಯಿತು* (ವ. 9): ಇದು ಯೆಹೂದ್ಯರ ಪ್ರಾಯಶ್ಚಿತ್ತ ಬಲಿಯ ದಿನದ ಕುರಿತು ಉಲ್ಲೇಖಿಸುತ್ತದೆ, ಇದು ಕ್ರಿ.ಶ. 59 ರಲ್ಲಿ (ಬಹುಶಃ ಈ ಕಥೆಯು ನಡೆದ ಸಂದರ್ಭದಲ್ಲಿ) ಅಕ್ಟೋಬರ್ 5 ರಂದು ಜರುಗಿತು. ರೋಮನ್ನರು ಸೆಪ್ಟೆಂಬರ್‌ನ ಮಧ್ಯದಲ್ಲಿ ಹಡಗಿನಲ್ಲಿ ಪ್ರಯಾಣಿಸುವಂತಹದ್ದು ಅಪಾಯಕರವಾದದ್ದು ಮತ್ತು ಅಕ್ಟೋಬರ್‌ನ ಪ್ರಾರಂಭದಲ್ಲಿ ಪ್ರಯಾಣಿಸುವಂತಹದ್ದು ಬಹಳ ಆಪತ್ತಿನಿಂದ ಕೂಡಿರುತ್ತದೆಂದು ಪರಿಗಣಿಸಿದ್ದರು.

*ಫೆನಿಕ್ಸ್* (ವ. 12): ಇದು ಚಳಿಗಾಲದಲ್ಲಿ ಬೀಸುತ್ತಿದ್ದ ಎದುರು ಗಾಳಿಯಿಂದ ಸುರಕ್ಷಿತವಾದ ಬಂದರನ್ನು ಹೊಂದಿದ್ದ ಒಂದು ಮುಖ್ಯ ಪಟ್ಟಣವಾಗಿತ್ತು.

## ಇ) ಪಠ್ಯ ಪ್ರಶ್ನೆಗಳು

1. ನಕ್ಷೆಯಲ್ಲಿ ಈ ಸ್ಥಳಗಳನ್ನು ಗುರುತಿಸಿರಿ: ಸೆಜರೇಯ, ಸಿದೋನ್, ಸೈಪ್ರಸ್, ಸಿಲಿಸಿಯ, ಪಂಫಿಲ್ಯ, ಮುರ, ಲೂಸಿಯಾ, ಕ್ನೀಡ, ಕ್ರೇಟ ಮತ್ತು ಫೆನಿಕ್ಸ್!
2. ಪೌಲನನ್ನು ಮತ್ತು ಇತರ ಖೈದಿಗಳನ್ನು ಕೊಂಡೊಯ್ಯುವ ಅಧಿಕಾರವನ್ನು ಯಾರು ವಹಿಸಿಕೊಂಡಿದ್ದರು?
3. ಅವರು ಸಿದೋನಿಗೆ ತಲುಪಿದ ತಕ್ಷಣ ಪೌಲನು ಏನು ಮಾಡಲು ಅನುಮತಿ ಪಡಕೊಂಡನು?
4. ಪ್ರಯಾಣಿಕರು ಯಾವ ಬಂದರಿನಲ್ಲಿ ತಮ್ಮ ಹಡಗನ್ನು ಬದಲಾಯಿಸಿದರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ವ. 9 ರಲ್ಲಿ ಲೂಕನು ಸಮುದ್ರ ಪ್ರಯಾಣವು ಈಗಾಗಲೇ ಅಪಾಯದಲ್ಲಿತ್ತೆಂದು ಬರೆಯುತ್ತಿದ್ದಾನೆ. ಯಾಕೆ?
2. ಜೂಲ್ಯನೆಂಬ ಶತಾಧಿಪತಿಯು ಖೈದಿಗಳನ್ನು ರೋಮ್‌ಗೆ ಕರೆದೊಯ್ಯುವ ಅಧಿಕಾರವನ್ನು ವಹಿಸಿಕೊಂಡಿದ್ದನು. ಅವರು ಕ್ರೇಟ ದ್ವೀಪದ 'ಚಂದ ರೇವುಗಳ' ಬಳಿಗೆ ಬಂದಾಗ, ಆತನು ಅಲ್ಲಿಯೇ ಚಳಿಗಾಲವನ್ನು ಕಳೆಯಬೇಕೋ ಅಥವಾ ಕ್ರೇಟದಲ್ಲಿದ್ದ ಸುರಕ್ಷಿತವಾದ ಬಂದರನ್ನು ತಲುಪುವಂತೆ ಸಮುದ್ರದ ಪ್ರಯಾಣವನ್ನು ಮುಂದುವರಿಸಬೇಕೋ ಎಂಬ ನಿರ್ಧಾರವನ್ನು ಮಾಡಬೇಕಾಗಿತ್ತು. ಅವರು ಅಲ್ಲಿಯೇ ಉಳಿದುಕೊಳ್ಳುವಂತೆ ಪೌಲನು ಸಲಹೆ ಕೊಟ್ಟನು. ಹಡಗನ್ನು ಚಲಾಯಿಸುವವನು ಮತ್ತು ಹಡಗಿನ ಮಾಲೀಕನು ಪ್ರಯಾಣವನ್ನು ಮುಂದುವರಿಸಬೇಕೆಂದಿದ್ದರು. ಜೂಲ್ಯನು ಪೌಲನ ಸಲಹೆಗಿಂತ ಚಾಲಕನ ಮತ್ತು ಹಡಗಿನ ಮಾಲೀಕನ ಮಾತನ್ನು ಯಾಕೆ ಕೇಳಿದನೆಂದು ನೀವು ಆಲೋಚಿಸುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಜೂಲ್ಯನು ಚಂದ ರೇವುಗಳಲ್ಲಿ ಉಳಿದುಕೊಳ್ಳಬೇಕೋ ಅಥವಾ ಸುರಕ್ಷಿತವಾದ ಬಂದರಿನ ಕಡೆಗೆ ಪ್ರಯಾಣವನ್ನು ಮುಂದುವರೆಸಬೇಕು ಎಂಬುದಾಗಿ ತಿಳಿಯದ ಸಂಕಷ್ಟದ ಪರಿಸ್ಥಿತಿಯಲ್ಲಿದ್ದನು. ಪೌಲನು ಆತನಿಗೆ ಒಂದು ಸಲಹೆಯನ್ನು ಕೊಟ್ಟನು. ಹಡಗಿನ ಚಾಲಕ ಮತ್ತು ಮಾಲೀಕನು ಭಿನ್ನಾಭಿಪ್ರಾಯಪಟ್ಟರು.

ಕೆಲವೊಮ್ಮೆ ಸಭಾನಾಯಕರುಗಳಾದ ನಾವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿರುತ್ತೇವೆ ಮತ್ತು ಅಂತಹ ಸಂದರ್ಭದಲ್ಲಿ ಬೇರೆಯವರ ಸಲಹೆ ನಮಗೆ ಅವಶ್ಯವಾಗಿರುತ್ತದೆ. ಆದರೆ ಕೆಲವರು ನಾವು ಹೀಗೆ ಮಾಡಬೇಕೆಂದು ಸಲಹೆ ನೀಡುತ್ತಾರೆ. ಇನ್ನು ಕೆಲವರು ನಾವು ಹಾಗೆ ಮಾಡಬೇಕೆಂದು ಸಲಹೆ ನೀಡುತ್ತಾರೆ. ನಾವು ಯಾರ ಮಾತನ್ನು ಕೇಳಬೇಕೆಂದು ನಮಗೆ ಹೇಗೆ ತಿಳಿಯುತ್ತದೆ? ನಿಮ್ಮ ಅನುಭವವನ್ನು ಹಂಚಿಕೊಳ್ಳಿರಿ! ನಾವು ಸರಿಯಾದ ನಿರ್ಧಾರವನ್ನು ಹೇಗೆ ಕೈಗೊಳ್ಳಬಹುದು?

# ಪಾಠ 69. ಚಂಡಮಾರುತ 27:13–26

## ಅ) ವಾಕ್ಯಭಾಗ

ಕೊನೆಗೆ ಸಮುದ್ರ ಪ್ರಯಾಣವನ್ನು ಫೆನಿಕ್ಸಿಗೆ ಮುಂದುವರೆಸಬೇಕೆಂದೂ ಮತ್ತು ನಾವಿಕರ ದಂಡು, ಖೈದಿಗಳು ಹಾಗೂ ಸೈನಿಕರು ಚಳಿಗಾಲವನ್ನು ಅಲ್ಲಿಯೇ ಕಳೆಯಬೇಕೆಂದು ನಿರ್ಧರಿಸಲಾಯಿತು. ಆದರೆ ಕೆಲವೇ ಕ್ಷಣದಲ್ಲಿ ಹಡಗು ಒಂದು ಭಯಂಕರವಾದ ಚಂಡಮಾರುತದಲ್ಲಿ ಸಿಕ್ಕಿಕೊಂಡಿತ್ತು, ಅದು ಅನೇಕ ದಿನಗಳವರೆಗೆ ಬೀಸುತ್ತಿತ್ತು. ಕೊನೆಯಲ್ಲಿ ಅವರೆಲ್ಲರೂ ಜೀವದಿಂದುಳಿಯುವ ಎಲ್ಲಾ ನಿರೀಕ್ಷೆಯನ್ನು ಕಳೆದುಕೊಂಡರು. ಆಗ ಪೌಲನು ಅವರಿಗೆ ಆದರಣೆಯ ಮಾತುಗಳನ್ನು ಆಡಿದನು. ಅವರೆಲ್ಲರೂ ರಕ್ಷಿಸಲ್ಪಡುವರೆಂದು ದೇವದೂತನೊಬ್ಬನು ಆತನಿಗೆ ತಿಳಿಸಿದ್ದನು.

## ಆ) ಟಿಪ್ಪಣಿ

*ಆದರೆ ಸ್ವಲ್ಪ ಸಮಯದಲ್ಲಿಯೇ 'ಈಶಾನ್ಯ ಮಾರುತ' ಎಂಬ ಪ್ರಚಂಡ ಗಾಳಿ ದ್ವೀಪದ ಕಡೆಯಿಂದ ಬೀಸತೊಡಗಿತು. ಹಡಗು ಬಿರುಗಾಳಿಗೆ ಸಿಕ್ಕಿಕೊಂಡು ಮುಂದೆ ಹೋಗಲಾರದೆ ಇರಲು ಗಾಳಿ ಬೀಸಿದ ಕಡೆಗೆ ನೂಕಿಸಿಕೊಂಡು ಹೋದೆವು* (ವ. 14–15): ಇದು ಚಳಿಗಾಲದ ತಿಂಗಳುಗಳಲ್ಲಿ ಕ್ರೇಟದ ದಕ್ಷಿಣದಲ್ಲಿ ಸಮುದ್ರ ಪ್ರಯಾಣ ಮಾಡುವವರು ಸರ್ವೆಸಾಮಾನ್ಯವಾಗಿ ಅನುಭವಿಸುವಂತಹ ಸಂಗತಿಯಾಗಿದೆ. ಹಾಯಿಯುಳ್ಳ ಆಧುನಿಕ ಹಡಗುಗಳು ಶಕ್ತವಾಗಿರುವಂತೆ ಪ್ರಾಚೀನ ಹಡಗುಗಳು ಬಲವಾಗಿ ಬೀಸುವ ಗಾಳಿಗೆ ಎದುರಾಗಿ ಸಮುದ್ರಕ್ಕೆ ಎದುರಾಗಿ ಪ್ರಯಾಣವನ್ನು ಮುಂದುವರೆಸುತ್ತಿದ್ದಿಲ್ಲ. ಕ್ರೇಟ ಪರ್ವತ ಶ್ರೇಣಿಗಳಿಂದ ರಭಸವಾಗಿ ಬೀಸುತ್ತಿದ್ದ ಬಿರುಗಾಳಿಯ ಎದುರು ಅವರು ತಪ್ಪಿಸಿಕೊಂಡು ಹೋಗುವುದನ್ನು ಬಿಟ್ಟರೆ ಬೇರೆ ಯಾವ ಮಾರ್ಗವಿರಲಿಲ್ಲ ಹಾಗಾಗಿ ಅವರು ದಕ್ಷಿಣದ ಕಡೆಗೆ ನೂಕಿಸಿಕೊಂಡು ಹೋಗಲ್ಪಟ್ಟರು.

*ಕ್ಲೌದ* (ವ. 16): ಈ ಸಣ್ಣ ದ್ವೀಪವು ಕ್ರೇಟದಿಂದ 37 ಕಿ.ಮೀ. ದೂರದಲ್ಲಿ ನೆಲೆಯಾಗಿತ್ತು. ಅಲ್ಲಿ ಅವರು ಬಿರುಗಾಳಿಯನ್ನು ಎದುರಿಸಲಿಕ್ಕೆ ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳಲು ಸಾಕಷ್ಟು ಆಶ್ರಯವನ್ನು ಪಡೆದರು.

*ಜೀವರಕ್ಷಕ ದೋಣಿಯನ್ನು ಸರಿಪಡಿಸಿಕೊಂಡು* (ವ. 16): ಇದು ಹಡಗಿನ ಹಿಂದೆ ಹಗ್ಗಗಳಿಂದ ಕಟ್ಟಲ್ಪಟ್ಟ ಒಂದು ಸಣ್ಣ ದೋಣಿಯಾಗಿತ್ತು. ಅದನ್ನು ಹಡಗಿನ ಒಳಗೆ ಎಳೆದುಕೊಳ್ಳಬೇಕಾಯಿತು ಇಲ್ಲವಾದಲ್ಲಿ ಅದು ನಾಶವಾಗಬಹುದಿತ್ತು. ಅದು ಬಿರುಗಾಳಿಯಲ್ಲಿ ಹಡಗನ್ನು ಚಲಾಯಿಸುವಾಗಲು ಸಮಸ್ಯೆ ಉಂಟುಮಾಡಬಹುದಿತ್ತು.

*ಹಗ್ಗಗಳಿಂದ ಹಡಗಿನ ಕೆಳಭಾಗಕ್ಕೆ ಬಿಗಿಯಾಗಿ ಕಟ್ಟಿದರು* (ವ. 17): ಬಿರುಗಾಳಿಯಿಂದ ಮುರಿದು ಹೋಗದಂತೆ ಹಡಗನ್ನು ಭದ್ರಪಡಿಸಲು ಈ ರೀತಿ ಮಾಡಲಾಯಿತು.

*ಸುರ್ತಿಸ್ ಎಂಬ ಉಸುಬಿನಲ್ಲಿ* (ವ. 17): ಈ ಅಪಾಯಕಾರಿ ಉಸುಬು ಆಫ್ರಿಕಾದ ಉತ್ತರ ತೀರದಲ್ಲಿತ್ತು ಮತ್ತು ಇನ್ನೂ 600 ಕಿ.ಮೀ. ರಷ್ಟು ದೂರದಲ್ಲಿತ್ತು. ಆದರೆ ಇಂತಹ ಬಿರುಗಾಳಿಯಿಂದ ಒಂದು ಹಡಗು ಬಹಳ ದೂರಕ್ಕೆ ನೂಕಿಸಲ್ಪಡಬಹುದಿತ್ತು.

*ಹಾಯಿಯನ್ನು* (ವ. 17): ಇದರ ಗ್ರೀಕ್ ಪದದ ಅರ್ಥವೇನೆಂದರೆ 'ಒಂದು ವಸ್ತು, ಸಂಗತಿ' ಇದನ್ನು'ಹಾಯಿ' ಎಂಬುದಾಗಿ ಅನುವಾದಿಸಲಾಗಿದೆ.

*ಸರಕುಗಳನ್ನು ಹಡಗಿನಿಂದ ಹೊರಗೆ ಎಸೆಯಲು* (ವ. 18): ಅವರು ಹಡಗನ್ನು ಹಗುರ ಮಾಡಲು ಈ ರೀತಿಯಾಗಿ ಮಾಡಿದರು. ಆದರೆ ಕೆಲವು ದವಸಧಾನ್ಯಗಳ ಚೀಲಗಳನ್ನು ಇಟ್ಟುಕೊಂಡರು (ವ. 38 ನ್ನು ನೋಡಿರಿ).

*ಹಡಗಿನ ಅಡ್ಡಮರವನ್ನು ತಮ್ಮ ಕೈಗಳಿಂದಲೇ ಎತ್ತಿ ಹೊರಗೆ ಎಸೆದರು* (ವ. 19): ಬಹುಶಃ ಅವರು ಹಡಗಿನಲ್ಲಿ ಅತ್ತಿತ್ತ ಸರಿದಾಡಬಹುದಾದ ಎಲ್ಲಾ ವಸ್ತುಗಳನ್ನು ಸಮುದ್ರದಲ್ಲಿ ಎಸೆದರು.

## ಇ) ಪಠ್ಯ ಪ್ರಶ್ನೆಗಳು

1. ಅವರು ಕ್ಲೌವ್ದ ಎಂಬ ಪುಟ್ಟ ದ್ವೀಪಕ್ಕೆ ಬಂದಾಗ ಏನು ಸಂಭವಿಸಿತು?
2. ಹಡಗಿನಲ್ಲಿರುವ ಪ್ರತಿಯೊಬ್ಬನು ರಕ್ಷಿಸಲ್ಪಡುವನೆಂದು ಪೌಲನು ಹೇಗೆ ನಿಶ್ಚಯವಾಗಿ ಹೇಳಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ವಚನ 20 ರಲ್ಲಿ ಲೂಕನು ತಿಳಿಸುವ ಮಾಹಿತಿಯ ಜಲಸಂಚಾರ ಅನ್ವಯಗಳು ಏನಾಗಿರಬಹುದು ('ಅನೇಕ ದಿನಗಳವರೆಗೆ ಸೂರ್ಯನನ್ನಾಗಲಿ ನಕ್ಷತ್ರಗಳನ್ನಾಗಲಿ ಕಾಣದೆ ಚಂಡಮಾರುತ ಬೀಸುತ್ತಲೇ ಇತ್ತು')?
2. ವಚನ 27:10 ರಲ್ಲಿ ಪೌಲನು ಹೇಳಿದ್ದರ ಮತ್ತು 27:24 ರಲ್ಲಿ ದೇವದೂತನು ಹೇಳಿದ್ದರ ನಡುವೆ ಹೊಂದಾಣಿಕೆ ಇಲ್ಲದಿರುವುದು ಕಂಡುಬರುತ್ತದೆ. ಹೊಂದಾಣಿಕೆ ಇಲ್ಲದ ಅಂಶವನ್ನು ಗುರುತಿಸಿರಿ! ಈ ವ್ಯತ್ಯಾಸವನ್ನು ನೀವು ಹೇಗೆ ವಿವರಿಸುವಿರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ವಾಕ್ಯಭಾಗದಲ್ಲಿ ಲೂಕನು ಪೌಲನ ನಡವಳಿಕೆಯಲ್ಲಿ ಒಂದು ಮಾನವ ಸಂಬಂಧ ಲಕ್ಷಣವನ್ನು ಸೇರಿಸುತ್ತಿದ್ದಾನೆ. ಚಂಡಮಾರುತವು ಬಹಳ ದಿನಗಳವರೆಗೆ ಬೀಸುತ್ತಿದ್ದಾಗ, ಪೌಲನು ಅವರ ಮುಂದೆ ಎದ್ದು ನಿಂತುಕೊಂಡು ಹೀಗೆ ಹೇಳಿದನು: 'ಸ್ನೇಹಿತರೇ, ನೀವು ಕ್ರೇಟದಿಂದ ಮುಂದೆ ಪ್ರಯಾಣ ಮಾಡಬಾರದೆಂದು ಹೇಳಿದ ನನ್ನ ಮಾತಿಗೆ ವಿಧೇಯರಾಗಿದ್ದರೆ ...' (ವ. 21). ಖಂಡಿತವಾಗಲೂ ಪೌಲನು ಒಬ್ಬ ಶ್ರೇಷ್ಟ ದೇವರ ಮನುಷ್ಯನು ಹಾಗೂ ಅಪೋಸ್ತಲನು ಆಗಿದ್ದನು. ಆದರೆ ಆತನು

ಮಾನವನ ಬಲಹೀನತೆಗಳಿಂದ ಮುಕ್ತನಾಗಿರಲಿಲ್ಲ! ಆತನು ಇತರರಿಗೆ ನೆನಪಿಸದಂತೆ ತನ್ನನ್ನು ತಡೆಯಲಾಗಲಿಲ್ಲ: 'ನಿಮಗೆ ನಾನು ಹೇಳಿದ್ದನ್ನು ನೆನಪಿಸಿಕೊಳ್ಳಿರಿ! ಈಗ ನಾನು ಹೇಳಿದ್ದು ಸರಿಯೆಂದು ನಿಮಗೆ ಗೊತ್ತಾಗಿದೆ!'

ಇಂದಿಗೂ ಸಹ ಕ್ರೈಸ್ತ ನಾಯಕರುಗಳ ವ್ಯಕ್ತಿತ್ವದಲ್ಲಿ ಇಂತಹ ಶ್ರೇಷ್ಟತೆಯ ಮತ್ತು ಮಾನವನ ಬಲಹೀನತೆಗಳ ಒಂದು ಮಿಶ್ರಣವನ್ನು ಕಾಣಬಹುದು:

1. ನಿಮಗೆ ಇಂತಹ ಯಾವುದಾದರೂ ಉದಾಹರಣೆಗಳು ತಿಳಿದಿವೆಯೋ? ದಯವಿಟ್ಟು ಹಂಚಿಕೊಳ್ಳಿರಿ!
2. ನಾವು ಕ್ರೈಸ್ತ ನಾಯಕರುಗಳಲ್ಲಿ ಸ್ಪಷ್ಟವಾದ ಮಾನವನ ಬಲಹೀನತೆಗಳನ್ನು ಕಾಣುವಾಗ, ನಮಗೆ ನಿರಾಶೆ ಅಥವಾ ವಿಶ್ವಾಸಘಾತ ಉಂಟಾಯಿತೆಂದು ಭಾವಿಸಬಹುದು. ನೀವು ಈ ರೀತಿಯಾಗಿ ಎಂದಾದರೂ ಅನುಭವಿಸಿದ್ದೀರೋ? ದಯವಿಟ್ಟು ಹಂಚಿಕೊಳ್ಳಿರಿ!
3. ಈ ರೀತಿಯ ನಿರಾಶೆ ಅಥವಾ ವಿಶ್ವಾಸಘಾತವನ್ನು ಅನುಭವಿಸಿದ ಸಹ–ವಿಶ್ವಾಸಿಗಳಿಗೆ ನೀವು ಕೊಡುವ ಸಲಹೆಯೇನು?
4. ಮಾನವನ ಬಲಹೀನತೆಗಳನ್ನು ನಮ್ಮ ಸಹ–ಕ್ರೈಸ್ತ ನಾಯಕರುಗಳು ಜಯಿಸಲು ನಾವು ನಮ್ಮ ಆತ್ಮೀಕ ಜ್ಞಾನವನ್ನು ಹೇಗೆ ಉಪಯೋಗಿಸಬಹುದು? ಆ ಬಲಹೀನತೆಗಳು ಗರ್ವ, ಅತಿಯಾದ ಭರವಸೆ (ಆತ್ಮವಿಶ್ವಾಸ), ಸ್ವಾರ್ಥ, ಅಹಂಕಾರ, ಅಧಿಕಾರದ ದಾಹ, ಸೋಮಾರಿತನ, ಹೊಟ್ಟೆಬಾಕತನ, ಹಣ ಮತ್ತು ಆಸ್ತಿ ಮೇಲಿನ ವ್ಯಾಮೋಹ, ಐಶರಾಮಿ ಜೀವನ ಇತ್ಯಾದಿಗಳಿಗೆ ಸಂಬಂಧಪಟ್ಟಿರಬಹುದು.

# ಪಾಠ 70. ಹಡಗು ಒಡೆದುಹೋದದ್ದು, 27:27–44

## ಅ) ವಾಕ್ಯಭಾಗ

ಚಂಡಮಾರುತವು 276 ಜನರನ್ನೊಳಗೊಂಡ (ನಾವಿಕರು, ಸೈನಿಕರು ಮತ್ತು ಖೈದಿಗಳು) ಹಡಗನ್ನು ಅನೇಕ ದಿನಗಳವರೆಗೆ ಸಮುದ್ರದಲ್ಲಿ ಹೊಯ್ದಾಡಿಸುತ್ತಿತ್ತು. ಒಂದು ದಿನ ಮಧ್ಯರಾತ್ರಿಯಲ್ಲಿ ತಾವು ಭೂಮಿಯನ್ನು ತಲುಪುತ್ತಿದ್ದೇವೆಂದು ನಾವಿಕರು ಮನಗಂಡರು, ಹಾಗಾಗಿ ಅವರು ಸಮುದ್ರದ ಆಳವನ್ನು ಅಳೆಯಲಿಕ್ಕೆ ಪ್ರಾರಂಭಿಸಿದರು. ನಂತರ ನಾವಿಕರು ಉಳಿದವರನ್ನು ಹಡಗಿನಲ್ಲೇ ಬಿಟ್ಟು ತಾವು ಹಡಗಿನಿಂದ ತಪ್ಪಿಸಿಕೊಳ್ಳಬೇಕೆಂದು ಯೋಚಿಸಿದರು. ಆದರೆ ಪೌಲನು ಪ್ರತಿಯೊಬ್ಬರು ಹಡಗಿನಲ್ಲಿರುವಂತೆ ಖಚಿತಪಡಿಸಿಕೋ ಇಲ್ಲವಾದರೆ ನಾವೆಲ್ಲರೂ ಸತ್ತು ಹೋಗುವೆವು ಎಂದು ಶತಾಧಿಪತಿಗೆ ಹೇಳಿದನು. ಮುಂಜಾನೆಯಲ್ಲಿ ಅವರು ಹಡಗು ದಡವನ್ನು ಸೇರುವುದಕ್ಕೆ ಸಿದ್ಧಪಡಿಸಿದರು, ಆದರೆ ಹಡಗು ಮಧ್ಯದಲ್ಲಿ ಮರಳು ದಿಬ್ಬಕ್ಕೆ ಅಪ್ಪಳಿಸಿ ಮುಳಗಲಿಕ್ಕೆ ಪ್ರಾರಂಭಿಸಿತು. ಹಾಗಾಗಿ ಪ್ರತಿಯೊಬ್ಬರು ಹಡಗನ್ನು ಬಿಟ್ಟು ಸುರಕ್ಷಿತವಾಗಿ ದಡವನ್ನು ಸೇರಿದರು.

## ಆ) ಟಿಪ್ಪಣಿ

*ಆದ್ರಿಯ ಸಮುದ್ರದಲ್ಲಿ* (ವ 27): ಇದು ಇಟಲಿ, ಕ್ರೇಟ ಮತ್ತು ಗ್ರೀಸ್‌ನ ನಡುವೆ ನೆಲಸಿರುವ ಮೆಡಿಟೆರೆನಿಯನ್ ಸಮುದ್ರದ ಒಂದು ಭಾಗವಾಗಿದೆ.

*ಅಲ್ಲಿ ಹಡಗಿನಲ್ಲಿ ನಾವೆಲ್ಲ ಒಟ್ಟು 276 ಜನರಿದ್ದೆವು* (ವ. 37): ಬಹುಶಃ ಊಟವನ್ನು ಹಂಚಬೇಕಾಗಿದ್ದರ ನಿಮಿತ್ತ ಹಡಗಿನಲ್ಲಿರುವ ಪ್ರತಿಯೊಬ್ಬರನ್ನು ಎಣಿಕೆ ಮಾಡಲಾಗಿತ್ತು. ಹಡಗು ಇಷ್ಟೊಂದು ಜನರನ್ನು ಹೊತ್ತುಕೊಂಡು ಹೋಗಲು ಸಾಧ್ಯವೋ ಎಂಬುದಾಗಿ ನಾವು ಆಶ್ಚರ್ಯಪಡಬಹುದು, ಆದರೆ ಕೆಲವೊಂದು ಅಲೆಗ್ಸಾಂಡ್ರಿಯಾದ ದವಸ ಧಾನ್ಯಗಳನ್ನು ಹೊತ್ತು ತರುವ ಹಡಗುಗಳು ಅತೀ ದೊಡ್ಡದಾಗಿದ್ದವು. ಯೆಹೂದ್ಯ ಇತಿಹಾಸಕಾರನಾದ ಜೋಸೆಫಸ್‌ನ ಹಡಗೂ ಸಹ ಆದ್ರಿಯ ಸಮುದ್ರದಲ್ಲಿ ನಾಶವಾಗಿತ್ತು, ಅದರಲ್ಲಿ ಸುಮಾರು 600 ಜನ ಪ್ರಯಾಣಿಕರಿದ್ದರು. ಅವರಲ್ಲಿ ಅನೇಕರು ಸತ್ತುಹೋದರು.

*ಲಂಗರುಗಳನ್ನು ಸಡಿಲಗೊಳಿಸಿ ... ಚುಕ್ಕಾಣಿಗಳಿಗೆ ಕಟ್ಟಿದ ಹಗ್ಗವನ್ನು ಬಿಚ್ಚಿದರು ... ಹಾಯಿಯನ್ನು ಗಾಳಿಗೆ ಎತ್ತಿ ಕಟ್ಟಿ* (ವ. 40): ನಾವಿಕರು ಹಡಗು ಹಾಳಾದರೂ ಜನರನ್ನು ರಕ್ಷಿಸುವ ಸಲುವಾಗಿ ಹಡಗನ್ನು ದಡದ ಕಡೆಗೆ ಚಲಾಯಿಸುವಂತೆ ನಿರೀಕ್ಷಿಸಿದರು. ಹಾಗಾಗಿ ಅವರು ಲಂಗರುಗಳನ್ನು ಸಡಿಲಗೊಳಿಸಿ ಚುಕ್ಕಾಣಿಗಳಿಗೆ ಕಟ್ಟಿದ್ದ ಹಗ್ಗಗಳನ್ನು ಬಿಚ್ಚಿದರು (ಹಡಗಿನ ಎರಡೂ ಕಡೆಯಲ್ಲಿದ್ದ ದೊಡ್ಡ ಹುಟ್ಟುಗೋಲುಗಳು). ಹಡಗನ್ನು ಲಂಗುರ ಹಾಕಿ ನಿಲ್ಲಿಸುವಾಗ ಈ ಹುಟ್ಟುಗೋಲುಗಳನ್ನು/ಚುಕ್ಕಾಣಿಗಳನ್ನು ನೀರಿನಿಂದ ಮೇಲಕ್ಕೆತ್ತಿ ಕಟ್ಟಲಾಗುತ್ತಿತ್ತು. ಅದೇ ಸಮಯದಲ್ಲಿ, ಹಡಗನ್ನು ಚಲಾಯಿಸಲು ಸಾಧ್ಯವಾಗುವಂತೆ ರಾತ್ರಿಯಲ್ಲಿ ಸುತ್ತಲ್ಪಟ್ಟಿದ್ದ ಒಂದು ಹಾಯಿಯನ್ನು ಗಾಳಿಗೆ ಎತ್ತಿಕಟ್ಟಿದ್ದರು. ಹೀಗೆ ಅವರು ದಡದ ಕಡೆಗೆ ಸಾಗಿದರು.

*ಆ ಖೈದಿಗಳು ಈಜಿಕೊಂಡು ತಪ್ಪಿಸಿಕೊಳ್ಳದಂತೆ ಸೈನಿಕರು ಅವರನ್ನು ಕೊಲ್ಲಲು ಯೋಚನೆ* ಮಾಡಿದರು (ವ. 42): ಒಬ್ಬ ಖೈದಿಯು ತಪ್ಪಿಸಿಕೊಳ್ಳುವುದಾದರೆ, ಆತನನ್ನು ಕಾಯಲು ನೇಮಿಸಲ್ಪಟ್ಟ ಸೈನಿಕನನ್ನು ಕೊಲ್ಲಲಾಗುತ್ತಿತ್ತು. ಹಾಗಾಗಿ ಖೈದಿಗಳು ತಪ್ಪಿಸಿಕೊಳ್ಳುವ ಯಾವುದೇ ಅಪಾಯವನ್ನು ಸೈನಿಕರು ತೆಗೆದುಕೊಳ್ಳುವ ಇಚ್ಛೆಯುಳ್ಳವರಾಗಿರಲಿಲ್ಲ.

## ಇ) ಪಠ್ಯ ಪ್ರಶ್ನೆಗಳು

1. ಈ ಸ್ಥಳವನ್ನು ನಕ್ಷೆಯಲ್ಲಿ ಗುರುತಿಸಿರಿ: ಆದ್ರಿಯ ಸಮುದ್ರ/ಏಡ್ರಿಯಾಟಿಕ್ ಸಮುದ್ರ!
2. ಚಂಡಮಾರುತವು ಎಷ್ಟು ದಿನಗಳವರೆಗೆ ಮುಂದುವರೆಯಿತು?
3. ನಾವಿಕರು ಯಾಕೆ ಜೀವರಕ್ಷಕ ದೋಣಿಗಳನ್ನು ಸಮುದ್ರದಲ್ಲಿ ಇಳಿಸಿದರು?
4. ಪೌಲನು ರೊಟ್ಟಿಯನ್ನು ತಿನ್ನುವುದಕ್ಕಿಂತ ಮುಂಚೆ ಅದನ್ನು ಏನು ಮಾಡಿದನು?
5. ಅವರು ಗೋಧಿಯನ್ನು ಸಮುದ್ರದಲ್ಲಿ ಯಾಕೆ ಎಸೆದರು?
6. ಹಡಗಿನಲ್ಲಿದ್ದ ಎಲ್ಲಾ ಜನರು ಹೇಗೆ ರಕ್ಷಿಸಲ್ಪಟ್ಟರು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಸೈನಿಕರು ಜೀವರಕ್ಷಕ ದೋಣಿಗಳಿಗೆ ಕಟ್ಟಲ್ಪಟ್ಟ ಹಗ್ಗಗಳನ್ನು ಕತ್ತರಿಸಿ ಅವುಗಳು ಸಮುದ್ರದ ಪಾಲಾಗುವಂತೆ ಯಾಕೆ ಮಾಡಿದರು?
2. ಖೈದಿಗಳನ್ನು ಕೊಲ್ಲಬಾರದೆಂದು ಶತಾಧಿಪತಿಯು ಸೈನಿಕರಿಗೆ ಯಾಕೆ ಹೇಳಿದನು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ಕಥೆಯಲ್ಲಿ ಒಂದು ದೊಡ್ಡ ಗುಂಪಿನ ಜನರು ಬಿರುಗಾಳಿಗೆ ಸಿಕ್ಕಿಕೊಂಡಿರುವ ಹಡಗಿನಲ್ಲಿದ್ದುಕೊಂಡು ತಮ್ಮ ಜೀವಕ್ಕೆ ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆದರೆ ಪೌಲನು ಶಾಂತನಾಗಿದ್ದು ಇತರೆ ಕ್ರೈಸ್ತರಿಗೆ ನಾಲ್ಕು ರೀತಿಯಲ್ಲಿ ಒಂದು ಮಾದರಿಯಾಗುತ್ತಾನೆ (ವ. 33–36):

- ದಡವನ್ನು ಸೇರುವ ಅಪಾಯವನ್ನು ಎದುರಿಸುವ ಮುನ್ನ ಪೋಷಣೆ ಹೊಂದಿ ತನ್ನ ಬಲವನ್ನು ಮರಳಿ ಪಡೆಯಲು ಆತನು ಆಹಾರವನ್ನು ಸೇವಿಸಿದನು. ಆತನು ಸಾಮಾನ್ಯ ಜ್ಞಾನವನ್ನು ತೋರಿಸಿದನು.
- ಆತನು ತಿನ್ನಲಿಕ್ಕಿದ್ದ ರೊಟ್ಟಿಯನ್ನು ತೆಗೆದುಕೊಂಡು ದೇವರಿಗೆ ಸ್ತೋತ್ರವನ್ನು ಮಾಡಿದನು. ಆತನು ದೇವರ ಒದಗಿಸುವಿಕೆಗಾಗಿ ದೇವರಿಗೆ ಗೌರವವನ್ನು ಸಲ್ಲಿಸಿದನು.
- ಆತನು ಇದನ್ನು ಹಡಗಿನಲ್ಲಿರುವ ಬಹುಸಂಖ್ಯ ವಿಗ್ರಹಾರಾಧಕರ ಮತ್ತು ಅನ್ಯರ ಎದುರಿನಲ್ಲಿ ಹೀಗೆ ಮಾಡಿದನು. ಆತನು ತನ್ನ ಕ್ರೈಸ್ತ ನಂಬಿಕೆಯ ಕುರಿತು ನಾಚಿಕೆಪಡಲಿಲ್ಲ.

- ತನ್ನ ಜೊತೆಯಲ್ಲಿರುವ ಪ್ರಯಾಣಿಕರು ತಮ್ಮ ಬಲವನ್ನು ಮರಳಿ ಪಡೆಯಲು ಊಟಮಾಡುವಂತೆ ಅವರನ್ನು ಪ್ರೋತ್ಸಾಹಿಸಿದನು. ಆತನು ಹಡಗಿನಲ್ಲಿರುವ ಇತರೆ ಜನರ ಕುರಿತು ಕಾಳಜಿ ವಹಿಸಿದನು.

1. ಈ ಕಥೆಯಲ್ಲಿನ ಪೌಲನಂತೆ – ಜೀವಕ್ಕೆ ಸಂಕಷ್ಟ ಒದಗುವ ಪರಿಸ್ಥಿತಿಯಲ್ಲಿ ಇತರೆ ವಿಶ್ವಾಸಿಗಳಿಗೆ ಒಳ್ಳೆಯ ಮಾದರಿಯ ಜೀವಿತಗಳನ್ನು ನಡೆಸಿರುವ ವಿಶ್ವಾಸಿಗಳನ್ನು ನೀವು ದಕ್ಷಿಣ ಭಾರತದಲ್ಲಿ ಕಂಡಿದ್ದಿರೋ? ದಯವಿಟ್ಟು ಹಂಚಿಕೊಳ್ಳಿರಿ!
2. ಸ್ವತಃ ನೀವು ಈ ಕಥೆಯಲ್ಲಿರುವ ಪೌಲನ ಮಾದರಿಯಿಂದ ಏನನ್ನು ಕಲಿತುಕೊಳ್ಳಬಹುದು? ದಯವಿಟ್ಟು ಹಂಚಿಕೊಳ್ಳಿರಿ!

## ಊ) ಉಪದೇಶಿಸು ಮತ್ತು ಬೋಧಿಸು!

ಅ. ಕೃ. 27:13–44 ರಲ್ಲಿರುವ ಎರಡು ಕಥೆಗಳ (ಚಂಡಮಾರುತ ಮತ್ತು ಹಡಗು ಒಡೆದುಹೋದದ್ದು) ಆಧಾರದ ಮೇಲೆ ***ಪೌಲ – ಒಬ್ಬ ಶ್ರೇಷ್ಟ ನಾಯಕ*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಈ ಕೆಳಗಿನ ಹೊರರೇಖೆಯನ್ನು ನೀವು ಉಪಯೋಗಿಸಬಹುದು:

1. ಪೀಠಿಕೆ:
   1) ಒಂದು ಭಯಂಕರವಾದ ಚಂಡಮಾರುತದಲ್ಲಿ ಸಿಲುಕಿದ ಒಂದು ಹಡಗಿನಲ್ಲಿ ಪೌಲ ಮತ್ತು ಇತರೆ 275 ಜನರು
   2) ಶತಾಧಿಪತಿಯಾದ ಜೂಲ್ಯನಿಂದಲೂ ಮತ್ತು ಇತರರಿಂದಲೂ ಗೌರವಿಸಲ್ಪಟ್ಟ ಒಬ್ಬ ಖೈದಿಯಾದ ಪೌಲನು
   3) ಅನ್ಯರ ಮತ್ತು ವಿಗ್ರಹಾರಾಧಕರ ನಡುವೆ ಒಬ್ಬ ಕ್ರೈಸ್ತನಾದ ಪೌಲನು
2. ಪೌಲನ ಹಿನ್ನಲೆ:
   1) ಆತನು ಜೀವನದ ಅನೇಕ ಅನುಭವಗಳನ್ನು ಹೊಂದಿದ್ದ ಒಬ್ಬ ಪ್ರಾಯಸ್ಥನಾಗಿದ್ದನು (ಬಹುಶಃ ಸುಮಾರು 55 ವರ್ಷ ವಯಸ್ಸಾಗಿದ್ದಿರಬಹುದು).
   2) ಆತನು ಬಹಳ ಪ್ರಯಾಣಿಸಿದ್ದನು (2 ಕೊರಿ. 11:23–27). ಆತನ ಪ್ರಯಾಣವು ಹೆಚ್ಚಾಗಿ ಸಮುದ್ರ ಪ್ರಯಾಣಗಳಾಗಿದ್ದವು (ರೋಮ್‌ಗೆ ಪ್ರಯಾಣಿಸುವುದಕ್ಕಿಂತ ಮುಂಚೆ 11 ಸಮುದ್ರ ಪ್ರಯಾಣಗಳ ಕುರಿತು ಲೂಕನು ದಾಖಲಿಸುತ್ತಿದ್ದಾನೆ).
   3) ಆತನು 25 ವರ್ಷಗಳ ಕಾಲ ಒಬ್ಬ ಕ್ರೈಸ್ತ ನಾಯಕನಾಗಿದ್ದನು (ಸಭೆಗಳಲ್ಲಿ ಸಭಾಪಾಲಕನಾಗಿದ್ದನು, ಸಭೆಗಳ ಸ್ಥಾಪಕನಾಗಿದ್ದನು, ಎಲ್ಲಾ ಪರಿಸ್ಥಿತಿಗಳಲ್ಲಿಯೂ ಸುವಾರ್ತೆಯನ್ನು ಸಾರಿದ್ದನು, ಅನೇಕ ವಿವಿಧ ದೇಶಗಳಲ್ಲಿ ಸೇವಕರ ತಂಡಗಳನ್ನು ಮಾರ್ಗದರ್ಶಿಸಿದ್ದನು).
3. ಈ ಎರಡು ಕಥೆಗಳಲ್ಲಿ ಪೌಲನು ತನ್ನ ನಾಯಕತ್ವದ ಗುಣಗಳನ್ನು ತೋರಿಸುತ್ತಿದ್ದಾನೆ:

1) ಪೌಲನು ತನ್ನ ಜೊತೆ–ಪ್ರಯಾಣಿಕರನ್ನು ಉತ್ತೇಜಿಸಿದನು (27:21–26):

- ಯಾರಿಗೂ ಪ್ರಾಣ ಹಾನಿಯಾಗುವುದಿಲ್ಲ. ಹಡಗು ಮಾತ್ರವೇ ನಾಶವಾಗಿ ಹೋಗುತ್ತದೆ (ವ. 22)

- ದೇವದೂತನಿಂದ ಹೇಳಿಸಿದ ವಾಗ್ದಾನವನ್ನು ದೇವರು ನೇರವೇರಿಸದೆ ಬಿಡುವುದಿಲ್ಲ (ವ. 25).

- ದೇವರು ನಂಬಲಿಕ್ಕೆ ಅರ್ಹನು ಎಂಬುದಾಗಿ ಪೌಲನು ತನ್ನ ಅನುಭವದಿಂದ ತಿಳಿದುಕೊಂಡಿದ್ದನು

2) ಪೌಲನು ತನ್ನ ಜೊತೆ–ಪ್ರಯಾಣಿಕರಿಗೆ ಒಟ್ಟಿಗೆ ಇರಲು ಹೇಳಿದನು (27:27–32):

- ಪೌಲನ ಅನುಭವ ಮತ್ತು ಜ್ಞಾನವು ನಾವಿಕರು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ತಿಳಿಸಿಕೊಟ್ಟಿತು (ವ. 30).

- ಪೌಲನ ಅನುಭವ ಮತ್ತು ಜ್ಞಾನವು ತಾವೆಲ್ಲರೂ ಒಟ್ಟಾಗಿದ್ದರೆ ಜೀವ ರಕ್ಷಿಸಿಕೊಳ್ಳುವ ಹೆಚ್ಚಿನ ಸಾಧ್ಯತೆಯಿದೆ ಎಂಬುದನ್ನು ಆತನಿಗೆ ತಿಳಿಸಿಕೊಟ್ಟಿತು.

- ಅವರೆಲ್ಲರೂ ರಕ್ಷಿಸಲ್ಪಡುವರು ಎಂಬ ದೇವರ ವಾಗ್ದಾನದಲ್ಲಿ ಪೌಲನು ಇಟ್ಟ ಭರವಸೆಯು ತಾವೆಲ್ಲರೂ ಒಟ್ಟಾಗಿ ಇರದಿದ್ದರೆ ಜೀವ ಕಳೆದುಕೊಳ್ಳಬಹುದು ಎಂಬುದನ್ನು ಆತನಿಗೆ ಮನವರಿಕೆ ಮಾಡಿಸಿತು.

3) ಪೌಲನು ತನ್ನ ಜೊತೆ–ಪ್ರಯಾಣಿಕರು ಊಟ ಮಾಡುವಂತೆ ಬೇಡಿದನು (27;33–38):

- ಅವರು ಕಳೆದ 14 ದಿನಗಳಿಂದ ಏನನ್ನೂ ಊಟ ಮಾಡಿದ್ದಿಲ್ಲ: ಬಹುಶಃ ಅವರು ಬಹಳ ಹೆದರಿದವರಾಗಿದ್ದರು, ಬಹುಶಃ ಅವರು ಸಮುದ್ರ ಪ್ರಯಾಣದ ಅಸ್ವಸ್ಥತೆಗೆ ಗುರಿಯಾಗಿದ್ದಿರಬಹುದು, ಬಹುಶಃ ಅವರು ಚಂಡಮಾರುತದ ಮಧ್ಯದಲ್ಲಿ ಯಾವುದೇ ಆಹಾರವನ್ನು ತಯಾರಿಸಲು ಸಾಧ್ಯವಾಗಿರಲಿಲ್ಲ. ಏನೇ ಆದರೂ ಅವರು ಬಲಹೀನರಾಗಿದ್ದರು ಮತ್ತು ಹಸಿದವರಾಗಿದ್ದರು.

- ಪೌಲನ ಅನುಭವ ಮತ್ತು ಜ್ಞಾನವು ಅವರು ಊಟ ಸೇವಿಸಿ ಬಲವನ್ನು ಹೊಂದದೆ ಹೋದರೆ ಆ ದಿನದ ಸವಾಲುಗಳನ್ನು ಎದುರಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಆತನಿಗೆ ತಿಳಿಸಿಕೊಟ್ಟಿತು.

- ತಾನೇ ಮುಂದಾಳತ್ವ ವಹಿಸುವುದರ ಮೂಲಕ ಪೌಲನು ತನ್ನ ನಾಯಕತ್ವದ ಗುಣವನ್ನು ತೋರಿಸಿದನು: ಮೊದಲು ಆತನು ಊಟ ಮಾಡಿದನು, ನಂತರ ಆತನು ಇತರರನ್ನು ಊಟಮಾಡುವಂತೆ ಪ್ರೋತ್ಸಾಹಿಸಿದನು. ಅವರು ಆತನ ಮಾದರಿಯನ್ನು ಹಿಂಬಾಲಿಸಿದರು.

4) ಪೌಲನು ತನ್ನ ಆತ್ಮೀಕ ಗುಣಗಳನ್ನು ತೋರಿಸುತ್ತಿದ್ದಾನೆ (ಚಂಡಮಾರುತದ ಮಧ್ಯೆ ಸಿಲುಕಿದ ಹಡಗಿನಲ್ಲಿ ಒಬ್ಬ ಕೈದಿಯಾಗಿಯೂ):

- ಪೌಲನು ದೇವರೊಂದಿಗೆ ನಿಕಟ ಸಂಪರ್ಕದಲ್ಲಿದ್ದನು: ರಾತ್ರಿಯಲ್ಲಿ ಒಬ್ಬ ದೇವದೂತನು ಆತನಿಗೆ ಪ್ರತ್ಯಕ್ಷನಾದನು (ವ. 23).
- ಪೌಲನು ದೇವರ ದಯೆಯನ್ನು ಹೊಂದಿದ ದೇವರ ಸೇವಕನಾಗಿದ್ದನು: ದೇವರು ಹಡಗಿನಲ್ಲಿರುವ ಪ್ರತಿಯೊಬ್ಬರ ಜೀವವನ್ನು ಪೌಲನಿಗೆ ಉಳಿಸಿಕೊಟ್ಟನು (ವ. 24).
- ಪೌಲನು ರೊಟ್ಟಿಗಾಗಿ ದೇವರಿಗೆ ಸ್ತೋತ್ರಮಾಡಿದನು (ವ. 35).
- ಪೌಲನು ಹಡಗಿನಲ್ಲಿರುವ ಎಲ್ಲಾ ಅನ್ಯ ಜನರ ಮುಂದೆ ತನ್ನ ಕ್ರೈಸ್ತನ ನಂಬಿಕೆಯನ್ನು ವ್ಯಕ್ತಪಡಿಸಲು ನಾಚಿಕೆಪಡಲಿಲ್ಲ (ವ. 35).

4. ನಮ್ಮ ಕುರಿತು ಏನು?

1) ಕ್ರೈಸ್ತ ನಾಯಕರುಗಳಾದ ನಾವು, ಪೌಲನು ಮಾಡಿದಂತೆ, ನಮ್ಮ ಜೀವನ ಅನುಭವಗಳನ್ನು ಉಪಯೋಗಿಸಿಕೊಳ್ಳುತ್ತೇವೋ?
2) ಕ್ರೈಸ್ತ ನಾಯಕರುಗಳಾದ ನಾವು, ಪೌಲನು ಮಾಡಿದಂತೆ, ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನಮ್ಮ ಸಾಮಾನ್ಯ ತಿಳುವಳಿಕೆ ಮತ್ತು ಜ್ಞಾನವನ್ನು ಉಪಯೋಗಿಸುತ್ತೇವೋ?
3) ಕ್ರೈಸ್ತ ನಾಯಕರುಗಳಾದ ನಾವು, ಪೌಲನು ಮಾಡಿದಂತೆ, ನಮ್ಮ ಜೊತೆಗಿರುವ ಜನರ ಬಗ್ಗೆ ಕಾಳಜಿ ವಹಿಸುತ್ತೇವೋ?
4) ಕ್ರೈಸ್ತ ನಾಯಕರುಗಳಾದ ನಾವು, ಪೌಲನು ಮಾಡಿದಂತೆ, ನಮ್ಮ ಜೊತೆಗಿರುವ ಜನರ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಮುಂದಾಳತ್ವ ವಹಿಸುತ್ತೇವೋ? ನಾವು ಇತರರಿಗೆ ಮಾದರಿಯಾಗಿದ್ದೇವೋ? ಜನರು ನಮ್ಮ ಮಾದರಿಯನ್ನು ಹಿಂಬಾಲಿಸುತ್ತಾರೋ?
5) ಕ್ರೈಸ್ತ ನಾಯಕರುಗಳಾದ ನಾವು, ಪೌಲನು ಮಾಡಿದಂತೆ, ಇಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ದೇವರೊಂದಿಗೆ ನಿಕಟವಾದ ಅನ್ಯೋನ್ಯತೆಯಲ್ಲಿ ಜೀವಿಸುತ್ತೇವೋ?
6) ಕ್ರೈಸ್ತ ನಾಯಕರುಗಳಾದ ನಾವು, ಪೌಲನು ಮಾಡಿದಂತೆ, ಇಕ್ಕಟ್ಟಿನ ಪರಿಸ್ಥಿತಿಯಲ್ಲೂ ಅವಿಶ್ವಾಸಿಗಳ ಮುಂದೆ ನಮ್ಮ ಕ್ರೈಸ್ತ ನಂಬಿಕೆಯನ್ನು ವ್ಯಕ್ತಪಡಿಸುತ್ತೇವೋ?

# ಪಾಠ 71. ಮಾಲ್ಟದ ದಡದಲ್ಲಿ, 28:1–10

## ಅ) ವಾಕ್ಯಭಾಗ

ಹಡಗುನಾಶ ಅನುಭವಿಸಿದವರು ತಾವು ಮಾಲ್ಟ ಎಂಬ ದ್ವೀಪಕ್ಕೆ ಬಂದು ಸೇರಿದ್ದೇವೆಂದು ಕಂಡುಕೊಂಡರು. ಆ ದ್ವೀಪದ ನಿವಾಸಿಗಳು ಅವರಿಗಾಗಿ ಬೆಂಕಿ ಹೊತ್ತಿಸಿ ಅವರನ್ನು ಸ್ವಾಗತಿಸಿದರು. ನಂತರ ಅವರನ್ನು ಪೊಬ್ಲಿಯನೆಂಬುವನಿಗೆ ಸೇರಿದ ಹೊಲಕ್ಕೆ ಕರೆದುಕೊಂಡು ಹೋದರು, ಈತನು ಆ ದ್ವೀಪದ ಮುಖ್ಯ ವ್ಯಕ್ತಿಯಾಗಿದ್ದನು, ಆತನು ಅವರನ್ನು ಆಮಂತ್ರಿಸಿ ಮೂರು ದಿನಗಳ ಕಾಲ ಅವರನ್ನು ಚೆನ್ನಾಗಿ ಉಪಚರಿಸಿದನು. ಪೌಲನು ಪೊಬ್ಲಿಯನ ತಂದೆಯ ಮೇಲೆ ತನ್ನ ಹಸ್ತವನ್ನಿಟ್ಟು ಆತನಿಗಾಗಿ ಪ್ರಾರ್ಥಿಸುವುದರ ಮೂಲಕ ಆತನನ್ನು ಗುಣಪಡಿಸಿದನು. ನಂತರ ದ್ವೀಪದಲ್ಲಿದ್ದ ಜನರು ಎಲ್ಲಾ ರೋಗಿಗಳನ್ನು ಸೌಖ್ಯ ಹೊಂದಲು ಪೌಲನ ಬಳಿ ಕರೆತಂದರು. ಆ ದ್ವೀಪದ ಜನರು ತಮ್ಮ ಅತಿಥಿಗಳನ್ನು ಗೌರವಿಸಿದರು ಮತ್ತು ಅವರಿಗೆ ಅಗತ್ಯವಿದ್ದದ್ದೆಲ್ಲವನ್ನು ಒದಗಿಸಿಕೊಟ್ಟರು.

## ಆ) ಟಿಪ್ಪಣಿ

*ಮಾಲ್ಟ* (ವ. 1): ಅವರ ಹಡಗು ಮಾಲ್ಟ ಎಂಬ ದ್ವೀಪದಲ್ಲಿ ಒಡೆದು ನಾಶವಾಯಿತು, ಇದು ಅವರು ಚಂಡಮಾರುತಕ್ಕೆ ಸಿಕ್ಕಿಕೊಂಡ ಚಂದ ರೇವುಗಳಿಂದ ಸುಮಾರು 800 ಕಿ.ಮೀ. ದೂರದಲ್ಲಿತ್ತು. ಮಾಲ್ಟ (30 ಕಿ.ಮೀ. ಉದ್ದ ಮತ್ತು 13 ಕಿ.ಮೀ. ಅಗಲವಿತ್ತು) ರೋಮ್ ಪ್ರಾಂತ್ಯವಾದ ಸಿಸಿಲಿಗೆ ಸಂಬಂಧಪಟ್ಟಿತ್ತು. ಸಿಸಿಲಿಯು ಮಾಲ್ಟದ ಉತ್ತರದಲ್ಲಿರುವ 100 ಕಿ.ಮೀ. ರಷ್ಟು ದೊಡ್ಡದಾದ ದ್ವೀಪವಾಗಿದೆ. ಮಾಲ್ಟದ ಈಶಾನ್ಯ ತೀರದಲ್ಲಿ ಅನೇಕ ಚಾಚು ಮತ್ತು ಕೊಲ್ಲಿಗಳಿವೆ. ಇಂದು ಅದರಲ್ಲಿನ ಒಂದು ಕೊಲ್ಲಿಯು ಸಂತ ಪೌಲನ ಕೊಲ್ಲಿ ಎಂದು ಕರೆಯಲಾಗುತ್ತದೆ ಮತ್ತು ಬಹುಶಃ ಅವರು ಅಂದು ಬಂದು ಸೇರಿದ್ದ ಸ್ಥಳವು ಇದಾಗಿರಬಹುದು.

*ದ್ವೀಪದ ನಿವಾಸಿಗಳು* (ವ. 27): ಗ್ರೀಕ್ ಪಠ್ಯದಲ್ಲಿ 'ಅನಾಗರೀಕ ಜನರು, ವಿದೇಶಿಯರು, ಸ್ಥಳೀಯರು' ಎಂದು ಅರ್ಥಕೊಡುವ ಒಂದು ಪದವಿದೆ. ಮಾಲ್ಟದ ಜನರ ಮಾತೃಭಾಷೆಯು ಗ್ರೀಕ್ ಆಗಿರಲಿಲ್ಲ ಎಂಬುದನ್ನು ಸೂಚಿಸಲು ಲೂಕನು ಈ ಪದವನ್ನು ಬಳಸುತ್ತಾನೆ. ಅನೇಕ ಶತಮಾನಗಳ ಮುಂಚೆ ಮಾಲ್ಟದಲ್ಲಿ ಫಿನಿಷಿಯದ ಜನರು ವಾಸವಾಗಿದ್ದರು, ಅವರು ಮೂಲತಃ ಪ್ರಾಚೀನ ಕಾನಾನ್‌ದಿಂದ ಬಂದ ಒಂದು ಸೆಮಿಟಿಕ್ ಜನಾಂಗದವರಾಗಿದ್ದರು, ಅವರು ಉತ್ತರ ಆಫ್ರಿಕಾಕ್ಕೆ ವಿಸ್ತರಿಸಲ್ಪಟ್ಟು ಅಲ್ಲಿನ ಬಹುಭಾಗಗಳಲ್ಲಿ ನಿವಾಸವಾಗಿದ್ದರು.

*ಆಗ ಮಳೆ ಬರುತ್ತಿದ್ದು ಬಹಳ ಚಳಿಯಿದ್ದುದರಿಂದ* (ವ. 2): ಬಹುಶಃ ಇದು ಅಕ್ಟೋಬರ್ ತಿಂಗಳ ಕೊನೆಯ ಅಥವಾ ನವೆಂಬರ್‌ನ ಪ್ರಾರಂಭದ ಸಮಯವಾಗಿತ್ತು ಮತ್ತು ಚಳಿಗಾಲವು ಪ್ರಾರಂಭವಾಗುತ್ತಿತ್ತು.

*ಒಂದು ಸರ್ಪವು* (ವ. 3): ಇದು ಒಂದು ವಿಷಪೂರಿತ ಹಾವು ಎಂಬುದು ದ್ವೀಪದ ನಿವಾಸಿಗಳಿಗೆ ಖಚಿತವಾಗಿ ಗೊತ್ತಿದ್ದಿರಬೇಕು. ಒಮ್ಮೆ ಒಬ್ಬ ಕೊಲೆಗಾರನು ಸಮುದ್ರದ ಚಂಡಮಾರುತದಿಂದ

ತಪ್ಪಿಸಿಕೊಂಡು ಉತ್ತರ ಆಫ್ರಿಕಾದ ತೀರದಲ್ಲಿ ಹಡಗು ಒಡೆದು ಹೋದರು ಜೀವದಿಂದುಳಿದು ಕೊನೆಯಲ್ಲಿ ಒಂದು ಸರ್ಪದಿಂದ ಕಚ್ಚಲ್ಪಟ್ಟು ಸತ್ತನು ಎಂಬ ಒಂದು ಪ್ರಾಚೀನ ಗ್ರೀಕ್ ಪದ್ಯವಿದೆ. ಇಂತಹ ಕಥೆಗಳು ಎಲ್ಲಾ ಕಡೆಯಲ್ಲಿ ಹರಡುವಾಗ ಆ ದ್ವೀಪದ ಜನರು ವರ್ತಿಸಿದ ರೀತಿಯು ಆಶ್ಚರ್ಯವೆನಿಸುವುದಿಲ್ಲ. ಅವರು ಪೌಲನು ಖೈದಿಯಾಗಿರುವುದನ್ನು ಅವರು ಕಂಡರು ಮತ್ತು ಆ ಸನ್ನಿವೇಶದಲ್ಲಿ ಆತನು ಒಬ್ಬ ಕೊಲೆಗಾರನಾಗಿರಬಹುದೆಂದು ಅವರು ಊಹಿಸಿದರು, ಯಾಕೆಂದರೆ ಒಬ್ಬನ ಸಾವಿಗೆ ಇನ್ನೊಬ್ಬನ ಸಾವು ಅವಶ್ಯ.

*ದ್ವೀಪದ ಮುಖ್ಯ ಅಧಿಕಾರಿ ಪೊಬ್ಲಿಯನು* (ಏ:7): ಪೊಬ್ಲಿಯ ಎಂಬುದು ರೋಮನ್ನರ ಹೆಸರಾಗಿತ್ತು. ಬಹುಶಃ ಆತನು ದ್ವೀಪದಲ್ಲಿದ್ದ ಉನ್ನತ ಅಧಿಕಾರಿಯಾಗಿದ್ದಿರಬಹುದು ಮತ್ತು ಇಷ್ಟೊಂದು ದೊಡ್ಡ ಗುಂಪಿನ ಜನರನ್ನು ಮೂರು ದಿನಗಳವರೆಗೆ ಅತಿಥಿ ಸತ್ಕಾರ ಮಾಡಿರುವುದನ್ನು ನೋಡಿದರೆ, ಅವನಿಗೆ ಒಂದು ದೊಡ್ಡ ಎಕರೆ ಜಮೀನು ಮತ್ತು ಅನೇಕ ಮಂದಿ ಆಳುಗಳು ಇದ್ದಿರಬಹುದು.

## ಇ) ಪಠ್ಯ ಪ್ರಶ್ನೆಗಳು

1. ನಕ್ಷೆಯಲ್ಲಿ ಮಾಲ್ಟ ಮತ್ತು ಸಿಸಿಲಿಯನ್ನು ಗುರುತಿಸಿರಿ!
2. ಪೌಲನು ಒಬ್ಬ ಕೊಲೆಗಾರನೆಂಬುದಾಗಿ ದ್ವೀಪದ ಜನರು ಯಾಕೆ ಆಲೋಚಿಸಿದರು?
3. ದ್ವೀಪದ ಜನರು ನಂತರ ಮನಸ್ಸನ್ನು ಬದಲಾಯಿಸಿಕೊಂಡು ಪೌಲನು ಒಬ್ಬ ದೇವರೆಂದು ಯಾಕೆ ಹೇಳಿದರು?
4. ಪೊಬ್ಲಿಯನ ತಂದೆಗೆ ಏನಾಗಿತ್ತು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲ ಮತ್ತು ಸರ್ಪದ ಕಥೆಯನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ? ಇದು ಒಂದು ಅದ್ಭುತವಾಗಿತ್ತೋ ಅಥವಾ ಇಲ್ಲವೋ? ನಿಮ್ಮ ಕಾರಣಗಳನ್ನು ಕೊಡಿರಿ!
2. ಈ ಕಥೆಯಲ್ಲಿ ಪೊಬ್ಲಿಯನ ಕುರಿತು ನಾವು ಏನನ್ನು ಕಲಿಯುತ್ತೇವೆ?
3. ಪೌಲನು ದ್ವೀಪದಲ್ಲಿದ್ದ ಇತರೆ ರೋಗಿಗಳನ್ನೆಲ್ಲಾ ಗುಣಪಡಿಸಿದ ನಂತರ ದ್ವೀಪದ ಜನರು ಹಡಗುನಾಶವನ್ನು ಅನುಭವಿಸಿದ ಸಂದರ್ಶಕರನ್ನು ಹೇಗೆ ಉಪಚರಿಸಿದರು?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಪೌಲ ಮತ್ತು ವಿಷಪೂರಿತ ಹಾವಿನ ಕಥೆಯು ಬಹಳ ಕುತೂಹಲಕರವಾಗಿದೆ – ಬಹುಶಃ ಇದರ ಕುರಿತು ಸಭಾಪಾಲಕರುಗಳು ಪ್ರಸಂಗಿಸಿರುವುದನ್ನು ನೀವು ಕೇಳಿರಬಹುದು. ಆದರೆ ಪೌಲನು ಕಟ್ಟಿಗೆ ಕೂಡಿಸಿ ಹೊರೆಯನ್ನು ತಂದು ಬೆಂಕಿಯಲ್ಲಿ ಹಾಕುತ್ತಿರಲು ಶಾಖದಿಂದ ಸರ್ಪವು ಹೊರಬಂದು ಅವನ ಕೈಗೆ ಸುತ್ತಿಕೊಂಡ ವಾಸ್ತವವು ನಮಗೆ ಅದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದ ಪಾಠವನ್ನು ಕಲಿಸಬಹುದು ಎಂದು ನಾನು ಆಲೋಚಿಸುತ್ತೇನೆ – ಅದೇನೆಂದರೆ, ಒಬ್ಬ ನಿಜವಾದ ದೇವರ ಸೇವಕನ ಮಾದರಿಯ ವರ್ತನೆ.

ಇಂತಹದ್ದೇ ರೀತಿಯಾದ ಘಟನೆಯನ್ನು ಭಾರತದಲ್ಲಿ ಚಿತ್ರಿಸಿಕೊಳ್ಳಿರಿ! ಒಬ್ಬ ವಿಶ್ವವಿಖ್ಯಾತ ಭಾರತೀಯ ಸುವಾರ್ತಿಕನು ಮತ್ತು ಆತನ ಜೊತೆ–ಕೆಲಸದವರು ಹಡಗಿನಲ್ಲಿ ಮಲೇಷ್ಯಾದಿಂದ ಚೆನ್ನೈಗೆ ಪ್ರಯಾಣಿಸುತ್ತಿದ್ದಾರೆ, ಆಗ ತಕ್ಷಣವಾಗಿ ಹಡಗು ಬಂಗಾಳದ ಕೊಲ್ಲಿಯಲ್ಲಿ ಚಂಡಮಾರುತಕ್ಕೆ ಸಿಕ್ಕಿಕೊಂಡಿದೆ. ಹಡಗು ಒಡೆದುಹೋಗಿದೆ. ಆ ಸುವಾರ್ತಿಕನು ಮತ್ತು ಆತನ ಜೊತೆ–ಕೆಲಸದವರು ಆಂಧ್ರದ ತೀರದಲ್ಲಿ ಎಸೆಯಲ್ಪಟ್ಟಿದ್ದಾರೆ. ಅದು ಮಳೆ ಮತ್ತು ಚಳಿಗಾಲದಿಂದ ಕೂಡಿದ ಸಮಯವಾಗಿದೆ. ಹಾಗಾಗಿ ಅವರು ಸ್ವಲ್ಪ ಕಟ್ಟಿಗೆಯನ್ನು ಸಂಗ್ರಹಿಸಿ ಬೆಂಕಿ ಹಚ್ಚಬೇಕೆಂದು ನಿರ್ಧರಿಸಿದ್ದಾರೆ. ಈ ಕೆಲಸದಲ್ಲಿ ವಿಶ್ವವಿಖ್ಯಾತ ಭಾರತೀಯ ಸುವಾರ್ತಿಕನು ಸಹಾಯ ಮಾಡುತ್ತಾನೆಂದು ನೀವು ಆಲೋಚಿಸುತ್ತೀರೋ? ಅಥವಾ ಆತನು ಒಂದು ಕಲ್ಲಿನ ಮೇಲೆ ಕುಳಿತುಕೊಂಡು ತನ್ನ ಜೊತೆ–ಕೆಲಸದವರು ಆತನಿಗಾಗಿ ಬೆಂಕಿಯನ್ನು ಹಚ್ಚಿ ಸಿದ್ಧಪಡಿಸಲಿ ಎಂದು ಕಾಯುತ್ತಾನೋ? ನಿಮ್ಮ ಆಲೋಚನೆಯನ್ನು ಹಂಚಿಕೊಳ್ಳಿರಿ!

ಈ ಕಥೆಯಲ್ಲಿ ಪೌಲನು ಮಾಡಿದಂತೆ ಭಾರತದಲ್ಲಿರುವ ದೊಡ್ಡ ಸಭಾಪಾಲಕರು ಮಾಡುವಂತಹದ್ದು ಬಹಳ ವಿರಳ ಎಂಬುದು ನನ್ನ ಅನುಭವ. ತಮ್ಮ ಜೊತೆ–ಕೆಲಸದವರು ಅವರ ಸೇವೆ ಮಾಡಬೇಕೆಂದು ಅವರು ಬಯಸುತ್ತಾರೆ. ಅವರಿಗಾಗಿ ಸೇವಕರು ಮತ್ತು ಇತರರು ಎಲ್ಲಾ ಕೆಲಸಗಳನ್ನು ಮಾಡಬೇಕೆಂದು ಅವರು ಬಯಸುತ್ತಾರೆ. ಸೇವಕರು ಮತ್ತು ಇತರರು ತಮ್ಮ ಎಲ್ಲಾ ಕಷ್ಟವಾದ ಕೆಲಸಗಳನ್ನು ಮಾಡಬೇಕೆಂದು ಅವರು ನಿರೀಕ್ಷಿಸುತ್ತಾರೆ. ನೀವು ಒಪ್ಪಿಕೊಳ್ಳುತ್ತೀರೋ? ನೀವು ಒಪ್ಪಿಕೊಳ್ಳುವುದಾದರೆ – ಭಾರತದಲ್ಲಿರುವ 'ದೇವರ ಸೇವಕರು' ಯಾಕೆ ಈ ರೀತಿ ಇದ್ದಾರೆಂದು ನೀವು ಆಲೋಚಿಸುತ್ತೀರಿ? ಮತ್ತು ಈ ಕಥೆಯಲ್ಲಿ ಪೌಲನ ಉದಾಹರಣೆಯಿಂದ ಒಬ್ಬ ಭಾರತೀಯ 'ದೇವರ ಸೇವಕನು' ಏನನ್ನು ಕಲಿಯಬಹುದು?

# ಪಾಠ 72. ರೋಮನ್ನು ತಲುಪಿದ್ದು, 28:11–10

## ಅ) ವಾಕ್ಯಭಾಗ

ಮೂರು ತಿಂಗಳುಗಳ ನಂತರ ಖೈದಿಗಳೊಂದಿಗೆ ಸೈನಿಕರು ಮಾಲ್ಟವನ್ನು ಬಿಟ್ಟು ರೋಮ್‌ಗೆ ತಮ್ಮ ಪ್ರಯಾಣವನ್ನು ಮುಂದುವರೆಸಲು ಸಾಧ್ಯವಾಯಿತು. ಪ್ರಯಾಣದ ಮೊದಲ ಎರಡು ಭಾಗವು ಮಾಲ್ಟದಲ್ಲಿ ಒಡೆದುಹೋಗಿದ್ದ ಅಲೆಗ್ಸಾಂಡ್ರಿಯಾದಿಂದ ಬಂದ ಹಡಗಿನಲ್ಲಿ ಸಾಗಿತ್ತು. ಕೊನೆಯ 120 ಕಿ.ಮೀ. (ಪುತೋಲಿಯಿಂದ ರೋಮ್‌ಗೆ) ಪ್ರಯಾಣವು ಭೂಮಾರ್ಗವಾಗಿ ಸಾಗಿತ್ತು. ಪ್ರಯಾಣದ ಮಧ್ಯದಲ್ಲಿ ರೋಮ್‌ನ ವಿಶ್ವಾಸಿಗಳ ಗುಂಪುಗಳು ಅವರನ್ನು ಭೇಟಿಯಾಗಲು ಬಂದರು, ಇದು ಪೌಲನಿಗೆ ಅತ್ಯಂತ ಸಂತೋಷವನ್ನು ಉಂಟುಮಾಡಿತ್ತು. ರೋಮ್‌ನಲ್ಲಿ, ಒಬ್ಬ ಸೈನಿಕನ ಕಾವಲಿನ ಅಡಿಯಲ್ಲಿ ತನ್ನ ಸ್ವಂತ ವಸತಿಯಲ್ಲಿ ಜೀವಿಸುವ ಅನುಮತಿ ಪೌಲನಿಗೆ ದೊರೆಯಿತು.

## ಆ) ಟಿಪ್ಪಣಿ

*ಮೂರು ತಿಂಗಳುಗಳ ನಂತರ* (ವ. 11): ಸಮುದ್ರ ಪ್ರಯಾಣವನ್ನು ತಡೆದಿದ್ದ ಚಳಿಗಾಲವು ಫೆಬ್ರವರಿಯ ಮಧ್ಯದಲ್ಲಿ ಅಂತ್ಯಗೊಂಡಿತು. ಹಾಗಾಗಿ ಪ್ರಯಾಣಿಕರ ಮೂರು ತಿಂಗಳುಗಳ ಕಾಲದ ಮಾಲ್ಟದಲ್ಲಿನ ವಾಸ್ತವ್ಯವು ಅದೇ ಸಮಯದಲ್ಲಿ ಅಂತ್ಯಗೊಂಡಿರಬಹುದು.

*ಅದು ಅಲೆಗ್ಸಾಂಡ್ರಿಯಾ ಹಡಗಾಗಿತ್ತು. ಅದರ ಮೇಲೆ ಅಶ್ವಿನಿ ದೇವತೆಗಳ ಚಿಹ್ನೆಯಿತ್ತು* (ವ. 11): ಅವರು ತಮ್ಮ ಪ್ರಯಾಣವನ್ನು ಮುಂದುವರೆಸಿದ ಹಡಗು ಅಲೆಗ್ಸಾಂಡ್ರಿಯಾದ ಬೇರೊಂದು ಹಡಗಾಗಿತ್ತು. ಇದು ಧಾನ್ಯಗಳನ್ನು ಹೊತ್ತು ತಂದ ಹಡಗಾಗಿರುವುದು ಅತೀ ಸಂಭವನೀಯವಾದದ್ದು, ಯಾಕೆಂದರೆ ಈಜಿಪ್ಟ್ ದೇಶವು ರೋಮ್‌ಗೆ ಆಹಾರ ಧಾನ್ಯಗಳ ಮುಖ್ಯ ಸರಬರಾಜು ಮಾಡುತ್ತಿತ್ತು. ಬಹುಶಃ ಪೌಲ ಮತ್ತು ಆತನ ಸಹ–ಪ್ರಯಾಣಿಕರನ್ನು ಮಾಲ್ಟಕ್ಕೆ ತಂದ ಚಂಡಮಾರುತವೇ ಈ ಹಡಗನ್ನೂ ಅಲ್ಲಿಗೆ ತಂದಿರಬೇಕು. ಅದರ 'ಚಿಹ್ನೆಯು' ಅಶ್ವಿನಿ ದೇವತೆಗಳಾಗಿದ್ದವು. ಈ ಹೇಳಿಕೆಯು ಬಹುಶಃ ತಮ್ಮ ಹಡಗಿನ ಎರಡೂ ಕಡೆಯ ಮೂತಿಗೆ ದೇವತೆಗಳ ಮೂರ್ತಿಗಳನ್ನು ಅಲಂಕಾರಗೊಳಿಸುವ ಈಜಿಪ್ಟಿನ ಆಚಾರವನ್ನು ಉಲ್ಲೇಖಿಸುತ್ತದೆ. ಈ ಸನ್ನಿವೇಶದಲ್ಲಿ, ಅವುಗಳು ಜ಼ೂಸನ ಅವಳಿ ಗಂಡುಮಕ್ಕಳಾದ, ಮತ್ತು ಪ್ರಾಚೀನ ಯುಗದಲ್ಲಿ ನಾವಿಕರ ಸಂರಕ್ಷಕ ದೇವರುಗಳಾದ ಕ್ಯಾಸ್ಟರ್ ಮತ್ತು ಪೊಲ್ಲಕ್ಸ್ ಆಗಿದ್ದವು.

*ಸಿರಾಕ್ಯೂಸ್* (ವ. 12): ಇದು ಸಿಸಿಲಿಯ ದ್ವೀಪದ ಆಗ್ನೇಯ ಅಂಚಿನಲ್ಲಿದ್ದ ಒಂದು ದೊಡ್ಡ ಕರಾವಳಿ ಪಟ್ಟಣವಾಗಿತ್ತು. ರೋಮನ್ನರ ಅಡಿಯಲ್ಲಿ ಸಿಸಿಲಿಯ ಪೂರ್ವದಿಕ್ಕಿನ ಅರ್ಧಭಾಗಕ್ಕೆ ಇದು ರಾಜಧಾನಿಯಾಗಿತ್ತು. ಮಾಲ್ಟದಿಂದ ಸಿರಾಕ್ಯೂಸ್‌ಗೆ ಇದ್ದ ಅಂತರವು 150 ಕಿ.ಮೀ. ಆಗಿತ್ತು.

*ರೇಗಿಯ* (ವ. 13): ಇದು ಇಟಾಲಿಯನ್ ಪರ್ಯಾಯ ದ್ವೀಪದ ನೈಋತ್ಯಕ್ಕೆ ತುತ್ತತುದಿಯಲ್ಲಿದ್ದ ಪಟ್ಟಣವಾಗಿತ್ತು. ಮೆಸ್ಸಿನ ಜಲಸಂಧಿಗಳು ರೇಗಿಯವನ್ನು ಸಿಸಿಲಿಯ ದ್ವೀಪದಿಂದ ಬೇರ್ಪಡಿಸಿತ್ತು,

ಮತ್ತು ಇದು ಇಟಲಿಯ ಪಶ್ಚಿಮ ತೀರದಿಂದ ಮೆಡಿಟೆರೆನಿಯನ್‌ನ ಪೂರ್ವ ದಿಕ್ಕಿನ ಕಡೆಗೆ ಪ್ರಯಾಣಿಸುವ ಹಡಗುಗಳ ನಿಲ್ದಾಣವಾಗಿತ್ತು. ಕಷ್ಟಕರವಾದ ಮತ್ತು ಅಪಾಯಕರವಾದ ಜಲಸಂಧಿಗಳನ್ನು ದಾಟಲು ಸಹಾಯಕವಾಗುವ ದಕ್ಷಿಣದಿಂದ ಬೀಸುವ ಗಾಳಿಗಾಗಿ ಹಡಗುಗಳು ಇದರ ಬಂದರಿನಲ್ಲಿ ಕಾಯುತ್ತಿದ್ದವು.

*ಪುತೋಲಿ* (ವ. 13): ರೇಗಿಯದಿಂದ ಪುತೋಲಿಯು 30 ಕಿ.ಮೀ. ದೂರವಿತ್ತು. ಅವರು ಎರಡು ದಿನಗಳಲ್ಲೇ ಈ ಪ್ರಯಾಣವನ್ನು ಮುಗಿಸಿದ್ದರಿಂದ ಇವರಿಗೆ ಅನುಕೂಲಕರವಾಗಿ ಗಾಳಿಯು ಬೀಸಿರಬೇಕು. ಪುತೋಲಿಯು ಇಟಲಿಯ ಅತೀ ಪ್ರಾಮುಖ್ಯವಾದ ಬಂದರಾಗಿತ್ತು ಮತ್ತು ಇದು ಪಟ್ಟಣದಿಂದ ಆಗ್ನೇಯ ದಿಕ್ಕಿನ ಕಡೆಗೆ 120 ಕಿ.ಮೀ. ದೂರದಲ್ಲಿ ನೆಲೆಸಿದ್ದರೂ ಸಹ ರೋಮ್‌ನ ಪ್ರಮುಖ ಬಂದರಾಗಿತ್ತು. ಇಲ್ಲಿ ಯೆಹೂದ್ಯರೂ ಹಾಗೂ ಕ್ರೈಸ್ತರೂ ನೆಲೆಸಿದ್ದರು. ಪ್ರಯಾಣಿಕರು ಪುತೋಲಿಯಲ್ಲಿ ಒಂದು ವಾರ ಕಳೆದದ್ದರ ಕುರಿತು ಶತಾಧಿಪತಿಯಾದ ಜೂಲ್ಯನು ತಾನು ಬಂದು ತಲುಪಿದ ವರದಿ ಸಲ್ಲಿಸಲು ಮತ್ತು ತನ್ನ ಮೇಲಾಧಿಕಾರಿಗಳಿಂದ ಅಪ್ಪಣೆಯನ್ನು ಪಡೆಯಲು ಕಾದೆನೆಂದು ಉತ್ತಮವಾಗಿ ವಿವರಿಸಿದ್ದಾನೆ.

*ಸಹೋದರರು* (ವ. 15): ರೋಮ್‌ನಲ್ಲಿದ್ದ ಕ್ರೈಸ್ತರು ಪೌಲನನ್ನು ಸಂಧಿಸಲು ಒಂದು ಗುಂಪನ್ನು ಅಪ್ಪಿಯ ಪೇಟೆಗೂ ಮತ್ತೊಂದನ್ನು ತ್ರಿಚತ್ರದ ಬಳಿಗೂ ಕಳುಹಿಸಿದ್ದ ಹಾಗೆ ತೋರುತ್ತದೆ.

*ಅಪ್ಪಿಯ ಪೇಟೆ* (ವ. 15): ಇದು ರೋಮ್‌ನಿಂದ 70 ಕಿ.ಮೀ. ದೂರದಲ್ಲಿ ನೆಲೆಯಾಗಿದ್ದ ಒಂದು ಸಣ್ಣ ಪಟ್ಟಣವಾಗಿತ್ತು. ಇದನ್ನು ಒಂದು ದಿನದಲ್ಲಿ ತಲುಪಬಹುದಿತ್ತು.

*ತ್ರಿಚತ್ರ* (ವ. 15): ಇದು ರೋಮ್‌ನಿಂದ 53 ಕಿ.ಮೀ. ದೂರದಲ್ಲಿದ್ದ ಒಂದು ಪಟ್ಟಣವಾಗಿತ್ತು.

*ತನ್ನ ಕಾವಲುಗಾರನಾಗಿದ್ದ ಸೈನಿಕನೊಂದಿಗೆ ಪ್ರತ್ಯೇಕವಾಗಿರಲು ಪೌಲನಿಗೆ ಅನುಮತಿ ದೊರೆಯಿತು* (ವ. 16): ಪೌಲನು ತನ್ನ ಸ್ವಂತ ಬಾಡಿಗೆಯ ಮನೆಯಲ್ಲಿ ವಾಸಿಸಿದನೆಂದು ಲೂಕನು ನಂತರದಲ್ಲಿ ಬರೆಯುತ್ತಿದ್ದಾನೆ (ವ. 30). ಪೌಲನು ಸ್ಪಷ್ಟವಾಗಿ ಯಾವುದೇ ರೀತಿಯಾದ ಅಪರಾಧವನ್ನು ಮಾಡಿದ್ದಿಲ್ಲ ಮತ್ತು ರೋಮ್‌ನ ರಾಜಕೀಯ ವ್ಯವಸ್ಥೆಗೆ ಯಾವ ಬೆದರಿಕೆಯೂ ಆಗಿರಲಿಲ್ಲ. ಹಾಗಾಗಿ ಅವನು ಸ್ವಂತ ಬಾಡಿಗೆಯ ಮನೆಯಲ್ಲಿ ವಾಸಿಸಲು ಅನುಮತಿ ಕೊಡಲಾಯಿತು. ಆದರೆ ಬಹುಶಃ ಒಬ್ಬ ಕಾವಲುಗಾರನೊಂದಿಗೆ ಆತನು ಎಲ್ಲಾ ಸಮಯದಲ್ಲಿ ಸರಪಳಿಯಿಂದ ಕಟ್ಟಲ್ಪಟ್ಟವನಾಗಿದ್ದನು (ವ. 20, ಫಿಲಿಪ್ಪಿ 1:13–17 ನ್ನು ಹೋಲಿಸಿರಿ).

## ಇ) ಪಠ್ಯ ಪ್ರಶ್ನೆಗಳು

1. ನಕ್ಷೆಯಲ್ಲಿ ಈ ಸ್ಥಳಗಳನ್ನು ಗುರುತಿಸಿರಿ: ಮಾಲ್ಟ, ಸಿರಾಕ್ಯೂಸ್, ರೇಗಿಯ, ಪುತೋಲಿ, ಅಪ್ಪಿಯ ಪೇಟೆ, ತ್ರಿಚತ್ರ ಮತ್ತು ರೋಮ್!
2. ಮೇಲ್ಕಂಡ ಸ್ಥಳಗಳಲ್ಲಿ ಯಾವ ಸ್ಥಳಗಳು ಸಿಸಿಲಿಯ ದ್ವೀಪದಲ್ಲಿ ನೆಲೆಸಿದ್ದವು ಮತ್ತು ಅವುಗಳಲ್ಲಿ ಯಾವುದು ಇಟಾಲಿಯನ್ ಪರ್ಯಾಯ ದ್ವೀಪದಲ್ಲಿವೆ?

3. ಪೌಲನು ಪುತೋಲಿಯಲ್ಲಿ ಏನನ್ನು ಮಾಡಿದನು?
4. ಪೌಲನು ಮಾಲ್ಟದಿಂದ ರೋಮ್‌ಗೆ ಪ್ರಯಾಣಿಸಿದ ಒಟ್ಟು ಅಂತರವೆಷ್ಟು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲ ಮತ್ತು ಆತನ ಸಹ–ಪ್ರಯಾಣಿಕರು ಮಾಲ್ಟದಲ್ಲಿ ಮೂರು ತಿಂಗಳುಗಳನ್ನು ಯಾಕೆ ಕಳೆದರು?
2. ರೋಮ್‌ನಲ್ಲಿರುವ ಕ್ರೈಸ್ತರು ಪೌಲನನ್ನು ಸಂಧಿಸಬೇಕೆಂದು ವಿಶ್ವಾಸಿಗಳ ಗುಂಪುಗಳನ್ನು ಕಳುಹಿಸಲು ಪೌಲನು ಅವರ ಮಾಗವಾಗಿ ಬರುತ್ತಿದ್ದಾನೆಂಬುದು ಅವರಿಗೆ ಹೇಗೆ ತಿಳಿಯಿತೆಂದು ನೀವು ಆಲೋಚಿಸುತ್ತೀರಿ?

# ಪಾಠ 73. ರೋಮ್ ಪಟ್ಟಣದಲ್ಲಿ ಪೌಲನ ಬೋಧನೆ, 28:17–31

## ಅ) ವಾಕ್ಯಭಾಗ

ಪೌಲನು ರೋಮ್‌ಗೆ ತಲುಪಿದ ತಕ್ಷಣವೇ ಆತನು ತನ್ನ ಪರಸ್ಥಿತಿಯನ್ನು ವಿವರಿಸಲು ಎಲ್ಲಾ ಯೆಹೂದ್ಯ ನಾಯಕರನ್ನು ಒಟ್ಟಿಗೆ ಸೇರಿಸಿದನು. ಅವರು ಆತನ ಮಾತುಗಳನ್ನು ಉತ್ತಮವಾಗಿ ಸ್ವೀಕರಿಸಿದರು ಮತ್ತು 'ಕ್ರೈಸ್ತ ಪಂಥದ' ಕುರಿತು ಇನ್ನೂ ಹೆಚ್ಚಿನ ಸಂಗತಿಗಳನ್ನು ಕೇಳಲು ಆಸಕ್ತಿಯುಳ್ಳವರಾಗಿದ್ದರು. ಪೌಲನು ತನ್ನ ಮನೆಯಲ್ಲಿ ಸೇರಿದ್ದ ಎಲ್ಲಾ ಯೆಹೂದ್ಯರೊಂದಿಗೆ ಒಂದು ದಿನವಿಡೀ ಸುವಾರ್ತೆ ಸಾರಿದನು. ಕೆಲವರು ನಂಬಿದರು ಇನ್ನೂ ಕೆಲವರು ನಂಬಲಿಲ್ಲ. ಪೌಲನು ಎರಡು ವರ್ಷಗಳ ಕಾಲ ರೋಮ್‌ನಲ್ಲಿ ಸೆರೆಯಾಗಿದ್ದನು. ಆತನಿಗೆ ಸ್ವಂತ ಬಾಡಿಗೆ ಮನೆ ಇತ್ತು ಮತ್ತು ತನ್ನನ್ನು ಸಂದರ್ಶಿಸಲು ಬಂದವರೆಲ್ಲರಿಗೂ ಆತನು ಧೈರ್ಯದಿಂದ ಯಾವ ಅಡ್ಡಿ ಆತಂಕಗಳಿಲ್ಲದೇ ಸುವಾರ್ತೆ ಸಾರಿದನು (ವ. 31). ಈ ಒಂದು ಸಕಾರಾತ್ಮಕವಾದ ನುಡಿಯೊಂದಿಗೆ ಲೂಕನು ಸುವಾರ್ತೆಯ ಮಹಿಮೆಯುಳ್ಳ ವಿಸ್ತರಣೆಯ ಕುರಿತಾದ ತನ್ನ ಕಥೆಯ ಆರನೆಯ ಭಾಗವನ್ನು ಮತ್ತು – ಇಡೀ ಅಪೊಸ್ತಲರ ಕೃತ್ಯಗಳ ಪುಸ್ತಕವನ್ನು ಅಂತ್ಯಗೊಳಿಸುತ್ತಾನೆ.

## ಆ) ಟಿಪ್ಪಣಿ

*ಯೆಹೂದ್ಯರ ನಾಯಕರನ್ನು* (ವ. 17): ಚಕ್ರವರ್ತಿಯಾದ ಕ್ಲಾಡಿಯಸ್‌ನು ಕ್ರಿ.ಶ. 49 ರಲ್ಲಿ ಎಲ್ಲಾ ಯೆಹೂದ್ಯರನ್ನು ರೋಮ್ ಪಟ್ಟಣದಿಂದ ಬಹಿಷ್ಕರಿಸಿದ್ದನು. ಆದರೆ ನಂತರದಲ್ಲಿ ಅವರು ಹಿಂತಿರುಗಲು ಅನುಮತಿಸಿದನು (18:2 ರ ಟಿಪ್ಪಣಿಯನ್ನು ಸಹ ನೋಡಿರಿ).

*ಇಸ್ರಾಯೇಲರ ನಿರೀಕ್ಷೆಯ* (ವ. 20): ಇದು ಯೆಹೂದ್ಯರಲ್ಲಿದ್ದ ಮೆಸ್ಸೀಯನ ಬರೋಣದ ನಿರೀಕ್ಷೆಯಾಗಿತ್ತು (26:6 ನ್ನು ಸಹ ನೋಡಿರಿ).

*ಮೋಶೆಯ ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಗ್ರಂಥಗಳಿಂದ* (ವ. 23): ಈ ಹೇಳಿಕೆಯ ಅರ್ಥವೇನೆಂದರೆ, 'ಹಳೆ ಒಡಂಬಡಿಕೆಯ ವಾಕ್ಯಗಳಿಂದ' ಎಂಬುದಾಗಿದೆ.

*ರಕ್ಷಣೆಯು ಅನ್ಯಜನಾಂಗದವರಿಗೆ* (ವ. 28): ಪ್ರಾರಂಭದಲ್ಲಿ ಲೂಕನು ಅಪೊಸ್ತಲರ ಕೃತ್ಯಗಳಲ್ಲಿ ಯೆಹೂದ್ಯರು ಸುವಾರ್ತೆಯನ್ನು ಕೇಳುವುದನ್ನು ತೀರಸ್ಕರಿಸಿದಾಗ ಪೌಲನು ಹೇಗೆ ಅನ್ಯಜನರ ಕಡೆಗೆ ತಿರುಗಿದನೆಂಬುದಾಗಿ ಮೂರು ಬಾರಿ ದಾಖಲಿಸುತ್ತಿದ್ದಾನೆ. ಏಷ್ಯಾದ ಅಂತಿಯೋಕ್ಯದಲ್ಲಿ (13:46) ಕೊರಿಂಥದಲ್ಲಿ (18:66), ಮತ್ತು ಎಫೆಸದಲ್ಲಿ (19:8–9). ಈಗ, ಪ್ರಪಂಚದ ರಾಜಧಾನಿಯಾದ ನಗರದಲ್ಲಿ ನಾಲ್ಕನೇಯ ಬಾರಿ ಅದೇ ಸಂಗತಿ ಸಂಭವಿಸುತ್ತದೆ.

*ತಾನು ಬಾಡಿಗೆಗೆ ತೆಗೆದುಕೊಂಡ ಮನೆಯಲ್ಲಿ* (ವ. 30): ಹಾಗಾದರೆ ಪೌಲನು ಬಂಧನದಲ್ಲಿದ್ದಾಗ ತನ್ನ ವಸತಿಗಾಗಿ ಬಾಡಿಗೆ ಕಟ್ಟಲು ಆರ್ಥಿಕ ಮೂಲವನ್ನು ಹೊಂದಿದ್ದಿರಬೇಕು. ಬಹುತೇಕವಾಗಿ ಆತನು

ತನ್ನ ಸಹಜ ವೃತ್ತಿಯಾದ ಗುಡಾರ ಮಾಡುವ ಕೆಲಸವನ್ನು (ಕನಿಷ್ಟ ಪಕ್ಷ ಅರೆಕಾಲಿಕವಾಗಿ) ಮಾಡಿರಬೇಕು. ಒಬ್ಬ ರೋಮನ್ ಬರಹಗಾರನ ಪ್ರಕಾರ, ನ್ಯಾಯವಿಚಾರಣೆಯನ್ನು ಎದುರು ನೋಡುತ್ತಿದ್ದ ಖೈದಿಗಳಿಗೆ ಕೆಲಸಮಾಡುವ ಮತ್ತು ಬಾಡಿಗೆ ಮನೆಯಲ್ಲಿ ಜೀವಿಸುವ ಅನುಮತಿ ಇತ್ತು. ಹಾಗಾಗಿ ಪೌಲನ ಸ್ಥಿತಿಯನ್ನು 'ಗೃಹಬಂಧನ' ಎಂಬುದಾಗಿ ಕರೆಯಬಹುದು. ಪೌಲನು ತನಗಿಷ್ಟ ಬಂದಾಗ ಮನೆಯನ್ನು ಬಿಟ್ಟು ಹೊರಗೆ ಹೋಗಲು ಆಗದಂತೆ ಆತನು ಒಬ್ಬ ಸೈನಿಕನೊಂದಿಗೆ ಹಗುರವಾದ ಸರಪಣಿಯಿಂದ ಕಟ್ಟಲ್ಪಟ್ಟಿದ್ದನು (ವ. 20 ನ್ನು ನೋಡಿರಿ). ಅದನ್ನು ಬಿಟ್ಟರೆ ಆತನಿಗೆ ತಕ್ಕ ಮಟ್ಟಿಗೆ ಸ್ವಾತಂತ್ರ್ಯವನ್ನು ಕೊಟ್ಟಿರಬಹುದು. ಪೌಲನು ಸಭೆಗಳಿಂದ ಕಾಣಿಕೆಗಳನ್ನೂ ಸಹ ಪಡೆದನು (ಫಿಲಿಪ್ಪಿ. 4:18 ನ್ನು ನೋಡಿರಿ), ಅದಲ್ಲದೆ ಆತನು ತನ್ನ ಸ್ವಂತ ಖರ್ಚುಗಳನ್ನು ಭರಿಸಲಿಕ್ಕೆ ವೈಯಕ್ತಿಕ ಮೂಲವನ್ನೂ ಸಹ ಹೊಂದಿದ್ದಿರಬೇಕು.

*ಎರಡು ವರ್ಷಗಳ ಕಾಲ* (ವ. 30): ಪೌಲನು ಈ ಗೃಹಬಂಧನದ ಎರಡು ವರ್ಷಗಳ ಕಾಲದ ಅವಧಿಯಲ್ಲಿ ತನ್ನ ನಾಲ್ಕು ಪತ್ರಿಕೆಗಳನ್ನು ಬರೆದನು: ಎಫೆಸದವರಿಗೆ, ಫಿಲಿಪ್ಪಿಯವರಿಗೆ, ಕೊಲೊಸ್ಸೆಯವರಿಗೆ, ಮತ್ತು ಫಿಲೆಮೋನನಿಗೆ. ನಂತರ ಆತನು ಬಿಡುಗಡೆ ಹೊಂದಿ ತನ್ನ ಸೇವೆಯನ್ನು ಇನ್ನೂ ಕೆಲವು ವರ್ಷಗಳವರೆಗೆ ಮುಂದುವರೆಸಿದನು. ಆ ವರ್ಷಗಳ ಅವಧಿಯಲ್ಲಿ (ಕೆಲವೊಮ್ಮೆ 'ಪೌಲನ ನಾಲ್ಕನೆಯ ಸುವಾರ್ತಾ ಪ್ರಯಾಣ' ಎಂದು ಕರೆಯಲ್ಪಡುವ ಅವಧಿಯಲ್ಲಿ) ಆತನು ಮೊದಲನೆಯ ತಿಮೋಥಿ ಮತ್ತು ತೀತನಿಗೆ ಬರೆದ ಪತ್ರಿಕೆಗಳನ್ನು ಬರೆದನು. ನಿರೋ ಚಕ್ರವರ್ತಿಯ ಆಳ್ವಿಕೆಯ ಅಡಿಯಲ್ಲಿ ಉಂಟಾದ ಹಿಂಸೆಯ ಸಮಯದಲ್ಲಿ ಪೌಲನು ಪುನಃ ರೋಮ್‌ನಲ್ಲಿ ಬಂಧಿಸಲ್ಪಟ್ಟು, ಬಹುಶಃ ಕ್ರಿ.ಶ. 66 ರಲ್ಲಿ, ರಕ್ತಸಾಕ್ಷಿಯಾಗಿ ಸತ್ತನು. ಆತನು ಕೊಲ್ಲಲ್ಪಡುವುದಕ್ಕಿಂತ ಮುಂಚೆ ಎರಡನೆಯ ತಿಮೋಥಿ ಪತ್ರಿಕೆಯನ್ನು ಬರೆದಿರಬೇಕು.

## ಇ) ಪಠ್ಯ ಪ್ರಶ್ನೆಗಳು

1. ಪೌಲನು ಚಕ್ರವರ್ತಿಗೆ ಮನವಿ ಮಾಡಿಕೊಳ್ಳಲೇಬೇಕಾದ ಸನ್ನಿವೇಶಕ್ಕೆ ಯಾಕೆ ಒಳಗಾದನು?
2. ಪೌಲನು ಯೆಹೂದ್ಯ ನಾಯಕರನ್ನು ಆಹ್ವಾನಿಸಿದಾಗ ಆತನ ಸ್ವಂತ ಪರಿಸ್ಥಿತಿ ಹೇಗಿತ್ತು?
3. ಪೌಲನು ಸಾರಿದ ಸುವಾರ್ತೆಗೆ ಯೆಹೂದ್ಯರು ಹೇಗೆ ಪ್ರತಿಕ್ರಿಯಿಸಿದರು?
4. ಪೌಲನು ಅನ್ಯರ ಕುರಿತು ಯೆಹೂದ್ಯರಿಗೆ ಏನನ್ನು ಹೇಳಿದನು?
5. ಪೌಲನು ಎರಡು ವರ್ಷಗಳ ಕಾಲ ರೋಮ್‌ನಲ್ಲಿ ಗೃಹಬಂಧನದಲ್ಲಿದ್ದಾಗ ಯಾರಿಗೆ ಸುವಾರ್ತೆಯನ್ನು ಸಾರಿದನು?

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗವನ್ನು ನೀವು ಹೇಗೆ ರಚಿಸುತ್ತೀರಿ?
2. ವಚನ 20 ರಲ್ಲಿ ಪೌಲನು 'ಈ ಕಾರಣದಿಂದ' ಎಂದು ಹೇಳುತ್ತಾನೆ. ಹಾಗಾದರೆ ಯೆಹೂದ್ಯ ನಾಯಕರುಗಳನ್ನು ಪೌಲನು ಯಾವ ಕಾರಣಕ್ಕಾಗಿ ಕರೆದನು?

3. ಪೌಲನು ಎರಡು ವರ್ಷಗಳ ಕಾಲ ಗೃಹಬಂಧನದಲ್ಲಿದ್ದಾಗ ಏನು ಮಾಡಿರಬಹುದೆಂದು ನೀವು ಆಲೋಚಿಸುತ್ತೀರಿ?

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ನಾವು ಪೌಲನ 'ಸೆರಮನೆ ಪತ್ರಿಕೆಗಳನ್ನು' (ರೋಮ್‌ನಲ್ಲಿ ಗೃಹಬಂಧನದಲ್ಲಿದ್ದ ಎರಡು ವರ್ಷಗಳ ಅವಧಿಯಲ್ಲಿ ಬರೆದ ನಾಲ್ಕು ಪತ್ರಿಕೆಗಳು) ಓದುವಾಗ ಸಂತೋಷ ಮತ್ತು ಸಮಾಧಾನದ ವಾತಾವರಣವನ್ನು ಅನುಭವಿಸುತ್ತೇವೆ. ನಾವು ಪೌಲನ ಸಂತೋಷ ಮತ್ತು ತೃಪ್ತಿಯ ಭಾವನೆಗಳನ್ನು ಗುರುತಿಸಬಹುದು. ಆತನ ಪ್ರಾರ್ಥನೆ ಮತ್ತು ಆಲೋಚನೆಗಳ ದೃಷ್ಟಿಕೋನವನ್ನು ನೋಡುವಾಗ ನಮಗೆ ಆಶ್ಚರ್ಯವಾಗುತ್ತದೆ: ಆತನ ದೃಷ್ಟಿಕೋನವು ತನ್ನ ಮೇಲಾಗಲಿ, ತನ್ನ ಬಂಧನದ ಮೇಲಾಗಲಿ, ಮತ್ತು ತನ್ನ ಸಂಕಷ್ಟಗಳ ಮೇಲಾಗಲಿ ಇರಲಿಲ್ಲ. ಬದಲಾಗಿ ಅದು ದೇವರ ಮೇಲೆಯೂ, ಯೇಸು ಕ್ರಿಸ್ತನ ಜೀವನ ಮತ್ತು ಕಾರ್ಯಗಳ ಮೇಲೆಯೂ ಹಾಗೂ ಸಭೆಯ ಜೀವನ ಮತ್ತು ಸೇವೆಯ ಮೇಲೆಯೂ ಕೇಂದ್ರಿಕರಿಸಲ್ಪಟ್ಟಿತ್ತು.

1. ಪೌಲನಿಗೆ ರೋಮ್‌ನಲ್ಲಿ ಸಂಭವಿಸಿದಂತಹ ಸಂಗತಿಯು ನಮಗೆ ಸಂಭವಿಸಿದರೆ, ನಮ್ಮ (ಮತ್ತು ನಮ್ಮ ದಕ್ಷಿಣ ಭಾರತದ ಕ್ರೈಸ್ತ ನಾಯಕರುಗಳ) ಕುರಿತು ಏನು? ನಮ್ಮ ಸುತ್ತಲಿರುವ ವಾತಾವರಣ ಹೇಗಿದೆ? ನಾವು ಬೇಸತ್ತಿದ್ದೇವೋ, ಗಲಿಬಿಲಿಗೊಂಡಿದ್ದೇವೋ, ಭಯಬ್ರಾಂತರಾಗಿದ್ದೇವೋ, ಗೊಂದಲಕ್ಕಿಡಾಗಿದ್ದೇವೋ, ಕಳವಳಗೊಂಡಿದ್ದೇವೋ? ಅಥವಾ ನಾವು ಪೌಲನ ಹಾಗೆ ಇದ್ದೇವೋ? ನಮ್ಮ ಪ್ರಾರ್ಥನೆ ಮತ್ತು ಆಲೋಚನೆಗಳು ಯಾವುದರ ಮೇಲೆ ಕೇಂದ್ರಿಕರಿಸಲ್ಪಟ್ಟಿವೆ? ಅವುಗಳು ನಮ್ಮ ಮತ್ತು ನಮ್ಮ ಸ್ವಂತ ಕಷ್ಟಕರ ಪರಿಸ್ಥಿತಿಗಳ ಮೇಲೆ ಕೇಂದ್ರೀಕೃತವಾಗಿದೆಯೋ? ಅಥವಾ ನಾವು ಪೌಲನ ಹಾಗೆ ಇದ್ದೇವೋ? ದಯವಿಟ್ಟು ಹಂಚಿಕೊಳ್ಳಿರಿ ಮತ್ತು ಚರ್ಚಿಸಿರಿ!
2. ನಾವು ಪೌಲನ ಮಾದರಿಯಿಂದ ಏನನ್ನು ಕಲಿಯುತ್ತೇವೆ? ನಾವು ಇನ್ನೂ ಹೆಚ್ಚಾಗಿ ಪೌಲನ ಹಾಗೆ ಆಗಲು ಹೇಗೆ ಸಾಧ್ಯ? ದಯವಿಟ್ಟು ಹಂಚಿಕೊಳ್ಳಿರಿ ಮತ್ತು ಚರ್ಚಿಸಿರಿ!

## ಊ) ಉಪದೇಶಿಸು ಮತ್ತು ಬೋಧಿಸು!

ಅ. ಕೃ. 28:17–31 ರ ಆಧಾರದ ಮೇಲೆ ***ಪೌಲನು ರೋಮ್‌ನಲ್ಲಿ ಸುವಾರ್ತೆಯನ್ನು ಸಾರಿದ್ದು*** ಎಂಬ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಈ ಹೊರರೇಖೆಯನ್ನು ನೀವು ಉಪಯೋಗಿಸಬಹುದು:

1. ಪೀಠಿಕೆ: ರೋಮ್‌ನಲ್ಲಿ ಪೌಲನ ಗೃಹಬಂಧನ
2. ಪೌಲನು ರೋಮ್‌ನಲ್ಲಿರುವ ಯೆಹೂದ್ಯರಿಗೆ 'ಕ್ರೈಸ್ತ ಪಂಥ'ದ ಕುರಿತು ವಿವರಿಸಿದ್ದು (ವ. 22–24):
   1) ಯೆಹೂದ್ಯರು ಪೌಲನ 'ಬಂಧೀ ಗೃಹಕ್ಕೆ' ಬಂದು ಇಡೀ ದಿನವನ್ನು ಅವನೊಂದಿಗೆ ಕಳೆದರು. ಪೌಲನು ಏನು ಮಾಡಿದನು?
      - ಆತನು ಅವರಿಗೆ ದೇವರ ರಾಜ್ಯದ ಕುರಿತು ವಿವರಿಸಿ ಘೋಷಿಸಿದನು (ವ. 23).

- ಆತನು ಅವರಿಗೆ ಇಸ್ರಾಯೇಲ್ಯರ ನಿರೀಕ್ಷೆಯಾದ ಯೇಸುವಿನ ಕುರಿತು ಮನವರಿಕೆ ಮಾಡಲು ಪ್ರಯತ್ನಿಸಿದನು (ವ. 20–23).

2) ಅದರ ಫಲವು ಏನಾಗಿತ್ತು?

- ಕೆಲವರು ಮನಗಂಡರು (ವ. 24).
- ಇನ್ನೂ ಕೆಲವರು ನಂಬಲಿಲ್ಲ (ವ. 24).

3) ಪೌಲನು ಏನು ಮಾಡಿದನು?

- ಆತನು ಅನ್ಯರ ಕಡೆಗೆ ತಿರುಗಿಕೊಂಡನು (ವ. 28).

3. ಪೌಲನು ರೋಮ್‌ನಲ್ಲಿ ಎರಡು ವರ್ಷಗಳ ಕಾಲ 'ಬಂಧೀ ಗೃಹದಲ್ಲಿದ್ದಾಗ' ತನ್ನನ್ನು ಭೇಟಿಯಾಗಲು ಬಂದವರನ್ನೆಲ್ಲಾ (ಯೆಹೂದ್ಯರನ್ನು ಮತ್ತು ಅನ್ಯರನ್ನು) ಸ್ವಾಗತಿಸಿದನು (ವ. 30–31):

1) ಪೌಲನು ಯಾವುದರ ಕುರಿತಾಗಿ ಮಾತನಾಡಿದನು?

- ಆತನು ಯೆಹೂದ್ಯರೊಂದಿಗೆ ಮಾಡಿದಂತೆಯೇ ದೇವರ ರಾಜ್ಯದ ಕುರಿತು ಬೋಧಿಸಿದನು (ವ. 31)!
- ಆತನು ಯೆಹೂದ್ಯರೊಂದಿಗೆ ಮಾಡಿದಂತೆಯೇ ಕರ್ತನಾದ ಯೇಸು ಕ್ರಿಸ್ತನ ಕುರಿತು ಉಪದೇಶಿಸಿದನು (ವ. 31)!

2) ಅದರ ಫಲವು ಏನಾಗಿತ್ತು? ಅವರು ಕೇಳಿದರು (ವ. 28):

- ಬಹುಶಃ ಕೆಲವರು ಸಂದೇಶವನ್ನು ಅರ್ಥಮಾಡಿಕೊಂಡು ಅದನ್ನು ಸ್ವೀಕರಿಸಿ ದೇವರ ರಾಜ್ಯದ ಭಾಗವಾದರು.
- ಇತರರು ಬಹುಶಃ ಸಂದೇಶವನ್ನು ಅರ್ಥಮಾಡಿಕೊಳ್ಳಲಿಲ್ಲ ಮತ್ತು ಅದನ್ನು ಸ್ವೀಕರಿಸಿಕೊಳ್ಳಲಿಲ್ಲ. ಅವರು ದೇವರಿಗೆ ಮತ್ತು ಸುವಾರ್ತೆಗೆ ತಮ್ಮ ಬೆನ್ನು ತೋರಿಸಿದರು ಮತ್ತು ಅವರು ದೇವರ ರಾಜ್ಯದ ಭಾಗವಾಗಲಿಲ್ಲ.

4. ನಾವು ಪೌಲನ ಮಾದರಿಯನ್ನು ಅನುಸರಿಸಬೇಕು:

1) ದೇವರ ರಾಜ್ಯದ ಕುರಿತು ವಿವರಿಸಿರಿ, ಘೋಷಿಸಿ ಅದನ್ನು ಸಾರಬೇಕು! (ಸೂಚನೆ: ಇದನ್ನು ಮಾಡಲಿಕ್ಕೆ ಪ್ರತ್ಯೇಕವಾದ ಸತ್ಯವೇದ ಅಧ್ಯಯನದ ಅವಶ್ಯಕತೆ ಇದೆ!)
2) ಇಸ್ರಾಯೇಲ್ಯರ ನಿರೀಕ್ಷೆಯೂ ಮತ್ತು ಮೆಸ್ಸೀಯನೂ ಹಾಗೂ ಪ್ರಪಂಚದ ನಿರೀಕ್ಷೆಯೂ ಮತ್ತು ರಕ್ಷಕನೂ ಆದ ಯೇಸು ಕ್ರಿಸ್ತನ ಕುರಿತು ಜನರಿಗೆ ಬೋಧಿಸಿ ಅವರಿಗೆ ಮನವರಿಕೆ ಮಾಡಿಸಬೇಕು! (ಸೂಚನೆ: ಇದನ್ನು ಮಾಡಲಿಕ್ಕೆ ಪ್ರತ್ಯೇಕವಾದ ಸತ್ಯವೇದ ಅಧ್ಯಯನದ ಅವಶ್ಯಕತೆ ಇದೆ!)
3) ಜನರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದು ನಮ್ಮ ಜವಾಬ್ದಾರಿಯಲ್ಲ: ಕೆಲವರು ನಂಬಿ ದೇವರ ಕಡೆಗೆ ತಿರುಗುತ್ತಾರೆ. ಇತರರು ನಂಬದೆ ದೇವರಿಗೆ ಬೆನ್ನು ತೋರಿಸುತ್ತಾರೆ.

ಅ. ಕೃ. 27 ಮತ್ತು 28 ನೇ ಅಧ್ಯಾಯಗಳ ಆಧಾರದ ಮೇಲೆ ***ದೇವರ ಉದ್ದೇಶದ ನೇರವೇರುವಿಕೆ*** ಎಂದು ಕರೆಯಲ್ಪಡುವ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಈ ಕೆಳಗಿನ ಹೊರರೇಖೆಯನ್ನು ನೀವು ಬಳಸಬಹುದು:

1. ದೇವರ ವಾಗ್ದಾನ: ಅ. ಕೃ. 23:11 – ಮರುದಿನ ರಾತ್ರಿ ಕರ್ತನು ಪೌಲನ ಬಳಿಯಲ್ಲಿ ನಿಂತುಕೊಂಡು ಆತನಿಗೆ, 'ಧೈರ್ಯದಿಂದಿರು! ನೀನು ಯೆರೂಸಲೇಮಿನಲ್ಲಿ ನನ್ನ ವಿಷಯದಲ್ಲಿ ಸಾಕ್ಷಿ ಕೊಟ್ಟಂತೆಯೇ ರೋಮ್‌ನಲ್ಲಿಯೂ ಸಾಕ್ಷಿಕೊಡತಕ್ಕದ್ದು' ಎಂದನು.

2. ಸೈತಾನನು ದೇವರ ವಾಗ್ದಾನದ ನೆರವೇರುವಿಕೆಯನ್ನು ತಡೆಯಲು ಪ್ರಯತ್ನಿಸಿದ್ದು:

   - ಪೌಲನು ಯೆರೂಸಲೇಮಿನಲ್ಲಿ ಬಂಧಿಸಲ್ಪಟ್ಟಿದ್ದು (ಅ. ಕೃ. 22)
   - ಪೌಲನನ್ನು ಕೊಲ್ಲಲು ಒಳಸಂಚು (ಅ. ಕೃ. 23)
   - ರೋಮನ್ ರಾಜ್ಯಪಾಲರುಗಳ ಮುಂದೆ ಕೊನೆಯಿಲ್ಲದ ನ್ಯಾಯಾವಿಚಾರಣೆಗಳು (ಅ. ಕೃ. 24 ಮತ್ತು 25)
   - ಯೆಹೂದ್ಯ ನಾಯಕರುಗಳಿಂದ ಸುಳ್ಳು ಸಾಕ್ಷಿಗಳ ಉತ್ಪತ್ತಿ (ಅ. ಕೃ. 24:15; 25:7)
   - ಮೆಡಿಟರೆನಿಯನ್ ಸಮುದ್ರದಲ್ಲಿ ಬಂದ ಎದುರು ಗಾಳಿ (ಅ. ಕೃ. 27:4, 7–9)
   - ಚಂಡಮಾರುತ ಮತ್ತು ಹಡಗು ಒಡೆದುಹೋದದ್ದು (ಅ. ಕೃ. 27:14–20, 41)
   - ಸೈನಿಕರು ಅವರನ್ನು ಕೊಲ್ಲಲು ಯೋಚನೆ ಮಾಡಿದ್ದು (ಅ. ಕೃ. 27:42)
   - ಮಾಲ್ಟಾದಲ್ಲಿ ವಿಷಪೂರಿತವಾದ ಸರ್ಪ (ಅ. ಕೃ. 28:3–5)

3. ಸೈತಾನನ ಪ್ರಯತ್ನಗಳು ಸೋಲಲ್ಪಟ್ಟಿದ್ದು ಮತ್ತು ಪೌಲನು ರೋಮನ್ನು ತಲುಪಿದನು (ಅ. ಕೃ. 28:14)!

4. ಆದರೆ ಪೌಲನು ರೋಮ್‌ಗೆ ಒಬ್ಬ ಖೈದಿಯಾಗಿ ಯಾಕೆ ಬಂದನು? ಅದು ನಿಜವಾಗಿಯೂ ಪೌಲನ ಕುರಿತು ಇದ್ದ ದೇವರ ಯೋಜನೆಯ ಮತ್ತು ಉದ್ದೇಶದ ಒಂದು ಭಾಗವಾಗಿತ್ತೋ? ಹೌದು! ಪೌಲನ *ಎರಡು ವರ್ಷಗಳ ಕಾಲದ ಬಂಧನವು* ಆತನ ಕುರಿತಾದ ರೋಮ್‌ನಲ್ಲಿ ಸಾಕ್ಷಿಕರಿಸುವ ದೇವರ ಉದ್ದೇಶವು ಯಶಸ್ವಿಯಾಗುವಂತೆ ಮಾಡಿತ್ತು:

   1) ಪೌಲನ ಸಾಕ್ಷಿಕರಿಸುವಿಕೆಯು ವಿಸ್ತರಿಸಲ್ಪಟ್ಟಿತ್ತು: ಆತನು ಚಕ್ರವರ್ತಿಗೂ ಸಹ ಸಾಕ್ಷಿಕರಿಸಿದನು. ಇದನ್ನು ಮಾಡಲು ಪೌಲನು ನ್ಯಾಯಾವಿಚಾರಣೆಗೆ ಒಳಗಾದ ಒಬ್ಬ ಖೈದಿಯಾಗಿರಲೇಬೇಕಿತ್ತು.

   2) ಪೌಲನ ಸಾಕ್ಷಿಯು ಸಮೃದ್ಧಿಗೊಳಿಸಲ್ಪಟ್ಟಿತ್ತು: ತನ್ನ ಬಂಧನದ ನಿಮಿತ್ತವಾಗಿ ಪೌಲನಿಗೆ ಬೋಧಿಸಲು ಮತ್ತು ಪ್ರಸಂಗಿಸಲು ಸಮಯವಿದ್ದಿತು, ಪೌಲನಿಗೆ ಪ್ರಾರ್ಥಿಸಲು ಮತ್ತು ಆಲೋಚಿಸಲು ಸಮಯವಿದ್ದಿತ್ತು, ಪೌಲನಿಗೆ ತನ್ನ ಅದ್ಭುತವಾದ ಪತ್ರಿಕೆಗಳಲ್ಲಿ ಮೂರು ಪತ್ರಿಕೆಗಳನ್ನು ಬರೆಯುವಂತೆ ಅವಕಾಶ ಸಿಕ್ಕಿತು (ಎಫೆಸದವರಿಗೆ, ಫಿಲಿಪ್ಪಿಯದವರಿಗೆ, ಮತ್ತು ಕೊಲೊಸ್ಸೆಯವರಿಗೆ).

   3) ಪೌಲನ ಸಾಕ್ಷಿಯು ಶ್ರಮೆಯ ಪರೀಕ್ಷೆಯಲ್ಲಿ ತೇರ್ಗಡೆಹೊಂದಿತ್ತು: *ಮಾರ್‌ಟಿಸ್* ಗ್ರೀಕ್ ಪದದ ಅರ್ಥವೇನೆಂದರೆ 'ಸಾಕ್ಷಿ' ಮತ್ತು ರಕ್ತಸಾಕ್ಷಿ' ಎಂಬುದು. ಸಾಕ್ಷಿ ಮತ್ತು ಶ್ರಮೆ

ಎರಡು ಒಟ್ಟಿಗೆ ಹೋಗುವಂತಹದ್ದಾಗಿದೆ. ಶ್ರಮೆಯ ಮೂಲಕವಾಗಿ ಮಾತ್ರ ಕ್ರಿಸ್ತೀಯ ಸಾಕ್ಷಿಯು ತನ್ನ ನಿಜವಾದ ಮೌಲ್ಯವನ್ನು ಸಾಬೀತುಪಡಿಸಬಹುದು.

5. ಹಾಗಾದರೆ ಅ. ಕೃ. 27 ಮತ್ತು 28 ರಲ್ಲಿ ಲೂಕನು ದಾಖಲಿಸಿರುವಂತೆ ಪೌಲನ ಜೀವಿತದಲ್ಲಿ ದೇವರ ಉದ್ದೇಶವು ನೆರವೇರಲ್ಪಟ್ಟ ಸಂಗತಿಯಿಂದ ನಾವು ಏನನ್ನು ಕಲಿಯುತ್ತೇವೆ?
   1) ನಮ್ಮ ಜೀವಿತಗಳಲ್ಲಿ ದೇವರ ಉದ್ದೇಶವು ನೆರವೇರಲ್ಪಡದಂತೆ ತಡೆಯುವುದರಲ್ಲಿ ಸೈತಾನನು ಎಂದಿಗೂ ಯಶಸ್ವಿಯಾಗುವುದಿಲ್ಲ!

   2) ಕ್ರಿಸ್ತೀಯ ಶ್ರಮೆಯ ಕುರಿತು ನಮಗೆ ಒಂದು ಸರಿಯಾದ ತಿಳುವಳಿಕೆ ಇರಬೇಕು!

      - ಶ್ರಮೆ ಎಂದರೆ ಸೈತಾನನು ಯಶಸ್ವಿಯಾದನು ಎಂದರ್ಥವಲ್ಲ!
      - ನಿಷೇಧವು ನಮ್ಮ ಸಾಕ್ಷಿಗೆ ಒಂದು ಪೂರ್ವಸಿದ್ಧತೆಯಾಗಬಹುದು: ನಾವು ಸೆರೆಮನೆಯಲ್ಲಿ ಮಾತ್ರ ಖೈದಿಗಳಿಗೆ ಪರಿಣಾಮಕಾರಿಯಾಗಿ ಸಾಕ್ಷಿಕರಿಸಬಹುದು. ನ್ಯಾಯವಿಚಾರಣೆಯಲ್ಲಿ ಮಾತ್ರ ನಾವು ವಕೀಲರಿಗೆ ಮತ್ತು ನ್ಯಾಯಾಧೀಶರಿಗೆ ಪರಿಣಾಮಕಾರಿಯಾಗಿ ಸಾಕ್ಷಿಕರಿಸಬಹುದು.
      - ಬಂಧನವು ನಮ್ಮ ಕ್ರಿಸ್ತೀಯ ನಂಬಿಕೆಯನ್ನು ಶ್ರೀಮಂತಗೊಳಿಸುತ್ತದೆ: ನಾವು ಅನಾರೋಗ್ಯದ ಅಥವಾ ವೃದ್ಧಾಪ್ಯದ ನಿಮಿತ್ತ ಹಾಸಿಗೆ ಹಿಡಿಯುವಾಗ ನಮಗೆ ಪ್ರಾರ್ಥಿಸಲು ಮತ್ತು ದೇವರ ವಾಕ್ಯವನ್ನು ಧ್ಯಾನಿಸಲು ಹೆಚ್ಚಿನ ಸಮಯ ಸಿಗುತ್ತದೆ.
      - ಶ್ರಮೆ ಮತ್ತು ಕ್ರಿಸ್ತೀಯ ನಂಬಿಕೆಯು ಒಂದಕ್ಕೊಂದು ಹೆಣೆದುಕೊಂಡಿವೆ. ಶ್ರಮೆಯ ಮೂಲಕ ಮಾತ್ರ ಕ್ರಿಸ್ತೀಯ ಸಾಕ್ಷಿಯು ತನ್ನ ನಿಜವಾದ ಮೌಲ್ಯವನ್ನು ಸಾಬೀತುಪಡಿಸಬಲ್ಲದು.

ಅ. ಕೃ. 28:30 ರ ('ಎರಡು ವರ್ಷಗಳ ಕಾಲ ಪೌಲನು ಅಲ್ಲಿ ವಾಸವಾಗಿದ್ದನು') ಆಧಾರದ ಮೇಲೆ ***ರೋಮ್‌ನಲ್ಲಿ ಪೌಲನ ಎರಡು ವರ್ಷಗಳ ಕಾಲದ ಸೆರೆಮನೆವಾಸ*** ಎಂಬ ಶೀರ್ಷಿಕೆಯುಳ್ಳ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಪ್ರಶ್ನೆ ಈ) 3 ರ ಉತ್ತರದ 6 ಅಂಶಗಳನ್ನು ನಿಮ್ಮ ಹೊರ ರೇಖೆಯಾಗಿ ನೀವು ಉಪಯೋಗಿಸಬಹುದು. ಈ ಆರು ಕ್ಷೇತ್ರಗಳಲ್ಲಿ ಪೌಲನು ಹೇಗೆ ನಮಗೆ ಒಂದು ಮಾದರಿಯಾಗಿದ್ದಾನೆಂಬ ಅಂಶವನ್ನು ನಿಮ್ಮ ಮುಕ್ತಾಯ ಅಂಶಗಳಾಗಿ ಸೇರಿಸಿಕೊಳ್ಳಬಹುದು.

# ಉತ್ತರಗಳು

# ಉ 1. ಯೇಸು ಪರಲೋಕಕ್ಕೆ ಏರಿ ಹೋದದ್ದು, 1:1–11

## ಇ) ಪಠ್ಯ ಪ್ರಶ್ನೆಗಳು

2. ತನ್ನ ಪುನರುತ್ಥಾನ ಮತ್ತು ಆರೋಹಣದ ನಡುವಿನ 40 ದಿನಗಳ ಅವಧಿಯಲ್ಲಿ ಯೇಸು ಕನಿಷ್ಠ ಪಕ್ಷ ಈ ಮೂರು ಸಂಗತಿಗಳನ್ನು ಮಾಡಿದನು:

    - ತಾನು ಜೀವಿಸುತ್ತಾನೆ ಮತ್ತು ನಿಜವಾಗಲೂ ಮರಣದಿಂದ ಎಬ್ಬಿಸಲ್ಪಟ್ಟಿದ್ದಾನೆ ಎಂಬುದನ್ನು ಸಾಬೀತುಪಡಿಸಲು ಆತನು ತನ್ನನ್ನು ತೋರಿಸಿಕೊಂಡನು
    - ಆತನು ದೇವರ ರಾಜ್ಯದ ಕುರಿತು ತನ್ನ ಶಿಷ್ಯರಿಗೆ ಉಪದೇಶಿಸಿದನು
    - ಪವಿತ್ರಾತ್ಮನಿಂದ ದೀಕ್ಷಾಸ್ನಾನವನ್ನು ಹೊಂದುವವರೆಗೂ ಯೆರೂಸಲೇಮನ್ನು ಬಿಟ್ಟು ಹೋಗದಂತೆ ಆತನು ತನ್ನ ಶಿಷ್ಯರಿಗೆ ಆದೇಶಿಸಿದನು

3. ಯಾವ 'ವರ'ಕ್ಕಾಗಿ ಯೇಸು ತನ್ನ ಶಿಷ್ಯರಿಗೆ ಕಾದುಕೊಂಡಿರಿ ಎಂದು ಹೇಳಿದನೋ ಅದು ಸ್ನಾನಿಕನಾದ ಯೋಹಾನನ ಮೂಲಕವಾಗಿ ತಂದೆಯು ಮಾಡಿದ ವಾಗ್ದಾನವಾಗಿದೆ: ಅದೇನೆಂದರೆ, ಅವರು ಪವಿತ್ರಾತ್ಮನಲ್ಲಿಯೇ ದೀಕ್ಷಾಸ್ನಾನ ಹೊಂದುವರು (ಮಾರ್ಕ. 1:8, ಯೋಹಾನ. 1:33, ಯೆಶಾಯ. 44:3, ಯೋವೇಲ 2:28 ನ್ನು ನೋಡಿರಿ).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ತನ್ನ ಸುವಾರ್ತಾ ಪುಸ್ತಕವು 'ಯೇಸು ಕ್ರಿಸ್ತನು ಮಾಡುವುದಕ್ಕೂ ಮತ್ತು ಬೋಧಿಸುವುದಕ್ಕೂ ***ಪ್ರಾರಂಭಿಸಿದ್ದೆಲ್ಲವನ್ನೂ***' ಒಳಗೊಂಡಿದೆ ಎಂದು ಹೇಳುವುದರ ಮೂಲಕ ಅಪೋಸ್ತಲರ ಕೃತ್ಯಗಳು ಎಂಬ ಪುಸ್ತಕವು ಯೇಸು ತನ್ನ ಅಪೋಸ್ತಲರ ಮತ್ತು ಸಭೆಯ ಮೂಲಕವಾಗಿ ಮಾಡುವುದಕ್ಕೂ ಮತ್ತು ಬೋಧಿಸುವುದಕ್ಕೂ ***ಮುಂದುವರೆಸಿದ್ದನ್ನು*** ಒಳಗೊಂಡಿದೆ ಎಂದು ಲೂಕನು ಸೂಚಿಸುತ್ತಿದ್ದಾನೆಂದು ನಾನು ಭಾವಿಸುತ್ತೇನೆ. ಯೇಸುವಿನ ಮುಂದುವರೆದ ಈ ಕಾರ್ಯವು ಪವಿತ್ರಾತ್ಮನ ಬಲದಿಂದ ಸಾಧಿಸಲ್ಪಟ್ಟಿದೆ.

2. ವ. 6 ರಲ್ಲಿ ಅಪೋಸ್ತಲರು ಯೇಸು ಕ್ರಿಸ್ತನಿಗೆ ಕೇಳಿದ ಪ್ರಶ್ನೆಯ ಮೂಲಕ ದೇವರ ರಾಜ್ಯದ ಕುರಿತು ಈ ಮೂರು ಪ್ರಧಾನವಾದ ತಪ್ಪು ಗ್ರಹಿಕೆಗಳನ್ನು ಬಹಿರಂಗಪಡಿಸಿದರು:

    - ದೇವರ ರಾಜ್ಯವು ಭೂಲೋಕ ಸಂಬಂಧವಾದದ್ದು ಹಾಗೂ ಪ್ರಾಂತ್ಯ ಸೀಮಿತವಾದದ್ದು ಎಂದು ಅವರು ಆಲೋಚಿಸಿದ್ದರು. ಆದರೆ ದೇವರ ರಾಜ್ಯವು ವಾಸ್ತವಿಕವಾಗಿ ಆತ್ಮೀಕ

ಗುಣಲಕ್ಷಣವುಳ್ಳದ್ದು. ಅದು ತನ್ನ ಪ್ರಜೆಗಳ ಜೀವನ ಮತ್ತು ಮೌಲ್ಯಗಳನ್ನೇ ಮಾರ್ಪಡಿಸುವಂತಹದ್ದಾಗಿದೆ.

- ದೇವರ ರಾಜ್ಯವೆಂದರೆ ತಮ್ಮ ರೋಮನ್ ಅಧಿಪತಿಗಳಿಂದ ಇಸ್ರಾಯೇಲ್ ಜನರಿಗೆ ರಾಜಕೀಯ ಸ್ವಾತಂತ್ರ್ಯವುಂಟಾಗಿ ಇಸ್ರಾಯೇಲು ಪುನಃ ಒಂದು ರಾಷ್ಟ್ರವಾಗಿ ನಿರ್ಮಾಣವಾಗುವುದೆಂದು ಅವರು ಆಲೋಚಿಸಿದ್ದರು. ಆದರೆ ದೇವರ ರಾಜ್ಯವು ವಾಸ್ತವಿಕವಾಗಿ ಅಂತರ್–ರಾಷ್ಟ್ರೀಯವಾದದ್ದು ಮತ್ತು ಅದು ಯೆಹೂದಿಗಳನ್ನೂ ಅನ್ಯರನ್ನೂ ಎಲ್ಲಾ ರಾಷ್ಟ್ರಗಳ ಜನರನ್ನೂ ಒಳಗೊಂಡಿದೆ.

- ದೇವರ ರಾಜ್ಯವು ಇತಿಹಾಸದ ಒಂದು ಗಳಿಗೆಯಲ್ಲಿ ಸ್ಥಾಪಿಸಲ್ಪಡುವುದೆಂದು ಅವರು ಆಲೋಚಿಸಿದ್ದರು. ಆದರೆ ವಾಸ್ತವಿಕವಾಗಿ ದೇವರ ರಾಜ್ಯವು ಯೇಸುವಿನ ಬರೋಣದೊಂದಿಗೆ ಪರಿಪೂರ್ಣವಾಗಿ ಬರುವವರೆಗೂ ತನ್ನ ವಿಸ್ತರಣೆಯಲ್ಲಿ ಕ್ರಮೇಣವಾಗಿ (ಸಾಸಿವೆ ಕಾಳಿನ ಬೆಳವಣಿಗೆಯಂತೆಯೂ ಮತ್ತು ಇಡೀ ಹಿಟ್ಟನ್ನು ಹುಳಿ ಮಾಡುವ ಹುಳಿ ಹಿಟ್ಟಿನಂತೆಯೂ) ಮುಂದುವರಿಯುವಂತದ್ದಾಗಿದೆ.

ಅಪೋಸ್ತಲರು ತಮಗೆ ಸಂಬಂಧಪಡದ 'ಕಾಲವನ್ನೂ ಸಮಯವನ್ನೂ' ತಿಳಿದುಕೊಳ್ಳಲು ಬಯಸಿದರು. ಆದರೆ ಇವುಗಳು ದೇವರಿಗೆ ಸಂಬಂಧಪಟ್ಟ ಗುಪ್ತ ಸಂಗತಿಗಳಾಗಿವೆ. ಅಪೋಸ್ತಲರು – ಮತ್ತು ನಾವು – ನಮ್ಮ ಕೆಲಸವನ್ನು ಮಾಡತಕ್ಕದ್ದು, ಅದೇನೆಂದರೆ 'ಭೂಲೋಕದ ಕಟ್ಟ ಕಡೆಯವರೆಗೂ' (1:7) ಮತ್ತು 'ಲೋಕಾಂತ್ಯದವರೆಗೂ' (ಮತ್ತಾಯ. 28:20) ಯೇಸುವಿಗೆ ಸಾಕ್ಷಿಗಳಾಗಿರಬೇಕು.

3. ವ. 8 ರಲ್ಲಿ ಕಂಡು ಬರುವ ಯೇಸು ಕ್ರಿಸ್ತನ ಮಾತುಗಳನ್ನು ಇಡೀ ಅಪೋಸ್ತಲರ ಕೃತ್ಯಗಳು ಪುಸ್ತಕದ ಒಂದು ಹೊರರೇಖೆಯನ್ನಾಗಿ ಅಥವಾ ಈ ಕೆಳಗಿನಂತೆ ಒಂದು 'ವಿಷಯಾನುಕ್ರಮಣಿಕೆಯಾಗಿ' ಕಾಣಬಹುದು:

   - ಅಧ್ಯಾಯ 1–7 ಯೆರೂಸಲೇಮಿನಲ್ಲಿ ನಡೆದ ಘಟನೆಗಳನ್ನು ವಿವರಿಸುತ್ತವೆ.
   - ಅಧ್ಯಾಯ 8 ಶಿಷ್ಯರು 'ಯೂದಾಯ ಮತ್ತು ಸಮಾರ್ಯ ಪ್ರಾಂತ್ಯಗಳಿಗೆ ಚದರಿಹೋದದ್ದನ್ನು' ತಿಳಿಸುತ್ತದೆ.
   - ಅಧ್ಯಾಯ 9 ರಲ್ಲಿನ ಪೌಲನ ಪರಿವರ್ತನೆಯು ಪುಸ್ತಕದ ಉಳಿದ ಭಾಗವಾದ ಆತನ ಸೇವಾ ಪ್ರಯಾಣಗಳಿಗೂ ಮತ್ತು ಕೊನೆಯಲ್ಲಿ ಆತನು ರೋಮ್‌ಗೆ ಮಾಡಿದ ಪ್ರಯಾಣಕ್ಕೂ ನಡೆಸುತ್ತದೆ.

4. ಅಪೋಸ್ತಲರ ಕೃತ್ಯಗಳಲ್ಲಿ ತಿಳಿಸಲ್ಪಟ್ಟಂತಹ ಯೇಸುವಿನ ಆರೋಹಣದ ಕಥೆಯು ಲೂಕನ ಸುವಾರ್ತೆಯಲ್ಲಿರುವುದಕ್ಕಿಂತಲೂ ಹೆಚ್ಚಿನ ವಿವರವುಳ್ಳದ್ದಾಗಿದೆ. ಇತರೆ ವ್ಯತ್ಯಾಸಗಳೂ ಸಹ ಉಂಟು, ಅವುಗಳಲ್ಲಿ ಕೆಲವು ತದ್ವಿರೋಧವಾಗಿ ಕಾಣಬಹುದು. ಆದರೆ ಯಾವುದೇ ನಿಜವಾದ ತದ್ವಿರೋಧತೆಗಳಿಲ್ಲ. ಎರಡೂ ಕಥೆಗಳ ಲೇಖಕನು ಒಬ್ಬನೇ ಆಗಿದ್ದಾನೆ, ಹಾಗಾಗಿ ಆತನು

ತನ್ನನ್ನೇ ತಾನು ಯಾಕೆ ವಿರೋಧಿಸಿಕೊಳ್ಳುವನು? ಇತರೆ ಮೂರು ಸುವಾರ್ತೆಗಳು ಯೇಸುವಿನ ಆರೋಹಣದ ಕುರಿತು ಯಾವ ಮಾಹಿತಿಗಳನ್ನೂ ಹೊಂದಿಲ್ಲ.

5. ಯೇಸು ಯಾವಾಗ ತಿರುಗಿ ಬರುತ್ತಾನೆಂದು ಅಪೋಸ್ತಲರು ಆಕಾಶದ ಕಡೆಗೆ ನೋಡುತ್ತಾ ನಿಂತುಕೊಳ್ಳಬಾರದೆಂದು ದೂತರು ಅವರಿಗೆ ತಿಳಿಸಿದರು. ಯೇಸು ಅವರಿಗೆ ಲೋಕದ ಕಟ್ಟ ಕಡೆಗೆ ಹೋಗಿ ಸುವಾರ್ತೆಯನ್ನು ಸಾರುವಂತೆ ತಿಳಿಸಿದ್ದನು.

   'ಕಾಲಾನುಕ್ರಮಣಿಕೆ'ಯು ಹೀಗಿದೆ:

   - ಯೇಸು ಪರಲೋಕಕ್ಕೆ ಏರಿಹೋದನು (ಆರೋಹಣ)
   - ಪವಿತ್ರಾತ್ಮನು ಆಗಮಿಸಿದನು (ಪಂಚಾಶತ್ತಮದಿನ)
   - ಸಭೆಯು ಸಾಕ್ಷಿಕರಿಸಲು ಹೊರಟುಹೋಯಿತು (ಸುವಾರ್ತಾ ಸೇವೆ)
   - ಯೇಸು ತಿರುಗಿ ಬರಲಿದ್ದಾನೆ (ಎತ್ತಲ್ಪಡುವಿಕೆ/ಪರೌಸಿಯಾ)

# ಉ 2. ಯೂದನ ಬದಲಾಗಿ ಮತ್ತೀಯನ ಆಯ್ಕೆ, 1:12–26

## ಇ) ಪಠ್ಯ ಪ್ರಶ್ನೆಗಳು

1. ಮಾಳಿಗೆಯ ಮೇಲಿನ ಕೋಣೆಯಲ್ಲಿ ಪ್ರಾರ್ಥನೆಗಾಗಿ ಕೂಡಿ ಬಂದ ವಿಶ್ವಾಸಿಗಳು ಯಾರ್ಯಾರೆಂದರೆ, ಉಳಿದ 11 ಮಂದಿ ಅಪೋಸ್ತಲರು, (ಬಹುಶಃ ಅಪೋಸ್ತಲರ ಹೆಂಡತಿಯರುಗಳನ್ನೊಳಗೊಂಡ) ಸ್ತ್ರೀಯರ ಒಂದು ಗುಂಪು ಮತ್ತು ಯೇಸು ಕ್ರಿಸ್ತನ ಸ್ವಂತ ಕುಟುಂಬದಿಂದ ಬಂದ ವಿಶ್ವಾಸಿಗಳು (ಆತನ ತಾಯಿ ಮತ್ತು ಸಹೋದರರು).

   ವಿಶ್ವಾಸಿಗಳ ಒಟ್ಟು ಸಂಖ್ಯೆ 120 ಜನರು.

2. *ಅಕೆಲ್ದಮಾ* ಅಂದರೆ ಯೂದನು ಸತ್ತು ಹೋಗಿದ್ದ (ಮತ್ತು ಬಹುಶಃ ಹೂಣಲ್ಪಟ್ಟಿದ್ದ) ಜಾಗದ ಹೆಸರಾಗಿತ್ತು. ಅರಾಮಿಕ್ ಭಾಷೆಯಲ್ಲಿ ಈ ಹೆಸರಿನ ಅರ್ಥ 'ರಕ್ತದ ಹೊಲ' ಎಂಬುದಾಗಿದೆ.

3. ಯೂದನ ಸ್ಥಳದಲ್ಲಿ ಬೇರೆಯವರನ್ನು ಆಯ್ಕೆ ಮಾಡಬೇಕೆಂಬ ತನ್ನ ಸಲಹೆಯನ್ನು ಬಲಪಡಿಸಲು ಪೇತ್ರನು ಹಳೆ ಒಡಂಬಡಿಕೆಯ ಎರಡು ವಚನಗಳನ್ನು ಉಲ್ಲೇಖಿಸಿದನು: ಕೀರ್ತನೆ. 69:25 ಮತ್ತು ಕೀರ್ತನೆ. 109:8. ಮೊದಲ ವಚನವು ಏನು ಸಂಭವಿಸಿತು ಎಂಬುದನ್ನು ವಿವರಿಸಲು ಉಲ್ಲೇಖಿಸಿದನು: ಯೂದನ ದ್ರೋಹ ಮತ್ತು ಸಾವು. ಎರಡನೆಯ ವಚನವು ಅದರ ಕುರಿತು ಏನು ಮಾಡಬೇಕೆಂದು ಅವರಿಗೆ ಮಾರ್ಗದರ್ಶಿಸಲು ಉಲ್ಲೇಖಿಸಿದನು; ಅವರು ಅವನ ಸ್ಥಳದಲ್ಲಿ ಬೇರೆಯವನನ್ನು ನೇಮಿಸಬೇಕೆಂಬುದು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ದೇವರು ವಾಗ್ದಾನಮಾಡಿದ ಪವಿತ್ರಾತ್ಮನ ವರಕ್ಕಾಗಿ ಕಾದಿದ್ದು ಪ್ರಾರ್ಥಿಸಲು ವಿಶ್ವಾಸಿಗಳು ಮಾಳಿಗೆ ಮೇಲಿನ ಕೋಣೆಯಲ್ಲಿ ಸೇರಿ ಬಂದರು. 'ಪರಲೋಕದ ಶಕ್ತಿಯೊಡನೆ ಹೊದಿಸಲ್ಪಡುವ ತನಕ' ಯೆರೂಸಲೇಮನ್ನು ಬಿಟ್ಟು ಹೋಗದೆ ಅಲ್ಲಿ ಕಾದುಕೊಂಡಿರಬೇಕೆಂದು ಯೇಸು ಅವರಿಗೆ ಹೇಳಿದ್ದನು (ಲೂಕನು. 24:49; ಅ. ಕೃ. 1:4–5).

2. ವ. 19 ರಲ್ಲಿರುವ 'ಅವರು ತಮ್ಮ ಭಾಷೆಯಲ್ಲಿ' ಎಂಬ ಹೇಳಿಕೆಯಿಂದ ಎರಡು ಅನ್ವಯಗಳನ್ನು ಮಾಡಬಹುದು:

   1) ವ. 18–19 ಪೇತ್ರನಿಂದ ಹೇಳಲ್ಪಟ್ಟ ಒಂದು ಅಂಶವೆಂಬುದಾಗಿ ಅರ್ಥಮಾಡಿಕೊಳ್ಳಬಾರದು. ಪೇತ್ರನು ಆ 120 ವಿಶ್ವಾಸಿಗಳೊಂದಿಗೆ ಅರಾಮಿಕ್ ಭಾಷೆಯಲ್ಲೇ ಮಾತನಾಡಿದನು, ಹಾಗಾಗಿ

ಆತನಿಗೆ ಆ ಅರಾಮಿಕ್ ಹೆಸರಿನ ವಿವರಣೆಯನ್ನು ಕೊಡುವ ಯಾವ ಅಗತ್ಯತೆ ಇರಲಿಲ್ಲ. ಆದರೆ ಲೂಕನು ಯೂದನಿಗೆ ಸಂಭವಿಸಿದ ಸಂಗತಿಗಳನ್ನು ಥೆಯೊಫಿಲನಿಗೆ ವಿವರಿಸಲು ಬರೆದಿದ್ದನು. ಲೂಕನು ಮತ್ತು ಥೆಯೊಫಿಲನು ಅರಾಮಿಕ್ ಭಾಷೆಯನ್ನು ಅರಿಯದವರಾಗಿದ್ದರು.

2) ಅಪೋಸ್ತಲರ ಕೃತ್ಯಗಳನ್ನು ಬರೆದ ಗ್ರಂಥಕರ್ತನು ಅರಾಮಿಕ್ ಭಾಷೆಯನ್ನು ಮಾತನಾಡುತ್ತಿರಲಿಲ್ಲ. ಈ ಒಂದು ಕಾರಣದಿಂದ ಒಬ್ಬ ಅನ್ಯನಾಗಿದ್ದ ಮತ್ತು ಗ್ರೀಕ್ ಭಾಷೆಯನ್ನು ಮಾತನಾಡುತ್ತಿದ್ದ ಹಾಗೂ ಬರೆಯುತ್ತಿದ್ದ ಲೂಕನು ಅಪೋಸ್ತಲರ ಕೃತ್ಯಗಳ ಗ್ರಂಥಕರ್ತನಾಗಿರಲು ಸಾಧ್ಯ.

3. ಯೂದನ ಸ್ಥಳದಲ್ಲಿ ಮತ್ತೀಯನನ್ನು ಒಬ್ಬ ಅಪೋಸ್ತಲನನ್ನಾಗಿ ನೇಮಕ ಮಾಡಿದಾಗ ಎಲ್ಲಾ 120 ವಿಶ್ವಾಸಿಗಳು ಹಾಜರಿದ್ದುದ್ದನ್ನು – ಅದರಲ್ಲಿ ಭಾಗವಹಿಸಿದ್ದನ್ನು – ಗುರುತಿಸುವುದು ನಮಗೆ ಒಂದು ಕುತೂಹಲಕರ ಸಂಗತಿಯಾಗಿದೆ. ಇದು ಉಳಿದ 11 ಜನ ಅಪೋಸ್ತಲರಿಗಾಗಲೀ ಅಥವಾ ಅವರ ನಾಯಕನಾಗಿದ್ದ ಪೇತ್ರನಿಗಾಗಲೀ ಮಾತ್ರ ಸಂಬಂಧಪಟ್ಟ ವಿಷಯವಾಗಿರಲಿಲ್ಲ. ಸಭೆಯಲ್ಲಿ ನಾಯಕರನ್ನು ನೇಮಿಸುವ ಪ್ರಕ್ರಿಯೆಯಲ್ಲಿ ಸಭೆಯ ಎಲ್ಲಾ ಸದಸ್ಯರೂ ಭಾಗವಹಿಸಬೇಕೆಂಬುದನ್ನು ಇದರಿಂದ ನಾವು ಕಲಿಯುತ್ತೇವೆ.

4. ಈ ವಾಕ್ಯಭಾಗದಲ್ಲಿ ಕಂಡುಬರುವ ಪೇತ್ರನ ಮಾತುಗಳ ಪ್ರಕಾರ ಒಬ್ಬ ಅಪೋಸ್ತಲನಿಗೆ ಇರಬೇಕಾದ ಅರ್ಹತೆಗಳು ಹೀಗಿವೆ:

- ಒಬ್ಬ ಅಪೋಸ್ತಲನು ಯೇಸು ಕ್ರಿಸ್ತನ ಪುನರುತ್ಥಾನದ ಪ್ರತ್ಯಕ್ಷಸಾಕ್ಷಿಯಾಗಿರಬೇಕು (ಹಾಗಾಗಿ ಪುನರುತ್ಥಾನವು ನಿಜವಾಗಲೂ ನಡೆದ ಘಟನೆಯೆಂದು ಆತನು ಸಾಕ್ಷಿಕರಿಸಲು ಸಾಧ್ಯವಾಗುವುದು).

- ಒಬ್ಬ ಅಪೋಸ್ತಲನು ಯೇಸುವಿನ ಸೇವೆಯಲ್ಲಿ ಆತನ ಸಂಗಡ ಇದ್ದವನಾಗಿರಬೇಕು (ಹಾಗಾಗಿ ಆತನು ಯೇಸುವಿನ ಕುರಿತಾದ ಸತ್ಯ ಘಟನೆಗಳ ಕುರಿತು – ಆತನ ಜೀವನ, ಆತನ ಕ್ರಿಯೆ ಮತ್ತು ಆತನ ಬೋಧನೆಯ ಕುರಿತು – ಭರವಸೆಕೊಡಲು ಸಾಧ್ಯವಾಗುವುದು).

ಹೇಗಿದ್ದರೂ ಈ ಕಥೆಯಲ್ಲಿ ಇನ್ನೊಂದು ಅರ್ಹತೆಯಿದೆ: ಒಬ್ಬ ಅಪೋಸ್ತಲನು ವೈಯಕ್ತಿಕವಾಗಿ ಯೇಸುವಿನಿಂದ ನೇಮಿಸಲ್ಪಟ್ಟವನಾಗಿರಬೇಕು. ಅವರು ಪ್ರಾರ್ಥನೆ ಮಾಡಿ ಚೀಟು ಹಾಕುವುದರಲ್ಲಿ ಇದನ್ನೇ ಮಾಡಿದರು. ಮೊದಲ ಎರಡು ಅರ್ಹತೆಗಳನ್ನು ಹೊಂದಿದ್ದ ಎರಡು ಅಭ್ಯರ್ಥಿಗಳನ್ನು ಆಯ್ಕೆಮಾಡುವುದು ವಿಶ್ವಾಸಿಗಳ ಪಾತ್ರವಾಗಿತ್ತು. ನಂತರ ಅವರು ಅವರು ಪ್ರಾರ್ಥಿಸುವುದರ ಮತ್ತು ಚೀಟು ಹಾಕುವುದರ ಮೂಲಕ ಯೇಸುವೇ ನಿರ್ಧರಿಸುವಂತೆ ಆತನನ್ನು ಕೇಳಿಕೊಂಡರು.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಆದಿವಿಶ್ವಾಸಿಗಳು ಯೂದನ ಬದಲಾಗಿ ಇನ್ನೊಬ್ಬ ಅಪೋಸ್ತಲನನ್ನು ಆಯ್ಕೆಮಾಡಿದಾಗ ಏನು ಮಾಡಿದರೆಂಬುದರ ಕುರಿತು ಈ ಕಥೆಯು ಹೀಗೆ ಹೇಳುತ್ತದೆ:

1) ಅವರು ದೇವರ ವಾಕ್ಯವನ್ನು ಅಭ್ಯಸಿಸಿ ಯೂದನ ಬದಲಾಗಿ ಬೇರೊಬ್ಬನನ್ನು ಆಯ್ಕೆಮಾಡಬೇಕೆಂಬ ನಿರ್ಧಾರಕ್ಕೆ ಬಂದರು.

2) ಅವರು ತಮ್ಮ ಸಾಮಾನ್ಯ ತಿಳುವಳಿಕೆಯನ್ನು ಉಪಯೋಗಿಸಿದರು: ಯೂದನ ಸ್ಥಾನವನ್ನು ಇನ್ನೊಬ್ಬ ವ್ಯಕ್ತಿಯು ಭರಿಸುವುದಾದರೆ ಉಳಿದ 11 ಜನ 'ಅಧಿಕೃತ' ಅಪೋಸ್ತಲರ ಅರ್ಹತೆಗಳನ್ನು ಆತನೂ ಸಹ ಹೊಂದಿರಬೇಕು.

3) ಯೇಸು ಮನುಷ್ಯರ ಹೃದಯಗಳನ್ನು ಅರಿತಂತೆ ವಿಶ್ವಾಸಿಗಳು ಅರಿತಿಲ್ಲವಾದ್ದರಿಂದ ಅವರು ಆತನಿಗೆ ಪ್ರಾರ್ಥಿಸಿದರು.

4) ಯೇಸು ತನ್ನ ಆಯ್ಕೆಯನ್ನು ಬಹಿರಂಗಪಡಿಸುವನೆಂಬ ಭರವಸೆಯೊಂದಿಗೆ ಅವರು ಚೀಟು ಹಾಕಿದರು. ಚೀಟು ಹಾಕುವುದು ಹಳೆ ಒಡಂಬಡಿಕೆಯಲ್ಲಿ ಕಂಡುಬರುವ ಪದ್ಧತಿಯಾಗಿದೆ.

ಈ ಕಥೆಯು ಪಂಚಶತ್ತಮದಿನದ ಹಿಂದಿನ ದಿನ ನಡೆಯಿತು. ಬಹುಶಃ ಈ ಕಾರಣದಿಂದಾಗಿ ಸತ್ಯವೇದದಲ್ಲಿ ದೇವರ ಚಿತ್ತವನ್ನು ನಿರ್ಧರಿಸಲು ಚೀಟು ಹಾಕಿದ ಪ್ರಸಂಗವು ಪುನಃ ಎಲ್ಲಿಯೂ ಕಾಣುವುದಿಲ್ಲ. ಈಗ ನಮ್ಮ ನಾಯಕರನ್ನು ಆಯ್ಕೆ ಮಾಡುವಾಗ ಪವಿತ್ರಾತ್ಮನು ನಮಗೆ ಮಾರ್ಗದರ್ಶಕನಾಗಿದ್ದಾನೆ. ಆದರೆ ಮೊದಲ ಮೂರು ಹಂತಗಳು – ಸತ್ಯವೇದವನ್ನು ಅಭ್ಯಸಿಸುವುದು, ನಮ್ಮ ಸಾಮಾನ್ಯ ತಿಳುವಳಿಕೆಯನ್ನು ಉಪಯೋಗಿಸುವುದು ಮತ್ತು ಪ್ರಾರ್ಥಿಸುವುದು ಇಂದಿಗೂ ನಮಗೆ ಅನ್ವಯಿಸುತ್ತದೆ.

## ಉ 3. ಪಂಚಾಶತ್ತಮ ಹಬ್ಬದ ದಿನದಂದು ಪವಿತ್ರಾತ್ಮನ ಆಗಮನ, 2:1–13

### ಇ) ಪಠ್ಯ ಪ್ರಶ್ನೆಗಳು

1. ಪಂಚಾಶತ್ತಮ ಹಬ್ಬದ ದಿನದಂದು 'ಅವರೆಲ್ಲರೂ ಒಂದೇ ಸ್ಥಳದಲ್ಲಿ ಒಂದಾಗಿ ಕೂಡಿ ಬಂದಿದ್ದರು' ಎಂಬುದಾಗಿ ಮಾತ್ರ ಪಠ್ಯವು ವಿವರಿಸುತ್ತದೆ. ಅತೀ ಸಮೀಪದ ಸನ್ನಿವೇಶ ಹಿನ್ನಲೆಯನ್ನು ನೋಡುವುದಾದರೆ 'ಅವರು' ಎಂಬ ಪದವು ಹನ್ನೊಂದು ಜನ ಅಪೋಸ್ತಲರನ್ನು ಸೂಚಿಸುತ್ತದೆ (1:26). ಆದರೆ ವಿಶಾಲವಾದ ಸನ್ನಿವೇಶದಿಂದ ನೋಡುವುದಾದರೆ 'ಅವರು' ಎಂಬ ಪದವು 120 ವಿಶ್ವಾಸಿಗಳೆಲ್ಲರನ್ನೂ ಸೂಚಿಸುತ್ತದೆ. 'ಒಂದೇ ಸ್ಥಳದಲ್ಲಿ' ಎಂಬ ಹೇಳಿಕೆಯು ಸ್ಪಷ್ಟವಾಗಿಲ್ಲ. ಅದು ವಿಶ್ವಾಸಿಗಳು ಪ್ರತಿ ದಿವಸವೂ ಕೂಡಿಬರುತ್ತಿದ್ದಂತಹ 'ಮಾಳಿಗೆಯ ಮೇಲಿನ ಕೋಣೆಯನ್ನು' (1:13) ಅಥವಾ ದೇವಾಲಯದ ಅಂಗಳದಲ್ಲಿನ ಯಾವುದಾದರೊಂದು ಸ್ಥಳವನ್ನು ಸೂಚಿಸುತ್ತದೆ (ಲೂಕ. 24:53; ಅ. ಕೃ. 2:46).

2. ಪವಿತ್ರಾತ್ಮನ ಆಗಮನದ ಈ ಮೂರು ಪ್ರಕಟನೆಗಳು ವ. 2–4 ರಲ್ಲಿ ದಾಖಲಿಸಲ್ಪಟ್ಟಿವೆ:

    - ಬೀಸುತ್ತಿರುವ ಬಿರುಗಾಳಿಯ ರಭಸವಾದ ಶಬ್ಧ
    - ಬೆಂಕಿಯ ನಾಲಿಗೆಗಳಂತೆ ಕಂಡ ಅಗ್ನಿಯ ಜ್ವಾಲೆಗಳು
    - ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡುವುದು

    ಯೆಹೂದ್ಯರು ಬಿರುಗಾಳಿ, ಬೆಂಕಿ ಮತ್ತು ಸ್ವರವನ್ನು ಸಿನಾಯಿ ಬೆಟ್ಟದಲ್ಲಿ ನಡೆದ ಘಟನೆಗಳಿಗೆ ಸಂಬಂಧಿಸಿದರು (ವಿಮೋ. 19:16–19; 20:18–19).

3. ಬೇರೆ ಬೇರೆ ಭಾಷೆಗಳಲ್ಲಿ ಆಡಿದ ಮಾತುಗಳ ಸಂದೇಶವು 'ದೇವರ ಮಹತ್ಕಾರ್ಯಗಳ' ಕುರಿತಾಗಿತ್ತು (ವ. 11).

4. ಅಪೋಸ್ತಲರು (ಮತ್ತು ಉಳಿದ ವಿಶ್ವಾಸಿಗಳೆಲ್ಲರೂ?) ವಿವಿಧ ಭಾಷೆಗಳಲ್ಲಿ ದೇವರ ಮಹತ್ಕಾರ್ಯಗಳ ಕುರಿತು ಹೇಳುತ್ತಿದ್ದ ಮಾತುಗಳನ್ನು ಕೇಳಿದ ಜನರು ಎರಡು ರೀತಿಯಾಗಿ ಪ್ರತಿಕ್ರಿಯಿಸಿದರು. ಅವರಲ್ಲಿ ಅನೇಕರು ಆಶ್ಚರ್ಯಪಟ್ಟು ಗಲಿಬಿಲಿಗೊಂಡವರಾಗಿ ಇದರ ಅರ್ಥವೇನೆಂದು ಆಲೋಚಿಸಿದರು. ಆದರೆ ಅವರಲ್ಲಿ ಕೆಲವರು ನಡೆದ ಸಂಗತಿಯ ಕುರಿತು ಹಾಸ್ಯ ಮಾಡುತ್ತಾ 'ಇವರು ಕುಡಿದು ಮತ್ತರಾಗಿದ್ದಾರೆ' ಎಂದರು!

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪಂಚಾಶತ್ತಮದ ಮೊದಲ ದಿನದಂದು ಕೊಯ್ದ 'ಸುಗ್ಗಿಯು' ಪೇತ್ರನ ಸಂದೇಶವನ್ನು ಅಂಗೀಕರಿಸಿ ದೀಕ್ಷಾಸ್ನಾನ ಮಾಡಿಸಿಕೊಂಡ ಆ ಮೂರು ಸಾವಿರ ಜನರಾಗಿದ್ದರು ಎಂದು ಹೇಳುವುದು ಸಮಂಜಸವಾದದ್ದೆಂದು ನಾನು ಆಲೋಚಿಸುತ್ತೇನೆ (2:41). ಈ ಮೂರು ಸಾವಿರ ಜನರು ಪಂಚಾಶತ್ತಮ ಮೊದಲ ದಿನದಂದು ಪ್ರಾರಂಭಗೊಂಡ ಆತ್ಮನ ಬಲದಿಂದ ತುಂಬಲ್ಪಟ್ಟ ಸಭೆಯ ಕಾರ್ಯದ ಮೂಲಕ ರಕ್ಷಿಸಲ್ಪಡಲಿಕ್ಕಿದ್ದ (ಮತ್ತು ಈಗಲೂ ರಕ್ಷಿಸಲ್ಪಡುತ್ತಿರುವ) ಕೋಟಿಗಟ್ಟಲೆ ಜನರ 'ಪ್ರಥಮ ಫಲಗಳಾಗಿದ್ದರು'.

2. ಪಂಚಾಶತ್ತಮವು ದೇವರು ಇಸ್ರಾಯೇಲ್ ಜನರನ್ನು ಈಜಿಪ್ಟಿನಿಂದ ಬಿಡಿಸಿದ ನಂತರ ಸಿನಾಯಿ ಬೆಟ್ಟದಲ್ಲಿ ಅವರೊಂದಿಗೆ ಮಾಡಿದ ಒಡಂಬಡಿಕೆಯ ಹೊಸ ಒಡಂಬಡಿಕೆಯ ನೆರವೇರುವಿಕೆಯಾಗಿದೆ ಎಂದು ನಾವು ಅರ್ಥಮಾಡಿಕೊಳ್ಳಬೇಕೆಂದು ನಾನು ಆಲೋಚಿಸುತ್ತೇನೆ. ಅದಕ್ಕಾಗಿಯೇ ಪವಿತ್ರಾತ್ಮನು ಬೇರೆ ಯಾವುದೋ ದಿನದಲ್ಲಿ ಅಥವಾ ಬೇರೆ ಯಾವುದೋ ಹಬ್ಬಗಳಲ್ಲಿ ವಿಶ್ವಾಸಿಗಳ ಮೇಲೆ ಇಳಿದು ಬರದೇ ಪಂಚಾಶತ್ತಮ ದಿನದಂದೇ ಬಂದನು. ಪಂಚಾಶತ್ತಮದ ಮೊದಲ ದಿನದಂದು ವಾರಗಳ ಹಬ್ಬವು ಪ್ರವಾದನಾಯುತವಾಗಿ ನೆರವೇರಲ್ಪಟ್ಟಿತ್ತು:

   - ಎರಡೂ ಸಂದರ್ಭಗಳಲ್ಲಿ ಉಂಟಾದ ಪ್ರಕಟನೆಗಳು ಏಕ ರೀತಿಯಾಗಿವೆ: ಗಾಳಿ, ಬೆಂಕಿ ಮತ್ತು ಮಾತು.

   - ಹಳೆ ಒಡಂಬಂಡಿಕೆಯ ಜನರೊಂದಿಗೆ ದೇವರು ತನ್ನ ಒಡಂಬಂಡಿಕೆಯನ್ನು ಸಿನಾಯಿ ಬೆಟ್ಟದಲ್ಲಿ ಮಾಡಿಕೊಂಡನು. ಹೊಸ ಒಡಂಬಡಿಕೆಯ ಜನರೊಂದಿಗೆ ದೇವರು ತನ್ನ ಒಡಂಬಡಿಕೆಯನ್ನು ಕ್ರಿಸ್ತನ ಪುನರುತ್ಥಾನದಂದು ಮಾಡಿಕೊಂಡು ಪಂಚಾಶತ್ತಮದಿನದಂದು ಮುದ್ರೆ ಹಾಕಿದನು. ಆ ಮುದ್ರೆಯು 'ಒಂದು ಹೊಸ ಒಡಂಬಡಿಕೆಯ' ಮೇಲೆ ಹಾಕಲ್ಪಟ್ಟಿತು – 'ಬರಹದ ಮೂಲಕ ಅಲ್ಲ, ಆತ್ಮನ ಮೂಲಕ. ಏಕೆಂದರೆ ಬರಹದ ಪತ್ರವು ಮರಣವನ್ನುಂಟುಮಾಡುತ್ತದೆ. ದೇವರಾತ್ಮ ಸಂಬಂಧವಾದದ್ದು ಜೀವವನ್ನುಂಟುಮಾಡುತ್ತದೆ' 2 ಕೊರಿ. 3:6.

   - ಧರ್ಮಶಾಸ್ತ್ರವು ಸಿನಾಯಿ ಬೆಟ್ಟದಲ್ಲಿ ಕೊಡಲ್ಪಟ್ಟಿತ್ತು. ಪವಿತ್ರಾತ್ಮನು ಪಂಚಾಶತ್ತಮದಿನದಂದು ಕೊಡಲ್ಪಟ್ಟನು. ಹಳೆ ಒಡಂಬಡಿಕೆಯಲ್ಲಿ ಪ್ರವಾದಿಗಳಿಂದ ಮುಂಚಿತವಾಗಿ ತಿಳಿಸಲ್ಪಟ್ಟಂತೆ, ಶಿಷ್ಯರ ಹೃದಯದಲ್ಲಿ ತುಂಬಲ್ಪಟ್ಟ ಆತ್ಮನ ಬೆಂಕಿಯು ಧರ್ಮಶಾಸ್ತ್ರದ ನೆರವೇರಲ್ಪಡುವಿಕೆಯಾಗಿದೆ ಯೆರೆ. 31:31–33; ಯೆಹೆ. 11:19–20; 36:26–28.

   - ಸಿನಾಯಿ ಬೆಟ್ಟದಲ್ಲಿ ದೇವರ ವಾಕ್ಯವು ಕಲ್ಲಿನ ಹಲಗೆಗಳ ಮೇಲೆ ಬರೆಯಲ್ಪಟ್ಟವು. ಪಂಚಾಶತ್ತಮ ದಿನದಂದು ದೇವರ ವಾಕ್ಯವು ಮನುಷ್ಯನ ಹೃದಯಗಳ ಮೇಲೆ ಬರೆಯಲ್ಪಟ್ಟವು 2 ಕೊರಿ. 3:3.

3. ಪಂಚಾಶತ್ತಮದ ಮೊದಲ ದಿನವನ್ನು 'ಬಾಬೇಲ್ ಗೋಪುರದ'" ಬೆಳಕಿನಲ್ಲಿ ನೋಡುವುದು ಸಮಂಜಸವಾದದ್ದೆಂದು ನಾನು ಆಲೋಚಿಸುತ್ತೇನೆ (ಆದಿ. 11:1–9):

- ಬಾಬೇಲಿನಲ್ಲಿ ಜನರ ಭಾಷೆಗಳು ಗೊಂದಲಮಯವಾಗಿ ಜನರು ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳದಂತಾಯಿತು. ಆದರೆ ಪಂಚಾಶತ್ತಮದ ಮೊದಲ ದಿನದಂದು ಆ ಭಾಷಾ ಅಡ್ಡಿಯು ಅಸಾಧಾರಣವಾಗಿ ಜಯಿಸಲ್ಪಟ್ಟಿತು ಮತ್ತು ಅಪೋಸ್ತಲರು ದೇವರ ಮಹತ್ಕಾರ್ಯಗಳ ಕುರಿತು ಮಾತನಾಡಿದಾಗ ಪ್ರಪಂಚದ ನಾನಾ ಭಾಗಗಳಿಂದ ಬಂದಂತಹ ಜನರೆಲ್ಲರೂ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು.

- ಬಾಬೇಲ್ ಗೋಪುರದ ಪರಿಣಾಮವಾಗಿ ಜನರೆಲ್ಲರೂ ಭೂಲೋಕದಾದ್ಯಂತ ಚದುರಿಸಲ್ಪಟ್ಟರು. ಆದರೆ ಈಗ ಕ್ರಿಸ್ತನಲ್ಲಿ ರಾಷ್ಟ್ರಗಳು ಒಂದಾಗಿ ಕೂಡಿಬರುವ ಸಂಕೇತವಾಗಿ ಪಂಚಾಶತ್ತಮದ ಮೊದಲ ದಿನದಂದು 'ಜಗತ್ತಿನ ಪ್ರತಿಯೊಂದು ಜನಾಂಗದಿಂದಲೂ' ಜನರೆಲ್ಲರೂ ಯೆರೂಸಲೇಮಿನಲ್ಲಿ ಒಟ್ಟಾಗಿ ಕೂಡಿ ಬಂದರು. ದೇವರ ರಾಜ್ಯದ ಬಹು–ಜನಾಂಗೀಯ, ಬಹು–ರಾಷ್ಟ್ರೀಯ ಮತ್ತು ಬಹು–ಭಾಷೀಯ ಗುಣಲಕ್ಷಣವನ್ನು ಇದಕ್ಕಿಂತ ಸ್ಪಷ್ಟವಾಗಿ ನಿದರ್ಶಿಸಲು ಸಾಧ್ಯವಿಲ್ಲ.

- ಬಾಬೇಲಿನಲ್ಲಿ ಜನರು ಗರ್ವದಿಂದ ಆಕಾಶವನ್ನು ಮುಟ್ಟಿ ತಮ್ಮ ಹೆಸರುಗಳನ್ನು ಪ್ರಖ್ಯಾತಿಗೊಳಿಸಿಕೊಳ್ಳಬೇಕೆಂದಿದ್ದರು. ಆದರೆ ಪಂಚಾಶತ್ತಮದ ಮೊದಲ ದಿನದಂದು ತನ್ನ ದೀನರಾದ ಶಿಷ್ಯರನ್ನು ತುಂಬಲು ಮತ್ತು ಬಲಗೊಳಿಸಲು ಪವಿತ್ರಾತ್ಮನು ಭೂಲೋಕಕ್ಕೆ ಇಳಿದು ಬಂದನು.

ಬಾಬೇಲಿನ ಶಾಪವನ್ನು ತಿರುಗಿಸಲು ಪಂಚಾಶತ್ತಮ ದಿನವು ದೇವರ ಉದ್ದೇಶಪೂರ್ವಕವಾದ ಮತ್ತು ನಾಟಕೀಯ ಕಾರ್ಯವಾಗಿತ್ತೆಂದು ಕೆಲವರು ಹೇಳುತ್ತಾರೆ.

# ಉ 4. ಜನಸಮೂಹಕ್ಕೆ ಪೇತ್ರನ ಬೋಧನೆ, 2:14–41

## ಇ) ಪಠ್ಯ ಪ್ರಶ್ನೆಗಳು

1. ಪಂಚಾಶತ್ತಮದ ಮೊದಲ ದಿನದಂದು ಪೇತ್ರನ ಸಂದೇಶವನ್ನು ಚದುರಿಹೋಗಿದ್ದ ಯೆಹೂದ್ಯರು (2:5) ಮತ್ತು ಯೆರೂಸಲೇಮಿನಲ್ಲಿದ್ದವರು ಕೇಳಿಸಿಕೊಂಡರು.

2. ದೇವರು ತನ್ನ ಆತ್ಮವನ್ನು 'ಎಲ್ಲಾ ಜನರ ಮೇಲೆ' – ಅಂದರೆ ಪುರುಷರನ್ನೂ ಸ್ತ್ರೀಯರನ್ನೂ ಯೌವ್ವನಸ್ಥರನ್ನೂ ವೃದ್ಧರನ್ನೂ ಒಳಗೊಂಡು ಮತ್ತು ಯಾವುದೇ ಸ್ಥಾನವನ್ನು ಲಕ್ಷಿಸದೇ (ದಾಸರ ಮೇಲೆಯೂ) ಸುರಿಸುವನು ಎಂದು ಯೋವೇಲನ ಪ್ರವಾದನೆಯು ತಿಳಿಸುತ್ತದೆ.

3. ಪೇತ್ರನ ಪ್ರಸಂಗದ ಕೊನೆಯಲ್ಲಿ ಜನರು ಈ ಪ್ರಶ್ನೆಯನ್ನು ಕೇಳಿದರು, 'ಸಹೋದರರೇ (12 ಜನ ಅಪೋಸ್ತಲರನ್ನು ಉಲ್ಲೇಖಿಸುತ್ತಾ) ನಾವೇನು ಮಾಡಬೇಕು?' ಆಗ ಪೇತ್ರನು ಅವರಿಗೆ ಮಾನಸಾಂತರಪಟ್ಟು ಪಾಪ ಕ್ಷಮಾಪಣೆಗಾಗಿ ದೀಕ್ಷಾಸ್ನಾನವನ್ನು ಪಡೆದುಕೊಳ್ಳಿರಿ ಎಂದು ಉತ್ತರಿಸಿದನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಲೂಕನು ಅಪೋಸ್ತಲರ ಕೃತ್ಯಗಳಲ್ಲಿ ಮಾತುಗಳನ್ನು ಮತ್ತು ಸಂದೇಶಗಳನ್ನು ಒಂದೂ ಪದ ಬಿಡದೆ ದಾಖಲಿಸಿರುವುದು ಅಸಂಭವನೀಯ. ಆದಕಾರಣ:

    - ಮಾತುಗಳು ಬಹಳ ಸಂಕ್ಷಿಪ್ತವಾಗಿವೆ. ಪಂಚಾಶತ್ತಮದ ಮೊದಲ ದಿನದಂದು ಪೇತ್ರನು ಮಾಡಿದ ಪ್ರಸಂಗವನ್ನು ಹೇಳಲು ಮೂರು ನಿಮಿಷಗಳು ಸಾಕು ಮತ್ತು ಪೌಲನು ಅಥೆನ್ಸ್‌ನಲ್ಲಿ ಮಾಡಿದ ಪ್ರಸಂಗವನ್ನು ಹೇಳಲು ಒಂದೂವರೆ ನಿಮಿಷ ಸಾಕು.

    - ಪೇತ್ರನ ಪ್ರಸಂಗದ ಕೊನೆಯಲ್ಲಿ ಲೂಕನು ಹೀಗೆ ಹೇಳುತ್ತಾನೆ, 'ಇನ್ನೂ ಅನೇಕ ಮಾತುಗಳಿಂದ ಅವರನ್ನು ಗಂಭೀರವಾಗಿ ಎಚ್ಚರಿಸಿ ಸಾಕ್ಷಿ ನುಡಿದು, 'ಈ ಕೆಟ್ಟ ಸಂತತಿಯಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ!' ಎಂದು ಅವರನ್ನು ಎಚ್ಚರಿಸಿದನು' (2:40). ಲೂಕನು ಒಂದು ಪದವನ್ನೂ ಬಿಡದೇ ಸಂಪೂರ್ಣವಾಗಿ ಸಂದೇಶವನ್ನು ದಾಖಲಿಸಿದೆನೆಂದು ಆತನು ಘೋಷಿಸಿಕೊಳ್ಳಲಿಲ್ಲವೆಂಬುದನ್ನು ಇದು ನಮಗೆ ತೋರಿಸುತ್ತದೆ.

- ಆ ದಿನಗಳಲ್ಲಿ ಧ್ವನಿಮುದ್ರಣಗಳಿರಲಿಲ್ಲ ಮತ್ತು ಒಬ್ಬನು ಭಾಷಣ ಮಾಡುವಾಗ ಅದೇ ವೇಗದಲ್ಲಿ ಬರೆಯುವಷ್ಟು ಸಾಮರ್ಥ್ಯವನ್ನು ಜನರು ಹೊಂದಿರಲಿಲ್ಲ.
- ಲೂಕನು ಪ್ರತಿಯೊಂದು ಸಂದೇಶವನ್ನು ಕೇಳಲು ಸ್ವತಃ ತಾನೇ ಅಲ್ಲಿರಲಿಲ್ಲ. ಹಾಗಾಗಿ ಆ ಸಂದೇಶದ ಕುರಿತು ಇತರರ (ಅಥವಾ ಸ್ವತಃ ಸಂದೇಶಕರ) ಸಾರಾಂಶದ ಮೇಲೆ ಆತನು ಆತುಕೊಂಡಿರಬಹುದು.

ಹಾಗಾಗಿ ಅಪೋಸ್ತಲರ ಕೃತ್ಯಗಳಲ್ಲಿರುವ ಸಂದೇಶಗಳನ್ನು ಪ್ರತಿಯೊಂದು ಸಂದರ್ಭಗಳಲ್ಲಿ ಮಾಡಲ್ಪಟ್ಟ ಪ್ರಸಂಗಗಳ ಪ್ರಾಮಾಣಿಕ ಸಾರಾಂಶಗಳಾಗಿವೆ ಎಂಬುದಾಗಿ ಕಾಣತಕ್ಕದ್ದು.

2. ಪೇತ್ರನ ಪ್ರಸಂಗವು ಈ ಮೂರು ಪ್ರಮುಖ ಭಾಗಗಳನ್ನು ಒಳಗೊಂಡಿದೆ:

   1) ಪಂಚಾಶತ್ತಮದ ಮೊದಲ ದಿನದ ಘಟನೆಗಳನ್ನು ಆತನು ವಿವರಿಸಿದನು (ವ. 14–21).

   2) ಆತನು ಯೇಸು ಕ್ರಿಸ್ತನ ಸುವಾರ್ತೆಯನ್ನು ತಿಳಿಸಿದನು: ಆತನ ಮರಣ, ಆತನ ಪುನರುತ್ಥಾನ, ಆತನ ಮಹಿಮಾಕರಣ ಮತ್ತು ಆತನ ಪವಿತ್ರಾತ್ಮನ ಸುರಿಸುವಿಕೆ (ವ. 22–36).

   3) ತನ್ನ ಶ್ರೋತೃಗಳು ಪಶ್ಚಾತ್ತಾಪಪಟ್ಟು ಮತ್ತು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಆತನು ಎಚ್ಚರಿಸಿದನು (ವ. 37–40).

3. ಪೇತ್ರನು ಯೋವೇಲನ ಪ್ರವಾದನೆಯನ್ನು ಉಲ್ಲೇಖಿಸುವಾಗ 'ತರುವಾಯ' (ಯೋವೇಲ. 2:28) ಎಂಬ ಪದವನ್ನು 'ಅಂತ್ಯ ದಿನಗಳಲ್ಲಿ' (ಅ. ಕೃ. 2:17) ಎಂದು ಬದಲಾಯಿಸಿದನು. ಪವಿತ್ರಾತ್ಮನು ಬಂದಾಗ ಅಂತ್ಯ ದಿನಗಳು ಪ್ರಾರಂಭವಾದವು ಎಂಬುದನ್ನು ಒತ್ತಿ ಹೇಳಲು ಆತನು ಈ ರೀತಿಯಾಗಿ ಮಾಡಿದನು. ಯೇಸು ಕ್ರಿಸ್ತನ ಬರೋಣವು ಅಂತ್ಯ ದಿನಗಳನ್ನು ಅಥವಾ ಮೆಸ್ಸೀಯನ ಯುಗವನ್ನು ಉದ್ಘಾಟಿಸಿತೆಂದು ಹೊಸ ಒಡಂಬಡಿಕೆಯು ಸ್ಪಷ್ಟವಾಗಿ ಭೋಧಿಸುತ್ತದೆ. ಪವಿತ್ರಾತ್ಮನ ಸುರಿಸಲ್ಪಡುವಿಕೆಯು ಇದರ ಕೊನೆಯ ಪುರಾವೆಯಾಗಿದೆ. ಇದು ಅಂತ್ಯ ದಿನಗಳಿಗಾಗಿ ಹಳೆ ಒಡಂಬಡಿಕೆಯ 'ವಾಗ್ದಾನಗಳ ವಾಗ್ದಾನವಾಗಿತ್ತು'.

4. ವ. 32–33 ರಲ್ಲಿ ತ್ರಯೇಕತ್ವವು (ದೈವತ್ವದ ಮೂರು ವ್ಯಕ್ತಿಗಳು) ಒಟ್ಟಿಗೆ ಕಾರ್ಯಮಾಡುತ್ತಿರುವುದನ್ನು ನಾವು ಕಾಣುತ್ತೇವೆ: 'ಈ ಯೇಸುವನ್ನು ದೇವರು ಎಬ್ಬಿಸಿದನು, ಇದಕ್ಕೆ ನಾವೆಲ್ಲರೂ ಸಾಕ್ಷಿಗಳು. ಆದ್ದರಿಂದ ದೇವರ ಬಲಗಡೆಗೆ ಆರೋಹಣವಾದ ಯೇಸು ಈಗ ನೀವು ನೋಡಿ ಕೇಳಿದ ವಾಗ್ದಾತ್ತವಾದ ಪವಿತ್ರಾತ್ಮನನ್ನು ತಂದೆಯಿಂದ ಸ್ವೀಕರಿಸಿ ಸುರಿಸಿದ್ದಾನೆ'.

# ಉ 5. ವಿಶ್ವಾಸಿಗಳ ಅನ್ಯೋನ್ಯತೆ, 2:41–47

## ಇ) ಪಠ್ಯ ಪ್ರಶ್ನೆಗಳು

1. ವ. 42 ರಲ್ಲಿ ಕಂಡು ಬರುವಂತೆ ಯೆರೂಸಲೇಮಿನಲ್ಲಿದ್ದ ಆದಿವಿಶ್ವಾಸಿಗಳು ಈ ಕೆಳಗಿನ ನಾಲ್ಕು ಕಾರ್ಯ ಚಟುವಟಿಕೆಗಳಲ್ಲಿ ದೃಢವಾಗಿ ಸಾಗುತ್ತಿದ್ದರು:

    - ಅಪೋಸ್ತಲರ ಬೋಧನೆಯಲ್ಲಿ
    - ಅನ್ಯೋನ್ಯತೆಯಲ್ಲಿ
    - ರೊಟ್ಟಿ ಮುರಿಯುವುದರಲ್ಲಿ
    - ಪ್ರಾರ್ಥನೆ ಮಾಡುವುದರಲ್ಲಿ

2. ವ. 46 ರಲ್ಲಿ ದಾಖಲಿಸಿರುವಂತೆ ಯೆರೂಸಲೇಮಿನ ಸಭೆಯ ಕಾರ್ಯಚಟುವಟಿಕೆಗಳ ಎರಡು ಪ್ರಮುಖ ಸ್ಥಳಗಳಾವುವೆಂದರೆ:

    - ದೇವಾಲಯದಲ್ಲಿ
    - ಮತ್ತು ತಮ್ಮ ಮನೆಗಳಲ್ಲಿ

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಯೆರೂಸಲೇಮಿನಲ್ಲಿದ್ದ ಆದಿಸಭೆಯಲ್ಲಿನ ಅನ್ಯೋನ್ಯತೆಯನ್ನು ಈ ವಾಕ್ಯಭಾಗದಲ್ಲಿನ ಹೇಳಿಕೆಗಳು ವರ್ಣಿಸುತ್ತವೆ:

    - ಅವರು ಅನ್ಯೋನ್ಯತೆಯಲ್ಲಿ ಧೃಢವಾಗಿ ಸಾಗುತ್ತಿದ್ದರು (ವ. 42)
    - ವಿಶ್ವಾಸಿಗಳೆಲ್ಲರೂ ಒಟ್ಟಾಗಿದ್ದರು (ವ. 44)
    - ಪ್ರತಿಯೊಂದೂ ಅವರಿಗೆ ಹುದುವಾಗಿತ್ತು (ವ. 44)
    - ಅವರವರ ಅವಶ್ಯಕತೆಗೆ ಅನುಸಾರವಾಗಿ ಎಲ್ಲರಿಗೂ ಹಂಚುತ್ತಿದ್ದರು (ವ. 45)
    - ಪ್ರತಿದಿನವೂ ದೇವಾಲಯದಲ್ಲಿ ಕೂಡಿ ಬರುವುದನ್ನು ಕ್ರಮವಾಗಿ ಮುಂದುವರೆಸಿದರು (ವ. 46)

- ತಮ್ಮ ಮನೆಗಳಲ್ಲಿ ರೊಟ್ಟಿ ಮುರಿಯುತ್ತಾ ಆನಂದದಿಂದಲೂ ಸರಳ ಹೃದಯದಿಂದಲೂ ಊಟಮಾಡುತ್ತಿದ್ದರು (ವ. 46)

ಹಾಗಾಗಿ ಅನ್ಯೋನ್ಯತೆಯ ಕುರಿತು ಈ ಆರು ವಚನಗಳಲ್ಲಿ ಆರು ಹೇಳಿಕೆಗಳು ಕಂಡು ಬರುತ್ತವೆ! ಆದಿಸಭೆಯಲ್ಲಿ ಅನ್ಯೋನ್ಯತೆಯು ಪ್ರಧಾನವಾದ ಆದ್ಯತೆಯಾಗಿತ್ತು. ಬಹುಶಃ ಇದು ನಾವು ಆಲೋಚಿಸಬೇಕಾದ ಮತ್ತು ಪಾಲಿಸಬೇಕಾದ ಒಂದು ಸಂಗತಿಯಾಗಿದೆ!

2. ಯೆರೂಸಲೇಮಿನ ಸಭೆಯ ಜೀವನದ ಕುರಿತು ಸಾರ್ವಜನಿಕರಿಂದ ಬರುತ್ತಿದ್ದ ಮೂರು ಪ್ರತಿಕ್ರಿಯೆಯ ಕುರಿತು ಲೂಕನು ಈ ವಾಕ್ಯಭಾಗದಲ್ಲಿ ಪ್ರಸ್ತಾಪಿಸುತ್ತಿದ್ದಾನೆ:

   - ಬಹುಶಃ ಅಪೊಸ್ತಲರಿಂದ ನಡೆಯಲ್ಪಟ್ಟ ಅದ್ಭುತ ಮತ್ತು ಸೂಚಕ ಕಾರ್ಯಗಳ ಪರಿಣಾಮವಾಗಿ, ಜನರೆಲ್ಲರೂ ಭಯಭ್ರಾಂತರಾಗಿದ್ದರು (ವ. 43).

   - ವಿಶ್ವಾಸಿಗಳೆಲ್ಲರೂ ಜನರೆಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು (ವ. 47), ಅದರ ಅರ್ಥ ಅಲ್ಲಿ ಯಾವುದೇ ರೀತಿಯಾದ ಗಂಭೀರವಾದ ವಿರೋಧ ಅಥವಾ ಹಿಂಸೆಯು ಇರಲಿಲ್ಲ ಎಂಬುದಾಗಿರಬಹುದು. ವಿಶ್ವಾಸಿಗಳು ಪ್ರತಿದಿನವೂ ದೇವಾಲಯದಲ್ಲಿ ಕೂಡಿಬರಲು ಸಾಧ್ಯವಿತ್ತು (ವ. 46).

   - ಅನೇಕ ಜನರು ವಿಶ್ವಾಸಿಗಳಲ್ಲಿ ಇದ್ದಂತಹ ಅನ್ಯೋನ್ಯತೆಯಿಂದ ಆಕರ್ಷಿತರಾಗಿ ಸುವಾರ್ತೆಯನ್ನು ಅಂಗೀಕರಿಸಿದರು, ಹೀಗೆ ರಕ್ಷಿಸಲ್ಪಟ್ಟ ಹೊಸ ಜನರು ಪ್ರತಿದಿನವೂ ಸಭೆಗೆ ಸೇರಿಸಲ್ಪಡುತ್ತಿದ್ದರು (ವ. 47).

3. ಪೌಲ ಮತ್ತು ಇತರರೊಂದಿಗೆ ಕೂಡಿ – ಯೆರೂಸಲೇಮಿನ ಸಭೆಯ ಅಪೊಸ್ತಲರು ಹೊಸ ಒಡಂಬಡಿಕೆಯ ಪುಸ್ತಕಗಳ ಲೇಖಕರಾಗಿದ್ದರು. ಸುವಾರ್ತೆಗಳಲ್ಲಿ, ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ, ಪತ್ರಿಕೆಗಳಲ್ಲಿ ಮತ್ತು ಪ್ರಕಟನೆಯ ಪುಸ್ತಕದಲ್ಲಿ ತಮ್ಮ ಬೋಧನೆಗಳನ್ನು ದಾಖಲಿಸುವಂತೆ ಅವರು ಪವಿತ್ರಾತ್ಮನಿಂದ ಪ್ರೇರೇಪಿಸಲ್ಪಟ್ಟರು. ಹಾಗಾಗಿ ನಮ್ಮ ಸಭೆಗಳಲ್ಲಿ 'ಬೋಧನೆಯ ಅಂತರವಿದೆ' ಎಂದು ನಾವು ಹೇಳಲು ಸಾಧ್ಯವಿಲ್ಲ. ಈ ಬರಹಗಳು ನಂತರದಲ್ಲಿ ಸಂಗ್ರಹಿಸಲ್ಪಟ್ಟು ನಮಗಾಗಿ 'ಅಧಿಕೃತವಾಯಿತು' ಅಥವಾ 'ನಿಯಮವಾಯಿತು'. ಇದೇ ರೀತಿಯಲ್ಲಿ ಬೇರೆ ಯಾವುದೇ ಉಪದೇಶಕರುಗಳು ಅಥವಾ ಪುಸ್ತಕಗಳು ಪೋರಣೆ ಹೊಂದಿಲ್ಲ. ಇದರ ಪರಿಣಾಮವಾಗಿ, ಪ್ರತಿಯೊಂದು ಪೀಳಿಗೆಗಳಲ್ಲಿ ಹೊಸ ಒಡಂಬಡಿಕೆಯ ರೀತಿಯ 'ಉಪದೇಶಿಸುವ ಅಪೊಸ್ತಲರನ್ನು'"ನಾವು ಹೊಂದಲಿಲ್ಲ. ಅದರ ಬದಲಾಗಿ ಹೊಸ ಒಡಂಬಡಿಕೆಯ ಪುಸ್ತಕಗಳ ಸಂಗ್ರಹವನ್ನು ನಾವು ಹೊಂದಿದ್ದೇವೆ.

# ಉ 6. ಪೇತ್ರನು ಹುಟ್ಟು ಕುಂಟನನ್ನು ಗುಣಪಡಿಸಿದ್ದು, 3:1–10

## ಇ) ಪಠ್ಯ ಪ್ರಶ್ನೆಗಳು

1. ಪೇತ್ರ ಮತ್ತು ಯೋಹಾನರು ತನಗೆ ಸ್ವಲ್ಪ ಹಣವನ್ನು ಕೊಡಬಹುದೆಂದು ಭಿಕ್ಷುಕನು ಅಪೇಕ್ಷಿಸಿದನು.

2. ಭಿಕ್ಷುಕನು ಸೌಖ್ಯ ಹೊಂದಿದ ತಕ್ಷಣ ಜಿಗಿದು ನಿಂತು ನಡೆದಾಡಲು ಪ್ರಾರಂಭಿಸಿದನು. ನಂತರ ಆತನು ದೇವರ ಸ್ತೋತ್ರಮಾಡುತ್ತಾ ಅಪೋಸ್ತಲರೊಂದಿಗೆ ದೇವಾಲಯದೊಳಗೆ ಪ್ರವೇಶಿಸಿದನು.

3. ಭಿಕ್ಷುಕನು ಗುಣಹೊಂದಿದ್ದನ್ನು ನೋಡಿದ ಜನರು ಒಂದು ಅದ್ಭುತ ನಡೆದಿದೆ ಎಂದು ಮನಗಂಡರು. ಅವರು ಆಶ್ಚರ್ಯಭರಿತರಾಗಿ ವಿಸ್ಮಯಗೊಂಡರು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೇತ್ರ ಮತ್ತು ಯೋಹಾನರು ಯೆರೂಸಲೇಮಿನ ದೇವಾಲಯಕ್ಕೆ ಪ್ರಾರ್ಥಿಸಲು ಹೋದರು. ಅವರು ತಮ್ಮನ್ನು ಈಗಲೂ ಯೆಹೂದ್ಯರೆಂದು ಪರಿಗಣಿಸಿಕೊಂಡಿದ್ದರೆಂಬುದನ್ನು ಇದು ತೋರಿಸುತ್ತದೆ. ಹಾಗಾಗಿ ಯೆಹೂದ್ಯರ ದಿನನಿತ್ಯದ ಕಾರ್ಯಗಳಲ್ಲಿ ಅವರು ಭಾಗಿಯಾಗುತ್ತಿದ್ದರು. ಆಗ ಇನ್ನೂ 'ಕ್ರೈಸ್ತತ್ವಕ್ಕೆ' ತನ್ನದೇ ಆದ ಗುರುತು ಇರಲಿಲ್ಲ. ಕ್ರೈಸ್ತ ನಂಬಿಕೆಯ ಅದ್ವಿತೀಯತೆ ಮತ್ತು ಸಾರ್ವತ್ರಿಕರಣವನ್ನು ವಿಶ್ವಾಸಿಗಳು ಪ್ರಾರಂಭದಿಂದಲೂ ಅರ್ಥಮಾಡಿಕೊಳ್ಳದಿದ್ದದ್ದು ಆಶ್ಚರ್ಯಕರವಾದುದ್ದೆಂದು ನಾನು ಆಲೋಚಿಸುತ್ತೇನೆ. ಸಭೆಯು ಹಿಂಸೆಯ ಪರಿಣಾಮವಾಗಿ ಚೆದುರಿಸಲ್ಪಟ್ಟು ವಿಶ್ವಾಸಿಗಳು ಸಮಾರ್ಯದವರೊಂದಿಗೆ ಮತ್ತು ಅನ್ಯರೊಂದಿಗೆ ಸಂಪರ್ಕದಲ್ಲಿ ಬಂದಾಗ ಮಾತ್ರ ಈ ತಿಳುವಳಿಕೆಯು ಅಭಿವೃದ್ಧಿಯಾಯಿತು. ನಾವು ಸಭೆಯ ಚರಿತ್ರೆಯನ್ನು ಅಭ್ಯಸಿಸುವಾಗ ವಿಶ್ವಾಸಿಗಳ ದರ್ಶನ ಮತ್ತು ತಿಳುವಳಿಕೆಯು ತಮ್ಮ ಸಂಸ್ಕೃತಿಯಿಂದ ಸಂಕುಚಿತವಾದದ್ದು ಪದೇ ಪದೇ ಕಂಡು ಬರುತ್ತದೆ. ಇದು ವಿಷಾದನೀಯವಾದದ್ದು!

   ನಾವು ಪ್ರಾರ್ಥನೆಗಾಗಿ ದೇವಾಲಯಗಳಿಗೆ ಹೋಗಬೇಕೆಂದು ಈ ಕಥೆಯು ಬೋಧಿಸುತ್ತಿಲ್ಲ ಎಂದು ನಾನು ಆಲೋಚಿಸುತ್ತೇನೆ! ನಾವು ಯಾವುದೇ ರೀತಿಯ ವಿಗ್ರಹ ಆರಾಧನೆಯಲ್ಲಿ ಅಥವಾ ಅನ್ಯರ ಆಚರಣೆಗಳಲ್ಲಿ ಪಾಲ್ಗೊಳ್ಳಬಾರದೆಂದು ಸತ್ಯವೇದವು ಅತೀ ಸ್ಪಷ್ಟವಾಗಿ ತಿಳಿಸುತ್ತದೆ. ಖಂಡಿತವಾಗಲೂ ಯೆರೂಸಲೇಮಿನ ಸಭೆಯಲ್ಲಿ ಯಾವುದೇ ರೀತಿಯ ವಿಗ್ರಹ ಆರಾಧನೆಗಳು ನಡೆಯುತ್ತಿದ್ದಿಲ್ಲ!

2. ಪೇತ್ರನು ಭಿಕ್ಷುಕನ ಕೈಯನ್ನು ಹಿಡಿದು ಎಬ್ಬಿಸಲು ಸಹಾಯ ಮಾಡುವದರ ಮೂಲಕ ಆತನನ್ನು ಗುಣಪಡಿಸಲು ತನ್ನಲ್ಲಿ ನಂಬಿಕೆ ಇದೆ ಎಂದು ತೋರಿಸಿದನು. ಪೇತ್ರನ ವರ್ತನೆಯು ನಂಬಿಕೆಯ ಕೊರತೆಯನ್ನು ವ್ಯಕ್ತಪಡಿಸಲಿಲ್ಲ!

## ಉ 7. ನೆರೆದಿದ್ದ ಜನರೊಂದಿಗೆ ಪೇತ್ರನು ಮಾತನಾಡಿದ್ದು, 3:11–26

### ಇ) ಪಠ್ಯ ಪ್ರಶ್ನೆಗಳು

1–2. ಸ್ವಸ್ಥತೆಯ ಅದ್ಭುತವಾಗಲು ಅಪೋಸ್ತಲರ ಬಲವಾಗಲಿ ಅಥವಾ ದೈವಭಕ್ತಿಯಾಗಲಿ ಕಾರಣವಲ್ಲ ಎಂಬುದನ್ನು ಹೇಳುವುದರ ಮೂಲಕ ಪೇತ್ರನು ತನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದಾನೆ. ಯೇಸು ಕ್ರಿಸ್ತನ ನಾಮದ ಮತ್ತು ಯೇಸುವಿನ ಮೇಲಿನ ನಂಬಿಕೆಯ ಮೂಲಕ ಆ ಮನುಷ್ಯನು ಗುಣಹೊಂದಿದನು.

2. ತನ್ನ ಶ್ರೋತೃಗಳು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು ಪೇತ್ರನು ತಿಳಿಸುತ್ತಿದ್ದಾನೆ. ನಂತರದಲ್ಲಿ ಅವರು ತಮ್ಮ ಪಾಪಕ್ಕಾಗಿ ಕ್ಷಮಾಪಣೆಯನ್ನು ಸ್ವೀಕರಿಸುವರು.

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. 1:12–26 ರಲ್ಲಿ ಕಂಡುಬರುವಂತೆ ಪೇತ್ರನು ನೆರೆದಿದ್ದ ಜನರನ್ನು ಉದ್ದೇಶಿಸಿ ಆಡಿದ ಮಾತುಗಳ ರಚನೆಯು ಹೀಗಿದೆ:

    - ಅದ್ಭುತವು ಹೇಗೆ ಸಂಭವಿಸಿತೆಂದು ಪೇತ್ರನು ವಿವರಿಸುತ್ತಿದ್ದಾನೆ, ಯಾವುದೇ ಮನುಷ್ಯನ ಶಕ್ತಿಯಿಂದಲ್ಲ ಅಥವಾ ಧೈವಭಕ್ತಿಯಿಂದಲ್ಲ ಆದರೆ ಯೇಸು ಕ್ರಿಸ್ತನ ಹೆಸರಿನ ಮೇಲೆ ಇಟ್ಟ ನಂಬಿಕೆಯ ಮೂಲಕ ಮಾತ್ರ, ವ. 12–16
    - ಯೇಸು ಕ್ರಿಸ್ತನಿಗೆ ಸಂಭವಿಸಿದ ಮರಣ ಮತ್ತು ಪುನರುತ್ಥಾನವು ಹಳೆ ಒಡಂಬಡಿಕೆಯ ಪ್ರವಾದನೆಗಳಲ್ಲಿ ತಿಳಿಸಿದಂತೆಯೇ ಆಯಿತು, ವ. 17–18
    - ಈಗ ಜನರು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳಬೇಕು. ಆಗ ಅವರು ತಮ್ಮ ಪಾಪಗಳಿಗಾಗಿ ಕ್ಷಮಾಪಣೆಯನ್ನೂ ಕರ್ತನಿಂದ ವಿಶ್ರಾಂತಿಯ ಕಾಲಗಳನ್ನೂ ಹೊಂದುವರು, ಮತ್ತು ಕ್ರಿಸ್ತನ ಬರೋಣಕ್ಕಾಗಿ ಸಿದ್ಧರಾಗುವರು, ವ. 19–21
    - ಯೇಸು ಕ್ರಿಸ್ತನ ಬರೋಣವು ಹಳೆ ಒಡಂಬಡಿಕೆಯ ಪ್ರವಾದಿಗಳಿಂದ ಮುಂಚಿತವಾಗಿ ತಿಳಿಸಲಟ್ಟಿತ್ತು, ವ. 22–26

2. ವ 14 ರಲ್ಲಿ ಪೇತ್ರನು ಯೇಸುವನ್ನು 'ಪವಿತ್ರನು ಮತ್ತು ನೀತಿವಂತನೆಂದು' ಕರೆಯುತ್ತಿದ್ದಾನೆ. 'ಪವಿತ್ರನು' ಎಂಬ ಪದವು ದೇವರನ್ನು ಸೂಚಿಸುವಂತೆಯೂ ಮತ್ತು 'ನೀತಿವಂತನು' ಎಂಬ

ಪದವು ಮನುಷನನ್ನು ಸೂಚಿಸುವಂತೆಯೂ ಕಾಣಬಹುದು. ಯೇಸು ಕ್ರಿಸ್ತನು ಮನುಷ್ಯ ಮತ್ತು ದೇವರ ವಿಷಯಗಳೆರಡರಲ್ಲಿಯೂ ದೋಷರಹಿತನಾಗಿದ್ದನು.

3. ಹುಟ್ಟುಕುಂಟನಾದ ಭಿಕ್ಷುಕನ ನಂಬಿಕೆಯು ಆತನನ್ನು ಗುಣಪಡಿಸಿತೆಂದು ನಾನು ವೈಯಕ್ತಿಕವಾಗಿ ಆಲೋಚಿಸುವುದಿಲ್ಲ. ಆತನು ಗುಣಹೊಂದುತ್ತೇನೆಂದು ಅಪೇಕ್ಷಿಸಿರಲಿಲ್ಲ ಮತ್ತು ಬಹುಶಃ ಈ ಅದ್ಭುತ ನಡೆಯುವುದಕ್ಕಿಂತ ಮುಂಚೆ ಆತನು ಯೇಸುವಿನಲ್ಲಿ ನಂಬಿಕೆಯನ್ನು ಸಹ ಇಟ್ಟಿದ್ದಿಲ್ಲ. ಆತನನ್ನು ಗುಣಪಡಿಸಿದ್ದು ಅಪೋಸ್ತಲರ ನಂಬಿಕೆ ಎಂದು ನಾನು ಆಲೋಚಿಸುತ್ತೇನೆ. ಅ. ಕೃ. 14:8–10 ರಲ್ಲಿ ಇನ್ನೊಬ್ಬ ಹುಟ್ಟು ಕುಂಟನು ಗುಣ ಹೊಂದಿದನು. 'ಆತನು ನಂಬಿಕೆಯಿಂದ ಗುಣ ಹೊಂದಿದನೆಂದು' ಲೂಕನು ಆತನ ಕುರಿತು ಬರೆಯುತ್ತಾನೆ. ಆದರೆ ಆ ಮನುಷ್ಯನ ಹಿನ್ನಲೆಯು ವ್ಯತ್ಯಾಸವಾಗಿತ್ತು: ಪೌಲನ ಸುವಾರ್ತೆಯ ಬೋಧನೆಯನ್ನು ಮೊದಲು ಲಾಲಿಸಿದನು, ಹಾಗಾಗಿ ಆತನು ಕ್ರಿಸ್ತನ ಮೇಲೆ ನಂಬಿಕೆಯಿಟ್ಟಿದ್ದನು, ಗುಣಹೊಂದುವೆನೆಂಬ ನಂಬಿಕೆಯಿಟ್ಟಿದ್ದನು.

4. ಜನರು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳುವಾಗ ಅದರಿಂದಾಗುವ ಮೂರು ಪರಿಣಾಮಗಳನ್ನು (ಅಥವಾ ಮೂರು ಆಶೀರ್ವಾದಗಳನ್ನು) ಪೇತ್ರನು ತಿಳಿಸುತ್ತಿದ್ದಾನೆ:

   1) ಅವರ ಪಾಪಗಳು ತೊಳೆದು ಹೋಗುವುದು (ವ. 19). ಅವರ ಪಾಪಗಳು ಕ್ಷಮಿಸಲ್ಪಡುವುದು.

   2) ಕರ್ತನಿಂದ ವಿಶ್ರಾಂತಿಯ ಕಾಲಗಳು ಒದಗಿ ಬರುವುವು (ವ. 19). ಹಳೆಯ ಪಾಪದ ಜೀವಿತವು ಹೋಗಿ ಆತ್ಮನ ಮೂಲಕವಾಗಿ ಹೊಸ ಜೀವಿತವು ಬರುವುದು, ಆತ್ಮೀಕ ಆಶೀರ್ವಾದಗಳಿಂದ ತುಂಬಲ್ಪಟ್ಟ ಜೀವನ.

   3) ದೇವರು ಅವರಿಗೋಸ್ಕರ ನೇಮಿಸಲ್ಪಟ್ಟ ಕ್ರಿಸ್ತನನ್ನು ಅಂದರೆ, ಯೇಸುವನ್ನು ಕಳುಹಿಸಿಕೊಡುವನು (ವ. 20). ಇದು ಅಂತ್ಯ ದಿನಗಳಲ್ಲಿ ಎಲ್ಲವನ್ನು ಪುನಃ ಸ್ಥಾಪಿಸಲು ಕ್ರಿಸ್ತನನ್ನು ಕಳುಹಿಸಿಕೊಡುವ ದೇವರ ವಾಗ್ದಾನವನ್ನು ಸೂಚಿಸುತ್ತದೆ (ವ. 21). ಹಾಗಾಗಿ ವಿಶ್ವಾಸಿಗಳು ಭರವಸೆಯಿಂದ ಯೇಸು ಕ್ರಿಸ್ತನ ಎರಡನೆಯ ಬರೋಣವನ್ನು ಎದುರುನೋಡಬಹುದು.

5. ವ. 21 ರಲ್ಲಿ ತಿಳಿಸುವ 'ಎಲ್ಲವನ್ನು ಪುನಃ ಸ್ಥಾಪಿಸುವ' ಎಂಬ ಹೇಳಿಕೆಯನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳುವ ಮಾರ್ಗವೆಂದರೆ, ಇಲ್ಲಿ ಪೇತ್ರನು ಪ್ರಕಟನಾಶಾಸ್ತ್ರದ ಪುನಃ ಸ್ಥಾಪನೆಯನ್ನು ಸೂಚಿಸುತ್ತಿದ್ದಾನೆ (ಮತ್ತಾಯ. 19:28 ರಲ್ಲಿ ಯೇಸು ಅದನ್ನು 'ಹೊಸಸೃಷ್ಟಿ'" ಎಂದು ಕರೆಯುತ್ತಾನೆ), ಆಗ ಪ್ರಕೃತಿಯು ತನ್ನ ಬಂಧನ, ನೋವು ಮತ್ತು ನಾಶನದಿಂದ ವಿಮುಕ್ತಿಗೊಳ್ಳುವುದು (ನೋಡಿರಿ ರೋಮಾ. 8:19–22) ಮತ್ತು ದೇವರು ಒಂದು ನೂತನ ಆಕಾಶವನ್ನೂ ನೂತನ ಭೂಮಿಯನ್ನೂ ಉಂಟುಮಾಡುವನು (2 ಪೇತ್ರ. 3:13 ಮತ್ತು ಪ್ರಕಟನೆ. 21:1, 5).

# ಉ 8. ನ್ಯಾಯಸಭೆಯಲ್ಲಿ ಪೇತ್ರ ಮತ್ತು ಯೋಹಾನ, 4:1–22

## ಇ) ಪಠ್ಯ ಪ್ರಶ್ನೆಗಳು

1. ಯೆಹೂದ್ಯ ನಾಯಕರುಗಳು, ಅಂದರೆ ಸೇವೆ ಸಲ್ಲಿಸುತ್ತಿದ್ದ ಯಾಜಕರು, ದೇವಾಲಯದ ಕಾವಲುಗಾರರ ದಳಪತಿ ಹಾಗೂ ಆಡಳಿತ ಪಕ್ಷದವರಾದ ಸದ್ದುಕಾಯರುಗಳು, ಅಪೋಸ್ತಲರ ಕುರಿತು ಮತ್ತು ಅವರ ಬೋಧನೆಗಳ ಕುರಿತು ಬೇಸರಗೊಂಡಿದ್ದರು. ಪೇತ್ರ ಮತ್ತು ಯೋಹಾನರು ಯೇಸುವಿನ ಪುನರುತ್ಥಾನದ ಕುರಿತು ಸಾರುತ್ತಿದ್ದರಿಂದ ಅವರು ಬೇಸರಗೊಂಡಿದ್ದರು. ಸದ್ದುಕಾಯರು ಶರೀರದ ಪುನರುತ್ಥಾನವನ್ನು ನಂಬುತ್ತಿದ್ದಿಲ್ಲ ಮತ್ತು ರಾಜಕೀಯ ಸ್ಥಿತಿಯನ್ನು ಗೊಂದಲಪಡಿಸುವ ಯಾವುದೇ ಘಟನೆಗಳ ಕುರಿತು ಭಯವುಳ್ಳವರಾಗಿದ್ದರು. ಆದರೆ ಹುಟ್ಟುಕುಂಟನಿಗೆ ಆದ ಸೌಖ್ಯವನ್ನು ನೋಡಿದ ಜನರು ಮತ್ತು ಅಪೋಸ್ತಲರ ಬೋಧನೆಯನ್ನು ಕೇಳಿದಂತವರು ಯೇಸುವಿನಲ್ಲಿ ನಂಬಿಕೆ ಇಟ್ಟರು. ಇದರ ಪರಿಣಾಮವಾಗಿ ಸಾವಿರಾರು ಜನರು ರಕ್ಷಣೆ ಹೊಂದಿದರು.

2. ಅಪೋಸ್ತಲರ ಕೃತ್ಯಗಳ ಪುಸ್ತಕದಾದ್ಯಂತ ಪವಿತ್ರಾತ್ಮನು ಕಾರ್ಯ ಮಾಡುವವನಾಗಿದ್ದಾನೆ. ಕೆಲವೊಮ್ಮೆ ಆತನು ಬಹಿರಂಗವಾಗಿ ಪ್ರಸ್ತಾಪಿಸಲ್ಪಟ್ಟಿದ್ದಾನೆ, ಇತರೆ ವೇಳೆಯಲ್ಲಿ ಆತನು ಅಪೋಸ್ತಲರ ಮುಖಾಂತರವಾಗಿ ಕಾರ್ಯಮಾಡುತ್ತಿದ್ದಾನೆ. ಈ ಕಥೆಯಲ್ಲಿ, ಪೇತ್ರನು ಪವಿತ್ರಾತ್ಮಭರಿತನಾಗಿ ನ್ಯಾಯಸಭೆಯ ಅಧಿಕಾರಿಗಳಿಗೆ ಯೇಸು ಕ್ರಿಸ್ತನ ಕುರಿತು ಸುವಾರ್ತೆ ಸಾರುತ್ತಿದ್ದಾನೆ (ವ. 8).

3. ಯೇಸು ಕ್ರಿಸ್ತನ ಕುರಿತಾಗಿ ಪೇತ್ರನು ನ್ಯಾಯಸಭೆಯ ಅಧಿಕಾರಿಗಳ ಮುಂದೆ ಮಾತನಾಡಿದ್ದನ್ನು ಕೇಳಿದ ಅಧಿಕಾರಿಗಳು ಆಶ್ಚರ್ಯಚಕಿತರಾದರು, ಯಾಕೆಂದರೆ ಅಪೋಸ್ತಲರು 'ವಿದ್ಯೆ ಕಲಿಯದ ಸಾಮಾನ್ಯ ಜನರಾಗಿದ್ದರು', ಅವರು ರಬ್ಬೀಯ ದೈವಶಾಸ್ತ್ರದಲ್ಲಿ ಯಾವುದೇ ಪದವಿಯನ್ನು ಹೊಂದಿರಲಿಲ್ಲ, ಆದಾಗ್ಯೂ ಅವರು ಅಂತಹ ಧೈರ್ಯದೊಂದಿಗೆ ಮಾತನಾಡಿದರು. ಆಗ ಅವರು ಯೇಸುವಿನೊಂದಿಗೆ ಇದ್ದವರು ಎಂಬುದನ್ನು ಗುರುತಿಸಿಕೊಂಡರು!

4. ನ್ಯಾಯಸಭೆಯವರು 'ಯೇಸುವಿನ ಹೆಸರಿನಲ್ಲಿ ಮಾತನಾಡಲೂಬಾರದು ಮತ್ತು ಬೋಧಿಸಲೂಬಾರದು' ಎಂಬ" ಕಠಿಣ ಆಜ್ಞೆಯನ್ನು ಅಪೋಸ್ತಲರಿಗೆ ಕೊಟ್ಟು ಕಳುಹಿಸಿಬಿಟ್ಟರು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅ. ಕೃ. 4:1–22 ನ್ನು ಹೀಗೆ ರಚಿಸಬಹುದು:

   1) ಪೇತ್ರ ಮತ್ತು ಯೋಹಾನರ ಬೋಧನೆಗಳಿಂದ ಯೆಹೂದ್ಯ ನಾಯಕರುಗಳು ಬೇಸರಗೊಂಡರು, ಹಾಗಾಗಿ ಅವರನ್ನು ಬಂಧಿಸಿ ರಾತ್ರಿಯಿಡೀ ಸೆರೆಮನೆಯಲ್ಲಿ ಹಾಕಿದರು, ವ. 1–4

   2) ಪೇತ್ರ ಮತ್ತು ಯೋಹಾನರು ನ್ಯಾಯಸಭೆಯ ಮುಂದೆ ಕರೆತರಲ್ಪಟ್ಟರು ಮತ್ತು ಹುಟ್ಟುಕುಂಟನ ಸ್ವಸ್ಥತೆಯ ಹಿಂದೆ ಯಾವ ಶಕ್ತಿಯಿದೆ ಎಂದು ಪ್ರಶ್ನಿಸಲ್ಪಟ್ಟರು, ವ 5–7

   3) ಆ ಮನುಷ್ಯನು ಯೇಸು ಕ್ರಿಸ್ತನ ಹೆಸರಿನಿಂದಲೇ ಗುಣಹೊಂದಿದನು ಮತ್ತು ಬೇರೆ ಯಾವ ಹೆಸರಿನಿಂದಲೂ ರಕ್ಷಣೆಯಾಗುವುದಿಲ್ಲ ಎಂದು ಪೇತ್ರನು ಸಾರಿದನು, ವ. 8–12

   4) ನ್ಯಾಯಸಭೆಯವರು ಅಪೋಸ್ತಲರ ಧೈರ್ಯವನ್ನು ನೋಡಿ ಆಶ್ಚರ್ಯಚಕಿತರಾಗಿ ಅವರಿಗೆ ಏನು ಹೇಳಬೇಕೆಂಬುದನ್ನು ಅರಿಯದವರಾದರು, ವ. 13–14

   5) ನ್ಯಾಯಸಭೆಯವರು ಅಪೋಸ್ತಲರಿಗೆ ಏನನ್ನು ಮಾಡಬೇಕೆಂದು ನಿರ್ಧರಿಸಲು ಒಂದು ಖಾಸಗಿ ಸಭೆ ನಡೆಸಿದರು. ಅವರು ಜನರ ಪ್ರತಿಕ್ರಿಯೆಗಳ ಕುರಿತು ಹೆದರಿದ್ದರಿಂದ ಪೇತ್ರ ಮತ್ತು ಯೋಹಾನರನ್ನು ಯೇಸುವಿನ ಹೆಸರಿನಲ್ಲಿ ಮಾತನಾಡಲೂಬಾರದು ಮತ್ತು ಬೋಧಿಸಲೂಬಾರದೆಂದು ಕಠಿಣವಾಗಿ ಎಚ್ಚರಿಸಿ ಕಳುಹಿಸಿಬಿಟ್ಟರು, ವ. 15–17

   6) ಪೇತ್ರ ಮತ್ತು ಯೋಹಾನರನ್ನು ಪುನಃ ನ್ಯಾಯಸಭೆಯವರ ಮುಂದೆ ಕರೆತಂದು ತಮ್ಮ ನಿರ್ಧಾರವನ್ನು ತಿಳಿಸಿದರು. ತಾವು ಯೆಹೂದ್ಯ ನಾಯಕರುಗಳಿಗಿಂತ ಹೆಚ್ಚಾಗಿ ದೇವರಿಗೆ ವಿಧೇಯರಾಗತಕ್ಕದ್ದೆಂದು ಅಪೋಸ್ತಲರು ಉತ್ತರಿಸಿದರು, ಹಾಗಾಗಿ ಅವರು ಸಾಕ್ಷೀಕರಿಸುವುದನ್ನು ನಿಲ್ಲಿಸುವುದಿಲ್ಲವೆಂದು ಹೇಳಿದರು. ನಂತರ ನ್ಯಾಯಸಭೆಯವರು ಅವರನ್ನು ಇನ್ನೂ ಹೆಚ್ಚಾಗಿ ಬೆದರಿಸಿ ಕಳುಹಿಸಿಬಿಟ್ಟರು, ವ. 18–22

2. ‘ಯಾವ ಹೆಸರಿನಿಂದ ಮತ್ತು ಯಾವ ಶಕ್ತಿಯಿಂದ” ನೀವು ಇದನ್ನು ಮಾಡುತ್ತೀರಿ?’ ಎಂದು ನ್ಯಾಯಸಭೆಯವರು ಪೇತ್ರ ಮತ್ತು ಯೋಹಾನರಿಗೆ ಕೇಳಿದ ಪ್ರಶ್ನೆಯ ಹಿಂದೆ ಬಹುಶಃ ಎರಡು ಕಾರಣಗಳಿರಬಹುದು:

   1) ರೋಮನ್ ಅಧಿಕಾರಿಗಳು ಕೋಪಗೊಳ್ಳುವಂತೆ ಅಪೋಸ್ತಲರು ಒಂದು ರೀತಿಯ ರಾಜಕೀಯ ಚಳುವಳಿಯನ್ನು ಪ್ರಾರಂಭಿಸುವ ಯೋಜನೆ ಹಾಕಿಕೊಂಡಿದ್ದಾರೆಂದು ಅವರು ಭಯಬ್ರಾಂತರಾಗಿದ್ದರು. ನ್ಯಾಯಸಭೆಯು ಪಾಲೆಸ್ತೀನ್ ರೋಮ್ ವಶವಾದುದ್ದನ್ನು ಬೆಂಬಲಿಸುತ್ತಿದ್ದ ಸದ್ದುಕಾಯರಿಂದ ನಿಯಂತ್ರಿಸಲ್ಪಟ್ಟಿತ್ತು.

   2) ಅವರು ಕ್ರಿಸ್ತೀಯ ಮೂಲ ತತ್ವವಾದ ಯೇಸುವೇ ಮೆಸ್ಸಿಯನೆಂಬುದನ್ನು ಮತ್ತು ಯೇಸುವಿನ ಪುನರುತ್ಥಾನವನ್ನು ವಿರೋಧಿಸುವಂತವರಾಗಿದ್ದರು. ಸದ್ದುಕಾಯರು ದೇಹದ ಪುನರುತ್ಥಾನದಲ್ಲಿ ನಂಬಿಕೆ ಇಲ್ಲದವರಾಗಿದ್ದರು ಮತ್ತು ಹಳೆ ಒಡಂಬಡಿಕೆಯಲ್ಲಿ ಪ್ರವಾದಿಗಳ

ಮುಖಾಂತರ ತಿಳಿಸಲ್ಪಟ್ಟ ಮೆಸ್ಸಿಯನ ರಾಜ್ಯಭಾರವು ಈಗಾಗಲೇ ಬಂದಿತ್ತೆಂದು ಅವರು ನಂಬಿದ್ದರು.

3. ನ್ಯಾಯಸಭೆಯವರು ಅಪೋಸ್ತಲರನ್ನು ಕೇವಲ ಎಚ್ಚರಿಕೆಯೊಂದಿಗೆ ಬಿಡುಗಡೆ ಮಾಡಿದ್ದಕ್ಕೆ ಬಹುಶಃ ಒಂದಕ್ಕಿಂತ ಹೆಚ್ಚು ಕಾರಣಗಳಿವೆ:

   - ಅಪೋಸ್ತಲರನ್ನು ಸೆರೆಯಲ್ಲಿರಿಸಿದರೆ ಜನರು ಅವರನ್ನು ಬೆಂಬಲಿಸುತ್ತಾ ಗೊಂದಲ ಸೃಷ್ಟಿಸಬಹುದೆಂದು ಹೆದರಿದ್ದರು.
   - ಅದ್ಭುತವು ನಿಜವಾಗಲೂ ನಡೆದಿತ್ತೆಂಬುದನ್ನು ಅವರು ನಿರಾಕರಿಸಲಾಗಲಿಲ್ಲ. ಎಲ್ಲರಿಗೂ ಚಿರಪರಿಚಿತನಾಗಿದ್ದ ಹುಟ್ಟುಕುಂಟನಾದ ಭಿಕ್ಷುಕನು ಗುಣಹೊಂದಿದ್ದನು ಹಾಗೂ ಎಲ್ಲರ ಕಣ್ಣುಗಳ ಮುಂದೆ ನಡೆದಾಡುತ್ತಿದ್ದನು.
   - ಅಪೋಸ್ತಲರು ಯೇಸು ಕ್ರಿಸ್ತನ ಕುರಿತು ಮಾತನಾಡುವುದನ್ನು ತಡೆಯಲು ಒಂದು ಕಠಿಣ ಎಚ್ಚರಿಕೆಯು ಸಾಕೆಂದು ಅವರು ನೆನೆಸಿದರು.

4. ಈ ಕಥೆಯಲ್ಲಿ ಪೇತ್ರ ಮತ್ತು ಯೋಹಾನರು ಗಮನಾರ್ಹವಾದ ಧೈರ್ಯವನ್ನು ತೋರಿಸುವಂತವರಾಗಿದ್ದಾರೆ. ಇದಕ್ಕಿಂತ ಸ್ವಲ್ಪ ಸಮಯ ಮುಂಚೆ ಯೇಸು ಕ್ರಿಸ್ತನನ್ನು ಕೊಲ್ಲಿಸುವುದರ ಹಿಂದೆ ನ್ಯಾಯಸಭೆಯವರ ಕೈವಾಡವಿದ್ದುದ್ದನ್ನು ನಾವು ನೆನಪಿಸಿಕೊಳ್ಳಬೇಕು (ಮಾರ್ಕ. 14:55, 15:1), ಮತ್ತು ಈ ಸಮಯದಲ್ಲಿ ಅದರ ನಾಯಕರುಗಳಾದ ಅನ್ನನೂ ಮತ್ತು ಕಾಯಫನು ಪ್ರಮುಖ ಪಾತ್ರಧಾರಿಗಳಾಗಿದ್ದರು (ಯೋಹಾನ. 18:12–14). ಪೇತ್ರ ಮತ್ತು ಯೋಹಾನರು ರಾತ್ರಿಯಿಡೀ ಸೆರೆಮನೆಯಲ್ಲಿ ಕಳೆದ ನಂತರ ನ್ಯಾಯಸಭೆಯವರ ಮುಂದೆ ಕರೆತರಲ್ಪಟ್ಟಾಗ ಹೆದರಿಕೊಳ್ಳಲು ಸಾಕಷ್ಟು ಕಾರಣಗಳಿದ್ದವು!

   ಹಾಗಾಗಿ ನಾವು ಈ ಧೈರ್ಯವನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಅವರು 'ಯೇಸುವಿನೊಂದಿಗೆ ಇದ್ದವರು' ಎಂಬ ವಾಸ್ತವಾಂಶದಲ್ಲಿ ಉತ್ತರ ಸಿಗಲಾರದು (ವ. 13). ಇದು ಅವರನ್ನು ಯೇಸು ಗೆತ್ಸೆಮನೆಯಲ್ಲಿ ಸೆರೆಹಿಡಿಯಲ್ಪಟ್ಟಾಗ ತಪ್ಪಿಸಿಕೊಂಡು ಓಡಿಹೋಗುವುದರಿಂದಲೂ ಅಥವಾ ಮೂರು ಬಾರಿ ಯೇಸುವನ್ನು ಅಲ್ಲಗಳೆಯುವುದರಿಂದಲೂ ತಡೆಯಲಿಲ್ಲ. ಇಲ್ಲ, ಅದು ಅಪೋಸ್ತಲರ ಜೀವಿತಗಳನ್ನು ಬದಲಾಯಿಸಿದ ಮತ್ತು ಪಂಚಾತ್ತಮ ದಿನದಂದು ನಡೆದ ಪವಿತ್ರಾತ್ಮನ ಆಗಮನವಾಗಿತ್ತು. ಅವರ ಧೈರ್ಯ ಮತ್ತು ದಿಟ್ಟತನವು ಪವಿತ್ರಾತ್ಮನು ಅವರ ಜೀವಿತಗಳಲ್ಲಿ ಮಾಡಿದ ಕಾರ್ಯವಾಗಿತ್ತು!

5. ಈ ವಾಕ್ಯಭಾಗದಲ್ಲಿ (ಅಧ್ಯಾಯ 3 ರಲ್ಲಿರುವ ಎರಡು ವಾಕ್ಯಭಾಗಗಳಲ್ಲಿದ್ದಂತೆ) 'ಯೇಸುವಿನ ನಾಮವು' ಕೇಂದ್ರಬಿಂದುವಾಗಿದೆ. ಆದರೆ 'ಯೇಸು' ಎಂಬ ಹೆಸರನ್ನು ಒಂದು ಮಂತ್ರವಾಗಿ ಕಾಣುವ ಶೋಧನೆಗೆ ಒಳಗಾಗಬಾರದು. ಸತ್ಯವೇದ ಭಾಷೆಯಲ್ಲಿ 'ನಾಮ/ಹೆಸರು' ಎಂಬ ಪದವು ಆ ವ್ಯಕ್ತಿಯ ಸ್ವಭಾವ, ಗುಣಲಕ್ಷಣ ಮತ್ತು ವ್ಯಕ್ತಿತ್ವಗಳನ್ನು ಸೂಚಿಸುತ್ತದೆ. ಹಾಗಾಗಿ

ಯೇಸುವಿನ ವಿಷಯದಲ್ಲಿ, ಆತನ 'ನಾಮವು' ಆತನು ಯಾರು, ಮತ್ತು ಆತನು ಏನನ್ನು ಮಾಡಿದ್ದಾನೆ ಎಂಬುವುಗಳನ್ನು ಸೂಚಿಸುತ್ತದೆ. ಆತನು ಮನುಷ್ಯನ ದೇಹದಲ್ಲಿ ಬಂದ ದೇವರಾಗಿದ್ದಾನೆ. ಆತನು ಅದ್ವಿತೀಯವಾಗಿ ಕ್ರೂಜೆಯ ಮೇಲೆ ನಮ್ಮ ಪಾಪಗಳಿಗಾಗಿ ಸತ್ತು, ಕಳೆದುಹೋಗಿದ್ದ ನಮಗೆ ರಕ್ಷಣೆಯನ್ನು ತರುವುದರ ಮೂಲಕ ಮಾನವಕುಲಕ್ಕೆ ದೇವರ ಪ್ರೀತಿಯನ್ನು ಪ್ರಕಟಿಸಲು ಈ ಲೋಕಕ್ಕೆ ಬಂದನು. ಆತನಲ್ಲಿ – ಅಂದರೆ, 'ಆತನ ಹೆಸರಿನಲ್ಲಿ'" ನಮಗೆ ರಕ್ಷಣೆ ಇದೆ. ಆತನಲ್ಲಿ – ಅಂದರೆ, 'ಆತನ ಹೆಸರಿನಲ್ಲಿ' ಹುಟ್ಟುಕುಂಟನಾದ ಬಿಕ್ಷುಕನು ಸ್ವಸ್ಥತೆ ಹೊಂದಿದನು. 'ರಕ್ಷಣೆಯು ಈತನಿಂದಲೇ ಹೊರತು ಬೇರೆ ಯಾರಿಂದಲೂ ಆಗುವುದಿಲ್ಲ' (4:12). ಯಾಕೆಂದರೆ ರಕ್ಷಕನು ಒಬ್ಬನೇ, ಯೇಸು ಒಬ್ಬನೇ. ಬೇರೆ ಯಾರಿಗೂ ಆ 'ಹೆಸರು' ಇಲ್ಲ.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಸೇವೆಯಲ್ಲಿ 'ಯೇಸುವಿನ ಹೆಸರನ್ನು' ಬಳಸಲು 'ಸರಿಯಾದ' ಮತ್ತು 'ತಪ್ಪಾದ' ಮಾರ್ಗಗಳೆರಡೂ ಉಂಟೆಂದು ನಾನು ಆಲೋಚಿಸುತ್ತೇನೆ. 'ಯೇಸು' ಎಂಬ ಹೆಸರಿನ ಶಬ್ದವು ಜನರ ಅಥವಾ ಪರಿಸ್ಥಿತಿಗಳ ಮೇಲೆ ಒಂದು ರೀತಿಯ ಶಕ್ತಿ ಹೊಂದಿದೆ ಎಂದು ಆಲೋಚಿಸುತ್ತಾ ಆ ಹೆಸರನ್ನು ಒಂದು ಮಂತ್ರವಾಗಿ ಉಪಯೋಗಿಸುವುದು ತಪ್ಪಾದದ್ದು. ದೈವೀಕತೆಯಲ್ಲಿ ಒಬ್ಬನಾದ 'ಯೇಸು ಕ್ರಿಸ್ತನನ್ನು' ಉಲ್ಲೇಖಿಸಲು 'ಯೇಸು' ಎಂಬ ಹೆಸರನ್ನು ಬಳಸುವುದು ಸರಿಯಾದದ್ದು: ಯೇಸು – ಮಾನವನ ದೇಹದಲ್ಲಿ ದೇವರು, ಯಜ್ಞಕ್ಕಾಗಿ ನೇಮಿಸಲ್ಪಟ್ಟ ದೇವರ ಕುರಿಯಾದ ಯೇಸು, ಶ್ರಮೆಯನ್ನು ಅನುಭವಿಸಿ, ಸತ್ತು, ಪುನರುತ್ಥಾನನಾದ ಯೇಸು, ಪರಲೋಕದಲ್ಲಿ ಮಹಿಮೆ ಹೊಂದಿದ ಯೇಸು, ಆತ್ಮನಿಂದ ಸ್ನಾನ ಮಾಡಿಸುವಾತನಾದ ಯೇಸು, ಹಿಂತಿರುಗುವ ಅರಸನಾದ ಯೇಸು, ನಮ್ಮ ಸೌಖ್ಯದಾತನಾದ ಯೇಸು, ನಮ್ಮ ವಿಮೋಚಕನಾದ ಯೇಸು, ನಮ್ಮ ಕರ್ತನಾದ ಯೇಸು.

# ಉ 9. ವಿಶ್ವಾಸಿಗಳ ಪ್ರಾರ್ಥನೆ, 4:23–31

## ಇ) ಪಠ್ಯ ಪ್ರಶ್ನೆಗಳು

1. ವಿಶ್ವಾಸಿಗಳು ತಮ್ಮ ಪ್ರಾರ್ಥನೆಯಲ್ಲಿ ದೇವರನ್ನು 'ಸರ್ವಾಧಿಕಾರಿಯಾದ ಕರ್ತನೆಂದು' ಕರೆದರು. ಈ ಪದವು ಗ್ರೀಕ್ ಭಾಷೆಯಲ್ಲಿ ಒಬ್ಬ ಗುಲಾಮನು ತನ್ನ ಯಜಮಾನನನ್ನು ಮತ್ತು ದೇಶದ ಪ್ರಜೆಗಳು ತಮ್ಮ ರಾಜನನ್ನು ಕರೆಯುವ ಪದವಾಗಿದೆ.

2. ವಿಶ್ವಾಸಿಗಳು ತಮ್ಮ ಪ್ರಾರ್ಥನೆಯಲ್ಲಿ ಕ್ರಿಸ್ತನ ವಿರೋಧವಾಗಿ ಒಳಸಂಚುಮಾಡಿದ ನಾಲ್ಕು ಒಳಸಂಚುಗಾರರನ್ನು ಸೂಚಿಸುತ್ತಿದ್ದಾರೆ:

   1) ಹೆರೋದ ಅಗ್ರಿಪ್ಪನು: ಈತನು ತನ್ನ ತಂದೆಯಾದ ಹೆರೋದ ಮಹಾರಾಜನ ಹಳೆ ಪಾಲೆಸ್ತೀನ್ ರಾಜ್ಯದ ಒಂದು ಭಾಗವನ್ನು (ಗಲಿಲಾಯ ಮತ್ತು ಪೆರಿಯಾವನ್ನು) ಯೇಸು ಕ್ರಿಸ್ತನ ಸೇವೆಯ ಸಮಯದಲ್ಲಿ ಆಳ್ವಿಕೆ ಮಾಡುತ್ತಿದ್ದನು.

   2) ಪೊಂತ್ಯ ಪಿಲಾತನು: ಈತನು ಯೇಸು ಕ್ರಿಸ್ತನ ನ್ಯಾಯವಿಚಾರಣೆಯ ಮತ್ತು ಕ್ರೂಜೆಗೆ ಹಾಕಲ್ಪಟ್ಟ ಸಮಯದಲ್ಲಿ ಯೂದಾಯವನ್ನು ಆಳುತ್ತಿದ್ದ ರೋಮನ್ ರಾಜ್ಯಪಾಲನಾಗಿದ್ದನು.

   3) ಅನ್ಯರು: ಇದು ಯೇಸುವಿನ ಕಾಲದಲ್ಲಿ ಪಾಲೆಸ್ತೀನನ್ನು ಆಳುತ್ತಿದ್ದ ರೋಮನ್ ಚಕ್ರಾಧಿಪತ್ಯವನ್ನು ಉಲ್ಲೇಖಿಸುತ್ತದೆ.

   4) ಇಸ್ರಾಯೇಲ್ ಜನರು: ಯೇಸುವನ್ನು ತಮ್ಮ ಮೆಸ್ಸೀಯನಾಗಿ ಅಂಗೀಕರಿಸದ ಜನರು.

3. ವಿಶ್ವಾಸಿಗಳ ಪ್ರಾರ್ಥನೆಯ ಫಲಗಳು:

   - ನೆಲೆಸಿದ್ದ ಸ್ಥಳವು ಕಂಪನಗೊಂಡಿತು.
   - ವಿಶ್ವಾಸಿಗಳೆಲ್ಲರೂ ಪವಿತ್ರಾತ್ಮಭರಿತರಾದರು.
   - ವಿಶ್ವಾಸಿಗಳು ದೇವರ ವಾಕ್ಯವನ್ನು ಧೈರ್ಯದಿಂದ ಸಾರತೊಡಗಿದರು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ವಿಶ್ವಾಸಿಗಳು ತಮ್ಮ ಪ್ರಾರ್ಥನೆಯಲ್ಲಿ ವರ್ಣಿಸಿರುವ ದೇವರ ಮೂರು ಕಾರ್ಯಚಟುವಟಿಕೆಗಳು ಯಾವುವೆಂದರೆ:

   1) ಸೃಷ್ಟಿಕರ್ತನಾದ ದೇವರು: ಆತನು ಪರಲೋಕವನ್ನೂ ಭೂಮಿಯನ್ನು ಸಮುದ್ರವನ್ನೂ ಅದರಲ್ಲಿರುವ ಎಲ್ಲವನ್ನೂ ಸೃಷ್ಟಿಸಿದನು.

2) ಪ್ರಕಟಪಡಿಸುವ ದೇವರು: ಭೂರಾಜರು ಮತ್ತು ಪ್ರಭುಗಳು ಯೇಸುವನ್ನು ವಿರೋಧಿಸುವರೆಂದು ಆತನು ಕೀರ್ತನೆ 2 ರಲ್ಲಿ ಪವಿತ್ರಾತ್ಮನ ಮೂಲಕ ಅರಸನಾದ ದಾವೀದನ ಮುಖಾಂತರ ಮುಂತಿಳಿಸಿದನು.

3) ಇತಿಹಾಸದ ಒಡೆಯನಾದ ದೇವರು: ಆತನು ಯೇಸು ಕ್ರಿಸ್ತನ ಶ್ರಮೆ ಮತ್ತು ಶಿಲುಬೆಯ ಮರಣದ ಸಮಯದಲ್ಲಿಯೂ ಸನ್ನಿವೇಶಗಳ ಮೇಲೆ ಹತೋಟಿಯುಳ್ಳವನಾಗಿದ್ದನು.

2. ವಿಶ್ವಾಸಿಗಳು ಪ್ರಾರ್ಥನೆಯಲ್ಲಿ ದೇವರಿಂದ ಬಯಸಿದಂತಹ ಬಿನ್ನಹವೇನೆಂದರೆ:

1) ನ್ಯಾಯಸಭೆಯವರ ಬೆದರಿಕೆಗಳನ್ನು ದೇವರು ಪರಿಗಣಿಸಬೇಕು.

2) ತನ್ನ ಸೇವಕರು 'ಧೈರ್ಯದಿಂದ' ವಾಕ್ಯವನ್ನು ಸಾರುವಂತೆ ದೇವರು ಬಲಪಡಿಸಬೇಕು.

3) ಗುಣಪಡಿಸುವಿಕೆಯನ್ನು ಮತ್ತು ಅದ್ಭುತಗಳನ್ನೂ ಸೂಚಕಕಾರ್ಯಗಳನ್ನೂ ದೇವರು ಮಾಡಬೇಕು.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

3. ಸತ್ಯವೇದವನ್ನು ನಂಬುವ ಕ್ರೈಸ್ತರ ನಡುವೆ ಎರಡು ವಿಷಯಗಳ ಕುರಿತು ಹೆಚ್ಚಿನ ಒಪ್ಪಂದವಿದೆ ಎಂಬುದನ್ನು ಜಾನ್ ಸ್ಟಾಟ್‌ರವರು ತೋರಿಸುತ್ತಾರೆ, ಅದೇನೆಂದರೆ:

1) ದೇವರ ಸೃಷ್ಟಿಯು ಆತನ ವಿಶ್ವದ ಏಕರೂಪತೆಯನ್ನೂ ಕ್ರಮತೆಯನ್ನೂ ಪ್ರಕಟಿಸುತ್ತದೆ. ಇಲ್ಲವಾದಲ್ಲಿ ಯಾವುದೇ ರೀತಿಯ ವೈಜ್ಞಾನಿಕ ಚಟುವಟಿಕೆಗಳಿಗೆ ತಳಹದಿ ಇರುವುದಿಲ್ಲ.

2) ಇನ್ನೊಂದು ಕಡೆಯಲ್ಲಿ, ದೇವರು ತನ್ನ ಸ್ವಂತ ನೈಸರ್ಗಿಕ ನಿಯಮಗಳನ್ನು ಉಲ್ಲಂಘಿಸಬಲ್ಲ ಪರಮಶ್ರೇಷ್ಟ ಸೃಷ್ಟಿಕರ್ತನಾಗಿದ್ದಾನೆ. ಇದು ನಡೆಯುವಾಗ ನಾವು ಅದನ್ನು 'ಅದ್ಭುತ'" ಎಂದು ಕರೆಯುತ್ತೇವೆ. ಹಾಗಾಗಿ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂದು ದೇವರಿಗೆ ಹೇಳಲು ನಾವು ಎಷ್ಟರವರು?

ನಂತರ ಹೊಸ ಒಡಂಬಡಿಕೆಯಲ್ಲಿರುವ ಅದ್ಭುತದ ಕಥೆಗಳ ಕುರಿತು ಇರುವ ಜಾನ್ ವಿಂಬರ್‌ರವರ ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ಜಾನ್ ಸ್ಟಾಟ್‌ರವರು ಮೂರು ಪ್ರಶ್ನೆಗಳನ್ನು ರಚಿಸುತ್ತಾರೆ:

1) ಅಪೋಸ್ತಲರ ಕೃತ್ಯಗಳಲ್ಲಿ ಅದ್ಭುತ ಮತ್ತು ಸೂಚಕಕಾರ್ಯಗಳು ಸಭೆಯ ಬೆಳವಣಿಗೆಯ ಪ್ರಧಾನ ರಹಸ್ಯವಾಗಿದೆ ಎಂಬುದು ಖಚಿತವಾದುದ್ದೋ? ಜಾನ್ ಸ್ಟಾಟ್‌ರವರ ಉತ್ತರ: ಸಭೆಯ ಬೆಳವಣಿಗೆ ಮತ್ತು ಅದ್ಭುತಗಳ ನಡುವೆ ಈ ಬಲವಾದ ಸಂಬಂಧವನ್ನು ರೂಪಿಸುತ್ತಿರುವುದು ಲೂಕನಾಗಿರದೆ ಸ್ವತಃ ಜಾನ್ ವಿಂಬರ್‌ರವರೇ ಎಂದು ಕಾಣುತ್ತದೆ (ಅಧ್ಯಾಯ 8 ರಲ್ಲಿರುವ ಫಿಲಿಪ್ಪನ ಮತ್ತು ಸಮಾರ್ಯದಲ್ಲಿ ಉಂಟಾದ ಉಜ್ಜೀವನದ ಕಥೆಯನ್ನು ಹೊರತುಪಡಿಸಿ). ಸುವಾರ್ತೆಯನ್ನು ಸಾರಿದರ ಫಲವಾಗಿ ಸಭೆಯ ಬೆಳವಣಿಗೆ ಉಂಟಾಯಿತೆಂದು ಲೂಕನು ಪ್ರಧಾನವಾಗಿ ಕಾಣುತ್ತಾನೆ.

3) ಅದ್ಭುತ ಮತ್ತು ಸೂಚಕಕಾರ್ಯಗಳನ್ನು 'ದಿನನಿತ್ಯದ ಘಟನೆಗಳಾಗಿ ಮತ್ತು ಸಾಮಾನ್ಯ ಕ್ರಿಸ್ತೀಯ ಜೀವಿತವಾಗಿ' ದೇವರು ಉದ್ದೇಶಿಸಿದನು ಎನ್ನುವುದು ಖಚಿತವಾದುದ್ದೋ? ಜಾನ್ ಸ್ಟಾಟ್‌ರವರ ಉತ್ತರ: ವ್ಯಾಕರಣದ ಪ್ರಕಾರ ಅದ್ಭುತಗಳು ಸಾಮನ್ಯವಾದುದ್ದಲ್ಲ, ಇಲ್ಲವಾದಲ್ಲಿ ಅವುಗಳನ್ನು ಅದ್ಭುತವೆಂದು ಕರೆಯಲಿಕ್ಕಾಗುವುದಿಲ್ಲ. ಮತ್ತು ಅಪೊಸ್ತಲರ ಕೃತ್ಯಗಳ ಸೂಕ್ಷ್ಮ ಅಧ್ಯಯನವು ಆದಿಸಭೆಯಲ್ಲಿ ಅದ್ಭುತಗಳು ಸರ್ವೇಸಾಮಾನ್ಯವಾಗಿರಲಿಲ್ಲ ಅಥವಾ ವ್ಯಾಪಕವಾಗಿ ಹಬ್ಬಿರಲಿಲ್ಲ ಎಂಬುದನ್ನು ಪ್ರಕಟಿಸುತ್ತದೆ. ಅವುಗಳು ಹೆಚ್ಚಾಗಿ ಅಪೊಸ್ತಲರಿಂದಲೂ (2:43; 5:12) ಮತ್ತು ವಿಶೇಷವಾಗಿ ಪೇತ್ರ ಮತ್ತು ಪೌಲರಿಂದಲೂ ಮಾಡಲ್ಪಟ್ಟಿತೆಂದು ಲೂಕನು ಒತ್ತಿ ಹೇಳುತ್ತಾನೆ. ಪೌಲನು ತನ್ನ ಅದ್ಭುತಗಳನ್ನು 'ಅವುಗಳು ಅಪೊಸ್ತಲನೆಸಿಕೊಳ್ಳಲಿಕ್ಕೆ ಇದ್ದ ಗುರುತುಗಳೆಂದು' ಉಲ್ಲೇಖಿಸುತ್ತಾನೆ (2 ಕೊರಿ. 12:12). ಆದರೆ ಸುವಾರ್ತೆಯು ಹೊಸಸ್ಥಳಗಳಿಗೂ ಮತ್ತು ಸನ್ನಿವೇಶಗಳಿಗೂ ವಿಸ್ತರಿಸಲ್ಪಡುವುದರಲ್ಲಿ ಅದ್ಭುತಗಳು ಒಂದು ಪ್ರಮುಖ ಪಾತ್ರ ವಹಿಸುವ ಪರಿಸ್ಥಿತಿಗಳು ಇಂದು ಸಭೆಯಲ್ಲಿ ಇವೆ. ಹೇಗಿದ್ದರೂ ಇವುಗಳು 'ಒಂದು ದಿನನಿತ್ಯದ ಕ್ರಿಸ್ತೀಯ ಜೀವನದ ಒಂದು ಭಾಗವಾಗಿರದೆ'" ಒಂದು ವಿಶೇಷವಾದ ಸನ್ನಿವೇಶಗಳಾಗಿವೆ.

4) ಇಂದು ಅದ್ಭುತ ಮತ್ತು ಸೂಚಕಕಾರ್ಯಗಳು ಎಂದು ಘೋಷಿಸಲ್ಪಡುತ್ತಿರುವ ಸಂಗತಿಗಳು ಹೊಸ ಒಡಂಬಡಿಕೆಯಲ್ಲಿ ದಾಖಲಾಗಿರುವಂತಹ ಅದ್ಭುತ ಮತ್ತು ಸೂಚಕಕಾರ್ಯಗಳೊಂದಿಗೆ ಸಮನಾಗಿದೆ ಎನ್ನುವುದು ಖಚಿತವಾದುದ್ದೋ? ಜಾನ್ ಸ್ಟಾಟ್‌ರವರ ಉತ್ತರ: ಬಹುಶಃ ಕೆಲವೊಂದು ಸಮನಾಗಿವೆ, ಕೆಲವೊಂದು ಸಮನಾಗಿಲ್ಲ. ನೀರನ್ನು ದ್ರಾಕ್ಷರಸವನ್ನಾಗಿ ಮಾಡಿದ, ಅಲೆಗಳನ್ನು ಶಾಂತಗೊಳಿಸಿದ, ರೊಟ್ಟಿ ಮತ್ತು ಮೀನುಗಳನ್ನು ದ್ವಿಗುಣಗೊಳಿಸಿದ, ನೀರಿನ ಮೇಲೆ ನಡೆದ ಯೇಸುವಿನ ಅದ್ಭುತಗಳು ದೇವರ ರಾಜ್ಯದ – 'ಈಗಾಗಲೇ ಇದ್ದ' ಅಂಶಗಳನ್ನು ತೋರಿಸುವುದಕ್ಕಿಂತ – 'ಮುಂಬರಲಿದ್ದ'" ಅಂಶದ ಕಡೆಗೆ ತೋರಿಸುವಂತೆ ಕಾಣುತ್ತದೆ. ಪೇತ್ರ ಮತ್ತು ಪೌಲರಂತೆ ನಾವೂ ಸಹ ಒಬ್ಬ ದೇವದೂತನ ಮೂಲಕ ಸೆರೆಮನೆಯಿಂದ ಬಿಡುಗಡೆ ಹೊಂದಬಹುದೆಂದು ನಿರೀಕ್ಷಿಸತಕ್ಕದ್ದೋ? ಮತ್ತು ಅನನೀಯ ಸಫೈರಳಂತೆ ಮೋಸ ಮಾಡುವ ಸಭಾ ಸದಸ್ಯರುಗಳು ಸತ್ತು ಬೀಳುವುದನ್ನು ನಾವು ಕಾಣಲು ನಿರೀಕ್ಷಿಸತಕ್ಕದ್ದೋ? ಬಹುಶಃ ಇಲ್ಲ. ಹೊಸ ಒಡಂಬಡಿಕೆಯಲ್ಲಿರುವ ಸ್ವಸ್ಥತೆಯ ಅದ್ಭುತಗಳೂ ಸಹ ಇಂದು ಸಭೆಯಲ್ಲಿ ವಿರಳವಾಗಿ ಪ್ರಕಟಗೊಳ್ಳುವ ಗುಣಲಕ್ಷಣಗಳನ್ನು ಹೊಂದಿವೆ: ಅವುಗಳು ಸ್ಪಷ್ಟವಾದ ಮತ್ತು ಉತ್ತಮವಾಗಿ ದಾಖಲಾದ ಗಂಭೀರ ದೈಹಿಕ ಸ್ಥಿತಿಗಳ ತತ್‌ಕ್ಷಣವಾದ, ಸಂಪೂರ್ಣವಾದ ಮತ್ತು ಶಾಶ್ವತವಾದ ಸೌಖ್ಯವಾಗಿದ್ದವು.

ಜಾನ್ ಸ್ಟಾಟ್‌ರವರ ಉಪಸಂಹಾರವೇನೆಂದರೆ, ಅಮೋಘವಾದ ಸ್ವಸ್ಥತಾ ಅದ್ಭುತಗಳ ಪರವಾಗಿಯೂ ಅಥವಾ ವಿರೋಧವಾಗಿಯೂ ಇರುವ ಅತಿರೇಖ ದೃಷ್ಟಿಕೋನಗಳು ಸತ್ಯವೇದದ ಉಪದೇಶಗಳೊಂದಿಗೆ ಹೊಂದಿಕೆಯಾಗದೆ ಇರಬಹುದು. ನಾವು ಅದ್ಭುತಗಳನ್ನು 'ಎಂದಿಗೂ ನಡೆಯಲಾರದ್ದು' ಅಥವಾ 'ಅಸಾಧ್ಯವಾದದ್ದು' ಎಂಬುದಾಗಿ ವಿವರಿಸಬಾರದು. ಬದಲಾಗಿ, ತನ್ನ ನೈಸರ್ಗಿಕ ನಿಯಮಗಳ ಹಾಗೂ ತನ್ನ ಅದ್ಭುತಗಳ ಮೂಲಕ ಕಾರ್ಯಮಾಡುವ ದೇವರಿಗೆ ನಾವು ಸಂಪೂರ್ಣವಾಗಿ ತೆರೆದ ಮನಸ್ಸುಳ್ಳವರಾಗಿರಬೇಕು. ಮತ್ತು ಒಂದು ಸ್ವಸ್ಥತಾ ಅದ್ಭುತವು ನಡೆಯಿತೆಂದು ಘೋಷಿಸಲ್ಪಡುವಾಗ, ಹೊಸ ಒಡಂಬಡಿಕೆಯಲ್ಲಿ ದಾಖಲಾಗಿರುವ ಸ್ವಸ್ಥತಾ

ಅದ್ಭುತಗಳಂತೆ ಅದೂ ಸಹ ಉತ್ತಮವಾಗಿ ದಾಖಲಾದ ಗಂಭೀರ ದೈಹಿಕ ಸ್ಥಿತಿಗಳ ತತ್‌ಕ್ಷಣವಾದ, ಸಂಪೂರ್ಣವಾದ ಮತ್ತು ಶಾಶ್ವತವಾದ ಸೌಖ್ಯವಾಗಿರಬೇಕೆಂದು ನಿರೀಕ್ಷಿಸಬೇಕು.

ಅಪೋಸ್ತಲರ ಕೃತ್ಯಗಳು 3–4 ರಲ್ಲಿನ ಹುಟ್ಟುಕುಂಟನಾದ ಭಿಕ್ಷುಕನ ಕಥೆಯು ತೋರಿಸುವುದೇನೆಂದರೆ, ಸುವಾರ್ತೆಯ ಸಾರೋಣವು ಮತ್ತು ದೈಹಿಕ ಸ್ವಸ್ಥತೆಯ ಸೂಚಕಕಾರ್ಯವು ಒಟ್ಟಾಗಿ ಯೇಸುವಿನ ಹೆಸರಿನ ಅದ್ವಿತೀಯತೆ ಮತ್ತು ಬಲದ ಕುರಿತು ಸಾಕ್ಷಿಕರಿಸಿದವು. ಸಭೆಯು ಅಮೋಘವಾಗಿ ಬೆಳೆಯಲು ಇವೆರಡೂ ಸಂಗತಿಗಳು ಕಾರಣಗಳಾಗಿದ್ದವು.

# ಉ 10. ವಿಶ್ವಾಸಿಗಳು ತಮಗಿದ್ದುದನ್ನು ಹಂಚಿಕೊಂಡದ್ದು, 4:32–37

## ಇ) ಪಠ್ಯ ಪ್ರಶ್ನೆಗಳು

1. ಲೂಕನು ವಿಶ್ವಾಸಿಗಳ ಮನೋಭಾವನೆಯನ್ನು 4:32 ರಲ್ಲಿ ವರ್ಣಿಸುತ್ತಾನೆ: 'ವಿಶ್ವಾಸಿಗಳೆಲ್ಲರ ಹೃದಯ ಮತ್ತು ಮನುಸ್ಸುಗಳು ಒಂದಾಗಿದ್ದವು'.

2. 'ಅಪೋಸ್ತಲರು ಎಡಬಿಡದೆ ಕರ್ತನಾದ ಯೇಸುವಿನ ಪುನರುತ್ಥಾನದ ಕುರಿತು ಸಾಕ್ಷಿಕರಿಸುತ್ತಿದ್ದರು' (4:33).

3. ಬಾರ್ನಬನು, ಈತನ ನಿಜವಾದ ಹೆಸರು ಯೋಸೇಫನು, ತನ್ನ ಸ್ವಂತ ದೇಶದಲ್ಲಿದ್ದ (ಸೈಪ್ರಸ್ ದ್ವೀಪದಲ್ಲಿದ್ದ) ಒಂದು ಸ್ವಂತ ಹೊಲವನ್ನು ಮಾರಿ ಅದರಿಂದ ಬಂದ ಹಣವನ್ನು ಸಭೆಯಲ್ಲಿರುವ ಬಡವರಿಗೂ ಮತ್ತು ಅಗತ್ಯತೆಯಲ್ಲಿರುವವರಿಗೂ ಹಂಚುವಂತೆ ಅಪೋಸ್ತಲರಿಗೆ ತಂದುಕೊಟ್ಟನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. 2:4 ಮತ್ತು 4:31 ರಲ್ಲಿರುವ 'ಅವರೆಲ್ಲರು ಪವಿತ್ರಾತ್ಮನಿಂದ ತುಂಬಲ್ಪಟ್ಟ' ಪರಿಣಾಮಗಳ ನಡುವಿನ ಸಮಾಂತರತೆಯನ್ನು ಗಮನಿಸುವುದು ಕುತೂಹಲಕಾರಿಯಾಗಿದೆ:

    - ಮೊದಲನೆಯದಾಗಿ, ಅಪೋಸ್ತಲರು ದೇವರ ವಾಕ್ಯವನ್ನು ಬಹುಧೈರ್ಯದಿಂದ ಸಾರಿದರು (2:14 ನ್ನು 4:31 ರೊಂದಿಗೆ ಹೋಲಿಸಿರಿ).
    - ನಂತರ, ಅಪೋಸ್ತಲರು ಪುನರುತ್ಥಾನದ ಕುರಿತು ಸಾಕ್ಷಿಕರಿಸಿದ್ದನ್ನು ಲೂಕನು ನಿರ್ದಿಷ್ಟವಾಗಿ ಹೇಳುತ್ತಾನೆ (2:32 ನ್ನು 4:33 ರೊಂದಿಗೆ ಹೋಲಿಸಿರಿ).
    - ಮೂರನೆಯದಾಗಿ, ಲೂಕನು ವಿಶ್ವಾಸಿಗಳ ಮಧ್ಯದಲ್ಲಿದ್ದ ಸುಮಧುರವಾದ ಅನ್ಯೋನ್ಯತೆಯ ಕುರಿತು ವರ್ಣಿಸುತ್ತಾನೆ (2:42–47 ನ್ನು 4:32–35 ರೊಂದಿಗೆ ಹೋಲಿಸಿರಿ).

2. 2:42–47 ಮತ್ತು 4:32–36 ರಲ್ಲಿ ಲೂಕನು ಆತ್ಮನಿಂದ ತುಂಬಲ್ಪಟ್ಟ ಯೆರೂಸಲೇಮಿನ ಸಭೆಯ ಎರಡು ಭಾವಚಿತ್ರಣವನ್ನು ವಿವರಿಸುತ್ತಿದ್ದಾನೆ. ಮೊದಲನೆಯದು ಒಂದು ಸಾಮಾನ್ಯ

ಚಿತ್ರಣವಾಗಿದೆ. ಎರಡನೆಯದು ಅವರು ತಮ್ಮ ಆಸ್ತಿಗಳನ್ನು ಹಂಚಿದ್ದರ ಮೇಲೆ ಹೆಚ್ಚು ಕೇಂದ್ರಿಕರಿಸುತ್ತದೆ.

ಹಾಗಾದರೆ ಅವರ 'ಅನ್ಯೋನ್ಯತೆಯ' ಈ ವಿಶೇಷ ಅಂಶದ ಕುರಿತು ಲೂಕನು ಹೇಗೆ ವರ್ಣಿಸುತ್ತಾನೆ? ವಿಶ್ವಾಸಿಗಳು ಒಬ್ಬರಿಗೊಬ್ಬರು ಸಂಪೂರ್ಣವಾಗಿ ಬದ್ಧರಾಗಿದ್ದರು, ಮತ್ತು ಅವರು ತಮ್ಮ ಆಸ್ತಿಗಳ ಕುರಿತು ಒಂದು ತೀವ್ರ ಮನೋಭಾವವುಳ್ಳವರಾಗಿದ್ದರು. ಪ್ರತಿಯೊಂದು ಅವರಿಗೆ ಹುದುವಾಗಿತ್ತು (2:44). 'ಯಾವನೂ ತನ್ನ ಆಸ್ತಿಯನ್ನು ತನ್ನದೇ ಎಂದು ಹಕ್ಕು ಸಾಧಿಸಲಿಲ್ಲ. ಆದರೆ ಅವರೆಲ್ಲರೂ ತಮಗಿದ್ದುದೆಲ್ಲವನ್ನು ಹುದುವಾಗಿಟ್ಟುಕೊಂಡರು' (4:32). ಅಧ್ಯಾಯ 5 ರಲ್ಲಿರುವ ಅನನೀಯನ ಕಥೆಯಿಂದ ನಮಗೆ ತಿಳಿದುಬರುವುದೇನೆಂದರೆ ವಿಶ್ವಾಸಿಗಳು ತಮಗಿದ್ದುದ್ದನ್ನೆಲ್ಲಾ ಸಭೆಗೆ ಕೊಡಲಿಲ್ಲ. ಹಾಗಾಗಿ ಅದರ ಅರ್ಥವೇನೆಂದರೆ, ಅವರು ಸಭೆಯಲ್ಲಿ ಅಗತ್ಯತೆಯಲ್ಲಿರುವ ಸಹೋದರ ಮತ್ತು ಸಹೋದರಿಯರಿಗೆ ತಮ್ಮ ಸಂಪನ್ಮೂಲಗಳು ಲಭ್ಯವಾಗುವಂತೆ ಮಾಡಿದರು ಎಂದಾಗಬಹುದು, ಯಾಕೆಂದರೆ ಅವರಲ್ಲಿ ಕೊರತೆಯಿದ್ದವರು ಯಾರೂ ಇರಲಿಲ್ಲ (4:34). ಅವರ ತೀವ್ರ ಮನೋಭಾವನೆಯು ತ್ಯಾಗಪೂರ್ವಕ ಕ್ರಿಯೆಗೆ ನಡೆಸಿತು ಮತ್ತು ಅವರ ಕ್ರಿಯೆಯು ತಮ್ಮ ಜೊತೆ–ವಿಶ್ವಾಸಿಗಳ ಅಗತ್ಯತೆಗಳ ಮೇಲೆ ಆಧಾರಿತವಾಗಿತ್ತು. ಆ ಸಭೆಯು 'ಭೌತಿಕ ವಿಷಯಗಳಲ್ಲಿ ಸಮಾನತೆ' ಎಂಬ ತತ್ವವನ್ನು ಅಥವಾ ತನ್ನ ಸದಸ್ಯರುಗಳಲ್ಲಿ 'ಕ್ರಿಸ್ತೀಯ ಸಮತಾವಾದ'ವನ್ನು ಹೊಂದಿದ್ದಾಗಿ ತೋರುತ್ತದೆ.

ಈ ಎರಡೂ ವಾಕ್ಯಭಾಗಗಳಲ್ಲಿ ಸಭೆಯ ಮೇಲಿನ ದೇವರ ಆಶೀರ್ವಾದಗಳ ಕುರಿತು ಹೇಳಲ್ಪಟ್ಟಿದೆ.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

2. ನೀವು ಈ ಕೆಳಗಿನ ಸಾಲುಗಳಲ್ಲಿ ಹೇಳಲ್ಪಟ್ಟಿರುವ ಹಾಗೆ ಏನಾದರೂ ಮಾಡುವಂತೆ ನಾನು ನಿಮಗೆ ಸಲಹೆ ನೀಡುತ್ತೇನೆ:

- ಆತನು ಹೇಳುವುದನ್ನು ಲಕ್ಷ್ಯಕೊಟ್ಟು ಕೇಳಿಸಿಕೊಳ್ಳಿರಿ ಮತ್ತು ಆತನು ತನ್ನ ದೃಷ್ಟಿಕೋನವನ್ನು ವಿವರಿಸಲು ಅವಕಾಶ ಮಾಡಿಕೊಡಿರಿ.
- ಸತ್ಯವೇದದ ಈ ವಾಕ್ಯಗಳನ್ನು ಪಾಲಿಸುವಂತೆ ಪವಿತ್ರಾತ್ಮನು ಆತನೊಟ್ಟಿಗೆ ಹೇಗೆ ಮಾತನಾಡಿದನು ಎನ್ನುವುದನ್ನು ಸ್ಪಷ್ಟೀಕರಿಸುವಂತೆ ಆತನನ್ನು ಕೇಳಿರಿ. ನಂತರ ಆತನು ನಿಮ್ಮ ಮಾತನ್ನು ಕೇಳುವಂತೆ ಮತ್ತು ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುವಂತೆ ಕೇಳಿರಿ.
- ಜನರು ಹೇಗಿದ್ದರು ಅಥವಾ ಏನನ್ನು ಮಾಡಿದರು ಎಂಬ ಅನೇಕ ವಿವರಣೆಗಳನ್ನು ಸತ್ಯವೇದವು ಹೊಂದಿದೆ ಎಂಬುದನ್ನು ಆತನಿಗೆ ನೆನಪಿಸಿರಿ. ನಂತರ, ಪವಿತ್ರಾತ್ಮನು ಎಲ್ಲಾ ಜನರ ನಡವಳಿಕೆಗಳನ್ನು (ಕೆಲವರು ಒಳ್ಳೆಯವರಾಗಿದ್ದರು, ಇನ್ನೂ ಕೆಲವರು ಕೆಟ್ಟವರಾಗಿದ್ದರು) ಅಥವಾ ಕೃತ್ಯಗಳನ್ನು (ಕೆಲವು ಕೃತ್ಯಗಳನ್ನು ದೇವರು ಮೆಚ್ಚಿದನು,

ಇನ್ನೂ ಕೆಲವು ಕೃತ್ಯಗಳನ್ನು ದೇವರು ಹಗೆಮಾಡಿದನು) ಅನುಸರಿಸುವಂತೆ ಯಾಕೆ ಹೇಳಲಿಲ್ಲವೆಂದು ವಿವರಿಸಲು ಕೇಳಿರಿ. ಒಂದು ಸನ್ನಿವೇಶದ ಕುರಿತಾದ ಸತ್ಯವೇದ ವಿವರಣೆಯನ್ನು ವಿಶ್ವಾಸಿಗಳು ಇಂದು ನಕಲು ಮಾಡುವ ಅವಶ್ಯವಿಲ್ಲವೆಂಬುದನ್ನು ಆತನಿಗೆ ನೆನಪಿಸಿರಿ.

- ನಂತರ ಹೊಸ ಒಡಂಬಡಿಕೆಯಲ್ಲಿರುವ ಇತರೆ ಸಭೆಗಳ ವರ್ಣನೆಗಳನ್ನು ಆತನಿಗೆ ನೆನಪಿಸಿರಿ. ಯೆರೂಸಲೇಮಿನ ಸಭೆಯ 'ಕ್ರಿಸ್ತೀಯ ಸಮತಾವಾದದ' ಮಾದರಿಯನ್ನು ಇತರೆ ಸಭೆಗಳು ಪಾಲಿಸಲಿಲ್ಲವೆಂಬುದು ಸ್ಪಷ್ಟವಾಗಿದೆ – ಸಿರಿಯಾದ ಅಂತಿಯೋಕ್ಯಸಭೆಯಾಗಲಿ, ಪೌಲನಿಂದ ಸ್ಥಾಪಿಸಲ್ಪಟ್ಟ ಕೊರಿಂಥದ ಸಭೆಯಾಗಲಿ ಅಥವಾ ಬೇರೆ ಯಾವುದೇ ಸಭೆಯಾಗಲಿ ಆ ಮಾದರಿಯನ್ನು ಅನುಸರಿಸಲಿಲ್ಲ. ಬಾರ್ನಬ ಮತ್ತು ಪೌಲರು 'ಯೆರೂಸಲೇಮಿನ ಮಾದರಿಯನ್ನು' ಅನುಸರಿಸದಿದ್ದಲ್ಲಿ ನಾವು ಯಾಕೆ ಅದನ್ನು ಅನುಸರಿಸಬೇಕು?

- ಕೊನೆಯದಾಗಿ, ಬೇರೆ ಸಭೆಗಳಿಗೆ ಅಥವಾ ಬೇರೆ ಸಭಾಪಾಲಕರುಗಳಿಗೆ ಏನು ಮಾಡಬೇಕೆಂದು ಹೇಳಲು ಈ ಯೌವ್ವನಸ್ಥ ಸಭಾಪಾಲಕನಿಗೆ ಯಾವುದೇ ಹಕ್ಕಿಲ್ಲ ಎಂಬುದನ್ನು ಆತನಿಗೆ ಮನವರಿಕೆ ಮಾಡಿಸಿರಿ. ಬೇರೆ ಸಭೆಗಳಿಗೆ ಅಥವಾ ವಿಶ್ವಾಸಿಗಳಿಗೆ ನ್ಯಾಯತೀರ್ಪುಮಾಡುವಂತೆ ಆತನನ್ನು ನ್ಯಾಯಾಧಿಪತಿಯನ್ನಾಗಿ ನೇಮಿಸಿದವರು ಯಾರು? ತಾವು ಬಯಸುವುದಾದರೆ, ಆತನು ಮತ್ತು ಆತನ ಸಭೆಯು 'ಕ್ರಿಸ್ತೀಯ ಸಮತಾವಾದದ' ಕ್ಷೇತ್ರದಲ್ಲಿ 'ಯೆರೂಸಲೇಮಿನ ಮಾದರಿಯನ್ನು' ಅನುಸರಿಸಲಿ. ಆದರೆ ಆರ್ಥಿಕ ಮತ್ತು ಸಾಮಾಜಿಕ ಅನ್ಯೋನ್ಯತೆಗಾಗಿ ಇರುವುದು ಇದೊಂದೇ ಸತ್ಯವೇದದ ಮಾದರಿ ಎಂದು ಅವರು ಘೋಷಿಸಿಕೊಳ್ಳುವುದು ತಪ್ಪಾದದ್ದು. ಇದರ ಜೊತೆಗೆ, ತಮ್ಮ ಆಲೋಚನೆಗಳನ್ನು ಪಾಲಿಸದವರನ್ನು ಮತ್ತು ಪವಿತ್ರಾತ್ಮನು ತಮಗೆ ವ್ಯತ್ಯಾಸವಾಗಿ ಕಾರ್ಯಮಾಡುವಂತೆ ನಡೆಸುತ್ತಿದ್ದಾನೆ ಎನ್ನುವವರನ್ನು ಖಂಡಿಸಲು ಅವರಿಗೆ ಯಾವ ಹಕ್ಕೂ ಇಲ್ಲ!

# ಉ 11. ಅನನೀಯ ಮತ್ತು ಸಫ್ಫೈರ, 5:1–11

## ಇ) ಪಠ್ಯ ಪ್ರಶ್ನೆಗಳು

1. ಅನನೀಯ ಮತ್ತು ಸಫ್ಫೈರರು ಹಣದಲ್ಲಿ ಒಂದು ಭಾಗವನ್ನು ತಮಗಾಗಿ ಇಟ್ಟುಕೊಂಡು (ಗ್ರೀಕ್ ಪಠ್ಯವು ಅವರು 'ದುರುಪಯೋಗಪಡಿಸಿಕೊಂಡರು, ಲಪಟಾಯಿಸಿಕೊಂಡರು ಅಥವಾ ಕದ್ದುಕೊಂಡರು' ಎಂದು ಹೇಳುತ್ತದೆ) ಉಳಿದ ಹಣವನ್ನು ಅಪೋಸ್ತಲರಿಗೆ ಕೊಟ್ಟರು.

2. ಬಾರ್ನಬನ ನಡವಳಿಕೆಗೂ (4:36–37) ಮತ್ತು ಅನನೀಯ ಸಫ್ಫೈರಳ ನಡವಳಿಕೆಗೂ ನಡುವೆ ಇರುವ ಸಮಾನತೆಗಳು:

    - ಅವರಿಬ್ಬರಿಗೂ ಆಸ್ತಿ ಇತ್ತು ಮತ್ತು ಅವರಿಬ್ಬರೂ ಅದನ್ನು ಮಾರಿದರು.
    - ಅವರಿಬ್ಬರೂ ತಮ್ಮ ಆಸ್ತಿಯನ್ನು ಮಾರಿ ಬಂದ ಹಣವನ್ನು ಸಭೆಯಲ್ಲಿರುವ ಅಗತ್ಯತೆಯುಳ್ಳವರಿಗಾಗಿ ಉಪಯೋಗಿಸಲ್ಪಡಲು ಅಪೋಸ್ತಲರ ಬಳಿಗೆ ತಂದರು.

    ಬಾರ್ನಬನ ನಡವಳಿಕೆಗೂ (4:36–37) ಮತ್ತು ಅನನೀಯ ಸಫ್ಫೈರಳ ನಡವಳಿಕೆಗೂ ನಡುವೆ ಇರುವ ವ್ಯತ್ಯಾಸಗಳು:

    - ಬಾರ್ನಬನು ಮಾರಿದ ಎಲ್ಲಾ ಹಣವನ್ನು ಅಪೋಸ್ತಲರ ಬಳಿಗೆ ತಂದನು.
    - ಅನನೀಯನು ತನಗಾಗಿ ಮತ್ತು ತನ್ನ ಪತ್ನಿಗಾಗಿ ಹಣದಲ್ಲಿ ಒಂದು ಭಾಗವನ್ನು ಇಟ್ಟುಕೊಂಡನು.

3. ಅನನೀಯನು ಸ್ವಲ್ಪ ಹಣವನ್ನು ಕದ್ದುಕೊಂಡು ನಡೆದ ಸಂಗತಿಯ ಕುರಿತು ಸುಳ್ಳಾಡುವಂತೆ ಆತನ ಹೃದಯದಲ್ಲಿ ಸೈತಾನನು ತುಂಬಿಕೊಳ್ಳುವಂತೆ ಸ್ಥಳಮಾಡಿದ್ದು ಏಕೆ ಎಂದು ಪೇತ್ರನು ಆತನನ್ನು ಕೇಳಿದನು.

4. ಅನನೀಯ ಸಫ್ಫೈರಳ ದಿಢೀರಾದ ಸಾವನ್ನು ಕಂಡು ಸಭೆಯವರೆಲ್ಲರು ಮಹಾಭಯದಿಂದ ತುಂಬಲ್ಪಟ್ಟವರಾದರು (ವ. 5 ಮತ್ತು 11).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗದಲ್ಲಿ ದೇವರ ಕುರಿತು ಮೂರು ಬಾರಿ ಹೇಳಲ್ಪಟ್ಟಿದೆ, ಮತ್ತು ಪ್ರತಿಯೊಂದು ಸಲವೂ ಒಂದು ವ್ಯತ್ಯಾಸವಾದ ಹೇಳಿಕೆಯು ಉಪಯೋಗಿಸಲ್ಪಟ್ಟಿದೆ:

    - 'ನೀನು ಪವಿತ್ರಾತ್ಮನನ್ನು ವಂಚಿಸಿದ್ದೀಯಾ' (ವ. 3), ಇದು ಪವಿತ್ರಾತ್ಮ ದೇವರನ್ನು ಸೂಚಿಸುತ್ತದೆ.
    - 'ನೀನು ಸುಳ್ಳು ಹೇಳಿದ್ದು ದೇವರಿಗೆ!' (ವ. 4), ಇದು ತಂದೆಯಾದ ದೇವರನ್ನು ಸೂಚಿಸುತ್ತದೆ.
    - 'ನೀವಿಬ್ಬರೂ ಕರ್ತನ ಆತ್ಮನನ್ನು ಪರೀಕ್ಷಿಸಲು ಒಪ್ಪಿಕೊಂಡದ್ದೇಕೆ?' (ವ. 9), ಇದು (ದೇವರಾದ) ಮಗನನ್ನು ಸೂಚಿಸುತ್ತದೆ, ಯಾಕೆಂದರೆ ಹೊಸ ಒಡಂಬಡಿಕೆಯಲ್ಲಿ ಹೆಚ್ಚು ಸಂದರ್ಭಗಳಲ್ಲಿ ಯೇಸು ಕ್ರಿಸ್ತನನ್ನು ಸೂಚಿಸುವಾಗ 'ಕರ್ತನು'" ಎಂಬ ಪದವು ಉಪಯೋಗಿಸಲ್ಪಟ್ಟಿದೆ.

    ದೈವಶಾಸ್ತ್ರದ ದೃಷ್ಟಿಕೋನದಿಂದ ನೋಡುವುದಾದರೆ, ತ್ರೈಯೇಕತ್ವದ ಮೂರೂ ವ್ಯಕ್ತಿಗಳು ಪ್ರಸ್ತಾಪಿಸಲ್ಪಟ್ಟಿರುವುದನ್ನು ಮತ್ತು ಹೊಸ ಒಡಂಬಡಿಕೆಯ ಸಭಾ ಜೀವನದಲ್ಲಿ ನಡೆದ ಮೊದಲ ಪಾಪದ ಕುರಿತಾದ ಲೂಕನ ದಾಖಲೆಯಲ್ಲಿ ಈ ಮೂರೂ ವ್ಯಕ್ತಿಗಳ ವಿರುದ್ಧ ಪಾಪ ಮಾಡಲ್ಪಟ್ಟಿರುವುದನ್ನು ಗಮನಿಸುವುದು ಕುತೂಹಲಕಾರಿಯಾಗಿದೆ.

2. ಅನನೀಯ ಮತ್ತು ಸಫೈರಳು ಮಾಡಿದ ಪಾಪದ ಕುರಿತಾದ ಪ್ರಶ್ನೆಯನ್ನು ಉತ್ತರಿಸುವುದು ಸುಲಭದ ಕಾರ್ಯವಲ್ಲ.

    ಅವರು ತಮಗಾಗಿ ಸ್ವಲ್ಪ ಹಣವನ್ನು ಇಟ್ಟುಕೊಂಡಿದ್ದು ಪಾಪವಲ್ಲ. ಅವರು ಅದನ್ನು ಪೂರ್ತಿಯಾಗಿ ಇಟ್ಟುಕೊಳ್ಳಬಹುದಾಗಿತ್ತೆಂದು ಪೇತ್ರನು ಹೇಳಿದನು (ವ. 4). ಭಾಗವಾಗಲಿ ಅಥವಾ ಪೂರ್ಣವಾಗಲಿ – ಅವರ ಆಸ್ತಿಯೂ ಮತ್ತು ಅದನ್ನು ಮಾರಿದ ನಂತರ ಬಂದ ಹಣವೂ ಅವರ ಅಧೀನದಲ್ಲಿಯೇ ಇತ್ತು.

    ವ. 3 ರಲ್ಲಿರುವ ಪೇತ್ರನ ಹೇಳಿಕೆಯ ಪ್ರಕಾರ ಅನನೀಯ ಮತ್ತು ಸಫೈರಳು ಮಾಡಿದ ಪಾಪವೇನೆಂದರೆ, ಕಳ್ಳತನ ಮಾಡಿ ನಂತರ ಆ ಕಳ್ಳತನದ ಕುರಿತು ಸುಳ್ಳು ಹೇಳಿದ್ದಾಗಿದೆ. 'ಇಟ್ಟುಕೊಂಡರು'" ಎಂಬ ಹೇಳಿಕೆಯ ಅರ್ಥವೇನೆಂದರೆ," 'ದುರುಪಯೋಗಪಡಿಸಿಕೊಳ್ಳುವುದು, ಲಪಟಾಯಿಸಿಕೊಳ್ಳುವುದು ಅಥವಾ ಕದ್ದುಕೊಳ್ಳುವುದು' ಎಂದರ್ಥ. ಅನನೀಯ ಮತ್ತು ಸಫೈರಳು ಅಪ್ರಾಮಾಣಿಕರಾಗಿದ್ದರು ಮತ್ತು ವಂಚಕರಾಗಿದ್ದರು. ಅವರು ಸಭೆಯಲ್ಲಿರುವ ಬಡವರನ್ನು ಮತ್ತು ಅಪೊಸ್ತಲರನ್ನು ವಂಚಿಸಿದ್ದು ಮಾತ್ರವಲ್ಲ, ಅದಕ್ಕಿಂತಲೂ ಕೆಟ್ಟ ಸಂಗತಿ ಎಂದರೆ – ಅವರು ದೇವರಿಗೆ ಸುಳ್ಳನ್ನು ಹೇಳಿ ಆತನನ್ನು ವಂಚಿಸಲು ಯತ್ನಿಸಿದರು.

ಅನನೀಯ ಮತ್ತು ಸಫ್ಫೈರಳ ವಿಷಯದಲ್ಲಿ ಅವರ ಅಪ್ರಾಮಾಣಿಕತೆ ಮತ್ತು ವಂಚನೆಯ ಪಾಪದ ಹಿಂದೆ 'ಹಣದಾಸೆ'" ಅಥವಾ ದುರಾಸೆಯು ಇದ್ದಂತೆ ಕಾಣುತ್ತದೆ. ಇದು ಸಕಲ ವಿಧವಾದ ಕೆಟ್ಟತನಕ್ಕೆ ಬೇರಾಗಿದೆ ಮತ್ತು ಇದೊಂದು ಪಾಪ ಎಂದು ಸತ್ಯವೇದವು ಹೇಳುತ್ತದೆ (1 ತಿಮೋ. 6:10; ಹಿಬ್ರಿಯ. 13:5). ಆದರೆ ಈ ಕಥೆಯಲ್ಲಿ 'ದುರಾಸೆಯ ಅಥವಾ ಹಣದಾಸೆಯ'" ಪಾಪವು ಎಲ್ಲಿಯೂ ತಿಳಿಸಲ್ಪಡದೆ ಇರುವುದನ್ನು ನಾವು ಗಮನಿಸಬೇಕು.

ನಮ್ಮ ಸ್ವಂತ ಉಪಸಂಹಾರವೇನೆಂದರೆ, ಅನನೀಯ ಮತ್ತು ಸಫ್ಫೈರಳು ಹಾಗೆ ನಡೆದುಕೊಳ್ಳುವಂತೆ ಒತ್ತಾಯಿಸಿದ್ದು ಕಪಟವೆಂಬ ಪಾಪವಾಗಿದೆ. ಮೊದಲು, ಅವರು ಸಭೆಗೆ ಕೊಡುತ್ತೇವೆಂದು ವಾಗ್ದಾನ ಮಾಡಿದ ಹಣವನ್ನು ಇಟ್ಟುಕೊಂಡರು. ಇದು ಕಳ್ಳತನವಾಗಿತ್ತು. ನಂತರ ಅವರು ಸಭೆಯಲ್ಲಿರುವ ಇತರರಂತೆ (ಉದಾಹರಣೆಗೆ, ಬಾರ್ನಬನಂತೆ) ತಾವು 'ಪರಿಶುದ್ಧರು ಮತ್ತು ಆತ್ಮೀಕತೆ ಉಳ್ಳವರು'" ಎಂಬಂತೆ ಕಾಣಬೇಕೆಂದು ಬಯಸಿದರು. ಹಾಗಾಗಿ ಅನನೀಯ ಮತ್ತು ಸಫ್ಫೈರಳು ತಾವು ಮಾಡಿದ ಸಂಗತಿಯ ಕುರಿತು ಸುಳ್ಳು ಹೇಳಿದರು. ಅವರ ಕಪಟತನವೆಂಬ ಪಾಪವು ಅವರನ್ನು ಕಳ್ಳರನ್ನಾಗಿಯೂ ಮತ್ತು ಸುಳ್ಳುಗಾರರನ್ನಾಗಿಯೂ ಮಾಡಿತು!

3. ದೇವರು ಅನನೀಯ ಮತ್ತು ಸಫ್ಫೈರಳನ್ನು ಅವರ ಪಾಪದ ನಿಮಿತ್ತ ನ್ಯಾಯತೀರಿಸಿದ ಕಥೆಯು ವಿಶ್ವಾಸಿಗಳಾದ ನಮಗೆ ಮತ್ತು ಸಭೆಗಳಿಗೆ ಇಂದು ದೈವಿಕ ನ್ಯಾಯತೀರ್ಪಿನ ಕುರಿತು ಮೂರು ಸಂಗತಿಗಳನ್ನು ಕಲಿಸುತ್ತದೆ:

- ಪಾಪವು ಗಂಭೀರವಾದದ್ದು. ದೇವರು ಪಾಪವನ್ನು ಹಗೆಮಾಡುತ್ತಾನೆ, ವಿಶೇಷವಾಗಿ ಕಪಟತನವೆಂಬ ಪಾಪವನ್ನು (ಲೂಕ. 6:42; 12:1 ನ್ನು ನೋಡಿರಿ). ಅನನೀಯ ಮತ್ತು ಸಫ್ಫೈರಳು ತಮ್ಮ ಕಪಟತನದಿಂದ ಸಭೆಯ ಒಳ್ಳೆಯ ಹೆಸರಿಗೂ ಮತ್ತು ಮಧುರವಾದ ಅನ್ಯೋನ್ಯತೆಗೂ ಕಂಟಕ ತಂದರು.
- ಶುದ್ಧವಾದ ಮನಸಾಕ್ಷಿಯನ್ನು ಹೊಂದಿಕೊಳ್ಳುವುದು ಪ್ರಾಮುಖ್ಯವಾದದ್ದು. ಪೌಲನು ಫೆಲಿಕ್ಸನ ಮುಂದೆ ನಿಂತುಕೊಂಡಿದ್ದಾಗ ಆತನು 'ದೇವರ ಹಾಗೂ ಜನರ ಮುಂದೆ ನನ್ನ ಮನಸಾಕ್ಷಿಯನ್ನು ಯಾವಾಗಲೂ ಶುದ್ಧವಾಗಿಟ್ಟುಕೊಂಡಿರಲು ಪರಿಶ್ರಮಿಸುತ್ತಿದ್ದೇನೆ' ಎಂದು ಹೇಳಿದನು (ಅ. ಕೃ. 24:16). ತಮ್ಮ ಮನಸಾಕ್ಷಿಯನ್ನು ಅಶುದ್ಧ ಮಾಡಿಕೊಳ್ಳುವುದರ ಮೂಲಕ ಅವರು ಆಪತ್ತನ್ನು ಆಹ್ವಾನಿಸಿದರು ಎಂಬುದನ್ನು ಅನನೀಯ ಮತ್ತು ಸಫ್ಫೈರಳ ಕಥೆಯು ವರ್ಣಿಸುತ್ತದೆ.
- ಸಭೆಯಲ್ಲಿ ಶಿಸ್ತು ಅವಶ್ಯವಾಗಿದೆ. ಹೊಸ ಒಡಂಬಡಿಕೆಯ ಸಭೆಯು ಬಹಿಷ್ಕಾರದ ರೂಪದಲ್ಲಿ ಶಿಸ್ತಿನ ಕ್ರಮಗಳನ್ನು ಪಾಲಿಸಿದ ಸಂಗತಿಗಳು 1 ಕೊರಿ. 5:6 ಮತ್ತು 1 ತಿಮೋ. 1:21 ರಿಂದ ಕಂಡು ಬರುತ್ತದೆ. ಅನನೀಯ ಮತ್ತು ಸಫ್ಫೈರಳ ಕಥೆಯಲ್ಲಿ ದೇವರು ತಾನೇ ಅವರನ್ನು ಶಿಕ್ಷಿಸಿ ಬಹಿಷ್ಕರಿಸಿದನು.

4. ಇದು ಒಂದು ಭಯಂಕರವಾದ ಕಥೆಯಾಗಿದೆ. ಅನನೀಯ ಮತ್ತು ಸಫೈರಳಿಗೆ ಉಂಟಾದ ದಿಢೀರನೆಯ ದೈವಿಕ ಶಿಕ್ಷೆಯು ಹೊಸ ಒಡಂಬಡಿಕೆಯ ಸಭೆಯಲ್ಲಿ ಮೊಟ್ಟ ಮೊದಲನೆಯದಾಗಿ ದಾಖಲಾದ ಪಾಪದ ಪರಿಣಾಮವಾಗಿದೆ. ಇದನ್ನು ಸೇರಿಸುವುದರಿಂದ ಲೂಕನು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾನೆ ಎಂದು ನಾನು ಆಲೋಚಿಸುತ್ತೇನೆ. ಇದರ ಉಪಸಂಹಾರಕ್ಕೆ ಇಲ್ಲಿ ಮೂರು ಕಾರಣಗಳಿವೆ:

1) ಇದು ನಿಶ್ಚಯವಾಗಿ ನಡೆಯಿತು. ಲೂಕನು ಒಬ್ಬ ಪ್ರಾಮಾಣಿಕನಾದ ಇತಿಹಾಸಕಾರನು, ಆತನು ಈ ದುಃಖಕರವಾದ ಕಥೆಯನ್ನು ಮರೆಮಾಡಲಿಲ್ಲ.

2) ಇದು ಯೆರೂಸಲೇಮಿನ ಆದಿಸಭೆಯ ಜೀವಿತದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಅಲ್ಲಿ ಮಧುರವಾದ ಅನ್ಯೋನ್ಯತೆ ಮತ್ತು ಸಭೆಯ ಅಮೋಘ ಬೆಳವಣಿಗೆ ಮಾತ್ರವಿರದೆ, ಅಲ್ಲಿ ಪಾಪಿಗಳಾದ ವಿಶ್ವಾಸಿಗಳೊಂದಿಗೆ ಸಮಸ್ಯೆಗಳು ಸಹ ಇದ್ದವು.

3) ಇದು ಪವಿತ್ರಾತ್ಮನಿಂದ ಪ್ರೇರಿಪಿಸಲ್ಪಟ್ಟ ಮತ್ತು ಬಲಗೊಳಿಸಲ್ಪಟ್ಟ ಅದ್ಭುತ ಉಜ್ಜೀವನದ ವಿರುದ್ಧ ಸೈತಾನನ ಪ್ರತಿದಾಳಿಯನ್ನು ವರ್ಣಿಸುತ್ತದೆ. ಅ. ಕೃ. 5 ಮತ್ತು 6 ನೆಯ ಅಧ್ಯಾಯದಲ್ಲಿ ಸೈತಾನನು ಸಭೆಯನ್ನು ಮೂರು ದಿಕ್ಕಿನಿಂದ ದಾಳಿ ಮಾಡಿದನು:

   - ಅನನೀಯ ಮತ್ತು ಸಫೈರಳ ಮೂಲಕ ಸಭೆಯ ಒಳಗಡೆಯಿಂದಲೇ (5:1–11): ಸತ್ಯವೇದ ಶಾಸ್ತ್ರಜ್ಞರು ಹಳೆ ಒಡಂಬಡಿಕೆಯಲ್ಲಿರುವ (ಯೆಹೋಶುವ 7 ನೇ ಅಧ್ಯಾಯ) ಆಕಾನನ ಮರಣದೊಂದಿಗೆ ಇದರ ಸಮಾನತೆಯನ್ನು ಕಾಣುತ್ತಾರೆ: 'ಈ ಎರಡೂ ಕಥೆಗಳಲ್ಲಿ ದೇವಜನರ ಜಯಭರಿತ ಅಭಿವೃದ್ಧಿಯು ವಂಚನೆಯ ಕೃತ್ಯದಿಂದ ಅಡ್ಡಿಮಾಡಲ್ಪಡುತ್ತದೆ'. ಅನನೀಯ ಮತ್ತು ಸಫೈರಳ ವಂಚನೆಯ ಕೃತ್ಯದ ಹಿಂದೆ ಇದ್ದ ಶಕ್ತಿಯು ಸೈತಾನನೇ ಎಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ (ಅ. ಕೃ. 5:3).

   - ಸಭೆಯ ವೈರಿಗಳಿಂದ (5:17–42): ಯೆಹೂದ್ಯ ನಾಯಕರುಗಳು ಅಪೋಸ್ತಲರನ್ನು ಹಿಂಸಿಸಿದರು.

   - ತಮ್ಮ ಪ್ರಧಾನ ಕಾರ್ಯವಾದ ದೇವರ ವಾಕ್ಯದ ಸೇವೆಯಿಂದ ಅಪೋಸ್ತಲರ ಗಮನವನ್ನು ಬೇರೆಡೆ ಸೆಳೆಯುವ ಪ್ರಯತ್ನದಿಂದ (6:1–6): ಕಾರ್ಯರೂಪದ ಕರ್ತವ್ಯಗಳು ಅವರ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವಂತಿತ್ತು.

## ಉ 12. ಅಪೋಸ್ತಲರು ಅನೇಕರನ್ನು ಗುಣಪಡಿಸಿದ್ದು, 5:12–16

### ಇ) ಪಠ್ಯ ಪ್ರಶ್ನೆಗಳು

1. ಜನರ ಮಧ್ಯದಲ್ಲಿ ಅಪೋಸ್ತಲರಿಂದ ಅನೇಕ ಸೂಚಕ ಕಾರ್ಯಗಳೂ ಅದ್ಭುತ ಕಾರ್ಯಗಳೂ ನಡೆದವೆಂದು ಹೇಳುವುದರ ಮೂಲಕ ಈ ವಾಕ್ಯಭಾಗವು ಪ್ರಾರಂಭಗೊಳ್ಳುತ್ತದೆ. ಯೆರೂಸಲೇಮಿನ ಸುತ್ತಮುತ್ತಲಿನ ಊರುಗಳಿಂದ ಜನರ ಗುಂಪುಗಳು ತಮ್ಮಲ್ಲಿ ಅಸ್ವಸ್ಥರಾದವರನ್ನೂ ಅಶುದ್ಧಾತ್ಮ ಪೀಡಿತರನ್ನೂ ಕರೆದುಕೊಂಡು ಬರುತ್ತಿದ್ದರು. ಬಂದವರೆಲ್ಲರೂ ಸ್ವಸ್ಥರಾಗುತ್ತಿದ್ದರು ಎಂದು ಹೇಳುವುದರ ಮೂಲಕ ಅದು ಕೊನೆಗೊಳ್ಳುತ್ತದೆ.

2. ವಿಶ್ವಾಸಿಗಳು ದೇವಾಲಯದ ಹೊರಾಂಗಣದ ಪೂರ್ವ ದಿಕ್ಕಿನಲ್ಲಿದ್ದ ಸೊಲೋಮೋನನ ಮಂಟಪದಲ್ಲಿ (3:11) ಕೂಡಿಬರುತ್ತಿದ್ದರು.

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಆದಿಸಭೆಯಲ್ಲಿ ಉಂಟಾದ ಅದ್ಭುತ ಮತ್ತು ಸೂಚಕ ಕಾರ್ಯಗಳನ್ನು ನೋಡಿದ ಜನರು ಎರಡು ವಿರುದ್ಧಾತ್ಮಕ ರೀತಿಯ ಪ್ರತಿಕ್ರಿಯೆಯನ್ನು ತೋರಿಸಿದರು:

   1) ಕೆಲವರು ಅವರ ಜೊತೆ ಸೇರಲು ಧೈರ್ಯಗೊಳ್ಳಲಿಲ್ಲ. ಈ ಹೇಳಿಕೆಯನ್ನು ಮೂರು ವ್ಯತ್ಯಾಸವಾದ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು:

      - ಯೆಹೂದ್ಯ ನಾಯಕರು ಅಪೋಸ್ತಲರೊಂದಿಗೆ ಚರ್ಚಿಸಲು ಭಯಗೊಂಡಿದ್ದರು. ಬಹುಶಃ ಇದು ಒಂದು ಅತೀ ಅಸಂಭವನೀಯ ಅರ್ಥವಿವರಣೆಯಾಗಿದೆ.

      - ಅಪೋಸ್ತಲರಿಂದ ನಡೆದ ಅದ್ಭುತ ಮತ್ತು ಸೂಚಕಕಾರ್ಯಗಳ ನಿಮಿತ್ತ ಜನರು ಅವರ ಕುರಿತು ಭಯಪಟ್ಟರು. ಅವರು ಸಾಮಾನ್ಯ ವಿಶ್ವಾಸಿಗಳ ಕುರಿತು ಭಯಪಡಲಿಲ್ಲ, ಹಾಗಾಗಿ ಅವರು ಸಭೆಯನ್ನು ಸೇರಲು ಸಂತೋಷವುಳ್ಳವರಾಗಿದ್ದರು, ಆದರೆ ಅವರು ಅಪೋಸ್ತಲರಿಂದ ದೂರ ಉಳಿದುಕೊಂಡರು.

      - ಅಪೋಸ್ತಲರಿಂದ ನಡೆದ ಅದ್ಭುತ ಮತ್ತು ಸೂಚಕಕಾರ್ಯಗಳ ನಿಮಿತ್ತ ಕೆಲವು ಜನರು ವಿಶ್ವಾಸಿಗಳೊಂದಿಗೆ ಸೇರಲು ಭಯಪಡುತ್ತಿದ್ದರು. ಬಹುಶಃ ಇದು ಒಂದು ಉತ್ತಮ ಅರ್ಥವಿವರಣೆಯಾಗಿದೆ.

   2) ಹೆಚ್ಚಿನ ಸಂಖ್ಯೆಯಲ್ಲಿ ಪುರುಷರೂ ಸ್ತ್ರೀಯರೂ ಕರ್ತನಲ್ಲಿ ವಿಶ್ವಾಸವನ್ನಿಟ್ಟು ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ಸೇರಿಕೊಂಡರು. ಅವರು ಸಭೆಗೆ ಆಕರ್ಷಿಸಲ್ಪಟ್ಟರು.

2. 'ಇದರ ಪರಿಣಾಮವಾಗಿ' ಎಂಬ ಪದವಿನ್ಯಾಸದಿಂದ ವ. 15 ಪ್ರಾರಂಭಗೊಳ್ಳುತ್ತದೆ. 'ಯಾವುದರ ಪರಿಣಾಮವಾಗಿ?' ಎಂದು ನಮ್ಮಷ್ಟಕ್ಕೇ ನಾವೇ ಕೇಳಿಕೊಳ್ಳಬೇಕು. ಪೇತ್ರನು ಬೀದಿಗಳಲ್ಲಿ ಹಾದು ಹೋಗುತ್ತಿದ್ದಾಗ ಅವನ ನೆರಳು ಕೆಲವರ ಮೇಲಾದರೂ ಬೀಳಲೆಂದು ಜನರು ತಮ್ಮಲ್ಲಿ ಅಸ್ವಸ್ಥತೆಯಿದ್ದವರನ್ನು ತಂದು ಬೀದಿಗಳಲ್ಲಿ ಮಲಗಿಸುವಂತೆ ಮಾಡಿದ ಅಂಶವೇನು? ಈ ಪ್ರಶ್ನೆಗೆ ಎರಡು ಉತ್ತರಗಳಿವೆ:

   1) ವಿಚಾರಬದ್ಧವಾಗಿ, 'ಇದರ ಪರಿಣಾಮವಾಗಿ' ಎನ್ನುವುದು ಅಪೋಸ್ತಲರಿಂದ ಉಂಟಾದ ಅನೇಕ ಅದ್ಭುತ ಮತ್ತು ಸೂಚಕಕಾರ್ಯಗಳ ಕುರಿತು ಉಲ್ಲೇಖಿಸುತ್ತದೆ (ವ. 12). ಪೇತ್ರನ ನೆರಳು ಅಸ್ವಸ್ಥರ ಮೇಲೆ ಬೀಳುವಾಗ ಅವರಿಗೆ ಸೌಖ್ಯವಾಗಲಿ ಎಂದು ಜನರು ತಮ್ಮಲ್ಲಿದ್ದ ಅಸ್ವಸ್ಥರನ್ನು ಕರೆತಂದರು.

   2) ವ್ಯಾಕರಣಬದ್ಧವಾಗಿ, 'ಇದರ ಪರಿಣಾಮವಾಗಿ' ಎನ್ನುವುದು ಅದರ ಹಿಂದಿನ ವಚನವನ್ನು (ವ. 14) ಉಲ್ಲೇಖಿಸುತ್ತದೆ. ಅದು ಹೇಳುವುದೇನೆಂದರೆ 'ಆದರೂ ಹೆಚ್ಚು ಜನ ಪುರುಷರೂ ಸ್ತ್ರೀಯರೂ ಕರ್ತನಲ್ಲಿ ವಿಶ್ವಾಸವನ್ನಿಟ್ಟು ಅವರ ಜೊತೆ ಸೇರಿಕೊಂಡರು ಮತ್ತು ಅವರು ವಿಶ್ವಾಸಿಗಳ ಸಂಖ್ಯೆಯಲ್ಲಿ ಕೂಡಿಸಲ್ಪಟ್ಟರು'.

ಇದು ಈ ಪ್ರಶ್ನೆಗಳ ಕುರಿತು ಆಲೋಚಿಸುವಂತೆ ನಮ್ಮನ್ನು ನಡೆಸುತ್ತದೆ: 'ಯಾಕೆ ಹೊಸ ಜನರು ಅದ್ಭುತಕರವಾದ ಸ್ವಸ್ಥತೆಯು ನಡೆಯಬಹುದೆಂಬ ನಂಬಿಕೆಯನ್ನು ಇಡುತ್ತಾರೆ? ಇದಕ್ಕೂ ಮುಂಚೆ ಇಂತಹದ್ದೇ ರೀತಿಯಾದ ಅದ್ಭುತಗಳು ನಡೆದಿರುವುದರಿಂದಲೋ? ಅಥವಾ ಅನೇಕ ಜನರು ಯೇಸು ಕ್ರಿಸ್ತನ ಮೇಲೆ ನಂಬಿಕೆ ಮತ್ತು ಭರವಸೆಯನ್ನಿಟ್ಟು ಸಭೆಗೆ ಸೇರುವುದರಿಂದಲೋ?

3. ಪೇತ್ರನ ನೆರಳಿನ ಕುರಿತಾದ ಮಾಹಿತಿಯು ಅಚ್ಚರಿ ಉಂಟುಮಾಡುತ್ತದೆ. ಇದು ಒಂದು 'ಚಮತ್ಕಾರದ'" ಸಂಗತಿಯಾಗಿದೆಯೋ? ಪೇತ್ರನ ನೆರಳಿನಲ್ಲಿ ಸ್ವಸ್ಥತೆಪಡಿಸುವ ಶಕ್ತಿ ಇತ್ತೋ? ಇಲ್ಲ, ಜನರು ಪೇತ್ರನ ಸೇವೆಯಿಂದ – ಆತನು ಮಾಡಿದ ಅದ್ಭುತ ಮತ್ತು ಸೂಚಕಕಾರ್ಯಗಳಿಂದ – ಪ್ರಭಾವಿತರಾಗಿದ್ದರು ಮತ್ತು ಆತನು ಒಬ್ಬ ದೇವರ ಮನುಷ್ಯನೆಂಬುದನ್ನು ಅವರು ಅರಿತಿದ್ದರು. ಹಾಗಾಗಿ ಅವರು ಅಸ್ವಸ್ಥತೆಯುಳ್ಳವರನ್ನು ಅವನ ಹತ್ತಿರ ಕರೆತಂದರೆ ಅವರು ವಾಸಿಯಾಗಬಹುದೆಂದು ನಂಬಿದ್ದರು. ಅವರ ನಂಬಿಕೆಯು ಪೇತ್ರನ ಮೇಲಾಗಲಿ ಅಥವಾ ಆತನ ನೆರಳಿನ ಮೇಲಾಗಲಿ ಇದ್ದಿಲ್ಲ. ಆದರೆ ಪೇತ್ರನನ್ನು ಮತ್ತು ಯೇಸು ಕ್ರಿಸ್ತನ ಮೇಲೆ ಇದ್ದಿತು.

ನಾವು ಇಂತಹದ್ದೇ ರೀತಿಯಾದ ಸಂಗತಿಯನ್ನು ಯೇಸು ಕ್ರಿಸ್ತನ ಸೇವೆಯಲ್ಲಿ ಕಾಣುತ್ತೇವೆ, ಹನ್ನೆರಡು ವರ್ಷಗಳಿಂದ ರಕ್ತ ಕುಸುಮ ರೋಗದಿಂದ ನರಳುತ್ತಿದ್ದಂತಹ ಸ್ತ್ರೀಯು ಆತನ ನಿಲುವಂಗಿಯ ಅಂಚನ್ನು ಮುಟ್ಟಿದರೆ ತನಗೆ ಗುಣವಾಗುವುದೆಂದುಕೊಂಡು ಮುಟ್ಟಿದಳು

(ಮತ್ತಾಯ 9:20–22). 'ನಿನ್ನ ನಂಬಿಕೆಯು ನಿನ್ನನ್ನು ಗುಣಪಡಿಸಿದೆ' ಎಂದು ಯೇಸು ಹೇಳಿದನು. ಆ ಗಳಿಗೆಯಲ್ಲೇ ಆ ಸ್ತ್ರೀಯು ಗುಣವಾದಳು. ಯೇಸುವಿನ ಮೇಲೆ ಆ ಸ್ತ್ರೀಯು ಇಟ್ಟಿದ್ದ ನಂಬಿಕೆಯೇ ಆಕೆಯನ್ನು ಗುಣಪಡಿಸಿತು. ಯೇಸುವಿನ ನಿಲುವಂಗಿಯ ಅಂಚಿನ ಮೇಲೆ ಆಕೆ ನಂಬಿಕೆಯಿಟ್ಟಿರಲಿಲ್ಲ.

ಅ. ಕೃ. 19:11–12 ರಲ್ಲಿ ಪೌಲನ ಸೇವೆಯಲ್ಲಿಯೂ ಸಹ ಇಂತಹದ್ದೇ ರೀತಿಯಾದ ಘಟನೆಯನ್ನು ನಾವು ಕಾಣಬಹುದು. 'ಪೌಲನು ಮುಟ್ಟಿದ್ದ ಕೈವಸ್ತ್ರಗಳನ್ನೂ ಉಡುಪುಗಳನ್ನೂ ತೆಗೆದುಕೊಂಡು ಹೋಗಿ ರೋಗಿಗಳಿಗೆ ಮುಟ್ಟಿಸಿದಾಗ ಅವರು ರೋಗಗಳಿಂದ ವಾಸಿಯಾಗುತ್ತಿದ್ದರು ಹಾಗೂ ಅವರಲ್ಲಿಯ ದುರಾತ್ಮಗಳು ಬಿಟ್ಟುಹೋಗುತ್ತಿದ್ದವು'.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

2. ಅಸ್ವಸ್ಥರಾದ ಜನರು ಸ್ವಸ್ಥತೆ ಹೊಂದಲು ಕರವಸ್ತ್ರಗಳ ಮೇಲೆ ಪ್ರಾರ್ಥಿಸುವ ಅಭ್ಯಾಸವುಳ್ಳ ಸಭಾಪಾಲಕರುಗಳನ್ನು ಮತ್ತು ಸಭೆಗಳನ್ನು ನಾನು ಕಂಡಿದ್ದೇನೆ. ವ್ಯಕ್ತಿಗತವಾಗಿ ನನಗೆ ಇಂತಹ ಅಭ್ಯಾಸಗಳಲ್ಲಿ ಸಮಾಧಾನವಿಲ್ಲ, ಯಾಕೆಂದರೆ ಅನೇಕ ಬಾರಿ ಜನರು ಅದ್ಭುತಕರ ಸ್ವಸ್ಥತೆ ಹೊಂದಲು ತಮ್ಮ ನಂಬಿಕೆಯನ್ನು ಕರವಸ್ತ್ರದ ಮೇಲೆ – ಅಥವಾ ಅದರ ಮೇಲೆ ಪ್ರಾಥಿಸುವ ವ್ಯಕ್ತಿಯ ಮೇಲೆ ತಮ್ಮ ನಂಬಿಕೆಯನ್ನಿಡುವಂತಹ ಶೋಧನೆಗಳು ಬರುವ ಅಪಾಯವಿದೆ. ಇದು ವಿಗ್ರಹಾರಾಧನೆಯ ಇನ್ನೊಂದು ರೂಪವಾಗಿದೆ. ಅಸ್ವಸ್ಥರಿಗೆ ಯೇಸುವಿನ ಮೇಲಿನ ನಂಬಿಕೆಯೇ ಸ್ವಸ್ಥತೆಯನ್ನು ದಯಪಾಲಿಸುತ್ತದೆ. ಹೇಗಿದ್ದರೂ, ಯೇಸು ತನ್ನ ಕೃಪೆಯಲ್ಲಿ ಕೆಲವೊಮ್ಮೆ – ಪೇತ್ರ ಮತ್ತು ಪೌಲರ ಸೇವೆಗಳಲ್ಲಿ ಮಾಡಿದಂತೆ – ಕರವಸ್ತ್ರ ಅಥವಾ ಇತರೆ ವಸ್ತುಗಳನ್ನು ತನ್ನ ಗುಣಪಡಿಸುವಿಕೆಯ ಉಪಕರಣಗಳನ್ನಾಗಿ ಉಪಯೋಗಿಸುವಂತೆ ಅನುಮತಿಸುವನು.

## ಉ 13. ಅಪೋಸ್ತಲರಿಗಾದ ಹಿಂಸೆ, 5:17–42

### ಇ) ಪಠ್ಯ ಪ್ರಶ್ನೆಗಳು

1. ಪ್ರಧಾನ ಯಾಜಕನೂ ಹಾಗೂ ಆಡಳಿತ ಸರ್ಕಾರವಾದ ಸದ್ದುಕಾಯರ ಇತರೆ ಸದಸ್ಯರುಗಳು ಅಪೋಸ್ತಲರನ್ನು ಬಂಧಿಸಿದರು (ವ. 17)

2. ರಾತ್ರಿಯಲ್ಲಿ ಕರ್ತನ ದೂತನೊಬ್ಬ ಸೆರೆಮನೆಯ ದ್ವಾರಗಳನ್ನು ತೆರೆದು ಅವರನ್ನು ಬಿಡಿಸಿದನು (ವ. 19). ಇದು ಒಂದು ಆಶ್ಚರ್ಯಕರವಾದ ಅದ್ಭುತವಾಗಿದೆ. ನಂತರ ಆ ದೂತನು ಸೆರೆಮನೆಯ ದ್ವಾರಗಳಿಗೆ ಪುನಃ ಬೀಗ ಹಾಕಿದನು (ವ. 23)!

3. ದೇವಾಲಯದ ಕಾವಲುಗಾರರ ದಳಪತಿಯೂ ಮುಖ್ಯಯಾಜಕರೂ ಕಳವಳಪಟ್ಟರು ಯಾಕೆಂದರೆ ಸೆರೆಮನೆಯ ಬಾಗಿಲನ್ನು ತೆರೆದಾಗ ಅವರು ಕೂಡಿ ಹಾಕಿದ ಸ್ಥಳದಲ್ಲಿ ಅಪೋಸ್ತಲರು ಇರಲಿಲ್ಲ. ಅಪೋಸ್ತಲರು ಮಾಯವಾಗಿದ್ದರು, ಆದರೆ ಸೆರೆಮನೆಯ ಬಾಗಿಲು ಹಾಕಿದ ಹಾಗೆ ಇತ್ತು (ವ. 22–24).

4. ದಳಪತಿಯೂ ಹಾಗೂ ಆತನ ಅಧಿಕಾರಿಗಳು ಅಪೋಸ್ತಲರನ್ನು ದೇವಾಲಯದ ಅಂಗಣದಲ್ಲಿ ಕಂಡುಕೊಂಡರು, ಅಲ್ಲಿ ಅವರು ದೇವದೂತನು ಆಜ್ಞಾಪಿಸಿದಂತೆ ಸುವಾರ್ತೆಯನ್ನು ಸಾರುತ್ತಿದ್ದರು (ವ. 20, 25–26).

5. ಅಪೋಸ್ತಲರನ್ನು ಪ್ರಶ್ನಿಸಲು ಅಧಿಕಾರಿಗಳು ಅವರನ್ನು ಸದ್ದುಕಾಯರ ಗುಂಪಿಗೆ ಸೇರಿದ ಮಹಾಯಾಜಕನ ಬಳಿಗೆ ನ್ಯಾಯಸಭೆಯವರ ಮುಂದೆ ಕರೆತಂದರು (ವ. 27).

6. ಅಪೋಸ್ತಲರ ಮಾತುಗಳನ್ನು ಕೇಳಿದ ನ್ಯಾಯಸಭೆಯವರು ಕೋಪವುಳ್ಳವರಾಗಿ ಅವರನ್ನು ಕೊಲ್ಲಬೇಕೆಂದುಕೊಂಡರು (ವ. 33).

7. ನ್ಯಾಯಸಭೆಯವರಿಗೆ ಗಮಲಿಯೇಲನು ನೀಡಿದ ಸಲಹೆ ಏನೆಂದರೆ: ಅಪೋಸ್ತಲರನ್ನು ಬಿಟ್ಟುಬಿಡಿರಿ. ಈ ವಿಚಾರವನ್ನು ದೇವರೇ ನೋಡಿಕೊಳ್ಳಲಿ ಎಂಬುದಾಗಿತ್ತು (ವ. 38–39).

8. ಅಪೋಸ್ತಲರಿಗೆ ಸಾಂಪ್ರದಾಯಿಕವಾದ ಕಠಿಣ ಶಿಕ್ಷೆಯಾದ 39 ಛಡಿಏಟುಗಳನ್ನು ಹೊಡೆಸಿದರು (ವ. 40).

9. ಯೇಸುವಿನ ನಾಮದ ನಿಮಿತ್ತ ತಾವು ಅವಮಾನಪಡಲು ದೇವರು ಅವರನ್ನು ಯೋಗ್ಯರೆಂದು ಎಣಿಸಿದಕ್ಕಾಗಿ ಅಪೋಸ್ತಲರು ಸಂತೋಷಪಟ್ಟರು (ವ. 41).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗವನ್ನು ಈ ರೀತಿಯಾಗಿ ರಚಿಸಬಹುದು:

    1) ಅಪೋಸ್ತಲರ ಬಂಧನ ಮತ್ತು ಅದ್ಭುತವಾದ ರೀತಿಯಲ್ಲಿ ಬಿಡುಗಡೆ, ವ. 17–21

    2) ನ್ಯಾಯಸಭೆಯವರ ಮುಂದೆ ಅಪೋಸ್ತಲರು, ವ. 21–40.

    - ಅಪೋಸ್ತಲರ ಮರುಬಂಧನ, ವ. 21–26
    - ನ್ಯಾಯವಿಚಾರಣೆ, ವ. 27–39
        - ಅಪೋಸ್ತಲರು ಪ್ರಶ್ನಿಸಲ್ಪಟ್ಟರು, ವ. 27–28
        - ಅಪೋಸ್ತಲರು ಉತ್ತರಿಸಿದರು, ವ. 29–32
        - ಉತ್ತರಕ್ಕೆ ಪ್ರತಿಕ್ರಿಯೆ, ವ. 33
        - ಅಪೋಸ್ತಲರನ್ನು ಹೊರಗೆ ಕಳುಹಿಸಿದ ಸಂದರ್ಭದಲ್ಲಿ ಆಡಿದ ಗಮಲಿಯೇಲನ ಮಾತುಗಳು, ವ. 34–39
    - ತೀರ್ಪು ವ. 40

    3) ನಂತರ ನಡೆದ ಸಂಗತಿ, ವ. 41–42

2. ಯೆಹೂದ್ಯ ಅಧಿಕಾರಿಗಳು ಅಪೋಸ್ತಲರ ಕುರಿತು 'ಮತ್ಸರದಿಂದ ತುಂಬಿದವರಾದ ನಿಮಿತ್ತ' ತಮ್ಮ ದಾಳಿಯನ್ನು ಮರುರೂಪಿಸಿದರು (ವ. 17). ಅಪೋಸ್ತಲರ ಸ್ವಸ್ಥತಾ ಸೇವೆಯ ಭರ್ಜರಿ ಯಶಸ್ಸೇ ಈ ಮತ್ಸರದ ಹಿಂದಿನ ಕಾರಣವಾಗಿದ್ದಿರಬಹುದು (ಈ ವಾಕ್ಯಭಾಗವು 'ಹೀಗಿರಲು' ಎಂಬ ಪದದಿಂದ ಪ್ರಾರಂಭವಾಗುವುದನ್ನು ಗಮನಿಸಿ, ಅದು ಹಿಂದಿನ ವಾಕ್ಯಭಾಗವನ್ನು ಉಲ್ಲೇಖಿಸುತ್ತದೆ). ಯೆರೂಸಲೇಮಿನಿಂದ ಮಾತ್ರವಲ್ಲದೆ ಸುತ್ತಮುತ್ತಲಿನ ಊರುಗಳಿಂದಲೂ ಜನರ ಗುಂಪುಗಳು ತಮ್ಮಲ್ಲಿ ಅಸ್ವಸ್ಥರಾದವರನ್ನು ಅಶುದ್ಧಾತ್ಮ ಪೀಡಿತರನ್ನೂ ಕರೆದುಕೊಂಡು ಬಂದರು. 'ಬಂದವರೆಲ್ಲರೂ ಸ್ವಸ್ಥರಾಗುತ್ತಿದ್ದರು' (ವ. 16). ಜನರ ಮಧ್ಯದಲ್ಲಿ ಅಪೋಸ್ತಲರು ಬಹಳ ಪ್ರಸಿದ್ಧಿಯಾಗುತ್ತಿದ್ದರು ಮತ್ತು ಅವರ ಬಲವನ್ನು ನೋಡಿದ ಯೆಹೂದ್ಯ ನಾಯಕರು ಭಯಬ್ರಾಂತರಾಗಿದ್ದರು.

3. ಇದಕ್ಕಿಂತ ಮುಂಚೆ ನ್ಯಾಯಸಭೆಯವರು ಪೇತ್ರ ಮತ್ತು ಯೋಹಾನರಿಗೆ ಯೇಸುವಿನ ನಾಮದಲ್ಲಿ ಬೋಧಿಸಲೂಬಾರದು ಹಾಗೂ ಮಾತನಾಡಲೂಬಾರದು ಎಂದು ಆಜ್ಞಾಪಿಸಿದ್ದರು (4:18). ಹಾಗಾಗಿ ದೇವದೂತನ ಅಪ್ಪಣೆಯಂತೆ ಅಪೋಸ್ತಲರು ಹೋಗಿ ದೇವಾಲಯದ ಅಂಗಣದಲ್ಲಿ ಜನರಿಗೆ ಬೋಧಿಸಿದ ಸಂಗತಿಯು ಸ್ಪಷ್ಟವಾಗಿ ಅಂದಿನ ಉನ್ನತವಾದ ಯೆಹೂದ್ಯ ಅಧಿಕಾರದ ಆಳ್ವಿಕೆಯ ವಿರುದ್ಧವಾಗಿತ್ತು, ಮತ್ತು ಒಂದು ರೀತಿಯಲ್ಲಿ 'ಕಾನೂನು" ಬಾಹಿರವಾಗಿತ್ತು'. ಇನ್ನೊಂದು ಕಡೆಯಲ್ಲಿ, ತಾವು ನ್ಯಾಯಸಭೆಯವರ ಆಜ್ಞೆಗಳನ್ನು ಪಾಲಿಸುವ ಯೋಜನೆ ಹಾಕಿಕೊಂಡಿಲ್ಲವೆಂದು ಅಪೋಸ್ತಲರು ಈಗಾಗಲೇ ಎಚ್ಚರಿಸಿದ್ದರು (4:19–20)! ಅವರು ನ್ಯಾಯಸಭೆಯವರಿಗೆ ಅವಿಧೇಯರಾಗಲು ಕಾರಣವೇನೆಂದರೆ ಅವರು ದೇವರಿಗೆ ವಿಧೇಯರಾಗಬೇಕೆಂದಿದ್ದರು ಮತ್ತು ಪವಿತ್ರಾತ್ಮನು ಸುವಾರ್ತೆಯನ್ನು ಸಾರುವಂತೆ ಅವರನ್ನು ಪ್ರೇರೇಪಿಸುತ್ತಿದ್ದನು.

4. ಅಪೋಸ್ತಲರು ತಾವು 'ಮನುಷ್ಯರಿಗೆ ವಿಧೇಯರಾಗುವುದಕ್ಕಿಂತ ದೇವರಿಗೆ ವಿಧೇಯರಾಗಿರಬೇಕು' ಎಂದು ಮತ್ತೊಮ್ಮೆ ನ್ಯಾಯಸಭೆಯವರ ಮುಂದೆ ಹೇಳುತ್ತಾ ತಮ್ಮ ಪ್ರತಿವಾದವನ್ನು ಪ್ರಾರಂಭಿಸಿದರು (5:29). ಅದೊಂದೇ ಅವರ ಪ್ರತಿವಾದವಾಗಿತ್ತು! ಯಾಕೆಂದರೆ ಅದರ ನಂತರ ಅವರು ನ್ಯಾಯಸಭೆಯ ಸದಸ್ಯರಿಗೆ ಸುವಾರ್ತೆಯನ್ನು ಸಾರಲು ಮುಂದಾದರು (ವ. 30–32).

5. ಗಮಲಿಯೇಲನು ಈ ವಿಚಾರವನ್ನು ಬಹಳ ಬುದ್ಧಿವಂತಿಕೆಯಿಂದ ಬಗೆಹರಿಸಿದನು. ಮೊದಲು ನ್ಯಾಯಸಭೆಯವರು ಏಕಾಂತವಾಗಿ ಚರ್ಚಿಸುವಂತೆ ಆತನು ಅಪೋಸ್ತಲರನ್ನು ಸಭೆಯಿಂದ ಹೊರಗೆ ಕಳುಹಿಸುವಂತೆ ಆಜ್ಞಾಪಿಸಿದನು (ವ. 34). ನಂತರ ಈ ವಿಚಾರವನ್ನು ಸೂಕ್ಷ್ಮವಾಗಿ ಪರಿಗಣಿಸುವಂತೆ ಮತ್ತು ಯಾವುದೇ ಅವಸರದ ನಿರ್ಧಾರ ತೆಗೆದುಕೊಳ್ಳದಂತೆ ಆತನು ತನ್ನ ಸಹುದ್ಯೋಗಿಗಳಿಗೆ ಹೇಳಿದನು (ವ. 35). ಆತನು ಈ ಹಿಂದೆ ಗಲಭೆ ಎಬ್ಬಿಸಿ ನಂತರ ಇಲ್ಲದೆ ಹೋದ ಇಬ್ಬರು ವ್ಯಕ್ತಿಗಳನ್ನು ಅವರಿಗೆ ನೆನಪಿಸಿದನು (ವ. 36–37). ಕೊನೆಯಲ್ಲಿ ಆತನು ತನ್ನ ಸಲಹೆಯನ್ನು ಕೊಟ್ಟನು: 'ಈ ಜನರಿಂದ ದೂರವಾಗಿರಿ! ಅವರನ್ನು ಬಿಟ್ಟುಬಿಡಿರಿ. ಏಕೆಂದರೆ ಅವರ ಉದ್ದೇಶ ಅಥವಾ ಕಾರ್ಯವು ಮನುಷ್ಯರಿಂದ ಬಂದದ್ದಾಗಿದ್ದರೆ ಅದು ನಾಶವಾಗುವುದು. ಒಂದು ವೇಳೆ ಅದು ದೇವರಿಂದ ಬಂದದ್ದಾಗಿದ್ದರೆ ನೀವು ಅವರನ್ನು ನಾಶಮಾಡಲು ಸಾಧ್ಯವಿಲ್ಲ. ನೀವು ದೇವರಿಗೆ ವಿರೋಧವಾಗಿ ಯುದ್ಧಮಾಡುವುದಾಗಿ ಕಂಡುಬರುವಿರಿ' ಎಂದು ಹೇಳಿದನು (ವ. 38–39).

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಅಪೋಸ್ತಲರು ತಾವು ಹೊಂದಿದ ಶಿಕ್ಷೆಯನ್ನು ಉಲ್ಲೇಖಿಸಲು 'ಅವಮಾನ' ಎಂಬ ಪದವನ್ನು ಬಳಸಿದರು. ನಿಜವಾಗಿಯೂ ಛಡಿಏಟುಗಳನ್ನು ಹೊಡೆಸಿಕೊಳ್ಳುವುದು ಅತ್ಯಂತ ನೋವುಳ್ಳದ್ದಾಗಿತ್ತು. ಈ ರೀತಿಯ ಶಿಕ್ಷೆಯನ್ನನುಭವಿಸುವುದು ಒಂದು ಅವಮಾನಕರ (ನಾಚಿಕೆಗೇಡಾದ) ಸಂಗತಿಯೂ ಸಹ ಆಗಿತ್ತು. ತಮಗೆ ಉಂಟಾದ ಅವಮಾನ ಮತ್ತು ಹಿಂಸೆಗಳ

ಬದಲಾಗಿಯೂ ಅಪೋಸ್ತಲರು ಸಂತೋಷಪಟ್ಟರು. ಅವರು ತಮ್ಮ ಕರ್ತನೂ ಒಡೆಯನೂ ಆದ ಯೇಸು ಕ್ರಿಸ್ತನ ಶ್ರಮೆ ಮತ್ತು ಅವಮಾನವನ್ನು ನೆನಪಿಸಿಕೊಂಡರು. ಅದಲ್ಲದೆ ಯೇಸು ಪರ್ವತ ಪ್ರಸಂಗದಲ್ಲಿ ಹೇಳಿದ ಮಾತುಗಳನ್ನೂ ಅವರು ನೆನಪಿಸಿಕೊಂಡರು: ‘ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ, ಹಿಂಸಿಸಿ, ನಿಮ್ಮ ಮೇಲೆ ಎಲ್ಲಾ ವಿಧವಾದ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು; ಸಂತೋಷಪಡಿರಿ, ಉಲ್ಲಾಸಪಡಿರಿ. ಏಕೆಂದರೆ ಪರಲೋಕದಲ್ಲಿ ನಿಮಗೆ ಮಹಾ ಪ್ರತಿಫಲ ಸಿಕ್ಕುವುದು. ಅವರು ನಿಮಗಿಂತ ಮುಂಚೆ ಇದ್ದ ಪ್ರವಾದಿಗಳನ್ನು ಸಹ ಇದೇ ರೀತಿಯಲ್ಲಿ ಹಿಂಸೆಪಡಿಸಿದರು (ಮತ್ತಾಯ. 5:11–12).

# ಉ 14. ಏಳು ಜನರ ಆಯ್ಕೆ, 6:1–7

## ಇ) ಪಠ್ಯ ಪ್ರಶ್ನೆಗಳು

1. ಯೆರೂಸಲೇಮಿನ ಸಭೆಯಲ್ಲಿದ್ದ ಗ್ರೀಕ್ ಮಾತನಾಡುವ ಯೆಹೂದ್ಯರು ಸಂತೋಷವುಳ್ಳವರಾಗಿರಲಿಲ್ಲ. ಅನುದಿನದ ಉಪಚಾರದಲ್ಲಿ ತಮ್ಮ ವಿಧವೆಯರಿಗೆ ಪಕ್ಷಪಾತಮಾಡಲಾಗುತ್ತಿದೆ ಎಂದು ಅವರು ಭಾವಿಸಿದರು. ತಮ್ಮ ವಿಧವೆಯರುಗಳಿಗಿಂತ ಅರಾಮಿಕ್ ಭಾಷೆ ಮಾತನಾಡುವ ವಿಧವೆಯರು ಹೆಚ್ಚು ಹೊಂದಿಕೊಂಡರೆಂದು ಅವರು ದೂರು ಸಲ್ಲಿಸಿದರು.

2. ಹನ್ನೆರಡು ಜನ ಅಪೋಸ್ತಲರು ಆಹಾರ ವಿತರಣೆಯ ಮೇಲ್ವಿಚಾರಣೆಯ ಕಾರ್ಯದಲ್ಲಿ ತಾವು ಮುಂದುವರೆಯಬೇಕೋ ಎಂಬ ನಿರ್ಧಾರವನ್ನು ಮಾಡಬೇಕಾಗಿತ್ತು. ಸಭೆಯು ಬೆಳೆಯುತ್ತಿತ್ತು ಮತ್ತು ಪ್ರಾರ್ಥಿಸುವುದಕ್ಕಾಗಿ ಹಾಗೂ ದೇವರ ವಾಕ್ಯವನ್ನು ಬೋಧಿಸುವುದಕ್ಕಾಗಿ ಅವರಿಗೆ ಸಮಯವು ಕಡಿಮೆಯಾಗುತ್ತಿತ್ತು. ಸಭೆಯು ಸಾಮಾಜಿಕ ಸೇವೆಗಾಗಿ ಏಳು ಸಹಾಯಕರನ್ನು ಹುಡುಕುವಂತೆಯೂ ಮತ್ತು ಇದರಿಂದ ತಾವು ಆತ್ಮೀಕ ಕೆಲಸದ ಮೇಲೆ ಹೆಚ್ಚು ಗಮನಕೊಡುವುದಕ್ಕಾಗುವುದು ಎಂದು ಕೇಳಿಕೊಂಡಾಗ ಅವರು ಒಂದು ಸರಿಯಾದ ತೀರ್ಮಾನವನ್ನು ಮಾಡಿದರು.

3. ವಿಧವೆಯರ ದಿನನಿತ್ಯದ ಆಹಾರ ವಿತರಣೆಗಾಗಿ ವಿಶ್ವಾಸಿಗಳು ಆಯ್ಕೆಮಾಡಲಿದ್ದ ಏಳು ಜನರಲ್ಲಿ ಎರಡು ಅರ್ಹತೆಗಳಿರಬೇಕೆಂದು ಅಪೋಸ್ತಲರು ಕೇಳಿಕೊಂಡರು:

   1) ಅವರು ಪವಿತ್ರಾತ್ಮಭರಿತರೆಂದು ಪ್ರಸಿದ್ಧಿಯಾಗಿರಬೇಕು.

   2) ಅವರು ಜ್ಞಾನದಿಂದ ತುಂಬಲ್ಪಟ್ಟವರೆಂದು ಪ್ರಸಿದ್ಧಿಯಾಗಿರಬೇಕು.

4. ಅಪೋಸ್ತಲರು ಆ ಏಳು ಜನರನ್ನು ಆರಿಸಲಿಲ್ಲ ಬದಲಾಗಿ ವಿಶ್ವಾಸಿಗಳು ಅದನ್ನು ಮಾಡುವಂತೆ ಕೇಳಿಕೊಂಡರು (ವ. 5). ಅಪೋಸ್ತಲರು ಸಭೆಯ ಆಯ್ಕೆಯನ್ನು ಅಂಗೀಕರಿಸಿದರು. ನಂತರ ಅಪೋಸ್ತಲರು ಅವರ ಮೇಲೆ ಕೈಗಳನ್ನಿಟ್ಟು ಪ್ರಾರ್ಥಿಸಿದರು.

5. ದೇವರ ವಾಕ್ಯವು ಅಭಿವೃದ್ಧಿಯಾಗುತ್ತಾ ಬಂತು. ಯಾಜಕರಲ್ಲಿಯೂ ಅನೇಕ ಜನರು ನಂಬಿಕೆಗೆ ವಿಧೇಯರಾದರು (ವ. 7).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅ. ಕೃ. 6:1–7 ನ್ನು ಈ ರೀತಿಯಾಗಿ ರಚಿಸಬಹುದು.

    - ಸಭೆಯಲ್ಲಿದ್ದ ಸಮಸ್ಯೆ, ವ. 1
    - ಸಮಸ್ಯೆಯು ಬಗೆಹರಿಸಲ್ಪಟ್ಟಿತು, ವ. 2–6
    - ನಂತರ ನಡೆದ ಸಂಗತಿ, ವ. 7

2. ಗ್ರೀಕ್ ಮಾತನಾಡುವ ಯೆಹೂದ್ಯರು ತಮ್ಮ ವಿಧವೆಯರಿಗೆ ಪ್ರತಿನಿತ್ಯದ ಆಹಾರ ವಿತರಣೆಯಲ್ಲಿ ತಾತ಼್ಾರ ಮಾಡುತ್ತಿದ್ದಾರೆ ಎಂದು ಅವರು ಮಾಡಿದ ದೂರು ಆಳವಾಗಿ ನೋಡುವುದಾದರೆ ಅದು ಸಭೆಯ ನಾಯಕರ ವಿರುದ್ಧವಾಗಿಯೇ, ಅಂದರೆ ಅಪೋಸ್ತಲರ ವಿರುದ್ಧವಾಗಿಯೇ ಇದ್ದಿತು. ವಿತರಣೆಗಾಗಿ ಹಣವನ್ನು ಸ್ವೀಕರಿಸುತ್ತಿದ್ದವರು ಇವರೇ (4:35, 37; 5:2). ಹಾಗಾಗಿ ಸಂಪನ್ಮೂಲದ ನಿಷ್ಪಕ್ಷಪಾತವಾದ ವಿತರಣೆಯ ಜವಾಬ್ದಾರಿಯು ಅವರದ್ದಾಗಿತ್ತು. ವಾಸ್ತವಿಕವಾಗಿ ಸಭೆಯಲ್ಲಿದ್ದ ಗೊಣಗುಟ್ಟುವಿಕೆಯು ಅದರ ನಾಯಕತ್ವದ ವಿರುದ್ಧವಾಗಿತ್ತು.

3. ಈ ವಾಕ್ಯಭಾಗವು ಯೆರೂಸಲೇಮಿನ ಸಭೆಯಲ್ಲಿ ಎರಡು ವಿಧವಾದ ಸೇವೆ ಇದ್ದಿತೆಂದು ಪ್ರಕಟಿಸುತ್ತದೆ:

    1) ಆತ್ಮೀಕವಾದ ಸೇವೆ: ದೇವರ ವಾಕ್ಯದ ಉಪದೇಶ ಮತ್ತು ಬೋಧನೆ ಹಾಗೂ ಪ್ರಾರ್ಥನೆ (ವ. 2, 4)

    2) ಭೌತಿಕವಾದ ಸೇವೆ: ಆಹಾರದ ವಿತರಣೆ, ಅಗತ್ಯತೆಯಲ್ಲಿರುವಂತವರ ಬಗ್ಗೆ ಕಾಳಜಿವಹಿಸುವಂತಹದ್ದು (ವ 1,2,3)

4. ಯೆರೂಸಲೇಮಿನ ಆದಿಸಭೆಯಲ್ಲಿ ನಾಯಕತ್ವದ ವಿಸ್ತರಣೆಯು ಐದು–ಹಂತಗಳುಳ್ಳ ಒಂದು ಪ್ರಕ್ರಿಯೆಯ ಮೂಲಕ ಮಾಡಲ್ಪಟ್ಟಿತು:

    1) ಹೆಚ್ಚಿನ ಸಭಾ ನಾಯಕರುಗಳ ಒಂದು ತುರ್ತು ಅಗತ್ಯವಿದೆ ಎಂದು ಅಪೋಸ್ತಲರು ನಿರ್ಧಾರ ಮಾಡಿದರು.

    2) ಈ ಹೊಸ ಸಭಾ ನಾಯಕರುಗಳಿಗೆ ಇರಬೇಕಾದ ಅರ್ಹತೆಗಳನ್ನು ಅಪೋಸ್ತಲರು ನಿರ್ಧರಿಸಿದರು.

    3) ನಂತರ ಅವರು ಪವಿತ್ರಾತ್ಮಭರಿತ ಜೀವನ ಮತ್ತು ಜ್ಞಾನದ ಈ ಅರ್ಹತೆಗಳನ್ನು ಹೊಂದಿರುವ ಏಳು ಜನರನ್ನು ಆರಿಸಬೇಕೆಂಬುದಾಗಿ (ಅಥವಾ ಚುನಾಯಿಸಬೇಕೆಂಬುದಾಗಿ) ವಿಶ್ವಾಸಿಗಳನ್ನು ಕೇಳಿಕೊಂಡರು.

4) ‘ಸಭೆಯ ಚುನಾವಣೆಗಳು’ ನಡೆದವು. ಈ ಹಂತದಲ್ಲಿ ಅಪೋಸ್ತಲರ ಪಾತ್ರದ ಕುರಿತು ಎಲ್ಲಿಯೂ ಪ್ರಸ್ತಾಪಿಸಲ್ಪಟ್ಟಿಲ್ಲ.

5) ಅಪೋಸ್ತಲರು ಏಳು ಜನರನ್ನು ‘ನೇಮಿಸುವುದರ’ ಮೂಲಕ ‘ಸಭೆಯ ಚುನಾವಣೆಗಳನ್ನು’ ಸಮ್ಮತಿಸಿ ಅವರ ಮೇಲೆ ಕೈಗಳನ್ನಿಟ್ಟು ಪ್ರಾರ್ಥಿಸಿದರು.

5. ಆಯ್ಕೆಯಾದ ಏಳು ಜನರೂ ಗ್ರೀಕ್ ಹೆಸರುಗಳನ್ನು ಹೊಂದಿದ್ದು ಮಹತ್ವವಾದದ್ದು. ಗ್ರೀಕ್ ಮಾತನಾಡುವ ಯೆಹೂದ್ಯ ವಿಶ್ವಾಸಿಗಳಿಂದಲೇ ದೂರು ಬಂದಿತ್ತು. ಪವಿತ್ರಾತ್ಮನು ಹೇಗೆ ‘ಸಭೆಯ ಚುನಾವಣೆಗಳನ್ನು’ ನಡೆಸಿದನು ಮತ್ತು ಸಭೆಯಲ್ಲಿರುವ ಗ್ರೀಕ್ ಮಾತನಾಡುವ ಗುಂಪಿನಿಂದಲೇ ಜನರನ್ನು ಆರಿಸುವಂತಹ ಜ್ಞಾನವನ್ನು ವಿಶ್ವಾಸಿಗಳಿಗೆ ಕೊಟ್ಟನು ಎಂಬುದನ್ನು ನಾವು ಕಾಣಬಹುದು. ಹಾಗಾಗಿ ಅವರ ಹಿತಾಸಕ್ತಿಯು ಈಗ ನೆರವೇರುವುದು. ಆ ಏಳು ಜನರಿಗೂ ಗ್ರೀಕ್ ಹೆಸರುಗಳು ಇದ್ದಾಗ್ಯೂ ಅವರೆಲ್ಲರೂ ಇದೇ ಗುಂಪಿನವರಾಗಿದ್ದರೆಂದು ನಾವು ಊಹಿಸಿಕೊಳ್ಳಲಾಗುವುದಿಲ್ಲ. ಬಹುಶಃ ಆ ಏಳು ಜನರಲ್ಲಿ ಕೆಲವರು ಅರಾಮಿಕ್ ಗುಂಪಿನವರಾಗಿದ್ದರು, ಕೆಲವೊಮ್ಮೆ ಅವರೂ ಸಹ ಜನಪ್ರಿಯವಾದ ಗ್ರೀಕ್ ಹೆಸರುಗಳನ್ನು ಬಳಸಿಕೊಳ್ಳುತ್ತಿದ್ದರು.

# ಉ 15. ಸ್ತೆಫನನ ಬಂಧನ, 6:8–15

## ಇ) ಪಥ್ಯ ಪ್ರಶ್ನೆಗಳು

1. ಸ್ತೆಫನನನ್ನು ಮತ್ತು ಆತನ ಯೆರೂಸಲೇಮಿನ ಜನರ ಮಧ್ಯದಲ್ಲಿ ಆತನು ಮಾಡಿದ ಸೇವೆಯನ್ನು ಬಿಡುಗಡೆ ಹೊಂದಿದ ಸಭಾಮಂದಿರದ ಪುರುಷರು ವಿರೋಧಿಸಿದರು. ಈ ವಿರೋಧಿಗಳಲ್ಲಿ (ತನ್ನನ್ನು ಪೌಲನೆಂದು ನಂತರ ಕರೆದುಕೊಂಡ) ಸೌಲನೂ ಸಹ ಒಬ್ಬನಾಗಿರುವ ಸಾಧ್ಯತೆಯಿದೆ (ವ. 9).

2. ವಿರೋಧಿಸಿದ ಯೆಹೂದ್ಯರು ಸ್ತೆಫನನ್ನು ಬಂಧಿಸಿ ನ್ಯಾಯಸಭೆಯವರ ಮುಂದೆ ಕರೆತಂದರು (ವ. 12).

3. ಸ್ತೆಫನನು ನ್ಯಾಯಸಭೆಯವರ ಮುಂದೆ ಸುಳ್ಳಾಗಿ ಆಪಾದಿಸಲ್ಪಟ್ಟಾಗ ಆತನ ಮುಖವು ದೇವದೂತನ ಮುಖದಂತೆ ಕಾಣಿಸಿತು (ವ. 15).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. 6:1–7 ಮತ್ತು 6:8–16, ಈ ಎರಡು ವಾಕ್ಯಭಾಗಗಳಲ್ಲಿ ಸ್ತೆಫನನು ಈ ರೀತಿಯಾಗಿ ವರ್ಣಿಸಲ್ಪಟ್ಟಿದ್ದಾನೆ:

    - ಪವಿತ್ರಾತ್ಮಭರಿತನೂ ಮತ್ತು ಜ್ಞಾನಸಂಪನ್ನನೂ ಎಂದು ಪ್ರಸಿದ್ಧಿಯಾದ ಒಬ್ಬ ಮನುಷ್ಯನು: ಇದು ಏಳು ಜನರ ಆಯ್ಕೆಯಲ್ಲಿ ಅಪೇಕ್ಷಿಸಲ್ಪಟ್ಟ ಒಂದು ಅರ್ಹತೆಯಾಗಿತ್ತು, 6:6
    - ಪೂರ್ಣನಂಬಿಕೆಯುಳ್ಳವನು ಮತ್ತು ಪವಿತ್ರಾತ್ಮಭರಿತನು, 6:5
    - ದೇವರ ಕೃಪೆಯಿಂದಲೂ ಶಕ್ತಿಯಿಂದಲೂ ತುಂಬಿದವನು, 6:8
    - ಜನರ ಮಧ್ಯದಲ್ಲಿ ಮಹಾ ಅದ್ಭುತ ಕಾರ್ಯಗಳನ್ನು ಮತ್ತು ಸೂಚಕ ಕಾರ್ಯಗಳನ್ನು ಮಾಡಿದ ಮನುಷ್ಯನು, 6:8
    - ಆತನ ವೈರಿಗಳು ತನ್ನ ಮುಂದೆ ನಿಲ್ಲಲಿಕ್ಕೆ ಆಗದಂತಹ ಜ್ಞಾನದಿಂದಲೂ ಮತ್ತು ಪವಿತ್ರಾತ್ಮನ ಶಕ್ತಿಯಿಂದಲೂ ಮಾತನಾಡಿದ ಮನುಷ್ಯನು, 6:10
    - ದೇವದೂಷಣೆ ಮಾಡಿದನೆಂದು ಸುಳ್ಳು ಸಾಕ್ಷಿಗಳು ಆತನನ್ನು ದೂಷಿಸಿದಾಗ ಆತನ ಮುಖವು ದೇವದೂತನ ಮುಖದಂತೆ ಕಾಣಿಸಿತು, 6:15

ಸ್ತೆಫನನು ಆತ್ಮಭರಿತನಾಗಿದ್ದನು ಮತ್ತು ಅದರ ಫಲವಾಗಿ ಆತ್ಮನು ಆತನನ್ನು ಜ್ಞಾನ, ನಂಬಿಕೆ, ಕೃಪೆ ಮತ್ತು ಬಲಗಳಿಂದ ತುಂಬಿಸಿದನು:

- ಆತನ ವೈರಿಗಳು ಆತನೊಂದಿಗೆ ವಾದಿಸಿ ಆತನನ್ನು ದೂಷಿಸಿದಾಗ ಆತನ ಜ್ಞಾನವು ಸ್ಪಷ್ಟವಾಗಿ ಕಂಡುಬಂದಿತು.
- ಆತನು ಸುಳ್ಳು ಆಪಾದನೆಗಳನ್ನು ಮತ್ತು ಮರಣವನ್ನು ಎದುರಿಸಿದಾಗ ಆತನ ನಂಬಿಕೆಯು ಪರೀಕ್ಷೆಯನ್ನು ಜಯಿಸಿತು.
- ಆತನ ಕ್ರಿಸ್ತನಂತಹ ನಡವಳಿಕೆಯಲ್ಲಿ ಆತನ ಕೃಪೆಯು ಕಾಣಿಸಿತು ಮತ್ತು ಆತನ ದೇವದೂತನಂತಹ ಮುಖದಿಂದ ಅದು ಹೊಳೆಯಿತು.
- ಆತನು ಜನರ ಮಧ್ಯದಲ್ಲಿ ಮಾಡಿದಂತಹ 'ಮಹಾ ಅದ್ಭುತ ಮತ್ತು ಸೂಚಕಕಾರ್ಯಗಳಲ್ಲಿ' ಆತನ ಬಲವು ಪ್ರಕಟಗೊಂಡಿತು.

2. ಬಿಡುಗಡೆಯಾದ ಪುರುಷರ ಸಭಾಮಂದಿರದ ಸದಸ್ಯರ ಮತ್ತು ಸ್ತೆಫನನ ನಡುವೆ ಈ ಸಂಗತಿಗಳು ನಡೆದವು:

    1) ಸ್ತೆಫನನ ಬಲವುಳ್ಳ ಸೇವೆಯನ್ನು ಸಭಾಮಂದಿರದ ಸದಸ್ಯರು ವಿರೋಧಿಸಿದರು.
    2) ಸಭಾಮಂದಿರದ ಸದಸ್ಯರು ಸ್ತೆಫನನೊಂದಿಗೆ ವಾದಿಸಿದರು ಮತ್ತು ಚರ್ಚಿಸಿದರು – ಆದರೆ ಅವರು ವಾದಗಳಲ್ಲಿ ಮತ್ತು ಚರ್ಚೆಗಳಲ್ಲಿ ಸೋತು ಹೋದರು.
    3) ಹಾಗಾಗಿ ಸ್ತೆಫನನ ವಿರೋಧವಾಗಿ ಸುಳ್ಳನ್ನು ಹೇಳುವಂತೆ ಸಭಾಮಂದಿರದ ಸದಸ್ಯರುಗಳು ಕೆಲವರನ್ನು ಗುಪ್ತವಾಗಿ ಪ್ರೇರೇಪಿಸಿದರು (ಬಹುಶಃ ಲಂಚವನ್ನೂ ಕೊಟ್ಟಿರಬಹುದು!). ಇದು ಸಾಮಾನ್ಯ ಜನರು ಮತ್ತು ನಾಯಕರು ಸ್ತೆಫನನ ವಿರೋಧವಾಗಿ ಸಿಟ್ಟಿನಿಂದ ದಂಗೆ ಏಳುವಂತೆ ಮಾಡಿತು.
    4) ಸಭಾಮಂದಿರದ ಸದಸ್ಯರುಗಳು ಸ್ತೆಫನನನ್ನು ಬಂಧಿಸಲು ಮತ್ತು ನ್ಯಾಯಸಭೆಯವರ ಮುಂದೆ ಸುಳ್ಳು ಸಾಕ್ಷಿಗಳನ್ನು ಹೇಳಲು ಈ ಅವಕಾಶವನ್ನು ಉಪಯೋಗಿಸಿಕೊಂಡರು.

3. ಸ್ತೆಫನನು ಯೆರೂಸಲೇಮಿನ ದೇವಾಲಯದ ಹಾಗೂ ಮೋಶೆಯ ಧರ್ಮಶಾಸ್ತ್ರದ ವಿರುದ್ಧವಾಗಿ ಮಾತನಾಡಿದನೆಂದು ಆಪಾದಿಸಲ್ಪಟ್ಟನು (ವ. 13). ಇದು ಬಹಳ ಗಂಭೀರವಾದ ಎರಡು ಆಪಾದನೆಗಳಾಗಿದ್ದವು. ಯೆಹೂದ್ಯರಿಗೆ ತಮ್ಮ ದೇವಾಲಯ ಮತ್ತು ಧರ್ಮಶಾಸ್ತ್ರಕ್ಕಿಂತ ಪವಿತ್ರವಾದದ್ದು ಬೇರೆ ಯಾವುದೂ ಇಲ್ಲ. ದೇವಾಲಯವು ದೇವರ ಪ್ರಸನ್ನತೆಯಿಂದ ತುಂಬಿದ ಪವಿತ್ರ ಸ್ಥಳವಾಗಿತ್ತು ಮತ್ತು ಧರ್ಮಶಾಸ್ತ್ರವು ದೇವರ ಮನಸ್ಸು ಮತ್ತು ಚಿತ್ತದ ಪ್ರಕಟಣೆಯಾಗಿತ್ತು. ಪರಿಣಾಮವಾಗಿ ಸ್ತೆಫನನು ಸ್ವತಃ ದೇವರ ದೂಷಣೆಯನ್ನು ಮಾಡಿದನೆಂದು ಆರೋಪಿಸಲ್ಪಟ್ಟನು. ವಚನ 14 ರಿಂದ ನಾವು ತಿಳಿಯುವುದೇನೆಂದರೆ, ಸ್ತೆಫನನ ವಿರುದ್ಧ ಮಾಡಲ್ಪಟ್ಟ ಈ ಆಪಾದನೆಗಳು ಯೇಸುವಿನ ಕುರಿತು ಮತ್ತು ಆತನು ದೇವಾಲಯ ಮತ್ತು

ಧರ್ಮಶಾಸ್ತ್ರವನ್ನು ಏನು ಮಾಡುವನು ಎಂಬುದರ ಕುರಿತಾದ ಆತನ ಬೋಧನೆಯ ಮೇಲೆ ಆಧಾರವಾಗಿತ್ತು. ಸ್ವತಃ ಯೇಸು ತಾನೇ ಇಂತಹದ್ದೇ ಆಪಾದನೆಯನ್ನು ಎದುರಿಸಬೇಕಾಗಿತ್ತು (ಮತ್ತಾಯ. 26:61 ಮತ್ತು ಲೂಕ. 6:1–2). ಯೇಸು ತಾನೇ ಬೋಧಿಸಿದಂತಹ ಸತ್ಯವನ್ನು ಸ್ತೆಫನನು ಪುನರುಚ್ಚರಿಸುತ್ತಿದ್ದನು. ಇದರ ನಿಮಿತ್ತ ಆತನು ದೇವದೂಷಣೆ ಮಾಡಿದನೆಂದು ಆಪಾದಿಸಲ್ಪಟ್ಟನು.

ಹಾಗಾದರೆ ದೇವಾಲಯ ಮತ್ತು ಧರ್ಮಶಾಸ್ತ್ರದ ಕುರಿತು ಯೇಸು ಕ್ರಿಸ್ತನು ಹೇಳಿದ ಸಂಗತಿ ಏನು?

1) ***ದೇವಾಲಯ:*** ಜನರು ಆತನ ವಿಚಾರಣೆಯ ಸಂದರ್ಭದಲ್ಲಿ ಆತನ ವಿರುದ್ಧ ಸಾಕ್ಷಿಕರಿಸಿದ್ದೇನೆಂದರೆ, ''ಕೈಯಿಂದ ಕಟ್ಟಿರುವ ಈ ದೇವಾಲಯವನ್ನು ನಾನು ಕೆಡವಿಬಿಟ್ಟು ಕೈಯಿಂದ ಕಟ್ಟದಿರುವ ಮತ್ತೊಂದನ್ನು ಮೂರು ದಿನಗಳಲ್ಲಿ ಕಟ್ಟುವೆನು' ಎಂದು ಈತನು ಹೇಳಿದ್ದನ್ನು ನಾವು ಕೇಳಿಸಿಕೊಂಡಿದ್ದೇವೆ ಎಂದರು'' (ಮಾರ್ಕ 14:58). ಆದರೆ ಯೋಹಾನ 2:20–21 ರಲ್ಲಿ ಯೇಸುವಿನ ಹೇಳಿಕೆಯನ್ನು ಯೋಹಾನನು ವಿವರಿಸುತ್ತಿದ್ದಾನೆ: 'ಅದಕ್ಕೆ ಯೆಹೂದ್ಯರು, 'ಈ ದೇವಾಲಯವನ್ನು ಕಟ್ಟುವುದಕ್ಕೆ ನಲವತ್ತಾರು ವರ್ಷಗಳಾದವು. ನೀನು ಮೂರು ದಿನಗಳಲ್ಲಿ ಅದನ್ನು ಎಬ್ಬಿಸುವೆಯೋ?' ಎಂದರು. ಆದರೆ ಆತನು (ಯೇಸು) ತನ್ನ ದೇಹವೆಂಬ ಆಲಯವನ್ನು ಕುರಿತು ಹೇಳಿದ್ದನು'. ಹಾಗಾಗಿ ಯೇಸು ಮಾಡಿದ್ದೇನೆಂದರೆ. ತಾನು ಹಳೆ ದೇವಾಲಯದ ಬದಲಾಗಿ ಬರುವ ದೇವರ ಹೊಸ ದೇವಾಲಯವೆಂದು ತನ್ನನ್ನು ಸೂಚಿಸಿ ಹೇಳಿದನು.

2) ***ಧರ್ಮಶಾಸ್ತ್ರ:*** ಯೇಸು ಧರ್ಮಶಾಸ್ತ್ರವನ್ನು ಅಗೌರವಿಸಿದನೆಂದು ಫರಿಸಾಯರು ಮತ್ತು ಧರ್ಮಶಾಸ್ತ್ರದ ಬೋಧಕರು ಆಪಾದಿಸಿದರು (ಲೂಕ 6:1–2), ಆದರೆ ವಾಸ್ತವಿಕವಾಗಿ ಆತನು ಮಾತನಾಡಿದ್ದು ಅವರ ಯೆಹೂದ್ಯ ಸಂಪ್ರದಾಯದ ಒಂದು ಭಾಗವಾಗಿಬಿಟ್ಟಿದ್ದ ಧರ್ಮಶಾಸ್ತ್ರದ ತಪ್ಪಾದ ಅರ್ಥವಿವರಣೆಯ ವಿರುದ್ಧವಾಗಿ. ಯೇಸು ನಿಜವಾಗಿಯೂ ಬಂದಂತಹ ಉದ್ದೇಶವು ಧರ್ಮಶಾಸ್ತ್ರವನ್ನು ನೆರವೇರಿಸುವುಕ್ಕಾಗಿಯೇ (ಮತ್ತಾಯ. 5:17). ಆತನು ಹಳೆ ಒಡಂಬಡಿಕೆಯ ಬಲಿ ಮತ್ತು ಯಾಜಕತನವನ್ನು ನೆರವೇರಿಸುವುದಕ್ಕಾಗಿ ತನ್ನ ಜೀವಿತವನ್ನೇ ನಮಗಾಗಿ ಸಮರ್ಪಿಸಲು ಮನಸ್ಸುಳ್ಳವನಾಗಿದ್ದನು.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

2. ನಾವೆಲ್ಲರೂ ಸ್ತೆಫನನಂತೆ ಆಗಲು ಇಚ್ಚಿಸುತ್ತೇವೆಂದು ನಾನು ಆಲೋಚಿಸುತ್ತೇನೆ! ನಾವೆಲ್ಲರೂ ನಮ್ಮ ಪ್ರತಿನಿತ್ಯದ ಕ್ರಿಸ್ತೀಯ ಜೀವನವನ್ನು ಜೀವಿಸುವಾಗ ಮತ್ತು ಸುವಾರ್ತೆಯನ್ನು ಸಾರುವ ಸೇವೆಯಲ್ಲಿ ಪಾಲ್ಗೊಳ್ಳುವಾಗ ಜ್ಞಾನ, ನಂಬಿಕೆ, ಕೃಪೆ ಮತ್ತು ಬಲವುಳ್ಳ ವ್ಯಕ್ತಿಗಳಾಗಬೇಕು.

ನಾವು ಸ್ತೆಫನನಂತೆ ಆಗಲು ಹೇಗೆ ಸಾಧ್ಯ? ಪವಿತ್ರಾತ್ಮನು ನಮ್ಮನ್ನು ಹೆಚ್ಚೆಚ್ಚಾಗಿ ತುಂಬಲು ಅನುಮತಿಸುವುದರಿಂದ!

## ಉ 16. ನ್ಯಾಯಸಭೆಗೆ ಸ್ತೆಫನನ ಉಪನ್ಯಾಸ, 7:1–53

### ಇ) ಪಠ್ಯ ಪ್ರಶ್ನೆಗಳು

1. ಸ್ತೆಫನನ ವಿರುದ್ಧವಾಗಿ ಮಾಡಲ್ಪಟ್ಟ ಆರೋಪಗಳು ನಿಜವಾದದ್ದೋ ಎಂಬುದಾಗಿ ಮಹಾಯಾಜಕನು ಸ್ತೆಫನನಿಗೆ ಕೇಳಿದನು (ವ. 1).

2. ಸ್ತೆಫನನು ತನ್ನ ಸಂಭಾಷಣೆಯಲ್ಲಿ ಹಳೆ ಒಡಂಬಡಿಕೆಯ ಈ ಚಿರಪರಿಚಿತ ವ್ಯಕ್ತಿಗಳ ಬಗ್ಗೆ ಮಾತನಾಡಿದನು:

   - ಅಬ್ರಹಾಮ (ವ. 2–8)
   - ಯೋಸೇಫ (ವ. 9–14)
   - ಮೋಶೆ (ವ. 20–44)
   - ದಾವಿದ ಮತ್ತು ಸೊಲೋಮೋನ (ವ. 45–47)

3. ವಚನ 51–53 ರಲ್ಲಿ ಸ್ತೆಫನನು ನ್ಯಾಯಸಭೆಯವರ ವಿರುದ್ಧ ಈ ಐದು ಆರೋಪಗಳನ್ನು ಮಾಡಿದನು:

   1) ನೀವು ಹಟಮಾರಿಗಳಾದ ಜನರು ಸುನ್ನತಿಯಿಲ್ಲದ ಕ್ರೂರ ಹೃದಯದವರು
   2) ನೀವು ನಿಮ್ಮ ಪಿತೃಗಳಂತೆಯೇ ಇರುವಿರಿ
   3) ನೀವು ಯಾವಾಗಲೂ ಪವಿತ್ರಾತ್ಮನನ್ನು ಪ್ರತಿಭಟಿಸುತ್ತೀರಿ
   4) ನೀವು ನೀತಿವಂತನನ್ನು (ದೇವರ ಮೆಸ್ಸೀಯನಾದ ಯೇಸುವನ್ನು ಉಲ್ಲೇಖಿಸುತ್ತದೆ) ತಿರಸ್ಕರಿಸಿ ಆತನ ಕೊಲೆ ಮಾಡಿಸಿದಿರಿ
   5) ನೀವು ಧರ್ಮಶಾಸ್ತ್ರಕ್ಕೆ ಅವಿಧೇಯರಾಗಿ ನಡೆದು ಕೊಂಡಿದ್ದೀರಿ

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಸ್ತೆಫನನು ತನ್ನ ಮಾತಿನ ಮೂಲಕ ತಾನು ದೇವರ ವಾಕ್ಯವನ್ನು ಅಗೌರವಿಸಲಿಲ್ಲವೆಂಬುದನ್ನು ಸಾಬೀತುಪಡಿಸಲು ಬಯಸಿದನು. ದೇವಾಲಯ ಮತ್ತು ಧರ್ಮಶಾಸ್ತ್ರದ ಕುರಿತಾದಂತಹ ಸ್ತೆಫನನ ಬೋಧನೆಯನ್ನು ಸ್ವತಃ ಹಳೆ ಒಡಂಬಡಿಕೆಯೇ ದೃಢೀಕರಿಸಿತು. ಧರ್ಮಶಾಸ್ತ್ರವನ್ನು

ಅಗೌರವಿಸಿದ್ದು ಯೆಹೂದ್ಯ ನಾಯಕರುಗಳೇ ಹೊರತು ಸ್ತೆಫನನಲ್ಲ – ಯಾಕೆಂದರೆ ಅವರು ದೇವರನ್ನು ಯೆರೂಸಲೇಮಿನ ದೇವಾಲಯದೊಂದಿಗೆ ಗುರುತಿಸಿದರು ಮತ್ತು ಪ್ರವಾದಿಗಳಿಂದ ಮುಂಚಿತವಾಗಿ ತಿಳಿಸಲ್ಪಟ್ಟಂತಹ ರಕ್ಷಕನಾದ ಯೇಸು ಕ್ರಿಸ್ತನನ್ನು ಅವರು ತಿರಸ್ಕರಿಸಿದ್ದರು.

***ದೇವಾಲಯ:*** ಇಸ್ರಾಯೇಲರ ದೇವರು ಒಬ್ಬ ಯಾತ್ರಿಕ ದೇವರು, ಆತನು ಒಂದೇ ಸ್ಥಳಕ್ಕೆ ಸೀಮಿತನಲ್ಲ. ಅಬ್ರಹಾಮನು ಮೆಸಪೆಟೋಮಿಯಾದಲ್ಲಿ ಅನ್ಯ ಜನರ ಮಧ್ಯದಲ್ಲಿ ಇದ್ದಾಗಲೇ ದೇವರು ತನ್ನನ್ನು ಅವನಿಗೆ ಪ್ರಕಟಪಡಿಸಿಕೊಂಡನು (ವ. 2). ಯೋಸೇಫನು ಈಜಿಪ್ಟ್‌ನಲ್ಲಿ ಒಬ್ಬ ಗುಲಾಮನಾಗಿದ್ದಾಗಲೂ ದೇವರು ಅವನೊಂದಿಗಿದ್ದನು (ವ. 9). ಮಿದ್ಯಾನರ ಮರುಭೂಮಿಯಲ್ಲಿ ದೇವರು ಮೋಶೆಯ ಬಳಿಗೆ ಬಂದನು ಮತ್ತು ಮೋಶೆಯು ನಿಂತಿದ್ದ ಸ್ಥಳವು 'ಪರಿಶುದ್ಧ ಭೂಮಿಯಾಯಿತು' (ವ 30, 33). ದೇವರು ಅರಣ್ಯದಲ್ಲಿ ಇಸ್ರಾಯೇಲ್ ಜನರೊಂದಿಗಿದ್ದನು ಮತ್ತು ಸೀನಾಯ್ ಬೆಟ್ಟದಲ್ಲಿ ಮೋಶೆಯ ಮೂಲಕ ಅವರೊಂದಿಗೆ ಮಾತನಾಡಿದನು (ವ. 38). 'ಮಹೋನ್ನತ ದೇವರು ಮಾನವರು ನಿರ್ಮಿಸಿದ ಆಲಯಗಳಲ್ಲಿ ವಾಸಿಸಲಾರನು' ಎಂದು ಹೇಳುವುದರ ಮೂಲಕ ಸ್ತೆಫನನು ಮುಕ್ತಾಯಗೊಳಿಸಿದನು (ವ 48). ಹಾಗಾಗಿ ದೇವರ ಪ್ರಸನ್ನತೆಯನ್ನು ಎಂದಿಗೂ ಸ್ಥಳೀಯ ಮಾಡಲು ಸಾಧ್ಯವಿಲ್ಲ ಮತ್ತು ಆತನನ್ನು ಯಾವ ಕಟ್ಟಡವೂ ಕೂಡಿ ಹಾಕಲು ಅಥವಾ ಆತನ ಕಾರ್ಯವನ್ನು ತಡೆಯಲು ಸಾಧ್ಯವಿಲ್ಲ ಎನ್ನುವುದು ಹಳೆ ಒಡಂಬಡಿಕೆಯಿಂದ ಸ್ಪಷ್ಟವಾಗುತ್ತದೆ. ದೇವರು ತನ್ನ ಜನರೊಂದಿಗೆ ವಾಸಿಸುತ್ತಾನೆ.

***ಧರ್ಮಶಾಸ್ತ್ರ:*** ಯೆಹೂದ್ಯ ನಾಯಕರುಗಳು ಧರ್ಮಶಾಸ್ತ್ರಕ್ಕೆ ಒತ್ತು ಕೊಟ್ಟದ್ದಕ್ಕಿಂತಲೂ ಹೆಚ್ಚಾಗಿ ಹಳೆ ಒಡಂಬಡಿಕೆಯ ಪಠ್ಯವು ಒತ್ತು ಕೊಟ್ಟಿತು ಎನ್ನುವುದೇ ಸ್ತೆಫನನ ತರ್ಕವಾಗಿದೆ. ನ್ಯಾಯಸಭೆಯವರಿಗಿಂತಲೂ ಹೆಚ್ಚಾಗಿ ಸ್ತೆಫನನು ಸತ್ಯವೇದಕ್ಕನುಗುಣವಾದವನೆಂದು ಆತನು ಆಡಿದ ಮಾತು ತೋರಿಸಿತು. ಧರ್ಮಶಾಸ್ತ್ರವನ್ನು ಅಗೌರವಿಸಿದ್ದು ಆತನಲ್ಲ, ಬದಲಾಗಿ ಅವರೇ – ಅವರಿಗಿಂತ ಮುಂಚೆ ಇದ್ದ ಅವರ ಪಿತೃಗಳಂತೆಯೇ ಅವರೂ ನಡೆದರು. ಮೋಶೆಯ ಜೀವನ, ಆತನ ಸೇವೆ ಮತ್ತು ಕರೆಯುವಿಕೆಯ ಕುರಿತಾದ ಆತನ ದಾಖಲೆಯಲ್ಲಿ ಸ್ತೆಫನನು ಸ್ಪಷ್ಟವಾಗಿ ಮೋಶೆಯನ್ನೂ ಧರ್ಮಶಾಸ್ತ್ರವನ್ನೂ ಗೌರವಿಸಿದ್ದನ್ನು ತೋರಿಸಿಕೊಟ್ಟನು (ವ. 20–44). ಹಳೆ ಒಡಂಬಡಿಕೆಯ ಇಸ್ರಾಯೇಲ್ ಜನರು ದೇವರು ತಮ್ಮ ವಿಮೋಚಕನಾಗಿ ಕಳುಹಿಸಿದಂತಹ ಮೋಶೆಯನ್ನು ತಿರಸ್ಕರಿಸಿಬಿಟ್ಟರು. ಆತನು ಧರ್ಮಶಾಸ್ತ್ರಕ್ಕೂ ಮತ್ತು ಪ್ರವಾದಿಗಳಿಗೂ ತೋರಿಸಿದ ಇಸ್ರಾಯೇಲಿನ ಗತಕಾಲದ ಅಪನಂಬಿಗಸ್ತಿಕೆಯನ್ನು ಬಯಲುಮಾಡಿದ ನಂತರ ಯೆಹೂದ್ಯ ನಾಯಕರುಗಳೂ ಅದೇ ಪಾಪವನ್ನು ಮಾಡಿದ್ದಾರೆಂದು ಸ್ತೆಫನನು ಆಪಾದಿಸಿದನು: ಅದೇನೆಂದರೆ, ಅವರು ದೇವರ ಮೆಸ್ಸೀಯನಾದ ಯೇಸುವನ್ನು ತಿರಸ್ಕರಿಸಿದ್ದರು.

ಸ್ತೆಫನನ ಮಾತುಗಳು ಎಷ್ಟು ಹೆಚ್ಚಾಗಿ ಒಂದು ಪ್ರತಿವಾದವಾಗಿದೆಯೋ ಅಷ್ಟೇ ಹೆಚ್ಚಾಗಿ ಕ್ರಿಸ್ತನ ಕುರಿತಾದ ಒಂದು ಸಾಕ್ಷಿಯೂ ಸಹ ಆಗಿದೆ. ದೇವಾಲಯದ ಬದಲಾಗಿಯೂ ಮತ್ತು ಧರ್ಮಶಾಸ್ತ್ರವನ್ನು ನೆರವೇರಿಸಲು ಬಂದ ಮೆಸ್ಸೀಯನು ಯೇಸುವೇ.

2. ನ್ಯಾಯಸಭೆಯ ಸದಸ್ಯರಿಗೆ 'ಸುನ್ನತಿಯಿಲ್ಲದ ಹೃದಯವು' ಇತ್ತೆಂದು ಸ್ತೆಫನನು ಹೇಳಿದನು. ಈ ಹೇಳಿಕೆಯು ರೂಪಕಾಲಂಕರವಾದದ್ದು. ಸ್ತೆಫನನನ್ನು ಆಪಾದಿಸಿದವರು ಶಾರೀರಿಕವಾಗಿ ಸುನ್ನತಿಹೊಂದಿದ್ದರು, ಆದರೆ ಅವರು ಸುನ್ನತಿಯಿಲ್ಲದ ಅನ್ಯಜನರಂತೆ ವರ್ತಿಸುತ್ತಿದ್ದರು. ಅವರು ನಿಜವಾಗಲೂ ದೇವರಿಗಾಗಿ ಸಮರ್ಪಿಸಲ್ಪಟ್ಟವರಾಗಿರಲಿಲ್ಲ.

3. ಸ್ತೆಫನನ ಮಾತುಗಳು ಕನಿಷ್ಠಪಕ್ಷ ಆತನ ಕುರಿತಾಗಿ ಮೂರು ಸಂಗತಿಗಳನ್ನು ಪ್ರಕಟಿಸುತ್ತವೆ:
   1) ಆತನು ಹಳೆ ಒಡಂಬಡಿಕೆಯ ಪಠ್ಯವನ್ನು ಚೆನ್ನಾಗಿ ತಿಳಿದಿದ್ದನು.
   2) ಆತನು ನಿಜವಾಗಲೂ ಪವಿತ್ರಾತ್ಮನ ಜ್ಞಾನವನ್ನು ಹೊಂದಿದ್ದ ಮನುಷ್ಯನಾಗಿದ್ದನು (6:10).
   3) ದೇವರನ್ನು ತಿರಸ್ಕರಿಸಿ ಧರ್ಮಶಾಸ್ತ್ರಕ್ಕೆ ಅವಿಧೇಯರಾಗಿ ನಡೆದುಕೊಂಡಿರಿ ಎಂದು ತನ್ನ ಆಪಾದಕರನ್ನು ಆಪಾದಿಸುವುದರಲ್ಲಿ ಆತನು ಕೆಚ್ಚೆದೆಯುಳ್ಳವನಾಗಿದ್ದನು (7:51–53).

# ಉ 17. ಸ್ತೆಫನನ ಮೇಲೆ ಕಲ್ಲೆಸೆದದ್ದು, 7:54–8:1

## ೩) ಪಠ್ಯ ಪ್ರಶ್ನೆಗಳು

1. ಸ್ತೆಫನನು ಪರಲೋಕದ ಕಡೆಗೆ ನೋಡಿದಾಗ ಆತನು ದೇವರ ಮಹಿಮೆಯನ್ನೂ ಯೇಸು ದೇವರ ಬಲಗಡೆಯಲ್ಲಿ ನಿಂತುಕೊಂಡಿರುವುದನ್ನೂ ಕಂಡನು.

2. ಸ್ತೆಫನನ ಮತ್ತು ಆತನ ಮಾತುಗಳ ಕುರಿತು ನ್ಯಾಯಸಭೆಯವರು ಈ ಕೆಳಗಿನಂತೆ ತಮ್ಮ ರೋಷವನ್ನು ವ್ಯಕ್ತಪಡಿಸಿದರು:

    - ಅವನ ಕಡೆಗೆ ನೋಡಿ, ತಮ್ಮ ಹಲ್ಲುಗಳನ್ನು ಕಡಿದರು (ವ. 54)
    - ಅವರು ತಮ್ಮ ಕಿವಿಗಳನ್ನು ಮುಚ್ಚಿಕೊಂಡರು (ವ. 57)
    - ಅವರು ಆರ್ಭಟಿಸಿದರು (ವ. 57)
    - ಅವನ ಮೇಲೆ ಬಿದ್ದರು (ವ. 57)
    - ಅವನನ್ನು ಪಟ್ಟಣದ ಹೊರಗೆ ಎಳೆದುಕೊಂಡು ಹೋಗಿ ಅವನ ಮೇಲೆ ಕಲ್ಲೆಸೆದು ಕೊಂದರು (ವ. 58–60)

3. ಸ್ತೆಫನನು ಈ ವಾಕ್ಯಭಾಗದಲ್ಲಿ ಮೂರು ಬಾರಿ ಮಾತನಾಡುತ್ತಾನೆ. ಮೊದಲ ಬಾರಿ ಪರಲೋಕದಲ್ಲಿ ಯೇಸುವನ್ನು ಕಂಡಿದ್ದರ ಕುರಿತು ನ್ಯಾಯಸಭೆಯವರೊಂದಿಗೆ ಮಾತನಾಡುತ್ತಾನೆ. ಉಳಿದ ಎರಡು ಬಾರಿ ಆತನು ಯೇಸುವಿಗೆ ಪ್ರಾರ್ಥಿಸುತ್ತಾನೆ.

4. ನಾವು ವ. 55–56 ರಲ್ಲಿ ದೇವರನ್ನು ಒಬ್ಬ ತ್ರೈಯೇಕ ದೇವರಾಗಿ ಈ ಕೆಳಗಿನಂತೆ ಕಾಣಬಹುದು:

    - ಸ್ತೆಫನನು ಪವಿತ್ರಾತ್ಮಭರಿತನಾಗಿದ್ದನೆಂದು ಲೂಕನು ವ. 55 ರಲ್ಲಿ ಹೇಳುತ್ತಾನೆ. ಪವಿತ್ರಾತ್ಮನು ವಿಶ್ವಾಸಿಗಳಲ್ಲಿ ವಾಸಿಸುವ ದೇವರಾಗಿದ್ದಾನೆ, ಆತನು ಅವರಿಗೆ ದೈವಭಯವುಳ್ಳ ಜೀವಿತಗಳನ್ನು ಜೀವಿಸಲು ಬಲವನ್ನು ನೀಡುತ್ತಾನೆ, ಸುವಾರ್ತೆಯನ್ನು ಮನದಟ್ಟುಮಾಡುವಂತೆ ಬೋಧಿಸಲು ಜ್ಞಾನವನ್ನು ನೀಡುತ್ತಾನೆ ಮತ್ತು ಹಿಂಸೆ ಮರಣವನ್ನು ಎದುರಿಸಲು ಧೈರ್ಯವನ್ನು ನೀಡುತ್ತಾನೆ.
    - ವ. 56 ರಲ್ಲಿ ಸ್ತೆಫನನು ದೇವರ ಮಹಿಮೆಯನ್ನು ನೋಡುತ್ತಾನೆ. ಈತನು ಸೃಷ್ಟಿಕರ್ತನಾದ ದೇವರು, ಪರಲೋಕವನ್ನೂ ಭೂಮಿಯನ್ನೂ ಆಳುವ ದೇವರು, ಜನರ ಮತ್ತು ಇತಿಹಾಸದ ಮೇಲೆ ಹತೋಟಿಯುಳ್ಳ ದೇವರು.

- ವ. 56 ರಲ್ಲಿ ಯೇಸು ದೇವರ ಬಲಗಡೆಯಲ್ಲಿ ನಿಂತಿರುವುದನ್ನು ಸ್ತೆಫನನು ನೋಡುತ್ತಾನೆ ಮತ್ತು ಆತನು ಯೇಸುವನ್ನು ಮನುಷ್ಯ ಪುತ್ರನಾಗಿ ನ್ಯಾಯಸಭೆಯವರಿಗೆ ಪ್ರಸ್ತುತಪಡಿಸುತ್ತಾನೆ. ಮನುಷ್ಯ ಪುತ್ರನಾದ ಯೇಸು ಮಾನವ ಶರೀರದಲ್ಲಿ ಬಂದ ದೇವರು, ಆತನು ದೇವರ ಪ್ರೀತಿಯನ್ನು ಪ್ರಕಟಿಸಲು ಮತ್ತು ಒಂದು ಬಲಿಯಾಗಿಯೂ ಪ್ರಾಯಶ್ಚಿತ್ತ ಯಜ್ಞವಾಗಿಯೂ ಕ್ರೂಜೆಯ ಮೇಲೆ ತನ್ನ ಪ್ರಾಣವನ್ನು ಕೊಡುವುದರ ಮೂಲಕ ದೇವರ ರಕ್ಷಣೆಯನ್ನು ತರಲು ಮಾನವನಾದನು. ಸ್ತೆಫನನು ಪರಲೋಕವನ್ನು ನೋಡಿದಾಗ, ಆತನು ಆರೋಹಣನಾದ ಮತ್ತು ಮಹಿಮೆ ಹೊಂದಿದ ಯೇಸುವನ್ನು ಕಂಡನು, ಆ ಮಗನು ಈಗ ಪರಲೋಕದ ತನ್ನ ತಂದೆಯೊಂದಿಗೆ ಆಳ್ವಿಕೆ ಮಾಡುವವನಾಗಿದ್ದಾನೆ.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಸ್ತೆಫನನ ಮತ್ತು ಯೇಸುವಿನ ಮರಣದ ನಡುವೆ ಇರುವ ಸಮಾನತೆಗಳು ಯಾವುವೆಂದರೆ:

   - ಎರಡೂ ಪ್ರಕರಣಗಳಲ್ಲಿ ಸುಳ್ಳು ಸಾಕ್ಷಿಗಳನ್ನು ಮುಂದೆ ಕರೆತಂದರು.
   - ಯೇಸು ಮತ್ತು ಸ್ತೆಫನರಿಬ್ಬರಿಗೂ ದೇವದೂಷಣೆಯ ಆರೋಪಣೆಯುಂಟಾಯಿತು.
   - ಎರಡೂ ಪ್ರಕರಣಗಳಲ್ಲಿ ಸಿಟ್ಟಿನಿಂದ ಕೂಡಿದ ಜನರಿದ್ದರು.
   - ಯೇಸು ಮತ್ತು ಸ್ತೆಫನರಿಬ್ಬರೂ ಯೆರೂಸಲೇಮ್ ಪಟ್ಟಣದ ಹೊರಗಡೆ ಕೊಲ್ಲಲ್ಪಟ್ಟರು.
   - ಎರಡೂ ಪ್ರಕರಣಗಳಲ್ಲಿ ಮರಣ ಹೊಂದುತ್ತಿದ್ದ ವ್ಯಕ್ತಿಯು ಎರಡು ಪ್ರಾರ್ಥನೆಗಳನ್ನು ಮಾಡಿದನು.

2. ಸ್ತೆಫನನ ಮೊದಲ ಪ್ರಾರ್ಥನೆಯು (ವ. 59) ಹೆಚ್ಚು ಕಡಿಮೆ ಶಿಲುಬೆಯಲ್ಲಿ ಕ್ರಿಸ್ತನು ಆಡಿದ ಕೊನೆಯ ಮಾತುಗಳಂತೆಯೇ ಇವೆ, 'ತಂದೆಯೇ ನನ್ನ ಆತ್ಮವನ್ನು ನಿನ್ನ ಕೈಗಳಲ್ಲಿ ಒಪ್ಪಿಸುತ್ತೇನೆ' (ಲೂಕ 23:46). ಇದು ಕೀರ್ತನೆ 31:5 ರ ಉಲ್ಲೇಖನವಾಗಿದೆ. ಪ್ರಮುಖ ವ್ಯತ್ಯಾಸವೆಂದರೆ ಸ್ತೆಫನನು ಯೇಸುವಿಗೆ ಪ್ರಾರ್ಥಿಸುತ್ತಾನೆ, ಯೇಸು ತನ್ನ ಪರಲೋಕದ ತಂದೆಗೆ ಪ್ರಾರ್ಥಿಸುತ್ತಾನೆ. ಕೀರ್ತನೆ 31 ರಲ್ಲಿ ದಾವಿದನು 'ಯೆಹೋವನ' ಕಡೆಗೆ ತಿರುಗಿಕೊಳ್ಳುತ್ತಾನೆ, ಇಸ್ರಾಯೇಲರು ದೇವರನ್ನು ಆ ರೀತಿಯಾಗಿ ಕರೆಯುತ್ತಿದ್ದರು.

   ಸ್ತೆಫನನ ಎರಡನೆಯ ಪ್ರಾರ್ಥನೆಯು (ಕಲ್ಲೆಸೆದ ಪಾಪವನ್ನು ಯೆಹೂದ್ಯ ನಾಯಕರುಗಳ ಮೇಲೆ ದೇವರು ಹೊರಿಸಬಾರದೆಂಬುದು, ವ. 60) ಯೇಸು ಶಿಲುಬೆಯ ಮೇಲೆ ಪ್ರಾರ್ಥಿಸಿದ ಪ್ರಾರ್ಥನೆಯಂತೆಯೇ ಇದೆ. 'ತಂದೆಯೇ ಅವರನ್ನು ಕ್ಷಮಿಸು; ತಾವು ಏನು

ಮಾಡುತ್ತಾರೆಂಬುದನ್ನು ಅವರು ಅರಿಯರು' (ಲೂಕ. 23:34). ಮತ್ತೊಮ್ಮೆ ಯೇಸು ತನ್ನ ಪರಲೋಕದ ತಂದೆಗೆ ಪ್ರಾರ್ಥಿಸುವುದನ್ನೂ, ಸ್ತೆಫನನು ಯೇಸುವಿಗೆ ಪ್ರಾರ್ಥಿಸುವುದನ್ನು ನಾವು ಕಾಣುತ್ತೇವೆ (ಹೊಸ ಒಡಂಬಡಿಕೆಯಲ್ಲಿ 'ಕರ್ತನೇ'" ಎನ್ನುವುದು 'ಕರ್ತನಾದ ಯೇಸುವನ್ನು' ಉಲ್ಲೇಖಿಸುತ್ತದೆ).

3. ಸ್ತೆಫನನನ್ನು ನಾವು ಮೊದಲ ಕ್ರೈಸ್ತ ರಕ್ತಸಾಕ್ಷಿ ಎಂದು ನೆನೆಪಿಸಿಕೊಳ್ಳುತ್ತೇವೆ: ಆತನು ಯೇಸುವಿನ ಕುರಿತಾದ ಸಾಕ್ಷಿಗಾಗಿ ತನ್ನ ಪ್ರಾಣವನ್ನು ಕೊಟ್ಟ ಮೊದಲ ವ್ಯಕ್ತಿಯಾಗಿದ್ದಾನೆ. ಇದು ಸತ್ಯವಾದದ್ದು, ಆದರೆ ಲೂಕನು ಅಪೋಸ್ತಲರ ಕೃತ್ಯಗಳ ಘಟನಾಕ್ರಮಣಿಕೆಯನ್ನು ಜೋಡಿಸುವಾಗ ಈ ವಾಸ್ತವಾಂಶದ ಮೇಲೆ ಕೇಂದ್ರೀಕೃತವಾಗಿರಲಿಲ್ಲ. ಸ್ತೆಫನನು ತನ್ನ ಬೋಧನೆಯ ಮತ್ತು ಮರಣದ ಮೂಲಕ ವಿಶ್ವವ್ಯಾಪಿ ಕ್ರೈಸ್ತ ಸೇವೆಯ ಬೆಳವಣಿಗೆಗೆ ತಾನು ವಹಿಸಿದ ಪಾತ್ರದ ಮೇಲೆ ಲೂಕನು ಹೆಚ್ಚು ಒತ್ತು ಕೊಡುತ್ತಾನೆ.

1) ಯೇಸು ದೇವಾಲಯ ಮತ್ತು ಧರ್ಮಶಾಸ್ತ್ರದ ನೆರವೇರಲ್ಪಡುವಿಕೆಯಾಗಿದ್ದಾನೆಂದು ಸ್ತೆಫನನು ಬೋಧಿಸಿದನು. ಇದನ್ನು ಸ್ವತಃ ಯೇಸು ತಾನೇ ಘೋಷಿಸಿಕೊಂಡಿದ್ದನು. ದೇವರು ಒಂದು ದೇವಾಲಯದ ಕಟ್ಟಡಕ್ಕೆ ಕಟ್ಟಿಹಾಕಲ್ಪಟ್ಟವನಲ್ಲ – ಇದನ್ನು ಸ್ತೆಫನನು ನ್ಯಾಯಸಭೆಯವರ ಮುಂದೆ ತನ್ನ ಉದ್ದವಾದ ಉಪನ್ಯಾಸದಲ್ಲಿ ಸ್ಪಷ್ಟಪಡಿಸಿದನು. ತನ್ನ ಜನರು ದೇಶದಿಂದ ದೇಶಕ್ಕೆ ಮತ್ತು ಸ್ಥಳದಿಂದ ಸ್ಥಳಕ್ಕೆ ಪ್ರಯಾಣಿಸಿದಾಗ ದೇವರು ಯಾವಾಗಲೂ ಅವರ ಜೊತೆಯಲ್ಲಿದ್ದನು. ಹಳೆ ಒಡಂಬಡಿಕೆಯ ಕಾಲದಲ್ಲಿ ಅಬ್ರಹಾಮ, ಯೋಸೇಫ ಮತ್ತು ಮೋಶೆಯವರೊಂದಿಗೂ ಹೀಗೆಯೇ ಇತ್ತು. ಹೊಸ ಒಡಂಬಡಿಕೆಯ ಕಾಲದಲ್ಲಿಯೂ ಹೀಗೆಯೇ ಇದೆ ಎನ್ನುವುದನ್ನು ಲೂಕನು ಈಗ ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ತೋರಿಸುವವನಾಗಿದ್ದಾನೆ. ಸ್ತೆಫನನನ್ನು ಕಲ್ಲೆಸೆದು ಕೊಂದ ನಂತರ – ಸುವಾರ್ತೆಯು ಹೊಸ ದೇಶಗಳಿಗೆ, ಜನರಿಗೆ ಮತ್ತು ಸಂಸ್ಕೃತಿಗಳಿಗೆ ಕೊಂಡೊಯ್ಯಲ್ಪಟ್ಟಾಗ ಯೇಸು ತನ್ನ ಜನರು ಹೋದಲ್ಲೆಲ್ಲಾ, ಅನ್ಯರ ದೇಶಗಳಲ್ಲಿಯೂ, ಅವರ ಸಂಗಡ ಇದ್ದನು.

2) ಸ್ತೆಫನನ ಮರಣದಿಂದ ಎರಡು ಸಂಗತಿಗಳುಂಟಾಯಿತು:

- ಅದು ಒಂದು ದೊಡ್ಡ ಹಿಂಸೆಗೆ ನಡೆಸಿತು. ಅದು ಸಭೆಯು ಚದುರಿ ಹೋಗುವಂತೆ ಮಾಡಿತು ಮತ್ತು ಯೆರೂಸಲೇಮಿನಲ್ಲಿ ಪ್ರಾರಂಭವಾದ ಸುವಾರ್ತೆಯು ಅದರ ವ್ಯಾಪ್ತಿಯಿಂದ ಹೊರಗೆ ಹರಡಿತು. ವಿಶ್ವ ಸೇವೆಗಳಿಗಾಗಿ ಸ್ತೆಫನನ ಮರಣವು ಮೊದಲ ಬೀಜವಾಯಿತು.

- ಇದು ತಾರ್ಸಸ್‌ನ ಸೌಲನ ಮಾನಸಾಂತರಕ್ಕೆ ಸಹಾಯ ಮಾಡಿತು, ಕೆಲವು ವರ್ಷಗಳ ನಂತರ ಆತನು ಅನ್ಯರಿಗೆ ಅಪೋಸ್ತಲನಾಗಿ ಮಾರ್ಪಟ್ಟನು ಆತನು ಸ್ತೆಫನನ ಕೊಲೆಗೆ ಸಮ್ಮತಿಸಿ ಸಾಕ್ಷಿಗಳ ಬಟ್ಟೆಗಳನ್ನು ಕಾಯುತ್ತಾ ಇದ್ದಾಗ ಆ ದಿನ ಸ್ತೆಫನನು ಆಡಿದ ಸಾಕ್ಷಿಯ ಮಾತುಗಳನ್ನು ಮತ್ತು ಆತನ ಮರಣವನ್ನು ಪೌಲನು ಎಂದಿಗೂ ಮರೆಯಲಿಲ್ಲ.

## ಉ 18. ಸಭೆ ಹಿಂಸೆಗೆ ಗುರಿಯಾಗಿ ಸದಸ್ಯರು ಚದುರಿಹೋದದ್ದು, 8:1–3

### ಇ) ಪಠ್ಯ ಪ್ರಶ್ನೆಗಳು

1. ಸ್ತೆಫನನ ಮೇಲೆ ಕಲ್ಲೆಸೆದ ನಂತರ ಉಂಟಾದ ತಕ್ಷಣದ ಪರಿಣಾಮವೇನೆಂದರೆ, ವಿಶ್ವಾಸಿಗಳಿಗೆ ಹಿಂಸೆಯು ಪ್ರಾರಂಭವಾಗಿ ಸಭೆಯು ಚದುರಿಸಲ್ಪಟ್ಟಿತು.

2. ವಿಶ್ವಾಸಿಗಳೆಲ್ಲರೂ ಯೂದಾಯ ಮತ್ತು ಸಮಾರ್ಯ ಪ್ರಾಂತ್ಯಗಳಿಗೆ ಚದುರಿಸಲ್ಪಟ್ಟರೆಂದು ಲೂಕನು ಬರೆಯುತ್ತಿದ್ದಾನೆ.

3. ಸೌಲನು ಹಿಂಸಕರೊಂದಿಗೆ ಸೇರಿಕೊಂಡನೆಂದು ಈ ವಾಕ್ಯಭಾಗವು ತಿಳಿಸುತ್ತದೆ. ಆತನು ವಿಶ್ವಾಸಿಗಳ ಮನೆಗಳಿಗೆ ನುಗ್ಗುವುದರ ಮೂಲಕವಾಗಿ ಸಭೆಯನ್ನು ಹಾಳು ಮಾಡಲು ಪ್ರಯತ್ನಿಸಿದನು. ನಂತರ ಆತನು ಸ್ತ್ರೀಯರನ್ನೂ ಪುರುಷರನ್ನೂ ಹೊರಗೆಳೆದು ಅವರನ್ನು ಸೆರೆಮನೆಯಲ್ಲಿ ಹಾಕಿಸಿದನು.

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅಪೋಸ್ತಲರ ಕೃತ್ಯಗಳಲ್ಲಿ 'ಯೂದಾಯ ಮತ್ತು ಸಮಾರ್ಯವು' ಒಟ್ಟಿಗೆ ಇನ್ನೊಂದು ಬಾರಿ ಮಾತ್ರ ಪ್ರಸ್ತಾಪಿಸಲ್ಪಟ್ಟಿದೆ, ಅದು ಯೇಸು ತನ್ನ ಶಿಷ್ಯರಿಗೆ 1:8 ರಲ್ಲಿ ಹೇಳಿದ್ದರಲ್ಲಿದೆ: 'ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬಂದಾಗ ನೀವು ಶಕ್ತಿಯನ್ನು ಪಡೆಯುವಿರಿ; ಆಗ ನೀವು ಯೆರೂಸಲೇಮಿನಲ್ಲಿ, ಯೂದಾಯ ಮತ್ತು ಸಮಾರ್ಯದ ಎಲ್ಲಾ ಕಡೆಗಳಲ್ಲಿಯೂ ಹಾಗೂ ಭೂಲೋಕದ ಕೊನೆಯ ಮೇರೆಗಳವರೆಗೂ ನನಗೆ ಸಾಕ್ಷಿಗಳಾಗುವಿರಿ' ಎಂದನು. ತನ್ನ ಸಭೆಯ ಮೂಲಕ ನಡೆಯುವ ಪವಿತ್ರಾತ್ಮನ ಸುವಾರ್ತಾ ಕಾರ್ಯದ ಕುರಿತಾದ ಯೇಸುವಿನ ಪ್ರವಾದನೆಯು ಈಗ ನೆರವೇರಲಿದೆ ಎಂಬುದನ್ನು ತನ್ನ ವಾಚಕರು ಅರ್ಥಮಾಡಿಕೊಳ್ಳಬೇಕೆಂದು ಲೂಕನು ಬಯಸುತ್ತಾನೆ. 'ಎಲ್ಲಾ ಕಡೆಗಳಲ್ಲಿಯೂ' (1:8) ಮತ್ತು 'ಪ್ರಾಂತ್ಯಗಳಿಗೆ' (8:1) ಎಂಬ ಪದಗಳನ್ನು ಗಮನಿಸಿರಿ.

2. ವಿಶ್ವಾಸಿಗಳಲ್ಲಿ ಉಳಿದವರೆಲ್ಲರೂ ಚದುರಿ ಹೋದಾಗ ಅಪೋಸ್ತಲರು ಮಾತ್ರ ಯೆರೂಸಲೇಮಿನಲ್ಲಿ ಯಾಕೆ ಉಳಿದುಕೊಂಡರೆಂಬುದನ್ನು ಲೂಕನು ಹೇಳುತ್ತಿಲ್ಲ. ಅವರು ಹಿಂದುಳಿದುಕೊಂಡದ್ದರಲ್ಲಿ ಯಾವ ತಪ್ಪಿರಲಿಲ್ಲವೆಂದು ನಾವು ಊಹಿಸಿಕೊಳ್ಳಬಹುದು. ಇನ್ನೂ

ಸ್ವಲ್ಪ ಕಾಲದವರೆಗೆ ಯೆರೂಸಲೇಮು ಸಭೆಯ ಪ್ರಧಾನ ಕಛೇರಿಯಾಗಿರಬೇಕಿತ್ತು, ಮತ್ತು ಅಲ್ಲಿ ಅಪೋಸ್ತಲರು ಇರುವುದು ಅವಶ್ಯವಾಗಿತ್ತು.

3. 'ದೇವಭಕ್ತರು' ಸ್ತೆಫನನ ಶವಸಂಸ್ಕಾರ ಮಾಡಿ 'ಅವನಿಗಾಗಿ ಬಹಳ ಗೋಳಾಡಿದರು' ಎಂದು ಲೂಕನು ಬರೆಯುತ್ತಾನೆ. ಬಹುಶಃ ಈ ದೇವಭಕ್ತರು ಅಪೋಸ್ತಲರಾಗಿರಲಿಲ್ಲ (ಇಲ್ಲವಾದರೆ ಲೂಕನು ತಿಳಿಸುತ್ತಿದ್ದ) ಅಥವಾ ಇತರೆ ವಿಶ್ವಾಸಿಗಳೂ ಆಗಿರಲಿಲ್ಲ (ಯಾಕೆಂದರೆ ಸಭೆಯು ಚದುರಿ ಹೋಗಿತ್ತು). ಅವರು ಬಹುಶಃ ಸ್ತೆಫನನು ಅನ್ಯಾಯವಾಗಿ ಕೊಲ್ಲಲ್ಪಟ್ಟನು ಎಂಬುದನ್ನು ಅರಿತಿದ್ದ ಭಕ್ತಿವಂತ ಯೆಹೂದ್ಯರಾಗಿದ್ದಿರಬಹುದು.

# ಉ 19. ಸಮಾರ್ಯದಲ್ಲಿ ಫಿಲಿಪ್ಪನು, 8:4–8

## ಇ) ಪಠ್ಯ ಪ್ರಶ್ನೆಗಳು

1. ಫಿಲಿಪ್ಪನು ಕ್ರಿಸ್ತನ ಕುರಿತು ಯೆರೂಸಲೇಮಿನ ಉತ್ತರದಲ್ಲಿದ್ದ ಸಮಾರ್ಯ ದೇಶದ ಒಂದು ಪಟ್ಟಣದಲ್ಲಿ ಸಾರಿದನು.

2. ಫಿಲಿಪ್ಪನ ಸೇವೆಯು ಎರಡು ಸಂಗತಿಗಳನ್ನು ಹೊಂದಿತ್ತು:

    - ಕ್ರಿಸ್ತನ ಸಾರೋಣ, ಮತ್ತು

    - ಸೂಚಕ ಕಾರ್ಯಗಳನ್ನು ನಡೆಸುವುದು: ಪಾರ್ಶ್ವವಾಯು ರೋಗಿಗಳನ್ನು ಮತ್ತು ಕುಂಟರನ್ನು ಸ್ವಸ್ಥಪಡಿಸಿದ್ದು ಮತ್ತು ದುರಾತ್ಮಗಳನ್ನು ಹೊರ ಹಾಕಿದ್ದು.

3. ಫಿಲಿಪ್ಪನ ಸೇವೆಯ ಫಲವಾಗಿ ಆ ಪಟ್ಟಣದಲ್ಲಿ ಮಹಾಸಂತೋಷವುಂಟಾಯಿತು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಫಿಲಿಪ್ಪ ಮತ್ತು ಸ್ತೆಫನರು ಒಬ್ಬರನ್ನೊಬ್ಬರು ಚೆನ್ನಾಗಿ ಅರಿತವರಿದ್ದಿರಬಹುದು. ಅವರಿಬ್ಬರೂ ಯೆರೂಸಲೇಮಿನ ಸಭೆಯಲ್ಲಿ 'ಅನುದಿನದ ಉಪಚಾರಕ್ಕಾಗಿ' ವಿಶ್ವಾಸಿಗಳಿಂದ ಆರಿಸಲ್ಪಟ್ಟ ಏಳು ಜನರ ಗುಂಪಿಗೆ ಸಂಬಂಧಪಟ್ಟಿದ್ದರು (6:1–7).

2. ಲೂಕನು ಸ್ತೆಫನ ಮತ್ತು ಫಿಲಿಪ್ಪರನ್ನು ಒಂದು ಜೋಡಿಯಾಗಿ ಕಂಡಂತೆ ತೋರುತ್ತದೆ. ಅವರಿಬ್ಬರ ನಡುವೆ ಇರುವ ಸಮಾನತೆಗಳ ಒಂದು ಪಟ್ಟಿಯು ಹೀಗಿದೆ:

    1) ಅವರಿಬ್ಬರೂ ಏಳು ಜನರ ಗುಂಪಿಗೆ ಸಂಬಂಧಪಟ್ಟಿದ್ದರು. ಅದರ ಅರ್ಥ, ಅವರು ಯೆರೂಸಲೇಮಿನ ಆದಿಸಭೆಯಲ್ಲಿ ಸಾಮಾಜಿಕ ಜವಾಬ್ದಾರಿಗಳನ್ನು ಹೊತ್ತವರಾಗಿದ್ದರು (6:5).

    2) ಇದರ ಅರ್ಥ ಅವರಿಬ್ಬರೂ ಒಂದೇ ರೀತಿಯಾದ 'ಅರ್ಹತೆಗಳನ್ನು' ಹೊಂದಿದ್ದರು. ಅವರು 'ಪವಿತ್ರಾತ್ಮಭರಿತರು ಮತ್ತು ಜ್ಞಾನವಂತರು' ಎಂದು ಪ್ರಸಿದ್ಧಿಯಾಗಿದ್ದರು (6:3) ಮತ್ತು ಬಹುಶಃ ಅವರಿಬ್ಬರೂ ಸಭೆಯಲ್ಲಿ ಗ್ರೀಕ್ ಮಾತನಾಡುವ ಗುಂಪಿಗೆ ಸಂಬಂಧಪಟ್ಟವರಾಗಿದ್ದರು – ಕನಿಷ್ಟಪಕ್ಷ ಅವರಿಬ್ಬರೂ ಗ್ರೀಕ್ ಹೆಸರನ್ನು ಹೊಂದಿದ್ದರು.

3) ಅವರಿಬ್ಬರೂ ಸುವಾರ್ತಾ ಸೇವೆಯಲ್ಲಿ ತೊಡಗಿದ್ದರು ಮತ್ತು ಸುವಾರ್ತೆಯನ್ನು ಸಾರಿದರು (6:10 ಮತ್ತು 8:5).

4) ಅವರಿಬ್ಬರೂ ಸಾರ್ವಜನಿಕವಾಗಿ ಅದ್ಭುತ ಮತ್ತು ಸೂಚಕ ಕಾರ್ಯಗಳನ್ನು ಮಾಡಿದರು. (6:8 ಮತ್ತು 8:6).

5) ಸುವಾರ್ತೆಯು ಹೇಗೆ ಯೆರೂಸಲೇಮಿನಲ್ಲಿ ಪ್ರಾರಂಭಗೊಂಡು ಅನ್ಯರ ಲೋಕಕ್ಕೆ ವಿಸ್ತರಿಸಲ್ಪಟ್ಟಿತ್ತೆಂಬುದರ ಕುರಿತಾದ ಲೂಕನ ಕಥೆಯಲ್ಲಿ ಅವರಿಬ್ಬರೂ ಪ್ರಮುಖ ಪಾತ್ರವನ್ನು ವಹಿಸುತ್ತಾರೆ:

- ದೇವಾಲಯ, ಧರ್ಮಶಾಸ್ತ್ರ ಮತ್ತು ಮೆಸ್ಸೀಯನ ಕುರಿತಾದ ಬೋಧನೆಯು ಸ್ತೆಫನನ ಕೊಡುಗೆಯಾಗಿದೆ.

- ತಳ್ಳಲ್ಪಟ್ಟ ಸಮಾರ್ಯದವರಿಗೂ ಮತ್ತು ಪ್ರಾಚೀನ ಲೋಕದ ತುದಿಯಿಂದ ಬಂದ ಇಥಿಯೋಪ್ಯದವನಿಗೂ ಧೈರ್ಯದಿಂದ ಸುವಾರ್ತೆಯನ್ನು ಸಾರಿದ್ದು ಫಿಲಿಪ್ಪನ ಕೊಡುಗೆಯಾಗಿದೆ.

ಆದರೆ ಅವರು ಬದುಕಿದ್ದ ದಿನಗಳ ಅಂತರದಲ್ಲಿ ನಾವು ವ್ಯತ್ಯಾಸವನ್ನು ಕಾಣುತ್ತೇವೆ:

- ಸ್ತೆಫನನು ಬಹುಶಃ ತನ್ನ ಯೌವ್ವನ ಪ್ರಾಯದಲ್ಲಿ ಒಬ್ಬ ರಕ್ತಸಾಕ್ಷಿಯಾಗಿ ಒಂದು ಉಗ್ರ ಮರಣ ಹೊಂದಿದನು.

- ಫಿಲಿಪ್ಪನು ಹೆಚ್ಚಿನ ಕಾಲ ಬದುಕಿದ್ದನು (21:8).

3. ಬಹುತೇಕವಾಗಿ ಲೂಕನು ಫಿಲಿಪ್ಪನ ಸೇವೆ ಮತ್ತು ಆತನ ಜೀವನದ ಕುರಿತಾದ ಮಾಹಿತಿಯನ್ನು ಫಿಲಿಪ್ಪನಿಂದಲೇ ಪಡೆದಿರಬಹುದು. ಲೂಕ 1:3 ರಲ್ಲಿ ಆತನು ತನ್ನ ಮಾಹಿತಿಯ ಸಂಶೋಧನೆಯಲ್ಲಿ ಶ್ರದ್ಧೆಯುಳ್ಳವನಾಗಿದ್ದನೆಂದು ನಾವು ಕಾಣುತ್ತೇವೆ. 'ಆದ್ದರಿಂದ ಮೊದಲಿನಿಂದ ಎಲ್ಲವನ್ನೂ ಪೂರ್ಣವಾಗಿ ತಿಳಿದುಕೊಂಡಿರುವ ನಾನು' ಎಂಬುದಾಗಿ ಆತನು ಬರೆಯುತ್ತಾನೆ. ಅ. ಕೃ. 21:8 ರಿಂದ ನಾವು ತಿಳಿಯುವುದೇನೆಂದರೆ ಯೆರೂಸಲೇಮಿಗೆ ಹೋಗುವ ಮಾರ್ಗದಲ್ಲಿ ಪೌಲ ಮತ್ತು ಲೂಕರು ಸೆಜೆರೆಯಲ್ಲಿದ್ದ ಫಿಲಿಪ್ಪನ ಮನೆಯಲ್ಲಿ ತಂಗಿದ್ದರು. ಎರಡು ವರ್ಷಗಳ ನಂತರ, ಅ. ಕೃ. 27:1 ರಲ್ಲಿ ಲೂಕ ಮತ್ತು ಸೀಲರು ಪೌಲನೊಂದಿಗೆ ಸೆಜೆರೇಯದಿಂದ ಇಟಲಿಗೆ ಹಡಗು ಪ್ರಯಾಣ ಮಾಡಿದ್ದನ್ನು ನಾವು ಕಾಣುತ್ತೇವೆ. ಹಾಗಾಗಿ ಈ ವರ್ಷಗಳ ಅವಧಿಯಲ್ಲಿ ಲೂಕನು ಫಿಲಿಪ್ಪನನ್ನು ಸಂಧಿಸುವ ಮತ್ತು ಆತನು ಯೌವ್ವನಸ್ಥನಾಗಿರುವಾಗ ಸಮಾರ್ಯದಲ್ಲಿ ಮಾಡಿದ ಸೇವೆಯ ಕುರಿತು ಆತನ ಕಥೆಗಳನ್ನು ಕೇಳುವ ಅನೇಕ ಅವಕಾಶಗಳು ದೊರೆತವು.

## ಉ 20. ಮಂತ್ರವಾದಿ ಸೀಮೋನ, 8:9–25

### ೩) ಪಥ್ಯ ಪ್ರಶ್ನೆಗಳು

1. ಸೀಮೋನನು ತಾನೊಬ್ಬ ಮಹಾವ್ಯಕ್ತಿಯೆಂದು ಹೊಗಳಿಕೊಳ್ಳುತ್ತಿದ್ದನು, ಯಾಕೆಂದರೆ ತಾನು ದೈವಶಕ್ತಿಯ ಮೂಲಕ ತನ್ನ ಮಂತ್ರಶಕ್ತಿಯನ್ನು ಮತ್ತು ತನ್ನ ಮಂತ್ರವಿದ್ಯೆಯನ್ನು ನಡೆಸುತ್ತಿದ್ದನೆಂದು ಘೋಷಿಸಿಕೊಂಡಿದ್ದನು.

2. ಫಿಲಿಪ್ಪನು ಮಾಡಿದ ಮಹಾ ಸೂಚಕ ಕಾರ್ಯಗಳನ್ನು ಮತ್ತು ಅದ್ಭುತಗಳನ್ನು ನೋಡಿ ಆತನು ಬೆರಗಾಗಿದ್ದರಿಂದ ಸೀಮೋನನು ಫಿಲಿಪ್ಪನನ್ನು ಎಲ್ಲಾ ಕಡೆಯಲ್ಲೂ ಹಿಂಬಾಲಿಸಿದನು (ವ. 13).

3. ಸಮಾರ್ಯದ ವಿಶ್ವಾಸಿಗಳ ಮೇಲೆ ಪೇತ್ರ ಮತ್ತು ಯೋಹಾನರು ತಮ್ಮ ಕೈಗಳನ್ನು ಇಟ್ಟಾಗ ಅವರು ಪವಿತ್ರಾತ್ಮನನ್ನು ಸ್ವೀಕರಿಸಿದರು, ಅದರ ಅರ್ಥ ಅವರು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿದರು (ವ. 17).

4. ಪೇತ್ರ ಮತ್ತು ಯೋಹಾನರು ಹೊಂದಿದ್ದ ಸಾಮರ್ಥ್ಯವನ್ನು ಕಂಡ ಸೀಮೋನನು ಅದನ್ನು ಕೊಂಡುಕೊಳ್ಳಲು ಅಪೋಸ್ತಲರಿಗೆ ಹಣವನ್ನು ಕೊಡಲು ಹೋದನು: ಅಪೋಸ್ತಲರು ಜನರ ಮೇಲೆ ತಮ್ಮ ಕೈಗಳನ್ನಿಡುವಾಗ ಅವರು ಪವಿತ್ರಾತ್ಮನನ್ನು ಹೊಂದುತ್ತಿದ್ದರು (ವ. 18–19).

5. ಈ ಕಥೆಯಲ್ಲಿ ಸೀಮೋನನು ಅಪೋಸ್ತಲರಿಗೆ ಕೊನೆಯದಾಗಿ ಸಲ್ಲಿಸಿದ ಬೇಡಿಕೆ ಏನೆಂದರೆ, ತಾನು ಮಾಡಿದ ಪಾಪಕ್ಕಾಗಿ ದೇವರು ತನ್ನನ್ನು ಶಿಕ್ಷಿಸದಂತೆ ಅವರು ಯೇಸುವಿಗೆ ಪ್ರಾರ್ಥಿಸಬೇಕೆಂದು ಕೇಳಿಕೊಂಡನು (ವ. 24).

6. ಪೇತ್ರ ಮತ್ತು ಯೋಹಾನರು ಸಮಾರ್ಯವನ್ನು ಬಿಡುವುದಕ್ಕಿಂತ ಮುಂಚೆ ಆ ಪ್ರಾಂತ್ಯದಲ್ಲಿ ದೇವರ ವಾಕ್ಯವನ್ನು ಬೋಧಿಸಿದರು ಮತ್ತು ಉಪದೇಶಿಸಿದರು. ಅವರು ಯೆರೂಸಲೇಮಿಗೆ ಹಿಂತಿರುಗುವ ಮಾರ್ಗದಲ್ಲಿ ಸಮಾರ್ಯದ ಅನೇಕ ಹಳ್ಳಿಗಳಲ್ಲಿ ಸುವಾರ್ತೆಯನ್ನು ಸಾರಿದರು (ವ. 25).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೇತ್ರ ಮತ್ತು ಯೋಹಾನರನ್ನು ಯೆರೂಸಲೇಮಿನಲ್ಲಿದ್ದ ಅಪೋಸ್ತಲರು ಸಮಾರ್ಯಕ್ಕೆ ಯಾಕೆ ಕಳುಹಿಸಿದರೆಂಬುದನ್ನು ಲೂಕನು ತಿಳಿಸುತ್ತಿಲ್ಲ. ಅದಕ್ಕೆ ಮೂರು ಕಾರಣಗಳಿದ್ದಿರಬಹುದೆಂದು ನಾನು ಆಲೋಚಿಸುತ್ತೇನೆ:

    1) ಬಹುಶಃ ಯೆರೂಸಲೇಮಿನಲ್ಲಿದ್ದ ಅಪೋಸ್ತಲರು ಸಮಾರ್ಯದಲ್ಲಿ ನಡೆದ ಉಜ್ಜೀವನವು ನಿಜವಾದುದ್ದೋ ಎಂಬುದನ್ನು ತಿಳಿಯಲು ಬಯಸಿರಬಹುದು. ಸಮಾರ್ಯದವರಂತಹ ಜನರು ಸುವಾರ್ತೆಯನ್ನು ಸ್ವೀಕರಿಸಿದರೆಂದು ನಂಬಲು ಅವರಿಗೆ ಕಷ್ಟವಾಗಿದ್ದಿರಬಹುದು. 500 ವರ್ಷಗಳ ಹಿಂದೆ ಯೆಹೂದ್ಯರು ಬಾಬಿಲೋನಿನ ಸೆರೆವಾಸದಿಂದ ಹಿಂತಿರುಗಿದ ದಿನದಿಂದಲೂ ಸಮಾರ್ಯದವರ ಮತ್ತು ಯೆಹೂದ್ಯರ ನಡುವೆ ಒಂದು ವೈರತ್ವ ಮತ್ತು ದ್ವೇಷವಿತ್ತು. ಸಮಾರ್ಯದವರು ತಮ್ಮದೇ ಆದ ಧಾರ್ಮಿಕ ಆಚಾರಗಳನ್ನು ಹೊಂದಿದವರಾಗಿದ್ದರು.

    2) ಬಹುಶಃ ಯೆರೂಸಲೇಮಿನಲ್ಲಿದ್ದ ಸಭೆಯು ಕ್ರಿಸ್ತೀಯ ಚಳುವಳಿಯ 'ಪ್ರಧಾನ ಕಛೇರಿಯಾಗಿ' ಪರಿಗಣಿಸಲ್ಪಟ್ಟಿರಬಹುದು. ಅಪೋಸ್ತಲರು ಇನ್ನೂ ಅಲ್ಲಿಯೇ ಉಳಿದುಕೊಂಡಿದ್ದರು ಮತ್ತು ಹೊಸ ಸ್ಥಳಗಳಲ್ಲಿ ನಡೆದ ಸುವಾರ್ತಾ ಕಾರ್ಯವನ್ನು ಮತ್ತು ಹೊಸ ಸಭೆಗಳನ್ನು ಮೇಲ್ವಿಚಾರಣೆಯ ಜವಾಬ್ದಾರಿಯು ತಮ್ಮ ಮೇಲಿದೆ ಎಂದು ಅವರು ಭಾವಿಸಿದರು.

    3) ಬಹುಶಃ ಅಪೋಸ್ತಲರು ಫಿಲಿಪ್ಪನ ಕುರಿತಾಗಿ ಮತ್ತು ಆತನ ಸಾಮರ್ಥ್ಯದ ಕುರಿತಾಗಿ ಅಷ್ಟು ಭರವಸೆಯನ್ನು ಹೊಂದಿಲ್ಲದೆ ಇದ್ದಿರಬಹುದು. ಇದಕ್ಕಿಂತ ಮುಂಚೆ ಆತನು ಯೆರೂಸಲೇಮಿನಲ್ಲಿ ಸಾಮಾಜಿಕ ಸೇವೆಯಲ್ಲಿ ತೊಡಗಿದ್ದನು, ಆದರೆ ಈಗ ಆತನು ಸುವಾರ್ತಿಕನಾಗಿ ಮತ್ತು ಸಮಾರ್ಯದಲ್ಲಿ ಒಬ್ಬ ಸಭಾ ಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಬಹುಶಃ ಅಲ್ಲಿರುವ ವಿಶ್ವಾಸಿಗಳು ಇನ್ನೂ ಪವಿತ್ರಾತ್ಮನಿಂದ ದೀಕ್ಷಾಸ್ನಾನವನ್ನು ಹೊಂದಿಲ್ಲವೆಂಬುದನ್ನೂ ಅವರು ಕೇಳಿದ್ದಿರಬಹುದು.

2. ಸಮಾರ್ಯದ ವಿಶ್ವಾಸಿಗಳಿಗೆ ಪವಿತ್ರಾತ್ಮನು ಕೊಡಲ್ಪಟ್ಟಾಗ ಸೀಮೋನನನು ವಾಸ್ತವವಾಗಿ ಏನು ನೋಡಿದನೆಂಬುದರ ಕುರಿತು ಲೂಕನು ಏನನ್ನೂ ತಿಳಿಸುತ್ತಿಲ್ಲ, ಆದರೆ 'ಅಪೋಸ್ತಲರು ತಮ್ಮ ಕೈಗಳನ್ನಿಡಲು ಪವಿತ್ರಾತ್ಮ ಕೊಡಲ್ಪಟ್ಟದ್ದನ್ನು ಸೀಮೋನನು ನೋಡಿದನು' ಎಂಬುದು ಮಾತ್ರ ಹೇಳಲ್ಪಟ್ಟಿದೆ (ವ. 18). ಹಾಗಾಗಿ ಯಾವುದಾದರೂ ಒಂದು ರೀತಿಯ ಪುರಾವೆಯು ಕಂಡಿರಲೇಬೇಕು. ಬಹುತೇಕವಾಗಿ ಸಮಾರ್ಯದವರು ಅನ್ಯ ಭಾಷೆಯಲ್ಲಿ ಮಾತನಾಡಿದ್ದನ್ನು ಸೀಮೋನನು ಕೇಳಿರಬಹುದು (ಹೋಲಿಸಿರಿ ಅ. ಕೃ. 2:4; 10:46 ಮತ್ತು 19:6).

4. ಸೀಮೋನನ ನಂಬಿಕೆಯು ನಿಜವಾದುದ್ದೋ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಕಷ್ಟವಾಗಿದೆ:

    - ವಚನ 13 ರಲ್ಲಿ 'ಸೀಮೋನನು ಸಹ ವಿಶ್ವಾಸವಿಟ್ಟು ದೀಕ್ಷಾಸ್ನಾನವನ್ನು ಹೊಂದಿದನು' ಎಂದು ಬರೆದಿದೆ. ಈ ಹೇಳಿಕೆಯು ನಿಜವಾದ ಸಂಗತಿಯ ಕುರಿತು ಮಾತನಾಡುತ್ತದೆ.

ನಿಜವಾಗಿ ವಿಶ್ವಾಸವಿಡದಂತಹ ಮತ್ತು ಸುವಾರ್ತೆಯನ್ನು ಯಥಾರ್ಥವಾಗಿ ಸ್ವೀಕರಿಸದಂತಹ ಒಬ್ಬ ವ್ಯಕ್ತಿಗೆ ಫಿಲಿಪ್ಪನು ದೀಕ್ಷಾಸ್ನಾನ ಮಾಡಿಸುವುದನ್ನು ನಾವು ಖಂಡಿತವಾಗಲೂ ಎಂದಿಗೂ ಊಹಿಸಲಾಗುವುದಿಲ್ಲ.

- ಮತ್ತೊಂದೆಡೆ, ಸೀಮೋನನು ಅಪೊಸ್ತಲರು ಹೊಂದಿದ ವರವನ್ನು ತಾನೂ ಹೊಂದಿಕೊಳ್ಳಲು ಅವರಿಗೆ ಹಣವನ್ನು ಕೊಡಲು ಹೋದಾಗ, ಆತನ ಹೃದಯವು ದೇವರ ದೃಷ್ಟಿಯಲ್ಲಿ ಸರಿಯಾಗಿಲ್ಲವೆಂದು ಪೇತ್ರನು ಅವನಿಗೆ ಹೇಳುತ್ತಾನೆ (ವ. 21). ಅದಲ್ಲದೆ, ಆದಿಸಭೆಯ ಇತಿಹಾಸದಲ್ಲಿ ಸೀಮೋನನ ಕುರಿತು ಯಾವ ಒಳ್ಳೆಯ ಸಂಗತಿಯೂ ಬರೆಯಲ್ಪಟ್ಟಿಲ್ಲ. ಆತನ ಹೆಸರು 'ಸೈಮನಿ' ಎಂಬ ಪದದ ಮೂಲವೂ ಸಹ ಆಗಿದೆ, ಸೈಮನಿ ಎಂದರೆ ಕ್ಯಾಥೋಲಿಕ್ ಸಭೆಯ ಹಳೆಯ ಕಾಲದಲ್ಲಿ ಪ್ರಚಲಿತವಿದ್ದ ಒಂದು ಭಯಂಕರ ಆಚರಣೆಯಾಗಿತ್ತು, ಅಂದರೆ ಸಭಾ ಹಕ್ಕುಗಳ, ಉದಾಹರಣೆಗೆ 'ಪಾಪ ಕ್ಷಮಾಪಣೆಯ ಮಾರಾಟ' ನಡೆಯುತ್ತಿತ್ತು. ಅದಲ್ಲದೆ, ಈ ವಾಕ್ಯಭಾಗದಲ್ಲಿ ಸೀಮೋನನ ಕೊನೆಯ ಮಾತುಗಳು ಯಥಾರ್ಥವಾಗಿ ಕೇಳಿಬರುತ್ತಿಲ್ಲ: ಕ್ಷಮಾಪಣೆ ಹೊಂದುವಂತೆ 'ಈ ದುಷ್ಟತನಕ್ಕಾಗಿ ಮನಸಾಂತರಪಟ್ಟು ಕರ್ತನನ್ನು ಬೇಡಿಕೋ' (ವ. 22) ಎಂಬುದಾಗಿ ಆತನಿಗೆ ಪೇತ್ರನು ಸ್ಪಷ್ಟವಾಗಿ ಹೇಳಿದಾಗ್ಯೂ ತನಗಾಗಿ ಪ್ರಾರ್ಥಿಸುವಂತೆ ಆತನು ಯಾಕೆ ಪೇತ್ರನನ್ನು ಕೇಳಿಕೊಂಡನು (ವ. 24)?

- ಸೀಮೋನನ ಮಾನಸಾಂತರವು ನಿಜವಾದದ್ದು ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಆತನು ಫಿಲಿಪ್ಪನು ಸಾರಿದ ಸುವಾರ್ತೆಯನ್ನು ನಿಜವಾಗಲೂ ಅಂಗೀಕರಿಸಿದ್ದನು ಮತ್ತು ದೀಕ್ಷಾಸ್ನಾನ ಹೊಂದುವುದಕ್ಕಿಂತ ಮುಂಚೆ ಆತನು ಯೇಸು ಕ್ರಿಸ್ತನನ್ನು ತನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡಿದ್ದನು. ಆದರೆ ಸೀಮೋನನು ಬಲಹೀನ ಮತ್ತು ಪ್ರಾಪಂಚಿಕವಾದ ವಿಶ್ವಾಸಿಯಾಗಿದ್ದನು. ಫಿಲಿಪ್ಪನು ನಡೆಸಿದ ಹಾಗೂ ಪೇತ್ರ ಮತ್ತು ಯೋಹಾನರು ತಮ್ಮ ಕೈಗಳನ್ನು ಜನರ ಮೇಲೆ ಇಟ್ಟಾಗ ಉಂಟಾದ ಅದ್ಭುತ ಮತ್ತು ಸೂಚಕ ಕಾರ್ಯಗಳನ್ನು ನೋಡಿದ ಆತನು ಎಷ್ಟು ಪ್ರಭಾವಿತನಾದನೆಂದರೆ ತನ್ನ ಮಂತ್ರ ತಂತ್ರದ ಹಳೆಯ ಜೀವನವು ಪುನಃ ಕೆರಳಿತು. ಆತನು ಪೇತ್ರ, ಯೋಹಾನ ಮತ್ತು ಫಿಲಿಪ್ಪರಂತೆ ದೇವರ ರಾಜ್ಯದಲ್ಲಿ ಒಬ್ಬ 'ಮಹಾವ್ಯಕ್ತಿಯಾಗಲು' ಬಯಸಿದನು. ಹಾಗಾಗಿ ಆತನು ತನ್ನ ನಂಬಿಕೆಯ ಸರಿಯಾದ ದೃಷ್ಟಿಕೋನವನ್ನು ಕಳೆದುಕೊಂಡನು. ಯೇಸು ಕ್ರಿಸ್ತನನ್ನು ಮೇಲಕ್ಕೆತ್ತುವುದರ ಬದಲಾಗಿ ಆತನು ತನ್ನನ್ನು ತಾನೇ ಹೆಚ್ಚಿಸಿಕೊಳ್ಳಲು ಬಯಸಿದನು. ನಾನು ಇನ್ನೂ ಆಲೋಚಿಸುವುದೇನೆಂದರೆ, ಈ ಕಥೆಯಲ್ಲಿ ಆತನು ಆಡಿದ ಕೊನೆಯ ಮಾತುಗಳು ಆತನು ಪಶ್ಚಾತಾಪ ಪಟ್ಟು ದೇವರ ಕಡೆಗೆ ತಿರುಗಿಕೊಳ್ಳಲು ಮನಸ್ಸಿಲ್ಲದವನಾಗಿದ್ದನೆಂಬುದನ್ನು ತೋರಿಸುತ್ತವೆ. ಹಾಗಾಗಿ, ಸಭಾ ಇತಿಹಾಸದಲ್ಲಿ ದಾಖಲಾದಂತೆ, ಆತನು ದೇವರ ರಾಜ್ಯದ ಒಬ್ಬ ವೈರಿಯೂ, ಒಬ್ಬ ಧರ್ಮಭ್ರಷ್ಟನೂ ಮತ್ತು ಒಬ್ಬ ಸುಳ್ಳುಬೋಧಕನೂ ಆದನು.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಬ್ಯಾಪ್‌ಟಿಸ್ಟ್ ಮತ್ತು ಬ್ರದರನ್ ವಿಶ್ವಾಸಿಗಳು ಪವಿತ್ರಾತ್ಮನಲ್ಲಿ ನಂಬಿಕೆ ಇಡುವುದಿಲ್ಲವೆಂದು ಹೇಳುವಂತಹದ್ದು ತಪ್ಪು ಎಂದು ನಾನು ವೈಯಕ್ತಿಕವಾಗಿ ಆಲೋಚಿಸುತ್ತೇನೆ.

   ನೀವು ಅವರ 'ನಂಬಿಕೆಯ ಘೋಷಣೆಗಳನ್ನು' ಅಥವಾ ದೈವಸಿದ್ಧಾಂತದ ಪಠ್ಯಪುಸ್ತಕಗಳನ್ನು ನೋಡುವುದಾದರೆ, ಅವರು ತಂದೆ ಮಗ ಪವಿತ್ರಾತ್ಮನಲ್ಲಿ ನಂಬಿಕೆಯಿಡುವುದನ್ನು ಕಾಣಬಹುದು. ಒಬ್ಬನು ರಕ್ಷಿಸಲ್ಪಡುವಾಗ ಆತನು ಆತ್ಮನಿಂದ ಹುಟ್ಟುತ್ತಾನೆಂದೂ (ಮತ್ತು ಆತ್ಮನನ್ನು ಹೊಂದಿಕೊಳ್ಳುತ್ತಾನೆಂದೂ) ಸಹ ನಂಬುತ್ತಾರೆ. ವಿಶ್ವಾಸಿಗಳು ಆತ್ಮನಿಂದ ನಡೆಸಲ್ಪಟ್ಟವರಾಗಿ ಆತ್ಮನ ಫಲಗಳನ್ನು ಫಲಿಸಬೇಕೆಂಬುದರ ಮೌಲ್ಯತೆಯನ್ನು ಅವರೂ ಸಹ ನಂಬುತ್ತಾರೆ. ಹಾಗಾಗಿ ಅವರು ಖಂಡಿತವಾಗಲೂ ಪವಿತ್ರಾತ್ಮನಲ್ಲಿ ನಂಬಿಕೆಯಿಡುತ್ತಾರೆ.

   ಆದರೆ ಅವರಲ್ಲಿ ಅನೇಕರು ನಂಬದೇ ಇರುವ ಸಂಗತಿಯೇನೆಂದರೆ, ಪೆಂತಕೋಸ್ತರಾದ ನಾವು ಕರೆಯುವಂತಹ 'ಪವಿತ್ರಾತ್ಮನ ದೀಕ್ಷಾಸ್ನಾನ' ಮತ್ತು ಈ 'ಪವಿತ್ರಾತ್ಮನ ದೀಕ್ಷಾಸ್ನಾನದ' ಪುರಾವೆಯಾಗಿ ಮಾತನಾಡುವ ಅನ್ಯಭಾಷೆ. ಪವಿತ್ರಾತ್ಮನ ಪ್ರಕಟಣೆಗಳು ಹೊಸ ಒಡಂಬಡಿಕೆಯ ದಿನಗಳಿಗಾಗಿ ಮಾತ್ರ ಮತ್ತು ಸತ್ಯವೇದದ ಕೊನೆಯ ಪುಸ್ತಕ ಬರೆಯಲ್ಪಟ್ಟಾಗ ಈ ಪ್ರಕಟನೆಗಳು ನಿಂತುಹೋದವು ಎಂದು ಅವರು ಸಾಮಾನ್ಯವಾಗಿ ಹೇಳುತ್ತಾರೆ. ಹಾಗಾಗಿ ಅನ್ಯ ಭಾಷೆಯಲ್ಲಿ ಮಾತನಾಡುವಂತಹದ್ದು ಈಗಿನ ವಿಶ್ವಾಸಿಗಳಿಗೆ ಅಲ್ಲ ಎಂಬುದಾಗಿ ಅವರು ಘೋಷಿಸುತ್ತಾರೆ.

   (ಬ್ಯಾಪ್‌ಟಿಸ್ಟ್ ಮತ್ತು ಬ್ರದರನ್ ಸಭೆಗಳಲ್ಲಿ ಆಗ್ಗಾಗೆ ಕಂಡುಬರುವ) ಇಂತಹ ರೀತಿಯ ಸಿದ್ಧಾಂತಗಳು ಖಂಡಿತವಾಗಲೂ ತಪ್ಪಾದದ್ದು. ಪವಿತ್ರಾತ್ಮನು ಪ್ರವಾದನೆಗಳು, ಸ್ವಸ್ಥತೆಯ ಅದ್ಭುತಗಳು, ಅನ್ಯ ಭಾಷೆಗಳನ್ನು ಮಾತನಾಡುವಂತಹ ಆತ್ಮೀಕ ಪ್ರಕಟನೆಗಳೊಂದಿಗೆ – ಹೊಸ ಒಡಂಬಡಿಕೆಯ ದಿನಗಳಲ್ಲಿ ಕಾರ್ಯಮಾಡುತ್ತಿದ್ದಂತೆಯೇ – ಈ ದಿನಗಳಲ್ಲಿಯೂ ಸಭೆಗಳಲ್ಲಿ ಕಾರ್ಯಮಾಡುತ್ತಿದ್ದಾನೆ.

# ಉ 21. ಫಿಲಿಪ್ಪ ಹಾಗೂ ಇಥಿಯೋಪ್ಯದವನು, 8:26–40

## ಇ) ಪಠ್ಯ ಪ್ರಶ್ನೆಗಳು

1. ಫಿಲಿಪ್ಪನು ಯೆರೂಸಲೇಮಿನ ಮತ್ತು ಗಾಜಾದ ಮಧ್ಯದಲ್ಲಿದ್ದ ಅರಣ್ಯ ರಸ್ತೆಯ ಕಡೆಗೆ ಹೋಗಲು ಹೇಳಿದ್ದು 'ಒಬ್ಬ ದೇವದೂತನು' (ವ. 26).

2. ವ. 27–28 ರಲ್ಲಿ ಇಥಿಯೋಪ್ಯದವನ ಕುರಿತು ನಾವು ಈ ಕೆಳಗಿನವುಗಳನ್ನು ಕಲಿಯುತ್ತೇವೆ:

   - ಈತನು ಆ ದಿನಗಳಲ್ಲಿ ಇಥಿಯೋಪ್ಯ ಎಂದು ಕರೆಯಲ್ಪಡುವ ರಾಷ್ಟ್ರದಿಂದ ಬಂದಂತವನಾಗಿದ್ದನು. ಇದು ಈಜಿಪ್ಟಿನ ದಕ್ಷಿಣ ಭಾಗದಲ್ಲಿತ್ತು.
   - ಈತನು ಒಬ್ಬ ಕಂಚುಕಿಯಾಗಿದ್ದನು, ಅಂದರೆ ನಪುಂಸಕನಾಗಿ ಮಾಡಲ್ಪಟ್ಟಿದ್ದನು.
   - ಈತನು ಇಥಿಯೋಪ್ಯದ ರಾಣಿಮಾತೆಯ (ಆಕೆಯ ಶಿರೋನಾಮ 'ಕಂದಾಕಿ' ಎಂಬುದು) ಆಸ್ಥಾನದಲ್ಲಿ ಒಬ್ಬ 'ಹಣಕಾಸಿನ ಅಧಿಕಾರಿಯಾಗಿ' (ಆತನು ಖಜಾನೆಯ ಜವಾಬ್ದಾರಿಯುಳ್ಳವನಾಗಿದ್ದನು) ಕಾರ್ಯನಿರ್ವಹಿಸುತ್ತಿದ್ದನು.
   - ಈತನು ದೈವಭಯವುಳ್ಳ ಮನುಷ್ಯನು, ಈತನು ಯೆರೂಸಲೇಮಿನ ದೇವಾಲಯದಲ್ಲಿ ದೇವರನ್ನು ಆರಾಧಿಸುವುದಕ್ಕಾಗಿ ದೂರದಲ್ಲಿದ್ದ ಆಫ್ರಿಕಾದಿಂದ ಪ್ರಯಾಣಿಸಿದನು.
   - ಈತನು ಈಗ ಯೆರೂಸಲೇಮಿನಿಂದ ತನ್ನ ಮನೆಯ ಕಡೆಗೆ ಹೊರಡುತ್ತಿದ್ದನು.
   - ಈತನು ಒಬ್ಬ ಶ್ರೀಮಂತ ವ್ಯಕ್ತಿಯಾಗಿದ್ದನು, ಯಾಕೆಂದರೆ ಈತನು ತನ್ನ ಸ್ವಂತ ರಥದಲ್ಲಿ ಪ್ರಯಾಣಿಸುತ್ತಿದ್ದನು ಮತ್ತು ಹಳೆ ಒಡಂಬಡಿಕೆಯ ಯೆಶಾಯನ ಗ್ರಂಥದ ಸ್ವಂತ ನಕಲನ್ನು ಹೊಂದಿದವನಾಗಿದ್ದನು. ಬಹುಶಃ ಆತನು ಆ ಸುರುಳಿಯನ್ನು ನೆನಪಿನ ಕಾಣಿಕೆಯಾಗಿ ಯೆರೂಸಲೇಮಿನಲ್ಲಿ ಕೊಂಡುಕೊಂಡಿದ್ದಿರಬಹುದು.
   - ಆತನು ಓದಲು ಬಲ್ಲವನಾಗಿದ್ದನು (ಆ ದಿನಗಳಲ್ಲಿ ಎಲ್ಲರಿಗೂ ಗಟ್ಟಿಯಾಗಿ ಓದುವ ಅಭ್ಯಾಸವಿದ್ದಂತೆ ಆತನೂ ಗಟ್ಟಿಯಾಗಿ ಓದಿದನು) ಮತ್ತು ಈ ಹಳೆ ಒಡಂಬಡಿಕೆಯ ಪಠ್ಯದಲ್ಲಿ ಆತನು ಬಹಳ ಆಸಕ್ತಿಯುಳ್ಳವನಾಗಿದ್ದನೆಂಬುದು ಕಾಣುತ್ತದೆ.

3. ಫಿಲಿಪ್ಪನಿಗೆ ರಥದ ಹತ್ತಿರ ಹೋಗಲು ಹೇಳಿದ್ದು ಪವಿತ್ರಾತ್ಮನು.

4. ಇಥಿಯೋಪ್ಯದವನು ಹಳೆ ಒಡಂಬಡಿಕೆಯ ಯೆಶಾಯನ ಗ್ರಂಥದಿಂದ 53 ನೇ ಅಧ್ಯಾಯವನ್ನು ಓದುತ್ತಿದ್ದನು. ಈ ಪಠ್ಯವನ್ನು ಯೇಸು ಕ್ರಿಸ್ತನು ತನ್ನ ಕುರಿತಾಗಿರುವ ಶ್ರಮೆಯನ್ನನುಭವಿಸುವ

ಮೆಸ್ಸೀಯನ ಪ್ರವಾದನೆ ಎಂದು ಅರ್ಥವಿವರಿಸಿದನು. ಫಿಲಿಪ್ಪನು ಇಥಿಯೋಪ್ಯದವನಿಗೆ ಸುವಾರ್ತೆಯನ್ನು ಸಾರಲು ಈ ಪಠ್ಯವನ್ನು ಉಪಯೋಗಿಸಿದನು.

5. ವ. 36 ಮತ್ತು 38–39 ರಲ್ಲಿ 'ದೀಕ್ಷಾಸ್ನಾನದ ಕೂಟವು' ಈ ರೀತಿಯಾಗಿ ವಿವರಿಸಲ್ಪಟ್ಟಿದೆ:

- ಫಿಲಿಪ್ಪನು ದೀಕ್ಷಾಸ್ನಾನ ಮಾಡಿಸುವಂತೆ ಕೇಳಿಕೊಂಡಿದ್ದು ಸ್ವತಃ ಇಥಿಯೋಪ್ಯದವನೇ.
- ಇಥಿಯೋಪ್ಯದವನು ಮತ್ತು ಫಿಲಿಪ್ಪರಿಬ್ಬರೂ ನೀರಿನಲ್ಲಿ ಇಳಿದರು. ಹಾಗಾಗಿ ಅಲ್ಲಿ ಬಹಳ ನೀರು ಇದ್ದಿರಬಹುದು.
- ಇಥಿಯೋಪ್ಯದವನಿಗೆ ಫಿಲಿಪ್ಪನು ದೀಕ್ಷಾಸ್ನಾನ ಮಾಡಿಸಿದನು. ಆ ಸನ್ನಿವೇಶ ಹಿನ್ನಲೆಯು ಮುಳುಗಡೆಯ ದೀಕ್ಷಾಸ್ನಾನವನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

2. ಅಪೋಸ್ತಲರ ಕೃತ್ಯಗಳಲ್ಲಿ ಇದು ಮೊದಲ ಒಂದು ವ್ಯಕ್ತಿಗತ ಮಾನಸಾಂತರದ ಕಥೆಯಾಗಿದೆ. ಹಿಂದಿನ ಎಲ್ಲಾ ಕಥೆಗಳು ಜನರು ಸುವಾರ್ತೆಯನ್ನು ಗುಂಪು ಗುಂಪಾಗಿ ಅಂಗೀಕರಿಸಿದ್ದರ ಕುರಿತಾಗಿದೆ.

3. ನಾನು ವೈಯಕ್ತಿಕವಾಗಿ ಆಲೋಚಿಸುವುದೇನೆಂದರೆ, ಇಥಿಯೋಪ್ಯದ ಕಂಚುಕಿಯು ದೇವಭಯವುಳ್ಳ ವ್ಯಕ್ತಿಯಾಗಿದ್ದನೇ ಹೊರತು ಯೆಹೂದ್ಯನಾಗಿರಲಿಲ್ಲ. ನಮಗೆ ತಿಳಿದಿರುವ ಮಟ್ಟಿಗೆ, ಈ ಸಮಯದಲ್ಲಿ ನಪುಂಸಕರಾಗಿ ಮಾಡಲ್ಪಟ್ಟ ವ್ಯಕ್ತಿಗಳನ್ನು ಯೆಹೂದ್ಯ ಸಮುದಾಯದಲ್ಲಿ ಸಂಪೂರ್ಣವಾಗಿ ಅಂಗೀಕರಿಸಿಕೊಳ್ಳುತ್ತಿದ್ದಿಲ್ಲ. ಹಾಗಾಗಿ ಇಥಿಯೋಪ್ಯದವನ ಕುರಿತಾದಂತಹ ಈ ಕಥೆಯು ಯೆಶಾಯ 58:3–5 ರಲ್ಲಿರುವ ಪ್ರವಾದನೆಯ ನೇರವೇರಲ್ಪಡುವಿಕೆಯಾಗಿದೆ ಎಂಬ ಅಭಿಪ್ರಾಯದೊಂದಿಗೆ ನಾನು ಒಪ್ಪಿಕೊಳ್ಳುತ್ತೇನೆ. ಯೇಸು ತಂದ ಹೊಸ ಒಡಂಬಡಿಕೆಯು ನಪುಂಸಕರಾಗಿ ಮಾಡಲ್ಪಟ್ಟ ವ್ಯಕ್ತಿಗಳನ್ನೂ ಸಹ ಸ್ವಾಗತಿಸುತ್ತದೆ.

ಹಾಗಾಗಿ ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದ ಮೊದಲ ಅನ್ಯಮತಸ್ಥನು ಕೊರ್ನೇಲ್ಯ ಮತ್ತು ಆತನ ಕುಟುಂಬದವರಲ್ಲ (ಅ. ಕೃ. 10 ಮತ್ತು 11), ಬದಲಾಗಿ ಇಥಿಯೋಪ್ಯದ ಕಂಚುಕಿಯೇ ಎಂದು ನಾನು ಆಲೋಚಿಸುತ್ತೇನೆ. ವಾಸ್ತವಿಕವಾಗಿ ಹೇಳಬೇಕಾದರೆ, ಕೊರ್ನೇಲ್ಯನು ಮಾನಸಾಂತರ ಹೊಂದಿದ ಮೊದಲ ಅನ್ಯಮತಸ್ಥನೆಂದು ಲೂಕನು ಎಲ್ಲಿಯೂ ಹೇಳುತ್ತಿಲ್ಲ. ಯೆರೂಸಲೇಮಿನ ಸಮ್ಮೇಳನದಲ್ಲಿ ಇದನ್ನು ಘೋಷಿಸಿದ್ದು ಪೇತ್ರನಾಗಿದ್ದಾನೆ: 'ಸಹೋದರರೇ, ಅನ್ಯರು ನನ್ನ ಬಾಯಿಂದ ಸುವಾರ್ತೆಯ ವಾಕ್ಯವನ್ನು ಕೇಳಿ ನಂಬಬೇಕೆಂಬ ಉದ್ದೇಶದಿಂದ ನಿಮ್ಮೊಳಗಿಂದ ನನ್ನನ್ನು ದೇವರು ಬಹುದಿನಗಳ ಹಿಂದೆ ಆಯ್ದುಕೊಂಡನೆಂಬುದು ನಿಮಗೆ ತಿಳಿದೇ ಇದೆ' (ಅ. ಕೃ. 15:7).

ಫಿಲಿಪ್ಪನು ಇಥಿಯೋಪ್ಯದವನನ್ನು ಸಂಧಿಸಿದ್ದರ ಕುರಿತು ಪೇತ್ರನಿಗೆ ಸ್ವಲ್ಪವೂ ಮಾಹಿತಿ ಇಲ್ಲದಿರುವುದು ಸಾಧ್ಯ. ಹಾಗಾಗಿ ಅಧ್ಯಾಯ 8 ರಲ್ಲಿರುವ ಇಥಿಯೋಪ್ಯದವನ ಕುರಿತ ಕಥೆಯನ್ನು ಮತ್ತು ಅಧ್ಯಾಯ 15 ರಲ್ಲಿರುವ ಪೇತ್ರನ ಸಾಕ್ಷಿಯನ್ನು ಓದುವಾಗ ಅವುಗಳ ನಡುವೆ ಯಾವುದೇ ತದ್ವಿರೋಧತೆಯನ್ನು ತರುವ ಅಗತ್ಯತೆ ಇಲ್ಲ.

4. ಇಥಿಯೋಪ್ಯದವನಿಗೆ ದೇವರು ಎರಡು ವರಗಳನ್ನು ಕೊಟ್ಟನೆಂದು ನಾವು ಹೇಳಬಹುದು: ಮೊದಲನೆಯದಾಗಿ, ದೇವರು ಆತನಿಗೆ ಯೆಶಾಯನ ಗ್ರಂಥದ ಸುರುಳಿಯನ್ನು ಕೊಟ್ಟನು. ನಂತರ ದೇವರು ಆತನಿಗೆ ತನ್ನ ವಾಕ್ಯವನ್ನು ವಿವರಿಸಲು ಒಬ್ಬ ಉಪದೇಶಕನಾಗಿ ಫಿಲಿಪ್ಪನನ್ನು ಕೊಟ್ಟನು. ಇದರಂತೆಯೇ, ದೇವರು ನಮಗೆ – ವೈಯಕ್ತಿಕವಾಗಿಯೂ ಮತ್ತು ಸಭೆಯಾಗಿಯೂ – ಆತನ ವಾಕ್ಯವಾದ ಸತ್ಯವೇದವನ್ನು ಕೊಟ್ಟಿದ್ದಾನೆ. ಅದಲ್ಲದೆ ಆತನು ನಮಗೆ ಸತ್ಯವೇದದ ಬೋಧಕರನ್ನು ಸಹ ಕೊಟ್ಟಿದ್ದಾನೆ. ನಮಗಾಗಿ ಸತ್ಯವೇದವನ್ನು ತೆರೆಯಬಲ್ಲ, ದೇವರ ವಾಕ್ಯವನ್ನು ನಮಗೆ ವಿವರಿಸಿಬಲ್ಲ ಮತ್ತು ಸತ್ಯವೇದದ ಉಪದೇಶಗಳನ್ನು ನಮ್ಮ ದಿನನಿತ್ಯದ ಜೀವಿತಗಳಲ್ಲಿ ಅಳವಡಿಸಿಕೊಳ್ಳಲು ನಮಗೆ ಸಹಾಯ ಮಾಡಬಲ್ಲ ಸತ್ಯವೇದ ಉಪದೇಶಕರನ್ನೂ ನಮಗೆ ಕೊಟ್ಟಿದ್ದಾನೆ.

5. ಅ. ಕೃ. 8 ರಲ್ಲಿರುವ ಫಿಲಿಪ್ಪನ ಮತ್ತು ಆತನ ಸೇವೆಯ ಕುರಿತಾದ ಎರಡು ಕಥೆಗಳನ್ನು – ಅಂದರೆ, ಸಮಾರ್ಯದಲ್ಲಿನ ಆತನ ಸೇವೆಯನ್ನು (ವ. 4–25) ಮತ್ತು ಇಥಿಯೋಪ್ಯದವನಿಗೆ ಮಾಡಿದ ಆತನ ಸೇವೆಯನ್ನು (ವ. 26–40) ಹೋಲಿಕೆ ಮಾಡಿರಿ. ಹೋಲಿಕೆಗಳೇನು? ವ್ಯತ್ಯಾಸಗಳೇನು?

1. ಹೋಲಿಕೆಗಳು:

   - ಇಬ್ಬರಲ್ಲೂ ಒಂದೇ ಮುಂಚೂಣಿ ಆತ್ಮ: ಫಿಲಿಪ್ಪನು ಒಬ್ಬ ನಿಜವಾದ ಸುವಾರ್ತಿಕನಾಗಿದ್ದನು, ಆತನು ಹೋದಲ್ಲೆಲ್ಲಾ ಸುವಾರ್ತೆಯನ್ನು ಸಾರಲು ಸಿದ್ಧನಿದ್ದನು.
   - ಒಂದೇ ಸಂದೇಶ: ಯೇಸು ಕ್ರಿಸ್ತನ ಕುರಿತಾದ ಶುಭಸಂದೇಶ (ವ. 12, 35)
   - ಒಂದೇ ಪ್ರತಿಕ್ರಿಯೆ: ಕೇಳಿದವರೆಲ್ಲರೂ ನಂಬಿದರು ಮತ್ತು ದೀಕ್ಷಾಸ್ನಾನ ಮಾಡಿಕೊಂಡರು (ವ. 12, 36–38)
   - ಒಂದೇ ಫಲಿತಾಂಶವು ದಾಖಲಿಸಲ್ಪಟ್ಟಿದೆ: ಸಂತೋಷ (ವ. 8, 39)

2. ವ್ಯತ್ಯಾಸಗಳು:

   - ಅಪೋಸ್ತಲರಾದ ಪೇತ್ರ ಮತ್ತು ಯೋಹಾನರು ಯೆರೂಸಲೇಮಿನಿಂದ 'ತಪಾಸಣಾ ಸಂದರ್ಶನಕ್ಕಾಗಿ' ಬಂದದ್ದು ಸಮಾರ್ಯದಲ್ಲಿ ಮಾತ್ರ.

- ಹೊಸ ವಿಶ್ವಾಸಿಗಳ ಮೇಲೆ ಪವಿತ್ರಾತ್ಮನು ಬರುವಂತೆ ಕೈಗಳನ್ನಿಟ್ಟು ಪ್ರಾರ್ಥಿಸಿದ್ದು ಸಮಾರ್ಯದಲ್ಲಿ ಮಾತ್ರ.

- ಸುವಾರ್ತಿಕರಿಸಲ್ಪಟ್ಟ ಜನರು ವ್ಯತ್ಯಾಸವುಳ್ಳವರಾಗಿದ್ದರು:

  - ಜನಾಂಗೀಯವಾಗಿ: ಸಮಾರ್ಯದ ಜನರು ಮಿಶ್ರ ಜನಾಂಗದವರಾಗಿದ್ದರು (ಅರ್ಧ-ಯೆಹೂದ್ಯ, ಅರ್ಧ-ಅನ್ಯಮತಸ್ಥ) ಮತ್ತು ಯೆಹೂದ್ಯರಿಂದ ತಿರಸ್ಕರಿಸಲ್ಪಟ್ಟಿದ್ದರು. ಇಥಿಯೋಪ್ಯದವನು ದೂರ ದೇಶದಿಂದ ಬಂದಿದ್ದ ಒಬ್ಬ ಕಪ್ಪು ಆಫ್ರಿಕಾದವನಾಗಿದ್ದನು.

  - ಸಾಮಾಜಿಕ ಸ್ಥಾನಮಾನದಲ್ಲಿ: ಬಹುಶಃ ಸಮಾರ್ಯದವರು ಸಾಮಾನ್ಯ ಜನರಾಗಿದ್ದರು; ಇಥಿಯೋಪ್ಯದವನು ತನ್ನ ದೇಶದ ಹಣಕಾಸಿನ ಮಂತ್ರಿಯಾಗಿದ್ದು ಒಂದು ಉನ್ನತ ಹುದ್ದೆಯಲ್ಲಿದ್ದನು.

  - ಧಾರ್ಮಿಕವಾಗಿ: ಸಮಾರ್ಯದವರು ಮೋಶೆಯ ಧರ್ಮಶಾಸ್ತ್ರವನ್ನು ನಂಬುತ್ತಿದ್ದರು, ಆದರೆ ಹಳೆ ಒಡಂಬಡಿಕೆಯ ಪ್ರವಾದಿಗಳನ್ನು ತಿರಸ್ಕರಿಸಿದ್ದರು ಮತ್ತು ಯೆಹೂದ್ಯತ್ವವನ್ನು ಸ್ವೀಕರಿಸಿರಲಿಲ್ಲ; ಇಥಿಯೋಪ್ಯದವನು ದೈವಭಯವುಳ್ಳ ವ್ಯಕ್ತಿಯಾಗಿದ್ದನು ಮತ್ತು ಯೆಹೂದ್ಯತ್ವದೊಂದಿಗೆ ಬಹಳ ಬಲವಾದ ಬಾಂಧವ್ಯವನ್ನು ಹೊಂದಿದ್ದನು (ಆತನು ಆರಾಧನೆಗಾಗಿ ಯೆರೂಸಲೇಮಿಗೆ ಹೋಗಿದ್ದನು)

- ಸುವಾರ್ತಿಕರಣದ ವಿಧಾನಗಳು:

  - ಸಮಾರ್ಯದಲ್ಲಿ ಗುಂಪು ಸುವಾರ್ತಿಕತೆ

  - ಇಥಿಯೋಪ್ಯದವನೊಂದಿಗೆ ವೈಯಕ್ತಿಕ ಸುವಾರ್ತಿಕತೆ

## ಉ 22. ಸೌಲನ ಪರಿವರ್ತನೆ, 9:1–19

### ಇ) ಪಠ್ಯ ಪ್ರಶ್ನೆಗಳು

1. ಸೌಲನು ಪರಿಚಯ ಪತ್ರವನ್ನು ಪಡೆಯಲು ಮತ್ತು ದಮಸ್ಕದಲ್ಲಿರುವ ಸಭಾಮಂದಿರಗಳಿಗೆ ಹೋಗಿ ಅಲ್ಲಿರುವ ವಿಶ್ವಾಸಿಗಳನ್ನು ಬಂಧಿಸಿ ಅವರನ್ನು ನ್ಯಾಯವಿಚಾರಣೆಗಾಗಿ ಮತ್ತು ದಂಡನೆಗಾಗಿ ಯೆರೂಸಲೇಮಿಗೆ ಕರೆತರುವ ಅನುಮತಿಯನ್ನು ಕೋರಲು ಯೆರೂಸಲೇಮಿನಲ್ಲಿರುವ ಪ್ರಧಾನ ಯಾಜಕನ ಬಳಿಗೆ ಹೋದನು.

2. ಸೌಲನಿಗೆ ಯೇಸು ಪ್ರತ್ಯಕ್ಷನಾದಾಗ ಆತನ ಸುತ್ತಲೂ ಪರಲೋಕದಿಂದ ಹೊಳೆದ ಬೆಳಕಿನಿಂದಾಗಿ ಸೌಲನು ಕುರುಡನಾಗಿದ್ದನು, ಹಾಗಾಗಿ ಆತನ ಸಹಚರರು ಆತನನ್ನು ದಮಸ್ಕ ಪಟ್ಟಣದೊಳಗೆ ಕೈಹಿಡಿದು ನಡೆಸಿಕೊಂಡು ಹೋಗಬೇಕಾಯಿತು.

3. ಯೇಸು ಅನನೀಯನಿಗೆ ದರ್ಶನದ ಮೂಲಕ ಮಾತನಾಡಿ, ನೇರಬೀದಿ ಎಂಬ ಬೀದಿಯಲ್ಲಿರುವ ಯೂದನೆಂಬ ವ್ಯಕ್ತಿಯ ಮನೆಯಲ್ಲಿ ಸೌಲನು ತಂಗಿದ್ದಾನೆಂದು ತಿಳಿಸಿದನು.

4. ಅನನೀಯನು ಸೌಲನನ್ನು ಯೂದನ ಮನೆಯಲ್ಲಿ ಭೇಟಿಯಾದ ತಕ್ಷಣ 'ಸಹೋದರನಾದ ಸೌಲನೇ' ಎಂದು ಆತನನ್ನು ಕರೆದನು.

5. ಸೌಲನು ದಮಸ್ಕದ ರಸ್ತೆಯಲ್ಲಿ ಉಂಟಾದ ಅನುಭವದ ನಂತರ ಮೂರು ದಿನಗಳ ಕಾಲ ಉಪವಾಸದಲ್ಲಿಯೂ ಮತ್ತು ಪ್ರಾರ್ಥನೆಯಲ್ಲಿಯೂ ಕಳೆದನು. ಆದರೆ ಆತನು ಪುನಃ ಊಟವನ್ನು ತೆಗೆದುಕೊಳ್ಳುವುದಕ್ಕಿಂತ ಮೊದಲು ನೀರಿನಿಂದ ದೀಕ್ಷಾಸ್ನಾನವನ್ನು ಹೊಂದಲ್ಪಟ್ಟನು.

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಯೇಸು ಸೌಲನಿಗೆ ಹೇಳಿದ ಮೊದಲ ಮಾತುಗಳು (ವ. 4) ಗಮನಾರ್ಹವಾದದ್ದು, 'ಸೌಲನೇ, ಸೌಲನೇ ನನ್ನನ್ನು ಏಕೆ ಹಿಂಸೆಪಡಿಸುತ್ತೀ?' ಸೌಲನು ವಿಶ್ವಾಸಿಗಳನ್ನು ಹಿಂಸೆಪಡಿಸುತ್ತಿದ್ದನು. ಆದರೆ ವಿಶ್ವಾಸಿಗಳನ್ನು ಹಿಂಸಿಸುವುದು ಕ್ರಿಸ್ತನನ್ನು ಹಿಂಸೆಪಡಿಸಿದಂತೆ, ಯಾಕೆಂದರೆ ಸಭೆಯು ಆತನ ದೇಹವಾಗಿದೆ (1 ಕೊರಿ. 12:27; ಎಫೆಸ. 1:23).

2. ನಾವು ಈ ಕಥೆಯನ್ನು ಗಮನವಿಟ್ಟು ಓದುವುದಾದರೆ, ಸೌಲನು ಒಂದಕ್ಕಿಂತ ಹೆಚ್ಚು ಬಾರಿ ಕರ್ತನ ಅನುಭವವನ್ನು ಹೊಂದಿದ್ದನ್ನು ನಾವು ಕಾಣಬಹುದು. ಆತನ ಅನುಭಗಳ ಪಟ್ಟಿಯು ಈ ಕೆಳಗಿನಂತಿದೆ:

- ಆತನು ದಮಸ್ಕದ ರಸ್ತೆಯಲ್ಲಿ ಯೇಸುವನ್ನು ಭೇಟಿಯಾದನು.
- ಆತನು ಮೂರು ದಿವಸ ಉಪವಾಸವಿದ್ದು ದೇವರಿಗೆ ಪ್ರಾರ್ಥಿಸಿದನು. ಹಾಗಾಗಿ ಪ್ರಾರ್ಥನೆಯ ಮೂಲಕ ಆತನು ದೇವರೊಂದಿಗೆ ಅನ್ಯೋನ್ಯತೆಯಲ್ಲಿದ್ದನು.
- ಆತನು ಉಪವಾಸವಿದ್ದು ಪ್ರಾರ್ಥಿಸುತ್ತಿದ್ದಾಗ ಅನನೀಯನೆಂಬ ಒಬ್ಬ ಮನುಷ್ಯನು ಆತನ ಬಳಿಗೆ ಬಂದು ಆತನನ್ನು ಗುಣಪಡಿಸುವ ಒಂದು ದರ್ಶನವನ್ನು ಕಂಡನು.
- ಆತನು ಅನನೀಯನ ಮೂಲಕವಾಗಿ ತನ್ನ ಭವಿಷ್ಯ ಜೀವಿತದ ಮತ್ತು ಸೇವೆಗಾಗಿರುವ ಕರೆಯುವಿಕೆಯ ಕುರಿತಾದ ದೇವರ ಪ್ರವಾದನಾ ಸಂದೇಶವನ್ನು ಸ್ವೀಕರಿಸಿದನು.
- ಆತನ ಕುರುಡತನದಿಂದ ದೇವರು ಆತನನ್ನು ಗುಣಪಡಿಸಿದನು.
- ಆತನು ಪವಿತ್ರಾತ್ಮನಿಂದ ತುಂಬಲ್ಪಟ್ಟನು.

3. ಈ ವಾಕ್ಯಭಾಗದಲ್ಲಿ ಲೂಕನು 'ವಿಶ್ವಾಸಿಗಳ' ಕುರಿತಾಗಿ ನಾಲ್ಕು ವ್ಯತ್ಯಾಸವಾದ ಪದವಿನ್ಯಾಸಗಳನ್ನು ಬಳಸುತ್ತಿದ್ದಾನೆ. ಅವುಗಳು ಯಾವುವೆಂದರೆ:

- ಶಿಷ್ಯರು (ವ. 1, 10): ಇದು ವಿಶ್ವಾಸಿಗಳು ಯೇಸುವಿನ ನಿಜವಾದ ಹಿಂಬಾಲಕರೆಂದೂ ಮತ್ತು ಅವರು ಯೇಸುವಿಗೂ ಮತ್ತು ಆತನ ಸುವಾರ್ತೆಗೂ ವಿಧೇಯರಾಗಲು ಬಯಸಿದವರೆಂದೂ ಅನ್ವಯಿಸುತ್ತದೆ. ಈ ಪದವು ಅಪೋಸ್ತಲರ ಕೃತ್ಯಗಳಲ್ಲಿ ಮಾತ್ರ ವಿಶ್ವಾಸಿಗಳ ಕುರಿತಾಗಿ ಸಾಮಾನ್ಯವಾಗಿ ಉಪಯೋಗಿಸಲ್ಪಟ್ಟ ಪದವಾಗಿದೆ.
- ಈ ಮಾರ್ಗಕ್ಕೆ ಸಂಬಂಧಪಟ್ಟವರು (ವ. 2): ಇದು ವಿಶ್ವಾಸಿಗಳು ಕ್ರಿಸ್ತೀಯ ಅನ್ಯೋನ್ಯತೆಯಲ್ಲಿ ಕಂಡುಬರುವ ಜೀವನ ಶೈಲಿಗೆ ಅಧೀನರಾಗಲು ಮನಸ್ಸುಳ್ಳವರಾಗಿದ್ದರೆಂದು ಸೂಚಿಸುತ್ತದೆ. ಈ ನಿರ್ದಿಷ್ಟವಾದ ಅರ್ಥದಲ್ಲಿ ಹೇಳುವುದಾದರೆ ಅಪೋಸ್ತಲರ ಕೃತ್ಯಗಳಲ್ಲಿ ಮಾತ್ರ ಈ ಪದವಿನ್ಯಾಸವು ಬಳಸಲ್ಪಟ್ಟಿದೆ.
- ಕರ್ತನ ಭಕ್ತರಿಗೆ (ವ. 13): ಇದು ವಿಶ್ವಾಸಿಗಳು ಲೋಕದಿಂದ ಪ್ರತ್ಯೇಕಿಸಲ್ಪಟ್ಟು ಕ್ರಿಸ್ತನಿಗೆ ಸಂಬಂಧಿಸಲ್ಪಟ್ಟವರೆಂದು ಸೂಚಿಸುತ್ತದೆ. ಈ ಪದವಿನ್ಯಾಸವು ಕ್ರಿಸ್ತನೊಂದಿಗಿನ ವಿಶ್ವಾಸಿಗಳ ಐಕ್ಯತೆಯನ್ನು ತೋರಿಸುತ್ತದೆ.
- ಕರ್ತನ ಹೆಸರನ್ನು ಹೇಳಿಕೊಳ್ಳುವವರನ್ನು (ವ. 14): ಇದು ವಿಶ್ವಾಸಿಗಳು ಕ್ರಿಸ್ತನಿಗೆ ಸಂಬಂಧಿಸಲ್ಪಟ್ಟವರೆಂದು; ಅವರು ಆತನ ಮೇಲೆ ಆತುಕೊಂಡವರಾಗಿದ್ದರೆಂದು; ಮತ್ತು ಅವರು ಆತನನ್ನು ಆರಾಧಿಸಿದರೆಂದು ಸೂಚಿಸುತ್ತದೆ.

ಈ ನಾಲ್ಕು ಪದವಿನ್ಯಾಸಗಳಲ್ಲಿ ಬಹಳ ಅಂತರದ ವ್ಯತ್ಯಾಸಕಾಣಬರುವುದಿಲ್ಲ. ಆದರೆ ಯೇಸುಕ್ರಿಸ್ತನೊಂದಿಗೆ ನಮಗಿರುವ ಸಂಭಂದದ ಕುರಿತು ವ್ಯತ್ಯಾಸವಾದ ನೋಟಗಳಿಂದ ಪ್ರತಿಬಿಂಬಿಸಿ ತಿಳಿಯಪಡಿಸಲಿಕ್ಕೆ ಇದು ನಮಗೆ ಉಪಯುಕ್ತವಾಗಿದೆ.

4. ದೇವರು ಸೌಲನ ಭವಿಷ್ಯದ ಕುರಿತು ಅನನೀಯನಿಗೆ ಈ ಕೆಳಗಿನ ಸಂಗತಿಗಳನ್ನುಪ್ರಕಟಿಸಿದನು:

- ಸೌಲನು ಒಂದು ಅತೀ ವಿಶೇಷವಾದ ರೀತಿಯಲ್ಲಿ ದೇವರಿಂದ ಆರಿಸಲ್ಪಟ್ಟವನೆಂದು.
- ಸೌಲನು ಅನ್ಯರಿಗೂ – ಅವರ ಅರಸುಗಳಿಗೂ – ಮತ್ತು ಯೆಹೂದ್ಯರಿಗೂ ಸುವಾರ್ತೆಯನ್ನು ಸಾರುವನೆಂದು.
- ಸೌಲನು ಸುವಾರ್ತೆಯ ನಿಮಿತ್ತವಾಗಿ ಅತೀಯಾದ ಹಿಂಸೆಯನ್ನು ಅನುಭವಿಸುವನೆಂದು.

ಇವೆಲ್ಲಾ ಸಂಗತಿಗಳು ನಿಜವಾಗಲೂ ಪೌಲನಿಗೆ ಸಂಭವಿಸಿದವು. ಅಪೋಸ್ತಲರ ಕೃತ್ಯಗಳಲ್ಲಿ, ಪೌಲನು ದೇವರ ಹಸ್ತಗಳಲ್ಲಿ ಹೇಗೆ ಅದ್ವಿತೀಯವಾದ ಉಪಕರಣವಾಗಿ ಉಪಯೋಗಿಸಲ್ಪಟ್ಟನೆಂಬುದನ್ನು ಲೂಕನು ತೋರಿಸುತ್ತಾನೆ; ಆತನು ಅನ್ಯರಿಗೂ ಮತ್ತು ಯೆಹೂದ್ಯರಿಗೂ ಸುವಾರ್ತೆಯನ್ನು ಸಾರಿದನೆಂಬುದನ್ನು; ಸೆಜರೆಯಾದಲ್ಲಿ ರಾಜನಾದ ಅಗ್ರಿಪ್ಪನಿಗೆ (ಮತ್ತು ಅನೇಕ ರೋಮನ್ ರಾಜ್ಯಪಾಲರುಗಳಿಗೆ, ಮತ್ತು ಬಹುಶಃ ರೋಮ್‌ನಲ್ಲಿ ಚಕ್ರವರ್ತಿಯಾದ ನಿರೋನಿಗೂ ಸಹ) ಸುವಾರ್ತೆಯನ್ನು ಸಾರಿದ್ದನ್ನು; ಮತ್ತು ಆತನು ತನ್ನ ಸೇವೆಯಲ್ಲಿ ಹಿಂಸೆ ಮತ್ತು ಸಂಕಷ್ಟವನ್ನು ಅನುಭವಿಸಿದ್ದನ್ನು ತೋರಿಸುತ್ತಾನೆ.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಪೌಲನ ಪರಿವರ್ತನೆಯ ಕಥೆಯು ಬಹಳ ನಾಟಕೀಯವಾದ ರೀತಿಯಲ್ಲಿದೆ. ಆದರೆ ಇದನ್ನು ಒಂದು ಮಾದರಿ ಕಥೆಯನ್ನಾಗಿ ನಾವು ಓದಬೇಕೆಂದು ಲೂಕನು ಬಯಸುತ್ತಿಲ್ಲವೆಂದು ನಾನು ಆಲೋಚಿಸುತ್ತೇನೆ.

   ಈ ಕಥೆಯ ಕೆಲವು ಅಂಶಗಳು ಅದ್ವಿತೀಯವಾಗಿ ಪೌಲನಿಗೆ ಮಾತ್ರ ಸಂಭವಿಸಿದ ಸಂಗತಿಗಳಾಗಿವೆ:

   - ಪೌಲನು ದಮಸ್ಕದ ರಸ್ತೆಯಲ್ಲಿ ರಕ್ಷಿಸಲ್ಪಟ್ಟನು. ನಾವು ಎಲ್ಲಿದ್ದೇವೋ ಅಲ್ಲಿಯೇ ರಕ್ಷಿಸಲ್ಪಡಬಹುದು.
   - ಪೌಲನು ಪುನರುತ್ಥಾನ ಹೊಂದಿದ ಕ್ರಿಸ್ತನೊಂದಿಗೆ ವ್ಯಕ್ತಿಗತವಾದ ಸಂದರ್ಶನ ಹೊಂದಿದನು. ಈ ರೀತಿಯ ಅನುಭವವನ್ನು ಬೇರೆ ಯಾರೂ ಹೊಂದಲಿಲ್ಲ.
   - ಪೌಲನ ಪರಿವರ್ತನೆಯ ಸಮಯದಲ್ಲಿ ಅನೇಕ ಅದ್ಭುತಕರ ಮತ್ತು ಅಸಾಧಾರಣ ಘಟನೆಗಳು ಸಂಭವಿಸಿದವು (ಮಿಂಚಿನ ಬೆಳಕು, ಪರಲೋಕದಿಂದ ಬಂದ ಶಬ್ಧ, ಆತನ ಹೆಸರು ಗಂಭೀರವಾಗಿ ಕರೆಯಲ್ಪಟ್ಟಿತು, ಆತನು ಕುರುಡನಾದನು). ನಮ್ಮ ಮಾನಸಾಂತರಗಳು ಸಾಮಾನ್ಯವಾಗಿ ಅಷ್ಟು ಅದ್ಭುತಕರ ಮತ್ತು ಅಸಾಧಾರಣ ಘಟನೆಗಳಿಂದ ಕೂಡಿರುವುದಿಲ್ಲ. ಬಹುತೇಕವಾಗಿ ಅವುಗಳು ಸಾಧಾರಣ ಮತ್ತು ಶಾಂತವಾಗಿರುತ್ತವೆ. ವಾಸ್ತವಿಕವಾಗಿ ಹೇಳಬೇಕಾದರೆ, ನಮ್ಮಲ್ಲಿ ಅನೇಕರಿಗೆ 'ದಮಸ್ಕದ ರಸ್ತೆಯಲ್ಲಿ' ಉಂಟಾದ ಅನುಭವದ ರೀತಿಯಲ್ಲಿ ಮಾನಸಾಂತರ ಉಂಟಾಗಿಲ್ಲ.

- ಪೌಲನು ದೇವರ ಕೈಯಲ್ಲಿ ಒಂದು ವಿಶೇಷವಾದ ಉಪಕರಣವಾಗಿರಲು ಕರೆಯಲ್ಪಟ್ಟನು, ಮತ್ತು ಆತನು ಸಭೆಯ ಇತಿಹಾಸದಲ್ಲಿ ಸರಿಸಾಟಿಯಿಲ್ಲದ ಅಪೋಸ್ತಲನಾದನು.

ಈ ಕಥೆಯ ಇನ್ನಿತರೆ ಅಂಶಗಳು ಸಾಮಾನ್ಯವಾಗಿ ಮಾನಸಾಂತರಗಳಿಗೆ ಅನ್ವಯಿಸಲ್ಪಡುವ ಮತ್ತು ಸಾಧಾರಣವಾಗಿ ಸಂಭವಿಸುವ ಸಂಗತಿಗಳಾಗಿವೆ:

- ಪ್ರತಿಯೊಬ್ಬರೂ ವ್ಯಕ್ತಿಗತವಾಗಿ ಯೇಸು ಕ್ರಿಸ್ತನನ್ನು ಸಂಧಿಸಿದ ಅನುಭವವನ್ನು ಹೊಂದಬೇಕು.
- ಪ್ರತಿಯೊಬ್ಬರೂ ತಮ್ಮ ಜೀವತಗಳನ್ನು ಯೇಸು ಕ್ರಿಸ್ತನಿಗೆ ಒಪ್ಪಿಸಿಕೊಡಬೇಕು.
- ಪ್ರತಿಯೊಬ್ಬರೂ ನಿಜವಾಗಿಯೂ 'ಪರಿವರ್ತನೆ' ಹೊಂದಬೇಕು, ಅಂದರೆ ಜೀವತದ ಹಾದಿಯಲ್ಲಿ ಒಂದು ಸಂಪೂರ್ಣವಾದ ಬದಲಾವಣೆ, ತಿರುಗಿಕೊಳ್ಳುವುದು.
- ಪ್ರತಿಯೊಬ್ಬರೂ ಸೇವೆಗಾಗಿ ವೈಯಕ್ತಿಕವಾಗಿ ಕರೆಯುವಿಕೆಯನ್ನು ಹೊಂದಿಕೊಳ್ಳಬೇಕು.

# ಉ 23. ಪೌಲನು ದಮಸ್ಕದಲ್ಲಿ ಹಾಗೂ ಯೆರೂಸಲೇಮಿನಲ್ಲಿ, 9:19–31

## ೯) ಪಠ್ಯ ಪ್ರಶ್ನೆಗಳು

1. ಸೌಲನು ತನ್ನ ಅನುಯಾಯಿಗಳ ಮೂಲಕ ದಮಸ್ಕದಲ್ಲಿ ಕೊಲ್ಲಲ್ಪಡಬೇಕೆಂಬ ಒಳಸಂಚಿನಿಂದ ರಕ್ಷಿಸಲ್ಪಟ್ಟನು. ಅವರು ಆತನನ್ನು ಬುಟ್ಟಿಯಲ್ಲಿ ಕುಳ್ಳಿರಿಸಿ ಗೋಡೆಯ ಕಿಟಕಿಯ ಮುಖಾಂತರ ಹೊರಗೆ ಕೆಳಗಿಳಿಸಿದರು. ಇದು ಶತ್ರುಗಳು ರಾತ್ರಿಯಲ್ಲಿ ಪಟ್ಟಣದ ದ್ವಾರಗಳಲ್ಲಿ ಹೊಂಚುಹಾಕುತ್ತಿದ್ದಾಗ ನಡೆಯಿತು.

2. ಪ್ರಾರಂಭದಲ್ಲಿ ಸೌಲನ ಕುರಿತು ಯೆರೂಸಲೇಮಿನಲ್ಲಿದ್ದ ವಿಶ್ವಾಸಿಗಳು ಭಯಪಟ್ಟರು. ಸೌಲನು ಅನೇಕ ಸ್ಥಳಗಳಲ್ಲಿರುವ ಸಭೆಗಳನ್ನು ಹಾಗೂ ಯೆರೂಸಲೇಮಿನಲ್ಲಿದ್ದಂತಹ ಸಭೆಯನ್ನೂ ಹಿಂಸೆಪಡಿಸಿದ್ದನ್ನು ಅವರು ತಿಳಿದಿದ್ದರು. ಮತ್ತು ಆತನ ಜೀವಿತ ಬದಲಾಗಿದೆ ಎಂದು ಅವರು ನಂಬಲಿಲ್ಲ.

3. ಅಪೊಸ್ತಲರಿಗೆ ಸೌಲನನ್ನು ಪರಿಚಯಿಸುವುದರ ಮೂಲಕ ಬಾರ್ನಬನು ಯೆರೂಸಲೇಮಿನಲ್ಲಿ ಸೌಲನಿಗೆ ಸಹಾಯ ಮಾಡಿದನು. ಸೌಲನು ಹೇಗೆ ಪರಿವರ್ತನೆಯಾದನು ಮತ್ತು ದಮಸ್ಕದಲ್ಲಿ ಆತನು ಹೇಗೆ ಭಯವಿಲ್ಲದೆ ಸುವಾರ್ತೆಯನ್ನು ಸಾರಿದನೆಂಬುದನ್ನು ಬಾರ್ನಬನು ಅವರಿಗೆ ವಿವರಿಸಿದನು.

4. ವ. 31 ರಲ್ಲಿರುವ ಯೂದಾಯ, ಗಲಿಲಾಯ ಮತ್ತು ಸಮಾರ್ಯದಲ್ಲಿರುವ ಸಭೆಗಳ ಕುರಿತು ಲೂಕನು ಈ ಐದು ಅಂಶಗಳನ್ನು ನಮಗೆ ತಿಳಿಸುತ್ತಾನೆ:
   1) ಅದು ಸಮಾಧಾನದ ಹೊಂದಿತು. ಹಾಗಾಗಿ ಅಲ್ಲಿ ಯಾವುದೇ ಹಿಂಸೆ ಇರಲಿಲ್ಲ.
   2) ಅದು ಪವಿತ್ರಾತ್ಮನಿಂದ ಧೈರ್ಯ ಹೊಂದಿತು. ಇದರ ಪರಿಣಾಮವಾಗಿ:
   3) ಅದು ಬಲಗೊಂಡಿತು. ಬಹುಶಃ ಇದರ ಅರ್ಥ ವಿಶ್ವಾಸಿಗಳು ತಮ್ಮ ನಂಬಿಕೆ ಮತ್ತು ಸೇವೆಯಲ್ಲಿ ಹೆಚ್ಚಿನ ಧೈರ್ಯ ಹೊಂದಿಕೊಂಡರು ಎಂಬುದಾಗಿದೆ.
   4) ಅದು ಸಂಖ್ಯೆಯಲ್ಲಿ ವರ್ಧಿಸಿತು. ಇದರ ಅರ್ಥ ಹೆಚ್ಚು ಹೆಚ್ಚು ಜನರು ಸುವಾರ್ತೆಯನ್ನು ಸ್ವೀಕರಿಸಿಕೊಂಡು ವಿಶ್ವಾಸಿಗಳಾದರು.
   5) ವಿಶ್ವಾಸಿಗಳು ದೇವರ ಭಯದಲ್ಲಿ ಮುನ್ನಡೆಯುತ್ತಿದ್ದರಿಂದ ಅದು ಆತ್ಮೀಕ ಜೀವಿತದಲ್ಲಿ ಬೆಳೆಯಿತು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಯೆರೂಸಲೇಮಿನಲ್ಲಿರುವ ಗ್ರೀಕ್ ಮಾತನಾಡುವ ಯೆಹೂದ್ಯರಿಗೂ ಮತ್ತು ದಮಸ್ಕದಲ್ಲಿರುವ ಯೆಹೂದ್ಯರಿಗೂ ಸೌಲನ ಸಂದೇಶ ಏನಾಗಿತ್ತೆಂಬುದನ್ನು ಲೂಕನು ನಮಗೆ ವಿವರವಾಗಿ ತಿಳಿಸುತ್ತಿಲ್ಲ. ಆದರೆ ವ. 20 ರಲ್ಲಿ ಸೌಲನು ದಮಸ್ಕದ ಸಭಾಮಂದಿರಗಳಲ್ಲಿ ಯೇಸುವೇ ದೇವಪುತ್ರನೆಂದು ಸಾರಿದನೆಂದೂ ಮತ್ತು ವ. 22 ರಲ್ಲಿ ಯೇಸುವೇ ಕ್ರಿಸ್ತನೆಂದು ಆತನು ಸಾಬೀತುಪಡಿಸಿದನೆಂದೂ ಲೂಕನು ಬರೆಯುತ್ತಾನೆ. ಆತನು ಯೆರೂಸಲೇಮಿನಲ್ಲಿ ಯಾವ ಭಯವಿಲ್ಲದೆ ಯೇಸುವಿನ ನಾಮದಲ್ಲಿ ಬೋಧಿಸಿದನು (ವ. 27). ಹಾಗಾಗಿ ಆತನ ಸಂದೇಶವು ಕನಿಷ್ಠ ಪಕ್ಷ ಈ ಕೆಳಗಿನ ಮೂರು ಸಿದ್ಧಾಂತಗಳನ್ನು ಒಳಗೊಂಡಿತ್ತು:

   1) ಯೇಸು ದೇವರಾಗಿದ್ದಾನೆ: 'ಕರ್ತನು' ಎಂಬ ಹೇಳಿಕೆಯು ಇದನ್ನು ತೋರಿಸುತ್ತದೆ.

   2) ಯೇಸು ಹಳೆ ಒಡಂಬಡಿಕೆಯ ಪ್ರವಾದಿಗಳಿಂದ ಮುಂಚಿತವಾಗಿ ತಿಳಿಸಲ್ಪಟ್ಟ ಮೆಸ್ಸೀಯನು: 'ಕ್ರಿಸ್ತನು' ಎಂಬ ಹೇಳಿಕೆಯು ಇದನ್ನು ತೋರಿಸುತ್ತದೆ; ಇದು 'ಮೆಸ್ಸೀಯ' ಎಂಬ ಹಿಬ್ರಿಯ ಪದದ ಗ್ರೀಕ್ ಅನುವಾದವಾಗಿದೆ.

   3) ತನ್ನನ್ನು ಅಂಗೀಕರಿಸುವವರೆಲ್ಲರಿಗೂ ಯೇಸು ರಕ್ಷಣೆಯನ್ನು ತರುತ್ತಾನೆ: 'ಯೇಸುವಿನ ನಾಮ' ಎಂಬ ಹೇಳಿಕೆಯು ಇದನ್ನು ತೋರಿಸುತ್ತದೆ. 'ಯೇಸುವಿನ ನಾಮದ' ಕುರಿತಾದ ಇನ್ನೂ ಹೆಚ್ಚಿನ ಮಾಹಿತಿಗಾಗಿ"**ನೆರೆದಿದ್ದ ಜನರೊಂದಿಗೆ ಪೇತ್ರನು ಮಾತನಾಡಿದ್ದು** (3:11–26) ಎಂಬ ಅಧ್ಯಾಯದಲ್ಲಿರುವ ಸಂದೇಶದ ಹೊರರೇಖೆಯನ್ನು ನೋಡಿರಿ.

ಸೌಲನ ಸಂದೇಶವು ಯೆರೂಸಲೇಮ್ ಮತ್ತು ದಮಸ್ಕದಲ್ಲಿದ್ದ ಯೆಹೂದ್ಯರನ್ನು ನಿಜವಾಗಲೂ ಆಶ್ಚರ್ಯಪಡಿಸಿತು, ಯಾಕೆಂದರೆ ಸೌಲನು ವಿಶ್ವಾಸಿಗಳನ್ನು ಹಿಂಸಿಸುತ್ತಿದ್ದುದ್ದಕ್ಕೆ ಈ ಮೂರು ಪ್ರಮುಖ ಸಿದ್ಧಾಂತಗಳೇ ಮುಖ್ಯ ಕಾರಣಗಳಾಗಿದ್ದವು.

2. ಸೌಲನು ದಮಸ್ಕದಲ್ಲಿ ಮತ್ತು ಯೆರೂಸಲೇಮಿನಲ್ಲಿ ಉಳಿದುಕೊಂಡದ್ದರ ಕುರಿತು ಹೆಚ್ಚಿನ ಮಾಹಿತಿಗಳು ಈ ಕೆಳಗೆ ತಿಳಿಸಲ್ಪಟ್ಟಿವೆ:

   1) 2 ಕೊರಿ. 11:32–33:

      - ಆ ಸಮಯದಲ್ಲಿ ದಮಸ್ಕವು ಅರಸನಾದ ಅರೇತನ ಆಳ್ವಿಕೆಯಲ್ಲಿತ್ತು (ಆತನು ನಾಬಾಟೆಯ ಅರಸನಾಗಿದ್ದನು). ಆತನು ಪಟ್ಟಣದ ದ್ವಾರಗಳನ್ನು ಕಾಯುವುದರ ಮೂಲಕ ಪೌಲನನ್ನು ಹಿಡಿಯುವಂತೆ ಸ್ಥಳೀಯ ರಾಜ್ಯಪಾಲನಿಗೆ ಆಜ್ಞಾಪಿಸಿದ್ದನು. ದಮಸ್ಕದಲ್ಲಿದ್ದ ಯೆಹೂದ್ಯರು ರಾಜನೊಂದಿಗೆ ಒಂದು ಒಳ್ಳೆಯ ಸಂಬಂಧವನ್ನು ಇಟ್ಟು ಕೊಂಡಿದ್ದನ್ನು ಇದು ಸೂಚಿಸುತ್ತದೆ.

2) ಗಲಾತ್ಯ 1:15–21:

- ‘ಅನೇಕ ದಿನಗಳ ತರುವಾಯ’ (9:23) ಎಂಬುದು ನಿಶ್ಚಯವಾಗಿ ಮೂರು ವರ್ಷಗಳ ಕಾಲಾವಧಿಯಾಗಿದೆ.

- ಸೌಲನು ತನ್ನ ಎಲ್ಲಾ ಸಮಯವನ್ನು ದಮಸ್ಕದಲ್ಲಿಯೇ ಕಳೆಯಲಿಲ್ಲ, ಬದಲಾಗಿ ಆತನು ಅಲ್ಲಿಂದ ಅರೇಬಿಯಾಗೆ ಹೋದನು (ರೋಮನ್ ಪ್ರಾಂತ್ಯವಾದ ಅರೇಬಿಯಾವು ದಮಸ್ಕದಿಂದ ಬಹಳ ದೂರವಿರಲಿಲ್ಲ) ಮತ್ತು ಪುನಃ ಅಲ್ಲಿಂದ ಹಿಂತಿರುಗಿದನು.

- ಬಾರ್ನಬನು ಯೆರೂಸಲೇಮಿನಲ್ಲಿದ್ದ ಅಪೋಸ್ತಲರಿಗೆ ಆತನನ್ನು ಪರಿಚಯಿಸಿದಾಗ ಬಹುತೇಕ ಅಪೋಸ್ತಲರು ಅಲ್ಲಿರಲಿಲ್ಲ. ಹಾಗಾಗಿ ಸೌಲನು ಕೇವಲ ಪೇತ್ರ ಮತ್ತು ಯೇಸುವಿನ ಸಹೋದರನಾದ ಯಾಕೋಬನನ್ನು ಮಾತ್ರ ಸಂಧಿಸಿದನು.

- ಸೌಲನು ಯೆರೂಸಲೇಮಿನಲ್ಲಿದ್ದ ಪೇತ್ರನ ಮನೆಯಲ್ಲಿ ಹದಿನೈದು ದಿನಗಳ ಕಾಲ ತಂಗಿದ್ದನು.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

1. ಸೌಲನು ಪರಿವರ್ತನೆಯಾದ ನಂತರ ಬಾರ್ನಬನ ಸಹಾಯವಿಲ್ಲದೆ ಯೆರೂಸಲೇಮಿಗೆ ಮೊಟ್ಟಮೊದಲಿಗೆ ಭೇಟಿಕೊಟ್ಟಿದ್ದರೆ ಅದು ವಿಪತ್ತನ್ನು ತರುವುದಾಗಿತ್ತು – ಮತ್ತು ಆತನ ಜೀವತವು ಒಂದು ವ್ಯತ್ಯಾಸವಾದ ಹಾದಿ ಹಿಡಿಯುತ್ತಿತ್ತು. ಕೆಲವು ಸಾಧ್ಯತೆಗಳು ಕೆಳಗೆ ತಿಳಿಸಲ್ಪಟ್ಟಿವೆ:

   - ಆತನು ನಿರುತ್ಸಾಹಗೊಂಡು ತನ್ನ ಹೊಸ ನಂಬಿಕೆಯ ಜೀವಿತವನ್ನು ಕಳೆದುಕೊಳ್ಳಬಹುದಿತ್ತು ಮತ್ತು ಒಬ್ಬ ಯೆಹೂದ್ಯ ಫರಿಸಾಯನಾಗಿ ತನ್ನ ಹಳೆಯ ಜೀವಿತಕ್ಕೆ ಹಿಂತಿರುಗಬಹುದಿತ್ತು.

   - ಆತನು ಪುನಃ ವಿಶ್ವಾಸಿಗಳ ವಿರುದ್ಧವಾಗಿ ತಿರುಗಿಕೊಂಡು ಸುವಾರ್ತೆಗೆ ಒಬ್ಬ ವೈರಿಯಾಗಿ ಮತ್ತು ಸಭೆಯ ಒಬ್ಬ ಹಿಂಸಕನಾಗಿ ತಿರುಗಬಹುದಿತ್ತು.

   - ಆತನು ಯೆರೂಸಲೇಮಿನ ಸಭೆಯೊಂದಿಗೆ ಮನಸ್ತಾಪಗೊಂಡು ತನ್ನ ಸ್ವಂತ ‘ಪಂಗಡವನ್ನು’ ಪ್ರಾರಂಭಿಸಬಹುದಾಗಿತ್ತು. ಇದು ಆದಿಸಭೆಯಲ್ಲಿ ಒಂದು ಒಡಕನ್ನು ತರಬಹುದಾಗಿತ್ತು, ಅದು ಸಭೆಯ ಬೆಳವಣಿಗೆಯನ್ನು ಮತ್ತು ಕ್ರೈಸ್ತ ನಂಬಿಕೆಯ ವಿಸ್ತರಣೆಯನ್ನು ಕುಂಟಿತಗೊಳಿಸುತ್ತಿತ್ತು.

   - ಆತನನ್ನು ಆದಿಸಭೆಗೆ ತನ್ನ ಬೆನ್ನನ್ನು ತೋರಿಸಬಹುದಿತ್ತು, ಹಾಗೆ ಮಾಡುವಲ್ಲಿ ಆತನು ಒಂಟಿಯಾಗುತ್ತಿದ್ದನು. ಅಪೋಸ್ತಲರ ಅನುಭವ ಮತ್ತು ನಾಯಕತ್ವವಿಲ್ಲದೆ ಆತನು ವಿಚಿತ್ರವಾದ ಸಿದ್ಧಾಂತಗಳನ್ನು ಸೃಷ್ಟಿಸಬಹುದಿತ್ತು ಮತ್ತು ಸುಳ್ಳು ಬೋಧನೆಗಳನ್ನು

ಉಪದೇಶಿಸುತ್ತಾ ಆದಿಸಭೆಯಲ್ಲಿ ಗಲಿಬಿಲಿಯನ್ನು ಹರಡುತ್ತಾ ಒಬ್ಬ ಸುಳ್ಳು ಬೋಧಕನಾಗಬಹುದಿತ್ತು.

ಸೌಲನು ತನ್ನ ಮಾನಸಾಂತರದ ನಂತರ ಯೆರೂಸಲೇಮಿಗೆ ಬಂದಾಗ ಅಲ್ಲಿನ ಸಭೆಯು ಎದುರಿಸಿದ ಅದೇ ಅಪಾಯಗಳನ್ನು ಇಂದು ಸಭೆಗಳು ಎದುರಿಸುತ್ತಿವೆ. ಇದೇ ಕಾರಣದಿಂದ ನಮ್ಮ ದಕ್ಷಿಣ ಭಾರತದ ಸಭೆಗಳಲ್ಲಿ ಬಾರ್ನಬನಂತಹ ಜನರು ಇರಬೇಕಾದದ್ದು ಬಹಳ ಪ್ರಾಮುಖ್ಯವಾಗಿದೆ: ಯಾವುದೇ ಹಿನ್ನಲೆಯಿಂದ ಬಂದವರಾಗಿದ್ದರೂ – ಹೊಸ ವಿಶ್ವಾಸಿಗಳ – ಮೇಲೆ ವಿಶ್ವಾಸವನ್ನಿಟ್ಟು ಅವರನ್ನು ಆರೈಕೆ ಮಾಡಲು ಮನಸ್ಸುಳ್ಳ ಜನರು ಅವಶ್ಯ; ಹೊಸ ವಿಶ್ವಾಸಿಗಳನ್ನು ಸಭೆಯ ನಾಯಕರುಗಳಿಗೆ ಪರಿಚಯಿಸುವಂತಹ ಜನರು ಅವಶ್ಯ; ಆತ್ಮೀಕ ಜೀವಿನ ಮತ್ತು ಸಿದ್ಧಾಂತಗಳಲ್ಲಿ ಹೊಸ ವಿಶ್ವಾಸಗಳನ್ನು ಮಾರ್ಗದರ್ಶಿಸಲು ಜ್ಞಾನವುಳ್ಳ ಜನರು ಅವಶ್ಯ.

# ಉ 24. ಐನೇಯನು ಮತ್ತು ದೊರ್ಕಳು, 9:32–43

## ಇ) ಪಥ್ಯ ಪ್ರಶ್ನೆಗಳು

1. ಪೇತ್ರನು ಲುದ್ದದಲ್ಲಿರುವ ವಿಶ್ವಾಸಿಗಳನ್ನು ಭೇಟಿಯಾಗಲು ಅಲ್ಲಿಗೆ ಪ್ರಯಾಣಿಸಿದನು. ಆ ಸಮಯದಲ್ಲಿ ದೇಶದಲ್ಲೆಲ್ಲಾ ಹಿಂಸೆಯಿಲ್ಲದೆ ಸಮಾಧಾನವಿತ್ತು (9:31) ಮತ್ತು ಸ್ತೆಫನನ ಮರಣದ ನಂತರ (8:1) ಚದುರಿಸಲ್ಪಟ್ಟ ವಿಶ್ವಾಸಿಗಳಿಂದ ಹಳ್ಳಿ ಪ್ರದೇಶಗಳಲ್ಲಿ ಸ್ಥಾಪಿಸಲ್ಪಟ್ಟಂತಹ ಸಭೆಗಳನ್ನು ಅಪೊಸ್ತಲರು ಸಂಧಿಸಲು ಯೆರೂಸಲೇಮನ್ನು ಬಿಟ್ಟರು.

2. ತಬಿಥಳನ್ನು ಒಬ್ಬ 'ದೈವಭಕ್ತಳೆಂದು' ನಾವು ಕರೆಯುವುದು ಸಮಂಜಸವಾದದ್ದು. ಆಕೆಯು ಯಾವಾಗಲೂ ಒಳ್ಳೆಯ ಕಾರ್ಯಗಳನ್ನು ಮಾಡುತ್ತಾ ಬಡವರಿಗೆ ಸಹಾಯ ಮಾಡುತ್ತಿದ್ದಳು.

3. ಐನೇಯನ ಸ್ವಸ್ಥತೆಯ ಪರಿಣಾಮವೇನೆಂದರೆ, ಇದನ್ನು ನೋಡಿದ ಲುದ್ದ ಮತ್ತು ಸುತ್ತಮುತ್ತಲಿರುವ ಹಳ್ಳಿಯ ಜನರೆಲ್ಲರೂ ಕರ್ತನ ಕಡೆಗೆ ತಿರುಗಿಕೊಂಡರು. ಯೊಪ್ಪದಲ್ಲಿ ತಬಿಥಳು ಮರಣದಿಂದ ಎಬ್ಬಿಸಲ್ಪಟ್ಟಿದ್ದನ್ನು ಕೇಳಿದಂತಹ ಅನೇಕ ಜನರು ಕರ್ತನಲ್ಲಿ ವಿಶ್ವಾಸವನ್ನಿಟ್ಟರು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಯೊಪ್ಪದ ವಿಶ್ವಾಸಿಗಳು ಪೇತ್ರನ ಬಳಿಗೆ ಕಳುಹಿಸಿ 'ಕೂಡಲೇ ಬರಬೇಕು' ಎಂದು ಆತನನ್ನು ಯಾಕೆ ಕೇಳಿಕೊಂಡರೆಂದು ಲೂಕನು ನಮಗೆ ತಿಳಿಸುತ್ತಿಲ್ಲ. ಆದರೆ 'ಲುದ್ದವು ಯೊಪ್ಪಕ್ಕೆ ಸಮೀಪದಲ್ಲಿತ್ತು' ಎಂದು ತಿಳಿಸುತ್ತಾನೆ, ಹಾಗಾಗಿ ಪೇತ್ರನು ಬಹಳ ದೂರವಿರಲಿಲ್ಲ ಮತ್ತು ಆತನು ಯೊಪ್ಪಕ್ಕೆ ಕೆಲವೇ ಗಂಟೆಗಳಲ್ಲಿ ತಲುಪಬಹುದಿತ್ತು. ನಾನು ಎರಡು ಸಾಧ್ಯತೆಯ ಉತ್ತರಗಳನ್ನು ಕಾಣುತ್ತೇನೆ:

   1) ಸಭೆಯ ಒಬ್ಬ ಪ್ರಮುಖ ವ್ಯಕ್ತಿಯು ಸತ್ತಿದ್ದರಿಂದ ಪೇತ್ರನು ಬಂದು ಅವರನ್ನು ಸಂತೈಸುವಂತೆ ಅವರು ಬಯಸಿದರು.
   2) ಯೇಸು ಯಾಯಿರನ ಮಗಳಿಗೆ ಮಾಡಿದ್ದನ್ನು ಅವರು ನೆನಪಿಸಿಕೊಂಡು, ಪೇತ್ರನು ತಬಿಥಳನ್ನು ಮರಣದಿಂದ ಎಬ್ಬಿಸಬಹುದೆಂದು ನಿರೀಕ್ಷಿಸಿದರು.

2. ಲೂಕನು ತನ್ನ ಓದುಗರ ಗಮನವನ್ನು ಯೇಸುವಿನ ಮತ್ತು ಪೇತ್ರನ ಸೇವೆಗಳ ನಡುವಿನ ಸಮಾನತೆಗಳ ಕಡೆಗೆ ಸೆಳೆಯಲು ಬಯಸಿದ ಸಂಗತಿಯನ್ನು ಈ ಕಥೆಯಲ್ಲಿರುವ ಕೆಲವು ವಿವರಗಳು ಸೂಚಿಸುತ್ತವೆ:

1) ಇಬ್ಬರು ಪಾರ್ಶ್ವವಾಯು ರೋಗಿಗಳ ಸ್ವಸ್ಥತೆ: ಸುವಾರ್ತೆಯಲ್ಲಿ ಯೇಸು ಆ ಮನುಷ್ಯನಿಗೆ ಹೇಳಿದ್ದು, 'ನಾನು ನಿನಗೆ ಹೇಳುವುದೇನೆಂದರೆ; ಎದ್ದು ನಿನ್ನ ಹಾಸಿಗೆಯನ್ನು ತೆಗೆದುಕೊಂಡು ನಿನ್ನ ಮನೆಗೆ ಹೋಗು'. ಅಪೋಸ್ತಲರ ಕೃತ್ಯಗಳಲ್ಲಿ ಪೇತ್ರನು ಐನೇಯನಿಗೆ ಹೇಳಿದ್ದು, 'ಏಳು, ನಿನ್ನ ಹಾಸಿಗೆಯನ್ನು ಸುತ್ತಿಡು'.

2) ಇಬ್ಬರು ಹೆಣ್ಣುಮಕ್ಕಳನ್ನು ಮರಣದಿಂದ ಎಬ್ಬಿಸಿದ್ದು:
   - ಜನರು ಅಳುತ್ತಾ ರೋಧಿಸುತ್ತಾ ಗೋಳಾಡುತ್ತಿದ್ದರು.
   - ಅದ್ಭುತವು ಸಂಭವಿಸುವಾಗ ಗೋಳಾಡುವವರನ್ನು ಕೋಣೆಯೊಳಗೆ ಅನುಮತಿಸಲಿಲ್ಲ.
   - ಯೇಸು ಮತ್ತು ಪೇತ್ರರು ಉಪಯೋಗಿಸಿದ ಪದಗಳು ಹೆಚ್ಚುಕಡಿಮೆ ತದ್ರೂಪವಾದವುಗಳು. ಯೇಸು ಅರಾಮಿಕ್ ಭಾಷೆಯಲ್ಲಿ *'ತಲಿಥಾ ಕೂಮ್'* ಎಂದನು (ಮಾರ್ಕ 5:41 ನ್ನು ನೋಡಿರಿ) ಮತ್ತು ಪೇತ್ರನೂ ಸಹ ಅರಾಮಿಕ್ ಭಾಷೆಯಲ್ಲಿ *'ತಬಿಥಾ ಕೂಮ್'* ಎಂದು ಹೇಳಿದನು.

ಖಂಡಿತವಾಗಲೂ, ಎರಡೂ ಕಥೆಗಳ ನಡುವೆ ಅನೇಕ ವ್ಯತ್ಯಾಸಗಳಿವೆ! ಹಾಗಾದರೆ ನೀವು ಏನನ್ನು ಆಲೋಚಿಸುತ್ತೀರಿ?

ಆದರೆ ಈ ವಿವರಗಳಿಗಿಂತಲೂ ಹೆಚ್ಚು ಪ್ರಾಮುಖ್ಯವಾದದ್ದು ಈ ಕೆಳಗಿನ ವಾಸ್ತವಾಂಶಗಳಾಗಿವೆ:

1) ಅಪೋಸ್ತಲರ ಕೃತ್ಯಗಳಲ್ಲಿಯೂ ಮತ್ತು ಸುವಾರ್ತೆಗಳಲ್ಲಿಯೂ ಯೇಸುವಿನ ಬಲವು ಕಾರ್ಯಮಾಡಿತು.
2) ಪೇತ್ರನ ಅದ್ಭುತಗಳ ಪರಿಣಾಮವಾಗಿ ಯೇಸು ಮಹಿಮೆ ಹೊಂದಿದನು.

# ಉ 25. ಕೊರ್ನೇಲ್ಯನು ಪೇತ್ರನನ್ನು ಕರೆಕಳುಹಿಸಿದ್ದು, 10:1–8

## ಇ) ಪಠ್ಯ ಪ್ರಶ್ನೆಗಳು

1. ಈ ಪಠ್ಯದಲ್ಲಿ ಕೊರ್ನೇಲ್ಯನ ಕುರಿತು ನಾವು ಅನೇಕ ಸಂಗತಿಗಳನ್ನು ಕಲಿಯುತ್ತೇವೆ:
   - ಆತನು ಒಬ್ಬ ರೋಮನ್ ಅಧಿಕಾರಿಯಾಗಿದ್ದನು.
   - ಆತನು ಸೆಜರೇಯಕ್ಕೆ ಕಳುಹಿಸಲ್ಪಟ್ಟಿದ್ದನು.
   - ಆತನು ಮತ್ತು ಆತನ ಕುಟುಂಬದವರು ಒಳ್ಳೆಯ ಮತ್ತು ದೈವಭಯವುಳ್ಳ ಜನರಾಗಿದ್ದರು.
   - ಆತನು ಅಗತ್ಯತೆಯಲ್ಲಿರುವವರಿಗೆ ಧಾರಾಳವಾಗಿ ಸಹಾಯ ಮಾಡುತ್ತಿದ್ದ ವ್ಯಕ್ತಿಯಾಗಿದ್ದನು.
   - ಆತನು ಒಬ್ಬ ಅನ್ಯನಾಗಿದ್ದನು, ಆದರೆ ಆತನು ಯೆಹೂದ್ಯರ ನಂಬಿಕೆ ಮತ್ತು ಆಚರಣೆಯನ್ನು ಪಾಲಿಸುತ್ತಿದ್ದನು.
   - ಆತನು ಕ್ರಿಯಾಶೀಲ ವ್ಯಕ್ತಿಯಾಗಿದ್ದನು: ಆತನು ದೇವದೂತನಿಗೆ ತಕ್ಷಣವೇ ವಿಧೇಯನಾಗಿ ಪೇತ್ರನನ್ನು ಕರೆದುಕೊಂಡು ಬರಲು ಮೂರು ಜನರನ್ನು ಕಳುಹಿಸಿದನು.
2. ಕೊರ್ನೇಲ್ಯನು ಯೊಪ್ಪದಲ್ಲಿ ವಾಸವಾಗಿದ್ದ ಪೇತ್ರನನ್ನು ಕರೆತರಲು ಆತನ ಬಳಿಗೆ ಜನರನ್ನು ಕಳುಹಿಸಬೇಕೆಂದು ದೇವದೂತನು ಹೇಳಿದನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

ಕ್ರೈಸ್ತ ಸಭೆಯ ಇತಿಹಾಸದಲ್ಲಿ ಕೊರ್ನೇಲ್ಯನ ಕಥೆಯು ಒಂದು ಪ್ರಾಮುಖ್ಯವಾದ ಕಥೆಯಾಗಿದೆ. ಆ ಕ್ಷಣದವರೆಗೂ ಸುವಾರ್ತೆಯು ಯೆರೂಸಲೇಮಿನಲ್ಲಿ ಭದ್ರವಾಗಿ ಸ್ಥಾಪಿಸಲ್ಪಟ್ಟಿತ್ತು ಮತ್ತು ಅದು ಈಗ ಯೆಹೂದ್ಯ ಪ್ರಾಂತ್ಯಗಳಲೆಲ್ಲಾ ಹರಡುತ್ತಿತ್ತು (9:31). ಸುವಾರ್ತೆಯು – ಭೌಗೋಳಿಕವಾಗಿಯೂ ಮತ್ತು ಸಾಮಾಜಿಕವಾಗಿಯೂ – ತನ್ನ ಯೆಹೂದ್ಯ ಎಲ್ಲೆಗಳನ್ನು ಮೀರುವ ಕ್ಷಣವು ಹತ್ತಿರವಾಗಿತ್ತು. ಅದು ಸಂಭವಿಸಿದಾಗ ಅನ್ಯವಿಶ್ವಾಸಿಗಳೊಂದಿಗೆ ಏನು ಮಾಡಬೇಕು ಎಂಬ ಸಮಸ್ಯೆಯನ್ನು ಎದುರಿಸಬೇಕಾಯಿತು ಮತ್ತು ಬಗೆಹರಿಸಬೇಕಾಯಿತು.

ಹಾಗಾಗಿ ಕೊರ್ನೇಲ್ಯನ ಮತ್ತು ಆತನ ಕುಟುಂಬದವರ ಮಾನಸಾಂತರವು ಅತೀ ಅವಶ್ಯಕವಾದ ಮತ್ತು ಅನ್ಯರು ಸಭೆಗೆ ಸೇರಿಸಲ್ಪಡುವುದರ ವಿಷಯವಾಗಿ ದೇವರ ಚಿತ್ತವೇನೆಂಬುದನ್ನು ಸ್ಪಷ್ಟವಾಗಿ ತೋರಿಸುವ ಒಂದು ಸನ್ನಿವೇಶವಾಯಿತು.

ಲೂಕನು, ಖಂಡಿತವಾಗಲೂ, ಈ ಘಟನೆಯು ನಡೆದು ಅನೇಕ ವರ್ಷಗಳು ಕಳೆದ ನಂತರ ಅದನ್ನು ದಾಖಲಿಸಿದನು. ಹಾಗಾಗಿ ಆತನು ಕೊರ್ನೇಲ್ಯನ ಮನೆಯಲ್ಲಿ ಪೇತ್ರನಿಗೆ ಉಂಟಾದ ಅನುಭವವನ್ನು ಹಿಂತಿರುಗಿ ನೋಡುತ್ತಾ ಸಭೆಗೆ ಅನ್ಯರನ್ನು ಸೇರಿಸಿಕೊಳ್ಳುವುದರ ಸಮಸ್ಯೆಯ ಬಗೆಹರಿಯುವಿಕೆಯಲ್ಲಿ ಅದು ಹೊತ್ತ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಂಡನು. ಕೊರ್ನೇಲ್ಯನು ಮಾನಸಾಂತರ ಹೊಂದಿದಾಗ ಅದನ್ನು ಒಂದು ವ್ಯತ್ಯಾಸವಾದ ಸನ್ನಿವೇಶವಾಗಿ ಪೇತ್ರ ಮತ್ತು ಯೆರೂಸಲೇಮಿನಲ್ಲಿದ್ದ ಸಭೆಯ ಇತರೆ ನಾಯಕರುಗಳು ಕಂಡರು. ಅವರು ಅದರ ಪ್ರಾಮುಖ್ಯತೆಯನ್ನು ಆ ಸಮಯದಲ್ಲಿ ಅರಿತಿರಲಿಲ್ಲ. ಆದರೆ ಕೆಲವು ವರ್ಷಗಳ ನಂತರ – ಪೌಲ ಮತ್ತು ಬಾರ್ನಬರು ಅನ್ಯ ವಿಶ್ವಾಸಿಗಳಿಗೆ ಮೊದಲು ಸುನ್ನತಿ ಮಾಡಿಸದೆ ಅವರನ್ನು ಅಂಗೀಕರಿಸಿದ್ದಕ್ಕಾಗಿ ಟೀಕಿಸಲ್ಪಟ್ಟಾಗ ಮತ್ತು ಈ ವಿಷಯವನ್ನು ಚರ್ಚಿಸಲು ಯೆರೂಸಲೇಮಿನಲ್ಲಿ ಒಂದು ಸಮ್ಮೇಳನವು ಏರ್ಪಡಿಸಲ್ಪಟ್ಟಾಗ – ಪೌಲ ಮತ್ತು ಬಾರ್ನಬರ ನಿಲುವಿನ ಪರವಾಗಿ: ಅಂದರೆ, ಅನ್ಯ ವಿಶ್ವಾಸಿಗಳಿಗೆ ಸುನ್ನತಿ ಮಾಡಿಸದೆ ಸಭೆಯು ಅವರನ್ನು ಅಂಗೀಕರಿಸಬಹುದು ಎಂಬುದರ ಪರವಾಗಿ, ಪೇತ್ರ ಮತ್ತು ಯಾಕೋಬರು ಕೊರ್ನೇಲ್ಯನ ಮಾನಸಾಂತರದ ಕಥೆಯನ್ನು ಉಪಯೋಗಿಸಿಕೊಂಡು ಆ ಸಮಸ್ಯೆಯನ್ನು ಬಗೆಹರಿಸಿದರು.

## ಉ 26. ಪೇತ್ರನ ದರ್ಶನ, 10:9–23

### ಇ) ಪಠ್ಯ ಪ್ರಶ್ನೆಗಳು

1. ಪೇತ್ರನು ಮಾಳಿಗೆಯ ಮೇಲೆ ಪ್ರಾರ್ಥಿಸಲು ಹೋದನು (ವ. 9).

2. ಪೇತ್ರನು ದರ್ಶನವನ್ನು ನೋಡಿದ ಮೇಲೆ ಅದರ ಅರ್ಥದ ಕುರಿತು ಆಲೋಚಿಸುತ್ತಿದ್ದನು (ವ. 17).

3. ಪವಿತ್ರಾತ್ಮನು ಪೇತ್ರನಿಗೆ ತಾನು ಮೂರು ಜನ ಸಂದರ್ಶಕರನ್ನು ಕಳುಹಿಸಿದ್ದೇನೆ ಎಂದು ತಿಳಿಸಿದನು (ವ. 20). ಆದರೆ 10:5 ರಲ್ಲಿ ಯೊಪ್ಪಕ್ಕೆ ಜನರನ್ನು ಕಳುಹಿಸುವಂತೆ ದೇವದೂತನು ಕೊರ್ನೇಲ್ಯನಿಗೆ ತಿಳಿಸಿದನು. ಇಲ್ಲಿ ತದ್ವಿರೋಧತೆಯು ಇದ್ದಂತೆ ತೋರುತ್ತದೆ! ಆದರೆ ಖಂಡಿತವಾಗಲೂ ಇವರೆಡು ವಚನಗಳ ನಡುವೆ ಯಾವುದೇ ತದ್ವಿರೋಧತೆಯಿಲ್ಲ. ದೇವದೂತನ ಮೂಲಕವಾಗಿ ಮಾತನಾಡಿದ್ದು ಪವಿತ್ರಾತ್ಮನಾಗಿದ್ದಾನೆ. ಜನರನ್ನು ಕಳುಹಿಸುವುದು ಕೊರ್ನೇಲ್ಯನ ಮುಂದಾಳತ್ವವಾಗಿರಲಿಲ್ಲ. ಅದು ಪವಿತ್ರಾತ್ಮನ ಮುಂದಾಳತ್ವವಾಗಿತ್ತು. ಪವಿತ್ರಾತ್ಮನು ದೂತನನ್ನೂ ಮತ್ತು ಕೊರ್ನೇಲ್ಯನನ್ನೂ ಉಪಯೋಗಿಸಿದನು.

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಮಾಳಿಗೆಯ ಮೇಲೆ ಉಂಟಾದ ದರ್ಶನದ ಮೂಲಕವಾಗಿ ದೇವರು ಪೇತ್ರನಿಗೆ ಕಲಿಸಿದ ಪಾಠವು ಆಹಾರದ ಕುರಿತಾಗಿರದೆ ಜನರ ಕುರಿತಾಗಿತ್ತು. ಹೊಸ ಒಡಂಬಡಿಕೆಯ ಕಾಲದಲ್ಲಿದ್ದ ಯೆಹೂದ್ಯರ ಮತ್ತು (ದೈವಭಕ್ತಿಯುಳ್ಳವರನ್ನೂ ಒಳಗೊಂಡು) ಅನ್ಯರ ನಡುವಿನ ಬೇಧವನ್ನು ಇಂದು ನಾವು ಅರ್ಥಮಾಡಿಕೊಳ್ಳುವುದು ಅಸಾಧ್ಯವಾಗಿದೆ. ಆದರೆ ಈ ಬೇಧವು ಹಳೆ ಒಡಂಬಡಿಕೆಯ ಅನುಸಾರವಾದುದ್ದಲ್ಲ. ಕೀರ್ತನೆಗಾರರು ಮತ್ತು ಪ್ರವಾದಿಗಳು ಮೆಸ್ಸೀಯನು ದೇಶಗಳ ಉತ್ತರಾಧಿಕಾರಿಯಾಗಿ ಬರುವ ದಿನವನ್ನು ಮುಂತಿಳಿಸಿದರು, ಆಗ ದೇವರ ಸೇವಕನು ಅವರ ಬೆಳಕಾಗುವನು, ಎಲ್ಲಾ ದೇಶದ ಜನರು ದೇವರ ಮನೆಯ ಕಡೆಗೆ ಹೋಗುವರು ಮತ್ತು ದೇವರು ತನ್ನ ಆತ್ಮವನ್ನು ಎಲ್ಲಾ ಜನರ ಮೇಲೆ ಸುರಿಸುವನು (ಕೀರ್ತನೆ. 2:7–8; 22:27–28; ಯೆಶಾಯ. 2:1–4; 42:6; 49:6; ಯೋವೇಲ. 2:28–32).

2. ದೇವರು ತಕ್ಕ ಸಮಯದಲ್ಲಿ ಪೇತ್ರ ಮತ್ತು ಕೊರ್ನೇಲ್ಯಯರ ನಡುವೆ ಅನೇಕ ಘಟನೆಗಳು ನಡೆಯುವಂತೆ ಪರಿಪೂರ್ಣವಾಗಿ ಕಾರ್ಯಮಾಡಿದ್ದು ಹೀಗಿದೆ:

- ಪೇತ್ರನು ಪ್ರಾರ್ಥಿಸುತ್ತಿರುವಾಗ ಮತ್ತು ದರ್ಶನವನ್ನು ಕಾಣುತ್ತಿರುವಾಗ, ಕೊರ್ನೇಲ್ಯಯನ ಕಡೆಯಿಂದ ಮೂರು ಜನರು ಪಟ್ಟಣವನ್ನು ಸಮೀಪಿಸಿದ್ದರು (ವ. 9–16).
- ಪೇತ್ರನು ದರ್ಶನದ ಅರ್ಥದ ಕುರಿತು ಆಲೋಚಿಸುತ್ತಿರುವಾಗ ಆ ಜನರು ಆತನ ಮನೆಗೆ ಬಂದಿದ್ದರು (ವ. 17–18).
- ಪೇತ್ರನು ಇನ್ನೂ ದರ್ಶನದ ಕುರಿತು ಆಲೋಚಿಸುತ್ತಿರುವಾಗ ಪವಿತ್ರಾತ್ಮನು ಆ ಜನರು ಆತನಿಗಾಗಿ ಹುಡುಕುತ್ತಿದ್ದಾರೆ ಮತ್ತು ಆತನು ಅವರೊಂದಿಗೆ ಹೋಗಬೇಕೆಂದು ತಿಳಿಸಿದನು (ವ. 19–20).
- ಪೇತ್ರನು ಕೆಳಗಿಳಿದು ಹೋಗಿ ತನ್ನ ಕುರಿತು ಪರಿಚಯಿಸಿಕೊಂಡಾಗ ಆ ಜನರು ತಾವು ಬಂದ ಉದ್ಧೇಶವನ್ನು ತಿಳಿಸಿದರು (ವ. 21–23).

ಇಡೀ ಪರಸ್ಥಿತಿಯ ಮೇಲೆ ದೇವರಾದ ಪವಿತ್ರಾತ್ಮನು ನಿಯಂತ್ರಣ ಹೊಂದಿರುವುದನ್ನು ನಾವು ಕಾಣಬಹುದು!

# ಉ 27. ಕೊರ್ನೇಲ್ಯನ ಮನೆಯಲ್ಲಿ ಪೇತ್ರನು, 10:24–48

## ಇ) ಪಠ್ಯ ಪ್ರಶ್ನೆಗಳು

1. ಕೊರ್ನೇಲ್ಯನು ಭಯಭಕ್ತಿಯಿಂದ ಪೇತ್ರನ ಕಾಲಿಗೆ ಅಡ್ಡ ಬೀಳುವುದರ ಮೂಲಕ ಆತನನ್ನು ಸ್ವಾಗತಿಸಿದನು. ಆದರೆ ಪೇತ್ರನು ಈ ರೀತಿಯಾದ ಸ್ವಾಗತವನ್ನು ಸ್ವೀಕರಿಸಲಿಲ್ಲ. ಇದು ಒಂದು ಆರಾಧನೆಯಾಗಿ ತಪ್ಪು ತಿಳುವಳಿಕೆಯನ್ನುಂಟು ಮಾಡುವ ಸಾಧ್ಯತೆ ಇತ್ತು. ದೇವರು ಮಾತ್ರ ಆರಾಧಿಸಲ್ಪಡಬೇಕೇ ಹೊರತು ಮನುಷ್ಯನಲ್ಲ.

2. ಈ ಸಭೆಯು ಮಧ್ಯಾಹ್ನ ಸುಮಾರು ಮೂರು ಗಂಟೆಗೆ ಕೊರ್ನೇಲ್ಯನ ಮನೆಯಲ್ಲಿ ಕೂಡಿಬಂದಿತ್ತು (ವ. 30).

3. ಪೇತ್ರನು ಹಾಗೂ ಯೇಸುವಿನ ಉಳಿದ ಶಿಷ್ಯರು ಈ ಸಂಗತಿಗಳ ಕುರಿತು ಸಾಕ್ಷಿಗಳಾಗಿದ್ದರು:

    - ಯೇಸುವಿನ ಸೇವೆ (ವ. 38–39)
    - ಆತನನ್ನು ಶಿಲುಬೆಗೇರಿಸಿದ್ದು (ವ. 39) ಮತ್ತು
    - ಆತನ ಪುನರಾತ್ಥಾನ ಹಾಗೂ ಅದರ ನಂತರ ಆತನು ಕಾಣಿಸಿಕೊಂಡದ್ದು (ವ. 40–41)

4. ಪೇತ್ರನು ತನ್ನ ಸಂದೇಶವನ್ನು ಇನ್ನೂ ಹೇಳುತ್ತಿರುವಾಗಲೇ ಕೊರ್ನೇಲ್ಯ ಮತ್ತು ಆತನ ಮನೆಯವರ ಮೇಲೆ ಪವಿತ್ರಾತ್ಮನು ಇಳಿದು ಬಂದನು. ಅವರು ಅನ್ಯಭಾಷೆಗಳನ್ನು ಮಾತನಾಡಿ ದೇವರನ್ನು ಸ್ತುತಿಸಿದರು.

5. ಕೊರ್ನೇಲ್ಯನು, ಆತನ ಕುಟುಂಬದವರು ಮತ್ತು ಸ್ನೇಹಿತರು ದೀಕ್ಷಾಸ್ನಾನ ತೆಗೆದುಕೊಳ್ಳಬೇಕೆಂದು ಆಜ್ಞಾಪಿಸುವಂತೆ ಪೇತ್ರನು ನಿರ್ಧರಿಸಲು ಕಾರಣವೇನೆಂದರೆ, (120 ಜನ ಮೊದಲ ವಿಶ್ವಾಸಿಗಳ ಗುಂಪಿನಲ್ಲಿ ಒಬ್ಬನಾಗಿದ್ದ) ಆತನು ಪಂಚಾಶತ್ತಮ ದಿನದಂದು ಪವಿತ್ರಾತ್ಮ ವರವನ್ನು ಹೊಂದಿಕೊಂಡಂತೆಯೇ (ಅನ್ಯಭಾಷೆಗಳಲ್ಲಿ ಮಾತನಾಡುವುದನ್ನೂ ಸೇರಿಸಿ) ಅವರೂ ಹೊಂದಿಕೊಂಡರು.

6. ಕೂಟವು ಮುಗಿದ ನಂತರ ಪೇತ್ರನು ಕೊರ್ನೇಲ್ಯನ ಮನೆಯಲ್ಲಿ ಇನ್ನೂ ಕೆಲವು ದಿನಗಳು ಉಳಿದುಕೊಳ್ಳುವಂತೆ ಆಹ್ವಾನಿಸಲ್ಪಟ್ಟನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೇತ್ರನು ತನ್ನನ್ನು ತಾನು ಆ ರೀತಿಯಲ್ಲಿ ಯಾಕೆ ಪರಿಚಯಿಸಿಕೊಂಡನೆಂದು ಲೂಕನು ಮುಕ್ತವಾಗಿ ತಿಳಿಸುತ್ತಿಲ್ಲ. ತಾನು ಒಬ್ಬ ಯೆಹೂದ್ಯನಾಗಿ ಅನ್ಯಜನರ ಮನೆಗೆ, ಅಂದರೆ ಕೊರ್ನೇಲ್ಯನ ಮನೆಗೆ, ಭೇಟಿಕೊಡುವುದು ಸರಿಯಲ್ಲವೆಂದು ನೀವೆಲ್ಲರೂ ತಿಳಿದೇ ಇದ್ದೀರಿ ಎಂದು ಪೇತ್ರನು ಅವರಿಗೆ ಹೇಳಿದಾಗ ಒಂದು ರೀತಿಯಲ್ಲಿ ಆತನು ಬಹಳ ಅಹಂಕಾರವುಳ್ಳನಾಗಿದ್ದನೆಂದು ತೋರುತ್ತದೆ. ಆದರೆ ಆ ದಿನಗಳಲ್ಲಿ ಯೆಹೂದ್ಯರ ಮತ್ತು ಅನ್ಯರ ನಡುವೆ ಇದ್ದಂತಹ ಆಳವಾದ ಭೇದವನ್ನು ನಾವು ನೆನಪಿಸಿಕೊಳ್ಳಬೇಕು. ಅದಲ್ಲದೆ ನಾನು ನೆನೆಸುವುದೇನೆಂದರೆ, ಪೇತ್ರನು ಮಾಳಿಗೆಯ ಮೇಲೆ ತಾನು ಹೊಂದಿದ ದರ್ಶನದ ಮತ್ತು ದೇವರ ಸಂದೇಶದ ನಿಷ್ಠುರತೆಯ ಕುರಿತು ಇನ್ನೂ ದಿಗ್ಭ್ರಮೆಗೊಂಡಿದ್ದನು; 'ದೇವರು ಶುದ್ಧೀಕರಿಸಿದ ಯಾವುದನ್ನೂ ಅಶುದ್ಧವೆನ್ನಬೇಡ!' (10:15). ಪವಿತ್ರಾತ್ಮನು ಆತನನ್ನು ಕೊರ್ನೇಲ್ಯನ ಮನೆಗೆ ಮಾರ್ಗದರ್ಶಿಸುತ್ತಿದ್ದ ರೀತಿಯಿಂದಲೂ ಆತನು ಗಲಿಬಿಲಿಗೊಂಡಿದ್ದನು (10:19–20). ಹಾಗಾಗಿ ಬಹುಶಃ ಪೇತ್ರನ ಅನಾನುಕೂಲತೆ ಮತ್ತು ಗೊಂದಲವು ಆತನು ತನ್ನ ಪರಿಚಯವನ್ನು ಅಷ್ಟು ತೀಕ್ಷ್ಣವಾಗಿ ಹಾಗೂ ಅಸಭ್ಯವಾಗಿ ಮಾಡಿಕೊಳ್ಳುವಂತೆ ಮಾಡಿತು!

2. ಸತ್ಯವೇದದಲ್ಲಿರುವ 'ನಾಲ್ಕು ದಿನಗಳು' ನಮ್ಮ ಆಧುನಿಕ ಭಾಷೆಯಂತೆ ಅಲ್ಲ. ಆ ದಿನಗಳಲ್ಲಿ ದಿನದ ಒಂದು ಭಾಗವನ್ನೂ ಒಂದು ದಿನವೆಂದು ಪರಿಗಣಿಸುತ್ತಿದ್ದರು:

    - ಮೊದಲ ದಿನ: ಮಧ್ಯಾಹ್ನ ಮೂರು ಗಂಟೆಗೆ ಸರಿಯಾಗಿ ದೇವದೂತನು ಕೊರ್ನೇಲ್ಯನಿಗೆ ಪ್ರತ್ಯಕ್ಷನಾದನು. ಅದಾದ ತಕ್ಷಣವೇ ಆತನು ಪೇತ್ರನನ್ನು ಕರೆತರಲು ಮೂರು ಜನರನ್ನು ಸೆಜರೇಯಾದಿಂದ ಯೊಪ್ಪಕ್ಕೆ ಕಳುಹಿಸಿದನು.
    - ಎರಡನೆಯ ದಿನ: ಈ ಮೂರು ಜನರು ಯೊಪ್ಪವನ್ನು ತಲುಪುವಷ್ಟರಲ್ಲಿ ಮಧ್ಯಾಹ್ನವಾಗಿತ್ತು. ಪೇತ್ರನು ಮಾಳಿಗೆಯ ಮೇಲೆ ಪ್ರಾರ್ಥಿಸುತ್ತಾ ಊಟವನ್ನು ಸಿದ್ಧಪಡಿಸುವಂತೆ ಹೇಳಿ ದರ್ಶನವನ್ನು ಕಾಣುತ್ತಿದ್ದನು. ಆತನು ಆ ಜನರನ್ನು ಸ್ವಾಗತಿಸಿ ಅವರು ರಾತ್ರಿಯಲ್ಲಿ ಅಲ್ಲಿಯೇ ಉಳಿದುಕೊಳ್ಳುವಂತೆ ಕೇಳಿಕೊಂಡನು.
    - ಮೂರನೆಯ ದಿನ: ಯೆಹೂದ್ಯ ಮೂಲದ ಆರು ಜನ ವಿಶ್ವಾಸಿಗಳೊಂದಿಗೆ ಮತ್ತು ಮೂರು ಜನ ಸಂದೇಶಕರೊಂದಿಗೆ ಪೇತ್ರನು ಯೊಪ್ಪದಿಂದ ಸೆಜರೇಯಕ್ಕೆ ಪ್ರಯಾಣವನ್ನು ಪ್ರಾರಂಭಿಸಿದನು. ಅದರ ನಡುವಿನ ದೂರವು 50 ಕಿ.ಮೀ. ಆಗಿತ್ತು. ಪ್ರಯಾಣದ ಅವಧಿಯು ನಡೆದುಕೊಂಡು ಹೋಗುವುದರ ಮೇಲೆ (ಮತ್ತು ನಡೆಯುವ ವೇಗದ ಮೇಲೆ) ಅಥವಾ ಸವಾರಿಮಾಡುವುದರ ಮೇಲೆ ಆಧಾರವಾಗಿದೆ – ಆದರೆ ಅದು ಹೆಚ್ಚುಕಡಿಮೆ ಒಂದು ದಿನ ಹಿಡಿಯುತ್ತಿತ್ತು.
    - ನಾಲ್ಕನೆಯ ದಿನ: ಕೊರ್ನೇಲ್ಯನು ತನ್ನ ಮನೆಯವರನ್ನು ಕೂಡಿಸಿ ಪೇತ್ರನಿಗಾಗಿ ಕಾಯುತ್ತಿದ್ದನು, ಆತನು ಮಧ್ಯಾಹ್ನ ಮೂರು ಗಂಟೆಗೆ ಬಂದನು. ಕೊರ್ನೇಲ್ಯನ ಮನೆಯಲ್ಲಿ ಸುವಾರ್ತಾ ಕೂಟವು ನಡೆಯಿತು.

3. ಆಗ ಪೇತ್ರನು 'ದೇವರು ಪಕ್ಷಪಾತಿಯಲ್ಲವೆಂದು ಈಗ ನನಗೆ ಮನದಟ್ಟಾಗಿದೆ, ದೇವರು ಪ್ರತಿಯೊಂದು ಜನಾಂಗದಲ್ಲಿಯೂ ತನಗೆ ಭಯಪಡುವ ಮತ್ತು ನೀತಿಯಾದದ್ದನ್ನು ಮಾಡುವ ಜನರನ್ನು ಸ್ವೀಕರಿಸುತ್ತಾನೆ' ಎಂದು ಹೇಳಿದನು.

   - ಪೇತ್ರನು ಹೇಳುವುದರ ಅರ್ಥವೇನೆಂದರೆ, ದೇವರು ಒಬ್ಬ ಮನುಷ್ಯನನ್ನು ಆತನ ಧಾರ್ಮಿಕ, ಭೌಗೋಳಿಕ, ಸಾಂಸ್ಕೃತಿಕ, ಸಾಮಾಜಿಕ, ಭಾಷೀಯ ಅಥವಾ ಆರ್ಥಿಕ ಹಿನ್ನಲೆಯ ಆಧಾರದ ಮೇಲೆ ಆಶೀರ್ವದಿಸುವುದಿಲ್ಲ. ಪೇತ್ರನು ಮುಂದುವರೆಸಿ ಹೇಳಿದ್ದೇನೆಂದರೆ, 'ಆದರೆ ದೇವರು ಪ್ರತಿಯೊಂದು ಜನಾಂಗದಲ್ಲಿಯೂ ತನಗೆ ಭಯಪಡುವ ಮತ್ತು ನೀತಿಯಾದದ್ದನ್ನು ಮಾಡುವ ಜನರನ್ನು ಸ್ವೀಕರಿಸುತ್ತಾನೆ' (ವ. 35). ಕೊರ್ನೇಲ್ಯನ ಮಾನಸಾಂತರದ ಕಥೆಯ ವಿಶಾಲವಾದ ಸನ್ನಿವೇಶ ಹಿನ್ನಲೆಯಲ್ಲಿ, ದೇವರು ಅಗತ್ಯತೆಯುಳ್ಳ ಜನರಿಗೆ ಸಹಾಯ ಮಾಡುವ, ದೈವಭಯವುಳ್ಳ ಮತ್ತು ಪ್ರಾರ್ಥನಾಪೂರ್ವಕ ಜನರನ್ನು ಮೆಚ್ಚುತ್ತಾನೆಂಬುದು ಇದರ ಸ್ಪಷ್ಟವಾದ ಅರ್ಥವಾಗಿದೆ (10:2–4 ನ್ನು ನೋಡಿರಿ).
   - ಆದರೆ ಒಬ್ಬ ಮನುಷ್ಯನು ಅಗತ್ಯತೆಯುಳ್ಳವರಿಗೆ ಸಹಾಯಮಾಡುವುದರ, ದೇವರಿಗೆ ಭಯಪಡುವುದರ ಮತ್ತು ಪ್ರಾರ್ಥಿಸುವುದರ ಮೂಲಕ ರಕ್ಷಣೆಯನ್ನು ಸಾಧಿಸಲು ಸಾಧ್ಯವೆಂದು ಪೇತ್ರನು ಹೇಳುತ್ತಿಲ್ಲ. ಇಲ್ಲ, ಕೊರ್ನೇಲ್ಯನಂತಹ ಒಳ್ಳೆಯ ವ್ಯಕ್ತಿಯೂ ಸಹ ಸುವಾರ್ತೆಯನ್ನು ಕೇಳಬೇಕಾಗಿತ್ತು ಮತ್ತು ಯೇಸು ಕ್ರಿಸ್ತನನ್ನು ತನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಬೇಕಾಗಿತ್ತು. ಯೇಸುವಿನ ಹೆಸರನ್ನು ಹೊರತುಪಡಿಸಿ ಬೇರೆ ಯಾವ ಹೆಸರಿನಿಂದಲೂ ರಕ್ಷಣೆ ಆಗುವುದಿಲ್ಲ!

4. ಪವಿತ್ರಾತ್ಮನ ವರವು ಸುರಿಸಲ್ಪಟ್ಟದ್ದಕ್ಕೆ ಪೇತ್ರನ ಸಂಗಡಿಗರು ಅತ್ಯಾಶ್ಚರ್ಯಪಟ್ಟರು (ವ. 45), ಯಾಕೆಂದರೆ ಅವರು (ಮತ್ತು ಆ ಸಮಯದಲ್ಲಿ ಎಲ್ಲಾ ವಿಶ್ವಾಸಿಗಳು) ಹಳೆ ಒಡಂಬಡಿಕೆಯ ಪ್ರವಾದಿಗಳ ಬದಲಾಗಿಯೂ; ಯೇಸು ತನ್ನ ಶಿಷ್ಯರಿಗೆ ಕೊಟ್ಟ ಮಹಾ ಆದೇಶದ ಬದಲಾಗಿಯೂ; ಮತ್ತು ಪವಿತ್ರಾತ್ಮನ ಬಲದ ಮೂಲಕ 'ಲೋಕದ ಕಟ್ಟಕಡೆಯವರೆಗೆ' ಅವರು ತನ್ನ ಸಾಕ್ಷಿಗಳಾಗಿರುವರು ಎಂಬ ಯೇಸುವಿನ ಪ್ರವಾದನೆಯ ಬದಲಾಗಿಯೂ (ಅ. ಕೃ. 1:8) – ಸುವಾರ್ತೆಯ ಸಾರ್ವತ್ರಿಕತೆಯನ್ನು ಅರ್ಥಮಾಡಿಕೊಂಡಿರಲಿಲ್ಲ. ಒಬ್ಬ ಅನ್ಯನು ದೀಕ್ಷಾಸ್ನಾನ ಹೊಂದಿ ಸಭೆಗೆ ಸೇರಿಸಲ್ಪಡಬೇಕಾದರೆ ಮೊದಲು ಯೆಹೂದ ಧರ್ಮಕ್ಕೆ ಮತಾಂತರಗೊಂಡು (ಅ. ಕೃ. 6:5 ರಲ್ಲಿರುವ ನಿಕೋಲಾಯನಂತೆ) ಸುನ್ನತಿ ಮಾಡಿಕೊಳ್ಳಬೇಕೆಂದು ಅವರು ಇನ್ನೂ ಯೋಚಿಸುತ್ತಿದ್ದರು.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಇತರರು ತಪ್ಪಾಗಿ ತಿಳುಕೊಳ್ಳುವ ರೀತಿಯಲ್ಲಿ ಜನರು ನಮ್ಮನ್ನು ವಂದಿಸಲು ನಾವು ಅವಕಾಶಮಾಡಿಕೊಡುವುದು ತಪ್ಪು ಎಂದು ನಾನು ಆಲೋಚಿಸುತ್ತೇನೆ. ಅವರು ನಿಮಗೆ ಗೌರವ ಸೂಚಿಸಲು ಮಾತ್ರ ಬಯಸುತ್ತಾರೆ – ಅದರಲ್ಲಿ ತಪ್ಪೇನಿಲ್ಲ! ಆದರೆ ಯಾರೂ ತಪ್ಪಾಗಿ ತಿಳುಕೊಳ್ಳದ

ರೀತಿಯಲ್ಲಿ ಅವರು ಅದನ್ನು ಮಾಡತಕ್ಕದ್ದು. ಕೊರ್ನೇಲ್ಯನ ಮನೆಯಲ್ಲಿರುವ ಪೇತ್ರನು ನಮಗೆ ಒಳ್ಳೆಯ ಮಾದರಿಯಾಗಿದ್ದಾನೆ. ಆತನು ಕೊರ್ನೇಲ್ಯನಿಗೆ ಹೇಳಿದನು, 'ಎದ್ದೇಳು, ನಾನೂ ಒಬ್ಬ ಮನುಷ್ಯನೇ!' ತನ್ನನ್ನು ಯಾರೂ ಆರಾಧಿಸಕೂಡದು ಎನ್ನುವುದನ್ನು ಆತನು ಎಲ್ಲರಿಗೂ ಸ್ಪಷ್ಟಪಡಿಸಿದನು.

# ಉ 28. ಪೇತ್ರನು ತನ್ನ ಕೃತಿಯ ಬಗ್ಗೆ ವಿವರಿಸಿದ್ದು, 11:1–18

## ಇ) ಪಠ್ಯ ಪ್ರಶ್ನೆಗಳು

1. ಪೇತ್ರನು ಅನ್ಯರ ಮನೆಗೆ ಭೇಟಿ ನೀಡಿ ಅವರೊಂದಿಗೆ ಊಟ ಮಾಡಿದನೆಂದು ಯೆರೂಸಲೇಮಿನಲ್ಲಿದ್ದ ವಿಶ್ವಾಸಿಗಳು ಆಪಾದಿಸಿದರು (ವ. 3).

2. ವ. 14 ರಲ್ಲಿ, ಕೊರ್ನೇಲ್ಯನು ಮತ್ತು ಆತನ ಮನೆಯವರು ಪೇತ್ರನ ಸಂದೇಶದ ಮೂಲಕ ರಕ್ಷಿಸಲ್ಪಡುವರೆಂದು ದೇವದೂತನು ಸ್ಪಷ್ಟವಾಗಿ ವಾಗ್ದಾನ ಮಾಡಿದನು. ಈ ಮಾಹಿತಿಯು ಅಧ್ಯಾಯ 10 ರಲ್ಲಿ ದಾಖಲಿಸಲ್ಪಟ್ಟಿಲ್ಲ.

3. ವ. 5–17 ರಲ್ಲಿ ಪೇತ್ರನ ಮಾತುಗಳಲ್ಲಿರುವ 'ಘಟನೆಯ ಕಾಲಾನುಕ್ರಮಣಿಕೆಯ' ಪಟ್ಟಿಯು ಹೀಗಿದೆ:

    - ಯೊಪ್ಪದಲ್ಲಿ ಪೇತ್ರನ ದರ್ಶನ
    - ಸೆಜರೇಯದಿಂದ ಬಂದ ಮೂರು ಜನರು ಮತ್ತು ಪವಿತ್ರಾತ್ಮನು ಪೇತ್ರನಿಗೆ ಆಜ್ಞಾಪಿಸಿದ್ದು
    - ಪೇತ್ರ ಮತ್ತು ಆತನ ಸಂಗಡಿಗರು ಕೊರ್ನೇಲ್ಯನ ಮನೆಗೆ ಬಂದಿದ್ದು
    - ದೇವದೂತನ ದರ್ಶನದ ಕುರಿತು ಕೊರ್ನೇಲ್ಯನ ಕಥೆ
    - ಪೇತ್ರನು ಮಾತನಾಡುತ್ತಿರುವಾಗ ಪವಿತ್ರಾತ್ಮನು ಕೊರ್ನೇಲ್ಯನ ಮನೆಯವರ ಮೇಲೆ ಇಳಿದು ಬಂದಿದ್ದು

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ವ. 11:5–17 ರಲ್ಲಿ ಪೇತ್ರನ ಮಾತುಗಳಲ್ಲಿರುವ 'ಘಟನೆಯ ಕಾಲಾನುಕ್ರಮಣಿಕೆಯ' ಪಟ್ಟಿಯು ಅಧ್ಯಾಯ 10 ರಲ್ಲಿರುವ ಲೂಕನ ದಾಖಲೆಗಿಂತ ಈ ರೀತಿಯಲ್ಲಿ ವ್ಯತ್ಯಾಸಕರವಾಗಿದೆ:

    - ಅಧ್ಯಾಯ 10 ರಲ್ಲಿರುವ ಲೂಕನ ಸ್ವಂತ ದಾಖಲೆಯು ಇಡೀ ಕಥೆಯು ನಡೆದ ಆ ನಾಲ್ಕು ದಿನಗಳ ಸಮಯಕ್ಕನುಸಾರವಾದ ಘಟನೆಯ ಕಾಲಾನುಕ್ರಮಣಿಕೆಯನ್ನು ಅನುಸರಿಸುತ್ತದೆ.

- ಅಧ್ಯಾಯ 11 ರಲ್ಲಿ, ಪೇತ್ರನು ಅದೇ ಕಥೆಯನ್ನು (ಹೆಚ್ಚಿನ ವಿವರಗಳಿಲ್ಲದೆ) ತನ್ನ ಸ್ವಂತ ದೃಷ್ಟಿಕೋನದಲ್ಲಿ ಹೇಳುತ್ತಾನೆ. ಇದು ಯೆರೂಸಲೇಮಿನ ಸಭೆಗೆ ಬಹಳ ಪ್ರಾಮುಖ್ಯವಾಗಿತ್ತು – ಕೆಳಗೆ ಈ) 4 ನ್ನು ನೋಡಿರಿ.

2. ಪೇತ್ರನು ಯೆರೂಸಲೇಮಿನ ಸಭೆಗೆ ಕೊರ್ನೇಲ್ಯನ ಮತ್ತು ಆತನ ಕುಟುಂಬದವರ ನೀರಿನ ದೀಕ್ಷಾಸ್ನಾನದ ಕುರಿತು ಹೇಳಿರಬೇಕು (10:48 ನ್ನು ನೋಡಿರಿ). ಆದರೆ ಲೂಕನು 11:17 ರಲ್ಲಿ ನೀರಿನ ದೀಕ್ಷಾಸ್ನಾನದ ಕುರಿತು ಯಾವುದೇ ರೀತಿಯ ಮಾಹಿತಿಯನ್ನು ತಿಳಿಸುತ್ತಿಲ್ಲ.

3. ಕೊರ್ನೇಲ್ಯನ ಮನೆಯಲ್ಲಿ ನಡೆದ ಸಂಗತಿಯ ಕುರಿತು ಯೆರೂಸಲೇಮ್ ಸಭೆಗೆ ಪೇತ್ರನು ವರದಿ ನೀಡಿದಾಗ (11:16–17) ಅದು ಯೇಸುವಿನ ಉಲ್ಲೇಖನವನ್ನೂ ಸಹ ಒಳಗೊಂಡಿತ್ತು ('ಯೋಹಾನನು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು, ಆದರೆ ನೀವು ಪವಿತ್ರಾತ್ಮನಿಂದ ದೀಕ್ಷಾಸ್ನಾನವನ್ನು ಹೊಂದಿವಿರಿ', ಅ. ಕೃ. 1:5), ಇದು 10:47–48 ರಲ್ಲಿರುವ ಲೂಕನ ದಾಖಲೆಯಲ್ಲಿ ತಿಳಿಸಲ್ಪಟ್ಟಿಲ್ಲ.

ಈ ವ್ಯತ್ಯಾಸದ ಹಿಂದಿನ ಕಾರಣದ ಕುರಿತು ನಾನು ಆಲೋಚಿಸುವುದೇನೆಂದರೆ, ಕೊರ್ನೇಲ್ಯನ ಮನೆಯಲ್ಲಿ ನಡೆದ ಸಂಗತಿಯ ಕುರಿತು ಯೆರೂಸಲೇಮಿನ ಸಭೆಯು ಸರಿಯಾದ ತೀರ್ಮಾನಕ್ಕೆ ತಲುಪುವುದೆಂದು ಪೇತ್ರನು ಖಚಿತಪಡಿಸಿಕೊಳ್ಳಲು ಬಯಸಿದನು:

- ವಿಶ್ವಾಸಿಗಳಿಗೆ ಪವಿತ್ರಾತ್ಮನ ಕುರಿತು ವಾಗ್ದಾನ ಮಾಡಿದಾತನು ಯೇಸು ಕ್ರಿಸ್ತನೇ
- ಈಗ ಕೊರ್ನೇಲ್ಯನ ಮನೆಯಲ್ಲಿ ಅನ್ಯರ ಮೇಲೆ ಪವಿತ್ರಾತ್ಮನು ಇಳಿದು ಬಂದನು
- ಹಾಗಾಗಿ ಯೆಹೂದ್ಯ ವಿಶ್ವಾಸಿಗಳಿಗೆ ಕೊಟ್ಟ ವರವನ್ನೇ ಅನ್ಯರಿಗೂ ಕೊಡುವುದರ ಮೂಲಕ ಅನ್ಯರೂ ವಿಶ್ವಾಸಿಗಳಾಗಬಹುದು ಎಂಬುದನ್ನು ದೇವರು ಸ್ಪಷ್ಟವಾಗಿ ತೋರಿಸಿದನು
- ಹಾಗಾಗಿ ಪೇತ್ರನು ಅವರಿಗೆ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸುವುದಕ್ಕೆ ತಿರಸ್ಕರಿಸಲು ಹೇಗೆ ಸಾಧ್ಯ? ಹಾಗೆ ಮಾಡಿದರೆ ದೇವರನ್ನೇ ವಿರೋಧಿಸಿದಂತಾಗುತ್ತದೆ!

ಯೆರೂಸಲೇಮ್ ಸಭೆಯು ಒಂದು ಸರಿಯಾದ ತೀರ್ಮಾನವನ್ನು ತಲುಪಿತು: 'ಅನ್ಯರಿಗೂ ಸಹ ದೇವರು ಜೀವಕ್ಕಾಗಿ ಮಾನಸಾಂತರವನ್ನು ಕೊಟ್ಟಿರುವನು' (ವ. 18).

4. ವ. 18 ರಲ್ಲಿ ದಾಖಲಾಗಿರುವ 'ಅನ್ಯರಿಗೂ ಸಹ ದೇವರು ಜೀವಕ್ಕಾಗಿ ಮಾನಸಾಂತರವನ್ನು ಕೊಟ್ಟಿರುವನು' ಎಂಬ ತೀರ್ಮಾನಕ್ಕೆ ಯೆರೂಸಲೇಮಿನ ಸಭೆಯು ಹೇಗೆ ತಲುಪಿತು ಎಂಬ ಪ್ರಶ್ನೆಗೆ ಎರಡು ಉತ್ತರವಿದೆ ಎಂದು ನಾನು ಆಲೋಚಿಸುತ್ತೇನೆ:

1) ಸಣ್ಣ ಉತ್ತರ: ಕೊರ್ನೇಲ್ಯನ ಮನೆಯವರ ಮೇಲೆ ಪವಿತ್ರಾತ್ಮನು ಬಂದಿದ್ದು ಅವರಿಗೆ ಮನದಟ್ಟುಮಾಡಿಕೊಟ್ಟಿತ್ತು. ಮೇಲಿನ ಈ) 3 ನ್ನು ನೋಡಿರಿ.

2) (ಸಣ್ಣ ಉತ್ತರವನ್ನೂ ಒಳಗೊಂಡ) ಉದ್ದನೆಯ ಉತ್ತರ: ಪೇತ್ರನು ಇಡೀ ಕಥೆಯನ್ನು ತನ್ನ ಸ್ವಂತ ದೃಷ್ಟಿಕೋನದಲ್ಲಿ ಹೇಳಿದಾಗ, ದೇವರ ರಕ್ಷಣೆಯು ಅನ್ಯರನ್ನೂ ಒಳಗೊಂಡಿದೆ ಎಂಬುದನ್ನು ಪೇತ್ರನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ದೇವರು ಹೇಗೆ ಆತನೊಂದಿಗೆ ನಾಲ್ಕು ಬಾರಿ ವ್ಯವಹರಿಸಬೇಕಾಯಿತೆಂದು ಯೆರೂಸಲೇಮಿನ ಸಭೆಯು ಅರಿತುಕೊಂಡಿತು. ಪೇತ್ರನ ಜನಾಂಗೀಯ ಮತ್ತು ಧಾರ್ಮಿಕ ಪೂರ್ವಕಲ್ಪಿತ ಭಾವನೆಗಳು ಅಷ್ಟು ಆಳವಾಗಿ ಬೇರೂರಿತ್ತು!

- ದೇವರು ಪೇತ್ರನಿಗೆ ಎಲ್ಲಾ ವಿಧವಾದ ಪ್ರಾಣಿಗಳಿಂದ ಕೂಡಿದ ಜೋಳಿಗೆಯ ದರ್ಶನವನ್ನು ಕೊಟ್ಟನು (ವ. 4–10).
- ಪೇತ್ರನು ಆ ಸೇವಕರೊಂದಿಗೆ ಸೆಜರೇಯಕ್ಕೆ ಹೋಗುವಂತೆ ಪವಿತ್ರಾತ್ಮ ದೇವರು ಆಜ್ಞಾಪಿಸಿದನು (ವ. 11–12).
- ಪೇತ್ರನ ಸಂದರ್ಶನಕ್ಕಾಗಿ ಸಿದ್ಧಗೊಳಿಸಲು ದೇವರು ಕೊರ್ನೇಲ್ಯನ ಬಳಿಗೆ ಒಬ್ಬ ದೇವದೂತನನ್ನು ಕಳುಹಿಸಿದನು (ವ. 13–14).
- ಪೇತ್ರನು ಪ್ರಸಂಗಿಸುತ್ತಿದ್ದಾಗ ಪವಿತ್ರಾತ್ಮ ದೇವರು ಕೊರ್ನೇಲ್ಯನ ಮನೆಯವರ ಮೇಲೆ ಬಂದನು (ವ. 15–17).

ಈ ನಾಲ್ಕು ನೇರವಾದ ದೈವೀಕ ಮಧ್ಯಸ್ಥಿಕೆಯು ಅನ್ಯರೂ ಸಹ ನೀರಿನಿಂದ ದೀಕ್ಷಾಸ್ನಾನವನ್ನು ಹೊಂದಬಲ್ಲರೆಂದು ಪೇತ್ರನಿಗೆ ಮನದಟ್ಟು ಮಾಡಿತು. ಈ ನಾಲ್ಕು ದೇವರ ಮಧ್ಯಸ್ಥಿಕೆಯ ಕಾರ್ಯದ ಕುರಿತಾದ ಪೇತ್ರನ ಸಾಕ್ಷಿಯು ದೇವರ ಮಹಾ ರಕ್ಷಣಾ ಯೋಜನೆಯಲ್ಲಿ ಅನ್ಯರೂ ಒಳಗೊಂಡಿದ್ದಾರೆ ಎಂಬುದನ್ನು ಯೆರೂಸಲೇಮಿನ ಸಭೆಗೆ ಮನದಟ್ಟು ಮಾಡಿಕೊಟ್ಟಿತು.

# ಉ 29. ಅಂತಿಯೋಕ್ಯದಲ್ಲಿದ್ದ ಸಭೆ, 11:19–30

## ಇ) ಪಠ್ಯ ಪ್ರಶ್ನೆಗಳು

2. ಸಿರಿಯಾದ ಅಂತಿಯೋಕ್ಯಕ್ಕೆ ಮೊದಲ ವಿಶ್ವಾಸಿಗಳ ಬರೋಣದ ಐತಿಹಾಸಿಕ ಹಿನ್ನಲೆಯು ಸ್ತೆಫನನ ರಕ್ತಸಾಕ್ಷಿಯ ನಂತರ ಉಂಟಾಸ ಸಭೆಯ ಚದುರುವಿಕೆಯಾಗಿತ್ತು.

3. ಈ ವಾಕ್ಯಭಾಗದಲ್ಲಿ ಬಾರ್ನಬನು ಅತೀ ಸಕಾರಾತ್ಮಕವಾಗಿ ವರ್ಣಿಸಲ್ಪಟ್ಟಿದ್ದಾನೆ:

    - ಆತನು ಅಂತಿಯೋಕ್ಯದಲ್ಲಿ ಉಜ್ಜೀವನವನ್ನು ಕಂಡು ಬಹಳ ಸಂತೋಷಪಟ್ಟನು (ವ. 23).
    - ಆತನು ಒಬ್ಬ ಉತ್ತೇಜಕನೂ ಮತ್ತು ಉಪದೇಶಕನೂ ಆಗಿದ್ದನು (ವ. 23), ಆತನು ಸೌಲನನ್ನು ಕರೆತರುವುದಕ್ಕಿಂತ ಮುಂಚೆ ಕೆಲವು ವರ್ಷಗಳ ಕಾಲ ಆ ಸಭೆಯ ಸಭಾಪಾಲಕರುಗಳಲ್ಲಿ ಒಬ್ಬನಾಗಿ ಕಾರ್ಯನಿರ್ವಹಿಸಿದ್ದನು.
    - ಆತನು ಸತ್ಪುರುಷನೂ, ಆತ್ಮಭರಿತನೂ ಹಾಗೂ ಪೂರ್ಣ ನಂಬಿಕೆಯುಳ್ಳವನೂ ಆಗಿದ್ದನು (ವ. 24).
    - ದೇವರು ಆತನನ್ನು ಉಪಯೋಗಿಸಿದನು, ಮತ್ತು ಅನೇಕ ಜನರು ಕರ್ತನ ಕಡೆಗೆ ಬಂದರು (ವ. 24).
    - ಆತನು ಒಬ್ಬ ವಾಸ್ತವವಾದಿಯಾದ ಮತ್ತು ನಿಸ್ವಾರ್ಥಿಯಾದ ಸಭಾಪಾಲಕನಾಗಿದ್ದನು, ಆತನು ಸೇವೆಯ ಅಭಿವೃದ್ಧಿಯಾಗಬೇಕಾದರೆ ಸೌಲನು ಒಬ್ಬ ಜೊತೆ–ಸಭಾಪಾಲಕನಾಗಿರುವುದು ಅವಶ್ಯವೆಂದು ಅರಿತಿದ್ದನು (ವ. 25–26).
    - ಆತನು ಮತ್ತು ಸೌಲನು ಸಭೆಯಲ್ಲಿ ಒಟ್ಟಿಗೆ ಬೋಧಿಸಿದಾಗ ಒಬ್ಬ ಒಳ್ಳೆಯ ಮತ್ತು ನಂಬಿಗಸ್ತನಾದ ಜೊತೆಕೆಲಸಗಾರನಾಗಿದ್ದನು (ವ. 26).

4. ಬಾರ್ನಬನು ಸೌಲನನ್ನು ನೋಡುವುದಕ್ಕಾಗಿ ಮತ್ತು ಅಂತಿಯೋಕ್ಯದಲ್ಲಿರುವ ಸೇವೆಗಾಗಿ ಸಹಾಯ ಮಾಡುವುದಕ್ಕಾಗಿ ಆತನನ್ನು ಅಲ್ಲಿಗೆ ಕರೆತರಲು ತಾರ್ಸಕ್ಕೆ ಪ್ರಯಾಣಿಸಿದನು (ವ. 25–26).

5. ಬಾರ್ನಬ ಮತ್ತು ಸೌಲರು ಅಂತಿಯೋಕ್ಯದಲ್ಲಿ ಒಟ್ಟಾಗಿ ಸಭಾಪಾಲಕರಾಗಿಯೂ ಹಾಗೂ ಬೋಧಕರಾಗಿಯೂ ಕೆಲಸ ಮಾಡಿದರು. ಅವರು 'ಅನೇಕ ಜನರಿಗೆ ಬೋಧನೆ ಮಾಡುತ್ತಿದ್ದರಿಂದ' ಬಹಳ ಕಾರ್ಯನಿರತರಾಗಿದ್ದಿರಬೇಕು (ವ. 26).

6. ಅಂತಿಯೋಕ್ಯದಲ್ಲಿ ವಿಶ್ವಾಸಿಗಳು ಮೊದಲ ಬಾರಿಗೆ 'ಕ್ರೈಸ್ತರು' ಎಂದು ಕರೆಯಲ್ಪಟ್ಟರು (ವ. 26). ಬಹುಶಃ ಪ್ರಾರಂಭದಲ್ಲಿ ಇದು ಒಂದು ಉಪನಾಮವಾಗಿದ್ದಿರಬಹುದು. ಆದರೂ ಇದು ಒಂದು ಒಳ್ಳೆಯ ಹೆಸರಾಗಿತ್ತು! ವಿಶ್ವಾಸಿಗಳು ಕ್ರಿಸ್ತನ ಮೇಲೆ ಕೇಂದ್ರೀಕೃತವಾಗಿದ್ದರೆಂದು ಇದು ತೋರಿಸುತ್ತದೆ: ಅವರು ಯಾವಾಗಲೂ ಆತನ ಕುರಿತು ಮಾತನಾಡುತ್ತಿದ್ದರು ಮತ್ತು ಅವರು ಆತನವರಾಗಿರಲು ಬಯಸುತ್ತಿದ್ದರು.

7. ಯೂದಾಯದಲ್ಲಿ ಭೀಕರ ಕ್ಷಾಮ ಉಂಟಾಗುವುದೆಂದು ಅಗಬನೆಂಬ ಪ್ರವಾದಿಯು ಮುಂಚಿತವಾಗಿ ಪ್ರವಾದಿಸಿದ್ದರಿಂದ ಅಂತಿಯೋಕ್ಯದ ವಿಶ್ವಾಸಿಗಳು ಯೂದಾಯದ ವಿಶ್ವಾಸಿಗಳಿಗೆ ತಮ್ಮ ಶಕ್ತಿಮೀರಿ ಸಹಾಯಮಾಡಲು ಬಯಸಿದರು. ಇದು ತೋರಿಸುವುದೇನೆಂದರೆ:

   - ಅಂತಿಯೋಕ್ಯದ ಸಭೆಯು ಕೊರತೆಯಲ್ಲಿರುವವರ ಕುರಿತು ಚಿಂತಿಸುತ್ತಿತ್ತು, ಮತ್ತು
   - ಸಭೆಯ ದೊಡ್ಡ ದೇಹದ ಸಹೋದರ ಅನ್ಯೋನ್ಯತೆಯನ್ನು ಅವರು ಅನುಭವಿಸಿದರು

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗದಲ್ಲಿ 'ಗ್ರೀಕರಿಗೂ' ಎಂಬ ಪದವು ಮುಖ್ಯವಾದುದ್ದೆಂದು ನಾನು ಆಲೋಚಿಸುತ್ತೇನೆ. ಸಿರಿಯಾದ ಅಂತಿಯೋಕ್ಯದವರೆಗೂ ಆದ ಸಭೆಯ ವಿಸ್ತರಣೆಯು ಕೇವಲ ಭೌಗೋಳಿಕವಾದುದ್ದಲ್ಲವೆಂದು ಇದು ತೋರಿಸುತ್ತದೆ. ಅದು ಒಂದು ಸಾಂಸ್ಕೃತಿಕ ವಿಸ್ತರಣೆಯೂ ಸಹ ಆಗಿತ್ತು. ಸಭಾ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ, ಪ್ರಜ್ಞಾಪೂರ್ವಕವಾಗಿ ಯೆಹೂದ್ಯರಿಗೂ ಮತ್ತು ಅನ್ಯರಿಗೂ (ಅದರಲ್ಲಿ ಗ್ರೀಕರು ಒಂದು ಅತೀ ದೊಡ್ಡ ಮತ್ತು ಪ್ರಭಾವಶಾಲಿ ಗುಂಪಾಗಿದ್ದರು) ಸುವಾರ್ತೆ ಸಾರುವ ಪ್ರಯತ್ನ ಇದಾಗಿತ್ತು.

2. ಯೆರೂಸಲೇಮ್ ಸಭೆಯು ಬಾರ್ನಬನನ್ನು ಅಂತಿಯೋಕ್ಯಕ್ಕೆ ಕಳುಹಿಸಲು ಎರಡು ಕಾರಣಗಳಿದ್ದಿರಬಹುದೆಂದು ನಾನು ಆಲೋಚಿಸುತ್ತೇನೆ:

   1) ಅಂತಿಯೋಕ್ಯದಲ್ಲಿನ ಪರಿಸ್ಥಿತಿಯನ್ನು, ವಿಶೇಷವಾಗಿ ಅಲ್ಲಿನ ಸಭೆಯು ಅನ್ಯರನ್ನೂ ಒಳಗೊಂಡಿದೆ ಎಂಬ ಸುದ್ದಿ ಕೇಳಿದಾಗ ಅದನ್ನು ಪರಿಶೀಲಿಸಬೇಕೆಂದು ಯೆರೂಸಲೇಮಿನ ಸಭೆಯು ಭಾವಿಸಿತು. ವಚನ 8:14 ನ್ನು ಹೋಲಿಸಿರಿ (ಅಲ್ಲಿ ಅವರು ಸಮಾರ್ಯದಲ್ಲಿ ಉಂಟಾದ ಉಜ್ಜೀವನವನ್ನು ಪರಿಶೀಲಿಸಿದರು) ಮತ್ತು 11:1–3 (ಪೇತ್ರನು ಸೆಜರೆಯಾದಲ್ಲಿ ಏನು ಮಾಡುತ್ತಿದ್ದನೆಂದು ಆತನನ್ನು ಅವರು ಪ್ರಶ್ನಿಸಿದರು).

   2) ಅನೇಕ ಜನರು ರಕ್ಷಣೆ ಹೊಂದುತ್ತಿದ್ದರಿಂದ ಮತ್ತು ವಿಶ್ವಾಸಿಗಳಲ್ಲಿ ಅನೇಕರು ಅನ್ಯ ಜನಾಂಗದಿಂದ ಬಂದವರಾದ್ದರಿಂದ, ಅಂತಿಯೋಕ್ಯ ಸಭೆಯ ಸೇವೆಗೆ ಸಹಾಯ ಮಾಡುವುದಕ್ಕಾಗಿ ಒಬ್ಬ ಒಳ್ಳೆಯ ಸಭಾಪಾಲಕನ ಅವಶ್ಯವಿದೆ ಎಂದು ಯೆರೂಸಲೇಮಿನ

ಸಭೆಯು ಮನಗಂಡಿತ್ತು. ಹಾಗಾಗಿ ಅವರಲ್ಲಿ ಅತ್ಯುತ್ತಮನಾದವನನ್ನು ಅವರು ಕಳುಹಿಸಿದರು – ಆತನೇ ಬಾರ್ನಬನು! ಬಾರ್ನಬನು ಸೈಪ್ರಸ್‌ನ ನಿವಾಸಿಯಾಗಿದ್ದನೆಂಬುದನ್ನು ನಾವು ನೆನಪಿಸಿಕೊಳ್ಳಬೇಕು, ಹಾಗಾಗಿ ಆತನು ಒಬ್ಬ ಅಂತರ್‌ರಾಷ್ಟ್ರೀಯ ಯೆಹೂದ್ಯನಾಗಿದ್ದು ಪಾಲೆಸ್ತೀನಿನ ಹೊರಗಡೆ ಜೀವಿಸಿದ ವೈಯಕ್ತಿಕ ಅನುಭವವುಳ್ಳವನಾಗಿದ್ದನು ಮತ್ತು ಗ್ರೀಕ್ ಭಾಷೆಯ ಪರಿಪೂರ್ಣ ಜ್ಞಾನವನ್ನು ಹೊಂದಿದ್ದನು. ಆತನನ್ನು ಅಪೊಸ್ತಲರೊಂದಿಗೆ ಹೋಲಿಸುವುದಾದರೆ ಅವರೆಲ್ಲರೂ ಪಾಲೆಸ್ತೀನಿನಲ್ಲಿ ಜನಿಸಿದ ಅರಾಮಿಕ್ ಭಾಷೆ ಮಾತನಾಡುವ ಯೆಹೂದ್ಯರಾಗಿದ್ದರು.

3. ಬಾರ್ನಬನು ಅಂತಿಯೋಕ್ಯಕ್ಕೆ ಬಂದಾಗ 'ದೇವರ ಕೃಪೆಯನ್ನು' ಕಂಡನು" (ವ. 23). ಆತನು ವಾಸ್ತವಿಕವಾಗಿ ನೋಡಿದ್ದೇನೆಂದರೆ, ಕರ್ತನ ಕಡೆಗೆ ತಿರುಗಿಕೊಂಡಿದ್ದ ಅನ್ಯರ ಮತ್ತು ಯೆಹೂದ್ಯರ – ಒಂದು ದೊಡ್ಡ ಜನಸಮೂಹವಾಗಿರಬಹುದು (ವ. 21). ಅನೇಕ ಜನರು ರಕ್ಷಿಸಲ್ಪಟ್ಟಿದ್ದು ದೇವರ ಕೃಪೆಯ ಒಂದು ಸಂಕೇತವಾಗಿತ್ತು. ಅನೇಕ ಅನ್ಯರು ರಕ್ಷಿಸಲ್ಪಟ್ಟಿದ್ದೂ ಸಹ ದೇವರ ಕೃಪೆಯ ಒಂದು ಸಂಕೇತವಾಗಿತ್ತು. ಅಂತಿಯೋಕ್ಯದ ಸಭೆಯೊಂದಿಗೆ 'ಕರ್ತನ ಹಸ್ತವಿತ್ತು'" ಎಂಬುದಕ್ಕೆ ಇವೆರಡೂ ಸಂಗತಿಗಳು ಸಾಕ್ಷಿಗಳಾಗಿವೆ (ವ. 21).

4. ನಾನು ಆಲೋಚಿಸುವಂತೆ ಲೂಕನು ತನ್ನ ಕಥೆಯಲ್ಲಿ ಅಗಬನ ಪ್ರವಾದನೆಯನ್ನು ಸೇರಿಸಲು ಕಾರಣವೇನೆಂದರೆ ಕೇವಲ ಒಬ್ಬ ಪ್ರವಾದಿಯ, ಆತನ ಪ್ರವಾದನೆಯ ಮತ್ತು ಆತನ ಪ್ರವಾದನೆಯ ನೆರವೇರಲ್ಪಡುವಿಕೆಯ ಕುರಿತು ಒಂದು ಕಥೆಯನ್ನು ಹೇಳಬೇಕೆಂದಲ್ಲ.

   ನಾನು ಯೋಚಿಸುವಂತೆ ಈ ಕೆಳಗಿನವುಗಳು ಲೂಕನ ಕಾರಣಗಳಾಗಿದ್ದಿರಬಹುದು:

   - ಅಂತಿಯೋಕ್ಯ ಸಭೆಯು ಕೇವಲ ಸಂಖ್ಯೆಯಲ್ಲಿ ಮಾತ್ರ ಬೆಳೆಯದೆ ಬಲಹೀನರ ಮತ್ತು ಅಗತ್ಯತೆಯಲ್ಲಿದ್ದ ಜನರ ಕುರಿತಾಗಿ ಸಾಮಾಜಿಕ ಕಳಕಳಿಯಲ್ಲಿಯೂ ಬೆಳೆದಿತ್ತು ಎಂಬುದನ್ನು ತೋರಿಸಬೇಕೆಂದಿದ್ದನು. ಆ ಹಣ ಸಂಗ್ರಹಣೆಯು ಅವರ ಆತ್ಮೀಕ ಪರಿಪಕ್ವತೆಯ ಒಂದು ಸಂಕೇತವಾಗಿತ್ತು.

   - ಅಂತಿಯೋಕ್ಯ ಸಭೆಗೂ ಮತ್ತು ಯೆರೂಸಲೇಮಿನ ಸಭೆಗೂ ನಡುವೆ ಇದ್ದ ಸಂಬಂಧವನ್ನು ತೋರಿಸಲು ಬಯಸಿದನು. ಕೆಲವು ವರ್ಷಗಳ ಹಿಂದೆ ಬಾರ್ನಬನು ಅಂತಿಯೋಕ್ಯ ಸಭೆಯ ಸೇವೆಗೆ ಒಬ್ಬ ಸಭಾಪಾಲಕನಾಗಿ ಯೆರೂಸಲೇಮಿನಿಂದ ಕಳುಹಿಸಲ್ಪಟ್ಟಿದ್ದನು. ಈಗ ಬಾರ್ನಬ ಮತ್ತು ಸೌಲರು ಯುದಾಯದಲ್ಲಿದ್ದ ಕ್ಷಾಮದ ಪರಿಸ್ಥಿತಿಯಲ್ಲಿ ಸಹಾಯ ಮಾಡುವುದಕ್ಕಾಗಿ ಕಾಣಿಕೆಯೊಂದಿಗೆ ಅಂತಿಯೋಕ್ಯದಿಂದ ಕಳುಹಿಸಲ್ಪಟ್ಟರು.

   - ಸಾರ್ವತ್ರಿಕ ಸಭೆಯ ಸಹೋದರತ್ವವನ್ನು ಪ್ರದರ್ಶಿಸಲು ಬಯಸಿದನು. ಎಲ್ಲಾ ಸ್ಥಳೀಯ ಸಭೆಗಳು ಭಕ್ತರ ಒಂದು ದೊಡ್ಡ ಅನ್ಯೋನ್ಯತೆಗೆ ಸಂಬಂಧಪಟ್ಟವರಾಗಿದ್ದಾರೆ. ಒಬ್ಬ ಸ್ಥಳೀಯ ಸದಸ್ಯನಿಗೆ ನೋವು ಉಂಟಾಗುವಾಗ, ಎಲ್ಲರಿಗೂ ನೋವು ಊಂಟಾಗುತ್ತದೆ – ಮತ್ತು ಆ ನೋವಿಗೆ ಕಾರಣವಾದ ಅಗತ್ಯತೆಯನ್ನು ಭರಿಸಲು ಪ್ರಯತ್ನಿಸುತ್ತಾರೆ.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

ಈ ಎರಡು ಪರ್ಯಾಯಗಳ ನಡುವೆ ಸಮತೋಲನವಿರಬೇಕೆಂದು ನಾನು ಬಯಸುತ್ತೇನೆ. ದೇವರ ರಾಜ್ಯಕ್ಕಾಗಿ ನಾವು ದೊಡ್ಡ ಸುಗ್ಗಿಯನ್ನು ತರುವುದನ್ನು ಎಂದಿಗೂ ಅಲಕ್ಷ್ಯ ಮಾಡಬಾರದು ಮತ್ತು ವಿಶ್ವಾಸಿಗಳು ಆತ್ಮೀಕ ಪರಿಪೂರ್ಣತೆಗೆ ತಲುಪುವಂತೆ ಅವರನ್ನು ಪೋಷಿಸುವುದನ್ನೂ ಎಂದಿಗೂ ಅಲಕ್ಷ್ಯ ಮಾಡಬಾರದು.

ಹಾಗಾಗಿ ಇವೆರಡನ್ನೂ ಒಂದೇ ಸಮಯದಲ್ಲಿ ನಾವು ಹೇಗೆ ಮಾಡಲು ಸಾಧ್ಯ? ಈ ಪ್ರಶ್ನೆಗೆ ಸಭೆಯ ನಾಯಕತ್ವವು ಒಂದು ಉತ್ತರವಾಗಿದೆ ಎಂದು ನಾನು ಆಲೋಚಿಸುತ್ತೇನೆ. ಒಬ್ಬ ನಾಯಕನು/ಸಭಾಪಾಲಕನು ಒಂಟಿಯಾಗಿ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ಆದರೆ ಸಭೆಯು ನಾಯಕರುಗಳ/ಸಭಾಪಾಲಕರ ಒಂದು ತಂಡವನ್ನು ಹೊಂದಿದ್ದರೆ ಅಧಿಕವಾದುದ್ದನ್ನು ಸಾಧಿಸಬಹುದು.

ಅಂತಿಯೋಕ್ಯದ ಸಭೆಯ ಕುರಿತಾದಂತಹ ಈ ವಾಕ್ಯಭಾಗವು ತೋರಿಸುವುದೇನೆಂದರೆ, ಬಾರ್ನಬ ಮತ್ತು ಸೌಲರು ಸಭೆಯಲ್ಲಿ ಮುಖ್ಯವಾಗಿ ಉಪದೇಶಕರಾಗಿ ಮತ್ತು ಸಮಾಲೋಚಕರಾಗಿ ಕೆಲಸ ಮಾಡಿದರು. ಆದರೆ ಸಭಾಪಾಲಕರ ತಂಡದಲ್ಲಿ ಇನ್ನೂ ಅನೇಕರಿದ್ದರು ಎಂಬುದು ನಮಗೆ ತಿಳಿದದೆ (ನೋಡಿರಿ 13:1–2). ಅದಲ್ಲದೆ, ಸೌಲನು ಒಬ್ಬ ಪ್ರತಿಭಾನ್ವಿತ ಸುವಾರ್ತಿಕನಾಗಿದ್ದನು ಎಂಬುದು ಆತನ ಸೇವಾ ಪ್ರಯಾಣಗಳಿಂದ ನಮಗೆ ತಿಳಿದುಬರುತ್ತದೆ.

## ಉ 30. ಅದ್ಭುತವಾದ ರೀತಿಯಲ್ಲಿ ಪೇತ್ರನು ಬಿಡುಗಡೆಯಾದದ್ದು, 12:1–19

### ಇ) ಪಠ್ಯ ಪ್ರಶ್ನೆಗಳು

1. ಅರಸನಾದ ಹೆರೋದನು ಯೆಹೂದ್ಯರನ್ನು ಮೆಚ್ಚಿಸುವುದಕ್ಕಾಗಿ ಪೇತ್ರನನ್ನು ಬಂಧಿಸಿದನು (ವ. 3).

2. ಪೇತ್ರನು ಸೆರೆಮನೆಯಲ್ಲಿರುವಾಗ ಸಭೆಯು ಆತನಿಗೋಸ್ಕರವಾಗಿ ಆಸಕ್ತಿಯಿಂದ ದೇವರಿಗೆ ಪ್ರಾರ್ಥಿಸುತ್ತಿತ್ತು (ವ. 5).

3. ದೇವದೂತನು ಬಂದು ಪೇತ್ರನನ್ನು ಸೆರೆಮನೆಯಿಂದ ಹೊರಗೆ ನಡೆಸಿದಾಗ, ಆತನು ಮೊದಲಿಗೆ ಅದನ್ನು ಒಂದು ದರ್ಶನವೆಂದು ಭಾವಿಸಿದನು.

4. ದೇವದೂತನು ತನ್ನನ್ನು ಬಿಟ್ಟು ಹೋಗುವವರೆಗೂ ಪೇತ್ರನು ತಾನು ಬಿಡುಗಡೆ ಹೊಂದಿದ ಮನುಷ್ಯನೆಂದು ಅರಿಯಲಿಲ್ಲ. ಅಷ್ಟರೊಳಗಾಗಿ ಪೇತ್ರನು ಸೆರೆಮನೆಯನ್ನು ಬಿಟ್ಟು ಒಂದು ಕಬ್ಬಿಣದ ದ್ವಾರದ ಮೂಲಕ ಯೆರೂಸಲೇಮನ್ನು ಪ್ರವೇಶಿಸಿ ಒಂದು ಬೀದಿಯನ್ನು ದಾಟಿದ್ದನು (ವ. 9–11).

5. ರೋದೆಯು ಮೊದಲಿಗೆ ಬಾಗಿಲನ್ನು ತೆರೆಯಲಿಲ್ಲ. ಆಕೆಯು ಬಾಗಿಲಲ್ಲಿ ಪೇತ್ರನ ಧ್ವನಿಯನ್ನು ಕೇಳಿ ಎಷ್ಟು ಸಂತೋಷಭರಿತಳಾದಳೆಂದರೆ ಆಕೆಯು ತಕ್ಷಣವೇ ಮರಿಯಳ ಮನೆಯಲ್ಲಿ ಕೂಡಿ ಬಂದಿದ್ದ ಇತರ ವಿಶ್ವಾಸಿಗಳಿಗೆ ಪೇತ್ರನು ಬಂದಿರುವ ಸಂಗತಿಯನ್ನು ತಿಳಿಸಲು ಮನೆಯೊಳಗೆ ಓಡಿ ಹೋದಳು.

6. ಈ ಕಥೆಯು ಪೇತ್ರನು ಅಡಗಿಕೊಳ್ಳಲು ಬೇರೆ ಸ್ಥಳಕ್ಕೆ ಹೋಗುವುದರೊಂದಿಗೆ ಮತ್ತು ಆತನ ಕಾವಲುಗಾರರಿಗೆ ಮರಣದಂಡನೆಯಾಗುವುದರೊಂದಿಗೆ ಅಂತ್ಯಗೊಳ್ಳುತ್ತದೆ. ಇದು ರೋಮನ್ನರ ಆಚಾರವಾಗಿತ್ತು: ಒಬ್ಬ ಸೆರೆಯಾಳು ತಪ್ಪಿಸಿಕೊಂಡಾಗ ಆತನ ದಂಡನೆಯು ಆತನ ಕಾವಲುಗಾರರ ಮೇಲೆ ಬರುತ್ತಿತ್ತು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೇತ್ರನು ತಾನು ದೇವದೂತನ ಸಹಾಯದಿಂದ ಸೆರೆಮನೆಯಿಂದ ಬಿಡುಗಡೆ ಹೊಂದಿದ್ದನ್ನು, ತಾನು ಇನ್ನೂ ಜೀವಂತವಾಗಿ ಇದ್ದೇನೆಂಬುದನ್ನು ಮತ್ತು ತಾನು ಅಡಗಿಕೊಳ್ಳಲು ಬೇರೆ ಸ್ಥಳಕ್ಕೆ ಹೋಗುತ್ತಿದ್ದೇನೆಂಬುದನ್ನು ಸಭೆಗೆ (ಮತ್ತು ವಿಶೇಷವಾಗಿ ಸಭಾನಾಯಕರುಗಳಿಗೆ) ತಿಳಿಸಲು ಮರಿಯಳ ಮನೆಗೆ ಹೋಗಿದ್ದನು. ಆ ದಿನಗಳಲ್ಲಿ ಯಾವುದೇ ಸಭೆಯ ಕಟ್ಟಡಗಳು ಇರಲಿಲ್ಲವಾದ್ದರಿಂದ ಜನರು ಪ್ರಾರ್ಥನೆ ಮತ್ತು ಆರಾಧನೆಗಳಿಗಾಗಿ ಒಬ್ಬೊಬ್ಬರ ಮನೆಗಳಲ್ಲಿ ಕೂಡಿ ಬರುತ್ತಿದ್ದರು. ಈ ಮನೆಗಳಲ್ಲಿ ಮರಿಯಳ ಮನೆಯು ಒಂದಾಗಿತ್ತು ಮತ್ತು ಪೇತ್ರನಿಗೆ ಅದು ತಿಳಿದಿತ್ತು ಮತ್ತು ವಿಶ್ವಾಸಿಗಳು ಅಲ್ಲಿರಬಹುದೆಂದು ಆತನು ಭಾವಿಸಿದ್ದನು.

2. ವಿಶ್ವಾಸಿಗಳು ಬಾಗಿಲ ಹತ್ತಿರ ಬಂದಿರುವುದು ಪೇತ್ರನಲ್ಲ ಬದಲಾಗಿ ಆತನ ದೂತನೆಂದು ಯಾಕೆ ಆಲೋಚಿಸಿದರು ಎಂಬುದನ್ನು ಲೂಕನು ತಿಳಿಸುತ್ತಿಲ್ಲ. ಆದರೆ ಅವರ ಆಸಕ್ತಿಯುಳ್ಳ ಪ್ರಾರ್ಥನೆಯ ಬದಲಾಗಿಯೂ (ವ. 5), ಇಂತಹ ಸಂದಿಗ್ಧ ಪರಿಸ್ಥಿತಿಯಿಂದ ಪೇತ್ರನು ಜೀವಂತವಾಗಿ ಬರುವನೆಂದು ಅವರು ನಂಬಿರಲಿಲ್ಲ. ಹಾಗಾಗಿ ಬಹುಶಃ ಪೇತ್ರನು ಈಗಾಗಲೇ ಕೊಲ್ಲಲ್ಪಟ್ಟಿರಬಹುದು ಮತ್ತು ಇದನ್ನು ತಮಗೆ ತಿಳಿಸಲು ದೇವರು ಪೇತ್ರನ ಸಂರಕ್ಷಕ ದೂತನನ್ನು ಕಳುಹಿಸಿರಬಹುದೆಂದು ಅವರು ಆಲೋಚಿಸಿದ್ದರು.

3. ವಾಸ್ತವಿಕವಾಗಿ ವಿಶ್ವಾಸಿಗಳು ದೇವರು ಪೇತ್ರನನ್ನು ಸೆರೆಮನೆಯಿಂದ ಬಿಡಿಸಿ ಆತನ ಜೀವವನ್ನು ರಕ್ಷಿಸಬೇಕೆಂದು ಪ್ರಾರ್ಥಿಸುತ್ತಿದ್ದರೆಂದು ನಾನು ಆಲೋಚಿಸುತ್ತೇನೆ. ಆದರೆ ಅವರ ಹೃದಯದ ಅಂತರಾಳದಲ್ಲಿ ತಮ್ಮ ಪ್ರಾರ್ಥನೆಗೆ ಉತ್ತರ ಸಿಗಲಾರದೆ ಇರಬಹುದು ಎಂದು ಅವರು ಸಂಶಯಪಟ್ಟರೆಂದೂ ಸಹ ನಾನು ಆಲೋಚಿಸುತ್ತೇನೆ. ಇದಕ್ಕೂ ಮುಂಚೆ ಅರಸನಾದ ಹೆರೋದನು ಬಂಧಿಸಿದ್ದ ವಿಶ್ವಾಸಿಗಳಿಗಾಗಿ (ವ. 1) ಸಭೆಯು ನಿಶ್ಚಯವಾಗಿಯೂ ಪ್ರಾರ್ಥಿಸಿತ್ತು, ಆದಾಗ್ಯೂ ಯಾಕೋಬನು ಶಿರಚ್ಛೇದನ ಮಾಡಲ್ಪಟ್ಟನು (ವ. 2).

4. ಪೇತ್ರನು ಸಂಭವಿಸಿದ್ದೆಲ್ಲವನ್ನೂ 'ಯಾಕೋಬನಿಗೂ ಹಾಗೂ ಸಹೋದರರಿಗೂ' ತಿಳಿಸಬೇಕೆಂದು ವಿಶ್ವಾಸಿಗಳಿಗೆ ಯಾಕೆ ಹೇಳಿದನೆಂದರೆ ತಾನು ಅಡಗಿಕೊಳ್ಳಲು ಹೋಗುತ್ತಿರುವುದರಿಂದ ಅವರು ಮುಖಾಮುಖಿಯಾಗಿ ತನ್ನನ್ನು ಕಾಣಲು ಆಗದೆ ಇದ್ದಾಗ್ಯೂ ತಾನು ಜೀವಂತವಾಗಿದ್ದೇನೆ ಮತ್ತು ಸೌಖ್ಯವಾಗಿದ್ದೇನೆ ಎಂಬುದು ಅವರಿಗೆ ತಿಳಿಯಬೇಕೆಂಬುದು ಆತನು ಬಯಸಿದನು.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

2. ನಮಗೆ ಉತ್ತರದ ಕುರಿತು ಅನುಮಾನಗಳು ಇದ್ದಾಗ್ಯೂ ಪ್ರಾರ್ಥನೆಯಲ್ಲಿ ದೇವರ ಮುಂದೆ ಗಂಭೀರವಾದ ವಿಷಯಗಳನ್ನು ತರುವುದು ತಪ್ಪೆಂದು ನಾನು ಆಲೋಚಿಸುವುದಿಲ್ಲ? ನಾವು

ಯಾವಾಗಲೂ ನಮ್ಮ ಸಮಸ್ಯೆಗಳನ್ನು ದೇವರ ಮುಂದೆ ತರಬೇಕು ಮತ್ತು ಆತನು ತನ್ನ ಸ್ವಂತ ದೈವಿಕ ಮಾರ್ಗದಲ್ಲಿ ಅದರೊಂದಿಗೆ ವ್ಯವಹರಿಸುವನು ಎಂದು ನಾವು ಆತನಲ್ಲಿ ಭರವಸವಿಡಬೇಕು.

ಈ ವಾಕ್ಯಭಾಗದ ಕುರಿತು ಈ ಅಧ್ಯಾಯದ ಊ) 2 ರಲ್ಲಿರುವ ಸತ್ಯವೇದ ಅಧ್ಯಯನದ ಹೊರರೇಖೆಯನ್ನೂ ಸಹ ನೋಡಿರಿ.

## ಉ 31. ಹೆರೋದನ ಮರಣ, 12:19–24

### ಇ) ಪಠ್ಯ ಪ್ರಶ್ನೆಗಳು

2. ಟೈರ್ ಮತ್ತು ಸಿದೋನಿನ ಜನರು ತಮ್ಮ ಆಹಾರಧಾನ್ಯಗಳ ಸರಬರಾಜಿಗಾಗಿ ಸಂಪೂರ್ಣವಾಗಿ ಹೆರೋದ ಅರಸನನ್ನು ಅವಲಂಭಿಸಿದ್ದರು. ಆತನು (ಯೂದಾಯ ಮತ್ತು ಸಮಾರ್ಯ ಮಾತ್ರವಲ್ಲದೆ) ಗಲಿಲಾಯಾದ ಮೇಲೆಯೂ ಅರಸನಾಗಿದ್ದನು ಮತ್ತು ಅಲ್ಲಿ ಉತ್ಪಾದನೆ ಆಗುತ್ತಿದ್ದ ದವಸಧಾನ್ಯಗಳ ಮೇಲೆ ನಿಯಂತ್ರಣವನ್ನು ಹೊಂದಿದ್ದನು.

3. ದೇವರು ಒಬ್ಬ ದೇವದೂತನನ್ನು ಕಳುಹಿಸಲು ಆತನು ಅವನನ್ನು ಹೊಡೆದನು, ಅವನು ಹುಳ ಬಿದ್ದು ಸತ್ತು ಹೋದನು.

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಹೆರೋದನ ಮುಂದೆ ಶ್ರೋತೃಗಳನ್ನು ಕರೆತರಲು, ಅರಸನ ಭಂಟನಾಗಿದ್ದ ಬ್ಲಾಸ್ತನ ಸಹಾಯವು ಟೈರ್ ಮತ್ತು ಸಿದೋನಿನ ಜನರಿಗೆ ಅವಶ್ಯಕವಾಗಿತ್ತು. ಅವರು ಬ್ಲಾಸ್ತನಿಗೆ ಲಂಚವನ್ನು ಕೊಟ್ಟರೆಂಬುದಾಗಿ ಗ್ರೀಕ್ ಪಠ್ಯವು ಸೂಚಿಸುತ್ತದೆ.

2. ಅರಸನಾದ ಹೆರೋದನ ಭಯಂಕರವಾದ ಸಾವಿಗೆ ಕಾರಣವೇನೆಂದರೆ, ಆತನು ತಾನು ದೇವರಲ್ಲವೆಂದು ಅರಿಕೆ ಮಾಡಲಿಲ್ಲ. 'ಇದು ಮಾನವನ ಧ್ವನಿಯಲ್ಲ ದೇವರದೇ' ಎಂದು ಜನರು ಕೂಗುತ್ತಲೇ ಇದ್ದಾಗ (ಅವರು ಒಂದು ಸಲ ಮಾತ್ರ ಕೂಗಲಿಲ್ಲವೆಂದು ಗ್ರೀಕ್ ವ್ಯಾಕರಣವು ಸೂಚಿಸುತ್ತದೆ) ಆತನು ಅವರು ನಿಶ್ಯಬ್ಧವಾಗುವಂತೆ ಹೇಳಬೇಕಾಗಿತ್ತು.

3. ಅಧ್ಯಾಯ 12:1–24 ರಲ್ಲಿ ಲೂಕನು ಒಬ್ಬ ಕುಶಲ ಬರಹಗಾರನೆಂದು ನಾವು ನೋಡುತ್ತೇವೆ:

    - ಇಹಲೋಕ ಅಧಿಕಾರವನ್ನು ಪ್ರತಿನಿಧಿಸಿದ ಅರಸನಾದ ಹೆರೋದನ ವಿಜಯೋತ್ಸವದಿಂದ ಅಧ್ಯಾಯವು ಪ್ರಾರಂಭವಾಗುತ್ತದೆ: ಹೆರೋದನು ಸಭೆಯನ್ನು ಹಿಂಸಿಸುತ್ತಿದ್ದನು ಮತ್ತು ಸಭೆಯ ನಾಯಕರುಗಳನ್ನು ಬಂಧಿಸಿದನು, ಯಾಕೋಬನನ್ನು ಕೊಲ್ಲಿಸಿದನು ಮತ್ತು ಪೇತ್ರನನ್ನು ಕೊಲ್ಲಬೇಕೆಂದು ಸೆರೆಮನೆಯಲ್ಲಿ ಹಾಕಿಸಿದ್ದನು.

    - ದೇವರ ರಾಜ್ಯವನ್ನು ಪ್ರತಿನಿಧಿಸಿದ ಸಭೆಯ ವಿಜಯೋತ್ಸವದೊಂದಿಗೆ ಅಧ್ಯಾಯವು ಕೊನೆಗೊಳ್ಳುತ್ತದೆ: ಅರಸನಾದ ಹೆರೋದನು ಸತ್ತು ಹೋದನು. ಪೇತ್ರನು ಬಿಡುಗಡೆ ಹೊಂದಿದನು ಮತ್ತು ದೇವರ ವಾಕ್ಯವು ವೃದ್ಧಿಯಾಗುತ್ತಾ ಪ್ರಸಾರಗೊಂಡಿತು.

# ಉ 32. ಬಾರ್ನಬ ಮತ್ತು ಸೌಲರು, 12:25–13:3

## ಇ) ಪಠ್ಯ ಪ್ರಶ್ನೆಗಳು

1. ಅಂತಿಯೋಕ್ಯ ಸಭೆಯಲ್ಲಿ ಐದು ಜನ 'ಪ್ರವಾದಿಗಳು ಮತ್ತು ಉಪದೇಶಕರು' ಇದ್ದರು. ಹಾಗಾಗಿ ಖಂಡಿತವಾಗಲೂ ಇಡೀ ಸಭೆಯ ಜವಾಬ್ದಾರಿಯನ್ನು ಒಬ್ಬ ಸಭಾಪಾಲಕನು ಹೊತ್ತಿರಲಿಲ್ಲ.

2. ಈ ಪಠ್ಯದಲ್ಲಿ 'ಉಪವಾಸವು' ಎರಡು ಬಾರಿ ಹೇಳಲ್ಪಟ್ಟಿದೆ. ಮೊದಲನೆಯದು ಆರಾಧನೆಗೆ ಸಂಬಂಧಪಟ್ಟಿದೆ (ವ. 2). ಎರಡನೆಯದು ಪ್ರಾರ್ಥನೆಗೆ ಸಂಬಂಧಪಟ್ಟಿದೆ (ವ. 3).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅಂತಿಯೋಕ್ಯ ಸಭೆಯ ಮತ್ತು ಪಟ್ಟಣದ ಜನಾಂಗೀಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಅಂತಿಯೋಕ್ಯ ಸಭೆಯ ನಾಯಕತ್ವವು ನಿಜವಾಗಲೂ ಪ್ರತಿಬಿಂಬಿಸಿತು:

    - ಅವರು ಯೆಹೂದ್ಯರೂ (ಬಾರ್ನಬ, ಸೌಲ, ಮೆನಹೇನ) ಮತ್ತು ಅನ್ಯರೂ (ನಿಗರ ಸಿಮೆಯೋನ, ಲೂಕ್ಯ) ಆಗಿದ್ದರು.

    - ಅವರೆಲ್ಲರೂ ಗ್ರೀಕ್ ಭಾಷೆಯನ್ನು ಬಲ್ಲವರಾಗಿದ್ದರೂ ಅವರ ಮಾತೃಭಾಷೆಗಳು ವ್ಯತ್ಯಾಸವಾಗಿದ್ದವು: ಗ್ರೀಕ್ (ಬಾರ್ನಬ ಮತ್ತು ಸೌಲ), ಅರಾಮಿಕ್ (ಮೆನಹೇನ) ಮತ್ತು ಲ್ಯಾಟೀನ್ (ನಿಗರ ಸಿಮೆಯೋನ ಮತ್ತು ಸಿರೇನಿಯದ ಲೂಕ್ಯ). ಬಾರ್ನಬ ಮತ್ತು ಸೌಲರು ಯೆಹೂದ್ಯರಾಗಿದ್ದರಿಂದ ಅವರು ಅರಾಮಿಕ್ ಭಾಷೆಯನ್ನು ಮಾತನಾಡುತ್ತಿದ್ದರು. ಅದಲ್ಲದೆ, ಸೌಲನು ಒಬ್ಬ ಫರಿಸಾಯದ ರಬ್ಬೀಯಾಗಿದ್ದರಿಂದ ಹಿಬ್ರಿಯ ಭಾಷೆಯನ್ನು ಚೆನ್ನಾಗಿ ಅರಿತವನಾಗಿದ್ದನು.

    - ಅವರು ಬೇರೆ ಬೇರೆ ದೇಶಗಳಿಂದ ಬಂದವರಾಗಿದ್ದರು: ಬಾರ್ನಬನು ಸೈಪ್ರಸ್‌ನಿಂದ, ಸೌಲನು ಸಿಲಿಸಿಯಾದಿಂದ, ಮೆನಹೇನನು ಪಾಲೆಸ್ತೀನಿನಿಂದ, ನಿಗರ ಸಿಮೆಯೋನ ಮತ್ತು ಲೂಕ್ಯರು ಆಫ್ರಿಕಾದಿಂದ.

    - ಅವರು ವ್ಯತ್ಯಾಸವಾದ ಸಾಮಾಜಿಕ ಹಿನ್ನಲೆಗಳನ್ನು ಹೊಂದಿದ್ದರು: ಸೌಲನು ಕಾರ್ಮಿಕ ದರ್ಜೆಯ ಕುಟುಂಬದಿಂದ ಬಂದವನು ಮತ್ತು ಮೆನಹೇನನು ಅರಮನೆಯ ಅಂಗಳದಲ್ಲಿ ಬೆಳೆದು ಬಂದವನು. ಇನ್ನೂ ಉಳಿದ ಮೂರು ಜನರ ಕುರಿತು ನಮಗೆ ಯಾವುದೇ ಮಾಹಿತಿ ಇಲ್ಲ.

2. ಸಭೆ ಮತ್ತು ಪವಿತ್ರಾತ್ಮನು ಇಬ್ಬರೂ ಸೇರಿ ಬಾರ್ನಬ ಮತ್ತು ಸೌಲರನ್ನು ಸುವಾರ್ತಿಕರನ್ನಾಗಿ ಆದೇಶಿಸಿದರು ಎಂಬುದು ಒಂದು ಅತ್ಯುತ್ತಮವಾದ ಉತ್ತರವೆಂದು ನಾನು ಆಲೋಚಿಸುತ್ತೇನೆ.

    - ಒಂದು ಕಡೆಯಿಂದ: ಅವರನ್ನು ಕಳುಹಿಸಿಕೊಡಬೇಕೆಂದು ಪವಿತ್ರಾತ್ಮನು ಸಭೆಗೆ ಅಪ್ಪಣೆ ಕೊಟ್ಟಿದ್ದರಿಂದ ಆತನು ಅವರನ್ನು ಕಳುಹಿಸಿದನು.

    - ಇನ್ನೊಂದು ಕಡೆಯಿಂದ: ಪವಿತ್ರಾತ್ಮನಿಂದ ಮಾರ್ಗದರ್ಶನ ಹೊಂದಿದ್ದರಿಂದ ಸಭೆಯು ಅವರನ್ನು ಕಳುಹಿಸಿತು.

ನಾವು ಗಮನಿಸಬೇಕಾದ ಇನ್ನೊಂದು ಅಂಶವೇನೆಂದರೆ, ಬಾರ್ನಬ ಮತ್ತು ಸೌಲರು ತಮ್ಮ ಸ್ವಂತ ಮುಂದಾಳತ್ವದಿಂದ ಸುವಾರ್ತಿಕರಾಗಿ ಹೋಗಲಿಲ್ಲ. ಅವರು ಪವಿತ್ರಾತ್ಮನಿಂದ ಸಭೆಯ ಮೂಲಕ ಕಳುಹಿಸಲ್ಪಟ್ಟರು.

# ಉ 33. ಸೈಪ್ರಸ್‌ನಲ್ಲಿ, 13:4–12

## ಇ) ಪಠ್ಯ ಪ್ರಶ್ನೆಗಳು

2. ಬಾರ್ ಯೇಸು ಸೆರ್ಗ್ಯಪೌಲನೆಂಬ ರಾಜ್ಯಪಾಲನ ಅಡಿಯಲ್ಲಿ ಕೆಲಸ ಮಾಡುತ್ತಿದ್ದನು. ಬಹುಶಃ ಈತನು ರಾಜಗೃಹದ ಮಂತ್ರವಾದಿಯಾಗಿದ್ದನು.

3. ಬಾರ್ ಯೇಸುವು ರಾಜ್ಯಪಾಲನು ವಿಶ್ವಾಸಿಯಾಗದಂತೆ ಅಡ್ಡಿಮಾಡಲು ಪ್ರಯತ್ನಿಸಿದನು. ಆತನು ನೀತಿವಂತಿಕೆಗೆ ವೈರಿಯಾಗಿದ್ದನು ಮತ್ತು ಸೈತಾನನ ಮಗನಾಗಿದ್ದನು. ಆತನಲ್ಲಿ ಎಲ್ಲಾ ತರದ ಮೋಸವೂ ಕುತಂತ್ರವೂ ತುಂಬಿತ್ತು ಮತ್ತು ಆತನು ಕರ್ತನ ಸನ್ಮಾರ್ಗಗಳಿಗೆ ಅಡ್ಡಿಯಾಗಿದ್ದನು.

4. ಆತನು ನಡೆದ ಅದ್ಭುತದಿಂದ (ಬಾರ್ ಯೇಸುವು ಕುರುಡನಾಗಿದ್ದು) ಮತ್ತು ಪೌಲ ಮತ್ತು ಬಾರ್ನಬರು ಸಾರಿದ ಸುವಾರ್ತೆಯಿಂದ ನಂಬಿಕೆಯನ್ನಿಟ್ಟನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ಹೇಳಿಕೆಗೆ ಯಾವುದೇ ಸತ್ಯವೇದ ಆಧಾರವಿಲ್ಲ, ಯಾಕೆಂದರೆ ಲೂಕನು ಸೌಲ ಎಂಬ ಹೆಸರನ್ನು (11:25–26; 12:25; 13:1–2) ಆತನ ಪರಿವರ್ತನೆಯ ನಂತರವೂ ಉಪಯೋಗಿಸುತ್ತಾನೆ. ಬದಲಾಗಿ ಆ ಹೆಸರಿನ ಬದಲಾವಣೆಯು ಸೇವೆ ಮತ್ತು ಸಂಸ್ಕೃತಿಯ ನಿಮಿತ್ತವಾಗಿದೆ. ಪೌಲನು ಸುವಾರ್ತೆಯನ್ನು ಸಾರುವುದಕ್ಕಾಗಿ ಪ್ರಯಾಣಿಸಲು ಪ್ರಾರಂಭಿಸಿದಾಗ ಆತನ 'ಸ್ಥಳೀಯ' ಹೆಸರಿನ ಬದಲು ಆತನ 'ಅಂತರ್‌ರಾಷ್ಟ್ರೀಯ' ಹೆಸರನ್ನು ಬಳಸಲಾಗಿದೆ. ಅಪೋಸ್ತಲರ ಕೃತ್ಯಗಳಲ್ಲಿ ಆತನು ಸೌಲನೆಂಬುದಾಗಿ ಮತ್ತೊಮ್ಮೆ ಎಲ್ಲಿಯೂ ಕರೆಯಲ್ಪಟ್ಟಿಲ್ಲ (ಆತನ ಮಾನಸಾಂತರದ ಕಥೆಯು ಪುನಃ ಹೇಳಲ್ಪಟ್ಟಿದ್ದರಲ್ಲಿ ಹೊರತುಪಡಿಸಿ) ಮತ್ತು ಆತನು ತನ್ನ ಪತ್ರಿಕೆಗಳಲ್ಲಿ ತನ್ನನ್ನು ಸೌಲನೆಂದು ಎಲ್ಲಿಯೂ ಕರೆದುಕೊಂಡಿಲ್ಲ.

2. ನಾವು ಅಧ್ಯಾಯ 8 ರಲ್ಲಿ ಮಂತ್ರವಾದಿಯಾದ ಸೀಮೋನನ ಕುರಿತಾದ ಕಥೆಯನ್ನು ನೋಡುತ್ತೇವೆ. ಆತನು ನಂಬಿ ಫಿಲಿಪ್ಪನಿಂದ ಸಮಾರ್ಯದಲ್ಲಿ ದೀಕ್ಷಾಸ್ನಾನ ಹೊಂದಿದನು. ಆದರೆ ಪೇತ್ರ ಮತ್ತು ಯೋಹಾನರು ಯೆರೂಸಲೇಮಿನಿಂದ ಬಂದಾಗ ಆತನ ಹೃದಯವು ದೇವರ ದೃಷ್ಟಿಯಲ್ಲಿ ಸರಿಯಿಲ್ಲದಿರುವುದನ್ನು ಕಂಡರು; ಆತನು ಹಣವನ್ನು ತಂದು ಅಪೋಸ್ತಲರ ಮುಂದೆ ಇಟ್ಟು ತಾನು ಯಾರ ಮೇಲೆ ಕೈಯಿಡುತ್ತೇನೋ ಅವರಿಗೆ ಪವಿತ್ರಾತ್ಮನ ವರವು ಬರುವಂತಹ ಸಾಮರ್ಥ್ಯ ತನಗೆ ಕೊಡಬೇಕೆಂಬುದಾಗಿ ಬೇಡಿಕೊಂಡನು.

3. ಇಥಿಯೋಪ್ಯದ ಕಂಚುಕಿಯನ್ನು ಫಿಲಿಪ್ಪನು ಭೇಟಿಯಾಗಿ ಸುವಾರ್ತೆಯನ್ನು ಬಾರಿ ದೀಕ್ಷಾಸ್ನಾನ ಮಾಡಿಸಿದಾಗ ಆತನು ದೇವರ ಆರಾಧನೆಗಾಗಿ ಯೆರೂಸಲೇಮಿನಿಂದ ಹಿಂತಿರುಗುತ್ತಿದ್ದನು (8:26–38). ಕೊರ್ನೇಲ್ಯನು 'ದೈವಭಯವುಳ್ಳ ಭಕ್ತನಾಗಿದ್ದನು', ಅಂದರೆ ಆತನು ಯೆಹೂದ್ಯ ನೈತಿಕ ಬೋಧನೆಗಳನ್ನು ಗೌರವಿಸುತ್ತಿದ್ದನು ಮತ್ತು ಯೆಹೂದ ಧರ್ಮಕ್ಕೆ ಮತಾಂತರವಾಗದಿದ್ದಾಗ್ಯೂ ಕರ್ತನ ಮೇಲೆ ನಂಬಿಕೆಯಿಟ್ಟಿದ್ದನು. ಆದರೆ ಸೆರ್ಗ್ಯಪೌಲನಿಗೆ ಯೆಹೂದತ್ವದ ಯಾವುದೇ ಧಾರ್ಮಿಕ ಹಿನ್ನಲೆಯಿರಲಿಲ್ಲ. ಈ ಕಥೆಯಲ್ಲಿ ಪೌಲನು ಹೇಗೆ ನೇರವಾಗಿ ಅನ್ಯರ ಬಳಿಗೆ ಸುವಾರ್ತೆಯನ್ನು ಕೊಂಡೊಯ್ದನು ಎಂಬುದನ್ನು ಕಾಣುತ್ತೇವೆ. ಇದು ಸಂಪೂರ್ಣವಾಗಿ ಒಂದು ಹೊಸ ವಿಷಯವಾಗಿದೆ!

# ಉ 34. ಪಿಸಿದಿಯದ ಅಂತಿಯೋಕ್ಯದಲ್ಲಿ, 13:13–52

## ಇ) ಪತ್ಯ ಪ್ರಶ್ನೆಗಳು

2. ಮಾರ್ಕನೆನಿಸಿಕೊಳ್ಳುವ ಯೋಹಾನನು ಅವರನ್ನು ಬಿಟ್ಟು ಯೆರೂಸಲೇಮಿನಲ್ಲಿದ್ದ ತನ್ನ ಮನೆಗೆ ಹೊರಟುಹೋದನು. ಕಾರಣ ಏನಾಗಿತ್ತೆಂದು ನಮಗೆ ತಿಳಿದಿಲ್ಲ ಮತ್ತು ಹೊಸ ಒಡಂಬಡಿಕೆಯಲ್ಲಿ ಯಾವ ಕಾರಣವೂ ತಿಳಿಸಲ್ಪಟ್ಟಿಲ್ಲ. ವಚನ 15:38 ರಲ್ಲಿ ನಾವು ಕಾಣುವ ಸಂಗತಿಯೇನೆಂದರೆ, ಮಾರ್ಕನೆನಿಸಿಕೊಳ್ಳುವ ಯೋಹಾನನ ಕುರಿತು ಪೌಲನು ಬೇಸರಗೊಂಡಿದ್ದನು ಮತ್ತು ಆತನ ಕುರಿತಾಗಿ ಪೌಲ ಮತ್ತು ಬಾರ್ನಬರಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು, ಅದು ಅವರಿಬ್ಬರೂ ಒಬ್ಬರಿಂದೊಬ್ಬರು ಪ್ರತ್ಯೇಕವಾಗಿ ಹೋಗುವಂತೆ ಮಾಡಿತು.

3. ಪೌಲನು ತನ್ನ ಪ್ರಸಂಗದಲ್ಲಿ ಕೀರ್ತನೆ. 2:7, ಯೆಶಾಯ. 55:3, ಕೀರ್ತನೆ. 16:3 ಮತ್ತು ಹಬಕ್ಕೂಕ. 1:5 ನ್ನು ಉಲ್ಲೇಖಿಸುತ್ತಾನೆ. ಆ ದಿನಗಳಲ್ಲಿ ಯೆಹೂದ್ಯರು ಇವುಗಳನ್ನು 'ಮೆಸ್ಸೀಯನ ಪತ್ಯಗಳು' ಎಂದು ಪರಿಗಣಿಸುತ್ತಿದ್ದರು. ನಂತರ ಈಗ ತಾನು ಅನ್ಯರ ಕಡೆಗೆ ಯಾಕೆ ತಿರುಗಿದನು ಎನ್ನುವುದನ್ನು ಸಮರ್ಥಿಸಲು ಯೆಶಾಯ. 49:6 ನ್ನು ಉಲ್ಲೇಖಿಸಿದನು.

4. 'ನಾವೀಗ ಅನ್ಯಜನರ ಬಳಿಗೆ ಹೋಗುತ್ತೇವೆ' ಎಂಬುದಾಗಿ ಅಪೋಸ್ತಲರು ಹೇಳಿದರು. ಈ ಹೇಳಿಕೆಯು ಸುವಾರ್ತೆಯ ವಿಸ್ತರಣೆಯ ಇತಿಹಾಸದಲ್ಲಿ ಒಂದು ತಿರುವಿನ ಸಂಕೇತವಾಗಿದೆ. ಅಪೋಸ್ತಲರ ಸೇವೆಯಲ್ಲಿ ಇದು ಅನ್ಯರ ಮೇಲೆ ಒಂದು ಹೊಸ ದೃಷ್ಟಿಕೋನವನ್ನು ಸೂಚಿಸುತ್ತದೆ. ಆದರೂ ಸಹ, ಪೌಲನು ಒಂದು ಹೊಸ ಸ್ಥಳಕ್ಕೆ ಹೋದಾಗ ಸಹಜವಾಗಿ ಸಭಾಮಂದಿರದಲ್ಲಿ ಮಾತನಾಡುತ್ತಿದ್ದನು, ನೋಡಿರಿ 17:1–2 (ಥೆಸಲೋನಿಕ), 17:10 (ಬೆರೋಯ), 17:17 (ಅಥೆನ್ಸ್).

5. ಆ ಪ್ರದೇಶದಲ್ಲೆಲ್ಲಾ ಕರ್ತನ ವಾಕ್ಯವು ಪ್ರಸಾರವಾಗುತ್ತಾ ಬಂತೆಂದು ವ. 49 ಹೇಳುತ್ತದೆ.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಆ ದಿನಗಳಲ್ಲಿ ಸಭಾಮಂದಿರದ ಆರಾಧನೆಯ ಒಂದು ಭಾಗವಾಗಿ ಒಬ್ಬ ಅತಿಥಿ ರಬ್ಬೀಯು ಅಥವಾ ಧರ್ಮಶಾಸ್ತ್ರದ ಬೋಧಕನು ಮಾತನಾಡುವಂತೆ ಕೇಳಿಕೊಳ್ಳುವಂತಹದ್ದು ಸಾಮಾನ್ಯವಾದ ಆಚರಣೆಯಾಗಿತ್ತು. ಬಹುಶಃ ಪೌಲನ ಉಡುಪನ್ನು ನೋಡಿದ ಯೆಹೂದ್ಯರು ಆತನು ಒಬ್ಬ ರಬ್ಬೀಯೆಂದು ತಿಳಿದುಕೊಂಡಿರಬಹುದು. ಅಥವಾ ಬಹುಶಃ ಕೆಲವರು

ಆರಾಧನೆಗೂ ಮುನ್ನ ಆತನೊಂದಿಗೆ ಮಾತನಾಡಿದ್ದರಿಂದ ಆತನು ಒಬ್ಬ ರಬ್ಬೀಯೆಂದು ಕೇಳಿ ತಿಳಿದುಕೊಂಡಿರಬಹುದು.

2. ಅನ್ಯಜನರಿಗೆ ಸುವಾರ್ತೆಯನ್ನು ವಿವರಿಸಲು ಈ ಪ್ರಸಂಗವನ್ನು ನಕಲು ಮಾಡುವುದು ಬಹುಶಃ ಒಳ್ಳೆಯ ಆಲೋಚನೆಯಲ್ಲ. ಪೌಲನು 'ಇಸ್ರಾಯೇಲಿನ ಪುರುಷರನ್ನು ಮತ್ತು ದೇವರನ್ನು ಆರಾಧಿಸುತ್ತಿದ್ದ ಅನ್ಯಜನರನ್ನು' ಉದ್ದೇಶಿಸಿ ಮಾತನಾಡಿದನು. ಅವರು ಹಳೆ ಒಡಂಬಡಿಕೆಯನ್ನು ಬಲ್ಲವರಾಗಿದ್ದರು, ಇಸ್ರಾಯೇಲರ ದೇವರಲ್ಲಿ ನಂಬಿಕೆಯಿಟ್ಟಿದ್ದರು ಮತ್ತು ಮೆಸ್ಸೀಯನ ಕುರಿತಾದ ಪ್ರವಾದನೆಯನ್ನು ನಂಬಿದ್ದರು. ಇಂತಹ ಒಂದು ಹಿನ್ನಲೆಯಿಲ್ಲದ ಅನ್ಯರಿಗೆ ಈ ಸಂದೇಶವು ಅರ್ಥವಾಗುವುದಿಲ್ಲ ಮತ್ತು ಅವರು ಅದನ್ನು ಮೆಚ್ಚುವುದಿಲ್ಲ. ಆದರೆ ವಿಶ್ವಾಸಿಗಳಿಗೆ ಒಂದು ಸತ್ಯವೇದ ಅಧ್ಯಾಯವಾಗಿ ಈ ಸಂದೇಶವನ್ನು ಉಪಯೋಗಿಸಬಹುದೆಂದು ನಾನು ಆಲೋಚಿಸುತ್ತೇನೆ.

3. ಈ ಒಂದು ಹೇಳಿಕೆಯ ಅರ್ಥವು ಅದರ ಸನ್ನಿವೇಶ ಹಿನ್ನಲೆಯಿಂದ ಸ್ಪಷ್ಟವಾಗುತ್ತದೆ: ಅವರು ವಾಕ್ಯವನ್ನು ಸ್ವೀಕರಿಸಿದರು, ಸುವಾರ್ತಾ ಸಂದೇಶವನ್ನು ನಂಬಿದರು ಮತ್ತು ರಕ್ಷಿಸಲ್ಪಟ್ಟರು.

4. 'ಶಿಷ್ಯರು' ಎಂಬ ಪದವು ಪಿಸಿದಿಯದ ಅಂತಿಯೋಕ್ಯದಲ್ಲಿದ್ದ ವಿಶ್ವಾಸಿಗಳನ್ನು ಸೂಚಿಸುತ್ತದೆ ಎಂಬುದಾಗಿ ನಾನು ಆಲೋಚಿಸುತ್ತೇನೆ. ಮೊದಲನೆಯದಾಗಿ, ಇದು ಸನ್ನಿವೇಶ ಹಿನ್ನಲೆಯಿಂದ ಹೆಚ್ಚು ಅರ್ಥಕೊಡುತ್ತದೆ: ಪೌಲ ಮತ್ತು ಬಾರ್ನಬರು ಇಕೋನಿಯಕ್ಕೆ ಹೋದರು. ಆದರೆ ವಿಶ್ವಾಸಿಗಳು ಬಹಳ ಸಂತೋಷದಿಂದಲೂ ಮತ್ತು ಪವಿತ್ರಾತ್ಮನಿಂದಲೂ ತುಂಬಿದವರಾಗಿ ಅಲ್ಲಿಯೇ ಉಳಿದುಕೊಂಡರು. ಎರಡನೆಯದಾಗಿ, ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ 'ಶಿಷ್ಯರು' ಎಂಬ ಪದವು 30 ಬಾರಿ ಉಪಯೋಗಿಸಲ್ಪಟ್ಟಿದೆ; ಬಹುತೇಕವಾಗಿ ಎಲ್ಲಾ ಕಡೆಯಲ್ಲೂ ಇದು 'ವಿಶ್ವಾಸಿಗಳನ್ನು'" ಸೂಚಿಸಿ ಬಳಸಲಾಗಿದೆ, ಯಾವ ಕಡೆಯಲ್ಲೂ ಇದು ನಿಸ್ಸಂದೇಹವಾಗಿ 'ಅಪೊಸ್ತಲರನ್ನು' ಸೂಚಿಸಿ ಬರೆಯಲ್ಪಟ್ಟಿಲ್ಲ.

# ಉ 35. ಇಕೋನಿಯದಲ್ಲಿ, 14:1–7

## ಇ) ಪಠ್ಯ ಪ್ರಶ್ನೆಗಳು

2. ಇಕೋನಿಯದ ಸಭಾ ಮಂದಿರದಲ್ಲಿ ಪೌಲ ಮತ್ತು ಬಾರ್ನಬರಿಬ್ಬರು ಪ್ರಸಂಗಿಸಿದಾಗ ಅನ್ಯರು ಮತ್ತು ಯೆಹೂದ್ಯರಿಬ್ಬರು ನಂಬಿದರು.

3. ವ. 2 ರಲ್ಲಿ ಹೇಳುತ್ತೇ ಅವರು 'ಅವಿಧೇಯರಾದರೆಂದು' ಅಪೋಸ್ತಲರು ಸಾರುತ್ತಿರುವ ಸುವಾರ್ತೆಯನ್ನು ತಾವು ನಂಬಬಾರದೆಂದು ತಮ್ಮಷ್ಟಕ್ಕೆ ತಾವು ನಿರ್ಧರಿಸಿಕೊಂಡರು.

4. ಅವರು ಶುಭವಾರ್ತೆಯನ್ನು ಎಡಬಿಡದೆ ಸಾರುತ್ತಿದ್ದರು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಗಮನಿಸಿರಿ ವ. 3 'ಆದ್ದರಿಂದ' ಎಂಬುದರಿಂದ ಪ್ರಾರಂಭಗೊಳ್ಳುತ್ತದೆ. ಈ 'ಆದ್ದರಿಂದ' ಎಂಬುದು ಈ ವಚನಕ್ಕು ಮತ್ತು ಹಿಂದಿನ ವಚನಕ್ಕು ಸಂಬಂಧವನ್ನು ಕಲ್ಪಿಸುತ್ತದೆ. ಯಾಕೆಂದರೆ ನಂಬದೆ ಇರುವಂತಹ ಯೆಹೂದ್ಯರು ಅನ್ಯಜನರ ಮನಸ್ಸನ್ನು ಪ್ರಚೋಧಿಸಿದರು (ವ. 2) ಆದ್ದರಿಂದ ಇಕೋನಿಯದಲ್ಲಿ ಪೌಲ ಮತ್ತು ಬಾರ್ನಬರು ತಮ್ಮ ಅಧಿಕ ಸಮಯವನ್ನು ಕಳೆಯಬೇಕಾಯಿತು. ನಂತರದಲ್ಲಿ ವ. 3 ಹೇಳುತ್ತಾ ಹೋಗುತ್ತೇ "ಅವರು ಕರ್ತನಿಗಾಗಿ ಧೈರ್ಯದಿಂದ ಮಾತನಾಡಿದರು" ಎಂಬುದಾಗಿ ಅವರು ಆ ಸ್ಥಳದಿಂದ ಹೋಗಬೇಕೆಂದು ನಿರ್ಧರಿಸಿದ್ದರಿಂದ ಮುಂಚೆ ಆ ಪ್ರಾಂತ್ಯದಾದ್ಯಂತ ಸುವಾರ್ತೆಯ ಸಂದೇಶವು ಒಂದು ಆಳವಾದ ಬೇರನ್ನು ಬಿಟ್ಟಿದೆಯೋ ಎಂಬುದಕ್ಕೂ ತಿಳಿದುಕೊಳ್ಳಲು ಅವರು ಇಕೋನಿಯದಲ್ಲಿ ಉಳಿದುಕೊಂಡರು.

2. ಈ ಒಂದು ಕಥೆಯಲ್ಲಿ ಉಂಟಾದ "ಅದ್ಭುತ ಮತ್ತು ಸೂಚಕ ಕಾರ್ಯಗಳ" ಪ್ರಮುಖ ಉದ್ದೇಶವೇನೆಂದರೆ ಅಪೋಸ್ತಲರ ಸಂದೇಶದ ನೈಜತ್ವವನ್ನು ಮತ್ತು ದೇವರ ಸಮ್ಮತಿಯನ್ನು ದೃಢಿಕರಿಸುವುದಕ್ಕಾಗಿ.

3. ಅಪೋಸ್ತಲರು ಅಲ್ಲಿಂದ ಓಡಿ ಹೋಗಲಿಕ್ಕೆ ಕಾರಣವೇನೆಂದರೆ ಅವರ ಜೀವಿತದ ವಿರುದ್ಧವಾಗಿ ಉಂಟಾದ ಪಿತೂರಿಯನ್ನು ಅರಿತವರಾಗಿದ್ದರು. ಈ ಒಂದು ನಿರ್ಧಾರದಲ್ಲಿ ಅವರು ಪವಿತ್ರಾತ್ಮನಿಂದ ಮಾರ್ಗದರ್ಶಿಸಿದರೆಂದು ನಾನು ಆಲೋಚಿಸುತ್ತೇನೆ. ಒಂದು ವೇಳೆ ಅವರು

ಉಳಿದುಕೊಂಡಿದ್ದರೆ ಬಹುಶಃ ಅವರು ಕೊಲ್ಲಲ್ಪಡುತ್ತಿದ್ದರು ಮತ್ತು ಅವರ ಸೇವೆಯು ಅಲ್ಲಿಗೆ ಕೊನೆಗೊಳ್ಳುವ ಸಾಧ್ಯತೆಯಿತ್ತು. ಕಠಿಣವಾದ ಪರಿಸ್ಥಿತಿಯ ಮಧ್ಯದಲ್ಲಿಯೂ ಅಪೊಸ್ತಲರು ಇಕೋನಿಯದಲ್ಲಿ ಹೆಚ್ಚು ಸಮಯವನ್ನು ಕಳೆಯಲಿಕ್ಕೆ ಭಯಪಡಲಿಲ್ಲ ಎಂಬುದನ್ನು ಕಥೆಯಿಂದ ನಾವು ನೋಡಬಹುದು.

ಯಾಕೆಂದರೆ, ಅವರ ವಿರುದ್ಧವಾಗಿ ನಂಬಿಕೆಗೆ ಬರದ ಯೆಹೂದ್ಯರು ಅನ್ಯರ ಮನಸ್ಸನ್ನು ಪ್ರಚೋದಿಸಿ, ಗದ್ದಲವನ್ನು ಎಬ್ಬಿಸಿದಾಗಿಯೂ ಅವರು ಇಕೋನಿಯದಲ್ಲಿ ಹೆಚ್ಚು ಸಮಯ ತಂಗಿದ್ದರು.ಹಾಗಾಗಿ ನಮ್ಮ ಸ್ವಂತ ಸೇವೆಯಲ್ಲಿಯೂ ಪವಿತ್ರಾತ್ಮನಿಂದ ಮಾರ್ಗದರ್ಶಿಸಲ್ಪಟ್ಟವರಾಗಿ ನಾವು ಅಣಕರಾಗಿರಬೇಕು. ಕೆಲವು ಸಮಯಗಳಲ್ಲಿ ಅಲ್ಲಿ ತೊಂದರೆ ಮತ್ತು ಅಪಾಯಗಳು ಇದ್ದಾಗ್ಯೂ ನಾವು ಉಳಿದಿಕೊಂಡು ಸೇವೆಯನ್ನು ಮುಂದುವರಿಸಬೇಕಾಗುತ್ತದೆ. ಕೆಲವು ಸಮಯಗಳಲ್ಲಿ ಆ ಸ್ಥಳಗಳನ್ನು ತೊರೆದು ಬೇರೆ ಸ್ಥಳಗಳಿಗೆ ಹೋಗಿ ಸುವಾರ್ತೆಯನ್ನು ಸಾರುವಂತಹದ್ದು ಜಾಣತನವಾಗಿದೆ.

# ಉ 36. ಲುಸ್ತ್ರ ಮತ್ತು ದೆರ್ಬೆಯಲ್ಲಿ, 14:8:21

## ಇ) ಪಠ್ಯ ಪ್ರಶ್ನೆಗಳು

2. ಆ ಜನರು ತಮ್ಮ ಸ್ಥಳೀಯ ಲುಕವೋನಿಯ ಭಾಷೆಯಲ್ಲಿ ಮಾತನಾಡುತ್ತಿದ್ದರು (ವ. 11) ಮತ್ತು ಆ ಜನರು ತಮ್ಮ ಕುರಿತು ಏನು ಹೇಳುತ್ತಿದ್ದಾರೆಂಬುದು ಅಪೊಸ್ತಲರಿಗೆ ಅರ್ಥವಾಗಲಿಲ್ಲ.

3. ಪೌಲನು ಲುಸ್ತ್ರದ ಜನರಿಗೆ ಸಾರಿದ ಸಂದೇಶದ ಮೊದಲ ಭಾಗದ ಸಾರಾಂಶವನ್ನು ಲೂಕನು ವ. 15–17 ರಲ್ಲಿ ನಮಗೆ ಕೊಟ್ಟಿದ್ದಾನೆ. ಅಪೊಸ್ತಲರು 'ಜನಸಮೂಹದ ಕಡೆಗೆ ಓಡಿಬಂದಾಗ' ಆ ಸನ್ನಿವೇಶವು ತಕ್ಷಣವಾಗಿ ಬಂದಾಗ್ಯೂ, ಅದು ಒಂದು ಸಂದೇಶವಾಗಿದೆ. ಪೌಲನು ಎಂತಹ ಪರಿಸ್ಥಿತಿಯಲ್ಲಿದ್ದರೂ ತಾನು ಸಂಧಿಸಿದ ಜನರಿಗೆ ಸುವಾರ್ತೆಯನ್ನು ಸಾರಲು ಸದಾ ಸಿದ್ಧನಿದ್ದನು!

4. ಅಪೊಸ್ತಲರು ಸುವಾರ್ತೆಯನ್ನು ಯಶಸ್ವಿಯಾಗಿ ಸಾರಿದರು ಮತ್ತು ಅನೇಕ ಜನರು ರಕ್ಷಿಸಲ್ಪಟ್ಟರು (ವ. 21).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಇಲ್ಲ, ಲುಸ್ತ್ರದಲ್ಲಿ ಹುಟ್ಟು ಕುಂಟನಿಗಾದ ಸ್ವಸ್ಥತೆಯು ದೂರದ ಘಟನೆಯಾಗಿಲ್ಲ. ಪೌಲ ಮತ್ತು ಬಾರ್ನಬರು ಈಗಾಗಲೇ ಆ ಪ್ರಾಂತ್ಯದಲ್ಲಿ ಸೇವೆ ಮಾಡುತ್ತಿದ್ದರೆಂಬುದನ್ನು ಸನ್ನಿವೇಶ ಹಿನ್ನಲೆಯು ತಿಳಿಸುತ್ತದೆ. ಯಾಕೆಂದರೆ ವ. 6 ರಲ್ಲಿ ಈ ರೀತಿಯಾಗಿ ಹೇಳಲ್ಪಟ್ಟಿದೆ, 'ಅವರು ಅಲ್ಲಿಂದ ಪಲಾಯನ ಮಾಡಿ ಲುಕವೋನಿಯದ ಪಟ್ಟಣಗಳಾದ ಲುಸ್ತ್ರ ಮತ್ತು ದೆರ್ಬೆ ಹಾಗೂ ಅವುಗಳ ಸುತ್ತಮುತ್ತಲ ಪ್ರದೇಶಗಳಿಗೆ ಓಡಿಹೋಗಿ, ಅಲ್ಲೆಲ್ಲಾ ಸುವಾರ್ತೆ ಸಾರಿದರು'. ಹಾಗಾಗಿ ಹುಟ್ಟು ಕುಂಟನ ಸ್ವಸ್ಥತೆಯು ಆ ಸುವಾರ್ತಾ ಸೇವೆಯ ಒಂದು ಭಾಗವಾಗಿದೆ. ಇದು ಹುಟ್ಟುಕುಂಟನಿಗೆ ಹೇಗೆ 'ಗುಣಹೊಂದಲು ಅವನಲ್ಲಿ ವಿಶ್ವಾಸವಿದೆ'"(ವ. 9) ಎಂಬುದನ್ನೂ ವಿವರಿಸುವಂತದ್ದಾಗಿದೆ: ಆತನು ಈಗಾಗಲೇ ಯೇಸು ಕ್ರಿಸ್ತನ ಕುರಿತಾದಂತಹ ಸುವಾರ್ತೆಯನ್ನು ಕೇಳಿ, ಯೇಸುವೇ ತನ್ನ ಸ್ವಂತ ರಕ್ಷಕನೆಂದೂ ಮತ್ತು ಸೌಖ್ಯದಾತನೆಂದೂ ನಂಬಿದ್ದನು.

2. ಪಠ್ಯವು (ವ. 12) ಹೇಳುವ ಪ್ರಕಾರ ಲುಸ್ತ್ರದ ಜನರು ಪೌಲನನ್ನು ಹರ್ಮಿಸನೆಂದು ಕರೆದರು ಯಾಕೆಂದರೆ 'ಆತನೇ ಪ್ರಧಾನ ಭಾಷಣಕಾರನಾಗಿದ್ದನು'. ಹರ್ಮಿಸನು ವಾಕ್ಚಾತುರ್ಯತೆಯ ದೇವರಾಗಿದ್ದನು ಮತ್ತು ಬಹುಶಃ ಪೌಲನು ವಾಕ್ಚಾತುರ್ಯವುಳ್ಳವನಾಗಿದ್ದನು. ಇನ್ನೊಂದು ಕಾರಣವೇನೆಂದರೆ, ಬಾರ್ನಬನು ವಯಸ್ಕನಾಗಿದ್ದನು ಮತ್ತು ಅವರಿಬ್ಬರಲ್ಲಿ ಆತನು

ಪ್ರಭಾವಶಾಲಿಯಾಗಿ ಕಾಣುತ್ತಿದ್ದನು. ಜ್ಯೂಸನು ಒಂದು ಉದ್ದವಾದ ಗಡ್ಡವುಳ್ಳ ಬಲಶಾಲಿಯಾದ ವೃದ್ಧ ದೇವನಾಗಿ ಹಾಗೂ ಹರ್ಮಿಸನು ಗಡ್ಡವಿಲ್ಲದ ಯೌವ್ವನಸ್ಥನಾಗಿ ಚಿತ್ರಿಸಲ್ಪಟ್ಟಿದ್ದನು. ಪೌಲನಿಗೆ ಗಡ್ಡವಿತ್ತೋ ಇಲ್ಲವೋ ಎಂಬುದು ಖಂಡಿತವಾಗಲೂ ನಮಗೆ ತಿಳಿದಿಲ್ಲ!

3. ಈ ಸಂದೇಶವನ್ನು ಕೇಳಿದವರೆಲ್ಲರೂ ಅನ್ಯರಾಗಿದ್ದರು. ಹೊಸ ಒಡಂಬಡಿಕೆಯಲ್ಲಿ ಅನ್ಯರಿಗಾಗಿ ಸಾರಲ್ಪಟ್ಟ ಕೆಲವೇ ಸಂದೇಶಗಳಲ್ಲಿ ಇದು ಒಂದಾಗಿದೆ. ಪಂಚಾಶತ್ತಮದ ಮೊದಲ ದಿನದಂದು ಪೇತ್ರನು ಸಾರಿದ ಸಂದೇಶವು ಯೆಹೂದ್ಯರಿಗಾಗಿತ್ತು. ಪಿಸಿದ್ಯದ ಅಂತಿಯೋಕ್ಯದಲ್ಲಿ ಪೌಲನು ಸಭಾಮಂದಿರದಲ್ಲಿ ಸಂದೇಶವನ್ನು ಸಾರಿದನು ಮತ್ತು ಅದನ್ನು ಕೇಳಿಸಿಕೊಂಡವರು ಯೆಹೂದ್ಯರು ಮತ್ತು 'ದೈವಭಯವುಳ್ಳ' ಅನ್ಯರಾಗಿದ್ದರು. ಹಾಗಾಗಿ ಯೆಹೂದ್ಯರದಲ್ಲದ ಸಂಸ್ಕೃತಿಯಲ್ಲಿ ಜೀವಿಸುವ ಮತ್ತು ದುಡಿಯುವ ನಮಗೆ ಈ ಸಂದೇಶವು ಬಹಳ ಪ್ರಾಮುಖ್ಯವಾದುದ್ದಾಗಿದೆ ಮತ್ತು ಇದರಿಂದ ಅನೇಕ ಸಂಗತಿಗಳನ್ನು ಕಲಿತುಕೊಳ್ಳಬಹುದು!

4. ಈ ಮೂರೂ ಸ್ಥಳಗಳಲ್ಲಿ ಉಂಟಾದ ಸಮಸ್ಯೆಗಳ ಹಿಂದೆ 'ಅವಿಧೇಯರಾದ' ಯೆಹೂದ್ಯರು, ಅಂದರೆ ಸುವಾರ್ತೆಯ ಸಂದೇಶವನ್ನು ಅಂಗೀಕರಿಸದ ಯೆಹೂದ್ಯರ ಕೈವಾಡವಿತ್ತು. ಅವರು ಪಿಸಿದಿಯದ ಅಂತಿಯೋಕ್ಯದಲ್ಲಿ ಹಿಂಸೆ ಎಬ್ಬಿಸುವಂತೆ ಮೇಲ್ದರ್ಜೆಯ ಸ್ತ್ರೀಯರನ್ನು ಮತ್ತು ಪಟ್ಟಣದ ಮುಖಂಡರನ್ನು ಪ್ರಚೋದಿಸಿದರು. ಇಕೋನಿಯದಲ್ಲಿ ಅವರು ಅನ್ಯರನ್ನು ಪ್ರಚೋದಿಸಿದರು. ಅವರು ಲುಸ್ತ್ರಕ್ಕೂ ಸಹ ಬಂದು ಅನ್ಯಜನರನ್ನು ಮನವೊಲಿಸಿ ಪೌಲನ ಮೇಲೆ ಕಲ್ಲೆಸೆಯುವಂತೆ ಪ್ರಚೋದಿಸಿದರು.

# ಉ 37. ಸಿರಿಯದ ಅಂತಿಯೋಕ್ಯಕ್ಕೆ ಮರುಪ್ರಯಾಣ, 14:21–28

## ಇ) ಪಠ್ಯ ಪ್ರಶ್ನೆಗಳು

2. ಅಪೋಸ್ತಲರು ಹಿಂತಿರುಗಿ ಬರುವಾಗ ಸಭೆಗಳಲ್ಲಿ ಮಾಡಿದ್ದೇನೆಂದರೆ:

- ಅವರು ವಿಶ್ವಾಸಿಗಳನ್ನು ಬಲಗೊಳಿಸಿದರು
- ಅವರು ವಿಶ್ವಾಸಿಗಳು ನಂಬಿಕೆಯಲ್ಲಿ ಸ್ಥಿರವಾಗಿರುವಂತೆ ಅವರನ್ನು ಪ್ರೋತ್ಸಾಹಿಸಿದರು
- ಅವರು ಪ್ರತಿಯೊಂದು ಸಭೆಯಲ್ಲಿ ಹಿರಿಯರನ್ನು ನೇಮಿಸಿದರು
- ಅವರು ಉಪವಾಸವಿದ್ದು ಪ್ರಾರ್ಥನೆಯೊಂದಿಗೆ ಹಿರಿಯರನ್ನು/ವಿಶ್ವಾಸಿಗಳನ್ನು ದೇವರಿಗೆ ಒಪ್ಪಿಸಿಕೊಟ್ಟರು
- ಹಿರಿಯರನ್ನು ಮತ್ತು ವಿಶ್ವಾಸಿಗಳನ್ನು ದೇವರು ತಾನೇ ನೋಡಿಕೊಳ್ಳುವನೆಂದು ಅವರು ಆತನಲ್ಲಿ ಭರವಸೆ ಇಟ್ಟರು

3. ಅಪೋಸ್ತಲರು ಸಿರಿಯಾದ ಅಂತಿಯೋಕ್ಯದಲ್ಲಿದ್ದ ತಮ್ಮ 'ತಾಯಿ ಸಭೆಗೆ' ಹಿಂತಿರುಗಿದಾಗ ಇವುಗಳನ್ನು ಮಾಡಿದರು:

- ತಮ್ಮ ಸೇವೆಯ/ಪ್ರಯಾಣದ ವರದಿಯನ್ನು ಸಲ್ಲಿಸಲು ಅವರು ಸಭೆಯನ್ನು (ವಿಶ್ವಾಸಿಗಳನ್ನೆಲ್ಲಾ) ಒಟ್ಟಿಗೆ ಕೂಡಿಸಿದರು.
- ಅವರು ಸಭೆಗೆ ನೀಡಿದ ವರದಿಯು ವಿವರವುಳ್ಳದ್ದಾಗಿತ್ತು: ದೇವರು ಮಾಡಿದ ಎಲ್ಲಾ ಸಂಗತಿಗಳನ್ನು ಅವರು ತಿಳಿಸಿದರು.
- ಅವರು ಸಭೆಗೆ ನೀಡಿದ ವರದಿಯು ದೇವ–ಕೇಂದ್ರಿತವಾಗಿತ್ತು: ದೇವರು ಅವರೊಂದಿಗೆ ಮತ್ತು ಅವರ ಮೂಲಕ ಏನನ್ನು ಮಾಡಿದನೆಂಬುದಾಗಿ ಅವರು ವರದಿಯನ್ನು ಸಲ್ಲಿಸಿದರು; ದೇವರು ಅನ್ಯರಿಗೆ ಹೇಗೆ ನಂಬಿಕೆಯ ಮಾರ್ಗವನ್ನು ತೆರೆದನೆಂಬುದನ್ನು ಅವರು ತಿಳಿಸಿದರು. ಅವರು ತಮ್ಮ ಸ್ವಂತ ಸಾಧನೆಗಳನ್ನಾಗಲಿ ಅಥವಾ ತಮ್ಮ ಸ್ವಂತ ಕಷ್ಟ ಹಿಂಸೆಗಳನ್ನಾಗಲಿ ಕೇಂದ್ರೀಕರಿಸಲಿಲ್ಲ.
- ಅವರು ಅಂತಿಯೋಕ್ಯದಲ್ಲಿ ಹೆಚ್ಚಿನ ಸಮಯವನ್ನು ಕಳೆದರು: ಅವರು ಆ ಸಮಯದಲ್ಲಿ ಸಭೆಯಲ್ಲಿ ಸಭಾಪಾಲಕರಾಗಿ ಕಾರ್ಯನಿರ್ವಹಿಸುವಾಗ ತಮ್ಮ ಪ್ರಯಾಣದ ಅನುಭವವನ್ನು ಉಪಯೋಗಿಸಿಕೊಂಡಿರಬಹುದು (15:35 ನ್ನು ನೋಡಿರಿ). ಅವರು ಒಳ್ಳೆಯ ವಿಶ್ರಾಂತಿಯನ್ನು ಪಡೆದರು ಮತ್ತು ಸಭೆಯಲ್ಲಿದ್ದ ಜೊತೆ ಸಭಾಪಾಲಕರುಗಳಿಂದ ಆತ್ಮೀಕವಾದ ಪ್ರೋತ್ಸಾಹವನ್ನೂ ಪಡೆದರು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

2. ನೀವು ಈ ಪ್ರಶ್ನೆಯನ್ನು ಉತ್ತರಿಸುವಾಗ 'ದೇವರ ರಾಜ್ಯದ' 'ಈಗಿರುವ–ಮುಂಬರುವ' ದೃಷ್ಟಿಕೋನವನ್ನು ನಿಮ್ಮ ಮನಸ್ಸಿನಲ್ಲಿಟ್ಟುಕೊಳ್ಳುವುದು ಉಪಯುಕ್ತವಾದದ್ದು. ಯೋಹಾನ 3 ರಲ್ಲಿರುವ ಯೇಸು ಕ್ರಿಸ್ತನ ಮತ್ತು ನಿಕೊದೇಮನ ನಡುವಿನ ಸಂಭಾಷಣೆಯು ರಕ್ಷಣೆಯ ಕುರಿತದ್ದಾಗಿದೆ. ಯೇಸು ಕ್ರಿಸ್ತನು ವ. 3 ರಲ್ಲಿ 'ದೇವರ ರಾಜ್ಯವನ್ನು ನೋಡು' ಎಂಬ ಪದವಿನ್ಯಾಸವನ್ನು ಬಳಸುತ್ತಾನೆ ಮತ್ತು ವ. 5 ರಲ್ಲಿ 'ದೇವರ ರಾಜ್ಯವನ್ನು ಪ್ರವೇಶಿಸು' ಎಂದು ಹೇಳುತ್ತಾನೆ. ಇವೆರಡೂ ಹೊಸದಾಗಿ ಹುಟ್ಟುವುದರ ಕುರಿತಾಗಿದೆ, ಅಂದರೆ ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸುವುದರ ಕುರಿತಾಗಿದೆ. ಇದು 'ಈಗಿರುವ' ದೃಷ್ಟಿಕೋನ. ಅ. ಕೃ. 14–22 ರಲ್ಲಿ ಪೌಲನು ಈ ಲೋಕದಲ್ಲಿನ ಕ್ರಿಸ್ತೀಯ ಜೀವಿತದ ಕುರಿತು ಮತ್ತು ನಾವು ದೇವರ ರಾಜ್ಯವನ್ನು ಅದರ ಪರಿಪೂರ್ಣತೆಯಲ್ಲಿ ಅಂತಿಮವಾಗಿ ಪ್ರವೇಶಿಸುವವರೆಗೂ ಹೇಗೆ ಸಂಕಟ ಮತ್ತು ಕಷ್ಟಗಳನ್ನು ಹಾದು ಹೋಗಬೇಕೆಂಬುದರ ಕುರಿತು ಮಾತನಾಡುತ್ತಾನೆ. ಇದು 'ಮುಂಬರುವ' ದೃಷ್ಟಿಕೋನ.

3. ಅಲ್ಲಿ ಹಿರಿಯರೇ ಸಭಾಪಾಲಕರುಗಳಾಗಿದ್ದರು! ಅವರು ಸಭೆಯ ಉಪದೇಶಕರು ಮತ್ತು ಸಭಾಪಾಲಕರು ಆಗಿದ್ದರು. ಹಾಗಾಗಿ ಅಪೋಸ್ತಲರು ಸಭೆಯನ್ನು ಬಿಟ್ಟು ಹೋದ ನಂತರ ಅವರೇ ಸಭೆಯಲ್ಲಿ ಪ್ರಸಂಗಿಸಿದರು. ಹಾಗಾಗಿ ಹೊಸ ಒಡಂಬಡಿಕೆಯ ಸಭೆಗಳಲ್ಲಿ ಒಬ್ಬ ಸಭಾಪಾಲಕನು ಸಭೆಯ ನಾಯಕನಾಗಿರಲಿಲ್ಲ. ನಾಯಕತ್ವವು ಸಾಮೂಹಿಕವಾಗಿತ್ತು. ಹಿರಿಯರ/ಸಭಾಪಾಲಕರ ಒಂದು ಗುಂಪು ಸಭೆಯನ್ನು ನಡೆಸಿತು.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

2. 2) ಇಂದು ದಕ್ಷಿಣ ಭಾರತದಲ್ಲಿರುವ ಪರಿಸ್ಥಿತಿಗಿಂತ ಗ್ರೀಕ್–ರೋಮನ್ನರ ಪರಿಸ್ಥಿತಿಯು ವ್ಯತ್ಯಾಸಕರವಾಗಿತ್ತು:

    - ಆ ದಿನಗಳಲ್ಲಿ ಗ್ರೀಕ್–ರೋಮನ್ ಜಗತ್ತಿನಲ್ಲಿ ಯೆಹೂದ್ಯರ ಪ್ರಾಬಲ್ಯತೆಯಿತ್ತು. ಕ್ರೈಸ್ತ ಸಭೆಯು ಸ್ಥಾಪಿಸಲ್ಪಡುವುದಕ್ಕಿಂತ ಅನೇಕ ವರ್ಷಗಳ ಹಿಂದೆಯೇ ಯೆಹೂದ್ಯರು ಸೇವಾ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದರು. ಇದರ ಪರಿಣಾಮವಾಗಿ ಕ್ರೈಸ್ತ ಸುವಾರ್ತಿಕರು ಎಲ್ಲಾ ಕಡೆಯಲ್ಲೂ ಮತಾಂತರ ಹೊಂದಿದವರನ್ನು (ಯೆಹೂದ್ಯ ಧರ್ಮಕ್ಕೆ ಮತಾಂತರಗೊಂಡ ಅನ್ಯರನ್ನು) ಮತ್ತು ದೇವರಿಗೆ ಭಯಪಡುವ ಅನ್ಯರನ್ನು ಕಂಡರು. ಇಂದು ದಕ್ಷಿಣ ಭಾರತಕ್ಕೆ ಇದು ಹೋಲಿಕೆಯಾಗುತ್ತದೆ ಎಂದು ನೀವು ಹೇಗೆ ಆಲೋಚಿಸುತ್ತೀರಿ?

- ಕ್ರೈಸ್ತ ಸಭೆಯು ಹೊಸದಾಗಿತ್ತು, ಕುತೂಹಲಕಾರಿಯಾಗಿತ್ತು ಮತ್ತು ಆಕರ್ಷಣೀಯವಾಗಿತ್ತು. ಇಂದು ಭಾರತದ ಸಭೆಯು ಹೊಂದಿರುವಂತಹ ಐತಿಹಾಸಿಕ ಭಾರವನ್ನು ಅದು ಹೊಂದಿರಲಿಲ್ಲ.
- ಅಂದಿನ ಮತ್ತು ಇಂದಿನ ವಿಶ್ವಾಸಿಗಳಲ್ಲಿರುವ ಸಮರ್ಪಣೆ ಹೇಗಿದೆ? ಏಕರೀತಿಯಾಗಿದೆಯೋ ಅಥವಾ ವ್ಯತ್ಯಾಸವಾಗಿದೆಯೋ?

2. 3) ಇಂದು ದಕ್ಷಿಣ ಭಾರತದಲ್ಲಿರುವ ಪರಿಸ್ಥಿತಿಯು ರೋಮನ್ ಅನ್ಯ ಜಗತ್ತಿನ ಪರಿಸ್ಥಿತಿಯೂ ಒಂದೇ ಆಗಿದೆ:.

- ಅನೇಕ ಅನ್ಯರು ವಿಗ್ರಹಾರಾಧಕರಾಗಿದ್ದರು.
- ಅನೇಕ ಅನ್ಯರು ಅನಕ್ಷರಸ್ಥರಾಗಿದ್ದರು.
- ಒಂದು ಪ್ರಬಲ ಸಂಸ್ಕೃತಿಯಿತ್ತು: ಅಂದು ಹೆಲೆನಿಸ್ಟಿಕ್ (ಗ್ರೀಕ್–ರೋಮನ್) ಸಂಸ್ಕೃತಿ ಇತ್ತು; ಇಂದು ಭಾರತದ–ಹಿಂದೂ ಸಂಸ್ಕೃತಿ ಇದೆ.
- ಪವಿತ್ರಾತ್ಮನು ಇಂದಿಗೂ ಬದಲಾಗದವನಾಗಿದ್ದಾನೆ!

# ಉ 38. ಯೆರೂಸಲೇಮಿನಲ್ಲಿ ಸಮ್ಮೇಳನ, 15:1–21

## ಇ) ಪಠ್ಯ ಪ್ರಶ್ನೆಗಳು

1. ಈ ಪಠ್ಯವನ್ನು ಉಪವಿಭಾಗಗಳಾಗಿ ಹೀಗೆ ವಿಂಗಡಿಸಬಹುದಾಗಿದೆ:

   - (ವ. 1–3) ಯೆಹೂದ್ಯ ಧರ್ಮಶಾಸ್ತ್ರಪಾಲಕರು ಅಂತಿಯೋಕ್ಯಕ್ಕೆ ಬಂದರು, ಅದು ಒಂದು ವಿವಾದಕ್ಕೆ ನಡೆಸಿತು. ಪೌಲ, ಬಾರ್ನಬ ಮತ್ತು ಇತರರು ಯೆರೂಸಲೇಮಿಗೆ ಕಳುಹಿಸಲ್ಪಟ್ಟರು.

   - (ವ. 4–5) ಅಪೋಸ್ತಲರು ಮತ್ತು ಹಿರಿಯರು ಸಂದರ್ಶಕರನ್ನು ಸ್ವಾಗತಿಸಿದರು ಮತ್ತು ಅವರು ತಮ್ಮ ವರದಿಯನ್ನು ಸಲ್ಲಿಸಿದರು. ಯೆಹೂದ ಮತಾಭಿಮಾನಿಗಳು ತಮ್ಮ ನಿಲುವನ್ನು ತಿಳಿಸಿದರು.

   - (ವ. 6–11) ಅಪೋಸ್ತಲರು ಮತ್ತು ಹಿರಿಯರು ಸಮಸ್ಯೆಯನ್ನು ಚರ್ಚಿಸಿದರು. ಪೇತ್ರನು ತನ್ನ ಅನುಭವದ ಆಧಾರದ ಮೇಲೆ ತನ್ನ ಅಭಿಪ್ರಾಯವನ್ನು ತಿಳಿಸಿದನು: ಅನ್ಯರಿಗೆ (ಕೊರ್ನೇಲ್ಯನಿಗೂ ಮತ್ತು ಆತನ ಕುಟುಂಬದವರಿಗೂ) ಸುವಾರ್ತೆಯನ್ನು ಸಾರಿದ ಮೊಟ್ಟ ಮೊದಲನೆಯ ವ್ಯಕ್ತಿ ಆತನಾಗಿದ್ದನು ಮತ್ತು ದೇವರು ಯೆಹೂದ್ಯ ವಿಶ್ವಾಸಿಗಳಿಗೆ ಪವಿತ್ರಾತ್ಮನನ್ನು ಕೊಟ್ಟಂತೆಯೇ ಅನ್ಯರಿಗೂ ಕೊಡುವುದರ ಮೂಲಕ ಆತನು ಅವರ ನಂಬಿಕೆಯನ್ನು ಸ್ವೀಕರಿಸಿದನು. ಯೆಹೂದ್ಯರೂ ಅನ್ಯರೂ ಕೃಪೆಯಿಂದಲೇ ರಕ್ಷಣೆಯನ್ನು ಹೊಂದುವರು – ಯಾವುದೇ ಬೇಧವಿಲ್ಲ.

   - (ವ. 12) ಇಡೀ ಸಭೆಯು ಬಾರ್ನಬ ಮತ್ತು ಪೌಲರು ಆಡಿದ ಮಾತುಗಳನ್ನು ಆಲಿಸುತ್ತಾ ಅವರ ಮೂಲಕ ದೇವರು ಅನ್ಯರ ಮಧ್ಯದಲ್ಲಿ ಮಾಡಿದ ಕಾರ್ಯಗಳನ್ನು ಕೇಳಿತು.

   - (ವ. 13–21) ಪೇತ್ರನು ಹೇಳಿದ ಸಾಕ್ಷಿಯು ಹಳೆ ಒಡಂಬಡಿಕೆಯ ಪ್ರವಾದಿಗಳಿಗೆ ಅನುಸಾರವಾದುದ್ದಾಗಿದೆ ಎಂಬ ವಾಸ್ತವಾಂಶದ ಆಧಾರದ ಮೇಲೆ ಯಾಕೋಬನು ತನ್ನ ತೀರ್ಪನ್ನು ನೀಡಿದನು.

2. ಒಬ್ಬ ವ್ಯಕ್ತಿಯು ಸುನ್ನತಿಯನ್ನು ಮಾಡಿಸಿಕೊಳ್ಳದಿದ್ದರೆ ರಕ್ಷಣೆ ಹೊಂದಲಾರನೆಂದು ಯೆಹೂದ್ಯ ಧರ್ಮಶಾಸ್ತ್ರಪಾಲಕರು ಘೋಷಿಸಿದರು. ಅದಲ್ಲದೆ ವಿಶ್ವಾಸಿಗಳಾದ ಅನ್ಯರೂ ಸುನ್ನತಿಯನ್ನು ಮಾಡಿಸಿಕೊಳ್ಳಬೇಕು ಮತ್ತು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸಬೇಕೆಂದು ಘೋಷಿಸಿದರು.

3. ಒಬ್ಬ ವ್ಯಕ್ತಿಯು – ಅನ್ಯನಾಗಿದ್ದರೂ ಅಥವಾ ಯೆಹೂದ್ಯನಾಗಿದ್ದರೂ – ಕೃಪೆಯಿಂದಲೇ ರಕ್ಷಣೆ ಹೊಂದುವನೆಂದು ಪೇತ್ರನು ಘೋಷಿಸಿದನು. ಹಾಗಾಗಿ ಅನ್ಯರು ಸುನ್ನತಿ ಮಾಡಿಸಿಕೊಳ್ಳುವ ಅವಶ್ಯವಿರಲಿಲ್ಲ. ಸ್ವತಃ ಯೆಹೂದ್ಯ ಜನರೂ ಹೊರಲಾಗದಂತಹ ಭಾರವನ್ನು (ಇದು ಹಳೆ ಒಡಂಬಡಿಕೆಯ ಧರ್ಮಶಾಸ್ತ್ರದ ಪಾಲನೆಯನ್ನು ಸೂಚಿಸುತ್ತದೆ) ಅನ್ಯ ವಿಶ್ವಾಸಿಗಳ ಮೇಲೆ

ಹಾಕುವುದು ಸರಿಯಲ್ಲ. ಪೇತ್ರನ ನಿಲುವು ಕೊರ್ನೇಲ್ಯನ ಮನೆಯಲ್ಲಿ ಸಂಭವಿಸಿದ್ದರ ಮೇಲೆ ಆಧಾರಿತವಾಗಿದೆ (ಅಧ್ಯಾಯ 10): ದೇವರು ನಂಬಿಕೆಯ ಮೂಲಕ ಅನ್ಯ ವಿಶ್ವಾಸಿಗಳ ಹೃದಯವನ್ನು ಶುದ್ಧೀಕರಿಸಿ ಅವರಿಗೆ ಪವಿತ್ರಾತ್ಮನನ್ನು ಕೊಟ್ಟನು – ಆತನು ಯೆಹೂದ್ಯ ವಿಶ್ವಾಸಿಗಳಿಗೆ ಮಾಡಿದಂತೆಯೇ ಅವರಿಗೂ ಮಾಡಿದನು.

4. ಪೇತ್ರನು ಹೇಳಿದ ಸಾಕ್ಷಿಯು ಹಳೆ ಒಡಂಬಡಿಕೆಯ ಪ್ರವಾದಿಗಳಿಗೆ ಅನುಸಾರವಾದುದ್ದಾಗಿದೆ ಎಂಬ ವಾಸ್ತವಾಂಶದ ಆಧಾರದ ಮೇಲೆ ಯಾಕೋಬನು ತನ್ನ ನಿಲುವನ್ನು ತಲುಪಿದನು. ಅನ್ಯ ವಿಶ್ವಾಸಿಗಳು ಸುನ್ನತಿಯನ್ನು ಮಾಡಿಸಿಕೊಳ್ಳುವ ಅಗತ್ಯವಿಲ್ಲವೆಂಬುದು ಆತನ ಅಂತಿಮ ನಿರ್ಧಾರವಾಗಿತ್ತು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗದಲ್ಲಿ ಅನ್ಯ ವಿಶ್ವಾಸಿಗಳ ಸುನ್ನತಿಯ ವಿಚಾರದ ಕುರಿತಾಗಿ ಪೌಲ ಮತ್ತು ಬಾರ್ನಬರ ನಿಲುವು ಸ್ಪಷ್ಟವಾಗಿ ತಿಳಿಸಲ್ಪಟ್ಟಿಲ್ಲ. ಆದರೆ ಅವರು ಯೆಹೂದ್ಯ ಧರ್ಮಶಾಸ್ತ್ರಪಾಲಕರೊಂದಿಗೆ ಬಹಳ ಬೇಸತ್ತ ಮತ್ತು ಅವರ ನಿಲುವಿಗೆ ಸಂಪೂರ್ಣವಾದ ವಿರೋಧವನ್ನು ವ್ಯಕ್ತಪಡಿಸಿದ ಸಂಗತಿಯು ಈ ವಾಕ್ಯಭಾಗದ ಸನ್ನಿವೇಶ ಹಿನ್ನೆಲೆಯಿಂದ ತಿಳಿದುಬರುತ್ತದೆ.

2. ಈ ವಾಕ್ಯಭಾಗದ ಪ್ರಕಾರ, ಪೌಲ ಮತ್ತು ಬಾರ್ನಬರು ತಮ್ಮ ನಿಲುವಿನ ಕುರಿತು ತರ್ಕಿಸಲಿಲ್ಲ. ಅದರ ಬದಲಾಗಿ ತಮ್ಮ ಮತ್ತು ತಮ್ಮ ಸೇವೆಯ ಮೂಲಕ ದೇವರು ಅಂತಿಯೋಕ್ಯದಲ್ಲಿ ಮತ್ತು ಮೊದಲ ಸೇವಾ ಪ್ರಯಾಣಗಳಲ್ಲಿ ಮಾಡಿದ ಸಂಗತಿಗಳ ಕುರಿತು ಸಾಕ್ಷಿಕರಿಸಿದರು (ವ. 4 ಮತ್ತು ವ. 12). ದೇವರು ಅನ್ಯರನ್ನು ಸುನ್ನತಿಯಿಲ್ಲದೆ ಸ್ವೀಕರಿಸಿಕೊಂಡು ಅವರ ಮಧ್ಯದಲ್ಲಿ ದೊಡ್ಡ ದೊಡ್ಡ ಅದ್ಭುತ ಮತ್ತು ಸೂಚಕ ಕಾರ್ಯಗಳನ್ನು ಮಾಡಿರುವಾಗ, ಬಾರ್ನಬ ಮತ್ತು ಪೌಲರು ಯಾಕೆ ಅನ್ಯರು ಸಭೆಯ ಸದಸ್ಯರಾಗಲು ಸುನ್ನತಿಯನ್ನು ಮಾಡಿಸಿಕೊಳ್ಳಲೇಬೇಕೆಂದು ಹೇಳಬೇಕು?

3. ಅಂತಿಯೋಕ್ಯ ಸಭೆಯು ಈ ವಿಚಾರವನ್ನು ತಮ್ಮಷ್ಟಕ್ಕೆ ತಾವು ಯಾಕೆ ಬಗೆಹರಿಸಿಕೊಳ್ಳದ್ದಕ್ಕೆ ಮೂರು ಕಾರಣಗಳಿವೆ ಎಂಬುದಾಗಿ ನಾನು ಆಲೋಚಿಸುತ್ತೇನೆ.

    1) ಮೊದಲನೆಯದಾಗಿ, ಅವರು ಯೆರೂಸಲೇಮಿನಲ್ಲಿದ್ದ ನಾಯಕತ್ವವನ್ನು ಒಪ್ಪಿಕೊಂಡರು. ಇವರು ಯೇಸು ಕ್ರಿಸ್ತನೊಂದಿಗೆ ಇದ್ದವರು ಮತ್ತು ಇವರಿಗೆ ಯೇಸು 'ನಾನು ನಿಮಗೆ ಆಜ್ಞಾಪಿಸಿದ್ದೆಲ್ಲವನ್ನು ಕೈಕೊಳ್ಳುವ ಹಾಗೆ ಅವರಿಗೆ ಬೋಧಿಸಿರಿ' ಎಂಬುದನ್ನು ಒಳಗೊಂಡ ಮಹಾಆಜ್ಞೆಯನ್ನು ಕೊಟ್ಟಿದ್ದನು.

2) ಎರಡನೆಯದಾಗಿ, ಅವರು ಸಭೆಯ ಐಕ್ಯತೆಯನ್ನು ಕಾಪಾಡಬೇಕೆಂದು ಬಯಸಿದರು. ಯೆಹೂದ್ಯ ಧರ್ಮಶಾಸ್ತ್ರ ಪಾಲಕರು ಯೂದಾಯದಿಂದ/ಯೆರೂಸಲೇಮಿನಿಂದ ಬಂದಿದ್ದರು ಮತ್ತು ಸಭೆಯು ಎರಡು ಭಾಗವಾಗಿ ಒಡೆಯದಂತೆ ಈ ವಿಚಾರವು ಬಗೆಹರಿಸಲ್ಪಡುವುದು ಪ್ರಾಮುಖ್ಯವಾಗಿತ್ತು.

3) ಮೂರನೆಯದಾಗಿ, ಈ ವಿಚಾರವೇ ಅತ್ಯಂತ ಪ್ರಾಮುಖ್ಯವಾದ ಸಂಗತಿಯಾಗಿತ್ತು. ಯೆಹೂದ್ಯ ಧರ್ಮಶಾಸ್ತ್ರಪಾಲಕರ ಬೋಧನೆಯು ಸುವಾರ್ತೆಯನ್ನು ಭ್ರಷ್ಟಗೊಳಿಸಿತ್ತು ಮತ್ತು ಪೌಲನು ಹಾಗೂ ಅಂತಿಯೋಕ್ಯದಲ್ಲಿದ್ದ ಇತರೆ ನಾಯಕರುಗಳು 'ಸುವಾರ್ತೆಯ ಸತ್ಯತೆಯಲ್ಲಿ' ರಾಜಿ ಮಾಡಿಕೊಳ್ಳಲು ಇಚ್ಛೆಯುಳ್ಳವರಾಗಿರಲಿಲ್ಲ (ಗಲಾತ್ಯ. 2:14). ಈ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಲು ಒಂದು ಉನ್ನತ ಮಟ್ಟದ 'ಸಭೆಯ ಸಮ್ಮೇಳನವನ್ನು' ನಡೆಸುವುದು ಅವಶ್ಯವಾಗಿತ್ತು: ರಕ್ಷಣೆಯು ಯೇಸು ಕ್ರಿಸ್ತನ ಮೇಲೆ ನಂಬಿಕೆ ಇಡುವುದರಿಂದ ಮಾತ್ರವೇ ಹೊರತು – ಯಾವ ಕ್ರಿಯೆಗಳನ್ನು ಮಾಡುವುದರಿಂದ ಅಲ್ಲ.

4. ಅನ್ಯ ವಿಶ್ವಾಸಿಗಳು ಪಾಲಿಸಬೇಕೆಂದು ವಿಧಿಸಲ್ಪಟ್ಟ ಈ ನಾಲ್ಕು ಬೇಡಿಕೆಗಳ ಕುರಿತು ಸತ್ಯವೇದ ಶಾಸ್ತ್ರಜ್ಞರ ನಡುವೆ ಬಹಳ ಚರ್ಚೆ ಇದೆ. ಈ ಕೆಳಗಿನವುಗಳು ಪ್ರಮುಖವಾದ ಎರಡು ದೃಷ್ಟಿಕೋನಗಳಾಗಿವೆ:

1) ಈ ಬೇಡಿಕೆಗಳು ಮೋಶೆಯ ಧರ್ಮಶಾಸ್ತ್ರಕ್ಕಿಂತ ಹಳೆಯದಾಗಿವೆ. ಹಾಗಾಗಿ ಅವುಗಳು ಕ್ರೈಸ್ತ ವಿಶ್ವಾಸಿಗಳಿಗೂ ಅನ್ವಯಿಸುತ್ತದೆ. ಇದೇ ಕಾರಣದಿಂದ ಇಂದಿಗೂ ಕೆಲವು ವಿಶ್ವಾಸಿಗಳು ರಕ್ತದಿಂದ ಕೂಡಿದ ಆಹಾರವನ್ನು ತಿನ್ನುವುದಿಲ್ಲ. ಆದರೆ ಅವರಲ್ಲಿ ಅನೇಕರು ಪ್ರಾಣಿಯು ಹೇಗೆ ಕೊಲ್ಲಲ್ಪಟ್ಟಿತ್ತು (ಮಾಂಸದಲ್ಲಿ ಇನ್ನೂ ರಕ್ತವು ಉಳಿದಿದೆಯೋ ಇಲ್ಲವೋ) ಎಂಬುದರ ಕುರಿತು ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ, ಆದರೆ ಅನೇಕ ಯೆಹೂದ್ಯರು ಮತ್ತು ಮುಸ್ಲಿಮರು ಕೊಶರ್ ಅಥವಾ ಹಲಾಲ್ ಮಾಂಸವನ್ನೇ (ರಕ್ತವು ಪೂರ್ಣವಾಗಿ ಮಾಂಸದಿಂದ ಹೊರಬರುವಂತೆ ಪ್ರಾಣಿಯನ್ನು ಕೊಲ್ಲುವುದು) ಬಳಸುತ್ತಾರೆ. ಪೌಲನು ವಿಗ್ರಹಗಳಿಗೆ ನೈವೇದ್ಯ ಮಾಡಿದ ಆಹಾರದ ಕುರಿತು 1 ಕೊರಿ. 8 ಮತ್ತು 10 ರಲ್ಲಿ ಚರ್ಚಿಸುತ್ತಾನೆ. ಒಬ್ಬ ವಿಶ್ವಾಸಿಯು ತನ್ನ ಬಲಹೀನ ಸಹೋದರನ ಮನಸ್ಸಾಕ್ಷಿಗೆ ಧಕ್ಕೆಬಾರದಿದ್ದಲ್ಲಿ ಯಾವುದೇ ರೀತಿಯಾದ ಮಾಂಸವನ್ನು ತಿನ್ನಬಹುದೆಂದು ಆತನು ಸಾರಾಂಶಗೊಳಿಸುತ್ತಾನೆ.

2) ಈ ನಾಲ್ಕು ನಿರ್ದಿಷ್ಟವಾದ ಕ್ಷೇತ್ರಗಳಲ್ಲಿ ಅನ್ಯ ವಿಶ್ವಾಸಿಗಳು ನಡಕೊಂಡ ರೀತಿಯು ಯೆಹೂದ್ಯರ ಭಾವನೆಗಳಿಗೆ ಧಕ್ಕೆ ಉಂಟುಮಾಡಿತ್ತು. ಹಾಗಾಗಿ ಅನ್ಯರು ಇದನ್ನು ಕೈಕೊಳ್ಳುವುದಾದರೆ ಅವರ ಮತ್ತು ಯೆಹೂದ್ಯರ ನಡುವಿನ ಸಂಬಂಧವು ಬಲವಾಗುವುದು. ಇವುಗಳು ಸಾಂಪ್ರದಾಯಿಕ/ಆಚಾರಪೂರ್ವಕವಾದ ನಿಯಮಗಳೇ ಹೊರತು ನೈತಿಕ ನಿಯಮಗಳಲ್ಲ. 'ಲೈಂಗಿಕ ಅನೈತಿಕತೆಯಿಂದ ದೂರವಿರಬೇಕು' ಎಂಬ ಆಜ್ಞೆಯು ಯಾಜಕಕಾಂಡ 18 ರಲ್ಲಿ ತಿಳಿಸಲ್ಪಟ್ಟಿರುವ ಅಕ್ರಮವಾದ ಲೈಂಗಿಕ ಸಂಬಂಧಗಳ ಪಟ್ಟಿಯನ್ನು ಉಲ್ಲೇಖಿಸುತ್ತದೆ, ಇವುಗಳನ್ನು ಯೆಹೂದ್ಯರು ಹಾದರವೆಂದು ಪರಿಗಣಿಸುತ್ತಿದ್ದರು, ಆದರೆ ಅವುಗಳಲ್ಲಿ ಕೆಲವು ಗ್ರೀಕ್-ರೋಮನ್ ಜಗತ್ತಿನಲ್ಲಿ ಸಾಮಾನ್ಯವಾಗಿತ್ತು. ಹೊಸ ಒಡಂಬಡಿಕೆಯ ಯಾವುದೇ ಪತ್ರಿಕೆಗಳಲ್ಲಿ ಯೆರೂಸಲೇಮಿನ ಸಮ್ಮೇಳನದ ಕುರಿತು ಮತ್ತು

ಅದರ ನಿರ್ಧಾರದ ಕುರಿತು ಉಲ್ಲೇಖವಾಗದಿರುವುದನ್ನು ಗಮನಿಸುವುದು ಕುತೂಹಲಕಾರಿಯಾಗಿದೆ.

# ಉ 39. ಅನ್ಯಜನರಿಂದ ಬಂದ ವಿಶ್ವಾಸಿಗಳಿಗೆ ಸಮ್ಮೇಳನದ ಪತ್ರ, 15:22–34

## ಇ) ಪಠ್ಯ ಪ್ರಶ್ನೆಗಳು

1. ಯೂದಾಯದಿಂದ ಬಂದ ಯೆಹೂದ್ಯ ಧರ್ಮಶಾಸ್ತ್ರಪಾಲಕರು ಯೆರೂಸಲೇಮಿನಲ್ಲಿದ್ದ ಅಪೋಸ್ತಲರ ಮತ್ತು ಹಿರಿಯರ ಸಮ್ಮತಿಯಿಲ್ಲದೆ ಬಂದವರಾಗಿದ್ದರು, ಮತ್ತು ಅವರು ಅಂತಿಯೋಕ್ಯ ಸಭೆಯಲ್ಲಿ ಗಲಿಬಿಲಿಯನ್ನುಂಟುಮಾಡಿದರು.

2. ಯೆರೂಸಲೇಮಿನಲ್ಲಿ ಅಪೋಸ್ತಲರಿಂದ ಮತ್ತು ಹಿರಿಯರಿಂದ ಮಾಡಲ್ಪಟ್ಟ ನಿರ್ಧಾರವು ಅನ್ಯಸಭೆಗಳಿಗೆ ಯೂದ ಮತ್ತು ಸೀಲರ ಮೂಲಕವಾಗಿ ಪತ್ರಗಳಿಂದಲೂ ಹಾಗೂ ಬಾಯಿ ಮಾತಿನಿಂದಲೂ ತಿಳಿಸಲ್ಪಟ್ಟಿತು.

3. ಯೆರೂಸಲೇಮಿನಿಂದ ಬಂದ ಪತ್ರದಿಂದ ಅಂತಿಯೋಕ್ಯ ಸಭೆಯು ಸಂತೋಷಭರಿತವಾಯಿತು ಮತ್ತು ಪ್ರೋತ್ಸಾಹಿಸಲ್ಪಟ್ಟಿತು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅಪೋಸ್ತಲರ, ಹಿರಿಯರ ಮತ್ತು ವಿಶ್ವಾಸಿಗಳ ನಡುವೆ ಆ ತೀರ್ಪಿನ ಕುರಿತು ಒಮ್ಮತವಿತ್ತೆಂದು ಹೇಳುವುದು 'ಯೆರೂಸಲೇಮಿನ ಸಮ್ಮೇಳನಕ್ಕೆ' ಸಾಕಾಗಿರಲಿಲ್ಲ. ಸಾಕ್ಷಿಗಳನ್ನು ಕೊಡುವಾಗಲೂ ಮತ್ತು ಚರ್ಚಿಸುವಾಗಲೂ ಪವಿತ್ರಾತ್ಮನು ಅವರ ಮಧ್ಯದಲ್ಲಿದ್ದನೆಂಬುದನ್ನೂ ಅವರು ಗುರುತಿಸಿದರು. ಪವಿತ್ರಾತ್ಮನು ಹಳೆ ಒಡಂಬಡಿಕೆಯ ಪ್ರವಾದಿಯ ಮಾತುಗಳಿಂದಲೂ ಮಾತನಾಡಿ ಪೇತ್ರ, ಪೌಲ ಮತ್ತು ಬಾರ್ನಬರ ಸಾಕ್ಷಿ ಮತ್ತು ಸಾರಾಂಶವನ್ನು ಧೃಢಪಡಿಸಿದನು. ಹಾಗಾಗಿ ಇದರ ಫಲವಾಗಿ ಪವಿತ್ರಾತ್ಮನ ಮತ್ತು ಸಭಾ ನಾಯಕರುಗಳ ಹಾಗೂ ಸಭೆಯ ವಿಶ್ವಾಸಿಗಳ ನಡುವೆ ಒಂದು 'ಜಂಟಿ ತೀರ್ಪು' ತಲುಪಲ್ಪಟ್ಟಿತು.

2. ಅನ್ಯ ವಿಶ್ವಾಸಿಗಳು ನಾಲ್ಕು ಬೇಡಿಕೆಗಳನ್ನು ಹಿಂಬಾಲಿಸಲು ಪ್ರೇರೇಪಿಸುವಂತಹ ಸಂಗತಿಯ ಕುರಿತು ಪತ್ರದಲ್ಲಿ ಯಾವುದೇ ಪ್ರಸ್ತಾಪವಿಲ್ಲ. ಯಾಕೋಬನು ಹೀಗೆ ಕಾರಣ ಕೊಟ್ಟಿದ್ದಾನೆ (ವ. 21): 'ಏಕೆಂದರೆ ...'" ಈ ನಾಲ್ಕು ಬೇಡಿಕೆಗಳ ಕುರಿತು ಯೂದ ಮತ್ತು ಸೀಲರು ವಿವರಿಸಲು ಬಲ್ಲವರಾದ್ದರಿಂದ ಇದನ್ನು ಕೈ ಬಿಟ್ಟಿದ್ದಕ್ಕೆ ಯಾವುದೇ ವಿಶೇಷ ಕಾರಣಗಳಿರಲಿಲ್ಲವೆಂದು ನಾನು ಯೋಚಿಸುತ್ತೇನೆ.

3. ಅಂತಿಯೋಕ್ಯದಲ್ಲಿನ ಸಭೆಯನ್ನು ಪ್ರೋತ್ಸಾಹಿಸಿ ಬಲಪಡಿಸಲು ಯೂದ ಮತ್ತು ಸೀಲರಿಗೆ ಹೇಗೆ ಸಾಧ್ಯವಾಯಿತು ಎಂಬುದಕ್ಕೆ ನಾಲ್ಕು ಕಾರಣಗಳಿವೆ ಎಂದು ನಾನು ಆಲೋಚಿಸುತ್ತೇನೆ:

1) ಅವರು ಯೆರೂಸಲೇಮಿನ ಸಭೆಯಲ್ಲಿ ನಾಯಕರುಗಳಾಗಿದ್ದಾಗ ಅಲ್ಲಿ ಹೊಂದಿದ ಪೂರ್ವ ಅನುಭವ ಅವರಿಗಿತ್ತು.

2) ಅವರು ನಂಬಲರ್ಹ ವ್ಯಕ್ತಿಗಳಾಗಿದ್ದರು – ಇಲ್ಲವಾದಲ್ಲಿ ಅಂತಿಯೋಕ್ಯ ಸಭೆಗೆ ಆ ಪತ್ರವನ್ನು ತೆಗೆದುಕೊಂಡು ಹೋಗುವುದಕ್ಕಾಗಿ ಯೆರೂಸಲೇಮಿನ ಸಭೆಯು ಅವರನ್ನು ಆಯ್ಕೆಮಾಡಿಕೊಳ್ಳುತ್ತಿದ್ದಿಲ್ಲ.

3) ಅವರು ಪ್ರೋತ್ಸಾಹಪಡಿಸುವ ವರವನ್ನು ಹೊಂದಿದ್ದ ಪ್ರವಾದಿಗಳಾಗಿದ್ದರು (ರೋಮಾ. 12:8).

4) ಕನಿಷ್ಟ ಪಕ್ಷ ಇದಕ್ಕಿಂತಲೂ ಮುಂಚೆ ಸೀಲನು ಅನ್ಯರೊಂದಿಗೆ ಬಳಕೆಯಾಗಿದ್ದಿರಬಹುದು: ಆತನು ಒಬ್ಬ ರೋಮನ್ ಪ್ರಜೆಯಾಗಿದ್ದನು ಮತ್ತು ಆತನು ತನ್ನ ಹೆಸರಿನ ಲ್ಯಾಟೀನ್ ಆವೃತ್ತಿಯನ್ನು ಹೊಂದಿದ್ದನು. ಅಂತಿಯೋಕ್ಯದಲ್ಲಿದ್ದ ಅನೇಕ ವಿಶ್ವಾಸಿಗಳು ಅನ್ಯ ಜನರಾಗಿದ್ದರು.

## ಉ 40. ಪೌಲ ಮತ್ತು ಬಾರ್ನಬರ ನಡುವೆ ಭಿನ್ನಾಭಿಪ್ರಾಯ, 15:35–40

### ಇ) ಪಠ್ಯ ಪ್ರಶ್ನೆಗಳು

1. ಪೌಲ ಮತ್ತು ಬಾರ್ನಬರು ತಮ್ಮ ಎರಡನೆಯ ಸೇವಾ ಪ್ರಯಾಣಕ್ಕೆ ಹೊರಡುವುದಕ್ಕಿಂತ ಮುಂಚೆ ಅಂತಿಯೋಕ್ಯ ಸಭೆಯಲ್ಲಿ ಸಭಾಪಾಲಕರಾಗಿ ಕಾರ್ಯನಿರ್ವಹಿಸಿದರು. ಅವರು ದೇವರ ವಾಕ್ಯವನ್ನು ಉಪದೇಶಿಸಿದರು ಮತ್ತು ಬೋಧಿಸಿದರು.

2. ಪೌಲನು ಮೊದಲ ಹೆಜ್ಜೆಯನ್ನು ತೆಗೆದುಕೊಂಡನು ಮತ್ತು ತಾವು ಮೊದಲ ಸೇವಾ ಪ್ರಯಾಣದ ಸಂದರ್ಭದಲ್ಲಿ ಸುವಾರ್ತೆಯನ್ನು ಸಾರಿದ ಪ್ರದೇಶಗಳನ್ನು ಮರು ಸಂದರ್ಶಿಸೋಣ ಎಂಬುದಾಗಿ ಬಾರ್ನಬನಿಗೆ ಸಲಹೆ ನೀಡಿದನು. ಸಭೆಗಳು ಹೇಗೆ ಮುಂದುವರಿಯುತ್ತಿದೆ ಎಂಬುದನ್ನು ನೋಡಬೇಕೆನ್ನುವುದು ಆತನ ಕಾರಣವಾಗಿತ್ತು.

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಬಹುಶಃ ಬಾರ್ನಬನು ಮಾರ್ಕನೆನಿಸಿಕೊಳ್ಳುವ ಯೋಹಾನನಿಗೆ, ಆತನು ಒಮ್ಮೆ ಸೋತಿದ್ದಾಗ್ಯೂ, ಎರಡನೆಯ ಅವಕಾಶವನ್ನು ಕೊಡಬೇಕೆಂದಿದ್ದನು.

2. ಪೌಲನು ಸೀಲನನ್ನು ತನ್ನ ಜೊತೆಪ್ರಯಾಣಿಕನನ್ನಾಗಿ ಆರಿಸಿಕೊಂಡದ್ದಕ್ಕೆ ಬಹುಶಃ ಬಹಳ ಕಾರಣಗಳಿದ್ದವು, ಉದಾಹರಣೆಗೆ:

    - ಪೌಲನು ಸೀಲನನ್ನು ಮುಂಚಿನಿಂದಲೂ ಚೆನ್ನಾಗಿ ತಿಳಿದಿದ್ದನು. ಅವರಿಬ್ಬರೂ ಯೆರೂಸಲೇಮಿನಿಂದ ಪತ್ರದ ಸಮೇತ ಒಟ್ಟಿಗೆ ಪ್ರಯಾಣ ಮಾಡಿದ್ದರು (ವ. 25–27) ಮತ್ತು ಅವರಿಬ್ಬರೂ ಅಂತಿಯೋಕ್ಯ ಸಭೆಯಲ್ಲಿ ಒಟ್ಟಾಗಿ ಕೆಲಸ ಮಾಡಿದ್ದರು (ವ. 32–35).

    - ಸೀಲನು ಒಬ್ಬ ಅನುಭವವುಳ್ಳ ನಂಬಿಗಸ್ತ ದೇವರ ಸೇವಕನಾಗಿದ್ದನು ಹಾಗೂ ಪ್ರವಾದಿಯಾಗಿದ್ದನು. ಆತನು ಯೆರೂಸಲೇಮಿನ ಸಭೆಯಿಂದಲೂ ಮತ್ತು ಅಂತಿಯೋಕ್ಯ ಸಭೆಯಿಂದಲೂ ನಾಯಕತ್ವದ ಅನುಭವವನ್ನು ಪಡೆದಿದ್ದನು (ವ. 22, 27, 32, 33).

    - ಸೀಲನು ಅಂತರ್‌ರಾಷ್ಟ್ರೀಯ ಹಿನ್ನಲೆಯನ್ನು ಹೊಂದಿದ್ದನು. ಆತನು ಒಬ್ಬ ರೋಮನ್ ಪ್ರಜೆಯಾಗಿದ್ದನು (16:36–37). ಆತನ ಹೆಸರಿನ ಲ್ಯಾಟಿನ್ ರೂಪವಾದ ಸಿಲ್ವನು ಎಂಬುದು ಕೆಲವೊಮ್ಮೆ ಉಪಯೋಗಿಸಲ್ಪಟ್ಟಿತ್ತು. ಬಹುಶಃ ಆತನು ಮುಂಚೆ ರೋಮ್ ಸಾಮ್ರಾಜ್ಯದಾದ್ಯಂತ ಪ್ರಯಾಣಿಸಿದ ಅನುಭವವನ್ನು ಹೊಂದಿದ್ದನು.

- ಅಂತಿಯೋಕ್ಯದಲ್ಲಿದ್ದ ಸಭೆಯು ಪೌಲನ ತಾಯಿ ಸಭೆಯಾಗಿತ್ತು ಮತ್ತು ಅದು 'ಕಳುಹಿಸುವ ಸಭೆಯಾಗಿತ್ತು'. ಸಭಾ ನಾಯಕರು ಸೀಲನನ್ನು ಚೆನ್ನಾಗಿ ಅರಿತವರಾಗಿದ್ದರು, ಹಾಗಾಗಿ ಅವರು ಈ ಹೊಸ ಸೇವಕರ ತಂಡವನ್ನು ಆಶೀರ್ವದಿಸಲು ಮತ್ತು ಅವರಿಗೆ ಬೆಂಬಲವಾಗಿರಲು ಸಂತೋಷವುಳ್ಳವರಾಗಿದ್ದರು (ವ. 40).

## ಉ 41. ಪೌಲ ಮತ್ತು ಸೀಲರೊಡನೆ ತಿಮೋಥೆಯನು, 15:40–16:5

### ಇ) ಪಠ್ಯ ಪ್ರಶ್ನೆಗಳು

2. ಪೌಲನು ಮತ್ತು ಆತನ ತಂಡದವರು ಎರಡನೆಯ ಸೇವಾ ಪ್ರಯಾಣದಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಸಭೆಗಳನ್ನು ಸಂಧಿಸಿದಾಗ ಅವುಗಳು ನಂಬಿಕೆಯಲ್ಲಿಯೂ ಮತ್ತು ಸಂಖ್ಯೆಯಲ್ಲಿಯೂ ಬೆಳೆಯುತ್ತಿದ್ದವು (ವ. 5).

3. ಈ ಪಠ್ಯವು ತಿಮೋಥಿಯ ಕುರಿತು ನಮಗೆ ಈ ಕೆಳಗಿನ ಮಾಹಿತಿಯನ್ನು ಒದಗಿಸುತ್ತದೆ:

    - ಆತನು ಲುಸ್ತ್ರದಲ್ಲಿ ಜೀವಿಸುತ್ತಿದ್ದನು. ಅಲ್ಲಿ ಪೌಲ ಮತ್ತು ಸೀಲರು ಆತನನ್ನು ಭೇಟಿಯಾದರು (ವ. 1).
    - ಆತನ ತಾಯಿಯು ಯೆಹೂದ್ಯಳಾಗಿದ್ದಳು. ಆಕೆಯು ಒಬ್ಬ ವಿಶ್ವಾಸಿಯಾದಳು (ವ. 1). ಆತನ ತಂದೆಯು ಗ್ರೀಕನಾಗಿದ್ದನು (ವ. 1, 3).
    - ಆತನು ಲುಸ್ತ್ರದಲ್ಲಿಯೂ ಇಕೋನಿಯದಲ್ಲಿಯೂ ಒಳ್ಳೆಯ ಸಾಕ್ಷಿಯನ್ನು ಹೊಂದಿದ್ದನು (ವ. 2).
    - ಆತನು ಸುನ್ನತಿ ಹೊಂದಿರಲಿಲ್ಲ, ಆದರೆ ಪೌಲನು ತಮ್ಮ ಪ್ರಯಾಣವನ್ನು ಮುಂದುವರಿಸುವುದಕ್ಕಿಂತ ಮುಂಚೆ ಆತನಿಗೆ ಸುನ್ನತಿ ಮಾಡಿಸಿದನು.

4. ತಿಮೋಥಿಯು ತನ್ನ ಸೇವಾ ಪ್ರಯಾಣದಲ್ಲಿ ತನ್ನೊಂದಿಗೆ ಸೇರಿಕೊಳ್ಳಬೇಕೆಂದು ಪೌಲನು ಬಯಸಿದನು. ಹಾಗಾಗಿ ಆತನು ಆ ಪ್ರಾಂತ್ಯದಲ್ಲಿ ವಾಸಿಸುವ ಯೆಹೂದ್ಯರ ಸಲುವಾಗಿ ತಿಮೋಥಿಗೆ ಸುನ್ನತಿ ಮಾಡಿಸಿದನು. ಈ ಪಠ್ಯದಲ್ಲಿ ಬೇರೆ ಯಾವುದೇ ವಿವರಣೆಯು ಕೊಡಲ್ಪಟ್ಟಿಲ್ಲ. ಈ ಸಮಸ್ಯೆಯ ಕುರಿತು ಹೆಚ್ಚಿನ ಚರ್ಚೆಗಾಗಿ ಈ) 2 ನ್ನು ನೋಡಿರಿ.

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನು ತನ್ನ ಎರಡನೆಯ ಸೇವಾ ಪ್ರಯಾಣಕ್ಕೆ ಹೊರಡುವುದಕ್ಕಿಂತ ಮುಂಚೆ ಅಂತಿಯೋಕ್ಯ ಸಭೆಯ ವಿಶ್ವಾಸಿಗಳಿಂದ ಆಶೀರ್ವದಿಸಲ್ಪಟ್ಟನು. ಅಂತಿಯೋಕ್ಯವು ಪೌಲನ ತಾಯಿ ಸಭೆಯಾಗಿತ್ತು ಮತ್ತು ಸಭೆಯು ಆತನನ್ನು ಆಶೀರ್ವದಿಸುವುದರ ಮೂಲಕ ಪೌಲನ ಸೇವೆಯಲ್ಲಿ ತಾವು ಭಾಗಿಗಳಾಗಿದ್ದೇವೆ ಎಂಬುದನ್ನು ತೋರಿಸಿಕೊಟ್ಟರು. ಪೌಲನಿಗೆ ತನ್ನ ತಾಯಿ ಸಭೆಯ ಆತ್ಮೀಕ ಪ್ರೋತ್ಸಾಹವಿತ್ತು. ಬಹುಶಃ ಸಭೆಯಲ್ಲಿ ಒಂದು ವಿಧವಾದ ಪ್ರತಿಷ್ಠಾಪನೆಯ ಕೂಟವು

ಏರ್ಪಡಿಸಲ್ಪಟ್ಟಿರಬಹುದು, ಅದರಲ್ಲಿ ಹಿರಿಯರು ಪೌಲನ ಮೇಲೆ ಹಸ್ತವನ್ನಿಟ್ಟು ಆತನನ್ನು ಆಶೀರ್ವದಿಸಿದರು. ಆ ದಿನಗಳಲ್ಲಿ ಪ್ರಯಾಣವು ಬಹಳ ಅಪಾಯಕಾರಿಯಾದ ಸಂಗತಿಯಾಗಿತ್ತು. ಪೌಲನೂ ಸಹ ತನ್ನ ಸೇವೆಯಲ್ಲಿ ಅನೇಕ ಕಷ್ಟಗಳನ್ನು ಮತ್ತು ವೈರಿಗಳನ್ನು ಎದುರಿಸಿದನು. ಹಾಗಾಗಿ ಸಭೆಯ ಆಶೀರ್ವಾದದೊಂದಿಗೆ ಹೋಗುವಂತಹದ್ದು ಪೌಲನಿಗೆ ಬಹಳ ಪ್ರೋತ್ಸಾಹವನ್ನು ಉಂಟುಮಾಡಿದ ಸಂಗತಿಯಾಗಿದ್ದಿರಬಹುದು.

2. ಪೌಲನು ತೀತನಿಗೆ ಸುನ್ನತಿಯನ್ನು ಮಾಡಿಸಲಿಲ್ಲ (ಗಲಾತ್ಯ. 2:3), ಆದರೆ ಆತನು ತಿಮೋಥಿಗೆ ಸುನ್ನತಿ ಮಾಡಿಸಿದನು. ಹಾಗಾದರೆ ಇದರ ನಡುವಿನ ವ್ಯತ್ಯಾಸವೇನು? ತೀತನಿಗೆ ಗ್ರೀಕ್ ಪೋಷಕರಿದ್ದರು. ತಿಮೋಥಿಯ ತಂದೆ ಗ್ರೀಕನಾಗಿದ್ದನು ಮತ್ತು ತಾಯಿ ಯೆಹೂದ್ಯಳಾಗಿದ್ದಳು. ಹಾಗಾಗಿ ತಿಮೋಥಿಯು ಇನ್ನೂ ಕೂಸಾಗಿದ್ದಾಗಲೇ ಸುನ್ನತಿ ಹೊಂದಿರಬೇಕೆಂದು ಯೆಹೂದ್ಯರು ನಿರೀಕ್ಷಿಸಿದ್ದರು. ಆತನಿಗೆ ಯಾಕೆ ಸುನ್ನತಿ ಮಾಡಲಿಲ್ಲ ಎಂಬುದು ನಮಗೆ ತಿಳಿದಿಲ್ಲ. ಬಹುಶಃ ಆತನ ತಂದೆ ಅದನ್ನು ವಿರೋಧಿಸಿರಬಹುದು. ಈಗ ಪೌಲನು ತನ್ನ ಪ್ರಯಾಣದಲ್ಲಿ ತಿಮೋಥಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದು ಬಯಸಿದನು. ಪೌಲನು ಯೆಹೂದ್ಯರ ಹಾಗೂ ಅನ್ಯರ ನಡುವೆ ಸೇವೆ ಮಾಡುತ್ತಿದ್ದನು. ಹಾಗಾಗಿ ಯೆಹೂದ್ಯರ ಭಾವನೆಗಳಿಗೆ ಧಕ್ಕೆ ಉಂಟಾಗಬಾರದೆಂದು ಆತನು ತಿಮೋಥಿಗೆ ಸುನ್ನತಿಯನ್ನು ಮಾಡಿಸಿದನು. ಹೀಗೆ ಮಾಡುವುದರ ಮೂಲಕ ಯೆಹೂದ್ಯರ ಮಧ್ಯದಲ್ಲಿ ಪೌಲ ಮತ್ತು ತಿಮೋಥಿಯರು ಮಾಡಿದ ಸೇವೆಯು ಪರಿಣಾಮಕಾರಿಯಾಗಿತ್ತು. ನಾವು ಈ ವಿಚಾರದ ಕುರಿತಾಗಿ ಸ್ಪಷ್ಟವಾಗಿರಬೇಕು: ರಕ್ಷಣೆ ಹೊಂದಲಿಕ್ಕೆ ಸುನ್ನತಿಯು ಅವಶ್ಯವಾಗಿಲ್ಲ. ಒಂದು ವೇಳೆ ಅವಶ್ಯವಾಗಿದ್ದಿದ್ದರೆ, ಪೌಲನು ತೀತನಿಗೂ ಸಹ ಸುನ್ನತಿ ಮಾಡಿಸುತ್ತಿದ್ದನು. ತಿಮೋಥಿಯ ಸುನ್ನತಿಯು ಯೆಹೂದ್ಯರ ಭಾವನೆಗಳಿಗಾಗಿ ಹೊಂದಿಕೊಳ್ಳಲು ಮಾಡಲ್ಪಟ್ಟ ಒಂದು ಸಾಂಸ್ಕೃತಿಕ ವಿಷಯವಾಗಿದೆ.

3. ಅ. ಕೃ. 15:20, 21 ರಲ್ಲಿ ಯೆರೂಸಲೇಮಿನ ಸಮ್ಮೇಳನದ ನಿರ್ಧಾರದ ಪೋರಣೆಯು 'ಆರಂಭ ಕಾಲದಿಂದಲೇ ಪ್ರತಿಯೊಂದು ಪಟ್ಟಣದಲ್ಲಿ ಮೋಶೆಯ ಗ್ರಂಥವನ್ನು ಬೋಧಿಸಲಾಗುತ್ತದೆ ಹಾಗೂ ಪ್ರತಿ ಸಬ್ಬತ್ ದಿನ ಸಭಾಮಂದಿರಗಳಲ್ಲಿ ಓದಲಾಗುತ್ತದೆ' ಎಂಬ ಸಂಗತಿಯಿಂದ ಎಂದು ಹೇಳಲ್ಪಟ್ಟಿದೆ. ಈ ನಾಲ್ಕು ನಿರ್ದಿಷ್ಟವಾದ ಕ್ಷೇತ್ರಗಳಲ್ಲಿ ಅನ್ಯ ವಿಶ್ವಾಸಿಗಳು ನಡಕೊಂಡ ರೀತಿಯು ಯೆಹೂದ್ಯರ ಭಾವನೆಗಳಿಗೆ ಧಕ್ಕೆ ಉಂಟುಮಾಡಿತ್ತು. ಹಾಗಾಗಿ ಅನ್ಯವಿಶ್ವಾಸಿಗಳ ಧಕ್ಕೆ ತರುವ ವರ್ತನೆಯಿಂದ ಸುವಾರ್ತೆಯನ್ನು ಸಾರುವುದಕ್ಕೆ ಅಡ್ಡಿಯಾಗಬಾರದು. ತಿಮೋಥಿಯ ಸುನ್ನತಿಯ ಕುರಿತಾದ ಕಥೆಯೂ ಇದೇ ಕಾರಣವನ್ನು ಸೂಚಿಸುವಂತಹದ್ದಾಗಿದೆ, 'ಯಾಕೆಂದರೆ ಆ ಪ್ರಾಂತ್ಯದಲ್ಲಿ ವಾಸಿಸುವ ಯೆಹೂದ್ಯರ ಸಲುವಾಗಿ (16:3). ತಿಮೋಥಿಯಂತಹ ಒಬ್ಬ ಯೆಹೂದ್ಯನು ಸುನ್ನತಿಯನ್ನು ಮಾಡಿಸಿಕೊಳ್ಳದಿದ್ದಿದ್ದರೆ ಗ್ರೀಕ್–ರೋಮನ್ ಜಗತ್ತಿನ ಯೆಹೂದ್ಯರಿಗೆ ಧಕ್ಕೆ ಉಂಟಾಗುತ್ತಿತ್ತು. ಹಾಗಾಗಿ ಈ ಸನ್ನಿವೇಶವು ಸುವಾರ್ತೆಯನ್ನು ಸಾರುವುದಕ್ಕೆ ಅಡ್ಡಿಯಾಗಬಾರದು.

## ಉ 42. ಪೌಲನಿಗೆ ಉಂಟಾದ ಮಕೆದೋನಿಯನ ದರ್ಶನ, 16:6–10

### ಇ) ಪಠ್ಯ ಪ್ರಶ್ನೆಗಳು

2. ಏಷ್ಯಾ ಪ್ರಾಂತ್ಯದಲ್ಲಿ ಸುವಾರ್ತೆಯನ್ನು ಸಾರದಂತೆ ಪವಿತ್ರಾತ್ಮನು ಪೌಲ ಮತ್ತು ಆತನ ಸ್ನೇಹಿತರನ್ನು ತಡೆದನು.

3. ಅವರು ಬಿಥೂನಿಯವನ್ನು ಪ್ರವೇಶಿಸದಂತೆ ಪವಿತ್ರಾತ್ಮನು ತಡೆದನು.

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲ ಮತ್ತು ಆತನ ಸಂಗಡಿಗರನ್ನು ಪವಿತ್ರಾತ್ಮನು ಈ ಕೆಳಗಿನ ರೀತಿಯಲ್ಲಿ ಮಾರ್ಗದರ್ಶಿಸಿರಬಹುದು:

    1) ಅವರು ಪ್ರಾರ್ಥಿಸುತ್ತಾ ದೇವರ ಮಾರ್ಗದರ್ಶನವನ್ನು ಹುಡುಕುತ್ತಿರುವಾಗ ಏಷ್ಯಾ ಪ್ರಾಂತ್ಯದಲ್ಲಿ ಸುವಾರ್ತೆಯನ್ನು ಸಾರುವುದಕ್ಕೂ ಮತ್ತು ಬಿಥೂನಿಯವನ್ನು ಪ್ರವೇಶಿಸುವುದಕ್ಕೂ ಇದು ಸರಿಯಾದ ಸಮಯವಲ್ಲವೆಂದು ಪವಿತ್ರಾತ್ಮನು ಅವರ ಹೃದಯ ಮತ್ತು ಮನಸ್ಸುಗಳಲ್ಲಿ ಮನದಟ್ಟು ಮಾಡಿರಬಹುದು.

    2) ಆತನು ಹೊರಗಿನ ಪರಿಸ್ಥಿತಿಗಳಿಂದ ಅವರನ್ನು ತಡೆದಿರಬಹುದು, ಉದಾಹರಣೆಗೆ ಅನಾರೋಗ್ಯದ ಮೂಲಕ, ಯೆಹೂದ್ಯರಿಂದ ಬಂದ ವಿರೋಧತ್ವದ ಮೂಲಕ, ಸರ್ಕಾರದ ಕಟ್ಟಳೆಗಳ ಮೂಲಕ ಅಥವಾ ಪ್ರವಾದನಾ ವಾಕ್ಯಗಳ ಅಥವಾ ದರ್ಶನಗಳ ಮೂಲಕ.

2. ಪೌಲನಿಗೆ ಮೆಕೆದೋನಿಯದವನ ದರ್ಶನವಾದ ಮೇಲೆ, ಆತನು ತನ್ನ ಸಂಗಡಿಗರೊಂದಿಗೆ ತನ್ನ ದರ್ಶನವನ್ನು ಹಂಚಿಕೊಂಡಿರಬೇಕು. ಅವರು ಒಟ್ಟಾಗಿ ಪೌಲನ ದರ್ಶನವನ್ನು ಚರ್ಚಿಸಿದರು ಮತ್ತು ಪವಿತ್ರಾತ್ಮನು ಪೌಲನೊಂದಿಗೆ ಈ ದರ್ಶನದ ಮೂಲಕ ಮಾತನಾಡಿದ್ದಾನೆ ಎಂದು ಅವರು ಒಟ್ಟಿಗೆ ನಿರ್ಧರಿಸಿದರು. ಅವರು ಇದಕ್ಕಿಂತ ಮುಂಚೆ ಏಷ್ಯಾ ಪ್ರಾಂತ್ಯಕ್ಕೆ ಸುವಾರ್ತೆಯನ್ನು ಸಾರಲಿಕ್ಕೆ ಹೋದಾಗ ಮತ್ತು ಬಿಥೂನಿಯವನ್ನು ಪ್ರವೇಶಿಸಲಿಕ್ಕೆ ಹೋದಾಗ ಪವಿತ್ರಾತ್ಮನು ತಡೆದಾಗ ಏನಾಯಿತು ಎಂಬುದರ ಕುರಿತೂ ಅವರು ಚರ್ಚಿಸಿರಬೇಕು. ಈಗ ದೇವರು ಅವರಿಗೆ ಮುಂಚಿನ ತನ್ನ 'ನಕಾರಾತ್ಮಕ ಮಾರ್ಗದರ್ಶನಕ್ಕೆ' ಕಾರಣವನ್ನು ಕೊಟ್ಟಿದ್ದಾನೆ: ಅವರು ಏಷ್ಯಾ ಮತ್ತು ಬಿಥೂನಿಯದಲ್ಲಿ ಸೇವೆ ಮಾಡುವುದರ ಬದಲು ಮೆಕೆದೋನಿಯಕ್ಕೆ ಸುವಾರ್ತೆಯನ್ನು ಕೊಂಡೊಯ್ಯಬೇಕೆಂಬುದು ಅವರ ಕುರಿತಾದ ದೇವರ ಯೋಜನೆಯಾಗಿತ್ತು. ಅವರು ಒಟ್ಟಿಗೆ ನಿರ್ಧರಿಸಿ ಮೆಕೆದೋನಿಯಕ್ಕೆ ಹೊರಡಲು ಸಿದ್ಧರಾದರು. ಅವರು ತಮ್ಮ ಕರೆಯುವಿಕೆಗೆ ವಿಧೇಯರಾದರು ಮತ್ತು ಅವರು ಯಾವುದೇ ತಡವನ್ನು ಮಾಡಲಿಲ್ಲ.

3. ಈ ಪತ್ಯದ ಬರಹಗಾರನಾದ ಲೂಕನು ಈಗ ಪೌಲನೊಂದಿಗೆ ಆತನ ಪ್ರಯಾಣದಲ್ಲಿ ಸೇರಿಕೊಳ್ಳುತ್ತಿದ್ದಾನೆ. ಇದು ಅಪೋಸ್ತಲರ ಕೃತ್ಯಗಳಲ್ಲಿ ನಾಲ್ಕು ಬಾರಿ ಕಂಡುಬರುವ 'ನಾವು' ಎಂಬ ವಾಕ್ಯಭಾಗಗಳಲ್ಲಿ ಮೊದಲನೆಯದಾಗಿದೆ: 16:10–17; 20:5–15; 21:1–18 ಮತ್ತು 27:1–28:16.

# ಉ 43. ಫಿಲಿಪ್ಪಿಯಲ್ಲಿ ಲುದ್ಯಳ ಪರಿವರ್ತನೆ, 16:11–15

## ಇ) ಪಠ್ಯ ಪ್ರಶ್ನೆಗಳು

2. ಫಿಲಿಪ್ಪಿಯಲ್ಲಿ ಯಾವುದೇ ಸಭಾಮಂದಿರವು ಇಲ್ಲದೇ ಇದ್ದುದ್ದರಿಂದ ಪೌಲ ಮತ್ತು ಆತನ ಸಂಗಡಿಗರು ಸಬ್ಬತ್ ದಿನದಲ್ಲಿ ಯೆಹೂದ್ಯರು ಮತ್ತು ದೈವಭಯವುಳ್ಳ ಅನ್ಯರು ಪ್ರತಿವಾರ ಕೂಡಿಬರುತ್ತಿದ್ದ ಸ್ಥಳವನ್ನು ಹುಡುಕುತ್ತಾ ನದಿಯ ಕಡೆಗೆ ಹೋದರು. ಸ್ಥಳೀಯ ನದಿಯ ನೀರು ಹರಿಯುವ ಸ್ಥಳದಲ್ಲಿ ಈ ರೀತಿಯಾಗಿ ಪ್ರಾರ್ಥನೆಗೆ ಕೂಡಿಬರುವಂತಹದ್ದು ಸಾಮಾನ್ಯವಾಗಿತ್ತು.

3. ಲೂಕನು ಲುದ್ಯಳ ಕುರಿತಾಗಿ ವ. 14 ರಲ್ಲಿ ಮೂರು ಸಂಗತಿಗಳನ್ನು ತಿಳಿಸುತ್ತಾನೆ:

   - ಆಕೆಯು ಥುವತ್ತೈರದಿಂದ ಬಂದವಳಾಗಿದ್ದಳು
   - ಆಕೆಯು ಕೆನ್ನೀಲಿ ಬಣ್ಣದ ಬಟ್ಟೆಗಳ ವ್ಯಾಪಾರಸ್ಥಳಾಗಿದ್ದಳು
   - ಆಕೆಯು ದೇವರನ್ನು ಆರಾಧಿಸುವವಳಾಗಿದ್ದಳು

   ಹಾಗಾಗಿ ಲುದ್ಯಳು ಮೂಲತಃವಾಗಿ ಮೆಕೆದೋನಿಯಕ್ಕೆ ಸೇರಿದ ಫಿಲಿಪ್ಪಿಯವಳಲ್ಲ, ಬದಲಾಗಿ ಆಕೆಯು ರೋಮನ್ ಸಾಮ್ರಾಜ್ಯದಲ್ಲಿದ್ದ ಬೇರೊಂದು ದೇಶದಿಂದ ಬಂದ ವ್ಯಾಪಾರಸ್ಥ ಸ್ತ್ರೀಯಾಗಿದ್ದಳು. ಕೆನ್ನೀಲಿ ಬಣ್ಣದ ಬಟ್ಟೆಯ ವ್ಯಾಪಾರವು ಲಾಭದಾಯಕ ವ್ಯಾಪಾರವಾಗಿದ್ದರಿಂದ ಮತ್ತು ಆಕೆಗೆ ಒಂದು ದೊಡ್ಡ ಮನೆ ಇದ್ದುದ್ದರಿಂದ, ಆಕೆಯು ಶ್ರೀಮಂತಳಾಗಿದ್ದಿರಬಹುದು (ವ. 15). ಆಕೆಯು ಒಬ್ಬ ಯೆಹೂದ್ಯಳಾಗಿರಲಿಲ್ಲ, ಬದಲಾಗಿ ಯೆಹೂದ್ಯರ ದೇವರಲ್ಲಿ ನಂಬಿಕೆಯಿಟ್ಟಿದ್ದ ಒಬ್ಬ ಅನ್ಯಳಾಗಿದ್ದು ಮೋಶೆಯ ಧರ್ಮಶಾಸ್ತ್ರದ ಅನುಸಾರವಾಗಿ ಜೀವಿಸಲಿಕ್ಕೆ ಬಯಸಿದವಳಾಗಿದ್ದಳು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಲುದ್ಯಳ ಪರಿವರ್ತನೆಯ ಕುರಿತಾದ ಲೂಕನ ವಿವರಣೆಯಲ್ಲಿ ಮೂರು ಪ್ರಮುಖವಾದ ಅಂಶಗಳಿವೆ:

   1) ಪೌಲನು ಒಂದು ಸಂದೇಶವನ್ನು ಸಾರಿದನು. ಆತನು ಯೇಸು ಕ್ರಿಸ್ತನ ಕುರಿತಾದ ಸುವಾರ್ತೆಯನ್ನು ಸಾರಿದನು.

   2) ದೇವರು ಲುದ್ಯಳ ಹೃದಯವನ್ನು ತೆರೆದನು. ದೇವರು ಪವಿತ್ರಾತ್ಮನ ಮೂಲಕವಾಗಿ ಪೌಲನ ಸಂದೇಶವನ್ನು ಜ್ಞಾನೋದಯಗೊಳಿಸಿ ಲುದ್ಯಳು ಸುವಾರ್ತಾ ಸಂದೇಶವನ್ನು ಅರ್ಥಮಾಡಿಕೊಳ್ಳುವಂತೆ ಮಾಡಿದನು.

3) ಲುದ್ಯಳು ಸುವಾರ್ತಾ ಸಂದೇಶಕ್ಕೆ ಪ್ರತಿಕ್ರಿಯಿಸಿದಳು. ಆಕೆಯು ಸುವಾರ್ತಾ ಸಂದೇಶಕ್ಕೆ 'ವಿಧೇಯಳಾದಳು' ಮತ್ತು ಯೇಸು ಕ್ರಿಸ್ತನನ್ನು ತನ್ನ ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿಕೊಂಡಳು.

ಸುವಾರ್ತಾ ಸಂದೇಶವು ಫಲವನ್ನು ಕೊಡಲಿಕ್ಕೆ ಈ ಮೂರು ಸತ್ಯಾಂಶಗಳು ಅಗತ್ಯವಾದವುಗಳಾಗಿವೆ:

1) ಯಾರಾದರೂ ಒಬ್ಬರು ಸಂದೇಶವನ್ನು ಸಾರಲೇಬೇಕು.

2) ಸಾರಲ್ಪಟ್ಟ ಸಂದೇಶವನ್ನು ಜ್ಞಾನೋದಯಗೊಳಿಸಲು ಪವಿತ್ರಾತ್ಮನು ಇರಬೇಕು.

3) ಕೇಳುವವನು ಸಂದೇಶವನ್ನು ಸ್ವೀಕರಿಸಿ ಅದನ್ನು ತನ್ನ ಸ್ವಂತ ಜೀವಿತಕ್ಕೆ ಅನ್ವಯಿಸಿಕೊಳ್ಳಬೇಕು.

2. ಹೊಸ ಒಡಂಬಡಿಕೆಯ ಸಮಯದ ದೀಕ್ಷಾಸ್ನಾನದ ಕುರಿತು ಈ ವಾಕ್ಯಭಾಗದಿಂದ ನಾವು ಮೂರು ಸಂಗತಿಗಳನ್ನು ಕಲಿಯಬಹುದು:

1) ಒಬ್ಬ ವ್ಯಕ್ತಿಯು ಸುವಾರ್ತಾ ಸಂದೇಶವನ್ನು ಸ್ವೀಕರಿಸಿದಾಗ ಆತನು ದೀಕ್ಷಾಸ್ನಾನ ಹೊಂದಿದನು. ರಕ್ಷಣಾ ಅನುಭವದ ನಂತರ ಬರುವುದೇ ದೀಕ್ಷಾಸ್ನಾನ. ಯೇಸು ಕ್ರಿಸ್ತನನ್ನು ಅಂಗೀಕರಿಸುವುದು ಮತ್ತು ದೀಕ್ಷಾಸ್ನಾನವು ಒಟ್ಟಿಗೆ ನಡೆಯುವಂತಹ ಸಂಗತಿಯಾಗಿದೆ. ಪೌಲನು ತನ್ನ ಸುವಾರ್ತಾ ಸಂದೇಶದ ಒಂದು ಭಾಗವಾಗಿ ದೀಕ್ಷಾಸ್ನಾನದ ಕುರಿತು ಮಾತನಾಡಿರಬೇಕು.

2) ದೀಕ್ಷಾಸ್ನಾನವು ತಡಮಾಡಲ್ಪಡುತ್ತಿದ್ದಿಲ್ಲ. ಲುದ್ಯಳು ಮತ್ತು ಆಕೆಯ ಕುಟುಂಬದವರು ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡ ದಿನವೇ ದೀಕ್ಷಾಸ್ನಾನವನ್ನು ಹೊಂದಿದ ಸಾಧ್ಯತೆಯಿದೆ. ಅಥವಾ ಅದು ಕೆಲವು ವಾರಗಳ ನಂತರ ಸಂಭವಿಸಿರಬಹುದು. ಪೌಲ ಮತ್ತು ಆತನ ಸಂಗಡಿಗರು ಫಿಲಿಪ್ಪಿಯಲ್ಲಿ 'ಕೆಲವು ದಿನಗಳು ಮಾತ್ರ ಇದ್ದರು'. ಹಾಗಾಗಿ ಲುದ್ಯಳ ರಕ್ಷಣಾ ಅನುಭವದ ತಕ್ಷಣವೇ ಆಕೆಗೆ ದೀಕ್ಷಾಸ್ನಾನವಾಗಿರಬೇಕು.

3) ದೀಕ್ಷಾಸ್ನಾನವು ಪ್ರಾಯೋಗಿಕ ಪರಿಣಾಮಗಳಿಂದ ಕೂಡಿದ ಒಂದು ಹೊಸ ಜೀವಿತಕ್ಕೆ ನಡೆಸಿತು. ಲುದ್ಯಳು ಪೌಲ ಮತ್ತು ಆತನ ಸಂಗಡಿಗರು ಉತ್ತಮವಾದ ಸ್ಥಳದಲ್ಲಿ ತಂಗಬೇಕಾಗಿದ್ದ ಅಗತ್ಯತೆಯನ್ನು ಕಂಡು ಆಕೆಯು ಅವರು ತನ್ನ ಮನೆಗೆ ಬರುವಂತೆ 'ಒತ್ತಾಯ ಮಾಡಿದಳು'. ಪೌಲನು ರೋಮಾ. 6:4 ರಲ್ಲಿ ಬರೆಯುವಂತೆ 'ಹೀಗಿರುವಲ್ಲಿ ಆತನೊಂದಿಗೆ ದೀಕ್ಷಾಸ್ನಾನದ ಮೂಲಕ ಆತನ ಮರಣದಲ್ಲಿ ಹೂಣಲ್ಪಟ್ಟೆವು. ಆದ್ದರಿಂದ ತಂದೆಯ ಮಹಿಮೆಯ ಮೂಲಕ ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಂತೆಯೇ ನಾವು ಹೊಸ ಜೀವವನ್ನು ಜೀವಿಸಬೇಕು'.

# ಉ 44. ಸೆರೆಮನೆಯಲ್ಲಿ ಪೌಲ ಮತ್ತು ಸೀಲರು, 16:16–40

## ಇ) ಪಠ್ಯ ಪ್ರಶ್ನೆಗಳು

1. ದುರಾತ್ಮವುಳ್ಳ ಬಾಲಕಿಯು ಪ್ರತಿದಿವಸ ಕೂಗುತ್ತಾ ಅಪೊಸ್ತಲರನ್ನು ತೊಂದರೆಪಡಿಸುತ್ತಿದ್ದರಿಂದ ಪೌಲನು ಬೇಸರಗೊಂಡಿದ್ದನು. ಆದರೆ ಅದಕ್ಕಿಂತ ಹೆಚ್ಚಾಗಿ ಆತನು ಬಹುಶಃ ಆ ಬಡ ಬಾಲಕಿಯ ಸ್ಥಿತಿಯ ಕುರಿತು ಮತ್ತು ದುರಾತ್ಮವು ಆಕೆಯು ಕೂಗುವಂತೆಯೂ ವಿಚಿತ್ರವಾಗಿ ವರ್ತಿಸುವಂತೆಯೂ ಮಾಡುತ್ತಿದ್ದದ್ದನ್ನು ಕಂಡು ಬಹಳ ಮನನೊಂದಿದ್ದಿರಬಹುದು.

2. ಆ ಬಾಲಕಿಯ ಯಜಮಾನರು ಕೋಪಗೊಳ್ಳಲು ಕಾರಣವೇನೆಂದರೆ, ಅವರು ತಮಗೆ ಬರುತ್ತಿದ್ದ ಆದಾಯವನ್ನು ಕಳೆದುಕೊಂಡಿದ್ದೇವೆ ಎಂದು ಮನಗಂಡಿದ್ದರು. ಅವರು ತಮ್ಮ ಹಣದ ಕುರಿತಾಗಿ ಚಿಂತಿಸಿದರೇ ಹೊರತು ಆ ಬಾಲಕಿಯ ಸ್ಥಿತಿಯ ಕುರಿತು ಚಿಂತಿಸಲಿಲ್ಲ. ಅವರು ಅಪೊಸ್ತಲರನ್ನು ಹಿಂಸೆಪಡಿಸಬೇಕೆಂದು ಬಯಸಿದರು, ಆದರೆ ಆ ಬಾಲಕಿಯನ್ನು ದುರಾತ್ಮನಿಂದ ಬಿಡುಗಡೆಗೊಳಿಸಿದಕ್ಕಾಗಿ ಅವರನ್ನು ಆಪಾದಿಸುವುದು ನಿಷ್ಪ್ರಯೋಜಕವೆಂದು ಅವರು ತಿಳಿದಿದ್ದರು. ಇದಕ್ಕೆ ಬದಲಾಗಿ ಅವರು ಅಪೊಸ್ತಲರ ವಿರುದ್ಧವಾಗಿ ಯಾವುದಾದರೂ ಗಂಭೀರವಾದ ಆಪಾದನೆಯನ್ನು ಹೊರಿಸಬೇಕಾಗಿತ್ತು. ಹಾಗಾಗಿ ಅವರು ನ್ಯಾಯಾಧಿಪತಿಗಳ ಮುಂದೆ ಪೌಲ ಮತ್ತು ಸೀಲರು ಪಟ್ಟಣದಲ್ಲಿ ಗಲಭೆ ಎಬ್ಬಿಸಿದ್ದಾರೆ ಮತ್ತು ಕಾನೂನು ಬಾಹಿರವಾಗಿ ವಿದೇಶಿ ಧರ್ಮವನ್ನು ಪ್ರಚಾರ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

3. ಪೌಲ ಮತ್ತು ಸೀಲರ ವಿರುದ್ಧವಾಗಿ ಆ ಬಾಲಕಿಯ ಯಜಮಾನರು ಮತ್ತು ಸಾರ್ವಜನಿಕರು ಮಾಡಿದ ಆಪಾದನೆಗಳನ್ನು ನ್ಯಾಯಾಧಿಪತಿಗಳು ನಂಬಿದರು. ಅವರು ತಮ್ಮ ಕೆಲಸಗಾರರಿಗೆ ಅಪೊಸ್ತಲರ ಬಟ್ಟೆಗಳನ್ನು ಕಿತ್ತು ಹಾಕಿಸಿ ಬಹಿರಂಗವಾಗಿ ಛಡಿಗಳಿಂದ ಹೊಡೆಯಬೇಕೆಂದು ಆಜ್ಞಾಪಿಸಿ ನಂತರ ಸೆರೆಮನೆಗೆ ಹಾಕಿಸಬೇಕೆಂದು ಹೇಳಿದರು. ಅವರನ್ನು ಜಾಗರೂಕತೆಯಿಂದ ಕಾಯಬೇಕೆಂದು ಸೆರೆಮನೆಯ ಅಧಿಕಾರಿಗೆ ಆಜ್ಞಾಪಿಸಲಾಯಿತು.

4. ಖೈದಿಗಳು ತಪ್ಪಿಸಿಕೊಂಡು ಹೋದರೆಂದು ಸೆರೆಮನೆಯ ಅಧಿಕಾರಿ ಭಾವಿಸಿದನು. ಆತನಿಗೆ ಮರಣದಂಡನೆಯ ಶಿಕ್ಷೆಯು ವಿಧಿಸಲಾಗುತ್ತಿತ್ತು. ಹಾಗಾಗಿ ಆತನು ಮರಣದಂಡನೆಯಲ್ಲಿ ಹಿಂಸೆ ಅವಮಾನವನ್ನು ಅನುಭವಿಸುವುದಕ್ಕಿಂತ ತನ್ನನ್ನೇ ತಾನು ಕೊಂದುಕೊಳ್ಳಬೇಕೆಂದಿದ್ದನು.

5. ಆ ಮಧ್ಯರಾತ್ರಿಯಲ್ಲಿ ಸೆರೆಮನೆಯ ಅಧಿಕಾರಿಯು ಪೌಲ ಮತ್ತು ಸೀಲರಿಗೆ ಊಟ ಬಡಿಸಿದ್ದಕ್ಕೆ ಬಹುಶಃ ಒಂದಕ್ಕಿಂತ ಹೆಚ್ಚು ಕಾರಣಗಳಿವೆ. ಆತನು ದೇವರ ಮೇಲೆ ವಿಶ್ವಾಸವಿಟ್ಟಿದ್ದರಿಂದ ಉಲ್ಲಾಸಗೊಂಡನೆಂದು ಪಠ್ಯವು ತಿಳಿಸುತ್ತದೆ. ಹಾಗಾಗಿ ಆತನು ಅಪೊಸ್ತಲರಿಗೆ ಉಪಚರಿಸುವುದರ ಮೂಲಕವಾಗಿ ತನ್ನ ಸಂತೋಷವನ್ನು ತೋರ್ಪಡಿಸಿಕೊಂಡನು. ಅದಲ್ಲದೆ

ರಕ್ಷಣೆ ಹಾಗೂ ದೀಕ್ಷಾಸ್ನಾನದ ಪರಿಣಾಮವಾಗಿ ಆತನ ಜೀವಿತವು ಬದಲಾಗಿತ್ತು. ಈ ಹೊಸ ಜೀವಿತವು ಅಪೋಸ್ತಲರ ಗಾಯಗಳನ್ನು ತೊಳೆಯುವ ಮತ್ತು ಅವರನ್ನು ಉಪಚರಿಸುವಂತಹ ಸತ್ಕ್ರಿಯೆಗಳಿಂದ ವ್ಯಕ್ತವಾಯಿತು. ಕೊನೆಯದಾಗಿ, ಅಪೋಸ್ತಲರು ಬಹುಶಃ ತಮ್ಮ ಶ್ರಮೆಯ ನಿಮಿತ್ತ ಹಸಿದವರಾಗಿದ್ದರು ಮತ್ತು ಅವರಿಗೆ ಆಹಾರದ ಅವಶ್ಯಕತೆಯಿತ್ತು.

6. ಪೌಲನು ನ್ಯಾಯಾಧಿಪತಿಗಳಿಗೆ ತನ್ನನ್ನು ಮತ್ತು ಸೀಲನನ್ನು ಅವರು ಕಾನೂನು ಬಾಹಿರವಾಗಿ ಶಿಕ್ಷಿಸಿದರೆಂದು ಆಪಾದಿಸಿದನು. ರೋಮನ್ ಪ್ರಜೆಗಳನ್ನು ಬಹಿರಂಗವಾಗಿ ಹೊಡೆಯುವ ಅನುಮತಿಯಿರಲಿಲ್ಲ. ಒಂದು ಸೂಕ್ತವಾದ ನ್ಯಾಯವಿಚಾರಣೆಯಿಲ್ಲದೆ ಈ ರೀತಿ ಮಾಡುವಂತಹದ್ದು ಗಂಭೀರವಾದ ಅನ್ಯಾಯವಾಗಿತ್ತು. ಹಾಗಾಗಿ ನ್ಯಾಯಾಧಿಪತಿಗಳು ಇದನ್ನು ಕೇಳಿದಾಗ ನಿಜವಾಗಲೂ ಭಯಬ್ರಾಂತರಾದರು. ಪೌಲ ಮತ್ತು ಸೀಲರು ಛಡಿಗಳಿಂದ ಹೊಡೆಯಲ್ಪಡುವುದಕ್ಕಿಂತ ಮುಂಚೆಯೇ ಈ ಮಾಹಿತಿಯು ಯಾಕೆ ತಿಳಿಸಲ್ಪಡಲಿಲ್ಲವೆಂಬುದನ್ನು ಲೂಕನು ಬರೆಯುತ್ತಿಲ್ಲ. ಬಹುಶಃ ಅದರ ಹಿಂದಿನ ದಿನದಲ್ಲಿ ಅಲ್ಲಿ ತುಂಬಾ ಗಲಾಟೆ ಇದ್ದುದ್ದರಿಂದ ಪೌಲ ಮತ್ತು ಸೀಲರು ಹೇಳಿದ್ದನ್ನು ಯಾರೂ ಸಹ ಕೇಳದೇ ಹೋಗಿರಬಹುದು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಫಿಲಿಪ್ಪಿಯಲ್ಲಿ ಅಪೋಸ್ತಲರು ಮಾಡಿದ ಸೇವೆಯ ಸಮಯದಲ್ಲಿ ಸುವಾರ್ತೆಯಿಂದ ಮೂರು ಜನರು ವಿಶೇಷವಾದ ರೀತಿಯಲ್ಲಿ ಸ್ಪರ್ಶಿಸಲ್ಪಟ್ಟರು. ಅವರು ಯಾರೆಂದರೆ:

   ಲುದ್ಯಳು (ವ. 13–15): ಆಕೆಯು ಒಬ್ಬ ಯೆಹೂದ್ಯಳಾಗಿರಲಿಲ್ಲ, ಬದಲಾಗಿ ಯೆಹೂದ್ಯರ ದೇವರಲ್ಲಿ ನಂಬಿಕೆಯಿಟ್ಟಿದ್ದ ಒಬ್ಬ ಅನ್ಯಳಾಗಿದ್ದು ಮೋಶೆಯ ಧರ್ಮಶಾಸ್ತ್ರದ ಅನುಸಾರವಾಗಿ ಜೀವಿಸಲಿಕ್ಕೆ ಬಯಸಿದವಳಾಗಿದ್ದಳು. ಆದರೆ ಆಕೆಯು ಯೆಹೂದ್ಯ ಧರ್ಮಕ್ಕೆ ಮತಾಂತರವಾಗಿರಲಿಲ್ಲ. ಆಕೆಯು ಏಷ್ಯಾ ಪ್ರಾಂತ್ಯದಿಂದ ವಲಸೆ ಬಂದಿದ್ದ ಒಬ್ಬ ವಿದೇಶಿಯಳಾಗಿದ್ದಳು. ಆಕೆಯು ಫಿಲಿಪ್ಪಿಯಲ್ಲಿ ಉನ್ನತ ದರ್ಜೆಗೆ ಸೇರಿದ ಒಬ್ಬ ಶ್ರೀಮಂತ ವ್ಯಾಪಾರಸ್ಥಳಾಗಿದ್ದಳು ಮತ್ತು ಆಕೆಗೆ ಒಂದು ದೊಡ್ಡ ಮನೆ ಇತ್ತು. ಆಕೆಯು ಸುವಾರ್ತಾ ಸಂದೇಶವನ್ನು ಸ್ವೀಕರಿಸಿ ರಕ್ಷಿಸಲ್ಪಟ್ಟು ದೀಕ್ಷಾಸ್ನಾನವನ್ನು ಹೊಂದಿದಳು. ಪೌಲ ಮತ್ತು ಆತನ ಸಂಗಡಿಗರು ತನ್ನ ಮನೆಯಲ್ಲಿ ಇರುವಂತೆ ಆಕೆಯು ಆಹ್ವಾನಿಸಿದಳು, ಅದು ನಂತರದಲ್ಲಿ ಫಿಲಿಪ್ಪಿಯ ಮೊದಲ 'ಸಭೆಯಾಗಿ' ಮಾರ್ಪಟ್ಟಿತ್ತು (ವ. 40).

   ದುರಾತ್ಮ ಪೀಡಿತಳಾದ ಬಾಲಕಿ (ವ. 16–19): ಆಕೆಯ ಹೆಸರು ಇಲ್ಲಿ ಸೂಚಿಸಲ್ಪಟ್ಟಿಲ್ಲ. ಆಕೆಯು ಒಬ್ಬ ಗುಲಾಮಿಯಾಗಿದ್ದರಿಂದ ಸಮಾಜದಲ್ಲಿ ದಬ್ಬಾಳಿಕೆಗೆ ಒಳಗಾದ ಗುಂಪಿಗೆ ಸೇರಿದವಳಾಗಿದ್ದಳು. ಆಕೆಗೆ ತನ್ನನ್ನೂ ಸೇರಿಸಿ ಸ್ವಂತವೆಂಬುದು ಯಾವುದೂ ಇರಲಿಲ್ಲ. ಇದರ ಜೊತೆಯಲ್ಲಿ ಆಕೆಗೆ 'ಹೆಬ್ಬಾವಿನ' ಆತ್ಮವಿತ್ತು – ಅಂದರೆ ಭವಿಷ್ಯ ನುಡಿಯುವ ಒಂದು ದುರಾತ್ಮವಿತ್ತು. ಆಕೆಯು ಭವಿಷ್ಯ ಹೇಳುವುದರ ಮೂಲಕ ಆಕೆಯ ಯಜಮಾನರು ಬಹಳ ಹಣಮಾಡಿದ್ದರು. ಪೌಲನು ಆ ದುರಾತ್ಮನನ್ನು ಹೊರಗೆ ಓಡಿಸಿದನು. ಆಕೆಗೆ ನಂತರದಲ್ಲಿ ಏನು

ಸಂಭವಿಸಿತೆಂದು ಲೂಕನು ಏನನ್ನು ಹೇಳುತ್ತಿಲ್ಲ. ಆದರೆ ಆಕೆಯು ಬಹುತೇಕವಾಗಿ ಸುವಾರ್ತಾ ಸಂದೇಶವನ್ನು ಸ್ವೀಕರಿಸಿ, ರಕ್ಷಿಸಲ್ಪಟ್ಟು ದೀಕ್ಷಾಸ್ನಾನವನ್ನು ಹೊಂದಿ ಫಿಲಿಪ್ಪಿ ಸಭೆಯ ಮೊದಲ ಸದಸ್ಯಳಾಗಿರಬಹುದು.

ಸೆರೆಮನೆಯ ಅಧಿಕಾರಿ (ವ. 23–34): ಈತನ ಹೆಸರು ತಿಳಿಸಲ್ಪಟ್ಟಿಲ್ಲ. ಈತನು ರೋಮನ್ ಪೌರನಾಗಿರಬೇಕು. ಈತನು ಒಬ್ಬ ಅನ್ಯನಾಗಿದ್ದು ರೋಮನ್ ಸೇನೆಯಿಂದ ನಿವೃತ್ತನಾದ ಒಬ್ಬ ಸೈನಿಕನಾಗಿದ್ದನು. ಆತನು ಫಿಲಿಪ್ಪಿಯ ಪಟ್ಟಣದಲ್ಲಿನ ರೋಮ್ ಆಡಳಿತದ ಅಧೀನದ ಅಧಿಕಾರಿಯಾಗಿದ್ದು ಸಮಾಜದಲ್ಲಿ ಮಧ್ಯಮ–ವರ್ಗಕ್ಕೆ ಸೇರಿದವನಾಗಿದ್ದನು. ಪೌಲ ಮತ್ತು ಸೀಲರನ್ನು ಸೆರೆಮನೆಯಲ್ಲಿ ಭೇಟಿಯಾದ ನಂತರ ಈತನ ಜೀವಿತವೇ ಸಂಪೂರ್ಣವಾಗಿ ಬದಲಾಗಿತ್ತು. ಈತನು ಮತ್ತು ಈತನ ಕುಟುಂಬವು ರಕ್ಷಿಸಲ್ಪಟ್ಟರು ಮತ್ತು ದೀಕ್ಷಾಸ್ನಾನವನ್ನು ಹೊಂದಿದರು. ಅವರು ನಂತರದಲ್ಲಿ ಫಿಲಿಪ್ಪಿ ಪಟ್ಟಣದ ಸಭೆಯ ಮೊದಲ ಸದಸ್ಯರುಗಳಲ್ಲಿ ಇವರೂ ಒಬ್ಬರಾಗಿರಬೇಕು.

2. ಪೌಲ ಮತ್ತು ಸೀಲರ ವಿರುದ್ಧವಾದ ದಾಳಿಯಲ್ಲಿ ಜನಸಮೂಹವು ಯಾಕೆ ಸೇರಿಕೊಂಡಿತು ಎಂಬುದರ ಕುರಿತು ಲೂಕನು ಏನನ್ನೂ ತಿಳಿಸುತ್ತಿಲ್ಲ. ಬಹುಶಃ ಆ ಬಾಲಕಿಯ ಯಜಮಾನರು ಫಿಲಿಪ್ಪಿ ಪಟ್ಟಣದಲ್ಲಿ ಪ್ರಾಮುಖ್ಯ ಜನರಾಗಿದ್ದಿರಬಹುದು ಮತ್ತು ದಕ್ಷಿಣ ಭಾರತದಲ್ಲಿ ಆಗಾಗ್ಗೆ ರಾಜಕೀಯ ವ್ಯಕ್ತಿಗಳು ಹಾಗೂ ಇತರೆ ನಾಯಕರು ಜನಸಮೂಹದ ಬೆಂಬಲವನ್ನಿಟ್ಟುಕೊಳ್ಳುವಂತೆ ಅವರೂ ಇಟ್ಟುಕೊಂಡಿದ್ದಿರಬಹುದು. ಬಹುಶಃ ಫಿಲಿಪ್ಪಿಯಲ್ಲಿರುವ ಜನರು ಅಪೋಸ್ತಲರ ಸೇವೆಯಿಂದ ಬೇಸರಗೊಂಡಿದ್ದರು ಮತ್ತು ಅದನ್ನು ಕೊನೆಗೊಳಿಸಬೇಕೆಂದು ಬಯಸಿದ್ದರು.

3. ಅಪೋಸ್ತಲರು ಪ್ರಾರ್ಥಿಸುತ್ತಾ ಮತ್ತು ಹಾಡುತ್ತಾ ಸ್ತುತಿಸುತ್ತಿರುವಾಗ 'ಉಳಿದ ಖೈದಿಗಳು' ಅದನ್ನು ಕೇಳುತ್ತಿದ್ದರು. ಅವರಿಗೆ ಕುತೂಹಲವೂ ಆಶ್ಚರ್ಯವೂ ಉಂಟಾಗಿರಬಹುದು: ಬಟ್ಟೆಗಳನ್ನು ಹರಿದು, ಬಹಿರಂಗವಾಗಿ ಛಡಿಗಳಿಂದ ಬಹಳವಾಗಿ ಹೊಡೆಯಲ್ಪಟ್ಟು ಮತ್ತು ಸೆರೆಮನೆಯಲ್ಲಿ ಭದ್ರವಾಗಿ ಕೈಕಾಲುಗಳು ಸರಪಣಿಗಳಿಂದ ಕಟ್ಟಲ್ಪಟ್ಟ ಈ ಪುರುಷರು ಯಾವ ಚಿಂತೆಯಿಲ್ಲದೆ ಆರಾಧಿಸುತ್ತಿರುವುದು ಹೇಗೆ? ಅವರು ಇತರ ಪುರುಷರಂತೆ ಅಲ್ಲ! ಅವರ ದೇವರು ಬೇರೆ ದೇವರುಗಳಂತೆ ಅಲ್ಲ! ಬಹುಶಃ ಅಪೋಸ್ತಲರು ಸೆರೆಮನೆಯ ಅಧಿಕಾರಿಗೂ ಆತನ ಕುಟುಂಬದವರಿಗೂ 'ಕರ್ತನ ಸುವಾರ್ತೆಯನ್ನು ತಿಳಿಸಿದಾಗ' ಅಲ್ಲಿನ ಕೆಲವು ಖೈದಿಗಳು ಅದನ್ನು ಕೇಳಿಸಿಕೊಂಡು ಯೇಸುವನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿ ಫಿಲಿಪ್ಪಿ ಸಭೆಯ ಸದಸ್ಯರಾಗಿರಬಹುದು.

4. ಅದೇ ರಾತ್ರಿಯಲ್ಲಿ ಸೆರೆಮನೆ ಅಧಿಕಾರಿ ಮತ್ತು 'ಆತನ ಇಡೀ ಕುಟುಂಬವು' ದೀಕ್ಷಾಸ್ನಾನವನ್ನು ಹೊಂದಿದರೆಂದು ಲೂಕನು ಬರೆಯುತ್ತಾನೆ. ಇದರ ಕನಿಷ್ಠಪಕ್ಷ ಎರಡು ಸಂಗತಿಗಳನ್ನು ಅರ್ಥೈಸುತ್ತದೆ:

ಅಪೊಸ್ತಲರು ತಿಳಿಸಿದ ‘ಕರ್ತನ ಸುವಾರ್ತೆಯು’ ದೀಕ್ಷಾಸ್ನಾನದ ಮಹತ್ವವನ್ನು ಒಳಗೊಂಡಿರಬೇಕು.

ಅನ್ಯ ಕುಟುಂಬದವರು ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡ ತಕ್ಷಣವೇ ಅಪೊಸ್ತಲರು ಅವರಿಗೆ ದೀಕ್ಷಾಸ್ನಾನ ಮಾಡಿಸಲು ಇಚ್ಛೆಯುಳ್ಳವರಾಗಿದ್ದರು. ಅವರು ಆ ಕುಟುಂಬವು ನಂಬಿಕೆಯಲ್ಲಿ ಬೆಳೆದು ಬರುವವರೆಗೂ ಕಾಯಲಿಲ್ಲ. ದೀಕ್ಷಾಸ್ನಾನವು ರಕ್ಷಣೆಯ ಅಥವಾ ಮಾನಸಾಂತರದ ಒಂದು ಭಾಗವೆಂದು ಅಪೊಸ್ತಲರು ಅರ್ಥಮಾಡಿಕೊಂಡಿರಬೇಕು.

5. ನ್ಯಾಯಾಧಿಪತಿಗಳು ಸ್ವತಃ ತಾವೇ ಸೆರೆಮನೆಗೆ ಬಂದು ಅಪೊಸ್ತಲರಿಗೆ ಕ್ಷಮಾಪಣೆ ಕೇಳಿ ಅವರನ್ನು ಬಿಡುಗಡೆ ಮಾಡಬೇಕೆಂದು ಪೌಲನು ಬೇಡಿಕೆಯನ್ನು ಇರಿಸಿದನು. ಪಟ್ಟಣದಲ್ಲಿರುವ ಅತೀ ಉನ್ನತ ಅಧಿಕಾರಿಗಳಿಂದ ತನ್ನ ‘ಪ್ರಕರಣವು’ ಬಗೆಹರಿಯಬೇಕೆಂಬುದಾಗಿ ಪೌಲನು ಬಯಸಿದನು. ಬಹುಶಃ ಇದು ಫಿಲಿಪ್ಪಿ ಪಟ್ಟಣದಲ್ಲಿದ್ದ ಸಭೆಯ ಮುಂದಿನ ಭವಿಷ್ಯಕ್ಕೆ ಬಹಳ ಪ್ರಾಮುಖ್ಯವಾಯಿತು.

6. ಪೌಲ ಮತ್ತು ಸೀಲರು ಸೆರೆಮನೆಯಿಂದ ಬಿಡುಗಡೆ ಹೊಂದಿದ ಮೇಲೆ ಅವರು ಲುದ್ಯಳ ಮನೆಗೆ ಹೋದರು, ಅಲ್ಲಿ ವಿಶ್ವಾಸಿಗಳು – ಪುರುಷರೂ ಹಾಗೂ ಸ್ತ್ರೀಯರೂ – ಕೂಡಿ ಬಂದಿದ್ದರು. ಬಹುಶಃ ಅವರು ಅಪೊಸ್ತಲರಿಗಾಗಿ ಇಡೀ ರಾತ್ರಿಯೆಲ್ಲಾ ಪ್ರಾರ್ಥಿಸಿರಬೇಕು. ಹಾಗಾಗಿ ಅಪೊಸ್ತಲರು ಕೂಡಿ ಬಂದಿದ್ದ ವಿಶ್ವಾಸಿಗಳನ್ನು ಭೇಟಿಯಾಗಿ ಅವರನ್ನು ಪ್ರೋತ್ಸಾಹಿಸಿದರು. ‘ಸಹೋದರರು’ ಎಂಬ ಪದವು ‘ಸಹೋದರರನ್ನೂ ಹಾಗೂ ಸಹೋದರಿಯರನ್ನೂ’ ಸೂಚಿಸುತ್ತದೆ. ಅನೇಕ ಆಧುನಿಕ ಆಂಗ್ಲ ಅನುವಾದಗಳು ‘ವಿಶ್ವಾಸಿಗಳು’ ಎಂಬ ಪದವನ್ನು ಬಳಸುತ್ತದೆ.

# ಉ 45. ಥೆಸಲೋನಿಕದಲ್ಲಿ, 17:1–10

## ಇ) ಪಠ್ಯ ಪ್ರಶ್ನೆಗಳು

2. ಥೆಸಲೋನಿಕದಲ್ಲಿದ್ದ ಯೆಹೂದ್ಯರಿಗೆ ಪೌಲನು ಸಾರಿದ ಸಂದೇಶದಲ್ಲಿದ್ದ ಮೂರು ಪ್ರಮುಖ ಅಂಶಗಳಾವುವೆಂದರೆ:

   1) ಕ್ರಿಸ್ತನು ಶ್ರಮೆಯನ್ನು ಅನುಭವಿಸಿದನು (ಮತ್ತು ಸತ್ತನು)

   2) ಕ್ರಿಸ್ತನು ಮರಣದಿಂದ ಎದ್ದು ಬಂದನು

   3) ಯೆಹೂದ್ಯರು ನಿರೀಕ್ಷಿಸುತ್ತಿದ್ದ ಆ ಕ್ರಿಸ್ತನು (ಆ ಮೆಸ್ಸೀಯನು) ಯೇಸುವೇ

   ಪೌಲನು ತನ್ನ ಸಂದೇಶವನ್ನು ವಾಕ್ಯದ (ಹಳೆ ಒಡಂಬಡಿಕೆಯ) ಆಧಾರದ ಮೇಲೆ ಸಾರಿದನು

3. ಪೌಲನು ಥೆಸಲೋನಿಕದಲ್ಲಿ ಕಳೆದ ಪ್ರಾರಂಭದ ವಾರಗಳಲ್ಲಿ ಮಾಡಿದ ಸೇವೆಯ ಫಲವಾಗಿ ಕೆಲವು ಯೆಹೂದ್ಯರು ಮತ್ತು ದೈವಭಯವುಳ್ಳ ಗ್ರೀಕರು ಹಾಗೂ ಅನೇಕ ಪ್ರಮುಖ ಸ್ತ್ರೀಯರು 'ಪೌಲ ಮತ್ತು ಸೀಲರೊಂದಿಗೆ ಸೇರಿಕೊಂಡರು'. ಈ ಜನರು ರಕ್ಷಿಸಲ್ಪಟ್ಟು ಸಭೆಯ 'ಸಂಸ್ಥಾಪಕ ಸದಸ್ಯರಾದರು'.

4. ಥೆಸಲೋನಿಕದಲ್ಲಿ ಗಲಭೆಯುಂಟಾಗಲು ಕಾರಣವೇನೆಂದರೆ ಯೆಹೂದ್ಯ ನಾಯಕರು ಅಪೋಸ್ತಲರ ಕುರಿತಾಗಿ ಅಸೂಯೆಯುಳ್ಳವರಾಗಿದ್ದರು. ಅನೇಕ ಜನರು ಸಭಾಮಂದಿರದ ಅನ್ಯೋನ್ಯತೆಯನ್ನು ಬಿಟ್ಟು ತಮ್ಮದೇ ಆದ ಸ್ವಂತ ಕ್ರೈಸ್ತ ಸಭೆಯನ್ನು ರಚಿಸಿದರು ಎಂದು ಹೇಳಲಾಗುತ್ತದೆ.

5. ಅಪೋಸ್ತಲರು ಎಲ್ಲೆಡೆಯಲ್ಲಿ ಗಲಬೆಗೆ ಕಾರಣಕರ್ತರು ಮತ್ತು ರಾಜದ್ರೋಹಿಗಳು ಎಂಬ ಆಪಾದನೆಗೆ ಒಳಗಾದರು. ಇದರ ಅರ್ಥವೇನೆಂದರೆ ಅವರು ರೋಮನ್ ಚಕ್ರವರ್ತಿಯನ್ನು ಹಿಂಬಾಲಿಸುವುದನ್ನು ಬಿಟ್ಟು ಇನ್ನೊಬ್ಬ ರಾಜನನ್ನು ಹಿಂಬಾಲಿಸುತ್ತಿದ್ದಾರೆಂದಾಗಿದೆ. ರಾಜದ್ರೋಹಕ್ಕೆ ಶಿಕ್ಷೆಯು ಮರಣದಂಡನೆಯಾಗಿತ್ತು.

6. ಈ ಆಪಾದನೆಗಳನ್ನು ಕೇಳಿದ ಪಟ್ಟಣದ ಅಧಿಕಾರಿಗಳು (ಮತ್ತು ಅಲ್ಲಿ ನೆರೆದಿದ್ದ ಜನಸಮೂಹವು) ಬಹಳ ಕೋಪಗೊಂಡರು. ಆದರೆ ಅವರು ಯಾಸೋನನ್ನು ಮತ್ತು ಇತರರನ್ನು ಶಿಕ್ಷಿಸಲಿಲ್ಲ. ಅದಕ್ಕೆ ಬದಲಾಗಿ ಅವರು ಜಾಮೀನನ್ನು ಕೊಟ್ಟು ಬಿಡಿಸಿಕೊಂಡು ಹೋಗುವಂತೆ ತಿಳಿಸಿದರು. ಬಹುಶಃ ಅಧಿಕಾರಿಗಳು ಸೆರೆಹಿಡಿಯಲ್ಪಟ್ಟ ಯಾಸೋನನು ಮತ್ತು ಇತರರು ನಿಜವಾದ ನಾಯಕರುಗಳಲ್ಲವೆಂಬುದನ್ನು ತಿಳುಕೊಂಡರು. ಆದರೆ ಆಪಾದನೆಗೆ

ಒಳಗಾಗಬೇಕಾದವರು ಪೌಲ ಮತ್ತು ಸೀಲರಾಗಿದ್ದಾರು. ಈ. 4 ರ ಪ್ರಶ್ನೆಯ ಉತ್ತರವನ್ನೂ ಸಹ ನೋಡಿರಿ.

7. ಗಲಬೆಯ ತಕ್ಷಣವೇ, ಅದೇ ರಾತ್ರಿಯಲ್ಲಿ, ವಿಶ್ವಾಸಿಗಳು ಪೌಲ ಮತ್ತು ಸೀಲರನ್ನು ಥೆಸಲೋನಿಕದಿಂದ ಬೇರೆಡೆಗೆ ಕಳುಹಿಸಿದರು. ಹಾಗಾಗಿ ಅಪೋಸ್ತಲರು ಅಲ್ಲಿಯ ಸೇವೆಯನ್ನು ತಕ್ಷಣವಾಗಿ ಬಿಟ್ಟು ಹೋಗಬೇಕಾಗಿತ್ತು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನು ಥೆಸಲೋನಿಕಕ್ಕೆ ಮೊದಲು ಬಂದಾಗ, ಆತನು ಸತತವಾಗಿ ಮೂರು ಸಬ್ಬತ್ ದಿನದಂದು ಸಭಾಮಂದಿರದಲ್ಲಿ ಮಾತನಾಡಿದನು. ಆತನ ಸಂದೇಶವು ಹಳೆ ಒಡಂಬಡಿಕೆಯಲ್ಲಿರುವ ಮೆಸ್ಸೀಯನ ಕುರಿತಾದ ಪ್ರವಾದನೆಗಳ ಮೇಲೆ ಆಧಾರವಾಗಿದ್ದವು. ಆತನು ತನ್ನ ಉಪದೇಶ ಮತ್ತು ಬೋಧನೆಯಲ್ಲಿ ಈ ವಿಚಾರಸರಣಿಯನ್ನು ಆಯ್ಕೆಮಾಡಿಕೊಳ್ಳಲು ಕಾರಣವೇನೆಂದರೆ, ಅಲ್ಲಿ ನೆರೆದಿದ್ದ ಶ್ರೋತೃಗಳು ಯೆಹೂದ್ಯರು ಮತ್ತು ದೈವಭಯವುಳ್ಳ ಅನ್ಯರಾಗಿದ್ದರು. ಅವರು ಹಳೆ ಒಡಂಬಡಿಕೆಯ ಪಠ್ಯವನ್ನು ಚೆನ್ನಾಗಿ ಅರಿತವರಾಗಿದ್ದರು, ಹಳೆ ಒಡಂಬಡಿಕೆಯ ಪ್ರವಾದನೆಗಳನ್ನು ನಂಬುತ್ತಿದ್ದರು ಮತ್ತು ಆ ಪ್ರವಾದನೆಗಳನ್ನು ನೆರವೇರಿಸುವುದಕ್ಕಾಗಿ ಮೆಸ್ಸೀಯನು ಬರುವನೆಂದು ಕಾಯುತ್ತಿದ್ದರು.

2. ಪೌಲ ಮತ್ತು ಸೀಲರು ಥೆಸಲೋನಿಕದಲ್ಲಿ ಎಷ್ಟು ದಿನಗಳ ಕಾಲ ತಂಗಿದ್ದರೆಂದು ತಿಳಿದುಕೊಳ್ಳುವಂತಹದ್ದು ಬಹಳ ಕಷ್ಟಕರವಾಗಿದೆ. ನಾವು ನಮ್ಮ ಉತ್ತರವನ್ನು ಅ. ಕೃ. 17 ರಲ್ಲಿರುವ ಕಥೆಯ ಮೇಲೆ ಮಾತ್ರ ಆಧರಿಸುವವರಾಗಿದ್ದರೆ, ಅವರು ಅಲ್ಲಿ ಕೇವಲ ಮೂರು ವಾರಗಳ ಕಾಲ ತಂಗಿದ್ದರೆಂದು ಹೇಳಬಹುದು. ಆದರೆ ನಾವು ಪೌಲನು ಥೆಸಲೋನಿಕದವರಿಗೆ ಬರೆದ ಎರಡು ಪತ್ರಿಕೆಗಳನ್ನು ಗಣನೆಗೆ ತೆಗೆದುಕೊಳ್ಳುವುದಾದರೆ, ಅವರು ಅಲ್ಲಿ ಕನಿಷ್ಠ ಪಕ್ಷ ಕೆಲವು ತಿಂಗಳುಗಳ ಕಾಲ ತಂಗಿದರೆಂಬುದು ಸ್ಪಷ್ಟವಾಗುತ್ತದೆ. ಇದರ ಅರ್ಥವೇನೆಂದರೆ, ಪೌಲ ಮತ್ತು ಸೀಲರು ಥೆಸಲೋನಿಕದಲ್ಲಿ ತಂಗಿದ್ದಾಗ ಸಂಭವಿಸಿದ್ದೆಲ್ಲದ್ದರ ಕುರಿತು ಲೂಕನು ತಿಳಿಸುತ್ತಿಲ್ಲ ಎಂಬುದಾಗಿದೆ. ಇದಕ್ಕೆ ಬದಲಾಗಿ ಆತನು ದೀರ್ಘಕಾಲದ ಕೆಲವು ಪ್ರಮುಖ ಘಟನೆಗಳನ್ನು ಮಾತ್ರ ಕೇಂದ್ರೀಕರಿಸುತ್ತಿದ್ದಾನೆ.

3. ಥೆಸಲೋನಿಕದಲ್ಲಿ ಪರಿವರ್ತನೆಯಾದಂತಹ ಮೊದಲ ವಿಶ್ವಾಸಿಗಳು ಯಾರಾರೆಂದರೆ; ಕೆಲವು ಯೆಹೂದ್ಯರು, ಅನೇಕ ದೈವಭಯವುಳ್ಳ ಗ್ರೀಕರು ಮತ್ತು ಕೆಲವು ಪ್ರಮುಖರಾಗಿದ್ದ ಮಹಿಳೆಯರು ('ಪ್ರಮುಖರಾಗಿದ್ದ ಮಹಿಳೆಯರು' ಎಂದು ವ್ಯತ್ಯಾಸವಾಗಿ ಹೇಳಲ್ಪಟ್ಟಿರುವುದನ್ನು ಗಮನಿಸುವುದು ಕುತೂಹಲಕಾರಿಯಾಗಿದೆ). ಹಾಗಾಗಿ ಮೊದಲಿನಿಂದಲೂ ಹೆಚ್ಚಿನ ಸಂಖ್ಯೆಯ ವಿಶ್ವಾಸಿಗಳೆಲ್ಲರೂ ಅನ್ಯ ಹಿನ್ನಲೆಯಿಂದ ಬಂದವರಾಗಿದ್ದರು. ಅಪೋಸ್ತಲರ ಸೇವೆಯು ಸಭಾಮಂದಿರದಿಂದ

ಬೇರೆಡೆಗೆ ಸ್ಥಳಾಂತರವಾದಾಗ ಸಭೆಗೆ ಸೇರಿಕೊಂಡವರಲ್ಲಿ ಅನೇಕರು ಬಹುಶಃ ಅನ್ಯಮತಸ್ಥರಾಗಿದ್ದರು. ಇದನ್ನು 1 ಥೆಸ. 1:9 ರಲ್ಲಿ ಕಾಣಬಹುದು, ಅಲ್ಲಿ ಪೌಲನು ಅವರು ಹೇಗೆ 'ವಿಗ್ರಹಗಳನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಜೀವವುಳ್ಳ ಸತ್ಯದೇವರನ್ನು ಸೇವಿಸುವಂತಹರಾದರೆಂದು' ತನ್ನ ಒದುಗರಿಗೆ ನೆನಪಿಸುತ್ತಾನೆ. ಹಾಗಾಗಿ ಥೆಸಲೋನಿಕದಲ್ಲಿದ್ದ ಸಭೆಯು ಅನ್ಯರಿಂದದ ಕೂಡಿದ್ದ ಸಭೆಯಾಗಿತ್ತು.

4. ಯಾಸೋನನಿಂದಲೂ ಮತ್ತು ಇತರರಿಂದಲೂ ಜಾಮೀನನ್ನು ಪಡೆದುಕೊಳ್ಳುವುದರ ಮೂಲಕವಾಗಿ ಥೆಸಲೋನಿಕ ಸಭೆಯು ಒಂದು ಶಾಂತಿಯುತ ಸಮುದಾಯವಾಗಿರುವದೆಂದು ಹೊಣೆ ಹೊರುವಂತೆ ಒತ್ತಾಯಿಸಿದರು. ಇಲ್ಲವಾದಲ್ಲಿ ಅವರ ಆಸ್ತಿಗಳು ಮುಟ್ಟುಗೋಲು ಹಾಕಲ್ಪಡುತ್ತಿತ್ತು ಮತ್ತು ಅವರು ಸಹ ಮರಣದಂಡನೆಗೆ ಒಳಗಾಗಬೇಕಾಗಿತ್ತು. ಹೀಗೆ ಮಾಡುವುದರಿಂದ ಅಧಿಕಾರಿಗಳು ಸಭೆಯ ಮೇಲೆ ನಿಯಂತ್ರಣವನ್ನು ಸಾಧಿಸಿದರು. ಅದಲ್ಲದೆ ಅಪೋಸ್ತಲರು ಥೆಸಲೋನಿಕಕ್ಕೆ ಹಿಂತಿರುಗುವುದೂ ಕಷ್ಟಕರವಾಯಿತು, ಯಾಕೆಂದರೆ ಅವರು ಹಿಂತಿರುಗಿದರೆ ಪಟ್ಟಣದಲ್ಲಿ ಗಲಬೆಯುಂಟಾಗಲಿಕ್ಕೆ ಕಾರಣವಾಗಬಹುದಾಗಿತ್ತು. ಬಹುಶಃ ಕೆಲವು ತಿಂಗಳ ನಂತರದಲ್ಲಿ ಪೌಲನು ಥೆಸಲೋನಿಕದವರಿಗೆ ಬರೆಯುವಾಗ ಇದರ ಕುರಿತೇ ಉಲ್ಲೇಖಿಸಿರಬಹುದು: 'ಆದ್ದರಿಂದ ನಿಮ್ಮ ಬಳಿಗೆ ಬರುವುದಕ್ಕೆ ನಮಗೆ ಮನಸ್ಸಿತ್ತು. ಪೌಲನಾದ ನಾನಂತೂ ಒಂದೆರಡು ಬಾರಿ ಬರುವುದಕ್ಕಿದ್ದೆನು, ಆದರೆ ಸೈತಾನನು ನಮಗೆ ಅಭ್ಯಂತರ ಮಾಡಿದನು' (1 ಥೆಸ. 2:18).

# ಉ 46. ಬೆರೋಯದಲ್ಲಿ, 17:10–15

## ಇ) ಪಠ್ಯ ಪ್ರಶ್ನೆಗಳು

2. ಪೌಲ ಮತ್ತು ಸೀಲರು ಬೆರೋಯವನ್ನು ತಲುಪಿದಾಗ, ಅವರು ಮೊದಲು ಯೆಹೂದ್ಯ ಸಭಾಮಂದಿರಕ್ಕೆ ಸುವಾರ್ತೆಯನ್ನು ಸಾರಲು ಹೋದರು. ಅದು ಅವರ ಆಚಾರವಾಗಿತ್ತು.

3. ಬೆರೋಯದವರು ಸುವಾರ್ತಾ ಸಂದೇಶವನ್ನು ಬಹಳ ಆಸಕ್ತಿಯಿಂದ ಕೇಳಿದರು. ಆದರೆ ಪೌಲನು ಮಾತನಾಡುತ್ತಿರುವುದು ನಿಜವೋ ಎಂಬುದನ್ನು ಅವರು ಖಚಿತಪಡಿಸಿಕೊಳ್ಳಲು ಬಯಸಿದರು. ಹಾಗಾಗಿ ಅವರು ಪೌಲನು ಹೇಳುತ್ತಿರುವಂತಹದ್ದು ನಿಜವಾಗಿಯೂ ದೇವರ ವಾಕ್ಯವೋ ಎಂದು ತಿಳಿದುಕೊಳ್ಳಲು ಆಸಕ್ತಿಯಿಂದ ಪ್ರತಿದಿನವು ಪವಿತ್ರಗ್ರಂಥಗಳನ್ನು ಪರೀಕ್ಷಿಸುತ್ತಿದ್ದರು.

4. ಬೆರೋಯದಲ್ಲಿ ಪೌಲನು ಮಾಡಿದ ಸೇವೆಯ ಪರಿಣಾಮವಾಗಿ, ಅನೇಕ ಯೆಹೂದ್ಯರು, ಅನೇಕ ಗ್ರೀಕ್ ಪುರುಷರು ಮತ್ತು ಅನೇಕ ಪ್ರಮುಖ ಗ್ರೀಕ್ ಸ್ತ್ರೀಯರು ವಿಶ್ವಾಸಿಗಳಾದರು.

5. ಥೆಸಲೋನಿಕದಲ್ಲಿದ್ದ ಯೆಹೂದ್ಯರು ಬೆರೋಯದಲ್ಲಿ ಉಂಟಾದ ಸುವಾರ್ತೆಯ ಯಶಸ್ಸನ್ನು ಕೇಳಿದರು. ಹಾಗಾಗಿ ಅವರು ಅಲ್ಲಿ ತೊಂದರೆಯನ್ನುಂಟುಮಾಡಲು ಬಂದರು. ಹಾಗಾಗಿ ಅಲ್ಲಿದ್ದ ವಿಶ್ವಾಸಿಗಳು ಪೌಲನು ತಕ್ಷಣವಾಗಿ ಬೆರೋಯವನ್ನು ಬಿಟ್ಟುಹೋಗುವಂತೆ ಕಳುಹಿಸಿಬಿಟ್ಟರು.

6. ಸೀಲ ಮತ್ತು ತಿಮೋಥಿಯರು ಪೌಲನೊಂದಿಗೆ ಬೆರೋಯವನ್ನು ಬಿಟ್ಟು ಹೋಗಲಿಲ್ಲ. ಆದರೆ ಅವರು ತನ್ನೊಂದಿಗೆ ಆದಷ್ಟು ಬೇಗನೇ ಸೇರಿಕೊಳ್ಳಬೇಕೆಂಬುದಾಗಿ ಪೌಲನು ಬಯಸಿದನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನು ಥೆಸಲೋನಿಕದಲ್ಲಿ ಮತ್ತು ಬೆರೋಯದಲ್ಲಿ ಮಾಡಿದ ಸೇವೆಗಳ ನಡುವೆ ಅನೇಕ ಹೋಲಿಕೆಗಳಿವೆ, ಉದಾಹರಣೆಗೆ:

   - ಪೌಲ ಮತ್ತು ಸೀಲರು ಮೊದಲು ಸಭಾಮಂದಿರಕ್ಕೆ ಸುವಾರ್ತೆಯನ್ನು ಸಾರಲು ಹೋದರು

- ಸುವಾರ್ತೆಯನ್ನು ಸಾರುವಂತಹದ್ದು ಯಶಸ್ಸನ್ನು ಕಂಡಿತು ಮತ್ತು ಅನೇಕ ಜನರು ನಂಬಿದರು. ನಂಬಿದವರಲ್ಲಿ ಯೆಹೂದ್ಯರೂ ಇದ್ದರು ಮತ್ತು ಗ್ರೀಕರೂ ಇದ್ದರು. ಪ್ರಮುಖ ಗ್ರೀಕ್ ಸ್ತ್ರೀಯರು ನಂಬಿದಂತಹದ್ದು ನಿರ್ದಿಷ್ಟವಾಗಿ ತಿಳಿಸಲ್ಪಟ್ಟಿದೆ.

- ಯೆಹೂದ್ಯರು ತೊಂದರೆ ಉಂಟುಮಾಡಲು ಪ್ರಾರಂಭಿಸಿದರು. ಅವರು ಜನಸಮೂಹವನ್ನು ಪ್ರಚೋದಿಸಿದರು. ಆದರೆ ಅಪೋಸ್ತಲರು ದಂಗೆಕೋರರಿಂದ ವೈಯಕ್ತಿಕವಾಗಿ ದಾಳಿ ಮಾಡಲ್ಪಡಲಿಲ್ಲ.

- ದಾಳಿಯ ನಿಮಿತ್ತ ಪೌಲನು ತಕ್ಷಣವಾಗಿ ಹೊರಟು ಹೋಗಬೇಕಾಯಿತು. ಆತನು ಸುರಕ್ಷಿತವಾಗಿ ಹೋಗುವಂತೆ ಸ್ಥಳೀಯ ವಿಶ್ವಾಸಿಗಳು ಖಚಿತಪಡಿಸಿಕೊಂಡರು.

ಆದರೆ ಕೆಲವು ವ್ಯತ್ಯಾಸಗಳೂ ಸಹ ಇವೆ, ಉದಾಹರಣೆಗೆ:

- ಥೆಸಲೋನಿಕಗಿಂತ ಬೆರೋಯದಲ್ಲಿ ಹೆಚ್ಚು ಯೆಹೂದ್ಯರು ನಂಬಿದಂತೆ ತೋರುತ್ತದೆ.

- ಯೆಹೂದ್ಯರು ಗಲಬೆ ಎಬ್ಬಿಸಲು ಹೊಟ್ಟೆಕಿಚ್ಚು ಕಾರಣವಾಗಿತ್ತೆಂಬುದಾಗಿ ಥೆಸಲೋನಿಕದಲ್ಲಿ ಮಾತ್ರ ತಿಳಿಸಲ್ಪಟ್ಟಿದೆ.

- ಥೆಸಲೋನಿಕದಲ್ಲಿ, ಲೂಕನು ವಿಶ್ವಾಸಿಗಳ ವಿರುದ್ಧವಾಗಿ ಮಾಡಲ್ಪಟ್ಟ ಬಹಳ ಗಂಭೀರವಾದ ಆಪಾದನೆಯೊಂದಿಗೆ (ರಾಜದ್ರೋಹ) ಒಂದು ರೀತಿಯ 'ನ್ಯಾಯಾಲಯದ ಮೊಕದ್ದಮೆಯ ದೃಶ್ಯವನ್ನು'" ಚಿತ್ರಿಸುತ್ತಿದ್ದಾನೆ. ಅವರಲ್ಲಿ ಕೆಲವರು ಜಾಮೀನನ್ನು ನೀಡಬೇಕಾಯಿತು, ಅದು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭವಿಷ್ಯದ ಸೇವೆಗೆ ಅಡ್ಡಿ ಮಾಡಿತು.

- ಥೆಸಲೋನಿಕದಲ್ಲಿ ಗಲಬೆಯುಂಟಾದಾಗ ಪೌಲ ಮತ್ತು ಸೀಲರಿಬ್ಬರೂ ಪಟ್ಟಣವನ್ನು ಬಿಟ್ಟು ಹೋದರು. ಬೆರೋಯದಲ್ಲಿ ಪೌಲನು ಮಾತ್ರ ಬಿಟ್ಟು ಹೋದನು, ಸೀಲ ಮತ್ತು ತಿಮೋಥಿಯರಿಬ್ಬರು ಅಲ್ಲಿಯೇ ಉಳಿದುಕೊಂಡರು.

2. ಪೌಲ ಮತ್ತು ಸೀಲರಿಬ್ಬರೂ ಯಾಕೆ ಥೆಸಲೋನಿಕವನ್ನು ಬಿಟ್ಟು ಹೋದರು ಮತ್ತು ಬೆರೋಯವನ್ನು ಪೌಲನು ಮಾತ್ರ ಯಾಕೆ ಬಿಟ್ಟು ಹೋದನೆಂಬುದರ ಕುರಿತು ಲೂಕನು ಏನನ್ನೂ ಬರೆಯುತ್ತಿಲ್ಲ. ಆದರೆ ನಾವು ಪೌಲನ ಎರಡನೆಯ ಸೇವಾ ಪ್ರಯಾಣದ ಕುರಿತು ಲೂಕನ ದಾಖಲೆಯನ್ನು ಗಮನವಿಟ್ಟು ಓದುವುದಾದರೆ, ನಮಗೆ ಆ ಕಾರಣವು ಕಾಣಿಸುತ್ತದೆ.

   ಪ್ರಯಾಣದ ಪ್ರಾರಂಭದಲ್ಲಿ ಸೀಲನು ಸೇವೆಯಲ್ಲಿ ಒಂದು ಪ್ರಧಾನವಾದ ಪಾತ್ರ ವಹಿಸಿರುವಂತಹದ್ದು ಕಂಡು ಬರುತ್ತದೆ. ಆತನು ಫಿಲಿಪ್ಪಿಗೆ ಸಂಬಂಧಿಸಿದಂತೆ ಏಳು ಬಾರಿ ತಿಳಿಸಲ್ಪಟ್ಟಿದ್ದಾನೆ. ಥೆಸಲೋನಿಕದಲ್ಲಿ, ಪೌಲನು ಪ್ರಮುಖ ಬೋಧಕನಾಗಿದ್ದರೂ, ಸಭಾಮಂದಿರದಿಂದ ಅನೇಕ ವಿಶ್ವಾಸಿಗಳು ಪೌಲ ಮತ್ತು ಸೀಲರನ್ನು ಸೇರಿಕೊಂಡರೆಂಬುದಾಗಿ ಹೇಳಲ್ಪಟ್ಟಿದೆ. ಆದರೆ ಬೆರೋಯದಲ್ಲಿ ಪೌಲನು ಹೆಚ್ಚಿನ ಪಾತ್ರವನ್ನು ವಹಿಸಿದಂತೆ ತೋರುತ್ತದೆ. ಬಹುಶಃ ಇದರ ಪರಿಣಾಮವಾಗಿ ಯೆಹೂದ್ಯರು (ಮತ್ತು ಜನಸಮೂಹವು) ಪೌಲನು ಕ್ರೈಸ್ತರ

ಪ್ರಮುಖ ನಾಯಕನೆಂದು ಗುರುತಿಸಿದ ಸಾಧ್ಯತೆಯಿದೆ. ಹಾಗಾಗಿ ಸೀಲ ಮತ್ತು ತಿಮೋಥಿಯರಿಗಿಂತ ಪೌಲನ ಪ್ರಾಣಕ್ಕೆ ಬಹಳ ಅಪಾಯವಿತ್ತು – ಮತ್ತು 'ತಕ್ಷಣವಾಗಿ' ಕಳುಹಿಸಲ್ಪಡುತ್ತಿದ್ದವನು ಆತನೇ. ಈ ಕಥೆಯ ನಂತರ, ಸೀಲನು – ಕನಿಷ್ಟ ಪಕ್ಷ ಅಪೋಸ್ತಲರ ಕೃತ್ಯಗಳಲ್ಲಿನ ಲೂಕನ ದಾಖಲೆಯ ಪ್ರಕಾರ – ಸೇವೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಲಿಲ್ಲ.

# ಉ 47. ಅಥೆನ್ಸ್‌ನಲ್ಲಿ, 17:16–34

## ಇ) ಪಠ್ಯ ಪ್ರಶ್ನೆಗಳು

2. ಸೀಲ ಮತ್ತು ತಿಮೋಥಿಯರಿಬ್ಬರು ಬಂದು ತನ್ನೊಂದಿಗೆ ಸೇರಿಕೊಳ್ಳಬೇಕೆಂಬುದಾಗಿ ಅವರಿಗಾಗಿ ಪೌಲನು ಅಥೆನ್ಸ್‌ನಲ್ಲಿ ಕಾಯುತ್ತಿದ್ದನು. ಆದರೆ ಅದು ಸಂಭವಿಸಲಿಲ್ಲ. ಅದಕ್ಕೆ ಬದಲಾಗಿ ಅವರು ಆನಂತರ ಆತನನ್ನು ಕೊರಿಂಥದಲ್ಲಿ ಭೇಟಿಯಾದರು.

3. ಪೌಲನು ಅಥೆನ್ಸ್‌ನಲ್ಲಿದ್ದ ಎಲ್ಲಾ ಗುಡಿಗಳನ್ನು, ವಿಗ್ರಹಗಳನ್ನು ಮತ್ತು ವಿಗ್ರಹಾರಾಧಕರನ್ನು ಕಂಡಾಗ ಬಹಳ ಸಂಕಟಪಟ್ಟನು.

4. ಪೌಲನು ಅಥೆನ್ಸ್‌ನಲ್ಲಿ ಮೂರು ರೀತಿಯಾಗಿ ಸೇವೆ ಮಾಡಿದನು: ಆತನು ಸಭಾಮಂದಿರಗಳಲ್ಲಿ ಯೆಹೂದ್ಯರೊಂದಿಗೆ ಮತ್ತು ದೇವಭಯವುಳ್ಳವರೊಂದಿಗೆ ಮಾತನಾಡಿದನು. ಆತನು ಮಾರುಕಟ್ಟೆಯ ಸ್ಥಳಗಳಲ್ಲಿ ಜನರೊಂದಿಗೆ (ಎಪಿಕೂರಿಯ ಹಾಗೂ ಸ್ತೋಯಿಕ ತತ್ವಜ್ಞಾನಿಗಳನ್ನೊಳಗೊಂಡು) ಮಾತನಾಡಿದನು. ಮತ್ತು ಆತನು ತತ್ವಜ್ಞಾನಿಗಳಿಂದ ಕೂಡಿದ್ದ ಅರಿಯೊಪಾಗದ ಸಭೆಯ ಮುಂದೆ ಮಾತನಾಡಿದನು (ಅಥವಾ ಸಂದೇಶವನ್ನು ಸಾರಿದನು).

5. ಲೂಕನು ಅಥೆನಿಯರನ್ನು ಬಹಳ ನಕರಾತ್ಮಕವಾಗಿ ಚಿತ್ರಿಸುತ್ತಿದ್ದಾನೆ: ಅವರು ಹೊಸ ಹೊಸ ವಿಷಯಗಳನ್ನು ಹೇಳುವುದಕ್ಕೂ ಕೇಳುವುದಕ್ಕೂ ಹೊರತು ಇತರ ವಿಷಯಗಳಲ್ಲಿ ಸಮಯ ಕಳೆಯುತ್ತಿರಲಿಲ್ಲ.

6. ಪೌಲನು ಅರಿಯೋಪಾಗ ಎಂಬ ಸಭೆಯ ಮುಂದೆ ಕರೆದೊಯ್ಯಲ್ಪಟ್ಟನು, ಯಾಕೆಂದರೆ ಎಪಿಕೂರಿಯರು ಹಾಗೂ ಸ್ತೋಯಿಕ್ ತತ್ವಜ್ಞಾನಿಗಳು ಈತನು ಹೊಸ ಧರ್ಮವನ್ನು ಮತ್ತು ದೇವರನ್ನು ಪರಿಚಯಿಸುತ್ತಿದ್ದಾನೆಂದು ಭಾವಿಸಿದರು. ಅಥೆನ್ಸ್‌ನಲ್ಲಿ ಅರಿಯೊಪಾಗದ ಸಭೆಯು ಧರ್ಮ ಮತ್ತು ಸಿದ್ಧಾಂತಗಳ ಸಂರಕ್ಷಕರಾಗಿದ್ದರು.

7. ಪೌಲನು ತನ್ನ ಸಂದೇಶದಲ್ಲಿ ಯೇಸುವಿನ ನಾಮವನ್ನು ಸೂಚಿಸುವುದರ ಬದಲಾಗಿ, 'ತಾನು (ದೇವರು) ನೇಮಿಸಿದ ಒಬ್ಬಾತನನ್ನು' ಮತ್ತು 'ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರು' ಎಂಬ ಪದವಿನ್ಯಾಸವನ್ನು ಉಪಯೋಗಿಸುತ್ತಿದ್ದಾನೆ (ವ. 31).

8. ಪೌಲನು (ದೇಹಗಳ) ಪುನರುತ್ಥಾನದ ಕುರಿತಾಗಿ ತಿಳಿಸಿದಾಗ ಕೇಳುಗರು ಆತನ ಸಂದೇಶವನ್ನು ಅಡ್ಡಿಪಡಿಸಿದರು.

9. ಪೌಲನ ಸಂದೇಶಕ್ಕೆ ಜನರು ಮೂರು ವ್ಯತ್ಯಾಸವಾದ ರೀತಿಯಲ್ಲಿ ಪ್ರತಿಕ್ರಿಯಿಸಿದರು: ಅನೇಕರು ಇದು ಹುಚ್ಚು ಮಾತಾಗಿದೆ ಎಂದು ಆಲೋಚಿಸಿದರು. ಇನ್ನೂ ಕೆಲವರು ಮತ್ತೊಂದು ದಿನ ಅದರ ಕುರಿತು ಹೆಚ್ಚಾಗಿ ಕೇಳಬೇಕೆಂದು ಬಯಸಿದರು. ಆದರೆ ಒಂದು ಗುಂಪಿನ ಜನರು ನಂಬಿದರು ಮತ್ತು ಆತನನ್ನು ಹಿಂಬಾಲಿಸಿದರು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನು ಅರಿಯೊಪಾಗದ ಸಭೆಯ ಮುಂದೆ ಅಥೆನ್ಸ್‌ನವರ ಧಾರ್ಮಿಕ ಉತ್ಸಾಹವನ್ನು ಹೊಗಳುವುದರ ಮೂಲಕವಾಗಿ ತನ್ನ ಸಂದೇಶವನ್ನು ಪ್ರಾರಂಭಿಸಿದನು. ಭಾರತದಲ್ಲಿರುವ ಅನೇಕ ಆಧುನಿಕ ಪೆಂತಕೋಸ್ತ ಮತ್ತು ಸುವಾರ್ತಿಕ ಸಭೆಯ ಸಭಾಪಾಲಕರು ಹಿಂದೂಗಳ ಮತ್ತು ಮುಸ್ಲಿಮರ ಧಾರ್ಮಿಕ ಉತ್ಸಾಹವನ್ನು ಹೊಗಳುವುದಕ್ಕೆ ಹಿಂದೇಟು ಹಾಕುತ್ತಾರೆ! ನೀವು ಏನು ಆಲೋಚಿಸುತ್ತೀರಿ?

2. ಪೌಲನು ತನ್ನ ಸಂದೇಶದಲ್ಲಿ ಅಕ್ರೈಸ್ತ ಗ್ರೀಕ್ ಕವಿಗಳ ಕುರಿತು ಉಲ್ಲೇಖಿಸುವಂತಹದ್ದು ನಮಗೆ ದಿಗ್ಭ್ರಮೆ ಉಂಟುಮಾಡಬಹುದು. ಈ ಉಲ್ಲೇಖನಗಳು ಗ್ರೀಕ್ ಅನ್ಯದೇವರಾದ ಜ್ಯೂಸ್‌ನ ಕುರಿತ್ತಾದ್ದಾಗಿದೆ ಮತ್ತು ಪೌಲನು ಅವುಗಳನ್ನು ಒಬ್ಬನೇ ಸತ್ಯ ದೇವರನ್ನು ಉಲ್ಲೇಖಿಸುವುದಕ್ಕಾಗಿ ಉಪಯೋಗಿಸುತ್ತಿದ್ದಾನೆ. ಬಹುಶಃ ನಾವು ಅದನ್ನು ಮಾಡುವುದಿಲ್ಲ! ಯಾಕೆ ಇಲ್ಲ? ಅಥವಾ ನೀವು ಹಾಗೆ ಮಾಡುವಿರೋ? ಮತ್ತು ಬಹುಶಃ ನಾವು ಪೌಲನು ಮಾಡಿದ್ದನ್ನು ಸಮ್ಮತಿಸುವುದಿಲ್ಲ! ಯಾಕೆ ಇಲ್ಲ? ಅಥವಾ ನೀವು ಸಮ್ಮತಿಸುತ್ತೀರೋ?

   ಇದು ಪೌಲನ ಕುರಿತು ಎರಡು ಸಂಗತಿಗಳನ್ನು ನಮಗೆ ತಿಳಿಸುತ್ತವೆ:

   1) ಆತನು ವಿದ್ಯಾವಂತ ವ್ಯಕ್ತಿಯಾಗಿದ್ದನು ಮತ್ತು ಆತನ ಕಲಿಕೆಯು ಹಳೆ ಒಡಂಬಡಿಕೆ ಮತ್ತು ಯೆಹೂದ್ಯರ ಇತರೆ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿದ್ದಿಲ್ಲ.

   2) ಆತನು ತನ್ನ ಸಮಯದ ಜನರಿಗೆ, ಅದರಲ್ಲೂ ಪಾಂಡಿತ್ಯವನ್ನು ಪಡೆದಿದ್ದ ಗ್ರೀಕ್ ತತ್ವಜ್ಞಾನಿಗಳಿಗೆ, ಸುವಾರ್ತೆಯನ್ನು ಸಾರಲು ಉಪಯುಕ್ತವಾದ ವಿಧಾನಗಳನ್ನು ಬಳಸಲು ಇಚ್ಛೆಯುಳ್ಳವನಾಗಿದ್ದನು.

   ಪೌಲನ ಸಂದೇಶದಲ್ಲಿ ಹಳೆ ಒಂಡಂಬಡಿಕೆಯ ಯಾವುದೇ ನೇರವಾದ ಉಲ್ಲೇಖನಗಳಿಲ್ಲದಿರುವುದನ್ನು ನಾವು ಗಮನಿಸಬೇಕು. ಇದಕ್ಕೆ ಕಾರಣವೇನೆಂದರೆ, ಆತನ ಶ್ರೋತೃಗಳಿಗೆ ಹಳೆ ಒಡಂಬಡಿಕೆಯ ಯಾವುದೇ ತಿಳುವಳಿಕೆಯಾಗಲಿ ಅಥವಾ ಜ್ಞಾನವಾಗಲಿ ಇರಲಿಲ್ಲ. ಆದರೆ ಆತನು ಹಳೆ ಒಡಂಬಡಿಕೆಯ ವಿಷಯಾಂಶಗಳನ್ನು ಪರೋಕ್ಷವಾಗಿ ಯಾವುದೇ

ಉಲ್ಲೇಖನಗಳಿಲ್ಲದೆ ಪ್ರಸ್ತಾಪಿಸುತ್ತಾನೆ. ಈ ವಿಷಯಾಂಶಗಳು ಸಾಮಾನ್ಯವಾಗಿದ್ದವು ಮತ್ತು ಕೇಳುವ ಜನರು ಸುಲಭವಾಗಿ ಅರ್ಥೈಸಿಕೊಳ್ಳುವಂತಹವುಗಳಾಗಿದ್ದವು.

3. ಅಥೆನಿಯರು ಅನ್ಯ ದೇವರುಗಳ ಮೇಲೆ ಇಟ್ಟಿದ್ದ ನಂಬಿಕೆಯ ವಿರುದ್ಧ ಪೌಲನು ಹೀಗೆ ದಾಳಿ ಮಾಡಿದನು:

   - ಎಲ್ಲಾ ದೇವಾಲಯಗಳು ಮತ್ತು ವಿಗ್ರಹಗಳು ಹಾಗೂ ಯಜ್ಞವೇದಿಗಳು ಇದ್ದಾಗ್ಯೂ – ಅವರು ದೇವರನ್ನು ಅರಿತವರಲ್ಲವೆಂದು ಪೌಲನು ಪರೋಕ್ಷವಾಗಿ ಹೇಳುತ್ತಾನೆ.

   - ಆತನು ಅವರ ವಿಗ್ರಹಾರಾಧನೆಯನ್ನು ಟೀಕಿಸಿದನು ಮತ್ತು ದೇವರು ದೇವಾಲಯಗಳಲ್ಲಿ ವಾಸಿಸುವುದಿಲ್ಲ ಮತ್ತು ಕಲ್ಲಿನಿಂದಾಗಲಿ ಮತ್ತು ಬೆಳ್ಳಿ ಬಂಗಾರಗಳಿಂದ ಮಾಡಲ್ಪಟ್ಟ ವಿಗ್ರಹಗಳು ಆತನನ್ನು ಎಂದಿಗೂ ಪ್ರತಿನಿಧಿಸಲಾರವು ಎಂದು ಹೇಳಿದನು.

   - ಆತನು ಅವರ ಅಜ್ಞಾನವನ್ನು ತೋರ್ಪಡಿಸಿದನು ಮತ್ತು ದೇವರು ಇಂತಹ ಅಜ್ಞಾನವನ್ನು ಇನ್ನೂ ಸಹಿಸಲಾರನು, ಬದಲಾಗಿ ಆತನು ತಾನು ನೇಮಿಸಿದ ವ್ಯಕ್ತಿಯ ಮೂಲಕ ಅವರಿಗೆ ನ್ಯಾಯತೀರ್ಪು ಮಾಡಿ ಅವರನ್ನು ಶಿಕ್ಷಿಸುವನು ಎಂದು ಹೇಳಿದನು.

4. ನಾನು ವೈಯಕ್ತಿಕವಾಗಿ ಆಲೋಚಿಸುವುದೇನೆಂದರೆ, ಅಥೆನ್ಸ್‌ನಲ್ಲಿ ಪೌಲನ ಸೇವೆಯು ಬಹಳ ಯಶಸ್ವಿಯಾಗಿತ್ತು. ಬಹುಶಃ ಅಲ್ಲಿ ಒಂದು ದೊಡ್ಡ ಗುಂಪಿನ ಜನರು ವಿಶ್ವಾಸಿಗಳಾಗಿ ಮಾರ್ಪಡದೇ ಇರಬಹುದು. ಆದರೆ ದೇವರ ರಾಜ್ಯದಲ್ಲಿ ದೊಡ್ಡ ಸಂಖ್ಯೆಯು ಯಶಸ್ಸನ್ನು ಅಳೆಯುವ ಸೂತ್ರವಲ್ಲ. ಅರಿಯೊಪಾಗದ ಒಬ್ಬ ಸದಸ್ಯನು ವಿಶ್ವಾಸಿಯಾದನು ಮತ್ತು ಅಥಿನಿಯರ ಸಮಾಜದಲ್ಲಿ ಬಹುಶಃ ಬಹಳ ಪ್ರಭಾವಶಾಲಿಯಾಗಿದ್ದ ಒಬ್ಬ ಮಹಿಳೆಯೂ ವಿಶ್ವಾಸವನ್ನಿಟ್ಟಳು. ಇನ್ನೂ ಕೆಲವರು ನಂಬಿದರು! ವಿಶೇಷವಾಗಿ ಅಥೆನ್ಸ್‌ನಲ್ಲಿದ್ದ ಬಹಳ ಕಠಿಣವಾದ ಆತ್ಮೀಕ ಪರಿಸ್ಥಿತಿಯನ್ನು ನಾವು ಗಮನಿಸುವುದಾದರೆ ಮತ್ತು ಅತೀ ವಿದ್ಯಾವಂತ ಮತ್ತು ಪಂಡಿತರಾಗಿದ್ದ ಶ್ರೋತೃಗಳನ್ನು ಗಮನಿಸುವುದಾದರೆ – ಇದು ಬಹಳ ಯಶಸ್ವಿದಾಯಕವಾಗಿತ್ತು. ಪೌಲನಿಗೆ ತನ್ನ ಸೇವೆಯಲ್ಲಿ ಸಹಾಯಮಾಡುವುದಕ್ಕಾಗಿಯೂ ಯಾರೂ ಇರಲಿಲ್ಲ.

# ಉ 48. ಕೊರಿಂಥದಲ್ಲಿ, 18:1–18

## ೩) ಪಠ್ಯ ಪ್ರಶ್ನೆಗಳು

2. ಅಕ್ವಿಲ ಮತ್ತು ಪ್ರಿಸ್ಕಿಲರು ಏಷ್ಯಾ ಮೈನರ್‌ನ ಪೊಂತ ಎಂಬ ಊರಿನಿಂದ ಬಂದ ಯೆಹೂದ್ಯರಾಗಿದ್ದರು. ಅವರು ರೋಮ್‌ನಿಂದ ಕೊರಿಂಥಕ್ಕೆ ಬಂದಿದ್ದರು, ಬಹುಶಃ ರೋಮ್‌ನಲ್ಲಿ ಅವರು ಸುವಾರ್ತೆಯನ್ನು ಅಂಗೀಕರಿಸಿ ವಿಶ್ವಾಸಿಗಳಾಗಿದ್ದರು. ರೋಮ್ ಚಕ್ರವರ್ತಿಯಾದ ಕ್ಲಾಡಿಯಸ್‌ನ ಆಜ್ಞೆಯ ಮೇರೆಗೆ ಇತರೆ ಎಲ್ಲಾ ಯೆಹೂದ್ಯರೊಂದಿಗೆ (ಅಥವಾ ಯೆಹೂದ್ಯ ಹಿನ್ನಲೆಯುಳ್ಳ ಕ್ರೈಸ್ತರೊಂದಿಗೆ) ಅವರೂ ರೋಮ್‌ನಿಂದ ಬಹಿಷ್ಕರಿಸಲ್ಪಟ್ಟಿದ್ದರು. ಪೌಲನು ಕೊರಿಂಥಕ್ಕೆ ಬಂದಾಗ, ಆತನು ಅವರ ಮನೆಯಲ್ಲಿ ತಂಗಿದ್ದು ಅವರೊಂದಿಗೆ ಕೆಲಸವನ್ನು ಮಾಡಿದನು. ಅವರು ಗುಡಾರ ಮಾಡುವವರಾಗಿದ್ದರು (ಅಥವಾ ಚರ್ಮಕಾರರಾಗಿದ್ದರು).

3. ಯೆಹೂದ್ಯರು ಕೊರಿಂಥದಲ್ಲಿನ ಸಭಾಮಂದಿರಗಳಲ್ಲಿ ಪೌಲನ ಸೇವೆಯನ್ನು ವಿರೋಧಿಸಲು ಪ್ರಾರಂಭಿಸಿದರು ಮತ್ತು ಆತನಿಗೆ ತೊಂದರೆಯನ್ನು ಸಹ ಕೊಟ್ಟರು. ಪೌಲನು ತನ್ನ ಬೆನ್ನನ್ನು ಅವರಿಗೆ ತೋರಿಸುವುದರ ಮೂಲಕ ಪ್ರತಿಕ್ರಿಯಿಸಿದನು. ಇನ್ನೂ ಮುಂದೆ ತಾನು ಅವರಿಗಾಗಿ ಹೊಣೆಯಲ್ಲವೆಂದು ಆತನು ಹೇಳಿದನು. ನಂತರ ಪೌಲನು ಅವರಿಗೆ, 'ಇಂದಿನಿಂದ ನಾನು ಅನ್ಯ ಜನರ ಬಳಿಗೆ ಹೋಗುತ್ತೇನೆ' ಎಂದನು. ನಂತರ ಪೌಲನು ಸಭಾಮಂದಿರವನ್ನು ಬಿಟ್ಟು ಹೊರಗೆ ಬಂದು ಪಕ್ಕದಲ್ಲಿಯೇ ಇದ್ದ ದೇವಭಕ್ತನಾದ ತೀತಯುಸ್ತ ಎಂಬುವನ ಮನೆಗೆ ತನ್ನ ಸೇವೆಯನ್ನು ವರ್ಗಾವಣೆ ಮಾಡಿದನು. ಪೌಲನು ಇದೇ ಮಾತುಗಳನ್ನು ಪಿಸಿದ್ಯದ ಅಂತಿಯೋಕ್ಯದಲ್ಲಿ ಉಪಯೋಗಿಸಿದ್ದನು ಗಮನಿಸಿರಿ (13:46).

4. ಕ್ರಿಸ್ಪನು ಕೊರಿಂಥದಲ್ಲಿನ ಸಭಾಮಂದಿರದ ನಾಯಕನಾಗಿದ್ದನು. ಆತನು ಮತ್ತು ಆತನ ಕುಟುಂಬದವರು ಸುವಾರ್ತೆಯನ್ನು ಅಂಗೀಕರಿಸಿ ದೀಕ್ಷಾಸ್ನಾನವನ್ನು ಹೊಂದಿದರು.

5. ಪೌಲನು ಕೊರಿಂಥದ ಸಭಾಮಂದಿರದಲ್ಲಿ ಸುವಾರ್ತೆಯನ್ನು ಸಾರಿದ ಗಳಿಗೆಯಿಂದಲೇ ಯೆಹೂದ್ಯರು ಆತನ ಮೇಲೆ ಮನಸ್ತಾಪಗೊಂಡಿದ್ದರು. ಗಲ್ಲಿಯೋನನು ರೋಮ್‌ನ ರಾಜ್ಯಪಾಲನಾದಾಗ, ಅವರು ಪೌಲನನ್ನು ಶಾಶ್ವತವಾಗಿ ತಡೆಯಬಹುದೆಂದು ಆಲೋಚಿಸಿದರು. ಹಾಗಾಗಿ ಅವರು ಆತನನ್ನು ಗಲ್ಲಿಯೋನನ ಮುಂದೆ ಕರೆತಂದು ಈತನು ಕಾನೂನು ಬಾಹಿರವಾದ ದೇವರ ಆರಾಧನೆಯನ್ನು ಬೋಧಿಸುತ್ತಾನೆಂದು ಆಪಾದಿಸಿದರು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಸೀಲ ಮತ್ತು ತಿಮೋಥಿಯರು ಮೆಕೆದೋನಿಯದಿಂದ ಬಂದಾಗ, ಪೌಲನು ತನ್ನ ಸೇವೆಯನ್ನು ಸಭಾಮಂದಿರದಲ್ಲಿ ಅಲ್ಪಾವಧಿ ಬೋಧಿಸುವುದರಿಂದ (ತನ್ನ ಸ್ವಂತ ಖರ್ಚುಗಳನ್ನು ತಾನು ಭರಿಸಬೇಕಾದುದ್ದರಿಂದ ಆತನು ಅಲ್ಪಾವಧಿ ಸೇವೆ ಮಾತ್ರ ಮಾಡಲು ಸಾಧ್ಯವಾಗಿತ್ತು) ಸಭಾಮಂದಿರದಲ್ಲಿ ಪೂರ್ಣಾವಧಿ ಬೋಧಿಸುವುದಕ್ಕೆ ಬದಲಾಯಿಸಿಕೊಂಡಂತೆ ಕಾಣುತ್ತದೆ. ಈ ಬದಲಾವಣೆಗೆ ಇರುವ ಸಂಭವನೀಯವಾದ ವಿವರಣೆಯೇನೆಂದರೆ, ಮೆಕೆದೋನಿಯದ ಸಭೆಗಳಿಂದ ಸೀಲ ಮತ್ತು ತಿಮೋಥಿಯರು ಪೌಲನಿಗಾಗಿ ಹಣವನ್ನು ತಂದಿದ್ದರು. ಹಾಗಾಗಿ ಈಗ ಆತನು ತನ್ನ ಊಟ ಬಟ್ಟೆಗಾಗಿ ದುಡಿಯುವ ಅಗತ್ಯತೆ ಇರಲಿಲ್ಲ. ಆದರೂ ಆತನು ಸಭಾಮಂದಿರದಲ್ಲಿ ಯೆಹೂದ್ಯರ ಮತ್ತು ದೇವಭಯವುಳ್ಳ ಜನರ ಮಧ್ಯದಲ್ಲಿ ಇನ್ನೂ ಸೇವೆ ಮಾಡುತ್ತಿದ್ದನು. ನಂತರದಲ್ಲಿ ಮಾತ್ರ ಆತನು ಅನ್ಯರ ಮಧ್ಯದಲ್ಲಿನ ಸೇವೆಯನ್ನು ಹೆಚ್ಚಾಗಿ ಕೇಂದ್ರಕರಿಸುವುದಕ್ಕಾಗಿ ಹತ್ತಿರದಲ್ಲೇ ಇದ್ದ ತೀತಯುಸ್ತ ಎಂಬುವವನ ಮನೆಗೆ ಹೋದನು.

2. ಯೇಸು ಪೌಲನಿಗೆ ದರ್ಶನದಲ್ಲಿ ಯಾಕೆ ಕಾಣಿಸಿಕೊಂಡನೆಂಬುದನ್ನು ಲೂಕನು ಮುಕ್ತವಾಗಿ ತಿಳಿಸುತ್ತಿಲ್ಲ. ಆದರೆ – ಹಳೆ ಒಡಂಬಡಿಕೆಯಲ್ಲಿ ದೇವರು ಹೇಗೆ ತನ್ನ ಜನರೊಂದಿಗೆ ಮಾತನಾಡಿದನೆಂಬುದನ್ನು ನಮಗೆ ಮಾತುಗಳಲ್ಲಿ ನೆನಪಿಸುವಂತೆ – ಯೇಸು ಆತನಿಗೆ, ಭಯಪಡದೆ ಸುವಾರ್ತೆಯ ಕುರಿತು ಮಾತನಾಡುತ್ತಲೇ ಇರಬೇಕೆಂದೂ ಮತ್ತು ಅನೇಕ ಜನರು ತನ್ನ ಕಡೆಗೆ ತಿರುಗುವರೆಂದೂ ಹೇಳುತ್ತಾನೆ. ಬಹುಶಃ ಪೌಲನಿಗೆ ಈ ಪ್ರೋತ್ಸಾಹವು ಅತ್ಯವಶ್ಯವಾಗಿತ್ತು, ಯಾಕೆಂದರೆ ಆತನು ಯೆಹೂದ್ಯರಿಂದ ಈಗಾಗಲೇ ವಿರೋಧತ್ವವನ್ನು ಎದುರಿಸಿದ್ದನು ಮತ್ತು ಮುಂದೆಯೂ ಇನ್ನೂ ಅಧಿಕವಾದ ವಿರೋಧವನ್ನು ನಿರೀಕ್ಷಿಸಿದ್ದನು. ಆತನಿಗೆ ಬಹುಶಃ ಕೊರಿಂಥವನ್ನು ಬಿಟ್ಟು ಹೋಗುವ ಶೋಧನೆಯಾಗಿರಬಹುದು, ಆದರೆ ಆತನು ಅಲ್ಲಿಯೇ ಉಳಿದು ಕೆಲಸವನ್ನು ಪೂರ್ಣಗೊಳಿಸಬೇಕೆಂದು ದೇವರು ಬಯಸಿದನು.

3. ಯೆಹೂದ್ಯರು ಪೌಲನ ವಿರುದ್ಧ ಮಾಡಿದ ಆಪಾದನೆಗಳನ್ನು ಗಲ್ಲಿಯೋನನು ಒಪ್ಪಿಕೊಳ್ಳಲಿಲ್ಲ. ಪೌಲನು ಯಾವುದೇ ಅಪರಾಧವನ್ನು ಎಸಗಿರಲಿಲ್ಲ. ಇದು ಎರಡು ಯೆಹೂದ್ಯ ಗುಂಪುಗಳ ಮಧ್ಯದಲ್ಲಿರುವ ಒಳಜಗಳವೆಂಬುದು ಗಲ್ಲಿಯೋನನ ಅಭಿಪ್ರಾಯವಾಗಿತ್ತು. ಗಲ್ಲಿಯೋನನ ಈ ನಿರ್ಧಾರವು ಕೊರಿಂಥ ಮತ್ತು ಅಖಾಯದಲ್ಲಿನ ಭವಿಷ್ಯದ ಸೇವೆಗೆ ಬಹಳ ಸಕಾರಾತ್ಮಕವಾದ ಪರಿಣಾಮವನ್ನು ಉಂಟುಮಾಡಿರಬಹುದು. ವಿಶ್ವಾಸಿಗಳು ರೋಮ್ ಅಧಿಕಾರಿಗಳಿಂದ ಯಾವುದೇ ಅಡಚಣೆಗಳ ಭಯವಿಲ್ಲದವರಾಗಿ ತಮ್ಮ ಕಾರ್ಯಗಳನ್ನು ಮುಂದುವರೆಸುತ್ತಾ ತೀಕ್ಷ್ಣಗೊಳಿಸಬಹುದಾಗಿತ್ತು. ಕ್ರೈಸ್ತ ನಂಬಿಕೆಯು ಕಾನೂನು ಬಾಹಿರವಾಗಿರಲಿಲ್ಲ!

4. ಸೊಸ್ಥೆನನು ಹೊಸದಾಗಿ ನೇಮಿಸಲ್ಪಟ್ಟಿದ್ದ ಸಭಾಮಂದಿರದ ನಾಯಕನಾಗಿದ್ದನು. ಆತನು ಕ್ರಿಸ್ತನನ್ನು ನಂಬಿ ತೀತಯೋಸ್ತನ ಮನೆಯಲ್ಲಿದ್ದ ವಿಶ್ವಾಸಿಗಳೊಂದಿಗೆ ಸೇರಿಕೊಂಡ ಕ್ರಿಸ್ಪನ ನಂತರ ಬಂದಂತವನಾಗಿದ್ದನು. ಸೊಸ್ಥೆನನನ್ನು ಯಾರು ಹೊಡೆದರು ಅಥವಾ ಯಾಕೆ ಹೊಡೆದರೆಂಬುದನ್ನು ಲೂಕನು ಸ್ಪಷ್ಟವಾಗಿ ತಿಳಿಸುತ್ತಿಲ್ಲ. 'ಅವರು' ಎಂಬುದು ಸಾಮಾನ್ಯವಾಗಿ

ಅನ್ಯ ದಂಗೆಕೋರರನ್ನು ಅಥವಾ ಯೆಹೂದ್ಯರನ್ನು ಸೂಚಿಸುತ್ತದೆ. ಬಹುತೇಕವಾಗಿ ಇದು ಯೆಹೂದ್ಯ ಸಮುದಾಯದ ಒಬ್ಬ ನಾಯಕನನ್ನು ದಾಳಿಮಾಡಲು ಈ ಅವಕಾಶವನ್ನು ಬಳಸಿಕೊಂಡ ಅನ್ಯದಂಗೆಕೋರರನ್ನು ಸೂಚಿಸುವಂತಹದ್ದಾಗಿದೆ. ಬಹುಶಃ ಮುಂದೆ ಇನ್ನೂ ಹೆಚ್ಚಾದ ಕೋಮು ಗಲಬೆಯನ್ನು ತಪ್ಪಿಸುವ ಉದ್ಧೇಶದಿಂದ ಗಲ್ಲಿಯೋನನು ಅವುಗಳಲ್ಲಿ ಒಂದನ್ನು ಲಕ್ಷಿಸಲಿಲ್ಲ.

# ಉ 49. ಪೌಲನು ಸಿರಿಯಾದ ಅಂತಿಯೋಕ್ಯಕ್ಕೆ ಹಿಂತಿರುಗಿದ್ದು, 18:18–22

## ಇ) ಪಠ್ಯ ಪ್ರಶ್ನೆಗಳು

2. ಪ್ರಿಸ್ಕಿಲ ಮತ್ತು ಅಕ್ವಿಲರನ್ನು ಪೌಲನು ಎಫೆಸದಲ್ಲಿಯೇ ಬಿಟ್ಟು ಹೋದನು, ನಂತರ ತನ್ನ ಮೂರನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ಅವರನ್ನು ಅಲ್ಲಿ ಪುನಃ ಭೇಟಿಯಾದನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನು ತಾತ್ಕಾಲಿಕವಾದ ನಾಜೀರ ವ್ರತವನ್ನು ತೆಗೆದುಕೊಳ್ಳಲು ಎರಡು ಕಾರಣಗಳಿದ್ದಿರಬಹುದು:
   1) ಗಲ್ಲಿಯೋನನ ಮುಂದೆ ಯೆಹೂದ್ಯರು ಮಾಡಿದ ಆಪಾದನೆಯ ಸಂಧರ್ಬದಲ್ಲಿ ದೇವರು ಆತನನ್ನು ಸಂರಕ್ಷಿಸಿದ್ದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿದನು.
   2) ಅಥವಾ ಆತನು ಸಿರಿಯಾದ ಅಂತಿಯೋಕ್ಯಕ್ಕೆ ಅಪಾಯಕರವಾದ ಸಮುದ್ರ ಪ್ರಯಾಣದಿಂದ ಹಿಂತಿರುಗುವಾಗ ದೇವರು ತನ್ನನ್ನು ಸಂರಕ್ಷಿಸುವಂತೆ ಬೇಡಿಕೊಳ್ಳಬೇಕೆಂದಿದ್ದನು.

2. (ಕೊರಿಂಥದಲ್ಲಿ ಸಂಭವಿಸಿದ ಘಟನೆಗೆ ತದ್ವಿರೋಧವಾಗಿ) ಎಫೆಸದಲ್ಲಿದ್ದ ಯೆಹೂದ್ಯರಿಂದ ಪೌಲನು ಅಂತಹ ಹೃತ್ಪೂರ್ವಕವಾದ ಸ್ವಾಗತವನ್ನು ಯಾಕೆ ಹೊಂದಿದನೆಂಬುದರ ಕುರಿತು ಲೂಕನು ಏನನ್ನೂ ತಿಳಿಸುತ್ತಿಲ್ಲ. ಆದರೆ ಅದು ಬಹುಶಃ ಆತನ ಕ್ಷೌರಮಾಡಿಸಿಕೊಂಡ ತಲೆಯ ನಿಮಿತ್ತವಾಗಿರಬಹುದು. ಇದರ ನಿಮಿತ್ತದಿಂದಾಗಿ ಎಫೆಸದಲ್ಲಿದ್ದ ಯೆಹೂದ್ಯರು ಪೌಲನು ಅವರ ಅಥವಾ ಅವರ ಯೆಹೂದ್ಯ ಸಾಂಸ್ಕೃತಿಕ ಆಚಾರಗಳ ವಿರುದ್ಧವಿರಲಿಲ್ಲ ಎಂಬುದನ್ನು ತಿಳಿದುಕೊಂಡರು. ಹಾಗಾಗಿ ಅವರು ಯೇಸುವೇ ನಿರೀಕ್ಷಿಸಲ್ಪಟ್ಟ ಯೆಹೂದ್ಯರ ಮೆಸ್ಸೀಯನು ಎಂಬ ಆತನ ತರ್ಕವನ್ನು ಕೇಳಲು ಮನಸ್ಸುಳ್ಳವರಾಗಿದ್ದರು.

# ಉ 50. ಕೊರಿಂಥ ಮತ್ತು ಎಫೆಸದಲ್ಲಿ ಅಪೊಲ್ಲೋಸನು, 18:23–28

## ಇ) ಪಠ್ಯ ಪ್ರಶ್ನೆಗಳು

2. ಪೌಲನು ಗಲಾತ್ಯ ಮತ್ತು ಫ್ರಿಗಿಯ ಪ್ರದೇಶದಲ್ಲೆಲ್ಲಾ ಸಂಚರಿಸುತ್ತಾ ಅಲ್ಲಿರುವ ಸಭೆಗಳನ್ನು ಸಂಧಿಸಿದನು ಮತ್ತು ಶಿಷ್ಯರನ್ನೆಲ್ಲಾ ಬಲಪಡಿಸಿದನು (ವ. 23). ಆತನು ತನ್ನ ಮೊದಲ ಸೇವಾ ಪ್ರಯಾಣದ ಸಂದರ್ಭದಲ್ಲಿ, ಪಿಸಿದ್ಯದ ಅಂತಿಯೋಕ್ಯ, ಇಕೋನಿಯ, ಲುಸ್ತ್ರ ಮತ್ತು ದೆರ್ಬೆಗಳಲ್ಲಿ ಸಭೆಗಳನ್ನು ಸ್ಥಾಪಿಸಿದನು ಮತ್ತು ತನ್ನ ಎರಡನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ಆ ಸಭೆಗಳನ್ನು ಪುನಃ ಸಂಧಿಸಿದನು.

3. ಪ್ರಿಸ್ಕಿಲ ಮತ್ತು ಅಕ್ವಿಲರು 'ದೇವರ ಮಾರ್ಗವನ್ನು' ಇನ್ನೂ ಹೆಚ್ಚಾದ ರೀತಿಯಲ್ಲಿ ಅಪೊಲ್ಲೋಸನಿಗೆ ವಿವರಿಸಿ ಹೇಳಲು ಆತನನ್ನು ತಮ್ಮ ಮನೆಗೆ ಅಹ್ವಾನಿಸಿದರು (ವ. 26). 'ದೇವರ ಮಾರ್ಗವು'" ಬಹುಶಃ ಕ್ರೈಸ್ತ ಸಿದ್ಧಾಂತವನ್ನು ಮಾತ್ರವಲ್ಲದೆ ಕ್ರಿಸ್ತೀಯ ಜೀವನ ಹಾಗೂ ಸಭೆಯ ತಿಳುವಳಿಕೆಯನ್ನೂ ಒಳಗೊಂಡಿತ್ತು.

4. ಅಪೊಲ್ಲೋಸನು ಎಫೆಸದಲ್ಲಿ ಕೆಲವು ಕಾಲ ಕಳೆದ ನಂತರ ಗ್ರೀಸ್‌ನಲ್ಲಿರುವ ರೋಮ್ ಪ್ರಾಂತ್ಯದ ಅಖಾಯಕ್ಕೆ ಹೋಗಬೇಕೆಂದಿದ್ದನು. ಅಲ್ಲಿ ಆತನು ಕೊರಿಂಥ ಸಭೆಯ ಯೆಹೂದ್ಯರ ಮಧ್ಯದಲ್ಲಿನ ಸೇವೆಗೆ ಸಹಾಯ ಮಾಡಿದನು. ಕೊರಿಂಥವು ಅಖಾಯದ ರಾಜಧಾನಿಯಾಗಿತ್ತು (19:1).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನು ತನ್ನ ಮೂರನೆಯ ಸೇವಾ ಪ್ರಯಾಣಕ್ಕಾಗಿ ಹೊರಡುವುದಕ್ಕಿಂತ ಮುಂಚೆ ಅಂತಿಯೋಕ್ಯದಲ್ಲಿ 'ಸ್ವಲ್ಪ ಸಮಯ ಕಳೆದಾಗ' (ವ. 23) ಕನಿಷ್ಟ ಪಕ್ಷ ಎರಡು ಕಾರ್ಯಗಳನ್ನು ಮಾಡಿರಬಹುದೆಂದು ನಾನು ಆಲೋಚಿಸುತ್ತೇನೆ:

   1) ಆತನು ಸಭೆಗೂ ಮತ್ತು ಸಭಾನಾಯಕರುಗಳಿಗೂ ತನ್ನ ಎರಡನೆಯ ಸೇವಾ ಪ್ರಯಾಣದ ವರದಿಯನ್ನು ಸಲ್ಲಿಸಿದನು.

   2) ಆತನು ಸಭೆಯಲ್ಲಿ ಸಭಾಪಾಲಕರುಗಳಲ್ಲಿ ಒಬ್ಬನಾಗಿಯೂ, ಬೋಧಕರುಗಳಲ್ಲಿ ಒಬ್ಬನಾಗಿಯೂ ಮತ್ತು ಪ್ರವಾದಿಗಳಲ್ಲಿ ಒಬ್ಬನಾಗಿಯೂ ಸೇವೆ ಸಲ್ಲಿಸಿದನು.

2. ವ. 24–26 ರಿಂದ ನಾವು ಅಪೊಲ್ಲೋಸನ ಮತ್ತು ಆತನ ಹಿನ್ನಲೆಯ ಕುರಿತು ಈ ಕೆಳಗಿನ ಸಂಗತಿಗಳನ್ನು ಕಲಿಯುತ್ತೇವೆ:

- ಆತನು ಚದುರಿ ಹೋಗಿದ್ದ ಒಬ್ಬ ಯೆಹೂದ್ಯನಾಗಿದ್ದನು.
- ಆತನು ಅಲೆಕ್ಸಾಂದ್ರಿಯದವನಾಗಿದ್ದನು, ಅದು ರೋಮ್ ಸಾಮ್ರಾಜ್ಯದಲ್ಲೇ ಎರಡನೆಯ ಸ್ಥಾನದಲ್ಲಿದ್ದ ಪಟ್ಟಣವಾಗಿತ್ತು ಮತ್ತು ಈಜಿಪ್ಟಿನ ರೋಮ್ ಪ್ರಾಂತ್ಯದ ರಾಜಧಾನಿಯಾಗಿತ್ತು.
- ಆತನು ಒಬ್ಬ ಒಳ್ಳೆಯ ವಾಕ್ಚತುರ್ಯವುಳ್ಳವನಾಗಿದ್ದನು, ಬಹುಶಃ ಹೆಲೆನಿಸ್ಟಿಕ್ ಶೈಲಿಯ ವಾಕ್ಚಾತುರ್ಯತೆಯಲ್ಲಿ ತರಬೇತಿ ಹೊಂದಿದ್ದನು ಮತ್ತು ಆತನು ಬಹಳ ಆಸಕ್ತಿಯಿಂದ ಮಾತನಾಡುತ್ತಿದ್ದನು.
- ಆತನು ದೇವರ ವಾಕ್ಯವನ್ನು (ಹಳೆ ಒಡಂಬಡಿಕೆಯನ್ನು) ಚೆನ್ನಾಗಿ ಅರಿತಿದ್ದನು.
- ಆತನು ಯೇಸು ಕ್ರಿಸ್ತನ ಕುರಿತಾದ ಸುವಾರ್ತೆಯನ್ನು ಸಾರಿದನು. ಹಾಗಾಗಿ ಆತನು ಒಬ್ಬ ವಿಶ್ವಾಸಿಯಾಗಿದ್ದಿರಬೇಕು.
- ಆದರೆ ಕೆಲವು ವಿಚಾರಗಳ ಕುರಿತಾಗಿ ಆತನು ಸ್ವಲ್ಪವೇ ತಿಳುವಳಿಕೆಯುಳ್ಳವನಾಗಿದ್ದನು, ಉದಾಹರಣೆಗೆ ದೀಕ್ಷಾಸ್ನಾನದ ಕುರಿತು. ಹಾಗಾಗಿ ಆತನು ಕ್ರೈಸ್ತ ನಂಬಿಕೆಯ ಕುರಿತು ಮತ್ತು ಜೀವಿತದ ಮಾರ್ಗದ ಕುರಿತಾಗಿ ಹೆಚ್ಚಿನ ಸಂಗತಿಯನ್ನು ಕಲಿಯುವ ಅಗತ್ಯತೆ ಇತ್ತು.

3. ಪ್ರಿಸ್ಕಿಲ ಮತ್ತು ಅಕ್ವಿಲರು ಅಪೊಲ್ಲೋಸನಿಗೆ ದೇವರ ಮಾರ್ಗವನ್ನು ಇನ್ನೂ ನಿಖರವಾಗಿ ವಿವರಿಸಿದರು (ವ. 26). ಅವರು ಬಹುಶಃ ಆತನಿಗೆ ಈ ಕೆಳಗಿನ ವಿಷಯಗಳ ಕುರಿತು ಉಪದೇಶಿಸಿರಬಹುದು:

- ಪವಿತ್ರಾತ್ಮನ ಸುರಿಸಲ್ಪಡುವಿಕೆಯ ಕುರಿತು.
- ಸುವಾರ್ತೆಯು ಕೇವಲ ಯೆಹೂದ್ಯರಿಗೆ ಮಾತ್ರ ಸಂಬಂಧಪಟ್ಟದ್ದಲ್ಲ ಅನ್ಯರಿಗೂ ಸಂಬಂಧಪಟ್ಟಿದೆ. ಅನ್ಯರು ಸುನ್ನತಿಯನ್ನು ಮಾಡಿಸಿಕೊಳ್ಳುವ ಅಗತ್ಯವಿಲ್ಲ.
- ಸಭೆಯು ಎಲ್ಲಾ ಹಿನ್ನಲೆಗಳಿಂದ ಬಂದ ವಿಶ್ವಾಸಿಗಳ ಒಂದು ಅನ್ಯೋನ್ಯತೆಯಾಗಿದೆ.
- ಕ್ರಿಸ್ತೀಯ ಜೀವನವೆಂದರೆ ಆತ್ಮನಲ್ಲಿ ನಡೆಯುವುದು, ದೇವರ ಕೃಪೆಯಡಿಯಲ್ಲಿ ಜೀವಿಸುವುದು – ಯೆಹೂದ್ಯ ನಂಬಿಕೆಯ ನಿಯಮಗಳ ಮೇಲೆ ಆತುಕೊಳ್ಳುವಂತಹದ್ದಲ್ಲ.
- ಕ್ರಿಸ್ತನು ತನ್ನ ರಾಜ್ಯವನ್ನು ಸ್ಥಾಪಿಸಲಿಕ್ಕೆ ಹಿಂತಿರುಗುವನು. ಒಂದು ನೂತನ ಪರಲೋಕ ಮತ್ತು ಭೂಮಿ ಇರುವುದು.

4. ಅಪೊಲ್ಲೋಸನು ಯೆಹೂದ್ಯರೊಂದಿಗೆ ಬಲಯುಕ್ತವಾಗಿ ತರ್ಕಿಸುತ್ತಾ ಹಳೆ ಒಡಂಬಡಿಕೆಯ ವಾಕ್ಯವನ್ನು ತೆಗೆದುಕೊಂಡು ಯೇಸು ಕ್ರಿಸ್ತನೇ ಯೆಹೂದ್ಯರು ಕುತೂಹಲದಿಂದ ಎದುರುನೋಡುತ್ತಿದ್ದ ನಿಜವಾದ ಮೆಸ್ಸೀಯನೆಂದು ದೃಢಪಡಿಸಿವುದರ ಮೂಲಕ (ರೋಮ್ ಪಾಂತ್ಯದ ಅಖಾಯದ ರಾಜಧಾನಿಯಾಗಿದ್ದ) ಕೊರಿಂಥದಲ್ಲಿನ ಸೇವೆಗೆ ಸಹಾಯ ಮಾಡಿದನು.

## ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು

2. ಪ್ರಿಸ್ಕಿಲ ಮತ್ತು ಅಕ್ವಿಲರು ಅಪೊಲ್ಲೋಸನನ್ನು ಮತ್ತು ಆತನ ತಪ್ಪಾದ – ಅಥವಾ ಅಪರಿಪೂರ್ಣ ಬೋಧನೆಗಳನ್ನು ಬಹಿರಂಗವಾಗಿ ವಿರೋಧಿಸುವುದರ ಬದಲಾಗಿ ಅವರು ಆತನನ್ನು ತಮ್ಮ ಮನೆಗೆ ಆಹ್ವಾನಿಸಿದರು. ಅಲ್ಲಿ ಅವರು ಆತನಿಗೆ ಬಹಳ ಸ್ಪಷ್ಟವಾದ ರೀತಿಯಲ್ಲಿ ಯಾವುದೇ ಹೆದರಿಕೆಯ ವಾತಾವರಣವನ್ನುಂಟುಮಾಡದೆ ಎಲ್ಲವನ್ನೂ ವಿವರಿಸಿದರು. ಹಾಗಾಗಿ ಅವರು ಆ ಪರಿಸ್ಥಿತಿಯನ್ನು ಸಕಾರಾತ್ಮಕವಾದ ರೀತಿಯಲ್ಲಿಯೇ ವ್ಯವಹರಿಸಿದರು:

- ಅವರು ಅಪೊಲ್ಲೋಸನನ್ನು ಸಾರ್ವಜನಿಕವಾಗಿ ಅವಮಾನಪಡಿಸಲಿಲ್ಲ. ಇದರ ಪರಿಣಾಮವಾಗಿ ಆತನು ನಿರುತ್ಸಾಹಗೊಳ್ಳಲಿಲ್ಲ. ಅದಕ್ಕೆ ಬದಲಾಗಿ ಆತನು ತನ್ನ ಸೇವೆಯನ್ನು ಇನ್ನೂ ಪರಿಣಾಮಕಾರಿಯಾಗಿ ಮುಂದುವರೆಸಲು ಸಾಧ್ಯವಾಯಿತು.

- ಅವರು ಆತನ ಬೆನ್ನು ಹಿಂದೆ ಹೋಗಿ 'ಈ ಸುಳ್ಳುಬೋಧಕನಾದ ಅಪೊಲ್ಲೋಸನ' ಕುರಿತಾಗಿ ಎಚ್ಚರವಾಗಿರ್ರಿ ಎಂದು ಜನರನ್ನು ಎಚ್ಚರಿಸಲಿಲ್ಲ. ಇದರ ಪರಿಣಾಮವಾಗಿ ಅಪೊಲ್ಲೋಸನ ಸೇವೆಯು ಹಾನಿಗೊಳಗಾಗಲಿಲ್ಲ. ಅದಕ್ಕೆ ಬದಲಾಗಿ ಆತನು ಒಬ್ಬ ಒಳ್ಳೆಯ ಸುವಾರ್ತಾ ಕೆಲಸಗಾರನಾಗುವಂತೆ ಅವರು ತರಬೇತಿಗೊಳಿಸಿದರು.

- ಅವರು ಅಪೊಲ್ಲೋಸನಲ್ಲಿದ್ದ ಸಾಮರ್ಥ್ಯವನ್ನು ನೋಡಿದರು: ಆತನ ಬಲವಾದ ವಾಕ್ಚತುರ್ಯತೆ, ಸೇವೆಯ ಕುರಿತು ಆತನಿಗಿದ್ದ ಉತ್ಸಾಹ, ಹಳೆ ಒಡಂಬಡಿಕೆಯ ವಾಕ್ಯಗಳ ಕುರಿತು ಆತನಿಗಿದ್ದ ಜ್ಞಾನ ಮತ್ತು ಆತನ ಜೀವಿತದ ಮೇಲೆ ಇರುವ ದೇವರ ಕರೆಯುವಿಕೆಯನ್ನು ಕಂಡರು. ಹಾಗಾಗಿ ಅವರು ತಮ್ಮ ಸಮಯವನ್ನು ಆತನೊಂದಿಗೆ ಕಳೆಯಲು ಮತ್ತು ಕ್ರೈಸ್ತ ಸಿದ್ಧಾಂತ, ಸಭೆ ಮತ್ತು ಕ್ರಿಸ್ತೀಯ ಜೀವಿತಗಳ ಕುರಿತು ಆತನಿಗೆ ಹೆಚ್ಚಾಗಿ ಬೋಧಿಸಲು ಮನಸ್ಸುಳ್ಳವರಾಗಿದ್ದರು. ಆತನು ಕೊರಿಂಥಕ್ಕೆ ಹೋಗಿ ಅಲ್ಲಿರುವ ಸೇವೆಗೆ ಸಹಾಯ ಮಾಡಬೇಕೆಂದು ಎಫೆಸವನ್ನು ಬಿಟ್ಟು ಹೊರಡುತ್ತಿದ್ದಾಗ ಮತ್ತು ಆತನ ಕುರಿತು ಒಂದು ಶಿಫಾರಸ್ಸು ಪತ್ರವನ್ನು ಬರೆಯಲೂ ಅವರು ಸಂತೋಷವುಳ್ಳವರಾಗಿದ್ದರು.

ಹಾಗಾಗಿ ನಾವು ಪ್ರಿಸ್ಕಿಲ ಮತ್ತು ಅಕ್ವಿಲರ ಕುರಿತು ಮತ್ತು ಅವರು ನಿಸ್ವಾರ್ಥವಾದ ಮತ್ತು ಜ್ಞಾನವುಳ್ಳ ರೀತಿಯಲ್ಲಿ ಅಪೊಲ್ಲೋಸನನ್ನು ಪ್ರೋತ್ಸಾಹಿಸಿ, ಸಹಾಯಿಸಿ ಮತ್ತು ಉಪದೇಶಿಸಿದ್ದರ ಕುರಿತು ಬಹಳ ಸಂಗತಿಗಳನ್ನು ಕಲಿತುಕೊಳ್ಳಬೇಕಾಗಿದೆ!

# ಉ 51. ಎಫೆಸದಲ್ಲಿ ಪೌಲನು, 19:1–20

## ಇ) ಪಥ್ಯ ಪ್ರಶ್ನೆಗಳು

1. ಪೌಲನು ಎಫೆಸದ 12 ಜನರ ಮೇಲೆ ತನ್ನ ಕೈಗಳನ್ನಿಟ್ಟು ಪ್ರಾರ್ಥಿಸುವುದಕ್ಕಿಂತ ಮುಂಚೆ ಅವರನ್ನು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದ್ದನು (ವ. 5).

2. ಆ ಹನ್ನೆರಡು ಪುರುಷರ ಮೇಲೆ ಪೌಲನು ತನ್ನ ಕೈಗಳನ್ನಿಟ್ಟಾಗ ಪವಿತ್ರಾತ್ಮನು ಅವರ ಮೇಲೆ ಬಂದನು ಮತ್ತು ಅವರು ಅನ್ಯಭಾಷೆಗಳಲ್ಲಿ ಮಾತನಾಡಿದರು ಹಾಗೂ ಪ್ರವಾದಿಸಿದರು (ವ. 6).

3. ಸಭಾಮಂದಿರದ ಕೆಲವು ಸದಸ್ಯರು ಪೌಲನನ್ನು ವಿರೋಧಿಸಿದ್ದರಿಂದ ಪೌಲನು ಎಫೆಸದ ಸಭಾಮಂದಿರದಲ್ಲಿ ತನ್ನ ಸೇವೆಯನ್ನು ನಿಲ್ಲಿಸಿದನು. ಪೌಲನು ನಂಬಿದಂತಹವರನ್ನು ತನ್ನೊಂದಿಗೆ ತರ್ಕಶಾಲೆಗೆ ಕರೆದುಕೊಂಡು ಹೋಗಿ ಅಲ್ಲಿ ಬೋಧಿಸುವುದನ್ನು ಮುಂದುವರೆಸಿದನು (ವ. 9).

4. ಪೌಲನು ತುರನ್ನನ ತರ್ಕಶಾಲೆಯಲ್ಲಿ ಮಾಡಿದ ಚರ್ಚೆಗಳ ಫಲವಾಗಿ ಸುವಾರ್ತೆಯು ರೋಮ್ ಪ್ರಾಂತ್ಯದ ಏಷ್ಯಾ ಭಾಗದಲ್ಲೆಲ್ಲಾ ಯೆಹೂದ್ಯರಿಗೂ ಮತ್ತು ಗ್ರೀಕರಿಗೂ ಸಾರಲ್ಪಟ್ಟಿತು (ವ. 10). ಇದರ ಅರ್ಥ ಜನರು ಪಟ್ಟಣಗಳಿಂದಲೂ ಹಳ್ಳಿಗಳಿಂದಲೂ ಪೌಲನ ಬೋಧನೆಯನ್ನು ಕೇಳಲು ಬಂದಿರಬಹುದು ಮತ್ತು ಅವರು ತಮ್ಮ ಮನೆಗಳಿಗೆ ಹಿಂತಿರುಗಿ ಅಲ್ಲಿ ಸುವಾರ್ತೆಯನ್ನು ಸಾರಿರಬಹುದು. ಹಾಗಾಗಿ ಎಫೆಸದಲ್ಲಿದ್ದ ಪೌಲನ 'ಸತ್ಯವೇದ ಮಹಾವಿದ್ಯಾಲಯವು' ಆ ಪ್ರಾಂತ್ಯವನ್ನು ಸುವಾರ್ತೀಕರಿಸಲು ಒಂದು ಕೇಂದ್ರಸ್ಥಾನವಾಯಿತು.

5. ಎಫೆಸಲ್ಲಿದ್ದ ಯೆಹೂದ್ಯರು ಯೇಸುವಿನ ನಾಮದಲ್ಲಿ ದೆವ್ವಗಳನ್ನು ಓಡಿಸುವುದರಲ್ಲಿ ಸೋತು ಹೋದರು, ಯಾಕೆಂದರೆ ಅವರು ನಿಜವಾದ ವಿಶ್ವಾಸಿಗಳಾಗಿರಲಿಲ್ಲ. ಹಾಗಾಗಿ ದುರಾತ್ಮಗಳು ಅವರ ಮಾತುಗಳನ್ನು ಕೇಳಲಿಲ್ಲ. ಸ್ಕೇವನ ಏಳು ಮಕ್ಕಳು ದುರಾತ್ಮಗಳ ದಾಳಿಗೆ ಒಳಗಾದರು ಮತ್ತು ದುರಾತ್ಮಗಳಿಂದ ಹೊಡೆತವನ್ನೂ ತಿಂದರು.

6. ಎಫೆಸದಲ್ಲಿ ಸುವಾರ್ತೆಯನ್ನು ಅಂಗೀಕರಿಸಿದ್ದ ಮಂತ್ರವಾದಿಗಳು ಬಹಳ ದುಬಾರಿ ಬೆಲೆಯ ಗ್ರಂಥಗಳ ಸುರುಳಿಗಳನ್ನು ಸುಟ್ಟುಹಾಕಿದರು. ಅವರಿಗೆ ಈಗ ಮಾಂತ್ರಿಕ ಸೂತ್ರಗಳನ್ನು ಒಳಗೊಂಡ ತಮ್ಮ ಸುರುಳಿಗಳ ಅವಶ್ಯಕತೆಯಿರಲಿಲ್ಲ, ಹಾಗಾಗಿ ಅವರು ಅವುಗಳನ್ನು ಬಹಿರಂಗವಾಗಿ ಸುಟ್ಟುಬಿಟ್ಟರು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗವನ್ನು ಈ ರೀತಿಯಾಗಿ ರಚಿಸಬಹುದು:

    - ಪೌಲ ಮತ್ತು ಎಫೆಸದ ಹನ್ನೆರಡು ಜನ ಪುರುಷರು, ವ. 1–7
    - ಪೌಲನು ಎಫೆಸದಲ್ಲಿ ಚರ್ಚಿಸಿದನು ಮತ್ತು ಬೋಧಿಸಿದನು, ವ. 8–10
    - ಪೌಲನ ಮೂಲಕ ದೇವರು ಅದ್ಭುತಗಳನ್ನು ಮಾಡುತ್ತಿರುವುದು, ವ. 11–12
    - ಸ್ಕೇವನ ಏಳು ಮಕ್ಕಳು, ವ. 13–16
    - ಎಫೆಸದಲ್ಲಿ ಜನರು, ಮಂತ್ರವಾದಿಗಳೂ ಸಹ, ದೇವರ ಕಡೆಗೆ ತಿರುಗಿಕೊಂಡರು; ಮಾಂತ್ರಿಕ ಸೂತ್ರಗಳುಳ್ಳ ಗ್ರಂಥಗಳು ಸುಡಲ್ಪಟ್ಟವು, ವ. 17–19
    - ಸೇವೆಯ ವಿಸ್ತರಣೆಯ ಕುರಿತು ಸಾರಾಂಶ, ವ. 20

2. ಪೌಲನು ಎಫೆಸಕ್ಕೆ ಬಂದಾಗ ಆತನು ಸಂಧಿಸಿದ ಹನ್ನೆರಡು ಜನರು ವಿಶ್ವಾಸಿಗಳಾಗಿದ್ದರೆಂದು ನಾನು ನಂಬುತ್ತೇನೆ. ನನ್ನ ಈ ನಿಲುವಿಗೆ ಎರಡು ಕಾರಣಗಳಿವೆ:

    1) ಲೂಕನು ಅವರನ್ನು 'ಶಿಷ್ಯರೆಂದು' ಕರೆಯುತ್ತಾನೆ (ವ. 1). ಆತನು ಈ ಪದವನ್ನು ಯೇಸುವಿನ ಮೇಲೆ ನಂಬಿಕೆಯಿಟ್ಟವರ ಕುರಿತು ಮಾತ್ರ ಉಪಯೋಗಿಸುತ್ತಾನೆ.

    2) ಪೌಲನು ಅವರಿಗೆ, 'ನೀವು ವಿಶ್ವಾಸವನ್ನಿಟ್ಟಾಗ ಪವಿತ್ರಾತ್ಮನನ್ನು ಪಡೆದುಕೊಂಡಿರೋ?' ಎಂದು ಕೇಳಿದನು. ಹಾಗಾಗಿ ಪೌಲನು ನಿಶ್ಚಯವಾಗಿ ಅವರನ್ನು ವಿಶ್ವಾಸಿಗಳೆಂದು ಪರಿಗಣಿಸಿದ್ದನು.

    ಆದರೆ ಈ ಕಥೆಯು ಯೇಸುವಿನ ಕುರಿತಾಗಿ ಮತ್ತು ಕ್ರೈಸ್ತ ನಂಬಿಕೆಯ ಕುರಿತಾಗಿ ಅವರ ತಿಳುವಳಿಕೆಯು ಸಂಕುಚಿತವಾಗಿತ್ತು ಎಂಬುದನ್ನೂ ಮತ್ತು ಅವರು ಯಾವ ವಿಧವಾದ ನಂಬಿಕೆಯನ್ನು ಹೊಂದಿದ್ದರೆಂದು ಪೌಲನು ಪ್ರಶ್ನಿಸಿದ್ದನ್ನೂ ತೋರಿಸುತ್ತದೆ.

    ಇದರ ಕುರಿತು ಜಾನ್ ಸ್ಟಾಟ್‌ರವರು ಮತ್ತು ಇತರೆ ಸತ್ಯವೇದ ಶಾಸ್ತ್ರಜ್ಞರು ಒಂದು ವ್ಯತ್ಯಾಸವಾದ ಅಭಿಪ್ರಾಯವನ್ನು ಹೊಂದಿದ್ದಾರೆ: ಎಫೆಸದ ಆ ಹನ್ನೆರಡು ಪುರುಷರು ಸ್ನಾನಿಕನಾದ ಯೋಹಾನನ ಶಿಷ್ಯರಾಗಿದ್ದರೇ ಹೊರತು 'ಯೇಸುವಿನಲ್ಲಿ ವಿಶ್ವಾಸವಿಟ್ಟವರಾಗಿರಲಿಲ್ಲವೆಂದು' ಅವರು ಆಲೋಚಿಸುತ್ತಾರೆ.

3. ಈಗಾಗಲೇ ಆ ಹನ್ನೆರಡು ಪುರುಷರು 'ಸ್ನಾನಿಕನಾದ ಯೋಹಾನನ ದೀಕ್ಷಾಸ್ನಾನವನ್ನು'" ಹೊಂದಿದ್ದರು. ಆದರೆ ಯೋಹಾನನ ದೀಕ್ಷಾಸ್ನಾನವು 'ಕ್ರೈಸ್ತ ದೀಕ್ಷಾಸ್ನಾನವಾಗಿರಲಿಲ್ಲ'. ಅದು ಕೇವಲ ಮೆಸ್ಸೀಯನ ಬರೋಣಕ್ಕಾಗಿ ಒಂದು ಸಿದ್ಧತೆ ಮಾತ್ರವಾಗಿತ್ತು. ಯೋಹಾನನಿಂದ ದೀಕ್ಷಾಸ್ನಾನವನ್ನು ಹೊಂದಿದವರು ತಮ್ಮ ಹಳೆಯ

ಜೀವಿತಕ್ಕಾಗಿ ಪಶ್ಚಾತ್ತಾಪಪಟ್ಟು ಮೆಸ್ಸೀಯನನ್ನು ಸ್ವೀಕರಿಸಲು ತಮ್ಮನ್ನು ತಾವು ಸಿದ್ಧಮಾಡಿಕೊಂಡಿದ್ದರು. ಹಾಗಾಗಿ ಪೌಲನು ಎಫೆಸದ ಹನ್ನೆರಡು ಪುರುಷರಿಗೆ ಹೀಗೆ ವಿವರಿಸಿರಬೇಕು: ಮೆಸ್ಸೀಯನಾದ ಯೇಸು ಈಗಾಗಲೇ ಬಂದಿರುವುದರಿಂದ – ಅವರು ಆತನನ್ನು ನಂಬುವದು ಮಾತ್ರವಲ್ಲದೆ, ಆತನ ಕ್ಷಮಾಪಣೆಯನ್ನೂ ಹೊಂದಿಕೊಳ್ಳಬೇಕು ಮತ್ತು ಆತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು, ತಮ್ಮ ಹಳೆಯ ಜೀವಿತವನ್ನು ಹೂಣಿಟ್ಟು ಕ್ರಿಸ್ತನೊಂದಿಗಿನ ಹೊಸ ಜೀವಿತಕ್ಕೆ ನೀರಿನಿಂದ ಎದ್ದು ಬರಬೇಕು. ಹಾಗಾಗಿ ಪೌಲನು ಆ ಪುರುಷರಿಗೆ 'ಮರುದೀಕ್ಷಾಸ್ನಾನವನ್ನು' ಮಾಡಿಸಲಿಲ್ಲ. ಈಗ ಅವರು ಮೊದಲ ಬಾರಿಗೆ ಕ್ರೈಸ್ತ ವಿಶ್ವಾಸಿಗಳಾಗಿ ದೀಕ್ಷಾಸ್ನಾನವನ್ನು ಹೊಂದಿದರು.

4. ಪೆಂತಕೋಸ್ತರಲ್ಲದ ಸತ್ಯವೇದ ಶಾಸ್ತ್ರಜ್ಞರು (ಉದಾ: ಎಫ್. ಎಫ್. ಬ್ರೂಸ್ ಮತ್ತು ಜಾನ್ ಸ್ಟಾಟ್‌ರವರು) ಘೋಷಿಸುವುದೇನೆಂದರೆ, ಎಫೆಸದ ಆ ಹನ್ನೆರಡು ಜನರ ಮೇಲೆ ಪವಿತ್ರಾತ್ಮನು ಬಂದಿದ್ದರ ಕುರಿತಾದ ಈ ಕಥೆಯು 'ಪವಿತ್ರಾತ್ಮನ ದೀಕ್ಷಾಸ್ನಾನವು' ವ್ಯತ್ಯಾಸವಾದ 'ಎರಡನೇಯ ಅನುಭವ'ವಾಗಿರದೆ ಒಬ್ಬನು ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವಾಗಲೇ ಪಡೆಯುವ ಅನುಭವವೆಂದು ಸಾಬೀತುಪಡಿಸುತ್ತದೆ; ಅವರೊಂದಿಗೆ ನಾನು ಒಪ್ಪಿಕೊಳ್ಳುವುದಿಲ್ಲ.

ಈ ಕಥೆಯಲ್ಲಿ ಕಂಡು ಬರುವ ಪವಿತ್ರಾತ್ಮನ ಪಾತ್ರದ ಕುರಿತು ಈ ರೀತಿಯಾಗಿ ಅರ್ಥೈಸಿಕೊಳ್ಳುವುದು ಉತ್ತಮವಾದುದ್ದೆಂದು ನಾನು ಆಲೋಚಿಸುತ್ತೇನೆ:

- ಪೌಲನು ಎಫೆಸಕ್ಕೆ ಬಂದಾಗ ವಿಶ್ವಾಸಿಗಳೆಂದು ಘೋಷಿಸಿಕೊಂಡಂತಹ ಹನ್ನೆರಡು ಪುರುಷರನ್ನು ಭೇಟಿಯಾದನು. ಲೂಕನು ಅವರನ್ನು 'ಶಿಷ್ಯರೆಂದೂ' ಕರೆಯುತ್ತಾನೆ. ಹಾಗಾಗಿ ಅವರು – ಸ್ವಲ್ಪ ಮಟ್ಟಿಗಾದರೂ – ಕ್ರಿಸ್ತನಲ್ಲಿ ವಿಶ್ವಾಸಿವಿಟ್ಟವರಾದ್ದರೆಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ಆದರೆ ಪೌಲನು ಅವರ ಕುರಿತಾಗಿ ಸಂಶಯಪಟ್ಟನು. ಬಹುಶಃ ಅವರ ಜೀವಿತದಲ್ಲಿ ಪವಿತ್ರಾತ್ಮನು ಕಾರ್ಯಮಾಡುತ್ತಿರುವುದನ್ನು ಆತನು ಕಾಣಲಿಲ್ಲ. ಹಾಗಾಗಿ ಆತನು ಅವರಿಗೆ, 'ನೀವು ವಿಶ್ವಾಸವನ್ನಿಟ್ಟಾಗ ಪವಿತ್ರಾತ್ಮನನ್ನು ಪಡೆದುಕೊಂಡಿರೋ?' ಎಂದು ಕೇಳಿದನು. ನಾವು ಈ ಪ್ರಶ್ನೆಯನ್ನು ಈ ರೀತಿಯಾಗಿ ಅರ್ಥಮಾಡಿಕೊಳ್ಳಬೇಕೆಂದು ನಾನು ಆಲೋಚಿಸುತ್ತೇನೆ: 'ನೀವು ನಿಜವಾಗಲೂ ಹೊಸದಾಗಿ ಹುಟ್ಟಿದ ವಿಶ್ವಾಸಿಗಳಾಗಿದ್ದೀರೋ? ನೀವು ಯೇಸುವನ್ನು ನಿಜವಾಗಲೂ ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದ್ದೀರೋ? ನೀವು ನಿಜವಾಗಲೂ ಆತ್ಮನಿಂದ ಹುಟ್ಟಿದ್ದೀರೋ? ಪವಿತ್ರಾತ್ಮನು ನಿಮ್ಮೊಳಗೆ ವಾಸಿಸುತ್ತಿರುವುದನ್ನು ನಿಮ್ಮ ಜೀವಿತಗಳು ತೋರಿಸುತ್ತಿಲ್ಲ!' ಅವರ ಗೊಂದಲವನ್ನು ಅವರ ಉತ್ತರವು ಪೌಲನಿಗೆ ವ್ಯಕ್ತಪಡಿಸಿತು ('ಪವಿತ್ರಾತ್ಮ ಇದ್ದಾನೆಂಬುವುದನ್ನು ನಾವು ಕೇಳಿಯೇ ಇಲ್ಲ'). ಹಾಗಾಗಿ ಆತನು ಮತ್ತೊಮ್ಮೆ ಅವರಿಗೆ, 'ನೀವು ಯಾವ ದೀಕ್ಷಾಸ್ನಾನವನ್ನು ಪಡೆದುಕೊಂಡಿದ್ದೀರಿ?' ಎಂದು ಕೇಳಿದನು. ನಾವು ಪೌಲನ ಪ್ರಶ್ನೆಯನ್ನು ಹೀಗೆ ಅರ್ಥಮಾಡಿಕೊಳ್ಳಬೇಕೆಂದು ನಾನು ಆಲೋಚಿಸುತ್ತೇನೆ: 'ನೀವು ನಿಮ್ಮನ್ನು ವಿಶ್ವಾಸಿಗಳು ಮತ್ತು ಶಿಷ್ಯರು ಎಂದು ಕರೆದುಕೊಳ್ಳುತ್ತೀರಿ! ಆದರೆ

ನೀವು ದೀಕ್ಷಾಸ್ನಾನ ಹೊಂದಿದ್ದೀರೋ? ನೀವು ದೀಕ್ಷಾಸ್ನಾನ ಹೊಂದುವುದಕ್ಕಿಂತ ಮುಂಚೆ ಯೇಸುವಿನ ಮತ್ತು ಆತನ ರಕ್ಷಣೆಯ ಕುರಿತಾದ ಉಪದೇಶವನ್ನು ಹೊಂದಿದಿರೋ?' ಅವರು ಆತನಿಗೆ, 'ಖಂಡಿತವಾಗಲೂ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಿದ್ದೇವೆ! ನಾವು ಯೋಹಾನನ ದೀಕ್ಷಾಸ್ನಾನವನ್ನು ಹೊಂದಿದ್ದೇವೆ!' ಆಗ ಪೌಲನು ಯೇಸುವಿನ ಮತ್ತು ಆತನ ರಕ್ಷಣೆಯ ಕುರಿತು ಅವರಿಗೆ ಬೋಧಿಸಿದನು. ಅದರ ಪರಿಣಾಮವಾಗಿ ಅವರು ಹೊಸದಾಗಿ ಹುಟ್ಟಿದರು, ಅವರು 'ಆತ್ಮನಿಂದ ಹುಟ್ಟಿದರು' ಮತ್ತು ಪೌಲನು ಅವರನ್ನು ಯೇಸುವಿನ, ಆತನ ರಕ್ಷಣೆ ಮತ್ತು ಆತನ ರಾಜ್ಯಕ್ಕೆ ದೀಕ್ಷಾಸ್ನಾನ ಮಾಡಿಸಿದನು ('ಕರ್ತನಾದ ಯೇಸುವಿನ ಹೆಸರಿನಲ್ಲಿ'). ಎಫೆಸದಿಂದ ಬಂದ ಹನ್ನೆರಡು ಪುರುಷರು ಪವಿತ್ರಾತ್ಮನೊಂದಿಗೆ ಹೊಂದಿದ 'ಮೊದಲ ಅನುಭವ' ಅದಾಗಿತ್ತು. ಈಗ ಅವರು ತಮ್ಮ ಜೀವಿತದೊಳಗೆ 'ಪವಿತ್ರಾತ್ಮನನ್ನು ಸ್ವೀಕರಿಸಿದರು'. ಈಗ ಅವರು ನಿಜವಾಗಲೂ ರಕ್ಷಣೆ ಹೊಂದಿದ್ದರು.

- ನಂತರ ಪೌಲನು ಆ ಹನ್ನೆರಡು ಪುರುಷರ ಮೇಲೆ ತನ್ನ ಕೈಗಳನ್ನಿಟ್ಟನು. ಅವರು ಪವಿತ್ರಾತ್ಮನಿಂದ ದೀಕ್ಷಾಸ್ನಾನ ಹೊಂದಬೇಕೆಂದೂ, ಪರಲೋಕದ ಶಕ್ತಿಯೊಡನೆ ಹೊದಿಸಲ್ಪಡಬೇಕೆಂದೂ, ಸೇವೆಗಾಗಿ ಪವಿತ್ರಾತ್ಮನ ಅಭಿಷೇಕವನ್ನು ಹೊಂದಬೇಕೆಂದೂ ಆತನು ಅವರಿಗಾಗಿ ಪ್ರಾರ್ಥಿಸಿದನು. ಪವಿತ್ರಾತ್ಮನು ಅವರ ಮೇಲೆ ಇಳಿದು ಬಂದನು, ಅವರು ಅನ್ಯಭಾಷೆಗಳಲ್ಲಿ ಮಾತನಾಡಿ ಪ್ರವಾದಿಸಿದರು. ಎಫೆಸದಿಂದ ಬಂದ ಹನ್ನೆರಡು ಪುರುಷರು ಪವಿತ್ರಾತ್ಮನೊಂದಿಗೆ ಹೊಂದಿದ 'ಎರಡನೆಯ ಅನುಭವ' ಇದಾಗಿತ್ತು. ಈಗ ಅವರು ತಮ್ಮ ಜೀವಿತದೊಳಗೆ (ಪವಿತ್ರಾತ್ಮನ) ಬಲವನ್ನು ಸ್ವೀಕರಿಸಿದರು. ಅವರು ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿದ್ದರು.

- ಅದಲ್ಲದೆ ಆ ಹನ್ನೆರಡು ಪುರುಷರು ಪವಿತ್ರಾತ್ಮನೊಂದಿಗೆ 'ಮೂರನೆಯ ಅನುಭವ'ವನ್ನೂ ಹೊಂದಿದರೆಂದು ನಾನು ಭಾವಿಸುತ್ತೇನೆ: ಆತ್ಮನೊಂದಿಗೆ ನಡೆಯುವ ಮತ್ತು ತಮ್ಮ ಜೀವಿತದೊಳಗೆ ಪವಿತ್ರಾತ್ಮನ ಫಲವು ಹರಿಯುವ ಅನುಭವ. ಪವಿತ್ರಾತ್ಮನ ಕಾರ್ಯವಾದ ಈ ಅಂಶವು ಈ ಕಥೆಯಲ್ಲಿ ತಿಳಿಸಲ್ಪಟ್ಟಿಲ್ಲ, ಆದರೆ ಇದು ಎಲ್ಲಾ ನಿಜವಾದ ವಿಶ್ವಾಸಿಗಳಲ್ಲಿ ಕಂಡುಬರಬೇಕಾದ ಸಂಗತಿಯಾಗಿದೆ!

5. ಈ ವಾಕ್ಯಭಾಗದಲ್ಲಿ (ವ. 5) ಪೌಲನು ಆ ಹನ್ನೆರಡು ಪುರುಷರನ್ನು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು. ವಾಸ್ತವಿಕವಾಗಿ, ಲೂಕನು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ದೀಕ್ಷಾಸ್ನಾನದ ಸಂಕ್ಷಿಪ್ತ ಸೂತ್ರವನ್ನು ಮಾತ್ರ ಬಳಸುತ್ತಾನೆ (2:38; 8:16; 10:48; 19:5). ಹೊಸ ಒಡಂಬಡಿಕೆಯಲ್ಲಿ ದೀರ್ಘ ಸೂತ್ರವು ಕೇವಲ ಒಂದು ಬಾರಿ ಬಳಸಲ್ಪಟ್ಟಿದೆ – ಯೇಸುವಿನಿಂದ ಮಹಾ ಆದೇಶವನ್ನು ಕೊಡುವ ಸಂದರ್ಭದಲ್ಲಿ (ಮತ್ತಾಯ. 28:19). ಹಾಗಾಗಿ ಇದು 'ಯೇಸುವಿನ ಹೆಸರಲ್ಲಿ ಮಾತ್ರ' ಎಂಬ ದೃಷ್ಟಿಕೋನವನ್ನು ಪುಷ್ಟೀಕರಿಸುತ್ತದೋ? ಬಹುತೇಕವಾಗಿ ಹೊಸ ಒಡಂಬಡಿಕೆಯ ಕಾಲದಲ್ಲಿ ಎರಡೂ ಸೂತ್ರಗಳು ಬಳಸಲ್ಪಡುತ್ತಿದ್ದವು.

ನಾವು ಯೇಸುವಿನ ಮಾತುಗಳನ್ನು ಪಾಲಿಸುತ್ತಾ ಜನರನ್ನು 'ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ' ದೀಕ್ಷಾಸ್ನಾನ ಮಾಡಿಸಬೇಕೆಂಬುದು ನನ್ನ ಸಲಹೆಯಾಗಿದೆ.

'ಯೇಸು ಮಾತ್ರ ಚಳುವಳಿಗೆ' ('ಏಕತ್ವ ಪೆಂತಕೋಸ್ತದವರಿಗೆ' ಅಥವಾ 'ಯುನೈಟೆಡ್ ಪೆಂಟಿಕೋಸ್ಟಲ್ ಸಭೆಗೆ') ಅಂಟಿಕೊಂಡಿರುವ ಮುಖ್ಯ ಸಮಸ್ಯೆಯು ದೀಕ್ಷಾಸ್ನಾನದ ಸಂಕ್ಷಿಪ್ತ ಸೂತ್ರವಲ್ಲ, ಬದಲಾಗಿ ಅದರ ಹಿಂದೆ ಅವರು ಬಳಸುವ ದೈವಶಾಸ್ತ್ರೀಯ ಸಿದ್ಧಾಂತವಾಗಿದೆ. ಅವರು ಮುಖ್ಯ ಕ್ರೈಸ್ತ ಸಿದ್ಧಾಂತವಾದ ದೇವರ 'ತ್ರೈಯೇಕತ್ವವನ್ನು' ಅಲ್ಲಗಳೆಯುತ್ತಾರೆ ಮತ್ತು ಅವರು ಘೋಷಿಸುವುದೇನೆಂದರೆ, ದೇವರು 'ಒಬ್ಬನೇ' ಆತನ ಸರಿಯಾದ ಮತ್ತು ಪೂರ್ಣ ಹೆಸರು 'ಯೇಸು' ಎಂಬುದಾಗಿದೆ. ಇದೊಂದು ಸುಳ್ಳುಬೋಧನೆ! ಮುಂಚೆ ದೀರ್ಘ ಸೂತ್ರದಲ್ಲಿ ದೀಕ್ಷಾಸ್ನಾನ ಹೊಂದಿದವರನ್ನು ಮರುದೀಕ್ಷಾಸ್ನಾನ ಮಾಡಿಸುವ ಅವರ ಅಭ್ಯಾಸವೂ ತಪ್ಪಾದದ್ದು.

6. ಅ. ಕೃ. 19:11–12 (ಎಫೆಸದಲ್ಲಿ ಪೌಲನು ಸೇವೆ ಮಾಡಿದ್ದು) ಮತ್ತು ಅ. ಕೃ. 19:5:15–16 (ಪೇತ್ರನು ಯೆರೂಸಲೇಮಿನಲ್ಲಿ ಸೇವೆ ಮಾಡಿದ್ದು) ಎರಡೂ ವಾಕ್ಯಭಾಗಗಳು ಒಂದಕ್ಕೊಂದು ಕುತೂಹಲಕರವಾಗಿ ಏಕರೀತಿಯಾಗಿವೆ. ಈ ಎರಡೂ ಶ್ರೇಷ್ಟ ಅಪೋಸ್ತಲರುಗಳು ಮಾಡಿದ ಸೇವೆಗಳ ನಡುವೆ ಇರುವ ಸಮಾಂತರತೆಗಳನ್ನು ಒತ್ತಿ ಹೇಳಲು ಲೂಕನು ಉದ್ದೇಶಪೂರ್ವಕವಾಗಿ ಹೀಗೆ ಬರೆದಿದ್ದಾನೆ. ಪೇತ್ರ ಮತ್ತು ಪೌಲರ ನಡುವಿನ ಇನ್ನೂ ವಿವರವುಳ್ಳ ಹೋಲಿಕೆಗಾಗಿ ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದಲ್ಲಿರುವ ***'ಅಪೋಸ್ತಲರ ಕೃತ್ಯಗಳು ಪುಸ್ತಕದ ರಚನೆ'*** ಎಂಬ ಅಧ್ಯಾಯವನ್ನು ನೋಡಿರಿ.

7. ಈ ವಾಕ್ಯಭಾಗದ ಕೊನೆಯ ವಚನವು ಲೂಕನು ಚಿತ್ರಿಸುತ್ತಿರುವ ಸುವಾರ್ತೆಯ ಮಹಿಮೆಯುಳ್ಳ ವಿಸ್ತರಣೆಯ ಐದನೆಯ ಚಿತ್ರಣವನ್ನು ಮುಕ್ತಾಯಗೊಳಿಸುತ್ತದೆ.

    - ಈ ಐದನೆಯ ಚಿತ್ರಣವನ್ನು ಲೂಕನು ಅ. ಕೃ. 16:16 ರಲ್ಲಿ ಚಿತ್ರಿಸಲು ಪ್ರಾರಂಭಿಸಿದನು.
    - ಈ ಐದನೆಯ ಚಿತ್ರಣದಲ್ಲಿ ಸುವಾರ್ತೆಯು ಹೇಗೆ ದಕ್ಷಿಣದ ಕಡೆಗೆ ಅನ್ಯ ಲೋಕವಾದ ಯೂರೋಪಿನೊಳಗೆ ಕೊಂಡೊಯ್ಯಲ್ಪಟ್ಟಿತೆಂದು ಲೂಕನು ತನ್ನ ಓದುಗರಿಗೆ ತಿಳಿಸುತ್ತಾನೆ. ತನ್ನ ಆರನೆಯ ಮತ್ತು ಕೊನೆಯ ಚಿತ್ರಣದಲ್ಲಿ, ಲೂಕನು ಪೌಲನನ್ನು ಮತ್ತು ಸುವಾರ್ತೆಯನ್ನು ರೋಮ್‌ನತ್ತ ಕೊಂಡೊಯ್ದ ಘಟನೆಗಳನ್ನು ವಿವರಿಸುತ್ತಾನೆ. ಲೂಕನು ಅದನ್ನು ಹೇಗೆ ಪ್ರಾರಂಭಿಸುತ್ತಾನೆ ಎಂಬುದನ್ನು ಗಮನಿಸಿರಿ: 'ಇದೆಲ್ಲಾ ಸಂಭವಿಸಿದ ನಂತರ ಮಕೆದೋನಿಯ ಮತ್ತು ಅಖಾಯದ ಮಾರ್ಗವಾಗಿ ಯೆರೂಸಲೇಮಿಗೆ ಹೋಗಲು ಪೌಲನು ನಿರ್ಧರಿಸಿದನು' (19:21).

# ಉ 52. ಎಫೆಸದಲ್ಲಿ ದಂಗೆ, 19:21–41

## ಇ) ಪಠ್ಯ ಪ್ರಶ್ನೆಗಳು

2. ದೆಮೆತ್ರಿಯನು ಎಫೆಸದಲ್ಲಿ ಒಬ್ಬ ಅಕ್ಕಸಾಲಿಗನಾಗಿದ್ದನು. ಬಹುಶಃ ಆತನು ಆ ವರ್ಷದ ಅಕ್ಕಸಾಲಿಗರ ಸಂಘದ ಅಧ್ಯಕ್ಷನಾಗಿರಬೇಕು.

3. ಪೌಲ ಮತ್ತು ಇತರ ವಿಶ್ವಾಸಿಗಳು ಸುವಾರ್ತೆಯನ್ನು ಸಾರುವದರ ಮೂಲಕ ಅವರ ದೇವತೆಯಾದ ಅರ್ತೆಮಿಗೆ ಅವಮಾನ ಮಾಡಿದರೆಂದು ಹೇಳಿ ದೆಮೆತ್ರಿಯನು ಜನರ ಮನವೊಲಿಸಿದಾಗ ಜನರು ಉಗ್ರರಾದರು. ಅದಕ್ಕಾಗಿಯೇ ಅವರು 'ಎಫೆಸದ ಅರ್ತೆಮಿದೇವಿಯೇ ಮಹಾದೇವಿ!' ಎಂದು ಆರ್ಭಟಿಸಿದರು.

4. ಪೌಲನು ಜನಸಮೂಹದ ಮುಂದೆ ತನ್ನ ಪರವಾಗಿ ಪ್ರತಿವಾದಿಸಲು ಕ್ರೀಡಾಂಗಣಕ್ಕೆ ಹೋಗಬೇಕೆಂದಿದ್ದನು, ಆದರೆ ಆತನ ಸ್ನೇಹಿತರು (ವಿಶ್ವಾಸಿಗಳು ಮತ್ತು ಕೆಲವು ಪ್ರಮುಖ ಅನ್ಯ ಅಧಿಕಾರಿಗಳು) ಅಂತಹ ಅಪಾಯ ತೆಗೆದುಕೊಳ್ಳದಂತೆ ಆತನನ್ನು ಒಡಂಬಡಿಸಿದರು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನನ್ನು ಆಪಾದಿಸಲು ದೆಮೆತ್ರಿಯನು ಉಪಯೋಗಿಸಿದ ವಾದಗಳು ಹೀಗಿವೆ:
   - ವಿಗ್ರಹಗಳು ದೇವರೇ ಅಲ್ಲ ಎಂದು ಹೇಳುತ್ತಾ ಪೌಲನು ಜನರನ್ನು ಅರ್ತೆಮಿಯ ಆರಾಧನೆಯಿಂದ ಅಗಲಿಸುತ್ತಿದ್ದಾನೆ.
   - ಇದು ಅರ್ತೆಮಿ ಮಹಾದೇವಿಗೂ ಮತ್ತು ಪ್ರಾಚೀನ ಯುಗದ ಏಳು ಅದ್ಭುತಗಳಲ್ಲಿ ಒಂದಾದ ಮತ್ತು ಪ್ರಮುಖವಾದ ಯಾತ್ರಾ ಸ್ಥಳವಾದ ಆಕೆಯ ಗುಡಿಗೂ ಅಗೌರವವನ್ನು ತರುವುದು.
   - ಆಗ ಜನರು ಅರ್ತೆಮಿ ದೇವಿಯ ಬೆಳ್ಳಿ ಮೂರ್ತಿಗಳನ್ನು ಮತ್ತು ಬೆಳ್ಳಿ ಗುಡಿಗಳನ್ನು ಕೊಂಡುಕೊಳ್ಳುವುದನ್ನು ನಿಲ್ಲಿಸಿಬಿಡುವರು – ಮತ್ತು ಇದರಿಂದ ಅಕ್ಕಸಾಲಿಗರು ಮತ್ತು ಇತರೆ ಶಿಲ್ಪಿಗಳು ತಮ್ಮ ಲಾಭದಾಯಕ ವ್ಯಾಪಾರವನ್ನು ಕಳೆದುಕೊಳ್ಳುವರು.

2. ಈ ಮೂರೂ ಅಂಶಗಳನ್ನು ನೋಡುವಾಗ ದೆಮೆತ್ರಿಯನ ಆಪಾದನೆಯು ನ್ಯಾಯವಾದದ್ದೆಂದು ನಾನು ಆಲೋಚಿಸುತ್ತೇನೆ:

- ಜನರು ಸುವಾರ್ತೆಯನ್ನು ಅಂಗೀಕರಿಸುವಾಗ ಅವರು ವಿಗ್ರಹ ಆರಾಧನೆಗಳಿಂದ ದೂರ ಸರಿಯುತ್ತಾರೆ. ಅದಕ್ಕೆ ಬದಲಾಗಿ ಅವರು ಒಬ್ಬನೇ ನಿಜ ದೇವರನ್ನು ಆರಾಧಿಸುತ್ತಾರೆ. ವಿಗ್ರಹಗಳು ನಿಜವಾಗಲೂ ದೇವರೇ ಅಲ್ಲ! ಪೌಲನು ಇದನ್ನೇ ಘೋಷಿಸಿದ್ದಿರಬೇಕು.
- ಜನರು ಸುವಾರ್ತೆಯನ್ನು ಅಂಗೀಕರಿಸುವಾಗ ಅವರು ತಮ್ಮ ಹಳೆಯ ಧಾರ್ಮಿಕ ಆಚರಣೆಗಳನ್ನು, ವಿಗ್ರಹಗಳನ್ನು ಅಥವಾ ದೇವಾಲಯಗಳನ್ನು ಎಷ್ಟರ ಮಟ್ಟಿಗೂ ಗೌರವಿಸುವುದಿಲ್ಲ.
- ಜನರು ತಮ್ಮ ಹಳೆಯ ಧಾರ್ಮಿಕ ಆಚರಣೆಗಳನ್ನು ಪಾಲಿಸದೆ ಇರುವಾಗ ಅವರು ಯಾತ್ರೆಗಳಿಗಾಗಿ ಮತ್ತು ವಿಗ್ರಹಗಳಿಗಾಗಿ ಎಂದಿಗೂ ಹಣವನ್ನು ವ್ಯಯಮಾಡುವುದಿಲ್ಲ.

ಆದರೆ ದೆಮೆತ್ರಿಯನು ಸತ್ಯವನ್ನು ನುಡಿದಿದ್ದರೂ ತಾನು ಜನರ ಗುಂಪನ್ನು ಕೋಪಗೊಳಿಸಿ ಗಲಭೆಯನ್ನು ಎಬ್ಬಿಸಿದ್ದು ತಪ್ಪಾದದ್ದು.

3. ಪಟ್ಟಣದ ಅಧಿಕಾರಿಯು ಜನರ ಗುಂಪನ್ನು ಸುಮ್ಮನಾಗಿಸಲು ಈ ಕೆಳಗಿನ ವಾದಗಳನ್ನು ಉಪಯೋಗಿಸಿದನು:
    - ಎಫೆಸ ಪಟ್ಟಣವು ವಿಶ್ವವಿಖ್ಯಾತವಾದ ಅರ್ತೆಮಿ ದೇವಿಯ ಮಂದಿರಕ್ಕೂ ಹಾಗೂ ಆಕೆಯ ಅದ್ಭುತವಾದ ಮೂರ್ತಿಗೂ ಪ್ರಸಿದ್ಧವಾಗಿದೆ ಎಂಬುದನ್ನು ಎಲ್ಲರೂ ತಿಳಿದಿದ್ದಾರೆ. ಈ ಸಂಗತಿಯನ್ನು ಯಾರೂ ಅಲ್ಲಗಳೆಯುತ್ತಿಲ್ಲ.
    - ಹಾಗಾಗಿ ಜನರು ಗಲಭೆಯನ್ನು ಎಬ್ಬಿಸಿ ಸಮಸ್ಯೆಯನ್ನುಂಟು ಮಾಡಲು ಯಾವ ಕಾರಣವೂ ಇಲ್ಲ.
    - ಪೌಲ ಮತ್ತು ಆತನ ಸಂಗಡಿಗರು ನಮ್ಮ ಗುಡಿ ಕಳ್ಳರಲ್ಲ ಮತ್ತು ನಮ್ಮ ದೇವತೆಯ ದೂಷಕರೂ ಅಲ್ಲ.
    - ದೆಮೆತ್ರಿಯನಿಗೂ ಅವನ ಜೊತೆ ಕೆಲಸದವರಿಗೂ ಯಾವುದೇ ವ್ಯಕ್ತಿಯ ವಿರುದ್ಧ ಏನಾದರೂ ಆಪಾದನೆಗಳಿದ್ದರೆ ಅವರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಿ.

4. ಪಟ್ಟಣದ ಅಧಿಕಾರಿಯ ವಾದವು ಹೆಚ್ಚುಕಡಿಮೆ ಸರಿಯಾದದ್ದೆಂದು ನಾನು ಆಲೋಚಿಸುತ್ತೇನೆ:
    - ಆತನ ಮೊದಲ ಎರಡು ವಾದಗಳು ಸರಿಯಾದವುಗಳು.
    - ಆತನ ಮೂರನೆಯ ವಾದವು ಪೌಲನು ವಿಗ್ರಹಾರಾಧನೆಯ ವಿರುದ್ಧ ಮಾತನಾಡಿದನು ಎಂಬ ಆಪಾದನೆಯನ್ನು ಕೈಬಿಡುತ್ತದೆ. ಪೌಲನು ಯಾವ ಗುಡಿಯ ಕಳ್ಳತನವನ್ನೂ ಮಾಡಲಿಲ್ಲ ಎಂಬುದು ಸರಿಯಾದದ್ದು. ಪೌಲನು ಸಾಮಾನ್ಯವಾಗಿ ವಿಗ್ರಹಗಳು ನಿಜ ದೇವರುಗಳಲ್ಲ ಮತ್ತು ಒಬ್ಬನೇ ನಿಜವಾದ ಮತ್ತು ಜೀವಿಸುವ ದೇವರು ಇದ್ದಾನೆಂದು ಹೇಳಿದಾಗ್ಯೂ, ಆತನು ಅರ್ತೆಮಿ ದೇವಿಯನ್ನು ದೂಷಿಸಲಿಲ್ಲವೆಂದು ನಾನು ಭಾವಿಸುತ್ತೇನೆ.
    - ಆತನ ಕೊನೆಯ ವಾದವು ಅತೀ ಜಾಣ್ಮೆಯುಳ್ಳದ್ದಾಗಿತ್ತು. ಎಫೆಸವು ರೋಮ್ ಪ್ರಾಂತ್ಯದ ಏಷ್ಯಾದ ರಾಜಧಾನಿಯಾಗಿತ್ತು ಮತ್ತು ರೋಮ್ ಸಾಮ್ರಾಜ್ಯದಲ್ಲಿ ಅತೀ

ಪ್ರಾಮುಖ್ಯವಾದ ಪಟ್ಟಣವಾಗಿತ್ತು. ಗಲಭೆ ಎಬ್ಬಿಸುವುದು ಗಂಭೀರವಾದ ಸಂಗತಿಯಾಗಿತ್ತು. ತಪ್ಪು ಮಾಡಿದವರ ವಿರುದ್ಧ ಮಾಡಲ್ಪಟ್ಟ ಆಪಾದನೆಗಳನ್ನು ವ್ಯವಹರಿಸುವುದಕ್ಕೋಸ್ಕರ ನ್ಯಾಯಾಲಯಗಳು ಇದ್ದವು.

5. ಪೌಲನು ಈ ಕಥೆಯಲ್ಲಿ ಒಂದು ಚಿಕ್ಕ ಪಾತ್ರವನ್ನು ಮಾತ್ರ ನಿರ್ವಹಿಸುತ್ತಾನೆ. ಆತನು ಗಲಭೆಯ ಕಾರಣಕರ್ತನೆಂದು ತಿಳಿಸಲ್ಪಟ್ಟಿದ್ದಾನೆ. ಆದರೆ ಅಲ್ಲಿ ಸಂಭವಿಸಿದ ಸಂಗತಿಗಳಲ್ಲಿ ಆತನು ಭಾಗಿಯಾಗಲಿಲ್ಲ. ಆತನು ಕ್ರೀಡಾಂಗಣಕ್ಕೆ ಹೋಗಿ ಜನರ ಮುಂದೆ ನಿಂತು ಮಾತನಾಡಬೇಕೆಂದು ಬಯಸಿದಾಗ, ಅಲ್ಲಿರುವ ಬಹಳ ಅಪಾಯಕಾರವಾದ ಪರಿಸ್ಥಿತಿಯ ನಿಮಿತ್ತದಿಂದಾಗಿ, ತಾನು ಅಲ್ಲಿಗೆ ಹೋಗದಂತೆ ಆತನ ಸ್ನೇಹಿತರು ಆತನನ್ನು ಕೇಳಿಕೊಂಡರು. ಪೌಲನು ಸರಿಯಾದದ್ದನ್ನು ಮಾಡಿದನೆಂದು ನಾನು ಆಲೋಚಿಸುತ್ತೇನೆ. ದೇವರು ತನ್ನ ಸೇವಕರಿಗೆ ಸಾಮಾನ್ಯ ಪ್ರಜ್ಞೆಯನ್ನು ಕೊಟ್ಟಿದ್ದಾನೆ ಮತ್ತು ಎಫೆಸದಲ್ಲಿ ನಡೆದ ದಂಗೆಯನ್ನು ನಿಯಂತ್ರಿಸಲು ಪೌಲನು ಮುಂದಾಗಿದ್ದರೆ ಅದು ಮೂರ್ಖತನದ ಕಾರ್ಯವಾಗುತ್ತಿತ್ತು.

# ಉ 53. ಮೆಕೆದೋನಿಯ ಮತ್ತು ಗ್ರೀಸ್ ಮಾರ್ಗವಾಗಿ ಪೌಲನ ಪ್ರಯಾಣ, 20:1–6

## ಇ) ಪಠ್ಯ ಪ್ರಶ್ನೆಗಳು

1. ಪೌಲನು ಮಕೆದೋನಿಯದ ಮೂಲಕ ಪ್ರಯಾಣಿಸಿದಾಗ ಆತನು ಕೆಲವು ವರ್ಷಗಳ ಹಿಂದೆ ತನ್ನ ಎರಡನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ತಾನು ಸ್ಥಾಪಿಸಿದಂತಹ ಸಭೆಗಳನ್ನು ಸಂದರ್ಶಿಸಿದನು. ಆತನು ವಿಶ್ವಾಸಿಗಳೊಂದಿಗೆ ಮಾತನಾಡಿ ಅವರನ್ನು ಬಲಪಡಿಸಿದನು ಮತ್ತು ಪ್ರೋತ್ಸಾಹಿಸಿದನು. ಅ. ಕೃ. 14:21–23 ನ್ನು ಹೋಲಿಸಿರಿ, ಅಲ್ಲಿ ಪೌಲ ಮತ್ತು ಬಾರ್ನಬರು ವಿಶ್ವಾಸಿಗಳನ್ನು ಬಲಪಡಿಸಿ ಪ್ರೋತ್ಸಾಹಿಸಲು ಮತ್ತು ಪ್ರತಿಯೊಂದು ಸಭೆಗಳಲ್ಲಿ ಹಿರಿಯರನ್ನು ನೇಮಿಸಲು ತಮ್ಮ ಮೊದಲನೆಯ ಸೇವಾ ಪ್ರಯಾಣದ ಅಂತ್ಯದಲ್ಲಿ ತಾವು ಸ್ಥಾಪಿಸಿದಂತಹ ಸಭೆಗಳಿಗೆ ಪುನಃ ಭೇಟಿ ನೀಡಿದರು.

2. ಪೌಲನು ಮೂಲತಃವಾಗಿ ಕೊರಿಂಥದಿಂದ ನೇರವಾಗಿ ಸಿರಿಯಾಗೆ (ತನ್ನ ತಾಯಿ ಸಭೆಯಾದ ಅಂತಿಯೋಕ್ಯಕ್ಕೆ ಹಿಂತಿರುಗಿಲು) ಹಡಗಿನಲ್ಲಿ ಪ್ರಯಾಣಿಸಲು ಯೋಜಿಸಿದ್ದನು. ಆದರೆ ಯೆಹೂದ್ಯರು ಆತನ ವಿರುದ್ಧ ಒಳಸಂಚನ್ನು ಮಾಡಿದ್ದರು. ಹಾಗಾಗಿ ಆತನು ಮಕೆದೋನಿಯದ ಮೂಲಕವಾಗಿ ರಸ್ತೆಯ ಮೂಲಕ ಪ್ರಯಾಣಿಸಲು ನಿರ್ಧರಿಸಿದನು (ವ. 3).

3. ಈ ವಾಕ್ಯಭಾಗದಲ್ಲಿ ಲೂಕನ ಹೆಸರು ಎಲ್ಲಿಯೂ ತಿಳಿಸಲ್ಪಟ್ಟಿಲ್ಲ, ಆದರೆ ಆತನು ಪೌಲನೊಂದಿಗೆ ಫಿಲಪ್ಪಿಯಿಂದ (ಅಥವಾ ವಾಸ್ತವಿಕವಾಗಿ ನಿಯೋಪೋಲಿಯಿಂದ) ತ್ರೋವಕ್ಕೆ (ವ. 6, 'ನಾವು' ಎಂಬುದನ್ನು ಗಮನಿಸಿರಿ) ಹಡಗಿನಲ್ಲಿ ಪ್ರಯಾಣಿಸಿದನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನು 1 ಮತ್ತು 2 ಕೊರಿಂಥದವರಿಗೆ ಬರೆದ ಪತ್ರಿಕೆಯನ್ನು (ಬಹುಶಃ ಗಲಾತ್ಯದವರಿಗೆ ಬರೆದ ಪತ್ರಿಕೆಯನ್ನೂ) ಎಫೆಸದಿಂದ ಬರೆದನು.

2. ಪೌಲನು ಕೊರಿಂಥದಲ್ಲಿ ಕಳೆದ ಚಳಿಗಾಲದ ಸಂದರ್ಭದಲ್ಲಿ ರೋಮಾಪುರದವರಿಗೆ ತನ್ನ ಪತ್ರಿಕೆಯನ್ನು ಬರೆದನು.

3. 1) ಅ. ಕೃ. 16–17 ರ ಪ್ರಕಾರವಾಗಿ, ಪೌಲನು ತನ್ನ ಎರಡನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ಮಕೆದೋನಿಯದ ಈ ಮೂರು ಸ್ಥಳಗಳಲ್ಲಿ ಸೇವೆ ಮಾಡಿದನು: ಫಿಲಿಪ್ಪಿ (16:12–40), ಥೆಸಲೋನಿಕ (17:1–9) ಮತ್ತು ಬೆರೋಯ (17:10–14).

2) ಅ. ಕೃ. 17–18 ರ ಪ್ರಕಾರವಾಗಿ, ಪೌಲನು ತನ್ನ ಎರಡನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ಅಖಾಯದ ಈ ಎರಡು ಸ್ಥಳಗಳಲ್ಲಿ ಸೇವೆ ಮಾಡಿದನು: ಅಥೆನ್ಸ್ (17:15–18:1) ಮತ್ತು ಕೊರಿಂಥ (18:1–18).

4. ಆ ವ್ಯಕ್ತಿಯು ತೀತನು. ಪೌಲನ ಮೂರನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ತೀತನು ಕೊರಿಂಥದಲ್ಲಿ ಹೆಚ್ಚುತ್ತಿದ್ದ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ (1 ಕೊರಿ. 1–6; 2 ಕೊರಿ. 2:13; 7:5–16) ಮತ್ತು ಯೆರೂಸಲೇಮಿನ ಸಭೆಯಲ್ಲಿರುವ ಬಡವಿಶ್ವಾಸಿಗಳಿಗೆ ಹಣ ಸಹಾಯ ಪಡೆಯುವುದಕ್ಕಾಗಿ ಕೊರಿಂಥಕ್ಕೆ ಕಳುಹಿಸಲ್ಪಟ್ಟನು.

# ಉ 54. ತ್ರೋವದಲ್ಲಿ ಯೂತಿಕನನ್ನು ಮರಣದಿಂದ ಎಬ್ಬಿಸಿದ್ದು, 20:7–12

## ಇ) ಪಠ್ಯ ಪ್ರಶ್ನೆಗಳು

1. ತ್ರೋವದಲ್ಲಿನ ಸಭೆಯು ಕನಿಷ್ಟ ಪಕ್ಷ ಈ ಭಾನುವಾರದ ಆರಾಧನೆಯನ್ನು ಸಂಜೆ ಹೊತ್ತಿನಲ್ಲಿ ನಡೆಸಿರಬೇಕು. ದೀಪಗಳು ಹೊತ್ತಿದ್ದವು ಮತ್ತು ಪೌಲನು ಮಧ್ಯರಾತ್ರಿಯವರೆಗೂ ಮಾತನಾಡಿದನು. ಬಹುಶಃ ವಿಶ್ವಾಸಿಗಳು ಹಗಲಿನಲ್ಲಿ ಕೆಲಸಕ್ಕೆ ಹೋಗಬೇಕಾದುದ್ದರಿಂದ ಅವರು ಸಂಜೆಯಲ್ಲಿ ಮಾತ್ರ ಬಿಡುವಿದ್ದರು.

2. ಪೌಲನು ಮಾತನಾಡುತ್ತಿರುವಾಗ ಯೂತಿಕನಿಗೆ ಗಾಢನಿದ್ರೆ ಹತ್ತಿತು. ಆತನು ಮೂರನೆಯ ಅಂತಸ್ತಿನ ಕಿಟಿಕಿಯಿಂದ ಕೆಳಗೆ ಬಿದ್ದು ತಕ್ಷಣವೇ ಸತ್ತುಹೋದನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. (ವ. 9 ರಲ್ಲಿ) 'ಯೂತಿಕನನ್ನು ಎತ್ತಿಕೊಂಡಾಗ ಅವನು ಸತ್ತೇ ಹೋಗಿದ್ದನು'''ಎಂಬ ಲೂಕನ ಹೇಳಿಕೆಗೂ ಮತ್ತು (ವ. 10 ರಲ್ಲಿ) 'ಅವನ ಜೀವ ಅವನಲ್ಲಿದೆ!' ಎಂಬ ಪೌಲನ ಹೇಳಿಕೆಗೂ ನಡುವೆ ಇರುವ ವ್ಯತ್ಯಾಸವು ತದ್ವಿರೋಧತೆಯಾಗಬೇಕಿಲ್ಲ. ಯೂತಿಕನು ನೆಲದ ಮೇಲೆ ಬಿದ್ದಾಗ ಆತನು ಸತ್ತೇ ಹೋಗಿದ್ದನು, ಆದರೆ ಪೌಲನು ಆತನನ್ನು ತಬ್ಬಿಗೊಂಡಾಗ ಜೀವ ಮರಳಿ ಬಂದಿತು. ಹಾಗಾಗಿ ಲೂಕನ ಹಾಗೂ ಪೌಲನ ಹೇಳಿಕೆಗಳೆರಡೂ ಸರಿಯಾದವುಗಳು.

2. ಲೂಕನು ಅಪೊಸ್ತಲರ ಕೃತ್ಯಗಳಲ್ಲಿ ಪೇತ್ರನ ಸೇವೆ ಮತ್ತು ಪೌಲನ ಸೇವೆಗಳ ನಡುವೆ ಅನೇಕ ಸಮಾಂತರತೆಗಳನ್ನು ಚಿತ್ರಿಸುತ್ತಿದ್ದಾನೆ. ಈ ಕಥೆಯಲ್ಲಿ ಪೌಲನು ತ್ರೋವದಲ್ಲಿ ಒಬ್ಬ ಯೌವ್ವನಸ್ಥನನ್ನು ಮರಣದಿಂದ ಎಬ್ಬಿಸುತ್ತಾನೆ. 9:40 ರಲ್ಲಿ ಪೇತ್ರನು ಯೊಪ್ಪದಲ್ಲಿ ತಬಿಥಾ ಎಂಬ ಸ್ತ್ರೀಯನ್ನು ಮರಣದಿಂದ ಎಬ್ಬಿಸುತ್ತಾನೆ. ಹಾಗಾಗಿ ಪೌಲ ಮತ್ತು ಪೇತ್ರರಿಬ್ಬರೂ ತಮ್ಮ ಸೇವಾ ಅವಧಿಗಳಲ್ಲಿ ಕನಿಷ್ಠ ಪಕ್ಷ ಒಬ್ಬರನ್ನು ಮರಣದಿಂದ ಎಬ್ಬಿಸಿದರು. ಪೇತ್ರ ಮತ್ತು ಪೌಲರ ನಡುವಿನ ಇನ್ನೂ ವಿವರವುಳ್ಳ ಹೋಲಿಕೆಗಾಗಿ ***'ಹೆಚ್ಚಿನ ವಾಸ್ತವಾಂಶಗಳು'*** ಎಂಬ ಭಾಗದಲ್ಲಿರುವ ***'ಅಪೊಸ್ತಲರ ಕೃತ್ಯಗಳು ಪುಸ್ತಕದ ರಚನೆ'*** ಎಂಬ ಅಧ್ಯಾಯವನ್ನು ನೋಡಿರಿ.

3. ಹೊಸ ಒಡಂಬಡಿಕೆಯ ಕಾಲದಲ್ಲಿದ್ದ ಭಾನುವಾರದ ಆರಾಧನೆಯ ಕುರಿತು ಈ ಕಥೆಯಿಂದ ನಾವು ಕನಿಷ್ಠ ಪಕ್ಷ ಈ ಕೆಳಗಿನ ಸಂಗತಿಗಳನ್ನು ಕಲಿಯಬಹುದಾಗಿದೆ:

1) ವಿಶ್ವಾಸಿಗಳು ಭಾನುವಾರದಂದು ಆರಾಧನೆಯನ್ನು ನಡೆಸುತ್ತಿದ್ದರು. ಈ ದಿನವನ್ನು 'ಕರ್ತನ ದಿನವೆಂದೂ' ಸಹ ಕರೆಯಲಾಗುತ್ತಿತ್ತು, ಯಾಕೆಂದರೆ ಯೇಸು ಕ್ರಿಸ್ತನು ಭಾನುವಾರದಂದು ಮರಣದಿಂದ ಎದ್ದು ಬಂದನು. ಯೆಹೂದಿಗಳು ಶನಿವಾರವನ್ನು ತಮ್ಮ 'ರಜಾ ದಿನವನ್ನಾಗಿ' ಆಚರಿಸಿದರು.

2) ವಿಶ್ವಾಸಿಗಳು ದಿನದ ಅನುಕೂಲಕರವಾದ ಸಮಯದಲ್ಲಿ ಕೂಡಿ ಬರುತ್ತಿದ್ದರು. ತ್ರೋವದಲ್ಲಿ ಅವರು ಸಂಜೆ ಹೊತ್ತಿನಲ್ಲಿ ಆರಾಧನೆಯನ್ನು ನಡೆಸಿದರು, ಬಹುಶಃ ಯಾಕೆಂದರೆ ಹಗಲಿನ ಸಮಯದಲ್ಲಿ ಅವರು ಕೆಲಸದಿಂದ ಬಿಡುವು ಮಾಡಿಕೊಳ್ಳಲು ಆಗುತ್ತಿರಲಿಲ್ಲ.

3) ಆರಾಧನೆಯು ಎರಡು ಪ್ರಮುಖವಾದ ಉಪಾಂಗಗಳನ್ನು ಹೊಂದಿತ್ತು (ಈ ಕಥೆಯಲ್ಲಿ ಲೂಕನು ತಿಳಿಸದೆ ಇರುವ ಸಂಗತಿಗಳಾದ, ಹಾಡುಗಳು ಮತ್ತು ಪ್ರಾರ್ಥನೆಯನ್ನು ಒಳಗೊಂಡು):

   - ಬೋಧನೆ, ಈ ಕಥೆಯಲ್ಲಿ ಅದು ಬಹಳ ಉದ್ದವಾಗಿದೆ. ವ. 9 ರಲ್ಲಿ ಬಳಸಲಾದ ಗ್ರೀಕ್ ಪದವು ಸೂಚಿಸುವುದೇನೆಂದರೆ, ಪೌಲನು ಜನರಿಗೆ ಕೇವಲ ಬೋಧನೆಯನ್ನು ಮಾತ್ರ ಮಾಡಲಿಲ್ಲ – ಬದಲಾಗಿ ಆತನು ಅವರೊಂದಿಗೆ ಚರ್ಚೆಯನ್ನೂ ಮತ್ತು ತರ್ಕವನ್ನೂ ಮಾಡಿದನು.
   - ಕರ್ತನ ಭೋಜನ (ಅಥವಾ ರೊಟ್ಟಿಯನ್ನು ಮುರಿಯುವುದು), ಇದು ಆದಿಸಭೆಯಲ್ಲಿ ಪ್ರತಿವಾರ ಆಚರಿಸಲ್ಪಟ್ಟಂತೆ ತೋರುತ್ತದೆ.

4) ವಿಶ್ವಾಸಿಗಳಿಗೆ ಯಾವುದೇ ಸಭಾ ಕಟ್ಟಡಗಳು ಇರಲಿಲ್ಲ. ತ್ರೋವದಲ್ಲಿ ಅವರು ಮೂರನೆಯ ಅಂತಸ್ತಿನಲ್ಲಿದ್ದ ಮನೆಯಲ್ಲಿ ಕೂಡಿಬಂದಂತೆ ತೋರುತ್ತದೆ.

# ಉ 55. ಎಫೆಸದ ಹಿರಿಯರಿಗೆ ಪೌಲನ ಬೀಳ್ಕೊಡುವಿಕೆ, 20:13–38

## ಇ) ಪಠ್ಯ ಪ್ರಶ್ನೆಗಳು

2. ಈ ಬಾರಿ ಪೌಲನು ಎಫೆಸಕ್ಕೆ ಭೇಟಿ ಕೊಡಬಾರದೆಂದು ನಿರ್ಧರಿಸಿದನು, ಯಾಕೆಂದರೆ ಆತನು ಯೆರೂಸಲೇಮಿನ ಸಭೆಯ ಬಡ ವಿಶ್ವಾಸಿಗಳಿಗಾಗಿ ಸಂಗ್ರಹಿಸಲ್ಪ ಹಣವನ್ನು ಯೆರೂಸಲೇಮಿಗೆ ತಲುಪಿಸುವುದರ ಅವಸರದಲ್ಲಿದ್ದನು. ಆತನು ಸಾಧ್ಯವಾದಲ್ಲಿ ಪಂಚಾಶತ್ತಮದ ಹಬ್ಬಕ್ಕೆ ಮೊದಲು ಯೆರೂಸಲೇಮನ್ನು ತಲುಪಬೇಕೆಂದಿದ್ದನು (ವ. 16).

3. ಮಿಲೇತದಲ್ಲಿ ಪೌಲನು ಎಫೆಸದ ಸಭೆಯ ಹಿರಿಯರನ್ನು/ಮೇಲ್ವಿಚಾರಕರನ್ನು/ಸಭಾಪಾಲಕರನ್ನು/ ಕುರುಬರನ್ನು ಸಂಧಿಸಿದನು.

4. ಯೆರೂಸಲೇಮಿನಲ್ಲಿ ಸೆರೆಮನೆಯೂ ಬಾಧೆಯೂ ತನಗಾಗಿ ಕಾದಿವೆ ಎಂದು ಪವಿತ್ರಾತ್ಮನು ಪ್ರತಿಯೊಂದು ಪಟ್ಟಣಗಳಲ್ಲಿ ಪೌಲನಿಗೆ ಎಚ್ಚರಿಸಿದನು (ವ. 23).

5. ಹಣ ಮತ್ತು ಬಟ್ಟೆಯ ಕುರಿತು ಪೌಲನಿಗಿದ್ದ ಮನೋಭಾವನೆಯ ಕುರಿತು ಕೆಲವು ಅಂಶಗಳು:
   1) ಆತನು ಯಾರ ಬೆಳ್ಳಿ ಬಂಗಾರಕ್ಕಾಗಲಿ, ಬಟ್ಟೆಗಾಗಲಿ ಆಶೆಪಡಲಿಲ್ಲ (ವ. 33)
   2) ಆತನು ಸ್ವಂತ ಹಸ್ತಗಳಿಂದ ಕೆಲಸವನ್ನು ಮಾಡಿ ತನ್ನ ಅಗತ್ಯತೆಗಳನ್ನು ಪೂರೈಸಿಕೊಂಡನು (ವ. 34). ಹಾಗಾಗಿ ಆತನು ಊಟ ಬಟ್ಟೆ ಮತ್ತು ಇತರೆ ಅಗತ್ಯತೆಗಳಿಗೆ ಸಾಕಾಗುವಷ್ಟು ಹಣವನ್ನು ಗುಡಾರ ಮಾಡುವ ಕೆಲಸದಿಂದ ಸಂಪಾದಿಸಿದನು.
   3) ಆತನು ಸ್ವಂತ ಕೈಗಳಿಂದ ದುಡಿದು ತನ್ನ ಜೊತೆ ಕೆಲಸಗಾರರ ಅಗತ್ಯತೆಗಳನ್ನೂ ಪೂರೈಸಿದನು (ವ. 34).
   4) ಆತನು ಪರಿಶ್ರಮದ ದುಡಿಮೆಗೂ ಹಾಗೂ ತೆಗೆದುಕೊಳ್ಳುವುದಕ್ಕಿಂತ ಕೊಡುವುದೇ ಹೆಚ್ಚಿನ ಭಾಗ್ಯ ಎಂದು ಕರ್ತನಾದ ಯೇಸು ಹೇಳಿದ ಮಾತುಗಳನ್ನು ಜ್ಞಾಪಕಮಾಡಿಕೊಳ್ಳಲು ಎಫೆಸದಲ್ಲಿನ ವಿಶ್ವಾಸಿಗಳಿಗೆ ಒಂದು ಮಾದರಿಯಾಗಿದ್ದನು (ವ. 35).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಇವುಗಳು ವಚನ 18–21, 24, 27 ಮತ್ತು 33–36 ರಲ್ಲಿ ಪೌಲನ ಸಾಕ್ಷಿಯಲ್ಲಿರುವ ಅಂಶಗಳಾಗಿವೆ:
   1) ಆತನು ಒಂದು ಮುಕ್ತವಾದ ಮತ್ತು ಪಾರದರ್ಶಕವಾದ ಜೀವಿತವನ್ನು ಜೀವಿಸಿದನು (ವ. 18).
   2) ಆತನು ಬಹಳ ದೀನತೆಯಿಂದಲೂ ಕಣ್ಣೀರಿನಿಂದಲೂ ಕರ್ತನ ಸೇವೆ ಮಾಡಿದನು (ವ. 19).

3) ಆತನು ವೈರಿಗಳಿಂದ ಕಠಿಣವಾಗಿ ಪರೀಕ್ಷಿಸಲ್ಪಟ್ಟನು (ಆತನನ್ನು ಕೊಲ್ಲಬೇಕೆಂಬ ಒಳಸಂಚುಗಳು ಮತ್ತು ಹಿಂಸೆಗಳು) (ವ. 19).
4) ಆತನು ದೇವರ ವಾಕ್ಯವನ್ನು ಬೋಧಿಸುವುದರಲ್ಲಿಯೂ (ವ. 20, 26, 31) ಮತ್ತು ಸುವಾರ್ತೆಯನ್ನು ಸಾರುವುದರಲ್ಲಿಯೂ ಧೈರ್ಯವುಳ್ಳವನಾಗಿದ್ದನು (ವ. 21, 24).
5) ಆತನು ದೇವರ ವಾಕ್ಯವನ್ನು ಬೋಧಿಸುವುದಕ್ಕೂ (ವ. 20) ಮತ್ತು ಸುವಾರ್ತೆಯನ್ನು ಸಾರುವುದಕ್ಕೂ ಪ್ರತಿಯೊಂದು ಅವಕಾಶವನ್ನು ಉಪಯೋಗಿಸಿಕೊಂಡನು (ವ. 21).
6) ಆತನು ಸರಿಯಾದ ಪ್ರಾಧಾನ್ಯತೆಗಳನ್ನು ಹೊಂದಿದ್ದನು (ವ. 24):
   - ತನ್ನ ಸ್ವಂತ ಅಗತ್ಯತೆಗಳಿಗಿಂತ ಸೇವೆಯ ಮೇಲೆ ಹೆಚ್ಚಿನ ಗಮನಕೊಟ್ಟನು.
   - ತನ್ನ ಓಟವನ್ನು ಕೊನೆಗಾಣಿಸಲು ಓಡುತ್ತಾ ತನ್ನ ಕಾರ್ಯವನ್ನು ಪೂರ್ತಿಗೊಳಿಸಲು ಹೋರಾಡುತ್ತಿದ್ದನು.
7) ಆತನು ವಿಶ್ವಾಸಿಗಳಿಂದ ಹಣವನ್ನಾಗಲಿ ಬಟ್ಟೆಯನ್ನಾಗಲಿ ಕೆಳಲಿಲ್ಲ (ವ. 33).
8) ಆತನು ತನ್ನ ಮತ್ತು ತನ್ನ ಜೊತೆಯವರ ಅಗತ್ಯತೆಯನ್ನು ತಾನೇ ಪೂರೈಸಿದನು ಮತ್ತು ಅಗತ್ಯತೆಯಲ್ಲಿರುವ ಬಡವರಿಗೆ ಸಹಾಯ ಮಾಡಿದನು (ವ. 34, 35).

2. ವಚನ 28–31 ರಲ್ಲಿ ಪೌಲನು ಎಫೆಸದ ಸಭಾಪಾಲಕರನ್ನು ಉದ್ದೇಶಿಸಿ ಹೇಳಿದ ಮಾತುಗಳಲ್ಲಿರುವ ಅಂಶಗಳಾವುವೆಂದರೆ:
   1) ಅವರು ತಮ್ಮ ವಿಷಯದಲ್ಲಿ ಎಚ್ಚರವಾಗಿರಬೇಕು (ವ. 28).
   2) ಅವರು ಮಂದೆಯ ವಿಷಯದಲ್ಲಿಯೂ (ಅಂದರೆ ಸಭೆಯ ಪ್ರತಿಯೊಬ್ಬ ಸದಸ್ಯನ ವಿಷಯದಲ್ಲಿಯೂ) ಎಚ್ಚರವಾಗಿರಬೇಕು (ವ. 28) ಮತ್ತು ಕಾಯುವವರಾಗಿರಬೇಕು (ವ. 31).
   3) ಪವಿತ್ರಾತ್ಮನು ಅವರನ್ನು ಮಂದೆಯಲ್ಲಿ ಮೇಲ್ವಿಚಾರಕರಾಗಿರಬೇಕೆಂದು ಕರೆದಿದ್ದಾನೆ (ಅದು ಸಭೆಯಾಗಿದೆ) (ವ. 28).
   4) ಅವರು ಸಭೆಯ ಕುರುಬರಾಗಿರಬೇಕು (ಅಂದರೆ ಸಭಾಪಾಲಕರಾಗಿರಬೇಕು) (ವ. 28).
   5) ಸಭೆಯು ದೇವರದು (ವ. 28), ಹಾಗಾಗಿ ಸಭೆಯು ಸಭಾಪಾಲಕರುಗಳ ಸ್ವತ್ತಲ್ಲ.
   6) ಸಭೆಗೆ ಹೊರಗಿನಿಂದ 'ಕ್ರೂರವಾದ ತೋಳಗಳು' (ಅಂದರೆ ಅಪಾಯಕರವಾದ ಮತ್ತು ಸ್ವಾರ್ಥವುಳ್ಳ ಸುಳ್ಳುಬೋಧಕರುಗಳು) ಪ್ರವೇಶಿಸಬಹುದು ಮತ್ತು ಮಂದೆಯನ್ನು (ವಿಶ್ವಾಸಿಗಳನ್ನು) ಹಾಳು ಮಾಡಬಹುದು (ವ. 29).
   7) ಅದಲ್ಲದೆ ಸಭೆಯ ನಾಯಕತ್ವದೊಳಗಿಂದಲೂ 'ಕ್ರೂರವಾದ ತೋಳಗಳು' (ಅಂದರೆ ಅಪಾಯಕರವಾದ ಮತ್ತು ಸ್ವಾರ್ಥವುಳ್ಳ ಸುಳ್ಳುಬೋಧಕರುಗಳು) ಬರಬಹುದು ಮತ್ತು ವಿಶ್ವಾಸಿಗಳಲ್ಲಿ ಗೊಂದಲವನ್ನೆಬ್ಬಿಸಿ ಸಭೆಯನ್ನು ಒಡೆಯಬಹುದು (ವ. 30).

3. ಪೌಲನು ಯೆರೂಸಲೇಮಿನ ಕಡೆಗೆ ಪ್ರಯಾಣಿಸುತ್ತಿದ್ದಾಗ, ಸೆರೆಮನೆಯೂ ಬಾಧೆಯೂ ತನಗಾಗಿ ಕಾದಿವೆಯೆಂದು ಪ್ರತಿಯೊಂದು ಪಟ್ಟಣದಲ್ಲಿ ಪವಿತ್ರಾತ್ಮನು ಆತನಿಗೆ (ಬಹುಶಃ ಪ್ರವಾದನೆಗಳ ಮೂಲಕ) ತಿಳಿಸುತ್ತಿದ್ದನು (ವ. 23). ದೇವರಾದ ಪವಿತ್ರಾತ್ಮನು ಭವಿಷ್ಯವನ್ನು ತಿಳಿದಿದ್ದಾನೆ, ಮತ್ತು ಈ ಸನ್ನಿವೇಶದಲ್ಲಿ ಪೌಲನಿಗೆ ಆತನು ಭವಿಷ್ಯವನ್ನು ಪ್ರಕಟಿಸಿದನು. ತಾನು

ಯೆರೂಸಲೇಮಿಗೆ ಹೋಗುವಂತೆ ಪೌಲನು ಪವಿತ್ರಾತ್ಮನಿಂದ ಒತ್ತಾಯಿಸಲ್ಪಟ್ಟನು (ವ. 22). ದೇವರಾದ ಪವಿತ್ರಾತ್ಮನು ಪೌಲನನ್ನು ಸೇವೆಗಾಗಿ ಕರೆದಿದ್ದನು. ಪೌಲನು ಎದುರಿಸಬಹುದಾದ ಅಪಾಯ ಮತ್ತು ಹಿಂಸೆಗಳಿಗಿಂತಲೂ ಆತನ ಜೀವಿತದಲ್ಲಿದ್ದ ಈ ಕರೆಯುವಿಕೆಯು ಅತೀ ಬಲವುಳ್ಳದ್ದಾಗಿತ್ತು.

ಹಾಗಾಗಿ ಅಪಾಯ ಮತ್ತು ಕಷ್ಟಗಳ ಕುರಿತಾಗಿ ಪೌಲನನ್ನು ಮುಂಚಿತವಾಗಿ ಎಚ್ಚರಿಸಿದ ಅದೇ ಪವಿತ್ರಾತ್ಮನು, ಪೌಲನು ಯೆರೂಸಲೇಮಿನಲ್ಲಿ ಮಾಡಬೇಕಾದ ಕಾರ್ಯಕ್ಕಾಗಿ ದೇವರು ಆತನ ಮೇಲೆ ಇಟ್ಟಿರುವ ಕಾರ್ಯವನ್ನು ನೇರವೆರಿಸಲಿಕ್ಕೆ ತಾನು ಅಲ್ಲಿಗೆ ಹೋಗುವಂತೆ ಒತ್ತಾಯಿಸಿದನು. ಇದರಲ್ಲಿ ಯಾವುದೇ ರೀತಿಯಾದ ತದ್ವಿವಿರೋಧತೆಯಿಲ್ಲ, ಬದಲಾಗಿ ಪೌಲನು ಎಂತಹ ಶ್ರೇಷ್ಟ ದೇವರ ಸೇವಕನಾಗಿದ್ದನೆಂಬುದನ್ನು ಇದು ನಮಗೆ ತೋರಿಸುತ್ತದೆ!

# ಉ 56. ಯೆರೂಸಲೇಮಿಗೆ, 21:1–16

## ಇ) ಪಠ್ಯ ಪ್ರಶ್ನೆಗಳು

1. ಪೌಲನು ಮತ್ತು ಆತನ ಸಂಗಡಿಗರು ಟ್ಯೈರ್‌ನಲ್ಲಿ ಏಳು ದಿನಗಳ ಕಾಲ ಉಳಿದುಕೊಂಡರು ಮತ್ತು ಅಲ್ಲಿ ಈ ಸಂಗತಿಗಳು ಸಂಭವಿಸಿದವು (ವ. 3–6):
    - ಅವರು ಪ್ರಯಾಣಿಸುತ್ತಿದ್ದ ಹಡಗಿನದಲ್ಲಿದ್ದ ಸರಕುಗಳನ್ನು ಇಳಿಸಬೇಕಾಯಿತು (ಮತ್ತು ನಂತರ ಬಹುಶಃ ಮತ್ತೆ ಹೊಸಸರಕುಗಳನ್ನು ತುಂಬಿರಬೇಕು). ಇದಕ್ಕಾಗಿ ಏಳು ದಿನಗಳು ಹಿಡಿದಿರಬಹುದು. ಆಗ ಅವರ 'ಸಮಯ ಮುಗಿಯಿತು'.
    - ಪೌಲ ಮತ್ತು ಆತನ ಸಂಗಡಿಗರು ವಿಶ್ವಾಸಿಗಳೊಂದಿಗೆ ಉಳಿದುಕೊಂಡಿದ್ದರು, ಅಲ್ಲಿ ಪೌಲನಿಗೆ ಪ್ರವಾದನಾ ಸಂದೇಶವು ದೊರಕಿತು.
    - ವಿಶ್ವಾಸಿಗಳು ಸಮುದ್ರತೀರದವರೆಗೆ ಅವರ ಜೊತೆಯಲ್ಲಿ ಬಂದರು, ಪೌಲ ಮತ್ತು ಆತನ ಸಂಗಡಿಗರು ಹಡಗನ್ನು ಹತ್ತುವುದಕ್ಕಿಂತ ಮುಂಚೆ ಅವರೆಲ್ಲರೂ ಕೂಡಿ ಪ್ರಾರ್ಥಿಸಿದರು.

2. (ಲೂಕನನ್ನೂ ಒಳಗೊಂಡು) ಸೆಜರೇಯದಿಂದ ಬಂದ ಕೆಲವು ವಿಶ್ವಾಸಿಗಳು ಪೌಲ ಮತ್ತು ಆತನ ಸಂಗಡಿಗರೊಂದಿಗೆ ಯೆರೂಸಲೇಮಿನ ಎರಡು ದಿನಗಳ ಪ್ರಯಾಣಕ್ಕಾಗಿ ಅವರೊಂದಿಗೆ ಸೇರಿಕೊಂಡರು (ವ. 16).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ವಚನ 20:16 ರಲ್ಲಿ ಪೌಲನು ಏಷ್ಯಾದಲ್ಲಿದ್ದಾಗ ಅವಸರ ಮಾಡಿದ್ದಕ್ಕೂ ಮತ್ತು ವಚನ 21:4 ರಲ್ಲಿ ಆತನು ಸಿರಿಯಾಕ್ಕೆ (ಟ್ಯೈರ್‌ಗೆ) ತಲುಪಿದಾಗ ಆತನು ಅವಸರ ಮಾಡದೇ ಇದ್ದುದ್ದಕ್ಕೂ ನಡುವಿನ ವ್ಯತ್ಯಾಸಕ್ಕೆ ಸರಳವಾದ ವಿವರಣೆಯು ಹೀಗಿದೆ:
    - ಏಷ್ಯಾದಿಂದ ಸಿರಿಯಾಕ್ಕೆ ಪ್ರಯಾಣಿಸಲು ಎಷ್ಟು ಸಮಯ ಹಿಡಿಯಬಹುದು ಎಂಬುದನ್ನು ತಿಳಿದುಕೊಳ್ಳುವುದು ಪೌಲನಿಗೆ ಬಹಳ ಕಷ್ಟಕರವಾಗಿತ್ತು. ಬಹುಶಃ ತನ್ನನ್ನೂ ಮತ್ತು ತನ್ನ ಸಂಗಡಿಗರನ್ನೂ ಕರೆದೊಯ್ಯಲು ಒಂದು ಹಡಗಿಗಾಗಿ ಕೆಲವು ದಿನಗಳು ಕಾಯಬೇಕಾಗಿತ್ತು. ಬಹುಶಃ ಹಡಗು ಸರಿಯಾದ ವಾತಾವರಣಕ್ಕಾಗಿ ಕೆಲವು ದಿನಗಳು ಕಾಯಬೇಕಾಗಿತ್ತು. ಬಹುಶಃ ಹಡಗು ಮೆಡಿಟೆರೇನಿಯನ್ ಸಮುದ್ರದ ಮೇಲೆ ತಮ್ಮ ಉದ್ದನೆಯ ಪ್ರಯಾಣದಲ್ಲಿ ಬಿರುಗಾಳಿಗಳನ್ನು ಮತ್ತು ಅನೇಕ ತೊಂದರೆಗಳನ್ನು ಅನುಭವಿಸಬೇಕಾಗಬಹುದಿತ್ತು. ಈ ಅನಿಶ್ಚಿತತೆಗಳು 20:16 ರಲ್ಲಿರುವ ಪೌಲನ ಅವಸರವನ್ನು ವಿವರಿಸುತ್ತದೆ.
    - ಆದರೆ ಪೌಲನು ಸಿರಿಯಾದಲ್ಲಿನ ಟ್ಯೈರ್‌ನ್ನು ತಲುಪಿದ ತಕ್ಷಣ, ಆತನು ಪಂಚಾಶತ್ತಮ ಹಬ್ಬಕ್ಕಿಂತ ಮುಂಚೆ ಯೆರೂಸಲೇಮಿಗೆ ತಲುಪಲು ಸಾಕಷ್ಟು ಸಮಯವಿತ್ತೆಂದು

ತಿಳಿದುಕೊಂಡನು. ಈ ತಿಳುವಳಿಕೆಯು 21:4 ಮತ್ತು 10 ರಲ್ಲಿ ಪೌಲನು ಅವಸರ ಮಾಡದೇ ಇದ್ದ ಸಂಗತಿಯನ್ನು ವಿವರಿಸುತ್ತದೆ.

2. ನಾವು ಅಧ್ಯಾಯ 20:22 ಮತ್ತು 21:4 ನ್ನು ಹೋಲಿಸುವಾಗ ಅಲ್ಲಿ ಪವಿತ್ರಾತ್ಮನು ಪೌಲನಿಗೆ ಯೆರೂಸಲೇಮಿಗೆ ಹೋಗುವುದರ ಕುರಿತು ಹೇಳುವ ಸಂಗತಿಯಲ್ಲಿ ಒಂದು ತದ್ವಿರೋಧತೆ ಇರುವುದನ್ನು ಕಾಣುತ್ತದೆ. 20:22 ರಲ್ಲಿ ತಾನು ಯೆರೂಸಲೇಮಿಗೆ ಹೋಗುವಂತೆ ಪವಿತ್ರಾತ್ಮನು ಒತ್ತಾಯಿಸುತ್ತಿದ್ದಾನೆಂದು ಪೌಲನು ಹೇಳುತ್ತಿದ್ದಾನೆ. 21:4 ರಲ್ಲಿ ಪೌಲನು ಯೆರೂಸಲೇಮಿಗೆ ಹೋಗಬಾರದೆಂದು ಟೈರ್‌ನ ವಿಶ್ವಾಸಿಗಳು ಪವಿತ್ರಾತ್ಮನ ಮೂಲಕ ಬೇಡಿಕೊಂಡರೆಂದು ಲೂಕನು ಬರೆಯುತ್ತಿದ್ದಾನೆ.

ಸಹಜವಾಗಿ ಕಾಣುವ ತದ್ವಿರೋಧತೆಯನ್ನು ನಾವು ಹೀಗೆ ಬಗೆಹರಿಸಬಹುದು:

1) ಇವರೆಡು ವಾಕ್ಯಭಾಗವನ್ನೂ ಲೂಕನೇ ಬರೆದವನಾಗಿದ್ದಾನೆ, ಹಾಗಾಗಿ ಇವರೆಡು ವಚನಗಳ ನಡುವೆ ನಿಜವಾದ ತದ್ವಿರೋಧತೆಯನ್ನು ನಾವು ನಿರೀಕ್ಷಿಸಲಿಕ್ಕೆ ಸಾಧ್ಯವಿಲ್ಲ.

2) ಪವಿತ್ರಾತ್ಮನು ಸತ್ಯದ ಆತ್ಮನಾಗಿದ್ದಾನೆ, ಹಾಗಾಗಿ ಇವರೆಡು ವಚನಗಳ ನಡುವೆ ನಿಜವಾದ ತದ್ವಿರೋಧತೆಯನ್ನು ನಾವು ನಿರೀಕ್ಷಿಸಲಿಕ್ಕೆ ಸಾಧ್ಯವಿಲ್ಲ.

3) ಹಾಗಾಗಿ ಇವರೆಡು ವಚನಗಳ ನಡುವೆ ನಿಜವಾದ ತದ್ವಿರೋಧತೆಯಿರಲು ಸಾಧ್ಯವಿಲ್ಲ! ಆದರೆ ಇಲ್ಲಿ ಸಹಜವಾಗಿ ಕಾಣುವ ತದ್ವಿರೋಧತೆಯನ್ನು ನಾವು ಹೇಗೆ ಬಗೆಹರಿಸಬಹುದು? ಇದು ಲೂಕನು ಎರಡು ಹೇಳಿಕೆಗಳನ್ನು ಒಂದು ಹೇಳಿಕೆಯಲ್ಲಿ ಸಾರಾಂಶಗೊಳಿಸುವ ಆತನ ವಿಧ ಎಂಬುದಾಗಿ ನಾವು 21:4 ನ್ನು ಅರ್ಥಮಾಡಿಕೊಳ್ಳಬೇಕೆಂದು ಜಾನ್ ಸ್ಟಾಟ್‌ರವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ:

- ಪವಿತ್ರಾತ್ಮನು ಪೌಲನಿಗೆ ಯೆರೂಸಲೇಮಿನಲ್ಲಿ ಸಂಭವಿಸಲಿಕ್ಕಿದ ಸಂಗತಿಯನ್ನು ವಿಶ್ವಾಸಿಗಳ ಮೂಲಕವಾಗಿ ಎಚ್ಚರಿಸಿದನು (ಆತನು ಸೆರೆವಾಸಿಯಾಗುವನು ಎಂಬುದನ್ನು, 20:23 ನ್ನು ಹೊಲಿಸಿರಿ).
- ವಿಶ್ವಾಸಿಗಳು ಈ ಭವಿಷ್ಯವಾಣಿಯನ್ನು ಪೌಲನಿಗೆ ತಿಳಿಸಿದಾಗ, ಅವರು ಸ್ವತಃ ತಾವೇ ಪೌಲನು ಯೆರೂಸಲೇಮಿಗೆ ಹೋಗಬಾರದೆಂದು ಬೇಡಿಕೊಂಡರು (21:12 ನ್ನು ಹೋಲಿಸಿರಿ).

# ಉ 57. ಪೌಲನು ಯೆರೂಸಲೇಮನ್ನು ತಲುಪಿದ್ದು, 21:17–26

## ಇ) ಪಥ್ಯ ಪ್ರಶ್ನೆಗಳು

1. ಪೌಲನು ತಾನು ಅನ್ಯರ ಮಧ್ಯದಲ್ಲಿ ಮಾಡಿದ ಸೇವೆಯ ಕುರಿತು (ಯೇಸುವಿನ ಸಹೋದರನಾದ) ಯಾಕೋಬನಿಗೂ ಮತ್ತು ಎಲ್ಲಾ ಹಿರಿಯರಿಗೂ ವರದಿ ಸಲ್ಲಿಸಿದನು.

2. ಪೌಲನ ಸೇವೆಯ ಮುಖಾಂತರ ಅನ್ಯರ ಮಧ್ಯದಲ್ಲಿ ದೇವರು ಮಾಡಿದ್ದನ್ನು ಕೇಳಿದಾಗ ಯೆರೂಸಲೇಮಿನ ಸಭೆಯ ನಾಯಕರು ದೇವರನ್ನು ಕೊಂಡಾಡಿದರು.

3. ವ. 20 ರಲ್ಲಿ ಯೆರೂಸಲೇಮಿನಲ್ಲಿದ್ದ ಯೆಹೂದ್ಯ ವಿಶ್ವಾಸಿಗಳ ಕುರಿತು ನಾವು ಎರಡು ಸಂಗತಿಗಳನ್ನು ಕಲಿಯುತ್ತೇವೆ:
   - ಅವರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಗ್ರೀಕ್ ಪದವು ವಾಸ್ತವಿಕವಾಗಿ 'ಸಾವಿರಾರು' ಎಂಬ ಅರ್ಥವನ್ನು ಸೂಚಿಸುತ್ತದೆ, ಬಹುಶಃ ಯೂದಾಯವನ್ನೆಲ್ಲಾ ಒಳಗೊಂಡು.
   - ಅವರೆಲ್ಲರೂ ಮೋಶೆಯ ಧರ್ಮಶಾಸ್ತ್ರದ ಕುರಿತು ಬಹಳ ಅಭಿಮಾನವುಳ್ಳವರಾಗಿದ್ದರು. ಅದರ ಅರ್ಥವೇನೆಂದರೆ, ಅವರು ಇನ್ನೂ ಹಳೆ ಒಡಂಬಡಿಕೆಯ ಎಲ್ಲ ಸಂಸ್ಕಾರಣಾ ಆಚರಣೆಗಳನ್ನು ಪಾಲಿಸುತ್ತಿದ್ದರು ಮತ್ತು ಯೆಹೂದ್ಯ ಆಚಾರಗಳನ್ನು ಇನ್ನೂ ಪಾಲಿಸುತ್ತಿದ್ದರು.

4. ಯಾಕೋಬನು ತನ್ನೊಂದಿಗೆ ಮಾತನಾಡಿದ ನಂತರ ಮರುದಿನ ಪೌಲನು ದೇವಾಲಯಕ್ಕೆ ಹೋದನು. ಆತನು ತನ್ನೊಂದಿಗೆ ನಾಲ್ಕು ಪುರುಷರನ್ನು ಕರೆದುಕೊಂಡು ಹೋದನು ಮತ್ತು ಅವರೆಲ್ಲರೂ ತಮ್ಮನ್ನು ಶುದ್ಧೀಕರಿಸಿಕೊಂಡರು. ನಂತರ ಪೌಲನು ಶುದ್ಧೀಕರಣದ ಕೊನೆಯ ದಿನಾಂಕವನ್ನು ಗೊತ್ತುಮಾಡಿ ಅಗತ್ಯವಿದ್ದ ಯಜ್ಞಕ್ಕಾಗಿ ಸಿದ್ಧಪಡಿಸಿದನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಯೆರೂಸಲೇಮಿನ ಸಭೆಯವರು ಪೌಲ ಮತ್ತು ಆತನ ಸಂಗಡಿಗರನ್ನು ಅಷ್ಟು 'ಸಂತೋಷದಿಂದ' ಸ್ವೀಕರಿಸಿದ್ದಕ್ಕೆ (ವ. 17) ಕನಿಷ್ಠ ಪಕ್ಷ ಎರಡು ಕಾರಣಗಳಿರಬಹುದೆಂದು ನಾನು ಆಲೋಚಿಸುತ್ತೇನೆ:
   - ಯೆರೂಸಲೇಮಿನ ಸಭೆಯು ಅವರನ್ನು ಕಾಣಲು ಸಂತೋಷವುಳ್ಳವರಾಗಿದ್ದರು. ಅದು ಅವರನ್ನು ಸಾರ್ವತ್ರಿಕ ಸಭೆಯ ಸಹ–ವಿಶ್ವಾಸಿಗಳು ಮತ್ತು ಸಹ–ಸದಸ್ಯರೆಂದು ಗುರುತಿಸಿತು.

- ಯೆರೂಸಲೇಮಿನ ಸಭೆಯು ಯೆರೂಸಲೇಮಿನ ಮತ್ತು ಯೂದಾಯದ ಬಡತನ ಮತ್ತು ಸಂಕಷ್ಟದಲ್ಲಿದ್ದ ವಿಶ್ವಾಸಿಗಳಿಗಾಗಿ ಅನ್ಯಸಭೆಗಳಿಂದ ಪೌಲ ಮತ್ತು ಆತನ ಸಂಗಡಿಗರು ತಂದ ಹಣಕ್ಕಾಗಿ ನಿಜವಾಗಲೂ ಕೃತಜ್ಞತಾಹೃದಯವುಳ್ಳದ್ದಾಗಿತ್ತು. ಪೌಲನು ಈ ಸಂಗ್ರಹಣೆಯ ಕುರಿತು ರಾಜ್ಯಪಾಲನಾದ ಫೆಲಿಕ್ಸನ ಮುಂದೆ ತನ್ನ ಸಂಭಾಷಣೆಯಲ್ಲಿ ಉಲ್ಲೇಖಿಸುವುದನ್ನು ಗಮನಿಸಿರಿ (24:17).

2. ಪೌಲನು ಚದುರಿಹೋಗಿದ್ದ ಯೆಹೂದ್ಯರಿಗೆ ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸಬಾರದೆಂದೂ ಮತ್ತು ತಮ್ಮ ಗಂಡುಮಕ್ಕಳಿಗೆ ಸುನ್ನತಿಮಾಡಿಸುವ ಅವಶ್ಯಕತೆಯಿಲ್ಲವೆಂದೂ ಮತ್ತು ಯೆಹೂದ್ಯ ಆಚಾರಗಳನ್ನು ಕೈಕೊಳ್ಳಬಾರದೆಂದೂ ಹೇಳಿದನೆಂದು ಯೆಹೂದ್ಯ ವಿಶ್ವಾಸಿಗಳು ಆತನ ವಿರುದ್ಧವಾಗಿ ಆಪಾದಿಸಿದರು (ವ. 21).

   ಅವರ ಆಪಾದನೆಯಲ್ಲಿ ಯಾವ ಸತ್ಯಾಂಶವೂ ಇರಲಿಲ್ಲ:

   - ಪೌಲನು – ಯೆಹೂದ್ಯ ಮತ್ತು ಅನ್ಯ ವಿಶ್ವಾಸಿಗಳಿಬ್ಬರಿಗೂ – ಹಳೆ ಒಡಂಬಡಿಕೆಯ ನೈತಿಕ ನಿಯಮಗಳು ಈಗಲೂ ಅನ್ವಯಿಸುತ್ತದೆಯೆಂದು ಸ್ಪಷ್ಟವಾಗಿ ಬೋಧಿಸಿದನು. ಹಾಗಾಗಿ ಎಲ್ಲಾ ವಿಶ್ವಾಸಿಗಳು ಪರಿಶುದ್ಧನಾದ ದೇವರಿಗೆ ಮೆಚ್ಚಿಕೆಯಾದ ಪರಿಶುದ್ಧ ಜೀವಿತಗಳನ್ನು ಜೀವಿಸತಕ್ಕದ್ದು.
   - ಪೌಲನು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸುವುದರಿಂದ ರಕ್ಷಣೆ ಉಂಟಾಗುವದಿಲ್ಲವೆಂದು ಸ್ಪಷ್ಟವಾಗಿ ಬೊಧಿಸಿದನು. ರಕ್ಷಣೆ ಹೊಂದಲು ಒಂದೇ ಒಂದು ಮಾರ್ಗವುಂಟು – ಯೇಸು ಕ್ರಿಸ್ತನಲ್ಲಿರುವ ದೇವರ ಕೃಪೆಯಿಂದಲೇ. ಇದು ಯೆಹೂದ್ಯ ವಿಶ್ವಾಸಿಗಳಿಗೂ ಅನ್ವಯಿಸಿತು.
   - ಪೌಲನು ಅನ್ಯವಿಶ್ವಾಸಿಗಳಿಗೆ ಸುನ್ನತಿಮಾಡಿಸಿಕೊಳ್ಳುವ ಮತ್ತು ಹಳೆ ಒಡಂಬಡಿಕೆಯ ಸಂಸ್ಕರಣಾ ಆಚಾರಗಳನ್ನು ಕೈಗೊಳ್ಳುವ ಯಾವ ಅವಶ್ಯಕತೆಯಿಲ್ಲವೆಂದು ಸ್ಪಷ್ಟವಾಗಿ ಬೋಧಿಸಿದನು.
   - ಪೌಲನು ಸುನ್ನತಿಯ ಮೂಲಕ ರಕ್ಷಣೆ ಹೊಂದಲು ಸಾಧ್ಯವಿಲ್ಲವೆಂದು ಬೋಧಿಸಿದ ಸಂಗತಿಯು 'ಯೆಹೂದ್ಯರು ಸುನ್ನತಿಯನ್ನು ಮಾಡಿಸಿಕೊಳ್ಳಬಾರದು ಮತ್ತು ಯೆಹೂದ್ಯ ಸಂಪ್ರದಾಯಗಳನ್ನು ಪಾಲಿಸಬಾರದು' ಎಂಬುದಾಗಿ ಬೋಧಿಸಿದನೆಂದು ತಪ್ಪಾಗಿ ಅರ್ಥಮಾಡಿಕೊಳ್ಳಲ್ಪಟ್ಟಿರಬಹುದು. ಆದರೆ ಪೌಲನು ಎಂದಿಗೂ ಯೆಹೂದ್ಯ ವಿಶ್ವಾಸಿಗಳು ಸುನ್ನತಿ ಮಾಡಿಸಿಕೊಳ್ಳುವುದನ್ನು ಅಥವಾ ಇತರೆ ಯೆಹೂದ್ಯ ಸಂಪ್ರದಾಯಗಳನ್ನು ಪಾಲಿಸುವುದನ್ನು ನಿಷೇಧಿಸಲಿಲ್ಲ.
   - ಪೌಲನು ತಾನೇ ಸ್ವತಃ ಯೂದಾಯದ ಸಂಪ್ರದಾಯಿಕ ಯೆಹೂದ್ಯರು ಪಾಲಿಸುತ್ತಿದ್ದ ಎಲ್ಲಾ ಸಂಸ್ಕರಣಾ ಆಚಾರಗಳನ್ನು (ಉದಾಹರಣೆಗೆ, ಆಹಾರದ ನಿಯಮಗಳನ್ನು) ಪಾಲಿಸಿರಲಿಕ್ಕಿಲ್ಲ. ಬಹುಶಃ ಇದೇ ಕಾರಣದಿಂದ ತಾನು ಯೆರೂಸಲೇಮಿನ ದೇವಾಲಯವನ್ನು ಪ್ರವೇಶಿಸುವುದಕ್ಕಿಂತ ಮುಂಚೆ ಶುದ್ಧಾಚಾರವನ್ನು ಪಾಲಿಸಬೇಕಾಗಿತ್ತು.

5. ಆ ನಾಲ್ಕು ಪುರುಷರ ಶುದ್ಧೀಕರಣದ ಸಂಸ್ಕಾರದಲ್ಲಿ ಪೌಲನೂ ಸೇರಿಕೊಳ್ಳಬೇಕೆಂದು ಯಾಕೋಬನು ಕೇಳಿಕೊಂಡನು ಯಾಕೆಂದರೆ ಹೀಗೆ ಮಾಡುವುದರ ಮೂಲಕ ಆತನ ಕುರಿತಾದ ಸುದ್ದಿಗಳು ಸುಳ್ಳಾದದ್ದೆಂದೂ ಮತ್ತು ಆತನು ಯೆಹೂದ್ಯ ಸಂಸ್ಕಾರದ ವಿರೋಧಿ ಅಲ್ಲವೆಂದೂ ಎಲ್ಲರೂ ತಿಳುಕೊಳ್ಳುವರು.

6. ಯಾಕೋಬನು ಕೇಳಿಕೊಂಡಿದ್ದನ್ನು ಮಾಡಲು ಪೌಲನು ಒಪ್ಪಿಕೊಂಡನು, ಯಾಕೆಂದರೆ ಆತನು ಯೆಹೂದ್ಯ ಕ್ರೈಸ್ತ ಸಮುದಾಯದ ವ್ಯಾಕುಲತೆಯನ್ನು ಶಾಂತಗೊಳಿಸಬೇಕೆಂದಿದ್ದನು. ಆತನು ಯೆಹೂದ್ಯ ಕ್ರೈಸ್ತರ ಭಾವನೆಗಳಿಗೆ ಧಕ್ಕೆಯುಂಟಾಗಬಾರದೆಂದು ಶುದ್ಧೀಕರಣದ ಕಾರ್ಯದಲ್ಲಿ ತೊಡಗಲು ಮತ್ತು ಶುದ್ಧೀಕರಣದ ಕಾರ್ಯಕ್ಕಾಗಿ ಬಹಳ ಹಣವನ್ನು ತಾನೇ ಭರಿಸಲು ಮನಸ್ಸುಳ್ಳವನಾಗಿದ್ದನು.

# ಉ 58. ಪೌಲನ ಬಂಧನ, 21:27–36

## ಇ) ಪಠ್ಯ ಪ್ರಶ್ನೆಗಳು

1. ಜನಸಮೂಹವನ್ನು ಪ್ರೇರೇಪಿಸಿ ದೇವಾಲಯದಲ್ಲಿ ಪೌಲನನ್ನು ಹಿಡಿದುಕೊಳ್ಳುವಂತೆ ಮಾಡಿದ ಜನರು ರೋಮ್ ಪ್ರಾಂತ್ಯವಾದ ಏಷ್ಯಾದಿಂದ ಬಂದ ಯೆಹೂದ್ಯರಾಗಿದ್ದರು. ಎಫೆಸವು ಇದರ ರಾಜಧಾನಿಯಾಗಿತ್ತು (ವ. 27).

2. ಯೆಹೂದ್ಯ ಜನಸಮೂಹವು ಪೌಲನನ್ನು ಹೊಡೆದು ಕೊಲ್ಲುತ್ತಿದ್ದಾಗ ರೋಮನ್ ಸಹಸ್ರಾಧಿಪತಿಯು ಆತನನ್ನು ಬಂಧಿಸಿದನು. ಆದರೆ ಜನಸಮೂಹದ ಕೂಗಾಟದಿಂದ ಆತನಿಗೆ ಸ್ಪಷ್ಟವಾದ ಉತ್ತರ ಸಿಗಲಿಲ್ಲ, ಹಾಗಾಗಿ ಆತನು ಪೌಲನನ್ನು ಸೇನಾಪಾಳ್ಯಕ್ಕೆ (ಇದು ಎರಡು ಹಂತಗಳ ಮೆಟ್ಟಿಲುಗಳಿಂದ ದೇವಾಲಯಕ್ಕೆ ನಡೆಸುತ್ತಿದ್ದ ಅಂಟೋನಿಯ ಗೋಪುರಕ್ಕೆ) ಕರೆದೊಯ್ಯಬೇಕೆಂದು ಆಜ್ಞಾಪಿಸಿದನು. ಅಲ್ಲಿ ರೋಮನ್ ಸೈನಿಕರ ಠಾಣೆಯಿತ್ತು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಏಷ್ಯಾ ಪ್ರಾಂತ್ಯದ ಯೆಹೂದ್ಯರು ಪಂಚಾಶತ್ತಮದ ಹಬ್ಬಕ್ಕಾಗಿ ಯೆರೂಸಲೇಮಿಗೆ ಬಂದಿದ್ದರು.

2. ಪೌಲನ ವಿರುದ್ಧವಾಗಿ ಎರಡು ಆಪಾದನೆಗಳಿದ್ದವು:
   - ಪೌಲನು ಎಲ್ಲಾ ಕಡೆಯಲ್ಲಿ 'ನಮ್ಮ ಜನರಿಗೂ ನಮ್ಮ ಧರ್ಮಶಾಸ್ತ್ರಕ್ಕೂ ಈ ಸ್ಥಳಕ್ಕೂ ವಿರೋಧವಾಗಿ' ಬೊಧಿಸಿದ್ದಾನೆ (ವ. 28). ಹಾಗಾಗಿ ಪೌಲನು ಯೆಹೂದ್ಯರ, ಧರ್ಮಶಾಸ್ತ್ರದ ಮತ್ತು ದೇವಾಲಯದ ವಿರುದ್ಧ ಮಾತನಾಡಿದನೆಂದು ಆಪಾದಿಸಲ್ಪಟ್ಟನು.
   - ಪೌಲನು ಒಬ್ಬ ಅನ್ಯಮತಸ್ಥನನ್ನು (ಎಫೆಸದ ತ್ರೋಫಿಮನನ್ನು) ದೇವಾಲಯದೊಳಗೆ ಕರೆದುಕೊಂಡು ಬಂದು ಅದನ್ನು ಹೊಲೆ ಮಾಡಿದನೆಂದು ಆಪಾದಿಸಲ್ಪಟ್ಟನು (ವ. 29).

3. ಪೌಲನ ವಿರುದ್ಧವಿದ್ದ ಎರಡು ಆಪಾದನೆಗಳು:
   - ಮೊದಲ ಆಪಾದನೆಯು ತಪ್ಪು ತಿಳುವಳಿಕೆಯಾಗಿತ್ತು. ಪೌಲನು (ಮತ್ತು ಆತನ ಮುಂಚೆ ಸ್ತೆಫನನು) ಯೇಸು ತನ್ನ ಕುರಿತು ಬೋಧಿಸಿದ ಸಂಗತಿಗಳನ್ನೇ ಪುನರಾವರ್ತಿಸಿದನು: ಯೇಸು ಕ್ರಿಸ್ತನು ದೇವಾಲಯದ, ಜನರ ಮತ್ತು ಧರ್ಮಶಾಸ್ತ್ರದ ನೆರವೇರುವಿಕೆಯಾಗಿದ್ದನು. ಪೌಲನು ಈ ಸಂಗತಿಗಳ ವಿರುದ್ಧ ಮಾತನಾಡಲಿಲ್ಲ. ಆತನು ಕೇವಲ ಅವುಗಳ ನಿಜವಾದ ಅರ್ಥವನ್ನು ಮಾತ್ರ ವಿವರಿಸಿದನು.
   - ಎರಡನೆಯ ಆಪಾದನೆಯು ಸುಳ್ಳಾಗಿತ್ತು.

# ಉ 59. ಜನಸಮೂಹಕ್ಕೆ ಪೌಲನ ಪ್ರತಿವಾದ, 21:37–22:21

## ಇ) ಪಥ್ಯ ಪ್ರಶ್ನೆಗಳು

2. ಪೌಲನು ಜನಸಮೂಹದೊಂದಿಗೆ ಮಾತನಾಡಲು ಅಪ್ಪಣೆಯನ್ನು ಕೇಳಿದಾಗ ಸಹಸ್ರಾಧಿಪತಿಯು ಯಾಕೆ ಆಶ್ಚರ್ಯಪಟ್ಟನು, ಯಾಕೆಂದರೆ ಪೌಲನು ಗ್ರೀಕ್ ಭಾಷೆಯಲ್ಲಿ ಮಾತನಾಡಿದನು (ವ. 37).

3. ಪೌಲನು ಗ್ರೀಕ್ ಭಾಷೆಯನ್ನು ಅರಿಯದವನಾಗಿದ್ದ ಒಬ್ಬ ಈಜಿಪ್ಟಿನ ದಂಗೆಕೋರ ಮತ್ತು ಉಗ್ರಗಾಮಿಯೆಂದು ಸಹಸ್ರಾಧಿಪತಿಯು ಭಾವಿಸಿದ್ದನು (ವ. 38).

4. ಅನನೀಯನನ್ನು ಪೌಲನು ಹೀಗೆ ವರ್ಣಿಸಿದನು:
    - ಅನನೀಯನು ಧರ್ಮಶಾಸ್ತ್ರಕ್ಕನುಗುಣವಾಗಿ ಭಕ್ತಿವಂತನಾಗಿದ್ದನು. ಅಂದರೆ ಆತನು ಯೆಹೂದ್ಯರ ಎಲ್ಲಾ ಸಂಪ್ರದಾಯವನ್ನು ಪಾಲಿಸುತ್ತಿದ್ದನು.
    - ಅನನೀಯನು ದಮಸ್ಕದಲ್ಲಿನ ಎಲ್ಲಾ ಯೆಹೂದ್ಯರುಗಳಿಂದ ಗೌರವಿಸಲ್ಪಟ್ಟ ವ್ಯಕ್ತಿಯಾಗಿದ್ದನು. ಅಂದರೆ ಆತನು ನಂಬಿಕೆಗೆ ಅರ್ಹನಾದ ಒಬ್ಬ ವ್ಯಕ್ತಿಯಾಗಿದ್ದನು.

5. ಕರ್ತನು (ಕರ್ತನಾದ ಯೇಸುವನ್ನು ಉಲ್ಲೇಖಿಸುತ್ತಾ) ಯೆರೂಸಲೇಮಿನ ದೇವಾಲಯದಲ್ಲಿ ಪೌಲನು ತಕ್ಷಣವೇ ಯೆರೂಸಲೇಮನ್ನು ಬಿಟ್ಟು ಹೋಗುವಂತೆ ಹೇಳಿದನು, ಯಾಕೆಂದರೆ ಪೌಲನು ಯೇಸುವಿನ ಕುರಿತು ಹೇಳುತ್ತಿದ್ದ ಸಾಕ್ಷಿಯನ್ನು ಅವರು ಸ್ವೀಕರಿಸುತ್ತಿದ್ದಿಲ್ಲ.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ರೋಮನ್ ಸಹಸ್ರಾಧಿಪತಿಗೆ ಪೌಲನು ತನ್ನ ಕೌಟುಂಬಿಕ ಹಿನ್ನಲೆಯ ಕುರಿತು ಈ ಮಾಹಿತಿಯನ್ನು ನೀಡಿದನು:
    - ಆತನು ಒಬ್ಬ ಯೆಹೂದ್ಯನಾಗಿದ್ದನು. ಈ ಮಾಹಿತಿಯು ಪೌಲನು ದೇವಾಲಯವನ್ನು ಪ್ರವೇಶಿಸಲಿಕ್ಕೆ ಆತನಿಗೆ ಹಕ್ಕಿದೆ ಎಂಬುದನ್ನು ಸಹಸ್ರಾಧಿಪತಿಗೆ ತಿಳಿಸಿತು.
    - ಆತನು ಸಿಲಿಸಿಯದ ತಾರ್ಸ ಎಂಬ ಪಟ್ಟಣದಿಂದ ಬಂದವನು ಮತ್ತು ಆ ಪ್ರಸಿದ್ಧವಾದ ನಗರದ ನಾಗರೀಕನಾಗಿದ್ದನು. ಈಗ ರೋಮ್ ಪ್ರಾಂತ್ಯದ ರಾಜಧಾನಿಯಲ್ಲಿ ಪೌಲನು ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದನೆಂದು ಸಹಸ್ರಾಧಿಪತಿಗೆ ತಿಳಿದು ಬಂತು. ಪೌಲನು ಗ್ರೀಕ್ ಭಾಷೆಯನ್ನು ಮಾತನಾಡಬಲ್ಲನೆಂಬುದಾಗಿ ಸಹಸ್ರಾಧಿಪತಿಗೆ ಈಗಾಗಲೇ ತಿಳಿದಿತ್ತು.

ಪೌಲನು ಜನಸಮೂಹದ ಮುಂದೆ ತನ್ನ ಕೌಟುಂಬಿಕ ಹಿನ್ನಲೆಯ ಕುರಿತು ಈ ಮಾಹಿತಿಯನ್ನು ನೀಡಿದನು.

- ಆತನು ಒಬ್ಬ ಯೆಹೂದ್ಯನಾಗಿದ್ದನು. ದೇವಾಲಯವನ್ನು ಪ್ರವೇಶಿಸಲಿಕ್ಕೆ ಆತನಿಗೆ ಹಕ್ಕಿತ್ತು!
- ಆತನು ತಾರ್ಸದಿಂದ ಬಂದವನು. ಹಾಗಾಗಿ ಪೌಲನು ಚದುರಿಸಲ್ಪಟ್ಟ ಯೆಹೂದ್ಯರ ಗುಂಪಿನಿಂದ ಬಂದವನಾಗಿದ್ದನು.
- ಆದರೆ ಆತನು ಯೆರೂಸಲೇಮಿನಲ್ಲಿ ಬೆಳೆದು ಬಂದನು ಮತ್ತು ಗಮಲಿಯೇಲನ ಬಳಿಯಲ್ಲಿ ತರಬೇತಿಯನ್ನು ಹೊಂದಿದನು. ಈಗ ಯೆಹೂದ್ಯ ಜನಸಮೂಹವು ಪೌಲನು ಧರ್ಮಶಾಸ್ತ್ರವನ್ನು ಎಳೆ ಎಳೆಯಾಗಿ ಪಾಲಿಸುವ ಫರಿಸಾಯರ ಗುಂಪಿನಿಂದ ಬಂದವನೆಂದು ತಿಳಿಯಿತು.
- ಯಾವುದೇ ಯೆಹೂದ್ಯನಂತೆ ಆತನೂ ದೇವರಿಗಾಗಿ ವೈರಾಗ್ಯವುಳ್ಳವನಾಗಿದ್ದನು. ಇದು ಪೌಲನು ಒಬ್ಬ ಉದಾಸೀನಮಾಡುವ ಫರಿಸಾಯನಾಗಿರದೆ ಯೆಹೂದ್ಯ ನಂಬಿಕೆ ಮತ್ತು ಸಂಸ್ಕೃತಿಯನ್ನು ಬೆಂಬಲಿಸಿದ ಧರ್ಮಾಂಧನಾಗಿದ್ದನೆಂಬುದನ್ನು ಜನಸಮೂಹಕ್ಕೆ ತಿಳಿಸಿತು.

ಪೌಲನು ತಾರ್ಸದ ಪೌರತ್ವವನ್ನು ಹೊಂದಿದ ಸಂಗತಿಯನ್ನು ಸಹಸ್ರಾಧಿಪತಿಗೆ ತಿಳಿಸಿದ್ದು ಗ್ರೀಕ್ ಮತ್ತು ರೋಮನ್ ಸಮಾಜದಲ್ಲಿ ಪೌಲನಿಗಿದ್ದ ಸ್ಥಾನಮಾನವನ್ನು ಒತ್ತಿಹೇಳಿತು. ಆತನು ಗಮಲಿಯೇಲನ ಅಡಿಯಲ್ಲಿ ಹೊಂದಿದ ಧಾರ್ಮಿಕ ತರಬೇತಿ ಮತ್ತು ದೇವರ ಬಗ್ಗೆ ಆತನಲ್ಲಿದ್ದ ವೈರಾಗ್ಯವು ಯೆಹೂದ್ಯ ಸಮಾಜದಲ್ಲಿ ಪೌಲನಿಗಿದ್ದ ಸ್ಥಾನಮಾನವನ್ನು ಒತ್ತಿಹೇಳಿತು.

2. ನಾವು ನಮ್ಮ ವೈಯಕ್ತಿಕ ಸಾಕ್ಷಿಯನ್ನು ಹಂಚಿಕೊಳ್ಳುವಾಗ ಸಾಮಾನ್ಯವಾಗಿ ನಾವು ಹೇಳುವುದನ್ನು (ಮತ್ತು ಹೇಳುವ ರೀತಿಯನ್ನು) ನಮ್ಮ ಶ್ರೋತೃಗಳಿಗೆ ತಕ್ಕಂತೆ ಮರುರೂಪಿಸುತ್ತೇವೆ. ದೇವಾಲಯದ ಅಂಗಳದಲ್ಲಿ ಪೌಲನು ಸಾಕ್ಷಿಕರಿಸಿದಾಗ ಈ ರೀತಿಯಲ್ಲಿ ಯೆಹೂದ್ಯರ ಜನಸಮೂಹಕ್ಕೆ ಅದನ್ನು ಮರುರೂಪಿಸಿದ್ದನ್ನು ನಾವು ಕಾಣಬಹುದು:
    - ಆತನು ತನ್ನ ಯೆಹೂದ್ಯ ಹಿನ್ನಲೆಯ ಕುರಿತು ಮತ್ತು ಗಮಲಿಯೇಲನ ಅಡಿಯಲ್ಲಿ ಹೊಂದಿದ ತನ್ನ ಧಾರ್ಮಿಕ ಶಿಕ್ಷಣದ ಕುರಿತು ಹೇಳಿದನು (ವ. 3).
    - ಆತನು ನಿರ್ದಿಷ್ಟವಾಗಿ ತನ್ನ ದೈವಾಭಿಮಾನವನ್ನು ಮತ್ತು ನ್ಯಾಯಸಭೆಯವರಿಂದ ಮನ್ನಣೆಯನ್ನು ಪಡೆದು 'ಈ ಮಾರ್ಗದಲ್ಲಿರುವವರಿಗೆ' ಹಿಂಸಕನಾಗಿದ್ದನ್ನು ತಿಳಿಸಿದನು (ವ. 3–4).
    - ತನ್ನ ಮಾನಸಾಂತರವು ತನ್ನ ಸ್ವಂತ ಮುಂದಾಳತ್ವದಿಂದ ಆಗದೆ ಅದು ಒಂದು ದೈವ ಪ್ರಕಟಣೆಯ ಫಲಿತಾಂಶದಿಂದ ಉಂಟಾದದ್ದೆಂದು ತಿಳಿಸಿದನು (ವ. 6–8).
    - ಆತನು ಅನನೀಯನನ್ನು ಒಬ್ಬ ಭಕ್ತಿವಂತ ಯೆಹೂದ್ಯನೆಂದೂ ಮತ್ತು ಗೌರವವುಳ್ಳ ಒಬ್ಬ ವ್ಯಕ್ತಿಯೆಂದೂ ವರ್ಣಿಸಿದನು (ವ. 12).
    - ಕರ್ತನು ತನಗೆ ದರ್ಶನಕೊಟ್ಟು ತಾನು ಯೆರೂಸಲೇಮನ್ನು ಬಿಟ್ಟು ಹೋಗುವಂತೆ ಹೇಳಿದ್ದು ದೇವಾಲಯದಲ್ಲಿಯೇ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಿದನು (ವ. 17–18).

3. ಪೌಲನು ಪರಿವರ್ತನೆಯಾದ ನಂತರ ಮೊದಲ ಬಾರಿಗೆ ಯೆರೂಸಲೇಮನ್ನು ಭೇಟಿ ನೀಡಿದ ಕುರಿತಾದ ಅಪೊಸ್ತಲರ ಕೃತ್ಯಗಳಲ್ಲಿರುವ ಎರಡು ಕಥೆಗಳು (ವ. 17–18 ಮತ್ತು 9:26–30 ನ್ನು ನೋಡಿರಿ) ಬಹಳ ವ್ಯತ್ಯಾಸವುಳ್ಳದ್ದಾಗಿದೆ:

- ಅಧ್ಯಾಯ 9 ರಲ್ಲಿರುವ ಕಥೆಯು ಹೆಚ್ಚು ವಿವರವುಳ್ಳದ್ದಾಗಿದೆ. ಇದು ಯೆರೂಸಲೇಮ್ ಸಭೆಯೊಂದಿಗೆ ಪೌಲನಿಗಿದ್ದ ಸಂಬಂಧವನ್ನು ಕೇಂದ್ರಿಕರಿಸುತ್ತದೆ: ಆತನು ವಿಶ್ವಾಸಿಗಳೊಂದಿಗೆ ಸೇರಿಕೊಳ್ಳಲು ಪ್ರಯತ್ನಿಸಿದಾಗ್ಯೂ ಅವರು ಆತನ ಬಗ್ಗೆ ಹೆದರಿದ ಸಂಗತಿ. ಬಾರ್ನಬನು ಹೇಗೆ ಆತನ ಬಗ್ಗೆ ಕಾಳಜಿ ತೆಗೆದುಕೊಂಡು ಅಪೊಸ್ತಲರಿಗೆ ಆತನನ್ನು ಪರಿಚಯಿಸಿ ದಮಸ್ಕದಲ್ಲಿ ಪೌಲನಿಗಾದ ನಾಟಕೀಯ ರೂಪದ ಮಾನಸಾಂತರದ ಕುರಿತು ಮತ್ತು ಆತನು ಯಾವ ಭಯವಿಲ್ಲದೆ ಸುವಾರ್ತೆಯನ್ನು ಅಲ್ಲಿ ಸಾರಿದ್ದರ ಕುರಿತು ಅವರಿಗೆ ತಿಳಿಸಿದ ಸಂಗತಿ. ಪೌಲನು ಯೆರೂಸಲೇಮಿನ ವಿವಿಧ ಸ್ಥಳಗಳಲ್ಲಿ ಹೇಗೆ ಧೈರ್ಯದಿಂದ ಕರ್ತನ ನಾಮವನ್ನು ಸಾರಿದನು, ಮತ್ತು ವಿಶೇಷವಾಗಿ ಗ್ರೀಕ್ ಮಾತನಾಡುವ ಯೆಹೂದ್ಯರೊಂದಿಗೆ ಚರ್ಚಿಸಿದ ಸಂಗತಿ. ಯೆಹೂದ್ಯರು ಹೇಗೆ ಆತನನ್ನು ಕೊಲ್ಲಲಿಕ್ಕೆ ಪ್ರಯತ್ನಿಸಿದರು ಮತ್ತು ವಿಶ್ವಾಸಿಗಳು ಪೌಲನ ಜೀವವನ್ನು ಉಳಿಸುವ ನಿಟ್ಟಿನಲ್ಲಿ ಯೆರೂಸಲೇಮಿನಿಂದ ಆತನನ್ನು ಬೇರೆಡೆಗೆ ಕಳುಹಿಸಿದ ಸಂಗತಿ. ದೇವಾಲಯದಲ್ಲಿನ ದರ್ಶನದ ಕುರಿತಾಗಿ ಏನೂ ತಿಳಿಸಲ್ಪಟ್ಟಿಲ್ಲ.
- ಅಧ್ಯಾಯ 22 ರಲ್ಲಿ ಪೌಲನು ದೇವಾಲಯದಲ್ಲಿ ತನಗುಂಟಾದ ದರ್ಶನದ ಕುರಿತು ಮತ್ತು ತನ್ನ ಸೇವೆಯ ಕುರಿತು ಕರ್ತನೊಂದಿಗೆ ಮಾಡಿದ 'ತರ್ಕ'ದ ಮೇಲೆ ಕೇಂದ್ರಿಕರಿಸುತ್ತಾನೆ – ಆತನು ಯೆರೂಸಲೇಮಿನಲ್ಲಿಯೇ ಉಳಿದುಕೊಂಡು ಅಲ್ಲಿರುವ ಯೆಹೂದ್ಯರಿಗೆ ಬೋಧಿಸಬೇಕೋ ಅಥವಾ ಆತನು ದೂರದಲ್ಲಿರುವ ಅನ್ಯರ ಬಳಿಗೆ ಹೋಗಬೇಕೋ?
- ಪೌಲನ ಜೀವಿತದಲ್ಲಿ ಏಕ ಕಾಲದಲ್ಲಿ ನಡೆದ ಘಟನೆಯ ಕುರಿತಾದ ಈ ಎರಡು ದಾಖಲೆಗಳು ಅಷ್ಟು ವ್ಯತ್ಯಾಸವಾಗಿರಲಿಕ್ಕೆ ಕಾರಣವೇನೆಂದರೆ, ಅವರೆಡೂ ವ್ಯತ್ಯಾಸವಾದ ಉದ್ದೇಶದಿಂದ ಹೇಳಲ್ಪಟ್ಟಿದೆ. ಅ. ಕೃ. 9 ರಲ್ಲಿ, ಪೌಲನು ಯೆರೂಸಲೇಮಿನ ಸಭೆಯಿಂದ ಮತ್ತು ಅದರ ನಾಯಕತ್ವದಿಂದ ಹೇಗೆ ಸ್ವೀಕರಿಸಲ್ಪಟ್ಟನು ಎಂಬ ಹಿನ್ನಲೆಯನ್ನು ವಿವರಿಸಲು ಲೂಕನು ಅದನ್ನು ಬರೆಯುತ್ತಾನೆ. ಅ. ಕೃ. 22 ರಲ್ಲಿ, ಪೌಲನು ರೋಷಗೊಂಡಿದ್ದ ಯೆಹೂದ್ಯ ಜನಸಮೂಹವು ಆತನ ಯೆಹೂದ್ಯ ನಿಷ್ಠೆಯನ್ನು ಪ್ರಶ್ನಿಸಿದ ಹಿನ್ನಲೆಯಲ್ಲಿ ಪೌಲನು ತನ್ನ ಸಾಕ್ಷಿಯನ್ನು ಹಂಚಿಕೊಳ್ಳುತ್ತಿದ್ದಾನೆ.

# ಉ 60. ರೋಮನ್ ಪೌರನಾದ ಪೌಲನು, 22:22–29

## ಇ) ಪಠ್ಯ ಪ್ರಶ್ನೆಗಳು

1. ಯೆಹೂದ್ಯ ಜನಸಮೂಹವು ಯಾಕೆ ಪೌಲನ ವಿರುದ್ಧವಾಗಿ ಕೂಗುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಸಹಸ್ರಾಧಿಪತಿಯು ಪೌಲನನ್ನು ಕೊರಡೆಗಳಿಂದ ಹೊಡೆದು ವಿಚಾರಿಸಬೇಕೆಂದು ಆಜ್ಞಾಪಿಸಿದನು. ಆ ಸಹಸ್ರಾಧಿಪತಿಯು ಗ್ರೀಕ್ ಮೂಲದವನಾಗಿದ್ದನು ಮತ್ತು ಬಹುಶಃ ಪೌಲನು ಜನಸಮೂಹಕ್ಕೆ ಅರಾಮಿಕ್ ಭಾಷೆಯಲ್ಲಿ ಏನು ಹೇಳಿದನೆಂಬುದು ಆತನಿಗೆ ಅರ್ಥವಾಗಿರಲಿಕ್ಕಿಲ್ಲ.

2. ಶತಾಧಿಪತಿಯು ಪೌಲನು ಒಬ್ಬ ರೋಮ್ ಪೌರನೆಂಬ ಮಾಹಿತಿಯನ್ನು ತಿಳಿದುಕೊಂಡ ತಕ್ಷಣವೇ ಆತನು ಸಹಸ್ರಾಧಿಪತಿಗೆ ತಿಳಿಸಲು ಹೋದನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನ ಸಾಕ್ಷಿಯನ್ನು ಕೇಳಿದ ಯೆಹೂದ್ಯ ಜನಸಮೂಹವು ಅತೀ ರೋಷವುಳ್ಳವರಾಗಿ 'ಇಂಥವನನ್ನು ಭೂಲೋಕದಿಂದ ತೊಲಗಿಸಿರಿ! ಇವನು ಜೀವಿಸುವುದಕ್ಕೆ ಯೋಗ್ಯನಲ್ಲ!' ಎಂದು ಕೂಗಿದರು. ಅವರ ತೀಕ್ಷ್ಣವಾದ ಪ್ರತಿಕ್ರಿಯೆಗೆ 'ಅನ್ಯರು' ಎಂಬ ಪದವೇ ಕಾರಣವಾಗಿತ್ತು. ಅನ್ಯರು ಮೊದಲು ಮೋಶೆಯ ಧರ್ಮಶಾಸ್ತ್ರಕ್ಕೆ ಒಳಪಡದಿದ್ದಾಗ್ಯೂ ಅವರಿಗೆ ರಕ್ಷಣೆಯನ್ನು ಅರ್ಪಿಸಲು ತನಗೆ ದೈವಿಕವಾದ ಆಜ್ಞೆಯುಂಟಾಗಿದೆ ಎಂದು ಪೌಲನು ಘೋಷಿಸಿದ ಸಂಗತಿಯು ಅವರನ್ನು ಕೆಣಕಿತು. ಈಗ ಪೌಲನ ವಿರುದ್ಧವಾಗಿ ಮಾಡಲ್ಪಟ್ಟ ದೋಷಾರೋಪಣೆಯಲ್ಲಿ ಸತ್ಯವಿದೆ ಎಂಬ ಪುರಾವೆಯು ಯೆಹೂದ್ಯರಿಗೆ ಸಿಕ್ಕಿತು: ಆತನು ನಿಜವಾಗಲೂ 'ನಮ್ಮ ಧರ್ಮಶಾಸ್ತ್ರಕ್ಕೂ ಈ ಸ್ಥಳಕ್ಕೂ ವಿರೋಧವಾಗಿ ಎಲ್ಲಾ ಜನರಿಗೆ ಬೋಧಿಸಿದನು' (21:28).

2. ಪೌಲನು ತಾನೊಬ್ಬ ರೋಮನ್ ಪೌರನೆಂಬುದನ್ನು ಸಹಸ್ರಾಧಿಪತಿಗೆ ತಕ್ಷಣವೇ ತಿಳಿಸಲಿಲ್ಲ. ಇದರ ಹಿಂದಿನ ಕಾರಣವನ್ನು ಲೂಕನು ನಮಗೆ ತಿಳಿಸುತ್ತಿಲ್ಲ. ಫಿಲಿಪ್ಪಿಯಲ್ಲಿಯೂ ಇಂತಹದ್ದೇ ರೀತಿಯಾದ ಘಟನೆ ನಡೆದಿದ್ದನ್ನು ನೀವು ನೆನಪಿಸಿಕೊಳ್ಳಬಹುದು (16:35–39).
ಬಹುಶಃ ಪೌಲನು ತಾನೊಬ್ಬ ರೋಮನ್ ಪೌರನೆಂಬ ವಿಷಯದ ಸದಾವಕಾಶವನ್ನು ಪಡೆದುಕೊಳ್ಳಬೇಕೆಂದು ಬಯಸಲಿಲ್ಲ – ಅತ್ಯಾವಶ್ಯಕ ಸನ್ನಿವೇಶವನ್ನು ಹೊರತುಪಡಿಸಿ.

# ಉ 61. ನ್ಯಾಯಸಭೆಯ ಮುಂದೆ, 22:30–23:11

## ಇ) ಪಠ್ಯ ಪ್ರಶ್ನೆಗಳು

1. ಯೆಹೂದ್ಯರು ಪೌಲನ ವಿರುದ್ಧ ಮಾಡಿದ ದೋಷಾರೋಪಣೆ ಏನೆಂಬುದನ್ನು ನಿಖರವಾಗಿ ಕಂಡುಹಿಡಿಯಲು ಸಹಸ್ರಾಧಿಪತಿಯು ಪೌಲನನ್ನು ಮಹಾಯಾಜಕನ ಮತ್ತು ನ್ಯಾಯಸಭೆಯವರ ಮುಂದೆ ಕರೆತಂದನು (ವ. 30). ಪೌಲನ ಕುರಿತಾಗಿ ಸತ್ಯವನ್ನು ತಿಳಿದುಕೊಳ್ಳಲು ಇದು ಆತನು ಮಾಡಿದ ಮೂರನೆಯ ಪ್ರಯತ್ನವಾಗಿತ್ತು. ಮೊದಲನೆಯ ಬಾರಿ ಆತನು ಜನಸಮೂಹಕ್ಕೆ ಕೇಳುವುದರ ಮೂಲಕ ಪ್ರಯತ್ನಿಸಿದನು ಆದರೆ ಒಬ್ಬರು ಒಂದನ್ನು ಮತ್ತು ಇನ್ನೊಬ್ಬರು ಇನ್ನೊಂದನ್ನು ಕೂಗಿದರು (21:33–34). ಎರಡನೆಯ ಬಾರಿ ಆತನು ಪೌಲನನ್ನು ಕೊರಡೆಗಳಿಂದ ಹೊಡೆಸಿ ಆತನನ್ನು ಪ್ರಶ್ನಿಸುವದರ ಮೂಲಕ ಸತ್ಯಾಂಶವನ್ನು ತಿಳಿಯಲು ಪ್ರಯತ್ನಿಸಿದನು (22:24). ಆದರೆ ಪೌಲನು ತಾನೊಬ್ಬ ರೋಮನ್ ಪೌರನೆಂಬುದಾಗಿ ಅಲ್ಲಿದ್ದ ಅಧಿಕಾರಿಗೆ ತಿಳಿಸಿದಾಗ ಈ ಪ್ರಯತ್ನವೂ ವಿಫಲವಾಯಿತು.

2. ಪೌಲನು ತಾನೊಬ್ಬ ಫರಿಸಾಯನು ಮತ್ತು ಸತ್ತವರು ಪುನರುತ್ಥಾನವಾಗುವರೆಂದು ತನಗೆ ನಿರೀಕ್ಷೆಯಿದೆ ಎಂದು ಘೋಷಿಸುವುದರ ಮೂಲಕ ಪೌಲನು ಉದ್ದೇಶಪೂರ್ವಕವಾಗಿ ಸದ್ದುಕಾಯರ ಮತ್ತು ಫರಿಸಾಯರ ನಡುವೆ ಜಗಳ ಹುಟ್ಟಿಸಿದನು ಎಂಬುದಾಗಿ ಲೂಕನು ಸೂಚಿಸುತ್ತಿರುವಂತೆ ತೋರುತ್ತದೆ.

3. ಮರುದಿನ ರಾತ್ರಿ ಯೇಸು ಪೌಲನಿಗೆ ದರ್ಶನದಲ್ಲಿ ಕಾಣಿಸಿಕೊಂಡು ಆತನಿಗೆ ಧೈರ್ಯದಿಂದಿರಲು ಹೇಳಿದನು. ಅದಲ್ಲದೆ ಪೌಲನು ರೋಮ್‌ನಲ್ಲಿ ಸುವಾರ್ತೆಯನ್ನು ಸಾರಲಿಕ್ಕಿದ್ದಾನೆಂಬುದನ್ನೂ ಸಹ ತಿಳಿಸಿದನು (ವ. 11). ಪೌಲನ ಸೇವೆಯು ಇನ್ನೂ ಕೊನೆಗೊಂಡಿರಲಿಲ್ಲ!

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅನನೀಯನಿಗೆ ಅಷ್ಟು ಕೋಪ ಬರಲು ಕಾರಣವೇನೆಂದರೆ, ಬಹುಶಃ ಪೌಲನು ತನ್ನ ಜೀವಮಾನವೆಲ್ಲಾ ದೇವರ ಮುಂದೆ (ತನ್ನ ಪರಿವರ್ತನೆಯ ಮುಂಚೆಯೂ ಮತ್ತು ನಂತರದಲ್ಲಿಯೂ) ಒಳ್ಳೆಯ ಮನಸಾಕ್ಷಿಯಿಂದ ನಡೆದುಕೊಂಡಿದ್ದೇನೆ ಎಂದು ಹೇಳಿದ ಮಾತನ್ನು ಆತನು ದೇವದೂಷಣೆಯಾಗಿ (ಅಥವಾ ಕನಿಷ್ಠ ಪಕ್ಷ ಅಹಂಕಾರವಾಗಿ) ಅರ್ಥೈಸಿಕೊಂಡನು. ಹಾಗಾಗಿ ಪಕ್ಕದಲ್ಲಿ ನಿಂತಿದ್ದವರು ಪೌಲನ ಬಾಯಿಗೆ ಹೊಡೆಯಬೇಕೆಂದು ಆತನು ಆಜ್ಞಾಪಿಸಿದನು!

2. ಪ್ರಾರಂಭದಲ್ಲಿ ಪೌಲನು ಈಗ ಒಬ್ಬ ವಿಶ್ವಾಸಿಯಾಗಿದ್ದಾಗ್ಯೂ ತಾನೊಬ್ಬ ಫರಿಸಾಯನೆಂದು ಹೇಳಿಕೊಂಡಿದ್ದು ನನಗೆ ಬಹಳ ವಿಚಿತ್ರವೆನಿಸಿತು (ವ. 6). ಆದರೆ ಇನ್ನೊಂದು ಕಡೆಯಿಂದ, ಪೌಲನು ಹೇಳಿದ್ದು ಸತ್ಯವಾದದ್ದು:

- ಆತನು ಫರಿಸಾಯರ ಕುಟುಂಬದಿಂದ ಬಂದವನು. ಆತನು ಫರಿಸಾಯರ ಸಂಪ್ರದಾಯದಲ್ಲಿ ಶಿಕ್ಷಿತನಾದವನು ಮತ್ತು ತನ್ನ ಪರಿವರ್ತನೆಯ ಮುಂಚೆ ಆತನು ಬಹಳ ವೈರಾಗ್ಯವುಳ್ಳ ಫರಿಸಾಯನಾಗಿದ್ದನು. ಹಾಗಾಗಿ ಆತನು 'ನಾನೊಬ್ಬ ಫರಿಸಾಯನು' ಎಂದು ಹೇಳಿದ್ದು ತಪ್ಪಾದುದ್ದಲ್ಲ. ದೇವರ ರಾಜ್ಯದಲ್ಲಿ ಯಾವುದೇ ಜಾತಿ ಬೇಧವಿಲ್ಲದಿದ್ದಾಗ್ಯೂ ಕರ್ನಾಟಕದಲ್ಲಿನ ಕೆಲವು ವಿಶ್ವಾಸಿಗಳು 'ನಾನು ಒಬ್ಬ ಲಿಂಗಾಯತ್ ಕುಟುಂಬದವನು' ಎಂದು ಹೇಳುವುದನ್ನು ನಾನು ಕೇಳಿದ್ದೇನೆ! ಇದು ಇತರೆ ಕೆಲವು ಭಾರತೀಯ ವಿಶ್ವಾಸಿಗಳು 'ನಾನು ಕ್ರೈಸ್ತನಲ್ಲ, ನಾನೊಬ್ಬ ಹಿಂದೂ' – ಅಂದರೆ ಅವರು ಹಿಂದೂ ಕುಟುಂಬದ ಹಿನ್ನಲೆಯಿಂದ ರಕ್ಷಿಸಲ್ಪಟ್ಟವರು ಎಂದರ್ಥ– ಎಂದು ಹೇಳಿದ್ದನ್ನು ನನ್ನ ನೆನಪಿಗೆ ತರುತ್ತದೆ. ಇದು ಹೊರಗಿನವರಿಗೆ ಬಹಳ ವಿಚಿತ್ರವೆನ್ನಿಸುತ್ತದೆ!

- ಪುನರುತ್ಥಾನದ ಸಿದ್ಧಾಂತವು ಪೌಲನ ನಂಬಿಕೆಯ ಕೇಂದ್ರಬಿಂದುವಾಗಿತ್ತು, ಹಾಗಾಗಿ ಆತನು ಫರಿಸಾಯರೊಂದಿಗೆ ಪುನರುತ್ಥಾನದ ಸತ್ಯವನ್ನು ಮತ್ತು ನಿರೀಕ್ಷೆಯನ್ನು ನಂಬಿದನೆಂದು ಯಥಾರ್ಥವಾಗಿ ಹೇಳಿದನು. ಈ ವಾಕ್ಯಭಾಗದಲ್ಲಿ ಲೂಕನು ತಿಳಿಸುತ್ತಿರುವ ಮಾಹಿತಿಯು ಖಂಡಿತವಾಗಲೂ ಆತನು ಹೇಳಿದ್ದರ ಸಾರಂಶ ಮಾತ್ರವಾಗಿದೆ. ಪೌಲನು ತನ್ನ ಪರಿವರ್ತನೆಯ ಸಾಕ್ಷಿಯನ್ನು – ಅಂದರೆ, ದಮಸ್ಕದ ರಸ್ತೆಯಲ್ಲಿ ಪುನರುತ್ಥಾನನಾದ ಯೇಸುವನ್ನು ಸಂಧಿಸಿದ್ದನ್ನು – ಹಂಚಿಕೊಂಡಿರಬೇಕು (ವಚನ 9 ರಲ್ಲಿ ಫರಿಸಾಯರು ಹೇಳಿದ ಸಂಗತಿಯಿಂದ ಇದನ್ನು ನಾವು ತಿಳುಕೊಳ್ಳಬಹುದು). ಕ್ರೈಸ್ತ ನಂಬಿಕೆಯು ಸಂಪೂರ್ಣವಾಗಿ ಯೇಸುವಿನ ದೈಹಿಕವಾದ ಪುನರುತ್ಥಾನದ ಸಿದ್ಧಾಂತದ ಮೇಲೆ ಆತುಕೊಂಡಿದೆ — ಮತ್ತು ಇದರ ಪರಿಣಾಮವಾಗಿ ವಿಶ್ವಾಸಿಗಳ ದೈಹಿಕವಾದ ಪುನರುತ್ಥಾನದ ಸತ್ಯತೆ ಮತ್ತು ನಿರೀಕ್ಷೆಯು ಬಂದಿತು. ಹಾಗಾಗಿ ಪೌಲನು ಹೇಳಿದ ಸಂಗತಿಯು ('ಸತ್ತವರ ಪುನರುತ್ಥಾನದ ನಿರೀಕ್ಷೆಯ ವಿಷಯದಲ್ಲಿ ನಾನು ನ್ಯಾಯವಿಚಾರಣೆಗೆ ಗುರಿಯಾಗಿದ್ದೇನೆ') ಸತ್ಯವಾದದ್ದು.

3. ಸಹಸ್ರಾಧಿಪತಿಯು ಪೌಲನನ್ನು ಪುನಃ ಕೋಟೆಯೊಳಗೆ ಕರೆದುಕೊಂಡು ಹೋದಾಗ ಆತನು ಬಹಳವಾಗಿ ಕುಗ್ಗಿಹೋಗಿರಬಹುದೆಂದು ನಾನು ಆಲೋಚಿಸುತ್ತೇನೆ. ಕಳೆದ ಎರಡು ದಿನಗಳವರೆಗೆ ಆತನು ತುಂಬಾ ಹಿಂಸೆಯನ್ನು ಅನುಭವಿಸಿದ್ದನು. ಯೆಹೂದ್ಯರು ಆತನ ಕುರಿತು ತುಂಬಾ ಕೋಪವುಳ್ಳವರಾಗಿದ್ದರು ಮತ್ತು ಆತನನ್ನು ಕೊಲ್ಲಬೇಕೆಂದು ಅವರು ಬಯಸಿದ್ದರು. ತಾನು ಯೆರೂಸಲೇಮಿನಿಂದ ಜೀವಂತವಾಗಿ ತಪ್ಪಿಸಿಕೊಳ್ಳಲಿಕ್ಕೆ ಯಾವುದಾದರೂ ಅವಕಾಶವಿದೆಯೋ ಎಂದು ಆಲೋಚಿಸಿರಬಹುದು. ಮತ್ತು ಆತನು ರೋಮ್‌ಗೆ ಹೋಗುವ ಯೋಜನೆ ಏನಾಗುವುದು? ಹಾಗಾಗಿ ಯೇಸು ದರ್ಶನದಲ್ಲಿ ಪೌಲನಿಗೆ ಹೇಳಿದ ಮಾತು ಆತನಿಗೆ ಬಹಳ ಆದರಣೆಯನ್ನುಂಟುಮಾಡಿರಬೇಕು!

## ಉ 62. ಪೌಲನನ್ನು ಕೊಲ್ಲಲು ಒಳಸಂಚು, 23:12–22

### ಇ) ಪಠ್ಯ ಪ್ರಶ್ನೆಗಳು

1. ಪೌಲನನ್ನು ಕೊಲ್ಲುವ ಒಳಸಂಚಿನಲ್ಲಿ ನಲ್ವತ್ತಕ್ಕಿಂತಲೂ ಹೆಚ್ಚು ಜನ ಯೆಹೂದ್ಯ ಧರ್ಮಾಂಧರು ಪಾಲ್ಗೊಂಡಿದ್ದರು (ವ. 13). ನಂತರ ಅವರು ಮುಖ್ಯಯಾಜಕರ ಹಾಗೂ ಹಿರಿಯರ (ಬಹುಶಃ ನ್ಯಾಯಸಭೆಯ ಒಂದು ಗುಂಪಾದ ಸದ್ದುಕಾಯರ) ಬಳಿಗೆ ಹೋಗಿ ಅವರೂ ಸಹ ಈ ಒಳಸಂಚಿನ ನಿರ್ವಹಣೆಯಲ್ಲಿ ಪಾಲ್ಗೊಳ್ಳುವಂತೆ ಭಾಗಿ ಮಾಡಿಕೊಂಡರು (ವ. 14–15).

2. ಅವರ ಒಳಸಂಚು ಈ ರೀತಿಯಾಗಿತ್ತು:
    - ಹೆಚ್ಚಿನ ವಿಚಾರಣೆಗಾಗಿ ಪೌಲನನ್ನು ತಮ್ಮ ಮುಂದೆ ತರುವಂತೆ ಮಹಾಯಾಜಕರು ಮತ್ತು ಹಿರಿಯರು ಸಹಸ್ರಾಧಿಪತಿಯನ್ನು ಬೇಡಿಕೊಳ್ಳಬೇಕು (ವ. 15).
    - (ದೇವಾಲಯದ ನೈರುತ್ಯ ದಿಕ್ಕಿನ ಮೂಲೆಯಲ್ಲಿದ್ದ) ನ್ಯಾಯಸಭೆಯ ಕೋಣೆಯ ಮತ್ತು (ದೇವಾಲಯದ ವಾಯುವ್ಯ ದಿಕ್ಕಿನ ಮೂಲೆಯಲ್ಲಿದ್ದ) ರೋಮನ್ ಸೇನಾಪಾಳ್ಯದ ಕಿರಿದಾದ ಹಾದಿಯ ನಡುವೆ ಒಳಸಂಚುಗಾರರು ಹೊಂಚುಹಾಕಿ ಕಾಯ್ದುಕೊಂಡಿರಬೇಕು, ನಂತರ ಪೌಲನಿಗೆ ರಕ್ಷಣೆಕೊಡುತ್ತಿದ್ದ ರೋಮನ್ ಸೈನಿಕರ ಮೇಲೆ ದಾಳಿ ಮಾಡಿ ಪೌಲನನ್ನು ಕೊಲ್ಲಬೇಕು (ವ. 16).

3. ಈ ಒಳಸಂಚನ್ನು ಮರುದಿನವೇ ಕಾರ್ಯರೂಪಕ್ಕೆ ತರಬೇಕೆಂದಿದ್ದರು (ವ. 20).

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನ ಸಹೋದರಿಯ ಮಗನು ಈ ಒಳಸಂಚನ್ನು ಹೇಗೆ ಕೇಳಿಸಿಕೊಂಡನೆಂದು ಲೂಕನು ಬರೆಯುತ್ತಿಲ್ಲ, ಹಾಗಾಗಿ ನಾವು ಕೇವಲ ಊಹಿಸಬಹುದಷ್ಟೆ:
    - ಒಳಸಂಚುಗಾರರು ಪೌಲನ ಸಹೋದರಿಯ ಮನೆಯಲ್ಲಿ ಒಟ್ಟಾಗಿ ಸೇರಿರಬಹುದು, ಆ ಸಂದರ್ಭದಲ್ಲಿ ಯುವಕನು ಅವರ ಒಳಸಂಚನ್ನು ಗುಪ್ತವಾಗಿ ಕೇಳಿಸಿಕೊಂಡಿರುವ ಒಂದು ಸಾಧ್ಯತೆಯುಂಟು. ಬಹುಶಃ ಶಪಥ ಮಾಡಿದ ಪುರುಷರಲ್ಲಿ ಆತನ ತಂದೆಯೂ ಒಬ್ಬನಾಗಿದ್ದಿರಬಹುದು. ಅದು ನಮಗೆ ಗೊತ್ತಿಲ್ಲ.
    - ಈ ಯುವಕನು ಆ ಒಳಸಂಚನ್ನು ಮುಖ್ಯಯಾಜಕರಿಂದಲೂ ಮತ್ತು ಹಿರಿಯರಿಂದಲೂ ಕೇಳಿಸಿಕೊಂಡಿರುವ ಸಾಧ್ಯತೆಯು ಅಸಂಭವನೀಯವಾಗಿದೆ. ಪೌಲನ ಕುಟುಂಬವು ಫರಿಸಾಯರೊಂದಿಗೆ ಸಂಬಂಧಹೊಂದಿತ್ತೆಂದು ನಮಗೆ ತಿಳಿದಿದೆ. ಒಳಸಂಚುಗಾರರು ತಮ್ಮ ಒಳಸಂಚಿನಲ್ಲಿ ಭಾಗಿಮಾಡಿಕೊಂಡ ಯೆಹೂದ್ಯ ನಾಯಕರು ಬಹುಶಃ ಸದ್ದುಕಾಯರಾಗಿದ್ದರು, ಯಾಕೆಂದರೆ ಮಹಾಯಾಜಕನೂ ಒಬ್ಬ ಸದ್ದುಕಾಯನಾಗಿದ್ದನು

ಮತ್ತು ಪೌಲನನ್ನು ಕೊಲ್ಲಲು ಫರಿಸಾಯರಿಗಿಂತಲೂ ಸದ್ದುಕಾಯರಿಗೆ ಬಲವುಳ್ಳ ಕಾರಣವಿತ್ತು.

2. ನಿಮ್ಮ ಸ್ವಂತ ಉತ್ತರ ಕೊಡಿರಿ!

3. ಈ ವಿಷಯವನ್ನು ತನಗೆ ವರದಿಮಾಡಿದ್ದರ ಕುರಿತು ಯಾರಿಗೂ ಹೇಳಬಾರದೆಂದು ಆ ಯುವಕನಿಗೆ ಸಹಸ್ರಾಧಿಪತಿಯು ಯಾಕೆ ಹೇಳಿ ಕಳುಹಿಸಿದನೆಂಬುದಕ್ಕೆ ಬಹುಶಃ ಎರಡು ಕಾರಣಗಳಿವೆ:
   - ಒಂದು ವೇಳೆ ಒಳಸಂಚುಗಾರರಿಗೆ ತಮ್ಮ ಗುಪ್ತವಾದ ಯೋಜನೆಯನ್ನು ಆ ಯುವಕನು ಬಹಿರಂಗಪಡಿಸಿದನೆಂಬುದು ತಿಳಿದು ಬಂದಿದ್ದರೆ ಆತನ ಜೀವಕ್ಕೆ ಅಪಾಯ ತಪ್ಪಿರಲಿಲ್ಲ.
   - ರಾತ್ರಿಯಲ್ಲಿ ಪೌಲನನ್ನು ಯೆರೂಸಲೇಮಿನಿಂದ ಸಾಗಹಾಕಬೇಕೆಂಬ ಪ್ರಯತ್ನಕ್ಕೆ ಅಪಾಯ ಬಂದೊದಗಬಹುದಿತ್ತು (ವ. 23 ನ್ನು ನೋಡಿರಿ).

# ಉ 63. ಸೆಜರೇಯಕ್ಕೆ ಪೌಲನನ್ನು ಕಳುಹಿಸಿದ್ದು, 23:23–35

## ಇ) ಪಠ್ಯ ಪ್ರಶ್ನೆಗಳು

1. ಪೌಲನನ್ನು ರಾತ್ರಿವೇಳೆಯಲ್ಲಿ ಯೆರೂಸಲೇಮಿನಿಂದ ಕರೆದುಕೊಂಡು ಹೋದ ಸೇನಾಪಡೆಯ ಗಾತ್ರ ಹೀಗಿತ್ತು:
    - ಇಬ್ಬರು ಶತಾಧಿಪತಿಗಳು
    - ಇನ್ನೂರು ಜನ ಸೈನಿಕರು
    - ಎಪ್ಪತ್ತು ಜನ ಕುದುರೆ ಸವಾರರು
    - ಇನ್ನೂರು ಜನ ಭರ್ಜಿಧರಿಸಿದವರು

2. ಗ್ರೀಕ್ ಮೂಲ ಪಠ್ಯದಲ್ಲಿ ಕ್ಲಾಡಿಯಸ್ ಲೂಸಿಯಸ್‌ನು ತನ್ನ ಕುರಿತು ಕನಿಷ್ಠ ಪಕ್ಷ ಒಂಬತ್ತು ಬಾರಿ ಉಲ್ಲೇಖಿಸಿಕೊಳ್ಳುತ್ತಾನೆ!

3. ಫೆಲಿಕ್ಸನ ಮತ್ತು ಆತನ ಪ್ರಧಾನ ಕಛೇರಿಯ ಕುರಿತು ಟಿಪ್ಪಣಿಯ ಭಾಗದಿಂದ ನೀವು ಇವುಗಳನ್ನು ಕಲಿಯಬಹುದು:
    - ಫೆಲಿಕ್ಸನ ಕುರಿತು: ಗುಲಾಮನ ಹಿನ್ನಲೆಯವನು, ಈತನ ಸಹೋದರನು ಚಕ್ರವರ್ತಿ ಕ್ಲಾಡಿಯಸ್‌ನ ಅಚ್ಚುಮೆಚ್ಚಿನ ಅಧಿಕಾರಿಯಾಗಿದ್ದನು, ಈತನ ಸಹೋದರನು ಕ್ರಿ.ಶ. 52 ರಲ್ಲಿ ಈತನನ್ನು ಯೂದಾಯ ಪ್ರಾಂತ್ಯದ ರಾಜ್ಯಪಾಲನನ್ನಾಗಿ ನೇಮಿಸಲು ಸಿದ್ಧತೆಯನ್ನು ಮಾಡಿದನು, ಈತನು ಒಬ್ಬ ಕ್ರೂರ ಮತ್ತು ಭ್ರಷ್ಟ ವ್ಯಕ್ತಿಯಾಗಿದ್ದನು, ಭಾಗಶಃ ಯೆಹೂದ್ಯಳಾದ ದ್ರುಸಿಲ್ಲ ಎಂಬ ರಾಣಿಯನ್ನು ಮೋಹಿಸಿ ಮದುವೆಯಾದ, ಆಕೆಯಿಂದ ಈತನು ಯೆಹೂದ್ಯರ ಜೀವನ ಶೈಲಿ ಮತ್ತು ಆಚಾರಗಳನ್ನು ಕಲಿತನು.
    - ಆತನ ಪ್ರಧಾನ ಕಛೇರಿಯ ಕುರಿತು: ಸೆಜರೇಯವು (ಮೆಡಿಟೆರೆನಿಯನ್ ಸಮುದ್ರದ ಬಳಿ) ಆತನ ರಾಜಧಾನಿಯಾಗಿತ್ತು, ಹೆರೋದನ ಅರಮನೆಯು ಆತನ ಕಛೇರಿ ಮತ್ತು ನಿವಾಸ ಸ್ಥಳವಾಗಿತ್ತು. ಸೆಜರೇಯದ ಕುರಿತು ಇನ್ನು ಹೆಚ್ಚಿನ ಮಾಹಿತಿಗಾಗಿ 8:40 ನ್ನು ನೋಡಿರಿ.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ರೋಮನ್ ಸಹಸ್ರಾಧಿಪತಿಯು ಪೌಲನೊಂದಿಗೆ ಅಷ್ಟು ದೊಡ್ಡ ಸೇನಾಪಡೆಯನ್ನು ಯಾಕೆ ಕಳುಹಿಸಿಕೊಟ್ಟನೆಂದರೆ, ಪೌಲನನ್ನು ಕೊಲ್ಲಲು ಶಪಥಮಾಡಿಕೊಂಡಿದ್ದ ನಾಲ್ವತ್ತಕ್ಕಿಂತಲೂ ಹೆಚ್ಚು ಜನ ಯೆಹೂದ್ಯ ಒಳಸಂಚುಗಾರರಿಂದ ಪೌಲನು ಸುರಕ್ಷಿತನಾಗಿರುವುದನ್ನು ಆತನು ಖಚಿತಪಡಿಸಿಕೊಳ್ಳಬೇಕಾಗಿತ್ತು.

ಪೌಲನೊಂದಿಗೆ ಆ ಎಲ್ಲಾ 472 ಜನರೂ ಸೆಜರೇಯದವರೆಗೆ ಪ್ರಯಾಣಿಸಲಿಲ್ಲ. ಅವರು ಅಂತಿಪತ್ರಿಗೆ ತಲುಪಿದಾಗ ಎಲ್ಲಾ ಸೈನಿಕರು ಮತ್ತು ಭರ್ಜಿಧರಿಸಿದವರು ಯೆರೂಸಲೇಮಿಗೆ ಹಿಂತಿರುಗಿದರು. ಪೌಲನೊಂದಿಗೆ ಆ 70 ಜನ ಕುದುರೆಸವಾರರು ಮಾತ್ರ ಸೆಜರೇಯದವರೆಗೆ ಪ್ರಯಾಣಿಸಿದರು (ವ. 31–33). ಅಷ್ಟರೊಳಗೆ ಒಳಸಂಚುಗಾರರು ತಮ್ಮಿಂದ ಬಹಳ ಹಿಂದೆ ಉಳಿದುಕೊಂಡರೆಂಬುದನ್ನು ರೋಮನ್ನರು ಖಚಿತಪಡಿಸಿಕೊಂಡರು. ಅದಲ್ಲದೆ, ಆಗ ಬೆಳಗಾಗಿತ್ತು ಮತ್ತು ಅಂತಿಪತ್ರಿಯಿಂದ ಸೆಜರೇಯಕ್ಕೆ ಹೋಗುವ ರಸ್ತೆಯು ಬಯಲಾದ ಪ್ರದೇಶದಿಂದ ಸುತ್ತುವರಿದಿತ್ತು.

2. 1) ಕ್ಲಾಡಿಯಾಸ್ ಲೂಸಿಯಸ್‌ನು ರಾಜ್ಯಪಾಲನಾದ ಫೆಲಿಕ್ಸನಿಗೆ ಬರೆದ ಪತ್ರವನ್ನು (ವ. 25–30) ಲೂಕನು 21:30–23:22 ರಲ್ಲಿ ದಾಖಲಿಸಿರುವ ನೈಜ ಘಟನೆಗಳೊಂದಿಗೆ ಹೋಲಿಸುವಾಗ ಕ್ಲಾಡಿಯಸ್ ಲೂಸಿಯಸ್‌ನು ಎರಡು ಮುಖ್ಯ ಬದಲಾವಣೆಗಳನ್ನು ಮಾಡಿರುವುದನ್ನು ತೋರಿಸುತ್ತದೆ (ಇದನ್ನು ಬಿಟ್ಟರೆ ಆತನು ಹೆಚ್ಚುಕಡಿಮೆ ಪ್ರಕರಣದ ನಿಖರವಾದ ವಿವರಣೆಯನ್ನೇ ನೀಡಿದ್ದಾನೆ):

- ಜನಸಮೂಹದಿಂದ ಪೌಲನನ್ನು ಬಿಡಿಸುವುದಕ್ಕಿಂತ ಮುಂಚೆಯೇ ಆತನು ಒಬ್ಬ ರೋಮನ್ ಪೌರನೆಂಬುದನ್ನು ತಿಳಿದುಕೊಂಡೆನು ಎಂಬುದಾಗಿ ಆತನು ಬರೆಯುತ್ತಾನೆ. ಆದರೆ ವಾಸ್ತವಿಕವಾಗಿ, ಆತನು ಈ ಸತ್ಯಾಂಶವನ್ನು ನಂತರದಲ್ಲಿ ತಿಳಿದುಕೊಂಡಿದ್ದನು.
- ಆತನು ಪೌಲನನ್ನು ಬಂಧಿಸಿ ಆತನಿಗೆ ಬೇಡಿ ಹಾಕಿ ಚಿತ್ರಹಿಂಸೆ ಕೊಡಲು ಸಿದ್ಧಪಡಿಸಿದ್ದರ ಕುರಿತು ಏನನ್ನೂ ತಿಳಿಸುತ್ತಿಲ್ಲ.

ಆತನು ತನ್ನ ಪತ್ರದಲ್ಲಿ ಪೌಲನ ವಿರೋಧವಾದ ಆರೋಪಣೆಯನ್ನು ರಾಜ್ಯಪಾಲನಾದ ಫೆಲಿಕ್ಸನ ಮುಂದೆ ಸಲ್ಲಿಸಬೇಕೆಂಬುದಾಗಿ ಯೆಹೂದ್ಯ ಆಪಾದಕರುಗಳಿಗೆ ಅಪ್ಪಣೆಕೊಟ್ಟಿದ್ದಾನೆಂಬ ಮಾಹಿತಿಯನ್ನು ಸೇರಿಸಿದ್ದಾನೆ. ಲೂಕನು ಇದರ ಕುರಿತು ಮುಂದಿನ ಅಧ್ಯಾಯದಲ್ಲಿ ನಮಗೆ ತಿಳಿಸುತ್ತಾನೆ.

2. 2) ಕ್ಲಾಡಿಯಸ್ ಲೂಸಿಯಸ್‌ನು ತನ್ನ ಪತ್ರವನ್ನು ಹೀಗೆ ಬರೆಯಲು ಕಾರಣವೇನೆಂದರೆ, ತನ್ನ ಮೇಲಾಧಿಕಾರಿಯೂ ಮತ್ತು ಅತೀ ಪ್ರಭಾವವುಳ್ಳ ವ್ಯಕ್ತಿಯೂ ಆದ ಸೆಜರೇಯದ ರೋಮನ್ ರಾಜ್ಯಪಾಲನನ್ನು ಮೆಚ್ಚಿಸಲು ಬಯಸಿರಬಹುದು.
ಅದಲ್ಲದೆ ಆತನು ರೋಮನ್ ಪೌರನಾದ ಪೌಲನನ್ನು ಅತ್ಯುತ್ತಮವಾದ ರೀತಿಯಲ್ಲಿ ಉಪಚರಿಸಿದನೆಂಬ ಒಳ್ಳೆಯ ಅಭಿಪ್ರಾಯವು ರಾಜ್ಯಪಾಲನಲ್ಲಿ ಮೂಡಬೇಕೆಂಬುದಾಗಿ ಆತನು ಬಯಸಿದನು.

# ಉ 64. ಫೆಲಿಕ್ಸನ ಮುಂದೆ ವಿಚಾರಣೆ, 24:1–27

## ೩) ಪಠ್ಯ ಪ್ರಶ್ನೆಗಳು

1. ತೆರ್ತುಲನು ರಾಜ್ಯಪಾಲನಾದ ಫೆಲಿಕ್ಸನ ಮುಂದೆ ಪೌಲನ ವಿರುದ್ಧವಾಗಿ ಮಾಡಿದ ಆಪಾದನೆಗಳು ಹೀಗಿವೆ:
   1) ಪೌಲನು ತೊಂದರೆಗಳನ್ನು ಸೃಷ್ಟಿಸುವ ಒಬ್ಬ ಮನುಷ್ಯನು (ಈ ಗ್ರೀಕ್ ಪದದ ವಾಸ್ತವಿಕವಾದ ಅರ್ಥವೇನೆಂದರೆ 'ಪಿಡುಗು, ಮಾರಿ' ಎಂಬುದಾಗಿದೆ). ಈ ಆರೋಪಣೆಯು ಗಂಭೀರವಾದದ್ದು, ಯಾಕೆಂದರೆ ರೋಮನ್ ಸಾಮ್ರಾಜ್ಯದಲ್ಲಿ ಒಡಕನ್ನು ತರುವುದು ಚಕ್ರವರ್ತಿಯ ವಿರುದ್ಧವಾದ ರಾಜದ್ರೋಹ ಎಂದು ಪರಿಗಣಿಸಲಾಗುತ್ತಿತ್ತು.
   2) ಪೌಲನು ನಜರೇತಿನವರ ಪಂಗಡದ ನಾಯಕನು. ಈ ಆರೋಪಣೆಯು ಅನ್ವಯಿಸಿದ್ದೇನೆಂದರೆ, ಪೌಲನು ಸರ್ಕಾರದಿಂದ ಮಾನ್ಯತೆ ಪಡೆಯದ ಒಂದು ಧಾರ್ಮಿಕ ಪಂಗಡದ ನಾಯಕನಾಗಿದ್ದನು, ಹಾಗಾಗಿ ಇದು ಕಾನೂನು ಬಾಹಿರವಾದ ಚಟುವಟಿಕೆಯಾಗಿತ್ತು.
   3) ಪೌಲನು ದೇವಾಲಯವನ್ನು ಅಶುದ್ಧಗೊಳಿಸಲು ಪ್ರಯತ್ನಿಸಿದನು. ಇದೊಂದು ಅಪಾಯಕಾರಿಯಾದ ಆರೋಪಣೆಯಾಗಿತ್ತು, ಯಾಕೆಂದರೆ ದೇವಾಲಯಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಯೆಹೂದ್ಯ ನಾಯಕರುಗಳೇ ನೋಡಿಕೊಳ್ಳುವಂತೆ ರೋಮನ್ನರು ಅವಕಾಶ ಮಾಡಿಕೊಟ್ಟಿದ್ದರು ಮತ್ತು ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರ ದೇವಾಲಯವನ್ನು ಅಶುದ್ಧಗೊಳಿಸುವುದಕ್ಕೆ ಮರಣದಂಡನೆಯ ಶಿಕ್ಷೆಯಾಗುತ್ತಿತ್ತು.

2. ಪೌಲನು ತನ್ನ ಪ್ರತಿವಾದದಲ್ಲಿ ಯೆರೂಸಲೇಮಿಗೆ ಭೇಟಿಕೊಟ್ಟಿದ್ದಕ್ಕೆ ಈ ಕೆಳಗಿನ ಕಾರಣಗಳನ್ನು ತಿಳಿಸುತ್ತಾನೆ:
   - ಆತನು ದೇವರಾಧನೆಯನ್ನು ಮಾಡಲು ಅಲ್ಲಿಗೆ ಹೋಗಿದ್ದನು (ವ. 11).
   - ಆತನು ತನ್ನ ಸ್ವದೇಶದವರಲ್ಲಿ ಬಡವರಿಗೆ ಧರ್ಮದಾನಗಳನ್ನು ಕೊಡಲು ಅಲ್ಲಿಗೆ ಹೋಗಿದ್ದನು (ವ. 17).
   - ಆತನು ಕಾಣಿಕೆಗಳನ್ನು ಕೊಡಲಿಕ್ಕೆ ಅಲ್ಲಿಗೆ ಹೋಗಿದ್ದನು (ವ. 17).

3. ಪೌಲನ ಪ್ರಕರಣದ ತೀರ್ಪನ್ನು ತಿಳಿಸಲು ಮುಂದೂಡಿದ್ದಕ್ಕೆ ಫೆಲಿಕ್ಸನು ಕೊಟ್ಟ ಕಾರಣವೇನೆಂದರೆ, ಆತನು ಮೊದಲು ಯೆರೂಸಲೇಮಿನಲ್ಲಿದ್ದ ರೋಮ್‌ನ ಸಹಸ್ರಾಧಿಪತಿಯಾಗಿದ್ದ ಲೂಸಿಯಸ್‌ನನ್ನು ಭೇಟಿಯಾಗಬೇಕೆಂದು ಹೇಳಿದನು (ವ. 22).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲನ ಪ್ರತಿವಾದದ ರಚನೆಯು ಹೀಗಿದೆ:
   1) ಪೌಲನ ಭಾಷಣದ ಪ್ರಾರಂಭ: ಇದು ಸಂಕ್ಷಿಪ್ತವಾದದ್ದು ಮತ್ತು ಸತ್ಯವಾದದ್ದು, ಮುಖಸ್ತುತಿಯನ್ನು ಕೈಬಿಟ್ಟಿದ್ದಾನೆ (ವ. 10).
   2) ಪೌಲನು – ದೇವಾರಾಧನೆಗಾಗಿ – ಯೆರೂಸಲೇಮಿಗೆ ಭೇಟಿಕೊಟ್ಟನೆಂದು ತನ್ನ ಕಾರಣವನ್ನು (ಇದು ಕೇವಲ 12 ದಿನಗಳ ಮುಂಚೆ ಸಂಭವಿಸಿದ್ದ ಸಂಗತಿಯಾಗಿತ್ತು) ನೀಡಿದನು (ವ. 10). ಇದರ ಮೂಲಕ ಆತನು ವಾಸ್ತವಿಕವಾಗಿ ಮೂರು ಆಪಾದನೆಗಳಿಗೆ ಉತ್ತರ ನೀಡಿದನು:
      - ರಾಜದ್ರೋಹದ ಆರೋಪ: ಆತನು ದೇವಾರಾಧನೆ ಮಾಡಲು ಬಂದಿದ್ದನು – ದಂಗೆ ಎಬ್ಬಿಸಲು ಅಲ್ಲ!
      - ಕಾನೂನು ಬಾಹಿರವಾದ ಧರ್ಮದ ನಾಯಕನೆಂಬ ಆರೋಪ: ಆತನ ಆರಾಧನೆಯು ಯೆಹೂದ್ಯ ಸಂಪ್ರದಾಯಿಕವಾದದ್ದು – ಯಾವುದೋ ಹೊಸದಾದ ಮತ್ತು ಕಾನೂನು ಬಾಹಿರವಾದ ಸಂಗತಿಯಾಗಿದ್ದಿಲ್ಲ!
      - ದೇವಾಲಯವನ್ನು ಅಪವಿತ್ರಗೊಳಿಸಿದನೆಂಬ ಆರೋಪ: ಆತನು ದೇವಾರಾಧನೆ ಮಾಡಲು ಬಂದಿದ್ದನು – ಅಪವಿತ್ರಗೊಳಿಸಲು ಅಲ್ಲ!
   3) ನಂತರ ಪೌಲನು ಮೊದಲನೆಯ ಆರೋಪದ ಕುರಿತು ವಿವರಿಸಲು ಪ್ರಾರಂಭಿಸಿದನು: ಆತನ ಆಪಾದಕರು ತನ್ನನ್ನು ಯಾರೊಂದಿಗೂ ತರ್ಕಮಾಡುವುದನ್ನಾಗಲಿ ಅಥವಾ ಗುಂಪನ್ನು ಪ್ರಚೋದಿಸುವುದಾಗಲಿ ಕಂಡಿರಲಿಲ್ಲ (ವ. 12).
   4) ನಂತರ ಪೌಲನು ತನ್ನ ಆರಾಧನೆಯ ಕುರಿತು ವಿವರಿಸಲು ಪ್ರಾರಂಭಿಸಿದನು: ಆತನು ಆ ಮಾರ್ಗದ ಹಿಂಬಾಲಕನಾಗಿ, ತನ್ನ ಪೂರ್ವಿಕರ ದೇವರನ್ನು ಆರಾಧಿಸಿದನು. ಆತನ ಆಪಾದಕರು ಇದನ್ನು ತಪ್ಪಾಗಿ ಒಂದು ಪಂಗಡವೆಂದು ಕರೆದರು. ಆದರೆ ಪೌಲನು – ಅವರಂತೆಯೇ – ಹಳೆ ಒಡಂಬಡಿಕೆಯ ಗ್ರಂಥಗಳಲ್ಲಿಯೂ ಮತ್ತು ಪುನರುತ್ಥಾನದಲ್ಲಿಯೂ ನಂಬಿಕೆಯಿಟ್ಟವನು (ವ. 14–15).
   5) ನಂತರ ಪೌಲನು ತಾನು ಯೆರೂಸಲೇಮಿಗೆ ಭೇಟಿಕೊಟ್ಟಿದ್ದಕ್ಕೆ ತನ್ನ ಕಾರಣಗಳನ್ನು ವಿವರಿಸಿದನು: ಧರ್ಮದಾನಗಳನ್ನು ಮತ್ತು ಕಾಣಿಕೆಗಳನ್ನು ಕೊಡಲು ಬಂದನು (ವ. 17). ಇದರ ಮೂಲಕ ಆತನು ಪುನಃ ಎರಡು ಆಪಾದನೆಗಳನ್ನು ಉತ್ತರಿಸಿದನು:
      - ಆತನು ದೇವಾಲಯದಲ್ಲಿ ಸಂಸ್ಕರಣಬದ್ಧವಾಗಿ ಶುದ್ಧನಾಗಿದ್ದನು – ಅಲ್ಲಿ ಯಾವುದೇ ಅಪವಿತ್ರಗೊಳಿಸುವ ಕಾರ್ಯವಿರಲಿಲ್ಲ (ವ. 18)!
      - ಅಲ್ಲಿ ಪೌಲನೊಂದಿಗೆ ಯಾವುದೇ ಜನಸಮೂಹವಿರಲಿಲ್ಲ ಮತ್ತು ಗಲಾಟೆ ಇರಲಿಲ್ಲ – ದಂಗೆಯೂ ಇರಲಿಲ್ಲ (ವ. 18)!
   6) ಪೌಲನ ಉಪಸಂಹಾರಗಳು:
      - ಒಂದು ವೇಳೆ ಏಷ್ಯಾ ಪ್ರಾಂತ್ಯದಿಂದ ಬಂದ ಯೆಹೂದ್ಯರಿಗೆ ತನ್ನ ಬಗ್ಗೆ ಏನಾದರೂ ವಿರೋಧವಿದ್ದರೆ ಅವರು ಅಲ್ಲಿದ್ದಿರಬೇಕಿತ್ತು.

- ಆತನ ಪ್ರಸ್ತುತ ವಿರೋಧಿಗಳು (ಅನನೀಯನು ಮತ್ತು ಹಿರಿಯರು) ನ್ಯಾಯಸಭೆಯ ವಿಚಾರಣೆಯಲ್ಲಿ ಕಂಡುಕೊಂಡ ಸಂಗತಿಗಳನ್ನು ವರದಿ ಸಲ್ಲಿಸಬೇಕಿತ್ತು: ನ್ಯಾಯಸಭೆಯವರು ಪೌಲನಲ್ಲಿ ಯಾವುದೇ ಅಪರಾಧವನ್ನು ಕಂಡರೋ? ಇದರಿಂದ ಪೌಲನು ಸೂಚಿಸಿದ್ದೇನೆಂದರೆ: ಅವರು ಅಪರಾಧವನ್ನು ಕಾಣಲಿಲ್ಲ! ಸತ್ತವರ ಪುನರುತ್ಥಾನದ ವಿಷಯವು ಮಾತ್ರ ಒಂದು ಸಮಸ್ಯೆಯಾಗಿತ್ತು.

2. ಫೇಲಿಕ್ಸನು ಪೌಲನನ್ನು ಎರಡು ವರ್ಷಗಳ ಕಾಲ ಸೆರೆಮನೆಯಲ್ಲಿಟ್ಟಿದ್ದಕ್ಕೆ ಮೂರು ಕಾರಣಗಳಿದ್ದವು ಎಂದು ನಾನು ಆಲೋಚಿಸುತ್ತೇನೆ:

   1) ಆತನು ಮತ್ತು ಆತನ ಪತ್ನಿಯಾದ ದ್ರುಸಿಲ್ಲಳು ಕ್ರೈಸ್ತ ನಂಬಿಕೆಯ ಕುರಿತು ಪೌಲನಿಂದ ವಿವರವಾಗಿ ಕೇಳಲು ಆಸಕ್ತಿಯುಳ್ಳವರಾಗಿದ್ದಾರೆಂದು ತೋರುತ್ತದೆ – ಆದಾಗ್ಯೂ ಅವರು ನೀತಿವಂತಿಕೆ, ಸ್ವನಿಯಂತ್ರಣ ಮತ್ತು ನ್ಯಾಯತೀರ್ಪು ಎಂಬ ಆತನ ಪದಗಳಿಂದ ಭಯಪಟ್ಟಿದ್ದರು. ಅವರ ಸ್ವಂತ ಜೀವಿತಗಳು ಅನೀತಿವಂತಿಕೆಯಿಂದಲೂ ಸ್ವನಿಯಂತ್ರಣವಿಲ್ಲದೆಯೂ ಇದ್ದವು. ಹಾಗಾಗಿ ಅವರು ದೇವರ ಭವಿಷ್ಯದ ನ್ಯಾಯತೀರ್ಪಿನ ಕುರಿತು ಭಯಬ್ರಾಂತರಾಗಿದ್ದರು!

   2) ಆತನು ಲಂಚವನ್ನು ಎದುರುನೋಡುತ್ತಿದ್ದನು. ಪೌಲನು ಅನ್ಯಸಭೆಗಳಿಂದ ಯೆರೂಸಲೇಮಿಗೆ ಹಣವನ್ನು ತಂದಿದ್ದನು ಮತ್ತು ಪೌಲನು ಇನ್ನೂ ಹೆಚ್ಚಿನ ಹಣವನ್ನು ತರಬಹುದೆಂದು ಆಲೋಚಿಸಿರಬಹುದು.

   3) ಆತನು ಯೆಹೂದ್ಯ ನಾಯಕರುಗಳನ್ನು ಎದುರಿಸಲು ಬಯಸಲಿಲ್ಲ. ಫೇಲಿಕ್ಸನು ಪೌಲನನ್ನು ಬಿಡುಗಡೆಮಾಡದಿದ್ದಲ್ಲಿ ಮಾತ್ರ ಅವರು ಮೌನವಾಗಿರುವರು.

# ಉ 65. ಫೆಸ್ತನ ಮುಂದೆ ವಿಚಾರಣೆ, 25:1–12

## ಇ) ಪಠ್ಯ ಪ್ರಶ್ನೆಗಳು

1–2. ಫೆಸ್ತನು ಯೆರೂಸಲೇಮನ್ನು ತಲುಪಿದ ತಕ್ಷಣವೇ ಮಹಾಯಾಜಕರುಗಳು ಮತ್ತು ಯೆಹೂದ್ಯ ನಾಯಕರುಗಳು (ಅಂದರೆ, ನ್ಯಾಯಸಭೆಯವರು) ಪೌಲನನ್ನು ಸೆಜರೇಯದಿಂದ ಯೆರೂಸಲೇಮಿಗೆ ವರ್ಗಾಯಿಸಬೇಕೆಂದು ಕೇಳಿಕೊಂಡರು. ಇದಕ್ಕೆ ಕಾರಣವೇನೆಂದರೆ, ಪೌಲನನ್ನು ಸೆಜರೇಯದಿಂದ ಯೆರೂಸಲೇಮಿಗೆ ಕೊಂಡೊಯ್ಯುವಾಗ ಆತನ ಮೇಲೆ ದಾಳಿ ಮಾಡಿ ಆತನನ್ನು ಕೊಲ್ಲಬೇಕೆಂಬುದು ಅವರ ಉದ್ದೇಶವಾಗಿತ್ತು (ವ. 2–3).

3. ರಾಜ್ಯಪಾಲನಾದ ಫೆಸ್ತನು ಯೆರೂಸಲೇಮಿನಿಂದ ಸೆಜರೇಯಕ್ಕೆ ಹಿಂತಿರುಗಿದ ತಕ್ಷಣವೇ ಪೌಲನ ವಿಚಾರಣೆಯು ಅಲ್ಲಿ ನಡೆಯಿತು (ವ. 6). ಇದು ರೋಮನ್ ಚಕ್ರವರ್ತಿಯನ್ನು ಪ್ರತಿನಿಧಿಸುವ ರೋಮನ್ ರಾಜ್ಯಪಾಲನ ಮುಂದೆ ನಡೆದ ಒಂದು ನ್ಯಾಯವಿಚಾರಣೆಯಾಗಿತ್ತು.

4. ಫೆಸ್ತನು ಯೆಹೂದ್ಯರ ಮೆಚ್ಚುಗೆಯನ್ನು ಗಳಿಸಬೇಕೆಂದು ಬಯಸಿದ್ದರಿಂದ ಆತನು ಪೌಲನಿಗೆ ನೀನು ದೂರುಗಳ ನ್ಯಾಯವಿಚಾರಣೆಗಾಗಿ ಯೆರೂಸಲೇಮಿಗೆ ಹೋಗಲು ಇಚ್ಛೆಯುಳ್ಳವನಾಗಿದ್ದೀಯೋ ಎಂಬುದಾಗಿ ಕೇಳಿದನು (ವ. 9).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಫೆಸ್ತನು ಯೆಹೂದ್ಯರ ಪ್ರಭಾವದಿಂದ ಕೂಡಿದ್ದ ಪ್ರಾಂತ್ಯದ ರಾಜ್ಯಪಾಲನಾಗಿ ಅಧಿಕಾರವನ್ನು ವಹಿಸಿಕೊಂಡಿದ್ದನು. ಹಾಗಾಗಿ ಆತನು ಎಷ್ಟು ಸಾಧ್ಯವೋ ಅಷ್ಟು ಬೇಗನೇ ಯೆಹೂದ್ಯ ಧಾರ್ಮಿಕ ಮುಖಂಡರನ್ನು ಭೇಟಿಯಾಗುವುದು ಅವಶ್ಯವೆಂದು ಭಾವಿಸಿದನು. ಅವರು ಯೆರೂಸಲೇಮಿನಲ್ಲಿದ್ದರು. ಹಾಗಾಗಿ ಫೆಸ್ತನು ಸೆಜರೇಯಕ್ಕೆ ಬಂದು ಯೂದಾಯ ಪ್ರಾಂತ್ಯದ ರಾಜ್ಯಪಾಲನಾಗಿ ಅಧಿಕಾರ ವಹಿಸಿಕೊಂಡ ಮೂರು ದಿನಗಳ ನಂತರವೇ ಯೆಹೂದ್ಯ ಮುಖಂಡರನ್ನು ಭೇಟಿಯಾಗಲು ಯೆರೂಸಲೇಮಿಗೆ ಹೋದನು.

2. ಫೆಸ್ತನು ಯೆರೂಸಲೇಮನ್ನು ತಲುಪಿದ ತಕ್ಷಣವೇ ಯೆಹೂದ್ಯ ನಾಯಕರು ಪೌಲನ ವಿರುದ್ಧ ಆಪಾದನೆಗಳನ್ನು ಸಲ್ಲಿಸಿದರು. ಇದರಿಂದ ನಾವು ಕಲಿಯುವ ಸಂಗತಿ ಏನೆಂದರೆ, ಫೆಲಿಕ್ಸನ ಆಳ್ವಿಕೆಯ ಅವಧಿಯಲ್ಲಿ ನಡೆದ ನ್ಯಾಯವಿಚಾರಣೆಯು ಕಳೆದು ಈಗ ಎರಡು ವರ್ಷಗಳಾಗಿದ್ದರೂ ಅವರು ಪೌಲನ ಪ್ರಕರಣವನ್ನು ಮರೆತಿರಲಿಲ್ಲ. ಪೌಲನು – ಮತ್ತು ಆತನು ಪ್ರತಿನಿಧಿಸಿದ ಕ್ರೈಸ್ತ ನಂಬಿಕೆಯು – ಯೆಹೂದತ್ವದ ಅಸ್ತಿತ್ವಕ್ಕೆ ಒಂದು ಸಂಚಕಾರವೆಂದು ಯೆಹೂದ್ಯ ನಾಯಕರು ಪರಿಗಣಿಸಿದ್ದಿರಬಹುದು.

3. ಪೌಲನು ತಾನು ಯೆರೂಸಲೇಮಿನಲ್ಲಿ ನ್ಯಾಯವಿಚಾರಣೆಗಾಗಿ ಹೋಗಬೇಕೆಂಬ ಫೆಸ್ತನ ಸಲಹೆಯನ್ನು ತಿರಸ್ಕರಿಸಲು ಬಹುಶಃ ಒಂದಕ್ಕಿಂತ ಹೆಚ್ಚು ಕಾರಣಗಳಿದ್ದಿರಬಹುದು:

- ಪೌಲನು ತನ್ನನ್ನು ಸೆಜರೇಯದಿಂದ ಯೆರೂಸಲೇಮಿಗೆ ವರ್ಗಾಯಿಸುವಾಗ ಉಂಟಾಗುವ ಅಪಾಯದ ಕುರಿತು ಮನಗಂಡಿರಬೇಕು. ಆತನ ಮೇಲೆ ದಾಳಿ ಮಾಡಿ ಕೊಲ್ಲಬೇಕೆಂಬ ಒಳಸಂಚಿನ ಕುರಿತು ಆತನು ಕೇಳಿರಬಹುದು.
- ಯೆರೂಸಲೇಮಿನಲ್ಲಿ ಪ್ರಭಾವಿ ಯೆಹೂದ್ಯ ನಾಯಕರ ಸಮಕ್ಷಮದಲ್ಲಿ ಉಂಟಾಗುವ ನ್ಯಾಯವಿಚಾರಣೆಯಲ್ಲಿ ತನಗೆ ನ್ಯಾಯವಾದ ವಿಚಾರಣೆಯು ದೊರಕದೇ ಇರಬಹುದು ಎಂದು ಪೌಲನು ಶಂಕಿಸಿರಬಹುದು. ಫೆಸ್ತನೂ ಸಹ ಪೌಲನನ್ನು ನ್ಯಾಯಸಭೆಗೆ ಒಪ್ಪಿಸುವುದರ ಮೂಲಕ ಆತನು ಧಾರ್ಮಿಕ ನ್ಯಾಯವಿಚಾರಣೆಗೆ ಒಳಗಾಗಲಿ ಅಥವಾ ಕನಿಷ್ಟ ಪಕ್ಷ ನ್ಯಾಯಸಭೆಯನ್ನು ತನ್ನ ಕಾನೂನು ಸಲಹೆಗಾರರನ್ನಾಗಿ ಉಪಯೋಗಿಸಿಕೊಳ್ಳಬೇಕೆಂಬ ಶೋಧನೆಯಲ್ಲಿದ್ದನು.
- ಪೌಲನು ತಾನು ಈಗಾಗಲೇ ಸೆಜರೇಯದಲ್ಲಿ ರೋಮನ್ ಸಿವಿಲ್ ನ್ಯಾಯಾಲಯದ ಮುಂದೆ ನಿಂತಿದ್ದೇನೆ ಎಂಬುದನ್ನು ಮನಗಂಡಿದ್ದನು. ಆತನು ಒಬ್ಬ ರೋಮನ್ ಪ್ರಜೆಯಾಗಿ ತನ್ನನ್ನು ಸ್ಥಳೀಯ ಕೆಳದರ್ಜೆಯ ನ್ಯಾಯಾಲಯಕ್ಕೆ ಕೊಂಡೊಯ್ಯುವಂತಹದ್ದನ್ನು ತಿರಸ್ಕರಿಸುವ ಹಕ್ಕನ್ನು ಹೊಂದಿದ್ದನು.

4. ಈ ಕಥೆಯಲ್ಲಿ ನಾವು ರಾಜ್ಯಪಾಲನಾದ ಫೆಸ್ತನ ಕುರಿತಾಗಿ ಈ ಕೆಳಗಿನ ಚಿತ್ರಣವನ್ನು ಕಾಣುತ್ತೇವೆ:

- ಫೆಸ್ತನು ತನ್ನ ಪ್ರಾಂತ್ಯದಲ್ಲಿರುವ ಪರಿಸ್ಥಿತಿಯನ್ನು ಆದಷ್ಟು ಬೇಗನೇ ತಿಳಿಯಲು ಬಯಸಿದನು. ಇದಕ್ಕಾಗಿಯೇ ಆತನು ಯೆಹೂದ್ಯ ಮುಖಂಡರನ್ನು ಭೇಟಿಯಾಗಲು ಯೆರೂಸಲೇಮಿಗೆ ಹೋದನು (ವ. 1–2).

- ಫೆಸ್ತನು ಯೆಹೂದ್ಯ ನಾಯಕರನ್ನು ಮೆಚ್ಚಿಸಲು ಬಯಸಿದ್ದನು. ಅದಕ್ಕಾಗಿಯೇ ಆತನು ಪೌಲನ ಪ್ರಕರಣವನ್ನು ಪುನಃ ತೆರೆಯಲು ಮತ್ತು ಯೆಹೂದ್ಯ ನಾಯಕರು ಆತನ ವಿರುದ್ಧವಾಗಿ ಆರೋಪಗಳನ್ನು ಸಲ್ಲಿಸಲು ಅನುವುಮಾಡಿಕೊಟ್ಟನು (ವ. 4–5). ಅದಲ್ಲದೆ ಅದಕ್ಕಾಗಿಯೇ ಆತನು ತನ್ನ ಮೊಕದ್ದಮೆಯನ್ನು ಯೆರೂಸಲೇಮಿನ ಕೆಳದರ್ಜೆಯ ನ್ಯಾಯಾಲಯಕ್ಕೆ ವರ್ಗಾಯಿಸಲ್ಪಡುವುಂತೆ ಪೌಲನಿಗೆ ಸಲಹೆ ನೀಡಿದನು (ವ. 9). ಅದಕ್ಕಾಗಿಯೇ ಆತನು ಪೌಲನ ವಿರುದ್ಧವಾದ ಆಪಾದನೆಗಳು ಸಾಬೀತಾಗದ್ದಿದ್ದರೂ ಆತನನ್ನು ಬಿಡುಗಡೆಮಾಡುವ ಮನಸ್ಸುಳ್ಳವನಾಗಿರಲಿಲ್ಲ.

- ಫೆಸ್ತನು ಪೌಲನಿಗೆ ಪ್ರಾಮಾಣಿಕವಾದ ನ್ಯಾಯವಿಚಾರಣೆಯನ್ನು ಒದಗಿಸಬೇಕೆಂದು ಬಯಸಿದ್ದನು, ಆದರೆ ಪೌಲನಿಗೆ ಬಿಡುಗಡೆ ಮಾಡುವ ಧೈರ್ಯ ಆತನಲ್ಲಿರಲಿಲ್ಲ. ಯಾಕೆಂದರೆ ಇದು ಯೆಹೂದ್ಯರನ್ನು ಬೇಸರಗೊಳಿಸುತ್ತಿತ್ತು. ಬದಲಾಗಿ ಆತನು ಇದರಿಂದ ಹೊರಬರಲು ಸರಳ ಮಾರ್ಗವನ್ನು ಹಿಡಿದನು: ಆತನು ಪೌಲನು ತನ್ನ ಮನವಿಯನ್ನು ಚಕ್ರವರ್ತಿಗೆ ಸಲ್ಲಿಸಬೇಕೆಂಬ ಆತನ ಕೋರಿಕೆಗೆ ಸಮ್ಮತಿ ಸೂಚಿಸಿದನು (ವ. 12).

# ಉ 66. ಫೆಸ್ತನು ಅಗ್ರಿಪ್ಪ ರಾಜನ ಸಲಹೆ ಪಡೆದಿದ್ದು, 25:13–22

## ಇ) ಪಠ್ಯ ಪ್ರಶ್ನೆಗಳು

1. ರಾಜ್ಯಪಾಲನಾದ ಫೆಸ್ತನನ್ನು ಅಭಿನಂದಿಸಲು ರಾಜನಾದ ಅಗ್ರಿಪ್ಪನು ಬೆರ್ನಿಸಳೊಂದಿಗೆ ಸೆಜರೇಯಕ್ಕೆ ಬಂದನು (ವ 13).

2. ಫೆಸ್ತನು ಪೌಲನ ಪ್ರಕರಣವನ್ನು ಅಗ್ರಿಪ್ಪ ರಾಜನ ಮುಂದೆ ಹೀಗೆ ಮಂಡಿಸಿದನು:
    - ಫೆಸ್ತನು ಯೆರೂಸಲೇಮಿಗೆ ಬಂದಾಗ ಯೆಹೂದ್ಯ ನಾಯಕರುಗಳು ಪೌಲನ ಮೇಲೆ ಆಪಾದನೆಗಳನ್ನು ತಂದು ಆತನಿಗೆ ದಂಡನೆ ವಿಧಿಸಬೇಕೆಂದು ಕೇಳಿಕೊಂಡರು (ವ. 15).

    - ನಂತರ ಫೆಸ್ತನು ತಾನು ರೋಮನ್ ಕಾನೂನು ಪದ್ಧತಿಯನ್ನು ಪಾಲಿಸಬೇಕೆಂದು ಅವರಿಗೆ ಹೇಳಿದನು: ಒಬ್ಬ ಆಪಾದಿತನು ತನ್ನ ಮೇಲೆ ಹೊರಿಸಲ್ಪಟ್ಟ ಆಪಾದನೆಗಳನ್ನು ಕೇಳಿ ಅದಕ್ಕೆ ತನ್ನ ಪ್ರತಿವಾದವನ್ನು ಮಂಡಿಸುವವರೆಗೂ ಆತನನ್ನು ಶಿಕ್ಷೆಗೆ ಒಪ್ಪಿಸಿ ಕೊಡಲಾಗುವುದಿಲ್ಲ (ವ. 16).

    - ಫೆಸ್ತನು ಪೌಲನ ಪ್ರಕರಣವನ್ನು ವ್ಯವಹರಿಸುವುದರಲ್ಲಿ ಬಹಳ ಚುರುಕಾಗಿ ಕೆಲಸ ಮಾಡಿದನು: ಆತನು ಸೆಜರೇಯವನ್ನು ತಲುಪಿದ ತಕ್ಷಣವೇ ನ್ಯಾಯಸಭೆಯನ್ನು ಕರೆಯಿಸಿದನು (ವ. 17).

    - ಪೌಲನ ಪ್ರಕರಣವು ಫೆಸ್ತನಿಗೆ ಆಶ್ಚರ್ಯವನ್ನುಂಟುಮಾಡಿತು: ಪೌಲನ ವಿರುದ್ಧವಾಗಿ ಯೆಹೂದ್ಯರು ಯಾವುದೇ ಕಾನೂನು ಉಲ್ಲಂಘನೆಯ ಆರೋಪಗಳನ್ನು ಹೊಂದಿರಲಿಲ್ಲ. ಅದು ಕೇವಲ ಧಾರ್ಮಿಕ ಕಲಹ ಮಾತ್ರವಾಗಿತ್ತು (ವ. 18–19).

    - ಫೆಸ್ತನು ಪೌಲನ ಪ್ರಕರಣವನ್ನು ಹೇಗೆ ಮುಂದುವರಿಸಬೇಕೆಂದು ತಿಳಿಯಲಾರದೆ ಪೌಲನಿಗೆ ನ್ಯಾಯವಿಚಾರಣೆಯನ್ನು ಎದುರಿಸಲು ಯೆರೂಸಲೇಮಿಗೆ ಹೋಗಲು ಮನಸ್ಸಿದೆಯೋ ಎಂದು ಕೇಳಿದನು (ವ. 20).

    - ಆದರೆ ಪೌಲನು ನೇರವಾಗಿ ಚಕ್ರವರ್ತಿಗೆ ಮನವಿ ಮಾಡಿಕೊಂಡನು, ಹಾಗಾಗಿ ಫೆಸ್ತನು ಈಗ ಅವನನ್ನು ರೊಮ್‌ಗೆ ಕಳುಹಿಸುವವರೆಗೆ ಕಾವಲಲ್ಲಿರಿಸಿದ್ದನು (ವ. 21).

3. ರಾಜನಾದ ಅಗ್ರಿಪ್ಪನು ಪೌಲನ ಪ್ರಕರಣದ ಕುರಿತಾದ ಫೆಸ್ತನ ವಿವರಣೆಯನ್ನು ಕೇಳಿದಾಗ, ಆತನು ಪೌಲನ ಕುರಿತಾಗಿ ಕೂತೂಹಲವುಳ್ಳನಾದನು ಮತ್ತು ಪೌಲನು ಹೇಳುವುದನ್ನು ತಾನೇ ಸ್ವತಃ ಕೇಳಬೇಕೆಂದು ಬಯಸಿದನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಅಗ್ರಿಪ್ಪ ರಾಜನ ಮುಂದೆ ಪೌಲನ ಕುರಿತಾಗಿ ಮಂಡಿಸಲ್ಪಟ್ಟ ಪ್ರಕರಣವು ಹಿಂದಿನ ವಾಕ್ಯಭಾಗದಲ್ಲಿ ಕಂಡುಬರುವ ಲೂಕನ ದಾಖಲೆಗಿಂತ (ವ. 1–12) ಗಣನೀಯವಾಗಿ ವ್ಯತ್ಯಾಸವಾಗಿದೆ. ಇದರಲ್ಲಿರುವ ಮುಖ್ಯ ವ್ಯತ್ಯಾಸಗಳು ಈ ರೀತಿಯಾಗಿವೆ:

    - ಫೆಸ್ತನು ತಾನು ರೋಮನ್ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೇನೆಂಬುದನ್ನು ರಾಜನಾದ ಅಗ್ರಿಪ್ಪನಿಗೆ ಮನಗಾಣಿಸಬೇಕೆಂದು ಬಯಸಿದನು (ವ. 16). ಲೂಕನು ಈ ಅಂಶವನ್ನು ತಿಳಿಸುತ್ತಿಲ್ಲ (ವ. 4 ನ್ನು ಹೋಲಿಸಿರಿ). ಅಗ್ರಿಪ್ಪ ರಾಜನು ರೋಮನ್ ಚಕ್ರವರ್ತಿಯ ಒಬ್ಬ ನಿಕಟ ಸ್ನೇಹಿತನೆಂಬುದನ್ನೂ ಮತ್ತು ತಾನು ತಪ್ಪು ಮಾಡಿದರೆ ರೋಮ್ ಸಾಮ್ರಾಜ್ಯಕ್ಕೆ ದ್ರೋಹಮಾಡಿದ ಆಪಾದನೆಗೆ ಒಳಗಾಗುವೆನೆಂಬುದನ್ನೂ ಫೆಸ್ತನು ನಿಶ್ಚಯವಾಗಿ ತಿಳಿದಿದ್ದನು.

    - ಪೌಲನ ವಿರುದ್ಧವಾಗಿ ಯೆಹೂದ್ಯರು ಯಾವುದೇ ಕಾನೂನು ಉಲ್ಲಂಘನೆಯ ಆರೋಪಗಳನ್ನು ಹೊಂದಿರಲಿಲ್ಲ ಎಂಬುದನ್ನು ಫೆಸ್ತನು ತಿಳಿಸುತ್ತಾನೆ. ಅದಕ್ಕೆ ಬದಲಾಗಿ ಆತನು ಇದು ಯೆಹೂದ್ಯ ನಾಯಕರುಗಳ ಮತ್ತು ಪೌಲನ ನಡುವೆ ಇದ್ದ ಯೆಹೂದ್ಯ ಧರ್ಮಕ್ಕೆ ಸಂಬಂಧಪಟ್ಟ ಘರ್ಷಣೆ ಎಂಬುದನ್ನು ಅಗ್ರಿಪ್ಪನಿಗೆ ತಿಳಿಸಿದನು (ವ. 18–19). ಯೆಹೂದ್ಯರು ಪೌಲನ ವಿರುದ್ಧವಾಗಿ ಅತೀ ಗಂಭೀರವಾದ ಆಪಾದನೆಗಳನ್ನು ಮಾಡಿದರು ಎಂದು ಲೂಕನು ಬರೆಯುತ್ತಾನೆ (ವ. 7). ಇದು ಪೌಲನ ಪ್ರತಿವಾದದ ಭಾಷಣದಲ್ಲಿಯೂ ಸ್ಪಷ್ಟವಾಗಿ ತಿಳಿದುಬರುತ್ತದೆ: ಆತನು ಯೆಹೂದ್ಯರ ಧರ್ಮಶಾಸ್ತ್ರಕ್ಕಾಗಲಿ, ದೇವಾಲಯಕ್ಕಾಗಲಿ, ಚಕ್ರವರ್ತಿಗಾಗಲಿ ವಿರೋಧವಾಗಿ ಯಾವುದೇ ತಪ್ಪನ್ನು ಮಾಡಿರಲಿಲ್ಲ (ವ. 8).

    - ಫೆಸ್ತನು ಆ ಚಿಕ್ಕ ಧಾರ್ಮಿಕ ವಿಷಯಗಳ ವಿವಾದಗಳನ್ನು ಉಲ್ಲೇಖಿಸುತ್ತಾ ಪೌಲನು ಆ ಆಪಾದನೆಗಳ ನ್ಯಾಯವಿಚಾರಣೆಗಾಗಿ ಯೆರೂಸಲೇಮಿಗೆ ಹೋಗಲು ಮನಸ್ಸಿದೆಯೋ ಎಂದು ಕೇಳಿದನು (ವ. 20). ಪೌಲನ ವಿರುದ್ಧವಾಗಿ ಮಾಡಲ್ಪಟ್ಟ ಆಪಾದನೆಗಳು ಅತೀ ಗಂಭೀರವಾದದ್ದು ಮತ್ತು ಒಂದು ವೇಳೆ ಆತನು ಆರೋಪಿ ಎಂದು ಸಾಬೀತಾದರೆ ಆತನನ್ನು ಮರಣದಂಡನೆಗೆ ಒಪ್ಪಿಸಬಹುದಾಗಿತ್ತು ಎಂಬುದನ್ನು ಲೂಕನ ದಾಖಲೆಯು ತೋರಿಸುತ್ತದೆ (ವ. 11). ಪೌಲನ ವಿರುದ್ಧವಾಗಿ ಮಾಡಲ್ಪಟ್ಟ ಆರೋಪಗಳು ಗಂಭೀರವಾಗಿದ್ದರೆ ಮಾತ್ರ ಆತನು ಚಕ್ರವರ್ತಿಗೆ ಮನವಿ ಮಾಡಿದ ಸಂಗತಿಗೆ ಅರ್ಥ ಇರುವುದು. ಬಹುಶಃ ಫೆಸ್ತನ ದಾಖಲೆಯಲ್ಲಿದ್ದ ಈ ವ್ಯತ್ಯಾಸದ ಕಾರಣದಿಂದಲೇ ಅಗ್ರಿಪ್ಪ ರಾಜನು ಪೌಲನ ವಿಚಾರದ ಕುರಿತಾಗಿ ಕುತೂಹಲವುಳ್ಳವನಾಗಿ ಆತನನ್ನು ವೈಯಕ್ತಿಕವಾಗಿ ಸಂಧಿಸಲು ಬಯಸಿದನು (ವ. 22).

2. ಫೆಸ್ತನು ಪೌಲನ ಪ್ರಕರಣವನ್ನು ಈ ರೀತಿಯಾಗಿ ಮಂಡಿಸಿದ್ದಕ್ಕೆ ಎರಡು ಪ್ರಮುಖ ಕಾರಣಗಳಿರಬಹುದೆಂದು ನಾನು ಆಲೋಚಿಸುತ್ತೇನೆ:

    - ಫೆಸ್ತನು ಪೌಲನ ಪ್ರಕರಣವನ್ನು ಸಮರ್ಥವಾಗಿ ಮತ್ತು ಸರಿಯಾಗಿ ವ್ಯವಹರಿಸಿದ್ದೇನೆ ಎಂಬುದನ್ನು ಅಗ್ರಿಪ್ಪ ರಾಜನಿಗೆ ಮನಗಾಣಿಸಲು ಬಯಸಿದನು. ಆತನು ರೋಮನ್ ಕಾನೂನು ಕಾರ್ಯವಿಧಾನವನ್ನು ಪಾಲಿಸಿದನು ಮತ್ತು ಪೌಲನು ಚಕ್ರವರ್ತಿಗೆ ಮನವಿ

ಮಾಡಿಕೊಂಡ ಒಂದೇ ಕಾರಣದಿಂದ ಪೌಲನನ್ನು ಕಾವಲಲ್ಲಿರಿಸಿದನು ಮತ್ತು ಆತನನ್ನು ರೋಮ್‌ಗೆ ತೆಗೆದುಕೊಂಡು ಹೋಗಲು ಒಂದು ಸೂಕ್ತವಾದ ಹಡಗಿಗಾಗಿ ಫೆಸ್ತನು ಕಾಯುತ್ತಿದ್ದನು.

- ಪೌಲನ ವಿರುದ್ಧವಾಗಿ ಮಾಡಲ್ಪಟ್ಟ ಆರೋಪಗಳಲ್ಲಿ ಯಾವುದೇ ಹುರುಳಿಲ್ಲದಿದ್ದಾಗ್ಯೂ ಆತನನ್ನು ಇನ್ನೂ ಯಾಕೆ ಬಿಡುಗಡೆ ಮಾಡಿಲಿಲ್ಲ ಎಂಬುದಾಗಿ ಅಗ್ರಿಪ್ಪ ರಾಜನು ಪ್ರಶ್ನಿಸಬಾರದೆಂದು ಫೆಸ್ತನು ಬಯಸಿದ್ದನು (ವ. 7 ನ್ನು ಹೋಲಿಸಿರಿ). ಪೌಲನು ನಿರ್ದೋಷಿಯಾಗಿದ್ದನು ಮತ್ತು ಆತನನ್ನು ಬಿಡುಗಡೆ ಮಾಡಬೇಕಾಗಿತ್ತು, ಆದರೆ ಫೆಸ್ತನಿಗೆ ಯೆಹೂದ್ಯ ನಾಯಕರುಗಳ ಅಸಮಾಧಾನವನ್ನು ಎದುರಿಸಲು ಇಷ್ಟವಿರಲಿಲ್ಲ (ವ. 9 ನ್ನು ಹೋಲಿಸಿರಿ). ಅದಕ್ಕೆ ಬದಲಾಗಿ ಫೆಸ್ತನು ಇದು ಯೆರೂಸಲೇಮಿನಲ್ಲಿಯೇ ಬಗೆಹರಿಯಬೇಕಾಗಿದ್ದ ಚಿಕ್ಕಪುಟ್ಟ ಧಾರ್ಮಿಕ ವಿವಾದಗಳೆಂದು ಘೋಷಿಸಿಕೊಂಡನು. ಆದರೆ ಒಬ್ಬ ರೋಮನ್ ಪ್ರಜೆಯಾಗಿದ್ದ ಪೌಲನು, ಯೆರೂಸಲೇಮಿಗೆ ಹೋಗಲು ತಿರಸ್ಕರಿಸಿದನು. ಅದಕ್ಕೆ ಬದಲಾಗಿ ಆತನು ಚಕ್ರವರ್ತಿಗೆ ಮನವಿ ಮಾಡಿದನು.

- ಹೇಗಿದ್ದರೂ ನಾವು ಮುಂದಿನ ಕಥೆಯನ್ನು (ವ. 24–27) ನೋಡುವುದಾದರೆ, ಫೆಸ್ತನು ಮತ್ತೊಂದು ಬಾರಿ ತನ್ನ ಕಥೆಯನ್ನು ಬದಲಾಯಿಸುತ್ತಿರುವುದನ್ನು ನಾವು ಕಾಣಬಹುದು: ಆತನು ಇಡೀ ಯೆಹೂದ್ಯ ಸಮುದಾಯದ ಮಾರಣಾಂತಿಕ ಆರೋಪಗಳಿಂದ ಪೌಲನ ಜೀವವನ್ನು ರಕ್ಷಿಸಿದ್ದನು. ಪೌಲನು ಮರಣ ಹೊಂದುವ ಯಾವ ತಪ್ಪನ್ನೂ ಮಾಡಿರಲಿಲ್ಲ. ಆದರೆ ಆತನು ಚಕ್ರವರ್ತಿಗೆ ಮಾಡಿದ ಮನವಿಯಿಂದ ಆತನನ್ನು ಫೆಸ್ತನು ರೋಮ್‌ಗೆ ಕಳುಹಿಸುವ ತೀರ್ಮಾನ ಮಾಡಿದನು. ಈಗ ಆತನು ಪೌಲನ ಪ್ರಕರಣದ ಕುರಿತು ಚಕ್ರವರ್ತಿಗೆ ವಿವರಣೆ ನೀಡಲು ಒಂದು ಸೂಕ್ತವಾದ ಪತ್ರವನ್ನು ಬರೆಯುವುದರಲ್ಲಿ ಅಗ್ರಿಪ್ಪನು ಸಹಾಯ ಮಾಡುವಂತೆ ಆತನನ್ನು ಬೇಡಿಕೊಳ್ಳುತ್ತಿದ್ದಾನೆ.

# ಉ 67. ಅಗ್ರಿಪ್ಪನ ಮುಂದೆ ಪೌಲನು, 25:23–26:32

## ಇ) ಪಠ್ಯ ಪ್ರಶ್ನೆಗಳು

1. ಫೆಸ್ತನು ಪೌಲನನ್ನು ನೆರೆದಿದ್ದ ಶ್ರೋತೃಗಳಿಗೆ ಈತನು (ಯೆರೂಸಲೇಮಿನಲ್ಲಿನ ಹಾಗೂ ಸೆಜರೇಯದಲ್ಲಿನ) ಯೆಹೂದ್ಯರೆಲ್ಲರು ಕೊಲ್ಲಬೇಕೆಂದು ಬಯಸಿದ ವ್ಯಕ್ತಿ ಎಂದು ಹೇಳುವುದರ ಮೂಲಕ ಪರಿಚಯಿಸುತ್ತಿದ್ದಾನೆ. ಆದರೆ ಆತನು ಫೆಸ್ತನ ದೃಷ್ಟಿಯಲ್ಲಿ ಮರಣದಂಡನೆ ಹೊಂದತಕ್ಕ ಯಾವ ಕೃತ್ಯವನ್ನೂ ಮಾಡಿರಲಿಲ್ಲ.

2. ಪೌಲನು ತನ್ನ ಭಾಷಣದಲ್ಲಿ ರಾಜನಾದ ಅಗ್ರಿಪ್ಪನನ್ನು ಉದ್ದೇಶಿಸಿ ಮಾತನಾಡಿದನು (ವ. 2). ಆದರೆ ನಂತರ ಆತನು ಅಲ್ಲಿ ನೆರೆದಿದ್ದ ಎಲ್ಲಾ ಜನರ ಕಡೆಗೆ ತಿರುಗುತ್ತಾನೆ (ವ. 8).

3. ಪೌಲನು ಮುಖ್ಯಯಾಜಕರ ಅಧಿಕಾರ ಮತ್ತು ಆದೇಶದೊಂದಿಗೆ ದಮಸ್ಕಕ್ಕೆ ಪ್ರಯಾಣಿಸಿದನು (ವ. 12). ಬಹುಶಃ ಆತನು ಯೆರೂಸಲೇಮಿನ ನ್ಯಾಯಸಭೆಯ ಅಧಿಕಾರಿಗಳ ನಿಯೋಗವನ್ನು ಮಾರ್ಗದರ್ಶಿಸುತ್ತಿದ್ದಿರಬಹುದು.

4. ವಚನ 17–18 ರಲ್ಲಿ ಪೌಲನ ಆದೇಶವು ಹೀಗೆ ವರ್ಣಿಸಲ್ಪಟ್ಟಿದೆ:
   - ಪೌಲನು ತನ್ನ ಸ್ವಂತ ಜನರ ಬಳಿಗೂ ಮತ್ತು ಅನ್ಯಜನರ ಬಳಿಗೂ ಕಳುಹಿಸಲ್ಪಡುವನು (ವ. 17).
   - ಆತನು ಅವರ ಕಣ್ಣುಗಳನ್ನು ತೆರೆಯುವನು (ವ. 18).
   - ಆತನು ಅವರನ್ನು ಕತ್ತಲೆಯಿಂದ ಬೆಳಕಿನ ಕಡೆಗೆ ತಿರುಗಿಸುವನು (ವ. 18).
   - ಆತನು ಅವರನ್ನು ಸೈತಾನನ ಬಲದಿಂದ ದೇವರ ಕಡೆಗೆ ತಿರುಗಿಸುವನು – ಮತ್ತು ಇದರ ಪರಿಣಾಮವಾಗಿ ಅವರು ಪಾಪಕ್ಷಮಾಪಣೆಯನ್ನು ಹೊಂದುವರು ಮತ್ತು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಶುದ್ಧೀಕರಣ ಹೊಂದಿದವರ ಮಧ್ಯದಲ್ಲಿ ಹಕ್ಕುಬಾಧ್ಯತೆಯನ್ನು ಪಡೆಯುವರು (ವ. 18).

5. 'ಈ ಪರಲೋಕದ ದರ್ಶನಕ್ಕೆ ನಾನು ಅವಿಧೇಯನಾಗಲಿಲ್ಲ' (ವ. 19) ಎಂದು ಹೇಳುವುದರ ಮೂಲಕ ಪೌಲನು ವ. 17–18 ರಲ್ಲಿ ವರ್ಣಿಸಲ್ಪಟ್ಟ ಆದೇಶವನ್ನು ನಿಜವಾಗಲೂ ನೆರವೇರಿಸಿದ್ದೇನೆಂದು ಅರ್ಥೈಸಿದನು: ಆತನು ಯೆಹೂದ್ಯರಿಗೂ ಮತ್ತು ಅನ್ಯರಿಗೂ ಸುವಾರ್ತೆಯನ್ನು ಸಾರಿದ್ದನು.

6. ರಾಜ್ಯಪಾಲನಾದ ಫೆಸ್ತನು ಪೌಲನ ಭಾಷಣವನ್ನು ಅಡ್ಡಿಪಡಿಸಿದನು, ಯಾಕೆಂದರೆ ಪೌಲನು ಹುಚ್ಚುಮಾತನ್ನು ಆಡುತ್ತಿದ್ದಾನೆಂದು ಆತನು ಭಾವಿಸಿದನು. ಹಾಗಾಗಿ ಫೆಸ್ತನು ಗಟ್ಟಿಯಾದ ಧ್ವನಿಯಿಂದ ಪೌಲನ ಅಭ್ಯಾಸವು ಆತನನ್ನು ಹುಚ್ಚನನ್ನಾಗಿ ಮಾಡಿದೆ ಎಂದು ಪ್ರಕಟಿಸಿದನು. ಪುನರುತ್ಥಾನದ ಕುರಿತು ಪೌಲನು ಆಡಿದ ಮಾತುಗಳು ಮಾತ್ರವಲ್ಲ, ಆದರೆ 'ಸತ್ತು ಹೋಗಿದ್ದ

ಒಬ್ಬ ಮನುಷ್ಯನು' (25:19) ಎಂದು ಫೆಸ್ತನು ವರ್ಣಿಸುತ್ತಿರುವ ಯೇಸುವು ಇತರರ ಜೀವಿತದಲ್ಲಿ ಬೆಳಕು ಮತ್ತು ಜೀವನವನ್ನು ತರುವುದು ಎಂದು ಪೌಲನು ಸೂಚಿಸಿದ ಮಾತು ಸಹ ಆತನಿಗೆ ಇದೊಂದು ಅಸ್ವಸ್ಥವಾದ ಮನಸ್ಸನಿಂದ ಬರುವ ಮಾತುಗಳಾಗಿವೆ ಎಂದು ಅಭಿಪ್ರಾಯ ಪಟ್ಟನು.

7. ಪೌಲನ ವಿರುದ್ಧವಾಗಿ ಮಾಡಲ್ಪಟ್ಟ ಎಲ್ಲಾ ಆರೋಪಣೆಗಳಲ್ಲಿ ಆತನು ನಿರ್ದೋಷಿ ಮತ್ತು ಆತನು ನೇರವಾಗಿ ಚಕ್ರವರ್ತಿಗೆ ಮನವಿ ಮಾಡಿಕೊಳ್ಳದಿದ್ದರೆ ಆತನನ್ನು ಬಿಡುಗಡೆ ಮಾಡಬಹುದಾಗಿತ್ತು ಎಂಬುದು ಅಗ್ರಿಪ್ಪ ರಾಜನ ಅಂತಿಮ ತೀರ್ಮಾನವಾಗಿತ್ತು (ವ. 31–32).

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಫೆಸ್ತನು ಪೌಲನ ಪ್ರಕರಣದ ವಿಚಾರಣೆಯನ್ನು ಅಗ್ರಿಪ್ಪ ರಾಜನ ಮುಂದೆ ಏರ್ಪಡಿಸಿದ್ದಕ್ಕೆ ಎರಡು ಕಾರಣಗಳಿರುವಂತೆ ತೋರುತ್ತದೆ:

   1) ಅಗ್ರಿಪ್ಪರಾಜನು ಪೌಲನ ಕುರಿತು ಕುತೂಹಲವುಳ್ಳವನಾಗಿದ್ದನು ಮತ್ತು ಆತನ ಮಾತುಗಳನ್ನು ಕೇಳಬೇಕೆಂದು ಬಯಸಿದನು (25:22).

   2) ಫೆಸ್ತನು ಪೌಲನ ಪ್ರಕರಣದ ಕುರಿತಾಗಿ ಗೊಂದಲದಲ್ಲಿದ್ದದರಿಂದ ಚಕ್ರವರ್ತಿಗೆ ಅದರ ಕುರಿತು ಏನನ್ನು ಬರೆಯಬೇಕೆಂದು ಅರಿಯದವನಾದನು, ಹಾಗಾಗಿ ಆತನು ಯೆಹೂದ್ಯರ ವಿಚಾರದಲ್ಲಿ ನಿಪುಣನೆಂದು ಪರಿಗಣಿಸಲ್ಪಟ್ಟ ಅಗ್ರಿಪ್ಪ ರಾಜನ ಸಹಾಯವನ್ನು ಪಡೆಯಲು ಬಯಸಿದನು (25:20, 26, 27).

   ಪೌಲನ ಪ್ರಕರಣದ ಸುತ್ತಲು ಇದ್ದ ಪರಿಸ್ಥಿತಿಗಳು ಹೀಗಿದ್ದವು: ಅದೊಂದು ವೈಭವದ ಮತ್ತು ಸಂತೋಷಕರ ಸಮಯವಾಗಿದ್ದು ಸೆಜರೇಯದ ಎಲ್ಲಾ ಗಣ್ಯವ್ಯಕ್ತಿಗಳು ಅಲ್ಲಿ ಕೂಡಿಬಂದಿದ್ದರು (25:23). ಆದರೆ ಅದೊಂದು ಔಪಚಾರಿಕ ನ್ಯಾಯವಿಚಾರಣೆಯಾಗಿರಲಿಲ್ಲ, ಯಾಕೆಂದರೆ ಫೆಸ್ತನು ಈಗಾಗಲೇ ಪೌಲನ ನ್ಯಾಯವಿಚಾರಣೆ ಮಾಡಿದ್ದನು ಮತ್ತು ಆತನು ಚಕ್ರವರ್ತಿಯ ಮುಂದೆ ನ್ಯಾಯವಿಚಾರಣೆಗೆ ಒಳಗಾಗಲು ಆತನನ್ನು ರೋಮ್‌ಗೆ ಕಳುಹಿಸಬೇಕೆಂದು ನಿರ್ಧಾರ ಮಾಡಿದ್ದನು (25;10–12, 21, 25).

2. ಪೌಲನು ತನ್ನ ಮಾತುಗಳನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ಎಲ್ಲರ ಗಮನವನ್ನು ತನ್ನ ಕಡೆಗೆ ಸೆಳೆಯಲು ತನ್ನ ಕೈಯೆತ್ತಿದನು. ಇದು ಆ ದಿನಗಳ ವಾಕ್ಪಟುಗಳ ರೂಢಿಯಾಗಿತ್ತು.

3. ವಚನ 2–33 ರಲ್ಲಿರುವ ಪೌಲನ ಮಾತುಗಳನ್ನು ಈ ರೀತಿಯಾಗಿ ರಚಿಸಬಹುದು:

   - ಅಗ್ರಿಪ್ಪ ರಾಜನನ್ನು ಅಭಿನಂದಿಸುವ ಪೀಠಿಕೆ, ವ. 2–3

- ಪೌಲನಿಗೆ ದೇವರ ವಾಗ್ದಾನಗಳ ಮೇಲಿರುವ ನಿರೀಕ್ಷೆ ಮತ್ತು ಯೆಹೂದ್ಯರ ಧರ್ಮದ ತನ್ನ ಹಿನ್ನಲೆ, ವ. 4–7
- ಸತ್ತವರನ್ನು ಎಬ್ಬಿಸಲು ದೇವರು ಶಕ್ತನಲ್ಲವೋ ಎಂದು ನೆರೆದಿದ್ದ ಶ್ರೋತೃಗಳಿಗೆ ಪೌಲನ ಪ್ರಶ್ನೆ, ವ. 8
- ಹಿಂಸಕನಾದ ಪೌಲನು, ವ. 9–11
- ದಮಸ್ಕದ ರಸ್ತೆಯಲ್ಲಿ ಪೌಲನ ಪರಿವರ್ತನೆ, ವ. 12–14
- ಅನ್ಯರಿಗೆ ಸುವಾರ್ತೆಯನ್ನು ಸಾರಲು ಪೌಲನ ಕರೆಯುವಿಕೆ, ವ. 15–18
- ಕರೆಯುವಿಕೆಗೆ ಪೌಲನು ವಿಧೇಯನಾಗಿದ್ದು, ವ. 19–21
- ಪೌಲನ ಬಂಧನ ಮತ್ತು ಆತನ ಪ್ರಸಕ್ತ ಪರಿಸ್ಥಿತಿ, ವ. 21–23

4. ಪೌಲನು ತಾನು 'ನಮ್ಮ ಧರ್ಮದ ನಿಷ್ಠಾವಂತ ಪಂಗಡಕ್ಕೆ ತಕ್ಕಂತೆ ನಾನು ಫರಿಸಾಯನಾಗಿ ಜೀವಿಸಿದೆನೆಂಬುದನ್ನು' (ವ. 5) ಹೇಳಿದ್ದರ ಉದ್ದೇಶವೇನೆಂದರೆ ತಾನು ಒಬ್ಬ ಯೆಹೂದ್ಯನೆಂಬುದನ್ನು ಅರ್ಹಗೊಳಿಸುವುದಕ್ಕಾಗಿತ್ತು (ಅದು ಸ್ಪಷ್ಟವಾಗಿ ಅತ್ಯುನ್ನತ ಗುಣಮಟ್ಟದ್ದಾಗಿತ್ತು), ಅದರ ನಂತರ ಆತನು ತನ್ನ ಯೆಹೂದ್ಯ ಪಾಲನೆಯ ಮತ್ತು ತನ್ನ ಪ್ರಸ್ತುತ ನಂಬಿಕೆಯ ನಡುವೆ ಯಾವುದೇ ಒಡಕು ಉಂಟಾಗಲಿಲ್ಲವೆಂಬುದನ್ನು ಸೂಚಿಸಿದನು. ತನ್ನ ಯೆಹೂದ್ಯ ಹಿನ್ನಲೆಯು ಪರಿಚಯಿಸಿದ ನಿರೀಕ್ಷೆಯನ್ನು ತನ್ನ ಪ್ರಸ್ತುತ ಕ್ರೈಸ್ತ ನಂಬಿಕೆಯು ಈಡೇರಿಸಿತ್ತು. ಹಾಗಾಗಿ ಆತನು ಯೆಹೂದ್ಯರೊಂದಿಗೆ ತಾನೂ ಸಹ ನಂಬಿದ ಆ ನಿರೀಕ್ಷೆಯ ನಿಮಿತ್ತವೇ ಈಗ ನ್ಯಾಯವಿಚಾರಣೆಗೆ ('ನ್ಯಾಯವಿಚಾರಣೆ' ಎಂಬ ಪದದ ಮೂಲಕ ಪೌಲನು ಕಳೆದ ಎರಡು ವರ್ಷಗಳ ಇಡೀ ಪ್ರಕ್ರಿಯೆಯನ್ನು ಸೂಚಿಸುತ್ತಿದ್ದಾನೆ) ಒಳಗಾಗಬೇಕಾದ ಸಂಗತಿಯು ನಿಜವಾಗಲೂ ಒಂದು ವಿಚಿತ್ರವಾದ ಅಣಕವಾಗಿದೆ.

5. ಅ. ಕೃ. 22:3–16 ಮತ್ತು 26:2–23 ರ ನಡುವಿನ ಪೌಲನ ಸಾಕ್ಷಿಗಳಲ್ಲಿ ಕೆಲವು ಅಲ್ಪ ವ್ಯತ್ಯಾಸಗಳಿವೆ (ಉದಾಹರಣೆಗೆ ಅಲ್ಲಿ ಪೌಲನು ಕುರುಡನಾಗಿದ್ದರ ಕುರಿತು ಯಾವ ಸಂಗತಿಯೂ ತಿಳಿಸಲ್ಪಟ್ಟಿಲ್ಲ). ಆದರೆ ನಾನು ಮೂರು ಪ್ರಮುಖ ವ್ಯತ್ಯಾಸಗಳನ್ನು ಮಾತ್ರ ತಿಳಿಸಲು ಬಯಸುತ್ತೇನೆ – ಮತ್ತು ಪೌಲನು (ಮತ್ತು ಲೂಕನು) ಈ ವ್ಯತ್ಯಾಸಗಳನ್ನು ಮಾಡಲಿಕ್ಕೆ ಒಳ್ಳೆಯ ಕಾರಣಗಳನ್ನು ಹೊಂದಿದ್ದನು ಎಂಬುದನ್ನು ತೋರಿಸುವೆನು:

   1) ಅನನೀಯನು ಯಾರು ಮತ್ತು ಆತನನ್ನು ದೇವರು ಹೇಗೆ ಉಪಯೋಗಿಸಿದನು ಎಂಬುದರ ಕುರಿತು ಅಧ್ಯಾಯ 26 ರಲ್ಲಿ ತಿಳಿಸಲ್ಪಟ್ಟಿಲ್ಲ. ಇದಕ್ಕೆ ಕಾರಣವೇನೆಂದರೆ ಅಧ್ಯಾಯ 22 ರಲ್ಲಿ ಪೌಲನು ಯೆಹೂದ್ಯ ಜನಸಮೂಹದ ಮುಂದೆ ತನ್ನ ಸಾಕ್ಷಿಯನ್ನು ನೀಡುತ್ತಿದ್ದಾನೆ, ಹಾಗಾಗಿ ಆತನು ಅನನೀಯನ ಪಾತ್ರವನ್ನು ಒತ್ತಿ ಹೇಳಲು ಬಯಸಿದನು 'ಆತನು ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಭಕ್ತಿವಂತನೂ, ದಮಸ್ಕದಲ್ಲಿ ಯೆಹೂದ್ಯರೆಲ್ಲರಿಂದ ಸಾಕ್ಷಿಹೊಂದಿದವನೂ ಆಗಿದ್ದನು' (22:12). ಈ ಮಾಹಿತಿಯನ್ನು ಅಧ್ಯಾಯ 26 ರಲ್ಲಿ ಸೇರಿಸುವ ಯಾವ ಅಗತ್ಯತೆ ಇರಲಿಲ್ಲ, ಯಾಕೆಂದರೆ ಅಲ್ಲಿದ್ದ ಜನಸಮೂಹವು ವ್ಯತ್ಯಾಸವಾಗಿದ್ದವು.

2) ಪೌಲನ ಮಾನಸಾಂತರದ ಜೊತೆಗೆ 'ಅನ್ಯರ' ಕುರಿತು ಅಧ್ಯಾಯ 22 ರಲ್ಲಿ ತಿಳಿಸಲ್ಪಟ್ಟಿಲ್ಲ, ಅದು ನಂತರ ಯೇಸು ದೇವಾಲಯದಲ್ಲಿ ಆತನೊಂದಿಗೆ ಮಾತನಾಡಿದಾಗ ಮಾತ್ರ ತಿಳಿಸಲ್ಪಟ್ಟಿದೆ. ಆದರೆ ಅಧ್ಯಾಯ 26 ರಲ್ಲಿ, ಏಳು ವಚನಗಳ ಸನ್ನಿವೇಶದಲ್ಲಿ, 'ಅನ್ಯರ' ಕುರಿತು ಮೂರು ಬಾರಿ ತಿಳಿಸಲ್ಪಟ್ಟಿದೆ (ವ. 17, 20, 23). ಇದಕ್ಕೆ ಕಾರಣವೇನೆಂದರೆ ಪೌಲನು ರೋಮನ್ ಪ್ರಾಂತ್ಯವಾದ ಯೂದಾಯದ ಅತ್ಯುನ್ನತ ನಾಯಕರುಗಳ ಮುಂದೆ ಮಾತನಾಡುತ್ತಿದ್ದು (ಅಗ್ರಿಪ್ಪನ ರಾಜತ್ವವೂ ಸಹ ಸಂಪೂರ್ಣವಾಗಿ ರೋಮನ್ ಅಧಿಕಾರಿಗಳ ಮೇಲೆ ಅವಲಂಬಿತವಾಗಿತ್ತು) ಯೇಸು ತನ್ನನ್ನು ಅನ್ಯ ಲೋಕಕ್ಕೆ ಸುವಾರ್ತೆಯನ್ನು ಸಾರಲು ಕರೆದಿದ್ದಾನೆ ಎಂಬುದನ್ನು ಒತ್ತಿಹೇಳಲು ಬಯಸಿದನು.

3) ಪೌಲನನ್ನು ಯೆರೂಸಲೇಮಿನಲ್ಲಿ ಬಂಧಿಸಿದ್ದರ ಕುರಿತು ಅಧ್ಯಾಯ 26 ರಲ್ಲಿ ಮಾತ್ರ ತಿಳಿಸಲಾಗಿದೆ. ನಿಶ್ಚಯವಾಗಲೂ ಇದಕ್ಕೆ ಕಾರಣವೇನೆಂದರೆ ಅಧ್ಯಾಯ. 22 ರ ಪರಿಸ್ಥಿತಿಯು ಪೌಲನ ಬಂಧನವಾಗಿದೆ, ಹಾಗಾಗಿ ಆತನು ಅಲ್ಲಿ ಅದರ ಕುರಿತು ಹೇಳುವ ಅಗತ್ಯತೆ ಇರಲಿಲ್ಲ. ಆದರೆ ಅಧ್ಯಾಯ 26 ರಲ್ಲಿ, ಈಗ ಪೌಲನು – ಎರಡು ವರ್ಷಗಳ ನಂತರ – ತಾನು ಯಾಕೆ ಅಗ್ರಿಪ್ಪ ರಾಜನ ಮುಂದೆ ನಿಂತಿದ್ದಾನೆ ಎಂಬುದಕ್ಕೆ ಯೆರೂಸಲೇಮಿನಲ್ಲಿನ ಪೌಲನ ಬಂಧನವು ಹಿನ್ನಲೆ ರೂಪಿಸುತ್ತದೆ.

6. 'ಅಲ್ಪಸಮಯದಲ್ಲಿಯೇ ನನ್ನನ್ನು ಕ್ರೈಸ್ತನನ್ನಾಗಿ ಮಾಡಬೇಕೆಂದು ಒಡಂಬಡಿಸುತ್ತಿದ್ದೀ' (ವ. 28) ಎಂದು ಅಗ್ರಿಪ್ಪನು ಪೌಲನಿಗೆ ಹೇಳಿದ ಮಾತನ್ನು ನಾವು ವಿವಿಧ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು:

- ಅಗ್ರಿಪ್ಪನು ಈ ಪೊಳ್ಳಾದ ಮತ್ತು ಅಹಂಕಾರದ ವಾಕ್ಚಾತುರ್ಯವುಳ್ಳ ಪ್ರಶ್ನೆಯನ್ನು ಕೇಳುವುದರ ಮೂಲಕ ತನ್ನ ನಾಚಿಕೆಯನ್ನು ಮರೆಮಾಡಲು ಪ್ರಯತ್ನಿಸುತ್ತಿದ್ದಾನೆ.
- ಅಗ್ರಿಪ್ಪನು ಲಘುವಾದ ಅಣಕವನ್ನು ಬಳಸುವುದರಿಂದ, ಒಬ್ಬನು ಪ್ರವಾದಿಗಳಲ್ಲಿ ನಂಬಿಕೆಯಿಟ್ಟ ಮಾತ್ರಕ್ಕೆ ಕ್ರೈಸ್ತನಾಗುವುದು ಅಷ್ಟು ಸುಲಭದ ವಿಚಾರವಲ್ಲ ಎಂಬುದನ್ನು ಪೌಲನಿಗೆ ಸೂಚಿಸುತ್ತಿದ್ದಾನೆ.
- ಅಗ್ರಿಪ್ಪನು ತನ್ನ ಸಾಂಪ್ರದಾಯಿಕ ಯೆಹೂದ್ಯ (ಮತ್ತು ಸದ್ದುಕಾಯ) ನಿಲುವನ್ನು ವ್ಯಕ್ತಪಡಿಸುತ್ತಿದ್ದಾನೆ ಮತ್ತು ಪೌಲನ ಸುವಾರ್ತಾ ಸಂದೇಶವನ್ನು ನಿಷ್ಠುರವಾಗಿ ತಿರಸ್ಕರಿಸುತ್ತಿದ್ದಾನೆ.
- ಈ ಕಥೆಯ ಸನ್ನಿವೇಶವನ್ನು ಗಮನಿಸಿದರೆ ಮೊದಲ ಅಂಶವು ಹೆಚ್ಚಿನ ಅರ್ಥವನ್ನು ಕೊಡುತ್ತದೆ ಎಂದು ನಾನು ಆಲೋಚಿಸುತ್ತೇನೆ. ಅಗ್ರಿಪ್ಪನು ಪೌಲನ ಮಾತುಗಳಿಂದ ಕಳವಳಗೊಂಡಿದ್ದನು ಮತ್ತು ಆ ಸಂದೇಶವು ಆತನನ್ನು ವೈಯಕ್ತಿಕವಾಗಿ ಮತ್ತು ಅನುಕೂಲಕರವಲ್ಲದ ರೀತಿಯಲ್ಲಿ ತನ್ನ ಹೃದಯವನ್ನು ಸ್ಪರ್ಶಿಸಿದ ಅನುಭವ ಆತನಿಗಾಯಿತು. ಹಾಗಾಗಿ ಪೌಲನು ಆತನಿಗೆ ಪ್ರವಾದಿಗಳಲ್ಲಿ ನೀನು ನಂಬಿಕೆ ಇಡುತ್ತಿಯೋ ಎಂದು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡುವುದರ ಬದಲಾಗಿ ಆತನು ಈ ಪ್ರಶ್ನೆಯನ್ನು ಕೇಳುವುದರ ಮೂಲಕ ನಾಚಿಕೆ ಉಂಟುಮಾಡಿದ ಪರಿಸ್ಥಿತಿಯಿಂದ ಹೊರಬರಲು ಪ್ರಯತ್ನಿಸಿದನು.

# ಉ 68. ಪೌಲನು ರೋಮ್‌ಗೆ ಪ್ರಯಾಣ ಮಾಡಿದ್ದು, 27:1–12

## ಇ) ಪಠ್ಯ ಪ್ರಶ್ನೆಗಳು

2. ಪೌಲನನ್ನು ಮತ್ತು ಇತರ ಖೈದಿಗಳನ್ನು ಕೊಂಡೊಯ್ಯುವ ಅಧಿಕಾರವನ್ನು ಜೂಲ್ಯನೆಂಬ ಶತಾಧಿಪತಿಯು ವಹಿಸಿಕೊಂಡಿದ್ದನು. ಅವರು ಹೇಗೆ ಪ್ರಯಾಣಿಸಬೇಕು ಮತ್ತು ಯಾವ ಮಾರ್ಗವನ್ನು ಆಯ್ಕೆಮಾಡಿಕೊಳ್ಳಬೇಕು ಎಂಬ ನಿರ್ಧಾರವನ್ನು ಆತನು ತೆಗೆದುಕೊಳ್ಳಬೇಕಾಗಿತ್ತು. ಸೈನಿಕರ ಒಂದು ತಂಡವು ಆತನಿಗೆ ಸಹಾಯಮಾಡಲು ನೇಮಿಸಲ್ಪಟ್ಟಿತ್ತು.

3. ಅವರು ಸಿದೋನಿಗೆ ತಲುಪಿದ ತಕ್ಷಣ ಪೌಲನು ಅಲ್ಲಿರುವ ವಿಶ್ವಾಸಿಗಳನ್ನು ಸಂಧಿಸಲಿಕ್ಕೆ ಅಪ್ಪಣೆಯನ್ನು ಪಡೆದುಕೊಂಡನು. ಅವರು ಆತನ ಪ್ರಯಾಣಕ್ಕೆ ಬೇಕಾದ ಅಗತ್ಯತೆಗಳನ್ನು ಒದಗಿಸಿಕೊಟ್ಟರು – ಬಹುಶಃ ಊಟ ಮತ್ತು ಪ್ರಯಾಣಕ್ಕೆ ಸಹಾಯಕರವಾದ ಇತರೆ ಕೊಡುಗೆಗಳನ್ನು ಒದಗಿಸಿದರು. ನಿಶ್ಚಯವಾಗಲೂ ಪೌಲನ ಜೊತೆಯಲ್ಲಿ ಒಬ್ಬ ಸೈನಿಕನು ಮೈಗಾವಲಾಗಿ ಹೋದನು.

4. ಪ್ರಯಾಣಿಕರು ಲೂಸಿಯಾದ ಮುರ ಎಂಬಲ್ಲಿಗೆ ಬಂದಾಗ ತಮ್ಮ ಹಡಗನ್ನು ಬದಲಾಯಿಸಿದರು. ಅಲ್ಲಿ ಜೂಲ್ಯನು ಅಲೆಗ್ಸಾಂಡ್ರಿಯಾದಿಂದ ನೇರವಾಗಿ ರೋಮ್‌ಗೆ ಹೊರಡುತ್ತಿದ್ದ ಒಂದು ಆಹಾರಧಾನ್ಯ ಸರಬರಾಜಿನ ಹಡಗನ್ನು ಕಂಡನು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ವ. 9 ರಲ್ಲಿ ಸಮುದ್ರ ಪ್ರಯಾಣವು ಈಗಾಗಲೇ ಅಪಾಯಕರವಾಗಿತ್ತೆಂದು ಲೂಕನು ಬರೆಯುತ್ತಿದ್ದಾನೆ. ಇದಕ್ಕೆ ಕಾರಣವೇನೆಂದರೆ ಜಲಸಂಚಾರದ ದಿನಗಳು (ಆ ದಿನಗಳು ಮೇ/ಜೂನ್‌ನಿಂದ ಪ್ರಾರಂಭವಾಗಿ ಸೆಪ್ಟೆಂಬರ್/ಅಕ್ಟೋಬರ್‌ನಲ್ಲಿ ಅಂತ್ಯಗೊಳ್ಳುತ್ತಿದ್ದವು) ಅಂತ್ಯಗೊಳ್ಳುತ್ತಿದ್ದವು. ಅತೀ ಶೀಘ್ರದಲ್ಲಿ ಚಳಿಗಾಲದ ಬಿರುಗಾಳಿಯು ಮೆಡಿಟೆರೆನಿಯನ್ ಸಮುದ್ರದಾದ್ಯಂತ ಸಮುದ್ರಪ್ರಯಾಣವನ್ನು ಅಸಾಧ್ಯಗೊಳಿಸುತ್ತಿತ್ತು ಇಲ್ಲವೇ ಕನಿಷ್ಟ ಪಕ್ಷ ಅತ್ಯಂತ ಅಪಾಯಕಾರಿಗೊಳಿಸುತ್ತಿತ್ತು.

2. ರೋಮನ್ ಶತಾಧಿಪತಿಯಾದ ಜೂಲ್ಯನು ಖೈದಿಗಳ ಜವಾಬ್ದಾರಿ ವಹಿಸಿದ್ದನು ಮತ್ತು ತಂಡವು ರೋಮ್‌ಗೆ ಯಾವ ಮಾರ್ಗವಾಗಿ ಪ್ರಯಾಣಿಸಿರಬೇಕು ಎಂಬುದನ್ನು ಆತನು ನಿರ್ಧರಿಸಬೇಕಾಗಿತ್ತು. ಅವರು ಅಕ್ಟೋಬರ್ ತಿಂಗಳಿನ ಪ್ರಾರಂಭದಲ್ಲಿ ಕ್ರೇಟ ದ್ವೀಪಕ್ಕೆ ತಲುಪಿದಾಗ, ಅವರು ಚಳಿಗಾಲವನ್ನು ಅಲ್ಲಿಯೇ ಕಳೆಯಬೇಕೋ ಅಥವಾ ತಮ್ಮ ಪ್ರಯಾಣವನ್ನು ಮುಂದುವರೆಸಿಬೇಕೋ ಎಂಬುದನ್ನು ಆತನು ನಿರ್ಧರಿಸಬೇಕಾಗಿತ್ತು. ಆತನು ಪೌಲನ ಸಲಹೆಯನ್ನು ಕೇಳುವುದರ ಬದಲಾಗಿ ಹಡಗಿನ ಚಾಲಕನ ಮತ್ತು ಮಾಲೀಕನ ಸಲಹೆಯನ್ನು ಕೇಳಿದನು. ಕೇವಲ ಒಬ್ಬ ಸತ್ಯವೇದ ಉಪದೇಶಕನಾಗಿದ್ದ ಪೌಲನಿಗಿಂತ ಅವರು ಸಮುದ್ರಪ್ರಯಾಣದ ಬಗ್ಗೆ ಹೆಚ್ಚು ಅನುಭವವುಳ್ಳವರೆಂದು ಬಹುಶಃ ಜೂಲ್ಯನು

ಆಲೋಚಿಸಿರಬಹುದು. ಅದಲ್ಲದೆ ಒಬ್ಬ ಅನ್ಯನಾಗಿದ್ದರಿಂದ ಬಹುಶಃ ಜೂಲ್ಯನು ಪೌಲನು ದೈವಿಕ ಪ್ರಕಟನೆಯನ್ನು ಹೊಂದಬಲ್ಲ ಒಬ್ಬ ದೇವರ ಮನುಷ್ಯನೆಂದು ಅರ್ಥಮಾಡಿಕೊಳ್ಳಲಿಲ್ಲ.

## ಉ 69. ಚಂಡಮಾರುತ 27:13–26

### ಇ) ಪಠ್ಯ ಪ್ರಶ್ನೆಗಳು

1. ಅವರು ಕ್ಲೌವ್ದ ಎಂಬ ಪುಟ್ಟ ದ್ವೀಪಕ್ಕೆ ಬಂದಾಗ ಅವರು ಅಲ್ಲಿ ಆಶ್ರಯವನ್ನು ಕಂಡರು, ಅವರು ಜೀವರಕ್ಷಕ ದೋಣಿಗಳನ್ನು ಸರಿಪಡಿಸಿಕೊಂಡು ಹೋಗಲಿಕ್ಕೆ ಸಾಧ್ಯವಾಯಿತು. ಅವರು ಅದನ್ನು ಮೇಲಕ್ಕೆಳೆದು ಹಗ್ಗಗಳಿಂದ ಹಡಗಿನ ಕೆಳಭಾಗಕ್ಕೆ ಬಿಗಿಯಾಗಿ ಕಟ್ಟಿದರು.

2. ಹಡಗಿನಲ್ಲಿರುವ ಪ್ರತಿಯೊಬ್ಬನು ರಕ್ಷಿಸಲ್ಪಡುವನೆಂದು ಪೌಲನು ನಿಶ್ಚಯವಾಗಿ ಹೇಳಿದನು, ಯಾಕೆಂದರೆ ಒಬ್ಬ ದೇವದೂತನು ರಾತ್ರಿಯಲ್ಲಿ ಪೌಲನಿಗೆ, 'ದೇವರು ನಿನ್ನೊಂದಿಗೆ ಪ್ರಯಾಣ ಮಾಡುತ್ತಿರುವವರ ಪ್ರಾಣಗಳನ್ನು ನಿನಗೆ ಉಳಿಸಿಕೊಟ್ಟಿದ್ದಾನೆ' ಎಂದು ಹೇಳಿದ್ದನು.

### ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ವಚನ 20 ರಲ್ಲಿ ಲೂಕನು ತಿಳಿಸುವ ಮಾಹಿತಿಯ ('ಅನೇಕ ದಿನಗಳವರೆಗೆ ಸೂರ್ಯನನ್ನಾಗಲಿ ನಕ್ಷತ್ರಗಳನ್ನಾಗಲಿ ಕಾಣದೆ ಚಂಡಮಾರುತ ಬೀಸುತ್ತಲೇ ಇತ್ತು') ಜಲಸಂಚಾರ ಅನ್ವಯಗಳು ಏನಾಗಿತ್ತೆಂದರೆ: ತಾವು ಎಲ್ಲಿದ್ದೇವೆಂಬುದನ್ನು ಅವರು ತಿಳಿದುಕೊಳ್ಳಲು ಯಾವ ಮಾರ್ಗವಿರಲಿಲ್ಲ. ನಾವಿಕರು ಸೂರ್ಯನನ್ನಾಗಲಿ ಅಥವಾ ನಕ್ಷತ್ರಗಳನ್ನಾಗಲಿ ಕಾಣುವಾಗ ಮಾತ್ರ ತಮ್ಮ ಸ್ಥಳವನ್ನು ಊಹಿಸಲು ಅಥವಾ ತಮ್ಮ ಪ್ರಯಾಣವು ಯಾವ ಕಡೆಗೆ ಸಾಗಿದೆ ಎಂಬುದನ್ನು ನಿಶ್ಚಯಪಡಿಸಿಕೊಳ್ಳಲು ಸಾಧ್ಯವಾಗುತ್ತಿತ್ತು (ಯಾಕೆಂದರೆ ಆ ದಿನಗಳಲ್ಲಿ ಯಾವುದೇ ದಿಕ್ಸೂಚಿ ಇರಲಿಲ್ಲ). ದಿನ ಕಳೆದಂತೆ ತಮ್ಮ ರಕ್ಷಣೆಯ ನಿರೀಕ್ಷೆಯು ಕಳೆದುಹೋಗುತ್ತಿತ್ತು. ನಾವಿಕರು ಮತ್ತು ಪ್ರಯಾಣಿಕರು ದೆಸೆಗೆಟ್ಟ ಸ್ಥಿತಿಗೆ ತಲುಪಿದರು.

2. ವಚನ 27:10 ರಲ್ಲಿ ಪೌಲನು ಹೇಳಿದ್ದರ ಮತ್ತು 27:24 ರಲ್ಲಿ ದೇವದೂತನು ಹೇಳಿದ್ದರ ನಡುವೆ ಹೊಂದಾಣಿಕೆ ಇಲ್ಲದಿರುವುದು ಕಂಡುಬರುತ್ತದೆ: ಚಂದ ರೇವುಗಳಲ್ಲಿ ಹಡಗಿಗೆ ಲಂಗುರವನ್ನು ಹಾಕಿದ್ದಾಗ, ಪೌಲನು, 'ಸಹೋದರರೇ ನಮ್ಮ ಸಮುದ್ರ ಪ್ರಯಾಣವು ಅಪಾಯಕಾರಿಯಾಗಿರುವಂತೆ ತೋರುತ್ತದೆ. ಇದರಿಂದ ನಮ್ಮ ಹಡಗಿಗೂ ಸರಕಿಗೂ ಅಷ್ಟೇ ಅಲ್ಲ ನಮ್ಮ ಸ್ವಂತ ಪ್ರಾಣಗಳಿಗೂ ದೊಡ್ಡ ಹಾನಿ ಬರುವ ಸಂಭವವಿದೆ' ಎಂದು ಎಚ್ಚರಿಸಿದನು (27:10). ಈಗ ಅವರು ಅನೇಕ ದಿನಗಳವರೆಗೆ ಬಿರುಗಾಳಿಯಲ್ಲಿ ಸಿಕ್ಕಿಕೊಂಡಿದ್ದು ಗಾಳಿ ಬೀಸಿದ ಕಡೆಗೆ ನೂಕಲ್ಪಡುತ್ತಿರುವಾಗ ಮತ್ತು ಎಲ್ಲರೂ ತಾವು ಸಾಯುತ್ತೇವೆ ಎಂದುಕೊಳ್ಳುತ್ತಿರುವ ಸಂದರ್ಭದಲ್ಲಿ, ಒಬ್ಬ ದೇವದೂತನು ಪೌಲನಿಗೆ ಪ್ರತ್ಯಕ್ಷನಾಗಿ ಎಲ್ಲರ ಪ್ರಾಣಗಳು ಜೀವದಿಂದುಳಿಯುವವು ಎಂಬ ಮಾಹಿತಿಯನ್ನು ತಿಳಿಸುತ್ತಿದ್ದಾನೆ.

ಈ ವ್ಯತ್ಯಾಸವನ್ನು ಹೇಗೆ ವಿವರಿಸಬಹುದು. ವಚನ 27:10 ರಲ್ಲಿ ಪೌಲನು ಅನೇಕ ಅಪಾಯಕರ ಸಮುದ್ರ ಪ್ರಯಾಣದ ತನ್ನ ವೈಯಕ್ತಿಕ ಅನುಭವಗಳಿಂದ ಮಾತನಾಡುತ್ತಿದ್ದಾನೆಂದು ನಾನು ಆಲೋಚಿಸುತ್ತೇನೆ (ಪೌಲನು ಈ ಪ್ರಯಾಣಕ್ಕಿಂತ ಮುಂಚೆ ಮಾಡಿದ 11 ಸಮುದ್ರಪ್ರಯಾಣಗಳನ್ನು ಅಪೋಸ್ತಲರ ಕೃತ್ಯಗಳ ಪುಸ್ತಕವು ದಾಖಲಿಸುತ್ತದೆ): ಅವರು ಪ್ರಯಾಣಸುತ್ತಿದ್ದ ಹಡಗಿನ ಸ್ಥಿತಿಯನ್ನೂ, ಚಳಿಗಾಲದಲ್ಲಿ ಬೀಸುತ್ತಿದ್ದ ಬಿರುಗಾಳಿಯನ್ನೂ ಮತ್ತು ಕ್ರೇಟದಿಂದ ಇಟಲಿಗೆ ತಲುಪಲು ಬೇಕಾಗಿದ್ದ ಉದ್ದವಾದ ಸಮುದ್ರಮಾರ್ಗವನ್ನು ಪರಿಗಣಿಸಿದಾಗ ತಮ್ಮ ಸಮುದ್ರಪ್ರಯಾಣವು ಒಂದು ದುರಂತಕ್ಕೆ ಒಳಗಾಗುವದು ಮತ್ತು ಜೀವಗಳು ನಾಶವಾಗುವವು ಎಂಬುದನ್ನು ಪೌಲನು 'ಕಂಡನು' (ಅರಿತನು ಮತ್ತು ಅರ್ಥಮಾಡಿಕೊಂಡನು). ಆದರೆ ಪೌಲನು ತಪ್ಪಾಗಿ ಯೋಚಿಸಿದನೆಂದು 27:24 ತೋರಿಸುತ್ತದೆ. ಹಡಗಿನಲ್ಲಿದ್ದಂತಹ ಎಲ್ಲಾ ಪ್ರಯಾಣಿಕರ ಜೀವಗಳ ಕುರಿತು ದೇವರು ಬೇರೆ ಯೋಜನೆಯನ್ನು ಹೊಂದಿದ್ದನು: ಅವರೆಲ್ಲರೂ ರಕ್ಷಿಸಲ್ಪಡಬೇಕೆಂಬುದು.

# ಉ 70. ಹಡಗು ಒಡೆದುಹೋದದ್ದು, 27:27–44

## ಇ) ಪಠ್ಯ ಪ್ರಶ್ನೆಗಳು

2. ಬಿರುಗಾಳಿಯು 14 ದಿನಗಳವರೆಗೂ ಮುಂದುವರೆಯಿತು. ಹದಿನಾಲ್ಕನೆಯ ದಿನದ ರಾತ್ರಿಯಲ್ಲೂ ಬಿರುಗಾಳಿ ಅವರನ್ನು ಹೊಯ್ದಾಡಿಸುತ್ತಿತ್ತು (ವ. 27) ಮತ್ತು ಅವರು 14 ದಿನಗಳ ಹಿಂದೆ ಚಂದ ರೇವುಗಳನ್ನು ಬಿಟ್ಟ ದಿನದಿಂದ ಏನನ್ನೂ ತಿಂದಿರಲಿಲ್ಲ (ವ. 33).

3. ಹಡಗಿನಿಂದ ತಪ್ಪಿಸಿಕೊಳ್ಳಲು ಬಯಸಿದ್ದರಿಂದ ನಾವಿಕರು ದೋಣಿಯನ್ನು ಸಮುದ್ರದಲ್ಲಿ ಇಳಿಸಿದರು. ಅವರು ಲಂಗರುಗಳನ್ನು ಕೆಳಗಿಳಿಸುವಂತೆ ನಟಿಸಿದರು, ಆದರೆ ಅವರು ವಾಸ್ತವಿಕವಾಗಿ ಸೈನಿಕರನ್ನು ಮತ್ತು ಖೈದಿಗಳನ್ನು ಅಲ್ಲಿಯೇ ಬಿಟ್ಟು ತಪ್ಪಿಸಿಕೊಂಡು ಹೋಗಬೇಕೆಂದು ಯೋಚಿಸಿದ್ದರು (ವ. 30).

4. ಪೌಲನು ರೊಟ್ಟಿಯನ್ನು ತಿನ್ನುವುದಕ್ಕಿಂತ ಮುಂಚೆ ಎಲ್ಲಾ ಜನರ ಮುಂದೆ ದೇವರಿಗೆ ಸ್ತೋತ್ರಮಾಡಿದನು (ವ. 35).

5. ಅವರು ಹಡಗನ್ನು ಹಗುರ ಮಾಡಲು ಗೋಧಿಯ ಚೀಲಗಳನ್ನು ಸಮುದ್ರದಲ್ಲಿ ಬಿಸಾಕಿದರು. ಹೀಗೆ ಮಾಡುವುದರಿಂದ ಅವರು ಹಡಗನ್ನು ಸಮುದ್ರದ ತೀರಕ್ಕೆ ಇನ್ನೂ ಸಮೀಪ ತರಲು ಸಾಧ್ಯವಾಗುತ್ತಿತ್ತು.

6. ಹಡಗಿನಲ್ಲಿದ್ದ ಪ್ರತಿಯೊಬ್ಬರೂ ರಕ್ಷಿಸಲ್ಪಟ್ಟರು. ಈಜಲು ಬಂದವರು ಈಜಿ ಸಮುದ್ರದ ತೀರವನ್ನು ಸೇರಿದರು. ಉಳಿದವರು ಹಲಗೆಗಳ ಮೇಲೆ ಮತ್ತು ಹಡಗಿನ ತುಂಡುಗಳ ಸಹಾಯದಿಂದ ದಡ ಸೇರಿದರು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಸೈನಿಕರು ದೋಣಿಗೆ ಕಟ್ಟಿದ್ದ ಹಗ್ಗಗಳನ್ನು ಕಡಿದು ಹಾಕಿ ಅದು ಸಮುದ್ರದ ಪಾಲಾಗುವಂತೆ ಮಾಡಿದರು, ಯಾಕೆಂದರೆ ಪೌಲನು ನಾವಿಕರು ಹಡಗಿನಲ್ಲಿಲ್ಲದಿದ್ದರೆ ತಾವು ಉಳಿದುಕೊಳ್ಳಲು ಸಾಧ್ಯವಿಲ್ಲವೆಂದು ಹೇಳಿದ್ದನು. ನಾವಿಕರು ಮುಳುಗುತ್ತಿದ್ದ ಹಡಗನ್ನು ಬಿಟ್ಟು ಜೀವರಕ್ಷಕ ದೋಣಿಗಳಿಂದ ತಪ್ಪಿಸಿಕೊಳ್ಳಲು ಯೋಜಿಸುತ್ತಿದ್ದರು, ಆದರೆ ಈಗ ಜೀವರಕ್ಷಕ ದೋಣಿಗಳು ಇಲ್ಲದಿರುವುದರಿಂದ ಅವರು ಹಡಗನ್ನು ಬಿಟ್ಟು ಹೋಗಲು ಆಗಲಿಲ್ಲ (ವ. 30–31).

2. ಶತಾಧಿಪತಿಯು ಖೈದಿಗಳನ್ನು ಕೊಲ್ಲದಂತೆ ಸೈನಿಕರಿಗೆ ಹೇಳಿದನು, ಯಾಕೆಂದರೆ ಆತನು ಪೌಲನ ಜೀವವನ್ನು ರಕ್ಷಿಸಬೇಕೆಂದು ಬಯಸಿದ್ದನು (ವ. 43). ಶತಾಧಿಪತಿಯು ಪೌಲನ ಮತ್ತು ಇತರೆ ಖೈದಿಗಳ ಮೇಲೆ ಭರವಸೆಯಿಡುವುದರಿಂದ ತನ್ನ ಮೇಲೆ ಎಂತಹ ಗಂಡಾಂತರವನ್ನು

ವಹಿಸಿಕೊಂಡನೆಂಬುದನ್ನು ಇದು ತೋರಿಸುತ್ತದೆ. ಒಂದು ವೇಳೆ ಅವರು ತಪ್ಪಿಸಿಕೊಂಡಿದ್ದರೆ, ಆತನ ಮೇಲಾಧಿಕಾರಿಯು ಆತನನ್ನು ಮರಣದಂಡನೆಗೆ ಒಪ್ಪಿಸುತ್ತಿದ್ದನು.

# ಉ 71. ಮಾಲ್ಟದ ದಡದಲ್ಲಿ, 28:1–10

## ಇ) ಪಠ್ಯ ಪ್ರಶ್ನೆಗಳು

2. ದ್ವೀಪದ ಜನರು ಪೌಲನು ಒಬ್ಬ ಕೊಲೆಗಾರನೆಂದು ಭಾವಿಸಿದರು, ಯಾಕೆಂದರೆ ಆತನು ಬೆಂಕಿಯಲ್ಲಿ ಕಟ್ಟಿಗೆಯನ್ನು ಹಾಕುತ್ತಿರುವಾಗ ಒಂದು ವಿಷಸರ್ಪವು ಆತನ ಸುತ್ತಿಕೊಂಡಿತು. ಆತನು ಹಡಗು ನಾಶವಾದಾಗ ಅದರಿಂದ ತಪ್ಪಿಸಿಕೊಂಡು ಬಂದರೂ ನ್ಯಾಯದ ದೇವರು ಆತನನ್ನು ಜೀವಿಸಲಿಕ್ಕೆ ಬಿಡುವುದಿಲ್ಲ ಎಂದು ಅವರು ಆಲೋಚಿಸಿದರು.

3. ಆದರೆ ದ್ವೀಪದ ಜನರು ಪೌಲನು ಬಾತುಕೊಳ್ಳದೆ ಮತ್ತು ಫಕ್ಕನೆ ಸತ್ತು ಹೋಗದೇ ಇದ್ದುದನ್ನು ನೋಡಿದ ನಂತರ ಅವರು ತಮ್ಮ ಮನಸ್ಸನ್ನು ಬದಲಾಯಿಸಿಕೊಂಡು ಪೌಲನು ಒಬ್ಬ ದೇವರೆಂದು ಹೇಳಿದರು.

4. ಪೊಬ್ಲಿಯನ ತಂದೆಯು ಜ್ವರ ಮತ್ತು ರಕ್ತ ಭೇದಿಯಿಂದ ಬಳಲುತ್ತಿದ್ದನು. ಇದು ಅನೇಕ ಶತಮಾನಗಳವರೆಗೆ ಮಾಲ್ಟಾದಲ್ಲಿ ಕಂಡುಬರುತ್ತಿದ್ದ ಒಂದು ಸಾಮಾನ್ಯ ಖಾಯಿಲೆಯಾಗಿತ್ತು. ಅದನ್ನು 'ಮಾಲ್ಟ ಜ್ವರ' ಎಂದು ಕರೆಯುತ್ತಾರೆ.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಸರ್ಪವು ಪೌಲನ ಕೈಯನ್ನು ಸುತ್ತಿಕೊಂಡಿತು ಎಂದು ಲೂಕನು ಬರೆದನೇ ಹೊರತು ಅದು ಆತನನ್ನು ಕಚ್ಚಿತು ಎಂದು ಬರೆಯುತ್ತಿಲ್ಲ. ಪೌಲನು ಸರ್ಪದಿಂದ ಕಚ್ಚಲ್ಪಟ್ಟನೆಂದು ಭಾವಿಸಿದ್ದು ದ್ವೀಪದ ಜನರಾಗಿದ್ದರು. ಹಾಗಾಗಿ ಸರ್ಪವು ಪೌಲನನ್ನು ಕಚ್ಚಿತೋ ಇಲ್ಲವೋ ಎಂಬುದು ನಮಗೆ ಗೊತ್ತಿಲ್ಲ. ಆದ್ದರಿಂದ ಪೌಲ ಮತ್ತು ಹಾವಿನ ಕಥೆಯನ್ನು ಮೂರು ವ್ಯತ್ಯಾಸವಾದ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು:
   1) ಸರ್ಪವು ಪೌಲನನ್ನು ಕಚ್ಚಿತು, ಮತ್ತು ದೇವರು ಅದ್ಭುತಕರವಾಗಿ ಆತನನ್ನು ವಿಷದ ಪರಿಣಾಮದಿಂದ ಸಂರಕ್ಷಿಸಿದನು (ಅಥವಾ ಗುಣಪಡಿಸಿದನು).
   2) ದೇವರು ಅದ್ಭುತಕರವಾಗಿ ಪೌಲನನ್ನು ಸಂರಕ್ಷಿಸಿದ್ದರಿಂದ ಸರ್ಪವು ಆತನನ್ನು ಕಚ್ಚಲೇ ಇಲ್ಲ.
   3) ಸರ್ಪವು ಪೌಲನನ್ನು ಕಚ್ಚಲಿಲ್ಲ. ಕೆಲವೊಮ್ಮೆ ಸರ್ಪವು ಜನರನ್ನು ಕಚ್ಚುತ್ತದೆ ಕೆಲವೊಮ್ಮೆ ಕಚ್ಚುವುದಿಲ್ಲ. ಜೀವಿತದಲ್ಲಿ ನಡೆಯುವುದು ಹೀಗೆನೇ.

   ಲೂಕನು ಅಲ್ಲಿ ಏನು ನಡೆಯಿತೆಂಬುದರ ಕುರಿತು ನಮಗೆ ತಿಳಿಸಲಿಕ್ಕೆ ತಲೆಕೆಡಿಸಿಕೊಳ್ಳಲಿಲ್ಲವಾದ್ದರಿಂದ ಅಲ್ಲಿ ಏನು ಸಂಭವಿಸಿತೆಂಬುದನ್ನು ನಾವು ತಿಳಿದುಕೊಳ್ಳಲು ಬೇರೆ ಯಾವ ಮಾರ್ಗಗಳೂ ಇಲ್ಲವೆಂದು ನಾನು ಆಲೋಚಿಸುತ್ತೇನೆ. ದ್ವೀಪದ ಜನರು ಹೇಗೆ – ಮತ್ತು ಯಾಕೆ – ತಮ್ಮ ಮನಸ್ಸುಗಳನ್ನು ಬದಲಾಯಿಸಿಕೊಂಡರೆಂಬುದನ್ನು ದಾಖಲಿಸುವುದು

ಕಥೆಯಲ್ಲಿನ ಲೂಕನ ಅಂಶವಾಗಿದೆ. ಬಹುಶಃ ಈ ಬದಲಾದ ಮನಸ್ಸು ಹಡಗು ಒಡೆದು ಹೋದ ಪ್ರಯಾಣಿಕರನ್ನು ದ್ವೀಪದ ಮುಖ್ಯ ವ್ಯಕ್ತಿಯಾದ ಪೊಬ್ಲಿಯನೆಂಬುವನ ಬಳಿಗೆ ಕರೆದೊಯ್ಯುವಂತೆ ಮಾಡಿತ್ತು.

2. ಈ ಕಥೆಯಿಂದ ನಾವು ಪೊಬ್ಲಿಯನ ಕುರಿತು ಇವುಗಳನ್ನು ಕಲಿಯುತ್ತೇವೆ:
    - ಆತನು ರೋಮನ್ ಹೆಸರನ್ನು ಹೊಂದಿದ್ದನು. ಹಾಗಾಗಿ ಬಹುತೇಕವಾಗಿ ಆತನು ಮಾಲ್ಟದ ನಿವಾಸಿಯಾಗಿರದೆ, ಇಟಲಿಯಿಂದ ಬಂದ ನಿವಾಸಿಯಾಗಿರಬೇಕು.
    - ಆತನು 'ದ್ವೀಪದ ಮುಖ್ಯ ಅಧಿಕಾರಿಯಾಗಿದ್ದನು'. ಹಾಗಾಗಿ ಬಹುತೇಕವಾಗಿ ಆತನು ರೋಮನ್ ಆಡಳಿತದಿಂದ ನೇಮಿಸಲ್ಪಟ್ಟು ಅಧಿಕಾರವುಳ್ಳವನಾಗಿ ಮಾಲ್ಟದಲ್ಲಿ ಜೀವಿಸುತ್ತಿದ್ದಿರಬೇಕು.
    - ಆತನು ಒಂದು ದೊಡ್ಡ ಗುಂಪಿನ ಜನರನ್ನು ಮೂರು ದಿನಗಳವರೆಗೆ ಸತ್ಕಾರ ಮಾಡಲು ಶಕ್ತನಾಗಿದ್ದನು. ಹಾಗಾಗಿ ಆತನು ಒಬ್ಬ ಶ್ರೀಮಂತ ವ್ಯಕ್ತಿಯಾಗಿರಲೇಬೇಕು. ಅದಲ್ಲದೆ ಆತನು ಒಬ್ಬ ಉದಾರ ಮನಸ್ಸುಳ್ಳ ಹಾಗೂ ಅತಿಥಿ ಸತ್ಕಾರ ಮಾಡುವ ಮನುಷ್ಯನಾಗಿದ್ದನು.
    - ಆತನ ತಂದೆಯು 'ಮಾಲ್ಟ ಜ್ವರದಿಂದ' ಬಳಲುತ್ತಾ ಬಹಳ ಗಂಭೀರ ಸ್ಥಿತಿಯಲ್ಲಿದ್ದನು. ಆದರೆ ದೇವರ ಬಲದಿಂದ ಪೌಲನು ಆತನನ್ನು ಗುಣಪಡಿಸಿದನು.

3. ಪೌಲನು ದ್ವೀಪದಲ್ಲಿದ್ದ ಎಲ್ಲಾ ರೋಗಿಗಳನ್ನು ಗುಣಪಡಿಸಿದ ಮೇಲೆ ದ್ವೀಪದ ಜನರು ಹಡಗುನಾಶವಾಗಿ ಬಂದ ಪ್ರಯಾಣಿಕರನ್ನು ಬಹಳ ಚೆನ್ನಾಗಿ ಸತ್ಕರಿಸಿದರು. ಅವರು ಅನೇಕ ವಿಧವಾಗಿ ಗೌರವಿಸಲ್ಪಟ್ಟರೆಂದು ಲೂಕನು ಬರೆಯುತ್ತಾನೆ. ಅದಲ್ಲದೆ ಅವರು ಮೂರು ತಿಂಗಳುಗಳ ನಂತರ ತಮ್ಮ ಪ್ರಯಾಣವನ್ನು ಮುಂದುವರೆಸಲು ಸಿದ್ಧರಾದಾಗ ದ್ವೀಪದ ಜನರು ಅವರಿಗೆ ಅವಶ್ಯವಿದ್ದದ್ದೆಲ್ಲವನ್ನೂ (ಬಹುಶಃ ಆಹಾರ ಮತ್ತು ಬಟ್ಟೆಗಳನ್ನು) ಒದಗಿಸಿದರು.

# ಉ 72. ರೋಮನ್ನು ತಲುಪಿದ್ದು, 28:11–10

## ಇ) ಪಠ್ಯ ಪ್ರಶ್ನೆಗಳು

2. ಸಿರಾಕ್ಯೂಸ್ ಸಿಸಿಲಿ ದ್ವೀಪದಲ್ಲಿ ನೆಲೆಗೊಂಡಿತ್ತು. ರೇಗಿಯ, ಪುತೋಲಿ, ಅಪ್ಪಿಯ ಪೇಟೆ, ತ್ರಿಚತ್ರ ಮತ್ತು ರೋಮ್ ಇಟಲಿಯ ಪರ್ಯಾಯದ್ವೀಪದಲ್ಲಿ ನೆಲೆಸಿದ್ದವು.

3. ಪೌಲನು ಪುತೋಲಿಗೆ ಬಂದಾಗ ಅಲ್ಲಿ ವಿಶ್ವಾಸಿಗಳೊಂದಿಗೆ ಒಂದು ವಾರ ಉಳಿದುಕೊಳ್ಳುವ ಅವಕಾಶ ಮಾಡಿಕೊಡಲಾಯಿತು. ಕನಿಷ್ಟ ಪಕ್ಷ ಒಂದು ಭಾನುವಾರದ ಆರಾಧನೆಯಲ್ಲಿಯಾದರೂ ಪಾಲ್ಗೊಳ್ಳಲು ಸಾಧ್ಯವಾದ್ದರಿಂದ ಇದು ಪೌಲ, ಲೂಕ ಮತ್ತು ಅರಿಸ್ತಾರ್ಕರಿಗೆ ಅತ್ಯಂತ ಉತ್ತೇಜನಕರವಾಗಿದ್ದಿರಬಹುದು. ಅದಲ್ಲದೆ ಸ್ಥಳೀಯ ವಿಶ್ವಾಸಿಗಳು ಪೌಲನಿಂದ ದೇವರ ವಾಕ್ಯವನ್ನು ಕೇಳಲು ಉತ್ಸುಕರಾಗಿದ್ದಿರಬಹುದು.

4. ಪೌಲನು ಮಾಲ್ಟದಿಂದ ರೋಮ್‌ಗೆ ಪ್ರಯಾಣಿಸಿದ ಒಟ್ಟು ಅಂತರವು 570 ಕಿ. ಮೀ. ಆಗಿತ್ತು.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಪೌಲ ಮತ್ತು ಆತನ ಸಂಗಡಿಗರು ಮಾಲ್ಟದಲ್ಲಿ ಮೂರು ತಿಂಗಳು ಕಳೆಯಬೇಕಾಯಿತು, ಯಾಕೆಂದರೆ ಚಳಿಗಾಲದಲ್ಲಿ ಸಮುದ್ರ ಪ್ರಯಾಣ ಮಾಡುವುದು ಅಸಾಧ್ಯವಾಗಿತ್ತು. ಮಾಲ್ಟವು ಒಂದು ದ್ವೀಪವಾಗಿತ್ತು, ಹಾಗಾಗಿ ಆ ದಿನಗಳಲ್ಲಿ ಮಾಲ್ಟಕ್ಕೆ ಹೋಗಲು ಅಥವಾ ಅಲ್ಲಿಂದ ಹಿಂದಿರುಗಲು ಹಡಗಿನಲ್ಲಿ ಮಾತ್ರ ಪ್ರಯಾಣಿಸಬೇಕಾಗಿತ್ತು. ಹಾಗಾಗಿ ಜೂಲ್ಯನು ಮತ್ತು ಆತನ ಜೊತೆ ಸೈನಿಕರೆಲ್ಲರು ತಮ್ಮ ಪ್ರಯಾಣವನ್ನು ರೋಮ್‌ಗೆ ಮುಂದುವರಿಸಬೇಕಾಗಿದ್ದರೆ ಅವರು ಫೆಬ್ರವರಿಯ ಮಧ್ಯದವರೆಗೂ ಕಾಯಲೇಬೇಕಾಗಿತ್ತು.

2. ಪೌಲನು ತನ್ನ ಪ್ರಯಾಣದ ಕೊನೆಯಲ್ಲಿದ್ದು ರೋಮ್‌ನ್ನು ತಲುಪುತ್ತಿದ್ದಾನೆಂಬ ಸುದ್ದಿಯನ್ನು ರೋಮ್‌ನ ಕ್ರೈಸ್ತರು ಹೇಗೆ ತಿಳಿದುಕೊಂಡರೆಂಬುದನ್ನು ಲೂಕನು ತಿಳಿಸುತ್ತಿಲ್ಲ. ಕೆಲವು ಸಾಧ್ಯತೆಗಳು ಹೀಗುಂಟು:
   - ಪೌಲನು ಪುತೋಲಿಯಿಂದ ಜೂಲ್ಯನ ಸಂದೇಶಕಾರನೊಂದಿಗೆ ಒಂದು ಪತ್ರವನ್ನು ಕೊಟ್ಟು ಕಳುಹಿಸಿರಬಹುದು (ವ. 13 ರ ಟಿಪ್ಪಣಿಯನ್ನು ನೋಡಿರಿ).
   - ಜೂಲ್ಯನ ಸಂದೇಶಕಾರನು ರೋಮ್‌ನಲ್ಲಿರುವ ಕೆಲವು ಕ್ರೈಸ್ತ ಸ್ನೇಹಿತರನ್ನು (ಅಥವಾ ಸಭೆಯೊಂದಿಗೆ ಸಂಪರ್ಕದಲ್ಲಿದ್ದ ಕೆಲವರನ್ನು) ಭೇಟಿಯಾಗಿ ಪೌಲನು ಪುತೋಲಿಗೆ ತಲುಪಿದ ಮತ್ತು ಅತೀ ಬೇಗನೆ ಅಲ್ಲಿಂದ ರೋಮ್‌ಗೆ ಬರಲಿದ್ದಾನೆಂಬ ಸುದ್ದಿಯನ್ನು ತಿಳಿಸಿರಬಹುದು.

- ಪೌಲನು ಪುತೋಲಿಯಿಂದ ತನ್ನ ಸ್ವಂತ ಸಂದೇಶಕಾರನನ್ನು ಕಳುಹಿಸಿರಬಹುದು.
- ಪ್ರಯಾಣದಲ್ಲಿದ್ದ ಯಾವುದಾದರೂ ವಿಶ್ವಾಸಿಯು ಪೌಲನನ್ನು ಪುತೋಲಿಯಲ್ಲಿ ಕಂಡು ರೋಮ್‌ನಲ್ಲಿರುವ ತನ್ನ ಸ್ನೇಹಿತರಿಗೆ ಪೌಲನು ಅಲ್ಲಿಗೆ ಪ್ರಯಾಣಿಸುತ್ತಿದ್ದಾನೆಂದು ಅವರಿಗೆ ತಿಳಿಸಿರಬಹುದು.

ಅದು ಏನೇ ಇದ್ದರೂ, ಪೌಲನು ರೋಮ್‌ಗೆ ಬರಲಿದ್ದಾನೆ ಎಂಬ ಸುದ್ಧಿಯನ್ನು ಕೇಳಿದ ರೋಮ್‌ನ ಕ್ರೈಸ್ತ ನಾಯಕರುಗಳು ಅತೀ ಉತ್ಸುಕರಾಗಿದ್ದಿರಬಹುದು. ಹಾಗಾಗಿ ಅವರು ಕೆಲವು ವಿಶ್ವಾಸಿಗಳ ಗುಂಪುಗಳನ್ನು ಅಪ್ಪಿಯ ಪೇಟೆಗೂ ಮತ್ತು ತ್ರಿಚತ್ರದ ಕಡೆಗೂ ಆತನನ್ನು ಸಂಧಿಸಲು ಕಳುಹಿಸಿದರು. ಪೌಲನು ರೋಮನ್ ಕ್ರೈಸ್ತರನ್ನು ನೋಡಿದಾಗ ದೇವರನ್ನು ಸ್ತುತಿಸಿದನು ಮತ್ತು ಉತ್ತೇಜನಗೊಂಡನು.

# ಉ 73. ರೋಮ್ ಪಟ್ಟಣದಲ್ಲಿ ಪೌಲನ ಬೋಧನೆ, 28:17–31

## ಇ) ಪಠ್ಯ ಪ್ರಶ್ನೆಗಳು

1. ಪೌಲನು ಚಕ್ರವರ್ತಿಗೆ ಮನವಿ ಮಾಡಿಕೊಳ್ಳಲೇಬೇಕಾಗಿ ಬಂತೆಂದು ರೋಮ್‌ನಲ್ಲಿದ್ದ ಯೆಹೂದ್ಯ ನಾಯಕರುಗಳಿಗೆ ಹೇಳಿದನು, ಯಾಕೆಂದರೆ ರೋಮನ್ ರಾಜ್ಯಪಾಲರುಗಳು ಆತನು ನಿರಪರಾಧಿ ಎಂದು ಅರಿತು ಆತನನ್ನು ಬಿಡುಗಡೆ ಮಾಡಬೇಕೆಂದುಕೊಂಡಾಗ ಯೂದಾಯದಲ್ಲಿದ್ದ ಯೆಹೂದ್ಯರು ಅದನ್ನು ವಿರೋಧಿಸಿದರು (ವ. 18–19).

2. ಪೌಲನು ರೋಮ್‌ನಲ್ಲಿದ್ದ ಯೆಹೂದ್ಯ ನಾಯಕರನ್ನು ಆಹ್ವಾನಿಸಿದಾಗ ತಾನು ಬಾಡಿಗೆಗೆ ತೆಗೆದುಕೊಂಡ ಸ್ವಂತ ಮನೆಯಲ್ಲಿದ್ದನು (ವ. 16, 30), ಆದರೆ ಆತನು ಸೈನಿಕನ ಕಾವಲಿನಲ್ಲಿದ್ದನು (ವ. 16). ಆತನ ಬಲಗೈಯು ಸೈನಿಕನೊಂದಿಗೆ ಬೇಡಿಯಿಂದ ಬಂಧಿಸಲ್ಪಟ್ಟಿತ್ತು (ವ. 20, ಮತ್ತು ರೋಮ್‌ನಲ್ಲಿನ ಖೈದಿಗಳ ಕುರಿತಾದ ಐತಿಹಾಸಿಕ ಮಾಹಿತಿ).

3. ಎಂದಿನಂತೆ, ಪೌಲನು ಸಾರಿದ ಸುವಾರ್ತೆಗೆ ಯೆಹೂದ್ಯರು ಎರಡು ವ್ಯತ್ಯಾಸವಾದ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಕೆಲವರಿಗೆ ಆತನು ಹೇಳಿದ್ದರ ಬಗ್ಗೆ ಮನದಟ್ಟಾಯಿತು, ಆದರೆ ಇತರರು ನಂಬದೆ ಹೋದರು (ವ. 24).

4. ದೇವರ ರಕ್ಷಣೆಯ ಕುರಿತಾದ ಸಂದೇಶವನ್ನು ಅನ್ಯಜನಾಂಗದವರು ಕೇಳಿಸಿಕೊಳ್ಳುವರು ಎಂದು ಪೌಲನು ಯೆಹೂದ್ಯರಿಗೆ ಹೇಳಿದನು.

5. ವ. 30 ರಲ್ಲಿ ತಿಳಿಸಿರುವಂತೆ ಪೌಲನು ರೋಮ್‌ನಲ್ಲಿ ತಾನು ಬಾಡಿಗೆಗೆ ತೆಗೆದುಕೊಂಡ ಮನೆಯಲ್ಲಿ ಎರಡು ವರ್ಷಗಳ ಕಾಲವಿದ್ದು 'ತನ್ನ ಬಳಿಗೆ ಬಂದವರನ್ನೆಲ್ಲಾ' ಸ್ವಾಗತಿಸುತ್ತಾ ಸುವಾರ್ತೆಯನ್ನು ಸಾರುತ್ತಿದ್ದನು. 'ಬಂದವರನ್ನೆಲ್ಲಾ' ಎಂಬುದು ಯೆಹೂದ್ಯರನ್ನೂ ಮತ್ತು ಅನ್ಯರನ್ನೂ ಸೂಚಿಸುತ್ತದೆ.

## ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ!

1. ಈ ವಾಕ್ಯಭಾಗವು ವಿವಿಧ ರೀತಿಯಿಂದ ರಚಿಸಲ್ಪಡಬಹುದು. ಈ ಕೆಳಗೆ ಅದರ ಒಂದು ವಿಧಾನವನ್ನು ನೋಡಬಹುದು.

- ಪೌಲನು ರೋಮ್‌ನಲ್ಲಿದ್ದ ಯೆಹೂದ್ಯ ನಾಯಕರುಗಳಿಗೆ ತನ್ನ ಪ್ರಕರಣದ ಕುರಿತು ವಿವರಿಸಿದನು, ವ. 17–22

- ಪೌಲನು ರೋಮ್‌ನಲ್ಲಿದ್ದ ಬಹುಮಂದಿ ಯೆಹೂದ್ಯರ ಗುಂಪಿಗೆ ಸುವಾರ್ತೆಯನ್ನು ಸಾರಿದನು, ವ. 23–24

- ಪೌಲನು ಅನ್ಯಜನರ ಕಡೆಗೆ ತಿರುಗಿದನು, ವ. 25–29

- ಪೌಲನು ಎರಡು ವರ್ಷಗಳ ಕಾಲ ರೋಮ್‌ನಲ್ಲಿ ಸೆರೆಮನೆವಾಸಿಯಾಗಿದ್ದಾಗ ಧೈರ್ಯದಿಂದ ಮತ್ತು ಯಾವುದೇ ಅಡಚಣೆಯಿಲ್ಲದೆ ಸುವಾರ್ತೆಯನ್ನು ಸಾರಿದನು, ವ. 30–31

2. ಪೌಲನು ತಾನು ಯಾಕೆ ಒಬ್ಬ ಖೈದಿಯಾಗಿ ರೋಮ್‌ಗೆ ಕಳುಹಿಸಲ್ಪಟ್ಟನೆಂಬುದನ್ನು ವಿವರಿಸುವುದಕ್ಕಾಗಿ ಯೆಹೂದ್ಯ ನಾಯಕರುಗಳನ್ನು ಕರೆದನು. ಆತನು ಆದಷ್ಟು ಬೇಗ ಅವರಿಗೆ ತನ್ನ ನೈಜ ಸ್ಥಿತಿಯನ್ನು ಅವರಿಗೆ ವಿವರಿಸುವ ಕಾತುರದಲ್ಲಿದ್ದನು, ಅದಲ್ಲದೆ ಅವರು ಯೂದಾಯದಲ್ಲಿನ ಯೆಹೂದ್ಯರಿಂದ ತನ್ನ ಕುರಿತು ಯಾವುದೇ ಸುಳ್ಳು ಮಾಹಿತಿಗಳನ್ನು ಪಡೆಯುವ ಮುನ್ನವೇ ಅದನ್ನು ಮಾಡಬೇಕೆಂದಿದ್ದನು.

   ಪೌಲನು ಮೂರು ಅಂಶಗಳನ್ನು ಹೊಂದಿದ್ದನು:

   - ಆತನು ತನ್ನ ಸ್ವಂತ ಜನರ (ಯೆಹೂದ್ಯರ) ವಿರುದ್ಧವಾಗಲಿ ಮತ್ತು ಅವರ ಆಚಾರದ ವಿರುದ್ಧವಾಗಲಿ ಏನನ್ನೂ ಮಾಡಿರಲಿಲ್ಲ (ವ. 17).

   - ಆತನು ಬಂಧಿಸಲ್ಪಟ್ಟು ರೋಮನ್ನರ ಕೈಗೆ ಒಪ್ಪಿಸಲ್ಪಟ್ಟನು, ಅವರು ಆತನು ನಿರಪರಾಧಿ ಎಂಬುದನ್ನು ಕಂಡುಕೊಂಡರು (ವ. 17–18).

   - ಯೆಹೂದ್ಯರು ಆತನ ಬಿಡುಗಡೆಯನ್ನು ವಿರೋಧಿಸಿದಾಗ, ಆತನು ಚಕ್ರವರ್ತಿಗೆ ಮನವಿಮಾಡಿಕೊಳ್ಳುವ ಒತ್ತಾಯಕ್ಕೆ ಒಳಗಾದನು (ವ. 19).

   ಹಾಗಾದರೆ ಪೌಲನು ಯೆಹೂದ್ಯರ ವಿರುದ್ಧವಾಗಿ ಏನನ್ನೂ ಮಾಡಿರಲಿಲ್ಲ, ರೋಮನ್ನರು ಆತನ ವಿರುದ್ಧ ಯಾವ ಆಪಾದನೆಯನ್ನೂ ಮಾಡಲಿಲ್ಲ ಮತ್ತು ಆತನು ಸರಪಣಿಗಳಿಂದ ಬಂಧಿತನಾಗಿದ್ದಕ್ಕೆ ಇಸ್ರಾಯೇಲಿನ ನಿರೀಕ್ಷೆಯಾದ ಮೆಸ್ಸೀಯನೇ ಕಾರಣವಾಗಿದ್ದನು (ವ. 20).

3. ಪೌಲನು ರೋಮ್‌ನಲ್ಲಿ ಎರಡು ವರ್ಷಗಳ ಕಾಲ ಸೆರೆಮನೆವಾಸದಲ್ಲಿದ್ದಾಗ ಕನಿಷ್ಠ ಪಕ್ಷ ಈ ಕೆಳಗಿನ 6 ಅಂಶಗಳನ್ನು ಮಾಡಿರಬಹುದೆಂದು ನಾನು ಆಲೋಚಿಸುತ್ತೇನೆ:

   - ಆತನು ತನ್ನ ಬಳಿಗೆ ಬಂದವರಿಗೆಲ್ಲಾ, ಯೆಹೂದ್ಯರಿಗೂ ಮತ್ತು ಅನ್ಯರಿಗೂ ಸುವಾರ್ತೆಯನ್ನು ಸಾರಿದನು (ವ. 30).

- ಆತನು ತನ್ನ ಸ್ವಂತ ಖರ್ಚಿಗಾಗಿ ಗೂಡಾರದ ಕೆಲಸವನ್ನು ಮಾಡಿದನು (1 ಕೊರಿ. 4:12; ಎಫೆಸ. 4:28; ಅ. ಕೃ. 18:3; 20:34 ಗಳನ್ನು ಹೋಲಿಸಿರಿ).

- ಆತನು ಸಭೆಗಾಗಿ ಮತ್ತು ಅದರ ಸೇವೆಗಾಗಿ ಪ್ರಾರ್ಥಿಸಿದನು (ನೋಡಿರಿ. ಎಫೆಸ. 1:16–18; ಫಿಲಿಪ್ಪಿ. 1:3–11; ಕೊಲೊಸ್ಸೆ. 1:3, 9–14).

- ಆತನು ದೇವರಿಗೆ ಪ್ರಾರ್ಥಿಸುತ್ತಾ ದೈವಶಾಸ್ತ್ರದ ಮತ್ತು ನೈತಿಕ ಸಮಸ್ಯೆಗಳ ಕುರಿತು ಆಲೋಚಿಸುವುದರಲ್ಲಿ ಹೆಚ್ಚಿನ ಸಮಯವನ್ನು ಕಳೆದನು.

- ಆತನು ಸಭೆಯ ವಿಶ್ವಾಸಿಗಳ ಕುರಿತು ತನಗಿದ್ದ ಕಾಳಜಿಯನ್ನು ಪ್ರತಿಬಿಂಬಿಸುತ್ತಾ ಮತ್ತು ಯೇಸುವಿನ, ಆತನ ರಕ್ಷಣೆಯ ಸಾರ್ವಭೌಮತೆಯ ಮತ್ತು ಒಡೆಯತ್ವದ ಹಾಗೂ ಕ್ರಿಸ್ತೀಯ ಜೀವಿತದ ಕುರಿತು ತನಗಿದ್ದ ದೈವಶಾಸ್ತ್ರದ ತಿಳುವಳಿಕೆಯನ್ನು ಅವರೊಂದಿಗೆ ಹಂಚಿಕೊಳ್ಳುತ್ತಾ ಸಭೆಗಳಿಗೆ ಪತ್ರಗಳನ್ನು ಬರೆದನು: ಎಫೆಸದವರಿಗೆ, ಫಿಲಿಪ್ಪಿಯವರಿಗೆ, ಕೊಲೊಸ್ಸೆಯವರಿಗೆ. ಅದಲ್ಲದೆ ಆತನು ಒಬ್ಬ ವ್ಯಕ್ತಿಗೂ ಸಹ ಪತ್ರವನ್ನು ಬರೆದನು: ಫಿಲೆಮೋನನಿಗೆ.

- ಆತನು ಸಭೆಗಳಿಂದ ಬಂದ ಸಂದರ್ಶಕರನ್ನು ಭೇಟಿಯಾದನು ಮತ್ತು ಅವರೊಂದಿಗೆ ಸಭೆಗಳ ಕುರಿತು ತನಗಿರುವ ಕಾಳಜಿಯನ್ನು ಹಂಚಿಕೊಂಡನು: ತುಖಿಕನು (ಎಫೆಸ. 6:21, ಕೊಲೊಸ್ಸೆ. 4:7–8), ಎಪಫ್ರೋದಿತನು (ಫಿಲಿಪ್ಪಿ. 4:18), ಎಪಫ್ರನು (ಕೊಲೊಸ್ಸೆ. 4:12).

# ಹೆಚ್ಚಿನ ವಾಸ್ತವಾಂಶಗಳು

# ಅಪೊಸ್ತಲರ ಕೃತ್ಯಗಳ ಲೇಖಕನಾದ ಲೂಕನು

ಅಪೊಸ್ತಲರ ಕೃತ್ಯಗಳ ಪುಸ್ತಕದ ಲೇಖಕನು ತನ್ನ ಸ್ವಂತ ಹೆಸರನ್ನು ಪುಸ್ತಕದಲ್ಲಿ ಎಲ್ಲಿಯೂ ತಿಳಿಸಿಲ್ಲ. ಆದರೆ ಪುಸ್ತಕವನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ 'ನಾನು' ಎಂಬುದಾಗಿ ತನ್ನಷ್ಟಕ್ಕೆ ತಾನು ಸೂಚಿಸಿಕೊಂಡಿದ್ದಾನೆ.

> *ಥೆಯಾಫಿಲನೇ, ನಾನು ನಿನಗೆ ನನ್ನ ಮೊದಲನೆಯ ಗ್ರಂಥದಲ್ಲಿ ಯೇಸು ಮಾಡುವುದಕ್ಕೂ ಬೋಧಿಸುವುದಕ್ಕೂ ಪ್ರಾರಂಭಿಸಿದ್ದೆಲ್ಲವನ್ನೂ, ಎಂದರೆ, ತಾನು ಆರಿಸಿಕೊಂಡ ಅಪೊಸ್ತಲರಿಗೆ ಪವಿತ್ರಾತ್ಮನ ಮುಖಾಂತರ ಆಜ್ಞಾಪಿಸಿದ ದಿನ ಮೊದಲುಗೊಂಡು ಪರಲೋಕಕ್ಕೆ ಒಯಲ್ಪಡುವ ದಿನದವರೆಗೆ ಮಾಡಿದ್ದೆಲ್ಲವನ್ನೂ ಬರೆದಿದ್ದೇನೆ (ಅ. ಕೃ. 1:1–2).*

ಇಲ್ಲಿ ನಾವು ನೋಡುವುದೇನೆಂದರೆ ಥೆಯೋಫಿಲನೆಂಬ ಎರಡನೇಯ ವ್ಯಕ್ತಿಗೆ ಸಾಹಿತ್ಯದ ವಿಶಾಲತೆಯ ಕಾರ್ಯದ ಕುರಿತು ಸೂಚಿಸುವಂತಹ ಎರಡನೇಯ ಪುಸ್ತಕವೇ ಅಪೊಸ್ತಲನ ಕೃತ್ಯಗಳು ಆಗಿದೆ, ಮತ್ತು ಮೊದಲ ಸಂಪುಟವು ಯೇಸುವಿನ ಜೀವನ ಮತ್ತು ಸೇವೆ ಹಾಗೂ ಬೋಧನೆಯ ಕುರಿತಾದ್ದಾಗಿದೆ. ಈ ಮೊದಲ ಸಂಪುಟವು ಲೂಕನು ಬರೆದ ಸುವಾರ್ತೆಯಾಗಿದೆ, ಅದು ಈ ರೀತಿಯಾಗಿ ಪ್ರಾರಂಭಗೊಳ್ಳುತ್ತದೆ.

> *ಸನ್ಮಾನ್ಯ ಥೆಯೋಫಿಲನೇ, ನಮ್ಮ ಮಧ್ಯದಲ್ಲಿ ನಡೆದಿರುವ ಘಟನೆಗಳ ವರದಿಯನ್ನು ಬರೆದಿಡಲು ಅನೇಕರು ಪ್ರಯತ್ನಿಸಿದ್ದಾರೆ. ಮೊದಲಿನಿಂದ ಕಣ್ಣಾರೆ ಕಂಡವರೂ ದೇವರ ವಾಕ್ಯದ ಸೇವಕರೂ ನಮಗೆ ಕೊಟ್ಟಿರುವ ರೀತಿಯಲ್ಲಿಯೇ ಬರೆಯಲು ಪ್ರಯತ್ನಸಿದ್ದಾರೆ. ಆದ್ದರಿಂದ ಮೊದಲಿನಿಂದ ಎಲ್ಲವನ್ನೂ ಪೂರ್ಣವಾಗಿ ತಿಳಿದುಕೊಂಡಿರುವ ನಾನು ಸಹ ಅವುಗಳನ್ನು ಕ್ರಮವಾಗಿ ನಿನಗೆ ಬರೆಯುವುದು. ಒಳ್ಳೆಯದೆಂದು ನನಗೆ ತೋಚಿತು. ಹೀಗೆ ಬೋಧಿಸಲ್ಪಟ್ಟವುಗಳು ಸತ್ಯವಾದವುಗಳೆಂದು ಇದರಿಂದ ನಿನಗೆ ತಿಳಿದುಬರುವುದು" (ಲೂಕ. 1:1–4).*

ಆದರೆ ನಮಗಿರುವ ಸಮಸ್ಯೆ ಏನೆಂದರೆ ಲೂಕನು ಬರೆದ ಸುವಾರ್ತೆಯಲ್ಲೂ ಸಹ ಲೇಖಕನು ತನ್ನ ಹೆಸರನ್ನು ತಿಳಿಸುತ್ತಿಲ್ಲ. ಅದಲ್ಲದೆ ನಮ್ಮ ಸತ್ಯವೇದಗಳಲ್ಲಿ ಮೂರನೆಯ ಸುವಾರ್ತೆಯ ಶಿರೋನಾಮವು – ನಿಶ್ಚಯವಾಗಲೂ ಅಲ್ಲಿ 'ಲೂಕನು' ಎಂಬ ಹೆಸರನ್ನು ಕಾಣುತ್ತೇವೆ – ಮೂಲಪತ್ರದ ಭಾಗವಲ್ಲ.

ಹಾಗಾದರೆ ಈ ಎರಡು ಹೊಸ ಒಡಂಬಡಿಕೆಯ ಪುಸ್ತಕಗಳನ್ನು ಲೂಕನೇ ಬರೆದಿದ್ದಾನೆಂದು ನಮಗೆ ಹೇಗೆ ತಿಳಿದಿದೆ? ವಾಸ್ತವಿಕವಾಗಿ ನಮಗೆ ಖಚಿತವಾಗಿ ಗೊತ್ತಿಲ್ಲ. ಆದರೆ ಈ ಹೊಸ ಒಡಂಬಡಿಕೆಯ ಎರಡು ಪುಸ್ತಕಗಳನ್ನು ಲೂಕನೇ ಬರೆದಿದ್ದಾನೆಂದು ಸ್ವಲ್ಪಮಟ್ಟಿಗೆ ಖಚಿತಪಡಿಸಿಕೊಳ್ಳಲು ಮೂರು ಒಳ್ಳೆಯ ಕಾರಣಗಳಿವೆ:

1. ಆದಿಸಭೆಯ ಸಂಪ್ರದಾಯಗಳು ಈ ಎರಡು ಪುಸ್ತಕಗಳನ್ನು ಲೂಕನಿಗೆ ಸಂಬಂಧಿಸಿದವು. ಈ ಕಾರಣದಿಂದಲೇ ನಮ್ಮ ಸತ್ಯವೇದಗಳಲ್ಲಿ ಲೂಕನು ಬರೆದ ಸುವಾರ್ತೆಗೆ ಲೂಕನ ಹೆಸರು ಕೊಡಲ್ಪಟ್ಟಿದೆ. ಈ ಸಂಪ್ರದಾಯಗಳು ಅತ್ಯಂತ ಹಳೆಯದಾಗಿದ್ದು ನಂಬಲರ್ಹವಾಗಿ ತೋರುತ್ತದೆ.
2. ಅಪೊಸ್ತಲರ ಕೃತ್ಯಗಳು ಪುಸ್ತಕದ ನಾಲ್ಕು ವಾಕ್ಯಭಾಗಗಳಲ್ಲಿ (16:10–17; 20:5–15; 21:1–18 ಮತ್ತು 27:1–28:16) ಲೇಖಕನು 'ನಾವು' ಎಂಬ ಪದವನ್ನು ಬಳಸುತ್ತಾನೆ, ಅಂದರೆ ಈ

ಸಂದರ್ಭಗಳಲ್ಲಿ ಲೇಖಕನು ಪೌಲನೊಂದಿಗೆ ಪ್ರಯಾಣ ಮಾಡುತ್ತಿದ್ದುದನ್ನು ಇದು ಸೂಚಿಸುತ್ತದೆ. ಇದರ ಅರ್ಥ ಲೇಖಕನು ಪೌಲನ ಒಬ್ಬ ಸ್ನೇಹಿತನೂ, ಒಬ್ಬ ಜೊತೆ–ಪ್ರಯಾಣಿಕನೂ ಹಾಗೂ ಒಬ್ಬ ಜೊತೆ–ಕೆಲಸಗಾರನೂ ಆಗಿರಬೇಕು. ಅದಲ್ಲದೆ ಆತನು ಪೌಲನ ಎರಡನೆಯ ಸುವಾರ್ತಾ ಪ್ರಯಾಣದ ಸಂದರ್ಭದಲ್ಲಿ ತ್ರೋವಕ್ಕೆ (16:10) ಬಂದು ಪೌಲನೊಂದಿಗೆ ಸೇರಿಕೊಂಡ ವ್ಯಕ್ತಿಯೆಂದು ಸಹ ಇದರ ಅರ್ಥವಾಗಿದೆ. ಈ ಎಲ್ಲಾ ವಿವರಣೆಗಳಿಗೆ ಹೋಲುವಂತೆ ತೋರುವ ಏಕೈಕ ವ್ಯಕ್ತಿಯು ಲೂಕನಾಗಿದ್ದಾನೆ.

3. ಅ. ಕೃ. 1:19 ರಲ್ಲಿರುವ ಹೇಳಿಕೆಯು (‘ಅವರ ಭಾಷೆಯಲ್ಲಿ’) ಅಪೋಸ್ತಲರ ಕೃತ್ಯಗಳ ಲೇಖಕನು ಒಬ್ಬ ಅನ್ಯನೆಂಬುದನ್ನು ತೋರಿಸುತ್ತದೆ. ಪೌಲನು ಕೊಲೊಸ್ಸೆಯವರಿಗೆ ಬರೆದ ತನ್ನ ಪತ್ರಿಕೆಯಲ್ಲಿ (4:14) *‘ಪ್ರಿಯ ವೈದ್ಯನಾದ ಲೂಕನು’* ಎಂದು ಬರೆಯುತ್ತಿದ್ದಾನೆ, ಮತ್ತು ಆ ವಾಕ್ಯಭಾಗದ ಹಿನ್ನೆಲೆಯು ಲೂಕನು ಒಬ್ಬ ಅನ್ಯಮತಸ್ಥನಾಗಿದ್ದಾನೆಂದು (ಕೊಲೊಸ್ಸೆ. 4:11) ಸೂಚಿಸುತ್ತದೆ. ಅಂದರೆ ಪೌಲನು ರೋಮ್‌ನಲ್ಲಿ ಸೆರೆಮನೆವಾಸಿಯಾಗಿದ್ದಾಗ ಕೊಲೊಸ್ಸೆಯವರಿಗೆ ಬರೆದ ಪತ್ರಿಕೆ ಮತ್ತು ಇತರೆ ‘ಸೆರೆಮನೆ ಪತ್ರಿಕೆಗಳನ್ನು’ ಬರೆದ ಸಂದರ್ಭದಲ್ಲಿ ಲೂಕನು ಸಹ ಆತನ ಸಂಗಡ ಇದ್ದನು ಎಂಬುದು ಇದರ ಅರ್ಥವಾಗಿದೆ. ಅದಲ್ಲದೆ ಲೂಕನು ಪೌಲನೊಂದಿಗೆ ಸೆಜರೇಯದಿಂದ ರೋಮ್‌ಗೆ ಪ್ರಯಾಣಿಸಿದ್ದೂ ಸಹ ನಮಗೆ ತಿಳಿದಿದೆ (ಅ. ಕೃ. 27:1–28:16). ನಾವು ಈ ಎಲ್ಲಾ ಉಲ್ಲೇಖನಗಳನ್ನು ಒಟ್ಟುಗೂಡಿಸುವಾಗ ಅಪೋಸ್ತಲರ ಕೃತ್ಯಗಳನ್ನು ಬರೆದಿರಬಹುದಾದ ಏಕೈಕ ಅನ್ಯ ಜೊತೆ–ಕೆಲಸಗಾರನು ಲೂಕನಾಗಿದ್ದಾನೆ ಎಂಬುದನ್ನು ನಾವು ಕಾಣಬಹುದು.

ಲೂಕನು ತಾನೇ ಸ್ವತಃ ಯೇಸುವಿನ ಸೇವೆಯ ಪ್ರತ್ಯಕ್ಷ ಸಾಕ್ಷಿ ಆಗಿರಲಿಲ್ಲವೆಂಬುದು ಲೂಕನು ಸುವಾರ್ತೆಯಲ್ಲಿನ ಪ್ರಾರಂಭದ ವಚನಗಳಿಂದ ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಬದಲಾಗಿ ಆತನು ಪ್ರತ್ಯಕ್ಷ ಸಾಕ್ಷಿಗಳನ್ನು ಸಂದರ್ಶಿಸಿ ವಿವರವಾದ ಮಾಹಿತಿಯನ್ನು ಸಂಗ್ರಹಿಸಿದ್ದನು, ಆತನು ಅದನ್ನು ತನ್ನ ಸುವಾರ್ತೆಯಲ್ಲಿ ಬಳಸಿದನು.

ಹಾಗಾದರೆ ಲೂಕನು ತನ್ನ ಎರಡು ಪುಸ್ತಕಗಳಲ್ಲಿ ತಿಳಿಸಿರುವ ಮಾಹಿತಿಯನ್ನು ಸಂಗ್ರಹಿಸಲಿಕ್ಕೆ ಆತನಿಗೆ ಯಾವಾಗ ಅವಕಾಶ ಒದಗಿಬಂತು? ಇದನ್ನು ಮಾಡಲಿಕ್ಕೆ ಆತನಿಗೆ ಬಹಳಷ್ಟು ಸಮಯವಿತ್ತೆಂದು ಅಪೋಸ್ತಲರ ಕೃತ್ಯಗಳ ಪುಸ್ತಕವು ಬಹಿರಂಗಪಡಿಸುತ್ತದೆ:

- ಲೂಕನು ಮೂರನೇ ಸುವಾರ್ತಾ ಪ್ರಯಾಣದ ಅಂತ್ಯದಲ್ಲಿ ಪೌಲನೊಂದಿಗೆ ಯೆರೂಸಲೇಮಿಗೆ ಪ್ರಯಾಣಿಸಿದ್ದನು (21:17–18).
- ಯೆರೂಸಲೇಮಿನಲ್ಲಿ ಪೌಲನು ಬಂಧಿಸಲ್ಪಟ್ಟು ನಂತರ ಯೂದಾಯ ಪ್ರಾಂತ್ಯದ ರಾಜಧಾನಿಯಾದ ಸೆಜರೇಯಕ್ಕೆ ಕೊಂಡೊಯ್ಯಲ್ಪಟ್ಟನು, ಅಲ್ಲಿ ಆತನನ್ನು ಎರಡು ವರ್ಷಗಳ ಕಾಲ ಸೆರೆಮನೆಯಲ್ಲಿ ಹಾಕಿದರು. ಈ ಎರಡು ವರ್ಷಗಳ ಅವಧಿಯಲ್ಲಿ ಲೂಕನು ಮಾಹಿತಿ ಸಂಗ್ರಹಿಸಲು ಮತ್ತು ಅಪೋಸ್ತಲರನ್ನೂ, ಯೇಸುವಿನ ತಾಯಿಯಾದ ಮರಿಯಳನ್ನೂ, ಸುವಾರ್ತಿಕನಾದ ಫಿಲಿಪ್ಪನನ್ನೂ ಮತ್ತು ಇತರೆ ಪ್ರಮುಖ ವ್ಯಕ್ತಿಗಳನ್ನೂ ಸಂದರ್ಶಿಸಲು ಯೂದಾಯ ಸಮಾರ್ಯದಲ್ಲೆಲ್ಲಾ ಪ್ರಯಾಣಿಸಲು ಬಿಡುವು ಉಳ್ಳವನಾಗಿದ್ದರಬಹುದು.

- ಪೌಲನ ಪ್ರಕರಣವನ್ನು ಪ್ರಭಾವಿ ವ್ಯಕ್ತಿಗಳಿಗೆ ಮಂಡಿಸಲು ರೋಮ್‌ಗೂ ಭೇಟಿ ಕೊಟ್ಟಿರಬಹುದು – ಮತ್ತು ಅಲ್ಲಿ ಥೆಯೋಫಿಲನೊಂದಿಗೆ ಸ್ನೇಹ ಬೆಳೆಸಿದನು. ಇದು ಆತನು ತನ್ನ ಪುಸ್ತಕದಲ್ಲಿ *'ಸನ್ಮಾನ್ಯ ಥೆಯೋಫಿಲನೇ'* ಎಂದು ಸೂಚಿಸಿ ಬರೆದಿದ್ದನ್ನು ವಿವರಿಸುತ್ತದೆ.
- ಪೌಲನನ್ನು ಸೆರೆಯಾಳಾಗಿ ಸೆಜರೇಯದಿಂದ ರೋಮ್‌ಗೆ ವರ್ಗಾಯಿಸುವ ಸಂದರ್ಭದಲ್ಲಿ ಆತನೊಂದಿಗೆ ಹೋಗಲು ಲೂಕನು ಪಾಲೆಸ್ತೀನ್‌ಗೆ ಹಿಂತಿರುಗಿದ್ದು ನಮಗೆ ತಿಳಿದಿದೆ (27:1).

ಹೊಸ ಒಡಂಬಡಿಕೆಯಲ್ಲಿ ಲೂಕನು ಮಾತ್ರ ಏಕೈಕ ಅನ್ಯ ಲೇಖಕನಾಗಿದ್ದಾನೆ. ಆತನ ಹೆಸರು ಗ್ರೀಕ್ ಭಾಷೆಯದ್ದು ಮತ್ತು ಆತನು ಗ್ರೀಕ್ ಭಾಷೆಯಲ್ಲಿ ಪ್ರವೀಣನಾಗಿದ್ದನು. ಆತನು ತನ್ನ ವಿಷಯಾಂಶಗಳನ್ನು ಒಂದು ಅನ್ಯ ದೃಷ್ಟಿಕೋನದಿಂದ ಸುವಾರ್ತೆಯಲ್ಲಿಯೂ ಹಾಗೂ – ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿಯೂ – ಮುಂದಿಡುತ್ತಾನೆ. ಆತನ ಎರಡು ಪುಸ್ತಕಗಳ ಪ್ರಧಾನ ವಿಷಯವೇನೆಂದರೆ ಯೆಹೂದ್ಯ ರಾಷ್ಟ್ರದ ಗಡಿ ಮೀರಿ ಹರಡಿದ ಯೇಸು ಕ್ರಿಸ್ತನ ಕುರಿತಾದಂತಹ ಶುಭಸಂದೇಶದ ವಿಸ್ತರಣೆಯಾಗಿದೆ. 'ಯೇಸು ಕ್ರಿಸ್ತನು – ಇಡೀ ಲೋಕದ ರಕ್ಷಕನು' ಎಂಬುದು ಲೂಕನ ಸುವಾರ್ತೆಗೆ ಒಂದು ಸೂಕ್ತವಾದ ಉಪಶೀರ್ಷಿಕೆಯಾಗಿದೆ ಮತ್ತು 'ಲೋಕದ ಕಟ್ಟಕಡೆಯವರೆಗೂ ಯೇಸು ಕ್ರಿಸ್ತನ ಕುರಿತಾದ ಸುವಾರ್ತೆ' ಅಪೋಸ್ತಲರ ಕೃತ್ಯಗಳ ಪುಸ್ತಕಕ್ಕೆ ಒಂದು ಸೂಕ್ತವಾದ ಉಪಶೀರ್ಷಿಕೆಯಾಗಿದೆ.

ಲೂಕನು ಬರೆದ ಸುವಾರ್ತೆ ಮತ್ತು ಅಪೋಸ್ತಲರ ಕೃತ್ಯಗಳು ಹೊಸ ಒಡಂಬಡಿಕೆಯಲ್ಲಿಯೇ ಅತೀ ದೊಡ್ಡ ಪಠ್ಯವಾಗಿದೆ ಎಂಬುದನ್ನು ಗುರುತಿಸುವುದು ಕುತೂಹಲಕರವಾದ ಸಂಗತಿಯಾಗಿದೆ. ಪೌಲನ 13 ಪತ್ರಿಕೆಗಳನ್ನು ಒಟ್ಟಿಗೆ ಸೇರಿಸಿದಾಗ್ಯೂ ಅದನ್ನು ಮೀರಿಸಲಾಗದು. ಹಾಗಾಗಿ ಈ ದೃಷ್ಟಿಕೋನದಿಂದ ಒಬ್ಬ ಅನ್ಯನು ಮತ್ತು ಪೌಲನ ಪ್ರಿಯ ಸ್ನೇಹಿತನಾದ ವೈದ್ಯ ಲೂಕನು ಹೊಸ ಒಡಂಬಡಿಕೆಯಲ್ಲಿಯೇ 'ಅತೀ ದೊಡ್ಡ' ಬರಹಗಾರನಾಗಿದ್ದಾನೆ ಎಂದು ಹೇಳಬಹುದು! ಮತ್ತು ಅನ್ಯನಾದ ಲೂಕನು – ನನ್ನಂತಹ ಮತ್ತು ನಿಮ್ಮಂತಹ ಜನರನ್ನು ಉದ್ದೇಶಿಸಿ – ಅನ್ಯರಿಗಾಗಿ ಬರೆದಿದ್ದಾನೆ!

# ಅಪೊಸ್ತಲರ ಕೃತ್ಯಗಳ ಸಂದೇಶ

ಲೂಕನು ಬರೆದ ಸುವಾರ್ತೆಯು ಹಾಗೂ ಅಪೊಸ್ತಲರ ಕೃತ್ಯಗಳ ಪುಸ್ತಕವು ಒಟ್ಟಿಗೆ ಇರುವಂತದ್ದಾಗಿದೆ. ಅವುಗಳು ಒಂದೇ ಮುಖ್ಯ ಕಥೆಯ ಭಾಗಗಳಾಗಿವೆ. ಲೂಕನ ಸುವಾರ್ತೆಯು 'ಲೋಕರಕ್ಷಕನಾದ ಯೇಸುವಿನ' ಕುರಿತಾಗಿದೆ (ಲೂಕ. 2:30–32; 3:6). ಅಪೊಸ್ತಲರ ಕೃತ್ಯಗಳ ಪುಸ್ತಕವು ಯೇಸುವಿನ ಮೂಲಕ ರಕ್ಷಣೆಯ ಕುರಿತಾದ ಈ ಸುವಾರ್ತೆಯು ಹೇಗೆ 'ಭೂಲೋಕದ ಕೊನೆಯ ಮೇರೆಗಳವರೆಗೂ' ತೆಗೆದುಕೊಂಡು ಹೋಗಲ್ಪಟ್ಟಿತು ಎಂಬುದರ ಕುರಿತಾಗಿದೆ (ಅ. ಕೃ. 1:8), ಆ ಕೊನೆಯ ಮೇರೆಯು ರೋಮನ್ ಸಾಮ್ರಾಜ್ಯದ ಅನ್ಯಮತಸ್ಥ ರಾಜಧಾನಿಯಾದ ರೋಮ್‌ನಿಂದ ಪ್ರತಿನಿಧಿಸಲ್ಪಟ್ಟಿತು.

ಲೂಕನು ಬರೆದ ಸುವಾರ್ತೆ ಹಾಗೂ ಅಪೊಸ್ತಲರ ಕೃತ್ಯಗಳ ಪುಸ್ತಕಗಳೆರಡೂ ಥೆಯೋಫಿಲನೆಂಬ ಒಬ್ಬ ವ್ಯಕ್ತಿಗೆ ಸಂಭೋದಿಸಿ ಬರೆಯಲಾಗಿದೆ. ಆತನ ಕುರಿತು ನಮಗೆ ಹೆಚ್ಚು ತಿಳಿದಿಲ್ಲ, ಯಾಕೆಂದರೆ ಕೇವಲ ಲೂಕನು ಬರೆದ ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳ ಪೀಠಿಕೆಯ ವಚನಗಳಲ್ಲಿ ಮಾತ್ರ ಆತನ ಕುರಿತು ತಿಳಿಸಲ್ಪಟ್ಟಿದೆ. ಆತನ ಹೆಸರು ಗ್ರೀಕ್ ಹೆಸರಾಗಿದೆ. 'ಹೀಗೆ ನಿನಗೆ ಬೋಧಿಸಲ್ಪಟ್ಟವುಗಳು ಸತ್ಯವಾದವುಗಳೆಂದು ಇದರಿಂದ ನಿನಗೆ ತಿಳಿದುಬರುವುದು' (ಲೂಕ. 1:4) ಎಂಬ ಲೂಕನ ಹೇಳಿಕೆಯು ಆತನು ಮೊದಲು ಒಬ್ಬ ಅನ್ಯನಾಗಿದ್ದು ನಂತರ ಕ್ರೈಸ್ತ ನಂಬಿಕೆಗೆ ಮತಾಂತರಗೊಂಡನೆಂದು ಸೂಚಿಸುತ್ತದೆ. ಅದಲ್ಲದೆ, ಲೂಕನು ಆತನನ್ನು 'ಸನ್ಮಾನ್ಯ' ಎಂದು ಕರೆಯುತ್ತಾನೆ, ಇದು ಆತನು ಒಂದು ಉನ್ನತವಾದ ಸ್ಥಾನ ಮತ್ತು ಅಧಿಕಾರವುಳ್ಳ ವ್ಯಕ್ತಿಯಾಗಿದ್ದಿರಬಹುದು ಎಂಬುದನ್ನು ತೋರಿಸುತ್ತದೆ.

ಯೇಸುವಿನ ಜೀವನ ಮತ್ತು ಸೇವೆಯ ಮೂಲಕ ನೆರವೇರಿದ ಸಂಗತಿಗಳನ್ನು ಕ್ರಮಬದ್ಧವಾದ ಮತ್ತು ಮನದಟ್ಟುಮಾಡುವ ರೀತಿಯಲ್ಲಿ ಮುಂದಿಡುವುದೇ ತನ್ನ ಸುವಾರ್ತೆಯ ಉದ್ದೇಶವಾಗಿದೆ ಎಂದು ಲೂಕನು ತಿಳಿಸುತ್ತಾನೆ. ಲೂಕನು ತನ್ನ ಸುವಾರ್ತೆಯ ಕುರಿತು ಹೊಂದಿದ ಉದ್ದೇಶವು ಅಪೊಸ್ತಲರ ಕೃತ್ಯಗಳಲ್ಲಿಯೂ ಮುಂದುವರೆದಿದೆ ಎಂದು ನಾವು ಊಹಿಸಬಹುದು: ಈ ಪುಸ್ತಕವು ಆದಿಸಭೆಯ ಜೀವಿತ ಮತ್ತು ವಿಸ್ತರಣೆಯನ್ನು ಕ್ರಮಬದ್ಧವಾದ ಮತ್ತು ಮನದಟ್ಟುಮಾಡುವ ರೀತಿಯಲ್ಲಿ ಮುಂದಿಡುತ್ತದೆ. ಆದರೆ ನಾವು ಲೂಕನು ತನ್ನ ಸುವಾರ್ತೆಯ ಕುರಿತು ಅ. ಕೃ. 1:1 ರಲ್ಲಿ ತಿಳಿಸುವ ಹೇಳಿಕೆಯನ್ನೂ ಗಮನಿಸತಕ್ಕದ್ದು: 'ಯೇಸು ಮಾಡುವುದಕ್ಕೂ ಬೋಧಿಸುವುದಕ್ಕೂ ಪ್ರಾರಂಭಿಸಿದೆಲ್ಲವನ್ನು'. ಲೂಕನ ಸುವಾರ್ತೆಯಲ್ಲಿ ಯೇಸು ತನ್ನ ಸೇವೆಯನ್ನು ಪ್ರಾರಂಭಿಸಿದನು. ಹಾಗೆಯೇ ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಆತನು ದೇವರ ರಾಜ್ಯದ ಸೂಚಕ ಕಾರ್ಯಗಳನ್ನು ನಡೆಸುತ್ತಾ ಮತ್ತು ದೇವರ ರಾಜ್ಯದ ಕುರಿತಾದ ಶುಭಸಂದೇಶವನ್ನು ಸಾರುತ್ತಾ ತನ್ನ ಸೇವೆಯನ್ನು ಮುಂದುವರೆಸಿದನು. ಆದರೆ ಆತನು ಅದನ್ನು ನೇರವಾಗಿ ಮಾಡಲಿಲ್ಲ. ಬದಲಾಗಿ ಆತನು ಈಗ ಆರಿಸಿಕೊಂಡ ಮತ್ತು ಅ. ಕೃ. 1:2 ರಲ್ಲಿ ಉಪದೇಶ ಮಾಡಿದ ಅಪೊಸ್ತಲರ ಮೂಲಕವಾಗಿಯೂ ಮತ್ತು ತನ್ನ ಸಭೆಯ ಮೂಲಕವಾಗಿಯೂ ಕಾರ್ಯಮಾಡುತ್ತಿದ್ದಾನೆ – ಕಾರ್ಯಮಾಡುತ್ತಿದ್ದಾನೆ ಹಾಗೂ ಬೋಧಿಸುತ್ತಿದ್ದಾನೆ.

ಆದರೆ ಯೇಸು ಭೂಲೋಕದಲ್ಲಿ ತನ್ನ ಸಭೆಯ ಮತ್ತು ಅಪೊಸ್ತಲರ ಮೂಲಕ ಹೇಗೆ ಕಾರ್ಯಗಳನ್ನು ಮುಂದುವರೆಸಿದನು? ಅದನ್ನು ಪವಿತ್ರಾತ್ಮನ ಶಕ್ತಿಯ ಮೂಲಕವಾಗಿ ಮಾಡಿದನು. ಸತ್ಯವೇದದಲ್ಲಿನ ಇತರೆ ಯಾವುದೇ ಪುಸ್ತಕಗಳಿಗಿಂತಲೂ ಹೆಚ್ಚಾಗಿ ಅಪೊಸ್ತಲರ ಕೃತ್ಯಗಳಲ್ಲಿ

ಪವಿತ್ರಾತ್ಮನು ಒಂದು ಪ್ರಮುಖ ಪಾತ್ರವನ್ನು ವಹಿಸುತ್ತಾನೆ. ಕೆಲವು ಸತ್ಯವೇದ ಶಾಸ್ತ್ರಜ್ಞರು ಈ ಪುಸ್ತಕವನ್ನು 'ಅಪೋಸ್ತಲರ ಕೃತ್ಯಗಳು' ಎಂಬುದರ ಬದಲಾಗಿ 'ಪವಿತ್ರಾತ್ಮನ ಕೃತ್ಯಗಳು' ಎಂದು ವರ್ಣಿಸುತ್ತಾರೆ.

ಹಾಗಾಗಿ ಅಪೋಸ್ತಲರ ಕೃತ್ಯಗಳ ಪುಸ್ತಕವು ಯೇಸು ತನ್ನ ಆತ್ಮಭರಿತರಾದ ಅಪೋಸ್ತಲರ ಹಾಗೂ ತನ್ನ ಆತ್ಮಭರಿತವಾದ ಸಭೆಯ ಮೂಲಕ ಈ ಲೋಕದ ಮೇಲೆ ತನ್ನ ಸೇವೆಯನ್ನು ಮುಂದುವರೆಸಿದ ಕುರಿತಾಗಿದೆ.

# ಅಪೊಸ್ತಲರ ಕೃತ್ಯಗಳ ಸಾಹಿತ್ಯ ಪ್ರಕಾರ

ಅಪೊಸ್ತಲರ ಕೃತ್ಯಗಳ ಪುಸ್ತಕಕ್ಕೆ ವಾಚಕರು ನೀಡುವ ಪಟ್ಟಿ ಏನೆಂದರೆ ಇದು ಒಂದು ಐತಿಹಾಸಿಕ ಪುಸ್ತಕ ಎಂಬುದಾಗಿ, ಅದರ ಸಾಹಿತ್ಯ ಪ್ರಕಾರವು 'ಇತಿಹಾಸ'ವಾಗಿದೆ. ಆಧುನಿಕ ಅರ್ಥದಲ್ಲಿ ಈ ಪದವನ್ನು ಬಳಸದಿದ್ದ ಪಕ್ಷದಲ್ಲಿ – ಇದು ಸರಿಯಾದದ್ದು ಎಂದು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು: ಉದಾಹರಣೆಗೆ ಒಬ್ಬ ಆಧುನಿಕ ಇತಿಹಾಸಕಾರನು 'ಆದಿಸಭೆಯ ಇತಿಹಾಸ' ಎಂದು ಕರೆಯಲ್ಪಡುವ ಒಂದು ಪುಸ್ತಕವನ್ನು ಪ್ರಕಾಶಿಸಲು ಬಯಸುವಾಗ ಬರೆಯಬಹುದಾದ ಸಂಗತಿಗಳಂತೆ ಇದು ಗತಕಾಲದ ಘಟನೆಗಳ ಒಂದು ವಸ್ತುನಿಷ್ಠವಾದ ಮತ್ತು ತರ್ಕಬದ್ಧವಾಗಿ ಸಂಪೂರ್ಣವಾದ ಅಧ್ಯಯನವಲ್ಲ. ಅದಕ್ಕೆ ಬದಲಾಗಿ ಇದು ಪ್ರಾಚೀನವಾದ ಮತ್ತು ಸತ್ಯವೇದದ ಅರ್ಥದಲ್ಲಿ 'ಇತಿಹಾಸ' ಎಂಬ ಪದವಾಗಿದೆ. ಲೂಕನು ಹೆಲೆನಿಸ್ಟಿಕ್ ಸಂಸ್ಕೃತಿಯ ಅವಧಿಯಲ್ಲಿ ಬರೆದನು ಮತ್ತು ಅದಲ್ಲದೆ ಆತನು ಹಳೆ ಒಡಂಬಡಿಕೆಯ ಸಂಪ್ರದಾಯದಲ್ಲಿ ಬರೆದನು. ಅದರ ಅರ್ಥ ನಾವು ಅಪೊಸ್ತಲರ ಕೃತ್ಯಗಳನ್ನು ಮೊದಲನೇ ಶತಮಾನದ ಗ್ರೀಕ್–ರೋಮನ್ ಇತಿಹಾಸ ಬರವಣಿಗೆಯ ಬೆಳಕಿನಲ್ಲಿ ಮಾತ್ರವಲ್ಲದೆ ಹಳೆ ಒಡಂಬಡಿಕೆಯ ಇತಿಹಾಸ ಬರವಣಿಗೆಯ ಬೆಳಕಿನಲ್ಲಿಯೂ ಅದನ್ನು ಅರ್ಥಮಾಡಿಕೊಳ್ಳಬೇಕು:

1. ಬಹುತೇಕ ಸತ್ಯವೇದ ಶಾಸ್ತ್ರಜ್ಞರು ಅಪೊಸ್ತಲರ ಕೃತ್ಯಗಳನ್ನು ಮೊದಲನೆಯ ಶತಮಾನದ ಗ್ರೀಕ್–ರೋಮನ್ ಶೈಲಿಯ ಐತಿಹಾಸಿಕ ಬರವಣಿಗೆಯ ಒಂದು ಅತ್ಯುತ್ತಮವಾದ ಮಾದರಿ ಎಂದು ಕಾಣುತ್ತಾರೆ. ಇಂತಹ ಇತಿಹಾಸವು ಕೇವಲ ಗತಕಾಲದ ಘಟನೆಗಳನ್ನು ದಾಖಲಿಸುವ ಉದ್ದೇಶ ಹೊಂದಿರಲಿಲ್ಲ. ಈ ಗತಕಾಲದ ಘಟನೆಗಳ ಆಧಾರದ ಮೇಲೆ ಒಂದು ಸಂದೇಶವನ್ನು ತಿಳಿಸಲು ಅದು ಬರೆಯಲ್ಪಟ್ಟಿದೆ. ಹಾಗಾಗಿ ಲೂಕನು ತನ್ನ ಪುಸ್ತಕದೊಂದಿಗೆ ಒಂದು ಸಂದೇಶವನ್ನು ಹೊಂದಿರಲೇಬೇಕು.

2. ಇದರ ಜೊತೆಗೆ ಲೂಕನು ಹಳೆ ಒಡಂಬಡಿಕೆಯ ಐತಿಹಾಸಿಕ ಕಥೆಗಳಿಂದ ಪ್ರಭಾವಿತನಾಗಿದ್ದನು, ಆ ಕಥೆಗಳಲ್ಲಿ ದೇವರು ಇತಿಹಾಸದ ಮೇಲೆ ನಿಯಂತ್ರಣವುಳ್ಳವನಾಗಿದ್ದನು. ಅವರು 'ಲೌಕಿಕವಾದ' ಇತಿಹಾಸವನ್ನು ಬರೆಯಲಿಲ್ಲ. ಇಲ್ಲ, ಅವರು ಒಂದು ದೈವಿಕ ದೃಷ್ಟಿಕೋನದಿಂದ ಇತಿಹಾಸವನ್ನು ಬರೆದರು. ಹಾಗಾಗಿ ಲೂಕನ ದೃಷ್ಟಿಕೋನವೇನೆಂದರೆ, ತಾನು ಮುಂದಿಡುವ ಕಥೆಯಾದ್ಯಂತ ದೇವರು ಕಾರ್ಯಪ್ರವೃತ್ತನಾಗಿದ್ದಾನೆ ಎಂಬುದಾಗಿದೆ.

ಆದ್ದರಿಂದ, ಲೂಕನು ತನ್ನ ಸಂದೇಶವನ್ನು ಸ್ಪಷ್ಟಪಡಿಸಲು ತನ್ನ ಐತಿಹಾಸಿಕ ದಾಖಲೆಗಳನ್ನು ಆರಿಸಿಕೊಂಡು ರೂಪಿಸುತ್ತಾನೆ. ಅಪೊಸ್ತಲರ ಕೃತ್ಯಗಳು ಯೆರೂಸಲೇಮಿನಲ್ಲಿ ಮತ್ತು ಯೆಹೂದ್ಯರಲ್ಲಿ ಪ್ರಾರಂಭವಾದ ಸುವಾರ್ತೆಯನ್ನು ಪವಿತ್ರಾತ್ಮನು ಹೇಗೆ ಪ್ರಪಂಚದಾದ್ಯಂತವಾದ ಅನ್ಯರ ಮಧ್ಯದಲ್ಲಿನ ಒಂದು ಚಳುವಳಿಯನ್ನಾಗಿ ಮಾರ್ಪಡಿಸಿದನೆಂಬುದರ ಕುರಿತಾದ ಕಥೆಯಾಗಿದೆ.

ಕೇವಲ ಸಭೆಯ ಇತಿಹಾಸವನ್ನು ಬರೆಯುವುದು ಮಾತ್ರ ಲೂಕನ ಪುಸ್ತಕದ ಉದ್ದೇಶವಲ್ಲವೆಂಬುದು ಇದರ ಅರ್ಥ. ಆತನು ಯಾವುದರ ಕುರಿತು ***ಬರೆಯಲಿಲ್ಲ*** ಎಂಬುದನ್ನು ಗಮನಿಸುವಾಗ ಅದು ನಮಗೆ ಸ್ಪಷ್ಟವಾಗುತ್ತದೆ. ಆತನು ಅಪೊಸ್ತಲರ ಪೂರ್ಣ ಇತಿಹಾಸಗಳನ್ನು ***ಬರೆಯಲಿಲ್ಲ***. ಬಹುತೇಕ ಅಪೊಸ್ತಲರುಗಳ ಕುರಿತು ಏನೂ ತಿಳಿಸಲ್ಪಟ್ಟಿಲ್ಲ. ಪೇತ್ರನ ಕುರಿತು ಆತನು ಯೆರೂಸಲೇಮಿನ ಸಭೆಯಲ್ಲಿ ಅನ್ಯರ ಬಗ್ಗೆ, '*ಸಹೋದರರೇ, ಅನ್ಯರು ನನ್ನ ಬಾಯಿಂದ ಸುವಾರ್ತೆಯ ವಾಕ್ಯವನ್ನು ಕೇಳಿ*

*ನಂಬಬೇಕೆಂಬ ಉದ್ದೇಶದಿಂದ ನಿಮ್ಮೊಳಗಿಂದ ನನ್ನನ್ನು ದೇವರು ಬಹುದಿನಗಳ ಹಿಂದೆ ಆಯ್ದುಕೊಂಡನೆಂಬುದು ನಿಮಗೆ ತಿಳಿದೇ ಇದೆ'* (ಅ. ಕೃ. 15:17) ಎಂದು ಹೇಳಿದ ಸನ್ನಿವೇಶದಲ್ಲಿ ಕೊನೆಯದಾಗಿ ತಿಳಿಸಲ್ಪಟ್ಟಿದ್ದಾನೆ. ಪೌಲನೂ ಸಹ ಪ್ರಮುಖವಾಗಿ ಅನ್ಯರ ಮಧ್ಯದಲ್ಲಿನ ಸೇವೆಯ ಬೆಳಕಿನಲ್ಲಿ ತಿಳಿಸಲ್ಪಟ್ಟಿದ್ದಾನೆ.

ಸುವಾರ್ತೆಯು ರೋಮನ್ ಸಾಮ್ರಾಜ್ಯದಾದ್ಯಂತ ಅನೇಕ ಭಾಗಗಳಲ್ಲಿ ಹೇಗೆ ಹರಡಿತು ಎಂಬುದರ ಕುರಿತಾದ ಒಂದು ಸಂಪೂರ್ಣ ಸೇವಾ ಇತಿಹಾಸವನ್ನೂ ಸಹ ಲೂಕನು ***ಬರೆಯಲಿಲ್ಲ***. ಕ್ರೇಟ ದ್ವೀಪಕ್ಕೆ (ತೀತನು. 1:5 ನ್ನು ಹೋಲಿಸಿರಿ), ಅಥವಾ ಇಲ್ಲುರಿಕಕ್ಕೆ (ರೋಮಾ. 15:19 ನ್ನು ಹೋಲಿಸಿರಿ), ಅಥವಾ ಪೊಂತ, ಕಪ್ಪದೋಕ್ಯ ಮತ್ತು ಬಿಥೂನ್ಯಕ್ಕೆ (1 ಪೇತ್ರ. 1:1 ನ್ನು ಹೋಲಿಸಿರಿ) ಸುವಾರ್ತೆಯು ಹೇಗೆ ತಲುಪಿತು ಎಂಬುದರ ಕುರಿತು ಯಾವುದೇ ಮಾಹಿತಿ ಇಲ್ಲ, ಅಥವಾ ಪೂರ್ವದಲ್ಲಿದ್ದ ಮೆಸಪೊಟಾಮಿಯಕ್ಕೆ ಅಥವಾ ದಕ್ಷಿಣದಲ್ಲಿದ್ದ ಈಜಿಪ್ಟಿಗೆ ಸುವಾರ್ತೆಯು ಹೇಗೆ ಹರಡಿತು ಎಂಬುದರ ಕುರಿತು ಯಾವುದೇ ಮಾಹಿತಿ ಇಲ್ಲ.

# ಅಪೋಸ್ತಲರ ಕೃತ್ಯಗಳ ದಿನಾಂಕ

ಅಪೋಸ್ತಲರ ಕೃತ್ಯಗಳ ಪುಸ್ತಕವು ಯಾವಾಗ ಬರೆಯಲ್ಪಟ್ಟಿತ್ತೆಂಬುದರ ಕುರಿತು ಸತ್ಯವೇದ ಶಾಸ್ತ್ರಜ್ಞರುಗಳು ತರ್ಕಿಸಿದ್ದಾರೆ. ಆದರೆ ಅವರೆಲ್ಲರೂ ಒಂದು ಅಂಶವನ್ನು ಒಪ್ಪಿಕೊಳ್ಳುತ್ತಾರೆ: ಈ ಪುಸ್ತಕವು ಲೂಕನ ಸುವಾರ್ತೆಯ ನಂತರ ಬರೆಯಲ್ಪಟ್ಟಿರಬಹುದು.

(ಅಪೋಸ್ತಲರ ಕೃತ್ಯಗಳ ಪುಸ್ತಕದ ಆಧಾರದ ಮೇಲೆಯೇ) ಈ ಪುಸ್ತಕವು ಕ್ರಿ. ಶ. 62 ರಲ್ಲಿ, ಅಂದರೆ ರೋಮ್‌ನಲ್ಲಿ ಪೌಲನ ಎರಡು ವರ್ಷಗಳ ಸೆರೆಮನೆವಾಸದ ಕುರಿತಾದ ಕಥೆಯ ಮುಕ್ತಾಯದ ನಂತರವೇ, ಬರೆಯಲ್ಪಟ್ಟಿತು ಎಂಬುದಕ್ಕೆ ಬಲವಾದ ಕಾರಣಗಳಿವೆ:

1. ಇದು ಪುಸ್ತಕವು ಯಾಕೆ ತಕ್ಷಣವಾಗಿ ಅಂತ್ಯಗೊಳಿಸಲ್ಪಟ್ಟಿದೆ ಎಂಬುದನ್ನು ವಿವರಿಸುತ್ತದೆ, ಅದು ಕೆಲವು ವರ್ಷಗಳ ನಂತರ, ಅಂದರೆ ಸುಮಾರು ಕ್ರಿ. ಶ. 65 ರ ಸಮಯದಲ್ಲಿ, ನಿರೋ ಚಕ್ರವರ್ತಿಯ ಆಳ್ವಿಕೆಯ ಅಡಿಯಲ್ಲಿ ಉಂಟಾದ ಹಿಂಸೆಯಲ್ಲಿ ಪೌಲ ಮತ್ತು ಪೇತ್ರರು ರಕ್ತಸಾಕ್ಷಿಯಾಗಿದ್ದರ ಕುರಿತು ಯಾವುದೇ ಮಾಹಿತಿಯನ್ನು ತಿಳಿಸುತ್ತಿಲ್ಲ.

2. ಲೂಕನು ಬರೆದ ಸುವಾರ್ತೆಯಲ್ಲಿ ಮತ್ತು ಅಪೋಸ್ತಲರ ಕೃತ್ಯಗಳಲ್ಲಿ ಪ್ರವಾದನೆಗಳ ನೆರವೇರುವಿಕೆಯು ಪ್ರಧಾನ ವಿಷಯವಾಗಿದ್ದಾಗ್ಯೂ ಮತ್ತು ಲೂಕನು 11:20–30 ರಲ್ಲಿನ (ಬರಗಾಲದ ಕುರಿತಾದ) ಮತ್ತು 21:10–11 ರಲ್ಲಿನ (ಯೆರೂಸಲೇಮಿನಲ್ಲಿ ಪೌಲನ ಬಂಧನದ ಕುರಿತಾದ) ಅಗಬನ ಪ್ರವಾದನೆಗಳ ನೆರವೇರುವಿಕೆಯನ್ನು ಒತ್ತಿಹೇಳಿದಾಗ್ಯೂ ಕ್ರಿ. ಶ. 70 ರಲ್ಲಿ ಉಂಟಾದ ಯೆರೂಸಲೇಮಿನ ನಾಶನವನ್ನು (ಲೂಕ. 4:20, 24:25, ಅ. ಕೃ. 2:16, 3:18, 3:21, 3:24, 7:42, 10:43, 13:27) ಯಾಕೆ ತಿಳಿಸುತ್ತಿಲ್ಲ ಎಂಬುದನ್ನೂ ಇದು ವಿವರಿಸುತ್ತದೆ.

3. ರೋಮನ್ ಸಾಮ್ರಾಜ್ಯದಲ್ಲಿ ಯೆಹೂದ್ಯ ಜನರು ಹೊಂದಿದ್ದ ರಾಜಕೀಯ ಮತ್ತು ಧಾರ್ಮಿಕ ಪ್ರಭಾವದ ಕುರಿತು ಲೂಕನು ಕೊಡುವ ವರ್ಣನೆಯನ್ನೂ ಇದು ವಿವರಿಸುತ್ತದೆ. ಈ ಪ್ರಭಾವವು ಕ್ರಿ. ಶ. 70 ರಲ್ಲಿ ಯೆರೂಸಲೇಮಿನ ದೇವಾಲಯದ ನಾಶನದ ನಂತರ ಅತೀ ಕಡಿಮೆಯಾಯಿತು.

4. ಇದು ಪೌಲನು ಸಭೆಗಳಿಗೆ ಬರೆದ ಪತ್ರಿಕೆಗಳ ಕುರಿತು ಲೂಕನು ಯಾಕೆ ತಿಳಿಸುತ್ತಿಲ್ಲ ಎಂಬುದನ್ನು ವಿವರಿಸುತ್ತದೆ. ಕ್ರಿಸ್ತಶಕ ಮೊದಲನೇ ಶತಮಾನದ ನಂತರ ಈ ಪತ್ರಿಕೆಗಳು ಸಭೆಗಳಲ್ಲಿ ಎಲ್ಲೆಡೆಯಲ್ಲಿಯೂ ವಿಸ್ತರಿಸಲ್ಪಟ್ಟ ಮತ್ತು ಉಪಯೋಗಿಸಲ್ಪಟ್ಟ ಸಂಗತಿಯು ನಮಗೆ ತಿಳಿದಿರುವ ಅಂಶವಾಗಿದೆ.

5. ಇದು ರೋಮನ್ ಅಧಿಕಾರಿಗಳ ಕುರಿತು ಲೂಕನು ಇಂತಹ ಒಂದು ಸಕಾರತ್ಮಕವಾದ ಚಿತ್ರಣವನ್ನು ಯಾಕೆ ನೀಡುತ್ತಿದ್ದಾನೆಂಬುದನ್ನು ವಿವರಿಸುತ್ತದೆ. ರೋಮನ್ ಅಧಿಕಾರಿಗಳು ಮತ್ತು ನೌಕರರು ವಿಶ್ವಾಸವನ್ನಿಟ್ಟು ದೀಕ್ಷಾಸ್ನಾನ ಹೊಂದಿದರು ಮತ್ತು ರೋಮನ್ ರಾಜ್ಯಪಾಲನಾದ ಗಲ್ಲಿಯೋನನು ಪೌಲನು ಕೊರಿಂಥದಲ್ಲಿ ಸೇವೆಯನ್ನು ಮುಂದುವರೆಸಲು ಅನುಮತಿಸಿದನು. ಪುಸ್ತಕದ ಕೊನೆಯಲ್ಲೂ ಸಹ ಸಕಾರತ್ಮಕವಾದ ಹೇಳಿಕೆಯಿದೆ: *'ಅವನು [ಪೌಲನು] ಧೈರ್ಯದಿಂದ ಯಾವ ಅಡ್ಡಿ ಆತಂಕಗಳಿಲ್ಲದೆ ದೇವರ ಸಾಮ್ರಾಜ್ಯವನ್ನು ಪ್ರಕಟಿಸುತ್ತಾ, ಕರ್ತನಾದ ಯೇಸು ಕ್ರಿಸ್ತನ ವಿಷಯವಾಗಿ ಉಪದೇಶ ಮಾಡುತ್ತಾ ಇದ್ದನು'* (28:31). ಕೆಲವು ವರ್ಷಗಳ ನಂತರ ಚಕ್ರವರ್ತಿಯಾದ ನಿರೋ ಕ್ರೈಸ್ತರ ವಿರುದ್ಧವಾಗಿ ಒಂದು ಭಯಂಕರವಾದ ಹಿಂಸೆಯನ್ನು ಪ್ರಾರಂಭಿಸಿದನು. ಆ ಸ್ಥಿತಿಯಲ್ಲಿ ಲೂಕನು ಇಷ್ಟು ಸಕಾರಾತ್ಮಕವಾಗಿ ಬರೆಯಲು ಸಾಧ್ಯವಾಗುತ್ತಿತ್ತೋ?

ಲೂಕನು ಬರೆದ ಸುವಾರ್ತೆ ಮತ್ತು ಅಪೋಸ್ತಲರ ಕೃತ್ಯಗಳ ಪುಸ್ತಕಗಳ ಉದ್ದೇಶ, ದಿನಾಂಕ ಮತ್ತು ಸಾಹಿತ್ಯ ಪ್ರಕಾರದ ಈ ಮೂರು ವಿಷಯಗಳನ್ನು ಒಟ್ಟುಗೂಡಿಸುವ ಒಂದು ಕುತೂಹಲಕರವಾದ ಆಲೋಚನೆಯೇನೆಂದರೆ ಪೌಲನ ಪ್ರಕರಣವನ್ನು ರೋಮ್‌ನಲ್ಲಿನ ಚಕ್ರವರ್ತಿಯ ಮುಂದೆ ಮಂಡಿಸಲು ಕೊಂಡೊಯ್ಯಲ್ಪಟ್ಟಾಗ ಮತ್ತು ಥೆಯೊಫಿಲನು ಆತನ ವಿರುದ್ಧವಾದ ನ್ಯಾಯವಿಚಾರಣೆಯಲ್ಲಿ ಒಬ್ಬ ಮುಖ್ಯ ಅಧಿಕಾರಿಯಾಗಿದ್ದರಿಂದ ಲೂಕನು ಅವುಗಳನ್ನು 'ಪ್ರತಿವಾದದ ಕರಡುಗಳನ್ನಾಗಿ' ಉಪಯೋಗಿಸಬೇಕೆಂದು ಬರೆದನು. ಪೌಲನು ಫೆಸ್ತನ ಮುಂದೆ ನ್ಯಾಯವಿಚಾರಣೆಗೆ ಒಳಗಾಗಿ, ತಾನು ಚಕ್ರವರ್ತಿಗೆ ಮನವಿಮಾಡಿಕೊಳ್ಳುತ್ತೇನೆ ಎಂದು ಹೇಳಿ ತನ್ನ ಮಾತನ್ನು ಮುಗಿಸುವಷ್ಟರಲ್ಲಿ ಫೆಸ್ತನು *'ನೀನು ಚಕ್ರವರ್ತಿಗೆ ಮನವಿ ಮಾಡಿಕೊಂಡಿರುವೆ, ಚಕ್ರವರ್ತಿಯ ಬಳಿಗೇ ಹೋಗು!'* (25:11–12) ಎಂದು ಹೇಳಿದಾಗ ಪೌಲನು ರೋಮ್‌ನಲ್ಲಿರುವ ಚಕ್ರವರ್ತಿಯ ಮುಂದೆ ನಿಂತುಕೊಳ್ಳುವನು ಎಂದು ಲೂಕನು ಮನಗಂಡಿರಬೇಕು. ಅದಲ್ಲದೆ, ಯೇಸು ಪೌಲನಿಗೆ ಯೆರೂಸಲೇಮಿನಲ್ಲಿ ಬಂಧಿಸಲ್ಪಟ್ಟಾಗಲೇ ದರ್ಶನದಲ್ಲಿ ಕಾಣಿಸಿಕೊಂಡು ಆತನು ರೋಮ್‌ಗೆ ಬಂದು ಅಲ್ಲಿ ತನ್ನ ಕುರಿತು ಸಾಕ್ಷಿಕರಿಸುವನು ಎಂದು ಪ್ರಕಟಿಸಿದ್ದನು (ಅ. ಕೃ. 23:11). ಈ ನಡುವಿನ ಎರಡು ವರ್ಷಗಳ ಅವಧಿಯಲ್ಲಿ ಲೂಕನು ತನ್ನ ಪುಸ್ತಕಗಳನ್ನು (ಸುವಾರ್ತೆಯನ್ನು ಸಂಪೂರ್ಣವಾಗಿ ಮತ್ತು ಅಪೋಸ್ತಲರ ಕೃತ್ಯಗಳ ಪುಸ್ತಕದ ಬಹುತೇಕ ಭಾಗವನ್ನು) ಬರೆದನು, ಮತ್ತು ಚಕ್ರವರ್ತಿಯ ಮುಂದೆ ಪೌಲನ ಪರವಾಗಿ ಪ್ರತಿವಾದ ಸಿದ್ಧಪಡಿಸಲು ಮತ್ತು ಒಂದು ಉನ್ನತ ಹುದ್ದೆಯಲ್ಲಿದ್ದ ವಿಶ್ವಾಸಿಯಾದ ಥೆಯೋಫಿಲನನ್ನು ಸಂಧಿಸಲು ರೋಮ್‌ಗೆ ಭೇಟಿ ನೀಡಿದನು. ನಂತರ ಕ್ರಿ. ಶ. 59–60 ರಲ್ಲಿ ಪೌಲನು ಮತ್ತು ಲೂಕನು ಚಳಿಗಾಲದ ಬಿರುಗಾಳಿಯನ್ನು ಎದುರಿಸುತ್ತಾ ಥೆಯೊಫಿಲನಿಗೆ ಕೊಡಲು ಪುಸ್ತಕವನ್ನು ತಮ್ಮೊಂದಿಗೆ ತೆಗೆದುಕೊಂಡು ರೋಮ್‌ಗೆ ಪ್ರಯಾಣಿಸುತ್ತಿರುವುದನ್ನು ನಮ್ಮ ಮನಸ್ಸಿನಲ್ಲಿ ಚಿತ್ರೀಕರಿಸಬಹುದು. ಲೂಕನು ನಂತರ ರೋಮ್‌ನಲ್ಲಿ ಪೌಲನ ಎರಡು ವರ್ಷಗಳ ಸೆರೆಮನೆವಾಸದ ಸಂದರ್ಭದಲ್ಲಿ ಆತನೊಂದಿಗೆ ಇದ್ದ ಸಂದರ್ಭದಲ್ಲಿ ಅಪೋಸ್ತಲರ ಕೃತ್ಯಗಳ ಕೊನೆಯ ಪರಿಷ್ಕರಣವನ್ನು ಪೂರ್ಣಗೊಳಿಸಿರಬಹುದು.

ಲೂಕನು ಬರೆದ ಸುವಾರ್ತೆ ಮತ್ತು ಅಪೋಸ್ತಲರ ಕೃತ್ಯಗಳ ಪುಸ್ತಕಗಳು ಕ್ರೈಸ್ತ ನಂಬಿಕೆ, ಸುವಾರ್ತೆ ಮತ್ತು ಸಭೆಯನ್ನು ಕೇವಲ ವಿವರಿಸಿ ಮುಂದಿಡುವುದಿಲ್ಲ. ಈ ಪುಸ್ತಕಗಳ ಮೂಲಕ ಲೂಕನು ಕ್ರೈಸ್ತರಿಂದ ರೋಮನ್ ಅಧಿಕಾರಿಗಳಿಗೆ ಯಾವುದೇ ನಿಜವಾದ ಸಮಸ್ಯೆಗಳಿರಲಿಲ್ಲ ಎಂಬುದನ್ನೂ ಸಹ ತೋರಿಸುತ್ತಾನೆ. ರೋಮನ್ ಸಾಮ್ರಾಜ್ಯವನ್ನು ಪರಾಭವಗೊಳಿಸುವುದು ಅವರ ಕಾರ್ಯಕಲಾಪದ ಪಟ್ಟಿಯಲ್ಲಿರಲಿಲ್ಲ. ಕೈಸ್ತರು ಅಮಾಯಕ ಜನರಾಗಿದ್ದರು ಮತ್ತು ಅವರು ಯಾವುದೇ ರೋಮನ್ ಕಾನೂನನ್ನು ಉಲ್ಲಂಘಿಸಿರಲಿಲ್ಲ. ಬದಲಾಗಿ ಅವರು ಒಳ್ಳೆಯ ಜನರಾಗಿದ್ದರು, ಅವರು ಸಮಾಜದ ಮೇಲೆ ಒಳ್ಳೆಯ ಪ್ರಭಾವವನ್ನು ಬೀರುವವರಾಗಿದ್ದರು. ಈ ಕ್ರಿಸ್ತೀಯ ಚಳುವಳಿಯ ಮುಖ್ಯ ಪ್ರತಿನಿಧಿಯಾದ ಪೌಲನು ಯೆರೂಸಲೇಮಿನಲ್ಲಿರುವ ಯೆಹೂದ್ಯ ನಾಯಕರು ಆತನ ವಿರುದ್ಧವಾಗಿ ಮಾಡಿದ ಎಲ್ಲಾ ಆಪಾದನೆಗಳಲ್ಲಿ ನಿರ್ದೋಷಿಯಾಗಿದ್ದನು.

# ಅಪೋಸ್ತಲರ ಕೃತ್ಯಗಳ ರಚನೆ

ಅಪೋಸ್ತಲರ ಕೃತ್ಯಗಳ ಪುಸ್ತಕದ ರಚನೆಯನ್ನು ಅರ್ಥಮಾಡಿಕೊಳ್ಳಲು ಇರುವ ಎರಡು ಅತ್ಯಂತ ಸಾಮಾನ್ಯವಾದ ಮಾರ್ಗಗಳೆಂದರೆ:

1. ***ಮುಖ್ಯ ಪಾತ್ರಧಾರಿಯಾದ ಅಪೋಸ್ತಲನ*** ಮೇಲೆ ರಚನೆಯನ್ನು ಆಧರಿಸಬಹುದು: ಪುಸ್ತಕದ ಮೊದಲ ಭಾಗದಲ್ಲಿ (ಅಧ್ಯಾಯಗಳು 1–12) ಪೇತ್ರನು ಮುಖ್ಯ ಪಾತ್ರಧಾರಿಯಾಗಿರುವುದನ್ನು ನಾವು ಕಾಣುತ್ತೇವೆ, ಮತ್ತು ಪುಸ್ತಕದ ಎರಡನೆಯ ಭಾಗದಲ್ಲಿ ಪೌಲನು ಮುಖ್ಯ ಪಾತ್ರಧಾರಿಯಾಗಿದ್ದಾನೆ (ಅಧ್ಯಾಯಗಳು 13–28).

ನಾವು ***ಪೇತ್ರ ಮತ್ತು ಪೌಲರ*** ಕಥೆಗಳನ್ನು ಹೋಲಿಸುವಾಗ, ಅವರ ನಡುವೆ ***ಅನೇಕ ಸಮಾಂತರತೆಗಳಿರುವುದನ್ನು*** ನಾವು ಕಾಣುತ್ತೇವೆ:

- ಅವರಿಬರೂ ಪವಿತ್ರಾತ್ಮನ ಬಲದಲ್ಲಿ ಸೇವೆ ಮಾಡಿದರು (4:8 ಮತ್ತು 13:9),
- ಅವರಿಬ್ಬರೂ ದೇವರ ವಾಕ್ಯವನ್ನು ಧೈರ್ಯವಾಗಿ ಸಾರಿದರು (4:31 ಮತ್ತು 9:28),
- ಅವರಿಬ್ಬರೂ ಒಬ್ಬ ಹುಟ್ಟು ಕುಂಟನನ್ನು ವಾಸಿಮಾಡಿದರು (3:1–10 ಮತ್ತು 14:8–10),
- ಅವರಿಬ್ಬರೂ ಒಬ್ಬ ಮಂತ್ರವಾದಿಯನ್ನು ಎದುರಿಸಿದರು (8:18–23 ಮತ್ತು 13:8–11),
- ಅವರಿಬ್ಬರೂ ಅನ್ಯರ ಮಧ್ಯದಲ್ಲಿ ಸೇವೆಮಾಡಿದರು (9:23–48 ಮತ್ತು 13:46 ಇತ್ಯಾದಿಗಳು),
- ಅವರಿಬ್ಬರೂ ತಮ್ಮ ಸೇವಾ ಕಾರ್ಯವನ್ನು ಮಾರ್ಗದರ್ಶಿಸಿದ ದರ್ಶನಗಳನ್ನು ಹೊಂದಿದರು (10:9–20 ಮತ್ತು 16:9–10),
- ಅವರಿಬ್ಬರೂ ಬಂಧಿಸಲ್ಪಟ್ಟರು ಮತ್ತು ಅದ್ಭುತಕರವಾಗಿ ಬಿಡುಗಡೆ ಹೊಂದಿದರು (12:3–10 ಮತ್ತು 16:23–28), ಅವರಿಬ್ಬರೂ ಜನರನ್ನು ದುರಾತ್ಮಗಳಿಂದ ಬಿಡಿಸಿದರು (5:26 ಮತ್ತು 16:18),
- ಅವರಿಬ್ಬರೂ ಅಸಾಧಾರಣವಾದ ಅದ್ಭುತಗಳನ್ನು ಮಾಡುವ ಶಕ್ತಿಯನ್ನು ಹೊಂದಿದ್ದರು (5:15 ಮತ್ತು 9:12),
- ಅವರಿಬ್ಬರೂ ಸತ್ತ ವ್ಯಕ್ತಿಯನ್ನು ಎಬ್ಬಿಸಿದರು (9:40–41 ಮತ್ತು 20:9–12).

ಈ ಸಮಾಂತರತೆಯ ರಚನೆಯಿಂದ ಲೂಕನು ತಿಳಿಸುತ್ತಿರುವ ಅಂಶವೇನೆಂದರೆ, ಪೌಲ ಮತ್ತು ಪೇತ್ರರಿಬ್ಬರೂ ಒಂದೇ ಆದೇಶ, ಒಂದೇ ಸುವಾರ್ತೆ ಮತ್ತು ಒಂದೇ ಅಧಿಕಾರವನ್ನು ಹೊಂದಿದ ಅಪೋಸ್ತಲರಾಗಿದ್ದರು.

2. ವಚನ ***1:8 ರಲ್ಲಿರುವ ಯೇಸುವಿನ ಮಾತುಗಳ*** ಮೇಲೆ ಈ ಪುಸ್ತಕದ ರಚನೆಯನ್ನು ಆಧರಿಸಬಹುದು: '*ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬಂದಾಗ ನೀವು ಶಕ್ತಿಯನ್ನು ಪಡೆಯುವಿರಿ. ಆಗ ನೀವು ಯೆರೂಸಲೇಮಿನಲ್ಲಿ, ಯೂದಾಯ ಮತ್ತು ಸಮಾರ್ಯದ ಎಲ್ಲಾ ಕಡೆಗಳಲ್ಲಿಯೂ ಹಾಗೂ ಭೂಲೋಕದ ಕೊನೆಯ ಮೇರೆಗಳವರೆಗೂ ನನಗೆ ಸಾಕ್ಷಿಗಳಾಗುವಿರಿ" ಎಂದನು'.*

- ಅಪೊಸ್ತಲರ ಕೃತ್ಯಗಳು ಪುಸ್ತಕದ ಮೊದಲ ಏಳು ಅಧ್ಯಾಯಗಳು ಯೆರೂಸಲೇಮಿನಲ್ಲಿ ಜರುಗಿದವು.
- ನಂತರ ಸುವಾರ್ತೆಯು ಸಮಾರ್ಯ ಮತ್ತು ಯೂದಾಯಕ್ಕೆ ಹರಡಿತು (ಅಧ್ಯಾಯ 8–12).
- ಪುಸ್ತಕದ ಉಳಿದ ಭಾಗವು ಆ ದಿನಗಳ ಅನ್ಯಲೋಕಕ್ಕೆ ಸುವಾರ್ತೆಯು ಹೇಗೆ ತಲುಪಿತು ಎಂಬುದನ್ನು ವಿವರಿಸುತ್ತದೆ. ಕೊನೆಯ ಅಧ್ಯಾಯದಲ್ಲಿ ಆ ದಿನಗಳ ಪ್ರಪಂಚದ ಕೇಂದ್ರವಾಗಿದ್ದ ರೋಮ್‌ನ್ನು ಪೌಲನು ತಲುಪುತ್ತಾನೆ.

ಆದರೆ ಅಪೊಸ್ತಲರ ಕೃತ್ಯಗಳ ರಚನೆಯನ್ನು ಅರ್ಥಮಾಡಿಕೊಳ್ಳುವ ಮೂರನೆಯ ಮಾರ್ಗವಿದೆ:

3. ಹಿಂದಿನ ಅಧ್ಯಾಯಗಳಲ್ಲಿ ಲೂಕನು ವಿವರಿಸಿದ ಸಂಗತಿಗಳನ್ನು ಸಾರಾಂಶಗೊಳಿಸುವ ***ಆರು ಮುಖ್ಯ ವಚನಗಳ*** ಮೇಲೆ ಆಧರಿಸಬಹುದು ಮತ್ತು ಅಲ್ಲಿಂದ ಕಥೆಯು – ಮತ್ತು ಸುವಾರ್ತೆಯ ಸಾರುವಿಕೆಯು – ಒಂದು ಹೊಸ ದಿಕ್ಕಿನ ಕಡೆಗೆ ಸಾಗುತ್ತದೆ. ಈ ರೀತಿಯಲ್ಲಿ, ಲೂಕನು ಸುವಾರ್ತೆಯ ಉಲ್ಲಾಸಭರಿತ ವಿಸ್ತರಣೆಯ ಆರು ಅದ್ಭುತವಾದ ಚಿತ್ರಣವನ್ನು ಚಿತ್ರಿಸಿದ್ದಾನೆ:
    1. ***ಯೆರೂಸಲೇಮಿನಲ್ಲಿದ್ದ*** ಆದಿಸಭೆಯು ಸಂಪೂರ್ಣವಾಗಿ ***ಯೆಹೂದ್ಯ*** ವಾತಾವರಣದಿಂದ ಕೂಡಿತ್ತು (1:1–6:7): *'ದೇವರ ವಾಕ್ಯವು ಅಭಿವೃದ್ಧಿಯಾಗುತ್ತಾ ಬಂತು. ಯೆರೂಸಲೇಮಿನಲ್ಲಿನ ಶಿಷ್ಯರ ಸಂಖ್ಯೆಯು ತ್ವರಿತಗತಿಯಲ್ಲಿ ಹೆಚ್ಚಾಯಿತು. ಯಾಜಕರಲ್ಲಿಯೂ ಅನೇಕ ಜನರು ನಂಬಿಕೆಗೆ ವಿಧೇಯರಾದರು'* (6:7).
    2. ಪೌಲನ ಮಾನಸಾಂತರವನ್ನೊಳಗೊಂಡು, ***ಮೊದಲ ಭೌಗೋಳಿಕ ವಿಸ್ತರಣೆಯು ಗ್ರೀಕ್ ಮಾತನಾಡುವ ಯೆಹೂದ್ಯ ವಿಶ್ವಾಸಿಗಳಿಂದ ಉಂಟಾಯಿತು*** (6:8–9:31): *'ಆ ಸಮಯದಲ್ಲಿ ಯೂದಾಯ, ಗಲಿಲಾಯ, ಸಮಾರ್ಯದಲ್ಲೆಲ್ಲಾ ಇದ್ದ ಸಭೆ ಸಮಧಾನ ಹೊಂದಿತು. ಸಭೆ ಬಲಗೊಂಡು ಪವಿತ್ರಾತ್ಮನಿಂದ ಧೈರ್ಯಹೊಂದಿ ಸಂಖ್ಯೆಯಲ್ಲಿ ವರ್ಧಿಸುತ್ತಾ, ಕರ್ತನ ಭಯದಲ್ಲಿ ಮುನ್ನಡೆಯಿತು'* (9:31).
    3. ***ಅನ್ಯಜನರನ್ನು ತಲುಪಿದ ಮೊದಲ ವಿಸ್ತರಣೆ*** (9:32–12:24): *'ದೇವರ ವಾಕ್ಯವಾದರೋ ವೃದ್ಧಿಯಾಗುತ್ತಾ ಪ್ರಸಾರಗೊಂಡಿತು'* (12:24).
    4. ***ಅನ್ಯದೇಶಗಳನ್ನು ತಲುಪಿದ ಮೊದಲ ಭೌಗೋಳಿಕ ವಿಸ್ತರಣೆ*** (12:25–16:5): *'ಹೀಗೆ ಸಭೆಗಳು ವಿಶ್ವಾಸದಲ್ಲಿ ಬಲಗೊಂಡು ಸಂಖ್ಯೆಯಲ್ಲಿ ಅನುದಿನ ಹೆಚ್ಚುತ್ತಾ ಬಂದವು'* (16:5).
    5. ***ಪಶ್ಚಿಮದೆಡೆಗೆ ಯೂರೋಪಿಗೆ*** ಮುಂದುವರೆದ ಭೌಗೋಳಿಕ ವಿಸ್ತರಣೆ (16:6–19:20): *'ಹೀಗೆ ಕರ್ತನ ವಾಕ್ಯವು ವಿಸ್ತಾರವಾಗಿ ಹರಡುತ್ತಾ ಪ್ರಬಲವಾಯಿತು'* (19:20).
    6. ಪೌಲನನ್ನು ಮತ್ತು ಸುವಾರ್ತೆಯನ್ನು ***ರೋಮ್‌ಗೆ*** ತೆಗೆದುಕೊಂಡು ಹೋದ ಘಟನೆಗಳ ವಿವರಣೆ (19:21–28:31): *'ಅವನು ಧೈರ್ಯದಿಂದ ಯಾವ ಅಡ್ಡಿ ಆತಂಕಗಳಿಲ್ಲದೆ ದೇವರ ಸಾಮ್ರಾಜ್ಯವನ್ನು ಪ್ರಕಟಿಸುತ್ತಾ, ಕರ್ತನಾದ ಯೇಸು ಕ್ರಿಸ್ತನ ವಿಷಯವಾಗಿ ಉಪದೇಶ ಮಾಡುತ್ತಾ ಇದ್ದನು'* (28:31).

ಈ ಪಠ್ಯಪುಸ್ತಕವು ಈ ಮೂರನೆಯ ರಚನೆಯನ್ನು ಪಾಲಿಸುತ್ತದೆ. ಇದು ಆರು ಭಾಗಗಳನ್ನೊಳಗೊಂಡಿದೆ. ಪ್ರತಿಯೊಂದು ಭಾಗವು ಸುವಾರ್ತೆಯು ಒಂದು ಹೊಸ ದಿಕ್ಕಿನೆಡೆಗೆ, ಹೊಸ ಸ್ಥಳಗಳಿಗೆ ಮತ್ತು ಹೊಸ ಜನರಿಗೆ ವಿಸ್ತರಿಸಲ್ಪಟ್ಟದ್ದರ ಆರು ಚಿತ್ರಣಗಳಲ್ಲಿ ಒಂದನ್ನು ಹೊಂದಿದೆ. ಆದರೆ ನಮ್ಮ ಸತ್ಯವೇದಗಳು ಅದರ ಅಧ್ಯಾಯಗಳಲ್ಲಾಗಲಿ ಮತ್ತು ವಾಕ್ಯಭಾಗಗಳಲ್ಲಾಗಲಿ ಈ ರಚನೆಯನ್ನು ಪರಿಗಣಿಸುವುದೇ ಇಲ್ಲ. ಈ ಕಾರಣದಿಂದಲೇ ಅನುಭವಸ್ಥ ಸತ್ಯವೇದ ವಾಚಕರಿಗೂ ಇದನ್ನು ಕಂಡುಹಿಡಿಯುವುದು ಬಹಳ ಕಠಿಣವಾಗಿದೆ. ಆದರೆ ಒಮ್ಮೆ ನೀವು ಇದನ್ನು ಕಾಣುವುದಾದರೆ, ಆಗ ನಿಜವಾಗಲೂ ಎಲ್ಲವೂ ಅರ್ಥಗರ್ಭಿತವಾಗುತ್ತದೆ!

# ಅಪೋಸ್ತಲರ ಕೃತ್ಯಗಳ ಕಾಲಾನುಕ್ರಮಣಿಕೆ

ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ಕೆಲವು ಸಾಮಾನ್ಯವಾದ ಪ್ರಮುಖ ಐತಿಹಾಸಿಕ ಘಟನಾವಳಿಗಳು ತಿಳಿಸಲಾಗಿದೆ, ಅವುಗಳನ್ನು ವಿವಿಧ ಐತಿಹಾಸಿಕ ಮೂಲಗಳ ಮೂಲಕ ಕಾಲದಲ್ಲಿರಿಸಬಹುದು. ಅವುಗಳು ಯಾವುವೆಂದರೆ:

- ರಾಜನಾದ ಹೆರೋದ 1 ನೇ ಅಗ್ರಿಪ್ಪನ ಸಾವು (12:23) – ಕ್ರಿ. ಶ. 44
- ಎಲ್ಲಾ ಯೆಹೂದ್ಯರು ರೋಮ್ ಪಟ್ಟಣವನ್ನು ಬಿಟ್ಟು ಹೋಗಬೇಕೆಂದು ಚಕ್ರವರ್ತಿಯಾದ ಕ್ಲಾಡಿಯಸ್ ಆಜ್ಞೆ ಹೊರಡಿಸಿದ್ದು (18:1–2) – ಕ್ರಿ. ಶ. 49
- ಗಲ್ಲಿಯೋನನು ಕೊರಿಂಥದ ರಾಜ್ಯಪಾಲನಾಗಿದ್ದು (18:12) – ಕ್ರಿ. ಶ. 51
- ಸೆಜರೇಯದಲ್ಲಿ ಫೆಲಿಕ್ಸನ ರಾಜ್ಯಪಾಲ ಆಡಳಿತವು ಕೊನೆಗೊಂಡದ್ದು ಮತ್ತು ಫೆಸ್ತನು ಆತನ ನಂತರ ರಾಜ್ಯಪಾಲನಾಗಿ ಬಂದದ್ದು (24:27) – ಕ್ರಿ. ಶ. 59

ಈ ಸ್ಥಿರವಾದ ಕಾಲಗಳ ಸಹಾಯದಿಂದ ನಾವು ಅಪೋಸ್ತಲರ ಕೃತ್ಯಗಳ ಪುಸ್ತಕದ ಘಟನಾವಳಿಗಳ ಕಾಲನುಕ್ರಮಣಿಕೆಯನ್ನು ರಚಿಸಬಹುದು. ಹೇಗಿದ್ದರೂ, ಎಲ್ಲಾ ಸತ್ಯವೇದ ಶಾಸ್ತ್ರಜ್ಞರು ಈ ಕೆಳಗೆ ಕೊಡಲ್ಪಟ್ಟಿರುವ ಕಾಲನುಕ್ರಮಣಿಕೆಯ ಪ್ರತಿಯೊಂದು ವಿವರಣೆಯನ್ನು ಒಪ್ಪುವುದಿಲ್ಲ. ಉದಾಹರಣೆಗೆ ಎನ್.ಐ.ವಿ. ಸ್ಟಡಿ ಬೈಬಲ್ ನಾವು ಈ ಪಠ್ಯಪುಸ್ತಕದಲ್ಲಿ ಪಾಲಿಸುವ ಪೌಲನ ಜೀವನದ ಕಾಲಾನುಕ್ರಮಣಿಕೆಗಿಂತ ವ್ಯತ್ಯಾಸವಾದ ಕಾಲಾನುಕ್ರಮಣಿಕೆಯನ್ನು ನೀಡುತ್ತದೆ.

## ಕ್ರಿ.ಶ. 30

ಯೇಸು ಕ್ರಿಸ್ತನು ಸತ್ತು, ಸತ್ತವರೊಳಗಿಂದ ಎಬ್ಬಿಸಲ್ಪಟ್ಟು ಪರಲೋಕಾರೋಣ ಆಗುವುದಕ್ಕಿಂತ ಮುಂಚೆ ತನ್ನನ್ನು ತನ್ನ ಶಿಷ್ಯರಿಗೆ ತೋರ್ಪಡಿಸಿಕೊಂಡಿದ್ದು (ಲೂಕ. 24; ಅ. ಕೃ. 1:1–11). ಪಂಚಾಶತ್ತಮದ ಮೊದಲ ದಿನ (ಅ. ಕೃ. 2:1–41).

## ಕ್ರಿ.ಶ. 30–34

ಯೆಹೂದ್ಯ ಜನರ ಮಧ್ಯದಲ್ಲಿ ವಿಶ್ವಾಸಿಗಳ ಮೊಟ್ಟಮೊದಲ ಅನ್ಯೋನತೆಯು ಪ್ರಾರಂಭವಾಗಿದ್ದು (ಅ. ಕೃ. 2:42–47). ಯೆಹೂದ್ಯ ಮುಖಂಡರ ಮತ್ತು ವಿಶ್ವಾಸಿಗಳ ಮಧ್ಯೆ ಉಂಟಾದ ಘರ್ಷಣೆ. ಸ್ತೆಫನನು ಕಲ್ಲೆಸೆದು ಕೊಲ್ಲಲ್ಪಟ್ಟದ್ದು ಮತ್ತು ಸಭೆಯ ಚದುರಿ ಹೋಗಿದ್ದು (ಅ. ಕೃ. 3–8:3). ಹೀಗೆ ಯೆರೂಸಲೇಮಿನ ಹೊರಭಾಗದಲ್ಲಿಯೂ ಯೇಸುವಿನ ಕುರಿತಾದ ಸುವಾರ್ತೆಯು ಸಾರಲ್ಪಟ್ಟಿತ್ತು. ಫಿಲಿಪ್ಪನು ಸಮಾರ್ಯ ಮತ್ತು ಇತರೆ ಸ್ಥಳಗಳಲ್ಲಿ ಸೇವೆಮಾಡಿದನು (ಅ. ಕೃ. 8:4–40).

## ಕ್ರಿ.ಶ. 34–35

ಸಭೆಯನ್ನು ಹಾಳುಮಾಡಲು ಪೌಲನು ಯೆಹೂದ್ಯ ನಾಯಕರುಗಳಿಂದ ಅಧಿಕಾರವನ್ನು ಹೊಂದಿದನು (ಅ. ಕೃ. 8:3, 9:2). ದಮಸ್ಕದ ರಸ್ತೆಯಲ್ಲಿ ಯೇಸು ಕ್ರಿಸ್ತನು ಪೌಲನನ್ನು ಸಂಧಿಸಿದ್ದು ಮತ್ತು ಆತನನ್ನು ಅಪೊಸ್ತಲನನ್ನಾಗಿ ನೇಮಿಸಿದ್ದು (ಅ. ಕೃ. 9:1–22).

## ಕ್ರಿ.ಶ 35–37

ದಮಸ್ಕದಲ್ಲಿ ನಂತರ ಅರೇಬಿಯದಲ್ಲಿ ಮತ್ತೆ ಪುನಃ ದಮಸ್ಕದಲ್ಲಿ ಪೌಲನು (ಅ. ಕೃ. 9:23–25; ಗಲಾತ್ಯ. 1:13–17).

## ಕ್ರಿ.ಶ. 37–47

ಯೆರೂಸಲೇಮಿನ ಸಭೆಯು ಪೌಲನನ್ನು ತನ್ನ ಸ್ವಂತ ಸ್ಥಳವಾದ ತಾರ್ಸಕ್ಕೆ ಕಳುಹಿಸಿದ್ದು (ಅ. ಕೃ. 9:30, ಗಲಾತ್ಯ. 1:21) ಆತನು ಅಲ್ಲಿ ಸೇವೆ ಮಾಡಿದ್ದು.

## ಕ್ರಿ.ಶ. 37–47

ಪೇತ್ರನು ಮೆಡಿಟೆರೆನಿಯನ್ ಕರಾವಳಿ ಪ್ರದೇಶಗಳಾದ ಲುದ್ದ, ಯೊಪ್ಪ ಮತ್ತು ಸೆಜರೇಯಗಳಲ್ಲಿ (ಕೊರ್ನೇಲ್ಯನ ಮನೆ) ಮಾಡಿದ ಅದ್ಭುತವಾದ ಸೇವೆ – ಈ ಸೇವೆಯು ಯೆರೂಸಲೇಮಿನ ಸಭೆಯಲ್ಲಿ ವಾಗ್ವಾದ ಉಂಟಾಗುವುದಕ್ಕೆ ಕಾರಣವಾಗಿತ್ತು (ಅ. ಕೃ. 9:31–11:18).

## ಕ್ರಿ.ಶ. 43

ಸಿರಿಯಾದ ಅಂತಿಯೋಕ್ಯದಲ್ಲಿ ಸಭೆಯ ಸ್ಥಾಪನೆ (ಅ. ಕೃ. 11:9–24).

## ಕ್ರಿ.ಶ. 43–44

ರಾಜನಾದ ಹೆರೋದ 1ನೇ ಅಗ್ರಿಪ್ಪನು ಯೋಹಾನನ ಸಹೋದರನಾದ ಯಾಕೋಬನನ್ನು ಕೊಲ್ಲಿಸಿ ಪೇತ್ರನನ್ನು ಸೆರೆಮನೆಯಲ್ಲಿ ಹಾಕಿಸಿದ್ದು. ಆ ರಾಜನು ತನ್ನ ಗರ್ವದ ನಿಮಿತ್ತ ಸತ್ತು ಹೋಗಿದ್ದು (ಅ. ಕೃ. 12:1–23).

## ಕ್ರಿ.ಶ. 44

ಚಕ್ರವರ್ತಿಯಾದ ಕ್ಲಾಡಿಯಸ್‌ನ ಆಳ್ವಿಕೆಯ ಅವಧಿಯಲ್ಲಿ ರೋಮ್ ಸಾಮ್ರಾಜ್ಯದಲ್ಲೆಲ್ಲಾ ಭೀಕರ ಕ್ಷಾಮ ಉಂಟಾಗುವದೆಂದು ಅಗಬನು ಪ್ರವಾದಿಸಿದ್ದು (ಅ. ಕೃ. 11:27–28). ಕ್ರಿ. ಶ. 46–48 ರಲ್ಲಿ ಯೂದಾಯದಲ್ಲಿ ಉಂಟಾದ ಕ್ಷಾಮ.

## ಕ್ರಿ.ಶ. 47–48

ಬಾರ್ನಬನು ಪೌಲನನ್ನು ತನ್ನ ಸೇವೆಯಲ್ಲಿ ಸಹಾಯ ಮಾಡುವುದಕ್ಕಾಗಿ ತಾರ್ಸದಿಂದ ಕರೆದುಕೊಂಡು ಬಂದದ್ದು, ಅವರಿಬ್ಬರೂ ಒಂದು ವರ್ಷದ ಕಾಲ ಅಂತಿಯೋಕ್ಯದಲ್ಲಿ ಒಟ್ಟಾಗಿ ಸೇವೆ ಮಾಡಿದ್ದು (ಅ. ಕೃ. 11:25–26).

## ಕ್ರಿ.ಶ. 48–49

ಪೌಲನ ಮೊದಲ ಸೇವಾ ಪ್ರಯಾಣ (ಅ. ಕೃ. 13:1–14:28). ಬಾರ್ನಬನು ಮತ್ತು (ಅಲ್ಪ ಸಮಯದವರೆಗೆ) ಮಾರ್ಕನೆಂಬ ಯೋಹಾನನು ಆತನ ಸಂಗಡ ಹೋದದ್ದು. ಪಿಸಿದ್ಯದ ಅಂತಿಯೋಕ್ಯ, ಇಕೋನಿಯ, ಲುಸ್ತ್ರ ಮತ್ತು ದೆರ್ಬೆಗಳಲ್ಲಿ ಸಭೆಗಳ ಸ್ಥಾಪನೆ. ಪೌಲ ಮತ್ತು ಬಾರ್ನಬರು ಸಿರಿಯಾದ ಅಂತಿಯೋಕ್ಯಕ್ಕೆ ಹಿಂತಿರುಗಿದ್ದು.

## ಕ್ರಿ.ಶ. 49

ಪೌಲ ಮತ್ತು ಬಾರ್ನಬರು ಯೆರೂಸಲೇಮಿನ ಮೊದಲ ಸಭಾ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದು (ಅ. ಕೃ. 15). ಅದೇ ವರ್ಷದಲ್ಲಿ ಎಲ್ಲಾ ಯೆಹೂದ್ಯರು ರೋಮ್ ಪಟ್ಟಣವನ್ನು ಬಿಟ್ಟು ಹೋಗಬೇಕೆಂದು ಚಕ್ರವರ್ತಿಯಾದ ಕ್ಲಾಡಿಯಸ್‌ನು ಆಜ್ಞೆ ಹೊರಡಿಸಿದ್ದು. ಇದರ ಪರಿಣಾಮವಾಗಿ ಪ್ರಿಸ್ಕಿಲ ಮತ್ತು ಅಕ್ವಿಲರು ಕೊರಿಂಥಕ್ಕೆ ಬಂದದ್ದು (ಅ. ಕೃ. 18:1–2).

## ಕ್ರಿ.ಶ. 50–52

ಪೌಲನ ಎರಡನೆಯ ಸೇವಾ ಪ್ರಯಾಣ, ಈ ಬಾರಿ ಆತನು ಸೀಲನೊಂದಿಗೆ ಹೋದದ್ದು. ಲುಸ್ತ್ರದಲ್ಲಿ ತಿಮೊಥೆ ಮತ್ತು ತ್ರೋವದಲ್ಲಿ ಲೂಕನು ಅವರೊಂದಿಗೆ ಸೇರಿಕೊಂಡಿದ್ದು. ಫಿಲಿಪ್ಪಿ, ಥೆಸಲೋನಿಕ, ಬೆರಿಯಾ, ಅಥೆನ್ಸ್ ಮತ್ತು ಕೊರಿಂಥಗಳಲ್ಲಿ (ಇಲ್ಲಿ ಅವರು ಹೆಚ್ಚಿನ ಸಮಯ ಕಳೆದರು) ಸಭೆಗಳ ಸ್ಥಾಪನೆ. **ಕ್ರಿ. ಶ. 51 ರಲ್ಲಿ** ಪೌಲನು ರಾಜ್ಯಪಾಲನಾದ ಗಲ್ಲಿಯೋನನ ಮುಂದೆ ಕೊರಿಂಥದ ನ್ಯಾಯಾಲಯದಲ್ಲಿ ಕರೆತರಲ್ಪಟ್ಟದ್ದು (ಅ. ಕೃ. 18:12–17). ಅವರು ಅಂತಿಯೋಕ್ಯಕ್ಕೆ ಹಿಂತಿರುಗಿದ್ದು (ಅ. ಕೃ. 15:36–18:23).

**ಕ್ರಿ.ಶ. 53–57**

ಪೌಲನ ಸುವಾರ್ತೆಯ ಸೇವಾ ಪ್ರಯಾಣ. ಅವರು ಗಲಾತ್ಯವನ್ನು ಹಾದು ಎಫೆಸಕ್ಕೆ ಪ್ರಯಾಣ ಮಾಡಿದ್ದು, ಅಲ್ಲಿ ಅವರು ಅನೇಕ ದಿನಗಳವರೆಗೆ ತಂಗಿದ್ದರು. ನಂತರ ಅವರು ಕೊರಿಂಥಕ್ಕೆ ಹೋದರು. ಪ್ರಯಾಣವು ಯೆರೂಸಲೇಮಿನಲ್ಲಿ ಕೊನೆಗೊಂಡಿದ್ದು (ಅ. ಕೃ. 18:23–21:26).

**ಕ್ರಿ.ಶ 57–59**

ಯೆರೂಸಲೇಮಿನಲ್ಲಿ ಗಲಭೆ. ಪೌಲನು ಬಂಧಿಸಲ್ಪಟ್ಟಿದ್ದು. ಪೌಲನನ್ನು ಕೊಲ್ಲಲು ಒಳಸಂಚುಮಾಡಿದ್ದು. ಪೌಲನನ್ನು ಸೆಜರೇಯಕ್ಕೆ ವರ್ಗಾಯಿಸಿದ್ದು (ಅ. ಕೃ. 21:27–23:35). ರಾಜ್ಯಪಾಲನಾದ ಫೆಲಿಕ್ಸನ ಮುಂದೆ ವಿಚಾರಣೆ (ಅ. ಕೃ. 24). ಪೌಲನು ರಾಜ್ಯಪಾಲನಾದ ಫೆಲಿಕ್ಸನ ಆಳ್ವಿಕೆಯ ಅವಧಿಯಲ್ಲಿ ಸೆಜರೇಯದ ಸೆರೆಮನೆಯಲ್ಲಿ ಎರಡು ವರ್ಷಗಳನ್ನು ಕಳೆದಿದ್ದು (ಅ. ಕೃ. 24:27). ಕ್ರಿ. ಶ. 59 ರಲ್ಲಿ ಫೆಸ್ತನು ರಾಜ್ಯಪಾಲನಾಗಿದ್ದು. ಪೌಲನು ಫೆಸ್ತನ ಮುಂದೆ ವಿಚಾರಣೆಗೆ ಒಳಗಾಗಿದ್ದು ಮತ್ತು ರಾಜನಾದ ಅಗ್ರಿಪ್ಪನ ಮುಂದೆ ನಿಂತುಕೊಂಡಿದ್ದು (ಅ. ಕೃ. 25–26).

**ಕ್ರಿ.ಶ. 59–60**

ರೋಮನ್ ಚಕ್ರವರ್ತಿಗೆ ಮನವಿ ಮಾಡಿಕೊಂಡ ಪೌಲನು ಇಟಲಿಗೆ ಹಡಗಿನ ಮೂಲಕ ವರ್ಗಾಯಿಸಲ್ಪಟ್ಟಿದ್ದು. ಸಮುದ್ರ ಪ್ರಯಾಣದಲ್ಲಿ (ಲೂಕ ಮತ್ತು ಇತರರು ಆತನೊಂದಿಗೆ ಪ್ರಯಾಣಿಸಿದರು) ಹಡಗು ಮಾಲ್ಟದಲ್ಲಿ ಒಡೆದು ಹೋದದ್ದು. ಬಹುಶಃ ಕ್ರಿ. ಶ. 60 ರ ಫೆಬ್ರವರಿಯಲ್ಲಿ ಪೌಲನು ರೋಮ್‌ನ್ನು ತಲುಪಿದ್ದು (ಅ. ಕೃ. 27:1–28:16).

**ಕ್ರಿ.ಶ. 60 –62**

ಪೌಲನು ರೋಮ್‌ನಲ್ಲಿ ಎರಡು ವರ್ಷಗಳ ಕಾಲ ಗೃಹಬಂಧನದಲ್ಲಿದ್ದದ್ದು (ಅ. ಕೃ. 28:17–31).

# ಅಪೋಸ್ತಲರ ಕೃತ್ಯಗಳು ಮತ್ತು ಪೌಲನ ಪತ್ರಿಕೆಗಳು

ಲೂಕನು ಅಪೋಸ್ತಲರ ಕೃತ್ಯಗಳಲ್ಲಿ ಪೌಲನು ಪತ್ರಿಕೆಗಳನ್ನು ಬರೆದದ್ದರ ಕುರಿತು ಯಾವ ಮಾಹಿತಿಯನ್ನೂ ತಿಳಿಸದಿರುವುದು ಅತ್ಯಂತ ಗಮನಾರ್ಹವಾದ ಸಂಗತಿಯಾಗಿದೆ. ಇದಕ್ಕೆ ಒಂದು ಕಾರಣ ಲೂಕನು ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಆದಿಸಭೆಯ ಇತಿಹಾಸದ ಪ್ರಾರಂಭದಲ್ಲಿ ಬರೆದಿರಬಹುದು ಮತ್ತು ಪೌಲನು ತನ್ನ ಪತ್ರಿಕೆಗಳ ಕುರಿತು ಆಗ ಇನ್ನೂ ಪ್ರಖ್ಯಾತಿಗೊಂಡಿರಲಿಲ್ಲ.

ಆದರೆ ನಾವು ಪೌಲನ ಸ್ವಂತ ಬರವಣಿಗೆಯಿಂದಲೇ ತಿಳಿಯುವುದೇನೆಂದರೆ – ಮೊದಲನೆಯ ಸೇವಾ ಪ್ರಯಾಣಕ್ಕಾಗಿ ಪೌಲನು ಬಾರ್ನಬನೊಂದಿಗೆ ಅಂತಿಯೋಕ್ಯವನ್ನು ಬಿಟ್ಟ ದಿನದಿಂದ ಅಪೋಸ್ತಲರ ಕೃತ್ಯಗಳ ಪುಸ್ತಕವು ಕೊನೆಗೊಳ್ಳುವ ಆತನ ರೋಮ್‌ನಲ್ಲಿನ ಮೊದಲ ಸೆರೆಮನೆವಾಸದವರೆಗಿನ ಲೂಕನು ದಾಖಲಿಸುವ 14 ವರ್ಷಗಳ ಅವಧಿಯಲ್ಲಿ – ಪೌಲನು ಕೇವಲ ಪ್ರಯಾಣಿಸುವುದರಲ್ಲಿ, ಯೆಹೂದ್ಯ ಸಭಾಮಂದಿರಗಳಲ್ಲಿ ಬೋಧಿಸುವುದರಲ್ಲಿ, ಅನ್ಯರಿಗೆ ಸುವಾರ್ತೆಯನ್ನು ಸಾರುವುದರಲ್ಲಿ, ಸೆಜರೇಯದ ಮತ್ತು ರೋಮ್‌ನ ಸೆರೆಮನೆಗಳಲ್ಲಿ ಸಮಯವನ್ನು ಕಳೆದದ್ದು ಮಾತ್ರವಲ್ಲದೆ ಆತನು ಈ 14 ವರ್ಷಗಳ ಅವಧಿಯಲ್ಲಿ ತನ್ನ ಅನೇಕ ಪತ್ರಿಕೆಗಳನ್ನು ಬರೆದನು.

ಅಪೋಸ್ತಲರ ಕೃತ್ಯಗಳ ಕಾಲಾನುಕ್ರಮಣಿಕೆಯು ಸ್ವಲ್ಪಮಟ್ಟಿಗೆ ನಿಶ್ಚಿತವಾಗಿದೆ ಮತ್ತು ಸತ್ಯವೇದ ಶಾಸ್ತ್ರಜ್ಞರು ಪ್ರಮುಖ ಅಂಶಗಳನ್ನು ಹೆಚ್ಚು ಕಡಿಮೆ ಒಪ್ಪಿಕೊಳ್ಳುತ್ತಾರೆ. ಆದರೆ ಈ ಕಾಲಾನುಕ್ರಮಣಿಕೆಯಲ್ಲಿ ಪೌಲನ ಪತ್ರಿಕೆಗಳನ್ನು ಎಲ್ಲಿ ಇರಿಸಬೇಕೆಂಬುದರ ಕುರಿತು ಸ್ವಲ್ಪ ಭಿನ್ನಾಭಿಪ್ರಾಯವಿದೆ. ನಿಶ್ಚಯವಾಗಲೂ ಇದಕ್ಕೆ ಕಾರಣವೇನೆಂದರೆ, ಪೌಲನ ಪತ್ರಿಕೆಗಳ ಕುರಿತು ಅಪೋಸ್ತಲರ ಕೃತ್ಯಗಳಲ್ಲಿ ಎಲ್ಲಿಯೂ ತಿಳಿಸಲ್ಪಟ್ಟಿಲ್ಲ.

***ಗಲಾತ್ಯದವರಿಗೆ*** ಬರೆದ ಪತ್ರಿಕೆಯ ದಿನಾಂಕವು ಒಂದು ಅತೀ ದೊಡ್ಡ ವಿವಾದವಾಗಿದೆ: ಅದು ಕ್ರಿ. ಶ. 49 ರಲ್ಲಿ ನಡೆದ ಯೆರೂಸಲೇಮ್ ಸಮ್ಮೇಳನಕ್ಕಿಂತಲೂ ಮುಂಚೆ ಸಿರಿಯಾದ ಅಂತಿಯೋಕ್ಯದಿಂದ ಬರೆಯಲ್ಪಟ್ಟಿತೋ ಅಥವಾ ಕ್ರಿ. ಶ. 50–52 ರಲ್ಲಿ ಪೌಲನ ಎರಡನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ಆತನು ಕೊರಿಂಥದಲ್ಲಿ ಅನೇಕ ದಿನಗಳ ಕಾಲ ತಂಗಿದ್ದಾಗ ಅಲ್ಲಿಂದ ಬರೆಯಲ್ಪಟ್ಟಿತೋ ಅಥವಾ ಕ್ರಿ. ಶ. 53–55 ರಲ್ಲಿ ಆತನ ಮೂರನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ಆತನು ಎಫೆಸದಲ್ಲಿ ಅನೇಕ ದಿನಗಳ ಕಾಲ ತಂಗಿದ್ದಾಗ ಅಲ್ಲಿಂದ ಬರೆಯಲ್ಪಟ್ಟಿತೋ?

ಪೌಲನ ಪತ್ರಿಕೆಗಳ ಕುರಿತು ನಾನು ಈ ಕೆಳಗಿನ ಕಾಲಾನುಕ್ರಮಣಿಕೆಯನ್ನು ಸೂಚಿಸುತ್ತೇನೆ:

ಕ್ರಿ. ಶ. 50–52 ರಲ್ಲಿ ಪೌಲನ ಎರಡನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ಬರೆಯಲ್ಪಟ್ಟ ಪತ್ರಿಕೆಗಳು:

1. ಕೊರಿಂಥದಿಂದ (ಅಥವಾ ಅಥೆನ್ಸ್‌ನಿಂದ) 1 ಥೆಸಲೋನಿಕದವರಿಗೆ
2. ಕೊರಿಂಥದಿಂದ 2 ಥೆಸಲೋನಿಕದವರಿಗೆ

ಕ್ರಿ. ಶ. 53–57 ರಲ್ಲಿ ಪೌಲನು ಮಾಡಿದ ಮೂರನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ಬರೆಯಲ್ಪಟ್ಟ ಪತ್ರಿಕೆಗಳು:

3. ಎಫೆಸದಿಂದ ಗಲಾತ್ಯದವರಿಗೆ

4. ಎಫೆಸದಿಂದ 1 ಕೊರಿಂಥದವರಿಗೆ
5. ಮೆಕದೋನಿಯದಿಂದ 2 ಕೊರಿಂಥದವರಿಗೆ
6. ಕೊರಿಂಥದಿಂದ ರೋಮಾಪುರದವರಿಗೆ

ಕ್ರಿ. ಶ. 60–62 ರಲ್ಲಿ ರೋಮ್‌ನಲ್ಲಿ ಪೌಲನ ಮೊದಲನೆಯ ಸೆರೆಮನೆವಾಸದ ಸಂದರ್ಭದಲ್ಲಿ ಬರೆಯಲ್ಪಟ್ಟ ಪತ್ರಿಕೆಗಳು:

7. ಕೊಲೊಸ್ಸೆಯವರಿಗೆ
8. ಫಿಲೆಮೋನನಿಗೆ
9. ಎಫೆಸದವರಿಗೆ
10. ಫಿಲಿಪ್ಪಿಯವರಿಗೆ

ಕ್ರಿ. ಶ. 62–65 ರಲ್ಲಿ ಪೌಲನು ಮಾಡಿದ ನಾಲ್ಕನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ಬರೆಯಲ್ಪಟ್ಟ ಪತ್ರಿಕೆಗಳು:

11. ಮೆಕದೋನಿಯದಿಂದ 1 ತಿಮೊಥೆಯನಿಗೆ
12. ನಿಕೊಪೊಲಿಸ್‌ನಿಂದ ತೀತನಿಗೆ

ಕ್ರಿ. ಶ. 65–66 ರಲ್ಲಿ ಪೌಲನ ಎರಡನೆಯ ಸೆರೆಮನೆವಾಸದ ಸಂದರ್ಭದಲ್ಲಿ ಬರೆಯಲ್ಪಟ್ಟ ಪತ್ರಿಕೆ:

13. 2 ತಿಮೋಥೆಯನಿಗೆ

# ಅಪೊಸ್ತಲರ ಕೃತ್ಯಗಳ ನಂತರ ಪೌಲನ ಜೀವನ

ಅಪೊಸ್ತಲರ ಕೃತ್ಯಗಳು ಪೌಲನ ಎರಡು ವರ್ಷಗಳ ಅವಧಿಯ ರೋಮ್ ಗೃಹಬಂಧನದೊಂದಿಗೆ ಕೊನೆಗೊಳ್ಳುತ್ತದೆ (ಕ್ರಿ. ಶ. 60–62). ಆದರೆ ಇದು ಪೌಲನ ಜೀವಿತದ ಕೊನೆ ಆಗಿರಲಿಲ್ಲವೆಂಬುದು ಆತನ ನಂತರದ ಪತ್ರಿಕೆಗಳಿಂದ ನಮಗೆ ತಿಳಿದುಬರುತ್ತದೆ. ಇದರ ನಂತರ ಆತನ ಸೇವೆಯು ಇನ್ನೂ ಕೆಲವು ವರ್ಷಗಳವರೆಗೆ ಮುಂದುವರೆಯಿತು. ಆದರೆ ಪೌಲನ ಜೀವಿತದ ಕೊನೆಯ ಅವಧಿಯ ಕುರಿತಾದ ಮಾಹಿತಿಯು ಅಷ್ಟು ಸ್ಪಷ್ಟವಾಗಿಲ್ಲ ಅಥವಾ ಪೂರ್ಣವಾಗಿಲ್ಲ.

ಆದಿಸಭೆಯ ಇತಿಹಾಸದ ಪ್ರಕಾರ ಪೌಲನು ನಿರೋ ಚಕ್ರವರ್ತಿಯ ಅಡಿಯಲ್ಲಿ ರೋಮ್‌ನಲ್ಲಿ ರಕ್ತ ಸಾಕ್ಷಿಯಾಗಿ ಸತ್ತನು. ಕ್ರಿ. ಶ. 64 ರಲ್ಲಿ ರೋಮ್‌ನ ಬಹುತೇಕ ಭಾಗವು ಬೆಂಕಿಯಿಂದ ನಾಶವಾಯಿತು. ಸ್ವತಃ ನಿರೋ ಚಕ್ರವರ್ತಿಯೇ ಆ ಬೆಂಕಿಯನ್ನು ಹೊತ್ತಿಸಿದ್ದನು ಎಂಬ ವದಂತಿಗಳಿವೆ. ಆತನು ಜನರ ಗಮನವನ್ನು ತನ್ನಿಂದ ಬೇರೆಡೆಗೆ ಸೆಳೆಯಲು ಈ ಆಪಾದನೆಯನ್ನು ಕ್ರೈಸ್ತರ ಮೇಲೆ ಹಾಕಿದನು ಮತ್ತು ಬಹುಶಃ ಕ್ರಿ. ಶ. 66 ರ ಸುಮಾರಿನಲ್ಲಿ ಅವರ ವಿರುದ್ಧವಾಗಿ ಹಿಂಸೆಯನ್ನು ಪ್ರಾರಂಭಿಸಿದನು. ಸಂಪ್ರದಾಯವು ತಿಳಿಸುವುದೇನೆಂದರೆ, ಪೇತ್ರನನ್ನು (ಆತನ ಸ್ವಂತ ಮನವಿಯಂತೆ) ತಲೆಕೆಳಗಾಗಿ ಶಿಲುಬೆಗೆ ಹಾಕಲಾಯಿತು ಮತ್ತು ಪೌಲನು ಕ್ರೂಜೆಗೆ ಹಾಕಲ್ಪಡುವುದನ್ನು ತಿರಸ್ಕರಿಸುವ ಹಕ್ಕುಳ್ಳ ಒಬ್ಬ ರೋಮನ್ ಪ್ರಜೆಯಾಗಿದ್ದರಿಂದ ಆತನಿಗೆ ಶಿರಚ್ಛೇಧನ ಮಾಡಲಾಯಿತು.

ಅನೇಕ ಸತ್ಯವೇದ ಶಾಸ್ತ್ರಜ್ಞರು ಕ್ರಿ. ಶ. 62–65 ರ ಕಾಲವನ್ನು 'ಪೌಲನ ನಾಲ್ಕನೆಯ ಸೇವಾ ಪ್ರಯಾಣ' ಎಂದು ಕರೆಯುತ್ತಾರೆ. ಇದು ಪೌಲನ ರೋಮ್‌ನಲ್ಲಿನ ಮೊದಲ ಸೆರೆಮನೆವಾಸದ (ಗೃಹಬಂಧನದ) ಮತ್ತು ತನ್ನ ಮರಣದ ಮುಂಚೆ ರೋಮ್‌ನಲ್ಲಿನ ಆತನ ಎರಡನೆಯ ಸೆರೆಮನೆವಾಸದ (ಕ್ರಿ. ಶ. 65–66) ನಡುವಿನ ಕಾಲವಾಗಿದೆ. ಪೌಲನು ಶಿರಚ್ಛೇಧನ ಹೊಂದುವುದಕ್ಕಿಂತ ಸ್ವಲ್ಪ ಸಮಯ ಮುಂಚೆ ತನ್ನ ಕೊನೆಯ ಪತ್ರಿಕೆಯಾದ 2 ನೇ ತಿಮೋಥೆಯನಿಗೆ ಬರೆದ ಪತ್ರಿಕೆಯನ್ನು ಬರೆದಿರಬೇಕು.

ಪೌಲನು ತನ್ನ ನಾಲ್ಕನೆಯ ಸೇವಾ ಪ್ರಯಾಣದ ಸಂದರ್ಭದಲ್ಲಿ ವ್ಯಾಪಕವಾಗಿ ಪ್ರಯಾಣಿಸಿರಬೇಕು. ರೋಮ್ ಪ್ರಾಂತ್ಯದ ಏಷ್ಯಾ ಭಾಗದ ರಾಜಧಾನಿಯಾದ ಎಫೆಸವು 1 ತಿಮೋಥೆ. 1:3 ರಲ್ಲಿ ತಿಳಿಸಲ್ಪಟ್ಟಿದೆ. 1 ತಿಮೋಥೆಯ ಪತ್ರಿಕೆಯು ಬಹುಶಃ ಮೆಕೆದೋನಿಯದಿಂದ ಬರೆಯಲ್ಪಟ್ಟಿರಬಹುದು (1 ತಿಮೋಥೆ. 1:3) ಮತ್ತು ಗ್ರೀಸ್‌ನ ನಿಕೊಪೊಲಿಸ್‌ನಿಂದ ತೀತನಿಗೆ ಬರೆದ ಪತ್ರಿಕೆಯು ಬರೆಯಲ್ಪಟ್ಟಿರಬಹುದು (ತೀತನು. 3:12). ಬಹುಶಃ ಸ್ಪೇನ್ ದೇಶಕ್ಕೆ ಭೇಟಿಕೊಡಬೇಕೆಂಬ ಆತನ ಬಯಕೆಯೂ ಸಹ ಈಡೇರಿರಬಹುದು (ರೋಮಾ. 15:24, 28).

# ಅಪೋಸ್ತಲರ ಕೃತ್ಯಗಳ ಮೂರು ಪಠ್ಯ ಆವೃತ್ತಿಗಳು

ಹೊಸ ಒಡಂಬಡಿಕೆಯ ಪುಸ್ತಕಗಳ ಮೂಲ ಪ್ರತಿಯು ಯಾವುದೇ ಸನ್ನಿವೇಶದಲ್ಲಿಯೂ ನಮ್ಮ ದಿನಗಳವರೆಗೆ ಉಳಿದುಕೊಂಡಿಲ್ಲ. ಹಾಗಾಗಿ ನಮ್ಮ ಬಳಿಯಲ್ಲಿ ಇರುವ ಪ್ರತಿಗಳು ಇತರೆ ಕೈಬರಹ ಪ್ರತಿಗಳಿಂದ ನಕಲು ಮಾಡಲ್ಪಟ್ಟ ಕೈಬರಹ ಪ್ರತಿಗಳಾಗಿವೆ. ಆಧುನಿಕ ಸತ್ಯವೇದ ಶಾಸ್ತ್ರಜ್ಞರುಗಳಿಗೆ ಅಭ್ಯಸಿಸಲು ಮತ್ತು ಹೋಲಿಸಲು ಅಪೋಸ್ತಲರ ಕೃತ್ಯಗಳ ಇಂತಹ ಅನೇಕ ಹಳೆಯ ಪ್ರತಿಗಳು ಇವೆ.

ಅಪೋಸ್ತಲರ ಕೃತ್ಯಗಳ ಮೂಲಪ್ರತಿಗಳನ್ನು ಮೂರು ಮುಖ್ಯ ಗುಂಪುಗಳಾಗಿ ವಿಂಗಡಿಸಬಹುದು:

1. ಬಿಜ಼ಂಟೀನ್ ಪಠ್ಯ: ಈ ಪಠ್ಯ–ವಿಧವನ್ನು ಆನಂತರದ (ಸುಮಾರು ಕ್ರಿ. ಶ. 400 ರ ಮತ್ತು ಆನಂತರದ) ಮೂಲಪ್ರತಿಗಳಲ್ಲಿ ಮಾತ್ರ ಕಾಣಬಹುದು. ಉಳಿದ ಎರಡು ಪಠ್ಯ–ವಿಧಗಳಿಗಿಂತ ಇದರ ಭಾಷೆಯು ಹೆಚ್ಚು ಮೆರಗುಳ್ಳದ್ದಾಗಿದೆ. ಹಾಗಾಗಿ ಇದು ಆನಂತರದ ಪಠ್ಯವೆಂದೂ ಮತ್ತು ಲೂಕನ ಮೂಲ ಪಠ್ಯವು ಪರಿಷ್ಕರಿಸಲ್ಪಟ್ಟಿದೆ ಮತ್ತು ಸುಧಾರಿಸಲ್ಪಟ್ಟಿದೆ ಎಂಬುದನ್ನೂ ಇದು ಸೂಚಿಸುತ್ತದೆ. ಆಂಗ್ಲಭಾಷೆಯ *ಕಿಂಗ್ ಜೇಮ್ಸ್ ವರ್ಶನ್* ಅನುವಾದವು ಈ ಪಠ್ಯದ ಮೇಲೆ ಆಧರಿಸಲ್ಪಟ್ಟಿದೆ.
2. ಅಲೆಗ್ಸಾಂಡ್ರಿಯನ್ ಪಠ್ಯ: ಈ ಪಠ್ಯ–ವಿಧವು ಅತ್ಯಂತ ಸಂಕ್ಷಿಪ್ತವಾದ ಪಠ್ಯವನ್ನು ಹೊಂದಿದೆ. ಇದು ಅತ್ಯಂತ ಹಳೆಯ ಮತ್ತು ಐತಿಹಾಸಿಕವಾಗಿ ಅತ್ಯಂತ ನಂಬಲರ್ಹವಾದ ಪಠ್ಯ ಎಂಬುದಾಗಿ ಇದನ್ನು ಅನೇಕ ಸತ್ಯವೇದ ಶಾಸ್ತ್ರಜ್ಞರು ಪರಿಗಣಿಸುತ್ತಾರೆ. ಹಾಗಾಗಿ ಇದು ಬಹುಶಃ ಲೂಕನ ಮೂಲ ಹಸ್ತಪ್ರತಿಗೆ ಅತ್ಯಂತ ಸಮೀಪವಾದ ಪಠ್ಯ–ವಿಧವಾಗಿದೆ. ಆಂಗ್ಲಭಾಷೆಯ *ನ್ಯೂ ಇಂಟರ್‌ನ್ಯಾಷನಲ್ ವರ್ಶನ್* ಮತ್ತು ಅನೇಕ ಇತರೆ ಆಧುನಿಕ ಅನುವಾದಗಳು ಈ ಪಠ್ಯದ ಆಧರಿಸಲ್ಪಟ್ಟಿವೆ.
3. ಪಾಶ್ಚಾತ್ಯ ಪಠ್ಯ: ಈ ಪಠ್ಯ–ವಿಧವು ಅಲೆಗ್ಸಾಂಡ್ರಿಯನ್ ಪಠ್ಯಕ್ಕಿಂತ ಶೇಕಡ ಹತ್ತರಷ್ಟು ದೊಡ್ಡದಾಗಿದೆ. ಆದರೆ ಇದರಲ್ಲಿ ಯಾವುದೇ ಹೆಚ್ಚಿನ ಕಥೆಗಳಿಲ್ಲ. ಕೆಲವು ಪದಗಳು ಮತ್ತು ಪದಸಮುಚ್ಚಯಗಳು (ಕೆಲವೊಮ್ಮೆ ಪೂರ್ಣ ವಾಕ್ಯಗಳು) ಮಾತ್ರ ಹೆಚ್ಚಾಗಿ ಸೇರಿಸಲ್ಪಟ್ಟಿವೆ, ಇವುಗಳು ಹೆಚ್ಚಿನ ವಿವರಗಳನ್ನು ಅಥವಾ ಟಿಪ್ಪಣಿಗಳನ್ನು ಒದಗಿಸುತ್ತವೆ. ಇದಕ್ಕೆ ಒಂದು ಉದಾಹರಣೆ ಅ. ಕೃ. 20:13 ರಲ್ಲಿ ಕಂಡುಬರುತ್ತದೆ, ಅದರಲ್ಲಿ ಲೂಕನ ಹೆಸರು ತಿಳಿಸಲ್ಪಟ್ಟಿದೆ: *'ನಾನು, ಅಂದರೆ ಲೂಕನು ಮತ್ತು ನನ್ನೊಂದಿಗಿದ್ದ ಉಳಿದವರು ಮುಂದೆ ಹಡಗು ಇದ್ದ ಸ್ಥಳಕ್ಕೆ ಹೋಗಿ ಅಸ್ಸೋಸ್ ಎಂಬಲ್ಲಿಗೆ ಸಮುದ್ರ ಪ್ರಯಾಣ ಮಾಡಿದೆವು'.*

## ಹೆಲೆನಿಸಮ್

ತನ್ನ ತಂದೆಯಾದ ಮಕೆದೋನಿಯದ ಫಿಲಿಪ್ಪನ ನಂತರ ಅಲೆಗ್ಸಾಂಡರನು ಅತೀ ಚಿಕ್ಕ ವಯಸ್ಸಿನಲ್ಲಿ ಅರಸನಾದನು. ಆ ಸಮಯದಲ್ಲಿ ಫಿಲಿಪ್ಪನು ಇಡೀ ಗ್ರೀಸ್ ಪರ್ಯಾಯ ದ್ವೀಪದ ಸೋಲಿಲ್ಲದ ಸರದಾರನಾಗಿದ್ದನು. ಅಲೆಗ್ಸಾಂಡರನು 13 ವರ್ಷಗಳ ಅವಧಿಯಲ್ಲಿ ಗ್ರೀಸ್ ಮತ್ತು ಭಾರತದ ನಡುವೆ ಇದ್ದ ಎಲ್ಲಾ ದೇಶಗಳನ್ನು ಸ್ವಾಧೀನಪಡಿಸಿಕೊಂಡನು. ಇದೇ ಸ್ಥಳವನ್ನು ಇಂದು ನಾವು ಮಧ್ಯಪೂರ್ವ ದೇಶಗಳು ಎಂದು ಕರೆಯುತ್ತೇವೆ. ಹೀಗೆ ಅಲೆಗ್ಸಾಂಡರನು ಕ್ರಿ. ಪೂ. 323 ರಲ್ಲಿ ಮರಣ ಹೊಂದುವ ತನಕ ಪ್ರಾಚೀನ ಇತಿಹಾಸದ ಒಂದು ಅತ್ಯಂತ ದೊಡ್ಡ ಸಾಮ್ರಾಜ್ಯವನ್ನು ಆಳಿದನು. ಆತನು ಅಲೆಗ್ಸಾಂಡರ್ ದ ಗ್ರೇಟ್ ಎಂದು ಕರೆಯಲ್ಪಟ್ಟದ್ದರಲ್ಲಿ ಯಾವುದೇ ಆಶ್ಚರ್ಯವಿಲ್ಲ!

ಅಲೆಗ್ಸಾಂಡರನು ತನ್ನ ಸ್ವಂತ ಗ್ರೀಕ್ ಸಂಸ್ಕೃತಿಯಲ್ಲಿ ಮತ್ತು ಭಾಷೆಯಲ್ಲಿ ಧೃಢವಾಗಿ ನಂಬಿದ್ದನು. ಹಾಗಾಗಿ ತನ್ನ ಯುದ್ದಗಳ ಒಂದು ಪ್ರಮುಖ ಉದ್ದೇಶವು ತಾನು ಸ್ವಾಧೀನಪಡಿಸಿಕೊಂಡ ದೇಶ ಮತ್ತು ಜನರಲ್ಲಿ ಗ್ರೀಕ್ ಭಾಷೆ, ಗ್ರೀಕ್ ಸಂಸ್ಕೃತಿ ಮತ್ತು ಗ್ರೀಕ್ ತತ್ವಶಾಸ್ತ್ರವನ್ನು ಪ್ರಸರಿಸಬೇಕೆಂಬುದೇ ಆಗಿತ್ತು. ಆದರೆ ಗ್ರೀಕ್ ಸಂಸ್ಕೃತಿ ಮತ್ತು ಜೀವನ ಶೈಲಿಯು ಹರಡುತ್ತಾ ಬಂದಾಗ ಅದು ಸ್ಥಳೀಯ ಸಂಸ್ಕೃತಿಯೊಂದಿಗೆ ಬೆರೆತುಹೋಯಿತು. ಸಂಸ್ಕೃತಿಗಳ ಈ ಮಿಶ್ರಣದಿಂದ ಒಂದು ಹೊಸ ಸಂಸ್ಕೃತಿಯು ಹುಟ್ಟಿಕೊಂಡಿತು. ಈ ಹೊಸ ಸಂಸ್ಕೃತಿಯನ್ನೇ ***ಹೆಲೆನಿಸಮ್*** ಎಂದು ಕರೆಯಲಾಗಿದೆ.

ಅಲೆಕ್ಸಾಂಡರನ ವಿಶಾಲವಾದ ಮತ್ತು ವೈವಿಧ್ಯಮಯವಾದ ಸಾಮ್ರಾಜ್ಯವನ್ನು ಒಗ್ಗೂಡಿಸಲು ಹೆಲೆನಿಸಮ್ ಒಂದು ಉಪಕರಣವಾಯಿತು. ಅದು ಗ್ರೀಕ್ ಭಾಷೆಯನ್ನು ಪರಿಚಯಿಸಿತು, ಅದು ನಂತರದ ಶತಮಾನಗಳ ಅವಧಿಯಲ್ಲಿ ಈ ವಿಶಾಲವಾದ ಭೌಗೋಳಿಕ ಪ್ರದೇಶದ ಸಾಮಾನ್ಯ ಭಾಷೆಯಾಗಿ ಮಾರ್ಪಟ್ಟಿತು. ಇದು ಗ್ರೀಕ್ ತತ್ವಶಾಸ್ತ್ರವನ್ನೂ ಮತ್ತು ಗ್ರೀಕ್ ಜೀವನ ಶೈಲಿಯನ್ನೂ ಸಹ ಪರಿಚಯಿಸಿತು.

ಏಷ್ಯಾ ಮೈನರ್, ಸಿರಿಯಾದ ಪಾಲೆಸ್ತೀನ್, ಈಜಿಪ್ಟ್ ಮತ್ತು ಮೆಸಪೊಟಾಮಿಯದಾದ್ಯಂತ ನೂರಾರು ಪಟ್ಟಣಗಳು ಮತ್ತು ರಕ್ಷಣಾ ಸೈನ್ಯಗಳು ಸ್ಥಾಪಿಸಲ್ಪಟ್ಟವು. ಅವುಗಳಲ್ಲಿ ಗ್ರೀಕ್ ಪ್ರಪಂಚದಿಂದ ಬಂದ ಸೈನಿಕರು ಮತ್ತು ನಾಗರೀಕರು ವಾಸವಾಗಿದ್ದರು. ಈ ಗ್ರೀಕ್ ಪರದೇಶವಾಸಿಗಳು ಸಾಂಸ್ಕೃತಿಕವಾಗಿ ಕುಲೀನರಾಗಿದ್ದರು, ಇವರು ಸ್ಥಳೀಯ ಜನರ ಜೀವನ ಶೈಲಿ ಮತ್ತು ಭಾಷೆಗಿಂತ ತಮ್ಮ ಜೀವನ ಶೈಲಿ ಮತ್ತು ಭಾಷೆಯು ಅತ್ಯುತ್ತಮವಾದುದ್ದೆಂದು ಪರಿಗಣಿಸಿದ್ದರು. ಪ್ರತಿಯೊಂದು ನಗರಗಳಲ್ಲಿ ಸ್ಥಾಪಿಸಲ್ಪಟ್ಟ ಗ್ರೀಕ್ ಸಂಸ್ಥಾನವು ಕನಿಷ್ಟಪಕ್ಷ ಒಂದು ಅಕ್ರೊಪೊಲಿಸನ್ನು (ಒಂದು ಕೋಟೆ ಅಥವಾ ದುರ್ಗವನ್ನು), ಪಟ್ಟಣದ ಗೋಡೆಗಳನ್ನು, ಒಂದು ಮಾರುಕಟ್ಟೆ ಸ್ಥಳವನ್ನು, ದೇವಾಲಯಗಳನ್ನು, ಒಂದು ರಂಗಮಂದಿರವನ್ನು ಮತ್ತು ಒಂದು ವ್ಯಾಯಮಶಾಲೆಯನ್ನು (ಒಂದು ಕ್ರೀಡಾಂಗಣವನ್ನು) ಹೊಂದಿದ್ದವು.

ಸ್ವಾಧೀನಗೊಂಡ ಜನರು ಎರಡು ವ್ಯತ್ಯಾಸಕರವಾದ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಕೆಲವರು ಬದಲಾದ ಪರಿಸ್ಥಿತಿಗಳಿಗೆ ಹೊಂದಿಕೊಂಡು ಗ್ರೀಕ್ ಭಾಷೆ ಮತ್ತು ಸಂಸ್ಕೃತಿಯ ಶ್ರೇಷ್ಟತೆಯನ್ನೂ ಮತ್ತು ತಮ್ಮ ಭಾಷೆ ಮತ್ತು ಸಂಸ್ಕೃತಿಯ ಅಲ್ಪತೆಯನ್ನೂ ಅಂಗೀಕರಿಸಿದರು. ಇತರರಿಗೆ, ಹೆಲೆನಿಸಮ್ ತಮ್ಮ ಸಾಂಪ್ರದಾಯಿಕ ಜೀವನ ಶೈಲಿಗೆ ಮತ್ತು ಮೌಲ್ಯತೆಗಳಿಗೆ ಕಂಟಕವಾಗಿತ್ತು, ಅವರು ಅದನ್ನು ವಿವಿಧ ರೀತಿಯಲ್ಲಿ ವಿರೋಧಿಸಿದರು. ಅದಲ್ಲದೆ ಪಾಲೆಸ್ತೀನಿನಲ್ಲಿದ್ದ ಯೆಹೂದ್ಯ ಜನಸಂಖ್ಯೆಯೂ ಸಹ ಈ ವಿರೋಧಾತ್ಮಕವಾದ ರೀತಿಯಲ್ಲಿ ಪ್ರತಿಕ್ರಿಯಿಸಿತು, ಕೆಲವರು

'ಹೆಲೆನಿಸ್ಟ್‌ಗಳಾದರು' ಇತರರು ತಮ್ಮ ಯೆಹೂದ್ಯ ಧರ್ಮದ ಆಚಾರ ಮತ್ತು ಸಂಪ್ರದಾಯಗಳನ್ನು ಪಾಲಿಸಿದರು.

ಹೆಲೆನಿಸಮ್ ಹೊಸ ಒಡಂಬಡಿಕೆಯ ಒಂದು ಪೂರ್ವಪರಿಸ್ಥಿತಿ ಆಗಿದೆ. ಹೆಲೆನಿಸಮ್ ಇಲ್ಲದಿದ್ದಿದ್ದರೆ ನಮಗೆ ಇಂದು ಹೊಸ ಒಡಂಬಡಿಕೆ ಇರುತ್ತಿರಲಿಲ್ಲ. ಗ್ರೀಸ್ ದೇಶವು ಹೊಸ ಒಡಂಬಡಿಕೆಯು ಬರೆಯಲ್ಪಡಲಿಕ್ಕೆ ಭಾಷೆಯನ್ನು ಒದಗಿಸಿತು. ಗ್ರೀಸ್ ದೇಶವು ಹೊಸ ಒಡಂಬಡಿಕೆಗೆ ಆಲೋಚನಾ ರೀತಿಯನ್ನೂ ಸಹ ಒದಗಿಸಿತು. ಗ್ರೀಕರು ವಿವೇಚಿಸುವ, ಪ್ರಶ್ನಿಸುವ ಮತ್ತು ಊಹಿಸುವ ಒಂದು ಉದ್ದವಾದ ಸಂಪ್ರದಾಯವನ್ನು ಹೊಂದಿದ್ದರು. ಪೌಲ, ಸ್ತೆಫನ, ಫಿಲಿಪ್ಪ, ಬಾರ್ನಬ ಮತ್ತು ಇನ್ನೂ ಅನೇಕ ಹೊಸ ಒಡಂಬಡಿಕೆಯ ವ್ಯಕ್ತಿಗಳು ಹೆಲೆನಿಸಮ್ ಹಾಗೂ ಯೆಹೂದ್ಯತ್ವಗಳೆರಡರ ಬಾಧ್ಯಸ್ಥರಾಗಿದ್ದರು, ಅವರು ಗ್ರೀಕ್ ಭಾಷೆಯನ್ನು ಬಳಸುವುದರಲ್ಲಿ ಮಾತ್ರವಲ್ಲ ತಮ್ಮ ಕ್ರೈಸ್ತ ನಂಬಿಕೆಯನ್ನು ವ್ಯಕ್ತಪಡಿಸಿದ ರೀತಿಯಲ್ಲಿಯೂ ಅದನ್ನು ಬಾಧ್ಯವಾಗಿ ಪಡೆದಿದ್ದಾರೆ.

# ಯೆಹೂದ್ಯರ ಚದರುವಿಕೆ (ಡಯಾಸ್ಪೊರಾ)

ಆದಿಸಭೆಯ ಸಮಯದಲ್ಲಿ ಪಾಲೆಸ್ತೀನಿನಲ್ಲಿ ವಾಸವಾಗಿದ್ದ ಯೆಹೂದ್ಯರಿಗಿಂತ ರೋಮನ್ ಸಾಮ್ರಾಜ್ಯದಾದ್ಯಂತ ಚದುರಿಸಲ್ಪಟ್ಟ ಯೆಹೂದ್ಯರೇ ಅನೇಕರಿದ್ದರು. ಅನೇಕ ದೊಡ್ಡ ನಗರಗಳಲ್ಲಿ ಆಯಾ ಸಭಾಮಂದಿರದ ಅನ್ಯೋನ್ಯತೆಗೆ ಸೇರಿದ ಒಂದು ಯೆಹೂದ್ಯ ಜನಸಂಖ್ಯೆ ಇದ್ದವು.

ಚದುರಿಸಲ್ಪಟ್ಟ ಯೆಹೂದ್ಯರು ತಮ್ಮ ಯೆಹೂದ್ಯ ನಂಬಿಕೆಯನ್ನು ತಮ್ಮಲ್ಲೇ ಇರಿಸಿಕೊಳ್ಳಲಿಲ್ಲ. ಬದಲಾಗಿ ಅವರು ಸಂಧಿಸುತ್ತಿದ್ದ ಅನ್ಯಜನರಿಗೆ ಅದನ್ನು ಸಾರುವುದರಲ್ಲಿ ಸಕ್ರಿಯವಾಗಿ ತೊಡಗಿದ್ದರು. ರೋಮನ್ ಸಾಮ್ರಾಜ್ಯದ ಅನ್ಯಜನರ ಮಧ್ಯದಲ್ಲಿ ಯೆಹೂದ್ಯ ನಂಬಿಕೆಯು ಅತ್ಯಂತ ಆಕರ್ಷಣೀಯವಾಗಿತ್ತು. ಇದನ್ನು ಅಪೋಸ್ತಲರ ಕೃತ್ಯಗಳ ಪುಸ್ತಕದ ಕಥೆಗಳಲ್ಲಿ ನಾವು ಕಾಣಬಹುದು. ಪೌಲನು ಯೆಹೂದ್ಯರ ಸಭಾಮಂದಿರದಲ್ಲಿ ಪ್ರಸಂಗಿಸುತ್ತಿದ್ದಾಗ, ಕೇಳುಗರಲ್ಲಿ ಅನೇಕರು ದೈವಭಯವುಳ್ಳ ಅನ್ಯರಾಗಿದ್ದರು, ಅವರು ಸುವಾರ್ತೆಗೆ ಸಕಾರತ್ಮಕವಾಗಿ ಪ್ರತಿಕ್ರಿಯಿಸಿದರು. ಈ ಆಕರ್ಷಣೆಗೆ ಎರಡು ಪ್ರಮುಖ ಕಾರಣಗಳಿದ್ದವು:

1. ಯೆಹೂದ್ಯ ನಂಬಿಕೆಯು (ಮತ್ತು ಆನಂತರದ ಕ್ರೈಸ್ತ ನಂಬಿಕೆಯು) ಸ್ಪಷ್ಟವಾಗಿ ಏಕದೈವ ಆರಾಧನೆಯುಳ್ಳದ್ದಾಗಿತ್ತು – ಇದು ಆ ಸಮಯದ ಬಹುದೇವತಾರಾಧನೆಗೂ ಮತ್ತು ಕಲಬೆರಕೆ ಹೊಂದಿದ ಧರ್ಮಗಳಿಗೂ ವಿಭಿನ್ನವಾಗಿತ್ತು

2. ಯೆಹೂದ್ಯ ನಂಬಿಕೆಯು (ಮತ್ತು ಆನಂತರದ ಕ್ರೈಸ್ತ ನಂಬಿಕೆಯು) ಉನ್ನತ ಮಟ್ಟದ ನೈತಿಕತೆಯನ್ನು ಬೋಧಿಸಿತು ಮತ್ತು ತನ್ನ ಹಿಂಬಾಲಕರು ಒಳ್ಳೆಯ ಮತ್ತು ಗೌರವಯುತವಾದ ಜೀವಿತಗಳನ್ನು ನಡೆಸುವಂತೆ ಅವರನ್ನು ಉತ್ತೇಜಿಸಿತು

ಈ ಅನ್ಯರಲ್ಲಿ ಅನೇಕರು 'ಮತಾಂತರಗೊಂಡವರಾಗಿರಲಿಲ್ಲ', ಅಂದರೆ ಅವರು ಸುನ್ನತಿ ಮಾಡಿಸಿಕೊಳ್ಳುವದರ ಮೂಲಕ ಅಧಿಕೃತವಾಗಿ ಯೆಹೂದ್ಯ ಧರ್ಮಕ್ಕೆ ಮತಾಂತರ ಹೊಂದಿರಲಿಲ್ಲ. ಬದಲಾಗಿ ಅವರು ತಾವು 'ಭಕ್ತಿವಂತರಾಗಿದ್ದರೆ' ಅಥವಾ 'ದೈವಭಯವುಳ್ಳವರಾದರೆ' ಸಾಕು ಎಂಬುದಾಗಿ ಅಂದುಕೊಂಡಿದ್ದರು, ಅಂದರೆ ಅವರು ಕ್ರಮವಾಗಿ ಸಭಾಮಂದಿರದ ಆರಾಧನೆಯಲ್ಲಿ ಪಾಲ್ಗೊಳ್ಳುವುದು, ಇಸ್ರಾಯೇಲರ ದೇವರನ್ನು ನಂಬುವುದು ಮತ್ತು ಯೆಹೂದ್ಯರ ನೈತಿಕ ಬೋಧನೆಯನ್ನು ಮತ್ತು ನೀತಿತತ್ವಗಳನ್ನು ಹಿಂಬಾಲಿಸುವುದು ಸಾಕೆಂದುಕೊಂಡಿದ್ದರು.

ಸಭಾಮಂದಿರಗಳು ಕ್ರೈಸ್ತತ್ವವನ್ನು ಹರಡುವುದರಲ್ಲಿ ಹೆಚ್ಚು ಸಹಾಯಕರವಾಗಿದ್ದವು, ಯಾಕೆಂದರೆ ಪೌಲನು ತಾನು ಸಂಧಿಸಿದ ಪ್ರತಿಯೊಂದು ನಗರಗಳಲ್ಲಿನ ಸಭಾಮಂದಿರಗಳಿಗೆ ತಪ್ಪದೆ ಹೋಗುತ್ತಿದ್ದನು. ಚದುರಿಸಲ್ಪಟ್ಟ ಯೆಹೂದ್ಯರು ಗ್ರೀಕ್ ಭಾಷೆ ಮಾತನಾಡುತ್ತಿದ್ದರು ಮತ್ತು ತಮ್ಮ ಸಭಾಮಂದಿರದ ಆರಾಧನೆಗಳಲ್ಲಿ ಗ್ರೀಕ್ ಭಾಷೆಯನ್ನು ಬಳಸುತ್ತಿದ್ದರು. ಅವರು ಸೆಪ್ಟಾಜಿಂಟ್ ಎಂದು ಕರೆಯಲ್ಪಡುವ ಹಳೆ ಒಡಂಬಡಿಕೆಯ ಸ್ವಂತ ಗ್ರೀಕ್ ಅನುವಾದವನ್ನು ಹೊಂದಿದವರಾಗಿದ್ದರು, ಹೊಸ ಒಡಂಬಡಿಕೆಯ ಲೇಖಕರು ಅನೇಕ ಬಾರಿ ಈ ಪಠ್ಯವನ್ನೇ ಉಲ್ಲೇಖಿಸಿದ್ದಾರೆ ಮತ್ತು ಸೂಚಿಸಿದ್ದಾರೆ. ಸೆಪ್ಟಾಜಿಂಟ್ ಅನುವಾದವು ಈಜಿಪ್ಟಿನ ಅಲೆಗ್ಸಾಂಡ್ರಿಯದಲ್ಲಿ ಮಾಡಲ್ಪಟ್ಟಿತ್ತು, ಅದು ಬಹುಶಃ ಹೊಸ ಒಡಂಬಡಿಕೆಯ ಸಮಯದಲ್ಲಿ ಚದುರಿಸಲ್ಪಟ್ಟ ಯೆಹೂದ್ಯರಿಗೆ ಅತೀ ಪ್ರಾಮುಖ್ಯವಾದ ಕೇಂದ್ರವಾಗಿತ್ತು.

ಚದುರಿಸಲ್ಪಟ್ಟ ಯೆಹೂದ್ಯರು ಪಾಲೆಸ್ತೀನಿನೊಂದಿಗೆ ತಮ್ಮ ಸಂಬಂಧವನ್ನು ಉಳಿಸಿಕೊಂಡಿದ್ದರು ಮತ್ತು ಕೆಲವೊಮ್ಮೆ ದೊಡ್ಡ ಹಬ್ಬಗಳ ಸಂದರ್ಭಗಳಲ್ಲಿ ಯೆರೂಸಲೇಮಿಗೆ ಪ್ರಯಾಣಿಸುತ್ತಿದ್ದರು.

ಹಾಗಾಗಿ ಬಹುಶಃ ಪಂಚಾಶತ್ತಮದ ಮೊದಲ ದಿವಸದಂದು ಪೇತ್ರನ ಪ್ರಸಂಗವನ್ನು ಕೇಳಿದವರಲ್ಲಿ ಅನೇಕರು ಗ್ರೀಕ್-ಮಾತನಾಡುವ ಯೆಹೂದ್ಯರಾಗಿದ್ದರು. ಪಾಲೆಸ್ತೀನಿನಲ್ಲಿ ಗ್ರೀಕ್ ಭಾಷೆಯು ವ್ಯಾಪಕವಾಗಿ ಅರ್ಥಮಾಡಿಕೊಳ್ಳಲ್ಪಡುತ್ತಿತ್ತು ಮತ್ತು ಉಪಯೋಗಿಸಲ್ಪಡುತ್ತಿತ್ತು.

# ರೋಮನ್ ಸಾಮ್ರಾಜ್ಯ

ರಾಜಕೀಯವಾಗಿ ಮತ್ತು ಐತಿಹಾಸಿಕವಾಗಿ ಹೊಸ ಒಡಂಬಡಿಕೆಯು ಸಂಪೂರ್ಣವಾಗಿ ರೋಮನ್ ಸಾಮ್ರಾಜ್ಯದ ಒಳಗೆ ಸಂಭವಿಸಿದೆ. ರೋಮನ್ ಸರ್ಕಾರವು ಬಲಿಷ್ಟವಾಗಿತ್ತು ಮತ್ತು ಕೇಂದ್ರಿಕರಿಸಲ್ಪಟ್ಟಿತ್ತು. ಇದರ ಪರಿಣಾಮವಾಗಿ ಶತಮಾನಗಳವರೆಗೂ ಮೆಡಿಟೆರೆನಿಯನ್ ಪ್ರಪಂಚವು 'ರೋಮನ್ ಶಾಂತಿಗೆ' ಪ್ರಸಿದ್ಧವಾಗಿತ್ತು. ಕ್ರೈಸ್ತ ನಂಬಿಕೆಯ ತ್ವರಿತಗತಿಯ ವಿಸ್ತರಣೆಯನ್ನು ಈ ಕೇಂದ್ರ ಸರ್ಕಾರವು ಮತ್ತು ಈ 'ರೋಮನ್ ಶಾಂತಿಯು' ಪ್ರವರ್ತಿಸಿತು.

ನಗರೀಕರಣದ ಅಭಿವೃದ್ಧಿಯು ಮೊದಲನೇ ಶತಮಾನದ ರೋಮನ್ ಸಾಮ್ರಾಜ್ಯದ ಒಂದು ಗುಣಲಕ್ಷಣವಾಗಿತ್ತು. ಅಲ್ಲಿ ಸಣ್ಣ ಮತ್ತು ದೊಡ್ಡದಾದ ಸುಮಾರು 1000 ಪಟ್ಟಣಗಳಿದ್ದವು. ಅನೇಕ ಪಟ್ಟಣಗಳ ಜನಸಂಖ್ಯೆಯು 10 ರಿಂದ 15 ಸಾವಿರ ಆಗಿದ್ದವು. ಪೆರ್ಗಮದಂತಹ ಮಧ್ಯಮಗಾತ್ರದ ಪಟ್ಟಣಗಳು 50 ಸಾವಿರ ಜನಸಂಖ್ಯೆಯನ್ನು ಹೊಂದಿದ್ದವು. ಸಿರಿಯಾದ ಅಂತಿಯೋಕ್ಯ ಮತ್ತು ಅಲೆಗ್ಸಾಂಡ್ರಿಯಾದಂತಹ ದೊಡ್ಡ ಪಟ್ಟಣಗಳು ಲಕ್ಷಗಟ್ಟಲೆ ಜನಸಂಖ್ಯೆಯನ್ನು ಹೊಂದಿದ್ದವು. ಸಾಮ್ರಾಜ್ಯದಲ್ಲಿಯೇ ಅತೀ ದೊಡ್ಡ ಪಟ್ಟಣವಾದ ರೋಮ್ ಬಹುಶಃ 10 ಲಕ್ಷ ನಿವಾಸಿಗಳನ್ನು ಒಳಗೊಂಡಿತ್ತು. ಚಕ್ರವರ್ತಿಯಾದ ಔಗುಸ್ತನ ಆಳ್ವಿಕೆಯಲ್ಲಿ ಮೆಡಿಟೆರೆನಿಯನ್ ಪ್ರಪಂಚದ ಒಟ್ಟು ಜನಸಂಖ್ಯೆಯು ಸುಮಾರು 5 ರಿಂದ 8 ಕೋಟಿಯಾಗಿತ್ತು. ಇದರಲ್ಲಿ ಶೇಕಡ 20 ರಷ್ಟು ಜನರು ಗುಲಾಮರಾಗಿದ್ದರು, ಶೇಕಡ 10% ರಷ್ಟು ಜನರು ಯೆಹೂದ್ಯರಾಗಿದ್ದರು. ಎಲ್ಲಾ ಪಟ್ಟಣಗಳ ಹೊರತಾಗಿಯೂ ರೋಮನ್ ಸಾಮ್ರಾಜ್ಯದ ಆರ್ಥಿಕ ವ್ಯವಸ್ಥೆಯು ವ್ಯವಸಾಯವನ್ನು ಅವಲಂಬಿಸಿತ್ತು ಮತ್ತು ಶೇಕಡ 90% ರಷ್ಟು ಜನರು ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿದ್ದರು.

ನಾವು ಅಪೋಸ್ತಲರ ಕೃತ್ಯಗಳಲ್ಲಿ ಅನೇಕ ರೋಮನ್ ಪ್ರಾಂತ್ಯಗಳನ್ನು ಕಾಣುತ್ತೇವೆ, ಉದಾಹರಣೆಗೆ ಯೂದಾಯ, ಸಿರಿಯಾ, ಸಿಲಿಸಿಯಾ, ಗಲಾತ್ಯ, ಮಕೆದೊನಿಯ ಮತ್ತು ಅಖಾಯ. ಈ ಪ್ರಾಂತ್ಯಗಳು ವಿವಿಧ ರೀತಿಯಲ್ಲಿ ಸಾಮ್ರಾಜ್ಯದ ರಚನೆಯೊಂದಿಗೆ ಕೂಡಿಸಲ್ಪಟ್ಟಿದ್ದವು:

1. ರಸ್ತೆಗಳ ಸಂಪರ್ಕವನ್ನು ನಿರ್ಮಿಸುವುದು. ಅಪೋಸ್ತಲರು ಪ್ರಾಂತ್ಯದಿಂದ ಪ್ರಾಂತ್ಯಗಳಿಗೆ ಮತ್ತು ನಗರಗಳಿಂದ ನಗರಗಳಿಗೆ ಪ್ರಯಾಣಿಸಲು ಇದು ಸಾಧ್ಯ ಮಾಡಿಕೊಟ್ಟಿತ್ತು.
2. ಸ್ಥಿರವಾದ ಪ್ರಾಂತಿಕ ಆಡಳಿತದ ಪರಿಚಯಿಸುವಿಕೆ. ಇದರ ಪರಿಣಾಮವಾಗಿ ಸಾಮ್ರಾಜ್ಯದಾದ್ಯಂತ ಕಾನೂನು ಸುವ್ಯವಸ್ಥೆ ಇದ್ದಿತು. ಅಪೋಸ್ತಲರು ರೋಮನ್ ಸಾಮ್ರಾಜ್ಯದಾದ್ಯಂತ ಸ್ವತಂತ್ರವಾಗಿ ಪ್ರಯಾಣಿಸಬಹುದಿತ್ತು. ಪಾಸ್‌ಪೋರ್ಟ್ ಮತ್ತು ವೀಸಾದ ಯಾವ ಅವಶ್ಯಕತೆ ಇರಲಿಲ್ಲ!
3. ರೋಮನ್ ಸೈನಿಕ ಸೇವೆಗಳಿಗೆ ಪ್ರಾಂತ್ಯಗಳ ಜನರ ದಾಖಲಾತಿ.
4. ರೋಮನ್ ಪೌರತ್ವವನ್ನು ಪ್ರಾಂತ್ಯಗಳ ಜನರಿಗೂ ವಿಸ್ತರಿಸಿದ ಸಂಗತಿ. ಇದು ನಿರ್ದಿಷ್ಟವಾಗಿ ಮಹತ್ವವುಳ್ಳದ್ದು, ಪೌಲನ ಸಮಯದಲ್ಲಿ ಸುಮಾರು 60 ಲಕ್ಷ ರೋಮನ್ ಪ್ರಜೆಗಳಿದ್ದರು. ಪೌಲ ಮತ್ತು ಸೀಲರು ರೋಮನ್ ಪ್ರಜೆಗಳಾಗಿದ್ದರು.
5. ನಗರೀಕರಣದ ಪ್ರಕ್ರಿಯೆ. ಇದಕ್ಕೆ ಒಂದು ಉದಾಹರಣೆಯು ಅನೇಕ ಹೊಸ ನಿವಾಸ ಸ್ಥಳಗಳನ್ನು ನಿರ್ಮಿಸಿದ ಸಂಗತಿಯಾಗಿದೆ. ಈ ಪಟ್ಟಣಗಳಲ್ಲಿ ನಿವೃತ್ತ ರೋಮನ್ ಸೈನಿಕರು ವಾಸಿಸುತ್ತಿದ್ದರು, ಉದಾಹರಣೆಗೆ ಫಿಲಿಪ್ಪಿಯಲ್ಲಿ (ಅ. ಕೃ. 16:12). ಅಂತಹ ನಿವಾಸ ಸ್ಥಳಗಳಿಗೆ ಭೂ ತೆರಿಗೆ ವಿನಾಯಿತಿ ಮತ್ತು ಸ್ವಾಯತ್ತತೆಯಂತಹ ವಿಶೇಷ ಹಕ್ಕುಗಳಿದ್ದವು.
6. ಮೆಡಿಟೆರೆನಿಯನ್ ಸಮುದ್ರದ ಮೂಲಕವಾಗಿ ಹಡಗುಗಳಿಂದ ನಡೆಯುತ್ತಿದ್ದ ವ್ಯಾಪಾರ ಮತ್ತು ವಾಣಿಜ್ಯ. ಪೌಲ ಮತ್ತು ಆತನ ಸಂಗಡಿಗರು ಆಗಾಗ್ಗೆ ಹಡಗಿನಲ್ಲಿ ಪ್ರಯಾಣಿಸಿದರು.

ಪ್ರಾಂತ್ಯಗಳನ್ನು ರೋಮ್‌ಗೆ ಲೆಕ್ಕ ಒಪ್ಪಿಸಬೇಕಾಗಿದ್ದ ರಾಜ್ಯಪಾಲರುಗಳು, ಅಧಿಕಾರಿಗಳು ಆಳುತ್ತಿದ್ದರು. ಅಪೋಸ್ತಲರ ಕೃತ್ಯಗಳಲ್ಲಿ ಕೆಲವರ ಹೆಸರುಗಳು ತಿಳಿಸಲ್ಪಟ್ಟಿವೆ: ಸೈಪ್ರಸ್‌ನಲ್ಲಿ ಸೆರ್ಗ್ಯ‌ಪೌಲ, ಅಖಾಯದಲ್ಲಿ ಗಲ್ಲಿಯೋನ, ಯೂದಾಯದಲ್ಲಿ ಫೆಲಿಕ್ಸ್ ಮತ್ತು ಪೊರ್ಸಿಯದ ಫೆಸ್ತನು.

ಯೇಸು ಕ್ರಿಸ್ತನ ಜನನದ ಸಂದರ್ಭದಲ್ಲಿ ಆಳಿದ ಔಗುಸ್ತನು ರೋಮನ್ ಸಾಮ್ರಾಜ್ಯದ ಮೊದಲ ಚಕ್ರವರ್ತಿಯಾಗಿದ್ದನು. ಆತನ ನಂತರ ತಿಬೇರಿಯನು ಉತ್ತರಾಧಿಕಾರಿಯಾಗಿ ಬಂದನು. ಈತನು ಯೇಸುವಿನ ಸೇವೆಯ ಸಮಯದಲ್ಲಿ ಮತು ಆದಿಸಭೆಯ ಸಮಯದಲ್ಲಿ ಆಳ್ವಿಕೆಮಾಡಿದನು. ಈತನ ನಂತರ  ಕಲಿಗುಲ, ಕ್ಲಾಡಿಯಸ್ (ಇವರು ಎಲ್ಲಾ ಯೆಹೂದ್ಯರನ್ನು ರೋಮ್‌ನಿಂದ ಬಹಿಷ್ಕರಿಸಿದರು, ಅ. ಕೃ. 18:2) ಮತ್ತು ಕ್ರಿ. ಶ. 64 ರಲ್ಲಿ ಮೊದಲ ಬಾರಿಗೆ ಕ್ರೈಸ್ತರ ವಿರುದ್ಧ ಸಂಘಟಿತವಾದ ಹಿಂಸೆಯನ್ನು ಪ್ರಾರಂಭಿಸಿದ ನಿರೋ ಉತ್ತರಾಧಿಕಾರಿಯಾದರು. ಆದಿಸಭೆಯ ಸಂಪ್ರದಾಯಗಳ ಪ್ರಕಾರ ಪೇತ್ರ ಮತ್ತು ಪೌಲರು ಈ ಹಿಂಸೆಯ ಸಮಯದಲ್ಲಿ ರಕ್ತಸಾಕ್ಷಿಯಾಗಿ ಸತ್ತರು. ಹೊಸ ಒಡಂಬಡಿಕೆಯ ಸಮಯದಲ್ಲಿದ್ದ ಐದು ರೋಮನ್ ಚಕ್ರವರ್ತಿಗಳ ಕುರಿತು ಈ ಕೆಳಗೆ ತಿಳಿಸಲಾಗಿದೆ:

1. ಔಗುಸ್ತನು ಕ್ರಿ. ಪೂ. 31 – ಕ್ರಿ. ಶ. 14: ಈತನು ಲೂಕ 2:1 ರಲ್ಲಿ ಯೇಸುವಿನ ಜನನಕ್ಕೆ ಸಂಬಂಧಿಸಿ ಸೂಚಿಸಲ್ಪಟ್ಟಿದ್ದಾನೆ.

2. ತಿಬೇರಿಯನು ಕ್ರಿ. ಶ. 14–37: ಸ್ನಾನಿಕನಾದ ಯೋಹಾನನು ಮತ್ತು ಯೇಸು ಕ್ರಿಸ್ತನು ತಮ ಸೇವೆಗಳನ್ನು ಪ್ರಾರಂಭಿಸಿದಾಗ ಈತನು ಚಕ್ರವರ್ತಿಯಾಗಿದ್ದನು (ಲೂಕ 3:1).

3. ಗಾಯ ಕಲಿಗುಲ ಕ್ರಿ. ಶ. 37–41: ಈತನ ಹೆಸರು ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ತಿಳಿಸಲ್ಪಟ್ಟಿಲ್ಲ.

4. ಕ್ಲಾಡಿಯಸ್ ಕ್ರಿ. ಶ. 41–54: ಈತನು ಅಪೋಸ್ತಲರ ಕೃತ್ಯಗಳಲ್ಲಿ ಎರಡು ಬಾರಿ ತಿಳಿಸಲ್ಪಟ್ಟಿದ್ದಾನೆ. ಈತನು ಅಗಬನು ಪ್ರವಾದಿಸಿದಂತಹ ಬರಗಾಲದ ಸಮಯದಲ್ಲಿ ಆಳ್ವಿಕೆ ಮಾಡಿದನು (ಅ. ಕೃ. 11:20). ಎಲ್ಲಾ ಯೆಹೂದ್ಯರು ರೋಮ್‌ನ್ನು ಬಿಟ್ಟುಹೋಗಬೇಕೆಂದು ಆಜ್ಞೆಯನ್ನು ಹೊರಡಿಸಿದ ಚಕ್ರವರ್ತಿಯು ಈತನೇ (ಅ. ಕೃ. 18:2), ಇದರ ಪರಿಣಾಮವಾಗಿ ಪೌಲನು ಅಕ್ವಿಲ ಮತ್ತು ಪ್ರಿಸ್ಕಿಲರನ್ನು ಕೊರಿಂಥದಲ್ಲಿ ಭೇಟಿಯಾದನು.

5. ನಿರೋ ಕ್ರಿ. ಶ. 54–68: ಈತನ ಹೆಸರು ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ತಿಳಿಸಲ್ಪಟ್ಟಿಲ್ಲ. ಆದರೆ ಈತನು ರೋಮ್‌ನಲ್ಲಿನ ಪೌಲನ ಮೊದಲ ಮತ್ತು ಎರಡನೆಯ ಸೆರೆಮನೆವಾಸದ ಸಮಯದಲ್ಲಿ ಚಕ್ರವರ್ತಿಯಾಗಿದ್ದನು. ಪೌಲನು ಮನವಿಮಾಡಿಕೊಂಡ ‘ಚಕ್ರವರ್ತಿಯು’ ಈತನೇ ಆಗಿದ್ದನು (ಅ. ಕೃ. 25:11).

ರೋಮ್‌ನಲ್ಲಿ ಕೆಲವು ಸತ್ತುಹೋಗಿದ್ದ ಚಕ್ರವರ್ತಿಗಳಿಗೆ ದೈವಿಕ ಸ್ಥಾನಮಾನ ಕೊಡಲ್ಪಡುತ್ತಿತ್ತು ಮತ್ತು ಜನರು ಅವರನ್ನು ಆರಾಧಿಸುತ್ತಿದ್ದರು. ಪೌರ್ವಾತ್ಯ ಪ್ರಾಂತ್ಯಗಳಲ್ಲಿ ಚಕ್ರವರ್ತಿಯ ಆರಾಧನೆಯು ಬಹು ಬಲವಾಗಿತ್ತು ಮತ್ತು ಕೆಲವೊಮ್ಮೆ ಚಕ್ರವರ್ತಿಗಳು ಜೀವಂತವಿರುವಾಗಲೇ ಅವರಿಗೆ ದೇವರ ಸ್ಥಾನ ಕೊಟ್ಟು ಜನರು ಆರಾಧಿಸುತ್ತಿದ್ದರು. ಇದು ರಾಜಕೀಯವಾದ ಮತ್ತು ಧಾರ್ಮಿಕವಾದ ಮಹತ್ವವನ್ನು ಹೊಂದಿತ್ತು.

ರೋಮನ್ ಸಾಮ್ರಾಜ್ಯದಲ್ಲಿ ಧರ್ಮವು ವಿವಿಧ ಸಾಂಪ್ರದಾಯದ ಒಂದು ಮಿಶ್ರಣವನ್ನು ಒಳಗೊಂಡಿತ್ತು. ಗ್ರೀಕ್ ಮತ್ತು ರೋಮನ್ ಸರ್ವದೇವರುಗಳ ಆರಾಧನೆಯು ಆಗಲೂ ಸ್ವಲ್ಪಮಟ್ಟಿಗೆ ನಡೆಯುತ್ತಿತ್ತು, ವಿಶೇಷವಾಗಿ ಇದು ಪ್ರಾಂತ್ಯಗಳಲ್ಲಿ ಹೆಚ್ಚಾಗಿತ್ತು. ಅ. ಕೃ. 14 ರಲ್ಲಿ,

ಲುಕವೋನಿಯದವರು ಬಾರ್ನಬ ಮತ್ತು ಪೌಲರನ್ನು ಜ಼ೂಸ್ ಮತ್ತು ಹರ್ಮಿಸ್ ದೇವರುಗಳೆಂದು ಆರಾಧಿಸಲು ಯತ್ನಿಸಿದರು. ಎಫೆಸವು ಅರ್ತೆಮಿ ದೇವತೆಗಾಗಿ ಕಟ್ಟಲ್ಪಟ್ಟ ದೇವಾಲಯಕ್ಕೆ ಅತೀ ಪ್ರಸಿದ್ಧವಾಗಿತ್ತು (ಅ. ಕೃ. 19). ಅಥೆನ್ಸ್ ಮತ್ತು ಕೊರಿಂಥದಲ್ಲಿಯೂ ಸಹ ಪ್ರಖ್ಯಾತಿಯಾದ ದೇವಾಲಯಗಳಿದ್ದವು. ತತ್ವಶಾಸ್ತ್ರ ಶಾಲೆಗಳು ಮತ್ತು ಅವುಗಳ ಜನಪ್ರಿಯ ಬೋಧನೆಗಳು ಆ ದಿನಗಳ ಧಾರ್ಮಿಕ ಜೀವನದ ಇನ್ನೊಂದು ಅಂಶವಾಗಿತ್ತು. ಅಥೆನ್ಸ್‌ನಲ್ಲಿ ಪೌಲನು ಎಪಿಕೂರಿಯ ಹಾಗೂ ಸ್ತೋಯಿಕ್ ಶಾಲೆಗಳಿಗೆ ಸಂಬಂಧಪಟ್ಟ ತತ್ವಜ್ಞಾನಿಗಳನ್ನು ಸಂಧಿಸಿದನು. ಮಾರ್ಮಿಕ ಧರ್ಮಗಳು ಮತ್ತು ಜ್ಞಾನವಾದವು ಇತರೆ ಜನಪ್ರಿಯ ಧಾರ್ಮಿಕ ಭಾವಗಳಾಗಿದ್ದವು.

ಅಪೋಸ್ತಲರ ಕೃತ್ಯಗಳ ಸಮಯದಲ್ಲಿ ರೋಮನ್ ಸಾಮ್ರಾಜ್ಯದ ಪೂರ್ವ ಭಾಗಗಳಲ್ಲಿ ಧರ್ಮವು ಅತ್ಯಂತ ವ್ಯಕ್ತಿತ್ವ ರೂಪವುಳ್ಳದ್ದಾಗಿತ್ತು. ಜನರು ತಮ್ಮ ಬಯಕೆ ಮತ್ತು ಕಲ್ಪನೆಗೆ ಅನುಸಾರವಾಗಿ ಒಂದು ಅಥವಾ ಅನೇಕ ಧರ್ಮಗಳನ್ನು ಅಥವಾ ತತ್ವಗಳನ್ನು ಹಿಂಬಾಲಿಸಬಹುದಿತ್ತು. ಈ ಧರ್ಮಗಳು ಮತ್ತು ತತ್ವಶಾಸ್ತ್ರಗಳು ತನ್ನ ಹಿಂಬಾಲಕರ ಜೀವಿತಗಳ ಮೇಲೆ ಬಲವಾದ ಪರಿಣಾಮ ಬೀರಿದ್ದವು. ಅವುಗಳಲ್ಲಿ ಅನೇಕ ಸಂಗತಿಗಳು ಅವರನ್ನು ಅನೈತಿಕ ಆಚಾರಗಳಿಗೆ ನಡೆಸಿತು.

ರೋಮ್‌ನ ಭಾಷೆಯು ಲ್ಯಾಟಿನ್ ಆಗಿತ್ತು. ಆದರೆ ಗ್ರೀಕ್ ಭಾಷೆಯು ರೋಮನ್ ಸಾಮ್ರಾಜ್ಯದ ಒಂದು ಸಾಂಸ್ಕೃತಿಕ ಭಾಷೆಯಾಗಿ ಒಂದು ಬಲವಾದ ಸ್ಥಾನದಲ್ಲಿತ್ತು. ಗ್ರೀಕ್ ತತ್ವಶಾಸ್ತ್ರಜ್ಞರ, ಗ್ರೀಕ್ ಇತಿಹಾಸಕಾರರ ಮತ್ತು ಗ್ರೀಕ್ ಕವಿಗಳ ಕುರಿತು ಅಭ್ಯಸಿಸುವ ರೋಮ್‌ನ್ನರ ಮಕ್ಕಳಿಗೆ ಗ್ರೀಕ್ ಗುಲಾಮರು ಶಿಕ್ಷಕರಾದರು. ರೋಮ್ ಸಾಮ್ರಾಜ್ಯದ ಪೂರ್ವ ಭಾಗದಲ್ಲಿ – ಅಂದರೆ ಪೌಲನ ಮೂರು ಸೇವಾ ಪ್ರಯಾಣಗಳು ಜರುಗಿದ ಸ್ಥಳಗಳಲ್ಲಿ – ಸಮಾಜದ ಎಲ್ಲಾ ವರ್ಗದ ಜನರಿಗೆ ಗ್ರೀಕ್ ಸಾಮಾನ್ಯ ಭಾಷೆಯಾಗಿತ್ತು. ಆದರೆ ರೋಮ್ ಪೌರನಾದ ಪೌಲನು ಲ್ಯಾಟಿನ್ ಮಾತ್ರವಲ್ಲದೆ ಗ್ರೀಕ್ ಭಾಷೆಯನ್ನೂ ತಿಳಿದಿದ್ದಿರಬಹುದು.

# ಪಾಲೆಸ್ತೀನ್

## ಸಭೆಯಲ್ಲಿ

ಸಭೆಯು ಪ್ಯಾಲೆಸ್ತೀನಿನ ಸಾಂಪ್ರದಾಯಿಕ ಯೆಹೂದಿ ಸಂಸ್ಕೃತಿಯಲ್ಲಿಯೇ ಪ್ರಾರಂಭವಾಯಿತು. ಯೇಸುವಿನ ಎಲ್ಲಾ ಶಿಷ್ಯರೂ ಯೆಹೂದಿಗಳಾಗಿದ್ದರು. ಯೆರೂಸಲೇಮಿನಲ್ಲಿದ್ದ ಅಪೋಸ್ತಲರು ಕ್ರಮವಾಗಿ ದೇವಾಲಯಕ್ಕೆ ಹೋಗುತ್ತಿದ್ದರು, ಯೆಹೂದ್ಯರ ಎಲ್ಲಾ ಹಬ್ಬಗಳನ್ನು ಆಚರಿಸುತ್ತಿದ್ದರು ಮತ್ತು ಸಭಾಮಂದಿರಗಳ ಆರಾಧನೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅರಾಮಿಕ್ ಭಾಷೆಯು ಅವರ ಮಾತೃಭಾಷೆಯಾಗಿದ್ದು ಅವರು ಯೆಹೂದ್ಯರ ಎಲ್ಲಾ ಆಚಾರಗಳನ್ನು ಪಾಲಿಸುತ್ತಿದ್ದರು. ಅವರು ಯೇಸುವಿನ ನಾಮದಲ್ಲಿ ಮಾತನಾಡುವುದಾಗಲಿ ಅಥವಾ ಉಪದೇಶಿಸುವುದಾಗಲಿ ಮಾಡದಿದ್ದಲ್ಲಿ ಅವರ ಜೀವನ ಮತ್ತು ನಡವಳಿಕೆಯು ಯೆಹೂದ್ಯ ಅಧಿಕಾರಿಗಳಿಗೆ ಸಮ್ಮತವಾಗಿತ್ತು.

ಆದರೆ ಚದುರಿಸಲ್ಪಡುವಿಕೆಯಿಂದ ಹಿಂತಿರುಗಿದ್ದ ಮತ್ತು ಗ್ರೀಕ್ ಭಾಷೆಯನ್ನು ಮಾತನಾಡುತ್ತಿದ್ದ ಹಾಗೂ ತಮ್ಮದೇ ಆದ ಸ್ವಂತ ಸಭಾಮಂದಿರಗಳಿಗೆ ಹೋಗುತ್ತಿದ್ದ ಕೆಲವು ಯೆಹೂದ್ಯರು ಯೆರೂಸಲೇಮಿನಲ್ಲಿದ್ದರು. ಅವರು ಹೆಲೆನಿಸ್ಟ್ ಎಂಬುದಾಗಿಯೂ ಕರೆಯಲ್ಪಡುತ್ತಿದ್ದರು. ಅವರಲ್ಲಿ ಕೆಲವರು ಸುವಾರ್ತೆಯನ್ನು ಅಂಗೀಕರಿಸಿಕೊಂಡು ವಿಶ್ವಾಸಿಗಳಾಗಿದ್ದರು. ಆದಿಸಭೆಯಲ್ಲಿನ ಮೊಟ್ಟ ಮೊದಲ ಘರ್ಷಣೆಯು ಈ ಎರಡು ಯೆಹೂದ್ಯ ವಿಶ್ವಾಸಿಗಳ ನಡುವೆ — ಅಂದರೆ, ಅರಾಮಿಕ್ ಭಾಷೆ ಮಾತನಾಡುವವರ ಮತ್ತು ಗ್ರೀಕ್ ಭಾಷೆ ಮಾತನಾಡುವವರ ನಡುವೆ – ಉಂಟಾಯಿತು.

## ರಾಜಕೀಯ ಮತ್ತು ಆಡಳಿತ

ರಾಜಕೀಯವಾಗಿ, ಆದಿಸಭೆಯ ಸಮಯದಲ್ಲಿ ಪಾಲೆಸ್ತೀನ್ ರೋಮನ್ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ಅಂದರೆ ಇಡೀ ಹೊಸ ಒಡಂಬಡಿಕೆಯ ಕಾಲದಲ್ಲಿ ರಾಜಕೀಯವಾದ ಮತ್ತು ಆಡಳಿತಾತ್ಮಕವಾದ ಅಧಿಕಾರವು ರೋಮ್‌ನ ಕೈಯಲ್ಲಿತ್ತು. ಇದು 'ಸಾಮ್ರಾಜ್ಯಶಾಹಿ ಪ್ರಾಂತ್ಯ'ವೆಂದೂ ಸಹ ಕರೆಯಲ್ಪಡುತ್ತಿತ್ತು, ಅಂದರೆ ಅದು ರೋಮನ್ ಶಾಸನ ಸಭೆಯ ಅಧೀನದಲ್ಲಿರದೆ ನೇರವಾಗಿ ರೋಮ್ ಚಕ್ರವರ್ತಿಯ ಅಧೀನದಲ್ಲಿತ್ತು.

ಆದರೆ ರೋಮನ್ ಚಕ್ರವರ್ತಿಗಳು ರಾಜನಾದ ಹೆರೋದ್ ದ ಗ್ರೇಟ್ ಮತ್ತು ಆತನ ಉತ್ತರಾಧಿಕಾರಿಗಳಿಗೆ – ರೋಮ್‌ನ ಸಾರ್ವಭೌಮತ್ವವನ್ನು ಅಂಗೀಕರಿಸುವವರೆಗೂ – ಪಾಲೆಸ್ತೀನ್ (ಅಥವಾ ಅದರ ಒಂದು ಭಾಗವನ್ನು) ಮತ್ತು ಅದರ ಸುತ್ತಮುತ್ತಲಿನ ಕೆಲವು ಪ್ರಾಂತ್ಯಗಳ ಮೇಲೆ ಆಶ್ರಿತ ರಾಜರುಗಳಾಗಿ ಮುಂದುವರೆಯಲು ಅನುಮತಿಸಿದ್ದರು. 1 ನೇ ಹೆರೋದ ಅಗ್ರಿಪ್ಪನು ಕ್ರಿ. ಶ. 44 ರಲ್ಲಿ ಮರಣಹೊಂದುವವರೆಗೆ ರೋಮ್‌ನ ಅಡಿಯಲ್ಲಿ ಆಶ್ರಿತ ರಾಜನಾಗಿದ್ದನು (ಅ. ಕೃ. 12:21–23).

ಆತನ ಮಗನಾದ 2 ನೇ ಹೆರೋದ ಅಗ್ರಿಪ್ಪನು ಭೌಗೋಳಿಕವಾಗಿ ಪಾಲೆಸ್ತೀನಿನ ರಾಜನಾಗಿರಲಿಲ್ಲ, ಆದರೆ ಆತನಿಗೆ ಯೆರೂಸಲೇಮಿನ ದೇವಾಲಯದ ಮೇಲೆಯೂ ಮತ್ತು ಮಹಾಯಾಜಕರನ್ನು ನೇಮಿಸುವುದರ ಮೇಲೆಯೂ ಅಧಿಕಾರ ಕೊಡಲ್ಪಟ್ಟಿತ್ತು. ಹಾಗಾಗಿ ಆತನು ಯೂದಾಯ ಪ್ರಾಂತ್ಯದ ರೋಮನ್ ರಾಜ್ಯಪಾಲರುಗಳ ಮತ್ತು ಯೆಹೂದ್ಯರ ನಡುವೆ ಸಂಪರ್ಕ ಕಲ್ಪಿಸುವ ವ್ಯಕ್ತಿಯಾಗಿದ್ದನು,

ಮತ್ತು ಈ ಅಧಿಕಾರದಲ್ಲಿ ಆತನು ಸೆಜರೆಯದಲ್ಲಿ ಪೌಲನ ಪ್ರಕರಣದಲ್ಲಿ ಭಾಗಿಯಾಗಿದ್ದನು (ಅ. ಕೃ. 25:13). ***ಅರಸನಾದ ಹೆರೋದನ ಕುಟುಂಬ*** ಎಂಬ ಮುಂದಿನ ಅಧ್ಯಾಯವನ್ನೂ ಸಹ ನೋಡಿರಿ.

ಕಾಲಕ್ರಮೇಣ ಯೂದಾಯ, ಸಮಾರ್ಯ ಮತ್ತು ಗಲಿಲಾಯ ಪ್ರಾಂತ್ಯಗಳನ್ನು ಹೆರೋದನ ಕುಟುಂಬದವರು ಆಳುವುದರಲ್ಲಿ ಚಕ್ರವರ್ತಿಗಳು ಭರವಸೆ ಕಳೆದುಕೊಂಡದ್ದರಿಂದ ಅವರು ರೋಮನ್ ಚಕ್ರವರ್ತಿಯ ಪರವಾಗಿ ಆಳ್ವಿಕೆ ನಡೆಸಿದ ಆಡಳಿತಾಧಿಕಾರಿಗಳನ್ನು ನೇಮಿಸಿದರು (ಎನ್. ಐ. ವಿ. ಭಾಷಾಂತರದಲ್ಲಿ 'ರಾಜ್ಯಪಾಲರುಗಳೆಂದು' ಕರೆಯಲಾಗಿದೆ). 'ಮೊದಲ ಆಡಳಿತಾಧಿಕಾರವು' (ಯೂದಾಯವನ್ನು ಮಾತ್ರ ಒಳಗೊಂಡು) ಕ್ರಿ. ಶ. 6 ರಿಂದ ಕ್ರಿ. ಶ. 41 ರವರೆಗೆ ನಡೆಯಿತು ಮತ್ತು 'ಎರಡನೆಯ ಆಡಳಿತಾಧಿಕಾರವು' (ಯೂದಾಯ, ಸಮಾರ್ಯ ಮತ್ತು ಗಲಿಲಾಯವನ್ನು ಒಳಗೊಂಡು) ಕ್ರಿ. ಶ. 44 ರಿಂದ ಪ್ರಾರಂಭವಾಗಿ ಕ್ರಿ. ಶ. 60 ರಲ್ಲಿ ಕೊನೆಗೊಂಡಿತು.

ಪಾಲೆಸ್ತೀನಿನ ಮೂರು ರಾಜ್ಯಪಾಲರುಗಳ ಹೆಸರುಗಳು ಹೊಸ ಒಡಂಬಡಿಕೆಯಲ್ಲಿ ತಿಳಿಸಲ್ಪಟ್ಟಿದೆ. ಪೊಂತ್ಯ ಪಿಲಾತನು (ಕ್ರಿ. ಶ. 26–36) ಯೂದಾಯ ಆಡಳಿತಾಧಿಕಾರಿಯಾಗಿದ್ದನು. ಫೆಲಿಕ್ಸನು (ಕ್ರಿ. ಶ. 52–60) ಮತ್ತು ಪೊರ್ಕಿಯ ಫೆಸ್ತನು (ಕ್ರಿ. ಶ. 60–62) ಯೂದಾಯ, ಸಮಾರ್ಯ ಮತ್ತು ಗಲಿಲಾಯ ಪ್ರಾಂತ್ಯಗಳ ಆಡಳಿತಾಧಿಕಾರಿಯಾಗಿದ್ದರು. ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದು ರಾಜ್ಯಪಾಲರುಗಳ ಜವಬ್ದಾರಿಯಾಗಿತ್ತು ಮತ್ತು ಅವರು ನೇರವಾಗಿ ರೋಮ್‌ನಲ್ಲಿದ್ದ ಚಕ್ರವರ್ತಿಗೆ ಲೆಕ್ಕ ಒಪ್ಪಿಸಬೇಕಾಗಿತ್ತು. ಅವರ ಅಧಿಕೃತ ನಿವಾಸ ಸ್ಥಳವು ಮೆಡಿಟೆರೆನಿಯನ್ ಸಮುದ್ರದ ಬಳಿಯಲ್ಲಿದ್ದ ಸೆಜರೇಯವಾಗಿತ್ತು.

ಪಾಲೆಸ್ತೀನ್‌ನಲ್ಲಿ ರಾಜಕೀಯ ಸ್ಥಿರತೆಯನ್ನು ಕದಡುತ್ತಿದ್ದ ಧಾರ್ಮಿಕ ಯೆಹೂದ್ಯ ಮುಖಂಡರುಗಳ ಸತತ ದಂಗೆಯ ನಿಮಿತ್ತ ಅದನ್ನು ಸೂಕ್ಷ್ಮವಾದ ಪ್ರದೇಶವೆಂದು ಪರಿಗಣಿಸಲಾಗುತ್ತಿತ್ತು, ಹಾಗಾಗಿ ಸೆಜರೇಯ ಮತ್ತು ಯೆರೂಸಲೇಮಿನಲ್ಲಿ ರೋಮನ್ ಸೈನಿಕರ ದಂಡನ್ನು ಇರಿಸಲಾಗಿತ್ತು.

## ಯೆಹೂದ್ಯ ಪಂಗಡಗಳು

ಇತರೆ ದೇಶಗಳಲ್ಲಿದ್ದಂತೆ ಗ್ರೀಕ್–ರೋಮನ್ ಜಗತ್ತಿನಲ್ಲಿ, ಹೆಲೆನಿಸ್ಟಿಕ್ ಸಂಸ್ಕೃತಿಯಿಂದ ಉಂಟಾದ ಪರಿಣಾಮದ ಮತ್ತು ರೋಮನ್ ರಾಜಕೀಯ ಆಡಳಿತ್ದ ಕುರಿತು ಮಿಶ್ರ ಪ್ರತಿಕ್ರಿಯೆಗಳಿದ್ದವು. ಹೊಸ ಒಡಂಬಡಿಕೆಯ ಕಾಲದಲ್ಲಿದ್ದ ನಾಲ್ಕು ಯೆಹೂದ್ಯ ಧಾರ್ಮಿಕ ಗುಂಪುಗಳು ಇದನ್ನು ತೋರಿಸಿಕೊಟ್ಟವು:

**ಸದ್ದುಕಾಯರು** ಸಾಮಾನ್ಯವಾಗಿ ಈ ವಿದೇಶಿ ಪ್ರಭಾವವನ್ನು ಒಪ್ಪಿಕೊಂಡಿದ್ದರು. ಅವರು ಅಲೆಗ್ಸಾಂಡರ್ ದ ಗ್ರೇಟ್‌ನಿಂದ ಪ್ರಾರಂಭವಾದ ಈ ಹೆಲೆನಿಸ್ಟ್ ಚಳುವಳಿಯನ್ನು ಬೆಂಬಲಿಸಿದರು. ಅವರು ಶ್ರೀಮಂತ ಯೆಹೂದ್ಯ ಪುರೋಹಿತ ವರ್ಗದ ರಾಜಕೀಯ ಪಕ್ಷವೂ ಸಹ ಆಗಿದ್ದರು. ಮಹಾಯಾಜಕರು ಸದ್ದುಕಾಯ ವರ್ಗಕ್ಕೆ ಸೇರಿದವರಾಗಿದ್ದು ನ್ಯಾಯಸಭೆಯನ್ನು ನಿಯಂತ್ರಿಸುತ್ತಿದ್ದರು. ಆದರೆ ಸಾಮಾನ್ಯವಾಗಿ ಅವರು ಜನರಿಂದ ಹೆಚ್ಚಿನ ಬೆಂಬಲವನ್ನು ಹೊಂದಲಿಲ್ಲ. ರೋಮನ್ನರ ಅಡಿಯಲ್ಲಿ ಅವರು ವಿದೇಶಿ ಆಡಳಿತವನ್ನು ಬೆಂಬಲಿಸುವ ಪಕ್ಷದವರಾದರು. ಸದ್ದುಕಾಯರು ಆದಿಸಭೆಯನ್ನು ಕ್ರಿಯಾತ್ಮಕವಾಗಿ ವಿರೋಧಿಸಿದರು. ಅವರು ಪೇತ್ರ ಮತ್ತು ಯೋಹಾನರನ್ನು ಬಂಧಿಸಿ ಅವರನ್ನು ಸೆರೆಮನೆಯಲ್ಲಿ ಹಾಕಿಸಿದರು. ಸ್ವಲ್ಪ ಸಮಯದ ನಂತರ ಅವರು ಎಲ್ಲಾ ಅಪೊಸ್ತಲರನ್ನು

ಬಂಧಿಸಿ ಅವರನ್ನು ಕೊಲ್ಲಬೇಕೆಂದಿದ್ದರು (ಅ. ಕೃ. 5:17, 33). ಕ್ರಿ. ಶ. 70 ರಲ್ಲಿ ಉಂಟಾದ ಯೆರೂಸಲೇಮಿನ ನಾಶನದೊಂದಿಗೆ ಸದ್ದುಕಾಯರ ಪಂಗಡ ಕಣ್ಮರೆಯಾಯಿತು.

**ಫರಿಸಾಯರು** ಹೆಲೆನಿಸ್ಟಿಕ್ ಪ್ರಭಾವವನ್ನು ಮತ್ತು ವಿದೇಶಿಯರ ರಾಜಕೀಯ ಆಳ್ವಿಕೆಯನ್ನು ವಿರೋಧಿಸಿದರು. ಅವರು ಯೆಹೂದ್ಯ ಜನಾಂಗದವರಾಗಿದ್ದರು ಮತ್ತು ಅವರು ಜನರ ಮಧ್ಯದಲ್ಲಿ ಒಂದು ಬಲವಾದ ರಾಷ್ಟ್ರೀಯ ಮತ್ತು ಧಾರ್ಮಿಕ ಅರಿವನ್ನು ಬೆಳೆಸಿದರು. ಹೊಸ ಒಡಂಬಡಿಕೆಯ ಕಾಲದಲ್ಲಿ ಅವರು ಕೆಲವು ಸಾವಿರ ಸಂಖ್ಯೆಯಲ್ಲಿ ಮಾತ್ರ ಇದ್ದರು, ಆದರೆ ಅವರು ಯೆಹೂದ್ಯ ಧಾರ್ಮಿಕ ಮುಖಂಡರುಗಳಾಗಿ ಜನಪ್ರಿಯಗೊಂಡಿದ್ದರು ಮತ್ತು ಪ್ರಭಾವಶಾಲಿಗಳಾಗಿದ್ದರು. ಅವರ ಮೂಲಕ ಯೆಹೂದ್ಯ ಧರ್ಮಶಾಸ್ತ್ರ ಮತ್ತು ಸಭಾಮಂದಿರದ ಜೀವನವು ಯೆಹೂದ್ಯತ್ವದ ಮೂಲೆಗಲ್ಲಾದವು. ಫರಿಸಾಯರು ರೋಮನ್ ಮತ್ತು ಹೆಲೆನಿಸ್ಟಿಕ್ ಪ್ರಭಾವದಿಂದ ಯೆಹೂದ್ಯ ಧರ್ಮವು ಕಲುಷಿತವಾಗುವುದನ್ನು ರೋಷದಿಂದ ವಿರೋಧಿಸಿದರು. ಅವರು ಇತರೆ ಜನರುಗಳಿಂದ ತಮ್ಮನ್ನು ಬೇರ್ಪಡಿಸಿಕೊಂಡು ತಮ್ಮ ಸಂಪ್ರದಾಯಗಳನ್ನು ಚಾಚುತಪ್ಪದೆ ಪಾಲಿಸಿದರು. ನ್ಯಾಯಸಭೆಯಲ್ಲಿ ಅವರು ಸದ್ದುಕಾಯ ಪಕ್ಷವನ್ನು ಬಲವಾಗಿ ವಿರೋಧಿಸಿದರು.

**ಮತಾಭಿಮಾನಿಗಳು** ಒಂದು ಯೆಹೂದ್ಯ ದೇಶಾಭಿಮಾನವುಳ್ಳ ಪಕ್ಷದವರಾಗಿದ್ದರು. ಇದು ಪಾಲೆಸ್ತೀನ್ ರೋಮನ್ನರ ವಶದಲ್ಲಿದ್ದದ್ದನ್ನು ಕ್ರಿಯಾತ್ಮಕವಾಗಿ ವಿರೋಧಿಸುವ ಒಂದು ನಿರ್ದಿಷ್ಟವಾದ ಗುರಿಉದ್ದೇಶದೊಂದಿಗೆ ಪ್ರಾರಂಭವಾಗಿತ್ತು. ಕೆಲವು ಮತಾಭಿಮಾನಿಗಳು ಗೆರಿಲ್ಲ ಯೋಧರಂತಿದ್ದರು: ಅವರು ರೋಮನ್ನರನ್ನು ಬೆಂಬಲಿಸುವ ಯೆಹೂದ್ಯರನ್ನು ಹತ್ಯೆಗಯ್ಯಬೇಕೆಂದೂ ಸಹ ಯೋಚಿಸಿದ್ದರು.

**ಎಸ್ಸೇನರು** ಹೊಸ ಒಡಂಬಡಿಕೆಯಲ್ಲಿ ತಿಳಿಸಲ್ಪಟ್ಟಿಲ್ಲ. ಅವರು ಕ್ರಿಸ್ತನ ಕಾಲದಲ್ಲಿ ಕೆಲವು ಅನುಯಾಯಿಗಳನ್ನು ಹೊಂದಿದ್ದರು. ಹೆಲೆನಿಸಮ್ ಮತ್ತು ರೋಮನ್ ವಶದ ಕುರಿತು ಅವರ ಪ್ರತಿಕ್ರಿಯೆ ಏನಾಗಿತ್ತೆಂದರೆ, ಎಲ್ಲಾ ವಿದೇಶಿ ಪ್ರಭಾವಗಳಿಂದ ದೂರವಿರಬೇಕು ಎಂಬುದೇ. ಅವರು ತಮಗೆ ಇದ್ದುದ್ದನ್ನು ಸಮವಾಗಿ ಹಂಚಿಕೊಳ್ಳುತ್ತಾ ಸರಳವಾಗಿ ಜೀವಿಸಿದರು. ಅವರು ನಡುವಳಿಕೆಯ ಕಟ್ಟುನಿಟ್ಟಾದ ನಿಯಮವನ್ನು ಪಾಲಿಸುತ್ತಿದ್ದರು ಮತ್ತು ಅನೇಕರು ಅವಿವಾಹಿತರಾಗಿ ಉಳಿದುಕೊಳ್ಳುತ್ತಿದ್ದರು. ಅವರಲ್ಲಿ ಅನೇಕರು ವಸಾಹತ್ತಿನಲ್ಲಿ ಒಟ್ಟಿಗೆ ಜೀವಿಸುತ್ತಿದ್ದರು. ಕೆಂಪು ಸಮುದ್ರದ ಬಳಿಯಲ್ಲಿದ್ದ ಕುಮ್ರಾನ್ ಆಶ್ರಮದ ಬಳಿಯಲ್ಲಿ ಸಿಕ್ಕ ಮೃತ ಸಮುದ್ರದ ಸುರುಳಿಗಳು ಎಸ್ಸೇನ ಗುಂಪಿನ ಜನರಿಗೆ ಅಥವಾ ಅದೇ ರೀತಿಯ ಒಂದು ಗುಂಪಿನ ಜನರಿಗೆ ಸೇರಿದ್ದಾಗಿರಬಹುದು.

**ಬಹುತೇಕ ಜನರು** ಕೆಲವು ಗುಂಪುಗಳ ಆಲೋಚನೆಗಳನ್ನು ಸಮ್ಮತಿಸಿದಾಗ್ಯೂ ಈ ಮೇಲ್ಕಂಡ ಯಾವ ಗುಂಪಿಗೂ ಸೇರಿದವರಾಗಿರಲಿಲ್ಲ.

# ಅರಸನಾದ ಹೆರೋದನ ಕುಟುಂಬ

ಹೊಸ ಒಡಂಬಡಿಕೆಯಲ್ಲಿ ಹೆರೋದ ರಾಜನ ಕುಟುಂಬದ ನಾಲ್ಕು ತಲೆಮಾರಿನ ರಾಜರುಗಳ ಮತ್ತು ಕುಟುಂಬದ ಇತರೆ ಸದಸ್ಯರುಗಳ ಕುರಿತು ತಿಳಿಸಲಾಗಿದೆ. ಅವರಲ್ಲಿ ಕೆಲವರು ಸಮಾನರೂಪದ ಅಥವಾ ಒಂದೇ ಹೆಸರುಗಳನ್ನು ಹೊಂದಿದ್ದಾರೆ. ಇನ್ನೊಂದು ಸಮಸ್ಯೆಯೇನೆಂದರೆ ಈ ರಾಜರುಗಳು ಆಳಿದ ಪ್ರದೇಶಗಳು – ಪಾಲೆಸ್ತೀನಿನ ಕೆಲವು ಭಾಗ ಮತ್ತು ನೆರೆಹೊರೆಯ ರಾಜ್ಯಗಳು ಕಾಲಕ್ರಮೇಣ ಗಣನೀಯವಾಗಿ ಬದಲಾದವು. ಅದಲ್ಲದೆ, ಈ ರಾಜ್ಯಗಳ ಅಥವಾ ಪ್ರದೇಶಗಳ ಕೆಲವು ಹೆಸರುಗಳು ನಮಗೆ ಅಪರಿಚಿತವಾಗಿವೆ. ಇವೆಲ್ಲವು ಸತ್ಯವೇದ ಓದುಗರಾದ ನಮಗೆ ಬಹಳಷ್ಟು ಗೊಂದಲವನ್ನು ಉಂಟುಮಾಡಬಹುದು.

ಹೆರೋದನ ಕುಟುಂಬವು ಯೆಹೂದ್ಯ ಮೂಲದವರಾಗಿರಲಿಲ್ಲ. ಅವರು ಯೂದಾಯದ ದಕ್ಷಿಣ ಭಾಗದಲ್ಲಿದ್ದ ಇದುಮಾಯ ದೇಶದಿಂದ ಬಂದವರಾಗಿದ್ದರು. ಹೆರೋದನ ಅಜ್ಜನು ಯೆಹೂದ್ಯ ಧರ್ಮಕ್ಕೆ ಮತಾಂತರಗೊಂಡಿದ್ದನು, ಹಾಗಾಗಿ ಹೊಸ ಒಡಂಬಡಿಕೆಯ ಅವಧಿಯಲ್ಲಿ ಈ ಮನೆತನವು ಯೆಹೂದ್ಯ ನಂಬಿಕೆಗೆ ಸೇರಿಕೊಂಡಿತ್ತು, ಆದರೆ ಅವರು ಇಸ್ರಾಯೇಲ್ ಜನಾಂಗಕ್ಕೆ ಸಂಬಂಧಪಡದ ಕಾರಣ ಯೆಹೂದ್ಯ ನಾಯಕರುಗಳಿಂದ ಎಂದಿಗೂ ಅಂಗೀಕರಿಸಲ್ಪಡಲಿಲ್ಲ. ಶ್ರೀಮಂತ ವರ್ಗಕ್ಕೆ ಸೇರಿದ್ದ ಈ ಮನೆತನವು ರೋಮನ್ ಚಕ್ರವರ್ತಿಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು ಮತ್ತು ಆಳ್ವಿಕೆಮಾಡುವ ಅಧಿಕಾರವನ್ನು ರೋಮನ್ನರಿಂದ ಹೊಂದಿದ್ದರು.

ಹೆರೋದನು ಈ ರಾಜಮನೆತನದ ಸಂಸ್ಥಾಪಕನಾಗಿದ್ದನು ಮತ್ತು ಆತನು ಪಾಲೆಸ್ತೀನಿನ ಎಲ್ಲಾ ಪ್ರಾಂತ್ಯಗಳನ್ನು ಆಳಿದನು. ಆತನು ಹೆರೋದ್ ದ ಗ್ರೇಟ್ ಎಂದು ಕರೆಯಲ್ಪಟ್ಟಿದ್ದನು ಮತ್ತು ಆತನು ತನ್ನ ಅನೇಕ ಕಟ್ಟಡಗಳ ಯೋಜನೆಗಳಿಗೆ ಪ್ರಸಿದ್ಧನಾಗಿದ್ದನು, ಅವುಗಳಲ್ಲಿ ಯೆರೂಸಲೇಮಿನ ದೇವಾಲಯವು ಒಂದಾಗಿತ್ತು. ಈತನು ಐದು ಬಾರಿ ಮದುವೆಯಾಗಿದ್ದು ಹತ್ತು ಮಕ್ಕಳನ್ನು ಹೊಂದಿದ್ದನು.

ಹೆರೋದ್ ದ ಗ್ರೇಟ್‌ನ ಮರಣದ ನಂತರ ಆತನ ಸಾಮ್ರಾಜ್ಯವು ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿತು. ಪ್ರತಿಯೊಂದು ಭಾಗವನ್ನು ಒಬ್ಬ ಚತುರಾಧಿಪತಿಯು ಆಳುತ್ತಿದ್ದನು (ಮತ್ತಾಯ. 14:1; ಲೂಕನು. 3:1). ಮೂರನೆಯ ತಲೆಮಾರಿನಲ್ಲಿ, 1 ನೇ ಹೆರೊದ ಅಗ್ರಿಪ್ಪನು ತನ್ನ ಅಜ್ಜನಾದ ಹೆರೋದ್ ದ ಗ್ರೇಟ್‌ನ ಪ್ರಾಂತ್ಯದಷ್ಟು ದೊಡ್ಡದಾದ ಒಂದು ಪ್ರಾಂತ್ಯಕ್ಕೆ ರಾಜನಾದನು. ನಾಲ್ಕನೆಯ ತಲೆಮಾರಿನಲ್ಲಿ, 2 ನೇ ಹೆರೋದ ಅಗ್ರಿಪ್ಪನು (ಅಪೊಸ್ತಲರ ಕೃತ್ಯಗಳಲ್ಲಿ ಸೆಜರೆಯಾದಲ್ಲಿನ ಪೌಲನ ಸೆರೆಮನೆವಾಸಕ್ಕೆ ಸಂಬಂಧಿಸಿ ತಿಳಿಸಲ್ಪಟ್ಟ ರಾಜನು) ಗಲಿಲಾಯ ಸಮುದ್ರದ ಸುತ್ತಲಿನ ಸಣ್ಣ ಪ್ರಾಂತ್ಯವನ್ನು ಆಳಿದನು.

ಈ ಕೆಳಗಿನ ರಾಜರುಗಳಿಗೆ ಸಂಬಂಧಪಟ್ಟ ಸಣ್ಣ ರಾಜ್ಯಗಳು, ದೇಶಗಳು ಅಥವಾ ಪ್ರಾಂತ್ಯಗಳನ್ನು ಕೆಳಗೆ ಸೂಚಿಸಲಾಗಿದೆ:

- ಪೆರಿಯಾ: ಮೃತ ಸಮುದ್ರದ ಮತ್ತು ಯೋರ್ದಾನ್ ನದಿಯ ಪೂರ್ವಕ್ಕೆ ನೆಲೆಸಿದೆ
- ಇತುರಿಯಾ: ಪಾಲೆಸ್ತೀನಿನ ಉತ್ತರಕ್ಕೆ ನೆಲೆಸಿದೆ
- ತ್ರಕೋನಿತಿಸ್: ಗಲಿಲಾಯ ಸಮುದ್ರದ ಈಶಾನ್ಯಕ್ಕೆ ನೆಲೆಸಿದೆ
- ಇದುಮಾಯ: ಪಾಲೆಸ್ತೀನಿನ ದಕ್ಷಿಣಕ್ಕೆ ನೆಲೆಸಿದೆ

## ಹೆರೋದನ ರಾಜವಂಶದ ಮೊದಲ ತಲೆಮಾರು

**ಹೆರೋದ್ ದ ಗ್ರೇಟ್**

ಈತನು ಕ್ರಿ. ಪೂ. 37 ರಿಂದ ಕ್ರಿ. ಪೂ. 4 ರವರೆಗೆ ಯೂದಾಯ, ಗಲಿಲಾಯ, ಇತುರಿಯಾ, ತ್ರಕೋನಿತಿಸ್ ಪ್ರಾಂತ್ಯಗಳ ರಾಜನಾಗಿದ್ದನು. ಈತನು ಲೂಕ 1:5 ರಲ್ಲಿ, 'ಸ್ನಾನಿಕನಾದ ಯೋಹಾನನ ಜನನದ ಕುರಿತು ಮುಂತಿಳಿಸಿದ' ವಾಕ್ಯಭಾಗದಲ್ಲಿ ತಿಳಿಸಲ್ಪಟ್ಟಿದ್ದಾನೆ ಮತ್ತು ಈತನು ಯೇಸು ಜನಿಸಿದ ಸಮಯದಲ್ಲಿ ಆಳುತ್ತಿದ್ದನು (ಮತ್ತಾಯ. 2:1–19).

## ಹೆರೋದನ ರಾಜವಂಶದ ಎರಡನೆಯ ತಲೆಮಾರು

**2 ನೇ ಹೆರೋದ ಫಿಲಿಪ್ಪನು**

ಈತನು ಕ್ರಿ. ಪೂ. 4 ರಲ್ಲಿ ತನ್ನ ತಂದೆಯು ಸಾವನ್ನಪ್ಪಿದಾಗ ಇತುರಿಯಾ ಮತ್ತು ತ್ರಕೋನಿತಿಸ್‌ನ ಚತುರಾಧಿಪತಿಯಾದನು ಮತ್ತು ಕ್ರಿ. ಶ. 34 ರವರೆಗೆ ಆಳಿದನು. ಲೂಕ. 3:1 ರಲ್ಲಿ 'ಸ್ನಾನಿಕನಾದ ಯೋಹಾನನು ಮಾರ್ಗ ಸಿದ್ಧಪಡಿಸಿದ್ದು' ಎಂಬ ವಾಕ್ಯಭಾಗದಲ್ಲಿ 'ಚತುರಾಧಿಪತಿಯಾದ ಫಿಲಿಪ್ಪನೆಂಬುದಾಗಿ' ಕರೆಯಲ್ಪಟ್ಟಿದ್ದಾನೆ.

**ಅರ್ಖೆಲಾಯನು**

ಈತನು ಕ್ರಿ. ಪೂ. 4 ರಲ್ಲಿ ತನ್ನ ತಂದೆಯು ಸಾವನ್ನಪ್ಪಿದಾಗ ಯೂದಾಯ, ಇದುಮಾಯ ಮತ್ತು ಸಮಾರ್ಯದ ರಾಜ್ಯಪಾಲನಾದನು ಮತ್ತು ಕ್ರಿ. ಶ. 6 ರವರೆಗೆ ಆಳಿದನು. ಈತನು ಮತ್ತಾಯ. 2:19–22 ರಲ್ಲಿ ತಿಳಿಸಲ್ಪಟ್ಟಿದ್ದಾನೆ, ಅದರಲ್ಲಿ ಯೋಸೇಫನು *'ಹೆರೋದನ ಮಗ ಅರ್ಖೆಲಾಯನು ತಂದೆಯ ಬದಲಾಗಿ ಯೂದಾಯವನ್ನು ಆಳುತ್ತಿದ್ದಾನೆ ಎಂಬುದನ್ನು ಕೇಳಿ ಅಲ್ಲಿಗೆ ಹೋಗುವುದಕ್ಕೆ ಭಯಪಟ್ಟನು'* ಎಂಬುದಾಗಿ ತಿಳಿಸಲ್ಪಟ್ಟಿದೆ. ಆತನು ಗಲಿಲಾಯದಲ್ಲೇ ವಾಸಿಸಿದನು.

**ಅರಿಸ್ಟೋಬೊಲಸ್**

ಈತನು ಸತ್ಯವೇದದಲ್ಲಿ ತಿಳಿಸಲ್ಪಟ್ಟಿಲ್ಲ, ಆದರೆ ಆತನು ಮುಂದಿನ ತಲೆಮಾರಿನ ಎರಡು ಪ್ರಸಿದ್ಧ ವ್ಯಕ್ತಿಗಳ ತಂದೆಯಾಗಿದ್ದನು: ಅವರು ಯಾರೆಂದರೆ, 1 ನೇ ಹೆರೋದ ಅಗ್ರಿಪ್ಪನು ಮತ್ತು ಹೆರೋದ್ಯಳು.

**ಹೆರೋದ ಅಂತಿಪನು** (ಹೆರೋದನ ಮೊಮ್ಮಗಳಾದ ಹೆರೋದ್ಯಳ ಎರಡನೇ ಗಂಡ)

ಈತನು ಕ್ರಿ. ಪೂ. 4 ರಲ್ಲಿ ತನ್ನ ತಂದೆಯು ಸಾವನ್ನಪ್ಪಿದಾಗ ಗಲಿಲಾಯ ಮತ್ತು ಪೆರಿಯ ಪ್ರಾಂತ್ಯಗಳಿಗೆ ಚತುರಾಧಿಪತಿಯಾದನು ಮತ್ತು ಕ್ರಿ. ಶ. 39 ರವರೆಗೆ ಆಳಿದನು. ಸುವಾರ್ತೆಯಲ್ಲಿ ಈತನು ಕೆಲವೊಮ್ಮೆ 'ಚತುರಾಧಿಪತಿಯಾದ ಹೆರೋದನು' ಎಂಬುದಾಗಿ ಕರೆಯಲ್ಪಟ್ಟಿದ್ದಾನೆ. ಈತನು ಸ್ನಾನಿಕನಾದ ಯೋಹಾನನು ಮತ್ತು ಯೇಸು ಕ್ರಿಸ್ತನು ತಮ್ಮ ಸೇವೆಗಳನ್ನು ಪ್ರಾರಂಭಿಸಿದಾಗ ಆಳ್ವಿಕೆ ಮಾಡಿದನು (ಲೂಕನು. 3:1), ಮತ್ತು ಈತನೇ ಸ್ನಾನಿಕನಾದ ಯೋಹಾನನ ಶಿರಚ್ಛೇದನ ಮಾಡಿಸಿದ್ದ

ರಾಜನಾಗಿದ್ದನು (ಮತ್ತಾಯ. 14:1–12). ಈತನು ಕೆಲವೊಮ್ಮೆ 'ಹೆರೋದನು' ಎಂಬುದಾಗಿ ಮಾತ್ರ ಕರೆಯಲ್ಪಟ್ಟಿದ್ದಾನೆ ಮತ್ತು ಪಿಲಾತನು ಈತನ ಬಳಿಗೇ ಯೇಸು ಕ್ರಿಸ್ತನನ್ನು ಕಳುಹಿಸಿದ್ದು (ಲೂಕನು. 23:7).

**1 ನೇ ಹೆರೋದ ಫಿಲಿಪ್ಪ**

ಈತನು ರಾಜ್ಯಭಾರಮಾಡಲಿಲ್ಲ. ಈತನು ಹೆರೋದ್ಯಳ (ಹೆರೋದ ಮಹಾರಾಜನ ಮೊಮ್ಮಗಳು) ಮೊದಲ ಗಂಡನಾಗಿದ್ದನು ಮತ್ತು ಸುವಾರ್ತೆಗಳಲ್ಲಿ ಬರುವ ಸ್ನಾನಿಕನಾದ ಯೋಹಾನನು ಶಿರಚ್ಛೇದನ ಮಾಡಲ್ಪಟ್ಟದ್ದರ ಕಥೆಯಲ್ಲಿ ಈತನು ತಿಳಿಸಲ್ಪಟ್ಟಿದ್ದಾನೆ (ಮತ್ತಾಯ. 14:3, ಮಾರ್ಕ 6:17).

## ಹೆರೋದನ ರಾಜವಂಶದ ಮೂರನೆಯ ತಲೆಮಾರು

**1 ನೇ ಹೆರೋದ ಅಗ್ರಿಪ್ಪನು**

ಈತನು ಕ್ರಿ. ಶ. 37 ರಿಂದ 44 ರವರೆಗೆ ಯೂದಾಯದ ರಾಜನಾಗಿದ್ದನು. ಈತನು ಅ. ಕೃ. 12:1–24 ರಲ್ಲಿ 'ಹೆರೋದ ರಾಜ' ಎಂಬುದಾಗಿ ಕರೆಯಲ್ಪಟ್ಟಿದ್ದಾನೆ. (ಯೇಸುವಿನ ಶಿಷ್ಯನಾದ) ಯಾಕೋಬನನ್ನು ಕೊಲ್ಲಿಸಿ ಪೇತ್ರನನ್ನು ಸೆರೆಮನೆಯಲ್ಲಿ ಹಾಕಿಸಿದವನು ಈತನೇ. ಆನಂತರ ಈತನು ಒಬ್ಬ ದೇವದೂತನಿಂದ ಹೊಡೆಯಲ್ಪಟ್ಟನು.

**ಹೆರೋದ್ಯಳು**

ಈಕೆಯು ಅರಿಸ್ಟೋಬ್ಯುಲಸ್‌ನ ಮಗಳಾಗಿದ್ದಳು ಮತ್ತು ತನ್ನ ಇಬ್ಬರು ಮಾವಂದಿರನ್ನು ಮದುವೆಯಾಗಿದ್ದಳು: ಮೊದಲು 1 ನೇ ಹೆರೋದ ಫಿಲಿಪ್ಪನನ್ನು, ನಂತರ ಹೆರೋದ ಅಂತಿಪನನ್ನು. ಸುವಾರ್ತೆಗಳಲ್ಲಿ ಕಂಡುಬರುವ ಯೋಹಾನನ ಶಿರಚ್ಛೇದನದ ಕಥೆಯಲ್ಲಿ ಈಕೆಯು ತಿಳಿಸಲ್ಪಟ್ಟಿದ್ದಾಳೆ (ಮತ್ತಾಯ. 14:3, ಮಾರ್ಕ 6:17).

## ಹೆರೋದನ ರಾಜವಂಶದ ನಾಲ್ಕನೆಯ ತಲೆಮಾರು

**ದ್ರುಸಿಲ್ಲ**

ಈಕೆಯು ಕ್ರಿ. ಶ. 52 ರಿಂದ ಕ್ರಿ. ಶ. 69 ರವರೆಗೆ ಯೂದಾಯದ ರಾಜ್ಯಪಾಲನಾಗಿದ್ದ ಫೆಲಿಕ್ಸನನ್ನು ಮದುವೆಯಾಗಿದ್ದಳು. ಪೌಲನು ಸೆಜರೇಯದಲ್ಲಿ ಸೆರೆಮನೆವಾಸಿಯಾಗಿದ್ದ ಸಂದರ್ಭದಲ್ಲಿ ಈಕೆಯು ತನ್ನ ಪತಿಯೊಂದಿಗೆ ಆತನು ಹೇಳಿದ ಸಾಕ್ಷಿಯನ್ನು ಕೇಳಿದಳು (ಅ. ಕೃ. 24:24, ಅದರಲ್ಲಿ ಈಕೆಯು ಒಬ್ಬ ಯೆಹೂದ್ಯಳಾಗಿದ್ದಳು ಎಂಬುದಾಗಿ ಲೂಕನು ತಿಳಿಸುತ್ತಾನೆ).

**2 ನೇ ಹೆರೋದ ಅಗ್ರಿಪ್ಪನು**

ಈತನು ಗಲಿಲಾಯದ ಕೆಲವು ಭಾಗಗಳ ಮತ್ತು ತ್ರಕೋನಿತಿಸ್‌ನ ಮತ್ತು ಪೆರಿಯಾ ಪ್ರಾಂತ್ಯಗಳ ರಾಜನಾಗಿದ್ದನು. ಲೂಕನು ಈತನನ್ನು 'ರಾಜನಾದ ಅಗ್ರಿಪ್ಪ' ಎಂಬುದಾಗಿ ಕರೆಯುತ್ತಾನೆ (ಅ. ಕೃ. 25:13–26:32, ಅದರಲ್ಲಿ ಆತನು ಪೌಲನ ಸಾಕ್ಷಿಯನ್ನು ಸೆಜರೇಯದಲ್ಲಿ ಕೇಳಿದನು).

**ಬೆರ್ನಿಸಳು**

ಲೂಕನು ಬೆರ್ನಿಸಳನ್ನು ಅ. ಕೃ. 25:13–26:32 ರಲ್ಲಿಯೂ ತಿಳಿಸುತ್ತಾನೆ. ಈಕೆಯು ತನ್ನ ಸಹೋದರನಾದ 2 ನೇ ಹೆರೋದ ಅಗ್ರಿಪ್ಪನೊಂದಿಗೆ ಸೆಜರೇಯದಲ್ಲಿ ಪೌಲನ ಸಾಕ್ಷಿಯನ್ನು ಕೇಳಿದಳು.

**ಸಲೋಮಿ**

ಈಕೆಯು ಹೆರೋದ್ಯಳ ಮತ್ತು 1 ನೇ ಹೆರೋದ ಫಿಲಿಪ್ಪನ ಮಗಳಾಗಿದ್ದಳು. ಈಕೆಯ ಹೆಸರು ಸುವಾರ್ತೆಗಳಲ್ಲಿ ತಿಳಿಸಲ್ಪಟ್ಟಿಲ್ಲ, ಆದರೆ ಈಕೆಯ ತಾಯಿಯ ಎರಡನೇ ಗಂಡನಾದ ಹೆರೋದ ಅಂತಿಪನು ಯೋಹಾನನ ಶಿರಚ್ಛೇದನ ಮಾಡಿದ್ದಕ್ಕೆ ಈಕೆಯ ನೃತ್ಯವು ಕಾರಣವಾಗಿತ್ತು (ಮತ್ತಾಯ. 14:1–12, ಮಾರ್ಕನು. 6:14–29).

# ಶಿಕ್ಷಕರಿಗಾಗಿ

## ಈ ಪಠ್ಯಪುಸ್ತಕದ ಕುರಿತು

**ಈ ಪಠ್ಯಪುಸ್ತಕವು ವಿಧ್ಯಾರ್ಥಿಗಳ ಕುರಿತು ಐದು ಗುರಿಗಳನ್ನಿಟ್ಟುಕೊಂಡು ಬರೆಯಲಾಗಿದೆ:**

1. ಓದುವುದು ಮತ್ತು ಅರ್ಥಮಾಡಿಕೊಳ್ಳುವುದು: ವಿದ್ಯಾರ್ಥಿಗಳು ತಮ್ಮ ಓದುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು ಮತ್ತು ತಾವು ಓದಿದ ಸಂಗತಿಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನೂ ಅಭಿವೃದ್ಧಿಪಡಿಸಿಕೊಳ್ಳಬೇಕೆಂದು ನಿರೀಕ್ಷಿಸಲಾಗಿದೆ.

2. ಆಲೋಚಿಸುವುದು: ವಿದ್ಯಾರ್ಥಿಗಳು ತಾವು ಓದಿದ ಸಂಗತಿಗಳ ಕುರಿತು ಆಲೋಚಿಸುವಂತೆ ಮತ್ತು ಅವರು ಅರ್ಥಮಾಡಿಕೊಂಡ ಸಂಗತಿಗಳಿಂದ ಉಪಸಂಹಾರಗಳನ್ನು ತಲುಪುವಂತೆ ಎಡಬಿಡದೆ ಪ್ರೋತ್ಸಾಹಿಸಲ್ಪಡಬೇಕು.

3. ಅರಿತುಕೊಳ್ಳುವುದು: ವಿದ್ಯಾರ್ಥಿಗಳು ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಚೆನ್ನಾಗಿ ಅರಿತವರಾಗಬೇಕು: ಘಟನೆಗಳನ್ನು, ಕಥೆಗಳನ್ನು, ವ್ಯಕ್ತಿಗಳನ್ನು, ಸ್ಥಾಪನೆಗಳನ್ನು ಮತ್ತು ಆಚಾರಗಳನ್ನು ಅರಿತವರಾಗಬೇಕು. ಅವರು ಅದರ ಐತಿಹಾಸಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಕುರಿತು ಹೆಚ್ಚಾಗಿ ಕಲಿತುಕೊಳ್ಳಬೇಕು. ಈ ಜ್ಞಾನವನ್ನು ಅವರು ಹೊಸ ಒಡಂಬಡಿಕೆಯ ಪುಸ್ತಕಗಳ ತಮ್ಮ ಅಧ್ಯಯನದಲ್ಲಿ ಅನ್ವಯಿಸಿಕೊಳ್ಳಲು ಶಕ್ತರಾಗಬೇಕು.

4. ಅನ್ವಯಿಸಿಕೊಳ್ಳುವುದು: ವಿದ್ಯಾರ್ಥಿಗಳು ಅಪೋಸ್ತಲರ ಕೃತ್ಯಗಳ ಪುಸ್ತಕದ ಅಂಶಗಳನ್ನು ತಮ್ಮ ಸ್ವಂತ ಸನ್ನಿವೇಶಗಳಿಗೆ ಅನ್ವಯಿಸಿಕೊಳ್ಳಲು ಪ್ರೋತ್ಸಾಹಿಸಲ್ಪಡಬೇಕು. ತಮ್ಮ ಸ್ವಂತ ವೈಯಕ್ತಿಕ ಜೀವಿತವನ್ನು ಮತ್ತು ಸಭೆಯ ಜೀವಿತವನ್ನು ಅಪೋಸ್ತಲರ ಕೃತ್ಯಗಳ ಕಾಲದಲ್ಲಿ ನಡೆದ ಮತ್ತು ಮಾಡಲ್ಪಟ್ಟ ಸಂಗತಿಗಳ ಬೆಳಕಿನಲ್ಲಿ ಕಾಣಬೇಕು. ಅವರು ಅಪೋಸ್ತಲರ ಕೃತ್ಯಗಳಲ್ಲಿ ಬಿಂಬಿಸಲ್ಪಟ್ಟಿರುವ ಘಟನೆಗಳನ್ನು, ಆಚಾರಗಳನ್ನು ಮತ್ತು ಆದಿಸಭೆಯ ಸ್ಥಾಪನೆಗಳನ್ನು ತಮ್ಮ ಸ್ವಂತ ದಕ್ಷಿಣ ಭಾರತದ ಸನ್ನಿವೇಶ ಮತ್ತು ಆಚಾರಗಳ ಬೆಳಕಿನಲ್ಲಿ ಆಲೋಚಿಸಲು ಪ್ರೋತ್ಸಾಹಿಸಲ್ಪಡಬೇಕು.

5. ಉಪಯೋಗಿಸುಕೊಳ್ಳುವುದು: ವಿದ್ಯಾರ್ಥಿಗಳು ಅಪೋಸ್ತಲರ ಕೃತ್ಯಗಳ ಪುಸ್ತಕದ ಪಠ್ಯವನ್ನು ತಮ್ಮ ಜೀವಿತ ಮತ್ತು ಸೇವೆಗಳಲ್ಲಿ: (ವೈಯಕ್ತಿಕ ಹಾಗೂ ಸಾರ್ವಜನಿಕ) ಧ್ಯಾನಗಳಲ್ಲಿ, ಸತ್ಯವೇದ ಅಧ್ಯಯನಗಳಲ್ಲಿ ಮತ್ತು ಪ್ರಸಂಗಗಳಲ್ಲಿ ಉಪಯೋಗಿಸಿಕೊಳ್ಳಲು ಪ್ರೇರೇಪಿಸಲ್ಪಡಬೇಕು ಮತ್ತು ಉತ್ತೇಜಿಸಲ್ಪಡಬೇಕು.

## ಭವಿಷ್ಯದ ಸಂಪನ್ಮೂಲ

ಈ ಪಠ್ಯಪುಸ್ತಕವು ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಒಂದು ಸಂಪನ್ಮೂಲವಾಗಿರುವಂತೆಯೂ ಬರೆಯಲ್ಪಟ್ಟಿದೆ. ಅವರು ಸತ್ಯವೇದ ಮಹಾವಿದ್ಯಾಲಯದಲ್ಲಿ ನಾಲ್ಕು ಅಥವಾ ಐದು ವಾರಗಳಲ್ಲಿ ನಡೆಯುವ ಪಾಠಗಳ ಸಮಯದಲ್ಲಿ ಇದರಲ್ಲಿರುವ ಎಲ್ಲಾ ಸಂಗತಿಗಳನ್ನು ಓದಿ ಮುಗಿಸಲು ಅಥವಾ ಓದಿದವುಗಳನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗದೆ ಇರಬಹುದು. ಆದರೆ ಭವಿಷ್ಯದಲ್ಲಿ, ಅವರು ಸುವಾರ್ತಿಕರುಗಳಾಗಿ ಅಥವಾ ಸಭಾಪಾಲಕರುಗಳಾಗಿ ಕೆಲಸ ಮಾಡುವಾಗ, ಈ ಪಠ್ಯಪುಸ್ತಕದಲ್ಲಿರುವ

ಪಾಠಗಳನ್ನು ಪುನಃ ಓದಿ ಅದರಲ್ಲಿರುವ ವಿಷಯಾಂಶಗಳನ್ನು ತಮ್ಮ ಸ್ವಂತ ಭಕ್ತಿ ಅಭಿವೃದ್ಧಿಗಾಗಿ ಹಾಗೂ ಇತರೆ ಸೇವೆಗಳಲ್ಲಿ ಅವುಗಳನ್ನು ಉಪಯೋಗಿಸಬಹುದು.

ಈ ಪಠ್ಯಪುಸ್ತಕದ ಪ್ರಾರಂಭದಲ್ಲಿರುವ ವಿಸ್ತಾರವಾದ ವಿಷಯಾನುಕ್ರಮಣಿಕೆಯು ಅದರ ಹೊರರೇಖೆ ಮತ್ತು ವಿಷಯಾಂಶಗಳ ಕುರಿತು ಜ್ಞಾನವನ್ನು ಪಡೆದುಕೊಳ್ಳಲು ವಾಚಕನಿಗೆ ಸಹಾಯಮಾಡುತ್ತದೆ, ಅದಲ್ಲದೆ ತಾನು ಹುಡುಕುತ್ತಿರುವ ಕಥೆ/ವಾಕ್ಯಭಾಗವನ್ನು ಸುಲಭವಾಗಿ ಕಂಡುಕೊಳ್ಳಲು ಆತನಿಗೆ ಸಹಾಯಮಾಡುತ್ತದೆ. ಈ ಪಠ್ಯಪುಸ್ತಕದ ಅಂತ್ಯದಲ್ಲಿರುವ ಪದಸೂಚಿಯೂ ಸಹಾಯಕರವಾಗಿರುವುದೆಂದು ನಾನು ನಿರೀಕ್ಷಿಸುತ್ತೇನೆ.

ಈ ಪಠ್ಯಪುಸ್ತಕದ ರಚನೆಯು ಆರಂಭದ ದಿನಗಳ ಜಯಭರಿತವಾದ ಮತ್ತು ವಿಸ್ತಾರವಾದ ಸಭೆಯ ಲೂಕನ ಆರು ಚಿತ್ರಣಗಳ ಮೇಲೆ ಆಧಾರಿತವಾಗಿದೆ. ಇಂದು ಸುವಾರ್ತೆಯು ದಿನನಿತ್ಯ ವಿಸ್ತಾರಗೊಳ್ಳುತ್ತಿರುವ ಗುಂಪುಗಳಿಗೂ ಮತ್ತು ಹೊಸ ಜನರ ಗುಂಪುಗಳಿಗೂ ಸಾರಲ್ಪಡುತ್ತಿರುವಾಗ ಈ ಹೊಸ ಒಡಂಬಡಿಕೆಯ ಚಿತ್ರಣಗಳು ಭಾರತದ ಇಂದಿನ ಸಭೆಯನ್ನು ಉಲ್ಲಾಸಭರಿತವಾಗಲು ಮತ್ತು ಮುಂದೆ ಸಾಗಲು ಪ್ರೇರೇಪಿಸಲಿ ಎಂಬುದೇ ನನ್ನ ಯಥಾರ್ಥ ಪ್ರಾರ್ಥನೆಯಾಗಿದೆ.

## ಈ ಪಠ್ಯಪುಸ್ತಕವನ್ನು ಹೇಗೆ ಬಳಸಬೇಕು

**ನೆನಪಿಟ್ಟುಕೊಳ್ಳಿ:**

1) ಈ ಪಠ್ಯಪುಸ್ತಕವನ್ನು ಖಂಡಿತವಾಗಲೂ ಸತ್ಯವೇದದೊಂದಿಗೆ ಬಳಸತಕ್ಕದ್ದು. ಎಲ್ಲಾ ಸತ್ಯವೇದ ವಚನಗಳು ನ್ಯೂ ಬೈಬಲ್ ವರ್ಶನ್‌ನಿಂದ ಆರಿಸಿಕೊಳ್ಳಲಾಗಿದೆ, ಹಾಗಾಗಿ ವಿದ್ಯಾರ್ಥಿಗಳಿಗೆ ಈ ಅನುವಾದವು ಲಭ್ಯವಿರತಕ್ಕದ್ದು.

2) ವಿದ್ಯಾರ್ಥಿಗಳು ಈ ಪಠ್ಯಪುಸ್ತಕದ ಪ್ರಾರಂಭದಲ್ಲಿ ಒದಗಿಸಿರುವ ನಕ್ಷೆಗಳನ್ನು ಆಗಾಗ್ಗೆ ಉಪಯೋಗಿಸುವಂತೆ ಪ್ರೋತ್ಸಾಹಿಸಲ್ಪಡಬೇಕು.

3) ಈ ಪಠ್ಯಪುಸ್ತಕವು ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಸುಲಭವಾಗಿ ವಿಂಗಡಿಸಬಹುದಾದ 73 ವಾಕ್ಯಭಾಗಗಳ (ಅಥವಾ 'ಪಾಠಗಳ') ಮೇಲೆ ಆಧಾರಿತವಾಗಿದೆ. ಈ ಪಾಠಗಳನ್ನು ಪಾಠ 1 ರಿಂದ ಪಾಠ 73 ಎಂದು ಅಂಕಿ ಸೂಚಿಸಲಾಗಿದೆ. ಈ ಪಾಠಗಳಲ್ಲಿನ ಪ್ರಶ್ನೆಗಳ ಉತ್ತರಗಳನ್ನು 'ಉತ್ತರಗಳು' ಎಂಬ ಭಾಗದಲ್ಲಿ ಕಾಣಬಹುದು. ಈ ಭಾಗದಲ್ಲಿ 73 ಅಧ್ಯಾಯಗಳಿವೆ, ಅವುಗಳನ್ನು ಉ 1 ರಿಂದ ಉ 73 ಎಂದು ಅಂಕಿ ಸೂಚಿಸಲಾಗಿದೆ. ಹಾಗಾಗಿ ಪ್ರತಿಯೊಂದು ಪಾಠಕ್ಕೂ ಉತ್ತರಗಳು ('ಉ') ಎಂಬ ಇನ್ನೊಂದು ಅಧ್ಯಾಯವಿದೆ. ಪ್ರತಿಯೊಂದು ಪಾಠವು ಆರು ಭಾಗಗಳನ್ನು ಹೊಂದಿವೆ, ಅವುಗಳನ್ನು 'ಅ' (ಇದು ವಾಕ್ಯಭಾಗದ ಸಾರಾಂಶ), 'ಆ' (ಟಿಪ್ಪಣಿ), 'ಇ' (ಪಠ್ಯ ಪ್ರಶ್ನೆಗಳು), 'ಈ' (ಆಲೋಚಿಸಲು ಮತ್ತು ಚರ್ಚಿಸಲು ಪ್ರಶ್ನೆಗಳು), 'ಉ' (ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು) ಮತ್ತು 'ಊ' (ಸತ್ಯವೇದ ಅಧ್ಯಯನಗಳಿಗಾಗಿ ಮತ್ತು ಪ್ರಸಂಗಗಳಿಗಾಗಿ ವಾಕ್ಯಭಾಗದ ಮೇಲೆ ಆಧಾರಿತವಾದ ಹೊರರೇಖೆಗಳು) ಎಂದು ಸೂಚಿಸಲಾಗಿದೆ.

4) ನೀವು ನಿಮ್ಮ ತರಗತಿಗಾಗಿ ಈ ಪಠ್ಯಪುಸ್ತಕವನ್ನು ಉಪಯೋಗಿಸುವುದಕ್ಕಿಂತ ಮುಂಚೆ, ನಿಮ್ಮ ವಿದ್ಯಾರ್ಥಿಗಳಿಗೆ ಮೊದಲ ಒಂದು ಅಥವಾ ಎರಡು ದಿನಗಳಲ್ಲಿ ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು (ಎಲ್ಲಾ 28 ಅಧ್ಯಾಯಗಳನ್ನೂ!) ಓದಲು ಸಮಯ ಅವಕಾಶ ಮಾಡಿಕೊಡಬೇಕು. ಅವರು ಎರಡು ಅಥವಾ ಮೂರು ಜನರು ಗುಂಪು ಕೂಡಿ ಅದನ್ನು ಮಾಡಲಿ, ಒಬ್ಬೊಬ್ಬರಾಗಿ ಗಟ್ಟಿಯಾಗಿ ಓದುತ್ತಾ ಮುಗಿಸಲಿ. ಅವರು ಇದನ್ನು ತರಗತಿಯ ಕೋಣೆಯಲ್ಲಿಯೇ ಮಾಡಬೇಕೆಂಬ ಅವಶ್ಯವಿಲ್ಲ. ಓದುವುದನ್ನು ಕುತೂಹಲಕಾರಿಯಾಗಿ ಮಾಡಲು ವಿದ್ಯಾರ್ಥಿಗಳು ಎರಡು ಪಟ್ಟಿಗಳನ್ನು ಮಾಡಬೇಕು: ಅವರು ಈ ವಿಷಯವನ್ನು ಕಲಿಯುವ ಅವಧಿಯಲ್ಲಿ ಅತೀ ಪ್ರಾಮುಖ್ಯವಾಗಿ ಅಭ್ಯಸಿಸಬೇಕೆಂದು ಬಯಸುವ ಕಥೆಗಳ/ವಾಕ್ಯಭಾಗಗಳ ಒಂದು ಪಟ್ಟಿಯನ್ನು ಮಾಡಲಿ; ತಮಗೆ ಕುತೂಹಲಕಾರಿಯಾಗಿ ತೋರುವ ಅಥವಾ ಅರ್ಥಮಾಡಿಕೊಳ್ಳಲು ಕಠಿಣವಾದ ಕಥೆಗಳ/ವಾಕ್ಯಭಾಗಗಳ ಇನ್ನೊಂದು ಪಟ್ಟಿಯನ್ನು ಮಾಡಲಿ. ನಂತರ ಈ ಎಲ್ಲಾ 73 ಪಾಠಗಳನ್ನು ಬೋಧಿಸಲು ನಿಮಗೆ ನಿಗದಿಪಡಿಸಿರುವ ಸಮಯವು ಸಾಕಾಗುವುದಿಲ್ಲವೆಂದು ನಿಮಗೆ ಅನ್ನಿಸಿದರೆ ನೀವು ಈ ಪಟ್ಟಿಗಳನ್ನು ಬಳಸಿ ನಿಮ್ಮ ಆದ್ಯತೆಗಳನ್ನು ರೂಪಿಸಿಕೊಳ್ಳಬಹುದು.

ನಿಮ್ಮ ಯಥಾಪ್ರಕಾರವಾದ ಪಾಠವನ್ನು ಹೀಗೆ ಕ್ರಮಪಡಿಸಿಕೊಳ್ಳಬಹುದು

1) ಪೀಠಿಕೆ: ಇದಕ್ಕಾಗಿ 'ಅ) ವಾಕ್ಯಭಾಗ'ವನ್ನು ಬಳಸಿಕೊಳ್ಳಿರಿ. ಇದನ್ನು ಹಲವು ವಿಧದಲ್ಲಿ ಮಾಡಬಹುದು: ಇದನ್ನು ನೀವು ಅಥವಾ ಯಾರಾದರೂ ಒಬ್ಬ ವಿದ್ಯಾರ್ಥಿಯು ಗಟ್ಟಿಯಾಗಿ ಓದಬಹುದು. ಅಥವಾ ವಿದ್ಯಾರ್ಥಿಗಳು ಸ್ವಂತವಾಗಿ ತಮ್ಮ ಮನಸ್ಸಿನಲ್ಲಿ ಓದಿಕೊಳ್ಳುವಂತೆ ಹೇಳಬಹುದು. ಅಥವಾ ನೀವೇ ಸ್ವತಃ ಅದರಲ್ಲಿರುವ ಅಂಶಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಹೇಳಬಹುದು.

2) ಪಾಠವು ಯಾವ ಸತ್ಯವೇದ ವಾಕ್ಯಭಾಗದ ಮೇಲೆ ಆಧಾರಿತವಾಗಿದೆಯೋ ಅದನ್ನು ಓದಿರಿ (ಪಾಠದ ಶೀರ್ಷಿಕೆಯಲ್ಲಿ ವಾಕ್ಯಭಾಗವು ಉಲ್ಲೇಖಿಸಲ್ಪಟ್ಟಿದೆ). ಇದನ್ನು ವೈಯಕ್ತಿಕವಾಗಿ ಮನಸ್ಸಿನಲ್ಲಿ ಅಥವಾ ಗಟ್ಟಿಯಾಗಿ ತರಗತಿಯಲ್ಲಿ ಓದಬಹುದು.

3) ಹೆಸರುಗಳನ್ನು ಮತ್ತು ಹೇಳಿಕೆಗಳನ್ನು ವಿವರಿಸಿರಿ: 'ಆ) ಟಿಪ್ಪಣಿ'ಯನ್ನು ಇದಕ್ಕಾಗಿ ಬಳಸಿ. ನೀವು ಇದನ್ನು ವಿವರಿಸುವುದರ ಬದಲು ವಿದ್ಯಾರ್ಥಿಗಳೇ ತಮ್ಮ ಮನಸ್ಸಿನಲ್ಲಿ ಇದನ್ನು ಓದಿ ನಂತರ ಸಂಶಯಗಳಿದ್ದರೆ ನಿಮ್ಮನ್ನು ಕೇಳಿ ತಿಳುಕೊಳ್ಳಬಹುದು.

4) ತರಗತಿಯನ್ನು ಸಣ್ಣ ಸಣ್ಣ ಗುಂಪುಗಳಾಗಿ ವಿಂಗಡಿಸಿರಿ (ಪ್ರತಿಯೊಂದು ಗುಂಪಿನಲ್ಲಿ 3–5 ಜನರು ಇರಲಿ). ಪ್ರತಿಯೊಂದು ಗುಂಪಿನಲ್ಲಿಯೂ ಜಾಣ ಮತ್ತು ದಡ್ಡ ವಿದ್ಯಾರ್ಥಿಗಳಿಬ್ಬರೂ ಇರುವುದನ್ನು ಖಚಿತಪಡಿಸಿಕೊಳ್ಳಿರಿ.

5) ಗುಂಪುಗಳು: ಗುಂಪುಗಳು 'ಇ) ಪಠ್ಯಪ್ರಶ್ನೆಗಳು' ಮತ್ತು 'ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ' ಎಂಬವುಗಳನ್ನು ಅಭ್ಯಸಿಸಲಿ (ಅವುಗಳಲ್ಲಿ ಕೆಲವು ಕಷ್ಟಕರವೆನಿಸಬಹುದು). ಒಂದು ವೇಳೆ ಸಮಯವು ಸಾಲದಿದ್ದರೆ ವಿದ್ಯಾರ್ಥಿಗಳು ಯಾವ ಪ್ರಶ್ನೆಗಳನ್ನು ಆದ್ಯತೆ ಮಾಡಿಕೊಳ್ಳಬೇಕೆಂದು ನೀವು ಅವರಿಗೆ ತಿಳಿಸಿರಿ. ಒಂದು ವೇಳೆ ವಿದ್ಯಾರ್ಥಿಗಳು ಬಲಹೀನರಾಗಿದ್ದರೆ ಅತೀ ಕಷ್ಟಕರವಾದ ಪ್ರಶ್ನೆಗಳನ್ನು ಬಿಟ್ಟುಬಿಡಿರಿ. ಸನ್ನಿವೇಶಕ್ಕೆ ತಕ್ಕಂತೆ

ಹೊಂದಿಕೊಳ್ಳಿರಿ! ಎಲ್ಲಾ ಗುಂಪಿನವರು ಎಲ್ಲಾ ಪ್ರಶ್ನೆಗಳನ್ನು ಮುಗಿಸಲೇಬೇಕು ಎನ್ನುವ ನಿರ್ಬಂಧದ ಅವಶ್ಯವಿಲ್ಲ.

6) ಈಗ ಎಲ್ಲಾ ವಿದ್ಯಾರ್ಥಿಗಳು ತಮ್ಮ ಸ್ಥಳಕ್ಕೆ ಹಿಂದಿರುಗಲಿ ಅಥವಾ ಅವರು ಇದ್ದಲ್ಲಿಯೇ ಶಿಕ್ಷಕರು ಹೇಳುವುದಕ್ಕೆ ಗಮನಕೊಡಲಿ.

7) ಉತ್ತರಗಳನ್ನು ಪರಿಶೀಲಿಸಿರಿ: ಇದರಲ್ಲಿಯೇ ಹೆಚ್ಚಿನ ಸಮಯವನ್ನು ಕಳೆಯಬೇಡಿರಿ! ಆದರೆ ವಿದ್ಯಾರ್ಥಿಗಳು ಸರಿಯಾದ ಉತ್ತರಗಳನ್ನು ಕಂಡುಕೊಂಡಿದ್ದಾರೆ ಎನ್ನುವುದನ್ನು ಖಚಿತಪಡಿಸಿಕೊಳ್ಳಿರಿ. ಅದಲ್ಲದೆ ವಿದ್ಯಾರ್ಥಿಗಳು ತಪ್ಪಾದ ಕಲ್ಪನೆಯೊಂದಿಗೆ ಪಾಠಗಳನ್ನು ಬಿಟ್ಟುಬಿಡದಂತೆ ಖಚಿತಪಡಿಸಿಕೊಳ್ಳಿರಿ. ಎಲ್ಲಾ ಪ್ರಶ್ನೆಗಳಿಗೂ 'ಉತ್ತರಗಳು' ಎಂಬ ಭಾಗದಲ್ಲಿ ಉತ್ತರಗಳನ್ನು ಕಂಡುಕೊಳ್ಳಬಹುದು. 'ಈ) ಆಲೋಚಿಸಿರಿ ಮತ್ತು ಚರ್ಚಿಸಿರಿ! ಎಂಬ ಭಾಗದ ನನ್ನ ಎಲ್ಲಾ ಉತ್ತರಗಳೊಂದಿಗೆ ನೀವು ಒಪ್ಪಿಕೊಳ್ಳಬೇಕಾಗಿಲ್ಲ.

8) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು: ಒಂದು ವೇಳೆ ನಿಮಗೆ ಸಾಕಷ್ಟು ಸಮಯವಿದ್ದರೆ, ವಿದ್ಯಾರ್ಥಿಗಳೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹಿಂದಿರುಗಲಿ ಮತ್ತು 'ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು' ಎಂಬ ಭಾಗವನ್ನು ಅಭ್ಯಸಿಸಲಿ. ಒಂದು ವೇಳೆ ಸಾಕಷ್ಟು ಸಮಯವಿಲ್ಲದಿದ್ದರೆ, ಅವರು ಇದನ್ನು (ವೈಯಕ್ತಿಕವಾಗಿ ಅಥವಾ ಇಬ್ಬಿಬ್ಬರಾಗಿ ಅಥವಾ ತಮ್ಮ ಗುಂಪಿನಲ್ಲಿ) ಲೈಬ್ರರಿಯ/ಮನೆಕೆಲಸದ ಸಮಯದಲ್ಲಿ ಮಾಡಲಿ.

9) ಉಪದೇಶಿಸು ಮತ್ತು ಬೋಧಿಸು: ಪಾಠದ ಕೊನೆಯ ಭಾಗವನ್ನು ('ಊ) ಉಪದೇಶಿಸು ಮತ್ತು ಬೋಧಿಸು') ಎಂಬ ಭಾಗದಲ್ಲಿರುವ ಹೊರರೇಖೆಗಳು ಅಥವಾ ಪ್ರಸಂಗಗಳ ಸಲಹೆಗಳನ್ನು) ಪ್ರತ್ಯೇಕವಾಗಿ ಬಳಸಬಹುದು. ವಿದ್ಯಾರ್ಥಿಗಳು ಅದನ್ನು ತಮ್ಮ ಲೈಬ್ರರಿಯ/ಮನೆಕೆಲಸದ ಸಮಯದಲ್ಲಿ ಸ್ವಂತವಾಗಿ ಅಭ್ಯಸಿಸಬಹುದು ಅಥವಾ ತರಗತಿಯ ಧ್ಯಾನದಲ್ಲಿ, ವೈಯಕ್ತಿಕ ಧ್ಯಾನದಲ್ಲಿ ಅಥವಾ ಸೇವಾ ಕಾರ್ಯಗಳಲ್ಲಿ ಅದನ್ನು ಬಳಸಬಹುದು. ಅದು ಅವರ ಭವಿಷ್ಯ ಸೇವೆಗಳಲ್ಲಿಯೂ ಒಂದು ಸಂಪನ್ಮೂಲವಾಗಿರುವುದು.

10) ಶಿಕ್ಷಕರು ತರಗತಿಯ ಸಮಯದಲ್ಲಿ 'ಉ) ಹಂಚಿಕೊಳ್ಳುವುದು ಮತ್ತು ಅನ್ವಯಿಸಿಕೊಳ್ಳುವುದು' ಎಂಬ ಭಾಗದ ಚರ್ಚೆಗಳಿಗೆ ಮತ್ತು ಸ್ಪಷ್ಟೀಕರಣಗಳಿಗೆ ಸಮಯವನ್ನು ಕೊಡುವುದು ಪ್ರಾಮುಖ್ಯವಾಗಿದೆ. ಶಿಕ್ಷಕರು ಇತರೆ ಪ್ರಶ್ನೆ ಮತ್ತು ಸ್ಪಷ್ಟೀಕರಣಕ್ಕೆ ಸಮಯ ಕೊಡುವುದೂ ಅಷ್ಟೇ ಪ್ರಾಮುಖ್ಯವಾದದ್ದು.

**ನೆನಪಿನಲ್ಲಿಟ್ಟುಕೊಳ್ಳಿರಿ:**

1) ಅನೇಕ ಪಾಠಗಳನ್ನು (ವಿಶೇಷವಾಗಿ ಸುಲಭವಾದ ಮತ್ತು ಚಿಕ್ಕ ಪಾಠಗಳನ್ನು) ವಿದ್ಯಾರ್ಥಿಗಳು ಸ್ವಂತವಾಗಿ ತಮ್ಮ ಲೈಬ್ರರಿಯ/ಮನೆಕೆಲಸದ ಸಮಯದಲ್ಲಿ ಓದಿ ಕಲಿತುಕೊಳ್ಳಬಹುದು. ಆದರೆ ನಂತರದ ಸಮಯದಲ್ಲಿ ತರಗತಿಯಲ್ಲಿ ಪ್ರಶ್ನೆಗಳನ್ನು ಉತ್ತರಿಸುವುದಕ್ಕಾಗಿ ಮತ್ತು ಸ್ಪಷ್ಟೀಕರಿಸುವುದಕ್ಕಾಗಿ ಅವರಿಗೆ ಸಮಯ ಅವಕಾಶ ಮಾಡಿಕೊಡಬೇಕಾದದ್ದು ಅತ್ಯವಶ್ಯವಾಗಿದೆ. ಬಹುಶಃ ಕಠಿಣವಾದ ಪ್ರಶ್ನೆಗಳನ್ನು ತರಗತಿಯಲ್ಲಿಯೇ ಉತ್ತರಿಸುವುದು

ಉತ್ತಮವಾದದ್ದು ಎಂದು ನೆನಸುತ್ತೇನೆ. ವಿದ್ಯಾರ್ಥಿಗಳು ತಮ್ಮ ಉತ್ತರಗಳನ್ನು ಈ ಪಠ್ಯಪುಸ್ತಕದಲ್ಲಿರುವ 'ಉತ್ತರಗಳು' ಎಂಬ ಭಾಗದಲ್ಲಿರುವ ನನ್ನ ಉತ್ತರಗಳೊಂದಿಗೆ ಪರಿಶೀಲಿಸಲು ನೀವು ಅವರಿಗೆ ಅನುಮತಿಸಬಹುದು.

2) ಕೆಲವು ಪಾಠಗಳನ್ನು ಬಿಟ್ಟುಬಿಡಬಹುದು. ಒಂದು ವೇಳೆ ಎಲ್ಲಾ 73 ಕಥೆಗಳನ್ನು ಬೋಧಿಸಲು ನಿಮಗೆ ನಿಗದಿಪಡಿಸಿರುವ ಸಮಯವು ಸಾಕಾಗುವುದಿಲ್ಲವೆಂದು ನಿಮಗೆ ಅನ್ನಿಸಿದರೆ, ತರಗತಿಯಲ್ಲಿ ತೆಗೆದುಕೊಳ್ಳಲೇಬೇಕೆಂದು ನಿಮಗೆ ಅನ್ನಿಸುವ ಅತೀ ಪ್ರಾಮುಖ್ಯವಾದ ಪಾಠಗಳನ್ನು ನೀವು (ಅಥವಾ ವಿದ್ಯಾರ್ಥಿಗಳು) ಆರಿಸಿಕೊಳ್ಳಬಹುದು. ಉಳಿದ ಪಾಠಗಳನ್ನು ವಿದ್ಯಾರ್ಥಿಗಳು ತಮ್ಮ ಸ್ವಂತ ಧ್ಯಾನದ ಸಮಯದಲ್ಲಿ ಕಲಿತುಕೊಳ್ಳುವಂತೆ ಬಿಟ್ಟುಬಿಡಬಹುದು (ಒಂದು ವೇಳೆ ಅವರಿಗೆ ಕಠಿಣವೆನಿಸಿದರೆ, ಈ ಪುಸ್ತಕದಲ್ಲಿರುವ ಎಲ್ಲಾ ಪ್ರಶ್ನೆಗಳಿಗೆ ಕೊನೆಯ ಭಾಗದಲ್ಲಿ ಉತ್ತರಗಳಿವೆ ಎಂಬುದನ್ನು ಅವರಿಗೆ ನೆನಪಿಸಿರಿ). ಒಂದು ವೇಳೆ ಕೆಲವೊಂದು ಪಾಠಗಳನ್ನು ಬಿಟ್ಟುಬಿಡಬೇಕಾಗಿ ಬಂದರೆ ಒಂದು ದುರಂತವಾಯಿತು ಎಂದುಕೊಳ್ಳಬೇಡಿರಿ!

## ಈ ಪಠ್ಯಪುಸ್ತಕದ ಉಳಿದ ಭಾಗಗಳ ಕುರಿತು ಏನು?

1. ಈ ಪಠ್ಯಪುಸ್ತಕದ ಪ್ರಾರಂಭದಲ್ಲಿರುವ **'ಪೀಠಿಕೆ'**ಯು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕಾದ ಅಂಶಗಳನ್ನು ಹೊಂದಿದೆ. ಆದರೆ ಪ್ರಾರಂಭದಲ್ಲೇ ವಿದ್ಯಾರ್ಥಿಗಳಿಗೆ ಭಯ ಹುಟ್ಟಿಸಬೇಡಿರಿ. ಈ ಕೆಳಗಿನ 'ಕಾರ್ಯತಂತ್ರವನ್ನು' ನೀವು ಪಾಲಿಸಬೇಕೆಂದು ನಾನು ಸಲಹೆ ನೀಡುತ್ತೇನೆ:

   ನೀವು ಮೊದಲ ಪಾಠವನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ: **'ಪೀಠಿಕೆ'**ಯಲ್ಲಿರುವ ಕೆಲವು ಮುಖ್ಯ ಅಂಶಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿರಿ. ನಿಮಗೆ ಪ್ರಾಮುಖ್ಯವೆನಿಸುವ ಅಂಶಗಳನ್ನು ಮಾತ್ರ ತಿಳಿಸಿರಿ. ಅದನ್ನು 'ಅಭ್ಯಸಿಸಬೇಡಿರಿ' ಅಥವಾ 'ಉಪದೇಶಿಸಬೇಡಿರಿ'.

   ನೀವು ಮೊದಲ ಹತ್ತು ಅಥವಾ ಇಪ್ಪತ್ತು ಪಾಠಗಳನ್ನು ಉಪದೇಶಿಸಿದ ನಂತರ: ವಿದ್ಯಾರ್ಥಿಗಳು 'ಪೀಠಿಕೆ'ಯನ್ನು ಸಂಪೂರ್ಣವಾಗಿ ಓದುವಂತೆ ಅವರಿಗೆ ಅನುಮತಿಸಬಹುದು.

   ಇನ್ನೂ ಹತ್ತು ಅಥವಾ ಇಪ್ಪತ್ತು ಪಾಠಗಳನ್ನು ಉಪದೇಶಿಸಿದ ನಂತರ: ವಿದ್ಯಾರ್ಥಿಗಳು ಎಷ್ಟು ಸಂಗತಿಗಳನ್ನು ತಿಳಿದುಕೊಂಡಿದ್ದಾರೆ ಅಥವಾ ನೆನಪಿನಲ್ಲಿಟ್ಟುಕೊಂಡಿದ್ದಾರೆ ಎಂದು ನೀವು ಅವರನ್ನು ಪರೀಕ್ಷಿಸಬಹುದು. ಆ ಸಮಯದಲ್ಲಿ ನೀವು 'ಪೀಠಿಕೆಯ ಪ್ರಶ್ನೋತ್ತರಗಳು' ಎಂಬ ಭಾಗವನ್ನು ಉಪಯೋಗ ಮಾಡಿಕೊಳ್ಳಬಹುದು.

   ಈ ಪ್ರಶ್ನೆಗಳನ್ನು ಕೋರ್ಸ್‌ನ ಅಂತ್ಯದಲ್ಲಿ ಒಂದು ಪರೀಕ್ಷೆಯಾಗಿಯೂ ನೀವು ಕೊಡಬಹುದು.

2. **ಹೆಚ್ಚಿನ ವಾಸ್ತವಾಂಶಗಳು** ಎಂಬ ಭಾಗವು ಅಪೋಸ್ತಲರ ಕೃತ್ಯಗಳ ಪುಸ್ತಕದ ಹಿನ್ನಲೆ ಮತ್ತು ಹೊಸ ಒಡಂಬಡಿಕೆಯ ಕಾಲದ ಕುರಿತಾದ ಮಾಹಿತಿಗಳನ್ನೊಳಗೊಂಡ ಹದಿನಾಲ್ಕು ಅಧ್ಯಾಯಗಳನ್ನು ಹೊಂದಿವೆ. ಈ ಅಧ್ಯಾಯಗಳನ್ನು ಪ್ರಾಥಮಿಕವಾಗಿ ಉಲ್ಲೇಖನಕ್ಕಾಗಿ ಬಳಸಬೇಕು. ಆದರೆ ಅದರಲ್ಲಿನ ಕೆಲವು ಅಂಶಗಳನ್ನು ನೀವು ಮತ್ತು ವಿದ್ಯಾರ್ಥಿಗಳು

ಒಪ್ಪುವುದಾದರೆ ಕೋರ್ಸ್‌ನ ವಿಷಯಗಳನ್ನಾಗಿಯೂ ಬಳಸಬಹುದು. ಆ ಸಂದರ್ಭದಲ್ಲಿ ಮೇಲೆ ತಿಳಿಸಲ್ಪಟ್ಟಿರುವ 'ಕಾರ್ಯತಂತ್ರ'ದಂತೆ ನೀವು ಸಮಾನವಾದ ಇನ್ನೊಂದನ್ನು ರೂಪಿಸಿಕೊಳ್ಳಬಹುದು. 'ಹೆಚ್ಚಿನ ವಾಸ್ತವಾಂಶಗಳ ಪ್ರಶ್ನೋತ್ತರಗಳು' ಎಂಬ ಒಂದು ಭಾಗವಿರುವುದನ್ನೂ ಗಮನಿಸಿರಿ. ಈ ಪ್ರಶ್ನೆಗಳನ್ನು ಕೋರ್ಸ್‌ನ ಅಂತ್ಯದಲ್ಲಿ ಒಂದು ಪರೀಕ್ಷೆಯಾಗಿಯೂ ನೀವು ಕೊಡಬಹುದು.

# ಒಬ್ಬ ಉತ್ತಮ ಶಿಕ್ಷಕನಾಗಲು ನೀವು ತಿಳಿದುಕೊಳ್ಳಬೇಕಾದದ್ದು

## 1. ವಯಸ್ಕ ವಿದ್ಯಾರ್ಥಿಗಳು ವ್ಯತ್ಯಾಸವಾದವರು!

ಹದಿಹರೆಯದ ವಿದ್ಯಾರ್ಥಿಗಳಿಗಿಂತ ವಯಸ್ಕ ವಿದ್ಯಾರ್ಥಿಗಳು ವ್ಯತ್ಯಾಸವಾದವರು ಎಂಬುದನ್ನು ಮರೆಯಬೇಡಿರಿ! ಅವರು ಹೇಗೆ ವ್ಯತ್ಯಾಸವಾದವರು?

1) ತರಗತಿಯಲ್ಲಿ ಉಪಯೋಗಿಸಲ್ಪಡಬಹುದಾದ ಅನೇಕ ಪೂರ್ವ ಅನುಭವಗಳನ್ನು ಅವರು ಹೊಂದಿರುತ್ತಾರೆ

2) ಅವರಿಗೆ ಬಲವಾದ ಮೌಲ್ಯಗಳು, ನಂಬಿಕೆಗಳು ಮತ್ತು ಅಭಿಪ್ರಾಯಗಳು ಇರುತ್ತವೆ. ಅವರಿಗೆ ಗರ್ವವಿರುತ್ತದೆ.

3) ಅವರಲ್ಲಿ ಅನೇಕರು ಒಂದು ಸಮಸ್ಯೆ–ಕೇಂದ್ರಿತವಾದ ಕಲಿಕೆಯ ಒಲವನ್ನು ತೋರುತ್ತಾರೆ. ಅವರಲ್ಲಿ ಅನೇಕರ್ ತರಗತಿಯಲ್ಲಿ ನಡೆಯುವ ಸಂಗತಿಗಳ ಮೇಲೆ ಪ್ರಭಾವ ಬೀರಲು ಬಯಸುತ್ತಾರೆ.

4) ಅವರಲ್ಲಿ ಅನೇಕರಿಗೆ ಅಭ್ಯಸಿಸುವ ರೂಢಿಯಿರುವುದಿಲ್ಲ ಮತ್ತು ತರಗತಿಯಲ್ಲಿ ಹೆಚ್ಚಿನ ಕಾಲ ಕುಳುತುಕೊಳ್ಳಲು ಅವರಿಗೆ ಸಮಸ್ಯೆಯಾಗಬಹುದು.

ಎಂದಿಗೂ ನಿಮ್ಮ ವಿದ್ಯಾರ್ಥಿಗಳನ್ನು ಮಕ್ಕಳಂತೆ ನೋಡಬೇಡಿರಿ! ಅವರನ್ನು ಯಾವಾಗಲೂ ಗೌರವದಿಂದ ನೋಡಿರಿ!

## 2. ಕಲಿಕೆಯ ವ್ಯತ್ಯಾಸವಾದ ಶೈಲಿಗಳುಂಟು!

ಜನರು ಮೂರು ಮುಖ್ಯವಾದ ರೀತಿಯಲ್ಲಿ ಕಲಿಯುತ್ತಾರೆ:

1) ಕೇಳುವುದರಿಂದ

2) ನೋಡುವುದರಿಂದ ಮತ್ತು ವೀಕ್ಷಿಸುವುದರಿಂದ

3) ಮಾಡುವುದರಿಂದ

ಕೇಳುವುದರಿಂದ ಕಲಿಯುವುದನ್ನು ಬಲಪಡಿಸಲು ಶಿಕ್ಷಕನು ಏನನ್ನು ಮಾಡಬಹುದು?

1) (ಪಠ್ಯವನ್ನು, ಬೋರ್ಡ್ ಮೇಲೆ ಬರೆದಿರುವುದನ್ನು, ನೋಟ್ ಬುಕ್‌ಗಳಲ್ಲಿರುವ ಅಂಶಗಳನ್ನು) ಗಟ್ಟಿಯಾಗಿ ಓದುವಂತೆ ಕೇಳಿಕೊಳ್ಳಬೇಕು

2) ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಮಾಹಿತಿಯನ್ನು ಪುನರಾವರ್ತಿ ಹೇಳಲಿ

3) ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಅಂಶಗಳನ್ನು ಮತ್ತು ಸಮಸ್ಯೆಗಳನ್ನು ವಿವರಿಸಲಿ

ನೋಡುವುದರಿಂದ ಮತ್ತು ವೀಕ್ಷಿಸುವುದರಿಂದ ಕಲಿಯುವುದನ್ನು ಬಲಪಡಿಸಲು ಶಿಕ್ಷಕನು ಏನನ್ನು ಮಾಡಬಹುದು?

1) ಬೋರ್ಡಿನ ಮೇಲೆ ಮಾಹಿತಿಯನ್ನು ಬರೆಯಬೇಕು

2) ವಿದ್ಯಾರ್ಥಿಗಳು ಅವುಗಳನ್ನು ತಮ್ಮ ನೋಟ್ ಬುಕ್‌ಗಳಲ್ಲಿ ಬರೆದುಕೊಳ್ಳಲು ಸಮಯ ಕೊಡಬೇಕು

3) ತರಗತಿಯಲ್ಲಿ ವಿದ್ಯಾರ್ಥಿಗಳು ತಾವು ಬರೆದುಕೊಂಡ ಅಂಶಗಳನ್ನು ಪರಿಶೀಲಿಸಲು ಅವಕಾಶ ಮಾಡಿಕೊಡಬೇಕು

4) ಚಿತ್ರಗಳನ್ನು, ನಕ್ಷೆಗಳನ್ನು ಮತ್ತು ರೇಖಾಪಟಗಳನ್ನು ಉಪಯೋಗಿಸುವುದರ ಮೂಲಕ ನಿಮ್ಮ ಪಾಠವನ್ನು ವರ್ಣಿಸಿರಿ

ಮಾಡುವುದರಿಂದ ಕಲಿಯುವುದನ್ನು ಬಲಪಡಿಸಲು ಶಿಕ್ಷಕನು ಏನನ್ನು ಮಾಡಬಹುದು?

1) ವಿದ್ಯಾರ್ಥಿಗಳು ಮುಖ್ಯವಾದ ಅಂಶಗಳನ್ನು ಬರೆದುಕೊಳ್ಳಲಿ

2) ವಿದ್ಯಾರ್ಥಿಗಳು ತರಗತಿಯ ಒಳಗಡೆ ಅಥವಾ ಹೊರಗಡೆ ಅತ್ತಿತ್ತ ನಡೆದಾಡುವಂತೆ ಕೆಲವು ಚಟುವಟಿಕೆಗಳನ್ನು ಮಾಡಿರಿ (ಅದರ ಕುರಿತು ಮುಜುಗರಪಟ್ಟುಕೊಳ್ಳಬೇಡಿರಿ!)

3) ವಿದ್ಯಾರ್ಥಿಗಳು ಹೋಗಿ ಪ್ರಮಾಣ ಗ್ರಂಥಗಳಿಂದ ಮತ್ತು ನಕ್ಷೆಗಳಿಂದ ಮಾಹಿತಿಗಳನ್ನು ಸಂಗ್ರಹಿಸುವಂತೆ ಬಿಟ್ಟುಕೊಡಿರಿ

4) ವಿದ್ಯಾರ್ಥಿಗಳು ತಮ್ಮ ಕೈಯಾರೆ ವಸ್ತುಗಳನ್ನು ತಯಾರಿಸಲಿ (ರೇಖಾಪಟ, ನಕ್ಷೆ, ಮಾದರಿ, ನಾಟಕ, ಪ್ರದರ್ಶನ)

ನಿಮ್ಮ ಪಾಠದ ಚಟುವಟಿಕೆಗಳು ವ್ಯತ್ಯಾಸವಾಗಿರಲಿ! ಇದು ಹೆಚ್ಚು ವಿದ್ಯಾರ್ಥಿಗಳು ಹೆಚ್ಚಿನ ಸಂಗತಿಗಳನ್ನು ಕಲಿತುಕೊಳ್ಳುವಂತೆ ಮಾಡುವುದು!

## 3. ಕಲಿಕೆಯ ವ್ಯತ್ಯಾಸವಾದ ಹಂತಗಳುಂಟು!

ಒಬ್ಬ ಶಿಕ್ಷಕನಾಗಿ ಕಲಿಕೆಯಲ್ಲಿ ವ್ಯತ್ಯಾಸವಾದ ಹಂತಗಳುಂಟೆಂದು ನೀವು ಅರಿತುಕೊಳ್ಳಬೇಕು:

1) ***ನೆನಪಿನಲ್ಲಿಟ್ಟುಕೊಳ್ಳುವುದು*** ಅತ್ಯಂತ ಕೆಳಗಿನ ಹಂತ:

- ನೀವು ಹಿಂದೆ ಕಲಿತಂತಹ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಳ್ಳಬಹುದು
- ನಿಮಗೆ ದಿನಾಂಕ, ಘಟನೆ, ಸ್ಥಳ, ಆಲೋಚನೆ, ವಿಷಯ, ವಿಧಾನ, ಪ್ರಕ್ರಿಯೆ, ನಿಯಮಗಳು ನೆನಪಿನಲ್ಲಿರಬಹುದು

**2)** ***ತಿಳಿದುಕೊಳ್ಳುವುದು*** ಮುಂದಿನ ಹಂತ:

- ನೀವು ಕಲಿತಂತಹ ಸಂಗತಿಯ ಅರ್ಥವನ್ನು ಗ್ರಹಿಸಲು/ತಿಳಿದುಕೊಳ್ಳಲು/ ನಿಮಗೆ ಸಾಮರ್ಥ್ಯವಿದೆ
- ನೀವು ವಾಸ್ತವವನ್ನು ಮತ್ತು ನಿಯಮಗಳನ್ನು ಅರ್ಥಮಾಡಿಕೊಳ್ಳಬಹುದು; ನೀವು ಓದಿದ ಸಂಗತಿಯನ್ನು ವಿವರಿಸಬಹುದು, ನಿಮ್ಮ ಸ್ವಂತ ವಾಕ್ಯಗಳಲ್ಲಿ ಅದನ್ನು ರೂಪಿಸಿ

ಹೇಳಬಹುದು, ಸಾರಾಂಶಗೊಳಿಸಬಹುದು, ಭಾವಾರ್ಥ ಹೇಳಬಹುದು, ಇನ್ನೊಂದು ಭಾಷೆಗೆ ಅನುವಾದಿಸಬಹುದು; ನೀವು ಅದನ್ನು ಸಾಧಾರಣಗೊಳಿಸಬಹುದು: ನೀವು ರೇಖಾಪಟದ ಅಥವಾ ನಕ್ಷೆಯ ಅರ್ಥವಿವರಿಸಬಹುದು ಮತ್ತು ಅದರ ಪರಿಣಾಮಗಳನ್ನು ಮುಂದಾಲೋಚಿಸಬಹುದು; ನೀವು ವಾಸ್ತವಾಂಶಗಳನ್ನು ಕೂಡಿಸಿ ಕ್ರಮಪಡಿಸಬಹುದು; ನೀವು ವಾಸ್ತವಿಕ ಘಟನೆಗಳನ್ನು ಅರ್ಥವಿವರಿಸಬಹುದು ಮತ್ತು ಹೋಲಿಸಬಹುದು ಮತ್ತು ವ್ಯತ್ಯಾಸ ತಿಳಿಸಬಹುದು.

3) ***ಅನ್ವಯಿಸಿಕೊಳ್ಳುವುದು*** ಮೂರನೆಯ ಹಂತ:

- ನೀವು ಕಲಿತಂತಹ ಸಂಗತಿಯನ್ನು ಒಂದು ಹೊಸದಾದ ಮತ್ತು ವಾಸ್ತವಿಕ ಸನ್ನಿವೇಶಕ್ಕೆ ಉಪಯೋಗಿಸಲು ಸಾಮರ್ಥ್ಯವುಳ್ಳವರಾಗಿದ್ದೀರಿ

- ನೀವು ನಿಯಮ, ವಿಧಾನ, ಆಲೋಚನೆ, ತತ್ವ ಮತ್ತು ಸಿದ್ಧಾಂತಗಳನ್ನು ಒಂದು ಹೊಸ ಸನ್ನಿವೇಶಕ್ಕೆ ಅನ್ವಯಿಸಬಹುದು; ನೀವು ನಿಯಮಗಳನ್ನು ಹೊಸ ಸನ್ನಿವೇಶಕ್ಕೆ ಅನ್ವಯಿಸಬಹುದು; ನೀವು ಮಾಹಿತಿಯನ್ನು ಉಪಯೋಗಿಸಿಕೊಳ್ಳಬಹುದು; ನೀವು ರೇಖಾಪಟವನ್ನು ಮತ್ತು ನಕ್ಷೆಗಳನ್ನು ರೂಪಿಸಬಹುದು; ನೀವು ಒಂದು ವಿಧಾನದ ಅಥವಾ ಪ್ರಕ್ರಿಯೆಯ ಸರಿಯಾದ ಉಪಯೋಗವನ್ನು ಪ್ರದರ್ಶಿಸಬಹುದು; ನೀವು ಕಲಿತಂತಹ ಸಂಗತಿಗಳನ್ನು ಬಳಸಿ ಸಮಸ್ಯೆಗಳನ್ನು ಬಗೆಹರಿಸಬಹುದು.

4) ***ವಿಶ್ಲೇಷಣೆ, ಪರಿಶೀಲನೆ ಮತ್ತು ಸಮನ್ವಯ/ಸೃಷ್ಟಿ,*** ನಾಲ್ಕನೆಯ ಹಂತವಾಗಿವೆ:

- ವಿಶ್ಲೇಷಣೆ
  - ನೀವು ವಿಷಯದ ರಚನೆಯನ್ನು ಅರ್ಥಮಾಡಿಕೊಳ್ಳಲು ಅದನ್ನು ಅನೇಕ ಭಾಗಗಳಾಗಿ ವಿಂಗಡಿಸಲು ಶಕ್ತರಾಗಬಹುದು.
  - ನೀವು ವಿವಿಧ ಭಾಗಗಳನ್ನು ಗುರುತಿಸಲು ಮತ್ತು ಭಾಗಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸಲು ಶಕ್ತರಿರಬಹುದು; ನೀವು ಸಂಘಟಿತ ನಿಯಮಗಳನ್ನು ಗುರುತಿಸಲೂ ಶಕ್ತರಾಗಬಹುದು; ನೀವು ವಾಸ್ತವಾಂಶಗಳ ಮತ್ತು ತರ್ಕಗಳ/ಸಮಾರೋಪಗಳ ನಡುವಿನ ವ್ಯತ್ಯಾಸವನ್ನು ಅರಿಯಲು ಶಕ್ತರಾಗಬಹುದು; ನೀವು ಮರೆಯಾದ ಅರ್ಥವನ್ನು ಕಂಡುಕೊಳ್ಳಬಹುದು; ನೀವು ಲಭ್ಯವಿರುವ ಮಾಹಿತಿಯು ಸಮಂಜಸವಾದುದ್ದೋ ಇಲ್ಲವೋ ಎಂದು ಪರಿಶೀಲಿಸಬಹುದು; ನೀವು ಪ್ರೋರಣೆ ಅಥವಾ ಕಾರಣವನ್ನು ಗುರುತಿಸಿ ಒಂದು ಸಮಾರೋಪವನ್ನು ತಲುಪಬಹುದು; ನೀವು ಸಾಧಾರಣೀಕರಣವನ್ನು ಬೆಂಬಲಿಸಲು ಪುರಾವೆಗಳನ್ನು ಕಂಡುಹಿಡಿಯಬಹುದು; ನೀವು ಒಂದು ಕೆಲಸದ (ಪೌಲನ ಪತ್ರಿಕೆಗಳ ಒಂದು ವಾಕ್ಯಭಾಗ, ಒಂದು ಕವಿತೆ, ಒಂದು ಕಥೆ) ಸಂಘಟಿತ ರಚನೆಯನ್ನು ವಿಶ್ಲೇಷಿಸಬಹುದು; ನೀವು ಮಾದರಿಗಳನ್ನು ಕಾಣಬಹುದು.

- ಪರಿಶೀಲನೆ

- ನೀವು ನಿರ್ದಿಷ್ಟ ಮಾನದಂಡದ ಆಧಾರದ ಮೇಲೆ ಒಂದು ವಿಷಯದ (ಒಂದು ವಾಕ್ಯಭಾಗದ, ಒಂದು ಪದ್ಯದ, ಒಂದು ಸಂಶೋಧನ ವರದಿಯ) ಮೌಲ್ಯವನ್ನು ನಿರ್ಣಯಿಸಬಹುದು.

- ನೀವು ಬರೆಯಲ್ಪಟ್ಟಿರುವ ವಿಷಯದ ವೈಚಾರಿಕ ಹೊಂದಾಣಿಕೆಯನ್ನು ನಿರ್ಣಯಿಸಬಹುದು; ಮಾಹಿತಿಗಳಿಂದ ತಲುಪಿದ ಸಮಾರೋಪದ ಸಮರ್ಪಕತೆಯನ್ನು ನೀವು ನಿರ್ಣಯಿಸಬಹುದು; ನೀವು ಆಂತರ್ಯ ಮಾನದಂಡದ ಅಥವಾ ಬಹಿರಂಗ ಉತ್ಕೃಷ್ಟತೆಯ ಮಾನದಂಡವನ್ನು ಬಳಸಿಕೊಂಡು ಒಂದು ಕಾರ್ಯದ (ಕಲೆಯ, ಸಂಗೀತದ, ಸಾಹಿತ್ಯದ) ಮೌಲ್ಯವನ್ನು ನಿರ್ಣಯಿಸಬಹುದು; ನೀವು ಸಿದ್ಧಾಂತಗಳ ಆಧಾರವನ್ನು ವಿಮರ್ಶಿಸಬಹುದು; ನೀವು ವೈಚಾರಿಕ ತರ್ಕಗಳ ಆಧಾರದ ಮೇಲೆ ನಿಮ್ಮ ಆಯ್ಕೆಗಳನ್ನು ಮಾಡಿಕೊಳ್ಳಬಹುದು; ನೀವು ವ್ಯಕ್ತಿನಿಷ್ಠತೆಯನ್ನು ಗುರುತಿಸಬಹುದು; ನೀವು ಅತೀ ಪರಿಣಾಮಕಾರಿಯಾದ ಪರಿಹಾರವನ್ನು ಆರಿಸಿಕೊಳ್ಳಬಹುದು; ನೀವು ಅತ್ಯುತ್ತಮವಾದ ಅರ್ಹ ಅಭ್ಯರ್ಥಿಯನ್ನು ಕೆಲಸಕ್ಕೆ ಸೇರಿಸಿಕೊಳ್ಳಬಹುದು; ನೀವು ಒಂದು ಹೊಸ ಆಯವ್ಯಯ ಪತ್ರಿಕೆಯನ್ನು ವಿವರಿಸಬಹುದು ಮತ್ತು ಪುಷ್ಟೀಕರಿಸಬಹುದು.

- ಸಮನ್ವಯ/ಸೃಷ್ಟಿ
  - ನೀವು ಭಾಗಗಳನ್ನು ಕೂಡಿಸಿ ಹೊಸದಾದ ಇನ್ನೊಂದನ್ನು ರೂಪಿಸಬಹುದು
  - ನೀವು ಒಂದು ಸುಸಂಘಟಿತವಾದ ಭಾಷಣವನ್ನು ಅಥವಾ ಪ್ರಸಂಗವನ್ನು ಸಿದ್ಧಗೊಳಿಸಬಹುದು; ನೀವು ಒಂದು ಪ್ರಯೋಗಕ್ಕೆ ಯೋಜನೆಯನ್ನು ಮುಂದಿಡಬಹುದು; ನೀವು ವಿವಿಧ ಕ್ಷೇತ್ರಗಳಲ್ಲಿ ಹೊಂದಿದ ಕಲಿಕೆಯನ್ನು ಒಟ್ಟುಗೂಡಿಸಿ ಸಮಸ್ಯೆಗಳನ್ನು ಬಗೆಹರಿಸುವ ಯೋಜನೆಗಳನ್ನು ಮಾಡಬಹುದು; ನೀವು ಹೊಸ ಆಲೋಚನೆಗಳನ್ನು ರೂಪಿಸಲು ಹಳೆಯದನ್ನು ಬಳಸಬಹುದು; ನೀವು ಕಾಲೇಜು ಮಟ್ಟದ ಒಂದು ಹೊಸ ಕೋರ್ಸನ್ನು ರೂಪಿಸಲು ವಿವಿಧ ಮಾಹಿತಿಗಳನ್ನು ಬಳಸಬಹುದು.

## 4. ವಿದ್ಯಾರ್ಥಿಗಳಿಂದ ಕೇಳಲ್ಪಡುವ ಪ್ರಶ್ನೆಗಳು ಪ್ರಾಮುಖ್ಯವಾದದ್ದು!

ಪ್ರಶ್ನೆಗಳನ್ನು ಉತ್ತೇಜಿಸಿರಿ. ಪ್ರಶ್ನಿಸುವವರನ್ನು ಗೇಲಿ ಮಾಡಬೇಡಿರಿ. ಪ್ರಶ್ನೆಯನ್ನು ' ತಪ್ಪಾಗಿ ಅರ್ಥಮಾಡಿಕೊಳ್ಳಬೇಡಿರಿ.

ನೀವು ಪ್ರಶ್ನೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿರೆಂಬುದನ್ನು ಖಚಿತಪಡಿಸಿಕೊಳ್ಳಿರಿ. ವಿದ್ಯಾರ್ಥಿಯು ಹೇಳುವಾಗ ಮಧ್ಯೆ ಬಾಯಿ ಹಾಕಬೇಡಿರಿ. ಒಂದು ವೇಳೆ ಪ್ರಶ್ನೆಯು ನಿಮಗೆ ಅರ್ಥವಾಗದಿದ್ದಲ್ಲಿ ವಿದ್ಯಾರ್ಥಿಯು ತನ್ನ ಪ್ರಶ್ನೆಯನ್ನು ವಿವರಿಸುವಂತೆ/ಸ್ಪಷ್ಟಪಡಿಸುವಂತೆ – ಸೌಮ್ಯವಾಗಿ – ಆತನನ್ನು/ಆಕೆಯನ್ನು ಕೇಳಿಕೊಳ್ಳಿರಿ.

ಪ್ರಶ್ನೆಯನ್ನು ಕೇಳಿದ ವಿದ್ಯಾರ್ಥಿಯನ್ನು ಉದ್ದೇಶಿಸುವುದು ಮಾತ್ರವಲ್ಲದೆ – ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಉತ್ತರಿಸಿರಿ.

ನಿಮ್ಮ ಪಾಠವನ್ನು ಗೊಂದಲಪಡಿಸಲು ಬಯಸುವ ವಿದ್ಯಾರ್ಥಿಗಳಿಂದ ಪ್ರಶ್ನೆಯನ್ನು ಅನುಮತಿಸಬೇಡಿರಿ. ಪ್ರಶ್ನೆಗಳನ್ನು ಈ ಕೆಳಗಿನ ಮಾರ್ಗಗಳಲ್ಲಿ ಯಾವುದಾದರೂ ಒಂದು ರೀತಿಯಲ್ಲಿ ವ್ಯವಹರಿಸಿರಿ, ಕೇಳಲ್ಪಟ್ಟ ಪ್ರಶ್ನೆಯು ಯಾವ ವಿಧವಾದದ್ದೆಂಬುದರ ಮೇಲೆ ಆಧಾರಿತವಾಗಿ:

1) ಅದು ಚಿಕ್ಕ ಪ್ರಶ್ನೆಯಾಗಿದ್ದರೆ ಮತ್ತು ಉತ್ತರವನ್ನು ಬೇಗನೆ ಹೇಳಬಹುದಾದರೆ – ಮತ್ತು ಆ ಉತ್ತರವು ನಿಮಗೆ ತಿಳಿದಿದ್ದರೆ: ತಕ್ಷಣವೇ ಉತ್ತರಿಸಿರಿ!

2) ಪ್ರಶ್ನೆಯು ಚಿಕ್ಕದಾಗಿದೆ – ಆದರೆ ನಿಮಗೆ ಉತ್ತರವು ತಿಳಿಯದಿದ್ದರೆ: ನಿಮಗೆ ಉತ್ತರವು ತಿಳಿದಿಲ್ಲ ಹಾಗಾಗಿ ಉತ್ತರವನ್ನು ಕಂಡುಕೊಂಡು ನಂತರ ನಿಮಗೆ ತಿಳಿಸುತ್ತೇನೆ ಎಂದು ಹೇಳಿರಿ. ಅವರಿಗೆ ಉತ್ತರವನ್ನು ತಿಳಿಸಲು ಮರೆತುಹೋಗಬೇಡಿರಿ!

3) ಪ್ರಶ್ನೆಯ ಉತ್ತರವು ಉದ್ದವಾಗಿದೆ ಅಥವಾ ಸಂಕೀರ್ಣಮಯವಾಗಿದೆ – ಆದರೆ ಆ ಪ್ರಶ್ನೆಯು ನಿಮ್ಮ ವಿಷಯಕ್ಕೆ ಸಂಬಂಧಪಟ್ಟಿರುವುದಾದರೆ: ನಿಮಗೆ ಅದರ ಕುರಿತು ಸಂಶೋಧಿಸಲು ಮತ್ತು ಆಲೋಚಿಸಲು ಕೆಲ ಸಮಯ ಬೇಕಾಗುವುದರಿಂದ ನಾನು ಈಗ ನಿಮಗೆ ಉತ್ತರವನ್ನು ತಿಳಿಸಲು ಆಗುವುದಿಲ್ಲ ಆದರೆ ನಂತರ ತಿಳಿಸುವೆನು ಎಂದು ಹೇಳಿರಿ. ಅದನ್ನು ಮಾಡಲು ಮರೆಯದಿರಿ!

4) ಪ್ರಶ್ನೆಯ ಉತ್ತರವು ಉದ್ದವಾಗಿದೆ ಅಥವಾ ಸಂಕೀರ್ಣಮಯವಾಗಿದೆ – ಆದರೆ ಆ ಪ್ರಶ್ನೆಯು ನಿಮ್ಮ ವಿಷಯಕ್ಕೆ ಸಂಬಂಧಪಟ್ಟಿಲ್ಲವಾದರೆ: ಆ ಪ್ರಶ್ನೆಯು ನಿಮ್ಮ ವಿಷಯಕ್ಕೆ ಸಂಬಂಧಪಟ್ಟದ್ದಲ್ಲ ಅದನ್ನು ಇನ್ನೊಬ್ಬ ಶಿಕ್ಷಕರು ತಮ್ಮ ತರಗತಿಯಲ್ಲಿ ವಿವರಿಸುವರು ಎಂದು ಹೇಳಿರಿ.

ಹೆದರಬೇಡಿರಿ! ವಿದ್ಯಾರ್ಥಿಗಳು ತಮ್ಮ ಪ್ರಶ್ನೆಗಳನ್ನು ಕೇಳಲಿ!

## 5. ವಿದ್ಯಾರ್ಥಿಗಳಿಗೆ ಕೇಳುವ ಪ್ರಶ್ನೆಗಳು ಪ್ರಾಮುಖ್ಯವಾದದ್ದು!

ಶಿಕ್ಷಕನು ಪ್ರಶ್ನೆಗಳ ಉಪಯೋಗ ಮಾಡಿಕೊಳ್ಳುವುದು ಪ್ರಾಮುಖ್ಯವಾದದ್ದು. ಯಾಕೆ?

- ವಿದ್ಯಾರ್ಥಿಗಳು ಸಕ್ರಿಯವಾಗುತ್ತಾರೆ
- ಶಿಕ್ಷಕನು ವಿದ್ಯಾರ್ಥಿಗಳಿಂದ ಕ್ರಿಯಾತ್ಮಕ ಪ್ರತ್ಯುತ್ತರವನ್ನು ಪಡಕೊಳ್ಳುತ್ತಾನೆ

ಒಂದು ಚಿಕ್ಕ ಉತ್ತರ ಮಾತ್ರ ಸಾಕಾಗುವ ಪ್ರಶ್ನೆಗಳು ಸರಳ ಪ್ರಶ್ನೆಗಳಾಗಿವೆ: ಹೌದು ಅಥವಾ ಇಲ್ಲ ಅಥವಾ ಒಂದು ಪದದ ಉತ್ತರ (ಉದಾಹರಣೆಗೆ ಯಾವುದಾದರೂ ಒಂದು ಹೆಸರು ಅಥವಾ ವರ್ಷ). ಸರಳ ಪ್ರಶ್ನೆಗಳನ್ನು ಯಾವಾಗ ಬಳಸಬೇಕು:

- ವಿದ್ಯಾರ್ಥಿಗಳು ನೆನಪಿನಲ್ಲಿಟ್ಟುಕೊಂಡಿದ್ದಾರೋ ಇಲ್ಲವೋ ಎಂಬುದನ್ನು ಪರಿಶೀಲಿಸಲು ತರಗತಿಯ ಸಮಯದಲ್ಲಿ ಕೇಳಬಹುದು – ವಿದ್ಯಾರ್ಥಿಗಳಿಂದ ಕ್ರಿಯಾತ್ಮಕ ಪ್ರತ್ಯುತ್ತರವನ್ನು ಪಡೆಯುವುದಕ್ಕಾಗಿ

- ಪ್ರಮುಖವಾದ ವಾಸ್ತವಾಂಶಗಳನ್ನು ವಿದ್ಯಾರ್ಥಿಗಳು ತಿಳಿದಿದ್ದಾರೋ ಇಲ್ಲವೋ ಎಂದು ತಿಳಿಯಲು ಒಂದು ' ಚಿಕ್ಕ ಪರೀಕ್ಷೆಯಾಗಿ' ಕೇಳಬಹುದು
- ಆದರೆ ಗುಂಪು ಚರ್ಚೆಯಲ್ಲಿ ಎಂದಿಗೂ ಬಳಸಬೇಡಿರಿ!

ಒಂದು ಉದ್ದವಾದ ಉತ್ತರವನ್ನು ಕೊಡಬೇಕಾಗುವ ಪ್ರಶ್ನೆಗಳು ಸಂಕೀರ್ಣ ಪ್ರಶ್ನೆಗಳಾಗಿವೆ. ಅವುಗಳು ಸಾಧಾರಣವಾಗಿ ಯಾಕೆ? ಹೇಗೆ? ವಿವರಿಸಿರಿ! ಅಥವಾ ಹೋಲಿಸಿರಿ! ಎಂಬ ಪದಗಳಿಂದ ಪ್ರಾರಂಭಗೊಳ್ಳುತ್ತವೆ. ಅವುಗಳನ್ನು ಮೂರು ವಿಧಗಳಲ್ಲಿ ಕಾಣುತ್ತೇವೆ:

1) ವಿದ್ಯಾರ್ಥಿಗಳು ಒಂದು ಅಂಶವನ್ನು ಅಥವಾ ಪಾಠವನ್ನು ಅರ್ಥಮಾಡಿಕೊಂಡಿದ್ದಾರೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಕೇಳಲ್ಪಡುವ ಪ್ರಶ್ನೆಗಳು, ಉದಾಹರಣೆಗೆ: ಪೌಲನ ಹಿನ್ನಲೆಯು ಆತನನ್ನು ತನ್ನ ಸೇವೆಗಾಗಿ ಹೇಗೆ ಸಿದ್ಧಗೊಳಿಸಿತು?
2) ವಿದ್ಯಾರ್ಥಿಗಳು ಒಂದು ಸಮಸ್ಯೆ ಅಥವಾ ಪ್ರಶ್ನೆಯ ಕುರಿತು ಆಳವಾಗಿ ಆಲೋಚಿಸಲು ಸಹಾಯ ಮಾಡುವ ಪ್ರಶ್ನೆಗಳು, ಉದಾಹರಣೆಗೆ: ಅಂತಿಯೋಕ್ಯದ ಸಭೆಯನ್ನು ಯೆರೂಸಲೇಮಿನ ಸಭೆಗೆ ಹೋಲಿಸಿರಿ? ಹೋಲಿಕೆಗಳು? ವ್ಯತ್ಯಾಸಗಳು? ನೀವು ಯಾವ ಸಭೆಯ ಸದಸ್ಯರಾಗಲು ಆಯ್ದುಕೊಳ್ಳುತ್ತೀರಿ? (ಅಪೊಸ್ತಲರ ಕೃತ್ಯಗಳ ಮೊದಲ 13 ಅಧ್ಯಾಯಗಳನ್ನು ನೀವು ಓದಿರುವುದಾದರೆ ಇವುಗಳು ಒಳ್ಳೆಯ ಪ್ರಶ್ನೆಗಳಾಗಿವೆ)
3) ವಿದ್ಯಾರ್ಥಿಗಳು ವಿವಾದಾಂಶವನ್ನು ತಮ್ಮ ಸ್ವಂತ ಅನುಭವಕ್ಕೆ ಅನ್ವಯಿಸಿಕೊಳ್ಳುವಂತೆ ಮಾಡುವ ಪ್ರಶ್ನೆಗಳು, ಉದಾಹರಣೆಗೆ: ನಮ್ಮ ಸಭೆಗಳು ಜನರು ಯೇಸುವನ್ನು ಅಂಗೀಕರಿಸಿದ ತಕ್ಷಣವೇ ಅವರಿಗೆ ಯಾಕೆ ದೀಕ್ಷಾಸ್ನಾನ ಕೊಡುವುದಿಲ್ಲ (ಅಪೊಸ್ತಲ ಕೃತ್ಯಗಳು 16 ರಲ್ಲಿರುವ ಪೌಲ ಮತ್ತು ರೋಮನ್ ಸೆರೆಮನೆಯ ಅಧಿಕಾರಿಯನ್ನು ಹೋಲಿಸಿರಿ)?

ಸಂಕೀರ್ಣಮಯ ಪ್ರಶ್ನೆಗಳನ್ನು ಗುಂಪು ಚರ್ಚೆಗಳಲ್ಲಿ ಮಾತ್ರ ಬಳಸಬೇಕು!

## 6. ಗುಂಪು ಚಟುವಟಿಕೆಗಳು ಶಿಕ್ಷಣಕ್ಕೆ ಮತ್ತು ಕಲಿಕೆಗೆ ಅತ್ಯವಶ್ಯವಾದದ್ದು!

ಮುಖ್ಯವಾಗಿ ಎರಡು ರೀತಿಯ ಗುಂಪು ಚಟುವಟಿಕೆಗಳಿವೆ:

**1. ಮಾತಿನ ಚಟುವಟಿಕೆ**

ಹೇಗೆ?

- ಚಿಕ್ಕ ಗುಂಪುಗಳು (2–3 ವ್ಯಕ್ತಿಗಳು), ವಿದ್ಯಾರ್ಥಿಗಳು ತಮ್ಮ ಕುರ್ಚಿಗಳಲ್ಲೇ ಕುಳಿತಿರಬೇಕು
- ಸರಳವಾದ ಪ್ರಶ್ನೆ, ಸಮಾಲೋಚನೆ, ಸಾರಾಂಶಗಳನ್ನು ಕೇಳಿರಿ
- ಅಲ್ಪ ಸಮಯ ಮಾತ್ರ (1–2 ನಿಮಿಷಗಳು), ಉತ್ತರಗಳನ್ನು ತರಗತಿಗೆ ತಿಳಿಸುವ ಅವಶ್ಯವಿಲ್ಲ, ಆದಾಗ್ಯೂ ಅವರು ಸರಿಯಾದ ಉತ್ತರ ಕಂಡುಕೊಂಡಿದ್ದಾರೆಂಬುದನ್ನು ಶಿಕ್ಷಕನು ಖಚಿತಪಡಿಸಿಕೊಳ್ಳಬೇಕು

ಯಾಕೆ?

- ಎಲ್ಲರೂ ಭಾಗವಹಿಸಲು, ಎಲ್ಲರಿಗೂ ಆಲೋಚಿಸುವ ಮತ್ತು ವ್ಯಕ್ತಪಡಿಸುವ ಅವಕಾಶ ಸಿಗುವುದು
- ಪಾಠದ ತಾಳವನ್ನು ಬದಲಾಯಿಸುತ್ತದೆ, ಉಪನ್ಯಾಸದ ಏಕರಾಗದಿಂದ ವಿದ್ಯಾರ್ಥಿಗಳಿಗೆ ವಿರಾಮ ಕೊಡುತ್ತದೆ
- ವಿದ್ಯಾರ್ಥಿಗಳು ಅಂಶವನ್ನು ಅರ್ಥಮಾಡಿಕೊಂಡಿದ್ದಾರೋ ಇಲ್ಲವೋ, ಅವರು ಎಷ್ಟರ ಮಟ್ಟಿಗೆ ನೆನಪಿನಲ್ಲಿಟ್ಟುಕೊಂಡಿದ್ದಾರೆ ಮತ್ತು ಅವರು ಇದಕ್ಕೂ ಮುಂಚೆ ಎಷ್ಟು ತಿಳಿದುಕೊಂಡಿದ್ದರು ಎಂಬುದನ್ನು ಪರೀಕ್ಷಿಸಲು ಶಿಕ್ಷಕನಿಗೆ ಅವಕಾಶ ಕೊಡುತ್ತದೆ

**2. ತರಗತಿಯ ಸಮಯದಲ್ಲಿ ಗುಂಪುಗಳು (ಅಥವಾ ಲೈಬ್ರರಿ/ಮನೆಕೆಲಸದ ಸಮಯದಲ್ಲಿ)**

ಹೇಗೆ?

- ಸಾಧಾರಣವಾಗಿ ತರಗತಿಯಲ್ಲಿ (ಅಥವಾ ಹತ್ತಿರವಿರುವ ಸೂಕ್ತ ಸ್ಥಳದಲ್ಲಿ), ಪ್ರತಿಯೊಂದು ಗುಂಪಿನಲ್ಲಿಯೂ 3–5 ಜನರು, ಮಿಶ್ರಿತ ಗುಂಪು (ಬಲಹೀನ ಮತ್ತು ಜಾಣ ವಿದ್ಯಾರ್ಥಿಗಳು, ಹುಡುಗರು ಮತ್ತು ಹುಡುಗಿಯರು)
- ಸ್ವಲ್ಪ ಕಷ್ಟಕರವಾದ ಕೆಲಸವನ್ನು ಕೊಡಿರಿ, ಆದರೆ ಅವುಗಳು 'ಮಾಡಲು ಸಾಧ್ಯವಾಗುವಂತಹ' ಕೆಲಸವಾಗಿರಬೇಕು, 15–20 ನಿಮಿಷಗಳು; ಚರ್ಚೆಯನ್ನು ನಡೆಸಲು ಒಬ್ಬ 'ಅಧ್ಯಕ್ಷನನ್ನು' ನೇಮಿಸಿರಿ ಮತ್ತು ವರದಿ ಅಂಶಗಳನ್ನು ಬರೆಯಲು ಒಬ್ಬ 'ಕಾರ್ಯದರ್ಶಿಯನ್ನು' ನೇಮಿಸಿರಿ
- ಗುಂಪುಗಳ ಮೇಲ್ವಿಚಾರಣೆ ವಹಿಸಿರಿ (ಎಲ್ಲರೂ ಭಾಗವಹಿಸಲೇಬೇಕು!); ಅವರೆಲ್ಲರೂ ಚರ್ಚೆ ಮುಗಿಸಿದ ನಂತರ ನಿಲ್ಲಿಸಿರಿ
- ವರದಿ ಸಲ್ಲಿಸುವುದಕ್ಕಾಗಿ ಹೆಚ್ಚಿನ ಸಮಯವನ್ನು ಕಳೆಯಬೇಡಿರಿ! ಆದರೆ ನೀವು ಎಚ್ಚರವಾಗಿದ್ದು ತಪ್ಪುಗಳನ್ನು ಮತ್ತು ತಪ್ಪು ಗ್ರಹಿಕೆಗಳನ್ನು ತಿದ್ದಿರಿ – ಇಲ್ಲವಾದರೆ ವಿದ್ಯಾರ್ಥಿಗಳು ತಪ್ಪಾದ ಸಂಗತಿಗಳನ್ನು ಕಲಿತುಕೊಳ್ಳುವರು!

ಯಾಕೆ?

- ಅದು ಕಲಿಕೆಯ ಪ್ರಕ್ರಿಯೆಯನ್ನು ಬಲಪಡಿಸುತ್ತದೆ, ವಿವಿಧ ಕಲಿಕೆಯ ಶೈಲಿಗಳನ್ನು ಉಪಯೋಗಿಸಿಕೊಳ್ಳುತ್ತದೆ
- ವಿಭಿನ್ನತೆಯನ್ನು ಒದಗಿಸುತ್ತದೆ ಮತ್ತು ಉಪನ್ಯಾಸದ ಏಕರಾಗದಿಂದ ವಿರಾಮ ಕೊಡುತ್ತದೆ
- ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡುತ್ತದೆ
- ವಿದ್ಯಾರ್ಥಿಗಳ ಅನುಭವವನ್ನು ಉಪಯೋಗಿಸಿಕೊಳ್ಳುತ್ತದೆ

ಗುಂಪು ಕೆಲಸವು ಬೇಸರ ಉಂಟುಮಾಡುವಂತೆ ಮಾಡಬೇಡಿರಿ! ವಿದ್ಯಾರ್ಥಿಗಳ ಸಮಯವನ್ನು ವ್ಯರ್ಥಮಾಡಬೇಡಿರಿ!

### 3. ಒಬ್ಬ ಒಳ್ಳೆಯ ಶಿಕ್ಷಕನು ಯಾರು?

ಒಬ್ಬ ಒಳ್ಳೆಯ ಶಿಕ್ಷಕನಾಗಲು ನಿಮಗೆ ಕೆಲವು ವೈಯಕ್ತಿಕ ಗುಣಗಳಿರಬೇಕು, ಎಂತವೆಂದರೆ:

1) 'ಪಾಂಡಿತ್ಯ':

- ನಿಮಗೆ ಕುತೂಹಲದ ಹವ್ಯಾಸವಿದೆಯೋ, ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬೇಕು ಮತ್ತು ಹೆಚ್ಚಿನ ಸಂಗತಿಗಳನ್ನು ಕಲಿತುಕೊಳ್ಳಬೇಕು ಎಂಬ ಬಯಕೆಯಿದೆಯೋ?
- ಪುರಾವೆ ಮತ್ತು ವೈಚಾರಿಕತೆಯ ಕುರಿತು ನಿಮಗೆ ಗೌರವವಿದೆಯೋ?
- ಸನ್ನಿವೇಶದ ಬೆಳಕಿನಲ್ಲಿ ಸಂಗತಿಗಳನ್ನು ಕಾಣಲು, ವಿವರಣೆಗಳನ್ನು ಸಾಧಾರಣ ನಿಯಮಗಳಿಗೆ ಸಂಬಂಧಿಸಲು, ವಾಸ್ತವಾಂಶವನ್ನು ಸಿದ್ಧಾಂತಗಳಿಗೆ/ಸಿದ್ಧಾಂತಗಳನ್ನು ವಾಸ್ತವಾಂಶಗಳಿಗೆ ಸಂಬಂಧಿಸಲು ಶಕ್ತರಾಗಿದ್ದೀರೋ?

2) ಪ್ರಾಮಾಣಿಕತೆ

- ನೀವು ಯಾಥಾರ್ಥರೋ? ನಿಷ್ಪಕ್ಷಪಾತವುಳ್ಳವರೂ ಸತ್ಯವಂತರೂ ಆಗಿದ್ದೀರೋ? ವಾಸ್ತವಗಳನ್ನು ತಿರುಚದೇ, ಸಂಕುಚಿತ ಮನಸ್ಸಿಲ್ಲದವರಾಗಿದ್ದೀರೋ?
- ನೀವು ನಿಮ್ಮನ್ನು ನಿಯಂತ್ರಣದಲ್ಲಿರಿಸಿಕೊಂಡಿದ್ದೀರೋ, ಮಿತಿಮೀರಿ ಪ್ರತಿಕ್ರಿಯಿಸುವುದಿಲ್ಲವೋ, ಇತರರನ್ನು ದೂಷಿಸುವುದಿಲ್ಲವೋ?

3) ನೀವು ಸಂವಹಿಸಬಲ್ಲಿರೋ?

- ನೀವು ವಿದ್ಯಾರ್ಥಿಗಳಿಗೆ ವಿವರಿಸಲು ಮತ್ತು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲು ಅವರಿಗೆ ಸಹಾಯ ಮಾಡಲು ಶಕ್ತರಾಗಿದ್ದೀರೋ?
- ವಿದ್ಯಾರ್ಥಿಗಳಿಂದ ಪ್ರಶ್ನೆಗಳನ್ನು ಎದುರಿಸಲು – ಮತ್ತು ಅದನ್ನು ಪ್ರೋತ್ಸಾಹಿಸಲು – ನೀವು ಮನಸ್ಸುಳ್ಳವರಾಗಿದ್ದೀರೋ?
- ನೀವು ಒಬ್ಬ ವಿದ್ಯಾರ್ಥಿಯಿಂದ ಉತ್ತಮವಾದುದ್ದನ್ನು ಹೊರತರಲು ಅವರನ್ನು ಪ್ರೋತ್ಸಾಹಿಸಲು ಮತ್ತು ಪೋರಿಸಲು ಶಕ್ತರಾಗಿದ್ದೀರೋ?
- ನೀವು ಕೇಳಿಸಿಕೊಳ್ಳಲು ಮತ್ತು ಅರ್ಥಮಾಡಿಕೊಳ್ಳಲು, ವಿದ್ಯಾರ್ಥಿಗಳಿಗೆ ಅನುಕಂಪ ತೋರಿಸಲು, ಅವರನ್ನು ಗೌರವದಿಂದ ನೋಡಲು ಮನಸ್ಸುಳ್ಳವರಾಗಿದ್ದೀರೋ?

ಹಾಗಾದರೆ ನೀವು ಒಬ್ಬ ಒಳ್ಳೆಯ ಶಿಕ್ಷಕನೋ/ಶಿಕ್ಷಕಳೋ?

# ‘ಪೀಠಿಕೆಯ’ ಪ್ರಶ್ನೋತ್ತರಗಳು

ಈ ಪ್ರಶ್ನೆಗಳು ವಿದ್ಯಾರ್ಥಿಗಳು ಪಠ್ಯವನ್ನು ಅರ್ಥಮಾಡಿಕೊಂಡಿದ್ದಾರೆಂಬುದನ್ನು ಶಿಕ್ಷಕನು ಖಚಿತಪಡಿಸಿಕೊಳ್ಳಲು ಆತನಿಗೆ ಸಹಾಯಮಾಡುತ್ತವೆ. ಕಲಿಕೆಯನ್ನು ಸಬಲಪಡಿಸಲು ಮತ್ತು ‘ಪೀಠಿಕೆ’ ಎಂಬ ಅಧ್ಯಾಯವನ್ನು ಪರಾಮರ್ಶಿಸಲು ಇವುಗಳನ್ನು ವಿದ್ಯಾರ್ಥಿಗಳೂ (ಮತ್ತು ಸಾಮಾನ್ಯ ವಾಚಕರೂ) ಸಹ ಉಪಯೋಗಿಸಬಹುದು.

ವಾಚಕರಿಗೆ ಮನದಟ್ಟುಮಾಡಿಕೊಡುವ ಸಲುವಾಗಿ ನಾನು ನನ್ನ ಕೆಲವು ಉತ್ತರಗಳನ್ನು ಒದಗಿಸಿದ್ದೇನೆ. ಈ ಉತ್ತರಗಳು ನಿಮ್ಮ ಉತ್ತರಗಳು ಏಕರೀತಿಯಾಗಿ ಇಲ್ಲದೆ ಇರಬಹುದು ಎಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಒಂದು ವೇಳೆ ನಿಮಗೆ ಸಂದೇಹಗಳಿದ್ದರೆ, ದಯಮಾಡಿ ಪಠ್ಯಪುಸ್ತಕದಲ್ಲಿರುವ ಸಂಬಂಧಪಟ್ಟ ವಾಕ್ಯಭಾಗವನ್ನು ಮತ್ತೊಮ್ಮೆ ಓದಿರಿ. ಅಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಗಳು ಸಿಗುವವು!

1. **ಲೂಕನು ಬರೆದ ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳು ಯಾವ ರೀತಿಯಾಗಿ ಒಂದೇಯಾಗಿವೆ?**

   ಉತ್ತರ:
   1) ಇವೆರಡೂ ಲೂಕನಿಂದ ಬರೆಯಲ್ಪಟ್ಟಿವೆ.
   2) ಇವೆರಡೂ ಥೆಯೊಫಿಲನನ್ನು ಸಂಬೋಧಿಸುತ್ತವೆ.
   3) ಇವೆರಡನ್ನೂ ಒಟ್ಟಿಗೆ ಓದಿ ಒಟ್ಟಿಗೆ ಅರ್ಥಮಾಡಿಕೊಳ್ಳಬೇಕೆಂದು ಬರೆಯಲ್ಪಟ್ಟಿವೆ. ಹಾಗಾಗಿ ನಿಜವಾಗಿಯೂ ಇವೆರಡೂ ಒಂದೇ ಪುಸ್ತಕದ ಎರಡು ಸಂಪುಟಗಳಾಗಿವೆ.

2. **ಅಪೋಸ್ತಲರ ಕೃತ್ಯಗಳ ಸಾಹಿತ್ಯ ಶೈಲಿಯನ್ನು ನೀವು ಹೇಗೆ ವರ್ಣಿಸುತ್ತೀರಿ?**

   ಉತ್ತರ: ಇದು ಒಂದು ಐತಿಹಾಸಿಕ ಪುಸ್ತಕವಾಗಿದೆ. ಆದರೆ ಇದು ಆಧುನಿಕ ಅರ್ಥದಲ್ಲಿ ‘ಐತಿಹಾಸಿಕವಲ್ಲ’. ರೋಮನ್ ಸಂಸ್ಕೃತಿಯಲ್ಲಿ ಐತಿಹಾಸಿಕ ಪುಸ್ತಕಗಳ ಉದ್ದೇಶವು ಐತಿಹಾಸಿಕ ಘಟನೆಗಳ ಆಧಾರಿತವಾದ ಒಂದು ಸಂದೇಶವನ್ನು ಓದುಗರಿಗೆ ತಿಳಿಸುವದಾಗಿತ್ತು. ಲೂಕನು ಸಹ ಹಳೆ ಒಡಂಬಡಿಕೆಯಿಂದ ಪ್ರಭಾವಿತನಾಗಿದ್ದರಿಂದ ಆತನ ದೃಷ್ಟಿಕೋನವೇನಾಗಿತ್ತೆಂದರೆ, ದೇವರ ಪವಿತ್ರಾತ್ಮನು ಆದಿಸಭೆಯ ರೂಪಾಂತರ ಮತ್ತು ವಿಸ್ತರಣೆಯ ಮೂಲಕ ಕಾರ್ಯಮಾಡುತ್ತಿದ್ದಾನೆ ಎಂಬುದಾಗಿದೆ.

3. **ಅಪೋಸ್ತಲರ ಕೃತ್ಯಗಳ ರಚನೆಯನ್ನು ಅರ್ಥಮಾಡಿಕೊಳ್ಳಲು ಮೂರು ಮಾರ್ಗಗಳನ್ನು ವಿವರಿಸಿರಿ!**

   ಉತ್ತರ:

1) ಅಪೊಸ್ತಲರ ಕೃತ್ಯಗಳ ಮುಖ್ಯ ಪಾತ್ರವಾದ ಅಪೊಸ್ತಲನ ಮೇಲೆ ಅದನ್ನು ಆಧರಿಸಬಹುದು: ಪುಸ್ತಕದ ಮೊದಲ ಭಾಗದಲ್ಲಿ ಪೇತ್ರನು, ಪುಸ್ತಕದ ಎರಡನೆಯ ಭಾಗದಲ್ಲಿ ಪೌಲನು.
2) ಅ. ಕೃ. 1:8 ರ ಮೇಲೆ ಅದನ್ನು ಆಧರಿಸಬಹುದು: ಯೆರೂಸಲೇಮಿನಿಂದ ಯೂದಾಯ ಮತ್ತು ಸಮಾರ್ಯದವರೆಗೂ ನಂತರ ಲೋಕದ ಉಳಿದ ಭಾಗಕ್ಕೂ ಸುವಾರ್ತೆಯು ವಿಸ್ತಾರಗೊಂಡದ್ದು.
3) ಹಿಂದಿನ ಭಾಗವನ್ನು ಸಾರಾಂಶಗೊಳಿಸುವ ಆರು ಮುಖ್ಯ ವಚನಗಳ ಮೇಲೆ ಅದನ್ನು ಆಧರಿಸಬಹುದು: ಲೂಕನು ಸುವಾರ್ತೆಯ ವಿಸ್ತರಣೆಯ ಕುರಿತು ಆರು ಸುಂದರವಾದ ಚಿತ್ರಣಗಳನ್ನು ವರ್ಣಿಸುತ್ತಾನೆ.

4. **ಅಪೊಸ್ತಲರ ಕೃತ್ಯಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಮತ್ತು ಮೆಚ್ಚಲು ನಮಗೆ ಯಾವ ರೀತಿಯ ಹಿನ್ನಲೆ ಜ್ಞಾನದ ಅವಶ್ಯವಿದೆ?**

ಉತ್ತರ:

1) ಆ ಕಾಲದ ಪಾಲೆಸ್ತೀನಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸನ್ನಿವೇಶ
2) ರೋಮನ್ ಸಾಮ್ರಾಜ್ಯದಲ್ಲಿ ಉಂಟಾದ ಯೆಹೂದ್ಯರ ಚದರುವಿಕೆಯ ಸನ್ನಿವೇಶ ಮತ್ತು ಪ್ರಾಮುಖ್ಯತೆ
3) ರೋಮನ್ ಸಾಮ್ರಾಜ್ಯವನ್ನು ಆಳಿದ (ಹೆಲೆನಿಸಮ್ ಎಂದು ಕರೆಯಲ್ಪಡುವ) ಗ್ರೀಕ್ ಸಂಸ್ಕೃತಿ
4) ರೋಮನ್ ಸಾಮ್ರಾಜ್ಯದಲ್ಲಿನ ರಾಜಕೀಯ ಮತ್ತು ಭೌಗೋಳಿಕ ಸ್ಥಿತಿಗಳು

5. **ಅಪೊಸ್ತಲರ ಕೃತ್ಯಗಳ ಕಾಲಾನುಕ್ರಮಣಿಕೆಯನ್ನು ಅರ್ಥಮಾಡಿಕೊಳ್ಳಲು ಇರುವ ಎರಡು ಅತೀ ಪ್ರಾಮುಖ್ಯ ದಿನಾಂಕಗಳಾವವು?**

ಉತ್ತರ:

1) ಕ್ರಿ. ಶ. 30 ರ ಸುಮಾರು, ಈ ಸಮಯದಲ್ಲಿ ಪುಸ್ತಕದ ಮೊದಲ ಘಟನೆಗಳು ಜರುಗಿದವು
2) ಕ್ರಿ. ಶ. 60–62, ಈ ಸಮಯದಲ್ಲಿ ಪುಸ್ತಕವು ರೋಮನಲ್ಲಿ ಉಂಟಾದ ಪೌಲನ ಸೆರೆಮನೆವಾಸದೊಂದಿಗೆ ಕೊನೆಗೊಳ್ಳುತ್ತದೆ

6. **ಅಪೊಸ್ತಲರ ಕೃತ್ಯಗಳಲ್ಲಿರುವ ಕಥೆಗಳು ನಿಯಮಾತ್ಮಕಕ್ಕಿಂತಲೂ ಹೆಚ್ಚಾಗಿ ವಿವರಾತ್ಮಕವಾಗಿದೆ ಎಂಬ ಹೇಳಿಕೆಯನ್ನು ವಿವರಿಸಿರಿ!**

ಉತ್ತರ: ಇದರ ಅರ್ಥ ಲೂಕನು ಆದಿಸಭೆಯಲ್ಲಿ ನಡೆದ ಘಟನೆಗಳನ್ನು ವಿವರಿಸುತ್ತಾನೆ ಮತ್ತು ಈ ಘಟನೆಗಳು ಇತರೆ ಜನರಿಗೆ ಅಥವಾ ಇತರೆ ಸಭೆಗಳಿಗೆ ನಿಯಮಗಳಾಗಬೇಕೆಂದು ಆತನ ಉದ್ದೇಶವಾಗಿರಲಿಲ್ಲ.

7. **ಈ ಹೇಳಿಕೆಯನ್ನು ಪುಷ್ಟೀಕರಿಸುವ ಎರಡು ಉದಾಹರಣೆಗಳನ್ನು ಕೊಡಿರಿ!**

ಉತ್ತರ:

1) ಸಭೆಗಳು ವ್ಯತ್ಯಾಸವಾದ ರೀತಿಯಲ್ಲಿ ಸಂಘಟಿತವಾದಂತೆ ತೋರುತ್ತದೆ, ಯೆರೂಸಲೇಮನ್ನು ಸಿರಿಯಾದ ಅಂತಿಯೋಕ್ಯದೊಂದಿಗೆ ಮತ್ತು ತನ್ನ ಮೊದಲ ಸೇವಾ ಪ್ರಯಾಣದಲ್ಲಿ ಪೌಲನು ಸ್ಥಾಪಿಸಿದ ಸಭೆಗಳೊಂದಿಗೆ ಹೋಲಿಸಿರಿ.
2) 'ವಿಶ್ವಾಸಿಗಳು ಎಲ್ಲವನ್ನೂ ಹಂಚಿಕೊಂಡರು' ಎಂಬುದು ಯೆರೂಸಲೇಮಿಗೆ ಮಾತ್ರ ಅನ್ವಯಿಸಿದಂತೆ ತೋರುತ್ತದೆ, ಬೇರೆ ಯಾವ ಸಭೆಗೂ ಅನ್ವಯಿಸಲಿಲ್ಲ.

8. **ಹಾಗಾದರೆ ಇಂದು ನಮಗೆ ಅಪೊಸ್ತಲರ ಕೃತ್ಯಗಳ ಸಂದೇಶವೇನು?**

ಉತ್ತರ: ಲೂಕನು ನಮಗೆ ತಿಳಿಸುವ ಸಂದೇಶವು ಆತನು ಮುಂದಿಡುವ ಆದಿಸಭೆಯ ಸಂಪೂರ್ಣ ಚಿತ್ರಣದಲ್ಲಿ ಪ್ರಾಥಮಿಕವಾಗಿ ಕಂಡುಬರುತ್ತದೆ. ಪ್ರತಿಯೊಂದು ಸಭೆಯು – ಅದರ ಭೌಗೋಳಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯು ಏನೇ ಆಗಿದ್ದರೂ – ಒಂದು ಜಯಭರಿತವಾದ, ಮುಂದೆ–ಸಾಗುವ ಮತ್ತು ಆತ್ಮಭರಿತವಾದ ಸಭೆಯಾಗಿರಬೇಕು, ಸುವಾರ್ತೆಯನ್ನು ಲೋಕದೊಳಗೆ ತೆಗೆದುಕೊಂಡು ಹೋಗುವ ಸಭೆಯಾಗಿರಬೇಕು.

# ‘ಹೆಚ್ಚಿನ ವಾಸ್ತವಾಂಶಗಳ’ ಪ್ರಶ್ನೋತ್ತರಗಳು

ಈ ಪ್ರಶ್ನೆಗಳು ವಿಧ್ಯಾರ್ಥಿಗಳು ಪಠ್ಯವನ್ನು ಅರ್ಥಮಾಡಿಕೊಂಡಿದ್ದಾರೆಂಬುದನ್ನು ಶಿಕ್ಷಕನು ಖಚಿತಪಡಿಸಿಕೊಳ್ಳಲು ಆತನಿಗೆ ಸಹಾಯಮಾಡುತ್ತವೆ. ಕಲಿಕೆಯನ್ನು ಸಬಲಪಡಿಸಲು ಮತ್ತು ‘ಹೆಚ್ಚಿನ ವಾಸ್ತವಾಂಶಗಳು’ ಎಂಬ ಅಧ್ಯಾಯವನ್ನು ಪರಾಮರ್ಶಿಸಲು ಇವುಗಳನ್ನು ವಿದ್ಯಾರ್ಥಿಗಳೂ (ಮತ್ತು ಸಾಮಾನ್ಯ ವಾಚಕರೂ) ಸಹ ಉಪಯೋಗಿಸಬಹುದು.

ವಾಚಕರಿಗೆ ಮನದಟ್ಟುಮಾಡಿಕೊಡುವ ಸಲುವಾಗಿ ನಾನು ನನ್ನ ಕೆಲವು ಉತ್ತರಗಳನ್ನು ಒದಗಿಸಿದ್ದೇನೆ. ಈ ಉತ್ತರಗಳು ನಿಮ್ಮ ಉತ್ತರಗಳು ಏಕರೀತಿಯಾಗಿ ಇಲ್ಲದೆ ಇರಬಹುದು ಎಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಒಂದು ವೇಳೆ ನಿಮಗೆ ಸಂದೇಹಗಳಿದ್ದರೆ, ದಯಮಾಡಿ ಪಠ್ಯಪುಸ್ತಕದಲ್ಲಿರುವ ಸಂಬಂಧಪಟ್ಟ ವಾಕ್ಯಭಾಗವನ್ನು ಮತ್ತೊಮ್ಮೆ ಓದಿರಿ. ಅಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಗಳು ಸಿಗುವವು!

## ಅಪೋಸ್ತಲರ ಕೃತ್ಯಗಳ ಲೇಖಕನಾದ ಲೂಕನು

1. **ಅಪೋಸ್ತಲರ ಕೃತ್ಯಗಳಲ್ಲಿ ಲೂಕನ ಹೆಸರನ್ನು ನಾವು ಎಲ್ಲಿ ಕಾಣುತ್ತೇವೆ?**

   ಉತ್ತರ: ಎಲ್ಲಿಯೂ ಇಲ್ಲ!

2. **ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಮತ್ತು ಲೂಕನು ಬರೆದ ಸುವಾರ್ತೆಯನ್ನು ಒಬ್ಬ ವ್ಯಕ್ತಿಯೇ ಬರೆದಿದ್ದಾನೆ ಎಂದು ನಮಗೆ ಹೇಗೆ ತಿಳಿದದೆ?**

   ಉತ್ತರ: ಅಪೋಸ್ತಲರ ಕೃತ್ಯಗಳ ಪುಸ್ತಕವು ಹಿಂದಿನ ಒಂದು ಪುಸ್ತಕವನ್ನು ಉಲ್ಲೇಖಿಸುವದರೊಂದಿಗೆ ಪ್ರಾರಂಭಗೊಳ್ಳುತ್ತದೆ, ಅದೇ ಲೇಖಕನು ಅದೇ ವ್ಯಕ್ತಿಗೆ, ಅಂದರೆ ಥೆಯೊಫಿಲನಿಗೆ, ಬರೆಯುತ್ತಾನೆ.

3. **ಲೂಕನು ಬರೆದ ಸುವಾರ್ತೆಯನ್ನು ಮತ್ತು ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಬರೆದ ಆ ವ್ಯಕ್ತಿಯು ಪೌಲನ ಜೊತೆ-ಪ್ರಯಾಣಿಕನೂ ಹಾಗೂ ವೈದ್ಯನೂ ಆದ ಲೂಕನೇ ಎಂದು ನಾವು ನಂಬಲು ಯಾವ ಕಾರಣಗಳಿವೆ?**

   ಉತ್ತರ: ಅಪೋಸ್ತಲರ ಕೃತ್ಯಗಳ ಪುಸ್ತಕದ ಲೇಖಕನು ಒಬ್ಬ ಅನ್ಯನಾಗಿರಲೇಬೇಕು ಮತ್ತು ಈ ಸ್ಥಾನವನ್ನು ತುಂಬುವ ಏಕೈಕ ಅನ್ಯನು ಲೂಕನಾಗಿದ್ದಾನೆ.

4. **ಬಹುತೇಕವಾಗಿ, ಲೂಕನು ತನ್ನ ಮಾಹಿತಿಯನ್ನು ಯಾವಾಗ ಸಂಗ್ರಹಿಸಿದನು ಮತ್ತು ತನ್ನ ಎರಡು ಪುಸ್ತಕಗಳನ್ನು ಬರೆಯಲು ಆತನಿಗೆ ಯಾವಾಗ ಸಮಯ ಸಿಕ್ಕಿತು?**

ಉತ್ತರ: ಪೌಲನು ಸೆಜರೇಯಾದಲ್ಲಿ ಎರಡು ವರ್ಷಗಳ ಕಾಲ ಸೆರೆಮನೆವಾಸದಲ್ಲಿದ್ದ ಅವಧಿಯಲ್ಲಿ. ನಂತರ ಲೂಕನು ಪೌಲನು ರೋಮ್‌ನಲ್ಲಿ ಸೆರೆಮನೆವಾಸಿಯಾಗಿದ್ದಾಗ ಅಪೋಸ್ತಲರ ಕೃತ್ಯಗಳನ್ನು ಮುಗಿಸಿದನು.

## ಅಪೋಸ್ತಲರ ಕೃತ್ಯಗಳ ಸಂದೇಶ

1. **ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಪಡೆದ ಥೆಯೊಫಿಲನ ಕುರಿತು ನಮಗೆ ಏನು ತಿಳಿದದೆ?**

ಉತ್ತರ: ಬಹುಶಃ ಆತನು ಒಂದು ಉನ್ನತ ಸ್ಥಾನ ಮತ್ತು ಅಧಿಕಾರದಲ್ಲಿದ್ದ ಒಬ್ಬ ಅನ್ಯ ವಿಶ್ವಾಸಿಯಾಗಿದ್ದಿರಬಹುದು (ಆತನ ಹೆಸರು ಗ್ರೀಕ್ ಭಾಷೆಯದ್ದಾಗಿತ್ತು).

2. **ಯೇಸು ಲೋಕದಲ್ಲಿ ತನ್ನ ಅಪೋಸ್ತಲರ ಮತ್ತು ತನ್ನ ಸಭೆಯ ಮೂಲಕ ತನ್ನ ಕಾರ್ಯವನ್ನು ಹೇಗೆ ಮುಂದುವರೆಸುತ್ತಾನೆ?**

ಉತ್ತರ: ಆತನು ಪವಿತ್ರಾತ್ಮನ ಮೂಲಕ ಅದನ್ನು ಮಾಡುತ್ತಾನೆ.

## ಅಪೋಸ್ತಲರ ಕೃತ್ಯಗಳ ಸಾಹಿತ್ಯ ಪ್ರಕಾರ

1. **ಪ್ರಾಚೀನ ಮತ್ತು ಸತ್ಯವೇದದ ಅರ್ಥದಲ್ಲಿ ಅಪೋಸ್ತಲರ ಕೃತ್ಯಗಳ ಪುಸ್ತಕವು 'ಇತಿಹಾಸವಾಗಿದೆ' ಎಂಬುದರ ಅರ್ಥವೇನು?**

ಉತ್ತರ:

1) ಅಪೋಸ್ತಲರ ಕೃತ್ಯಗಳು ಆದಿಸಭೆಯ ಒಂದು ವಸ್ತುನಿಷ್ಠವಾದ ಮತ್ತು ಪೂರ್ಣವಾದ ಅಧ್ಯಯನವಲ್ಲ.
2) ಅದು ಒಂದು ದೈವಿಕ ದೃಷ್ಟಿಕೋನದಿಂದ ಬರೆಯಲ್ಪಟ್ಟಿದೆ, ಹಾಗಾಗಿ ಅದು ಒಂದು ಸಂದೇಶವುಳ್ಳ ಪುಸ್ತಕವಾಗಿದೆ: ಪವಿತ್ರಾತ್ಮನು ಹೇಗೆ ಸುವಾರ್ತೆಯನ್ನು ಅದರ ಯೆರೂಸಲೇಮಿನ ನೆಲೆ ಮತ್ತು ಯೆಹೂದ್ಯ ಪ್ರಾರಂಭದಿಂದ ಒಂದು ಜಗದಾದ್ಯಂತವಾದ ಮತ್ತು ಅನ್ಯರ ಚಳುವಳಿಯಾಗಿ ಮಾರ್ಪಡಿಸಿದನು ಎಂಬುದರ ಕುರಿತಾದ ಕಥೆಯಾಗಿದೆ.

2. **ಒಬ್ಬ ಆಧುನಿಕ ವಾಚಕನು 'ಆದಿಸಭೆಯ ಇತಿಹಾಸದಿಂದ' ನಿರೀಕ್ಷಿಸುವ ಮತ್ತು ಲೂಕನು ಅಪೋಸ್ತಲರ ಕೃತ್ಯಗಳಲ್ಲಿ ದಾಖಲಿಸದ ಐತಿಹಾಸಿಕ ಅಂಶಗಳ ಉದಾಹರಣೆಗಳನ್ನು ಕೊಡಿರಿ!**

ಉತ್ತರ:

1) ಅಪೋಸ್ತಲರ ಇನ್ನೂ ಸಂಪೂರ್ಣವಾದ ಇತಿಹಾಸಗಳು: ಅವರ ಜೀವನಗಳು ಮತ್ತು ಸೇವೆಗಳು

2) ಸುವಾರ್ತೆಯು ಕ್ರೇಟ, ಇಲ್ಲುರಿಯ ಮತ್ತು ಪತ್ರಿಕೆಗಳಲ್ಲಿ ತಿಳಿಸಲ್ಪಟ್ಟಿರುವ ಇತರೆ ಸ್ಥಳಗಳಿಗೆ ಹೇಗೆ ತಲುಪಿತು ಎಂಬುದರ ಕುರಿತಾದ ಕೆಲವು ಮಾಹಿತಿ

3) ಸುವಾರ್ತೆಯು ಪೂರ್ವದಲ್ಲಿನ ಮೆಸಪೊಟಾಮಿಯಕ್ಕೂ ಮತ್ತು ದಕ್ಷಿಣದಲ್ಲಿನ ಈಜಿಪ್ಟಿಗೂ ಹೇಗೆ ಹರಡಿತು ಎಂಬುದರ ದಾಖಲೆಗಳು

## ಅಪೋಸ್ತಲರ ಕೃತ್ಯಗಳ ದಿನಾಂಕ

**1. ಲೂಕನು ಬಹುಶಃ ಅಪೋಸ್ತಲರ ಕೃತ್ಯಗಳನ್ನು ಕ್ರಿ. ಶ. 60–62 ರಲ್ಲಿನ ಪೌಲನ ಸೆರೆಮನೆವಾಸದ ತಕ್ಷಣವೇ ಯಾಕೆ ಬರೆದು ಮುಗಿಸಿದನೆಂಬುದಕ್ಕೆ ಕೆಲವು ಕಾರಣಗಳನ್ನು ಕೊಡಿರಿ!**

ಉತ್ತರ: ‘ಅಪೋಸ್ತಲರ ಕೃತ್ಯಗಳ ದಿನಾಂಕ’ ಎಂಬ ಅಧ್ಯಾಯದಲ್ಲಿರುವ ಐದು ಅಂಶಗಳನ್ನು ನೋಡಿರಿ!

**2. ಅಪೋಸ್ತಲರ ಕೃತ್ಯಗಳು ಥೆಯೊಫಿಲನಿಗಾಗಿ ಸಿದ್ಧಗೊಳಿಸಲ್ಪಟ್ಟ ಮತ್ತು ರೋಮ್‌ನಲ್ಲಿನ ಪೌಲನ ವಿಚಾರಣೆಗೆ ಸಂಬಂಧಿಸಿದ ಒಂದು ‘ಪ್ರತಿವಾದದ ಕರಡು’ ಎಂಬ ಸಿದ್ಧಾಂತವನ್ನು ವಿವರಿಸಿರಿ!**

ಉತ್ತರ: ‘ಅಪೋಸ್ತಲರ ಕೃತ್ಯಗಳ ದಿನಾಂಕ’ ಎಂಬ ಅಧ್ಯಾಯದಲ್ಲಿರುವ ವಿವರಣೆಯನ್ನು ನೋಡಿರಿ!

**3. ರೋಮನ್ ಅಧಿಕಾರಿಗಳಿಗೆ ಸಂಬಂಧಿಸಿ ಲೂಕನು ಸಭೆಯನ್ನು ಹೇಗೆ ವಿವರಿಸುತ್ತಾನೆ?**

ಉತ್ತರ: ಸಭೆಯು ಒಂದು ಶಾಂತಿಯುಳ್ಳ ಚಳುವಳಿಯಾಗಿತ್ತು, ಅದು ರೋಮನ್ ಸರ್ಕಾರದ ಸ್ಥಿರತೆಗೆ ಯಾವ ಧಕ್ಕೆಯನ್ನೂ ಉಂಟುಮಾಡಲಿಲ್ಲ.

## ಅಪೋಸ್ತಲರ ಕೃತ್ಯಗಳ ರಚನೆ

**1. ಅಪೋಸ್ತಲರ ಕೃತ್ಯಗಳಲ್ಲಿ ಕಂಡುಬರುವ ಪೇತ್ರ ಹಾಗೂ ಪೌಲನ ನಡುವೆ ಇರುವ ಸಮಾನತೆಗಳ ಪಟ್ಟಿಯನ್ನು ಮಾಡಿರಿ!**

ಉತ್ತರ: ‘ಅಪೋಸ್ತಲರ ಕೃತ್ಯಗಳ ರಚನೆ’ ಎಂಬ ಅಧ್ಯಾಯದಲ್ಲಿರುವ ಪಟ್ಟಿಯನ್ನು ನೋಡಿರಿ!

**2. ವಚನ 1:8 ರಲ್ಲಿರುವ ಯೇಸುವಿನ ಮಾತುಗಳ ಆಧಾರದ ಮೇಲೆ ಅಪೋಸ್ತಲರ ಕೃತ್ಯಗಳನ್ನು ಹೇಗೆ ಮೂರು ಭಾಗಗಳಾಗಿ ರಚಿಸಬಹುದು?**

ಉತ್ತರ: ‘ಅಪೊಸ್ತಲರ ಕೃತ್ಯಗಳ ರಚನೆ’ ಎಂಬ ಅಧ್ಯಾಯದಲ್ಲಿರುವ ಮೂರು ಅಂಶಗಳನ್ನು ನೋಡಿರಿ!

**3. ಸುವಾರ್ತೆಯ ಉಲ್ಲಾಸಭರಿತವಾದ ವಿಸ್ತರಣೆಯ ಕುರಿತು ಲೂಕನು ಬಿಡಿಸುವ ಆರು ಚಿತ್ರಣಗಳನ್ನು ಬಾಯಿಪಾಠ ಮಾಡಲು ಪ್ರಯತ್ನಿಸಿರಿ. ನಂತರ ಈ ಚಿತ್ರಣಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ವಿವರಿಸಿರಿ!**

## ಅಪೊಸ್ತಲರ ಕೃತ್ಯಗಳ ಕಾಲಾನುಕ್ರಮಣಿಕೆ

**1. ವಚನ 18:12 ರಲ್ಲಿ ತಿಳಿಸಲ್ಪಟ್ಟ ರಾಜ್ಯಪಾಲನಾದ ಗಲ್ಲಿಯೋನನ ಹೆಸರು ಯಾಕೆ ಅಪೊಸ್ತಲರ ಕೃತ್ಯಗಳ ಘಟನಾನುಕ್ರಮಣಿಕೆಯನ್ನು ಸ್ಥಾಪಿಸಲು ಅಷ್ಟು ಪ್ರಾಮುಖ್ಯವಾದುದ್ದಾಗಿದೆ?**

ಉತ್ತರ: ರೋಮನ್ ಐತಿಹಾಸಿಕ ಮೂಲಗಳಿಂದ ನಮಗೆ ತಿಳಿದುಬರುವುದೇನೆಂದರೆ, ಗಲ್ಲಿಯೋನನು ಕೊರಿಂಥದಲ್ಲಿ ಕ್ರಿ. ಶ. 51 ರಲ್ಲಿ ರಾಜ್ಯಪಾಲನಾದನು. ಈ ವಾಸ್ತವಾಂಶವು ಒಂದು ಸ್ಥಿರವಾದ ದಿನಾಂಕವನ್ನು ಒದಗಿಸುತ್ತದೆ, ಇದನ್ನು ಸತ್ಯವೇದ ಶಾಸ್ತ್ರಜ್ಞರುಗಳು ಪುಸ್ತಕದ ಹಿಂದಿನ ಮತ್ತು ನಂತರದ ಘಟನೆಗಳಿಗೆ ದಿನಾಂಕ ಸೂಚಿಸಲು ಉಪಯೋಗಿಸಿಕೊಳ್ಳಬಹುದು.

**2. ಅಪೊಸ್ತಲರ ಕೃತ್ಯಗಳ ಮುಖ್ಯ ಘಟನೆಗಳ ವರ್ಷಗಳನ್ನು ಬಾಯಿಪಾಠಮಾಡಲು ಪ್ರಯತ್ನಿಸಿರಿ. ನಂತರ ನಿಮ್ಮ ಸ್ವಂತ ವಾಕ್ಯಗಳಲ್ಲಿ ಕೆಲವು ಘಟನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ! ಅದನ್ನು ಮಾಡುವಾಗ ದಿನಾಂಕವನ್ನು ತಿಳಿಸಲು ಮರೆಯದಿರಿ!**

## ಅಪೊಸ್ತಲರ ಕೃತ್ಯಗಳು ಮತ್ತು ಪೌಲನ ಪತ್ರಿಕೆಗಳು

**1. ಪೌಲನ ಯಾವ ಪತ್ರಿಕೆಗೆ ದಿನಾಂಕ ಸೂಚಿಸಲು ಸತ್ಯವೇದ ಶಾಸ್ತ್ರಜ್ಞರುಗಳು ಕಷ್ಟಪಡುತ್ತಾರೆ?**

ಉತ್ತರ: ಗಲಾತ್ಯದವರಿಗೆ

**2. ಪೌಲನ ಆರು ಪತ್ರಿಕೆಗಳು ಆತನ ಎರಡನೆಯ ಮತ್ತು ಮೂರನೆಯ ಸೇವಾ ಪ್ರಯಾಣದ ಅವಧಿಯಲ್ಲಿ ಬರೆಯಲ್ಪಟ್ಟವು. ಅವುಗಳು ಯಾವವು?**

ಉತ್ತರ: 1 ಮತ್ತು 2 ಥೆಸಲೋನಿಕದವರಿಗೆ, ಗಲಾತ್ಯದವರಿಗೆ, 1 ಮತ್ತು 2 ಕೊರಿಂಥದವರಿಗೆ ಮತ್ತು ರೋಮಾಪುರದವರಿಗೆ

**3. ಪೌಲನ ನಾಲ್ಕು ಪತ್ರಿಕೆಗಳು ಕ್ರಿ. ಶ. 60–62 ರ ರೋಮ್‌ನಲ್ಲಿನ ಆತನ ಮೊದಲ ಸೆರೆಮನೆವಾಸದ ಅವಧಿಯಲ್ಲಿ ಬರೆಯಲ್ಪಟ್ಟವು. ಅವುಗಳು ಯಾವವು?**

ಉತ್ತರ: ಕೊಲೊಸ್ಸೆಯವರಿಗೆ, ಫಿಲೆಮೋನನಿಗೆ, ಎಫೆಸದವರಿಗೆ ಮತ್ತು ಫಿಲಿಪ್ಪಿಯವರಿಗೆ

**4. ಪೌಲನ ಮೂರು ಪತ್ರಿಕೆಗಳು ಕ್ರಿ. ಶ. 60–62 ರ ರೋಮ್‌ನಲ್ಲಿನ ಆತನ ಮೊದಲ ಸೆರೆಮನೆವಾಸದ ನಂತರ ಬರೆಯಲ್ಪಟ್ಟವು. ಅವುಗಳು ಯಾವವು?**

ಉತ್ತರ: 1 ತಿಮೊಥೆಯನಿಗೆ, ತೀತನಿಗೆ ಮತ್ತು 2 ತಿಮೊಥೆಯನಿಗೆ

## ಅಪೋಸ್ತಲರ ಕೃತ್ಯಗಳ ನಂತರ ಪೌಲನ ಜೀವನ

**ಅಪೋಸ್ತಲರ ಕೃತ್ಯಗಳು ಮುಕ್ತಾಯಗೊಳ್ಳುವ ಕಾಲದವರೆಗೂ (ಅಂದರೆ ಕ್ರಿ. ಶ. 60–62 ರವರೆಗೆ), ಪೌಲನು ಎರಡು ವರ್ಷಗಳ ಕಾಲ ರೋಮ್‌ನಲ್ಲಿ ಜೀವಿದಿಂದಿದ್ದನು ಎಂಬುದು ನಮಗೆ ಹೇಗೆ ತಿಳಿದದೆ?**

ಉತ್ತರ:

1) ಆತನು ಅಪೋಸ್ತಲರ ಕೃತ್ಯಗಳಲ್ಲಿನ ದಾಖಲೆಗಳು ಜರುಗಿದ ನಂತರ ಮೂರು ಪತ್ರಿಕೆಗಳನ್ನು ಬರೆದನು.

2) ಆತನು ನಿರೋ ಚಕ್ರವರ್ತಿಯ ಆಳ್ವಿಕೆಯ ಅಡಿಯಲ್ಲಿ ಉಂಟಾದ ಹಿಂಸೆಗಳಲ್ಲಿ (ಬಹುಶಃ ಕ್ರಿ. ಶ. 66 ರ ಸುಮಾರಿನಲ್ಲಿ) ರಕ್ತಸಾಕ್ಷಿಯಾಗಿ ಸತ್ತನು ಎಂದು ಆದಿಸಭೆಯ ಇತಿಹಾಸವು ಘೋಷಿಸುತ್ತದೆ.

## ಅಪೋಸ್ತಲರ ಕೃತ್ಯಗಳ ಮೂರು ಪಠ್ಯ ಆವೃತ್ತಿಗಳು

**ಅಪೋಸ್ತಲರ ಕೃತ್ಯಗಳ ಮೂರು ಮುಖ್ಯ ಪಠ್ಯ ಆವೃತ್ತಿಗಳು ಯಾವವು ಮತ್ತು ಅವುಗಳು ಹೇಗೆ ಒಂದಕ್ಕೊಂದು ವ್ಯತ್ಯಾಸವಾಗಿವೆ?**

ಉತ್ತರ:

1) ಬಿಜ಼ಂಟೀನ್ ಪಠ್ಯ: ಆನಂತರದ, ಹೆಚ್ಚು ಮೆರಗುಳ್ಳ ಮತ್ತು ಕಿಂಗ್ ಜೇಮ್ಸ್ ಅನುವಾದದಲ್ಲಿ ಬಳಸಲಾಗಿರುವ ಪಠ್ಯ

2) ಅಲೆಗ್ಸಾಂಡ್ರಿಯನ್ ಪಠ್ಯ: ಅತೀ ಚಿಕ್ಕ, ಅತೀ ಹಳೆಯ, ಅತೀ ವಿಶ್ವಾಸನೀಯ ಮತ್ತು ಎನ್.ಐ.ವಿ ಅನುವಾದದಲ್ಲಿ ಬಳಸಲಾಗಿರುವ ಪಠ್ಯ

3) ಪಾಶ್ಚಾತ್ಯ ಪಠ್ಯ: ಅತೀ ಉದ್ದವಾದ ಪಠ್ಯ

## ಹೆಲೆನಿಸಮ್

**1. ಅಲೆಗ್ಸಾಂಡರ್ ದ ಗ್ರೇಟ್ ಯಾವುದಕ್ಕಾಗಿ ಪ್ರಸಿದ್ಧನಾಗಿದ್ದಾನೆ?**

ಉತ್ತರ:

1) ಆತನು ಒಬ್ಬ ಶ್ರೇಷ್ಟ ಸೇನಾಧಿಪತಿಯಾಗಿದ್ದನು ಮತ್ತು 13 ವರ್ಷಗಳ ಅವಧಿಯಲ್ಲಿ ಆತನು ಭಾರತದವರೆಗೂ ಏಷ್ಯಾ ಖಂಡವನ್ನು ವಶಮಾಡಿಕೊಂಡನು.
2) ಆತನು ಗ್ರೀಕ್ ಭಾಷೆ ಮತ್ತು ಸಂಸ್ಕೃತಿಯ ಶ್ರೇಷ್ಟತೆಯಲ್ಲಿ ನಂಬಿಕೆ ಇಟ್ಟದ್ದರಿಂದ ಆತನು ವಶಮಾಡಿಕೊಂಡ ಸ್ಥಳಗಳಲ್ಲಿ ಅವುಗಳನ್ನು ಹರಡಿದನು.
3) ಆತನು 'ಹೆಲೆನಿಸಮ್' ಎಂದು ಕರೆಯಲ್ಪಡುವ ಸಂಸ್ಕೃತಿಗಳ ಒಂದು ಹೊಸ ಮಿಶ್ರಣಕ್ಕೆ 'ಪಿತಾಮಹನಾದನು'.

**2. ಅಲೆಗ್ಸಾಂಡರನು ತನ್ನ ಯುದ್ಧಗಳ ಸಂದರ್ಭದಲ್ಲಿ ಸ್ಥಾಪಿಸಿದ ಪಟ್ಟಣಗಳಲ್ಲಿ ಯಾರು ವಾಸವಾಗಿದ್ದರು?**

ಉತ್ತರ: ಗ್ರೀಕ್ ದೇಶದ ಸೈನಿಕರುಗಳು ಮತ್ತು ನಾಗರೀಕರು, ಇವರು ನಂತರ ಸಾಂಸ್ಕೃತಿಕವಾಗಿ ಕುಲೀನರಾದರು.

**3. ಗ್ರೀಕರ ಕೈವಶವಾದ ಜನರು ಹೇಗೆ ಪ್ರತಿಕ್ರಿಯಿಸಿದರು?**

ಉತ್ತರ: ಅವರು ಮೂಲಭೂತವಾಗಿ ಎರಡು ರೀತಿಯಲ್ಲಿ ಪ್ರತಿಕ್ರಿಯಿಸಿದರು:

1) ಕೆಲವರು ಹೆಲೆನಿಸಮ್‌ಗೆ ಹೊಂದಿಕೊಂಡರು
2) ಇತರರು ಹೆಲೆನಿಸಮ್‌ನ್ನು ವಿರೋಧಿಸಿದರು

**4. ಹೆಲೆನಿಸಮ್ ಹೊಸ ಒಡಂಬಡಿಕೆಗೆ ಹೇಗೆ ಒಂದು ಪೂರ್ವಸ್ಥಿತಿಯಾಯಿತು?**

ಉತ್ತರ:

1) ಹೊಸ ಒಡಂಬಡಿಕೆಯ ಲೇಖಕರು ಬಳಸಿದ ಭಾಷೆಯು ಗ್ರೀಕ್ ಭಾಷೆಯಾಗಿತ್ತು.
2) ಗ್ರೀಕರ ಆಲೋಚನಾ, ತಾರ್ಕಿಕ, ಮೌಖಿಕ ಮತ್ತು ಬರವಣಿಗೆಯ ರೀತಿಯನ್ನು ಸ್ವಲ್ಪ ಮಟ್ಟಿಗೆ ಹೊಸ ಒಡಂಬಡಿಕೆಯ ಲೇಖಕರು, ವಿಶೇಷವಾಗಿ ಪೌಲನು, ಅಳವಡಿಸಿಕೊಂಡಿದ್ದಾರೆ.

## ಯೆಹೂದ್ಯರ ಚದರುವಿಕೆ (ಡಯಾಸ್ಪೊರಾ)

**1. ಚದರಿಹೋಗಿದ್ದ ಯೆಹೂದ್ಯರು ತಾವು ಎದುರುಗೊಂಡ ಅನ್ಯ ಜನರೊಂದಿಗೆ ಹೇಗೆ ಪರಸ್ಪರ ವರ್ತಿಸಿದರು?**

ಉತ್ತರ: ಅವರು ತಮ್ಮ ಯೆಹೂದ್ಯ ನಂಬಿಕೆಯನ್ನು ಅವರಿಗೆ ಸಾರಿದರು. ಆದರೆ ಅದೇ ಸಮಯದಲ್ಲಿ ಅವರು ತಾವು ಸ್ವತಃ ತಮ್ಮ ಯೆಹೂದ್ಯ ನಂಬಿಕೆಗೆ ಮತ್ತು ಅದರ ಉನ್ನತ ನೈತಿಕ ಮಾನದಂಡಗಳಿಗೆ ನಂಬಿಗಸ್ತರಾಗಿದ್ದರು.

**2. ಅನೇಕ ಅನ್ಯಜನರು ಯೆಹೂದತ್ವದ ಕಡೆಗೆ ಯಾಕೆ ಆಕರ್ಷಿತರಾದರು?**

ಉತ್ತರ: ಅವರು ಯೆಹೂದ್ಯರ ಏಕದೇವಾರಾಧನೆಯ ಮತ್ತು ಯೆಹೂದ್ಯ ಜನರ ಒಳ್ಳೆಯ ನೈತಿಕ ಜೀವಿತಗಳ ಕಡೆಗೆ ಆಕರ್ಷಿತರಾದರು.

**3. *ಸೆಪ್ಟ್ಯಾಜಿಂಟ್* ಎಂದರೇನು ಮತ್ತು ಚದುರಿಹೋಗಿದ್ದ ಯೆಹೂದ್ಯರು ಅದನ್ನು ವ್ಯಾಪಕವಾಗಿ ಯಾಕೆ ಬಳಸಿದರು?**

ಉತ್ತರ: *ಸೆಪ್ಟ್ಯಾಜಿಂಟ್* ಎನ್ನುವುದು (ಹಳೆ ಒಡಂಬಡಿಕೆ ಎಂದು ನಾವು ಕರೆಯುವ) ಯೆಹೂದ್ಯ ಪವಿತ್ರಗ್ರಂಥದ ಗ್ರೀಕ್ ಅನುವಾದವಾಗಿದೆ. ಚದುರಿಹೋಗಿದ್ದ ಯೆಹೂದ್ಯರು ಕೇವಲ ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ಮಾತ್ರ ಗ್ರೀಕ್ ಭಾಷೆಯನ್ನು ಬಳಸದೆ ಸಭಾಮಂದಿರದ ಆರಾಧನೆಗಳಲ್ಲಿಯೂ ಅದನ್ನು ಬಳಸಿದರು. ಹಾಗಾಗಿ ತಮ್ಮ ಪವಿತ್ರಗ್ರಂಥದ ಈ ಗ್ರೀಕ್ ಅನುವಾದವು ಅವರಿಗೆ ಅತ್ಯವಶ್ಯವಾಗಿತ್ತು.

**4. ಚದುರುಹೋಗಿದ್ದ ಯೆಹೂದ್ಯರು ಯಾವ ರೀತಿಯಲ್ಲಿ ಪಾಲೆಸ್ತೀನಿನೊಂದಿಗೆ ಸಂಪರ್ಕದಲ್ಲಿದ್ದರು?**

ಉತ್ತರ: ಅವರು ಕೆಲವೊಮ್ಮೆ ಅಲ್ಲಿಗೆ ದೊಡ್ಡ ಹಬ್ಬಗಳನ್ನು ಆಚರಿಸಲು ಹೋಗುತ್ತಿದ್ದರು.

## ರೋಮನ್ ಸಾಮ್ರಾಜ್ಯ

**1. ಹೊಸ ಒಡಂಬಡಿಕೆಯ ಕಾಲದಲ್ಲಿ ಸುವಾರ್ತೆಯು ಹರಡುವುದಕ್ಕೆ ಸಹಾಯಕರವಾದ ರೋಮನ್ ಸಾಮ್ರಾಜ್ಯದ ಕೆಲವು ಅಂಶಗಳನ್ನು ಪಟ್ಟಿಮಾಡಿರಿ.**

ಉತ್ತರ:

1) 'ರೋಮನ್ ಶಾಂತಿ' ಮತ್ತು ಒಳ್ಳೆಯ ಕಾನೂನು ಸುವ್ಯವಸ್ಥೆ

2) ಕೇಂದ್ರ ಸರ್ಕಾರ ಮತ್ತು ಪ್ರಾಂತ್ಯಗಳ ಮೇಲಿನ ಒಳ್ಳೆಯ ಆಡಳಿತ

3) ಸಾಮ್ರಾಜ್ಯದಲ್ಲಿದ್ದ ಜನರೆಲ್ಲರೂ ಒಬ್ಬರಿಗೊಬ್ಬರು ಸಂಪರ್ಕಕ್ಕೆ ಸಿಗಬಹುದಾಗಿದ್ದ ಅನೇಕ ಪಟ್ಟಣಗಳು

4) ಒಳ್ಳೆಯ ರಸ್ತೆ ಸಂಪರ್ಕಗಳು

5) ಮೆಡಿಟೆರೆನಿಯನ್‌ನ ಆಚೆ ಈಚೆ ನಡೆಯುತ್ತಿದ್ದ ವಾಣಿಜ್ಯ ಮತ್ತು ವ್ಯಾಪಾರ

6) ಸಾಮಾಜಿಕ ಚಲನೆ: ಪ್ರಾಂತ್ಯಗಳಲ್ಲಿ ಜೀವಿಸುತ್ತಿದ್ದ ಜನರು ರೋಮನ್ ಸೇನೆಗೆ ಭರ್ತಿಯಾಗಲು ಅವಕಾಶವಿತ್ತು; ಪ್ರಾಂತ್ಯಗಳಲ್ಲಿ ಜೀವಿಸುತ್ತಿದ್ದ ಅನೇಕರಿಗೆ ರೋಮನ್ ಪೌರತ್ವವು ಕೊಡಲ್ಪಡುತ್ತಿತ್ತು

7) ಗ್ರೀಕ್ ಭಾಷೆಯ ಸಾಂಸ್ಕೃತಿಕ ಪ್ರಾಧ್ಯಾನತೆ

**2. ಹೊಸ ಒಡಂಬಡಿಕೆಯಲ್ಲಿ ಉಲ್ಲೇಖಿಸಲ್ಪಟ್ಟಿರುವ ನಾಲ್ಕು ರೋಮನ್ ಚಕ್ರವರ್ತಿಗಳ ಹೆಸರುಗಳನ್ನು ಕಂಡುಹಿಡಿಯಿರಿ. ಅವುಗಳು ಹೊಸ ಒಡಂಬಡಿಕೆಯ ಘಟನೆಗಳೊಂದಿಗೆ ಹೇಗೆ ಸಂಬಂಧಿತವಾಗಿವೆ?**

ಉತ್ತರ:

1) ಔಗುಸ್ತನು: ಯೇಸುವಿನ ಜನನ

2) ತಿಬೇರಿಯನು: ಸ್ನಾನಿಕನಾದ ಯೋಹಾನನ ಮತ್ತು ಯೇಸುವಿನ ಸೇವೆಗಳು

3) ಕ್ಲಾಡಿಯಸ್‌ನು: ಎಲ್ಲಾ ಯೆಹೂದ್ಯರು (ಬಹುಶಃ ಯೆಹೂದ್ಯ ಹಿನ್ನಲೆ ಹೊಂದಿದ್ದ ವಿಶ್ವಾಸಿಗಳನ್ನೂ ಸೇರಿಸಿ) ರೋಮ್‌ನ್ನು ಬಿಟ್ಟುಹೋಗಬೇಕೆಂಬ ಆಜ್ಞೆ ಹೊರಡಿಸಿದ್ದು

4) ನಿರೋ: ಈತನ ಹೆಸರು ತಿಳಿಸಲ್ಪಟ್ಟಿಲ್ಲ, ಪೌಲನು ಮನವಿಮಾಡಿಕೊಂಡ ಮತ್ತು ಆನಂತರ ಎದುರಿನಲ್ಲಿ ನಿಂತ 'ಚಕ್ರವರ್ತಿಯು' ಈತನೇ ಆಗಿದ್ದನು.

**3. ರೋಮನ್ ಸಾಮ್ರಾಜ್ಯದಲ್ಲಿ ಅನ್ಯ ಜನರು ಹಿಂಬಾಲಿಸಿದ ಧರ್ಮದ ಮುಖ್ಯ ಸ್ವರೂಪಗಳಾವವು?**

ಉತ್ತರ:

1) ಸಾಂಪ್ರದಾಯಿಕ ಗ್ರೀಕ್ ಮತ್ತು ರೋಮನ್ ದೇವರುಗಳ ಆರಾಧನೆ

2) ಸ್ಟ್ರೊಯಿಕ್ ಮತ್ತು ಎಪಿಕುರಿಯನ್ ಶಾಲೆಗಳಂತಹ ತತ್ವಶಾಸ್ತ್ರಗಳು ಮತ್ತು ಜ್ಞಾನವಾದ

3) ಅನೇಕ ವಿಧವಾದ ನಿಗೂಢ ಧರ್ಮಗಳು

**4. ರೋಮನ್ ಸಾಮ್ರಾಜ್ಯದಲ್ಲಿದ್ದ ಎರಡು ಮುಖ್ಯ ಭಾಷೆಗಳಾವವು ಮತ್ತು ಅವುಗಳು ಹೇಗೆ ಬಳಸಲ್ಪಡುತ್ತಿದ್ದವು?**

ಉತ್ತರ:

1) ಲ್ಯಾಟಿನ್: ರೋಮ್‌ನ ಅಧಿಕೃತ ಭಾಷೆ

2) ಗ್ರೀಕ್: ಇಡೀ ಸಾಮ್ರಾಜ್ಯದ ಸಾಂಸ್ಕೃತಿಕ ಭಾಷೆ

## ಪಾಲೆಸ್ತೀನ್

**1. ಯೆರೂಸಲೇಮಿನಲ್ಲಿದ್ದ ಸಭೆಯು ಎಷ್ಟರ ಮಟ್ಟಿಗೆ 'ಯೆಹೂದ್ಯವಾಗಿತ್ತು'? ಕೆಲವು ಪ್ರಾಮುಖ್ಯ ಅಂಶಗಳ ಒಂದು ಪಟ್ಟಿಯನ್ನು ಮಾಡಿರಿ!**

ಉತ್ತರ:

1) ವಿಶ್ವಾಸಿಗಳು ಕ್ರಮವಾಗಿ ದೇವಾಲಯಕ್ಕೆ ಹೋದರು.

2) ಅವರು ಯೆಹೂದ್ಯ ಹಬ್ಬಗಳನ್ನು ಆಚರಿಸಿದರು.

3) ಅವರು ಸಭಾಮಂದಿರದ ಆರಾಧನೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

4) ಅವರು ಪಾಲೆಸ್ತೀನಿನ ಯೆಹೂದ್ಯರ ಭಾಷೆಯಾದ ಅರಾಮಿಕ್ ಭಾಷೆಯನ್ನು ಮಾತನಾಡುತ್ತಿದ್ದರು.

5) ಅವರು ಯೆಹೂದ್ಯ ಆಚಾರಗಳನ್ನು ಪಾಲಿಸುತ್ತಿದ್ದರು (ಸುನ್ನತಿಯನ್ನು ಒಳಗೊಂಡು).

**2. ಹೆಲೆನಿಸ್ಟ್‌ಗಳು ಯಾರಾಗಿದ್ದರು?**

ಉತ್ತರ: ಅವರು ಗ್ರೀಕ್ ಭಾಷೆ ಮಾತನಾಡುವ ಮತ್ತು ಪಾಲೆಸ್ತೀನಿನಲ್ಲಿ ನೆಲೆಸಿದ್ದ ಚದುರಿಹೋಗಿದ್ದ ಯೆಹೂದ್ಯರಾಗಿದ್ದರು.

**3. ಪಾಲೆಸ್ತೀನ್ ಒಂದು 'ಸಾಮ್ರಾಜ್ಯಶಾಹಿ ಪ್ರಾಂತ್ಯವಾಗಿತ್ತು' ಎಂಬ ವಾಸ್ತವಾಂಶದ ಅನ್ವಯವೇನಾಗಿತ್ತು?**

ಉತ್ತರ: ಅದರ ಅರ್ಥ ಪಾಲೆಸ್ತೀನನ್ನು ಆಳುತ್ತಿದ್ದ ರೋಮನ್ ರಾಜ್ಯಪಾಲರುಗಳು ರೋಮನ್ ಚಕ್ರವರ್ತಿಗೆ ಜವಾಬುದಾರರಾಗಿದ್ದರು (ಶಾಸನ ಸಭೆಗಲ್ಲ).

**4. ಪಾಲೆಸ್ತೀನ್ ವಾಸ್ತವಿಕವಾಗಿ ರೋಮನ್ ಸಾಮ್ರಾಜ್ಯದ ಒಂದು ಭಾಗವಾಗಿದ್ದರೂ ಸಹ ರಾಜರುಗಳನ್ನು ಏಕೆ ಹೊಂದಿತ್ತು ಎಂಬುದನ್ನು ವಿವರಿಸಿರಿ!**

ಉತ್ತರ: ಅರಸನಾದ ಹೆರೋದನು ಮತ್ತು ಆತನ ಉತ್ತರಾಧಿಕಾರಿಗಳು ರೋಮನ್ ಚಕ್ರವರ್ತಿಯ ಅಡಿಯಲ್ಲಿದ್ದ ಪಾಲೆಸ್ತೀನಿನ ಆಶ್ರಿತ ರಾಜರುಗಳಾಗಿದ್ದರು. ಹಾಗಾಗಿ ಈ ರಾಜರುಗಳು ಚಕ್ರವರ್ತಿಯ ಸಾರ್ವಭೌಮತ್ವವನ್ನು ಅಂಗೀಕರಿಸಲೇಬೇಕಾಗಿತ್ತು.

**5. ರಾಜನಾದ 2 ನೇ ಅಗ್ರಿಪ್ಪನು ಯೂದಾಯವನ್ನು ಆಳದಿದ್ದಾಗ್ಯೂ ರಾಜ್ಯಪಾಲನಾದ ಪೋರ್ಸಿಯ ಫೆಸ್ತನು ಪೌಲನ ಪ್ರಕರಣದ ಕುರಿತು ಆತನಿಂದ ಯಾಕೆ ಸಲಹೆಯನ್ನು ಕೇಳಿದನು?**

ಉತ್ತರ: ರೋಮನ್ ಚಕ್ರವರ್ತಿಯು ರಾಜನಾದ 2 ನೇ ಅಗ್ರಿಪ್ಪನಿಗೆ ಯೆರೂಸಲೇಮಿನ ದೇವಾಲಯದ ಮತ್ತು ಇತರೆ ಧಾರ್ಮಿಕ ವಿಷಯಗಳ ಮೇಲೆ ಅಧಿಕಾರವನ್ನು ಕೊಟ್ಟಿದ್ದನು. ಹಾಗಾಗಿ ಈ ಅಧಿಕಾರದ ನಿಮಿತ್ತ ಪೋರ್ಸಿಯ ಫೆಸ್ತನು ಪೌಲನೊಂದಿಗೆ ಏನು ಮಾಡಬೇಕೆಂದು ಆತನ ಸಲಹೆಯನ್ನು ಕೇಳಿದನು.

**6. ರೋಮನ್ ರಾಜ್ಯಪಾಲರುಗಳ ಜವಾಬ್ದಾರಿಗಳು ಏನಾಗಿದ್ದವು?**

ಉತ್ತರ: ಅವರು ದೇಶದಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಸುರಕ್ಷತೆಯನ್ನು ಕಾಪಾಡಿಕೊಳ್ಳಬೇಕಾಗಿತ್ತು.

**7. ಪಾಲೆಸ್ತೀನಿನಲ್ಲಿ ರೋಮನ್ ಸೈನ್ಯವನ್ನು ಯಾಕೆ ನೇಮಿಸಲಾಗಿತ್ತು?**

ಉತ್ತರ: ಪಾಲೆಸ್ತೀನ್ ಘರ್ಷಣೆ ಮತ್ತು ದಂಗೆಗೆ ರೋಮ್‌ನಲ್ಲಿ ಕುಖ್ಯಾತಿಯಾಗಿತ್ತು.

**8. ಸದ್ದುಕಾಯರ ಮತ್ತು ಫರಿಸಾಯರ ನಡುವಿನ ಮುಖ್ಯ ವ್ಯತ್ಯಾಸಗಳಾವವು?**

ಉತ್ತರ:

1) ವಿದೇಶಿ ಪ್ರಭಾವಗಳು, ಹೆಲೆನಿಸಮ್: ಸದ್ದುಕಾಯರು ಸಕಾರಾತ್ಮಕವಾಗಿದ್ದರು; ಫರಿಸಾಯರು ನಕಾರಾತ್ಮಕವಾಗಿದ್ದರು.

2) ಸಾಮಾಜಿಕ ಮತ್ತು ರಾಜಕೀಯ ಸ್ಥಾನ: ಸದ್ದುಕಾಯರು ದೇವಾಲಯ ಮತ್ತು ನ್ಯಾಯಸಭೆಯ ಮೇಲೆ ನಿಯಂತ್ರಣವುಳ್ಳ ಉನ್ನತ-ವರ್ಗದ ಜನರಾಗಿದ್ದರು ಮತ್ತು ರೋಮನ್ ಅಧಿಪತಿಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು; ಫರಿಸಾಯರು ಶಾಸ್ತ್ರಿಗಳಾಗಿದ್ದರು ಮತ್ತು ಧರ್ಮಶಾಸ್ತ್ರ ಪಾಲಿಸುವ ಜನರಾಗಿದ್ದರು ಮತ್ತು ರಾಜಕೀಯ ಜೀವನದ ಮೇಲೆ ಕಡಿಮೆ ಪ್ರಭಾವವುಳ್ಳವರಾಗಿದ್ದರು.

3) ಧಾರ್ಮಿಕ ಜೀವನ: ಸದ್ದುಕಾಯರು ಯಾಜಕರಾಗಿದ್ದರು, ಆದರೆ ಅವರು ಅತೀ ಆತ್ಮೀಕರೆಂದು ಪರಿಗಣಿಸಲ್ಪಟ್ಟಿರಲಿಲ್ಲ; ಫರಿಸಾಯರು ಧರ್ಮಶಾಸ್ತ್ರವನ್ನು ಮತ್ತು ತಮ್ಮ ಸ್ವಂತ ಧಾರ್ಮಿಕ ಸಂಪ್ರದಾಯಗಳನ್ನು ಚಾಚುತಪ್ಪದೆ ಪಾಲಿಸುತ್ತಿದ್ದರು, ಅವರು ಧರ್ಮಶಾಸ್ತ್ರದ ಬೋಧಕರಾಗಿದ್ದರು ಮತ್ತು ಸಭಾಮಂದಿರಗಳೊಂದಿಗೆ ಬಲವಾದ ಸಂಬಂಧ ಹೊಂದಿದ್ದರು.

4) ಜನಪ್ರಿಯತೆ: ಸದ್ದುಕಾಯರು ಜನಸಾಮಾನ್ಯರೊಂದಿಗೆ ಜನಪ್ರಿಯರಾಗಿರಲಿಲ್ಲ; ಫರಿಸಾಯರು ಜನರಿಂದ ಅತಿಯಾಗಿ ಗೌರವಿಸಲ್ಪಡುತ್ತಿದ್ದರು.

5) ನ್ಯಾಯಸಭೆಯಲ್ಲಿ ಫರಿಸಾಯರು ಸದ್ದುಕಾಯರನ್ನು ಬಲವಾಗಿ ವಿರೋಧಿಸುತ್ತಿದ್ದರು.

**9. ಮತಾಭಿಮಾನಿಗಳು ಮತ್ತು ಎಸ್ಸೇನರು ಯಾರಾಗಿದ್ದರು?**

ಉತ್ತರ:

1) ಮತಾಭಿಮಾನಿಗಳು ಪಾಲೆಸ್ತೀನನ್ನು ರೋಮನ್ನರು ವಶಮಾಡಿಕೊಂಡದ್ದನ್ನು ಕ್ರಿಯಾತ್ಮಕವಾಗಿ ವಿರೋಧಿಸಿದವರಾಗಿದ್ದರು ಮತ್ತು ಅವರಲ್ಲಿ ಕೆಲವರು ಆಯುಧಗಳೊಂದಿಗೆ ರೋಮನ್ನರ ವಿರುದ್ಧ ಹೋರಾಡಿದರು.
2) ಎಸ್ಸೇನರು (ಇವರು ಸತ್ಯವೇದದಲ್ಲಿ ತಿಳಿಸಲ್ಪಟ್ಟಿಲ್ಲ) ಎಲ್ಲಾ ಹೆಲೆನಿಸ್ಟಿಕ್ ಪ್ರಭಾವಗಳಿಂದ ತಮ್ಮನ್ನು ದೂರವಿರಿಸಿಕೊಂಡಿದ್ದರು. ಅವರಲ್ಲಿ ಅನೇಕರು ವಿದೇಶಿ ಪ್ರಭಾವಗಳಿಂದ ದೂರವಿರುವ ಸಲುವಾಗಿ ನಿಕಟ ಸಮುದಾಯಗಳಲ್ಲಿ ಒಟ್ಟಾಗಿ ಜೀವಿಸಿದರು.

## ಅರಸನಾದ ಹೆರೋದನ ಕುಟುಂಬ

**1. ಹೆರೋದನ ಕುಟುಂಬದ ಹಿನ್ನೆಲೆ ಏನಾಗಿತ್ತು?**

ಉತ್ತರ: ಅವರು ದಕ್ಷಿಣದಲ್ಲಿದ್ದ ಇದುಮಾಯದಿಂದ ಬಂದವರಾಗಿದ್ದರು ಮತ್ತು ಒಂದು ರಾಜಮನೆತನಕ್ಕೆ ಸೇರಿದವರಾಗಿದ್ದರು. ಹಾಗಾಗಿ ಅವರು ಯೆಹೂದ್ಯ ಹಿನ್ನೆಲೆಯನ್ನು ಹೊಂದಿರಲಿಲ್ಲ. ಆದರೆ ಹೆರೋದನ ಅಜ್ಜನ ಕಾಲದಲ್ಲಿ ಅವರು ಯೆಹೂದ್ಯ ನಂಬಿಕೆಯನ್ನು ಅಂಗೀಕರಿಸಿದ್ದರು.

**2. ಹೊಸ ಒಡಂಬಡಿಕೆಯಲ್ಲಿ ತಿಳಿಸಲ್ಪಟ್ಟಿರುವ ಐದು ಹೆರೋದ ರಾಜರುಗಳು ಯಾರು? ಮತ್ತು ಅವರು ಯಾವ ಘಟನೆಗೆ ಸಂಬಂಧಿಸಿದ್ದಾರೆ?**

ಉತ್ತರ:

1) ಹೆರೋದ್ ದ ಗ್ರೇಟ್ (ಸತ್ಯವೇದದಲ್ಲಿ 'ಹೆರೋದನು' ಎಂದು ಕರೆಯಲ್ಪಟ್ಟಿದ್ದಾನೆ, ಈತನು ಇಡೀ ಪಾಲೆಸ್ತೀನನ್ನು ಆಳಿದನು): ಯೇಸುವಿನ ಜನನ
2) 2 ನೇ ಹೆರೋದ ಫಿಲಿಪ್ಪನು (ಸತ್ಯವೇದದಲ್ಲಿ 'ಚತುರಾಧಿಪತಿಯಾದ ಫಿಲಿಪ್ಪನು' ಎಂದು ಕರೆಯಲ್ಪಟ್ಟಿದ್ದಾನೆ, ಈತನು ಇತುರಾಯ ಮತ್ತು ತ್ರಕೋನಿತಿಸನ್ನು ಆಳಿದನು): ಸ್ನಾನಿಕನಾದ ಯೋಹಾನನ ಸೇವೆಯ ಪ್ರಾರಂಭ
3) ಹೆರೋದ ಅಂತಿಪನು (ಸತ್ಯವೇದದಲ್ಲಿ 'ಚತುರಾಧಿಪತಿಯಾದ ಹೆರೋದನು' ಅಥವಾ ಕೇವಲ 'ಹೆರೋದನು' ಎಂದು ಕರೆಯಲ್ಪಟ್ಟಿದ್ದಾನೆ, ಈತನು ಗಲಿಲಾಯ ಮತ್ತು ಪೆರಿಯವನ್ನು ಆಳಿದನು): ಸ್ನಾನಿಕನಾದ ಯೋಹಾನನ ಮತ್ತು ಯೇಸುವಿನ ಸೇವೆಗಳ ಪ್ರಾರಂಭ, ಈತನು ಯೋಹಾನನನ್ನು ಶಿರಚ್ಛೇದನಗೊಳಿಸಿದನು, ಯೇಸುವನ್ನು ಅಪಹಾಸ್ಯ ಮಾಡಿ ಪಿಲಾತನ ಬಳಿಗೆ ಹಿಂತಿರುಗಿ ಕಳುಹಿಸಿದನು

4) 1 ನೇ ಹೆರೋದ ಅಗ್ರಿಪ್ಪನು (ಸತ್ಯವೇದದಲ್ಲಿ ‘ಹೆರೋದನು’ ಎಂದು ಕರೆಯಲ್ಪಟ್ಟಿದ್ದಾನೆ, ಈತನು ಯೂದಾಯವನ್ನು ಆಳಿದನು): ಯೇಸುವಿನ ಶಿಷ್ಯನಾದ ಯಾಕೋಬನ ರಕ್ತಸಾಕ್ಷಿ

5) 2 ನೇ ಹೆರೋದ ಅಗ್ರಿಪ್ಪನು (ಸತ್ಯವೇದದಲ್ಲಿ ‘ಅಗ್ರಿಪ್ಪನು’ ಎಂದು ಕರೆಯಲ್ಪಟ್ಟಿದ್ದಾನೆ, ಈತನು ಗಲಿಲಾಯದ ಕೆಲವು ಭಾಗಗಳನ್ನು ಮತ್ತು ತ್ರಕೋನಿತಿಸನ್ನು ಆಳಿದನು): ಸೆಜರೇಯದಲ್ಲಿ ಪೌಲನ ಸೆರೆವಾಸ

# ಪದಸೂಚಿ

ಈ ಪದಸೂಚಿಯು ವ್ಯಕ್ತಿಗಳ ಮತ್ತು ಸ್ಥಳಗಳ ಹಾಗೂ ಆಚಾರ ಮತ್ತು ಪದ್ಧತಿಗಳ ಹೆಸರುಗಳನ್ನು ಒಳಗೊಂಡಿದೆ. ಇದು ಹೆಸರುಗಳು ತಿಳಿಸಲ್ಪಡುವ, ವಿವರಿಸಲ್ಪಡುವ, ಟಿಪ್ಪಣಿ ಸೂಚಿಸಲ್ಪಟ್ಟಿರುವ ಅಥವಾ ಚರ್ಚಿಸಲ್ಪಟ್ಟಿರುವ ಹಾಳೆಗಳ ಸಂಖ್ಯೆಯ ಪಟ್ಟಿಯನ್ನು ಹೊಂದಿದೆ. ಪಾಠ ಮತ್ತು ಪಾಠದ ಶೀರ್ಷಿಕೆಗಳೂ ಸಹ ಸೇರಿಸಲ್ಪಟ್ಟಿವೆ.

ಈ ಪದಸೂಚಿಯು ಸಂಪೂರ್ಣವಾಗಿಲ್ಲ. ಅದಲ್ಲದೆ, ನಕ್ಷೆಯಲ್ಲಿರುವ ಮತ್ತು 'ಶಿಕ್ಷಕರಿಗಾಗಿ' ಎಂಬ ಅಧ್ಯಾಯದ ಹೆಸರುಗಳು ಮತ್ತು ಪದಗಳು ಪದಸೂಚಿಯಲ್ಲಿ ಸೇರಿಸಲ್ಪಟ್ಟಿಲ್ಲ.


ಅಬ್ರಹಾಮ: 393, 394, 398

ಅಖಾಯ: 209, 239, 240, 248, 249, 261, 265, 266, 267, 481, 484, 485, 491, 496, 569, 570

ಅಕ್ರಾಪೋಲಿಸ್: 231, 232, 565

ಅದ್ರಮಿತಿಯ: 321

ಅಗಬ: 154, 155, 160, 279, 281, 282, 433, 434, 552, 559, 570

ಅಗ್ರಿಪ್ಪ: 118, 124, 135, 160, 291, 303, 312–320, 368, 413, 523, 524, 525, 526, 527, 529, 557, 558, 560, 572, 575, 576, 577, 578, 605, 606, 607

ಅಕೆಲ್ದಮಾ: 350

ಅಲೆಕ್ಸಾಂದ್ರ ಎಫೆಸದಲ್ಲಿ: 263

ಅಲೆಕ್ಸಾಂದ್ರ ಯಾಜಕ (?) ಯೆರೂಸಲೇಮಿನಲ್ಲಿ: 68

ಅಲೆಗ್ಸಾಂಡರ್ ದ ಗ್ರೇಟ್: 565, 573, 601

ಅಲೆಗ್ಸಾಂಡ್ರಿಯ: 327, 335, 530, 567, 569

ಅಲೆಗ್ಸಾಂಡ್ರಿಯನ್ ಪಠ್ಯ: 564, 600

ಅಂಫಿಪೊಲಿಸ್: 224

ಅನನೀಯ ಮತ್ತು ಸಫ್ಫೈರಳು: 78, 79, 376, 377

(ದಮಸ್ಕದಲ್ಲಿ) ಅನನೀಯನು: 124, 125, 126, 127, 411, 508, 528

(ಮಹಾಯಾಜಕನಾದ) ಅನನೀಯನು: 297, 298, 305, 307, 375, 520

(ಮಹಾಯಾಜಕನಾದ) ಅನ್ನನು: 68, 69, 82, 366

ಅಂತಿಯೋಕ್ಯ – ಪಿಸಿದಿಯದ ಅಂತಿಯೋಕ್ಯವನ್ನು ನೋಡಿರಿ

(ಸಿರಿಯಾದ) ಅಂತಿಯೋಕ್ಯ: 75, 157, 172, 174, 190, 191, 193, 203, 245, 246, 248, 373, 431, 432, 449, 482, 557, 558, 560, 594

ಅಂತಿಪತ್ರಿ: 303, 516

ಅಫ್ರೋಡೈಟ್: 237

ಅಪೊಲ್ಲೋನಿಯ: 224

ಅಲೆಗ್ಸಾಂಡ್ರಿಯಾದ ಅಪೊಲ್ಲೋಸನು: 248, 249, 250, 251, 483, 484, 485

ಅಪೊಸ್ತಲರು: 38, 39, 42, 50, 52, 54, 56, 57, 38, 70, 74, 75, 80, 82, 83, 91, 92, 93, 105, 113, 115, 135, 154, 178, 179, 181, 182, 184, 185, 187, 189, 190, 197, 203, 218, 220, 222, 224, 346, 347, 348, 349, 352, 354, 358, 363, 364, 365, 371, 378, 381, 382, 383, 384, 385, 386, 387, 398, 399, 402, 403, 404, 416, 418, 443, 445, 447, 449, 450, 452, 467, 468, 469, 470, 471, 472, 474, 490, 549, 568, 571

ಅಪೊಸ್ತಲರು ಗುಣಪಡಿಸಿದ್ದು: 60, 80, 136, 185, 332, 360, 379, 380, 537

ಅಪೊಸ್ತಲರು ಉಪದೇಶಿಸಿದ್ದು: 121, 275, 341, 403

ಅಪೊಸ್ತಲರು ಯೇಸುವಿನ ಮರಣ ಮತ್ತು ಪುನರುತ್ಥಾನದ ಕುರಿತು ಸಾಕ್ಷಿಕರಿಸಿದ್ದು: 85

ಅಪೊಸ್ತಲನಾದ ಯೋಹಾನ: 161, 391

ಅಕ್ವಿಲ: 237, 238, 245, 248, 250, 252, 480, 483, 484, 485, 486, 559, 570

ಅರೇಬಿಯ: 156, 417, 558

ಅರಾಮಿಕ್: 43, 46, 87, 125, 136, 291, 316, 350, 351, 386, 388, 420, 434, 440, 511, 572, 604

ಅರಾತಸ್: 232

ಅರ್ಖೆಲಾಯನು: 576

ಅರಿಯೊಪಾಗ: 231, 232, 234, 477, 478, 479

ಅರಿಸ್ತಾರ್ಕನು: 265, 321, 538

ಅರಿಸ್ಟೋಬ್ಯುಲಸ್: 577

ಅರ್ತೆಮಿ/ಡಯಾನಾ: 253, 262, 492, 493, 571

ಅಸ್ಸೋಸ್: 564

ಅಥೆನ್ಸ್: 227, 231, 233, 234, 237, 238, 356, 444, 477, 478, 479, 496, 559, 561, 571

ಅನ್ಯ ಸಭೆಗಳಿಗೆ ಬರೆದ ಪತ್ರ/ಪತ್ರಿಕೆ: 197, 198, 283, 284, 457, 458 ಯೆರೂಸಲೇಮಿನ ಸಮ್ಮೇಳನ ಸಹ ನೋಡಿರಿ

ಅನ್ಯ ದೇವಾಲಯ: 231, 233, 237, 253, 262, 565, 571

ಅನ್ಯಭಾಷೆಯಲ್ಲಿ ಮಾತನಾಡುವುದು: 46, 125, 145, 253, 406, 425, 487, 490

ಅನ್ಯರು/ಅನ್ಯ ಜನರು/ಅನ್ಯ ಮತಸ್ಥರು: 142, 149, 169, 183, 193, 213, 215, 286, 288, 368, 408, 421, 434, 446, 452, 453, 454, 455, 465, 485, 511, 550/178, 189, 331, 394, 458, 480, 603/240, 242

ಅನ್ಯೋನ್ಯತೆ: ನೋಡಿರಿ ಸಭೆಯ ಅನ್ಯೋನ್ಯತೆ

ಅಂಟೋನಿಯ ಗೋಪುರ: 161, 289, 291, 300, 507

ಅವಮಾನವನ್ನು ಅನುಭವಿಸುವುದು: 82, 84, 92, 383, 384, 385

ಅವಳಿ ದೇವರುಗಳು: 335

ಅಕ್ಕಸಾಲಿಗನಾದ ದೆಮೆತ್ರಿಯನು: 262, 264, 492, 493

ಅಪ್ಪಿಯ ಪೇಟೆ: 336, 538, 539

ಆ ಮಾರ್ಗ: 306, 412, 519

ಆಜೋತ: 118

ಆತ್ಮಭರಿತ ಸಭೆ – ನೋಡಿರಿ ಸಭೆಯು ಬಲಗೊಳಿಸಲ್ಪಟ್ಟಿದ್ದು

(ಯೇಸುವಿನ) ಆರೋಹಣ: 37, 38, 39, 41, 42, 43, 347, 348, 349, 357, 397

ಆದ್ರಿಯ ಸಮುದ್ರ: 327

ಆಹಾರ ವಿತರಣೆಯ ಸೇವೆ: 88, 90

ಆದಿಸಭೆಯ ಸೇವೆಗಳು: 57–58, 88, 98, 103, 107, 120, 128, 153, 157, 172, 274–276, 387–388, 401

ಇಥಿಯೋಪ್ಯದ ಕಂಚುಕಿ: 116, 117, 119, 121, 122, 123, 175, 279, 402, 407, 408, 409, 410, 443

ಇಕೋನಿಯ: 181, 182, 183, 185, 186, 187, 189, 190, 197, 203, 445, 446, 447, 449, 461, 484, 559

ಇಟಲಿ: 238, 327, 336, 402, 533, 537, 538, 560

ಇಟಲಿಯ ದಳ: 140

ಇತುರಾಯ: 606

ಇದುಮಾಯ: 575, 576, 606

ಇಸ್ರಾಯೇಲಿನ ನಿರೀಕ್ಷೆ: 338, 341, 541

ಇಸ್ಕರಿಯೋತ ಯೂದನು: 43, 350, 351, 352,

ಹಿಬ್ರಿಯ ಭಾಷೆ ಮಾತನಾಡುವ ಯೆಹೂದ್ಯರು: 87, 89

ಹಿಬ್ರಿಯ ಭಾಷೆ/ಹಿಬ್ರಿಯ ಪದಗಳು/ಹಿಬ್ರಿಯ ಹೆಸರುಗಳು: 68, 170, 171, 174, 291, 316, 416, 440

ಈಜಿಪ್ಟಿನಿಂದ ವಿಮೋಚನೆ: 46, 354

ಈಜಿಪ್ಟಿನ ಉಗ್ರಗಾಮಿ: 291, 508

ಉತ್ತೇಜನ: 127, 132, 237, 241, 297, 330, 432, 538, 539, 567

ಉಪವಾಸ: 124, 126, 170, 171, 172, 322, 411, 412, 440, 450

ಎಫೆಸದ ಹನ್ನೆರಡು ಜನರು: 254, 255, 256, 257, 487, 488, 489, 490

ಎಗ್ನೇಷಿಯನ್ ಹೆದ್ದಾರಿ: 224

ಎಲುಮನೆಂಬ ಮಂತ್ರವಾದಿ: 113, 174

ಎಪಫ್ರನು: 542

ಎಪಫ್ರೋದಿತನು: 181, 542

ಎಫೆಸ: 211, 245, 246, 248, 249, 250, 251, 253, 255, 256, 261, 262, 263, 264, 265, 266, 268, 269, 272, 273, 274, 246, 280, 288, 338, 483, 484, 486, 487, 488, 489, 191, 492, 493, 494, 495, 499, 507, 560, 561, 562, 563, 571

ಎಪಿಕೂರಿಯರು: 231, 235, 477, 571

ಎಪಿಮೆನಿಡೆಸ್: 232

ಎರಸ್ತನು: 262

ಎಸ್ಸೇನರು: 574, 606

ಏಷ್ಯಾ/ಏಷ್ಯಾ ಮೈನರ್: 18, 98, 209, 210, 211, 212, 213, 214, 215, 238, 246, 253, 261, 265, 267, 269, 275, 288, 289, 321, 322, 463, 468, 480, 487, 493, 502, 507, 519, 563, 565, 601

ಏಳು ಜನರು: 87, 89, 90, 91, 92, 98, 120, 279, 386, 387, 388, 389, 401

ಒಡಂಬಡಿಕೆ: 48–51, 65, 100, 354, 408

ಓಲಿವ್ ಗುಡ್ಡ: 42, 43

ಒನೆಸಿಮನು: 268

ಔಗುಸ್ತನು/ಚಕ್ರವರ್ತಿ ಔಗುಸ್ತನು: 118, 569, 570, 603,

ಕಲಿಗುಲ (ರೋಮನ್ ಚಕ್ರವರ್ತಿ): 312, 570

ಕಂದಾಕಿ: 117, 407

ಕಲ್ದಿಯರು: 100

ಕಲ್ಲೆಸೆದು ಕೊಲ್ಲುವುದು: 98, 102, 181, 185, 396, 398, 557

ಕುತ್ತಿಗೆ ಹಿಸುಕಿ ಕೊಂದ ಪ್ರಾಣಿಗಳು: 194

ಕಾಯಫನು: 68, 69, 82, 366

ಕಾಣಿಕೆಗಳು – ನೋಡಿರಿ ಸಭೆಯ ಕಾಣಿಕೆ–ಗಳು

ಸಿರೇನಿಯಾ: 98, 83, 153, 157, 170, 172, 440

ಕುಮ್ರಾನ್: 574

ಕೊರಡೆಗಳಿಂದ ಹೊಡೆಯುವುದು/ದಂಡನೆ: 295, 296, 511, 512

ಕೊರಿಂಥ: 125, 237, 239, 240, 241, 242, 243, 245, 248, 249, 251, 262, 263, 265, 267, 273, 374, 477, 480, 481, 483, 484, 486, 495, 496, 552, 557, 559, 560, 561, 562, 570, 571, 599

ಕೊರ್ನೇಲ್ಯ: 117, 118, 135, 137, 140, 141, 142, 143, 145, 146, 149, 150, 151, 152, 175, 408, 421–431, 443, 453, 454

ಕೆಂಖ್ರೆಯ: 237, 245

ಕೈವಸ್ತ್ರ: 381

ಕ್ರೇಟ: 232, 268, 269, 321, 322, 323, 324, 325, 327, 530, 533, 551, 598

ಕ್ರೈಸ್ತರು: 153, 205, 226, 283, 313, 336, 337, 433, 538

ಕ್ರೂಜೆ – ನೋಡಿರಿ ಯೇಸು

ಕ್ಲೌವ್ದ: 324, 325, 532

ಕ್ಲಾಡಿಯಸ್ (ರೋಮನ್ ಚಕ್ರವರ್ತಿ): 237, 238, 295, 303, 312, 338, 480, 516, 557, 559, 570, 603

ಕ್ಲಾಡಿಯಸ್ ಲೂಸಿಯಸ್: 289, 299, 302, 303, 304, 516, 517

ಸಿಲಿಸಿಯ: 98, 197, 291, 315, 508

ಸಿಲಿಸಿಯ ದ್ವಾರ: 291

ಕ್ರಿಸ್ಪನು: 237, 238, 239, 240, 242, 480, 481

ಕ್ನೀಡ: 322

ಕ್ಲಿಂಥೆಸ್: 232

ಗ್ರಂಥಗಳನ್ನು ಸುಟ್ಟುಹಾಕಿದ್ದು: 253, 255, 256, 487, 488

ಗಲಾತ್ಯ: 181, 210, 249, 484, 560, 569

ಗಲ್ಲಿಯೋನ: 237, 239, 240, 245, 480, 481, 482, 483, 552, 557, 559, 570, 599

ಗಮಲಿಯೇಲ: 82, 83, 84, 125, 292, 382, 383, 384, 509

ಗಲಿಲಾಯದ ಯೂದನು: 83

ಗಾಯನು/ದೆರ್ಬೆಯ ಗಾಯನು: 181, 263, 265

ಗಾಜ: 116, 121

ದೇವದರ್ಶನ ಗುಡಾರ: 100

ಗುಡಾರ ಮಾಡುವವರು: 237, 238, 273, 339, 480, 499

ಗ್ರೀಕ್ ಮಾತನಾಡುವ ಯೆಹೂದ್ಯರು: 87, 89, 97, 98, 129, 130, 158, 386, 387, 388, 401, 416, 510, 555

ಗ್ರೀಸ್: 224, 237, 249, 265, 268, 327, 484, 563, 565, 566

ಗ್ರೀಕ್–ರೋಮನ್ ಜಗತ್ತು/ಗ್ರೀಕ್–ರೋಮನ್ ಸಂಸ್ಕೃತಿ ಮತ್ತು ಧರ್ಮ/ಗ್ರೀಕ್–ರೋಮನ್ ಜನರು/ಹೆಲೆನಿಸಮ್: 47, 451, 455, 550, 573/ 158/ 172, 452, 485, 550, 565, 566, 572, 573, 574, 594, 601, 604, 605, 606

ಗ್ರೀಕ್ ಭಾಷೆ/ಗ್ರೀಕ್ ಪದಗಳು/ಗ್ರೀಕ್ ಹೆಸರುಗಳು/ಗ್ರೀಕ್ ಪಠ್ಯ: 56, 87, 88, 248, 288, 305, 351, 368, 434, 440, 508, 547, 565, 566, 567, 568, 571, 572, 597, 601, 602, 603, 604/136, 388, 401, 548/88, 170, 189, 305, 332, 375, 439

ಗ್ರೀಕ್ ಮೂಲಪ್ರತಿಗಳು: 118, 198, 306, 564

ಗ್ರೀಕ್ ಕವಿಗಳು: 232–235, 478, 571

ಚಕ್ರವರ್ತಿ: 118, 154, 173, 174, 224, 237, 238, 268, 295, 303, 309, 310, 312, 315, 339, 342, 471, 480, 516, 521, 522, 523, 524, 525, 527, 540, 552, 553, 557, 560, 563, 569, 570, 572, 573, 600, 603, 604

ಚಕ್ರವರ್ತಿಯ ಆರಾಧನೆ: 263

ಚೀಟು ಹಾಕುವುದು: 43, 351, 352

ಚದರುವಿಕೆ: 105, 108, 110, 360, 398, 399, 557, 567, 572

ಚದುರಿಹೋದವರು: 107, 125, 157, 172, 250, 285, 299, 305, 356, 419, 485, 505, 509, 602, 604

ಚರ್ಮಕಾರನಾದ ಸಿಮೋನನು: 137, 140, 142

ಜನಗಣತಿ: 83

ಜಾನ್ ಸ್ಟಾಟ್: 117, 197, 210, 255, 369, 370, 488, 489, 503

ಜಾನ್ ವಿಂಬರ್: 72, 369

ಜೂಲ್ಯ: 321, 322, 323, 329, 336, 530, 538

ಜೋಸೆಫಸ್: 291, 327

ಟಾರಸ್ ಪರ್ವತಶ್ರೇಣಿ: 178, 179, 181, 189, 291

ಟೈರ್: 165, 279, 280, 281, 439, 502, 503

ಡಯಾಸ್ಪೊರಾ – ನೋಡಿರಿ ಚದರುವಿಕೆ

ಡೇವಿಡ್ ಲಿವಿಂಗ್‌ಸ್ಟನ್: 213

ತಂಡ: 170, 203, 272, 329, 435, 460, 461, 530

ತಬಿಥಳು: 197, 419

ತತ್ವಜ್ಞಾನಿಗಳು: 231, 234, 239, 254, 477, 478, 571

ತಾರ್ಸ/ತಾರ್ಸಸ್: 83, 125, 129, 153, 154, 156, 157, 291, 315, 398, 432, 508, 509, 558, 559

ತುರನ್ನನ ತರ್ಕಶಾಲೆ: 254, 256, 487

ತುಖಿಕ: 265, 268, 542

ತ್ರಯೇಕತ್ವ: 357

ತ್ರಕೋನಿತಿಸ್: 575, 576, 578, 606, 607

ತ್ರಿಚತ್ರ: 336, 538, 539

ತಿಬೇರಿಯ: 570, 603

ತಿಮೊಥಿ: 181, 189, 197, 203, 204, 210, 215, 231, 237, 238, 262, 265, 268, 339, 461, 462, 474, 475, 476, 477, 481, 559

ತೆರ್ತುಲ: 305, 307, 518

ತ್ರೋವ: 210, 211, 213, 218, 265, 266, 268, 270, 271, 321, 495, 497, 498, 546, 559

ತ್ರೋಫಿಮ: 265, 266, 288, 299, 501

ಥೆಯೊಫಿಲನು: 351, 553, 593, 596

ಥೆಸಲೋನಿಕ: 224, 225, 226, 227, 238, 241, 263, 265, 273, 321, 444, 471, 472, 473, 474, 475, 495, 559

ಥ್ಯೆದ: 83

ದರ್ಶನ: 124, 125, 127, 142, 143, 144, 145, 173, 209, 210, 237, 240, 242, 243, 293, 297, 319, 360, 411, 412, 423, 424, 426, 429, 431, 436, 463, 481, 509, 510, 512, 513, 526, 553, 554

ದೀಕ್ಷಾಸ್ನಾನ: 49, 52, 53, 55, 57, 106, 112, 115, 116, 117, 121, 123, 124, 127, 128, 131, 145, 151, 193, 221, 222, 237, 238, 239, 240, 242, 243, 251, 253, 254, 354, 356, 404, 405, 408, 409, 411, 425, 427, 430, 431, 442, 443, 466, 468, 469, 470, 480, 485, 487, 488, 490, 552

ಪವಿತ್ರಾತ್ಮನ ದೀಕ್ಷಾಸ್ನಾನ: 113, 115, 121, 347, 403, 404, 406, 430, 489, 490

ಮರು–ದೀಕ್ಷಾಸ್ನಾನ: 256, 489, 491

ದೀಕ್ಷಾಸ್ನಾನದ ಸೂತ್ರ: 118, 255

ದೀಕ್ಷಾಸ್ನಾನದ ಕೂಟ: 119

ದುರಾತ್ಮ ಶಕ್ತಿಗಳು/ದುರಾತ್ಮಗಳು: 80, 170, 218, 219, 220, 253, 381, 401, 467, 468, 487, 554

ದರ್ಬೆ: 181, 185, 189, 203, 448, 484, 559

ದಿಯೊನಿಸಿಯನು: 232

ದೇವದೂತ: 38, 41, 42, 116, 119, 121, 140, 145, 160, 163, 297, 324, 325, 330, 331, 382, 384, 389, 390, 407, 421, 423, 426, 429, 431, 436, 437, 439, 532, 577

ದೊರ್ಕಳು: 136, 419

ದ್ರುಸಿಲ್ಲಳು: 303, 306, 516, 520, 577

ದಾಮರಿ: 232

ದಮಸ್ಕ: 110, 124, 125, 127, 128, 129, 131, 156, 175, 247, 291, 294, 314, 316, 318, 319, 411, 412, 413, 415, 416, 417, 508, 510, 513, 526, 528, 558

ದಾವೀದನು: 71, 73, 178, 369

ದೈವಭಯವುಳ್ಳ: 117, 122, 215, 231, 234, 238, 396, 407, 410, 421, 427, 443, 449, 465, 471, 472, 567

ದೇವರ ನಡೆಸುವಿಕೆ: 212, 213

ದೇವರ ಮಾರ್ಗದರ್ಶನ: 172, 212, 213, 214, 293, 463

ದ್ವೀಪದ ನಿವಾಸಿಗಳು: 332

ದೇವರ ರಾಜ್ಯ: 38, 40, 41, 42, 106, 114, 123, 166, 189, 190, 213, 251, 315, 340, 341, 347, 348, 355, 370, 405, 435, 439, 451, 479, 513, 548

ದಮಸ್ಕದಲ್ಲಿನ ಯೂದನು: 411

ದೇವರ ವಾಕ್ಯದ ಸೇವೆ: 91, 93, 378

ದೇವರ ಸೇವಕ/ಕರ್ತನ ಸೇವಕ: 64, 65, 184, 186, 192, 196, 201, 222, 251, 252, 269, 331, 333, 423, 459, 501

ದೇವಾಲಯದ ಕಾವಲುಗಾರರು: 67, 84, 364, 382

ಧರ್ಮಶಾಸ್ತ್ರ – ನೋಡಿರಿ ಮೋಶೆ

ಧರ್ಮಶಾಸ್ತ್ರ/ಯೆಹೂದ್ಯರ ಧರ್ಮಶಾಸ್ತ್ರ: /137, 309, 524

ನಜರೇತಿನವರ ಪಂಗಡ: 306, 518

ನಾಜೀರ ವ್ರತ: 245, 246, 247, 283, 483

ನಿಗರನೆಂಬ ಸಿಮೆಯೋನನು: 170, 172, 440

ನಿಯಾಪೊಲಿಸ್: 265, 266

ನಿರೋ: 309, 339, 413, 552, 563, 570, 600, 603

ನೀತಿವಂತನು: 65, 362

ನಿಕೊಪೊಲಿಸ್: 562, 563

ನೆರಳು: 80, 81, 380

ಪವಿತ್ರಾತ್ಮನ ದೀಕ್ಷಾಸ್ನಾನ: 41, 114, 255, 406, 489

ಪ್ರವಾದಿಗಳ ಪುಸ್ತಕ: 100

ಪಟ್ಟಣದ ಮುಖಂಡ: 449

ಪರಿವರ್ತನೆ/ಮಾನಸಾಂತರ: 97, 98, 115, 121, 124, 125, 126, 129, 130, 131, 140, 141, 215, 216, 291, 293, 294, 348, 411, 413, 414, 415, 417, 442, 465, 472, 510, 512, 513, 526/53, 63, 141, 149, 150, 235, 291, 314, 356, 398, 405, 408, 413, 414, 418, 421, 422, 427, 430, 442, 470, 509, 510, 529, 555,

ಪ್ರತಿವಾದದ ಕರಡು: 553, 598 – ಪೌಲನ ವಿಚಾರಣೆಗಳು ಸಹ ನೋಡಿರಿ

ಪವಿತ್ರಾತ್ಮನು: 14, 15, 37, 41, 45, 57, 68, 76, 86, 112, 113, 121, 123, 142, 143, 145, 170, 171, 172, 176, 199, 210, 211, 213, 246, 253, 254, 256, 257, 273, 280, 320, 349, 352, 354, 357, 366, 373, 374, 384, 388, 392, 396, 399, 404, 406, 407, 423, 424, 426, 429, 430, 441, 452, 457, 463, 466, 489, 490, 499, 500, 501, 503, 549, 550, 554, 593, 597,

ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನು: 41, 43, 54, 350

ಪವಿತ್ರಾತ್ಮನು ಸಾಕ್ಷಿಕರಿಸಲು ಬಲವನ್ನು ಕೊಡುತ್ತಾನೆ: 138. 257, 396, 490

ಪವಿತ್ರಾತ್ಮನು ಕ್ರಿಸ್ತನ ಕುರಿತು ಸಾಕ್ಷಿಕರಿಸುತ್ತಾನೆ: 86

ಪವಿತ್ರಾತ್ಮನು ಮಾರ್ಗದರ್ಶಿಸಿ ನಡೆಸುತ್ತಾನೆ:

– ಪಂಚಾಶತ್ತಮ ಸಹ ನೋಡಿರಿ

– ಪವಿತ್ರಾತ್ಮನ ದೀಕ್ಷಾಸ್ನಾನ ಸಹ ನೋಡಿರಿ

– ದೇವರ ಮಾರ್ಗದರ್ಶನ ಸಹ ನೋಡಿರಿ

– ತ್ರಯೇಕತ್ವ ಸಹ ನೋಡಿರಿ

ಪಂಫಿಲ್ಯ: 169, 178, 189, 322

ಪಂಚಾಶತ್ತಮ/ಸುಗ್ಗಿಯ ಹಬ್ಬ/ವಾರಗಳ ಹಬ್ಬ/ಪ್ರಥಮಫಲಗಳ ಹಬ್ಬ: 17, 23, 37, 46, 47, 48, 49, 50, 51, 52, 55, 56, 57, 138, 270, 280, 281, 349, 353, 354, 355, 356, 357, 425, 449, 499, 502, 507, 557, 568. 46, 47, 49, 50,

ಪಾಫೋಸ್: 174

ಪಾಲೆಸ್ತೀನ್: 46, 65, 75, 82, 100, 118, 150, 153, 161, 165, 171, 172, 285, 291, 303, 312, 321, 365, 368, 434, 440, 547, 565, 567, 568, 572, 573, 574, 575, 594, 602, 604, 605, 606

ಪಾಪ ಕ್ಷಮಾಪಣೆ: 66, 178, 319, 356, 405

ಪಾಶ್ಚಾತ್ಯ ಪಠ್ಯ: 564, 600

ಪರೌಸಿಯಾ (ಎತ್ತಲ್ಪಡುವಿಕೆ): 349

ಪಸ್ಕಹಬ್ಬದ ವಾರ – ನೋಡಿರಿ ಹುಳಿಯಿಲ್ಲದ ರೊಟ್ಟಿಯ ಹಬ್ಬ

ಪೆರಿಯ: 566, 606

ಪೊಬ್ಲಿಯ: 332, 333, 536, 537

ಪುತೋಲಿ: 335, 336, 337, 538, 539

ಪೆಂತಕೋಸ್ತದವರು: 114, 228, 255, 406, 478, 489, 491

ಪೆರಿಯಾ: 71, 368, 575, 576, 578, 606

ಪೆರ್ಗಮ: 569

ಪೊಂತ: 238, 480, 551

ಪೊಂತ್ಯ ಪಿಲಾತನು: 368, 573

ಪೊರ್ಕಿಯ ಫೆಸ್ತನು – ನೋಡಿರಿ ಫೆಸ್ತನು

ಪ್ತೊಲೊಮಾಯ: 279, 281

ಪೇತ್ರನು/ಸೀಮೋನ್ ಪೇತ್ರ: 15, 43, 44, 52, 53, 54, 57, 60, 61, 63, 64, 65, 66, 67, 69, 70, 112, 113, 135, 136, 137, 138, 139, 140, 142, 143, 144, 145, 145, 147, 149, 150, 160, 162, 163, 197, 271, 350, 356, 357, 360, 361, 362, 363, 364, 365, 375, 376, 380, 405, 416, 419, 420, 423, 424, 425, 426, 427, 428, 429, 430, 431, 433, 436, 437, 439, 449, 453, 454, 491, 497, 554, 558, 594

***ಪೌಲನು***

1. ಪೌಲನ ಪರಿವರ್ತನೆ: 97, 124, 125, 126, 348, 413, 528,
2. ಪೌಲನ ಮೊದಲ ಸೇವಾ ಪ್ರಯಾಣ: 27, 176, 189, 190, 559,
3. ಪೌಲನ ಎರಡನೆಯ ಸೇವಾ ಪ್ರಯಾಣ: 29, 250, 475, 559, 561,
4. ಪೌಲನ ಮೂರನೆಯ ಸೇವಾ ಪ್ರಯಾಣ: 31, 218, 261, 496.
5. ಪೌಲನ ಸಹೋದರಿ ಮತ್ತು ಸಂಬಂಧಿ: 301, 514
6. ಪೌಲನು ಉಪದೇಶಿಸಿದ್ದು: 234, 275, 341, 403, 459
7. ಪೌಲ ಮತ್ತು ಬಾರ್ನಬರು: 129, 174, 176, 180, 181, 182, 186, 189, 190, 191, 193, 194, 197, 200, 201, 422, 442, 444, 445, 446, 448, 454, 457, 459, 495, 559
8. ಪೌಲ ಮತ್ತು ಸೀಲರು: 203, 218, 219, 220–222, 224, 225, 227, 227, 228, 241, 295, 461, 467–472, 474, 475, 569
9. ಪೌಲನು ಗುಣಪಡಿಸಿದ್ದು: 136, 270,
10. ಪೌಲನ ನಾಲ್ಕನೆಯ ಸೇವಾ ಪ್ರಯಾಣ: 563
11. ಪೌಲನ ಪತ್ರಿಕೆಗಳು: 266, 267, 561, 599
12. ಪೌಲನ ಪರಿವರ್ತನೆ/ಮಾನಸಾಂತರ: 97, 124, 125, 126, 348, 413, 528, 53, 63, 141, 149, 150, 235, 291, 314, 356, 398, 405, 408, 413, 414, 418, 421, 422, 427, 430, 442, 470, 509, 510, 529, 555
13. ಪೌಲನ ಮತ್ತು ಪೇತ್ರನ ಸೇವೆಗಳ ನಡುವಿನ ಸಮಾಂತರತೆಗಳು: 271, 497, 554

ಪ್ರಾಯಶ್ಚಿತ್ತ ಬಲಿಯ ದಿನ: 322

ಪ್ರಾಣಿಗಳು: 117, 137, 142, 144, 194, 431, 455, 532

ಪ್ರಾರ್ಥನೆಯ ಸ್ಥಳ: 215

ಪ್ರಾರ್ಥನೆ: 44, 45, 58, 60, 64, 71, 72, 73, 74, 87, 90, 93, 103, 124, 141, 142, 146, 160, 162, 163, 272, 293, 340, 358, 368, 387, 397, 411, 412, 437, 440, 450, 465,

ಪ್ರವಾದಿಗಳು/ಪ್ರವಾದನೆ (ಹೊಸ ಒಡಂಬಡಿಕೆ): 50, 65, 154, 158, 170, 197, 198, 279, 440, 458, 459, 559/65, 160, 170, 171, 253, 279, 281, 484, 487, 490, 570

ಪ್ರವಾದಿಗಳು/ಪ್ರವಾದನೆ (ಹಳೆ ಒಡಂಬಡಿಕೆ): 50, 54, 100, 117, 121, 131, 319, 338, 354, 362, 365, 423, 427, 433, 457/52, 53, 65, 71, 102, 117, 147, 151, 153, 155, 197, 356, 357, 362, 408, 445, 472

ಪ್ರವಾದಿನಿ: 281

ಪ್ರಸಂಗಗಳು/ಬೋಧನೆಗಳು ಮತ್ತು ಭಾಷಣಗಳು/ಮಾತುಗಳು: 53, 57, 65, 100, 101, 145, 178, 179, 186, 187, 356, 357, 385, 444, 40, 571, 39, 172, 186, 240, 241, 242, 272, 273, 275, 276, 299, 356, 383, 394, 395, 405, 411, 526

ಪ್ರಿಸ್ಕಿಲ್ಲ: 237, 238, 239, 245, 246, 248, 249, 250, 252, 480, 483, 485, 486, 559, 570

ಫರಿಸಾಯರು: 297, 298, 299, 391, 513, 574, 605

ಫಿಲೆಮೋನ: 339, 542, 562, 600

ಫಿಲಿಪ್ಪಿ:6, 9, 88, 181, 203, 215, 216, 218, 219, 220, 221, 222, 224, 241, 265, 266, 274, 281, 295, 336, 339, 342, 465, 466, 468, 469, 470, 475, 495, 542, 559, 562, 569, 600

ಫಿನಿಷಿಯ: 332

ಫ್ರಿಗಿಯ: 249, 484

ಫೆನಿಕ್ಸ್: 321, 322

ಫೆಲಿಕ್ಸನು: 303, 305, 306, 307, 308, 518, 520, 573,

ಫೆಸ್ತನು: 305, 306, 309, 310, 311, 312, 313, 314, 315, 521, 522, 523, 524, 525, 526, 527, 553, 557, 560, 570, 573, 605

ಬರಗಾಲ: 279, 570

ಬಾಬೇಲ್ ಗೋಪುರ: 47, 50, 355

ಬಾರ್–ಯೇಸು: 174, 175, 442

ಬಾರ್ನಬ/ಯೋಸೇಫ: 38, 75, 78, 129, 130, 153, 155, 156, 157, 158, 160, 169, 170, 172, 173, 174, 176, 180, 181, 185, 189, 190, 193, 197, 200, 372, 374, 375, 415, 417, 418, 422, 432, 423, 424, 425, 440, 441, 442, 444, 445, 446, 448, 453, 454, 457, 459, 495, 510, 559, 561, 566, 571

ಬಿಡುಗಡೆ ಹೊಂದಿದವರ ಸಭಾಮಂದಿರ: 98, 389

ಬಿಜ಼ಂಟೀನ್ ಪಥ್ಯ: 564, 600

ಬಿಥೂನಿಯ: 210, 212, 213, 214, 463

ಬೀಜ ಹೊಡೆಸಿಕೊಳ್ಳುವುದು/ನಪುಂಸಕರಾಗುವುದು: 116, 117, 407, 408

ಬೆರೋಇಯ/ಬೆರೋಇಯದವರು: 227, 229, 241, 474, 475, 495

ಬೆರ್ನಿಸ್: 312, 314, 523, 578

ಬ್ಯಾಪ್‌ಟಿಸ್ಟ್ ಮತ್ತು ಬ್ರದರನ್: 114, 406

ಬ್ಲಾಸ್ತನು: 165, 439

ಬ್ರೂಸ್/ಎಫ಼್.ಎಫ಼್. ಬ್ರೂಸ್: 255, 489

ಭಾನುವಾರ: 270, 271, 498

ಭಾನುವಾರದ ಆರಾಧನೆ: 497, 498, 538

ಭಾರತದಲ್ಲಿನ ವಿಶ್ವಾಸಿಗಳು: 289

ಭಿನ್ನಾಭಿಪ್ರಾಯ: 200, 201, 287, 323, 444, 459, 561

ಮನೆಗಳು: 140, 224, 237, 279, 280, 338, 402, 411, 417, 430, 465, 468, 498, 514

ಮನೆಯಲ್ಲಿ: 145, 146, 147, 149, 150, 160, 240, 242, 279, 280, 281, 336, 338, 339, 402, 411, 417, 422, 425, 426, 428, 430, 436, 454, 468, 480, 481, 498, 514, 540

ಮನುಷ್ಯರ ಆರಾಧನೆ: 146, 185, 186, 427, 428

ಮತ್ತೀಯನು: 43, 44, 351

ಮರಿಯಳು (ಮಾರ್ಕನೆಂಬ ಯೋಹಾನನ ತಾಯಿ): 161, 162, 436, 437

ಮರಿಯಳು (ಯೇಸುವಿನ ತಾಯಿ): 83, 546

ಮಂತ್ರ: 254, 366, 367, 403, 405

ಮಂತ್ರವಾದಿಗಳು: 253, 487, 488

ಮಂತ್ರವಾದಿ ಸೀಮೋನನು: 112, 115, 121, 403, 442

ಮಾರ್ಕನೆನಿಸಿಕೊಳ್ಳುವ ಯೋಹಾನ: 160, 161, 174, 200, 201, 444, 459

ಮಾರುಕಟ್ಟೆ: 218, 219, 231, 232, 234, 477, 565

ಮಾಲ್ಟಾ: 342, 536

ಮೂಸಿಯಾ: 210, 211

ಮುಖ್ಯ ಯಾಜಕ/ಮಹಾ ಯಾಜಕ: 254, 309/67, 68, 82, 83, 105, 124, 125, 298, 301, 312, 315, 382, 393, 512, 514, 521, 572, 573

ಮುಳ್ಳುಗೋಲನ್ನು ಒದೆಯುವುದು: 316

ಮೂಲೆಗಲ್ಲು – ನೋಡಿರಿ ಯೇಸು

ಮೆಸಪೊಟಾಮಿಯ: 551, 565, 598

ಮಕೆದೋನಿಯ/ಮಕೆದೋನಿಯದ: 261, 265, 267, 268, 491, 495, 565, 569, 262

ಮೋಶೆ/ಮೋಶೆಯ: 65, 100, 101, 121, 122, 193, 288, 298, 299, 319, 338,

390, 393, 394, 398, 410, 453, 455, 462, 465, 468, 504, 505

ಮೋಲೆಕ್: 100

ಮೆನಹೇನ: 171, 172, 440

ಮೆಡಿಟೆರೆನಿಯನ್ ಸಮುದ್ರ: 75, 118, 136, 153, 165, 170, 291, 327, 336, 342, 502, 516, 530, 558, 569, 573, 603

ಮೃತ ಸಮುದ್ರ: 100, 574, 575

ಮ್ನಾಸೋನ: 280

ಯಾಸೋನನು: 224, 225, 471, 475

ಯಾಜಕರು: 37, 60, 67, 93, 364, 386, 555, 605

ತೀತಯುಸ್ತ: 237, 238, 240, 242, 480, 481

ಯೂತಿಕನು: 270, 497

ಯೂದ: 197, 198, 199, 457, 458

ಯೂದಾಯ: 15, 16, 71, 97, 105, 107, 124, 125, 129, 30, 132, 135, 136, 140, 151, 154, 157, 158, 160, 170, 174, 193, 261, 279, 303, 304, 306, 309, 314, 348, 368, 399, 415, 433, 439, 455, 457, 504, 504, 505, 516, 521, 529, 540, 541, 546, 554, 555, 559, 569, 570, 572, 573, 575, 576, 577, 594, 605, 606

ಯೆಶಾಯ: 65, 116, 117, 118, 121, 122, 281, 320, 347, 407, 408, 409, 423, 444

ಯೆರೂಸಲೇಮಿನ ಸಮ್ಮೇಳನ: 195, 203, 284, 285, 286, 408, 455, 457, 462

ಯೆರೂಸಲೇಮಿನ ದೇವಾಲಯ: 63, 116, 288, 312, 360, 390, 394, 407, 505, 508, 552, 572, 575, 605

ಯೆಹೂದ್ಯನು ಮತ್ತು ಅನ್ಯನು: 142, 149–150, 183

ಯೆಹೂದ್ಯ ಮತಾಸಕ್ತರು/ಮತಾಭಿಮಾನಿಗಳು: 453, 574, 606

ಯೆರೂಸಲೇಮಿನಲ್ಲಿ ಯಾಜಕನಾದ (?) ಯೋಹಾನ: 68

ಯೊಪ್ಪ: 136, 137, 139, 140, 142, 419, 421, 423, 426, 429, 497, 558

***ಯೇಸು***

1. ಯೇಸುವಿನ ಹೆಸರು: 66, 69, 82, 255, 279, 281, 364, 365, 367, 371, 427, 490
2. ದೇವಕುಮಾರನು: 130, 131
3. ಮನುಷ್ಯ ಪುತ್ರನು: 102, 397
4. ಮೆಸ್ಸೀಯನು: 60, 67, 102, 109, 117, 118, 187, 338, 341, 357, 368, 393, 394, 402, 408, 416, 423, 444, 445, 471, 472, 483, 486, 488, 489, 541
5. ಮೂಲೆಗಲ್ಲು: 65, 68

6. ಯೇಸುವನ್ನು ಕ್ರೂಜೆಗೆ ಹಾಕಿದ್ದು: 50, 54, 103, 145, 295, 367, 368, 397

7. ಮರ (ಕ್ರೂಜೆ): 82, 145

8. ಯೇಸುವಿನ ಪುನರುತ್ಥಾನ: 54, 147, 364, 365, 372

9. ಯೇಸುವಿನ ಆರೋಹಣ: 17, 37, 39, 42, 348, 349

10. ಯೇಸುವಿನ ಮಹಿಮಾಕರಣ: 54, 158, 357,

11. ಯೇಸುವಿನ ಎರಡನೇ ಬರೋಣ: 40, 41, 42, 251, 276, 363

12. ಯೇಸುವಿನ ಶಿಷ್ಯನಾದ ಯಾಕೋಬನು: 135, 160, 161, 163, 437, 439, 558, 577, 606

13. ಯೇಸುವಿನ ಸಹೋದರನಾದ ಯಾಕೋಬನು (ನಂತರದಲ್ಲಿ ನ್ಯಾಯವಂತನೆಂದು ಕರೆಯಲ್ಪಟ್ಟನು): 38, 43, 53, 140, 161, 162, 164, 193, 194, 196, 198, 204, 283, 284, 285, 286, 417, 422, 437, 453, 454, 457, 504, 506

14. ಯೇಸುವಿನ ಮತ್ತು ಸ್ತೆಫನನ ಮರಣದ ನಡುವಿನ ಸಮಾಂತರತೆಗಳು: 130, 396–398

15. ಯೇಸುವಿನ ಮತ್ತು ಪೇತ್ರನ ಸೇವೆಗಳ ನಡುವಿನ ಸಮಾಂತರತೆಗಳು: 419, 420

ಯೋವೇಲನ ಪ್ರವಾದನೆ: 52, 53, 356, 357

ಯೋಸೇಫ – ನೋಡಿರಿ ಬಾರ್ನಬ

ಯೋಸೇಫ (ಮರಿಯಳ ಗಂಡ): 83

ಯೋಸೇಫ (ಪಿತೃ): 393, 398

ರಕ್ತಸಾಕ್ಷಿ: 88, 97, 164, 339, 342, 398, 402, 432, 552, 570, 600, 606

ರಬ್ಬೀ/ರಬ್ಬೀಯ ದೈವಶಾಸ್ತ್ರ: 68, 292, 364, 440, 444, 445

ರಾಜ್ಯಪಾಲ – ನೋಡಿರಿ ರೋಮನ್ ಅಧಿಕಾರಿಗಳು

ರೇಗಿಯ: 335, 336, 538

ರೊಟ್ಟಿ ಮುರಿಯುವುದು: 270

ರೋಮ್‌ಗೆ ಪೌಲನ ಪ್ರಯಾಣ: 34

ರೋದೆ: 161, 162, 436

ರೋಮನ್ ಅಧಿಕಾರಿಗಳು/ರಾಜಕೀಯ ಆಡಳಿತ/ಸರ್ಕಾರ/ಅಧಿಕಾರಿ/ರಾಜ್ಯಪಾಲ/ಶತಾಧಿಪತಿ/ಅಧಿಪತಿ/ಸೈನಿಕರು/ದಳ/ಸೈನ್ಯ/ಸೇನೆ/: 365, 552, 573/ 117, 215, 289, 290, 306, 382, 463, 518, 569, 598, 603/38, 67, 69, 70, 71, 84, 85, 116, 140, 218, 220, 221, 222, 225, 239, 262, 263, 272, 295, 308, 315, 317, 333, 364, 365, 382, 383, 407, 421, 467, 469, 470, 471, 473, 481, 492, 493, 512, 516, 526, 529, 537, 552, 553, 570, 572, 590, 598/17, 175, 237, 303, 304, 305, 306, 307, 309, 310, 311, 312, 314, 317, 342, 368, 413, 416, 442, 480, 505, 517, 518, 521, 522, 523, 540, 557, 559, 560, 573, 576, 577, 599, 604, 605/ 296, 321, 323, 327, 328,

329, 336, 511, 530, 534/ 118, 140, 163, 288, 324, 327, 328, 335, 534, 565, 601

ರೋಮ್: 15, 16, 17, 33, 38, 46, 75, 82, 83, 98, 110, 124, 125, 140, 153, 154, 163, 165, 170, 173, 176, 181, 198, 211, 219, 224, 226, 237, 238, 248, 253, 261, 265, 266, 268, 269, 272, 289, 295, 300, 306, 309, 310, 312, 314, 315, 319, 321, 322, 323, 329, 332, 335, 336, 337, 338, 339, 340, 341, 342, 343, 348, 365, 413, 459, 469, 480, 481, 484, 485, 486, 487, 491, 493, 507, 508, 511, 512, 513, 518, 524, 525, 527, 530, 538, 539, 540, 541.546, 547, 548, 553, 555, 557, 559, 560, 561, 562, 563, 569, 570, 571, 572, 573, 597, 598, 599, 600, 603, 604, 605

ರೋಮನ್ ಪೌರತ್ವ: 295, 296, 569, 603

ರೋಮನ್ ನಿವಾಸ ಸ್ಥಳ: 211, 215

ರೋಮನ್ ಕಾನೂನು: 219, 239, 306, 317, 468, 480, 318, 523, 524, 553

ರೋಮನ್ ಶಾಂತಿ: 569, 602

ರೋಮನ್ ದಳ: 289

ಲ್ಯಾಟಿನ್: 140, 170, 197, 305, 459, 571, 604

ಲೂಕನು: 13, 14, 15, 16, 18, 37, 38, 39, 46, 47, 56, 57, 65, 75, 76, 87, 89, 91, 97, 102, 105, 107, 108, 113, 114, 117, 124, 125, 126, 129, 130, 132, 136, 137, 142, 147, 149, 150, 154, 155, 157, 160, 166, 170, 171, 174, 175, 179, 187, 190, 204, 210, 215, 216, 218, 219, 221, 233, 234, 236, 255, 261, 265, 266, 267, 270, 271, 279, 280, 291, 298, 303, 304, 305, 306, 309, 321, 323, 325, 329, 332, 336, 338, 343, 347, 350, 351, 356, 357, 359, 363, 370, 372, 373, 378, 396, 398, 399, 400, 401, 402, 404, 408, 412, 413, 415, 416, 419, 422, 426, 430, 434, 437, 439, 442, 448, 464, 465, 468, 469, 472, 475, 477, 481, 483, 488, 489, 490, 491, 497, 498, 503, 510, 511, 512, 513, 514, 517, 524, 528, 530, 532, 536, 537, 538, 545, 546, 547, 548, 550, 551, 552, 553, 554, 555, 559, 561, 564, 575, 576, 577, 578, 593, 594, 595, 596, 597, 598, 599

ಲುಕವೋನಿಯ: 181, 189, 448, 571

ಲುದ್ದ: 136, 137, 138, 419, 558

ಲುದ್ಯ (ದೇಶ): 215

ಲುದ್ಯ (ಸ್ತ್ರೀ): 215

ಲುಸ್ತ್ರ: 5, 9, 18, 181, 182, 185, 186, 187, 189, 190, 197, 203, 204, 234, 448, 449, 461, 484, 559

ಲೂಸಿಯದ ಮುರ: 321, 322, 530

ವಾಕ್ಚಾತುರ್ಯ: 185, 250, 448, 485, 529

ವಿಲ್ಲಿಯಮ್ ಕೇರಿ: 213, 214

ವಿಶ್ವಾಸದ ದ್ವಾರ: 189

ವಿದ್ಯೆ ಕಲಿಯದ: 64, 364

ಶಾಸನ ಸಭೆ: 572

ಶಿಷ್ಯರು: 38, 40, 41, 88, 90, 113, 124, 161, 178, 179, 180, 348, 412, 425, 445, 489

ಶುದ್ಧೀಕರಣದ ಆಚಾರ: 283, 284, 288, 289, 504, 506

ಶುಭ ಸಂದೇಶ – ನೋಡಿರಿ ಸುವಾರ್ತೆ


***ಸಭೆ***

1. ಸಭೆ, ಒಂದು ಹೊಸ ಸಮುದಾಯ: 55
2. ಸಭಾಕಟ್ಟಡಗಳು – ಮನೆಗಳು ಸಹ ನೋಡಿರಿ
3. ಸಭೆಯ ಶಿಸ್ತು: 377
4. ಸಭೆಯು ಬಲಗೊಳಿಸಲ್ಪಟ್ಟಿದ್ದು/ ಆತ್ಮಭರಿತ ಸಭೆ: 15, 57, 76
5. ಸಭೆಯ ಅನ್ಯೋನ್ಯತೆ: 56, 57, 58, 73, 197, 281, 358, 359, 372, 373, 378, 379, 412, 433, 485
6. ಸಭೆಯ ಬೆಳವಣಿಗೆ: 72, 109, 369, 370, 417
7. ಸಭೆಯ ಇತಿಹಾಸ: 17, 18, 119, 405, 414, 421, 550, 561, 563, 597, 600
8. ಸಭೆಯ ನಾಯಕರುಗಳು/ನಾಯಕತ್ವ: 37, 89, 93, 158, 171, 172, 173, 191, 272, 329, 330, 387, 417, 435, 440, 451, 454, 459, 500, 510
9. ಸಾಮೂಹಿಕ ನಾಯಕತ್ವ, ಹಿರಿಯರು ಮತ್ತು ಸಭಾಪಾಲಕರು ಸಹ ನೋಡಿರಿ
10. ಸಭೆಯ ಸದಸ್ಯರುಗಳು/ಸದಸ್ಯತ್ವ: 173
11. ಸಭೆಯ ಸೇವೆಗಳು – ನೋಡಿರಿ ಆದಿಸಭೆಯ ಸೇವೆಗಳು
12. ಸಭೆಯ ಕಾಣಿಕೆಗಳು: 160, 265, 299, 339, 434, 518, 519
13. ಸಭೆಯು ಹಿಂಸಿಸಲ್ಪಟ್ಟು ಚದುರಿ–ಹೋಗಿದ್ದು – ನೋಡಿರಿ ಹಿಂಸೆ
14. ಸಭೆಯ ಸ್ಥಾಪನೆ: 558, 579
15. ಸಭೆಯಲ್ಲಿ ಆಸ್ತಿ ಹಂಚಲ್ಪಟ್ಟಿದ್ದು: 37, 58, 75, 76, 78, 89, 373, 375

ಸಭಾಪಾಲಕ/ಕುರುಬ/ಮೇಲ್ವಿಚಾರಕ: 75, 129, 153, 155, 156, 158, 190, 251, 272, 276, 277, 329, 432, 433, 434, 440, 450, 451, 459, 484, 499, 500

ಸಭಾಪಾಲಕರುಗಳ ತಂಡ: 170, 272, 435

ಸಭಾಮಂದಿರ: 60, 98, 99, 124, 174, 176, 178, 179, 181, 182, 215, 224, 225, 226, 227, 231, 237, 238, 239, 240, 242, 245, 253, 255, 389, 390, 411, 416, 444, 449, 462, 465, 471, 472, 474, 475, 477, 480, 481, 487, 561

ಸತ್ಯವೇದ ಕಾಲೇಜ್/ಮಹಾವಿದ್ಯಾಲಯ: 233, 251, 256, 487, 579

ಸಹೋದರರೇ/ಸಹೋದರ ಮತ್ತು ಸಹೋದರಿಯರೇ: 43, 88,274, 297, 356, 408, 532

ಸಂಸ್ಕೃತಿ/ಆಚಾರ/ಪದ್ಧತಿ/ಅಪೋಸ್ತಲರ ಕೃತ್ಯಗಳ ಸಾಂಸ್ಕೃತಿಕ ವ್ಯವಸ್ಥೆ: 13, 14, 87, 231

ಸಮೋಥ್ರ: 216

ಸಫೈರಳು – ನೋಡಿರಿ ಅನನೀಯ ಸಫೈರಳು

ಸಲೋಮಿ: 578

ಸಮಾರ್ಯ: 4, 8, 15, 16, 39, 97, 105, 107, 108, 109, 112, 113, 114, 118, 119, 120, 121, 129, 157, 160, 172, 279, 304, 306, 348, 360, 369, 399, 401, 402, 403, 404, 409, 410, 415, 433, 439, 442, 546, 554, 555, 557, 573, 576, 594

ಸದ್ದುಕಾಯರು/ಸದ್ದುಕಾಯರ ಪಂಗಡ: 67, 68, 82, 297, 364, 382, 512, 514, 515, 605

ಸಲಮೀಸ್: 174

ಸತ್ತವರ ಪುನರುತ್ಥಾನ: 232, 315, 513, 520

ಸಬ್ಬತ್/ಸಬ್ಬತ್ ದಿನ: 43, 46, 178, 215, 225, 237, 462, 465, 472

ಸಾಕ್ಷಿ: 15, 41, 45, 48, 49, 54, 58, 59, 65, 75, 85, 86, 88, 97, 102, 105, 107, 109, 124, 146, 148, 164, 181, 186, 187, 273, 275, 291, 292, 293, 295, 296, 305, 308, 317, 318, 339, 342, 343, 348, 349, 351, 356, 357, 365, 371, 372, 377, 390, 391, 394, 397, 398, 399, 402, 409, 425, 427, 431, 432, 434, 453, 454, 457, 461, 499, 508, 509, 510, 511, 512, 513, 528, 546, 552, 553, 554, 563, 570, 577, 578, 600, 606, 609

ಸಾಮಾನ್ಯ ಜನರು: 68, 364

ಸರ್ಪ: 332, 333, 342, 536,

ಸಾಕ್ಷಿಕರಿಸುವ ಸಭೆ: 58

ಸಾಮೂಹಿಕ ನಾಯಕತ್ವ: 191, 616

ಸಿರೇನಿಯದ ಲೂಕ್ಯ: 170, 172, 174, 440

ಸಿರೇನ್ಯ: 98, 154, 170, 172, 440

ಸಿರಾಕ್ಯೂಸ್: 335, 336, 538

ಸೀಜರ್ ಅಗಸ್ತಸ್: ನೋಡಿರಿ ಔಗುಸ್ತನು

ಸೀಲನು/ಸಿಲ್ವನು: 197, 199, 200, 201, 203, 209, 210, 215, 218, 219, 220, 221, 222, 224, 225, 274, 231, 237, 238, 241, 245, 295, 402, 457, 458, 459, 460, 461, 467, 468, 469, 470, 471, 472, 474, 475, 476, 477, 481, 559, 569

ಸಿಸಿಲಿ: 332, 333, 335, 336, 538

ಸಿದೋನ್: 165, 321, 322

ಸಿರಿಯಾ: 5, 6, 9, 18, 75, 124, 135, 153, 154, 157, 172, 174, 189, 190, 191, 193, 197, 204, 245, 246, 248, 249, 266, 279, 291, 374, 432, 433, 450, 483, 495, 502, 558, 559, 561, 565, 569, 595, 609

ಸಿನಾಯಿ ಬೆಟ್ಟ: 46, 47, 49, 50, 353, 354

ಸುವಾರ್ತೆ ಸಾರಲ್ಪಟ್ಟದ್ದು: 52, 63, 67, 70, 85, 86, 92, 107, 108, 110, 115, 116, 121, 131, 135, 153, 172, 174, 178, 184, 185, 189, 210, 213, 214, 215, 218, 226, 227, 234, 253, 261, 275, 338, 369, 382, 384, 398, 402, 403, 421, 433, 442, 443, 453, 459, 463, 465, 474, 485, 487, 491, 526, 540, 541, 557, 561, 598

ಸುವಾರ್ತೆ ಹರಡಿದ್ದು: 97, 214, 398, 547, 551, 555, 598

ಸುವಾರ್ತೆಗೆ ಅಡ್ಡಿಗಳು: 50, 145, 176, 184, 204, 205, 206, 355, 378, 442, 462, 475

ಸುನ್ನತಿ: 101, 146, 149, 151, 169, 193, 194, 195, 197, 203, 204, 285, 286, 393, 395, 422, 427, 453, 454, 461, 462, 485, 505, 567, 604

ಸುರುಳಿಗಳು: 254, 574

ಸೂಚಕಕಾರ್ಯಗಳು ಮತ್ತು ಅದ್ಭುತ-ಕಾರ್ಯಗಳು: 74, 107, 369, 370, 371, 379, 380, 390, 70, 137, 389

ಸೆರೆಮನೆ/ಸೆರೆಯಾಳು/ಗೃಹಬಂಧನ: 67, 82, 110, 116, 118, 160, 161, 163, 164, 218, 220, 221, 222, 241, 273, 343, 365, 366, 370, 382, 399, 436, 437, 439, 467, 469, 470, 499, 550, 520, 541, 558, 560, 561, 562, 563, 570, 573, 575, 577, 594, 597, 598/334, 340, 560, 563

ಸೆಜರೇಯ: 7, 10, 17, 116, 118, 129, 140, 142, 145, 149, 165, 245, 246, 261, 279, 280, 281, 282, 303, 304, 309, 310, 312, 314, 322, 421, 426, 429, 431, 502, 516, 517, 521, 522, 523, 526, 527, 546, 547, 557, 558, 560, 561, 573, 577, 578, 607

ಸೆಕುಂದ: 265

ಸೆಲೂಕ್ಯ: 174

ಸೆಪ್ಟ್ಯಾಜಿಂಟ್ – ನೋಡಿರಿ ಹಳೆ ಒಡಂಬಡಿಕೆಯ ಗ್ರೀಕ್ ಅನುವಾದ 100, 567, 602, 617.

ಸ್ತೆಫನ: 53, 88, 97, 98, 99, 100, 101, 102, 103, 104, 105, 107, 108, 109, 157, 288, 293, 389, 390, 391, 392, 393, 394, 395, 396, 397, 398, 399, 400, 401, 402, 419, 432, 507, 557, 566, 615

ಸೆಜರೇಯದಲ್ಲಿ ಪೌಲನ ವಿಚಾರಣೆಗಳು ಮತ್ತು ಪ್ರತಿವಾದಗಳು: 291, 308, 315, 317, 318, 319, 518, 519, 523, 524

ಸೇವಕನಾದ ಪೌಲನು – ನೋಡಿರಿ ಸೇವೆ

ಸೇವಾ ಕಾರ್ಯತಂತ್ರ/ಸೇವಾ ತಂಡ: 192/203, 329, 460

ಸುವಾರ್ತಿಕರು: 89, 118, 120, 121, 122, 157, 158, 171, 172, 180, 192, 540, 249, 251, 279, 281, 334, 404, 409, 435, 441, 451, 546, 579

ಸುವಾರ್ತಿಕರಣ: 58, 410

ಸುವಾರ್ತಿಕನಾದ ಫಿಲಿಪ್ಪನು: 281

ಸುಗ್ಗಿಯ ಹಬ್ಬ/ವಾರಗಳ ಹಬ್ಬ/ಪ್ರಥಮ ಫಲ – ನೋಡಿರಿ ಪಂಚಾಶತ್ತಮ 46, 47, 49, 50, 613. 47, 49, 50, 354, 613. 46, 47, 49, 50, 221, 354, 618

ಸೊಲೊಮೋನನು: 393

ಸೊಲೊಮೋನನ ಮಂಟಪ: 63, 379

ಸೋಪತ್ರ/ಸೊಸಿಪತ್ರಿ: 265

ಸೊಸ್ಥೆನನು: 239, 481

ಸ್ತೋಯಿಕ್: 231, 235, 603

ಸೌಖ್ಯತೆ/ಗುಣಪಡಿಸುವಿಕೆ: 61, 72, 37, 60, 369, 381

ಸೈತಾನ: 78, 79, 92, 93, 109, 110, 111, 319, 342, 343, 375, 378, 442, 473, 618

ಸೈಪ್ರಸ್: 75, 153, 154, 158, 169, 174, 178, 280, 322, 372, 434, 440, 442, 570

ಸ್ತೇವ: 253, 254, 256, 487, 488

ಸ್ನಾನಿಕನಾದ ಯೋಹಾನ: 48, 160, 254, 347, 488, 570, 576, 577, 603, 606

ಸೌಲನು (ಪೌಲನ ಇಬ್ರಿಯ ಹೆಸರು): 102, 105, 110, 124, 125, 126, 129, 130, 131, 153, 156, 158, 175, 399, 411, 412, 413, 415, 416, 417, 418, 432, 440

ಹಳೆ ಒಡಂಬಡಿಕೆಯ ಗ್ರೀಕ್ ಅನುವಾದ/ ಸೆಪ್ಟಾಜಿಂಟ್: 78, 617, 100, 567, 602, 617

ಹರ್ಮಿಸ್: 185, 186, 448, 449, 571

ಹನ್ನೆರಡು ಜನ ಅಪೋಸ್ತಲರು: 52, 88, 90, 135, 161, 386

ಹಸ್ತಾರ್ಪಣೆ/ನೇಮಕ – ನೋಡಿರಿ ಯೆರೂಸಲೇಮಿನ ಸಮ್ಮೇಳನ

ಹಾರಾನ್: 100

ಹುಳಿಯಿಲ್ಲದ ರೊಟ್ಟಿಯ ಹಬ್ಬ/ಪಸ್ಕಹಬ್ಬದ ವಾರ: 266, 613

ಹುಟ್ಟುಕುಂಟ: 69, 70, 73, 363, 364, 365, 366, 367, 371, 448

ಹಿಂದಿಟ್ಟುಕೊಳ್ಳುವುದು: 375, 376

ಹಿರಿಯರು: 67, 88, 154, 197, 203, 204, 249, 272, 274, 305, 307, 453, 462, 514, 520

ಹಿಂಸೆ: 82, 87, 92, 93, 97, 105, 106, 107, 109, 110, 160, 178, 180, 186, 187, 189, 213, 241, 268, 269, 275, 276, 281, 293, 295, 316, 339, 359, 360, 382, 385, 396, 398, 398, 411, 413, 415, 419, 449, 450, 467, 500, 501, 513, 517, 552, 563, 570, 600, 617

1 ನೇ ಹೆರೋದ ಅಗ್ರಿಪ್ಪನು: 160, 572, 576, 577, 606

2 ನೇ ಹೆರೋದ ಅಗ್ರಿಪ್ಪನು: 572, 575, 578, 607

ಹೆರೋದ ಅಂತಿಪನು: 576, 578, 606

1 ನೇ ಹೆರೋದ ಫಿಲಿಪ್ಪನು: 577, 578

2 ನೇ ಹೆರೋದ ಫಿಲಿಪ್ಪನು: 576, 606

ಹೆಲೆನಿಸಮ್: 16, 565, 566, 574, 594, 601, 605

ಹೆರೋದ್ ದ ಗ್ರೇಟ್: 160, 572, 575, 576, 606

ಹೆರೋದ್ಯಳು: 576, 577

ಹೆರೋದನ ಕುಟುಂಬ/ಹೆರೋದ್ಯ ರಾಜ-ವಂಶ: 161, 303, 315, 573, 575, 606

ಜ್ಞಾಪಕಾರ್ಥ ಅರ್ಪಣೆ: 141

ಜ಼ಿನೋನ್: 231

ಜ಼ೂಸ್: 185, 219, 232, 478, 571

ಜ಼ಿನೋ: 231, 232